ರೆಜಿಸ್ಟರ್ಡ್ ನಂ. ಎಮ್. ೩೬ | ಮುಂಗಡ ವಾರ್ಷಿಕ ಚಂದಾ ರೂ. ೨-೧೨-೦

# ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಪುಸ್ತಕ ೨೪. | ಮಂಗಳೂರು ತಾ. ೫ನೇ ಶುಕ್ರವಾರ ಸಪ್ಟಂಬರ ೧೯೩೦ | (5-9-30) | ಸಂಚಿಕೆ ೩೬


## THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

**Head office:—UDIPI.** | Branches.—COONDAPOOR & Mangalore

ಹೆಡ್ ಆಫೀಸು.— ಉಡುಪಿ | ಶಾಖೆ — ಕುಂದಾಪುರ ಮತ್ತು ಮಂಗಳೂರು

Authorised Capital Rs 3 50 000 Subscribed & Called up Rs 25 000-

ನಿಯಮಿತ ಮೂಲಧನ ರೂ 3 50 000 ... 25 000

**Statement of Affairs as on 31st July 1930**

| CAPITAL AND LIABILITIES | | PROPERTY AND ASSETS | |
|---|---|---|---|
| 1 Paid up Capital | Rs 2 24 950-0 0 | Premises Building Furniture etc | Rs 27 403 6 5 |
| 2 Reserve and other funds | 1 68 400 0 0 | 2 Investment on G P Notes | 3 70 284 5 0 |
| 3 Deposits | 7 [illegible] | Investment on Approved Securities | 2 9 645 4 9 |
| 4 Bills for collection as per contra | 127 3 4 | 4 Bills for collection | 127 3 14 6 |
| 5 Overdraft with Bankers and Imp Bank of India loan a/c | 86 890 | 5 Sundries | 2 459 5 1 |
| 6 Sundries | 6 [illegible] 4 | 6 Cash in hand & with bankers | 20 29 2 4 |
| Total | 2 [illegible] 84 9 | Total | 20 53 840 9 |

Office of the Corporation UDIPI [illegible] 3 | N ANANDA RAO *Secretary & Manager*

# ಅಮೃತಾಂಜನ.

ರಿಂಗ್‌ವರ್ಮ್ ಮುಲಾಮು — [illegible]

ದಂತಮಂಜನ — [illegible]

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಮಕ್ಕಳ ಸಲುವಾಗಿ,

# ಡೋಂಗರ

ಇವರ

# ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟವು ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೆ ಕಂಪನಿ,

ಗಿರ್ಗಾಂವ, ಮುಂಬಾಯಿ.

[illegible]

## ಶ್ರೀ ಸರಸ್ವತೀ ಭಂಡಾರ

| | | |
|---|---|---|
| 1 | [illegible] ಕಥಾ ಸಂಗ್ರಹ | 1-8-0 |
| | [illegible] | 0 2-0 |
| 3 | [illegible] | 2- -0 |
| 4 | [illegible] | 2-0-0 |
| | [illegible] | 3-0-0 |
| 6 | [illegible] ಕಥೆಗಳು | 12-0 |
| 7 | [illegible] | 1-[illegible]-0 |
| 8 | [illegible] | 1 12-0 |
| 9 | [illegible] | 0-8-0 |
| 10 | ಧರ್ಮ ಸಾಮ್ರಾಜ್ಯಂ | 1-4-0 |
| 11 | [illegible] | -2 0 |
| 12 | [illegible] | 1-12 0 |
| 13 | [illegible] | 0-12-0 |
| 14 | [illegible] | -8-0 |
| 15 | ಇಂಡಿಯನ್ ಪಿನಲ್ ಕೋಡ್ | 2 8-0 |
| 16 | ಕ್ರಿಮಿನಲ್ ಪ್ರೊಸೀಜರ್ ಕೋಡ್ | 3-0-0 |
| 17 | ಲ್ಯಾಂಡ್ ರೆವಿನ್ಯೂ ಕೋಡ್ | 1-0-0 |

ಈ ಪುಸ್ತಕಗಳಲ್ಲದೆ ನಮ್ಮಲ್ಲಿ ಇನ್ನು ಸಾವಿರಾರು ನಮೂನೆಯ ಕನ್ನಡ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗ್ ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ದೃಷ್ಟಿಗಳಲ್ಲಿ ಅಧಲು ಯೋಗ್ಯವಾದ ಅನೇಕ ಪುಸ್ತಕಗಳು ನಮ್ಮಲ್ಲಿ ಸಾಕಷ್ಟಿವೆ.

ಶ್ರೀ ಸರಸ್ವತೀ ಭಂಡಾರ.

[illegible] ಮಂಗಳೂರು [illegible]

## ಪುತ್ತೂರು ತಾಲೂಕಿನ ಘಾಟ ಮತ್ತು ಕಾಡು ಗುಡ್ಡಗಳ ಸರಹದ್ದಿನ ಗ್ರಾಮಗಳ ನಿವಾಸಿಗಳಲ್ಲಿ.

### ಸೆಟ್ಲ್‌ಮೆಂಟಿನ ಕುರಿತು ಪ್ರಸ್ತುತ ಕೈಕೊಳ್ಳಬೇಕಾದ ಕೆಲವು ಕೆಲಸಗಳ ಬಗ್ಗೆ

### ವಿಜ್ಞಾಪನೆ ಪತ್ರ.

ಘಾಟ ಕಾಡುಗಳ ಸರಹದ್ದಿನ ಹಳ್ಳಿಗಳ ನಿಕೃಷ್ಟ ಸ್ಥಿತಿಗೆ ಬಂದಿರಲು ಬೇರೆ ಬೇರೆ ಅನೇಕ ಕಾರಣಗಳಿರಬಹುದಾದರೂ ನಮ್ಮಲ್ಲಿ ನೆಲೆಗೊಂಡಿರುವ ಉದಾಸೀನತೆ ಹಾಗೂ ನಿರುದ್ಯೋಗತನವೇ ಪ್ರಾಮುಖ್ಯ ಕಾರಣವೆಂದು ಹೊಸ ಹೊಸ ಬಗ್ಗೆ ಹೇಳಬೇಕಾಗುತ್ತದೆ.

೨ ಪೂರ್ವಕಾಲದಲ್ಲಿ ಪಕ್ಷ ನೀತಿ ನ್ಯಾಯ, ಇವೇ ಮೊದಲಾದವು ಜನರಲ್ಲಿ ಸಹಜವಾದ ಗುಣಗಳಾಗಿದ್ದುದರಿಂದ, ಜನರ ಸ್ವಭಾವದಲ್ಲಿದ್ದ ಸಹಕಾರೋದ್ಯೋಗಿಗಳಾಗಿದ್ದು ಅನ್ಯೋನ್ಯ ಸಹಕರಿಸುತ್ತಾ ತಮ್ಮ ಸ್ಥಿತ್ಯನುಸಾರ ತಿಳಿವಾದ ಸಂತೋಷದಿಂದಲೇ ಕಾಲಕಳೆಯುತ್ತಾ ಬದುಕುತ್ತಿದ್ದರು.

೩. ಆ ಕಾಲದಲ್ಲಿ ಅಧಿವ್ಯಾಧಿಗಳ ಭಯ ವಿಲ್ಲದೆ ತಮ್ಮ ಭೂಭಾಗದಲ್ಲಿ ಉತ್ಪನ್ನವಾಗುತ್ತಿದ್ದ ಧಾನ್ಯ ಫಲ ಮೂಲಾದಿಗಳ ಆವರೆ ಸಿವಾ ಹಳ್ಳಿ ಯಿಂದ ಸಾಕಾಗುತ್ತಿತ್ತು; ಅಲ್ಲದೆ ಈಗಿನಂತೆ ಪೇಟೆ ಪಟ್ಟಣಗಳಿಂದ ಸಾಮಾನುಗಳನ್ನು ಕೊಂಡುಕೊಳ್ಳುವ ಆವಶ್ಯಕತೆಯು ಇರುತ್ತಿದ್ದಿಲ್ಲವಾದ ಕಾರಣಗಳಿಂದ ಜನರ ಮಾತ್ರವಲ್ಲ – ಪಶ್ವಾದಿಗಳೂ ಪ್ರಥಮಾಯರಾಗಿದ್ದು ಅನೇಕ ಕೆಲಸಗಳನ್ನು ಸ್ವಸಾಮರ್ಥ್ಯ ಬಲದಿಂದಲೇ ನಿರ್ವಹಿಸಿಕೊಳ್ಳುತ್ತಿದ್ದರು. ಹೀಗಾಗಿ ಬೇರೆ ಕಡೆಯಿಂದ ಕೂಲಿಗಾರರು ಬರುವ ಅಗತ್ಯವಿರಲಿಲ್ಲ

೪ ಈ ಸದಾಚಾರವು ಜನರಲ್ಲಿ ಶಿಥಿಲವಾಗುತ್ತಾ ಬಂದಂತೆ ಸರಕಾರದ ಅನೇಕ ನಿಬಂಧನೆಗಳು ಉಂಟಾಗಿ, ಅವರಲ್ಲಿಯೂ 'ಫೋರೆಸ್ಟ್' ಮಾತ್ರವಲ್ಲ ಇವಲ್ಲಿ ಸಹಾಯವಾದ ಅಬಕಾರಿ ಕೂಡಾ ಈ ಹಳ್ಳಿಗಳ ಹೀನಸ್ಥಿತಿಗೆ ತರಲು ವಿಶೇಷವಾಗಿ ಕಾರಣಗಳಾದುವೆಂದು ಎಷ್ಟು ಹೇ[illegible]

[illegible]

ನವೆಂಬರದಲ್ಲಿ ಬರುತ್ತೇನೆಂದೂ ಆಗ ಈ ಕುರಿತು ಪರ್ಯಾಲೋಚಿಸುತ್ತೇನೆಂದೂ ಆಶ್ವಾಸನೆಯನ್ನಿತ್ತಿರುವರಲ್ಲದೆ – ನಾವು ಹೇಳುವ ಕಾಡು ಸರಹದ್ದಿನ ಗ್ರಾಮಗಳ ಒಂದು ಪಟ್ಟಿಯನ್ನು ತಯಾರಿಸುವಂತೆ ಸೂಚಿಸಿರುವರು ಇಷ್ಟಲ್ಲದೆ ನಾವು ಈ ಮುಂದೆ ಕಳೆದ ಮಾರ್ಚಿಯಲ್ಲಿ ಜಿಲ್ಲಾ ಕಲೆಕ್ಟರ್ ದೊರೆಗಳಿಗೆ ಇದೇ ಮೊದಲಾದ ಹಳ್ಳಿಗಳ ಸಂಕಷ್ಟದ ಕುರಿತು ಅರ್ಜಿ ಮಾಡಿಕೊಂಡ ಬಾಬಿನಲ್ಲಿ ನಮ್ಮ ಸಂಕಷ್ಟಗಳನ್ನೆಲ್ಲಾ ಅವರು ತಿಳಿದುಕೊಂಡು ಅವರ ವ್ಯವಸ್ಥೆ ಬಗ್ಗೆ (ಸದರಿ) ಹೊಸ ಸೆಟ್ಲ್‌ಮೆಂಟ್ ಆಫೀಸರರಿಗೆ ಹೇಳಿರುತ್ತಾರೆ

೧೧ ಇದೇ ಮೊದಲಾದ ಕಾರಣಗಳಿಂದ ನಾವು ಈ ಸಲ ಪರಿಶ್ರಮ ಪಟ್ಟರೆ ನಮಗೆ ನ್ಯಾಯ ಸಿಕ್ಕಲೇಬೇಕೆಂದು ನಮ್ಮೆಲ್ಲರ ನಂಬಿಕೆ [illegible] ನಾವು ಹೇಳಿಕೊಳ್ಳುವುದಾಗಿರುತ್ತದೆ. ಆದುದರಿಂದ ನಾವು ನಮ್ಮ ನಮ್ಮ ಗ್ರಾಮಗಳ ಸಂಕಷ್ಟಸ್ಥಿತಿಯನ್ನು ಸಾಮುದಾಯಿಕವಾಗಿ ಈ ಕೆಳಗೆ ಕೊಟ್ಟಿರುವಂತೆ ಸಂಗ್ರಹಿಸಿಕೊಂಡು ಸದರಿ ಸೆಟ್ಲ್‌ಮೆಂಟ್ ಆಫೀಸರರ ಮುಂದೆ ಇಡಲಿಕ್ಕೆ ತಯಾರು ಮಾಡಬೇಕು ಈ ಕೆಲಸವನ್ನು ಇದೇ ಬರುವ ಸಪ್ಟಂಬರ ಅಂತ್ಯದೊಳಗಾಗಿ ಮುಗಿಸಿ [illegible] ಸೇರಿ ಮುಂದಿನ ಕೆಲಸಗಳನ್ನು ನಿರ್ಧರಿಸಬೇಕಾಗಿದೆ

**ನಾವು ತಿಳಿದಿರುವ ಮಟ್ಟಿಗೆ ಘಾಟಿ ಮತ್ತು ಕಾಡು ಗುಡ್ಡಗಳ ಸರಹದ್ದಿನಲ್ಲಿರುವ ನಮ್ಮ ನೆನಪಿಗೆ ಬಂದ ಗ್ರಾಮಗಳ ವಿವರ**

[illegible]

ಈ ಗ್ರಾಮಗಳ ಘಾಟಿ ಮತ್ತು ಕಾಡು ಗುಡ್ಡಗಳ [illegible]

[illegible]

**ಈಗ ಸಂಗ್ರಹಿಸಬೇಕಾದ ತಪಶೀಲುಗಳು.**

[illegible]

ಜನನ ಮರಣ (೧–೯ ವರ್ಷಗಳಿಂದ ಈಚೆಗೆ)

ಜಾನುವಾರುಗಳ ಸಂಖ್ಯೆ

[illegible]

## ನೋಟೀಸು.

### ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. S. No 157/1930.

ಸುಳ್ಯ ಸಣ್ಣಪ್ಪ ಗೌಡ—ವಾದಿ.

ವಿಠಪ್ಪ ಗೌಡ ಕೂಡಾ—ಪ್ರತಿವಾದಿಗಳು

ಮೇಲಿನ ನಂಬ್ರದಲ್ಲಿ ೩ನೇ ಪ್ರತಿವಾದಿ ಪನಿಯಾಲ ಸುಬ್ಬಪ್ಪ ಗೌಡರ ಮಗ ಗುಡ್ಡಪ್ಪ ಗೌಡಗೆ ತಿಳಿಯಪಡಿಸುವುದೇನೆಂದರೆ —

ನಿಮ್ಮಿಂದಲೂ ನಿಮ್ಮ ಅಣ್ಣನಿಂದಲೂ ವಾದಿಗೆ ಬರತಕ್ಕಗೇಣಿ ಯಾನೆ ಹುಟ್ಟುವಳಿ ಮತ್ತು ಕೈ ಸಾಲದ ವಿವೇಜು ಕೂಡಾ ರೂಪಾಯಿ ೧೦೭—೧ ಕ್ಕೆ ಈ ಕೋರ್ಟಿನಲ್ಲಿ ವಾದಿ ಮಾಡಿದ ದಾವೆಯು ತಾ ೧೨—೯—೩೦ಕ್ಕೆ ಬೆಳಿಗ್ಗೆ ೧೧ ಗಂಟೆಗೆ ತನಿಖೆಗೆ ಇಟ್ಟಿದೆ ನೀವು ಆ ದಿವಸ ಬೆಳಿಗ್ಗೆ ೧೧ ಗಂಟೆಗೆ ಈ ಕೋರ್ಟಿನಲ್ಲಿ ಹಾಜರಾಗಲು ತಪ್ಪಿದರೆ ನಿಮ್ಮನ್ನು ಶಿವಾಯಿ ಮಾಡಿ ವ್ಯಾಜ್ಯ ತೀರ್ಮಾನಿಸಲಾದೀತು ತಿಳಿದಿರಿ

ಪುತ್ತೂರು
೨೮–೮–೩೦

H. Pundarik Bhat,
ವಾದಿ ಕಡೆ ವಕೀಲ

## Municipality of Mangalore.

### NOTICE.

Applications are invited for the post of a warrant officer on a pay of Rs 40—2—60 with a cycle allowance of Rs 5/ per month Cash security of Rs 500 will have to be furnished None but those who have passed at least the S S L C Examination and who are fit for out door work need apply Applicants should know cycling well and should be conversant in all the local languages Applications should reach the Municipal office by 10th September 1930

Municipal Office
Mangalore 25th
August 1930

Nellikai Vankat Rao
CHAIRMAN M C

ಫಂಡಿನ್ಯ ವತ್ತು ಕಂದಗಳು ಎಷ್ಟು ಸಮಿತಿಯ ಮಾರ್ಗದ ವತಿಯಿಂದ ಪ್ರಾಪ್ತವಾಗಿ (ಈಗ ಕಾಣುವವು) ಇವೇ ಮೊದಲಾದ ವಿವರಗಳು ಸಿಕ್ಕಬೇಕಾಗಿದೆ ಕೃತ

ಇತಿ ನಿವೇದಿಸುವ ಹಿತೈಷಿಗಳಾದ

ಮಂಗಳೂರು
೨೩–೮–೩

ಭಿಡೆ ನಾರಾಯಣ ಭಟ್ಟ
(ಅಧ್ಯಕ್ಷ ಮಂಡಲ)

ಗೋರೆ ಅನಂತ ಭಟ್ಟ, (ಕಾರ್ಯದರ್ಶಿ)

ವರ್ಗದ ಸಂಘ — ಮಂಗಳೂರು ಯೂನಿಯನ್


ಜೀವವಿಮೆ ಮಾಡುವವರು ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪನಿ ಲಿಮಿಟೆಡ್‌ನಲ್ಲಿ

ವಿಮೆ ಮಾಡಿರಿ!

ನಿಮಗೂ ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!

ಪ್ರೀಮಿಯಂ ದರಗಳು ಕಡಿಮೆ!

ಶರ್ತಗಳು ತೀರಾ ಸುಲಭ!!

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸ ಮಾಡುವವರಿಗೆ

ಧಾರಾಳವಾದ ಕಮಿಷನೂ ಕೈತುಂಬಾ ಸಂಬಳವೂ ದೊರಕುವುದು.

(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)

ಚೀಫ್ ಏಜಂಟರು —
ಎಚ್ ಆರ್. ಕೆ ಆಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ

ಮೇನೇಜಿಂಗ್ ಏಜಂಟರು —
ಕೆ. ಸಿ ಪಾಂಡಲೆ ಎಂಡ್ ಕೊ,

ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಸನ್ಯಾಸಿಗುಡ್ಡೆ ಮಂಗಳೂರು] [7-8 ಮೆಕಲೀನ ಸ್ಟ್ರೀಟ್ ಮದರಾಸು

## ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಂಕುಶಮು ತೈಲ—ಇದು ಪುನರ್ವಸು ಆತ್ರೇಯರೆಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು ಅಶ್ವಂಗಕ್ಕೆ ಅಮೋಘವಾದ ಈ ತೈಲವು ಶಿಶುಗಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ

ಚ್ಯವನಪ್ರಾಶ —ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ

ಕಸ್ತೂರಿಮಿಶ್ರಣ!

ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ ಸುಖಜೀವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕರದ ಸಂಚಯವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಪೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವವು

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವವು

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು

ಕ್ರಯ ಬಾಟ್ಲಿ 1ಕ್ಕೆ 2-0-0 ಪೋಸ್ಟೇಜು ವಗೈರೆ ಬೇರೆ

[illegible]

ಯಮ್. ವಿ. ಶಾಸ್ತ್ರೀ,

ಆಯುರ್ವೇದ ಭೂಷಣ,

ಮಂಗಳೂರು ದ ಕನ್ನಡ



ಶಾಲಾ ಉಪಾಧ್ಯಾಯರಿಗೆ ಬೇಕಾಗುವಂತಹ ಚೋಕು ಪೆಟ್ಟಿಗೆಗಳು ಕಡಿಮೆ ದರದಲ್ಲಿ ಮಾರಾಟಕ್ಕೆ ತಯಾರಿವೆ.

ಲೆಜ್ಜರ್, ಜರ್ನಲ್ಸ್, ಮತ್ತು ಕ್ಯಾಶ್ ಬೂಕುಗಳೂ ತರತರದ ಬ್ಯಾಂಡುಗಳಲ್ಲಿ ಮಾರಾಟಕ್ಕಿವೆ.

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು



ಕೇವಲ ಕುಸುರಿ ಕ್ರಯ

ವಾಚು, ಲಿವರ್ ಮಶಿನು, (ಸೆಕೆಂಡ್ ಹೇಂಡ್ ಜೋಡಿಸಿದ್ದು) ಕ್ರಯ ರೂ 1-14-0 ಮಾತ್ರ ನಿಕ್ಕಲ್ ಕೇಸಿನ ಘಡಿ ಕೈ ಗಡಿಯಾರ ಬಹು ಸಮಯ ಬಾಳಿ, ಒಳ್ಳೇ ಸಮಯ ತೋರಿಸುವುದು ... ಪಟ್ಟಿಯೊಂದಿಗೆ ರೂ 3-8-0 ನಂಬ್ರ 2 ರೂ 4-0-0 ನಂಬ್ರ 3 ರೂ 5-0-0 (ಮೂರುವರುಷದ ಗೆರೆಂಟಿ ಇದೆ)

ಅಂಚೆವೆಚ್ಚ ಆಕೆ.

ಇಂಗ್ಲೀಷಿನಲ್ಲಿ ಕಾಗದಲೇ ಬರೆಯಿರಿ

R C. MUKERJEE,

*12/2 Hari Paul Lane,*

CALCUTTA



# The Canara Bank Limited, Mangalore.

## ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು

Established July 1906 — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತ

***BRANCHES* -Karkal Kasargod Cochin Udipi Gangolli Coondapur Bombay Puttur & Calicut**

ಬ್ರಾಂಚ್—ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ, ಪುತ್ತೂರು ಮತ್ತು ಕಲ್ಲಿಕೋಟೆ

| | |
|---|---|
| Authorised and fully paid up Capital Rs 300 000 0-0 | ಅಧಿಕಾರಿಗಳ ಸಲ್ಲಿಸಲ್ಪಟ್ಟ ಪೂರ್ಣವಾಗಿ ತೆತ್ತ ಮೂಲಧನವು ರೂ 300 000 0-0 |
| Reserve and other sinking Funds Rs 431 732-9-7 | ಕ್ಷೇಮನಿಧಿ ಮತ್ತು ಇತರ ಫಂಡುಗಳು ರೂ 431,732-9-7 |
| Amount invested on G P Notes Rs 792 462-2 0 | ಗವರ್ನಮೆಂಟ್ ಪ್ರೊ.ನೋಟುಗಳಲ್ಲಿ ಹಾಕಿದ ರೂ 79[2],462-2-0 |
| Rates of interest on fixed deposits at Head Office and Branch 6½% for 2 Years 6% 1 Year | ಕಾಯಂ ಠೇವಣಿಗಳ ಮೇಲೆ ಕೊಡಲ್ಪಡುವ ಬಡ್ಡಿ ... 6½% ... ವರ್ಷ ... 6 |
| Season deposits of Rs 1000/- & above terminable by the end of June are received at 6½ p a | ಜೂನ್ ... ರೂ 1000 ... ಮತ್ತು ... 6½ |

Current Account Deposits received and interest allowed on daily balance of Rs 50 and above that on multiples of Rs 50/ @ 3% from 1st January to 30th June and @ 2% from 1st July to 31st December No interest will be allowed unless the deposit or earns not less than Rs 5/ during a period of 6 months ending either 30th June or 31st December in any year

Except by special arrangement no interest is allowed on sums exceeding Rs 10 000 in the case of Head Office and Bombay & Cochin Branches and on sums exceeding Rs 3 000/ in the case of the remaining Branches

Short notice deposits requiring one week notice of withdrawal given at any time after one month from the date of deposit are received and interest allowed at per annum Interest on such deposits will cease on notice

*For further particulars please apply to*

Canara Bank Ltd, — **K. Venkatesha**

*Mangalore 3—5—930* — Secretary



# The Pangal Nayak Bank, Ltd.

| Branch Office Mangalore | Head Office Udipi *Established 1920* | Agency Office Cochin |
|---|---|---|

| | |
|---|---|
| Authorised Capital Rs 2 00 000 | Paid up Capital Rs 1 75 000 |
| Issued Capital Rs 1 75,000- | Reserve and other Funds Rs 1 42,610 |

**Fixed Deposits** received for 24 months at 6 ... 12 months ... 9 ... 6 months at 5½ ... for 3 months at ... interest being payable every ... months

**Current Deposit Accounts** are opened free of charge ... interest allowed at 3% from January to June and ... from July to December ... Daily balance

**Short Notice Savings Bank and Cumulative Deposits** are accepted on favourable terms

**Loans and Advances** are made on pledges of valuables and of property personal security ... reasonable terms and every other description of Banking business transacted

*Further information may be had on application to the* SECRETARY *at the* HEAD OFFICE *or to the* AGENT *at the* BRANCH

Office of the Bank 22nd July 1930 — **P Laxman Nayak,** Secretary



## 'ಗ್ರೇಂಡ್ ಕ್ಲಿಯರೆನ್ಸ್ ಸೇಲ'!

ಬರೀ ಮೂರು ರೂಪಾಯಿಗಳ ವ್ಯಾಪಾರದಿಂದ **324** ಅಮೂಲ್ಯವಾದ ಪಾರಿತೋಷಕಗಳ' ನಮ್ಮ ಸುಗಂಧ ಪೂರಿತವಾದ ಒಟ್ಟೊ ಮೋತಿಯಾ ತೈಲದ ಆರು ಬಾಟ್ಲಿಗಳನ್ನು ಒಟ್ಟಿಗೆ ಕೊಂಡುಕೊಳ್ಳುವವರಿಗೆ ಈ ಕೆಳಗೆ ನಮೂದಿಸಿರುವ ೩೨೪ ಅಮೂಲ್ಯ ಬಹುಮಾನಗಳು ಉಚಿತವಾಗಿ ಕೊಡಲಾಗುವವು!



[illegible]

ಸುಲ್ಕ ರೂ ೩-೦-೦ ಮಾತ್ರ ... 

ಪತ್ರವ್ಯವಹಾರವು ಇಂಗ್ಲಿಷನಲ್ಲಿಯೇ ಸಾಗಲಿರುವುದು

ಇಂಡಿಯನ್ ಸ್ಟೋರ್ಸ್ ಕೋ,

47 ಬೆನಿಯಾಟೋಲಾ ಸ್ಟ್ರೀಟ್, ಪಿ ಓ, ಹಟ್ಖೋಲಾ, ಕಲ್ಕತ್ತೆ

**INDIAN STORES CO.** 47, Beniatola Street, Po., Hatkhola CALCUTTA.

# ಮಹಾತ್ಮಾಜಿಯವರ ಸತ್ಯಾಗ್ರಹ ಸಮಾಚಾರ.

ತಾರೀಖು ೨೭

**ಢಿಲ್ಲಿಯಲ್ಲಿ.**

ಡಾ|| ಅನ್ಸಾರಿಗಳ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಕಾರ್ಯಾಲಯವು ಸಭೆಸೇರಿ, ಸ್ವರಾಜ್ಯ ಚಳವಳದ ಕುರಿತು ಅನೇಕ ವಿಷಯಗಳನ್ನು ಚರ್ಚಿಸಲಾಯಿತು. ಈ ಸಭೆಗೆ ಚಿತ್ತೈಸಿದ ಪಂಡಿತ ಮದನಮೋಹನ್ ಮಾಲವೀಯ—ಮಿ. ವಿಠ್ಠಲಭಾಯಿ ಪಟೇಲ—ಮೊದಲಾದ ಮುಖಂಡರನ್ನು ದಸ್ತಗಿರಿಮಾಡಿದರು. ೧೦ ಮಂದಿ ಸತ್ಯಾಗ್ರಹಿಗಳು ಮಾಲವಿಯರ ಮನೆಗೆ ಬಂದು, ತಾವು ಮಾಡಬೇಕಾದ ಅಂದಿನ ಕಾರ್ಯಕ್ರಮಗಳನ್ನು ಪರ್ಯಾಲೋಚಿಸಿದ ತರುವಾಯ, ಅವರೆಲ್ಲರೂ ಡಾ|| ಅನ್ಸಾರಿಗಳ ಮನೆಗೆ ಸುಮಾರು ಅಪರಾಹ್ನ ೩ ಘಂಟೆಗೆ ಬಂದು ತಲ್ಪಿದರು. ಅಷ್ಟರಲ್ಲೇ ಸತ್ಯಾಗ್ರಹಿಗಳ ಕಾರ್ಯಧುರಂಧರತೆಯ ಸೂಚನೆಯನ್ನರಿತು, ಪೋಲೀಸು ಅಧಿಕಾರಿಗಳು, ಸದರಿ ಕಾರ್ಯಕ್ರಮಗಳನ್ನು ನಿರ್ಬಂಧಿಸಬೇಕೆಂಬ ಉದ್ದೇಶದಿಂದ ಆಯುಧಪಾಣಿಗಳಾಗಿ ಬಂದರು, ಅನ್ಸಾರಿಯವರ ಮನೆಯನ್ನು ಮುತ್ತಿದರು, ಜಪ್ತಿಮಾಡಿದರು. ಪೋಲೀಸ್ ಸುಪರಿಂಟೆಂಡೆಂಟರು ಸತ್ಯಾಗ್ರಹಿಗಳ ಕಾರ್ಯಕಲಾಪಗಳನ್ನು ನಿಲ್ಲಿಸುವ ಇರಾದೆಯಿಂದ, ಚಳವಳದಲ್ಲಿ ಭಾಗವಹಿಸಿದವರ ಮೇಲ ವಾರಂಟು ಹುಕುಮನ್ನು ಜ್ಯಾರಿಮಾಡಿದರು. ತರುವಾಯ, ಕಾಂಗ್ರೆಸ್ ಪ್ರೆಸಿಡೆಂಟರಾಗಿದ್ದ 'ಮೌಲಾನಾ ಅಬ್ದುಲ್ಲ ಕಲಮ್ ಅಜಾದರ ಮನೆಯನ್ನೂ ಶೋಧಮಾಡಲಾಯಿತು. ಈ ಕುರಿತು 'ಕಾಂಗ್ರೆಸ್ ಕಾರ್ಯಾಲಯ ದ ಒಹು ಮಂದಿ ಸದಸ್ಯರನ್ನು ದಸ್ತಗಿರಿ ಮಾಡಲಾಯಿತು. ಇವರ ಪೈಕಿ 'ಮಾಲವೀಯರು' ಮುಖ್ಯ ಸತ್ಯಾಗ್ರಹಿಗಳೊಡನೆ 'ನನ್ನ ಸ್ವದೇಶ ಬಂಧುಭಗಿನಿಯರು ಪ್ರಕೃತ ಹೂಡಲ್ಪಟ್ಟ ಸತ್ಯಾಗ್ರಹ ಸಮರದಲ್ಲಿ ತಮ್ಮ ಅಪ್ರತಿಮ ಹಾಗೂ ಉಜ್ವಲ ದೇಶಪ್ರೇಮವನು ದೀಪಿಸುತ್ತ, ಧೈರ್ಯದಿಂದ, ಮಾತೃಭೂಮಿಯ ಸೇವೆಯನ್ನು ಮಾಡುವರೆಂದು ನಂಬುತ್ತೇನೆ. ಆಬಾಲವೃದ್ಧರೂ, ಈ ಚಳವಳದಲ್ಲಿ ತಮ್ಮ ಕೈಲಾದಷ್ಟು ಪ್ರಯತ್ನಪಟ್ಟಿರುವರು. ಆದುದರಿಂದ ನೀವೆಲ್ಲರೂ, ನಿಮ್ಮ ಕಾರ್ಯಕಲಾಪಗಳಲ್ಲಿ ಹಿಂದುಳಿಯಬಾರದು' ಎಂದು ಮೊದಲಾಗಿ ತನ್ನ ಅನುಯಾಯಿಗಳನ್ನು ಪ್ರೋತ್ಸಾಹಿಸಿದರು.

ಇಲ್ಲಿನ ಪ್ರತಿ ವಾರದಲ್ಲಿಯೂ ಜರಗಿಸಲ್ಪಡುವ ಮುನಿಸಿಪಾಲಿಟಿಯ ಸಭೆಯು ಎಂದಿನಂತೆ ಜರಗಲುದ್ಯುಕ್ತವಾಗ, 'ಲಾಲಾ ದೇಶಬಂಧು' ಎಂಬ ಸತ್ಯಾಗ್ರಹ ಮುಖಂಡರು 'ಮೌಲಾನಾ ಅಬ್ದುಲ್ಲ ಕಲಮ್ ಅಜಾದರ ದಸ್ತಗಿರಿಯ ಸ್ಮಾರಕಾರ್ಥವಾಗಿ, ಸದರಿ ಸಭೆಯನ್ನು ಮುಂದರಿಸುವಂತೆ ತನ್ನ ಅಭಿಮತವನ್ನಿತ್ತರು. ಈ ವಿಷಯದಲ್ಲಿ ೧೦ ಹಿಂದುಗಳನ್ನು ೧೦ ಮಂದಿ ಮಹಮ್ಮದೀಯರು ನಿರೋಧಿಸಿದರು. ಪರಿಣಾಮವಾಗಿ ಸಭೆಗೆ ಸೇರಿದ ೧೦ ಸದಸ್ಯರು, ಸಭೆಯನ್ನು ಲಕ್ಷ್ಯಿಸದೆ, ಹೊರಟು ಹೋದರು.

**ಮುಂಬಾಯಿಯಲ್ಲಿ**

ಪಿಕೆಟಿಂಗು (ಕಾರ್ಯಸಾಧನೆಯು) ಎಂದಿನಂತೆ ಎಡೆಬಿಡದೆ ಸಾಗುತ್ತಿರುವದು. ಈ ಕುರಿತು ೫೦ ಮಂದಿಯನ್ನು ದಸ್ತಗಿರಿ ಮಾಡಿರುವರು.

ಇತ್ತೀಚೆಗೆ ಪಂಡಿತ ಮೋತೀಲಾಲ್ ನೆಹರು ರವರು ಮುಂಬಾಯಿ ಮಿಲ್ಲುಗಳ ಯಜಮಾನರೊಡನೆ 'ಬಹಿಷ್ಕಾರ ಚಳವಳಕ್ಕೆ ಭಾಗಿಗಳಾಗಬೇಕೆಂದು' ಕೋರಿದ ಅಪೇಕ್ಷೆ ಮೇರೆಗೆ, ಅನೇಕ ಮಿಲ್ಲುಗಳ ವ್ಯಾಪಾರಿಗಳು ಸಹಿಮಾಡಿರುವರು. ಹಲವು ಯುರೋಪಿಯನ್ನರೂ, ಈ ವಿಷಯದಲ್ಲಿ ತಮ್ಮ ಪ್ರೋತ್ಸಾಹವನ್ನು ವಿಶದಗೊಳಿಸಿರುವರು. ಈ ಪ್ರಕಾರವಾಗಿ ಸಾಧಾರಣ ೧೭ ಮಿಲ್ಲುಗಳ ವಹಿವಾಟುಗಳು ನಿಲ್ಲಿಸಲ್ಪಟ್ಟವು. ಪ್ರತಿಯಾಗಿ ಸದರಿ ಮಿಲ್ಲುಗಳಲ್ಲಿ ಕೆಲಸಮಾಡುತ್ತಿದ್ದ ಸುಮಾರು ೪೦,೦೦೦ ಜನರ ಸ್ಥಿತಿಯು ಬಹಳ ಶೋಚನೀಯವಾಗಿರುತ್ತದೆ.

**ನವಾಢಿಲ್ಲಿಯಲ್ಲಿ**

ಕಿಷ್ಣೋಲಿ ಮತ್ತು ಶ್ರೀಮತಿ ಪಾರ್ವತೀ ದೇವಿ ಎಂಬ ೩ ನಾರೀ ಸತ್ಯಾಗ್ರಹಿಗಳನ್ನು ದಸ್ತಗಿರಿಮಾಡಿರುವರು. ಇವರನ್ನು I P C. 342ನೇ ಪ್ರಕರಣದ ಮೇರೆಗೆ ಕೈದುಮಾಡಿ ಪ್ರತಿಯೊಬ್ಬರಿಗೂ ೪ ತಿಂಗಳ ಸಾದಾ ಸಜೆಯೂ, ರೂ ೫೦ರ ಜುಲುಮಾನೆಯೂ ವಿಧಿಯಾಯಿತು. ಜುಲುಮಾನೆ ಕೊಡಲು ತಪ್ಪಿದ್ದಲ್ಲಿ ಎರಡೆರಡು ತಿಂಗಳ ಸಾದಾ ಸಜೆಯನ್ನು ವಿಧಿಸಿರುವರು.

**ಅಲ್ಲಹಾಬಾದ್.**

ತಾಲೂಕ ಪಹರೆಯ ಕಾರ್ಯಾಸಕ್ತರಾಗಿದ್ದ ಹಲವು ಸತ್ಯಾಗ್ರಹಿಗಳ ದಸ್ತಗಿರಿಗಳಾದವು, ಕಾಂಗ್ರೆಸ್ ಕಾರ್ಯಲಯ-ಕಾಂಗ್ರೆಸ್ ಕಾರ್ಯದರ್ಶಿಗಳ ಮನೆ—ಮುಂತಾದವುಗಳ ಶೋಧೆಯಾಯಿತು. ಕೈದು ಮಾಡಲ್ಪಟ್ಟ ಸತ್ಯಾಗ್ರಹಿಗಳಿಗೆ ಆರಾರು ತಿಂಗಳ ಕಠಿಣ ಶಿಕ್ಷೆಯು ವಿಧಿಸಲಾಯಿತು, "ಬಿಲಹರಿ" ಕಾಂಗ್ರೆಸ್ ಕಾರ್ಯಾಲಯದ ಕಾರ್ಯದರ್ಶಿಗಳನ್ನೂ, ಇನ್ನೂ ಕೆಲವು ಮಹನಿಯರನ್ನೂ ದಸ್ತಗಿರಿಮಾಡಿರುವರು. ರಾಷ್ಟ್ರ ಧ್ವಜಾರೋಹಣದ ಕುರಿತು ಮಿ| ಲಕ್ಷ್ಮಿ ಚಂದ್ ಮತ್ತು ಮಿ| ಲಕ್ಷ್ಮಣದಾಸ್ ಎಂಬ ಸತ್ಯಾಗ್ರಹ ಮುಖಂಡರನ್ನು ಕೈದುಮಾಡಿರುವರು. "ಸಿಹೋರ" ಎಂಬಲ್ಲಿ ಅರಣ್ಯ ಶಾಸನೆಯ ಉಲ್ಲಂಘನೆಗಾಗಿ ೪ ಮಂದಿಯನ್ನು ದಸ್ತಗಿರಿಮಾಡಲಾಯಿತು. ಇಲ್ಲಿಯ ಎಲ್ಲಾ ಸತ್ಯಾಗ್ರಹ ಸಂಸ್ಥೆಗಳನ್ನು ಸರಕಾರವು, ಅನ್ಯಾಯ ಸಂಸ್ಥೆಗಳೆಂದು ಪರಿಗಣಿಸಿರುತ್ತದೆ.

**ಸಿಮ್ಲಾದಲ್ಲಿ**

"ಮೋತೀಲಾಲ್ ನೆಹರು"ರವರ ಬಿಡುಗಡೆಯ ಕುರಿತು ಅನೇಕ ಪ್ರಯತ್ನಗಳು ಸಾಗುತ್ತಿವೆ. ಸರಕಾರದವರು ಈ ಕುರಿತು ಮನವಿಗಳನ್ನು ಗಮನಿಸಿರುವರೆಂದು ಕೇಳಲು ಸಂತೋಷಪಡುತ್ತೇವೆ. ಸಪ್ರು—ಜಯಕರರು ಈ ವಿಷಯದಲ್ಲಿ ತುಂಬ ಶ್ರಮಪಡುತ್ತಿರುವರು. ಅವರು ವ್ಯಾಸರಾಯರ ಮುಂದಿಟ್ಟ ರಾಜಿಪ್ರಸ್ತಾಪಕ್ಕೆ ಬೇಗನೇ ಗಮನವೀಯಲಾಗುವದೆಂದು ತಿಳಿದು ಬರುತ್ತದೆ. ರಾಜಿಯ ಕುರಿತು ಎಲ್ಲಾ ಸವಿಚಾರಗಳೂ ಹೊರಬೀಳಬೇಕಾದರೆ ಸಪ್ರು—ಜಯಕರರು ಮಹಾತ್ಮಾಜೀಯವರನ್ನು ಇನ್ನೊಮ್ಮೆ ನೋಡಬೇಕೆಂದಿರುವರು. ಅಂತೂ ರಾಜೀ ಪ್ರಸ್ತಾಪವು ಯೋಗ್ಯರೀತಿಯಲ್ಲಿ ಕೊನೆಗಾಣುವದೆಂದು ಊಹಿಸಲಾಗುತ್ತದೆ. ಮೊದಲಿನ ಕಾಂಗ್ರೆಸ್ ಅಧ್ಯಕ್ಷರ ಬಂಧನವನ್ನು ನಿರೋಧಿಸುವಂತೆ ಸತ್ಯಾಗ್ರಹಿಗಳು ಮಾತ್ರವಲ್ಲದೆ ಊರಿನ ಮುಖಂಡರೆಲ್ಲರೂ ಸೇರಿ ಹರತಾಳವನ್ನಾಚರಿಸಿದರು. ೧೭ ಸತ್ಯಾಗ್ರಹಿಗಳನ್ನೂ ದಸ್ತಗಿರಿ ಮಾಡಲಾಯಿತು.

**ಪಾಟ್ನಾದಲ್ಲಿ**

ಇಂಡಿಯನ್ ಪೋಸ್ಟು ಆಫೀಸುಗಳ ಶಾಸನದ ೫೭ನೇ ಪ್ರಕರಣದ ಮೇರೆಗೆ, ಪೇಶಾವರದ ತನಿಖಿ ರಿಪೋರ್ಟನ್ನು ಯಾರಾದರೂ ಟಪ್ಪಾಲುದ್ವಾರ ರವಾನಿಸಿದ್ದಲ್ಲಿ, ಸದರಿ ರಿಪೋರ್ಟನ್ನು ಪೋಲೀಸು ಡಿಪಾರ್ಟಮೆಂಟಿಗೆ ಕಳುಹಿಸಲಾಗುವದೆಂದೂ, ಹಾಗೆ ಕಳುಹಿಸಿದವನನ್ನು ತಕ್ಕ ಶಿಕ್ಷೆಗೆ ಗುರಿಪಡಿಸಲಾಗುವದೆಂದೂ, ಸರಕಾರದವರು ಕಟ್ಟಾಜ್ಞೆಮಾಡಿರುವರು.

ತಾರೀಖು ೨೮

**ಸಿಮ್ಲಾದಲ್ಲಿ**

ಸಪ್ರು ಜಯಕರರು, ತಮ್ಮ ಸಂಧಿಯ ಸಪೂರ್ಣ ಸಮಾಚಾರಗಳನ್ನು ಹೊರಗೆಡಹುವದರ ಮುಂಚಿತವಾಗಿ ಗಾಂಧೀಜೀಯವರ ಸಂದರ್ಶನವನ್ನು ಮಾಡಲಿರುವರು, ಮತ್ತು ತಮ್ಮ ಅಭಿಪ್ರಾಯಗಳನ್ನು ನೆಹರು ಮತ್ತು ಗಾಂಧೀಜೀಯವರಿಗೆ ತಿಳಿಸಬೇಕೆಂದಿರುವರು.

ಪ್ರೆಸ್ ರಿಪೋರ್ಟುಗಳಲ್ಲಿ ಸೂಚಿಸಿರುವಂತೆ, ಗಾಂಧಿಜೀಯವರು ವ್ಯಾಸರಾಯರಿಗೆ ಬರೆದ ಕಾಗದದ ಅಭಿಪ್ರಾಯ ಹಾಗೂ ಅವರೊಳಗಿನ ಮಾತುಕಥೆಗಳು ತೀರ ಅಪ್ರಯೋಜನವಾಗಿ ಪರಿಣಾಮ ಹೊಂದಲಿಕ್ಕಿಲ್ಲವೆಂದು ಊಹಿಸಲಾಗುತ್ತದೆ.

ಸಪ್ರು ಜಯಕರರು ತಮ್ಮ ಕಾರ್ಯಧುರಂಧರತೆಯಲ್ಲಿ ಯಶಸ್ವಿಯಾಗುವರೆಂದು ಸಾರ್ವಜನಿಕ ನಂಬಿಕೆ. ಅವರು ವ್ಯಾಸರಾಯರೊಡನೆ ಬೆಳಸಿದ ಸಂಧಾನ ಸಮಾಚಾರಗಳಿಗೆ ಕಾಂಗ್ರೆಸ್ ಮುಖಂಡರು ಯಾವ ನೀತಿಯ ರೂಪು ಕೊಡುವರೆಂದು ಹೇಳಲು ಕಷ್ಟಸಾಧ್ಯವಾಗಿದೆ. ಈ ವಿಷಯದಲ್ಲಿ ಸದರಿಯವರು ಇನ್ನೊಮ್ಮೆ ವ್ಯಾಸರಾಯರನ್ನು ನೋಡಬೇಕೆಂದಿರುವರು. ಅಂತೂ ಅವರು ಕೈಕೊಂಡ ಕಾರ್ಯವಿಶೇಷವು ಯೋಗ್ಯರೀತಿಯಿಂದ ಕೊನೆಗಾಣಲಿ—ಎಂದು ಸರ್ವರ ಪ್ರಾರ್ಥನೆ.

**ಮೀರಟ್**

ಕಾಂಗ್ರೆಸ್ ಪ್ರೆಸಿಡೆಂಟರಾಗಿದ್ದು ಕೈದುಮಾಡಲ್ಪಟ್ಟ 'ಅಬ್ದುಲ್ಲ ಕಲಮ್ ಅಜಾದ'ರ ತನಿಖಿಯು ನಡೆದು ೬ ತಿಂಗಳ ಸಾದಾ ಸಜೆಯನ್ನು ವಿಧಿಸಿರುವರು. 'ಅಜಾದ'ರೊಡನೆ ಕೋರ್ಟಿನವರು, ಸದರಿ ಮೊಕದ್ದಮೆಯಲ್ಲಿ ಆತನ ಆಕ್ಷೇಪ ವಸ್ತುವೆ ಇದೆಯೋ ಎಂದು ಕೇಳಿದ್ದಲ್ಲಿ, 'ಅಜಾದ'ರು ಮೌನಸ್ಥರಾದರು. ಪರಂತು 'ಅಜಾದ'ರನ್ನು 'ಎ' ತರಗತಿಯ ಜೈಲಿನಲ್ಲಿರಿಸಿದರು. ಅವರ ಮುಖಕಮಲವು ಉಜ್ವಲ ದೇಶಪ್ರೇಮದಿಂದ ಥಳಥಳಿಸಿತು. ಅವರೊಡನೆ ಮಿತ್ರವರು 'ವಿಶೇಷ ಸಮಾಚಾರವೇನಾದರೂ ಇದೆಯೋ?' ಎಂದು ಕೇಳಿದ್ದಲ್ಲಿ, ಅವರು 'ಬಂದಿವಾನನು ಯಾವ ತರದ ವರ್ತಮಾನವನ್ನು ಕೊಡಬಲ್ಲನು?' ಎಂದು ಉತ್ತರ ಕೊಟ್ಟರು.

**ಕಲ್ಕತ್ತದಲ್ಲಿ.**

ಗುತ್ತಿಗೆಗಳನ್ನು ಪಹರೆಮಾಡಿದರೆಂಬ ಅಪವಾದನೆಯ ಮೇಲೆ ೩ ಮಂದಿ ಘೋಷಾಸ್ತ್ರೀಗಳಾದ ಮುಸಲ್ಮಾನ ಭಗಿನಿಯರನ್ನೂ ೩ ಮಂದಿ ಹಿಂದೂ ಸ್ತ್ರೀಯರನ್ನೂ ತಾ ೨೭—೮—೧೯೩೦ರಲ್ಲಿ ದಸ್ತಗಿರಿಮಾಡಿರುವರಷ್ಟೆ! ಅವರನ್ನು ಕೇವಲ 'ಎಳೆಯ ಪ್ರಾಯದವರೆಂದು' ಬಿಡುಗಡೆಹೊಂದಿಸಿರುವರು. ಕಲ್ಕತ್ತೆಯಲ್ಲಿ ಮುಸಲ್ಮಾನ ಸ್ತ್ರೀಯರ ಬಂಧನ—ಹಾಗೂ ವಿಮೋಚನೆ—ಎಂದರೆ, ಇದೇ ಮೊದಲನೆಯದು. ಬೋಂಬುಗಳು ಆಗಿಂದಾಗ ಜನರನ್ನು ತೊಂದರೆಗೊಳಿಸುತ್ತಿವೆ. ಇವುಗಳ ಪ್ರಹಾರದಿಂದ ಹಲವರಿಗೆ ಜಖಮುಗಳೂ, ಕೆಲವೆಡೆಗಳಲ್ಲಿ ಪ್ರಾಣಹಾನಿಯೂ ಉಂಟಾಯಿತು. ಒಬ್ಬನ ಕೈಬೆರಳುಗಳೇ ಸುಟ್ಟುಹೋಗಿ ಆಸ್ಪತ್ರೆಯಲ್ಲಿರುವನಂತೆ.

**ಡಕ್ಕಾ**

ಇಲ್ಲಿನ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರಾದ ಮಿ ಲೋಮೆನ್ ಮತ್ತು ಪೋಲೀಸ್ ಸುಪರಿಂಟೆಂಡೆಂಟರಾಗಿದ್ದ ಮಿ ಇ ಹಡ್ಸನ್ ಎಂಬಿಬ್ಬರಿಗೆ ಕೇವಲ ಎಳೆ ಪ್ರಾಯದ ಒಂದು ಬಂಗಾಳಿ ಯುವಕನೊಬ್ಬನು 'ಮಿಂಟ್‌ಫೋರ್ಟ' ಆಸ್ಪತ್ರೆಯಲ್ಲಿ ಗುಂಡುಹಾರಿಸಿರುವನು. ಅವರಿಬ್ಬರೂ, ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿದ್ದ 'ರಿವರ್ ಪೋಲೀಸ್ ಸುಪರಿಂಟೆಂಡೆಂಟರ ಯೋಗಕ್ಷೇಮವನ್ನು ವಿಚಾರಿಸುತ್ತ, ಆಸ್ಪತ್ರೆಯ ಸುಪರಿಂಟೆಂಡೆಂಟರ ದರ್ಶನಕ್ಕಾಗಿ ಅವರಿದ್ದೆಡೆಗೆ ಬಂದರು. ಒಡನೆ, ಒಬ್ಬ ಬಂಗಾಳಿ ಯುವಕನು ಸುಮಾರು ೫೦ ಫೀಟು ದೂರ ನಿಂತು ತನ್ನ ಕೈಯಲ್ಲಿದ್ದ ರಿವಾಲ್ವರಿನಿಂದ ಪೋಲೀಸು ಅಧಿಕಾರಿಗಳ ಮೇಲೆ ಗುಂಡೆಸೆದನು. ಇಬ್ಬರೂ ನಿಶ್ಚೇತರಾಗಿ ನೆಲದ ಮೇಲೆ ಬಿದ್ದರು. ಯುವಕನು ತಪ್ಪಿಸಿಕೊಂಡಿರುವನು. ಆತನ ಪಿಸ್ತೂಲನ್ನೂ ಪಾದರಕ್ಷೆಗಳನ್ನೂ ಅಲ್ಲಿಯೇ ಬಿಟ್ಟಿರುವನು.

**ಅಹಮ್ಮದಾಬಾದಿನಲ್ಲಿ**

ಸರಕಾರದಿಂದ ಹುಡುಗಿಯ ನಿರ್ಯೋಗ್ಯ ವಿಧಿಸಿದ ವಿದ್ಯಾಲಯ ಪ್ರೊಫೆಸರ್ ಸದರಿ ಶಾಲೆಯ ವಿದ್ಯಾರ್ಥಿಗಳು ಪಹರೆ ಮಾಡುತ್ತಿರುವರು. ರಾಷ್ಟ್ರಧ್ವಜವನ್ನೇರಿಸುವದೇ ಅವರ ಮುಖ್ಯ ಉದ್ದೇಶ. ಈ ಕುರಿತು ೫ ವಿದ್ಯಾರ್ಥಿಗಳನ್ನು ಶಾಲೆಯಿಂದ 'ಡಿಸ್‌ಮಿಸ್' ಮಾಡಲಾಯಿತು. ೨೪ ಸತ್ಯಾಗ್ರಹಿಗಳಿಗೆ ಶಿಕ್ಷೆಯು ವಿಧಿಸಲಾಗಿದೆ.

ತಾರೀಖು ೨೯

**ಮೀರತದಲ್ಲಿ**

ತಾ ೨೮ನೇ ದಿನ ಶ್ಯಾಮ ಘಂಟೆ ೮ಕ್ಕೆ ಬಂದಿಖಾನೆಯಲ್ಲಿ ದೊಡ್ಡದೊಂದು ಗಲಭೆಯುಂಟಾಯಿತು. ಕಾರಣವೇನೋ ತಿಳಿಯದು. ಒಹುಶಃ ರಾಜಕೀಯ ಕೈದಿಗಳನ್ನು ದುಃಖಿತರನ್ನಾಗಿ ಅನಾವಶ್ಯಕಗಳಿಂದ ಅಲಕ್ಷ್ಯಮಾಡಿದುದೇ ಇದಕ್ಕೆ ಕಾರಣವೆಂದು ಊಹಿಸಲಾಗುತ್ತದೆ. ಜೈಲಿನ ಗೋಡೆಯನ್ನು ನಾಶಮಾಡಿರುವರು. ಸಾಧಾರಣ ೯ ಗಂಟೆಯ ಹೊತ್ತಿಗೆ ಕಲೆಕ್ಟರು ಸ್ವತಹ ಹೋಗಿ ಜೈಲಿನೊಳಗನೇ ತನಿಖಿನಡಿಸಿ, ೧೩ ಮಂದಿ ಅಪರಾಧಿಕರನ್ನು ಲಾಟಿ ಪೆಟ್ಟುಗಳಿಂದ ಸನ್ಮಾನಿಸಲಾಯಿತು. ವಿಚಾರಣೆಯು ಇನ್ನೂ ಕೊನೆಗಾಣಲಿಲ್ಲ.

**ಪೇಶಾವರದಲ್ಲಿ**

ಆಫ್ರಿದಿಗಳ ಗಲಭೆಯು ಮಿತಿಮೀರಿದ ಪ್ರಯುಕ್ತ ಸರಕಾರದವರು 'ಮಾರ್ಶಲ್ ಲೋ ಓರ್ಡಿನನ್ಸನ್ನು ಮಾಡಿರುವರಷ್ಟೆ! ಅದು ಮಾತ್ರವಲ್ಲದೆ ಈಗ ತಾನೇ ಇನ್ನೊಂದು ಹೊಸ ಕಾನೂನನ್ನು ಜ್ಯಾರಿಗೆ ತಂದಿರುವರು. 'ಆಫ್ರಿದಿ'ಗಳ ಸಂಖ್ಯೆಯು ಹೆಚ್ಚುತ್ತ, ಸರಕಾರದವರು, ಅವರನ್ನು ಓಡಿಸುವ ವಿಷಯದಲ್ಲಿ, ಅವರ ಅಂದಾಜು ಸಂಖ್ಯೆ ಎಷ್ಟಾಗಬಹುದೆಂದು ಎಣಿಸುವರೆ ಬೇಕಾದ ಏರ್ಪಾಡುಗಳು ನಡದಿರುವವು. ಪೇಶಾವರದ ನಿವಾಸಿಗಳಲ್ಲಿ, ಯಾರೊಬ್ಬನಾದರೂ ಆಫ್ರಿದಿ ಸೇವಕರನ್ನಿಡಬಾರ

(೧೩ನೆಯ ಪುಟಕ್ಕೆ ಮುಂದುವರಿಸಿಯದೆ.)

## The Zandu Pharmaceutical Works, Ltd., Bombay, 14.
## ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ 'ಝಂಡೂ'ಯವರ

# ಚ್ಯವನಪ್ರಾಶ ಲೇಹ್ಯ.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!

ಕ್ರಯ 1 ಪೌನು ಸೀಸೆ ರೂ. 2—8—0, ½ ಪಾ. ರೂ. 1—5—0, ¼ ಪಾ. ರೂ 0—13—0.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು:— ದಾಮೋದರ್ ಅಂಡ್ ಕಂಪೆನಿ, 78 ಜೈನಾ ಬಜಾರು ರಸ್ತೆ, ಮದ್ರಾಸು

ತೀರ್ಥಹಳ್ಳಿ ಏಜಂಟರು:— ಮೆಸರ್ಸ್ ಪಂಡಿತ ಮತ್ತು ಕಂಪೆನಿ.

ಮಂಗಳೂರು ಏಜಂಟರು:— ದಿ ಇಂಡಿಯನ್ ಮಾರ್ಟ್.

ಏಜಂಟರು:— ಎಸ್. ಎಲ್. ಭಾಕರ್ ಎಂಡ್ ಬ್ರದರ್ಸ್

ಏಜಂಟರು:— ಯು. ಜನಾರ್ಧನರಾವ್, ಕುಕ್ಕೂರು, ದ. ಕನ್ನಡ

ಮಂಗಳೂರು ಏಜಂಟರು — ಕೆಸ್ಸಾ ಶೆಟ್ಟಿ, ಬುನ್ಸ್‌ಬೇಟ್

ವಿವರ ಕೆಲಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.



TELEGRAMS 'ASPINWALCO' TELEPHONE NO. 15

# SAFE
## at Any Speed

# Firestone
## GUM-DIPPED TIRES

OUTSTANDING features combine to make Firestone Gum-Dipped Tires the safest tires in the world.

Gum-Dipping — the Firestone patented process, whereby the cords of the carcass are dipped in a rubber solution—insulating them against friction — the tread design and the five tough rubber—these and other features, make a tire unequaled to withstand grueling road punishment under all conditions.

Let us show you the Firestone way to the ultimate in economical tire satisfaction.

DISTRIBUTORS

Aspinwall & Co, Ltd
(Address) MANGALORE.

*STOCKISTS*

UDIPI - *H. Siddaya Hegde*

KASARGODE - *Rama Nayak*

KANHANGAD - *H. S. Russool.*

Puttur *K. Venkatraya Pai,* Imperial Cycle Stores

*FOR YOUR CAR*

# WILLARD BATTERIES.

SIMONIZ KLEENER SIMONIZ POLISH

*AGENTS —*

## Messrs. Aspinwall & Co., Ltd.
MANGALORE.



## ಕೋ-ಒಪರೇಟಿವ್ ಸೊಸ್ಶೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ಶಾರದಾ ಛಾಪಖಾನೆ
ರಥಬೀದಿ, ಮಂಗಳೂರು



## ರಿಸ್ಟ್‌ವಾಚ್ ಉಚಿತ

ಕಂಗ್‌ಕಾಜ್ ಕಾರ್ಪೋರೇಶನ್ ಕಂಪೆನಿ,
ಮುಂಬಾಯಿ.



## ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು



## ಮುದಲ್ ತರವಾದ ಬೆಳ್ಳಿ ಉಡಿದಾರ ಹಗ.

ESTD 1896.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,



## Grand Clearing Sale!

Indian Stores,
*Beadon Street,*
CALCUTTA



ಒಮ್ಮೆ ಪರೀಕ್ಷಿಸಿರಿ! ತೃಪ್ತಿ ಹೊಂದಿರಿ!

## ದಿ ಕ್ರೈನ್ ರಬ್ಬರ್ ಸ್ಟಾಂಪು ಕಂಪೆನಿ,

ಬಲ್ಮಠ ರಸ್ತೆ, ಕಂಕನಾಡಿ ಪೋಸ್ಟು,
ಮಂಗಳೂರು, ದ. ಕನ್ನಡ

## ರಬ್ಬರು ಮೊಹರುಗಳು

ಪ್ರೊಪ್ರೈಟರ್.

## ಯುರೋಪ ಖಂಡದಲ್ಲಿ ಫೋರ್ಡ ಕಂಪೆನಿಗಳು ತುಂಬಿಹೋದವು.

ಅಮೇರಿಕದ ಫೋರ್ಡ ಮೋಟರ ಕಂಪೆನಿಯವರು ಯುರೋಪ ಖಂಡದ ಮಧ್ಯಸ್ಥಳಗಳಲ್ಲೆಲ್ಲಾ ಮೋಟರ ಕಾರುಗಳನ್ನು ತಯಾರು ಮಾಡುವ ಕಂಪೆನಿಗಳನ್ನು ಸ್ಥಾಪಿಸಿರುವರು ಈ ಕಂಪೆನಿಯು ಸುಮಾರು ೫೫ ಶಾಖೆಗಳು ಯುರೋಪ, ಆಸ್ಯಾ ಆಫ್ರಿಕ, ಅಮೇರಿಕ, ದಕ್ಷಿಣ ಅಮೇರಿಕದಲ್ಲಿ ಸ್ಥಾಪಿಸಲ್ಪಟ್ಟಿವೆ ಒಟ್ಟಾರೆ ಎಲ್ಲಾ ಕಂಪೆನಿಗಳಲ್ಲಿ ವರುಷಕ್ಕೆ ೫ ಲಕ್ಷ ಕಾರುಗಳು ತಯಾರಾಗುತ್ತಿವೆ ಐಯರ್ಲೆಂಡಿನ ಕೋರ್ಕ ಪಟ್ಟಣದಲ್ಲಿ ಸ್ಥಾಪಿಸಿದ ಕಾರ್ಖಾನೆಯಲ್ಲಿ ೬೦ ಕಾರುಗಳು ದಿವಸಕ್ಕೆ ತಯಾರಾಗುತ್ತವೆ ದಿವಸಕ್ಕೆ ೧೫೦ ತಯಾರಾಗುವ ಏರ್ಪಾಡಿಯು ನಡಿಯುತ್ತದೆ ಇಲ್ಲಿ ೪೬೦೦ ಮಂದಿ ಕೆಲಸ ನಡಿಸುತ್ತಿರುವರು ಇನ್ನು ಮೆಂಚೆಸ್ಟರ್, ಲಂಡನ್, ಜರ್ಮನಿಯ ಬರ್ಲಿನ ಈ ಸ್ಥಳಗಳಲ್ಲಿ ಕಾರ್ಖಾನೆಗಳನ್ನು ಆಯಾ ಊರಿನವರ ಪಾಲುಧಂಡವಾಳವನ್ನು ಕೂಡಿಸಿ ನಡಿಸುತ್ತಿರುವರು ಕೂಲಿಯವರಿಗೆ ಒಳ್ಳೇ ಕೂಲಿಯೂ ಸಿಕ್ಕುತ್ತದೆ ೫ ದಿವಸಗಳ ವಾರಕ್ಕೆ ೪ ಪೌಂಡು ಮಜೂರಿ, ಅಲ್ಲದೆ ಕೂಲಿಕಾರರಿಗೆ ಕಂಪೆನಿಯಲ್ಲಿ ಶೇರುಗಳೂ ಇವೆ, ಇದರಿಂದ ಇವರಿಗೆ ಕಂಪೆನಿಯ ಮೇಲೆ ಪ್ರೀತಿಯೂ ಇದೆ ಕೂಲಿಯ ಹೊರತು ಹಣದ ಬಡ್ಡಿ ಬೊನಸ್ ಕಂತಿನಲ್ಲಿ ಕಾರುಗಳೂ ಸಿಕ್ಕುತ್ತವೆ ಈ ಕ್ರಮಗಳನ್ನು ಅನುಸರಿಸುವದರಿಂದ ಮುಷ್ಕರಗಳು ಆಗಲು ಸಾಧ್ಯವೇ ಇಲ್ಲ ಇದೇ ಸೂತ್ರವನ್ನು ಹಿಂದೂಸ್ಥಾನದಲ್ಲಿಯ ಕಾರ್ಖಾನೆಗಳು ಅನುಸರಿಸಿದರೆ ಮುಷ್ಕರಗಳಿಲ್ಲದೆ ಕೂಲಿಕಾರರು ಸುಖದಿಂದ ಇದ್ದು ಕಂಪೆನಿಗಳು ಹಾಳಾಗಲು ಎಡೆಯಿರಲಿಕ್ಕಿಲ್ಲ

### ಸಂಧಿಪ್ರಸ್ತಾಪ

ಸಂಧಿಪ್ರಸ್ತಾಪವು ಇನ್ನೂ ಮುಗಿಯಲಿಲ್ಲ ಜಯಕರ ಸಪ್ರೂರವರು ಎರವಾಡದಿಂದ ವೈಸರಾಯರ ಹತ್ತಿರ ಹೋಗಿ ಸರಿಯಾಗಿ ಮಾತನಾಡಿ ಕಾಗದ ಕೊಟ್ಟರು. ಆಲೋಚನೆ ಆಯಿತು ಸವಾಲು ಜವಾಬು ಆಯಿತು ಪೂರ್ಣ ಮುಗಿಯಲಿಲ್ಲ ತಿರಿಗಿ ಕೆಲವು ವಿಷಯಗಳಲ್ಲಿ ಸಂಶಯ ಬಂದಿತೆಂದು ತೋರುತ್ತದೆ ವೈಸರಾಯರು ನೆಹರುಗಳಿಗೆ ತಿರಿಗಿ ಒಂದು ಕಾಗದವನ್ನು ಇವರೊಡನೆ ಕೊಟ್ಟಿರುವರು ಸಪ್ರೂ ಜಯಕರರು ಈ ಪತ್ರ ತೆಗೆದುಕೊಂಡು ನ್ಯಾನಿ ಜೈಲಿಗೆ ಬಂದು ಇಬ್ಬರು ನೆಹರುಗಳೊಡನೆ ಮಾತನಾಡಿ ತಿರಿಗಿ ಕಾಗದ ತೆಗೆದುಕೊಂಡು ಮಹಾತ್ಮಾ ಗಾಂಧಿಯವರಿದ್ದ ಯರವಾಡ ಜೈಲಿಗೆ ಬಂದಿರುವರು ಇನ್ನು ತಿರಿಗಿ ಉತ್ತರ ಪಡೆದು ನ್ಯಾನಿ ಜೈಲಿಗೆ ಹೋಗಬೇಕಾಗುತ್ತದೋ ಅಥವಾ ಸಿಮ್ಲಾಕ್ಕೆ ಹೋಗಬೇಕೊ ತಿಳಿಯುವದಿಲ್ಲ ಈಚೆಯಿಂದ ರಾಜಿಪ್ರಸ್ತಾಪ ನಡಿಯುವಾಗ ಎಲ್ಲಾ ಕೊಂಗ್ರೆಸ್ ಮುಖಂಡರು ಸೆರೆಮನೆಯನ್ನು ಸೇರಿದರು ಕೊಂಗ್ರೆಸಿನವರು ಇಷ್ಟರ ವರೆಗೆ ಮಾಡಿದ ಎಲ್ಲಾ ಕೆಲಸ ಹಾಳುಮಾಡಬೇಕೆಂದು ಕೆಲವು ಕುಹಕರು ಬೊಂಬ ಗಳನ್ನು ಹಾಕಿ ಅನಾಹುತ ಮಾಡುತ್ತಿರುವರು ಹುಡುಗರು ಕೋಲೇಜುಗಳನ್ನು ಬಿಡುತ್ತಿರುವರು ಅಲ್ಲಹಾಬಾದ, ಬೆನಾರಸ್ ಯುನಿವರ್ಸಿಟಿಗಳ ಪ ಚ್ಛಲ್ಪಟ್ಟವು. ಆದರೂ ರಾಜಿ ಇನ್ನೂ ಮುಗಿಯಲಿಲ್ಲ

### ಆಶ್ರಿತ ರಾಜ್ಯಗಳ ಪ್ರಜೆಗಳ ಸಭೆ

ದಕ್ಷಿಣ ಹಿಂದೂದೇಶದ ಆಶ್ರಿತ ರಾಜ್ಯಗಳ ಪ್ರತಿನಿಧಿಗಳ ಸಭೆಯು ಜರಗಿತು ಅದರಲ್ಲಿ ಪುರಾತನ ಕಾಲದಿಂದ ಆಳಿಕೊಂಡು ಬರುತ್ತಿರುವ ರಾಜಕುಟುಂಬಗಳ ಹಕ್ಕುಸ್ವಾತಂತ್ರ್ಯಕ್ಕೆ ಏನೊಂದೂ ಕುಂದುಕೊರತೆ ಬಾರದೆಂಬ ಮುಖ್ಯ ತತ್ವ ಸಾರಲ್ಪಟ್ಟಿತು ನಂತರ ಬೆಂಗಳೂರಿನಲ್ಲಿ ಜರಗಿದ ಆಶ್ರಿತ ರಾಜ್ಯಗಳ ಪ್ರಜೆಗಳ ಸಭೆಯಲ್ಲಿ ಆಶ್ರಿತ ರಾಜರುಗಳ ಅಧಿಕಾರ ಹೆಚ್ಚಿಸಿದರೆ ಸಾಲದು, ಬ್ರಿಟಿಷ ಇಂಡಿಯದ ನಿವಾಸಿಗಳಿಗೆ ಇರುವ ರೀತಿಯ ಹಕ್ಕುಸ್ವಾತಂತ್ರ್ಯಗಳು ಆಶ್ರಿತ ರಾಜ್ಯಗಳ ಪ್ರಜೆಗಳಿಗೂ ಇರಬೇಕು ಅವರಿಗೂ ಆಳ್ವಿಕೆಯಲ್ಲಿ ಹಕ್ಕುಸ್ವಾತಂತ್ರ್ಯಗಳು ಇರಬೇಕು, ಸೈಮನ್ ರಿಪೋರ್ಟಿನ ಹೊರಭಾಗವನ್ನು ನೋಡಿ ಸಂತೋಷಪಟ್ಟು ಪ್ರಯೋಜನವಿಲ್ಲ ಅದರ ಒಳಗುಟ್ಟನ್ನು ನೋಡಿದರೆ ಅಧಿಕಾರವನ್ನು ಹೆಚ್ಚಿಸುವ ಬದಲಾಗಿ ಕಡಿಮೆಮಾಡಿದೆ ಎಂದೇ ತೋರುತದೆ ಗ್ರೇಟರ ಇಂಡಿಯಾ ಕೌನ್ಸಿಲ್ ಸ್ಥಾಪಿಸಿದರೂ ಅದೊಂದು ಪ್ರತ್ಯೇಕ ಕೌನ್ಸಿಲಾಗಿದೆ. ಬ್ರಿಟಿಷ ಇಂಡಿಯಾದ ಪ್ರತಿನಿಧಿಗಳೂ ಆಶ್ರಿತ ರಾಜ್ಯಗಳ ಪ್ರತಿನಿಧಿಗಳೂ ಒಟ್ಟುಗೂಡಿ ಕೆಲಸಮಾಡಲು ಸಾಧ್ಯವಿಲ್ಲ ಇಷ್ಟರ ವರೆಗೆ ಆಶ್ರಿತ ರಾಜರ ಮೇಲಾಧಿಕಾರ ಬ್ರಿಟಿಷ ಮಂತ್ರಿಗಳ ಕೈಯಲ್ಲಿತ್ತು ಸೈಮನ್ ರಿಪೋರ್ಟು ಪ್ರಕಾರ ಈ ಅಧಿಕಾರವು ವೈಸರಾಯರ ಕೈಕೆಳಗಿನ ಕೆಲವು ಅಧಿಕಾರಿಗಳಿಗೆ ಕೊಟ್ಟಂತಾಯಿತು ಎಂದು ಮುಂತಾಗಿ ವಾದಗಳು ನಡೆದವು ಯಾವ ವಾದ ನಡೆದರೂ ರೌಂಡ್‌ಟೇಬಲ್ ಕೊನ್ಫರೆನ್ಸಿಗೆ ಹೋಗಲು ಆಶ್ರಿತ ರಾಜ್ಯಗಳ ಪ್ರಜೆಗಳಿಗೆ ಹಕ್ಕಿಲ್ಲವೆಂದು ತೋರುತ್ತದೆ

### ರೌಂಡ ಟೇಬಲ್ ಕಾನ್ಫರೆನ್ಸ ನವಂಬರದಲ್ಲಿ ಖಂಡಿತ ನಡೆಯುತ್ತದೆ.

ಈ ಸಭೆಯನ್ನು ಬರುವ ಅಕ್ಟೋಬರ ತಿಂಗಳ ೨೦ನೇ ತಾರೀಕಿನಲ್ಲಿ ಜರಗಿಸಬೇಕೆಂದು ಮೊದಲಿನ ಆಲೋಚನೆಯಾಗಿತ್ತು ನಂತರ ಅದನ್ನು ಮುಂದರಿಸಲಾಯಿತು ನವಂಬರ ಮೊದಲನೇ ವಾರದಲ್ಲಿ ಜರಗುವದೆಂದು ಖಂಡಿತವಾಗಿದೆ ಪತಿಯಾಲಾ ಮಹಾರಾಜರು ಮುಂಬಾಯಿಯಲ್ಲಿ ಕೆಲವರು ಕಪ್ಪು ಪತಾಕೆ ತೋರಿಸಿದರೂ ಅಷ್ಟದಾರಿಯಾಗಿ ಹೋಗಿ ಹಡಗಿನಲ್ಲಿ ಕೂತು ಇಂಗ್ಲಂಡಿಗೆ ಈ ಸಭೆಗೆ ಹೊರಟುಹೋದರು ಮೈಸೂರು ದಿವಾನರೂ ಹೊರಟರು ಇನ್ನು ಇತರ ಪ್ರತಿನಿಧಿಗಳು ಹೊರಡಲು ಸಿದ್ಧರಾಗಿರುವರು ಆದರೆ ಯಾರ ಹೆಸರೂ ಪ್ರಕಟವಾಗದೆ ಹೊರಡಲು ಅಡ್ಡಿಯಾಗಿದೆ ಕೊಂಗ್ರೆಸ ಪಕ್ಷದವರು ಹೋಗಲಿ ಹೋಗದಿರಲಿ ಸಭೆಯು ಕ್ರಮಪ್ರಕಾರ ನಡೆಯುವದು ಆದರೆ ಅದರಲ್ಲಿ ನಡೆವ ವಿಷಯಗಳು ಹಿಂದಿಯರ ಮನಸ್ಸಿಗೆ ಸರಿಕಾಣದೆ ಇದ್ದರೆ ಮುಂದಿನ ದಾರಿ ಯಾವದೆಂದು ಹೋಗುವ ಪ್ರತಿನಿಧಿಗಳು ವಿಚಾರಿಸತಕ್ಕ ಸಂಗತಿಯಾಗಿದೆ

### ಮುಂಬಾಯಿ ಸಂಸ್ಥಾನದ ಕಂದಾಯ ನಿರಾಕರಣೆ ಕುರಿತು ಹೊಸ ಕಾನೂನು.

ಮುಂಬಾಯಿ ಸಂಸ್ಥಾನದ ಸೂರತ ಮತ್ತು ಕೈರಾ ಜಿಲ್ಲೆಯಲ್ಲಿ ಕಂದಾಯವನ್ನು ಕೊಡುವದಿಲ್ಲವೆಂದು ಜನರು ಹಟ ಹಿಡಿದಿರುವರು ಇವರು ಮೊದಲೊಮ್ಮೆ ಬಾರ್ಡೋಲಿಯಲ್ಲಿ ಇದೇ ರೀತಿ ಮಾಡಿದಾಗ ವಸೂಲಿಗೆ ತಕ್ಕ ಕಾನೂನುಗಳಿರಲಿಲ್ಲ ಜನರು ಸಾಮಾನು ಒಳಗಿಟ್ಟು ಬೀಗಹಾಕಿ ಹೊರಗೆ ಮಲಗುತ್ತಿದ್ದರು ಬೀಗ ಒಡೆದು ಸಾಮಾನು ತೆಗೆದು ಮಾರಲಿಕ್ಕೆ ಕಾನೂನು ಇರಲಿಲ್ಲ ಇದಕ್ಕಾಗಿ ಈಗ ಇವರು ಬಾಗಿಲು ಹಾಕಿ ಹೊರಗೆ ಹೋದರೂ ಬೀಗ ಒಡೆದು ಒಳಗಿದ್ದ ಸಾಮಾನು ಕೊಂಡುಹೋಗಿ ಏಲಂಮಾಡಿ ಕಂದಾಯದ ಹಣ ಭರ್ತಿಮಾಡಲಿಕ್ಕೆ ಕಾನೂನಾಗಿದೆ ಅದಲ್ಲದೆ ಒಳಗೆ ಇರುವ ಪೆಟ್ಟಿಗೆಯೊಳಗೆ ಏನಾದರೂ ಇದ್ದರೆ ಅದರ ಬೀಗ ಒಡೆದು ತೆಗೆಯಲಿಕ್ಕೂ ಕಾನೂನಾಗಿದೆ

### ಇಂಗ್ಲಂಡಿನಲ್ಲಿ ಹೊಸ ಪಾರ್ಲಿಮೆಂಟ ಆಗುವ ಸಂಭವ.

ಇಂಗಲಂಡಿನಲ್ಲಿ ಕೆಲಸವಿಲ್ಲದವರ ಸಂಖ್ಯೆಯು ಬಹಳ ಹೆಚ್ಚಾಗಿಯೇ ಇತ್ತು ಇಂದಿಯದ ಅಸಹಕಾರ ಚಳವಳಿಂದ ಈ ಸಂಖ್ಯೆಯು ಮತ್ತೂ ದಿನೇ ದಿನೇ ಹೆಚ್ಚಾಗುತ್ತಾ ಬರುತ್ತಿದೆ ಇಂಡಿಯದ ಜನರು ಕೆಲಸ ಇಲ್ಲದೆ ಉಪವಾಸವಿದ್ದರೂ ಸರಕಾರದವರು ಇವರಿಗೆ ಊಟಕ್ಕೆ ಕೊಡಬೇಕೆಂಬ ಕಾಯಿದೆ ಇಲ್ಲ ಅವರ ಇಂಗ್ಲಂಡಿನಲ್ಲಿ ಕಾಯಿದೆ ಇದೆ ಇದಕ್ಕಾಗಿ ಪಾರ್ಲಿಮೆಂಟಿನಲ್ಲಿ ಚರ್ಚೆಯು ನಡಿಯುತ್ತಲಿದೆ ಲೇಬರ ಪಕ್ಷವು ಈಗ ಅಧಿಕಾರದಲ್ಲಿದ್ದವರೇ ಕೆಲಸವಿಲ್ಲದರಿಗೆ ಕೆಲಸ ಕೊಡಲು ಯಾವದಾರಿಯೂ ತೋರುವದಿಲ್ಲ, ಇದರಿಂದ ಪಾರ್ಲಿಮೆಂಟಿನ ಲಿಬರಲ್, ಲೇಬರ ಮತ್ತು ಕನ್ಸರ್‌ವೇಟಿವ ಪಾರ್ಟಿಗಳೊಳಗೆ ವಿವಾದ ಬಂದು ಲಿಬರಲ್ ಮತ್ತು ಕನ್ಸರ್‌ವೇಟಿವ್ ಒಟ್ಟು ಕೂಡಿ ಈಗಿನ ಲೇಬರ ಸರಕಾರವು ಬಿದ್ದು ಹೋಗುವಂತೆ ಮಾಡುವುದರಲ್ಲಿರುವರು ಹೀಗಾದರೆ ಅಕ್ಟೋಬರ ೨೮ರಲ್ಲಿ ಪಾರ್ಲಿಮೆಂಟ ಕೂಡಿರುವಾಗ ಮಂತ್ರಿ ಸಭೆ ಬಿದ್ದುಹೋಗಿ ಹೊಸ ಚುನಾವಣೆಯು ನವಂಬರದಲ್ಲಿ ಆಗಲಿಕ್ಕಿರುವದು ಹೀಗಾದರೆ ರೌಂಡಟೇಬಲ ಕೊನ್ಫರೆನ್ಸು ಆಗಲು ಸಂಭವವಿದೆಯೋ ಇಲ್ಲವೊ ಸೈಮನ್ ರಿಪೋರ್ಟಿನ ಅವಸ್ಥೆ ಏನಾಗುವದು ನೋಡಲಿಕ್ಕಿದೆ ಹೊಸತಾಗಿ ಬರಬಹುದಾದ ಸರಕಾರದ ಮೇಲೆ ಹೊಂದಿಕೊಂಡಿದೆ ಎಂದು ಹೇಳಬಹುದು

### ದಕ್ಷಿಣ ಕನ್ನಡ ಜಿಲ್ಲೆಯ ಆಸ್ಪತ್ರೆಗಳೂ ಡಿಸ್ಪೆನ್ಸರಿಗಳೂ.

ಹೊಸ ಲೋಕಲ್ ಬೊರ್ಡು ಆಕ್ಟಿನ ಪ್ರಕಾರ ಆಸ್ಪತ್ರೆಗಳ ಅಧಿಕಾರವು ಡಿಸ್ಟ್ರಿಕ್ಟ ಬೋರ್ಡಿಗೂ ಬರುವದು. ಈ ಜಿಲ್ಲೆಯಲ್ಲಿರುವ ಕುಂದಾಪುರ, ಉಡುಪಿ ಕಾರ್ಕಳ, ಪುತ್ತೂರು ಮಂಗಳೂರು, ಕಾಸರಗೋಡು ಆಸ್ಪತ್ರೆಗಳು ಗವರ್ನಮೆಂಟ ಆಸ್ಪತ್ರೆಗಳಾಗಿರುವವು ಇನ್ನು ಬೈಂದೂರು ಮೂಲ್ಕಿ, ಮೂಡಬಿದರೆ, ಬೆಳತಂಗಡಿ ಸುಳ್ಯ, ಮಂಜೇಶ್ವರ ಕುಂಬಳೆ, ಡಿಸ್ಪೆನ್ಸರಿಗಳೂ ಬಂಟವಾಳ ಆಸ್ಪತ್ರೆಯೂ, ತಾಲೂಕು ಬೋರ್ಡುಗಳ ಕೈಕೆಳಗಿವೆ ಇವುಗಳನ್ನೆಲ್ಲ ಹೊಸ ಕ್ರಮದ ಪ್ರಕಾರ ಡಿಸ್ಟ್ರಿಕ್ಟ ಬೋರ್ಡಿನವರು ವಹಿಸಿಕೊಂಡರೆ ಉತ್ತಮವಿತ್ತು ಈಗಿರುವ ರೂರಲ್ ಡಿಸ್‌ಪೆನ್ಸರಿಗಳ ಮತ್ತು ಇನ್ನು ತೆರಿಯಬಹುದಾದ ರೂರಲ್ ಡಿಸ್‌ಪೆನ್ಸರಿಗಳ ಆಡಳಿತೆಯನ್ನು ತಾಲೂಕುಬೋರ್ಡುಗಳಿಗೆ ಕೊಡುವದೇ ಉತ್ತಮ ಪಂಚಾಯತುಗಳಿಗೆ ಆಸ್ಪತ್ರೆಗಳನ್ನು ವಹಿಸಿಕೊಟ್ಟರೆ ಹಳ್ಳಿಯವರೆಲ್ಲರೂ ಡಾಕ್ಟರುಗಳ ಮೇಲೆ ಯಜಮಾನಿಕೆ ನಡಿಸಿ ಕೆಲಸಮಾಡುವುದು ಕಷ್ಟವಾದೀತು ಆದುದರಿಂದ ಡಿಸ್ಟ್ರಿಕ್ಟ ಬೋರ್ಡ ಕಮಿಟಿಯವರು ಇದರ ವಿಷಯ ಚೆನ್ನಾಗಿ ಪರ್ಯಾಲೋಚಿಸಿ ಈಗಿರುವ ಎಲ್ಲಾ ಆಸ್ಪತ್ರೆ ಡಿಸ್ಪೆನ್ಸರಿಗಳನ್ನು ತಮ್ಮ ಅಧೀನದಲ್ಲಿಯೇ ಇಟ್ಟುಕೊಂಡರೆ ಅವುಗಳು ಅಭಿವೃದ್ಧಿಯಾಗಿ ಪ್ರತಿ ಒಂದು ರೋಗಿಗಳ ಆಸ್ಪತ್ರೆಗಳಾಗುವುದರಲ್ಲಿ ಸಂದೇಹವಿಲ್ಲ ಇವುಗಳಲ್ಲಿ ಕೆಲಸ ಮಾಡುವ ಡಾಕ್ಟರುಗಳಿಗೂ ಕಂಪೌಂಡರುಗಳಿಗೂ ಮಿಡ್‌ವೈಫ್, ನರ್ಸುಗಳಿಗೂ ಒಂದೇ ಡಿಸ್ಟ್ರಿಕ್ಟ ಬೋರ್ಡ ಸರ್ವಿಸಾಗಲು ಸಾಧ್ಯವಿದೆ ಸರಿಯಾದ ಸಂಬಳದ ಸ್ಕೇಲುಮಾಡಲು ಸಾಧ್ಯವಿದೆ ಆಸ್ಪತ್ರೆಗಳಿಗೆ ಹೆಚ್ಚು ಮದ್ದುಗಳು, ಬೆಡ್ಡಿಂಗ, ಡಾಯಟು, ಹೆರಿಗೆ ಕೆಲಸ ಮುಂತಾದ್ದು ಉತ್ತಮ ರೀತಿಯಲ್ಲಿ ನಡಿಯುವುದರಲ್ಲಿ ಸಂದೇಹವಿಲ್ಲ

## ನೋಟಗಳು.
## NOTE....S:

ಮುಂಬಾಯಿ ಯುನಿವರ್ಸಿಟಿಯ ಕೋಲೇಜು ತರಗತಿಯ ವಿದ್ಯಾರ್ಥಿಗಳಿಗೂ ವ್ಯಾಯಾಮ ಪಾಠವನ್ನು ಕಡ್ಡಾಯವಾಗಿರುವಂತಹ ಕುರಿತು ವಾದ ನಡೆಯುತ್ತಿರಲು, ಪೂನಾದಲ್ಲಿ 'ಪರಶುರಾಮ ಭಾವು' ಕೋಲೇಜಿನ ಪ್ರಿನ್ಸಿಪಾಲರು ಪ್ರೋಫೆಸರ ಲಾಟಿ ಪೆಟ್ಟನ್ನು ಸಹಿಸಲಾರದೆ ನಿಂತವರು ನೆಲಕ್ಕೆ ಉರುಳಿದರಾಗಿ ಘಕ್ಕನೇ ವಾರ್ತೆಬಂದಿತು! ಮುಂದಿನ ಚರ್ಚೆಯಿಲ್ಲದೆ ಪ್ರತಿ ಕೋಲೇಜಿಗೂ ವ್ಯಾಯಾಮಕ್ಕೆ ಅನುಕೂಲತೆಗಳಾಗುವಂತೆಯೇ ರರಾವುಗಳಾದವು ಕಾರಣ ಪ್ರಿನ್ಸಿಪಾಲರೂ, ಪ್ರೊಫೆಸರರೂ ಈ ವ್ಯಾಯಾಮಾಭ್ಯಾಸ ಮಾಡಿ, ಲಾಟಿ ಪೆಟ್ಟುಗಳಿಂದ ನೆಲಕ್ಕೆ ಬೀಳದಂತೆ ಸಾಧಿಸಬಹುದಲ್ಲವೇ?

* * * *

ಗಣಪತಿಗೆ ಗಲಾಟೆಗಳಲ್ಲಿ ಪ್ರೀತಿ ಹೆಚ್ಚು! ಇದು ಕಾಲ ಮಹಿಮೆಯೋ? ವಿಘ್ನೇಶ್ವರನ ಬುದ್ಧಿ ವಿಪರ್ಯಾಸ ಫಲವೋ? ತಿಳಿಯದು!

* * * *

ಒಂದೆರಡು ವರುಷಗಳಿಂದ ಬೆಂಗಳೂರಿನಲ್ಲಿ ಗಲಾಟೆಗಳ ನ್ನೆಬ್ಬಿಸಿದ ಗಣಪತಿಯು ಈ ವರ್ಷ ಅಲ್ಲಿ ತನ್ನ ಬೇಳೆ ಬೇಯದುದರಿಂದ ಮಂಗಳೂರಿಗೆ ಬಂದನು ಪರಂತು ಇಲ್ಲ ವಿಗ್ರಹದ ವಿಸರ್ಜನಾ ಪೂಜೆ ಮುಗಿಸಿ ಒಳಿಕ ಮೆರವಣಿಗೆಯಾದುದರಿಂದ ಪರಿಣಾಮವೇನೂ ಅತ್ಯಂತ ಸುಲಭದಲ್ಲಿಯೇ ಕೊನೆಗಂಡಿತು ಒಂದು ಎಚ್ಚರಿಕೆ ಮಾತ್ರ! ಹೀಗಾದರೆ ಮುಂದಕ್ಕೆ ಗಣಪತಿಗೆ ಪೂಜೆ ಇರದು

* * * *

ಅಮೇರಿಕಾದಲ್ಲಿ ಬೇಗನೇ ಹೊಸ ಕಾಲೇಜುಗಳ ಸಂಸ್ಥಾಪನೆಗಳಾಗಲಿರುವವು ಗಂಡಂದಿರ ಪ್ರೀತಿಯನ್ನು ಪಾಲಿಸಿ ಬರುವ ವಿಧಾನ ರೀತಿಗಳನ್ನೇ ಈ ಕಾಲೇಜುಗಳಲ್ಲಿ ಕಲಿಸುವುದಂತೆ!

* * * *

ಈಗಿನ ಶಿಕ್ಷಣ ಕ್ರಮಗಳಂತೆ ಡೈರೆಕ್ಟ ಮೆಥಡಿಗೆ ಅನುಸಾರವಾಗಿ ಇಲ್ಲಿ ವಿದ್ಯಾಭ್ಯಾಸವು ಅನುಕೂಲವಾದರೆ ಆ ಬಳಿಕ ಗಂಡಂದಿರ ಅಭಾವವಿರದು! ಒಳಿಕ ಗಂಡಂದಿರೇ ಹೆಂಡಿರ ಪ್ರೀತಿಪಾಲನ ಬಗ್ಗೆ ಕಲಿತುಬಿಡುವದೂ ಅಗತ್ಯವಾಗುವುದು

* * * *

ಅಮೇರಿಕಾದ ಕ್ಷುದ್ರ ವಿಚಾರವಾದರೂ ಅದರಲ್ಲಿ ಮಹತ್ವ ಇದೆ!

* * * *

ಭರತ ಖಂಡದೊಳಗಿನ ಪ್ರಚಲಿತ ಚಳವಳವು ಶಾಂತವಾಗುವ ತನಕ ಚಕ್ರಗೋಷ್ಠಿ ಜರಗಿಸು ಫಲವಿಲ್ಲವಾಗಿ ಇಂಗ್ಲಂಡಿನ ಯತಾರ್ಥವಾದಿಗಳ ವಿಚಾರವಂತೆ! ಕೊಂಗ್ರೆಸನ್ನು ನ್ಯಾಯಬಾಹಿರ ಸಂಸ್ಥೆಯಾಗಿ ಪರಿಗಣಿಸಿದ ಒಳಿಕ ಶಾಂತಿಯು ಬರಲಿದೆಯೋ?

* * * *

ಹುಚ್ಚು ನಿಲ್ಲದೆ ಮದುವೆಯಾಗಲೂ ಇಲ್ಲ! ಮದುವೆಯಾಗದೆ ಹುಚ್ಚು ನಿಲ್ಲಲಾರದು!

# ನವೀನ ಬೆಡಗು ಯೋಗ್ಯತೆಗಳ ಸುಪ್ರಸಿದ್ಧ "ಫೋರ್ಡ ಟ್ರಕ್ಕ್"




(1) 4 ಸ್ಪೀಡ್ ಟ್ರೇನ್ಸ್ ಮಿಶನ್.
ಬಲವತ್ತಾದ ಶಕ್ತಿ ಸಾಮರ್ಥ್ಯದ ಕ್ರೀಗ

(2) ಹೊಸಚಕ್ರಾಕಾರವಾಗಿ ಬಳಿದಿರುವ ಗಿಯರ್ ರಿಯರ್ ಎಕ್ಸೆಲ್.
ದುರ್ಗಮವಾದ ಶಕ್ತಿ ಮತ್ತು ದೀರ್ಘಕಾಲ ಬಾಳಿಕೆ

(3) ಧಾರಾಳವಾದ ಬ್ರೇಕುಗಳು.
ಸಕಲ ಪ್ರಸಂಗಗಳಲ್ಲಿಯೂ ದೃಢವಾದ ಬಳಕೆ

(4) ಹೊಸ ಫ್ರುಂಟ್ ಎಕ್ಸೆಲ್ ಮತ್ತು ಸ್ಪ್ರಿಂಗ್.
ಸಶಕ್ತವಾದ ವಿಭಾಗದ ರಚನೆ

ಯಂತ್ರ ಸಾಮಾಗ್ರಿಗಳಲ್ಲಿ ಸಂಪೂರ್ಣ ತೃಪ್ತಿಕರವಾಗಿರುವ ಈ ಫೋರ್ಡ ಟ್ರಕ್ಕುಗಳಿಗೆ ಪೆಟ್ರೋಲು ಮತ್ತು ಇತರ ಎಣ್ಣೆಗಳ ಖರ್ಚು ಬಹಳ ನಿಧಾನ. 4 ಸ್ಪೀಡುಗಳ ಗೇಯರ್ ಬೋಕ್ಸ ಮತ್ತು ಉಷ್ಣವಲಯಕ್ಕೆ ಅನುಕೂಲವಾಗಿರುವ ರೇಡಿಯೇಟರಿನ ಈ ಫೋರ್ಡ ಟ್ರಕ್ಕುಗಳು ಎಲ್ಲಾ ಸಂದರ್ಭಗಳಲ್ಲಿ ಸರ್ವ ರೀತಿಗಳಲ್ಲಿ ಉಪಯೋಗಕ್ಕೆ ಅನುಕೂಲವಾಗಿ ಆದರ್ಶನೀಯವಾಗಿವೆ.

ಡಿಸ್ಟ್ರಿಬ್ಯೂಟರ್ಸ್:—
ಪಿಯರ್ಸ್‌ಲೆಸ್ಲಿ ಎಂಡ್ ಕಂಪೆನಿ ಲಿಮಿಟೆಡ್ ಕಲ್ಲಿಕೋಟೆ.
ಮತ್ತು
ಇವರ ಕಡೆಯಿಂದ ನೇಮಿಸಿದ ವ್ಯಾಪಾರಸ್ಥರು.

ಫೋರ್ಡ ಮೋಟರ ಕಂಪೆನಿ ಆಫ್ ಇಂಡಿಯಾ. ಲಿಮಿಟೆಡ್, ಬೊಂಬಾಯಿ IN 30/10



ಪ್ರತಿಯೊಂದು ಗುಟುಕು ಸುಖ ಜೀವನವನ್ನು ತರುವದು.

ಡಾಕ್ಟರ್ ವಿಲ್ಸನರ
## "ಫ್ರೊಸ್ಫೊ—ಇಲೆಕ್ಟ್ರೋಜೆನ್."
(ಎಲ್ಲ ಜನರಿಗೂ ತಾರುಣ್ಯವನ್ನೊದಗಿಸುವ ಪೌಷ್ಟಿಕ ರಸಾಯನ)

ಚೆನ್ನಾಗಿರಿ! ತರುಣರಾಗಿರಿ!! ಉತ್ಸಾಹಿಗಳಾಗಿರಿ!!

ಹೆದರದಿರಿ! ನೀವು ಬಳಲಿದ ಮತ್ತು ಅಶಕ್ತರಾದ ಸ್ತ್ರೀ ಪುರುಷರಾಗಿದ್ದರೆ ಕೃಶ ಶರೀರವೂ, ನಿರ್ಜೀವ ಮುಖಮುದ್ರೆಯೂ ಉಳ್ಳವರಾದರೆ ರಕ್ತ, ಅಸ್ಥಿ, ಮಾಂಸಗಳು ಇಲ್ಲವಾದರೆ ಮಾತನಾಡುವಾಗ, ಕೆಲಸ ಮಾಡುವಾಗ, ನಡೆಯುವಾಗ ಏದಿಕೆ, ಯದ್ವರೆ, ಹಲವು ತೊಂದರೆಗಳಿಂದ ದುಃಖವೂ ಕ್ಲೇಶ ಜೀವನವೂ ನಿಮಗೆ ಅನುಭವವಾಗುವದಾದರೆ, ನರಗಳ ದೌರ್ಬಲ್ಯ,




ಮೆದುಳಿನ ಶ್ರಮ, ಧಾತುನಷ್ಟ ಮೊದಲಾದವುಗಳಿವೆಯೊ ದರೆ ಧೈರ್ಯಗುಂದ ಬೇಡಿರಿ ನಿಮ್ಮ ಶರೀರದಲ್ಲಿ ಕಬ್ಬಿಣದ ಅಸ್ಥಿ, ಕಬ್ಬಿಣದ ಸ್ನಾಯು ಕಬ್ಬಿಣದ ದೇಹವನ್ನೆ ನಾವು ಉಂಟುಮಾಡುವೆವು. ಬಂಗಾರದಂತಹ ಶಕ್ತಿಯುಳ್ಳ ಸುಂದರ ಮುಖಮುದ್ರೆಯಿಂದ, ಕೂಡಿದ ಉಜ್ವಲ ಯುವಕರನ್ನಾಗಿ ನಿಮ್ಮನ್ನು ಮಾಡುವೆವು ಈಗಲೇ ಔಷಧವನ್ನು ಪಡೆದು ಧಾರಾಳವಾಗಿ ಅನುಭವಿಸಿರಿ

ಬಾಟಲಿಗೆ ರೂ. 2—8—0. ಮೂರು ಬಾಟಲಿಗಳಿಗೆ ರೂ. 4—12—0

ಅಂಚೆ ಮುಕ್ತು

ಸಬ್ ಏಜಂಟರು:
ಶಾ ಕಂಪೆನಿ, ಡಾಯ್ಮಂಡ್ ಬಿಲ್ಡಿಂಗ್ಸ್
ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು.

**Frank Robinson & Co.,**
*Charnock Place,*
Post Box No. 2380, CALCUTTA


## ನೋಟೀಸು.

**ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟನಲ್ಲಿ.**
ಕ್ರಮ ನಂಬ್ರ 414/19೩೦

ಎಂ ಅನಂತಪ್ಪ, ವಕೀಲ ಮಿಸ್ಟರ್ ಕೆ. ನರಶಿಂಗನಾಯ್ಕ
ವಾದಿ
ಪಾಂಡುರಂಗ ಕಮ್ತಿ ಕೂಡಾ ೬ ಜನರು ಪ್ರತಿವಾದಿರು

೧ನೇ ಪ್ರತಿವಾದಿ—ಉದ್ಯಾವರ ಗ್ರಾಮದಲ್ಲಿರುವ ವಾಸ್ತವ್ಯ ಕಮ್ತಿರ ಮಗ ಪಾಂಡುರಂಗ ಕಮ್ತಿಗೆ

ವಾದಿಯ ಕಡೆ ವಕೀಲ ಕೆ ನರಶಿಂಗ ನಾಯ್ಕನು ಕೊಡುವ ನೋಟೀಸು

ಮೇಲ್ಕಂಡ ವ್ಯಾಜ್ಯವು ತಾ. ೧೩—೯—೧೯೩೦ನೇ ಶನಿವಾರ ದಿವಸ ತನ್ನಿಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪವಿದ್ದಲ್ಲಿ ೧ನೇ ಪ್ರತಿವಾದಿಯು ಆ ದಿವಸ ಮೇಲ್ಕಂಡ ಕೋರ್ಟನಲ್ಲಿ ಹಾಜರಾಗಿ ವ್ಯವಹರಿಸತಕ್ಕದ್ದು

ಕಾಸರಗೋಡು, }
೨೮—೮—೧೯೩೦ }

K Narasing Naik,
*Pleader for Plaintiff*

## ಪ್ರಕಟಣೆ.

ಹಾಲಿ ಮೃತಪಟ್ಟ ನನ್ನ ಅವಿಭಕ್ತ ಅಣ್ಣ ಕೃಷ್ಣಭಟ್ಟರ ಬಾಬ್ತು ಕೆಲವು ರಿಕಾರ್ಡುಗಳು ಕಾಣೆಯಾಗಿ ಈ ವರೇಗೆ ಹುಡುಕಿದ್ದಲ್ಲಿ ಸಿಕ್ಕಲಿಲ್ಲಾ ಅವುಗಳು ಯಾರಿಗಾದರೂ ಸಿಕ್ಕಿ, ನನಗೆ ತಂದು ಕೊಟ್ಟಿದ್ದಾದರೆ ರೂಪಾಯಿ ೭—೦—೦ ಏಳು ರೂಪಾಯಿಗಳನ್ನು ಇನಾಮಾಗಿ ಕೊಡಲು ಸಿದ್ಧವಿದ್ದೇನೆ. ತಾ ೩೦—೮—೧೯೩೦ನೇ ಇಸವಿ.

**M. Sankaranarayana Sastry.**

## ಅನುಕ್ರಮಣಿಕೆ


ಅಗ್ರಲೇಖ.

ಆಧುನಿಕ ಸ್ವಾತಂತ್ರ್ಯ

ಸ್ಫುಟವಿಚಾರಗಳು ೬

ಟೀಕೆಗಳು ೭

ವರ್ತಮಾನ ಸಂಗ್ರಹಗಳು

ವಿದೇಶ ವರ್ತಮಾನ ೮

ಒಳದೇಶ ವರ್ತಮಾನ ೮

ದಕ್ಷಿಣಕನ್ನಡ-ಮಂಗಳೂರು ಉಡುಪಿ, ಕಾರ್ಕಳ, ಬೆಳ್ತಂಗಡಿ

ಗುರುವಾಯನಕೆರೆ, ಬಂಟ್ವಾಳ, ಅಮ್ಟಾಡಿ ಪದವು ೯

ವಿವಿಧ ಸಮಾಚಾರಗಳು ೧೧

ಪುತ್ತೂರು ತಾಲೂಕಿನ ಘಾಟಿ ಮತ್ತು ಕಾಡುಗುಡ್ಡಗಳ ಸರ

ಹದ್ದಿನ ಗ್ರಾಮಗಳ ನಿವಾಸಿಕರಲ್ಲಿ ೨

ಭರತಖಂಡದ ಸಂಕ್ಷಿಪ್ತ ರಾಜಕೀಯ ಇತಿಹಾಸ ೧೫

ಶಿಕ್ಷಣ ಪದ್ಧತಿ

ಮಹಾತ್ಮಾಜಿಯವರ ಸತ್ಯಾಗ್ರಹ ಸಮಾಚಾರ ೮ ೧೪


# ಸ್ವದೇಶಾಭಿಮಾನಿ.

ತಾರೀಕು ೫ನೇ ಶುಕ್ರವಾರ ಸಪ್ಟಂಬರ ೧೯೩೦

## ಆಧುನಿಕ ಸ್ವಾತಂತ್ರ್ಯ.

ಹಳೆಯ ಲೋಕದ ನಿರಂಕುಶ ವ್ಯಕ್ತಿಯ ಆಡಳಿತದ ಸುಧಾರಣೆ ಹೋಗಿ ಪ್ರಪಂಚದಲ್ಲಿ ಪ್ರಜಾಸತ್ತಾತ್ಮಕ ಆಡಳಿತದ ನೂತನ ವಿಧಾನವನ್ನು ಹೊಂದಿತು 'ರಾಜಾ ಪ್ರತ್ಯಕ್ಷ ದೇವತಾ' ಎಂಬ ಮೋಹ ಮಂತ್ರದಿಂದ ಒಂದು ಸಮಯದಲ್ಲಿ ಪ್ರಪಂಚವು ಮುಗ್ಧವಾಗಿ ಹೋಗಿದ್ದಿತು ರಾಜನ ವೈಯಕ್ತಿಕ ಅಧಿಕಾರದ ಮೇಲಿನ ನಿಸ್ಸೀಮ ಅಂಧ ಭಕ್ತಿಯ ಮುಂದೆ, ಆ ಕಾಲದಲ್ಲಿ ರಾಷ್ಟ್ರದ ಅಥವಾ ಸಮಾಜದ ಅಥವಾ ಸಮಷ್ಟಿ ಹಿತದ ಸಮಸ್ಯೆಗಳ ತಿಳಿವೇ ಇಲ್ಲವಾಗಿತ್ತು ಅಂತಹ ಅನಾಗರಿಕ ಪರಿಸ್ಥಿತಿಯಿಂದ ಈಗಿನ ಪಾಶ್ಚಾತ್ಯ ನಾಗರಿಕತೆಯು ನೂತನ ಸ ಧಾರಣೆಗಳನ್ನು ಕಲ್ಪಿಸಿದೆ ವ್ಯಕ್ತಿಯ ಸ್ವಾತಂತ್ರ್ಯವನ್ನು ಹೆಚ್ಚಿಸಿರುವಾಗ ಸಮಷ್ಟಿ ಸಂಬಂಧವಾದ ವ್ಯಕ್ತಿಯ ವರ್ತನವನ್ನೂ ನಿರ್ಬಂಧಿಸಿದೆ

ಈ ದೊಡ್ಡ ವಿಚಾರಕ್ರಾಂತಿಯ ಮುಂದೆ ನಿರಂಕುಶ ಪ್ರಭುತ್ವಗಳು ಒಂದರ ಹಿಂದೆ ಒಂದಾಗಿ ಉರುಳಿಹೋದವು ರಾಜಕಾರಣಗಳು ವಿಶಾಲ ಸೂತ್ರಗಳ ಮೇಲೆ ರಚಿಸಲ್ಪಟ್ಟವು ವ್ಯಕ್ತಿ ಸ್ವಾತಂತ್ರ್ಯಕ್ಕೂ ಸಮಷ್ಟಿ ಹಿತಕ್ಕೂ ಹೆಚ್ಚು ಪ್ರಶಸ್ತಿಯು ದೊರಕಿತು ಅಧಿಕಾರಸ್ಥರು ಪ್ರಜಾ ಸೇವಕರಲ್ಲದೆ ಪ್ರಜೆಗಳು ಅಧಿಕಾರಿಗಳ ಸೇವಕರಲ್ಲವೆಂಬ ಸೂತ್ರವು ವಿಕಸನ ಹೊಂದಿತು

ಇಂತಹ ವಿಶಾಲ ಸೂತ್ರಗಳ ಆಚರಣೆಯ ಮಧ್ಯದಲ್ಲಿ ಲೋಕ ಶಾಂತತೆಯು ಬೆಳೆಯಬೇಕಾಗಿತ್ತು ಆದರೆ ಕಾರ್ಯತಃ ಜನಾಂಗ ಜನಾಂಗಗಳೊಳಗಿನ ಮನಃ ಕ್ಲೇಶವು ಬೆಳೆಯುತ್ತಿದೆ ಒಂದು ಜನಾಂಗಕ್ಕೆ ಇನ್ನೊಂದು ಜನಾಂಗವನ್ನು ಅಧಿಕರಿಸಿ ದಬ್ಬಾಳಿಸುವುದೆಂದರೆ ಸಂತೋಷವಾಗುತ್ತಿದೆ ಇಂತಹ ಅಶಾಂತತೆಯ ಬೀಜವನ್ನು ಬಿತ್ತುವಂತಹ ಘಟನೆಗಳು ಈ ನಾಗರಿಕ ಲೋಕದಲ್ಲೂ ಉಂಟಾಗಲು ಕಾರಣವೇನು?

ಮುಖ್ಯತ ನಾಗರಿಕತೆಯು ಎಷ್ಟೇ ಬೆಳೆದಿರಬಹುದಾದರೂ, ಸೂತ್ರಗಳೂ, ತತ್ವಗಳೂ ಎಷ್ಟೇ ರಚಿಸಲ್ಪಟ್ಟರೂ ಮಾನವನ ಮಾನಸಿಕ ಪ್ರಕೃತಿಯಲ್ಲಿ ಮಾತ್ರ ಹೆಚ್ಚು ಬದಲಾವಣೆಗಳಾಗಿದೆಯಾಗಿ ತೋರಿಬರುವದಿಲ್ಲ ಮನಸಿನೊಳಗಿನ ಅತೀವ ಸ್ವಾರ್ಥವೋ ಅಧಿಕಾರದ ಮದವೋ, ಜನಾಂಗಗಳ ವೈಯಕ್ತಿಕ ಲಾಭಗಳೂ, ಈಗಿನ ನಾಗರಿಕತೆಯ ಧ್ಯೇಯಗಳನ್ನು ಕೆಡಿಸುತ್ತಿವೆ ಎನ್ನುವುದರಲ್ಲಿ ಸಂದೇಹವಿಲ್ಲ

ಪ್ರಜಾಸತ್ತೆಯ ಯಾವ ಉತ್ತಮ ಸೂತ್ರಗಳ ಮೇಲೆ ರಚಿಸಲ್ಪಟ್ಟಿದ್ದರೂ ಅದು ಹಿಂದಿನ ರಾಜ್ಯಾಡಳಿತ ಕ್ರಮದ ದೋಷಗಳಿಂದ ವಿರಹಿತವಾಗಿಲ್ಲವೆಂಬುವುದು ಆಧುನಿಕ ಯುರೋಪಿಯ ರಾಷ್ಟ್ರಗಳ ಪ್ರಗತಿಯನ್ನು ಕಂಡರೆ ತೋರಿಬರುವುದು, ಈಗಿನ ಈ ವಿಚಾರ ಕ್ರಾಂತಿಗಳ ಮಧ್ಯದಲ್ಲಿಯೇ ಇಟಲಿಯ ಮುಸ್ಸೊಲೀನಿ ಪೋಲೆಂಡಿನ ಪಿಲ್ಸುಡ್ಸ್ಕಿಯಂತಹ ಡಿಕ್ಟೇಟರ (Dictators)ಗಳು ಪ್ರಜಾಸತ್ತೆಯನ್ನು ನಿಂದಿಸುತ್ತ ಮಿತಿಯಾವಧಿ ಜನತೆಯನ್ನು ಅಧಿಕಾರ ಛಾಯೆಯಲ್ಲಿ ಯಾಗಲಿ, ತಮ್ಮ ವ್ಯಕ್ತಿ ಮೋಹದಲ್ಲಿ ಯಾಗಲಿ ಅಧಿಕರಿಸಲು ಶಕ್ತರಾದುದು ಈ ನಾಗರಿಕತೆಯ ಅಂತರ್ಯದ ನಿಜವಾದ ಊನತೆಯ ಚಿಹ್ನೆಗಳಾಗಿವೆ ಹಾಗೆಂದು ಇಂಗ್ಲೆಂಡ್, ಫ್ರಾನ್ಸ ಮುಂತಾದ ರಾಷ್ಟ್ರಗಳು ಹಲವು ರಾಜ್ಯಕ್ರಾಂತಿ (Revolutions)ಗಳಿಂದ ಉತ್ತಮ ರಾಜಕಾರಣಗಳನ್ನು ರಚಿಸಿರುವುವಾದರೂ, ಈ ರಾಜ್ಯಾಡಳಿತಗಳು ಕೂಡ ತಮ್ಮ ಧ್ಯೇಯವನ್ನು ಹೊಂದಿರುವುದಿಲ್ಲ

ರಾಜ್ಯ ವಿಸ್ತರಣೆ ಮತ್ತು ಸಾಮ್ರಾಜ್ಯ ರಚನೆಯೆಂಬುದು ಹಿಂದಿನ ಕಾಲದಲ್ಲಿ ವೈಯಕ್ತಿಕ ರಾಜರ ಸಾಹಸ ವಿಕ್ರಮಗಳ ಸಾಕ್ಷಿರಚನೆಯಾಗಿದ್ದಿತು ಆದರೆ ಈಗ ಇದೇ ಕಾರ್ಯಗಳು ಜನಾಂಗಗಳ ಆರ್ಜನೆಯ, ಸಂಪತ್ತಿನ ಸಂಗ್ರಹದ ಉದ್ದೇಶವಾಗಿರುತ್ತದೆ ಆಗಿನ ಕಾಲದಲ್ಲಿ ಅಧೀನತೆಯೆಂದರೆ ಸ್ವಾಮಿಭಕ್ತಿಯನ್ನು ಅರ್ಪಿಸಿದರೆ ಸಾಕಿದ್ದಿತು ಈಗಿನ ನಾಗರಿಕ ರಾಜ್ಯಗಳ ಸಾಮ್ರಾಜ್ಯ ವಿಸ್ತೀರ್ಣತೆಯೆಂದರೆ, ಅಧೀನ ರಾಜ್ಯಗಳು ದುಡಿದು ತಮ್ಮ ಸ್ವಾಮಿ ಭಕ್ತಿಯೊಡನೆ ಸಮಸ್ತ ಧನವನ್ನೂ ಸಮರ್ಪಿಸಬೇಕಾಗಿರುತ್ತದೆ

ವ್ಯಕ್ತಿ ಸ್ವಾತಂತ್ರ್ಯ, ಅಭಿಪ್ರಾಯ ಸ್ವಾತಂತ್ರ್ಯ ಮೊದಲಾದ ಸ್ವಾತಂತ್ರ್ಯ ಸೂತ್ರಗಳು ತತ್ವದಲ್ಲಿಯೇ ಸುಂದರವಾಗಿದೆ ಆದರೆ ಆಚರಣೆಯಲ್ಲಿ ಯಾವ ಸರಕಾರಗಳೂ ಇವುಗಳಿಗೆ ಮಾನ್ಯತೆಯನ್ನು ಕೊಡುವುದಿಲ್ಲ ಸ್ವಂತ ಸರಕಾರದ ಅಧಿಕಾರಗಳ ವಿಷಯದಲ್ಲಿ ಸರಿಯಾದ ಮೇರೆಗಳನ್ನು ಗೂತ್ತುಪಡಿಸಿರುವ ಬ್ರಿಟಿಷ ಜನತೆಯು ಹಿಂದೀಯರನ್ನು ದಬ್ಬಾಳಿಸಲು ಇಷ್ಟು ವಿಕಟಂಟರದಿಂದ ಹಿಂದೀ ಸರಕಾರವನ್ನು ಪಕ್ಷಾತ್ಯಪಡಿಸುವುದನ್ನು ನೋಡಿದರೆ ಈಗಿನ ನಾಗರಿಕ ಮಾನಸಿಕತೆಯ ಬರ್ಬರತೆಯು ಸ್ಪಷ್ಟವಾಗುವುದು

ತತ್ವತಃ ಸ್ವಾತಂತ್ರ್ಯವು ಮಹತ್ತಿನದು ವ್ಯಕ್ತಿಗೆ ಸ್ವಾತಂತ್ರ್ಯ, ಜನತೆಗೆ ಸ್ವಾತಂತ್ರ್ಯ ಜನಾಂಗಕ್ಕೆ ಸ್ವಾತಂತ್ರ್ಯ ಇವೆಲ ಸ್ವಾತಂತ್ರ್ಯಗಳು ಬೇಕೇಬೇಕೆಂದು ಈಗಿನ ನಾಗರಿಕತೆಯು ಒಪ್ಪುತ್ತಿದೆ ಆದರೆ ಕಾರ್ಯದಲ್ಲಿ? ಲೋಕೇತಿಹಾಸವು ಜನಾಂಗಗಳ ಈಗಿನ ಭಯಂಕರ ಸ್ವಾರ್ಥವನ್ನು ಈ ವಿಷಯದಲ್ಲಿ ತೋರಿಸುತ್ತಿದೆಯಲ್ಲವೇ?

## ವಿದೇಶ ವರ್ತಮಾನ

— ಇಂಗ್ಲಾಂಡಿನಲ್ಲಿ ತಾಳಲಾರದ ಉಷ್ಣ ತಾಪವು ಎದ್ದಿದೆ ಜನರು ಸೆಕೆಯನ್ನು ಸೈರಿಸಲಾರದೆ ಉಡಿಗೆತೊಡಿಗೆಗಳನ್ನು ಬಿಟ್ಟು ನೀರಿನಲ್ಲಿ ಮುಳುಗಿ ಕೂತುಕೊಳ್ಳುತ್ತಿರುವರು ಇಷ್ಟರ ಒಳಗೆ ಕೆಲವರು ಸತ್ತುಹೋಗಿರುವರು

— ಲಂಕಶಾಯರಿನ ಇದ್ದಲಿನ ಗಣಿಯೊಂದರಲ್ಲೇನೋ ಅವಘಡವಾಗಿ ಗಣಿಯು ಕುಸಿದು ಬಿದ್ದಿತು ಕೆಲವು ಆಳುಗಳು ಸಜೀವವಾಗಿ ಹೂತಲ್ಪಟ್ಟರು

— ಬ್ರಿಟಿಷ ಪಾರ್ಲಿಮೆಂಟಿನ ಲಿಬರಲ್ ಮತ್ತು ಲೇಬರ ಪಕ್ಷಗಳೊಳಗೆ ಕಕ್ಷಿಯ ಹೆಚ್ಚುತ್ತಿರುವುದು ಇದರಿಂದ ಲಿಬರಲರು ಕನ್ಸರ್ವೇಟಿವ ಪಕ್ಷದೊಡನೆ ಸೇರಿಕೊಂಡು ಲೇಬರ ಕಕ್ಷಿಯರನ್ನು ಹೊರತಳ್ಳುವ ಸಂಚಿಕೆಗಳ ಭವಿಷ್ಯವಿರುವುದಾಗಿಯೂ ನವಂಬರದಲ್ಲಿ ಹೊಸ ಪಾರ್ಲಿಮೆಂಟಿನ ಚುನಾವಣೆಯಾಗುವ ಸಂಭವವಿರುವುದಾಗಿಯೂ ವಾರ್ತೆಗಳು ಬರಹತ್ತಿವೆ

— ಡೊಮಸ್ಕೋವಿನಲ್ಲಿ ಮುಸಲ್ಮಾನ ಸ್ತ್ರೀಯರ ಪ್ರಸಿದ್ಧ ಸಮ್ಮೇಳನವು ಜರಗಿ ಘೋಷಾ ಪದ್ಧತಿಯನ್ನು ನ್ಯೂನಿಸಬೇಕಾಗಿಯೂ ಹುಡುಗಿಯರ ವಿವಾಹ ಪ್ರಾಯವನ್ನು ೧೮ ವರ್ಷಗಳಿಗೆ ಇಡಬೇಕೆಂದೂ ಪ್ರಾಥಮಿಕ ಶಿಕ್ಷಣವಾದರೂ ಕಡ್ಡಾಯವಾಗಿರಿಸುವಂತೆಯೂ ಅತ್ಯಾಧುನಿಕ ರೀತಿನೀತಿಯ ಠರಾವುಗಳಾದುವು

ಇಂಗ್ಲಾಂಡಿಗೂ ಇಂಡಿಯಕ್ಕೂ ಟೆಲಿಫೋನಿನ ಸಂಬಂಧ ವಿಚಾರವಾಗಿದೆ

— ಆಕ್ಟೋಬರ ೩ನೇ ತಾರೀಕಿನಿಂದ ೧೫ರ ತನಕ ಕಾಬೂಲಿನಲ್ಲಿ ಅಮೀರ ನಾದಿರಶಹರ ಪಟ್ಟಾಭಿಷೇಕ ದಿನದ ಸ್ಮಾರಕವಾಗಿ ಸಮಾರಂಭ ಸಪ್ತಾಹ ಮಹೋತ್ಸವವು ನಡೆಯಲಿಕ್ಕೆ ಇರುವವು.

## ಒಳದೇಶ ವರ್ತಮಾನ

— ಕೋಂಗ್ರೆಸ ವರ್ಕಿಂಗ ಕಮಿಟಿಯನ್ನು ಅಕ್ರಮ ಕೂಟವಾಗಿ ಪರಿಗಣಿಸಿ ಕಳೆದ ೨೭ರಲ್ಲಿ ಸದ್ರಿ ಕಮಿಟಿಯು ಸದಸ್ಯರಾದ ವಿಠ್ಠಲ್‌ಭಾಯಿ ಪಟೇಲ ಡಾ ಅನ್ಸಾರಿ, ಪಂಡಿತ ಮಾಲವೀಯ ಮೊದಲಾದ ೯ ಮಂದಿಯರನ್ನು ಸರಕಾರದ ಹೊಸ ಆರ್ಡಿನೆನ್ಸುಗಳ ಮೇರೆಗೆ ಕೈಸೆರೆ ಮಾಡಲ್ಪಟ್ಟೊಡನೆಯೇ ಆರು ಮಂದಿ ಮುಸಲ್ಮಾನರೂ ೬ ಮಂದಿ ಹಿಂದೂಗಳೂ ಸದಸ್ಯರುಳ್ಳ ಹೊಸತೊಂದು ವರ್ಕಿಂಗ್ ಕಮಿಟಿಯೂ, ಪಂಡಿತ ಮಾಲವೀಯರ ಪುತ್ರ ಗೋವಿಂದಕಾಂತ ಮಾಲವೀಯರು ಕಾರ್ಯದರ್ಶಿಯವರಾಗಿಯೂ ನೇಮಿಸಲಾಗಿ ಹೋಯಿತು ಅಲ್ಲಾಹಾಬಾದಿನ ಸುಪ್ರಸಿದ್ಧ ಬ್ಯಾರಿಸ್ಟರರಾದ ಖಲೀಲ್ ಉಲ್ ಜಮಾನರು ಆಕಿಂಗ್ ಅಧ್ಯಕ್ಷರಾಗಿರುವರು

— ಸಪ್ರು ಜಯಕರರು ವ್ಯಾಸರಾಯರೊಡನೆ ಮಂತ್ರಾಲೋಚನೆ ಮುಗಿಸಿ ಅಲ್ಲಿಂದ ಶಾಂತಿ ಸಂಧಾನದ ಕೊನೆಯ ಅಂಕ ತೊಡಗಿಸಿರುವರು ಪ್ರಥಮ ಪ್ರಶ್ನೆವು ನ್ಯಾಸಿ ಜೈಲಿನಲ್ಲಾಯಿತು ಇದರ ಚಿತ್ರವಿಚಿತ್ರಗಳು ಮುಗಿದು ಇದೇ ತಾ ೩ರಲ್ಲು ಸಂಧಾನ ಸೂತ್ರಧಾರಿಗಳೀರ್ವರೂ ಮುಂಬಾಯಿಗೆ ಬಂದು ತಲ್ಪಿ ಅಲ್ಲಿಂದ ಅದೇ ರಾತ್ರಿ ಎರವಾಡಕ್ಕೆ ಪ್ರಯಾಣ ಬೆಳೆಸಿರುವರು ತನ್ಮಧ್ಯ ದೊರೆತ ಬಿಡುವಿನಲ್ಲಿ ಪತ್ರಿಕಾ ಪ್ರತಿನಿಧಿಗಳು ಇವರೀರ್ವರಿಗೆ ಮಾಡಿದ ಪ್ರಶ್ನೆಗಳಿಂದ ಮುಂಬಾಯಿಯ ಟ್ರಾಮ್ಸ್‌ಪತ್ರಿಕೆಯಲ್ಲಿ ಪ್ರಕಟಿತವಾದ ಸಂಧಾನ ಪರಾಜಯ ವಿಷಯವನ್ನು ಇವರು ಖಂಡಿಸಿ ಸಂಧಾನವು ಸಫಲವಾಗುವುದರಲ್ಲಿ ಹೆಚ್ಚಿನ ಸಂಶಯವಿಲ್ಲವಾಗಿಯೇ ಸೂಚಿಸಿರುವರು

— ಗಾಂಧಿಯವರೊಡನೆ ಮಂತ್ರಾಲೋಚನಾರ್ಥವಾಗಿ ಪೂನೆಗೆ ಹೋಗಿದ್ದ ಡಾ ಸಪ್ರು ಮತ್ತು ಜಯಕರರವರನ್ನು ಮುಂಬಾಯಿ ಗವರ್ನರರ ರಾತ್ರಿಯೇ ಹಟಾತ್ತಾಗಿ ಪೂನೆಯಲ್ಲಿ ಬರಮಾಡಿಕೊಂಡು ಏನೋ ಸಿಮ್ಲಾದಿಂದ ಬಂದ ಗುಪ್ತವಾದ ತಂತೀ ವಾರ್ತೆಯ ಹಾಗೂ ಇನ್ನಿತರ ವಿಚಾರಗಳ ಕುರಿತು ಮಾತಾಡಿರುವರು

— ಮುಂಬಾಯಿಯಲ್ಲಿ ರಾಷ್ಟ್ರೀಯ ಸೇವಾದಳ ಮತ್ತು ಸ್ವಯಂಸೇವಕರ ದಳಗಳು ಮೆರವಣಿಗೆಯಾಗಿ ಹೋಗುವುದಾಗಲೀ ಅಜಾದ ಮೈದಾನಿನಲ್ಲಿನ ಧ್ವಜವಂದನೆ ಮತ್ತು ಕವಾತುಗಳನ್ನು ನಿರೋಧಿಸಿ ಸ್ಥಳೀಕ ಸರಕಾರದ ಕಟ್ಟಪ್ಪಣೆಯಾಗಲು ಕೊಂಗ್ರೆಸು ಕಕ್ಷಿಯರು ಈ ಶಾಸನ ಉಲ್ಲಂಘನೆಯನ್ನು ನಿಶ್ಚಯಿಸಿದರು ಕೊನೆಗೆ ಸರ್ ಪ್ರಭಾಕರ ಪಟ್ಟಣಿಯವರು ಏನೋ ಸರಕಾರೀ ಅಧಿಕಾರಿಗಳನ್ನು ಕಂಡು ಮಾತಾಡಿದುದರ ಪರಿಣಾಮವಾಗಿ ಅಪ್ಪಣೆಯ ಕಟ್ಟು ಶಿಥಿಲವಾಯಿತು ನಿರಾತಂಕವಾಗಿ ರಾಷ್ಟ್ರ ಧ್ವಜಾಭಿವಂದನೆಗಳು ಸಾಗಿದವು

ಪಂಡಿತ ಮೋತಿಲಾಲರು ಅನಾರೋಗ್ಯರಾಗಿರುವುದರಿಂದ ಅವರ ಬಿಡುಗಡೆಗಾಗಿ ಪ್ರಯತ್ನಗಳು ಸಾಗಿದ್ದವು ಪರಂತು ಪಂಡಿತಜಿಯವರೇ ತಮ್ಮ ಅಸಮ್ಮತಿ ವ್ಯಕ್ತಗೊಳಿಸಿರುವರು ಅಸಂಖ್ಯಾತರಾದ ಭಾರತ ಪುತ್ರಪುತ್ರಿಯರು ಸೆರೆಮನೆಯಲ್ಲಿರುವಾಗ ತನ್ನೊಬ್ಬನ ಬಿಡುಗಡೆ ಅಗತ್ಯವಿಲ್ಲವಾಗಿ ಮೋತಿಲಾಲರು ವ್ಯಾಸರಾಯರಿಗೆ ಪತ್ರ ಬರೆದಿರುವರು

ಪೇಶಾವರದಲ್ಲಿನ ಪ್ರಕೃತದ ವಿಷಯಾವಳಿಗಳು ಅತ್ಯಂತ ವಿಸ್ಮಯಕಾರಣವಾಗಿದೆ ಅಪ್ರಿದಿಗಳ ವಿಚಾರವಾಗಿ ಹೆಚ್ಚಿಗೇನೂ ತಿಳಿಯಬರುವುದಿಲ್ಲ ಕಳೆದ ವಾರ ಭಾನು ಜಿಲ್ಲೆಯ ಡೊಮಲ್ ಎಂಬಲ್ಲಿ ವಜೀರ ಪಂಗಡಕ್ಕೂ ಸರಕಾರ ಸೈನ್ಯಕ್ಕೂ ಚಿಕ್ಕದೊಂದು ಕೈಚಳಕ ನಡೆಯಿತು ವೈರಿಗಳಲ್ಲಿ ೪೨ ಮಂದಿಗಳು ಕೊಲ್ಲಲ್ಪಟ್ಟಿರುವರು ೫೦ ಮಂದಿ ಸೆರೆಯಾದರು ಸರಕಾರಿ ಪಕ್ಷದ ಕೆಪ್ಟನ್ ಫರ್ಗ್ಯೂಸನ್ ಮತ್ತು ೭ ಮಂದಿ ಸೈನಿಕರು ಮೃತರಾದರು ೧೦ ಮಂದಿಗೇನೋ ಚಿಲ್ಲರೆ ಜಖಂ ಆಗಿರುವುದು ಅಷ್ಟರಲ್ಲಿ ಭಾನುಜಿಲ್ಲೆಯ ಬೇರೊಂದು ಕಡೆಯಲ್ಲಿ ಏನೋ ಚಿಕ್ಕದೊಂದು ಗಲಾಟೆ ಏಳುತ್ತಿರುವುದಾಗಿ ಸೈನ್ಯವು ಅಲ್ಲಿಗೆ ಮುಂದರಿಸಿತು

— ಅಪ್ರಿದಿಗಳ ಪರಿಸ್ಥಿತಿಯಲ್ಲಿ ಏನೂ ಹೆಚ್ಚಿನ ವ್ಯತ್ಯಾಸ ಕಂಡುಬರುವುದಿಲ್ಲ ಕಾಲರ್ಟಿಯೆಂಬಲ್ಲಿ ಕೆಲವರೇನೋ ಒಂದು ಪಂಗಡವಾಗಿ ಅಯೋಚಿತರಾಗಿ ಹಾರಿಬಂದು ಬ್ರಿಟಿಷ ಸೈನಿಕರೊಬ್ಬನನ್ನು ಕೊಂದು ಹಾಕಿರುವರಂತೆ ಆ ಕ್ಷಣವೇ ವಾಯು ವಿಮಾನಗಳಿಂದ ಬೊಂಬುಗಳು ಬಿಸಾಡಲು ಅವರೇನೋ ಅಲ್ಲಲ್ಲಿಗೆ ಚದರಿಕೊಂಡರು ಈಗ ತಿರಿಗಿ ಅವರ ಸೈನ್ಯವೇನೋ ಸಂಖ್ಯೆಯಲ್ಲಿಯೂ ಹೆಚ್ಚಾಗಿ ಮುಂದರಿಯತೊಡಗಿದೆ

— ತಾ ೩ರಲ್ಲು ಪೇಶಾವರದಲ್ಲಿನ ಸೈನ್ಯ ಸರಂಜಾಮುಗಳ ಡಿಪೋವಿನ ನೋಲೆ ಬೌಡು ಇಟ್ಟು ಪಹರಿಯಾಗಿದ್ದ ಒಬ್ಬಿಬ್ಬರು ಸೈನಿಕರಿಗೆ ಏನೋ ಹೊಡೆದು ಹಾಕಿರುವರಾಗಿ ವದಂತಿ

— ಪೇಶಾವರದ ವಠಾರದಲ್ಲಿ ಹೆಚ್ಚಿನ ಗೊಂದಲವಿಲ್ಲದಿದ್ದರೂ ಈಶಾನ್ಯ ದಿಕ್ಕಿನಲ್ಲಿನ ಗಲಾಟೆಯು ಸ್ವಲ್ಪ ವಿಷಮ ಹಾಗೂ ಮಿಷ್ಟರಿ ಸಾಮುಕಾರಿಯಾಗ ಬಂದಿದೆ

ಬೆನಾರೀಸ ಹಿಂದೂ ವಿಶ್ವವಿದ್ಯಾಲಯಕ್ಕೆ ಸರಕಾರವು ಕೊಡುತ್ತಿದ್ದ ಗ್ರೇಂಟನ್ನು ಪ್ರಕೃತದ ರಾಜಕೀಯ ಚಳವಳದಲ್ಲಿ ವಿದ್ಯಾನಿಲಯದ ಅಧಿಕಾರಿಗಳೂ ವಿದ್ಯಾರ್ಥಿಗಳೂ ಸೇರಿರುವರಾದುದರಿಂದ ಈಗ ನಿಲ್ಲಿಸಿರುತ್ತದೆ

— ಕಳೆದ ಆಗೋಸ್ತು ತಾ ೩೧ರಲ್ಲು ಮುಂಬಾಯಿಯ ಇತರ ಎಲ್ಲಾ ಗಿರಣಿಗಳು ಮುಚ್ಚಲ್ಪಟ್ಟಿದ್ದರೂ ನ್ಯೂಸಿಟಿ ಗಿರಣಿಗಳು ಕೆಲಸ ನಿಲ್ಲಿಸಲಿಲ್ಲ ಇದರಿಂದ ಇತರ ಗಿರಣಿಯ ಆಳುಗಳು ಒಟ್ಟು ಸೇರಿ ನ್ಯೂಸಿಟಿ ಗಿರಣಿಯ ಬಳಿಗೆ ಬಂದು ಅಲ್ಲಿಯ ತಮ್ಮ ಸಹೋದರ ಕಾಮಗಾರರೊಡನೆ ಕೆಲಸ ನಿಲ್ಲಿಸಿ ಹರತಾಳಾಚರಣೆಯಲ್ಲಿ ಸೇರುವಂತೆ ಕೇಳಿಕೊಂಡರು ನಿರಾಕರಣೆ ದೊರಕಲು ಕಲ್ಲು ಪ್ರಹಾರಗಳಾದವು ಇಂಥಾ ದುರ್ಘಟನೆಯ ಸಂಭವ ಊಹಿಸಿ ಗಿರಣಿ ಮ್ಹಾಲಿಕರು ಮುಂದಾಗಿಯೇ ಪೋಲೀಸರನ್ನು ತಂದಿರಿಸಿದ್ದರು ಪರಂತು ೩ ಸಾವಿರಕ್ಕೆ ಮಿಕ್ಕಿದ ಗಿರಣಿಯಾಳುಗಳೆದುರು ಈ ಅಲ್ಪ ಸಂಖ್ಯಾತರಾದ ಪೋಲಿಸರು ಮೊದಲೇನೋ ಬೆದರಿಕೆ ಸಾಮರ್ಥ್ಯಗಳ ಪ್ರಯೋಗ ಪ್ರದರ್ಶಿಸಲುದ್ಯುಕ್ತರಾದುದರಿಂದ ಕೂಲಿಯಾಳುಗಳ ಕಲ್ಲುಗಳು ಸಬ್ ಇನ್ಸಪೆಕ್ಟರರ ಮೇಲೆಯೂ ಬಿದ್ದು ಹೋದವು ಗಾಯಗೊಂಡು ಇನ್ಸಪೆಕ್ಟರರು ಪಿಸ್ತೂಲು ಹಾರಿಸಿದರು ಪರಿಣಾಮವಾಗಿ ಒಬ್ಬಿಬ್ಬ ಗಿರಣಿಯಾಳುಗಳಿಗೆ ಜಖಂ ಖೂನಿಗಳಾಗಿವೆ ಬಳಿಕ ಪೋಲೀಸರ ಲಾಟಿಯ ಲೂಟಿಗೆ ಪ್ರಾರಂಭವಾಗಲು ಸಮೂಹವು ಚದರಿತು ಈ ಕುರಿತು ೩ ಮಂದಿಯನ್ನು ದಸ್ತಗಿರಿ ಮಾಡಿರುವರು

# "ಕೌನ್ಸಿಲ್ ಒಫ್ ಸ್ಟೇಟ" ಚುನಾವಣೆ!

**Dr. V. Rama Kamath**
Medical Practitioner.
Ex-Member, Corporation of Madras,
Member, Madras Medical Council

147, Purasawalkum High Road
Vepery, Madras
20th August 1930.

ಸ್ವದೇಶದ ಮಿತ್ರ ಭಾಂಧವರೇ !

"ಕೌನ್ಸಿಲ್ ಒಫ್ ಸ್ಟೇಟ್" ಸದಸ್ಯ ಸ್ಥಾನಕ್ಕೆ ಉಮೇದ್ವಾರರಾಗಿ ನಿಂತಿರುವ **ದಿವಾನ್ ಬಹದ್ದೂರ ಜಿ. ಗೋವಿಂದಸ್ವಾಮಿ ಚೆಟ್ಟಿಯವರಿಗೆ** ತಮ್ಮ ಹೆಚ್ಚಿನ ಪರಿಚಯವಿಲ್ಲದ ಕಾರಣ ಇದೇ ಬರುವ ಚುನಾವಣೆಯಲ್ಲಿ ತಮ್ಮ ಪ್ರಥಮ ವೋಟನ್ನು ಮಿ। ಚೆಟ್ಟಿಯವರಿಗೇನೇ ಕೊಡುವಂತೆ ಅವರ ಕಡೆಯಿಂದ ತಮ್ಮೊಡನೆ ವಿನಯ ಪೂರ್ವಕ ನಾನು ಕೇಳುತ್ತಿರುವೆನು. ಮಿ। ಚೆಟ್ಟಿಯರ ವಿಷಯವಾಗಿ ನನಗಿರುವ ಅನುಭವ ಹಾಗೂ ಅವರು ಇದು ತನಕ ಸಾಧಿಸಿರುವ ಅಪ್ರತಿಮವಾದ ಲೋಕೋತ್ತರದ ಕಾರ್ಯಕಲಾಪಗಳ ಪ್ರಮಾಣಗಳಿಂದ ಮುಂದಕ್ಕೂ ಅವರು ಕೇವಲ ಸಾರ್ವಜನಿಕ ಹಿತಾರ್ಥವಾದಿಗಳಾಗಿದ್ದು ನಿರಂತರವೂ ತನ್ನ ಪ್ರಾತಿನಿಧ್ಯ ಕ್ಷೇತ್ರದ ಏಳಿಗೆ ಸೌಭಾಗ್ಯಗಳ ಸೌಕರ್ಯಗಳಿಗಾಗಿ ಪ್ರಯತ್ನ ಪೂರ್ವಕ ಹೆಣಗಾಡುತ್ತಿದ್ದು ಉಭಯತರೂ ಕೃತಾರ್ಥರಾಗದೆ ಇರಲಾರರೆಂದೇ ನಾನು ಹೇಳಲಿಕ್ಕೆ ಇರುವೆನು. ವಿವಿಧ ಕಾರ್ಯಾಸಕ್ತಿಗಳಿಗಾಗಿ ಹಲವರು ಚುನಾವಣೆ ಹೊಂದುವರು. ಮಿ। ಚೆಟ್ಟಿಯವರು ಕೇವಲ ಸಾರ್ವಜನಿಕ ಹಿತಾರ್ಥ ಸಾಧನೆಯ ಬಯಕೆ, ಉತ್ಕಟೇಚ್ಛೆಗಳ ದೃಷ್ಟಿ ವಿಚಾರವಾಗಿಯೇ ಚುನಾವಣೆಗೆ ನಿಂತಿರುವರು. ಕೇವಲ ಆತ್ಮಗೌರವ ಸ್ವಪ್ರಯೋಜನ ಹಾಗೂ ತನ್ನ ಮುಂದಿನ ಸುಖ ಸಾಮ್ರಾಜ್ಯ ಮತ್ತು ಮೇಲ್ಮೆಯನ್ನು ಒದಗಿಸಿಕೊಳ್ಳುವ ವಿಚಾರವೆಂದೂ ಅವರಲ್ಲಿ ಇರುವುದಿಲ್ಲ; ಪ್ರತಿಯಾಗಿ ಜನತೆಯ ಸೇವಾಕಾರ್ಯಗಳೇ ತನ್ನ ಮುಖ್ಯ ಕರ್ತವ್ಯಗಳೆಂದು ನಂಬಿ ಪಾಲಿಸಲಿರುವರು. ಅಂದ ಬಳಿಕ ಅವರ ಚುನಾವಣೆಯಿಂದ ಅವರ ಪ್ರತಿನಿಧಿ ಕ್ಷೇತ್ರದ ಜನತೆಗೂ ಹೆಚ್ಚಿನ ಅನುಕೂಲತೆಗಳು ಲಭಿಸಲಿರುವುದರಿಂದ ಅವರ ಚುನಾವಣಾ ಕಾರ್ಯದಲ್ಲಿ ತುಂಬಾ ಪ್ರೋತ್ಸಾಹವೂ ಸಹಾನುಭೂತಿಯೂ ತೋರಿಸುವುದು ಅಗತ್ಯವಾಗಿದೆ.

ತಮ್ಮೊಡನೆ ವಿನಯಾತಿ ಕ್ರಮ ಮಾಡಿದ ಕುರಿತು ಕ್ಷಮಾಪಣೆಯನ್ನುದ್ದೇಶಿಸುವ ತಮ್ಮ ಪ್ರೀತಿ ಪಾತ್ರ

ವಿ. ರಾಮ ಕಾಮತ್

---

## ದಕ್ಷಿಣ ಕನ್ನಡ

**ಮಂಗಳೂರು** — [illegible] ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ [illegible] ಮರಣಗಳೂ ಆಗಿವೆ.

ಮಾನ್ಯ ಮದ್ರಾಸ ಗವರ್ನರರವರ ಸವಾರಿಯು [illegible] ಅಕ್ಟೋಬರ ತಿಂಗಳ [illegible] ನಮ್ಮ ಜಿಲ್ಲೆಯನ್ನು ಸಂದರ್ಶಿಸಲಿಕ್ಕಿದೆಯಂತೆ. ಆ ಸಂದರ್ಭದಲ್ಲಿ ಜಿಲ್ಲಾ [illegible] ಸ್ವಾಗತ ನಿರೂಪಗಳ ಪ್ರತಿಯೊಂದನ್ನು ಜಿಲ್ಲಾ ಕಲೆಕ್ಟರ ದೊರೆಯವರ ಸನ್ನಿಧಾನಕ್ಕೆ ಇದೇ ಸಪ್ಟೆಂಬರ ತಿಂಗಳ ತಾ ೧೦ರೊಳಗೆ [illegible] ಇರುವುದಾಗಿಯೂ, ಜಿಲ್ಲೆಯ ಬೇಸರಕಾರಿ ಸಂಸ್ಥೆ ಹಾಗೂ [illegible] ಜನರು ಗವರ್ನರರ ಮುಂದೆ ಜಾಹೀರು ಮಾಡಿಕೊಳ್ಳಲಿ [illegible] ಗಳಲ್ಲಿ ಅಂಥಾ ಮನವಿ ಪ್ರಾರ್ಥನೆಗಳ ಹಾಗೂ ಆ [illegible] ತರಲಿರುವ ವಿಷಯಾವಳಿಗಳ ತಪಶೀಲು [illegible] ಆದೇ ತಾ [illegible] ರೊಳಗೆ ಜಿಲ್ಲಾ ಕಲೆಕ್ಟರರವರಿಗೆ ಪ್ರಕಟಿಸಲ್ಪಟ್ಟಿರುವುದಾಗಿಯೂ [illegible].

ಒಂದೆರಡು ಸೆರೆಮನೆ [illegible] ಮುಸ್ಲಿಂ ಸಭೆಯೊಂದು [illegible] ವಿಷಯ ವಾರ್ತೆ [illegible].

ತಾ ೨-೯-[illegible] ರಂದು [illegible] ಗಳಿಂದ ತುಂಬಿದ [illegible] ಗಡಂಗುಗಳ [illegible].

ನಮ್ಮ ಜಿಲ್ಲೆಗೆ ಮಾನ್ಯ ಗವರ್ನರರ ಬಂದ ಸಂದರ್ಭದಲ್ಲಿ ದಿಲ್ಲಿಯ ಸಮಾಜದ ಪರಿಸ್ಥಿತಿ [illegible] ಸೌಕರ್ಯ [illegible] ಗಳನ್ನು ಕೇಳಿಕೊಳ್ಳುವ [illegible] ಇದೇ ಬರುವ ತಾರೀಕು [illegible] ಆದಿತ್ಯವಾರ ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ಸಮಾಜದ ಒಂದು [illegible] ಸಭೆ ಕೂಡಲಿರುವುದಾಗಿ [illegible] ಬರುತ್ತದೆ.

ಬೊಂಬಾಯಿ ಸ್ಟೀಮ್ ನೆವಿಗೇಶನ್ ಕಂಪೆನಿಯವರ [illegible] ಮುಂಬಾಯಿಯಿಂದ ಬಿಟ್ಟ [illegible] ಸ್ಟೀಮರು ಇಲ್ಲಿಗೆ ಬಂದು [illegible] ಇಲ್ಲಿಂದ ತಾ. ೧೧ನೇ ಗುರುವಾರದಿನ ಬೆಳಗ್ಗೆ ೧೦ ಘಂಟೆಗೆ ಹೊರಟು ನಡುವಿನ ಬಂದರುಗಳಲ್ಲಿ ತಂಗಿ ಮಾರಮಾಗೋವೆಯಾಗಿ ಮುಂಬಾಯಿಗೆ ಹೋಗಲಿರುವುದು.

ನಮ್ಮ ಜಿಲ್ಲೆಗೆ ಮೆಡಿಕಲ್ ಆಫೀಸರರಾಗಿ ಮೇಜರ ಎಸ್. ಎಂ. ಮೋಹನರಾಯರು ವರ್ಗಾಯಿಸಲ್ಪಟ್ಟಿರುವರು.

ನಮ್ಮ ಜಿಲ್ಲೆಯವರಾದ ಡಾ। ಪಿ. [illegible] ಪೈಗಳಿಗೆ [illegible] ಜಿಲ್ಲೆಯ ಮೆಡಿಕಲ್ ಆಫೀಸರರಾಗಿ ನೇಮಕವಾಗಿದೆ.

### ಸಂತೋಷಾಭಿಮಾನದ ವಾರ್ತೆ

ನಮ್ಮ ಜಿಲ್ಲೆಯ ಸುಪ್ರಸಿದ್ಧ ಕಾಟ [illegible] ರಾದ ಜಿಲ್ಲಾ ಜಡ್ಜರಾಗಿ ಶ್ರೀ ಕೆ. ಪಿ. ಲಕ್ಷ್ಮಣರಾಯರಿಗೆ ಮದ್ರಾಸ ಹೈಕೋರ್ಟಿನ ಜಡ್ಜರಾಗಿ ನೇಮಕವಾದ ವಿಷಯವು ಅತ್ಯಂತ ಆನಂದ ಹಾಗೂ ಅಭಿಮಾನಕರವಾದ ವಾರ್ತೆಯಾಗಿದೆ. ನಮ್ಮ ಜಿಲ್ಲೆಯವರಾಗಿ ಹೈಕೋರ್ಟಿನ ಗದ್ದಿಗೆಯಲ್ಲಿ ಇವರೇ ಪ್ರಥಮ ವಿರಾಜಿಸಿದವರು.

### ಗುಡುಗಿನ ಹೊಡೆತ

ಮೊನ್ನೆ ಬುಧವಾರ ರಾತ್ರಿ ಇಲ್ಲಿ ಕಠಿಣ ಗುಡುಗು [illegible] ತ್ಸಹವಾಗಿ [illegible] ಇಸ್ಪಿತರ [illegible] ಗುಡುಗಿನ ಹೊಡೆತವಾದ [illegible] ವಿಶೇಷ [illegible] ಧ್ವಜಸ್ತಂಭವು [illegible] ಗೋಪುರ [illegible] ಹೋಗಿವೆ.

### ಗಣಪತಿಯ ಪ್ರಸಾದ

ಇಲ್ಲಿ ವರ್ಷಂಪ್ರತಿ [illegible] ಮೊನ್ನೆ ಆದಿತ್ಯವಾರ ದಿನ ಇಲ್ಲಿಯ [illegible] ದೇವಳದ ಕೆರೆಯಲ್ಲಿ ಗಣಪತಿ ವಿಗ್ರಹ [illegible] [illegible]

### ವಿಷ ಆರಾಮ

[illegible]

### ಪೋಲೀಸ ಸಬ್ ಇನ್ಸ್‌ಪೆಕ್ಟರ್ ಕೆಲಸಗಳಿಗೆ

[illegible]

ಉಡುಪಿ — [illegible]

ಜಿಲ್ಲಾ ವಿದ್ಯಾಧಿಕಾರಿಗಳು ಕೆಲ ದಿನಗಳಿಂದ ಇತ್ತ ಪಾಳ್ಯಾಂ (Camp) ಮಾಡಿದ್ದು ಉಡುಪಿ ಬೋರ್ಡು ಹೈಸ್ಕೂಲ್, ಬ್ರಹ್ಮಾವರ ಕೊಸ್ಮೋಪೋಲಿಟನ್ ಸೆಕೆಂಡರಿ ಸ್ಕೂಲ್, ಕಲ್ಯಾಣಪುರ ಮಿಲಾಗ್ರಿಸ್ ಸೆಕೆಂಡರಿ ಸ್ಕೂಲ್, ಮತ್ತು ಉಡುಪಿ ಕ್ರಿಶ್ಚನ್ ಹೈಸ್ಕೂಲುಗಳನ್ನು ಇನ್ಸ್‌ಪೆಕ್ಷನ್ ಮುಗಿಸಿ ಮಂಗಳೂರಿಗೆ ಕಳೆದ ವಾರದ ಅಂತ್ಯದಲ್ಲಿ ಹಿಂತಿರುಗಿರುವರು. ಅಗ್ಗೆ ಉಡುಪಿ ತಾಲೂಕು ಬೋರ್ಡು ಟ್ರೈನಿಂಗ್ ಮತ್ತು ಹಲವು ಎಲಿಮೆಂಟರಿ ಶಾಲೆಗಳನ್ನೂ ಸಂದರ್ಶಿಸಿರುವರು. ಇಷ್ಟು ದೊಡ್ಡ ಕಾರ್ಯಕ್ರಮದಲ್ಲಿ ಎಲ್ಲೂ ಒಂದೆಡೆ ಇವರಿಗೆ ಮಾನಕ್ಕೆ ಸ್ವಲ್ಪ ಕುಂದಾಯಿತೆಂದು ಕೇಳಿ ಸ್ವಲ್ಪ ಹದಮೀರಿದ ಮಾತುಗಳೂ ಇವರ ಬಾಯಿಯಿಂದ ಹೊರಬಿದ್ದಿವೆಯಂತೆ. ವಿದ್ಯಾ ಇಲಾಖೆಯ ಜಿಲ್ಲಾ ಮುಖ್ಯಾಧಿಕಾರಿಯಾಗಿ ತನ್ನ ಕೈಕೆಳಗಿನ ಎಲ್ಲ ಮಂಡಳಿಗೆ ಆದರ್ಶಪ್ರಾಯರಾಗಿದ್ದು, ಇನ್ನೂ ಹೊಸ ಸುಧಾರಣೆಯನ್ನು ಮಾಡತಕ್ಕವರಿದ್ದು, ಹೀಗೆ ಹಾನಿಕರವಾದ ಸಂಗತಿಯ [illegible] ಸಂಭವಿಸದಂತೆ ಜೋಕೆಯಾಗಿರುವುದೇ ಸರಿ.

**ಕಾರ್ಕಳ** — ೧೪ನೇ ಕಲಿಯುಗ ಸಂಬಂಧವಾಗಿ ಜನರಿಗೆ ಬಾರಿ ಹೊಡೆತಗಳು ಆಗಿ ಶಿವಲೀಲೆಯ ಒಂದನೆ ಪ್ರಕರಣವು ಮುಗಿಯಿತು. ಎರಡನೆ ಪ್ರಕರಣದಲ್ಲಿ ಈ ಸಂಬಂಧವಾದ ಜನರ ಗೋಳು ಎಷ್ಟು ದಿನ ಕಡೆವರೆಗೂ [illegible] ಅದರಿಂದ ಕಿರೀ ಶಿವನ [Shiva the Younger] ಟ್ರಾನ್ಸ್‌ಫರ್ ಆಗುವದಕ್ಕಾಗಿ ಹಿರೀ ಶಿವನು ಮಾಡಿ [illegible] ಚಪ್ಪ ಗಾಣ [illegible] ತಾ ೩ನೇ ದಿನ ನಡದು ಮುಂದರಿಸಿಟ್ಟ [illegible] ೩೧ನೇ [illegible] ದಿನ ನಡದ ಗಣೇಶೋತ್ಸವವೂ ಹೊಯ್ದಾಟ [illegible] ಸಾಂಗವಾಗಿ ನಡೆಯಿತು. ಕಾರ್ಕಳದಲ್ಲಿ ಹೊಸತಾಗಿ ರಚಿಸಲ್ಪಡುವ ಶಿವಲೀಲೆಯ ಉಳಿದ ಪ್ರಕರಣಗಳ ಸಾರವತ್ತಾದ ಭಾಗಗಳನ್ನು ಯಥಾಕ್ರಮದಲ್ಲಿ ತಿಳಿಸುತ್ತಿರುವೆವು. ಅಷ್ಟರಲ್ಲಿ ಲೋಕದಲ್ಲಿ [illegible].

[illegible] ಸಂಬಂಧಪಟ್ಟವರೆಂದು ಪೋಲೀಸರು [illegible] ಒಂದೆರಡು [illegible] ನೆರೆಯಲ್ಲಿ ಜಪ್ತಿ ಮಾಡಿ ಬರೀ ಕೈಯಲ್ಲಿ ಹಿಂತಿರುಗಿದರು [illegible]!

ಗಣೇಶೋತ್ಸವದ [illegible] ನಡೆಯುತ [illegible]

[illegible]

**ಬೆಳ್ತಂಗಡಿ** — ಇಲ್ಲಿ [illegible] ಕಾಂಗ್ರೆಸ್ [illegible] ಕಮಿಟಿಯ [illegible] ಶ್ರೀಕೃಷ್ಣ ಜನ್ಮಾಷ್ಟಮಿ [illegible] ಸಭೆಯು [illegible] ಸ್ವದೇಶಿ ವ್ರತವನ್ನು ಕೈಕೊಳ್ಳಬೇಕಾದ ಅವಶ್ಯಕತೆಯ [illegible]

**ಗುರುವಾಯನಕೆರೆ** :- ತಾ. ೩೧ [illegible] ದಿವಸ ಉತ್ತರ [illegible] ಕಾಂಗ್ರೆಸ್ [illegible]

**ಬಂಟ್ವಾಳ** — [illegible]

ಇಲ್ಲಿಯ ಕೇಂದ್ರ [illegible] ತಿಂಗಳ [illegible].

**ಅಮಟಾಡಿ ಪದವು** — ಇಲ್ಲಿಯ ಕೇಂದ್ರ ಅಂಗಡಿಯನ್ನು ಯಾರೋ ಮುಸಲ್ಮಾನರು ಬೆಂಕಿಕೊಟ್ಟು ಸುಟ್ಟು ಹಾಕಿರುವರು. ಈ ಮೊದಲ ಕಳ್ಳರು ಗಡಂಗನ್ನು ಸುಟ್ಟು ಹಾಕಿರುವರು.

ಶಾಲಿವಾಹನಶಕ ೧೮೫೨ನೆಯ ಪ್ರಮೋದೂತ ಸಂ|| ಭಾದ್ರಪದ ಶು|| ೧೪ ಶನಿವಾರದಿಂದ ಪ್ರಮೋ. ಸಂ||ರದ ಭಾದ್ರಪದ ಬ|| ೪ ಶುಕ್ರವಾರದ ವರೆಗಿನ ಪಂಚಾಂಗ.

(೧೯೩೦ನೆಯ ಸಿಂಹ—ಸೋಣ)

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | ಗಣಿತ | ಸೂರ್ಯ ಉ | ಸೂರ್ಯ ಅಸ್ತ |
|---|---|---|---|---|---|---|---|---|
| 6 | ಶನಿ | ೧೪ | ೬೦, ೦ | ಧನಿಷ್ಠಾ | ೩೩ ೪೪ | ೨೧ | 6 21 | 6 37 |
| 7 | ರವಿ | ೧೫ | ೩,೩೨ | ಶತಭಿಷಾ | ೩೯ ೪೩ | ೨೨ | 6 21 | 6 37 |
| 8 | ಸೋಮ | ○ | ೮,೧೯ | ಪೂ ಭಾ | ೬೦ ೦ | ೨೩ | 6 21 | 6 36 |
| 9 | ಕುಜ | ೧ | ೧೨,೧೬ | ಪೂ ಭಾ | ೫ ೩೦ | ೨೪ | 6 21 | 6 36 |
| 10 | ಬುಧ | ೨ | ೧೫,೩೦ | ಉ ಭಾ | ೧೦ ೨೮ | ೨೫ | 6 21 | 6 35 |
| 11 | ಗುರು | ೩ | ೧೭,೩೦ | ರೇವತಿ | ೧೪ | ೨೬ | 6 21 | 6 34 |
| 12 | ಶುಕ್ರ | ೪ | ೧೮ ೨೮ | ಅಶ್ವಿನಿ | ೧೬,೩೦ | ೨೭ | 6 2. | 6 34 |

ಮಂಗಳೂರಿನ ವಾಯುಸ್ಥಿತಿ

| ತಾರೀಖು Date | Temperature ಉಷ್ಣ (ಕಾವು) Maximum ಅತ್ಯಧಿಕ | | Minimum ಅತ್ಯಲ್ಪ | | Rainfall ಮಳೆ ದಿನದ ಮಳೆ | ಒಟ್ಟು ಮಳೆ |
|---|---|---|---|---|---|---|
| 22 | 85— | 8 | 74— | 6 | 0—03 | — |
| 23 | 86— | 9 | 74— | 7 | 0—38 | — |
| 24 | 83— | 2 | 73— | 2 | 0—33 | — |
| 25 | 85— | 5 | 74— | 3 | 0—07 | — |
| 26 | 85— | | 74— | 0 | 0—01 | — |
| 27 | 86— | 3 | 75 | 4 | 0—01 | — |
| 28 | 86— | 6 | 74— | 4 | 0—02 | 103 01 |

ಮಂಗಳೂರಿನ ಪೇಟೆ ಧಾರಣೆ.

| ಜೀನಸು | ಇಂದ ರೂ | ಆ | ವರೆಗೆ ರೂ | ಆ |
|---|---|---|---|---|
| ವಸ್ಕತಿ | – | | 7 | 1. |
| ಗುಡ್ಡು | 6– | | – | 2 |
| ರಾತಿ | 5– | | 6 | 1. |
| ಊರ ಅವ್ವಲ್ ಬೆಳ್ತಿಗೆ | – | 8 | 8 | 1 |
| ರಂಗೂನ ಬೆಳ್ತಿಗೆ ಗೋಣಿ ಗಳ್ಳೆ | 2– | 8 | 12 | 12 |
| ಸುಗ್ಗಿ | 6– | 4 | 8– | 12 |
| ಎಲ್ಲೂರು ಬೆಳ್ತಿಗೆ ಮುಡಿ ಗಳ್ಳೆ | 8– | 12 | – | 0 |
| ಗೋದಿ ಗೋಣಿ ಗಳ್ಳೆ | 10– | 8 | 13 | 0 |
| ಹುರುಳಿ ಗೋಣಿ ಗಳ್ಳೆ | – | 6 | 8 | 8 |
| ಕಡಲೆ ಗೋಣಿ ಗಳ್ಳೆ | 12– | 8 | 15 | 8 |
| ತೊಗರಿ ಗೋಣಿ ಗಳ್ಳೆ | 12– | ( | 15– | 0 |
| ತೊಗರಿಬೇಳೆ ಗೋಣಿ ಗಳ್ಳೆ | 15– | 8 | 25 | 0 |
| ಉದ್ದು ಗೋಣಿ ಗಳ್ಳೆ | 14– | ) | 15 | 0 |
| ಹೆಸರು ಗೋಣಿ ಗಳ್ಳೆ | 14– | 8 | — | |
| ಊರು ಬೆಲ್ಲ ಖಂಡಿ ಗಳ್ಳೆ | 5 – | 8 | 62– | 8 |
| ಉಪ್ಪು ಗೋಣಿ ಗಳ್ಳೆ | 4– | 10 | 5– | 0 |
| ಬೂರ ಖಂಡಿ ಗಳ್ಳೆ | 70 | 0 | 5 | |
| ಕೊಬ್ರಿ ಹಿಂಡಿ ಖಂಡಿ ಗಳ್ಳೆ | 24– | 8 | 25– | , |
| ಎಳ್ಳೆಂಡಿ ಖಂಡಿ ಗಳ್ಳೆ | 30– | | 3.– | 8 |
| ಕೊಬ್ರಿ ಎಣ್ಣೆ ಮುಡಿ ಗಳ್ಳೆ | 5– | 4 | 6– | 0 |
| ಎಳ್ಳೆಣ್ಣೆ ಮುಡಿ ಗಳ್ಳೆ | – | 0 | – | 5 |
| ಬಮಿಡಸಲ್ಲ ಪೆಟ್ಟಿಗೆ ಗಳ್ಳೆ | 4 | 7– | 8 | 12 |
| ಮೋರಿಸ ಸಕ್ಕರೆ ಮುಡಿ ಗಳ್ಳೆ | 3– | 6 | 3– | 10 |
| ಹೊಸ ಮೆಣಸು | 6– | 0 | 8– | 4 |
| ಸಾಸಿವೆ ಮುಡಿ ಗಳ್ಳೆ | 8– | 0 | 8– | 12 |
| ಕೊತ್ತಂಬರಿ ಮುಡಿ ಗಳ್ಳೆ | 2– | 8 | 3 – | 12 |
| ನೇಟಿವ್ ಕಾಫಿ ಖಂಡಿ ಗಳ್ಳೆ | 190– | 0 | 200– | 0 |
| ಕಾಳುಮೆಣಸು ಖಂಡಿ ಗಳ್ಳೆ | .4) | 0 | – | |
| ಯೇಲಕ್ಕಿ ಮುಡಿ ಗಳ್ಳೆ | 32– | 0 | 34– | |
| ಗೇರುಬೀಜ ಮುಡಿ ಗಳ್ಳೆ | 4– | 4 | – | 6 |
| ಕಬ್ಬಿಣ ಖಂಡಿ ಗಳ್ಳೆ | 42– | 8 | 4 | 0 |
| ತಾಮ್ರ ತಗಡು ಮುಡಿ ಗಳ್ಳೆ | 19 | 0 | 19 - | 4 |
| ತಾಂಮ್ರ ಪಾತ್ರೆಗಳು ಮುಡಿ ಗಳ್ಳೆ | 22– | 0 | 23 | 0 |
| ಚೀನಿಬೆಳ್ಳಿ ಸೇರು ಗಳ್ಳೆ | 12– | 0 | 12– | 8 |
| ಹಿತ್ತಾಳೆ ತಗಡು ಮುಡಿ ಗಳ್ಳೆ | 15– | 0 | 15– | 4 |
| ವನು ಗಳ್ಳೆ | 13–10 | 6 | – | |
| ಬೀಡಿಸೊಪ್ಪು ಖಂಡಿ ಗಳ್ಳೆ | 37– | 8 | 43– | 12 |
| ಪ್ಲೀರಿ/ಕಾಫಿ ಖಂಡಿ ಗಳ್ಳೆ | 250– | | 260– | |
| ಹೊಸ ಅಡಿಕೆ | 85– | | 120– | |
| ಹಳೆ ಅಡಿಕೆ | 100– | | 120– | |


# Chikmagalur Public Conveyance Motor Service.

## CHIKMAGALUR.

# ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ ಕನ್ವೆಯನ್ಸ್. Tel· Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲಕ್ಕಾಗಿ ಕಡೂರು (M· S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ ಬಂಟವಾಳ ಮಾರ್ಗವಾಗಿ ಸಾಯಂಕಾಲ 4 30 ಘಂಟೆ ಒಳಗ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗರೆಗೆ 9 ಘಂಟೆಗೆ, ಕೊಟ್ಟಿಗೆಹರಕ್ಕೆ 10 30ಕ್ಕೆ ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿವಿ 1 30ಕ್ಕೂ ಬೆಳ್ತಂಗಡಿಗೆ 1 45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟ್ಯಾಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ ಕಾಸರಗೋಡು, ಮಲಬಾರು, ಕನ್ನನ್ನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ 10 30ಕ್ಕೆ ಬೆಳ್ತಂಗಡಿಗೂ 11 ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೂ, 12 ಗಂಟೆಗ ಚಾರ್ಮಾಡಿಗೂ 12 30ಕ್ಕೆ ಮೈಸೂರು ಗಡಿಗೂ, ಸೇರಿ ಅಲ್ಲಿಂದ ಒಡನೆ ಹೊರಟು 2 30ಕ್ಕೆ ಕೊಟ್ಟಿಗೆಹರಕ್ಕೂ ಸುಮಾರು 4 ಗಂಟೆಗೆ ಮೂಡಗೆರೆಗೂ 5 ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶಪಡಲ್ಪಟ್ಟಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7 30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಡರಾಪೂರ ಗೋವಾ ಲೋಂಡ, ಪೂನಾ, ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರುಗಳಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ ಎನ್ ಹನುಮಂತಪ್ಪ, ಫ್ಯಾರಡೂನ್ ಸೊರಾಬ್, ಕೆ ಸೂರಪ್ಪ ಸೆಟ್ಟಿ

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ ಪಿ ಸಿ· ಕಂಪೆನಿಯವರ
'ಫ್ರೆಂಡ್ಸ್ ಸೊಸೈಟಿ'ಯ ಸದಸ್ಯರಾದ ಮಿ. ಅಲೆಕ್ಸಾಂಡರ್ ಎಂಬವರು ಮಹಾತ್ಮಾಜಿಯವರ ಸವಿನಯ ಕಾಯಿದೆ ಭಂಗದ ಪರಿಣಾಮವಾಗಿ ಹಿಂದೂಸ್ಥಾನಕ್ಕೆ ಒಂದೊದಗಿದ ಸ್ಥಿತಿಯನ್ನು ಪರ್ಯಾಲೋಚಿಸಿ ಬಹಳ ನೊಂದಿರುವರು ಹಿಂದೀಯರ ಮೇಲೆ ಅವರ ಕನಿಕರವು ತುಂಬಾ ಸಪ್ರು ಜಯಕರರ ಸಂಧಾನ ಪ್ರಸಂಗವು ಒಮ್ಮೆಗೆ ನಿಂತುಹೋದರೂ ಅಲೆಕ್ಸಾಂಡರರು ಅದನ್ನಿನ್ನೊಮ್ಮೆ ಊರ್ಜಿತಪಡಿಸಬೇಕೆಂಬ ಕುತೂಹಲವುಳ್ಳವರಾಗಿರುವರು ಆದುದರಿಂದಲೇ ಅಲೆಕ್ಸಾಂಡರರು ಕಾಂಗ್ರೆಸ್ ಪರವಾಗಿ ವ್ಯಾಸರಾಯರೊಡನೆ ಮಾತಾಡಬೇಕೆಂದಿರುವರು. ಅವರು ಗಾಂಧಿಜೀಯವರನ್ನು ಯರವಡಾ ಮಂಗಳವಾರ ಭೇಟಿಮಾಡಿರುವರು, ಹೆಚ್ಚಿನ ಸಮಾಚಾರಗಳು ಇನ್ನೂ ತಿಳಿಯಬಂದಿಲ್ಲ

**ಮುಂಬಾಯಿಯಲ್ಲಿ**

ಯುನಿವರ್ಸಿಟಿಯ ಸೀಟಿಗೆ ನಡೆಯುವ ಚುನಾವಣೆಯ ಗ್ರಾಜುವೇಟರ ಪೈಕಿ ಸುಮಾರು ೫೦ ಮಂದಿ ವಿದ್ಯಾರ್ಥಿಗಳು ಸ್ಥಳೀಕ ಸಭೆಯಲ್ಲೇ ತಮ್ಮ ವೋಟುಗಳನ್ನು ಒಪ್ಪಿಸಿರುವರು ಈ ಸಂದರ್ಭದಲ್ಲಿ ಅನೇಕ ನಾರೀ ಸತ್ಯಾಗ್ರಹಿಗಳು ಎಡೆಬಿಡದೆ ಪಹರೆಮಾಡಿದರು

ಮಿಸಿಸ್ ಕಸ್ತೂರಬಾ ತಾ. ೧೦ ೯ ೩೦ ರಲ್ಲಿ ಮುಂಬಾಯಿಯ ಕಾರ್ಯಾಲಯವನ್ನು ಸಂದರ್ಶಿಸಿದರು ಮಿಸಿಸ್ ರಮಿಬೆನ್ ಕಾಮದಾರ್ ಇವರ ಕೂಡೆ ಬಹಳ ಹೊತ್ತು ಸಂಭಾಷಣೆಯನ್ನು ಬೆಳಸಿರುವರು, ಮಾತ್ರವಲ್ಲದೆ ತನ್ನ ಮನಃಪೂರ್ವಕವಾದ ಸತ್ಯಾಗ್ರಹಿಗಳ ಮೇಲಣ ದಯೆಯನ್ನು ವ್ಯಕ್ತಗೊಳಿಸಿ ಕಾಂಗ್ರೆಸ್ ಆಸ್ಪತ್ರೆಯನ್ನೂ ಸಂದರ್ಶಿಸಿ, ಚಿಕಿತ್ಸೆ ಹೊಂದಲ್ಪಡುವ ಹಲವು ಸತ್ಯಾಗ್ರಹಿಗಳಿಗೆ ಬಹಳವಾಗಿ ಹುರುಪನ್ನು ಕೊಟ್ಟಿರುವರು. ಠಾಣಾ ಜೆಲ್ಲಿಯ ರಾಜಕೀಯ ಕೈದಿಯಾಗಿದ್ದ ಮಿ| ಜಮನ್ನಾದಾಸ್ ಮೆಹತರನ್ನು ಸರಕಾರವು ಬೇಗನೆ ಬಿಡುಗಡೆ ಹೊಂದಿಸಲಿರುವುದು. ಅವರಿಗೆ ವಿಧಿಸಲ್ಪಟ್ಟ ಜುಲ್ಮಾನೆಯ ಹಣವನ್ನು ಯಾರೋ ಸರಕಾರಕ್ಕೆ ತೆತ್ತಿರುವರಂತೆ!

**ಗದಗ್ ಸಿಟಿ.**

ಇಲ್ಲಿನ ನ್ಯಾಯವಿಧಾಯಕ ಸಭೆಯ ಚುನಾವಣೆಯ ವೇಳೆಯಲ್ಲಿ ಸತ್ಯಾಗ್ರಹಿಗಳು ಮಾಡಿದ ಪಹರೆಯ ಕಾರ್ಯಕಲಾಪಗಳು ಕಾಂಗ್ರೆಸ್ ಪಕ್ಷೀಯರಿಗೆ ತುಂಬ ಶ್ರೇಯಸ್ಸನ್ನುಂಟುಮಾಡಿರುವವು ಮಹಮ್ಮದೀಯರಲ್ಲಿ ಒಬ್ಬನಾದರೂ ಕೂಡ ತನ್ನ ವೋಟನ್ನು ಒರಾಯಿಸಲಿಲ್ಲ ಯುನಿವರ್ಸಿಟಿಯ ಸೀಟಿನ ಚುನಾವಣೆಯಲ್ಲಿ ೪೨ ವೋಟುಗಳ ಪೈಕಿ ಯಾರೋ ಒಬ್ಬ ಆಫೀಸರನು ಮಾತ್ರವೇ ತನ್ನ ವೋಟನ್ನು ಕೊಟ್ಟಿರುವನಂತೆ! ಡಾ| ಹುಲಿಗೋಲ್ ಎಂಬವರ ಮೇಲೆ ಸರಕಾರವು ೧೪೪ನೇ ಪ್ರಕರಣದ ಮೇರೆಗೆ ಆರ್ಡರುಗಳನ್ನು ಜ್ಯಾರಿಮಾಡಿರುವದು ಅದೇ ದಿನ ಸದರಿಯವರು ಕಾಂಗ್ರೆಸ್ ಪಕ್ಷೀಯರಾಗಿದ್ದುದರಿಂದ ತನ್ನ ಮೇಲಣ ಆರ್ಡರನ್ನು ಮುರಿದರು ಪೋಲೀಸರು ಮೌನವನ್ನು ತಾಳಿರುವರಂತೆ!

**ಕರಾಚಿ**

ಇಲ್ಲಿನ ಕೌನ್ಸಿಲ್ ಚುನಾವಣೆಯ ಸಮಯ ಸತ್ಯಾಗ್ರಹಿಗಳು ಸದರಿ ಸಂಸ್ಥೆಯನ್ನು ಬಹಳವಾಗಿ ಪಿಕೆಟ್‌ಮಾಡಿರುವರು ದಾದು ಎಂಬ ಒಂದೇ ಗ್ರಾಮದಲ್ಲಿ ೫೦೦೦ ಜನರ ಪೈಕಿ ೨೨ ಮಂದಿಯನ್ನು ಮಾತ್ರವೇ ದಸ್ತಗಿರಿಮಾಡಿರುವರು ಸರಕಾರದಿಂದ ಜ್ಯಾರಿಮಾಡಲ್ಪಟ್ಟ ೧೪೪ನೇ ಪ್ರಕರಣವನ್ನು ಸತ್ಯಾಗ್ರಹಿಗಳು ತೀರ ಖಂಡಿಸಿರುವರು ಕೈದುಮಾಡಲ್ಪಟ್ಟ ೨೨ ಮಂದಿಯಲ್ಲಿ ನಾಲ್ವರನ್ನು ಮಾತ್ರವೇ ಶಿಕ್ಷೆಗೆ ಗುರಿಪಡಿಸಿರುವರು ಮಿಕ್ಕವರನ್ನು ೨೪ ತಾಸುಗಳ ತನಕ ತಡೆಯಿಟ್ಟು, ಬಿಡುಗಡೆ ಹೊಂದಿಸಿರುವರು ಅದಕ್ಕಾಗಿ ೬೦೦ ಜನರಿಂದ ದೊಡ್ಡದಾದ ಒಂದು ಹರತಾಳ ಸಮಾರಂಭವು ಆಚರಿಸಲ್ಪಟ್ಟಿತು ಈ ಸಮಾರಂಭದಲ್ಲಿ ವಿದ್ಯಾರ್ಥಿಗಳೇ ಹೆಚ್ಚಿನ ಆತುರವುಳ್ಳವರಾಗಿದ್ದರು

**ನಾಗಪುರದಲ್ಲಿ**

ಸತ್ಯಾಗ್ರಹಿಗಳು ಕಳ್ಳು ಮತ್ತು ಶರಾಬು ಅಂಗಡಿಗಳನ್ನು ಮಾತ್ರವೇ ಪಹರೆಮಾಡುವರಲ್ಲದೆ ವಿದ್ಯಾಲಯಗಳು ಮಿಲ್ಲುಗಳು ನ್ಯಾಯ ಸ್ಥಾನಗಳು, ಪಬ್ಲಿಕ್ ಆಫೀಸುಗಳು ಮೊದಲಾದುವನ್ನೂ ಪಹರೆಮಾಡುತ್ತಿರುವರು ವಿದ್ಯಾರ್ಥಿಗಳೇ ಪಹರೆಯ ಕಾರ್ಯಕಲಾಪಗಳಲ್ಲಿ ಮುಖ್ಯ ಪಾತ್ರವನ್ನು ವಹಿಸಿದವರು. ಅನೇಕರನ್ನು ಪೋಲೀಸಿನವರು ಕೈದುಮಾಡಿರುವರು ಮಿ. ಗಜಾನನ ರಾಮಚಂದ್ರನೆಂಬ ವಿದ್ಯಾರ್ಥಿಯು ತಾನು ಕೈಕೊಂಡು ಪಹರೆಯ ಕಾರ್ಯಕಲಾಪಗಳನ್ನು ಮ್ಯಾಜಿಸ್ಟ್ರೇಟ ಮುಂದೆ ಮನಮುಟ್ಟಿ ಒಪ್ಪಿರುವನು ಅದಕ್ಕಾಗಿ ಆತನ ಮಾತಿಗೆ ಸಾಕ್ಷಿಯನ್ನಾದರೂ ಕೂಡ ವಿಚಾರಿಸದೆ ಮ್ಯಾಜಿಸ್ಟ್ರೇಟರು ೪ ತಿಂಗಳ ಕಠಿಣ ಶಿಕ್ಷೆಗೆ ಗುರಿಪಡಿಸಿರುವರು ಇನ್ನನೇಕರಿಗೆ ಹಲವು ಬಗೆಯ ರಾಜಕೀಯ ಅಪಾದನೆಗಳ ಮೇಲೆ ಮ್ಯಾಜಿಸ್ಟ್ರೇಟರು ಹಲವು ಬಗೆಯ ಶಿಕ್ಷೆಗಳನ್ನು ವಿಧಿಸಿರುವರು

ತಾ ೧೩ ೯—೩೦

ಕಾಂಗ್ರೆಸ್ ಸಮರಸಂಸ್ಥೆಯ ಡಿಕ್ಟೇಟರರಾಗಿದ್ದ ಅಬ್ದುಲ್ಲಾ ಮತ್ತು ಶಂಕರಲಾಲ್ ಎಂಬವರನ್ನು ದಸ್ತಗಿರಿಮಾಡಿ ಮ್ಯಾಜಿಸ್ಟ್ರೇಟರು ಆರಾರು ತಿಂಗಳ ಸಾದಾ ಸಜೆಗೆ ಗುರಿಪಡಿಸಿದ್ದಲ್ಲದೆ ಎ ತರಗತಿಯಲ್ಲಿರಿಸಿರುವರಂತೆ

**ಮುಂಬಾಯಿಯಲ್ಲಿ**

ಠಾಣಾ ಜೈಲಿನ ರಾಜಕೀಯ ಬಂದಿವಾನರಾಗಿದ್ದ ಮಿ| ಜಮ್ನಾದಾಸ್ ಮೆಹತಾ ಎಂಬವರನ್ನು ಇದೇ ತಾ ೧೩-೯-೩೦ ರಲ್ಲಿ ಬಿಡುಗಡೆಹೊಂದಿಸಿರುವರು

**ನವಾಢಿಲ್ಲಿ**

ಢಿಲ್ಲಿಯ ಬಂದಿಖಾನೆಯಲ್ಲಿ ಬಂದಿಯಾಗಿರಿಸಿದ ಪಂ| ಮಾಲವೀಯರನ್ನು ತಾ ೧೩—೯—೩೦ನೇ ದಿನ ಅಲಹಾಬಾದಿನ ನೈನಿ ಜೈಲಿಗೆ ವರ್ಗಾಯಿಸಿರುವರು ಕ್ರಮ ಘಂಟೆ ಸುಮಾರು ೭ ೩೦ಕ್ಕೆ ಸರಿಯಾಗಿ ಪಂಡಿತಜೀಯವರು ಢಿಲ್ಲಿಯಿಂದ ಸ್ಪೆಶಲ್ ಟ್ರೈನು ಮೂಲಕ ಅಲ್ಲಹಾಬಾದು ಜೈಲಿಗೆ ತೆರಳಿರುವರು

ಮಿ| ವಿಠ್ಠಲಭಾಯಿ ಪಟೇಲರೂ ಕೂಡ ಮಾಲವೀಯರೊಡನೆ ಬಂದಿಖಾನೆಯನ್ನು ಸೇರಿದ್ದರಷ್ಟೆ! ಅವರನ್ನು ಮುಂಬಾಯಿ ಅಧಿಪತ್ಯಕ್ಕೆ ಸೇರಿದ ಯಾವದೋ ಒಂದು ಜೈಲಿಗೆ ವರ್ಗಾಯಿಸಿರುವರಂತೆ. ಅಂತೆಯೇ ಸರಕಾರದವರು ಢಿಲ್ಲಿಯ ಬಂದಿವಾನರಾಗಿದ್ದ ಪ್ರಮುಖ ಸತ್ಯಾಗ್ರಹ ಮುಖಂಡರನ್ನು ಬೇರೆ ಬೇರೆ ಬಂದಿಖಾನೆಗಳಿಗೆ ವರ್ಗಾಯಿಸಿರುವರು. ಹಾಗೂ ಢಿಲ್ಲಿಯ ಬಂದಿಖಾನೆಯು ತೀರ ಬರಿದಾಗಿರುವದು.

ತಾ ೧೪—೯—೩೦

**ಡಿಕ್ಟೇಟರರಿಗೆ ಹೆಚ್ಚಿನ ಅಧಿಕಾರಗಳು.**

ಕರಾಚಿಯ ಸತ್ಯಾಗ್ರಹ ಮಂಡಳಿಯವರು ತಮ್ಮ ಸಮಿತಿಯ ಕಾರ್ಯಕಲಾಪಗಳನ್ನು ಇನ್ನಷ್ಟು ತೀವ್ರ ರೀತಿಯಿಂದ ಮುಂದರಿಸಬೇಕೆಂಬ ಆಕಾಂಕ್ಷೆಯಿಂದ, ತಮ್ಮೂರಿನ ಬೇರೆ ಬೇರೆ ಶಾಖಾ ಸಮಿತಿಗಳನ್ನು ಒಟ್ಟುಮಾಡಿ, ಸರ್ವಸಮ್ಮತಿಯಿಂದ ಸಂಸ್ಥೆಯ ಮುಖ್ಯ ಡಿಕ್ಟೇಟರರಾದ ಸೇಟ್ ಸುಂದರದಾಸ್ ಎಂಬವರಿಗೆ ಸರ್ವಾಧಿಕಾರವನ್ನು ಬಿಟ್ಟುಕೊಟ್ಟಿರುವರು

**ಕಾಂಗ್ರೆಸ್ ಆಫೀಸಿನ ಶೋಧೆ**

ತಾ ೯ ೮ ೩೦ನೇ ದಿನ ಪೋಲೀಸರು ಪಂಜಾಬ ಕಾಂಗ್ರೆಸ್ ಕಾರ್ಯಾಲಯವನ್ನು ಶೋಧ ಮಾಡಿದರು ಬೆಳಗ್ಗೆ ೪ ಘಂಟೆಯಿಂದ ಸಾಯಂಕಾಲ ೮ ಘಂಟೆಯ ವರೆಗೂ ಶೋಧೆ ನಡೆಯಿತು ಆಫೀಸಿಗೆ ಸಂಬಂಧಪಟ್ಟ ರಜಿಸ್ಟರುಗಳು ಟ್ರೈಪ್‌ರೈಟರ್, ಮೆಜಿಕ್ ಲಾಂಟರ್ನ್, ಫೋಟೋ ತೆಗೆಯುವ ಕೆಮೆರಾ ಮುಂತಾದ ಸೊತ್ತುಗಳನ್ನು ಅಪಹರಿಸಿ ಕೊಂಡ್ಹೋಗಿರುವರಂತೆ! ಇದು ಮೊದಲ ಸದರಿ ಸಮಿತಿಯು ಅನ್ಯಾಯದ ಸಂಸ್ಥೆಯೆಂದು ಪರಿಗಣಿಸಲ್ಪಟ್ಟಿತ್ತು.

**ಛಾಪಾ ವಿಕ್ರಿತರಿಗೆ ನೋಟೀಸು**

ಲಾಹೋರಿನ ಅಬಕಾರಿ ಇಲಾಖೆಯವರು ಸರಕಾರದ ಛಾಪಾ ಕಾಗದಗಳನ್ನು ಮಾರಾಟ ಮಾಡುವವರಿಗೆ ಸದರಿಯವರು ಸತ್ಯಾಗ್ರಹ ಚಳವಳದಲ್ಲಿ ಭಾಗಿಗಳಾದರೆ ಅವರ ಲೈಸೆನ್ಸುಗಳು ರದ್ದುಪಡಿಸಲಾದೀತೆಂಬ ಹೆದರಿಕೆಯನ್ನು ಬೀರಿರುವರು

ತಾರೀಕು ೧೫

**ಲಾಹೋರ್**

ಮಿ ಸೀತಾರಾಮದಾಸ್ ಎಂಬ ಸತ್ಯಾಗ್ರಹಿಯನ್ನೂ ಲಾಹೋರ ಸಂಸ್ಥೆಯ ೧೦ನೇ ಡಿಕ್ಟೇಟರರಾದ ಮಿ| ಮಹಮದ್ ಅಮೀನ್ ಎಂಬವರನ್ನೂ ದಸ್ತಗಿರಿಮಾಡಿ ಒಂದೊಂದು ವರ್ಷದ ಸಾದಾ ಸಜೆಯನ್ನು ವಿಧಿಸಿರುವರು

ಸಿರಾಜಗಂಜ್ ಎಂಬಲ್ಲಿ ಪೋಲೀಸರಿಂದ ಸ್ಥಳೀಕ ಕಾಂಗ್ರೆಸ್ ಕಾರ್ಯಾಲಯದ ಸಂಪೂರ್ಣ ಶೋಧ ನಡೆಯಿತ ಸಂಸ್ಥೆಯನ್ನು ಪೋಲೀಸರು ಬೀಗಮುದ್ರೆಗಳಿಂದ ಬಂದುಮಾಡಿರುವರು ಪರಂತು ದಸ್ತಗಿರಿಗಳೇನೂ ನಡೆದಿಲ್ಲ

**ಮೌಲವೀ ಬಜಾರದಲ್ಲಿ**

ಮಿ ದಕ್ಷಿಣ ಚರಣಗುಪ್ತ ಎಂಬ ಸತ್ಯಾಗ್ರಹ ಮುಖಂಡ ಕರಬಂದಾಯ ವಿರೋಧದ ಕುರಿತು ನಡೆಯುವ ಕಾರ್ಯಕಲಾಪಗಳಲ್ಲಿ ಭಾಗವಹಿಸಿದುದಕ್ಕಾಗಿ ೩ ತಿಂಗಳ ಸಾದಾ ಸಜೆಯನ್ನೂ ೨೫೦ ರೂಪಾಯಿಗಳ ಜುಲುಮಾನೆಯನ್ನೂ ವಿಧಿಸಿರುವರು ಜುಲ್ಮಾನೆ ಕೊಡದಿದ್ದರೆ ೬ ವಾರದ ಅಧಿಕ ಶಿಕ್ಷೆ ಎಂತಲೂ ವಿಧಿಯಾಗಿರುವದು

**ನೋ ಆಖಾಲಿಯಲ್ಲಿ**

ಜಿಲ್ಲಾ ಕಾಂಗೆಸ್ ಕಾರ್ಯಾಲಯವನ್ನು ಪೋಲೀಸರು ಪರಿಶೋಧಿಸಿರುವರು ಸತ್ಯಾಗಹಿಗಳ ಪ್ರಾಮುಖ್ಯನಾದ ಮಿ ಜತೇಂದ್ರನಾಥ ಚೌಧರಿ ಮತ್ತು ಮಿ ಬಿಸೆಕುಮಾರ ಗೋಸ್ ಎಂಬೊಬ್ಬ ಎಳೆಯ ಸತ್ಯಾಗ್ರಹಿಯನ್ನೂ ದಸ್ತಗಿರಿಮಾಡಿರುವರು 'ಕಾಂಗ್ರೆಸ್ ಸಂಕಲ್ಪ'ವೆಂಬ ವರ್ತಮಾನಪತ್ರದ ಕೆಲವು ಪ್ರತಿಗಳನ್ನು ವಶಪಡಿಸಿರುವರು

**ಕಲ್ಕತ್ತಾ**

ಪಹರೆಯ ಕಾರ್ಯಾನ್ವಿತರಾದ ೨ ಮಂದಿ ಹೆಂಗಸರನ್ನು ಜೋರ್ಜಿಗನ್ ದೇಶದ ಜಿಲ್ಲಾ ಮ್ಯಾಜಿಸ್ಟ್ರೇಟರು ೪ ತಿಂಗಳ ಸಾದಾ ಶಿಕ್ಷೆಗೆ ಗುರಿಪಡಿಸಿರುವರು

ಕಲ್ಕತ್ತೆಯ ಸ್ಥಳೀಕ ಸರಕಾರವು ಮುನಿಸಿಪಾಲಿಟಿಯೇ ಮೊದಲಾದ ಪಬ್ಲಿಕ್ ಆಫೀಸುಗಳನ್ನಲ್ಲದೆ ಗವರ್ನಮೆಂಟು ಗ್ರಾಂಟುಹೊಂದುವ ಪ್ರತಿಯೊಂದು ಸಂಸ್ಥೆಯು, ಸತ್ಯಾಗ್ರಹ ಚಳವಳದಲ್ಲಿ ಭಾಗ ವಹಿಸುವರೆಂಬ ಊಹನಾ ಶಂಕೆಯ ಮೇಲೆ ಬಹಳವಾಗಿ ಎಚ್ಚರಿಸಿರುವದು, ಅಲ್ಲದೆ ಇದಕ್ಕೆ ಪ್ರತಿಕೂಲವಾಗಿ ವರ್ತಿಸಿದವರು ತಮ್ಮ ಅಧಿಕಾರಗಳನ್ನು ಬಿಡಬೇಕೆಂಬದಾಗಿ ಸೂಚಿಸಿರುವರು

The Zandu Pharmaceutical Works, Ltd., Bombay, 14

ದಿ ಝಂಡೂ ಫಾರ್ಮಾಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14

ಲೋಕಪ್ರಸಿದ್ಧವಾದ 'ಝಂಡೂ ಯವರ

# ಚ್ಯವನಪ್ರಾಶ ಲೇಹ್ಯ.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!

ಕ್ರಯ 1 ಪಾನು ಸೀಸೆ ರೂ 2—8—0 ½ ಪಾ ರೂ 1—5—0 ¼ ಪಾ. ರೂ 0—13—0

ಮದ್ರಾಸು ರಾಜಧಾನಿಗೆ ಹೋಲ್ ಏಜಂಟರು—ದಾಮೋದರ್ ಅಂಡ್ ಕಂಪೆನಿ, 78 ಚೈನಾ ಬಜಾರು ರಸ್ತೆ ಮದ್ರಾಸು

ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ

ಮಂಗಳೂರು ಏಜಂಟರು — ದಿ ಅರ್ಬನ್ ಮಾರ್ಟ್

ಸಬ್ ಏಜಂಟರು — ಎಸ್ ಎಲ್ ಧಾರಶಾ ಎಂಡ್ ಬ್ರದರ್ಸ್

ಸಬ್ ಏಜಂಟರು — ಯು ಜನಾರ್ಧನರಾವ್, ಪುತ್ತೂರು, ದ ಕನ್ನಡ

ಮಂಗಳೂರು ಏಜಂಟರು — ತಿಪ್ಪಣ್ಣ ಶೆಟ್ಟಿ ಮರ್ಚೆಂಟ್

☞ ವಿವರ ಬೇಕಾದವರು ಹೋಲ್ ಏಜಂಟರಿಗೆ ಬರೆದುಕೊಳ್ಳಬೇಕು



TELEGRAMS ASPINWALCO TELEPHONE No 15

# SAFE
## at Any Speed



# Firestone
## GUM-DIPPED TIRES

OUTSTANDING features combine to make Firestone Gum-Dipped Tires the safest tires in the world.

Gum-Dipping — the Firestone patented process, whereby the cords of the carcass are dipped in a rubber solution—insulating them against friction — the tread design and the live tough rubber—these and other features, make a tire unequaled to withstand grueling and punishment under all conditions

Let us show you the Firestone way to the ultimate in economical tire satisfaction.

DISTRIBUTORS

Aspinwall & Co, Ltd

(Address) MANGALORE

STOCKISTS

UDIPI

*K Siddaya Hegde*

KASARGODE

*Rama Nayak*

KANHANGAD

*K S Russool*

Puttur

*K Venkatraya Pai*

Imperial Cycle Stores



FOR YOUR CAR

# WILLARD BATTERIES.

SIMONIZ KLEENER SIMONIZ POLISH

AGENTS —

## Messrs. Aspinwall & Co , Ltd.

MANGALORE



## ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ದೊರಕುತ್ತವೆ

ಶಾರದಾ ಛಾಪಖಾನೆ.

ರಥಬೀದಿ, ಮಂಗಳೂರು



ರಿಸ್ಟ್‌ವಾಚ್ ಉಚಿತ

ಒಂದು ಜೇಬಿನಲ್ಲಿಡುವ "ರಿಯಾ" ಉಚಿತವಾಗಿ ದೊರೆಯುತ್ತದೆ

ಕಂಗ್‌ಜಾಟರ ಕೊರೋನೇಶನ್ ಕಂಪೆನಿ

ಮುಂಬಾಯಿ



## ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ಕ್ರಯದಲ್ಲಿ ಕೊಡಲಾಗುವುದು.

ಹೆಚ್ಚಿನ ಮಾಹಿತಿಗಳಿಗಾಗಿ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,

ರಥಬೀದಿ ಮಂಗಳೂರು



## ಮುದಲ್ ತರವಾದ ಬೆಳ್ಳಿ ಉಡಿದಾರ ಹಗ್ಗ

ESTD 1896

ಅನೇಕ ವರುಷದಿಂದ ನಾವು ಬೆಳ್ಳಿ ಉಡಿದಾರಗಳನ್ನು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿ ಬರುತ್ತೇವೆ

ಕೆ ಎಸ್ ನಾರಾಯಣಶೆಟ್ಟಿ ಅಂಡ್ ಸನ್ಸ್,



## Grand Clearing Sale!

Indian Stores

CALCUTTA



ಒಮ್ಮೆ ಪರೀಕ್ಷಿಸಿರಿ! ತೃಪ್ತಿ ಹೊಂದಿರಿ!

ದಿ ಕ್ರೌನ್ ರಬ್ಬರ್ ಸ್ಟಾಂಪು ಕಂಪೆನಿ,

ಹಂಪನ್‌ಕಟ್ಟೆ ಬಲ್ಮಠ ರಸ್ತೆ, ಕಂಕನಾಡಿ ಪೋಸ್ಟು

ಮಂಗಳೂರು, ದ ಕನ್ನಡ



## ರಬ್ಬರು ಮೊಹರುಗಳು

ಇಲ್ಲಿ ಉತ್ತಮವಾದ ರಬ್ಬರ್ ಸ್ಟಾಂಪು ಮೊಹರುಗಳೂ ಇತ್ಯಾದಿ ಸಾಮಾನುಗಳೂ ಕಡಿಮೆ ಕ್ರಯಕ್ಕೆ ದೊರಕುತ್ತದೆ

ಹೆಚ್ಚಿನ ಮಾಹಿತಿಯನ್ನು ಪತ್ರಮೂಲಕವಾಗಲೀ ಆಫೀಸಿನಲ್ಲಿ ಸ್ವತಃ ಬಂದಾಗಲೀ ತಿಳಿದುಕೊಳ್ಳಿ

ಎಮ್ ದೇವದಾಸ ಶೆಣೈ,

ಮ್ಯಾನೇಜಿಂಗ್ ಪ್ರೊಪ್ರೈಟರ್

## ಯುರೋಪ ಖಂಡದ ಎಲ್ಲಾ ರಾಜ್ಯಗಳನ್ನು ಒಟ್ಟುಗೂಡಿಸುವುದು.

ಫ್ರಾನ್ಸ್‌ದೇಶದ ಅನ್ಯದೇಶ ಮಂತ್ರಿಗಳಾದ ಬ್ರಾಯೆಂಡರು ಯುರೋಪ ಖಂಡದ ಎಲ್ಲಾ ರಾಜ್ಯಗಳ ಕೈಗಾರಿಕೆಗಳೂ, ವ್ಯಾಪಾರವೂ ಒಂದೇ ರೀತಿಯಲ್ಲಿ ವೃದ್ಧಿಯಾಗುವದಕ್ಕೋಸ್ಕರ ಲೀಗ್ ಒಫ್ ನೇಶನಿನ ಹಾಗೆಯೇ ಫೆಡರೇಶನ್ ಒಫ್ ಯುರೋಪ ಎಂಬ ಸಂಸ್ಥೆಯನ್ನು ಏರ್ಪಡಿಸಬೇಕೆಂಬ ಆಲೋಚನೆಯನ್ನು ಮುಂದೆ ತಂದಿರುವರು. ಆದರೆ ಈ ಆಲೋಚನೆಗೆ ವಿರೋಧ ಭಾವನೆಗಳು ಯುರೋಪ ಖಂಡದ ರಾಜ್ಯಗಳಿಂದಲೂ, ಅಮೇರಿಕ ಆಫ್ರಿಕ, ಏಸ್ಯಾ ಖಂಡಗಳಿಂದಲೂ ಹೆಚ್ಚಾಗುತ್ತಾ ಬರುತ್ತಿದೆ. ಇದರಿಂದ ತಮ್ಮ ಸುಂಕಕ್ಕೂ, ಯುರೋಪ ಖಂಡಕ್ಕೆ ಕಳುಹಿಸುವ ಸಾಲಕ್ಕೂ ಹಾನಿಯಿದೆ ಎಂದು ಅಮೇರಿಕದವರು ಆಕ್ಷೇಪಿಸುತ್ತಿರುವರು. ಯುರೋಪ ಖಂಡದ ರಾಜ್ಯಗಳು ಒಟ್ಟುಗೂಡಿದರೆ ತಮ್ಮ ಬಾಳಿಕೆಗೆ ಹಾನಿ ಬಂದೀತೆಂದು ಏಸ್ಯಾ ಮತ್ತು ಆಫ್ರಿಕ ಖಂಡಗಳು ಹೇಳುತ್ತಿರುವವು. ಆರ್ಥಿಕ ಮತ್ತು ರಾಜಕೀಯ ಕಾರಣಗಳಿಗಾಗಿ ಈ ಕ್ರಮವನ್ನು ಜ್ಯಾರಿಗೆ ತರುವದೆಂದರೆ ಎಲ್ಲಾ ತರದ ಕಲಹಗಳನ್ನು ಸ್ಥಾಪಿಸಲಿಕ್ಕೆ ಈ ಮೊದಲೇ ಸ್ಥಾಪಿಸಲ್ಪಟ್ಟ ಲೀಗ್ ಒಫ್ ನೇಶನಿನ ಸಭೆಯು ಇದೆ. ಬ್ರಿಟಿಷರಿಗೆ ಭೂಗೋಳದ ಎಲ್ಲಾ ಭಾಗಗಳಲ್ಲಿಯೂ ರಾಜ್ಯವು ಇರುವುದರಿಂದಲೂ ಇತರ ಎಲ್ಲಾ ಖಂಡಗಳ ರಾಜ್ಯಗಳ ಸಂಗಡ ಸ್ನೇಹಭಾವದಿಂದ ಇರಬೇಕಾದುದರಿಂದ ಅವರಿಗೆ ಇದರಲ್ಲಿ ಸೇರಲು ಉಪಾಯವೇ ಇಲ್ಲ. ಫ್ರಾನ್ಸಿಗೆ ಮಾತ್ರ ಇದರಿಂದ ಹೆಚ್ಚಿಗೆ ಪ್ರಯೋಜನ ಸಿಕ್ಕಿ ಜರ್ಮನಿ ಮತ್ತು ಇಟೆಲಿ ರಾಜ್ಯಗಳ ವ್ಯಾಪಾರ, ಕೈಗಾರಿಕೆಗಳಿಗೆ ಹಾನಿಯಿರುವುದರಿಂದ ಈ ಎರಡು ರಾಜ್ಯಗಳು ಇದನ್ನು ಅಂಗೀಕರಿಸುವುದಿಲ್ಲ. ಈ ಫೆಡರೇಶನ್ ಸಭೆ ಮಾಡಿದರೆ ವ್ಯಾಪಾರ, ಸುಂಕ, ಕಾಲೊನಿಗಳು, ಇನ್ನು ಇತರ ಸಾಧಾರಣ ವಿಷಯಗಳು ಹೊರಗೆ ಬಿದ್ದು, ಈ ಫೆಡರೇಶನ್ ಮಾಡಿದರೂ ಪ್ರಯೋಜನ ಸಿಕ್ಕಲಿಕ್ಕಿಲ್ಲ. ಇದು ಸಾಧ್ಯವಾದರೆ ಈಗ ಏಳಿಗೆಗೆ ಬರುತ್ತಿರುವ ಏಸ್ಯಾ ಖಂಡದ ರಾಜ್ಯಗಳು ತಮ್ಮ ಫೆಡರೇಶನ್ ಮಾಡಲು ಹೊರಡುವರು. ಭೂಲೋಕದ ಅರೆವಾಶಿ ಜನರು ಈ ಖಂಡದಲ್ಲಿರುವುದರಿಂದ ಇದು ಆಗತ್ಯವಾಗಿ ತೋರುವುದು.

## ಆಶ್ರಿತ ರಾಜ್ಯಗಳ ಪ್ರಜೆಗಳಿಗೆ ಚಕ್ರಗೋಷ್ಠಿಯಲ್ಲಿ ಪಾಲು ಇಲ್ಲ

ಇಂಡಿಯದ ಚತುರ್ಗತಿಯೋಗಿರುವ ಹಿಂದೀಯರು ಆಶ್ರಿತ ರಾಜ್ಯಗಳಲ್ಲಿ ಇರಲೀ, ಬ್ರಿಟಿಷ ಇಂಡಿಯದಲ್ಲಿ ಇರಲಿ ಎಲ್ಲರೂ ಹಿಂದೀಯರೇ ಆಗಿರುವರು. ರೌಂಡ್ ಟೇಬಲ್ ಕೊನ್ಫರನ್ಸಿನಲ್ಲಿ ಬ್ರಿಟಿಷ ಇಂಡಿಯದ ಬೇರೆ ಬೇರೆ ಸಂಸ್ಥಾನಗಳ ಮತ್ತು ಮಧ್ಯವರ್ತಿ ಸರಕಾರದ ಪ್ರತಿನಿಧಿಗಳೂ, ಪ್ರಜೆಗಳ ಪ್ರತಿನಿಧಿಗಳೂ ಈ ಸಭೆಗೆ ಹೋಗುವಾಗ ಆಶ್ರಿತ ರಾಜ್ಯಗಳ ರಾಜರುಗಳೂ, ಮೈಸೂರು, ಹೈದರಾಬಾದ ದಿವಾನರೂ ಪ್ರತಿನಿಧಿಗಳಾಗಿ ಹೋಗುವಾಗ ಆಶ್ರಿತ ರಾಜ್ಯಗಳ ಪ್ರಜೆಗಳ ಪ್ರತಿನಿಧಿಗಳೂ ಇದರಲ್ಲಿ ಇರಬೇಕಿತ್ತು. ಬ್ರಿಟಿಷರಿಗೂ ತಮ್ಮ ರಾಜ್ಯಗಳಿಗೂ ಸರಿಸಮಾನತೆ ಪಕ್ಕಾ ಸ್ಥಾಪಿಸುವರು ಎಂದು ಬಿಟ್ಟರೆ ನಂತರ ಪ್ರಜೆಗಳಿಗೆ ಹಲವು ವಿಧದ ಅಭಿವೃದ್ಧಿಯನ್ನು ಮಾಡಬಹುದು. ಆದುದರಿಂದ ಪ್ರಜೆಗಳ ಪ್ರತಿನಿಧಿಗಳು ಹೋಗುವ ಆಗತ್ಯವಿಲ್ಲವೆಂದು ಆಶ್ರಿತ ರಾಜರ ಮತ್ತು ಅವರ ಮಂತ್ರಿಗಳ ವಿಚಾರ.

## ಎಸೆಂಬ್ಲಿ, ಸ್ಟೇಟ್ಸ್ ಕೌನ್ಸಿಲ್ ಮತ್ತು ಸಂಸ್ಥಾನದ ವಿಧಾಯಕ ಸಭೆಯ ಚುನಾವಣೆ.

ಈ ಸಾರಿಯ ಚುನಾವಣೆಯು ಯಶಸ್ವಿಯಾಗಿ ನಡಿಯಲಿಲ್ಲ. ಬೇಕಾದಷ್ಟು ಮೆಂಬರರು ಚುನಾಯಿಸಲ್ಪಡಲಿರುವರು. ಆದರೆ ಇವರಲ್ಲಿ ಹೆಚ್ಚಿನವರು ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿಸಲ್ಪಟ್ಟಿರುವರು. ಮದರಾಸು ಸಂಸ್ಥಾನ ಒಂದನ್ನು ಬಿಟ್ಟು ಉಳಿದ ಎಲ್ಲಾ ಸಂಸ್ಥಾನಗಳಲ್ಲಿಯೂ ಪಿಕೆಟಿಂಗ ವಿಶೇಷವಾಗಿ ನಡೆದಿದೆ. ಆದರೆ ಎಲ್ಲಾ ಕಡೆಗಳಲ್ಲಿ ವೋಟು ಕೊಡಲಿಕ್ಕೆ ಬಂದವರ ಸಂಖ್ಯೆಯು ಬಹಳ ಕಡಿಮೆಯಾಗಿದೆ. ಚುನಾಯಿಸಲ್ಪಟ್ಟ ಮೆಂಬರರಲ್ಲಿಯೂ ಹಲವರು ಆಯಾ ಸಂಸ್ಥಾನಗಳ ನಿವಾಸಿಗಳಾಗಿಯೇ ಇರಲಿಲ್ಲದವರು. ಇಬ್ಬರು ಸ್ತ್ರೀಯರು [ಚಾಡಮಾಲಿ]ಗಳೂ ಮೆಂಬರರಾಗಿ ಚುನಾಯಿಸಲ್ಪಟ್ಟಿರುವರು! ಒಬ್ಬ ಕುಂಬಾರ [illegible] ಡಿಲ್ಲಿಯಿಂದ ಎಸೆಂಬ್ಲಿಗೆ ಮೆಂಬರರಾಗಿ ಚುನಾಯಿಸಲ್ಪಟ್ಟಿರುವರು. ಒಟ್ಟಾರೆ ಚುನಾಯಿಸಲ್ಪಟ್ಟ ಮಹನೀಯರಲ್ಲಿ ಹೆಚ್ಚಿನವರು ರಾಜಕೀಯ ಸ್ಥಿತಿಯನ್ನು ಅರಿಯದವರೇ ಆಗಿರುತ್ತಾರೆ. ಆದುದರಿಂದ ಇಂದಿನಿಂದ ಮುಂದಕ್ಕೆ ಈ ಕೌನ್ಸಿಲುಗಳು ಪುನರ್ನಿರ್ಮಾಣವಾಗುವ ವರೆಗೆ ಯಾವದೊಂದು ವಿಧದ ಚರ್ಚೆಗಳಿಲ್ಲದೆ ಸಭೆಗಳು ಸಮಾಧಾನದಿಂದ ನಡಿಯಲು ಸಾಧ್ಯವಾದೀತು. ಒಟ್ಟಾರೆ ಹಣದ ಅಧಿಕಾರ, ಭೂಕಂದಾಯ ವಿಧಿಸುವ ಅಧಿಕಾರ ಕೌನ್ಸಿಲುಗಳಿಗೆ ಸಿಕ್ಕದ ವಿನಹ ಯಾರು ಮೆಂಬರರಾಗಿ ಹೋದರೂ ದೇಶಕ್ಕೆ ಯಾವ ಪ್ರಯೋಜನವೂ ಉಂಟಾಗಲು ಆಸ್ಪದವಿಲ್ಲ.

## ಚಕ್ರಗೋಷ್ಠಿಗೆ ಚುನಾಯಿಸಲ್ಪಟ್ಟ ಮೆಂಬರರು.

ಈ ಸಭೆಗೆ ಇಂಗ್ಲೆಂಡಿಗೆ ಹೋಗಲಿಕ್ಕೆ ಆಶ್ರಿತ ರಾಜ್ಯಗಳಿಂದ ೧೬ ಮಂದಿ ಪ್ರತಿನಿಧಿಗಳು ಚುನಾಯಿಸಲ್ಪಟ್ಟಿರುವರು. ಇವರಲ್ಲಿ ೧೦ ಮಂದಿ ಮಹಾರಾಜರುಗಳು ಉಳಿದ ಆರು ಮಂತ್ರಿ ಪ್ರಧಾನಿಗಳು. ಬ್ರಿಟಿಷ ಇಂಡಿಯದಿಂದ ೫೦ ಮಂದಿ ಪ್ರತಿನಿಧಿಗಳು ಇವರಲ್ಲಿ ೧೧ ಮಂದಿ ಸರ್ ಬಿರುದಿನವರು. ಒಟ್ಟಾರೆ ೨೪ ಮಂದಿ ಹಿಂದುಗಳು ೧೪ ಮಂದಿ ಮುಸಲ್ಮಾನರು ಇಬ್ಬರು ಸಿಕ್ಖರು, ೩ ಮಂದಿ ಯುರೋಪಿಯಾನರು, ೩ ಮಂದಿ ಪಾರ್ಸಿಗಳು ೩ ಮಂದಿ ಬರ್ಮೀಯರು, ೩ ಮಂದಿ ಇಂಡಿಯನ್ ಕ್ರಿಶ್ಚನ್ ಮತ್ತು ಎಂಗ್ಲೊ ಇಂಡಿಯಾನರು ಇವರಲ್ಲಿ ಇಬ್ಬರು ಮಹಿಳೆಯರು ಒಬ್ಬರು ಮುಸಲ್ಮಾನರು ಇನ್ನೊಬ್ಬರು ದಕ್ಷಿಣ ಕನ್ನಡ ಜಿಲ್ಲೆಯವರಾಗಿದ್ದ ಡೊಕ್ಟರ್ ಸುಬ್ರಾಯನರ ಧರ್ಮಪತ್ನಿಯವರು ಸ್ತ್ರೀಸ್ವಾತಂತ್ರ್ಯದಲ್ಲಿ ಹೆಸರುಗೊಂಡ ತುಳುರಾಜ್ಯದಿಂದ ಇಂಥಾ ದೊಡ್ಡ ಸಭೆಗೆ ಆಮಂತ್ರಿಸಲ್ಪಟ್ಟುದು ತುಳುದೇಶದ ಪುಣ್ಯೋದಯವೆಂದು ಹೇಳಬಹುದು. ಒಟ್ಟಾರೆ ಹಿಂದೂಗಳ ಜನಸಂಖ್ಯೆಗೆ ಮಿಕ್ಕಿಯೇ ಮೆಂಬರರನ್ನು ಚುನಾಯಿಸಿರುವರು. ಮುಸಲ್ಮಾನರಲ್ಲಿಯೂ ಆಕ್ಷೇಪಕ್ಕೆ ಕಾರಣವಿಲ್ಲ. ಕೋಂಗ್ರೆಸಿಗೆ ಸೇರದ ಎಲ್ಲಾ ತರದ ಮುಸಲ್ಮಾನರ ಪ್ರತಿನಿಧಿಗಳೂ ಇದ್ದಾರೆ. ಹಿಂದುಳಿದ ಜಾತಿಯವ ಪ್ರತಿನಿಧಿಯಾಗಿ ಅಂಬೇಡಕರರೂ ಇದ್ದಾರೆ. ಮೂವರು ಎಕ್ಸಿಕ್ಯೂಟಿವ್ ಕೌನ್ಸಿಲ ಮೆಂಬರರೂ ಇದ್ದಾರೆ. ಪಂಜಾಬಿನಿಂದ ಮೂವರು ಮುಸಲ್ಮಾನರನ್ನು ಚುನಾಯಿಸುವಾಗ ಒಬ್ಬ ಹಿಂದುವನ್ನು ಮಾತ್ರವೇ ಚುನಾಯಿಸಿರುವರು. ಇಬ್ಬರು ಸಿಕ್ಖರು ಇದ್ದರೂ ಇವರು ಯಾವ ತರದ ಅನುಭವವಿಲ್ಲದವರಾದುದರಿಂದ ಸಿಕ್ಖರ ಆಕ್ಷೇಪಣೆಯಿದೆ. ಡೊಕ್ಟರ ಮುಂಜೆಯವರನ್ನು ಚುನಾಯಿಸಿದರೂ ಅವರು ಹೋಗುವ ಹಾಗಿಲ್ಲವೆಂದು ತೋರುತ್ತದೆ. ಜಯಕರರ ವಿಷಯದಲ್ಲಿಯೂ ಸಂಶಯವಿದೆ. ಡೊಕ್ಟರ್ ಬಿಸೆಂಟರು ಇದರಲ್ಲಿ ತೋರುವದಿಲ್ಲ. ಇವರಿಗೆ ಕರೆ ಬರೂ ಹೋಗಲು ಮನಸ್ಸಿಲ್ಲ. ಇಂಡಿಯನ್ ಚೇಂಬರ ಒಫ್ ಕಮರ್ಸಿನ ಪ್ರತಿನಿಧಿಗಳೇ ಇಲ್ಲ. ಒಟ್ಟಾರೆ ಇದರಲ್ಲಿ ಮೊಡರೇಟ ಮೆಂಬರರೇ ಹೆಚ್ಚಾಗಿರುತ್ತಾರೆ. ಇವರೆಲ್ಲ ಕೆಲವರು ಹೋಗದೆ ನಿಲ್ಲಲೂ ಸಾಕು. ಹೋದರೂ ಆ ಸಭೆಗೆ ಒದುವ ಲೇಬರಿಯತಿಯ ಕಮ್ಯುನಿಸ್ಟ, ಲೋಕದ ವ್ಯಾಪಾರವನ್ನೇ ತಮ್ಮ ಹತೋಟಿಯಲ್ಲಿಟ್ಟುಕೊಂಡಿರುವ ಶ್ರೀಮಂತರು ಇನ್ನೂ ಇತರರು ಮುಂದೆ ಈ ಪ್ರತಿನಿಧಿಗಳು ಯಾವ ಕೆಲಸ ಮಾಡುವರೋ ನೋಡಲಿಕ್ಕಿದೆ. ಇದರಲ್ಲಿ ಕೋಂಗ್ರೆಸ್ ಕಡೆಯವರಾಗಲೀ ಅವರ ಗಂಧಗಾಳಿ ತಗಲಿದವರಾಗಲೀ ಈ ಚುನಾವಣೆಯಾದ ಮೆಂಬರರಲ್ಲಿ ತೋರುವದಿಲ್ಲ. ಇವರು ಲಂಡನಿನ ಸುಖಸಂತೋಷದಲ್ಲಿ ಒಲಿದು ಬ್ರಿಟಿಷ ರಾಜತಂತ್ರಜ್ಞ ಮಾಯಾಜಾಲಕ್ಕೆ ಬಿದ್ದು ಏನಾದರೂ ಸ್ವಲ್ಪ ರಾಜಕೀಯ ಬದಲಾವಣೆಗಳಾದರೂ ಈ ಬದಲಾವಣೆಗೆ ಹಿಂದೀಯರೆಲ್ಲರೂ ಒಪ್ಪುವರೋ ಎಂಬ ಸಂಶಯವು ಉಂಟಾಗಲು ಆಸ್ಪದವಿದೆ.

## ಇಂಡಿಯದ ಉಪ್ಪಿನ ಕೈಗಾರಿಕೆ.

ಇಂಡಿಯದಲ್ಲಿ ಯುರೋಪಿಯಾನರು ಬರುವದಕ್ಕಿಂತಲೂ ಎಷ್ಟೋ ಸಾವಿರ ವರುಷಗಳಿಂದ ಸಮುದ್ರದ ನೀರಿನಿಂದಲೂ ರಾಜಪುತಾನದ ಸಾಂಬರ ಸರೋವರದಿಂದಲೂ ಪಂಜಾಬಿನಲ್ಲಿ ರುವ ಉಪ್ಪಿನ ಪರ್ವತಗಳಿಂದಲೂ ಬಹಳ ಕಡಿಮೆ ಖರ್ಚಿನಿಂದ ಉಪ್ಪನ್ನು ತಯಾರಿಸುತ್ತಿದ್ದರು. ಉಪ್ಪನ್ನು ಸರಕಾರವೇ ಮಾರಬೇಕೆಂಬ ಕಾಯಿದೆಯು ಜ್ಯಾರಿಗೆ ಬಂದ ಮೇಲೆ ಸಮುದ್ರ ಕರಾವಳಿಯಲ್ಲಿ ಉಪ್ಪು ತಯಾರಾಗುವದು ಕಡಿಮೆಯಾಗಿ ಉಪ್ಪಿಗೆ ಕ್ರಯವೂ ಸ್ವಲ್ಪ ಹೆಚ್ಚಿಗೆ ಆಯಿತು. ಅದಲ್ಲದೆ ಇಂಗ್ಲೆಂಡ ದೇಶದ ಆವರ ಪೋಲಿನಿಂದ ಒಳ್ಳೇ ಉಪ್ಪು ಬರಲಾರಂಭವಾಯಿತು. ಈಗ ಬಂಗಾಳ ಮತ್ತು ಬರ್ಮಾ ದೇಶಕ್ಕೆ ೬ ಲಕ್ಷ ಟನ್ ಉಪ್ಪು ಅವರ ಪೋಲಿನಿಂದ ಬರುತ್ತಲಿದೆ. ಈ ಉಪ್ಪು ಬೆಳ್ಳಗಾಗಿಯೂ, ಒಂದೇ ತರದ ಹುಡಿಯಾಗಿಯೂ, ಶುಚಿಯಾಗಿಯೂ ಇರುವದರಿಂದ ಇದನ್ನು ಉಪಯೋಗಿಸುವದು ಹೆಚ್ಚಾಗಿದೆ. ಆದರೆ ಸರಕಾರವು ಉಪ್ಪಿನ ಕೈಗಾರಿಕೆಯನ್ನು ವೃದ್ಧಿಪಡಿಸುತ್ತಾ ಬಂದರೆ ಪರದೇಶದಿಂದ ಬರುವ ಉಪ್ಪನ್ನು ಬಾರದಂತೆ ಮಾಡಿ ಇಲ್ಲಿಯ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಬಹುದು. ಈ ಕುರಿತು ಎಸೆಂಬ್ಲಿಯಲ್ಲಿ ಹಲವು ಸಾರಿ ಚರ್ಚೆಯು ಬಂದು ಈ ಬಗ್ಗೆ ಬೋರ್ಡಿನ ಕಮಿಟಿಯ ರಿಪೋರ್ಟು ಹೊರಗೆ ಬಂದಿದೆ. ಇದರ ಪ್ರಕಾರ ನಂಬರ ಸರೋವರ ಕರಾಚಿ, ಏಡೆ ಬಂದರಗಳ ಉಪ್ಪನ್ನು ಬಂಗಾಳಕ್ಕೆ ಕಡಿಮೆ ಖರ್ಚಿನಿಂದ ತಂದರೆ ವಿದೇಶಿ ಉಪ್ಪು ಬರುವದು ಕಡಿಮೆಯಾದೀತು. ಇದಲ್ಲದೆ ಸಮುದ್ರದ ನೀರಿನಿಂದ ಉಪ್ಪು ತಯಾರಿಸುವದನ್ನು ಹೆಚ್ಚಿಸಿದರೆ ಮತ್ತಷ್ಟು ಕಡಿಮೆ ಖರ್ಚಿನಿಂದ ಉಪ್ಪು ಜನರಿಗೆ ಒದಗಿಸಲ್ಪಡುವದೆಂದು ಇವರ ಅಭಿಪ್ರಾಯ.

## ನೋಟಗಳು.
## NOTE....S.

ನಮ್ಮ ಜಿಲ್ಲೆಯ ಗಡಂಗುಗಳ ಏಲಂ ಮುಗಿಯಿತು. ಹಲವು ಕಡೆಗಳಲ್ಲಿ ವಿಶೇಷ ತರದ ಉತ್ಸಾಹವಿಲ್ಲದಿದ್ದರೂ ಅಧಿಕಾರಿಗಳ ದೆಸೆಯಿಂದ ತಕ್ಕಮಟ್ಟಿಗೆ ಎಲ್ಲಾ ಮುಗಿಯಿತು.

* * * *

ಊರೂರು ತಿರುಗಲು ಹೋದ ಲಾಥಿಗೋಲುಗಳು ಮೊನ್ನೆಯ ದಿವಸ ಮೋಟಾರಿನಲ್ಲಿ ಎಲ್ಲಾ ಬಂದುಬಿಟ್ಟವು. ಹೋಗುವಾಗ ಸ್ಪೆಶಲ್ ಮೋಟಾರಿನಲ್ಲಿ ಹೋಗಿದ್ದರು. ಬರುವಾಗ ಆರ್ಡಿನರಿ ಸರ್ವಿಸಿನಲ್ಲಿ ಬಂದಿರುತ್ತವೆ.

* * * *

ಚಕ್ರಗೋಷ್ಠಿಯ ದಿನಗಳು ಹತ್ತಿರ ಬಂದವು. ಆಮಂತ್ರಿಸಲ್ಪಟ್ಟವರು ಹೊರಡುವ ರಭಸದಲ್ಲಿದ್ದಾರೆ. ಉಣ್ಣೆಯ ವಸ್ತ್ರದ ಅಂಗಡಿಗಳಿಗೆ ಅವರ ಉಣ್ಣೆಯ ವಸ್ತ್ರಕ್ಕೆ ಈ ತಿಂಗಳಲ್ಲಿ ಸ್ವಲ್ಪ ಹೆಚ್ಚಿನ ಗಿರಾಕಿಗಳಾದರು. ಕಾರಣ ಈಗ ವಿಲಾಯತಿಯಲ್ಲಿ ಹೆಚ್ಚಿನ ಚಳಿ!

* * * *

ಮಂಗಳೂರಿನ ಶಾಂತತೆಯನ್ನು ನೋಡಲು ಗವರ್ನರರು ಬರುತ್ತಾರೆ. ತಾಲೂಕು ಬೋರ್ಡಿನಿಂದ ಇನ್ನೂರು ರೂಪಾಯಿ ಸೆಂಕ್ಷನ್ ಆದವು. ಆದರೆ ನಮ್ಮ ಮುನಿಸಿಪಾಲಿಟಿಯವರು ಮುಂದೆ ಬರದದ್ದು ತಿಳಿದುಬಂದಿಲ್ಲ.

* * * *

ಮಾರ್ಗ ದುರಸ್ತಿ ಕೆಲಸ ಅತಿ ರಭಸದಿಂದ ಸಾಗುತ್ತಿದೆ. ಹೀಗೆಯೇ ಪ್ರತಿ ಒಂದೊಂದು ವರ್ಷ ಒಬ್ಬೊಬ್ಬ ಗವರ್ನರರು ಬಂದರೆ ನಮ್ಮ ಜಿಲ್ಲೆಯ ಸೊಬಗನ್ನು ನೋಡಲು ಹೊರಗಿನ ಜಿಲ್ಲೆಯವರು ಬರುವ ಆವಶ್ಯ ಬಿದ್ದೀತು.

* * * *

ಹಣವಿಲ್ಲವೆಂದು ಮಂಗಳೂರು ತಾಲೂಕು ಬೋರ್ಡಿನವರು ಸ್ಥಳೀಕ ವಾರಪತ್ರಿಕೆಗಳನ್ನು ವಜಾ ಮಾಡಿರುವರು. ಪತ್ರಿಕೆಗಳನ್ನು ನಿಲ್ಲಿಸಿದರೆ ತಾಲೂಕು ಬೋರ್ಡಿಗೆ ಎಷ್ಟು ಹಣ ಉಳಿದೀತು? ಇದೇನು ಹೊಸ ಲಕ್ಕಿನ ಪ್ರಕಾರವೋ ಏನೋ?

## ಚಕ್ರಗೋಷ್ಠಿ ಸಭೆಯ ಅಧ್ಯಕ್ಷರು ಲೊಯಡ್ ಜೋರ್ಜರಂತೆ.

ಸಂಧಿಪ್ರಸ್ತಾಪವು ಬಿದ್ದುಹೋದುದನ್ನು ಕೇಳಿ ಇಂಗ್ಲೆಂಡಿನಲ್ಲಿರುವ ಇಂಡಿಯದ ವಿರೋಧಿಗಳಿಗೆ ಸಂತೋಷ ಉಂಟಾಗಿದೆ. ಕೋಂಗ್ರೆಸಿನ ಕಡೆಯವರು ಈ ಸಭೆಗೆ ಬರುವದಿಲ್ಲವೆಂದು ಮತ್ತು ಹಿಗ್ಗುತಿರುವರು. ಡೊಮಿನಿಯನ್ ಸ್ಟೇಟಸ್ ಎಂಬ ಶಬ್ದವನ್ನು ವೈಸರಾಯರು ಸವಂಬ ಭಾಷಣದಲ್ಲಿ ಉಪಯೋಗಿಸಿದುದನ್ನು ನೋಡಿ ಇವರೆಲ್ಲರೂ ರೇಗಿದ್ದರು. ಇತ್ತಲಾಗೆ ಆ ಶಬ್ದದ ಉಪಯೋಗವು ಕಡಿಮೆಯಾದುದನ್ನು ನೋಡಿ ಸಂತೋಷವಾಗಿದೆ. ಈಗ ಎಲ್ಲಾ ಪಾರ್ಟಿಗಳಿಂದ ಮೆಂಬರರು ಚುನಾಯಿಸಲ್ಪಟ್ಟದ್ದರಿಂದ ಬ್ರಿಟಿಷ ಸಾಮ್ರಾಜ್ಯದಲ್ಲಿ ರತ್ನಪ್ರಾಯವಾಗಿರುವ ಇಂಡಿಯವು ತಪ್ಪಿಹೋಗಲಿಕ್ಕಿಲ್ಲವೆಂದು ಸಂತೋಷ. ಇದೆಲ್ಲಾ ಆದರೆ ಪಾರ್ಲಿಮೆಂಟಿಗೆ ಇನ್ನು ಹೆಚ್ಚು ಕೆಲಸವಿಲ್ಲ. ಈ ಸಭಾಕಾರ್ಯವನ್ನು ಯುವಜನ ಪಕ್ಷದ ರಾಜತಂತ್ರಜ್ಞನ ಕೈಗೆ ಒಪ್ಪಿಸಬೇಕೆಂದು ಮೂರು ಪಾರ್ಟಿಗಳ ಮನಸ್ಸು ನಿರ್ಧಾರವಾಗಿತ್ತು. ನಂತರ ಇಲ್ಲಿ ಸಂಧಿಪ್ರಸ್ತಾಪ ಬಿದ್ದೊಡನೆ ಅದೂ ಬಿತ್ತು. ಇನ್ನು ಈ ಸಭೆಯ ಅಧ್ಯಕ್ಷರಾಗಿ ಲಿಬರಲ್ ಪಾರ್ಟಿಯ ಮುಖ್ಯಸ್ಥರಾದ ಲೋಯಡ ಜೋರ್ಜರನ್ನು ಚುನಾಯಿಸಬೇಕೆಂದು ಸೂಚನೆಗಳು ಬರುತ್ತಲಿವೆ. ಇವರು ೧೯೨೨ರ ವರೆಗೆ ರಾಜಕಾರ್ಯದಲ್ಲಿದ್ದರು. ಮೊಂಬೆಗರನ್ನು ತೆಗೆದವರು ಇವರೇ. ಇಂಡಿಯಕ್ಕೆ ಸ್ವಾಧೀನತೆ ಕೊಡುವದೆಂದರೆ ಇವರಿಗೆ ಆಗದು. ಇವರು ಕಳೆದ ಯುದ್ಧದಲ್ಲಿ ಒಪ್ಪಂದಕ್ಕೆ ಕಾರಣಭೂತರಾಗಿ ಜರ್ಮನಿ ಮುಂತಾದ ದೇಶಗಳಿಗೆ ಎಷ್ಟು ಒಳ್ಳೇದು ಮಾಡಿದುವರೊ ಅಷ್ಟೇ ಸಹಾಯವನ್ನು ಇಂಡಿಯಕ್ಕೂ ಮಾಡುವರು. ಇವರು ಅಧ್ಯಕ್ಷರಾದರೆ ಸ್ವಾಮಿನರೂ ಸಭೆಗೆ ಬರಲು ಅವಕಾಶ ದೊರಕೆದಂತಾಯಿತು. ಕೋಂಗ್ರೆಸ್ ಕಡೆಯವರು ಬಂದರೆ ಸ್ವಾಮಿನರಿಗೆ ಬರಲಿಕ್ಕೆ ಸ್ವಲ್ಪ ಅಂಜಿಕೆ ಇತ್ತು.

## ನೋಟಿಸು

**ಕಾಸರಗೋಡು ಡಿಸ್ಟ್ರಿಕ್ಟ ಮುನ್ಸೀಫ ಕೋರ್ಟಿನಲ್ಲಿ**

ಕ್ರಮ ನಂಬ್ರ 437/1930.

ತಳಂಗರೆ ಹಸಂಕುಟ್ಟಿ ಬ್ಯಾರಿ—ಜೈನದ್ದಿನ ಬ್ಯಾರಿಗಳ ಮಗ—ಕಾಸರಗೋಡು ತಾಲೂಕು ತಳಂಗರೆ ಗ್ರಾಮಸ್ಥ—ವಾದಿ

ಅಬ್ದುಲ್ಲ ಚಮ್ಮನಾಡ್, ಕಮಿಟ ಅಬ್ದುಲ್ ಕಾದರ್ ಬ್ಯಾರಿ ಮಗ—ಚಮ್ಮನಾಡು ಗ್ರಾಮದಲ್ಲಿರುವವ—ಪ್ರತಿವಾದಿ.

ಮೇಲೆ ಹೆಸರು ಕಾಣಿಸಿದ ವಾದಿಯ ಅಂಗಡಿಯಲ್ಲಿ ಪ್ರತಿವಾದಿಯು ನಡಿಸಿದ ಲೇವಾದೇವಿ ಬಾಬ್ತು ವಾದಿಗೆ ಬರ ಬೇಕಾದ ಹಣವನ್ನು ಕುರಿತು ದಾಕ್ಲು ಮಾಡಿದ ಸದರೀ ವ್ಯಾಜ್ಯವು ೧೯೩೦ನೇ ಇಸವಿ ಸಪ್ಟಂಬರ ತಾ ೨೯ಕ್ಕೆ ತನ್ಸಿಗೆ ಇಟ್ಟಿರುವದೆಂದೂ ಆ ದಿವಸ ಸಹಾ ಸದ್ರಿ ಪ್ರತಿವಾದಿಯು ಹಾಜರಾಗದಿದ್ದಲ್ಲಿ ಸದ್ರಿ ಪ್ರತಿವಾದಿಯ ಗ್ಯೆರಹಾಜರಿಯಲ್ಲಿ ವಾದಿ ಗುಣಕ್ಕೆ ಡಿಕ್ರಿ ವಿಧಿಸಲಾದೀತೆಂತಲೂ ಈ ಮೂಲಕ ತಿಳಸೋಣಾಗಿಯದೆ

Kasaragod 10—9—1930 } P Ahmad, Counsel for Plaintiff

**ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ**

S C 275/30

ವೈದಿಂ ಕುಂಞ ಬ್ಯಾರಿ ಹಮದ ಸಾಹೇಬರ ಮಗ—ತಳಂಗರೆ ಗ್ರಾಮದ ತೆರವತ್ತಲ್ಲಿರುವವ—ವಾದಿ

ಮತ್ತು

ಅಬೂಬಕರ ಬ್ಯಾರಿ—ಪಾಂಗೋಡು ವೈದಿಂ ಕುಂಞ ಬ್ಯಾರಿ ಮಗ ತಳಂಗರೆ ಗ್ರಾಮದ ಪಳ್ಳಿಕಾಲಲ್ಲಿರುವವ—ಪ್ರತಿವಾದಿ

ನಿಮ್ಮಿಂದ ಬರತಕ್ಕ ಪ್ರೋ ನೋಟಿನ ಹಣ ವಸೂಲಿಗೆ ವಾದಿಯು ದಾಕ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 29—9—30ನೇ ಸೋಮವಾರಕ್ಕೆ ಅಖೈರ ತನ್ಸಿಗೆ ಇಟ್ಟಿರುತ್ತದೆ. ಆ ಕುರಿತ ನಿಮಗೆ ಏನಾದರೂ ಆಕ್ಷೇಪಯಿದ್ದರೆ ಸದರಿ ತಾರೀಕಿನ ಒಳಗೆ ಕೋರ್ಟ ಮುಂದೆ ಹಾಜರಾಗಿ ಸ್ಟೇಟುಮೆಂಟು ಕೊಟ್ಟು ವ್ಯವಹರಿಸತಕ್ಕದ್ದು. ತಪ್ಪಿದರೆ ನಿಮ್ಮ ಮೇಲೆ ಯಕ್ಸ ಪಾರ್ಟಿಯಾಗಿ ತೀರ್ಮಾನಿಸಲಾಗುವುದು ಎಂತ ತಿಳಸೋಣಾಗಿಯದೆ.

ಕಾಸರಗೋಡು 1 — — 30 } K Devadas Shenai, ವಾದಿ ಕಡೆ ವಕೀಲ

**ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ**

ಸ್ಮಾಲ್ ನಂಬ್ರ 172/1930

ಪಿ ಶೀತಾರಾಮ ಅಂಗಿಂತ್ರಾಯ, ಗೋಪಾಲಕೃಷ್ಣ ಅಂಗಿಂತ್ರಾಯರ ಮಗ ಪುತ್ತೂರು ತಾಲೂಕು ಕುರಿಯ ಗ್ರಾಮಸ್ಥ

ವಾದಿ

1, ಗಣಪತಿ ಕ್ಯಾನುಭಾಗ, ಸುಬ್ರಾಯ ಕ್ಯಾನುಭಾಗರ ಮಗ
2 ನಾರಾಯಣ ಕೊಗ್ಗಾಚಾರಿ, ವೆಂಕಟಯ್ಯಾಚಾರಿ ಮಗ ಇವರಿಬ್ಬರು ಪುತ್ತೂರು ಕಸಬಾ ಗ್ರಾಮಸ್ಥರು

ಪ್ರತಿವಾದಿರು

ಮೇಲ್ಕಂಡ ವ್ಯಾಜ್ಯವು ಸದರಿ ಕೋರ್ಟಿನಲ್ಲಿ ತಾರೀಕು 29—9—1930ನೇ ದಿವಸ ಹಗಲು 10 ಘಂಟಾ ತನಿಖೆಗೆ ಇಟ್ಟಿರುತ್ತದೆ ಆ ದಿವಸಕ್ಕೆ ಸದರಿ 1ನೇ ಪ್ರ ಸುಬ್ರಾಯ ಕ್ಯಾನುಭಾಗರು ಸದರಿ ಕೋರ್ಟು ಮುಂದೆ ಹಾಜರಾಗಿ ಉದಹರಿಸ ಲಿಕ್ಕೆ ತಪ್ಪಿದರೆ, ಅವರನ್ನು ತಿವಾಯಿ ಮಾಡಿ, ವ್ಯಾಜ್ಯವನ್ನು ಏಕ ಪಕ್ಷ ವಿಚಾರಣೆಯಿಂದ ತೀರ್ಮಾನಿಸಲಾದೀತೆಂಬ ಸಂಗತಿ ಕೋರ್ಟು ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸಿಯದೆ

ಪುತ್ತೂರ, ೧೫—೯—೧೯೩೦ } H P A Jain, PLEADER FOR PLFF

## A Best Bargain in Car.

A chevrolet 4 cylinder car purchased new only 1 year ten months before, per gallon gives 25 miles A bumper 3 new tyres, one horn 2 oil lights and a carrier extra bought will be given with the car Net price Rs. one thousand only Best opportunity for those requiring a good and cheap car.

*For further particulars*

C/o Swadeshabhimani
*Mangalore.*

ಪ್ರತಿಯೊಂದು ಗುಟುಕು ಸುಖ ಜೀವನವನ್ನು ತರುವದು.

ಡಾಕ್ಟರ್ ವಿಲ್ಸನರ

## "ಫೊಸ್ಫೊ—ಇಲೆಕ್ಟ್ರೋಜೆನ್."

(ಎಲ್ಲ ಜನರಿಗೂ ತಾರುಣ್ಯವನ್ನೀಯುವ ಪೌಷ್ಟಿಕ ರಸಾಯನ)

**ಚೆನ್ನಾಗಿರಿ! ತರುಣರಾಗಿರಿ!! ಉತ್ಸಾಹಿಗಳಾಗಿರಿ!!**

ಹೆದರದಿರಿ! ನೀವು ಬಳಲಿದ ಮತ್ತು ಅಶಕ್ತರಾದ ಸ್ತ್ರೀ ಪುರುಷರಾಗಿದ್ದರೆ ಕೃಷ ಶರೀರವೂ, ನಿರ್ಜೀವ ಮುಖಮುದ್ರೆಯೂ ಉಳ್ಳವರಾದರೆ ರಕ್ತ ಅಸ್ಥಿ, ಮಾಂಸಗಳು ಇಲ್ಲವಾದರೆ ಮಾತನಾಡುವಾಗ, ಕೆಲಸ ಮಾಡುವಾಗ, ನಡೆಯುವಾಗ ಬಳಲಿಕೆ, ಯದ್ವರೆ, ಹಲವು ತೊಂದರೆಗಳಿಂದ ದುಃಖವೂ ನಿರುದ್ದೇಶ ಜೀವನವೂ ನಿಮಗೆ ಅನುಭವವಾಗುವದಾದರೆ ನರಗಳ ದೌರ್ಬಲ್ಯ,




ಮೆದುಳಿನ ಶ್ರಮ ಧಾತುನಷ್ಟ ಮೊದಲಾದವುಗಳಿವೆಯೆಂದರೆ ಧೈರ್ಯಗುಂದ ಬೇಡಿರಿ ನಿಮ್ಮ ಶರೀರದಲ್ಲಿ ಕಬ್ಬಿಣದ ಅಸ್ಥಿ, ಕಬ್ಬಿಣದ ಸ್ನಾಯು ಕಬ್ಬಿಣದ ದೇಹವನ್ನು ನಾವು ಉಂಟುಮಾಡುವೆವು ಭಂಗಾರದಂತಹ ಶಕ್ತಿಯಿದ್ದು ಸುಂದರ ಮುಖಮುದ್ರೆಯುಂಟು, ಕೂಡಿದ ಉತ್ಸಾಹಿ ಯುವಕರನ್ನಾಗಿ ನಿಮ್ಮನ್ನು ಮಾಡುವೆವು. ಈಗಲೇ ಔಷಧವನ್ನು ಪಡೆದು ಧಾರಾಳವಾಗಿ ಅನುಭವಿಸಿರಿ

ಬಾಟಲಿಗೆ ರೂ 2—2—0 ಮೂರು ಬಾಟಲಿಗಳಿಗೆ ರೂ 4—12—0

**ಅಂಚೆ ಮುಫತ್ತು**

ಸಬ್ ಏಜಂಟರು: —
ಶಾ ಕಂಪೆನಿ, ಡಾಯ್ಮಂಡ್ ಬಿಲ್ಡಿಂಗ್,
ಗವರ್ನಮೆಂಟ ಕಾಲೇಜಿನ ಎದುರು, ಮಂಗಳೂರು

**Frank Robinson & Co.,**
*Chornork Place,*
Post Box No 2330, CALCUTTA

"If every Wife knew what every Widow knows every Husband could be Insured

PLACE YOUR LIFE ASSURANCE WITH

**THE SOUTH INDIAN**

Securing for your clients

1. Low rates of Premium
2. Liberal Policy Conditions.

AND FOR YOURSELF

An Agency with attractive Terms of Commission and Salary in

**The South Indian General Assurance Co, Ltd.,**

Anywhere in CANARA DISTRICTS & HYDERABAD STATE

For terms of Agency please apply to —

H R K IYENGAR
Chief Agent

The S I G A Co Ltd,
Sinvasigudda MANGALORE

Managing Agents —

K C PANDALAI & CO
7 8 Mclean Street G T MADRAS

**ಜೀವವಿಮೆ ಮಾಡುವವರ**

ದಿ ಸೌತ್ ಇಂಡಿಯನ್ ಜನರಲ್ ಎಸ್ಸ್ಯೂರೆನ್ಸ್ ಕಂಪೆನಿ ಲಿಮಿಟೆಡ್ಡನಲ್ಲಿ ವಿಮೆಮಾಡಿರಿ.

ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!

**ಪ್ರೀಮಿಯಂ ದರಗಳು ಕಡಿಮೆ!**
**ಕರಾರುಗಳ ತೀರಾ ಸುಲಭ!!**

ಕನ್ನಡ ಜಿಲ್ಲೆ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗ

**ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ ದೊರಕುವುದು**

(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)

ಚೀಫ್ ಏಜಂಟರು—

ಎಚ್ ಆರ್. ಕೆ. ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.
ದಿ ಎಸ್ ಐ ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು

ಮೇನೇಜಿಂಗ್ ಏಜಂಟರು —

ಕೆ ಸಿ ಪಾಂಡಲೆ ಎಂಡ್ ಕೋ.
೭೮ ಮೆಕಲೀನ್ ಸ್ಟ್ರೀಟ್, ಜಿ ಟಿ ಮದ್ರಾಸು

ಸುಲಭ ಕ್ರಯ! ಧಾರಾಳ ಫಲ!

## ದಂತಧಾವನ ಚೂರ್ಣ ಟೂತ್ ಪೌಡರ್.

ಎಲ್ಲಾ ವಿಧದ ಹಲ್ಲುನೋವುಗಳನ್ನೂ ಹಲ್ಲುಗಳ [illegible] ಗಳನ್ನೂ ವಾಸಿಗೊಳಿಸುವುದು ಹಲ್ಲುಗಳ [illegible] ರಕ್ತ, ಕೀವು ಸೋರುವವುಗಳನ್ನು ನಿಲ್ಲಿಸುವ ಬಾಯಿಯ ದುರ್ಗಂಧವನ್ನು ಹಲ್ಲುಗಳ [illegible] ಹಲ್ಲುಗಳು ಶುಚಿಯಾಗಿದ್ದು ಸುವಾಸನೆಯಿಂದಿರುವಂತೆಯೂ ಆಶ್ಚರ್ಯಕರವಾಗಿರುವುದು ಪೇಟಿಗೆ ೦—೩—೦ ಡಜನ ಪೇಟಿಗಳಿಗೆ ೧—೪—೦. ಇವುಗಳಲ್ಲದೆ ಮಿಕ್ಕ [illegible] ಔಷಧಗಳೂ [illegible] ಆಸವ, ಅರಿಷ್ಟ, ಭಸ್ಮ, ಚೂರ್ಣ, ಕಷಾಯ, ಲೇಹ, ತೈಲ ಮೊದಲಾದವುಗಳ ನಮ್ಮಲ್ಲಿ ಆಗಾಗ ಹೊಸದಾಗಿ ತಯಾರಿಸಲ್ಪಡುವವು [illegible] ಈ ಮೂಲಕ [illegible] ಔಷಧಗಳನ್ನು [illegible] ಚಿಕಿತ್ಸೆ ಅನುಪಾನಗಳ ಕುರಿತ [illegible] ಬರೆಯಿರಿ

ಪಿ ಕರುಣಾಕರ ವೈದ್ಯರ್.
ಆರೋಗ್ಯಾಮೃತ ಔಷಧಾಲಯ
ಕಾಂಪ ಬಜಾರ್ ಕಣ್ಣಾನೂರು.

P KARUNAKARAN VYDIAR.
Arogiamritha Aushadhalaya
Camp Bazaar, CANNANORE.

## ನೋಟೀಸು.

**ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ**

ಕ್ರಮ ನಂಬ್ರ 370/30

ಎಲಿಮಕ್ಕೆ ಕಾರ್ನವೆಲ್ಲರ ಗುತ್ತಿನ ತಿಮ್ಮಯ್ಯ ಸೇನವರ ಹೆಂಡತಿ ಮಂಗಳೂರು ತಾಲೂಕು ಕೋಡಿಕ್ಕಾಲ ಗ್ರಾಮದ ಗುತ್ತಿನಲ್ಲಿರುವವಳು—ವಾದಿಳು.

ಮತ್ತು

ತಿಮ್ಮ ಅಕ್ಕ, ಶೀವದ ಕೊರಗಾಕ್ಕರ ಅಳಿಯ, ಕಾಸರಗೋಡು ತಾಲೂಕು ಬಂಗಡಿ ಮೊಗರು ಮಾಗಣೆ ಮುಗು ಗ್ರಾಮದಲ್ಲಿರುವವ—ಪ್ರತಿ ವಾದಿ

ಮೇಲ್ಕಂಡ ವ್ಯಾಜ್ಯದಲ್ಲಿ ವಾದೀ ಕಡೆಯಿಂದ ಸಬ್ ಸ್ಟಿಟ್ಯೂಟ ಸರ್ವಿಸ್ ಬಗ್ಗೆ ಕೊಟ್ಟ I A 1478/30ನೇ ಅರ್ಜಿ ಮೇಲೆ ತಾ 3—9—30ರಲ್ಲು ಆದ ಹುಕ್ಮುಂ ಪ್ರಕಾರ ಈ ವ್ಯಾಜ್ಯವು ತಾ 26—9—30ಕ್ಕೆ ಅಖೈರು ತನ್ಸಿಗೆ ಇಟ್ಟಿರುತ್ತದೆಂಬ ಸಂಗತಿ ಈ ಮೂಲಕ ತಿಳಸೋಣಾಗುತ್ತದೆ.

Kasaragod 5—9—1930 } **K. Shama Shetty,** Pleader for Plaintiff

## ಅನುಕ್ರಮಣಿಕೆ.


ಅಗ್ರಲೇಖ.

ಹೋಗುವ ಅವಸರ . . . . . ೮

ಸ್ಫುಟಟಿಪ್ಪಣಿಗಳು . . . . [illegible]

ಕೋಟೆಗಳು . . . [illegible]

ವರ್ತಮಾನ ಸಂಗ್ರಹಗಳು

ವಿದೇಶ ವರ್ತಮಾನ . . . . . ೮

ಒಳದೇಶ ವರ್ತಮಾನ . . . . ೮-೯

ದಕ್ಷಿಣ ಕನ್ನಡ—ಮಂಗಳೂರು, ಬಂಟವಾಳ, ನಂದಾವರ

ಕಾರ್ಕಳ, ಗುರ್ಪುರ . . ೯

ವಿವಿಧ ಸಮಾಚಾರಗಳು ೧೧

ಹದಭದಿರೋಣ ೨

ಪತ್ರವ್ಯವಹಾರ [illegible]

ಕೊಡಗು ದೇಶದ ರಾಜ್ಯಭಾರ ಕ್ರಮ ೧೫

ಮಹಾತ್ಮಾಜಿಯವರ ಸತ್ಯಾಗ್ರಹ ಸಮಾಚಾರ ೪

ಸಂಧಾನ ಪ್ರಸ್ತಾಪ . ೧೪ ೧೫


# ಸ್ವದೇಶಾಭಿಮಾನಿ.

**ತಾರೀಕು ೧೯ನೇ ಶುಕ್ರವಾರ ಸಪ್ಟೆಂಬರ ೧೯೩೦.**

## ಹೋಗುವ ಅವಸರ.

ರೌಂಡ್ ಟೇಬಲ್ ಕೊನ್ಫರೆನ್ಸನ್ನು ಕಾಂಗ್ರೆಸ್ಸು ನಿರಾಕರಿಸಿದರೂ, ಕೊನ್ಫರೆನ್ಸಿಗೆ ಹೋಗತಕ್ಕ ಪ್ರತಿನಿಧಿಗಳು ನಿರ್ಣಯಿಸಲ್ಪಟ್ಟರು. ಈ ಹೆಸರುಗಳಲ್ಲಿ ಹಿಂದೀ ಜನತೆಗೆ ತಿಳಿದವರೆಷ್ಟು ಮಂದಿ ಎಂಬುದನ್ನು ನೋಡಿದರೆ, ಈ ಕೊನ್ಫರೆನ್ಸಿನ ಸಾರ್ಥಕತೆಯು ವ್ಯಕ್ತವಾಗುವುದು. ರಾಷ್ಟ್ರೀಯ ಕೆಲಸಗಳಲ್ಲಿ ಉತ್ಸಾಹಿತರಾದವರ ಸಂಖ್ಯೆಯು ಅತ್ಯಲ್ಪ ಪ್ರಮಾಣದಲ್ಲಿದೆ. ಅಂತಹವರು ಕೂಡ ದೇಶದ ಏಕಮಾತ್ರ ಧ್ಯೇಯವನ್ನು ಒಂದೇ ಧೈರ್ಯದಿಂದ ಸಾಧಿಸಬಲ್ಲರೆಂಬುವುದು ಸಂದೇಹಾಸ್ಪದವಿದೆ. ಅಂತೂ ರೌಂಡ್‌ಟೇಬಲ್ ಕೊನ್ಫರೆನ್ಸು ನಡಿಯಲೇ ಬೇಕು, ಮಜೂರ ಸರಕಾರದ ಮನಸ್ಸಾಕ್ಷಿಯು ತಣಿಯಲೇ ಬೇಕು, ಧರ್ಮಾರ್ಥ ಸಿಕ್ಕುವ ಪ್ರಯಾಣವನ್ನೂ, ಸರಕಾರೀ ಗೌರವವನ್ನೂ ಕೆಲವರು ಅನುಭವಿಸಲೇ ಬೇಕು.

ಹಿಂದೊಂದು ಬಾರಿ ಸ್ಯಾಮನ್ ಕಮಿಶನಿನೊಡನೆ ಸಿಕ್ಕಿದ "ಸಮಾನತೆಯ" ಹೆಗ್ಗಳಿಕೆಯಿಂದ ಹಿಂದೀಯರ ಹೆಸರಿನ ಅಪಹರಣದಿಂದ ನಾಯರ್ ಕಮಿಟಿಯು ಲಂಡನಿಗೆ ಹೋಗಿ ತನ್ನ ಸ್ವರೂಪಕ್ಕೆ ಬೆಲೆಕಟ್ಟಿ ಬಂದಿತು. ರಾಷ್ಟ್ರೀಯ ಹಿತವೆಂಬ ಆ ವಿಶಾಲ ಧ್ಯೇಯವನ್ನರಿತವರೊಬ್ಬರೂ ಅದರಲ್ಲಿರಲಿಲ್ಲ. ವ್ಯಕ್ತಿ ಶ್ರೇಷ್ಠತೆ ಮತ್ತು ಜಾತೀಯ ಸ್ವಾರ್ಥದ ಪ್ರದರ್ಶನದಿಂದ ಈ ಕಮಿಟಿಯು ಅಪಯಶಸ್ಸಿನ ಇತಿಹಾಸವು ಮಾಕ್ಷಿಯವನ್ನು ಹೊಂದಿತು. ಇದರಲ್ಲಿ ವಿಸ್ಮಯವೇನಿಲ್ಲ. ಲೋಕದ ಅಪಹಾಸವೇ ಆ ಸಮಿತಿಯ ಶ್ರೇಷ್ಠತೆಯ ಅರ್ಜನೆಯಾಗಿದ್ದಿತು!

ಈ ಬಾರಿ ರೌಂಡ್‌ಟೇಬಲ್ ಕೊನ್ಫರೆನ್ಸಿಗೆ ಹೋಗಲು ನಿರ್ಣಯಿಸಲ್ಪಟ್ಟವರು ಈಗೇನು ಮಾಡುವರು? ಹೆಸರು ಪ್ರಕಟಿಸಲ್ಪಡುವ ಮೊದಲೇ ತಮ್ಮ ಆಮಂತ್ರಣದ ನಿಶ್ಚಿತತೆಯನ್ನು ಅನುಭವ ಮಾಡಿ ವಿಲಾಯತಿಗೆ ಹೊರಡಲು ಗಂಟುಕಟ್ಟಿದವರೇ ಹಲವರಿರುವರು, ವಿಲಾಯತಿಯಲ್ಲಿ ಇದ್ದು ಕೊನೆಗೂ ಆಮಂತ್ರಣವಾದರೆ ಹಿಂದೂಸ್ಥಾನಕ್ಕೆ ಹೋಗಿ ಹಿಂದೆ ಬರುವ ಶ್ರಮವೇಕೆಂದು ತಿಳಿದು ಇಂಗ್ಲೆಂಡಿನಲ್ಲಿಯೇ ಭದ್ರವಾಗಿ ಉಳಕೊಂಡವರು ಕೆಲವರು, ಪಟ್ಟಿ ಪ್ರಕಟಣೆಯ ಮೇಲೆ, ತಮ್ಮ ಹೆಸರೂ ಅದರಲ್ಲಿ ಬಂತೆಂಬ ಆನಂದಾತಿಶಯದಿಂದ ಈ ಚಳಿಗಾಲದ ಆತ್ಮರಕ್ಷಣೆಗಾಗಿ ಉಣ್ಣೆಯ ವಸ್ತ್ರವನ್ನು ಸಂಗ್ರಹಿಸಿ ಹೊರಡುವ ಅವಸರದಲ್ಲಿ ಸೇರಿದವರೇ ಉಳಿದವರು!

ಹೀಗೆಲ್ಲಾ ಹೊರಡುವುದರಲ್ಲಿಯೂ ರೌಂಡ್‌ಟೇಬಲ್ ಕೊನ್ಫರೆನ್ಸಿನ ಸ್ಥಾನವನ್ನೇದಿಟ್ಟಿಸಿ ನೋಡುವವರೂ ಮಾತ್ರವೇ ಜನರ ಪ್ರತಿನಿಧಿಯೆಂಬ ಹೆಸರಿನಲ್ಲಿ ಪಟ್ಟಿಯಲ್ಲಿ ಸೇರಿಸಲ್ಪಟ್ಟವರಾಗಿದ್ದಾರೆ. ಪ್ರತಿನಿಧಿಗಳನ್ನು ಒಟ್ಟುಕೂಡಿಸಿ, ಇಂಗ್ಲೆಂಡಿನಲ್ಲಿ ತಮ್ಮ ಸ್ವರೂಪವನ್ನು ಒಯಲುಗೊಳಿಸುವ ಮೊದಲು, ಹಿಂದೂಸ್ಥಾನದಲ್ಲೇ ಒಂದು ಪರಿಷತ್ತನ್ನು ಕೂಡಿ, ಐಕ್ಯಮತ್ಯದ ಹಾದಿಯನ್ನು ಹಿಡಿದು ನಿಶ್ಚಿತ ಧ್ಯೇಯದಿಂದ ಹಿಂದೀ ವಿರೋಧಿಗಳನ್ನು ಪ್ರತಿದ್ವಂದ್ವಿಸಲು ಇವರಲ್ಲಿ ಯಾರೊಬ್ಬರೂ ಯತ್ನಿಸುವುದು ತೋರುವುದಿಲ್ಲ. ಸರ್. ತೇಜ್‌ಬಹದ್ದೂರ ಸಪ್ರೂರವರು ಸಂಧಿಸಂಧಿಪ್ರಸ್ತಾಪದಲ್ಲಿ ಶ್ರಮಿಸಿ ದೇಶಪ್ರೇಮಿಗಳೆಂದು ಹೆಸರು ಹೊಂದಿದರೂ, ಅವರು ಕೂಡ ಇಂತಹ ಪ್ರಯೋಜನಕಾರಿಯಾದ ಪ್ರಸ್ತಾಪಕ್ಕೆ ಹೋಗಲು ಹವಣಿಸಿದುದು ತೋರುವುದಿಲ್ಲ. ಎಲ್ಲರೂ ಹೊರಡುವ ಅವಸರದಲ್ಲಿಯೇ ಇದ್ದಾರಲ್ಲದೆ, ದೇಶದ ಶಕ್ತಿಗಳನ್ನು ಒಟ್ಟುಗೂಡಿಸಿ, ಹಿಂದೂಸ್ಥಾನಕ್ಕೆ ತಮ್ಮ ಮೂಲಕ ಉಂಟಾಗಬಹುದಾದ ಉಪಹಾಸವನ್ನು ಕಳೆಯಲು ಯಾರೂ ಯತ್ನಿಸುವದಿಲ್ಲ.

ರೌಂಡುಟೇಬಲ್ ಕೊನ್ಫರೆನ್ಸಿನ ಭವಿತವ್ಯತೆಯೇನಿದೆ? ಹಿಂದೀ ಸರಕಾರದ ವಿವಿಧ ಸ್ವಾರ್ಥಗಳ ಬಗ್ಗೆ ಆರಿಸಲ್ಪಟ್ಟ ಪ್ರತಿನಿಧಿಗಳ ಪರಸ್ಪರ ವೈಯಕ್ತಿಕವೂ, ಜಾತೀಯವೂ, ಸ್ವಾರ್ಥಮಯವೂ ಆದ ಜಗಳಗಳ ರಂಗಭೂಮಿಯಾಗುವುದೇ? ಬ್ರಿಟಿಷ ಪಾಕ್ಷಿಕ ಪ್ರತಿನಿಧಿಗಳು ಅಂತರಂಗದ ಲಘು ನಗೆಯನ್ನನುಭವಿಸಿ ಸಂತೋಷಿಸುವ ಪ್ರೇರಕ ಶಕ್ತಿಯಾಗುವರೆ? ಯುರೋಪ್ ಜನಾಂಗಗಳೂ, ಅಮೇರಿಕವೂ, ಡೊಮಿನಿಯನ್ ರಾಜ್ಯಗಳೂ ನಗುಮುಖದ ಪ್ರೇಕ್ಷಕರಾಗುವರೇ?

ಈ ಉತ್ಸಾಹೀ ಪ್ರತಿನಿಧಿಗಳ ಮುಂದಿನ ನಡತೆಯು ಇವೆಕ್ಕೆಲ್ಲ ಉತ್ತರವೀಯಬೇಕು. ಆ ಉತ್ತರವೇನೆಂಬುದರಲ್ಲಿ ನಮಗೆ ಸಂದೇಹವಿಲ್ಲ.

---

## ವಿದೇಶ ವರ್ತಮಾನ.

**ಸಮರ ಸನ್ನದ್ಧರಿದ್ದೇವೆ:—**

— ಅಮೇರಿಕಾ ದೇಶದಲ್ಲಿ ವಾಸವಾಗಿರುವ ಭಾರತೀಯ ವಿದ್ಯಾರ್ಥಿವರ್ಗವು ಕಾಂಗ್ರೆಸ್ ಅಧ್ಯಕ್ಷರಿಗೆ ಈ ಕೆಳಗಿನ ಅಭಿಪ್ರಾಯವನ್ನೊಳಕೊಂಡ ಪತ್ರವೊಂದನ್ನು ಬರೆದಿರುವರು.

"ಭಾರತ ಭೂಮಿಯ ಸ್ವಾತಂತ್ರ್ಯ [illegible] ಹೂಡಲ್ಪಟ್ಟ ಸತ್ಯಾಗ್ರಹ ಸಂಗ್ರಾಮವನ್ನು ಇಡೀ ಜಗತ್ತೇ ಸಮಾನ ಭಕ್ತಿ ದೃಷ್ಟಿಯಿಂದ ಎದುರು ನೋಡುತ್ತಿರುವುದು. ಮಹಾತ್ಮರ ದಿವ್ಯ ನಾಯಕತ್ವ ಪ್ರತಿಯೊಬ್ಬ [illegible] ಮಾತೆಯ ಹಾಗೂ ಭೂಮಂಡಲದ ನಾಗರಿಕರುಗಳ ನಾಲಗೆಯ ಮೇಲೆ ನಲಿದಾಡುತ್ತಿರುವುದು. ಅಮೇರಿಕದ 'ಲಿಬರಲ್' ಪಾತ್ರ 'ಪ್ರೋಗ್ರೆಸಿವ್' ಪಕ್ಷದವರು [illegible] ಸಹಾಯ ತೋರಿಸುವದರಲ್ಲಿ ಸನ್ನದ್ಧರಾಗಿದ್ದಾರೆ. ಅಮೇರಿಕದ ವಾರ್ತಾ ಪತ್ರಿಕೆಗಳ ಹುಮ್ಮಸ್ಸು ಭಿನ್ನರವಿಲ್ಲ. ಇಲ್ಲಿ ಸತ್ಯಾಗ್ರಹಕ್ಕೆ ವಿರೋಧವಾದ ಚಳವಳಿಯನ್ನು ಹೂಡಬೇಕೆಂದು ಬ್ರಿಟಿಷರವರ ರಹಸ್ಯ [illegible] ಏಜಂಟರನ್ನು ಕಳುಹಿಸುತ್ತಿರುವರು.

ನಾವೆಲ್ಲರೂ ಪ್ರತಿಕೂಲ ಚಳವಳಿಯನ್ನು ಹೂಡಲಿಕ್ಕೆ [illegible] ಬ್ರಿಟಿಷರನ್ನು ಎದುರಾಳು [illegible] ಸನ್ನದ್ಧರಿದ್ದೇವೆ. ಭರತಖಂಡದಲ್ಲಿ ನಮ್ಮ (ಭಾರತೀಯರ) ಬಂಧುಭಗಿನಿಗಳು ಎದುರಿನಲ್ಲಿ ನಮ್ಮ ತ್ಯಾಗವು ಕಡಿಮೆ ಅಲ್ಪವಾಗಿರುವ [illegible] ಅಷ್ಟೊಂದು ನಾವು ಆ [illegible] ದೇಶಸೇವೆ ಮಾಡಬೇಕೆ [illegible] ನಮ್ಮಲ್ಲಿ ಆಗಿಂದಾಗ ಮೊಳೆದೋರುತ್ತಿದೆ. ಆ ದೀನವಾತಾವರಣದ ಭಾರತ ಭೂಮಿಯನ್ನು ಸೇರಬೇಕೆಂಬುದೇ ನಮ್ಮ ಇಚ್ಛೆ. ಇದನ್ನು ಅಂಗೀಕರಿಸಬೇಕೆಂದು ಮೊದಲಾಗಿ ಪತ್ರ ಬರೆದಿರುವರು.

— ಅಸ್ಟ್ರೇಲಿಯದಲ್ಲಿ ಮೇಜರ್ ಬರ್ನ್‌ಟೋಶ್ ಎಂಬ ಆಂಗ್ಲೇಯನು ಹಾರ್ದಿಕ [illegible] ಸರ್ ಜೋನ್ ಫ್ರೇಂಕ್ಲಿನ್ ಎಂಬವರ ಮೃತ ಶರೀರ ಹಾಗೂ [illegible] ಹುಡುಕಿ ತೆಗೆದಿರುವನು. [illegible] ಫ್ರೇಂಕ್ಲಿನನಂತೆಯೇ ಉತ್ತರ ಧ್ರುವ ಸಾಗರದ ಶೋಧನೆಗಾಗಿ ಹೋದ ಅನೇಕರು ಆಹಾರದ ಅಭಾವದಿಂದಲೋ, ಅಸಹನೀಯವಾದ ಶೀತದಿಂದಲೋ ಮೃತ ಪಟ್ಟಿರುವ [illegible] ಹಲವು ಶವಗಳ ಮೇಲೆ ಕಟ್ಟಲ್ಪಟ್ಟ ಗೋರಿಗಳ ಚಿಹ್ನೆಗಳೂ ಕಂಡು ಬಂದಿರುತ್ತವೆ. [illegible] ಅವನ ಒಡನಾಡಿಗಳ ಮೃತ ಶವ ಸಂಸ್ಕಾರಗಳನ್ನು ಮಾಡಿ ಅವನ ಸ್ಮಾರಕಾರ್ಥವಾಗಿ ಗೋರಿಗಳನ್ನು ಕಟ್ಟಬಹುದೆಂಬುದಾಗಿ ಊಹಿಸಲಾಗುತ್ತದೆ. ಕ್ರಮದಂತೆ ಕಟ್ಟಲ್ಪಟ್ಟವರಿಂದ ಒಬ್ಬರ ಹಿಂದೆ ಇನ್ನೊಬ್ಬರಂತೆ ತೀರಿಕೊಂಡರ ಕೆಲವು ಮೃತರ ಎಲುಬುಗಳೂ ದೊರಕಿರುತ್ತವೆ.

— ನ್ಯೂಯೋರ್ಕಿನ ಒಂದು ವರದಿಯು ಸೂಚಿಸುವಂತೆ 'ಅರ್ಗೆಂಟ್ಯಾನ್ ಗಲಭೆ'ಯಲ್ಲಿ ಡಾ| ಇರ್ಗ್ಯೇನ್ ಎಂಬವರನ್ನು ದಸ್ತಗಿರಿ ಮಾಡಿ "ಅರ್ಗೆಂಟ್ಯಾನ್ ದೇಶವನ್ನು ಬಿಡಬಾರದೆಂಬುದಾಗಿ ಸರಕಾರವು ಕಠಿಣ ಶಾಸನವನ್ನು ಮಾಡಿರುವದು. ಆತನು ಬಂದರದ ಸಮೀಪವಿರುವ ಯುದ್ಧನಾವೆಯಲ್ಲೇ ಇರುವನಂತೆ.

— ಡಾ. ರವೀಂದ್ರನಾಥ ಟಾಗೋರರು ತನ್ನ ಇಬ್ಬರು ಕಾರ್ಯದರ್ಶಿಗಳೊಡನೆಯೂ ವೈದ್ಯರೊಡನೆಯೂ, ಒಡನಾಡಿಗಳಾಗಿ ಮೋಸ್ಕೋ ಪಟ್ಟಣವನ್ನು ಸೇರಿರುವರು. ವಯೋವೃದ್ಧ ಹಾಗೂ ಜ್ಞಾನವೃದ್ಧರಾದ ರವೀಂದ್ರರು ಮೋಸ್ಕೋ ಪಟ್ಟಣದಲ್ಲಿ ಒಂದು ತಿಂಗಳು ತನಕ ಉಳಿಯುವರು. ಮತ್ತು ಈ ಸಮಯದಲ್ಲಿ ತನ್ನ ಅಮೂಲ್ಯ ಚಿತ್ರಕಲೆಯನ್ನು ಪ್ರದರ್ಶನ ಮಾಡುವ ಸಂದರ್ಭ ಒದಗಬಹುದೆಂದು ಇರಾದೆಯಲ್ಲಿರುವರು.

— ಜರ್ಮನಿಯ ಮುಖ್ಯ ಪಟ್ಟಣವಾದ ಬರ್ಲಿನ್ ಪಟ್ಟಣದಿಂದ ಮೋಸ್ಕೋವಿಗೆ ಹಾರಿಹೋಗುವ "ಗ್ರೇಫ್ ಜೆಪ್ಲಿನ್" ಎಂಬ ವಿಮಾನವು "ಲಿಥುವೇನಿಯ" ದೇಶದ ಮೇಲೆ ಹಾದು ಹೋಗುವ ವೇಳೆಯಲ್ಲಿ "ಲಿಥುವೇನಿಯ" ದೇಶದ ಸರಕಾರವು ಸಿಡಿಮದ್ದನ್ನು ಹಾರಿಸಿರುವುದು. ಇದಕ್ಕಾಗಿ "ಲಿಥುವೇನಿಯ" ಸರಕಾರದೊಡನೆ ಕಾರಣಗಳನ್ನು ಸಮರ್ಪಕವಾಗಿ ವಿವರಿಸಿ ಉತ್ತರಿಸಬೇಕೆಂಬುದಾಗಿ ಜರ್ಮನಿ ಸರಕಾರವು ಕೇಳುತ್ತದೆ.

— ಲಂಡನ್ ಪಟ್ಟಣದಲ್ಲಿ ಇದು ವರೆಗೆ ಯಾರಿಂದಲೂ ಕಂಡು ಹಿಡಿಯದಿರುವ ಅತಿ ವೇಗವುಳ್ಳ ಎರಡು ಗ್ಯಾಸ್ ಫಿರಂಗಿಗಳನ್ನು ರಚಿಸಿರುವರು. ಈ ಫಿರಂಗಿಗಳನ್ನು ಉಪಯೋಗಿಸುವುದರಿಂದ [illegible] ಒಮ್ಮೆಗೆ ಅನೇಕ ಗುಂಡುಗಳನ್ನು ಹಾರಿಸುವನು. ಅದಕ್ಕೆ ಬೇಕಾದ ಯಂತ್ರ ಸಾಮಗ್ರಿಗಳು ಬಹಳ ನಾಜೂಕಾಗಿ ಮಾಡಲ್ಪಟ್ಟಿವೆ. ಈ ನವೀನ ಶೋಧನೆಯು ಇಂಗ್ಲೀಷ ಸೈನ್ಯದ ಬಲವನ್ನು ಹೆಚ್ಚು ಹೆಚ್ಚಿಸಿದಂತಾಯಿತು.

— ನಮ್ಮ ಇಂಗ್ಲೆಂಡು ಹಾಗೂ ಬ್ರಿಟನ್ನಿನ ಬೇಂಕುಗಳೂ ಎರಡು ಅಮೇರಿಕದ ಬೇಂಕುಗಳೂ ಜತೆಯಿಂದ "ಅರ್ಗೆಂಟ್ಯಾನ್" ಸರಕಾರಕ್ಕೆ ದೇಶದಲ್ಲುಂಟಾದ ಗಲಭೆಯನ್ನು ಶಾಂತಿಗೊಳಿಸಲಿಕ್ಕೆ ಬೇಕಾದ ಧನಸಹಾಯವನ್ನು ಮಾಡಲಿರುವುವು. ಸರಕಾರವು ಹಿಂಗೆಯ [illegible] ಮಾಡುವ ಇರಾದೆಯಿಂದ ಸುಮಾರು ೧೪ ಮಿಲಿಯ ಸಾಲ್ಯಗಳನ್ನು ಕೇಳಿರುವರು.

— ದಾಂಪತ್ಯ ಜೀವನದಲ್ಲಿ ಸುಖ ಶಾಂತಿ ಹೊಂದದ ಇಟಲೀ ದೇಶದ ಗಂಡ ಹೆಂಡತಿಯರಿಬ್ಬರು ತಮ್ಮ ವಿವಾಹ ಬಂಧನದಿಂದ ವಿಮುಕ್ತರಾಗಬೇಕೆಂದು [illegible] ಹೆಂಡತಿಯನ್ನು ನೆರೆಯವನೊಬ್ಬನಿಗೆ ೧೦೦ ರೂಪಾಯಿಗೆ ಮಾರುತ್ತಲೂ [illegible] ಕೆಲವು ಕೋರ್ಟುಗಳಿಗೆ ಮಾರಿದನು. ಆಕೆಯ ವಿಕ್ರಯದ [illegible] ಗಂಡನಿಗೂ ನೆರೆಯವನಿಗೂ ವ್ಯಾಜ್ಯ ನಡೆಯುತ್ತಿದೆ. ಕಾರಣ—ಆಕೆಯನ್ನು ಅವಳ ತಾಯಿಯು ಬಂದು ನೆರೆಯವನ ಮನೆಯಿಂದ ಕರಕೊಂಡು ಹೋಗಿರುವಳು.

ಅಮೇರಿಕದ ಸ್ಯಾಂಟೋ ಡೊಮಿಂಗೋ ಎಂಬಲ್ಲಿ ಸುಂಟರಗಾಳಿಯ ಹಾವಳಿಯಿಂದಾಗಿ ೪೦೦೦ ಜನರು ಮೃತಪಟ್ಟಿರುವರು. ೨೫೦೦ ಜನರು ಗಾಯ ಹೊಂದಿರುವರು. ೨೫೦೦೦ ಜನರು ಒಪ್ಪೊತ್ತು ಇಲ್ಲದೆ ಅವಸ್ಥೆ ಪಡುತ್ತಿರುವರು. ೫೦೦೦ ಮನೆಗಳ ನೆಲಸಮವಾದವು. ಒಂದು ದೇಗುಲ ಆಸ್ಪತ್ರೆಯ ಕುಸಿತದಿಂದ ೫೦ ಜನ ಜಖಂ ಹೊಂದಿರುವರು. ತಮ್ಮ ಪ್ರಜೆಗಳ ಸಂತೋಷ ಪ್ರತ್ಯಕ್ಷ ದೇವತೆಯು ಭೇಟಿ ಮಾಡಿದ್ದಾನೆ.

— ಭೂಕಂಪದಿಂದ ನೇಪಲ್ಸ್ ಪಾಲ್ಮಾ ಮೆಸ್ಸಿನಾ ಪಟ್ಟಣವನ್ನು ಪೂರಾ ಧರೆಸ್ತಿ ಹಿಡಿಯುತ್ತಿರುವರು.

## ಒಳದೇಶ ವರ್ತಮಾನ.

— [illegible] ಸ್ವಯಂಸೇವಕರ ಪಥಿಕರನ್ನು ನಮ್ಮ [illegible] ಪೋಲೀಸರು [illegible] ದಿನ ಧಾಳಿಯಿಟ್ಟರು. ಈ ಸಂದರ್ಭ ಪೋಲೀಸರ [illegible] ಹಳೆಯ ಜೋಡುಗಳನ್ನೂ [illegible] ಕೊಂಡರು. ತರುವಾಯ ಪೋಲೀಸರು ದೇಶಸೇವಾ ಸಮಿತಿಯ ಸ್ವಯಂಸೇವಕರ ಅಧಿಕಾರಿಗಳ ಮನೆಯೊಳ ಹೊಕ್ಕು [illegible] ಕೆಲವು [illegible] ಎರಡು ಪೆಟ್ಟಿಗೆಗಳನ್ನು [illegible] ಆ ಮೇಲೆ ಪೋಲೀಸರು ಕಾಂಗ್ರೆಸ್ ಆಸ್ಪತ್ರೆಯನ್ನು ಹೊಕ್ಕು ಚಿಕಿತ್ಸೆ ಹೊಂದಲ್ಪಡುವ ರೋಗಿಗಳನ್ನು ಬಹಳವಾಗಿ ಉಪದ್ರಗೊಳಿಸಿದರು. ಔಷದದ ಸೀಸೆಗಳನ್ನೂ ಚಿಕಿತ್ಸೆಯ ಸಾಮಾನು [illegible] ತಕ್ಕೊಂಡು ಎತ್ತ ನೂರಾರಿಗೆ ಮಾಡಿರುವರು. ರಾಷ್ಟ್ರೀಯ ಧ್ವಜದ [illegible] ಮುರಿಯಲು ಪ್ರಯತ್ನಿಸಿದರು. ಆದರೆ ಆ ಕಂಭವು ಬಹು ಆಳದ ವರೆಗೆ ಹೂಳಲ್ಪಟ್ಟಿತ್ತು. ಅಷ್ಟರಿಂದ ಭಕ್ತಿ ಆ ಕೆಲಸವು ನೆರವೇರಲಿಲ್ಲ. ಪೋಲೀಸರು ಇನ್ನೊಂದು ಧ್ವಜಸ್ತಂಭವನ್ನು ಮುರಿಯಲುದ್ಯುಕ್ತರಾದರು. ಈ ಸಂದರ್ಭದಲ್ಲಿ ಸ್ವಯಂಸೇವಕರು ಧ್ವಜ [illegible] ಪೋಲೀಸರನ್ನು ಪ್ರತಿಬಂಧಿಸಿದರು, [illegible] ಮುಂದೆ ಬಂದ ಸ್ವಯಂಸೇವಕರನ್ನು ಮೆಟ್ಟಿಕೊಂಡೇ ಪೋಲೀಸರು ಮುಂದುವರಿಯಬೇಕಿತ್ತು.

[illegible] ಗಂಟೆ ರಾತ್ರೆಯಾಗಿತ್ತು. ಪೋಲೀಸರು ಈ ಗಲಭೆಯನ್ನು [illegible] ಜನರೆಲ್ಲರೂ ನೋಡುತ್ತಿದ್ದರು. ಸ್ವಯಂಸೇವಕರ ತಲೆ ಮುರಿಯುವಂತೆ ಹಲಕೆಲವು ದೊಣ್ಣೆಗಳನ್ನು ಕಾಲುಗಳ ಮೇಲೆ ಹೊಡೆದು ಹಿಂಸಿಸಿದರು.

ಆ ತರುವಾಯ ಪೋಲೀಸರು ಸ್ವಯಂಸೇವಕರ ಡಾಕ್ಟರಿಗೆ ಹೋಗಿ ಅಲ್ಲಿರುವ ಬೇರೆ ಕೆಲವು ಮುಖ್ಯ ಸಾಮಾನುಗಳನ್ನು ತಕ್ಕೊಂಡರು. ಆ ಮೇಲೆ ಅಲ್ಲಿನ ರಾಷ್ಟ್ರೀಯ ಸಭೆಯ ಸಂಸ್ಥೆಯ ೧೧ನೇ ಡಿಕ್ಟೇಟರರಾದ ಶ್ರೀ ಮೊಹ್ಸಿನ್ ಲೇಂಡರನ್ನು ದಸ್ತಗಿರಿ ಮಾಡಿದರು.

— ಕಲಕತ್ತೆಯ ಯುನಿವರ್ಸಿಟಿ ವಿಶ್ವವಿದ್ಯಾಲಯವನ್ನು ಪೋಲೀಸರು ಧಾಳಿಯಿಟ್ಟಿರುವರು. ಮಾತ್ರವಲ್ಲದೆ ಪೋಲೀಸರು ವಿದ್ಯಾರ್ಥಿಗಳನ್ನು ಬಹಳವಾಗಿ ಹೊಡೆಯುವದಕ್ಕಾಗಿ ವಿಚಾರಣೆ ಮಾಡುವುದಕ್ಕೆ ಯುನಿವರ್ಸಿಟಿಯ ಅಧಿಕಾರಿಗಳು [illegible] ಮೊದಲಾದವರಿಂದ ಕೂಡಿದ ಒಂದು ವಿಚಾರ ಸಮಿತಿಯನ್ನು ನಿರ್ಮಿಸಿರುವರು. ಅಪಾದಿತರಾಗಿ ಕಂಡು ಬಂದ ಪೋಲೀಸು ಅಧಿಕಾರಿಗಳ ಮೇಲೆ ದಾವಾ ನಡಿಸಲೂ ಕೂಡ ಈ ಕಮಿಟಿಗೆ ಸಂಪೂರ್ಣ ಹಕ್ಕು ಸ್ವಾತಂತ್ರವಿರುವದು.

— ಮುಂಬಾಯಿ ನಗರವು ಅತಿವೃಷ್ಟಿಯ ದೆಸೆಯಿಂದ ಬಹಳ ಸಂಕಷ್ಟ ಪರಂಪರೆಗಳಿಗೆ ಗುರಿಯಾಗಿರುವುದು. ಸುಮಾರು ೫೦ ಲಕ್ಷ ಹಾನಿಯುಂಟಾಗಿರುವದು. ಕಟ್ಟಡಗಳು ಕುಸಿದುಹೋಗಿರುವವು. ಗಂಟೆಯೊಳಗೆ ೪೦ ಇಂಚು ಮಳೆ ಬಿದ್ದಿರುವುದಂತೆ.

— ರಂಗೂನಿನ ಕಿಶ್ಚಿಯನ್ ಶಾಲೆಗಳಲ್ಲಿ ಬೈಬಲ್ ಪಾಠವನ್ನು ಅತಿ ಒತ್ತಾಯದಿಂದ ಹಠದಿಂದ ಹೇಳಿಕೊಡುತ್ತಿದ್ದುದಲ್ಲದೆ ಬೈಬಲನ್ನು ಕಲಿಯದ ಬೇರೆ ಮತದ ವಿದ್ಯಾರ್ಥಿಗಳನ್ನು ಬಹಳವಾಗಿ ನಿಂದಿಸುತ್ತಿದ್ದರು. ಈ ಕಾರಣದಿಂದಾಗಿ ಬೌದ್ಧ ಧರ್ಮದ ವಿದ್ಯಾರ್ಥಿಗಳೆಲ್ಲ ನೇತರ ಶಾಲೆಯಿಂದ ಹೊರಟಿರುವರು. ಶಾಲಾಧಿಕಾರಿಗಳು ಬೇರೆ ಕಾರಣಗಳನ್ನು ಸಮರ್ಥಿಸುವರು.

— ಅಹಮ್ಮದಾಬಾದಿನ ಗಿರಣಿ ಮಾಲೀಕರ ಪರವಾಗಿ ಎಸೆಂಬ್ಲಿಗೆ ಉಮೇದ್ವಾರರೇ ಇಲ್ಲವಂತೆ.

— ಮಹಾತ್ಮರ ಧರ್ಮಪತ್ನಿ ಪೂಜ್ಯ ಕಸ್ತೂರಿ ಬಾ ಗಾಂಧಿಯವರು ಇತ್ತೀಚೆಗೆ ಕೌನ್ಸಿಲ ಚುನಾವಣೆಯ ಸಂದರ್ಭದಲ್ಲಿ ವೋಟರಿನ ಮೇಲೆ ಬರುವ ಗೃಹಸ್ಥನೊಬ್ಬನನ್ನುದ್ದೇಶಿಸಿ ಕೌನ್ಸಿಲಿಗೆ ಮತ ಕೊಡಬಾರದೆಂದು ಅಂಗಲಾಚಿ ಬೇಡಿಕೊಂಡದಕ್ಕಾಗಿ ಒಬ್ಬ ಯುರೋಪಿಯನ ಸಾರ್ಜಂಟನು ಆ ವೃದ್ಧ ಮಾತೆಯ ಎದೆಯ ಮೇಲೆ ಬಲವಾಗಿ ಹೊಡೆದನು. ಆ ಕಾರಣದಿಂದ ಕಸ್ತೂರಿಬಾ ಗಾಂಧಿಯವರು ಅಸ್ವಸ್ಥರಾಗಿರುವರು. ಇನ್ನೂ ಕೂಡ ಅವರ ಆರೋಗ್ಯವು ಸಂಪೂರ್ಣವಾಗಿ ನೆಟ್ಟಗಾಗಿಲ್ಲ.

— ನವಾಬಗಂಜ್ ಎಂಬಲ್ಲಿ ಕರನಿರಾಕರಣ ಚಳವಳಿಯು ಅತ್ಯುತ್ಸಾಹದಿಂದ ಮುಂದುವರಿಯುತ್ತಿದೆ.

— ಶ್ರೀಮತಿ ಮೀರಾಬಾಯಿಯು ತಾ ೯—೯—೩೦ನೇ ದಿನ ಬೆಳಿಗ್ಗೆ ಘಾಟಕೋಪರಿನ ಕಲ್ಲುತ್ತಿಗೆ ಬಂದ ಸಂದರ್ಭದಲ್ಲಿ ಸ್ವಯಂ ಸೇವಕರು ಆಳೆಯು ಮಾಡಿದ ಅನಪೇಕ್ಷ ದೇಶ ಹಿತ್ಯಸಿ ಕಾರ್ಯಗಳ ಸ್ಮಾರಕಾರ್ಥವಾಗಿ ಧ್ವಜ ಹೇರುವಿಯ ಮೇಲೆ ದೊಡ್ಡದೊಂದು ಮೆರವಣಿಗೆಯ ಸಮಾರಂಭವು ಜರಗಿತು. ಈ ಪ್ರಸಂಗದಲ್ಲಿ ಪೋಲೀಸರು ಆಳೆಯನ್ನು ಮೆರವಣಿಗೆಯಲ್ಲಿ ಭಾಗವಹಿಸಿದ ಹಲ ಕೆಲವು ಸತ್ಯಾಗ್ರಹಿಗಳನ್ನು ಪ್ರತಿಬಂಧಿಸಿದರು. ಮೀರಾಬಾಯಿಯನ್ನು ಪೋಲೀಸರು ದಸ್ತಗಿರಿ ಮಾಡಿ ಲಾಕ್‌ಅಪ್ ಪೋಲೀಸು ಠಾಣ್ಯದ ವರೆಗೆ ಒಯ್ದರು. ತರುವಾಯ ಅಳೆಯನ್ನು ಬಿಡುಗಡೆ ಹೊಂದಿಸಿರುವರು.

— ಬಂಗಾಲ ಪ್ರಾಂತೀಯ ಶಾಸನ ಸಭಾ ಚುನಾವಣೆಯ ವೇಳೆಯಲ್ಲಿ ಶ್ರೀಮತಿ ದೇವಿಯವರು ಮತ್ತು ಆಳೆಯ ಪುತ್ರ್ಯರು ಪಿಕೆಟಿಂಗಿಗಾಗಿ ಶಿಕ್ಷೆ ವಿಧಿಸಲ್ಪಟ್ಟವರಾಗಿ ಕಾರಾಗೃಹವನ್ನು ಸೇರಿದರು. ಶ್ರೀಮತಿ ದೇವಿಯ ನಿಯಮದಂತೆ ಲೇವಲ ಆರು ತಿಂಗಳ ಶಿಕ್ಷೆಯ ಕಾಲವನ್ನು ಎರಡು ಪಟ್ಟು ಕೊಂಡು ಸೆರೆ ಸೇರಿದ ಸಂಗತಿ ಹೋಗಿರುವರು.

— ವಿ... ಯಲ್ಲಿ ಗಡಿಪೆಯ ವಿಗ್ರಹವನ್ನು ಮುರಿದವನಿಗೆ ಯಿಂದ ಮಹಮ್ಮದಿ ಎಂದು ಮನೀನು ಎಂದಲ್ಲಿ ಕೊಂಡು ಹೋಗುವದಕ್ಕಾಗಿ ಹಿಂದೂ ಮತ ಸಭ್ಯರೊಳಗೆ ದೊಡ್ಡದೊಂದು ಗಲಭೆಯುಂಟಾಗಿ ತಾನೊಂದು ಮಾಡಿದ ಎಂದು ಅಲ್ಲಿಂದ ಕೆಲವು ಗಾಯವಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ... ಪೋಲೀಸರು ಸತ್ಯಾಗ್ರಹಿಗಳನ್ನು ಬಹಳವಾಗಿ ಶಾಂತ ರಕ್ಷಣೆಗೆ ಪ್ರಯತ್ನಿಸಿದರು. ಆದರೆ ಪಾಳೆಗಳವರು ಕಲ್ಲು ... ಎಸೆಯಲ್ಪಟ್ಟ ಸಿಕ್ಕಿಸಲ್ಪಟ್ಟಿದ್ದವು. ಪೋಲೀಸರು ಅವರೆಲ್ಲರನ್ನು ಲಾಟಿ ಪ್ರಹಾರಗಳಿಂದ ಚದರಿಸಿದರು. ವಾದಿನ ದಿವಸ ಒಳಗೆ ಗಣಪತಿ ವಿಗ್ರಹವನ್ನು ಅದೇ ದಾರಿಯಿಂದ ಸಮುದ್ರ ತೀರಕ್ಕೆ ಕೊಂಡು ಹೋಗಬೇಕೆಂದು ಹಿಂದೂಗಳು ಬಹಳವಾಗಿ ಹಟ ಹಿಡಿದರು. ... ಕ್ಷಣದಲ್ಲಿ ಕೊಂಡು ಹೋಗಿಯೇ ಹೋದರು ... ಮನೆಯ ಮೇಲೆ ... ಮಾರ್ಗದಂತೆ ... ಪಟ್ಟಣದ ಮೇಲೆ ಮಸಜಿದಿನ ಹಿಂದುಗಳ ಮಹಾತಿಗೆ ಒಳಗಾಗಿ ವಿಗ್ರಹವನ್ನು ಮರಳಿಯ ಮರದ ಒಯ್ಯುವ ... ಸಮಯ ದಿ ತಿರಸ್ಕಾರಿಯೂ ಪ್ರತಿಬಂಧಿಸಲಾರದೆ ... ಒಪ್ಪಿಗೆ ಕೊಟ್ಟರು. ... ಶಾಂತವಾಗಿರುವದು.

## ದಕ್ಷಿಣ ಕನ್ನಡ.

**ಮಂಗಳೂರು:**— ಮಂಗಳೂರು ತಾಲೂಕು ಬೋರ್ಡ ಸಭೆಯು ತಾಲೂಕು ಬೋರ್ಡ ಆಫೀಸಿನಲ್ಲಿ ತಾ ೨೭—೯—೩೦ನೇ ಶನಿವಾರ ಅಪರಾಹ್ನ ಘಂಟೆ ೩ ತಾಸಿಗೆ ಸರಿಯಾಗಿ ಜರಗಲಿಕ್ಕಿದೆ.

ಕಳೆದ ವಾರದಲ್ಲಿ ಟ್ರಾನ್ಸಫರು ಮಾಡಲ್ಪಟ್ಟ ಸಬ್ ಇನ್ಸ್‌ಪೆಕ್ಟರ ಸ್ಥಾನದ ಉಮೇದ್ವಾರರ ಪೈಕಿ ಶ್ರೀ ಗೋಪಾಲ ಗಾಸ್ಪರ್ ಬಿ ಡಿ ಸೋಜಾ ಸಿಲ್ವೆಸ್ಟರ್ ಡಿ ಪಿರೇರಾ, ಕೆ. ಪಿ ಅಂತಪ್ಪ ಮರೋಳಿ ಅಮ್ಮಣ್ಣ ಎಚ್ ಸಂಜೀವ ಶೆಟ್ಟಿ ಮತ್ತು ತೀನ ಶೆಟ್ಟಿ ಎಂಬ ೬ ಮಂದಿಯನ್ನು ಚುನಾಯಿಸಿರುವರು. ಇವರೆಲ್ಲರೂ ಇದೇ ತಿಂಗಳ ೨೬ನೇ ತಾರೀಕಿನಲ್ಲಿ ಕಲ್ಲಿಕೋಟೆಯಲ್ಲಿರುವ ಡಿಪ್ಯುಟಿ ಇನ್ಸ್‌ಪೆಕ್ಟರ್ ಜನರಲ್‌ರವರಿಂದ ಪರೀಕ್ಷಿಸಲ್ಪಡುವರು.

ದಕ್ಷಿಣ ಕನ್ನಡಾ ಜಿಲ್ಲಾ ಪ್ರಚಾರಕ ಕಮಿಟಿಯವರು ಶಿಫಾರಸು ಮಾಡಿದ ಮೇರೆಗೆ ಮದ್ರಾಸು ಪ್ರಾವಿನ್ಸಿಯಲ್ ಕಮಿಟಿಯವರ ೧ ಶ್ರೀ ಜ್ಞಾನೋದಯ ಸಮಾಜಕ್ಕೆ (ಮಂಗಳೂರ) ರೂ ೬೦೦ನ್ನು ಆರ್ಯ ಯುವಕ ಸಮಾಜ (ಬೇಕಲಕ್ಕೆ) ರೂ. ೨೫೦ನ್ನು ಘಟಪ್ರಭಾ ಗೌಡ ವಿದ್ಯಾರ್ಥಿ ಸಂಘ (ಪುತ್ತೂರು)ಕ್ಕೆ ರೂ ೩೦೦ನ್ನು, ಮದ್ಯಪಾನ ನಿಷೇಧದ ಕುರಿತು ಪ್ರಚಾರ ಕೆಲಸ ನಡೆಸುವುದಕ್ಕಾಗಿ ಸ್ಯಾಂಕ್ಷನ್ ಮಾಡಿರುವರು.

ಕಳೆದ ತಾರೀಖು ೧—೪—೩೦ರಿಂದ ೧೮ ೯—೩೦ರ ವರೆಗೆ ಮಂಗಳೂರಲ್ಲಿ ಜುಮ್ಲಾ ೧೧೮—೩೧ ಇಂಚುಗಳ ಮಳೆ ಬಿದ್ದಿರುವದು.

ಮಾನ್ಯ ಗವರ್ನರ್ ದೊರೆಯವರು ಅಕ್ಟೋಬರ ತಾ ೧೩ಕ್ಕೆ ಮಡಿಕೇರಿಯಾಗಿ ನಮ್ಮ ಜಿಲ್ಲೆಗೆ (ಮಂಗಳೂರ) ಬಂದು ಉಡುಪಿ ಕುಂದಾಪುರ ಪ್ರಾಂತ್ಯಗಳನ್ನು ಸಂಚಾರ ಮಾಡಿ ಬರುತ್ತ ಕಾರ್ಕಳ ಮೊದಲಾದ ಊರುಗಳನ್ನು ಸಂದರ್ಶಿಸಿ ಸುಮಾರು ೧೭—೧೮ನೇ ತಾರೀಕಿಗೆ ಕಾಸರಗೋಡು ಮಾರ್ಗವಾಗಿ ಕಣ್ಣಾನೂರಿಗೆ ಚಿತ್ತೈಸಲಿರುವರು. ದೊರೆಗಳ ಸ್ವಾಗತದ ಬಗ್ಗೆ ನಮ್ಮ ತಾಲೂಕು ಬೋರ್ಡಿನವರು ೩೦೦ ರೂಪಾಯಿಗಳನ್ನು ಮಂಜೂರು ಮಾಡಿರುವರೆಂದು ತಿಳಿಯುತ್ತದೆ.

ತಾರೀಕು ೧೩ ೯—೩೦ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ೨೩ ಮರಣಗಳೂ ೩೬ ಜನನಗಳೂ ಆಗಿವೆ.

ಬೋಳೂರ ಬೊಕ್ಕ ಪಟ್ಣದ ಕ್ಷಯರೋಗದ ಮಾತೃ... ಧರ್ಮಾಸ್ಪತ್ರೆಯಲ್ಲಿ ಕಳೆದ ಆಗೋಸ್ತು ತಿಂಗಳಲ್ಲಿ ಚಿಕಿತ್ಸಿಸಲ್ಪಟ್ಟ ರೋಗಿಗಳ ವಿವರ — ೧ ಅಭಿನವ ರೋಗಿಗಳ ಸರ್ಖ (ಗಂಡಸರು ೩೦, ಹೆಂಗುಸರು ೨೬೩, ಮಕ್ಕಳು ೨೮೧) ಹೊಸ ರೋಗಿಗಳ ಪೈಕಿ ... ಆದರಿಂದ ಸೇರಿ ತಿಂಗಳ ಹಿಂದೆ ಗಳು ... ಸಲ್ಲಾಸದ ... ನರೂ ಆಗಿದ್ದರು. ... ದಿನವೊಂದಕ್ಕೆ ಸರಾಸರಿ ... ಅತ್ಯಧಿಕ ಸಂಖ್ಯೆ — ... ದಿವಸದಲ್ಲಿ ... ರೋಗಿಗಳು ೧೮೭.

ದಕ್ಷಿಣ ಕನ್ನಡ ಜಿಲ್ಲೆಯ ಎಲೋಪಥಿಕ್ ಡೋಕ್ಟರರ ಸಂಘದ ಮಹಾಸಭೆಯು ಇದೇ ತಿಂಗಳ ತಾರೀಕು ೨೭ ೯—೩೦ನೇ ದಿನ ಅಪರಾಹ್ನ ಘಂಟೆ ೫ ತಾಸಿಗೆ ಸರಿಯಾಗಿ ವೆನ್ಲೊಕ ಆಸ್ಪತ್ರೆಯಲ್ಲಿ ಜರಗಲಿಕ್ಕಿದೆ. ಕೆಪ್ಟನ್ ಡಬ್ಲ್ಯು ... ಸಾಧಾರಣ ಜ್ವರ ... ವೆಂಬ ವಿಷಯದ ಕುರಿತು ಚರ್ಚಿಸಲಿಕ್ಕಿರುವರು. ಎಲ್ಲಾ ಡೋಕ್ಟರರನ್ನು ಆಮಂತ್ರಿಸೋಣವಾಗಿದೆಯೆಂದು ಈ ಸಂಘದ ಕಾರ್ಯದರ್ಶಿಯವರಿಂದ ತಿಳಿಯಪಡಿಸೋಣವಾಗುತ್ತದೆ.

ಗಾತ್ರಗಳ ಹರಾಜು — ಮಂಗಳೂರಲ್ಲಿ ಕಳೆದ ... ವಿಕ್ರಯದ ಗಾತ್ರಗಳ ... ನಡೆಯಿತು ... ಗಾತ್ರಗಳು ... ದಿವಸ ... ಕ್ರಮವಾಗಿ ... ವಾರ ಕರೆದ ... ಎಸೆಯುತ್ತಿದ್ದ ... ಶಕ್ಯವೆ ...

### ಮಂಗಳೂರಿನ ಸತ್ಯಾಗ್ರಹ ರಂಗ

ದಕ್ಷಿಣ ಕನ್ನಡ ಜಿಲ್ಲೆಯ ಮಾದರಿ ... ಜಿಲ್ಲೆಗಳಲ್ಲಿ ಸತ್ಯಾಗ್ರಹ ಸಂಬಂಧವಾಗಿ ತೀವ್ರ ... ಸಹಾಯ ... ಅಲ್ಲವೆಂದು ... ಪ್ರಧಾನ ಶಕ್ತಿ ... ಹಾಗೂ ಜಿಲ್ಲೆಯ ... ಪಟ್ಟಣದ ... ರಾಷ್ಟ್ರಸೇವಾ ತತ್ವ ... ಯವು ... ಮಂಗಳೂರಿನ ... ಕೌನ್ಸಿಲಿನ ... ಪ್ರಕರಣವು ... ಸತ್ಯಾಗ್ರಹ ... ಬಂದಿದೆ.

... ಸತ್ಯಾಗ್ರಹ ... ಮಂಗಳೂರಿಗೆ ... ಪ್ರಚಾರಕ್ಕೆ ... ಹಿಂದಕ್ಕೆ ...

ಇವರನ್ನು ... ಪ್ರಸಂಗದಲ್ಲಿ ... ಮಂಗಳೂರು ...

ಇವೆಲ್ಲ ಈ ಜಗ ... ಮಂಗಳೂರಿನ ಸತ್ಯಾಗ್ರಹ ಚಳವಳಿಯ ಪ್ರತ್ಯಕ್ಷ ಕಾರ್ಯತೆಯನ್ನು ತೋರಿಸುವವು.

### ಖಾದಿಯನ್ನೇ ಧರಿಸಿರಿ

ಇಂದಿಗೆ ನಾವು ವಾಸಮಾಡುತ್ತಿರುವ ಭಾರತ ಭೂಮಿಯು ಹತ್ತಿಯ ಗಿಡಗಳಿಂದ ತುಂಬಿದ ನಾಡಾಗಿರುತ್ತದೆ. ... ಮಾಡುವ ಧನ ಸಂಪಾದನೆಯಲ್ಲಿ ಮುಖ್ಯವಾದವೂ ಹೊಟ್ಟೆ ಬಟ್ಟೆಗಾಗಿಯೇ ವ್ಯಯ ಮಾಡಬೇಕಾಗುವದು. ಅವರಲ್ಲಿಯೂ ನಮ್ಮ ಹಿಂದುಸ್ಥಾನದ ಜನರ ಸ್ಥಿತಿಗತಿಗಳು ಬಹಳ ಕಷ್ಟದಾಯಕವಾಗಿರುವುದರಿಂದ ಹೊಟ್ಟೆಗಿದ್ದರೆ ಬಟ್ಟೆಗಿಲ್ಲ ಬಟ್ಟೆಗಿದ್ದರೆ ಹೊಟ್ಟೆಗಿಲ್ಲ ಎಂಬಂತೆ ಇರುವರು. ಮನುಷ್ಯನು ಒಂದು ಹೊತ್ತು ಊಟವನ್ನಾದರೂ ಬಿಡಬಲ್ಲನು. ಆದರೆ ಬಟ್ಟೆ ಬರೆಗಳಿಲ್ಲದೆ ಅವನೊಂದು ನಿಮಿಷವಾದರೂ ಕಳೆಯಲಾರನು. ಆದ್ದರಿಂದ ಬಟ್ಟೆಯೇ ಹೊಟ್ಟೆಗಿಂತ ಶ್ರೇಷ್ಠವಾಗಿರುವುದೆಂದೆ ಊಹಿಸಲಾಗುತ್ತದೆ.

ಜನರು ಹುಟ್ಟಿಗೆ ನಾಚಿಕೆ ... ಬಟ್ಟೆಯನ್ನೇ ಅಪೇಕ್ಷಿಸುವರು. ... ನಾಗರಿಕರು ಬರುವ ಬಟ್ಟೆಯೆ ಒಪರೆ ವಿಲಾಯತಿಯ ಗಿರಣಿಯ ... ಇವನ್ನೇ ... ಅನೇಕ ಮಂದಿ.

ಹತ್ತಿಯು ನಮ್ಮಲ್ಲೇ ಬೆಳೆಯುವದೆಂಬ ವಿಷಯವು ಪ್ರತಿಯೊಬ್ಬ ಭಾರತೀಯನೂ ಒಪ್ಪತಕ್ಕದ್ದೇ ಆಗಿರುತ್ತದೆ. ... ದೇಶದ ... ಹಾಗೂ ... ಹತ್ತಿಯ ... ಆಯೋಗ್ಯವು ... ಹತ್ತಿಯು ... ಬೆಳೆಯುವದಿಲ್ಲ. ಅಂದ ಮೇಲೆ ... ತಯಾರಿಸುವ ಬಗೆ ಹೇಗೆ?

ಹತ್ತಿಯು ನಮ್ಮ ದೇಶದಿಂದಲೇ ವಿಲಾಯತಿಗೆ ಕಳುಹಿಸಲ್ಪಡುವದು. ಆ ವೇಳೆ ಅಲ್ಲಿ ಗಿರಣಿಗಳ ಮೂಲಕ ... ಬಟ್ಟೆಯನ್ನು ತಯಾರಿಸಿ ಹಿ ಮದೇಶಕ್ಕೆ ಕಳುಹಿಸುವರು. ಹಾಗೂ ನಮ್ಮ ಭಾರತ ಭೂಮಿಯ ಹತ್ತಿಯ ... ನಮ್ಮ ಬಟ್ಟೆಬರೆಗಳನ್ನು ತಯಾರಿಸುವ ಕೆಲಸವನ್ನು ... ವಹಿಸಿಕೊಂಡಿರುವರು.

ಅಂದ ಮೇಲೆ ನಮ್ಮ ದೇಶದ ... ಕೈಗೆ ನಾವೇ ಕಟ್ಟಿಕೊಟ್ಟಂತಾಯಿತಲ್ಲವೆ?

ನಮ್ಮ ಭಾರತ ಭೂಮಿಯ ... ಬಟ್ಟೆ ಬರೆಗಳ ತಯ್ಯಾರಿಗಾಗಿ ... ದೇಶದ ... ಹತ್ತಿಯ ... ಕೆಲಸವು ಭಾರತ ... ಕೆಲಸ ... ಅಥವಾ ... ಕೆಲಸವು ... ಹಾಗೂ ...

**ಬಂಟವಾಳ**— ಈ ... ಪಾಠ್ಯದ ... ಸಭೆಯು ... ಬೋರ್ಡ ಪ್ರೆಸಿಡೆಂಟರ ... ತಾಲೂಕು ಬೋರ್ಡ ... ತಿಂಗಳ ... ಉಂಟಾಗಿದೆ ...

**ನಂದಾವರ:** ... ತಾಲೂಕು ಬೋರ್ಡ ಪ್ರೆಸಿಡೆಂಟರು ... ನಂದಾವರ ... ಶಾಲೆ ... ವಿದ್ಯಾರ್ಥಿ ...

**ಕಾರ್ಕಳ**— ... ಕಾಲೇಜ ... ಶ್ರೀ ... ಕಾಲೇಜು ... ಪ್ರಾಂತೀಯ ... ಕಾರ್ಯದರ್ಶಿಯವರ ... ಸಾಧಿಸಿರುವರು.

**ಗುರುಪುರ**— ... ಕ್ರೈಸ್ತ ... ಶಾಲೆಗಳ ... ವಿಷಯ ... ಪ್ರಯತ್ನಿಸಿ ... ಕಾರ್ಯ ಸಾಧಿಸಿ ಕೀರ್ತಿಯನ್ನು ಸಂಪಾದಿಸಿಕೊಳ್ಳುವರು ಲೇಸು

**ಶಾಲಿವಾಹನಶಕ ೧೮೫೨ನೇ ಪ್ರಮೋದೂತ ಸಂ| ಭಾದ್ರಪದ ಬ| ೧೪ ಶನಿವಾರದಿಂದ ಪ್ರಮೋದೂತ ಸಂ|ರದ ಆಶ್ವೀಜ ಶು| ೪ ಶುಕ್ರವಾರದ ವರೆಗಿನ ಪಂಚಾಂಗ.**

(ಗ್ರಹಸ್ಥಿತಿಯ ಸಿಂಹ—ಸೋಮ)

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | ಉತ್ತರಾಯಣ | ಸೂರ್ಯ ಉ | ಸೂರ್ಯ ಅಸ್ತ |
|---|---|---|---|---|---|---|---|---|
| 20 | ಶನಿ | ೧೪ | ೪೩ ೧೪ | ಆಶ್ಲೇಷಾ | ೦ ೩೩ | ೪ | 6 22 | 6 28 |
| 21 | ರವಿ | ೧೪ | ೩೬ ೧೬ | ಪುಬ್ಬ | ೫೩ ೧೪ | ೫ | 6 22 | 6 27 |
| 22 | ಸೋಮ | ● | ೩೦ ೪೪ | ಉತ್ತರಾ | ೪೯ ೨ | ೬ | 6 22 | 6 2" |
| 23 | ಕುಜ | ೧ | ೨೫,೩೨ | ಹಸ್ತ | ೪೬ ೧ | ೭ | 6 22 | 6 26 |
| 24 | ಬುಧ | ೨ | ೨೧ ೧೬ | ಚಿತ್ತಾ | ೪೩ ೪೪ | ೮ | 6 22 | 6 25 |
| 25 | ಗುರು | ೩ | ೧೬,೪೪ | ಸ್ವಾತಿ | ೪೨ ೩೦ | ೯ | 6 22 | 6 24 |
| 26 | ಶುಕ್ರ | ೪ | ೧೫ ೧೩ | ವಿಶಾಖಾ | ೪೨ ೧೬ | ೧೦ | 6 22 | 6 24 |

## ಮಂಗಳೂರಿನ ವಾಯುಸ್ಥಿತಿ.

| ತಾರೀಖು Date | Temperature ಉಷ್ಣ (ಕಾವು) Maximum ಹೆಚ್ಚಾದದ್ದು | | Rainfall ಮಳೆ ದಿನದ ಮಳೆ | ಒಟ್ಟು ಮಳೆ |
|---|---|---|---|---|
| | | Minimum ಕಡಿಮೆ | | |
| 12 | 86— 2 | 72 – 5 | 2—64 | — |
| 13 | 81— 0 | 73— 3 | 1—20 | — |
| 14 | 86— 7 | 73— 9 | 0– 23 | — |
| 15 | 86— 8 | 74— 6 | 0—23 | — |
| 16 | 84 – 3 | 72 – 8 | 0—95 | — |
| 17 | 86 – 0 | 74 3 | 1– 46 | — |
| 18 | 85 – 0 | 75 – 5 | 0—06 | 118 31 |

## ಮಂಗಳೂರಿನ ಪೇಟೆ ಧಾರಣೆ.

| ಜೀನಸು | ಇಂದ ರೂ. | ಆ | ವರೆಗೆ ರೂ. | ಆ |
|---|---|---|---|---|
| ವಸ್ತ್ರ | – | 8 | 5– | 0 |
| ಗುಡ | – | 1 | – | |
| ರಾಶಿ | – | 7 | 8 – | |
| ಊರ ಅವ್ವಲ್ ಬೆಲ್ಲ | | 8 | 8 | 11 |
| ರಂಗೂನ್ ಬೆಲ್ಲ ಗೋಣಿ ಗಳ್ಳ | – | 8 | 12 | 12 |
| ಸಂಗ್ರಿ | – | [illegible] | – | 14 |
| ಎಲ್ಲ ರೂಬೆಲ್ಲ ಮುಡಿ ಗಳ್ಳ | 6 – | 12 | – | 0 |
| ಗೋಧಿ ಗೋಣಿ ಗಳ್ಳ | 15 – | 8 | 18 | 0 |
| ಹುರುಳಿ ಗೋಣಿ ಗಳ್ಳ | – | 0 | – | 0 |
| ಕಡಲೆ ಗೋಣಿ ಗಳ್ಳ | 12 – | 8 | 16 – | 8 |
| ತೊಗರಿ ಗೋಣಿ ಗಳ್ಳ | 12 – | [illegible] | 15 – | 0 |
| ತೊಗರಿಬೇಳೆ ಗೋಣಿ ಗಳ್ಳ | 16 – | 8 | 46 | 0 |
| ಉದ್ದು ಗೋಣಿ ಗಳ್ಳ | 14 – | 0 | 15 | 0 |
| ಹೆಸರು ಗೋಣಿ ಗಳ್ಳ | 14 – | 8 | – | |
| ಊರ ಬಿಳಿ ಖಂಡಿ ಗಳ್ಳ | 5[illegible] – | 8 | 63 | 8 |
| ಉಪ್ಪು ಗೋಣಿ ಗಳ್ಳ | 4 – | 10 | | [illegible] |
| ಮೆಣಸು ಖಂಡಿ ಗಳ್ಳ | 7[illegible] | 0 | [illegible] | |
| ಕೊಬ್ರಿ ಖಂಡಿ ಗಳ್ಳ | 2[illegible] – | | 28 | 0 |
| ಎಳ್ಳೆಣ್ಣೆ ಖಂಡಿ ಗಳ್ಳ | [illegible] | | [illegible] | [illegible] |
| ಕೊಬ್ರಿ ಎಣ್ಣೆ ಮುಡಿ ಗಳ್ಳ | | 5 | [illegible] – | 4 |
| ಎಳ್ಳೆಣ್ಣೆ ಮುಡಿ ಗಳ್ಳ | | 0 | | 5 |
| ಜಮಖಂಡಿ ಪಟ್ಟೆಗೆ ಗಳ್ಳ | 4 7 – | | 8 | 12 |
| ಮೋರಿಸ ಸಕ್ಕರೆ ಮುಡಿ ಗಳ್ಳ | 3 – | 6 | 3 – | 10 |
| ಹೊಸ ಮೆಣಸು | 6 – | 4 | – | 0 |
| ಸಾಸಿವೆ ಮುಡಿ ಗಳ್ಳ | 8 – | [illegible] | 8 – | 12 |
| ಕೊತ್ತಂಬರಿ ಮುಡಿ ಗಳ್ಳ | 2 – | 8 | [illegible] | 12 |
| ಪೇಟಿಯ ಕಾಫಿ ಖಂಡಿ ಗಳ್ಳ | 1[illegible]0 – | [illegible] | [illegible]0 – | [illegible] |
| ಕಾಳುಮೆಣಸು ಖಂಡಿ ಗಳ್ಳ | 24[illegible] | 0 | | |
| ಯೇಲಕ್ಕಿ ಮಣ ಗಳ್ಳ | 32 – | 0 | – | |
| ಗೇರುಬೀಜ ಮುಡಿ ಗಳ್ಳ | 4 – | 2 | | 4 |
| ಕಪ್ಪುಕ ಖಂಡಿ ಗಳ್ಳ | 42 – | 8 | [illegible]4 – | 0 |
| ಹೊಂಪ್ಪು ತಗಡು ಮಣ ಗಳ್ಳ | 4 | 8 | 14 | 10 |
| ಹೊಂಪ್ಪು ಪಾತ್ರಗಳು ಮಣ ಗಳ್ಳ | 22 – | 0 | 23 – | 0 |
| ಪೀಡಿವಳ್ಳೆ ಸೇರು ಗಳ್ಳ | 12 – | 4 | 12 – | 8 |
| ಹಿತ್ತಾಳೆ ತಗಡು ಮಣ ಗಳ್ಳ | 13 – | 0 | 13 – | 4 |
| ತವಸು ಗಳ್ಳ | 13–10 | 0 | – | |
| ಮಣಿಕೊಂಬೆ ಖಂಡಿ ಗಳ್ಳ | 37 – | 8 | 43 – | 12 |
| ಪಿವೇರಿ ಕಾಫಿ ಖಂಡಿ ಗಳ್ಳ | 130 – | | – | |
| ಹೊಸ ಅಡಿಕೆ | 85 – | | 120 – | |
| ಹಳೆ ಅಡಿಕೆ | 100 – | | 120 – | |


# Chikmagalur Public Conveyance Motor Service.

## CHIKMAGALUR.

# ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ ಕನ್ವೆಯನ್ಸ್. Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಘಂಟೆಗ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗ 1¼ ಘಂಟೆ ಅವಕಾಶಕೊಟ್ಟು 7¼ ಘಂಟೆಗ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕ, ಮೈಸೂರುಗಡಿಗೆ 11 45ಕ್ಕು, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ಬಿ. 1 30ಕ್ಕು, ಬೆಳ್ತಂಗಡಿಗೆ 1 45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟ್ಯಾಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ ಕಾಸರಗೋಡು, ಮಲಬಾರು ಕಣ್ಣನೂರು ಪ್ರಾಂತಗಳಿಗೂ ಅಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10 30ಕ್ಕೆ ಬೆಳ್ತಂಗಡಿಗೂ 11 ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ, 12 ಗಂಟೆಗೆ ಚಾರ್ಮಾಡಿಗೂ 12 30ಕ್ಕೆ ಮೈಸೂರು ಗಡಿಗೂ, ಸೇರಿ ಅಲ್ಲಿಂದ ಒಡನೆ ಹೊರಟು 2 30ಕ್ಕೆ ಕೊಟ್ಟಿಗೆಹಾರಕ್ಕೂ ಸುಮಾರು 4 ಗಂಟೆಗ ಮೂಡಗೆರೆಗೂ 5 ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೀರಿಸಿಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿದ್ದುಕೊಂಡು ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7 30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗ ಹೋಗುವ ಪ್ರಯಾಣಿಕರಿಗ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗ ಹುಬ್ಬಳ್ಳಿಗೂ ಗದಗ್, ಪಂಢರಪೂರ ಗೋವಾ, ಲೋಂಡ, ಪೂನಾ ಮತ್ತು ಮುಂಬಯಿ, ವಗೈರೆ ಕಡೆಗಳಿಗ ಪ್ರಯಾಣ ಮಾಡತಕ್ಕವರಿಗ ಅನುಕೂಲಪಡಿಸುತ್ತೆ.

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8 30ಕ್ಕೆ ಹೋದುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗ ಕಡೂರಿಗೆ ಸೇರಿ ಬೆಂಗಳೂರು ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು ಮೈಸೂರ, ಮದ್ರಾಸ್ ವಗೈರೆ ಕಡೆಗಳಿಗೂ 3 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ, ವಗೈರೆ ಪ್ರಾಂತಗಳಿಗ ಹೋಗತಕ್ಕ ಪ್ಯಾಸೆಂಜರುಗಳಿಗ ಅನುಕೂಲಪಡಿಸುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ ಎನ್ ಹನುಮಂತಪ್ಪ, ಫ್ರಾಮರೂಜ್ ಸೊರಾಬ್, ಕೆ ಸೂರಪ್ಪ ಸೆಟ್ಟಿ.

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ. ಪಿ. ಸಿ. ಕಂಪೆನಿಯವರ ಟಿಕ್ಕಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

# THE CANARA PUBLIC CONVEYANCE CO., LTD, MANGALORE.

(ESTABLISHED 1914)

# ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್.

## ಮಂಗಳೂರು.

### ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡ ಇರುವದು

**ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ**

ನೋಡಬೇಕೆನ್ನುವಿರಾದರೆ ಪ್ರತಿದಿನವೂ ಮೂಲ್ಕಿ ಕಾಪು ಕರಾವಳಿ ಮಾರ್ಗವಾಗಿಯೂ ಎರಡು ಕರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕು ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

**ಕಾರ್ಕಳ ಗೋಮಟೇಶ್ವರನ**

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

**ಕೊಲ್ಲೂರು ಮೂಕಾಂಬಿಕಾ ದೇವಾಲಯ**

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೆ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಡಿಸ್ಟ್ರಿಕ್ಟಿಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಆಗುಂಬೆ ಮಾರ್ಗವಾಗಿ ಶಿಮೊಗ್ಗೆಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

**Secretary,**

*The Canara Public Conveyance Co., Ltd., Mangalore.*

## ವಿ ವಿ ಧ ಸ ಮಾ ಚಾ ರ ಗ ಳು.

### ಸ್ವದೇಶಿ ಕೈಗಾರಿಕೆ.

ಮಹಾತ್ಮಾಜೀಯವರ ಸತ್ಯಾಗ್ರಹ ಚಳವಳಿಯಿಂದಾಗಿ ಹಿಂದೂಸ್ಥಾನದ ವೃತ ಕೈಗಾರಿಕೆಯು ಪುನರ್ಜೀವಿತವಾಗಿರುವುದೆಂದು ಊಹಿಸಲಾಗುತ್ತದೆ. ಹೈದಾರಾಬಾದಿನ ಸಿಂಧ್ ಬ್ಯಾಂಕ್ಸಿನಲ್ಲಿಯೂ, ಬೇರೆ ಕೆಲವೆಡೆಗಳಲ್ಲಿಯೂ ಸ್ವದೇಶೀ ಕೈಗಾರಿಕೆಯ ಸಂಸ್ಥೆಗಳನ್ನು ಏರ್ಪಡಿಸಿರುವರು. ಆದ ಕಾರಣ ಹಿಂದೀ ವ್ಯಾಪಾರಸ್ಥರಿಗೂ ಕೈಗಾರಿಕೆಯ ಅಭಿರುಚಿಯುಳ್ಳವರಿಗೂ ತಮ್ಮ ವ್ಯಾಪಾರ ಹಾಗೂ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಲು ಇದೊಂದು ಉತ್ತಮ ಸಂದರ್ಭವಾಗಿರುತ್ತದೆ

* * *

### ಸ್ವಯಂಸೇವಕರ ಕಷ್ಟಗಳನ್ನು ಗಮನಿಸಿರಿ!

ದೇಶ ಸೇವೆಯಲ್ಲೇ ನಿರತರಾಗಿ ರಾಷ್ಟ್ರೋನ್ನತಿಯ ಭಾವೀ ಸಂದೇಶವನ್ನು ಸಾರಿದ [illegible] ಆತ್ಮಿಕ ಶಕ್ತಿಯಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಸ್ವಯಂಸೇವಕ ವೀರಾಗ್ರಣಿಗಳು ಆಸ್ಪತ್ರೆಗಳಲ್ಲಿ ನರಳುವದನ್ನು ನೋಡಿ ನೋಡಿ ಸುಮ್ಮನಿರುವಿರಾ! ಭಾರತ ಬಂಧುಗಳೇ! ಇದಕ್ಕಾಗಿ ಮುಂಬಯಿಯ ಪಿ. ಸಿ. ಸಿ. ಯವರು ಪ್ರತ್ಯೇಕ ಒಂದು ಕಮಿಟಿಯನ್ನು ಏರ್ಪಡಿಸಿರುವರು. ಈ ಕಮಿಟಿಯವರು ರಾಷ್ಟ್ರೋನ್ನತಿಗಾಗಿ ಸೆರೆಮನೆ ದಸ್ತಗಿರಿ ಮಾಡಲ್ಪಟ್ಟು ಬಂದೀವಾಸವನ್ನು ಅನುಭವಿಸುವ ಮತ್ತು ಗಾಯ ಹೊಂದಿ ನರಳುತ್ತಿರುವ ಸ್ವಯಂಸೇವಕರನ್ನು ಯೋಗ್ಯ ರೀತಿಯಿಂದ ಆರೈಕೆ ಮಾಡುವರು. ಮಾತ್ರವಲ್ಲದೆ ಅವರಿಂದಾಗಿ ಅವರ ಕುಟುಂಬಕ್ಕೂ ಕೂಡಾ ಅಲ್ಪಸ್ವಲ್ಪ ಖರ್ಚಿಗೆ ಕೊಡಿಸುವ ವಿಚಾರಗಳು ನಡೆಯುತ್ತಿರುವವು. ಈ ಕಮಿಟಿಯವರು ಸ್ವಯಂಸೇವಕರ ಮೇಲ್ಮೆಗಾಗಿ ಹಾಗೂ ಮುಂದಿನ ಸ್ವಾತಂತ್ರ್ಯ ರಕ್ಷಣೆಗಾಗಿ ಭಾರತೀಯರಿಂದ ದ್ರವ್ಯ ಸಹಾಯವನ್ನು ಯಥಾ ಶಕ್ತಿಯ ಮೇರೆಗೆ ಕೋರುತ್ತಿರುವರು. ಈ ಕೋರಿಕೆಯನ್ನು ಅನೇಕ ಮಹನೀಯರು ಪೂರೈಸಿಕೊಡುತ್ತಿರುವರು.

* * *

### ಸಂಧಾನವು ಮುರಿದಿರುವುದೇ?

ಈ ಪ್ರಶ್ನೆಯನ್ನು ಹಲವರು ಆಗಿಂದಾಗ ವಿಚಾರ ಮಾಡುತ್ತಿರುವರು. ಆದರೆ ಸ್ಪಷ್ಟ [illegible] ಜಯಕರರ ಸಂಧಾನವೇನೋ ಫಲಪ್ರದವಾಗಲಿಲ್ಲ. ಆದರೆ ಪಿ. [illegible] ಈ ವಿಷಯದಲ್ಲಿ ವ್ಯಾಸಂಗವನ್ನು ಕಂಡು ಮಾತಾಡುವವರಂತೆ ಇವರು ಮಹಾತ್ಮಾಜಿಯವರ [illegible] ಇವರನ್ನು ಮಹಾತ್ಮರು ಬಲ್ಲರು. ಇವರ ಹಾಗು ಮಾಡುವ ಪ್ರಯತ್ನವು ಸಂಪೂರ್ಣ ತೃಪ್ತಿಯಿಂದಲೇ ಮಾಡುವರೆಂದು. ಈ ಪ್ರೇರಣೆಯ [illegible] ಫಲಾಫಲಗಳು ದೇವರ ಪಾಲಿಗೆ!

* * *

### ಚೆಕ್ರಗೋಷ್ಠಿಗೆ ಆಮಂತ್ರಣೆ

— [illegible] ಇಂಡಿಯಾದ [illegible] ಆಸ್ಟ್ರೇಲಿಯಾ ಗಳಿಂದ ೧೨ [illegible] ವೇದ ಪರಿಷತ್ತಿನ [illegible] ಕರೆದಿರುವರು. ಇವರ ಪೈಕಿ [illegible] ಪಕ್ಷದ ಪ್ರತಿನಿಧಿಗಳಾಗಿರುವರು. ಇವರ ಹೊರತು [illegible] ಬೇರೆ ಬೇರೆ ಮತಗಳ ಪಂಗಡಗಳವರಾಗಿರುವರು. [illegible] ಪರಿಷತ್ತಿಗೆ ಹೋಗಲು ತೀರಾ ಅಯೋಗ್ಯರಾಗಿರುವರೆಂದು ಸಿಕ್ಕರೀ ಹೇಳುವರು. ಹಾಗೂ [illegible] ಯೋಗ್ಯರೆಂದು ಕಂಡವರನ್ನು ಮಾತ್ರವೇ ಆಮಂತ್ರಿಸಿರುವರೆ? ಈ ವಿಷಯದಲ್ಲಿ ವೈಸರಾಯರು ತಮಗಿರುವ ಸಂಪೂರ್ಣ ಸ್ವಾತಂತ್ರ್ಯವನ್ನು ಉಪಯೋಗಿಸಿರುವರು.

ಪರಿಷತ್ತಿನ ಸಮಾರಾಧನೆಯ ಅತಿಥಿಗಳನ್ನು ಸಂಪೂರ್ಣ ತೃಪ್ತಿಗೊಳಿಸುವಂತೆ ಮಾಡುವುದರಿಂದ [illegible] ಕಾಂಗ್ರೆಸ್ ಪಕ್ಷದವರನ್ನು [illegible] ಪರಿಷತ್ತಿಗೆ ಕರೆಯಲಿಲ್ಲ. ಅವರೇನೋ ಕಷ್ಟದಲ್ಲೇ ಕಾಲಹರಣ ಮಾಡುತ್ತಿರುವರು. ಸರಕಾರದ ದೃಷ್ಟಿಗೆ ಇವರೇನೋ ತೀರ ಅಯೋಗ್ಯರೆಂದೇ [illegible]. ಅವರೇನು ಸ್ವಾದೀಯರು ಹಿಂದೂ [illegible] ಕಾರ್ಯವನ್ನು ಭಕ್ತಿ ವಿಶ್ವಾಸಗಳಿಂದಲೇ ನಡೆಸುತ್ತಿರುವರು. ಅಂತೂ ಹಿಂದೂದೇಶಕ್ಕೆ ಬೇಕಾದ ಸ್ವಾತಂತ್ರ್ಯ ರಕ್ಷಣಾ ಕಾರ್ಯದ [illegible] ಮೇಜಿನ ಪರಿಷತ್ತಿನಲ್ಲಿ ಯಾವ ಅಭಿಪ್ರಾಯವನ್ನು ಮುಂದೆ ತರಲು ಎಡೆ ಇರುವುದಿಲ್ಲ. ಅಂದ ಮೇಲೆ ಕಾಂಗ್ರೆಸ್ ಪಕ್ಷೀಯರಿಗೆ ಪರಿಷತ್ತಿನಿಂದ ದೊರಕಬಹುದಾದ ಪರಿಣಾಮಗಳಾವವೂ ಆವವು!

* * *

### ಹಿಂದೀಯರ ಮೇಲೆ ವಿದೇಶಿಯರಿಗೂ ದಯೆಯೇ?

[illegible] ಬಿಳಿಯರ ಸಂಸ್ಥೆಗಳು ಇಂಡಿಯದ ಶೋಚನೀಯ ಅವಸ್ಥೆಯನ್ನರಿತು, ತುಂಬ ಕನಿಕರ ಪಟ್ಟಿರುವವು. ಇವೆಲ್ಲವೂ ಐಕ್ಯ [illegible] ಹಿಂದೂದೇಶಕ್ಕೆ ಸ್ವಾತಂತ್ರ್ಯಕೊಡಬೇಕೆಂದು [illegible] ಸಲ್ಲಿಸತಕ್ಕ [illegible] ಬಹಳ ಪ್ರಯತ್ನಿಸುತ್ತಿರುವರು. ಆದರೆ ಪಾರ್ಲಿಮೆಂಟ್ ಸದಸ್ಯರಲ್ಲಿ ಮೂವರು ಪಾಲು ಮೆಂಬರರು ಧೀರರೀ ಆಗಿದ್ದು ವಿರೋಧ ಪಕ್ಷದವರಾಗಿರುವರು. ಈ ಕಾರಣದಿಂದ ಪ್ರಯತ್ನವು ನೆರವೇರಲು ತುಂಬ ಶ್ರಮವಿದೆ.

### ಸ್ವಯಂ ಸೇವಕರಿಗೆ ಇನಾಂ!

ಸ್ವಯಂ ಸೇವಕರು ದೇಶದ ಏಳಿಗೆಗಾಗಿ [illegible] ಕಷ್ಟಗಳನ್ನು ಸಹಿಸಲು ಮನಸ್ಸು ಮಾಡಿರುವರಲ್ಲವೇ? ಆದರೆ ಪ್ರಯಾಸದಿಂದ ರಾಜ್ಯ ಪರಿಪಾಲನೆ ಮಾಡುವ ಬ್ರಿಟಿಷ್ ಸರಕಾರವು ಸ್ವಯಂ ಸೇವಕರಿಗೆ, ಸದರಿಯವರ ಕಷ್ಟ ಸಹಿಷ್ಣುತೆಯ ಬಗ್ಗೆ ಲಾಠಿ ಪೆಟ್ಟುಗಳನ್ನು ಇನಾಮವಾಗಿ ಕೊಟ್ಟಿರುವರು. ಸ್ವಯಂ ಸೇವಕರು ಎಂತಹ ಅಸಹ್ಯವಾದ [illegible] ಅವರ ಧ್ಯೇಯ [illegible] ಲಾಠಿಯ ಪೆಟ್ಟುಗಳ [illegible] ಹೇಳದಂತಹ ಸರಕಾರದ ಕಠಿಣ ಶಾಸನಗಳಿಗೆ ಬಲಿ ಬೀಳಲೇಬೇಕು. ಅಂದ ಮೇಲೆ ಸ್ವಯಂ ಸೇವಕರಿಗೆ ತ್ರಿಶಂಕು ಸ್ವರ್ಗವೇ ಗತಿ. ಅವರಿಗೆ ದೊರಕಬಹುದಾದ ಉಪಕಾರಗಳಾವವೂ ಲಾಠಿಯ ಹೊಡೆತಗಳು.

* * *

### ಹಿಂದೂದೇಶದ ವೀರ ಮಹಿಳೆಯರು

ಮಹಾತ್ಮಾಜಿಯವರಿಂದ ಆರಂಭಿಸಲ್ಪಟ್ಟ ಸ್ವರಾಜ್ಯ ಸಂಗ್ರಾಮದಲ್ಲಿ ಹಿಂದೂ ಮಹಿಳೆಯರು ತೋರಿಸಿದ ಸಹಾನುಭೂತಿಯು ಬಹಳ ಶ್ಲಾಘನೀಯವಾಗಿರುವದು. [illegible] ಧರ್ಮ ಪತ್ನಿ [illegible] ಯವರು ಸೂರತ್ತಿನಲ್ಲಿ ನಡೆದ [illegible] ಸಭಾ ವಿರೋಧದ ನಂತರದಲ್ಲಿ ಪೋಲೀಸಿನವರು ಈ ವೃದ್ಧ ಮಾತೆಯ ಮೇಲೂ ಕೈ ಮಾಡಿದರಂತೆ. ಅವಳಿಗೆ [illegible] ಹಾಗೂ [illegible] ಸೇರಿದ್ದಳು. ಉಕ್ಕಿ ಬರುವ ದುಃಖವು ಒಂದೆಡೆಯಲ್ಲಿ, ಹಿಂದೂ ದೇಶದ ಸ್ತ್ರೀಯರಿಗೆ [illegible] ಲೋಟನೆ ವ್ಯಸನವು ಬೇರೊಂದೆಡೆಯಲ್ಲಿ, ಹೀಗಿರುತ್ತ ಆ ವೃದ್ಧ [illegible] ತೋರಿಸಿದ ಅಪ್ರತಿಮ ಸಾಹಸವು ಸ್ತುತ್ಯಾರ್ಹವಲ್ಲವೇ?

[illegible] ವಲ್ಲಭಾಯಿ [illegible] ಪುತ್ರೀ [illegible] ಮಣಿಬೆನ್ನರು ಆನಂದದಿಂದ ಮಾಡಿದ ಭಾಷಣಕ್ಕಾಗಿ ದಸ್ತಗಿರಿ ಮಾಡಲ್ಪಟ್ಟು ೪ ತಿಂಗಳ ಕಠಿಣ ಶಿಕ್ಷೆಯು ವಿಧಿಸೋಣಾಯಿತು. [illegible] ಜೀವಕಳೆಯೇ [illegible] ಬನ್ನರು.

ಶ್ರೀಮತಿ ಸರಳಾದೇವಿಯವರನ್ನು ೫೦ ರೂಪಾಯಿಗಳ ಜಾಮಿನಿ ಮೇಲೆ [illegible]. ಆದರೆ [illegible] ಆಕೆಯ ದಸ್ತಗಿರಿಯಾಯಿತು.

ಶ್ರೀಮತಿ ಮನ್ನಿಭಾಯಿ ಮೆಹತರು ಬೆಳಗಾವಿ [illegible] ಶ್ರೀಮಂತರ ಕುಟುಂಬಕ್ಕೆ ಸೇರಿದವಳು. ಆದರೆ ಪೋಲೀಸರು ಆಕೆಯನ್ನು ಕೂಡ ಸತ್ಯಾಗ್ರಹ ಚಳವಳಿಯಲ್ಲಿ ಭಾಗವಹಿಸಿದ ದೋಷಕ್ಕಾಗಿ ಸೆರೆಮನೆಗೆ ಅಟ್ಟಿರುವರು. ಈಕೆಯು [illegible] ಅಪ್ರತಿಮವಾದ [illegible] ಪ್ರಚಂಡ ದೇಶ ಸೇವೆಯು ಚಿರಸ್ಮರಣೀಯವಾಗಿರುವದು.

ಕರ್ನಾಟಕಕ್ಕೆ ಸೇರಿದ ಬಿಜಾಪುರ ಪ್ರಾಂತ್ಯದಲ್ಲಿ ಸ್ತ್ರೀಯರು ಮಾಡಿದ ಕೆಲಸಗಳು ಇಡೀ ಕರ್ನಾಟಕದಲ್ಲಿ ಪ್ರಥಮಸ್ಥಾನವನ್ನು ಹೊಂದಿರುತ್ತವೆ. ಅದಲ್ಲದೆ [illegible] ಪ್ರಸಂಗದಲ್ಲಿ [illegible] ಸ್ವಯಂ ಸೇವಕರು ಮಾಡಿದ ಸಾಹಸ ಕಾರ್ಯಗಳು ಚರಿತ್ರೆಯ ಪುಸ್ತಕಗಳಲ್ಲಿ ಬರೆಯಲ್ಪಡುವವು.

* * *

### ಬಾರ್ಡೋಲಿಯಲ್ಲಿ ಪೋಲೀಸರ ಪುಂಡಾಟಿಕೆ ಲೂಟಿ

ಲೂಟಿ ಹಂಚಿಕೊಳ್ಳುವಾಗ ಪೋಲೀಸಿನವನೇ ಒಬ್ಬ ಪೋಲೀಸನ ಮೇಲೆ ಗುಂಡು ಹಾರಿಸಿದನು —

ಸರಕಾರವು ಬಾರ್ಡೋಲಿಯಲ್ಲಿ ಪೋಲೀಸರಿಗೆ ತಮ್ಮ ದೇಶದ ಸ್ವಾತಂತ್ರ್ಯದ [illegible] ಒಬ್ಬ [illegible] ಮನೆಯಲ್ಲಿ [illegible] ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿತ್ತು. ಆತನ ಮನೆಯನ್ನು ಜಪ್ತಿ ಮಾಡಿದ [illegible] ಪೋಲೀಸರು ಬಾರ್ಡೋಲಿಯ ಒಬ್ಬ [illegible] ಮನೆಯನ್ನು ಜಪ್ತಿ ಮಾಡಿದ [illegible] ಆ [illegible] ಪೋಲೀಸರು ತಮ್ಮ ಪಾಲಿಗೆ ಬಿದ್ದ [illegible] ಕೆಲಸವನ್ನು ತಮ್ಮೊಳಗೆ ಹಂಚಿಕೊಳ್ಳುತ್ತ ಅನೇಕ ಮನೆಗಳನ್ನು ಲೂಟಿ ಇಟ್ಟಿರುವರು. [illegible] ಪ್ರಸಂಗದ [illegible] ಸಂದರ್ಭದಲ್ಲಿ ಇಬ್ಬರು ಪೋಲೀಸರು [illegible] ಬಡಿದಾಟವಾಗಿ [illegible] ಮೇಲೆ ಗುಂಡು ಹಾರಿಸಿದನು. [illegible] ಅನ್ಯಾಯದ ಕಾಯಿದೆಗಳನ್ನು ಮಾತ್ರ [illegible] ಪ್ರಜೆಗಳನ್ನು [illegible] ಸಮಾಧಾನಗಳನ್ನು [illegible] ಆರೋಪ [illegible] ಸರಕಾರವು [illegible] ಲಾಠಿ ಪ್ರಹಾರಕ್ಕೆ ಅವರನ್ನು ಗುರಿ ಮಾಡಿರುವದು. ಆದರೆ ಬ್ರಿಟಿಷರು ಅಧಿಕಾರ ನಡೆಸುವಾಗ ಸರಕಾರದವರು ಜನರು [illegible] ಇದನ್ನು [illegible] ಸಂಘಟಿತ ರೀತಿಯಿಂದ [illegible] ಇರುವುದಿಲ್ಲ. [illegible] ಎಲ್ಲೆಲ್ಲಿಯೂ ಸರಕಾರದ [illegible] ಉಪಾಯಮಾಡುತ್ತಿರುವರು.

* * *

### ಢಾಕ್ಕಾದಲ್ಲಿ ಬಿಳಿಯ ಗೃಹಸ್ಥರ ಅತ್ಯಾಚಾರ

ಢಾಕಾ ಮೆಡಿಕಲ್ ಕಾಲೇಜಿನಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳು [illegible] ಸ್ವತಂತ್ರರಾಗಿ [illegible] ಕೆಲವು ಯುರೋಪಿಯನ ಗೃಹಸ್ಥರು [illegible] ಹೊಡೆದರಂತೆ! ಪೋಲೀಸ ಅಧಿಕಾರಿಗಳು ಕೆಲವು ಜನರ ಮೇಲೆ ಲಾಠಿ ಪ್ರಹಾರ ಮಾಡುವಾಗ ಸರಕಾರವು ತಮ್ಮ ಕಾಯಿದೆ ವ್ಯವಸ್ಥೆ ಬಗ್ಗೆ ಹಾಗೆ ಮಾಡಿದವೆಂದು ಹೇಳಿ ತಮ್ಮ ವಿಚಾರಗಳನ್ನು ಸಮರ್ಥಿಸುವರು. ಆದರೆ ಈ ಸಂದರ್ಭದಲ್ಲಿ ಪೋಲೀಸರಲ್ಲದ ಸಾಮಾನ್ಯ ಯುರೋಪಿಯನರು, ಪವಿತ್ರ ವಿದ್ಯಾ ಮಂದಿರಗಳಲ್ಲಿ ಹೊಕ್ಕು ವಿದ್ಯಾರ್ಥಿಗಳನ್ನು ಹೊಡೆಯುತ್ತಿರಲು ಪೋಲೀಸರು ಸುಮ್ಮನೇ ಇದ್ದರಂತೆ

## ನೋ ಟೀ ಸು.

ಕಾಸರಗೋಡು ಡಿಸ್ಟ್ರಿಕ್ಟ ಮುನ್ಸೀಫ ಕೋರ್ಟಿನಲ್ಲಿ.

O S No. 278/1930

ನಗರ ದಾಮೋದರ ಕಾಮತರ ಶ್ಯಾನುಭೋಗ—ವಾದಿ

ಮತ್ತು

H R ಮುರಾರ್ಜಿ ಕೂಡಾ 8 ಜನರು—ಪ್ರತಿವಾದಿರು.

ಹೊಸದುರ್ಗ ಗ್ರಾಮದಲ್ಲಿರುವ ರಾಮಪ್ಪಯ್ಯನವರ ಮಗ 1ನೇ ಪ್ರತಿವಾದಿ H. R ಮುರಾರ್ಜಿಯ ಮೇಲೆ ಕೂಡಾ ವಾದಿಯು ದಾಖಲು ಮಾಡಿದ ಸದರಿ ವ್ಯಾಜ್ಯವು ತಾ ೨೫-೯-೧೯೩೦ ರಲ್ಲು ತನ್ಮಿಗೆ ಇಟ್ಟಿದೆ. ಆ ತಾರೀಕು ೧ನೇ ಪ್ರತಿವಾದಿಯು ಆಕ್ಷೇಪಣೆ ಇದ್ದ ಪಕ್ಷದಲ್ಲಿ ಸದರಿ ತಾರೀಕಿನ ಒಳಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಮಾಡಿಕೊಳ್ಳಬೇಕೆಂಬ ಸಂಗತಿ ಈ ಮೂಲಕ ತಿಳಿಸುವದಾಗುತ್ತದೆ

Kasaragod, 14-9-30

**C Rama Rao.**
ವಾದಿ ಕಡೆ ವಕೀಲ್

## ನೋ ಟೀ ಸು.

ಕಾಸರಗೋಡು ಡಿಸ್ಟ್ರಿಕ್ಟ ಮುನ್ಸೀಫ ಕೋರ್ಟಿನಲ್ಲಿ

S C No 161/30

ಯಂ ಸುಬ್ರಾಯಾಚಾರಿ — ಶೇಷಾಚಾರಿ ಮಗ—ಕಾಸರಗೋಡು ತಾಲೂಕು [illegible] ಮಂಜೇಶ್ವರ ಗ್ರಾಮದಲ್ಲಿರುವವ—ವಾದಿ

ಮತ್ತು

ಕೆ. ವಿ ರಾಘವೇಂದ್ರಯ್ಯ, ಶ್ರೀ ಸತ್ಯನಾರಾಯಣ ಜುವೆಲರಿ ಹೋಲಿನ ಮೇನೇಜಿಂಗ ಪ್ರೊಪ್ರೈಟರ್ ಬೆಂಗಳೂರು ಸಿಟಿ ಪೈಕಿ ಯವೆನ್ಯೂ ರೋಡಿನಲ್ಲಿರುವವ—ಪ್ರತಿವಾದಿ

ಮೇಲ್ಕಂಡ ವ್ಯಾಜ್ಯದಲ್ಲಿ ಸಬ್‌ಸ್ಟಿಟ್ಯೂಟ ಸರ್ವಿಸ ಬಗ್ಗೆ ವಾದಿಯು ಕೊಟ್ಟ S I A 113/30ನೇ ಅರ್ಜಿ ಮೇಲೆ ಈ ವ್ಯಾಜ್ಯದ ಸಂಗ್ತಿಯನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಆದ ಹುಕುಂ ಪ್ರಕಾರ ವಾದಿಯು ರೂಪಾಯಿ 59—10—0ಕ್ಕೆ ಪ್ರತಿವಾದಿಯ ಮೇಲೆ ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು ೨೯—೯—30ಕ್ಕೆ ಅಖೈರು ತಪಸೀಲ ಇಟ್ಟಿದೆಂಬ ಸಂಗತಿ ಈ ಮೂಲಕ ತಿಳಿಸೋಣಾಗುತ್ತದೆ

Kasaragod, 8-9-30

(Sd) **K. Shama Shetty**
Vakil for Plaintiff

ದಕ್ಷಿಣ ಕನ್ನಡ ಜಿಲ್ಲಾ ಪ್ರಚಾರ ಸಮಿತಿಯ ಶಿಫಾರಸಿನ ಮೇಲೆ ಮದ್ರಾಸು ಪ್ರಾಪಗಾಂಡ ಸಮಿತಿಯವರು ಈ ಕೆಳಗಿನ ಸಂಸ್ಥೆಗಳಿಗೆ ಮದ್ಯಪಾನ ನಿಷೇಧ ಮತ್ತು ಮಾದಕ ದ್ರವ್ಯ ಪರಿತ್ಯಾಗದ ಕುರಿತು ಪ್ರಚಾರ ಕೆಲಸ ನಡೆಸುವದೆ ಕೆಳಗೆ ನಮೂದಿಸಿದ ಗ್ರ್ಯಾಂಟ ಮೊಬಲಗುಗಳನ್ನು ಸಂಕ್ಷನ್ ಮಾಡಿದೆ ತಿಳಿದೆ

ಆದ ಪ್ರಯುಕ್ತ ಯಾವ ಜಾತಿಗಳ ಉದ್ಧಾರಣೆಗಾಗಿ ಈ ಸಮಾಜಗಳು ಏರ್ಪಟ್ಟಿರುವವೋ ಅವರು ತಮ್ಮ ನಡುವಿನಿಂದ ಕುಡಿತಕತನದ ಹಾವಳಿಯನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸುವಂತೆ ವಿನಂತಿಯಿದೆ

| | | |
|---|---|---|
| ೧ [illegible] ಜ್ಞಾನೋದಯ ಸಮಾಜ ಮಂಗಳೂರ | ರೂ | [illegible] |
| ೨ [illegible] ಯುವಕ ಸಮಾಜ ದೇರಳ | ರೂ | [illegible] |
| ೩ [illegible] ಗೌಡ ವಿದ್ಯಾಭಿ [illegible] ಪುತ್ತೂರು | ರೂ | ೫೦ |

ಮಂಗಳೂರು, 12 [illegible]

ಯಂ ಆರ್ ಪೂಂಜ
ಅಧ್ಯಕ್ಷ [illegible] ಜಿಲ್ಲಾ ಪ್ರಚಾರ ಕಮಿಟಿ

## ನೋ ಟೀ ಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ಸಂಖ್ಯೆ 109 1930

[illegible]ತ್ತಾರಿ ದೇವಣ್ಣ ರೈ—ವಾದಿ

ಮತ್ತು

ಬಿ. ಲಿಂಗಪ್ಪಯ್ಯ ಸಹಾ—ಪ್ರತಿವಾದಿರು.

ಪಿರಂತಬೈಲ ದಾಸಪ್ಪಯ್ಯನವರ ಮಕ್ಕಳು 1 ಲಿಂಗಪ್ಪಯ್ಯ 2 ಲಕ್ಷ್ಮಣ ಸೀತಯ್ಯನವರ ಮಕ್ಕಳ 3 ವೆಂಕಟ್ರಮಣಯ್ಯ 4 ಶೀನಪ್ಪ ಸಹಾ 4 ಜನರು ತಾ 19-6-1923 ರಲ್ಲು ಬರಕೊಟ್ಟ ಅಡವು ದಸ್ತಾವೇಜಿನ ಅಸಲು ಬಡ್ಡಿ ರೂ 1529—0—0 ವಸೂಲಾತಿಕೊಳ್ಳತಕ್ಕ ಬಗ್ಗೆ ವಾದಿಯು ದಾಖಲು ಮಾಡಿದ ವ್ಯಾಜ್ಯವು ತಾ ೮—10—1930ನೇ ಬುಧವಾರಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನ್ಮಿ ಬಗ್ಗೆ ಇಡಲ್ಪಟ್ಟಿರುತ್ತದೆಂತ ಸದರಿ ವ್ಯಾಜ್ಯದ ೨ನೇ ಪ್ರತಿವಾದಿ ಬಿ ಲಕ್ಷ್ಮಣರಿಗೆ ಈ ಮೂಲಕ ತಿಳಿಸೋಣಾಗುತ್ತದೆ

ಕಾಸರಗೋಡು, ೧೩—೯—೧೯೩೦

**H S. Kamath,**
VAKIL FOR PLAINTIFF.

## ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲಿ ಉಪಯೋಗಿಸು ತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡು ತ್ತದೆ.

ಮಕ್ಕಳ ಮೊದಲ್ಗೊಂಡು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತ ಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

## ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಹೊಟ್ಟೆ ಕಟ್ಟುವುದಾಗಲಿ ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗಿದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗ ವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

## ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿ ರುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0

## ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ ಸೀಸೆ 1ಕ್ಕೆ ರೂ. 0—8—0.

"ಚಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಮ ಆಯುರ್ವೇದ ವೈದ್ಯಶಾಲೆ, ಮೈಸೂರು

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು. ಮತ್ತು ಹೆಡ್ ಆಫೀಸ್, ಸೀತಾರಾಮ ವೈದ್ಯಶಾಲಾ, ಮೈಸೂರು

ಏಜಂಟರು — ಆತ್ಮಾವರ ಸೋಮಯ್ಯ ಮತ್ತು ಕಂಪೆನಿ ಸೋದಾ ಫ್ಯಾಕ್ಟರಿ [illegible]



## ಒಂದೇ ತಾಸಿನಲ್ಲಿ

ನವ ಯೌವನವು ಪಡೆಯಲಪೇಕ್ಷೆಯುಳ್ಳ ಪುರುಷರು

**ರಮಣ ವಿಲಾಸಿನಿ ವಟಿಕಾ**

ವನ್ನು ಮಲಗುವುದಕ್ಕೆ ಒಂದು ಘಂಟೆಗೆ ಮುಂಚೆ ಒಂದು ಮಾತ್ರೆಯನ್ನು ಸೇವಿಸಿ ಬೇಕಾಕ್ಕೆ ಬಲವನ್ನು ಹಾಲು ಕುಡಿದರೆ ಯಥೇಷ್ಟ ಯಾಗಿ ಸ್ತಂಭನವಾಗುವುದು.

16 ಮಾತ್ರೆಗಳಿರುವ ಡಬ್ಬಿ ಕ್ರಯ ರೂ 1—0—0

ಮದನ ಮಂಜರಿ ಫಾರ್ಮಸಿ,
1/94 ಚೀನ ಬಜಾರ್ ಮದರಾಸು



## ಅಕಾಲ ವಾರ್ಧಿಕ್ಯವೇ?

ಇಗೋ ನಮ್ಮ ಭೂಲೋಕ ಅಮೃತವಾದ

**ಮದನಮಂಜರಿ ಮಾತ್ರೆಗಳು**

ಸೇವಿಸುವವರನ್ನು ಬಿಟ್ಟು ಪಲಾಯನ ಮಾಡುವುದು ಯಾಕೆ ಪೇಚಾಡ ತ್ತೀರಿ? ಇದನ್ನು ಉಪಯೋಗಿಸಿ ನವ ಯೌವನವನ್ನು ಪಡೆಯಿರಿ 1 ಡಬ್ಬಿ ಕ್ರಯ ರೂ 1—0—0

ಬಂದ ರೋಗಗಳನ್ನ ಪರಿಹಾರ ಮಾಡಿಕೊಂಡು ನಿರೋಗಿಗಳಾಗಿರುವುದಕ್ಕೆ

ಕ್ರಯವು ಇಲ್ಲದೆ ಉಚಿತವಾಗಿ ಕೊಡುವ

**ವೈದ್ಯವಿದ್ಯೆ**

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳಿಗೆ ಪರಿಹಾರ ಮಾಡಿ ಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ

ರಾಜವೈದ್ಯ ನಾರಾಯಣಜಿ ಕೇಶವಜಿ,
1/94 ಚೈನಾ ಬಜಾರು ರೋಡು ಮದರಾಸು



ತಿಳಿಯದೇ ಧಾತುಕ್ಷಯವಾಗ ಕ್ಷೀಣ ಶಕ್ತಿಗಳೂ ಅದ ಮನುಷ್ಯರಿಗೆ ವಧ್ಯ ತಾರುಣ್ಯದಲ್ಲಿಯೇ ನಿಜವಾಗಿ ಸಂಸಾರ ಸುಖವು ದೊರೆಯದೇ ನಿರುತ್ಸಾಹ ನಿರಾಶೆಗಳು ಹುಟ್ಟುತ್ತವೆ ಅಂಥ ಮನುಷ್ಯರ ಧಾತುಕ್ಷಯದೋಷವು ಹೋಗಿಸಿ ಪೂರ್ಣ ಪುರುಷತ್ವವನ್ನು ಕೊಡುವಂತಹದ್ದು.

## ವೈದ್ಯರಾಜ ಶ್ರೀ ಕೇಶವಶಾಸ್ತ್ರೀ ವಿರಜಕರ ಇವರ,

ಶಕ್ತಿಕಾಂತಿ ವರ್ಧಕ ಆರೋಗ್ಯ ಕೊಡುವ

# ಅಮೃತ ಸಿಂಧು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಸವಿ ಹಾಗು ತೀವ್ರ ಗುಣಕೊಡುವ ಔಷಧವು ಮಾಡಲಾಗಿದೆ

ಇದರ ಉಪಯೋಗದಿಂದ ಸಪ್ಪಗಿನ ಚರ್ಯೆ, ನಿರ್ಬಲ ಶರೀರ, ನಿರುತ್ಸಾಹ ಮಾನಸ, ಪೌರುಷಹೀನ ದೇಹ, ಅನಿಶ್ಚಿತ ಸ್ವಭಾವ, [illegible] ತಲೆಸುತ್ತು, ಸ್ವಪ್ನದೋಷ, ವೀರ್ಯದ ನೀರು ಆಲಸ್ಯ, [illegible] ಉರಿಮೂತ್ರ [illegible] ಪಿತ್ತವಿಕಾರ ಅಗ್ನಿಮಾಂದ್ಯ, ನಿದ್ರಾನಾಶ ಮಲಬದ್ಧ [illegible] ಎಲ್ಲ ರೋಗಗಳ [illegible] ಎಲ್ಲ ಬೇನೆಗಳ ನಾಶವಾಗಿ ರಸ ರಕ್ತ ಅಸ್ಥಿ ಮಜ್ಜಾ ವೀರ್ಯ ಮೊದಲಾದ ಏಳು ಧಾತುಗಳ ವೃದ್ಧಿಯಾಗಿ ಇಂದ್ರಿಯಗಳ ಅಶಕ್ತತೆಯು ನಷ್ಟವಾಗಿ ದೇಹದಲ್ಲಿ ಶಕ್ತಿಯು ಹುಟ್ಟುತ್ತದೆ ಇದರಿಂದ ನಿಜವಾದ ಸಂಸಾರಸುಖವು ಸಿಗುತ್ತದೆ ಹೆಂಗಸರ ಮುಟ್ಟುಕಾಲದ ಕೆಂಪು ಹಾಗು ಬಿಳಿ ಪ್ರದರ ಮೊದಲಾದ ಸಂತತಿಗೆ ಬಾಧಕವಾದ ಗರ್ಭಾಶಯದ ಎಲ್ಲ ವಿಕಾರಗಳು ಹೋಗಿ ಪ್ರಕೃತಿಯು ಸುಧಾರಿಸುತ್ತದೆ ಈ ಅಮೃತಸಿಂಧುವನ್ನು ಮುಂಜಾನೆ ಅರ್ಧತೊಲೆ ಮತ್ತು ಸಂಜೆಗೆ ಅರ್ಧತೊಲೆ ತೆಕ್ಕೊಂಡ ಮೇಲೆ ಆಕಳ ಅಥವಾ ಎಮ್ಮೆಯ ಹಾಲನ್ನು ೧೦ ರಿಂದ ೨೦ ತೊಲೆಯ ವರೆಗೆ ತೆಕ್ಕೊಳ್ಳಬೇಕು ಹತ್ತು ದಿನಗಳ ವರೆಗೆ ಸಾಕಾಗುವ ೧ ಬಾಟಲಿಗೆ ರೂ ೧-೪-೦, ೪ ಬಾಟಲಿಗೆ ರೂ. ೪, ೧೨ ಬಾಟಲಿಗೆ ರೂ ೧೧, ಹಾಗು ೧ ಬಾಟಲಿ ಪುಕ್ಕಟೆ. ಅಂಚೆ ಹಾಗು ಪೆಟ್ಟಿಗಳ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೋ,
5C Divison, ನಿಪ್ಪಾಣಿ, ಜಿಲ್ಲಾ ಬೆಳಗಾಂವಿ.



ಗವರ್ನಮೆಂಟಿನಲ್ಲಿ ರಿಜಿಸ್ಟರ ಮಾಡಲ್ಪಟ್ಟ

ಅಗಸ್ತ್ಯ ಸಿದ್ಧನಾದ

## ಎಲ್ಲ ರೋಗಗಳಿಗೆ ಒಂದೇ ಔಷಧ!

## ಅರ್ಕಶಫಾ ಅಥವಾ ಆರೋಗ್ಯಬಿಂದು.

ಪ್ರವಾಶಿವಿ ಶ್ರೀ ಮೂರ್ತಿವಂತವೈದ್ಯ.

ಇದು ಅರ್ಕವಿದ್ದು ಇದರಲ್ಲಿ ಸೀಸ ಪಾರದ ರಸಾಯನ ಕೊಡಿದ್ದವಿಲ್ಲ ಎಷ್ಟು ದಿವಸ ಇಟ್ಟರೂ ಕೆಡ ವುದಿಲ್ಲ ಇದು ಪ್ರಸಿದ್ಧವಾಗಿ ೧೬ ವರ್ಷ ಗಳು ಆಗುತ್ತ ಬಂದವು ಇವತ್ತಿನ ವರೆಗೆ ಎರಡು ಲಕ್ಷಗಳವರೆಗೆ ಬಾಟಲಿ ಗಳು ಖರ್ಚಾಗಿರುತ್ತವೆ ಇದರ ಬಗ್ಗೆ ನಮ್ಮ ಹತ್ತಿರ ಬೇರುವ ಪತ್ರಗಳು [illegible] ಮಾಡಿದ ದಾಖಲೆಗಳು, ಪೋಸ್ಟ ಪಾವತಿಗಳು, ಬಾರಿಸಿಸಿ [illegible] ಗಳು ಇರುತ್ತವೆ ಬೇಕಾದವರು ಖಾತ್ರಿಮಾಡಿಕೊಳ್ಳಬೇಕು ಇದು ಸಟಿಯೆಂದು ಸಿದ್ಧಮಾಡಿಕೊಟ್ಟವರಿಗೆ (೫೦೦) ಐನೂರು ರೂಪಾಯಿ ಗಳು ಇನಾಮು ಕೊಡಲ್ಪಡುವವು ಈ ಔಷಧವು ಅಮೃತಸರಿಯಾಗಿದೆ. ಇದರ ಕಾರಣ ಯಾವತ್ತು ರೋಗಕ್ಕೆ ತತ್ಕಾಲ ಗುಣಕೊಡುವದು ಮತ್ತು ಎಂಥ ಭಯಂಕರ ರೋಗವು ಇದ್ದರೂ ಅರೋಗ್ಯಬಿಂದು ವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರ್ಟಿಫಿಕೇಟುಗಳು ನಮ್ಮ ಹತ್ತಿರ ಬಂದರು ಇರುತ್ತವೆ ಇವನ್ನು ಬರೆಯಲಿಕ್ಕೆ ಜಾಗವು ಸಾಲದು [illegible] ನೋಡಿ ತಕ್ಕೊಂಡು ಅನುಭವ ನೋಡಿರಿ

ರೋಗದ ನಾವಗಳು —

[illegible] ರೋಗ, [illegible] ಅಜೀರ್ಣ, ಕೆಮ್ಮು, [illegible] (ಮಲೇರಿಯಾ), ಪ್ಲೇಗ ಇನ್‌ಫ್ಲುಯೆಂಜಾ ಜ್ವರ ಅನೇಕ ಪ್ರಕಾರ ಜ್ವರ ಗಾಳಿರೋಗ [illegible] ರೋಗ ಗಂಟವಾಲೆ [illegible] [illegible]

[illegible]

[illegible] ವಿಳಾಸ — ಎಚ್. ಎಮ್. ಮುಲ್ಲಾ,
ಸಂಪಾದಕ ಅರ್ಕಶಫಾ, ಹೆಡ್ ಆಫೀಸ
ಪೋಸ್ಟ ಕಾಪೂರ (ಬೆಳಗಾಂವ)



ಜಗತ್ತಿನ ಎಂಟನೇ ಆಶ್ಚರ್ಯಕರ ಉಪಕರಣಗಳು.

## "ಸ್ಪಿರಿಟ್ ಬಾಕ್ಸ್"

ಇದನ್ನು ಅಮೇರಿಕದಿಂದ ನಾವು ಇತ್ತೀಚಗೆ ತರಿಸಿರುವೆ ವಿನೆ ಯಾವನಾದರೂ ತನ್ನ ವ್ಯಾಪಾರದಿಂದ ಗುಣನ್ನು ಸ್ವೀಕರಿ ನಿನ್ನು ನೋಡಿ ತೃಪ್ತಿಪಡಲು ಅಶಿಸುವನಾದರೆ ಈ 'ಸ್ಪಿರಿಟ್ ಬಾಕ್ಸ್'ನ ಮೂಲಕ ನಾಲ್ಕೈದು ನಿಮಿಷಗಳೊಳಗೆ ಅವರನ್ನು ಕಾಣಬಹುದು ಭೂತ ಭವಿಷ್ಯತ್ ವರ್ತಮಾನಗಳ್ಳಿನ ಮನು ಷ್ಯನ ಆತ್ಮ ಮತ್ತು ಇತರ ವಿಷಯದ ಪ್ರಶ್ನೆಗಳಿಗೆ ಈ ಸ್ಪಿರಿಟ್ ಬಾಕ್ಸ್ ಉತ್ತರವೀಯುವುದು ಈ ಪೆಟ್ಟಿಗೆಯ ಮಾಹಿತಿ, ಮತ್ತು ಉಪಯೋಗಿಸುವ ಕ್ರಮ ಮೊದಲಾದವುಗಳನ್ನು ಮುದ್ರಿ ಸಿದ ಪುಸ್ತಕವು ಮುಫತ್ತಾಗಿ ದೊರಕುವದು ಪ್ಯಾಕಿಂಗ್ ಸಮೇತ ಪೆಟ್ಟಿಗೆಯ ಕ್ರಯ ರೂ 4—0—0 ಇಂಗ್ಲೀಷಿ ನಲ್ಲಿ ದಯೆ ಬರೆಯಿರಿ

The American Trading Co.,
*19 Goa Bagan Street,*
(Dept No 12) CALCUTTA.

## ಸಂಧಾನ ಪ್ರಸ್ತಾಪ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

(ಅ) ಶಾಸನಭಂಗ ಚಳವಳಿಯು ನಿಲ್ಲಿಸುತ್ತ ಅನತ್ಯಾಚಾರ ಹಾಗೂ ಅಹಿಂಸಾತ್ಮಕವಾದ ಕಾರ್ಯಗಳಿಗಾಗಿ, ಸೆರೆ ಹುಲ್ಲಿಟ್ಟ ಹಾಗೂ ಕೈಸೆರೆಮಾಡಿದ ಸರ್ವ ರಾಜಕೀಯ ಕೈದಿಗಳ ಬಿಡುಗಡೆಯಾಗಲಿರುವುದು

(ಆ) ಉಪ್ಪಿನ ಶಾಸನ, ಅರಣ್ಯ ಶಾಸನ ಮತ್ತು ಭೂಕಂದಾಯದ ಶಾಸನಗಳಿಗಾಗಿ ಮುಟ್ಟುಗೋಲು ಹಾಕಿದ ಹಾಗೂ ಸ್ವಾಧೀನಪಡಿಸಿಕೊಂಡ ಆಸ್ತಿಪಾಸ್ತಿಗಳನ್ನು ಆಯಾಯರಿಗೆ ಹಿಂದಕ್ಕೆ ಕೊಡಬೇಕು.

ಇ ಜುರುಮಾನೆ ಜಾಮೀನುಗಳನ್ನು ಮರಳಿ ಕೊಡಬೇಕು.

ಈ ಶಾಸನಭಂಗದ ಚಳವಳಿ ಸಂಬಂಧವಾಗಿ ಕೆಲಸ ಬಿಟ್ಟ ಹಾಗೂ ನಿವೃತ್ತಿಪಡಿಸಿರುವ ಎಲ್ಲಾ ಉದ್ಯೋಗಸ್ಥರನ್ನು ಪುನಃ ಸೇರಿಸಲಾಗಬೇಕು. ಈ ಶರ್ತಗಳು ಅಸಹಕಾರ ಚಳವಳಿದ ಸಮಯದ ಘಟನಾವಳಿಗಳಿಗೂ ಅನ್ವಯಿಸಲ್ಪಡಲಿಕ್ಕೆ ಇವೆ

ಉ ವ್ಹಾಯಿಸ್ರಾಯರು ಜಾರಿಗೆ ತಂದ ಎಲ್ಲಾ ಶಾಸನ ಆರ್ಡಿನೆನ್ಸಗಳು ರದ್ದುಗೊಳಿಸತಕ್ಕವು

ಊ ಮೇಲಿನ ಎಲ್ಲಾ ಶರ್ತನಿಯಮಗಳ ವಿಚಾರವು ಸರಿಯಾಗಿ ಆದ ಬಳಿಕ ಚಕ್ರಗೋಷ್ಟಿಯಲ್ಲಿ ಭಾಗಿಗಳಾಗುವ ಕುರಿತು ಆಲೋಚಿಸಲಾಗುವದು

ಮೇಲಿನ ಶರ್ತನಿಯಮಗಳನ್ನು ಸೂಚಿಸಿ ಧುರೀಣರು ಕೊಟ್ಟ ಪತ್ರವನ್ನು ಸ್ವೀಕರಿಸಿ ಸಂಧಾನ ಸಾಧಕರು ಮುಂಬಾಯಿಯಿಂದ ಧುರೀಣರಿಗೆ ಪ್ರತ್ಯೇಕ ಒಂದು ಪತ್ರಬರೆದು ಕಳುಹಿಸಿದರು ಅಲ್ಲಿಂದ ಜಯಕರರೊರ್ವರೇ ಈ ಧುರೀಣರ ನಿರೂಪವನ್ನು ಹೊತ್ತು ವ್ಹಾಯಿಸ್ರಾಯರಿಗೆ ತಲ್ಪಿಸಿ ಅಲ್ಲಿ ಒಂದೆರಡು ದಿನಗಳ ಚರ್ಚೆ ಸಂಭಾಷಣೆಗಳು ನಡಿಸುವಲ್ಲಿ ಡಾ| ಸಪ್ರೂರವರೂ ಬಂದು ಸೇರಿಕೊಂಡರು ವ್ಹಾಯಿಸ್ರಾಯರು ಪರಾಮರ್ಶೆಯ ಸಂದರ್ಭ ಹೊರಟ ಮುಖ್ಯ ಅಂಶಗಳನ್ನು ಇವರು ಪ್ರತ್ಯೇಕವಾಗಿ ಬರೆಕೊಂಡರಲ್ಲದೆ ಕೊನೆಗೆ ಹೊರಡುವ ವೇಳೆಯಲ್ಲಿ ವ್ಹಾಯಿಸ್ರಾಯರಿಂದ ಪ್ರತ್ಯೇಕ ಒಂದು ಪತ್ರವನ್ನು ಪಡಕೊಂಡರು

## ವ್ಹಾಯಿಸ್ರಾಯರ ಪತ್ರದಲ್ಲಿ

ಮೊದಲು ಸಂಧಾನಸಾಧಕರ ಹೊಗಳಿಕ ಅಭಿನಂದನೆಗಳ ಪ್ರಸ್ತಾಪವಾಗಿ ಧುರೀಣರ ಕೇಳಿಕೆಗಳ ಕುರಿತು ಪರಾಮರ್ಶನೇ ತನಗೆ ಅಸಾಧ್ಯವೆಂದು ಉಲ್ಲೇಖಿಸಲ್ಪಟ್ಟಿರುವುದು ಶಾಸನಭಂಗದ ಚಳವಳವು ತೀರಾ ಅನ್ಯಾಯ ಹಾಗೂ ಅದರ ಖಂಡನೆಯೂ, ಆ ಚಳವಳವು ನಿಂತಲ್ಲಿ ದೇಶದ ಭವಿತವ್ಯವನ್ನು ವಿಚಾರಿಸಲು ಅನುಕೂಲವಿದೆಯಾಗಿಯೂ ಪ್ರಸಿದ್ಧವಾಗಿರುವುದು ರಾಜಸೂತ್ರಗಳ ವಿಚಾರವಾಗಿ ಮೊದಲು ಪ್ರಕಟಪಡಿಸಿದಕ್ಕಿಂತ ಹೆಚ್ಚಿಗೆ ಇನ್ನು ಏನೊಂದೂ ಹೇಳಲಿರುವುದಿಲ್ಲವಾಗಿಯೂ ಹಿಂದೀಯರಿಗೆ ಸಾಧ್ಯವಿರುವಷ್ಟು ಅಧಿಕಾರ ಆಡಳಿತ ಕೊಡುವ ವಿಚಾರದಿಂದಲೇ ಬ್ರಿಟಿಷ ಸರಕಾರದಿಂದ ಚಕ್ರಗೋಷ್ಟಿಯ ವಿಚಾರವಾಗಿದೆಯಾಗಿಯೂ, ಅಲ್ಲದೆ ಬ್ರಿಟಿಷ ಚಕ್ರಾಧಿಪತ್ಯದಿಂದ ಭರತಖಂಡವು ಹೊರಹೋಗುವ ವಿಚಾರವಾಗಿ ಗಾಂಧಿಯವರ ಮಾತಿಗೂ, ಸಾಲಮೂಲಗಳನ್ನು ಕೇಳುವ ಸ್ವಾತಂತ್ರ್ಯದ ವಿಚಾರಕ್ಕೂ ಚಕ್ರಗೋಷ್ಟಿಯಲ್ಲಿ ಎಡೆ ದೊರಕದಾಗಿಯೂ ನಮೂದಿಸಿರುತ್ತವೆ

ರಾಜಕೀಯ ಕೈದಿಗಳನ್ನು ಬಿಡುವ ಅಧಿಕಾರವು ಪ್ರಾಂತಿಕ ಸರಕಾರಗಳನ್ನು ಸೇರಿದೆ ಉಪ್ಪಿನ ಕಾನೂನು ತೆಗೆದು ಹಾಕುವುದರಿಂದ ಉತ್ಪತ್ತಿಯು ಕಡಿಮೆಯಾಗುವುದು ಕಡಿಮೆಬೀಳುವ ಈ ಆಯವನ್ನು ಭರ್ತಿಮಾಡುವ ಕುರಿತು ಏರ್ಪಾಡು ಆಗುವ ಮೊದಲು ಅದು ಸಾಧ್ಯವಿಲ್ಲ. ಜುಲುಮಾನೆಗಳನ್ನೂ ಜಪ್ತಿ ಮಾಡದ ಆಸ್ತಿಗಳನ್ನೂ ಹಿಂದಕ್ಕೆ ಕೊಡುವ ಹಾಗೂ ಕೆಲಸ ಬಿಟ್ಟವರನ್ನು ಪುನಃ ಸೇರಿಸಿಕೊಳ್ಳುವ ಕುರಿತು ಇನ್ನೂ ವಿಚಾರವಾಗಲಿದೆ ಶಾಸನಭಂಗ ಚಳವಳವು ಶಾಂತವಾಗುತ್ತ ಆರ್ಡಿನೆನ್ಸುಗಳನ್ನು ರದ್ದುಮಾಡಲಾಗುವವು ವಿದೇಶಿವಸ್ತ್ರ ಹಾಗೂ ಮದ್ಯದ ವ್ಯಾಪಾರಕ್ಕೆ ಬಹಿಷ್ಕಾರವಿಡುವ ಶಾಸನಗಳ ಭಾರವು ವ್ಹಾಯಿಸ್ರಾಯರ ವಿಚಾರಕ್ಕೆ ಇರತಕ್ಕವು

ಕೊಂಗ್ರೆಸ್ಸಿಗೂ ಸರಕಾರಕ್ಕೂ ಇಂತಹ ಮತಭೇದಗಳಿರುವಲ್ಲಿ ಸಂಧಿಯು ಅಸಾಧ್ಯವು ಅಲ್ಲದೆ ಧುರೀಣರ ಕೇಳಿಕೆಯ ಕುರಿತು ಪರಾಮರ್ಶವೇ ಅಸಾಧ್ಯ ಅಂತೂ ಅನುಚಿತವು.

## 'ವ್ಹಾಯಿಸ್ರಾಯರೊಡನಾದ ಸಂಭಾಷಣೆಯ ಟಿಪ್ಪಣಿ'

ವ್ಹಾಯಿಸ್ರಾಯರ ಅನುಮತಿ ಮೇರೆಗೆ ಅವರ ಕೆಲವು ಅಭಿಪ್ರಾಯಗಳನ್ನು ಕೊಂಗ್ರೆಸ ಕಕ್ಷಿಯರಿಗೆ ಸೂಚಿಸಲನುಕೂಲವಾಗುವಂತೆ ಸಪ್ರೂ ಜಯಕರರು ವ್ಹಾಯಿಸ್ರಾಯರೊಡನೆ ನಡೆಸಿದ ಸಂಭಾಷಣೆ, ಮತ್ತು ಪರಾಮರ್ಶೆಗಳ ಕುರಿತು ಮುಖ್ಯ ವಿಷಯಗಳ ಕುರಿತು ಟಿಪ್ಪಣಿ ಮಾಡಿಕೊಂಡರು

೧ ಆಡಳಿತ ಸೂತ್ರಗಳ ಕುರಿತು ವ್ಹಾಯಿಸ್ರಾಯರು ತಮ್ಮ ಪತ್ರದಲ್ಲಿ ಸೂಚಿಸಿದ ಮಿತಿಯನ್ನೇ ಇಡಲಿಕ್ಕೆ ಬೇಕು

೨ ಬ್ರಿಟಿಷ ಚಕ್ರಾಧಿಪತ್ಯದಿಂದ ವಿಯೋಗಹೊಂದುವ ಹಕ್ಕು ಭಾರತೀಯರಿಗೇನೇ ಇರತಕ್ಕದ್ದು ಹಾಗೂ ಹಿಂದೂದೇಶಕ್ಕೆ ಇಚ್ಛೆ ಬಂದಾಗ ಅಂತಹ ವಿಯೋಗವಾಗುವ ಕುರಿತು ಗಾಂಧಿಯವರು ಚಕ್ರಗೋಷ್ಟಿಯಲ್ಲಿ ಎತ್ತಲಿರುವ ವಿಚಾರವು ವ್ಹಾಯಿಸ್ರಾಯರಿಗೆ ಹಿತವಿಲ್ಲ ಉಭಯ ಜನಾಂಗಗಳಿಗೂ ವಿಚಾರ ಸ್ವಾತಂತ್ರ್ಯವು ಪರಿಷತ್ತಿನಲ್ಲಿರುವುದಾಗಿ ವ್ಹಾಯಿಸ್ರಾಯರು ಮುಂಚೆಯೇ ತಿಳಿಸಿರುವುದರಿಂದ ಇಂತಹ ಪ್ರಶ್ನೆವಿಚಾರವು ಗಾಂಧಿಯವರು ಚಕ್ರಗೋಷ್ಟಿಯಲ್ಲಿ ಪರಾಮರ್ಶೆಗೆ ತರುವಲ್ಲಿ ಅದನ್ನು ಮುಂದಾಗಿ ಇಂಡಿಯಾ ಸಕ್ರೆಟರಿಯವರಿಗ ಇಂಡಿಯ ಸರಕಾರವು ತಿಳಿಸಲಿರುವುದು

೩ ಇಂಡಿಯದ ಸಾಲ ಹಾಗೂ ಇನ್ನಿತರ ಆರ್ಥಿಕ ಜವಾಬ್ದಾರಿಯ ಲೇಣದೇಣೆಗಳ ಕುರಿತು ಸ್ವಾತಂತ್ರ್ಯ ವಿಚಾರಣಾ ಸಮಿತಿಯೊಂದನ್ನು ಏರ್ಪಡಿಸಿ ಎಲ್ಲಾ ವಿಚಾರದ ಸ್ವಾತಂತ್ರ್ಯ ಹಕ್ಕು ಆ ಸಮಿತಿಗೆ ಕೊಡುವ ವಿಚಾರವೊಂದು ಚಕ್ರಗೋಷ್ಟಿಯಲ್ಲಿ ಚರ್ಚೆಗೆ ಬರುವ ಸಂದರ್ಭ ಎಲ್ಲಾ ಸಾಲ ಜವಾಬ್ದಾರಿಗಳ ನಿರಾಕರಣೆಯ ಸೂಚನೆ ಶಿಫಾರಸುಗಳಿಗೆ ವ್ಹಾಯಿಸ್ರಾಯರ ಸಮ್ಮತವಿಲ್ಲ ಪರಂತು ಕೆಲವೊಂದು ಆರ್ಥಿಕ ಪ್ರಶ್ನೆಗಳನ್ನೆತ್ತಿ ಆ ಕುರಿತು ಯಾರಾದರೂ ಚರ್ಚೆ ನಡಿಸಬಹುದು

೪ ಉಪ್ಪಿನಕರ ಶಾಸನಗಳ ರದ್ಧತಿ ಕುರಿತು ವ್ಹಾಯಿಸ್ರಾಯರ ಅಭಿಪ್ರಾಯವು ಹೀಗಿರುತ್ತದೆ (ಅ) ಸೈಮನ ಸಪ್ತಕರ ವರದಿಯಲ್ಲಿನ ಶಿಫಾರಸುಗಳು ಸ್ವೀಕರಿಸಲ್ಪಡುವ ಸಂದರ್ಭದಲ್ಲಿ ಉಪ್ಪಿನ ಮೇಲಿನ ಕರ ಹಾಗೂ ಕಾನೂನಿನ ಅಧಿಕಾರವು ಪ್ರಾಂತಿಕ ಸರಕಾರಕ್ಕೆ ಸೇರುವುದು (ಆ) ಇಷ್ಟರಲ್ಲಿಯೇ ಸರಕಾರದ ಆದಾಯವು ಬಹುತೇಕವಾಗಿ ಕಮ್ಮಿಯಾಗಿರುವುದರಿಂದ ಉಪ್ಪಿನ ಕರದಿಂದಾಗುವ ಆದಾಯ ಲಾಭವನ್ನು ಸರಕಾರವು ಬಿಡುವಂತಿಲ್ಲ ಅಂಥಾ ನಷ್ಟ ಭರ್ತಿಗೆ ಬೇರೆ ಉಪಾಯ ಹಂಚಿಕೆಗಳಾಗುವ ಸಂಭವದಲ್ಲಿ ವ್ಹಾಯಿಸ್ರಾಯರು ಆ ಕುರಿತು ಆಲೋಚಿಸಲಿರುವರು ಎಷ್ಟರ ತನಕ ಉಪ್ಪಿನಶಾಸನವು ಜ್ಯಾರಿಯಲ್ಲಿರುತ್ತದೊ ಅದು ತನಕ ಇದಕ್ಕೆ ಭಂಗಬಾರದಂತೆ ನೋಡಲಿಕ್ಕೆ ಬೇಕು ಬಡಬಗ್ಗರ ಕಷ್ಟಸಂಕಷ್ಟಗಳ ನಿವಾರಣೆಗೂ ಜನತೆಯ ಆರ್ಥಿಕ ಸಾಂಪತ್ತಿಕ ಅಶಾಂತತೆಯು ಹೋಗಲಾಡಿಸಲಿಕ್ಕೂ ಅನುಕೂಲವಾಗುವಂತೆ, ಪ್ರಸ್ತುತದ ದೇಶದ್ರೋಹಿಗಳ ಉಭಯಪಕ್ಷಗಳಿಗೂ ಶಾಂತಿಸೌಹಾರ್ದಗಳು ನೆಲೆಗೊಂಡ ಬಳಿಕ ಜನತೆಯ ಮುಂದಾಳುಗಳೊಡನೆ ಸಮಯೋಚಿತವಾಗಿ ವ್ಹಾಯಿಸ್ರಾಯರು ಯೋಚಿಸಿ ಮುಂದಿನ ಅಗತ್ಯದ ಕಾರ್ಯಾನುಕೂಲಕ್ಕೆ ಸಮ್ಮತ ವ್ಯಕ್ತಪಡಿಸಿರುವರು

೫ ಮದ್ಯ ಮತ್ತು ವಿದೇಶಿ ಬಟ್ಟೆಬರೆಗಳ ವ್ಯಾಪಾರ ಸಾಪಾರದ ಕುರಿತು ಶಾಂತ ಮತ್ತು ಅನತ್ಯಾಚಾರವಾದ ಪಿಕೆಟಿಂಗ್ ಕಾರ್ಯಕ್ಕೆ ಅಡ್ಡಿಅಭ್ಯಂತರವಿಲ್ಲವಾದರೂ, ಇಂತಹ ವರ್ತನಗಳಿಂದ ಎರಡನೆಯವರ ಮೇಲೆ ಅತ್ಯಾಚಾರ ಪೀಡೆ ಬಲತ್ಕಾರ ಮೊದಲಾದವುಗಳ ಸಂಭವಗಳಲ್ಲಿ ಆ ಕುರಿತು ಅಗತ್ಯದ ಕಾಯಿದೆ ತೀರ ಅಧಿಕಾರವು ವ್ಹಾಯಿಸ್ರಾಯರಿಗಿರುವುದು.

೬ ಶಾಸನಭಂಗ ಚಳವಳಕ್ಕೆ ಸಂಬಂಧಿಸಿ ನಿವೃತ್ತರಾದ ಅಧಿಕಾರಿ ಉದ್ಯೋಗಸ್ಥರನ್ನು ಪುನಃ ಸೇರಿಸಿಕೊಳ್ಳುವ ಅಧಿಕಾರವು ಆಯಾಯಾ ಪ್ರಾಂತೀಯ ಸರಕಾರಕ್ಕೆ ಇರುವುದು ನೌಕರೀ ಸ್ಥಾನಗಳು ಖಾಲಿ ಇರುವ ಹಾಗೂ ಇನ್ನಿತರ ಕಾರಣ ಮತ್ತು ಸಂಭವಗಳಲ್ಲಿ ಮಾತ್ರ ನಿವೃತ್ತರಾದ ಅಧಿಕಾರಿಗಳನ್ನು ಸೇರಿಸಿಕೊಳ್ಳಲಾಗುವುದು

೭ ಪ್ರೆಸ್ ಶಾಸನದ ಮೇರೆಗೆ ಸ್ವಾಧೀನಪಡಿಸಿದ, ಹಾಗೂ ಮುಟ್ಟುಗೋಲು ಹಾಕಿದ ಅಥವಾ ಜಾಮೀನು ವಗೈರೆಯಾಗಿ ಕೇಳಿರಿಸಿಟ್ಟವುಗಳನ್ನು ಹಿಂತಿರುಗಿ ಬಿಟ್ಟುಕೊಡುವಲ್ಲಿ ಯಾವ ಆತಂಕವೂ ಇರುವುದಿಲ್ಲ

೮ ಭೂಕಂದಾಯ ಕಾನೂನಿನ ಮೇರೆಗೆ ಜಪ್ತಿಮಾಡಿ ಹಾಗೂ ಸ್ವಾಧೀನಮಾಡಿಕೊಂಡ ಆಸ್ತಿ ಮತ್ತು ಜುಲುಮಾನೆಗಳನ್ನು ಮರಳಿಕೊಡುವ ಕುರಿತು ಜಿಜ್ಞಾಸೆಯ ವಿಚಾರವಾಗಿದೆ ಇತರರಿಗೆ ಮಾರಿದ ಅಥವಾ ಏಲಂ ಮಾಡಿದ ಸೊತ್ತುಗಳಿಗೆ ಮೂರನೇಯವರ ಹಕ್ಕು ಇರುತ್ತದೆ ಜುಲುಮಾನೆಗಳನ್ನು ಹಿಂತಿರುಗಿ ಕೊಡುವರೆಯೂ ಆತಂಕ ತೊಡಕುಗಳಿರುವವು. ಅಂದರೂ ಈ ಕುರಿತು ನ್ಯಾಯವಾದ ಮತ್ತು ಸಮಯೋಚಿತವಾದ ರೀತಿನೀತಿಗಳಿಂದ ಪ್ರಾಂತಿಕ ಸರಕಾರಗಳು ವರ್ತಿಸುವಂತೆ ಯತ್ನಮಾಡಲಾಗುವವು

೯ ರಾಜಕೀಯ ಕೈದಿಗಳ ಬಿಡುಗಡೆ ಕುರಿತು ವ್ಹಾಯಿಸ್ರಾಯರ ಅಭಿಪ್ರಾಯಗಳು ಅವರ ಪತ್ರದಲ್ಲಿಯೇ ಉಲ್ಲೇಖಿಸಿರುತ್ತವೆ

## ಗಾಂಧಿಯವರಿಗೆ ನೆಹರುಗಳ ಕೊನೆಯ ಸೂಚನಾಪತ್ರ.

ಮೇಲಿನ ದಾಖ್ಲೆಗಳೊಂದಿಗೆ ಸಂಧಾನಕರ್ತರು ನೈನಿ ಜೈಲಿಗೆ ಒಂದಿಳಿದು ನೆಹರು ಪಿತಾಪುತ್ರರಿಗೂ, ಡಾ. ಸಯ್ಯದ ಮಹಮ್ಮದರಿಗೂ ಪರಿಸ್ಥಿತಿಯನ್ನು ತಿಳಿಸಿದರು ಈ ಸನ್ನಿವೇಶನದಲ್ಲಿ ಒಪ್ಪಂದವು ಅಸಂಭವನೀಯವಾಗಿದೆಯೆಂದೂ ಪ್ರಸ್ತಾಪಿಸಿ ಗಾಂಧಿಯವರಿಗೆ ತಮ್ಮ ಕೊನೆಯ ಸೂಚನಾಪತ್ರವನ್ನು ಆಗೋಸ್ತು ತಾ ೧೫ಕ್ಕೆ ನೈನಿ ಸೆಂಟ್ರಲ ಜೈಲಿನಿಂದ ಶಾಂತಿ ಸಾಧಕರೊಡನೆ ಬರಕೊಟ್ಟರು

### ಪತ್ರದ ಸೂಚನೆಗಳು

ತಾ ೧೫ರಲ್ಲು ಎರವಾಡ ಜೈಲಿನಿಂದ ತಮ್ಮೆಲ್ಲರಿಂದ ಸೂಚಿತವಾದ ಅಭಿಪ್ರಾಯಗಳಲ್ಲಿ ಪರಾಮರ್ಶವು ಅಸಾಧ್ಯ ಹಾಗೂ ಅಸಮ್ಮತವೆಂದೂ, ಸಪ್ರೂ ಜಯಕರರು ಶಾಂತಿಲಾಭಕ್ಕಾಗಿ ಗೈದ ಸಾಧನೆಗಳು ವಿಫಲಗೊಂಡವಾಗಿಯೂ ವ್ಹಾಯಿಸ್ರಾಯರ ಅಭಿಪ್ರಾಯದ ಯಥಾಪ್ರತಿಯನ್ನು ತಾ. ೩೧ನೇ ಪತ್ರದ ಪ್ರತಿಯೊಂದು ಸಂಧಾನಸಾಧಕರಿಂದ ದೊರಕಿರುತ್ತದೆ ಕೆಲವು ಮುಖ್ಯ ತತ್ವಸೂತ್ರಗಳ ಕುರಿತು ನಿರ್ಧಾರ ಹಾಗೂ ಬ್ರಿಟಿಷ ಸರಕಾರದಿಂದ ಆ ಕುರಿತು ನಿರೂಪ ಆಶ್ವಾಸನೆಗಳಾಗುವಲ್ಲಿ ಮುಂದಿನ ವಿಚಾರಕ್ಕೂ ಶಾಸನಭಂಗ ಚಳವಳಿಯನ್ನು ನಿಲ್ಲಿಸಲಿಕ್ಕೂ ಅನುಕೂಲತೆಗಳಾಗುವವಾಗಿಯೂ, ಹಾಗೆ ಕಾಂಗ್ರೆಸ ಕಮಿಟಿಯವರಿಂದ ಚಳವಳವನ್ನು ನಿಲ್ಲಿಸುವಲ್ಲಿ ಅದೇ ಸಮಯಕ್ಕೆ ಸರಿಯಾಗಿ ಬ್ರಿಟಿಷ ಸರಕಾರದಿಂದ ಜ್ಯಾರಿಗೊ ಬರಲಿರುವವಾಗಿಯೂ ಅಂತಹ ವಿಚಾರವೊಂದರ ತೀರ್ಮಾನವಾದ ಬಳಿಕವೇ ಲಂಡನ್ ಗೋಷ್ಟಿಯಲ್ಲಿ ಕೊಂಗ್ರೆಸು ಭಾಗಿಯಾಗುವ ಕುರಿತು ಇತ್ಯರ್ಥವಾಗುವುದಾಗಿಯೂ, ಮೊದಲಾದ ವಿಷಯಗಳನ್ನುದ್ದೇಶಿಸಿ ನಾವು ಮಾಡಿದ ಸೂಚನೆಗಳಿಗೆ ವ್ಹಾಯಿಸ್ರಾಯರ ಅಸಮ್ಮತಿಯೇ ಪ್ರಕಟವಾಗಿರುವುದು ಅವರಪರು ಪ್ರಕೃತ ಕೈಕೊಂಡ ವ್ಯವಹಾರ ವಿಧಾನದಿಂದಲೂ, ಕೊಂಗ್ರೆಸ ಕಮಿಟಿಯನ್ನು ಅಕ್ರಮಕೂಟ ಮತ್ತು ನ್ಯಾಯ ಬಾಹಿರವಾಗಿ ಪರಿಗಣಿಸಿರುವುದರಿಂದಲೂ ಸಂಧಾನವು ಅಸಂಭವನೀಯವೆಂದೇ ವಿದಿತಗೊಳ್ಳುವುದು. ವ್ಹಾಯಿಸ್ರಾಯರು ಈ ಮೊದಲು ಅಸೆಂಬ್ಲಿಯಲ್ಲಿ ಮಾಡಿದ ಭಾಷಣದ ವಿಚಾರಗಳೇ ಅವರ ಪತ್ರದ ಪ್ರಥಮ ಭಾಗದಲ್ಲಿ ಇನ್ನೂ ವ್ಯಕ್ತವಾಗುತ್ತಿವೆ ಇಂಡಿಯವನ್ನು ಬ್ರಿಟಿಷ ಚಕ್ರಾಧಿಪತ್ಯದಿಂದ ಮುಕ್ತಗೊಳಿಸುವ ಹಾಗೂ ಬ್ರಿಟಿಷರ ಹಕ್ಕುಭಾದ್ಯತೆಗಳ ನಿರ್ಧಾರಗಳ ಕುರಿತು ನಮ್ಮ ಸೂಚನೆಯು ಚಕ್ರಗೋಷ್ಟಿಯಲ್ಲಿ ತರುವುದು ಅಹಿತವಾಗಿಯೂ ಅಂತಹ ವಿಚಾರವೊಂದರ ಸಂಭವವಿರುವಲ್ಲಿ ತಾನು ಅದನ್ನು ಮುಂದಾಗಿ ಸ್ಟೇಟ ಸಕ್ರೆಟರಿಯವರಿಗ ತಿಳಿಸಲಿರುವುದಾಗಿಯೂ ಇಂಡಿಯದ ಸಾಲ ಮತ್ತು ಇನ್ನಿತರ ಲೇಣದೇಣೆಗಳ ಕುರಿತು ವಿಚಾರಣಾ ಸ್ವಾತಂತ್ರ್ಯವಿರುವ ಸಮಿತಿಯೊಂದರಿಂದ ವಿಮರ್ಶೆಯಾಗುವ ಸಂದರ್ಭದಲ್ಲಿ ಕೆಲವು ಸಂಗತಿಗಳಲ್ಲಿ ಮಾತ್ರವೇ ಇಂತಹ ವಿಮರ್ಶೆಯ ಸಾಧ್ಯತೆಯನ್ನು ಪ್ರಸ್ತಾಪಿಸಿರುವರು ರಾಜಕೀಯ ಕೈದಿಗಳ ಬಿಡುಗಡೆಮಾಡುವುದಾಗಿ ಯಾವ ತರದ ಆಶ್ವಾಸನವು ಕೊಟ್ಟಿಲ್ಲ ಈ ವಿಷಯವು ಪ್ರಾಂತಿಕ ಸರಕಾರದ ವಿಚಾರದಲ್ಲಿರುವುದಾಗಿ ಮಾತ್ರ ಸೂಚನೆಯಾಗಿದೆ ಮಾತ್ರವೇ ಅಲ್ಲ ಶಾಸನಭಂಗ ಚಳವಳಕ್ಕೆ ಮೊದಲು ಮೀರತ್ ಕೇಸಿನ ಮತ್ತು ಇನ್ನಿತರ ಅಹಿಂಸಾತ್ಮಕ ಮತ್ತು ಅನತ್ಯಾಚಾರದ ವರ್ತನಗಳಿಂದ ಕಾರಾವಾಸವನ್ನು ಸೇರಿದ ಕೈದಿಗಳ ಬಂಧನ ಮುಕ್ತತೆಯ ಕುರಿತು ಏನೊಂದು ಮಾತು ಕೂಡಾ ಇರುವುದಿಲ್ಲ ಅತ್ಯಾಚಾರ ಮತ್ತು ಹಿಂಸೆಯ ಪ್ರವೃತ್ತಿಗಳಿಗಾಗಿ ದಂಡನೆ ಮತ್ತು ಶಿಕ್ಷೆಗೊಳಗಾದವರ ಬಿಡುಗಡೆಯಾಗುವಂತೆ ನಾವೆಂದೂ ಕೇಳಲಿಲ್ಲ ಮದ್ಯ ಮತ್ತು ವಿದೇಶಿ ಬಟ್ಟೆಬರೆಗಳ ವ್ಯಾಪಾರಗಳ ಬಹಿಷ್ಕಾರದ ಪಿಕೆಟಿಂಗ್ ನಿಷೇಧಿಸಿ ಪ್ರಕೃತಕ್ಕಿರುವ ಆರ್ಡಿನೆನ್ಸುಗಳನ್ನು ರದ್ದುಮಾಡಲಾಗುವುದಾದರೂ, ಮುಂದಕ್ಕೆ ಅವಶ್ಯಬಿದ್ದ ಹಾಗೆ ಅಂತಹ ಆರ್ಡಿನೆನ್ಸುಗಳನ್ನು ಜ್ಯಾರಿಗೆ ತರುವಂತಹ ಅಧಿಕಾರವು ವ್ಹಾಯಿಸ್ರಾಯರಿಗಿರುವುದಾಗಿ ಸೂಚಿಸಿರುವುದರಿಂದ ಒಮ್ಮೆಗೇನೋ ಅಂತಹ ಆರ್ಡಿನೆನ್ಸು ಶಾಸನಗಳನ್ನು ನಿಲ್ಲಿಸಿದರೂ,

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ ಫಲಪ್ರಾಪ್ತಿ ಖರ

## ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಪದ್ಧತಿಗಳಲ್ಲಿ ಮುಖ್ಯವಾಗಿ ಸರಕಾರದಿಂದ ... 'ವೈದ್ಯ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ್' ... [illegible]

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.)



## Batliwalla's Preparations Cover All Your Needs.
A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

# ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಜಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ... [illegible]

LIBERAL DISCOUNT TO TRADE

ಕಾಂವಸಜಿ, CAWASHAPUR, BOMBAY

ಎಲ್ಲಾ ಕಡೆಗಳಲಿ ಡಾ. ಯಚ್ ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
ವಿಜಂಟರು ದೇಶಾಗಿದ್ದಾರೆ Sayani Road P O Cadell Road Bombay No 14



# ಕೇಸರಿಯವರ ರತ್ನತ್ರಯಗಳು.

'ಲೋಧ್ರ'

ಶ್ರೀ ಜಯಲಕ್ಷ್ಮಮ್ಮ ಮಿಸ್ಸಿಸ್ ... [illegible]

'ಅಮೃತ'

ಮಿ॥ ಎ ಸುಬ್ಬರಾಯರು, ಹೈಕೋರ್ಟ್ ವಕೀಲರು ಮಂಗಳೂರು—ನಿಮ್ಮ 'ಅಮೃತ'ವು ಉತ್ತಮವಾದ ರಕ್ತಶೋಧಕ ... [illegible]

"ಅರ್ಕ"

ಮಾ॥ ಚಂಗಯ್ಯನವರು, ಧರ್ಮಾರ್ಥದಿಯದ ಬೋರ್ಡ್ ಕಮಿಷನರ್, ಬೆಂಗಳೂರು ಡಿಸ್ಟ್ರಿಕ್ಟ್, ... [illegible]

## ಕೇಸರಿ ಕುಟೀರಮ್.
ಎಗ್ಮೋರು, ಮದರಾಸು.

ಪೋಸ್ಟ್ ಬಾಕ್ಸ್ 752 ತಂತಿ "ಕೇಸರಿ" ಫೋನ್ 8486.

ಏಜಂಟರು—ಷಾ ಕಂಪೆನಿ, (ದಿ ಉಲನ್ ಮಾರ್ಟ್) ಮಂಗಳೂರು.


ನೋಡಿದರೆ ಬಿಡದಿರುವ ಕಾದಂಬರಿಗಳು

[illegible]





Liveliness-zip-pep you get that all the time from an 'Exide' because it is built into it.
Care and thought in the design—keen determination in the selection of material and the experience of thousands of users have made

# Exide
THE LONG-LIFE BATTERY
The/C P C, Co. Ltd
MANGALORE



## The Kanara Watch House Udipi, S. K.



ಗ್ಯಾರಂಟಿಯುಳ್ಳ ವಾಚುಗಳು! ಅತೀ ಕಡಿಮೆ ಬೆಲೆ

## ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ಪೋಕೆಟುಗಳೂ, ಟೇಬಲ್ ಗಡಿಯಾರಗಳೂ, ... ದೀಪಗಳೂ, ಅವುಗಳ ಸಾಮಾನುಗಳೂ ದಾಸ್ತಾನಿರುತ್ತವೆ

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

... [illegible]

ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯಪಟ್ಟಿ ಮತ್ತು ಇತರ ಹಕೀಕತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮ್ಯಾನೇಜರ್,
ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಸೂ. ... [illegible]

ಹಿಂದೆಯೇ ಅವುಗಳಿಗ ಜೀವಕಳೆ ತುಂಬುವ ಸಂದರ್ಭವೂ ಇರುವುದು.

ಉಪ್ಪಿನ ಶಾಸನ ಹಾಗೂ ಇನ್ನಿತರ ವಿಚಾರಗಳ ಕುರಿತು ವ್ಯಾಸ್ರಾಯರ ಅಭಿಪ್ರಾಯಗಳು ತೀರ ಅತೃಪ್ತಿಕರವಾಗಿದೆ. ಅಂತು ಲೋರ್ಡ ಇರ್ವಿನರು ನಮ್ಮ ಪ್ರಮುಖ್ಯ ಎಲ್ಲಾ ವಿಚಾರಗಳಿಗೂ, ಸಾಮಾನ್ಯವಾದ ಮಿಕ್ಕ ವಿಚಾರಗಳಿಗೂ ಅಸಮ್ಮತಿಯನ್ನೇ ವ್ಯಕ್ತಪಡಿಸಿರುವುದರಿಂದ ಉಭಯತರ ಅಭಿಪ್ರಾಯಗಳು ಸರಿಬೀಳುವ ಸಂಭವವಿರುವುದಿಲ್ಲ. ನಮ್ಮ ಅಭಿಪ್ರಾಯಗಳನ್ನು ಸರದಾರ ಪಟೇಲ ಶ್ರೀಮತಿ ಸರೋಜಿನಿ ಮೊದಲಾದವರಿಗೆ ತೋರಿಸಿ ಅವರೊಡನೆ ವಿಚಾರಿಸಿಕೊಂಡು ನಿಮ್ಮ ತೀರ್ಮಾನವನ್ನು ಸಂಧಾನ ಸಾಧಕರಿಗೆ ಹೇಳುವುದು. ಅಲ್ಲದೆ ಈ ವಿಷಯದ ವ್ಯವಹಾರ ಹಾಗೂ ಇನ್ನಿತರ ಕಾಗದ ಪತ್ರಗಳನ್ನು ಪ್ರಕಟಿಸುವುದಕ್ಕೆ ಹೆಚ್ಚಿನ ವಿಳಂಬಮಾಡುವುದು ಎಷ್ಟಕವಲ್ಲ. ಅಲ್ಲದೆ ಈ ಸಂದರ್ಭದ ಎಲ್ಲಾ ಅಗತ್ಯ ಹಾಗೂ ಸಿಂಧು ಮತ್ತು ನಿಶ್ಚಯಸಮ್ಮತವಾದ ಕಾಗದ ಮತ್ತು ದಾಖಲೆಗಳನ್ನು ಲೀಗಿನ ಪ್ರೆಸಿಡೆಂಟರಾದ ಚೌಡರಿ ಖಲೀಖ್ ಉಸ್ಮಾನರಿಗೆ ತಪ್ಪಿಸುವಂತೆ ಸರ್. ತೇಜಬಹದ್ದೂರು ಸಪ್ರೂ ಮತ್ತು ಶ್ರೀ ಜಯಕರರನ್ನು ಕೇಳಿಕೊಳ್ಳುತ್ತೇವೆ.'

## ಪುಢಾರಿಗಳ ಏಕ ಕಂಠೋಕ್ತ್ತರ.

ಸಂಧಾನ ಸಾಧಕರಾದ ಡಾ। ಸಪ್ರೂ ಮತ್ತು ಬ್ಯಾರಿಸ್ಟರ್ ಜಯಕರರವರು ನೈನಿತಾಲಿನಿಂದ ಹೊರಟು ಸಪ್ಟಂಬರ ತಾ ೫ಕ್ಕೆ ಎರವಾಡಕ್ಕೆ ತಲ್ಪಿ ತಾ ೪ ಮತ್ತು ೫ರಲ್ಲಿ ಮಹಾತ್ಮ ಗಾಂಧಿ, ಸರದಾರ ಪಟೇಲ, ಶ್ರೀಮತಿ ಸರೋಜಿನಿ ಮತ್ತು ಜಯರಾಮದಾಸ್ ದೌಲತರಾಮರೊಡನೆ ಚರ್ಚೆ ಪ್ರತಿಚರ್ಚೆಗಳನ್ನು ನಡಿಸಿದರು. ಈ ಪರಾಮರ್ಶದ ಪರಿಣಾಮವಾಗಿ ತಾ ೬ನೇ ಶುಕ್ರವಾರ ದಿನ ಪುಢಾರಿಗಳೆಲ್ಲರೂ ತಮ್ಮ ಏಕ ಕಂಠೋಕ್ತವಾದ ಕೊನೆಯ ಅಭಿಪ್ರಾಯ ಕೊಟ್ಟುಬಿಟ್ಟರು. ಇದು ತನಕ ನಡೆದ ವಿದ್ಯಮಾನ ಹಾಗೂ ಇನ್ನಿತರ ಪರಿಸ್ಥಿತಿಗಳನ್ನು ವಿಮರ್ಶಿಸುವಲ್ಲಿ ವೈಸ್ರಾಯರು ಕಾಂಗ್ರೆಸ್ ಪಕ್ಷದವರ ಯಾವದೊಂದು ಬೇಡಿಕೆ ಮತ್ತು ಕೇಳಿಕೆಗೆ ಒಪ್ಪಿದ್ದು ವ್ಯಕ್ತವಾಗುವುದಿಲ್ಲ. ಇವಕ್ಕೆ ಪ್ರತಿಯಾಗಿ ನಮ್ಮ ಸೂಚನೆ ಅಭಿಪ್ರಾಯಗಳು ವಿಚಾರಣೆಗೆ ಯೋಗ್ಯವಲ್ಲವೆಂದೂ, ಆ ಮೇರೆಗೆ ವರ್ತಿಸುವುದು ಅನಾನುಕೂಲವೆಂದೇ ಪ್ರಸ್ತಾಪಿಸಿರುವರು.

ಹಿಂದೂದೇಶಕ್ಕೆ ಈಗ ಸಂಪೂರ್ಣ ಜವಾಬ್ದಾರೀ ಸರಕಾರವು ದೊರೆಯುವ ಸಂದರ್ಭವಲ್ಲಿಯೂ, ಉಭಯತರು ಏನೊಂದು ನಿರ್ಬಂಧವಿಲ್ಲದಂತೆ ಮುಂದಕ್ಕೆ ಬೇರೆ ಬೇರೆಯಾಗಿ ಇರುವಂತಹದೊಂದು ಏಪ್ಸಂದವಾದರೂ ಈಗಲೇ ಅಗಲಿಕ್ಕೆ ಇರುತ್ತದೆ. ಅಲ್ಲದೆ ಭರತ ಖಂಡವು ತನ್ನಿಚ್ಛೆಯಿಂದ ಚಕ್ರಾಧಿಪತ್ಯವನ್ನು ಬಿಟ್ಟುಹೋಗುವ ಪಕ್ಷದ ನಿರ್ಧಾರವಾಗುವ ಮೊದಲು ಯಾವ ಸಂಧಾನಕಾರ್ಯ ಹೊಸ ಆಡಳಿತ ಕ್ರಮಗಳ ರಚನೆಗಾಗಲಿ ಎಷ್ಟು ಭಯನೀಯವು. ನೀವು ವಾಯುಗಳನೊಂದಿಗೆ ಕೇವಲ ಪ್ರಕೃತಿಯೇ ಒದಗಿಸಿಕೊಟ್ಟಿರುವ ಉಪ್ಪಿನಕರ ರದ್ದುಗೊಳಿಸುವ ವಿಚಾರಕ್ಕೆಂದು ಅಸಮ್ಮತವೆಂದು ವಿದಿತವಾಯಿತೊ ಆ ಬಳಿಕ ಸಂಧಾನದ ಮಾತು ಎಲ್ಲಿ? ನಿಮ್ಮಾದಲ್ಲಿ ಶಿಬಿರಗಳಲ್ಲಿ ಕಳಿತ ಲಕ್ಷಾವಧಿ ಅನ್ನ ಹೊಟ್ಟೆಬಟ್ಟೆಗಿಲ್ಲದೆ ಅನಾಥರಾದ ಭಾರತೀಯರ ಕಷ್ಟಸಂಕಷ್ಟಗಳು ಹೇಗೆ ಶಾಸನ ಸುಭವವಾಗುವವು? ಅಂತಹಲ್ಲಿ ಇಂತಹ ಸನ್ನಿವೇಶ ವಿದ್ಯಮಾನಗಳಲ್ಲಿ ಸಂಧಾನವಾದರೋ ಹೇಗೆ ಸಾಧ್ಯವು?

ಸಂಧಾನವು ವಿಫಲಗೊಂಡಿತಾಗಿ ಆಶಾಭಂಗಕ್ಕೆ ಅವಕಾಶವಿಲ್ಲ. ಸ್ವಾತಂತ್ರ್ಯ ಸಾಧನೆಗಾಗಿ ಕಾಂಗ್ರೆಸ್ಸಿನ ಅಹಿಂಸಾತ್ಮಕ ಹಾಗೂ ಅನತಿಚಾರಕವಾದ ಆತ್ಮಸ್ಥೈರ್ಯವೂ ಇನ್ನೂ ಭರದಿಂದ ಸಾಗಲಿರುವುದು. ಇದರ ಮಹತ್ವವು ಆಳರಸರಿಗೆ ಇಷ್ಟು ದಿವಸಯಲ್ಲಿ ತಿಳಿಯದೆ ಇದ್ದರೂ ಇನ್ನು ಮುಂದಕ್ಕೆ ತಿಳಿಯದೆ ಹೋಗಲಾರದು. ಕಾಂಗ್ರೆಸಿಗೆ ಯಾರೊಡನೆ ದ್ವೇಷವು ಇರುವುದಿಲ್ಲ. ಬ್ರಿಟಿಷರ ಮೇಲೆ ಏನೊಂದೂ ವೈಯಕ್ತಿಕ ದ್ವೇಷನಿಷ್ಠುರಗಳು ಇರುವುದಿಲ್ಲ. ಅನರ್ಥಕರವಾದ ಅವರ ಅಧಿಕಾರದ ವಿಷಯವನ್ನು ಮಾತ್ರ ಸಂಪೂರ್ಣ ನೈತಿಕ ಶಕ್ತಿಯಿಂದ ನಿರೋಧಿಸಲಿರುವುದು. ಅಂತು ಅಹಿಂಸೆ ಮತ್ತು ಅನತಿಚಾರ ಸ್ಥಿತಿತ್ವವನ್ನು ಬಿಡದೆ ಕೊನೆಯತನಕ ಈ ಹೋರಾಟ ಪಾಲಿಸುವಲ್ಲಿ ಹಿಂದೀಯರ ಕಾಂಕ್ಷೆಯು ಸಫಲಗೊಳ್ಳದಿರದು. ಸಂಧಾನ ಸಾಧನೆಗಾಗಿ ಸಪ್ರೂ ಜಯಕರವರೆತ್ತಿಟ್ಟ ಪ್ರಯತ್ನವೂ ಸಹಿಸಿದ ಕಷ್ಟಗಳೂ ಸ್ತುತ್ಯಾರ್ಹವಾದವುಗಳು. ಆದರೂ ಸಂಧಾನಕ್ಕೆ ಇನ್ನೂ ಕಾಲವು ಸನ್ನಿಹಿತವಾಗಲಿಲ್ಲ. ಆ ಸಮಯವು ಬಂದಾಗ ಹಾಗೂ ಸರಕಾರವು ನಿಜವಾಗಿಯೂ ರಾಜೀ ಪ್ರಸ್ತಾಪ ಬಯಸಿದಾಗ ನಿರಾತಂಕವಾಗಿ ಧುರೀಣರನ್ನು ಕಂಡು ಮಾತಾಡಬಹುದು.

---

## ಕೊಡಗು ದೇಶದ ರಾಜ್ಯಭಾರ ಕ್ರಮ.

ಲೇಖಕ: — ಎಸ್. ಜಿ. ಐಗಳ್.

(ಕಳೆದ ೧೧ನೇ ಸಂಚಿಕೆಯಿಂದ ಮುಂದರಿಸಿದುದು)

ಈ ಕರಾರಿಗೆ ಮದರಾಸು, ಮುಂಬಾಯಿ ಮತ್ತು ಬಂಗಾಳ ಸರಕಾರಗಳ ಪರವಾಗಿ ರೊಬರ್ಟ್ ಟೈಲರ್ ಎಸ್ಕ್ವೈರ್ ವೀರರಾಜೇಂದ್ರ ಒಡೆಯ, ಕೊಡಗು ರಾಜ ಎಂಬ ದಸ್ಕತುಗಳು ಇವೆ.

ಮುಂಬಾಯಿ ಗವರ್ನರರಾದ ಸರ್. ರೋಬರ್ಟ್ ಎಬರ ಕ್ರೊಂಬಿಯು ತಲಚೇರಿಗೆ ಬಂದಾಗ, ವೀರರಾಜನು ಒಂದು ಸಣ್ಣ ಅಂಗರಕ್ಷಕರ ಸೈನ್ಯದೊಡನೆ ಬಂದು ಅವನ ಭೇಟಿಮಾಡಿದನು. ರಾಜ್ಯಭಾರದ ವಿಷಯ ಮಾತುಕಥೆಗಳು ನಡೆದ ಮೇಲೆ ಕಣ್ಣಾನೂರು ಬೀಬಿಯ ಸಂಗತಿಯು ಚರ್ಚೆಗೆ ಬಂತು. ಈ ಬೀಬಿಯು ತಲಚೇರಿಯಲ್ಲಿದ್ದ ಇಂಗ್ಲೀಷರ ಕಡೆ ಒಂದು ಸೈನ್ಯವು ಕಣ್ಣಾನೂರಿಗೆ ಹೋಗುವಾಗ ಮುಸಲ್ಮಾನ ಸೈನ್ಯಾಧಿಪತಿಯ ಕೈಯಲ್ಲಿ ಸಿಕ್ಕಿಬೀಳುವಂತೆ ಒಳಸಂಚು ನಡಿಸಿದ್ದೇ. ಸರ್ ರೊಬರ್ಟ್ ಎಬರಕ್ರೊಂಬಿಯು ಆದಕ್ಕಾಗಿ ಇವಳ ರಾಜ್ಯಾಧಿಕಾರವನ್ನು ತೆಗೆದು ಇವಳನ್ನೂ ಇವಳ ರಾಜಕುಮಾರನನ್ನೂ ಮುಂಬಾಯಿಗೆ ಕಳುಹಿಸುವ ಆಲೋಚನೆಯಲ್ಲಿದ್ದನು. ಈ ರೀತಿಯಲ್ಲಿ ಅವಳನ್ನು ರಾಜ್ಯಭ್ರಷ್ಟಳಾಗಿ ಮಾಡಕೂಡದೆಂದು ವೀರರಾಜನು ಬಹಳ ವಕಾಲತ್ತು ಮಾಡಿದನು. ಸರ್ ಎಬರ್‌ಕ್ರೊಂಬಿಯು ಅದಕ್ಕೆ ಒಪ್ಪಿದನು. ಮೊದಲೊಮ್ಮೆ ಅರಕಲ ರಾಜನೂ ಈ ಬೀಬಿಯ ಪೂರ್ವಜನೂ ಆದ ಅಲಿರಾಜನು ದೊಡ್ಡ ವೀರಪ್ಪ ಒಡೆಯನ ಕಾಲದಲ್ಲಿ, ಚಿರಕಲ ರಾಜನ ಕೈಯಲ್ಲಿ ಸಿಕ್ಕಿಬಿದ್ದ ಒಬ್ಬ ಕೊಡಗು ಸೇನಾಧಿಪತಿಯ ಪ್ರಾಣರಕ್ಷಣೆಮಾಡಿದನು. ಈ ಸಂಗತಿಯನ್ನು ವೀರರಾಜೇಂದ್ರ ಒಡೆಯನು ಮರೆತಿರಲಿಲ್ಲ. ಆ ಕೃತಜ್ಞತೆಯನ್ನು ಈ ಸಮಯದಲ್ಲಿ ತೋರಿಸಿ ಬೀಬಿಯು ರಾಜಭ್ರಷ್ಟಳಾಗದ ಹಾಗೆ ಮಾಡಿ ಕೊಡಗಿಗೆ ಹಿಂತಿರುಗಿ ಬಂದನು.

### ಇಂಗ್ಲೀಷರಿಗೂ ಟೀಪುಸುಲ್ತಾನನಿಗೂ ಆದ ಯುದ್ಧ.

ಮಡಕೇರಿ ಕೋಟೆಯಲ್ಲಿದ್ದ ಟೀಪುಸುಲ್ತಾನನ ಸೈನ್ಯಕ್ಕೆ ಆಹಾರ ಸಾಮಾಗ್ರಿಗಳು ಮುಗಿದು ಹೋದವು. ಟೀಪುಸುಲ್ತಾನನು ಕೊಡಗು ರಾಜ್ಯದಲ್ಲಿ ತನ್ನ ಸ್ವಾಧೀನ ಇದ್ದ ಮಡಿಕೇರಿ ಕೋಟೆಯ ರಕ್ಷಣೆಗಾಗಿ ಹೋದ ಆಹಾರ ಸಾಮಾಗ್ರಿಗಳನ್ನು ಕೊಟ್ಟು ಖಾದರಖಾನನ ಸಂಗಡ ದೊಡ್ಡ ಸೈನ್ಯವನ್ನು ಕಳುಹಿಸಿದನು. ಖಾದರಖಾನನು ಪ್ರೆಜರ್‌ಪೇಟೆಯ ಹತ್ತಿರವಿರುವ ಮುಳ್ಳುಸೋಗೆ ತಲುಪುವಷ್ಟರಲ್ಲಿ ವೀರರಾಜನು ಸೈನ್ಯದೊಡನೆ ಬಂದು ಯುದ್ಧಕ್ಕೆ ನಿಂತನು. ಯುದ್ಧದಲ್ಲಿ ಖಾದರಖಾನನ ೫೦೦ ಮಂದಿ ಸೈನಿಕರು ಮಡಿದುಬಿದ್ದರು. ಆಗ ಖಾದರಖಾನನು ಒಂದು ಗುಡ್ಡದ ಮೇಲೆ ಆಹಾರ ಸಾಮಾಗ್ರಿಗಳನ್ನು ಸುತ್ತಲೂ ಇಟ್ಟು ಇದರೊಳಗೆ ತನ್ನ ಸೈನ್ಯದೊಡನೆ ಉಳುಕೊಂಡನು. ಸೋತುಹೋದ ಈ ಮುಸಲ್ಮಾನ ಸೈನ್ಯವು ತಿರಿಗಿ ಯುದ್ಧವಾಗುವದೆಂದು ನಿಶ್ಚಯಿಸಿತ. ಕೊಡಗರು ತಿರಿಗೊಮ್ಮೆ ಯುದ್ಧ ಮಾಡಬೇಕೆಂದು ಕಾಯುತ್ತಿದ್ದರು. ಮುಸಲ್ಮಾನ ಸೇನಾಧಿಪತಿಯಾದ ಖಾದರಖಾನನು ವೀರರಾಜನ ಸ್ನೇಹಿತನಾಗಿದ್ದನು. ವೀರರಾಜನೂ ಅವನ ಕುಟುಂಬವೂ ಪರಿಯಾಪಟ್ಟಣದಲ್ಲಿ ಸೆರೆಯಲ್ಲಿರುವಾಗ ಈ ಖಾದರಖಾನನು ವೀರರಾಜನ ಸಹೋದರಿಯ ಮಾನರಕ್ಷಣೆ ಮಾಡಿದ್ದನು. ಆದುದರಿಂದ ಇಂಥಾ ಸ್ನೇಹಿತನನ್ನು ಕೊಲ್ಲಬಾರದೆಂದು ವೀರರಾಜನು ಆಲೋಚಿಸುತ್ತಿದ್ದನು. ಅಷ್ಟರಲ್ಲಿ ತನ್ನನ್ನು ಆಹಾರ ಸಾಮಾಗ್ರಿ ಸಹಿತ ಮಡಿಕೇರಿ ಕೋಟೆಗೆ ಹೋಗಲಿಕ್ಕೆ ಬಿಡದೆ ಇದ್ದರೆ ಶ್ರೀರಂಗ ಪಟ್ಟಣದಲ್ಲಿರುವ ತನ್ನ ಕುಟುಂಬವನ್ನು ಟೀಪುಸುಲ್ತಾನನು ನಾಶಪಡಿಸುವನೆಂದೂ ಖಾದರಖಾನನು ಒಬ್ಬ ಗೂಢಚಾರನೊಡನೆ ವೀರರಾಜನಿದ್ದಲ್ಲಿಗೆ ಹೇಳಿ ಕಳುಹಿಸಿದನು. ವೀರರಾಜನು ಇದಕ್ಕೆ ಒಪ್ಪಿದನು. ಆಹಾರ ಸಾಮಾಗ್ರಿಗಳು ಖರ್ಚಾದ ಕೂಡಲೇ ಕೋಟೆಯನ್ನು ಬಿಟ್ಟುಕೊಡುತ್ತೇನೆಂದು ಕೋಟೆಯ ಕಿಲ್ಲೆದಾರನಾದ ಜಾಫರ್ ಅಲಿಬೇಗನೂ ಒಪ್ಪಿದನು. ಈ ರೀತಿಯಲ್ಲಿ ಆಲೋಚಿಸಿ ಖಾದರಖಾನನು ಆಹಾರ ಸಾಮಾಗ್ರಿಗಳನ್ನು ಮಡಿಕೇರಿ ಕೋಟೆಯಲ್ಲಿದ್ದ ಸೈನ್ಯಕ್ಕೆ ಕೊಟ್ಟು ಶ್ರೀರಂಗ ಪಟ್ಟಣಕ್ಕೆ ಹಿಂತಿರುಗಿದನು. ಈ ಸಂಗತಿಯು ಸರ್ ಎಬರ್‌ಕ್ರೊಂಬಿಗೆ ತಿಳಿದ ಕೂಡಲೇ ವೀರರಾಜನು ಟೀಪುವಿನೊಡನೆ ಸ್ನೇಹಭಾವದಲ್ಲಿದ್ದಾನೆಂದು ತಿಳಕೊಂಡು ವೀರರಾಜನೊಡನೆ ಈ ಸಂಗತಿಯನ್ನು ವಿಚಾರಿಸಿದನು. ವೀರರಾಜನು ಎಲ್ಲವನ್ನೂ ಇದ್ದಂತೆಯೇ ತಿಳಿಸಿದನು. ಆಹಾರ ಸಾಮಾಗ್ರಿಯು ಮುಗಿದೊಡನೆಯೇ ಜಾಫರ್ ಅಲಿಬೇಗನು ಮಡಿಕೇರಿ ಕೋಟೆಯನ್ನೂ ಫಿರಂಗಿಗಳನ್ನೂ ಮದ್ದು ಗುಂಡುಗಳನ್ನೂ ಹಣವನ್ನೂ ವೀರರಾಜನಿಗೆ ಬಿಟ್ಟುಕೊಟ್ಟನು. ವೀರರಾಜನು ನಾಲ್ಕುನಾಡು ಅರಮನೆಯಿಂದ ಮಡಿಕೇರಿಗೆ ಬಂದು ಕೋಟೆಯನ್ನೂ ಮದ್ದು ಗುಂಡು ಮುಂತಾದ್ದನ್ನೂ ಸ್ವಾಧೀನಪಡಿಸಿಕೊಂಡು, ಕೋಟೆಯನ್ನುಬಿಟ್ಟುಕೊಟ್ಟ ಮುಸಲ್ಮಾನ ಸೈನ್ಯಕ್ಕೆ ಬೇಕಾದ ಆಹಾರ ಸಾಮಾಗ್ರಿಗಳನ್ನು ಕೊಟ್ಟು ಮೈಸೂರಿಗೆ ಕಳುಹಿಸಿಕೊಟ್ಟನು. ಮಡಿಕೇರಿ ಕೋಟೆಯು ಸ್ವಾಧೀನವಾದೊಡನೆಯೇ ಕೊಡಗುದೇಶವೆಲ್ಲವೂ ವೀರರಾಜೇಂದ್ರ ಒಡೆಯನ ಕೈಸೇರಿದಂತಾಯಿತು. ಆದರೆ ದೇಶದಲ್ಲೆಲ್ಲಾ ಯುದ್ಧಗಳು ನಡೆದುದರಿಂದ ಅದು ಪೂರ್ಣ ಹಾಳು ಸ್ಥಿತಿಯಲ್ಲಿತ್ತು. ಈ ರೀತಿಯಲ್ಲಿ ದೇಶವು ಹಾಳಾದುದರಿಂದ ವೀರರಾಜನು ದಕ್ಷಿಣ ಕನ್ನಡ ಜಿಲ್ಲೆಯ ಕಡಬ, ಉಪ್ಪಿನಂಗಡಿ, ಬೆಳ್ತಂಗಡಿ, ಆಳದಂಗಡಿ, ಬಂಟವಾಳ, ಕುಂಬಳೆ, ಮಂಜೇಶ್ವರ, ಊರುಗಳಿಗೂ ತನ್ನ ಗಡಿಯಲ್ಲಿರುವ ಮೈಸೂರು ಸೀಮೆಗೂ ಕಳುಹಿಸಿದ ದವಸ ಧಾನ್ಯಗಳನ್ನೂ ೧೫೦೦ ದನಕರುಗಳನ್ನೂ ತರಿಸಿ ಕೊಡಗು ದೇಶದ ಜನರೊಳಗೆ ಹಂಚಿ ತನ್ನ ರಾಜ್ಯದಲ್ಲಿ ಸುಭಿಕ್ಷವು ಉಂಟಾಗುವ ಹಾಗೆ ಮಾಡಿದನು.

ಇಂಗ್ಲೀಷರಿಗೂ ಟೀಪುಸುಲ್ತಾನನಿಗೂ ಮೂರನೇ ಮೈಸೂರು ಯುದ್ಧವು ಶುರುವಾಯಿತು. ಲೋರ್ಡ ಕೋರ್ನವಾಲಿಸನು ಮೈಸೂರು ದೇಶಕ್ಕೆ ಬಂದು ಬೆಂಗಳೂರನ್ನು ಸ್ವಾಧೀನಪಡಿಸಿಕೊಂಡನು. ಲೋರ್ಡ ಕೋರ್ನವಾಲಿಸನು ಬೆಂಗಳೂರಿನಿಂದ ಬಂದು ಶ್ರೀರಂಗ ಪಟ್ಟಣದ ಕೋಟೆಗೆ ಮುತ್ತಿಗೆಹಾಕಿದನು. ಜನರಲ್ ಎಬರಕ್ರೊಂಬಿಯು ಮುಂಬಾಯಿಯಿಂದ ಸೈನ್ಯತೆಗೆದುಕೊಂಡು ಹಡಗದಲ್ಲಿ ಬಂದು ತಲಚೇರಿ ಬಂದರದಲ್ಲಿ ಇಳಿದನು. ತಲಚೇರಿಯಿಂದ ಕೊಡಗು ದಾರಿಯಾಗಿ ಶ್ರೀರಂಗ ಪಟ್ಟಣಕ್ಕೆ ಹೋಗುವದೆಂದು ನಿಶ್ಚಯಿಸಿದರು. ಹೆಗ್ಗಳ ಕಣಿವೆಯ ದಾರಿಯನ್ನು ಅಗಲಿಸಿದರು. ವೀರರಾಜನು ತನ್ನ ಗಡಿಯಲ್ಲಿ ಕಾದುಕೊಂಡಿದ್ದು ಸೈನ್ಯಕ್ಕೆ ಬೇಕಾದ ಆಹಾರ ಸಾಮಾಗ್ರಿಗಳನ್ನೂ ಸುಮಾರು ಒಂದು ಸಾವಿರದ ಮೇಲೆ ಹೊರೆಹೊರುವ ಎತ್ತುಗಳನ್ನೂ ಒದಗಿಸಿಕೊಟ್ಟನು. ವೀರರಾಜನು ಸರ್ ರೊಬರ್ಟ್ ಎಬರ ಕ್ರೊಂಬಿಯೊಡನೆ ಶ್ರೀರಂಗ ಪಟ್ಟಣಕ್ಕೆ ಹೋದನು. ಯುದ್ಧವು ಕಠಿಣ ತರದಲ್ಲಿ ನಡೆದು ಶ್ರೀರಂಗಪಟ್ಟಣದ ಕೋಟೆಯು ಇಂಗ್ಲೀಷರ ವಶವಾಗುವ ಸಮಯದಲ್ಲಿ ಮಳೆಗಾಲವು ಶುರುವಾಯಿತು. ಆದುದರಿಂದ ಯುದ್ಧವನ್ನು ನಿಲ್ಲಿಸಿ ಲೋರ್ಡ ಕೋರ್ನವಾಲಿಸನು ಬೆಂಗಳೂರಿಗೂ ಸರ್ ರೊಬರ್ಟ್ ಎಬರಕ್ರೊಂಬಿಯು ಮುಂಬಾಯಿಗೂ ತೆರಳಿದರು. ಮುಂಬಾಯಿ ಸೈನ್ಯದ ಫಿರಂಗಿಗಳನ್ನೂ ಮದ್ದು ಗುಂಡುಗಳನ್ನೂ ಆಹಾರ ಸಾಮಾಗ್ರಿಗಳನ್ನೂ ವೀರರಾಜನ ವಶಕ್ಕೆ ಕೊಟ್ಟರು. ವೀರರಾಜನು ಮಳೆಗಾಲದಲ್ಲಿ ಇಂಗ್ಲೀಷ ಸೈನ್ಯಕ್ಕೆ ಬೇಕಾದ ಆಹಾರ ಸಾಮಾಗ್ರಿಗಳನ್ನು ತನ್ನ ದೇಶದಿಂದಲೂ, ಟೀಪುಸುಲ್ತಾನನಿಗೆ ಆಹಾರ ಸಾಮಾಗ್ರಿಗಳನ್ನು ಒದಗಿಸುತ್ತಿದ್ದ ಪಿಂಡಾರಿಗಳಿಂದಲೂ ಕ್ರಯಕ್ಕೆ ಪಡಕೊಂಡನು. ಈ ಸಮಯದಲ್ಲಿ ಕೊಡಗುರಾಜನಾದ ವೀರರಾಜನೊಡನೆ ಸ್ನೇಹವನ್ನು ಬೆಳಸುವದು ಒಳ್ಳೆಯದೆಂದು ಆಲೋಚಿಸಿ ಟೀಪುಸುಲ್ತಾನನು ತನ್ನ ಸೇನಾಧಿಪತಿಯೂ ವೀರರಾಜನ ಸ್ನೇಹಿತನೂ ಆದ ಖಾದರಖಾನನನ್ನು ಕಳುಹಿಸುವದೆಂತ ಆಲೋಚಿಸಿ ತನ್ನ ಸ್ವಂತ ಕೈಬರಹದ ಒಂದು ಕಾಗದವನ್ನೂ ಮುಖ್ಯ ಪ್ರಧಾನಿಯಾದ ಮೀರಸಾಧಕನ ಕಾಗದವನ್ನೂ ಕೋಶಾಧ್ಯಕ್ಷನಾದ ಪೂರ್ಣಯ್ಯನ ಕಾಗದವನ್ನು ಕೊಟ್ಟು ಖಾದರಖಾನನನ್ನು ಮಡಿಕೇರಿಗೆ ಕಳುಹಿಸಿದನು. ಈ ಕಾಗದಗಳಲ್ಲಿ ಇಷ್ಟರ ವರೆಗೆ ನಮ್ಮೊಳಗೆ ಇದ್ದ ದ್ವೇಷವನ್ನು ಬಿಟ್ಟುಬಿಡಬೇಕೆಂದೂ, ಇಬ್ಬರೂ ಕೂಡಿ ಇಂಗ್ಲೀಷರನ್ನು ಓಡಿಸಬೇಕೆಂದೂ ಕೊಡಗು ದೇಶದ ಪೂರ್ವ ಗಡಿಯಲ್ಲಿರುವ ಹೆಗ್ಗಡದೇವನ ಕೋಟೆಯನ್ನೂ ಪರಿಯಾಪಟ್ಟಣವನ್ನೂ, ಬೆಟ್ಟದಪುರವನ್ನೂ ಕೊಣನೂರನ್ನೂ, ಅರಕಲಗೂಡನ್ನೂ, ಪಶ್ಚಿಮ ಗಡಿಯಲ್ಲಿರುವ ಕಣ್ಣಾನೂರು ಜಿಲ್ಲೆಗೆ ಸಮ್ಮಂಧಪಟ್ಟ ಕೆಲವು ಭಾಗಗಳನ್ನೂ ಕೊಡುತ್ತೇನೆ ಎಂದು ಬರೆದಿತ್ತು. ಮಳೆಗಾಲವು ಕಳೆದೊಡನೆಯೇ ಸರ್ ರೊಬರ್ಟ್ ಎಬರಕ್ರೊಂಬಿಯು ಮುಂಬಾಯಿಯಿಂದ ಬಂದೊಡನೆಯೇ ವೀರರಾಜನು ಈ ಕಾಗದಗಳನ್ನು ಅವನಿಗೆ ತೋರಿಸಿದನು. ಇಬ್ಬರೂ ಆಲೋಚಿಸಿ ಈ ಕೆಳಗಿನ ಉತ್ತರವನ್ನು ಬರೆದರು. ಇದೇ ರೀತಿಯಲ್ಲಿ ನೀನು ಬೆಲ್ಲದಂಥಾ ಮಾತುಗಳಿಂದ ನಮ್ಮ ಹಿರಿಯರನ್ನೂ ನನ್ನನ್ನೂ ನಂಬಿಸಿ ಮೋಸಗೊಳಿಸಿ ಕೊಡಗನ್ನು ಹಾಳುಮಾಡಿದಿ. ನನಗೆ ದೇವರು ಒಂದೇ ನಾಲಗೆಯನ್ನು ಕೊಟ್ಟಿರುತ್ತಾನೆ. ನಾನು ಆ ನಾಲಗೆಯಿಂದ ಇಂಗ್ಲೀಷರ ಸ್ನೇಹಿತನಾಗುತ್ತೇನೆಂದು ಮಾತುಕೊಟ್ಟಿದ್ದೇನೆ. ನನಗೆ ಎರಡು ನಾಲಗೆಗಳಿಲ್ಲ. ವೀರರಾಜನು ಕಡೆಯ ವರೆಗೆ ಇಂಗ್ಲೀಷರ ಸ್ನೇಹಿತನಾಗಿಯೇ ಉಳಿದನು. ಇಂಗ್ಲೀಷರ ಮುಂಬಾಯಿ ಸೈನ್ಯವು ಏನೊಂದೂ ಕಷ್ಟಗಳಿಲ್ಲದೆ ಮೈಸೂರು ದೇಶಕ್ಕೆ ಹೋಯಿತು.

[ಸಶೇಷ]

53 ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ

# ಉಪಯೋಗಿಸಲ್ಪಟ್ಟ ಔಷಧಗಳು.

1. **ಧಾತುಪುಷ್ಟಿ ಲೇಹ**—ಧಾತು ನಷ್ಟವಾಗುವಿಕೆ ಧಾತುವು ಮೂತ್ರದೊಡನೆ ಹೋಗುವಿಕೆ ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದುವಿಕೆ, ಸ್ವಪ್ನದಲಿ ಧಾತು ನಷ್ಟವಾಗುವಿಕೆ, ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಪ್ರಮೇಹ, ಪಿತ್ತರ ಬಾಧೆ ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವದು ಜ್ಞಾಪಕ ಶಕ್ತಿ ಮೊದಲಾದವುಗಳು ಪೂರ್ಣಗುಣವಾಗಿ ಕಳೆದ ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು ಕ್ರಯ ಡಬ್ಬಿ 1ಕ್ಕೆ ರೂ 2—8—0 ಮೂರು ಡಬ್ಬಿಗಳಿಗೆ ರೂ 7

2. **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟುದೋಷಗಳ, ಮುಟ್ಟುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಅಜೀರ್ಣ ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತೀ ಶೀಘ್ರದಲ್ಲಿಯೇ ಗುಣಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ, ಆಂತರಿಕ ಆರೋಗ್ಯವನ್ನು ಒದಗಿಸಿ ಮನೋಭಿಲಾಷೆಯನ್ನು ಪೂರೈಸಿರುವವು ಕ್ರಯ 1 ಬಾಟಲಿ ಔಷಧಕ್ಕೂ ಒಂದು ಡಬ್ಬಿ ಮಾತ್ರೆಗೂ ರೂ 2—4—0 ಮೂರು ಬಾಟಲಿ ಮತ್ತು ಡಬ್ಬಿಗಳಿಗೆ ರೂ 6—4—0.

3 **ಮೇಹ ಕುಠಾರ**—ಇದು ಮೂತ್ರಸ್ರಾವದಿಂದ ಕೆಂಪು ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ ವ್ರಣವನ್ನೂ ಉರಿಯನ್ನೂ ಗುಣಪಡಿಸುತ್ತದೆ ಡಬ್ಬಿ 1ಕ್ಕೆ ರೂ 2—8—0 3ಕ್ಕೆ ರೂ 7

4 **ಮಲೇರಿಯಾ ನಿವಾರಣೆ**—ದಿನ ಬಿಟ್ಟು ಬರುವ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗಡ್ಡೆಯನ್ನು ಕರಗಿಸಿ, ಶಕ್ತಿಯನ್ನು ಉಂಟುಮಾಡುತ್ತದೆ ಬಾಟ್ಲಿ 1ಕ್ಕೆ ರೂ 1—8—0 3 ಬಾಟ್ಲಿಗಳಿಗೆ ರೂ 4—4—0

5 **ಬಾಲಗ್ರಹ ಗುಳಿಗೆ**—ಬಾಲಗ್ರಹಕ್ಕೂ ಕಫಕ್ಕೆ, ಜ್ವರಕ್ಕೆ ರಾಮಬಾಣ. ಬಾಟ್ಲಿ 1ಕ್ಕೆ ಆಣೆ 10 3ಕ್ಕೆ ರೂ 1—12—0

6 **ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ**—ಬಾಣಂತಿಯರಿಗೆ ಬಾಟ್ಲಿ 1ಕ್ಕೆ ರೂ 1—8—0 3ಕ್ಕೆ 4—4—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ ಕಾಯಿಲೆ ಸಂಗತಿ ವಿವರವಾಗಿ ಬರೆಯಲ್ಲ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು ಕೆಟಲಾಗು ತರಿಸಿ ನೋಡಿರಿ

ಎಮ್. ಗಣಪಯ್ಯ ಎಂಡ್ ಸನ್ಸ್, ರಥಬೀದಿ ಮಂಗಳೂರ ದಕ

ತ್ವರೆಮಾಡಿ ತ್ವರೆಮಾಡಿರಿ

ಶಾಲಾ ಹುಡುಗರಿಗೂ ಇತರರಿಗೂ ಬೇಕಾಗುವಂತಹ ಬಿಲ್ಲ ವಿಧದ ಕೊಪಿಂಗ್, ಮತ್ತು ಸಾದಾ ಪೆನ್ಸಿಲುಗಳೂ, ಉತ್ತಮ ವಿಧ ಸ್ಟೈಜನ ಸ್ಕ್ರಿಪ್ಟರ್ ಇಂಕ್ ಬಾಟಲ್‌ಗಳೂ, ಹೊಸತಾಗಿ ತರಿಸಿರುತ್ತೇವೆ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ.

ತಯಾರಾಗಿವೆ! ತಯಾರಾಗಿವೆ!!

ಎರಡನೇ ಮತ್ತು ಮೂರನೇ ದರ್ಜೆಯ

**ಪ್ರಕೃತಿ ಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.**

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

# ಇಸನೋಫೇಲ

ಇಸನೋಫೇಲನು ಸೇವಿಸಿರಿ ಕೆಂಪು ರೀತಿಯ ಮಲೇರಿಯದ ಖಂಡಿತ ನಿವಾರಿಣಿ ಎಲ್ಲಾ ಮದ್ದಿನ ಅಂಗಡಿಗಳಲ್ಲಿ ದೊರೆಯುವುದು

ಸೋಲ್ ಏಜಂಟರು—

**ಮೆಸರ್ಸ್ ಗೋರಿಯೋ ಲಿಮಿಟೆಡ್.**
ಪೋಸ್ಟ್ ಬೋಕ್ಸ್ 109 ಫೋರ್ಟ
ಮುಂಬಾಯಿ

ಮಲೇರಿಯಾ

Diamonds! Diamonds!!

**Ramachandra Krishna Shet**
DONGERKERY MANGALORE.

ಉತ್ಕೃಷ್ಟ ತರಗತಿಯ ಮುನ್ನಾತ (first quality Selected) ಎನ್ ಸ್ಟಾಕಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿಗೆ ಬರೆಯಿರಿ

ಕೆ ರಾಮಚಂದ್ರ ಕೃಷ್ಣ ಶೇಟ್, ಜುವೆಲರ್,
ಡೊಂಗರಕೇರಿ, ಮಂಗಳೂರ

# ಎರಡು ರತ್ನಗಳು.

ಇನ್ನು ಮಲೇರಿಯಕ್ಕೆ ಹೆದರಬೇಕಾದುದಿಲ್ಲ!

ಎಂಟಿ ಮಲೇರಿಯಾ ಮಾತ್ರೆಗಳು

ಮಲೇರಿಯಕ್ಕೆ ಖಂಡಿತವಾದ ಗುಣಕಾರಿ ಒಮ್ಮೆ ಪರೀಕ್ಷಿಸಿ ನೋಡಿದರೆ ಬಿಡಲಾರಿರಿ

ಬಾಟಲಿಗೆ ರೂ 2—8—0 ಅಂಚೆವೆಚ್ಚ ಮತ್ತು ಪೆಕಿಂಗ್ ಬೇರೆ

ಆಶ್ಚರ್ಯಕರ ಔಷಧಿ

ಅತಿಸಾರ, ಕಾಲರಾ ಎಂತಹ ಮಲಬದ್ಧತೆಯಾದರೂ ಬಿಡುವದು

ಏತರಿಂದ?

HEDAURIK DYSENTERY CHOLERA CURE

ಔಷ್ಷಿನ ಕ್ರಯ ಆಣೆ 1—10—0 ಔಷ್ಷಿನ ಬಾಟಲಿಗೆ ರೂ 1—12—0

ಪರೀಕ್ಷಿಸಿ ತೃಪ್ತರಾಗಿರಿ!

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಆಫೀಸು,
ಡೊಂಗರಕೇರಿ ರಸ್ತೆ,
ಮಂಗಳೂರು.

ದಿ ಕಿಣಿ ಡಿಸ್ಪೆನ್ಸರಿ,
ಕೊಡಿಯಾಲಬೈಲ್ ಪೋಸ್ಟು,
ಕನ್ನಡಾ

ರಕ್ಷಿನಂತ ಕವಚ



ಈ ಕವಚವು ಹಿಮಾಲಯ ಪರ್ವತದ ಯೋಗಿಗಳಿಂದ ಸಿದ್ಧಿಮಾಡಲ್ಪಟ್ಟಿದೆ. ಈ ಕವಚವು ಆಶ್ಚರ್ಯಕರವಾದ ಕೆಲಸಗಳನ್ನು ನಡೆಸಿರುವುದು. ಈ ಕವಚವನ್ನು ಧರಿಸುವವರಿಗೆ ತನ್ನ ಕೆಲಸದಲ್ಲಿ ಜಯವುಂಟಾಗುವುದು; ಲಾಭವುಂಟಾಗುವುದು; ವ್ಯಾಜ್ಯಗಳಲ್ಲಿ ಗೆಲುವು, ಗ್ರಹಚಾರ ದೋಷಗಳು ನಿವಾರಣೆಯಾಗುವುವು, ರೋಗಗಳು ನಿವಾರಣೆಯಾಗುವುವು, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗುವರು ಮತ್ತು ಇತರ ಬಗೆಗಳ ಲಾಭಗಳು ಉಂಟಾಗುವುವು. ಕವಚ ಒಂದಕ್ಕೆ ರೂಪಾಯಿ 3 ಕವಚಗಳಿಗೆ ... 0 ಟಪ್ಪಾಲು ಖರ್ಚು 6 ಆಣೆ ಪ್ರತ್ಯೇಕ. ನಾವು ರವಾನಿಸಿ ಕೊಡುವ ನಿಯಮದ ಪ್ರಕಾರ ಈ ಕವಚವನ್ನು ಧರಿಸುವವರಿಗೆ ಲಾಭವಾಗದೆ ಇದ್ದಲ್ಲಿ 10 ರೂಪಾಯಿ ಇನಾಮಾಗಿ ಕೊಡುವೆವು

ಪತ್ರವ್ಯವಹಾರ ಇಂಗ್ಲೀಷಿನಲ್ಲಿಯೇ ನಡಿಸಬೇಕು

**Sadhan Kuti**
Hatkhala, (*Calcutta*)

ತಯಾರಾಗಿವೆ ತಯಾರಾಗಿವೆ!

ಕಾಫಿ ಪ್ಲೆಂಟರರಿಗೂ ತೋಟದವರಿಗೂ ಬೇಕಾಗುವಂತಹ

ಚೆಕ್ ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಜನರಿಗೆ ಬೇಕಾದಂತೆ ಹಳೇ ಮತ್ತು ಹೊಸ ಪುಸ್ತಕಗಳಿಗೆ ಅಂದವಾದ ಬುಕ್ ಬ್ಯಾಂಡಿಂಗ್ ಕೆಲಸ ಕಡಿಮೆ ದರದಲ್ಲಿ ಮಾಡಲ್ಪಡುತ್ತದೆ.

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಣ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

# ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಗ್ರಹಚಾರ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು ಲಾಭ, ಜಯ ಕಾರ್ಯಾನುಕೂಲವನ್ನೀಯುವದು ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯನ್ನುಂಟುಮಾಡಿರುತ್ತದೆ

೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಶಲ್ ರೂಪಾಯಿ ೫೦ರಿಂದ ೨೫೦ ರೂಪಾಯಿ ವರೆಗೆ ದೈವೀಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು ಟಪ್ಪಾಲು ಖರ್ಚು ಬೇರೆ

ಶಿವರಾಮ ಭಟ್ಟ ತೆಂಗಿನಮನೆ
ಸಕ್ಲೇಶ್ವರ್ ಪೋಸ್ಟು ಕಾರ್ವಾರ್ ಡಿಸ್ಟ್ರಿಕ್ಟ್


EDITED, PRINTED & PUBLISHED BY V S KAMATH AT M. T A, SHARADA PRESS, MANGALORE.

ಚಂದಾ ನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0 Registered No. M. 489. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0

# ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ ತರುಪವಾಯಿತೆ! ಮತ್ತೆ ವಿಷ್ಟವ ಸುಡುತ ಉರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತಿರಳ ಎಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೪. ಮಂಗಳೂರು ತಾ ೨೬ನೇ ಶುಕ್ರವಾರ ಸಪ್ಟಂಬರ ೧೯೩೦ (26—9—30.) ಸಂಚಿಕೆ ೪೦

## THE CANARA BANKING CORPORATION, UDIPI, LTD.

## ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. Branches:—COONDAPOOR & Mangalore
ಹೆಡ್ ಆಫೀಸು:—ಉಡುಪಿ. ಶಾಖೆ — ಕುಂದಾಪುರ ಮತ್ತು ಮಂಗಳೂರು.

Authorised Capital Rs 3 50,000 Subscribed & Collected up Rs 2 25,000
ನಿಯಮಿತ ಮೂಲಧನ ರೂ 3,50,000 ಚಂದಾ ಕೊಡಲ್ಪಟ್ಟ ಮೂಲಧನ ರೂ 2,25,000

Statement of Affairs as on 31st August 1930

| CAPITAL AND LIABILITIES | | PROPERTY AND ASSETS | |
|---|---|---|---|
| 1 Paid up Capital | Rs 2 24,930—0—0 | 1 Premises Building Furniture etc | Rs 28[illegible] 6 9 |
| 2 Reserve and other funds | „ 1 [illegible],400 0 0 | 2 Investment on G P Notes | [illegible]584 5 0 |
| 3 Deposits | 20 [illegible] | 3 Investment on Approved Securities | [illegible] |
| 4 Bills for collection as per contra | [illegible] | 4 Bills for collection | [illegible] |
| 5 Overdrafts with Bankers and Imp Bank of India Loan a/c. | 66 [illegible] 5 | 5 Sundries | [illegible] |
| 6 Sundries | 6 [illegible] 6 | 6 Cash in hand & with bankers | 72[illegible] 1 |
| Total | 26,15,540 2 | Total | 26,15,540 2 |

Office of the Corporation, UDIPI, S. K. 6—9—30 N. ANANDA RAO Secretary & Manager

## ಅಮೃತಾಂಜನ.

ಪ್ರಸಿದ್ಧವಾದ ತಲೆನೋವಿಗೆಯು ಔಷಧಿಯಾದ ಅಮೃತಾಂಜನವು [illegible] ಬೆಲೆ [illegible]
[illegible] ಟು ಬೇರೆ.

ರಿಂಗ್‌ವರ್ಮ್ ಮುಲಾಮು:—ರಿಂಗ್‌ವರ್ಮ್, [illegible] ಚರ್ಮರೋಗಗಳಿಗೂ, [illegible] ಔಷಧಿ, [illegible]
ರೋಗದ ಔಷಧಿಗಳಲ್ಲಿ ಮೊದಲನೆಯದು [illegible] ಟ್ಯೂಬಿಗೆ [illegible] ಬೇರೆ.

ದಂತಮಂಜನ:—[illegible] ಹಲ್ಲುಗಳನ್ನು [illegible] ಬೇರೆ.

ಅಮೃತಾಂಜನ ಡಿಪೋ,
ಮದರಾಸು ಮತ್ತು ಬೊಂಬಾಯಿ.

ಮಕ್ಕಳ ಸಲುವಾಗಿ,

## ಡೋಂಗರ

ಇವರ

## ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಸಹಜವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ್, ಮುಂಬಾಯಿ.
ಏಜಂಟರು—ದಿ ಖೂಲನ್ ಮಾರ್ಟ್, ಮಂಗಳೂರು.

## ಶ್ರೀ ಸರಸ್ವತೀ ಭಂಡಾರ

| | | |
|---|---|---|
| 1 | ಸಚಿತ್ರ ರಾಮಾಯಣ ಕಥಾ ಸಂಗ್ರಹ | 1—8—0 |
| 2 | [illegible] ರಾಜ ಚರಿತ್ರೆ | 0—12—0 |
| 3 | [illegible] | 2—[illegible]—0 |
| 4 | [illegible] | 2—0—0 |
| | ಮಹಾಭಕ್ತ ವಿಜಯ | 3—[illegible]—0 |
| 6 | [illegible] ಕಥೆಗಳು | 1—[illegible]—0 |
| [illegible] | [illegible] | 1—0—0 |
| [illegible] | ವಿಮಲಾ ದೇವಿ | 1—12—0 |
| 9 | ಸೌಭಾಗ್ಯ [illegible] | [illegible]—8—0 |
| 10 | ಧರ್ಮ ಸಾಮ್ರಾಜ್ಯಂ | 1—4—0 |
| 11 | [illegible] | [illegible]—12—0 |
| 12 | ಆನಂದ ಮಠ | 1—12—0 |
| 13 | [illegible] | 0—12—0 |
| 14 | [illegible] | 1—8—0 |
| 15 | ಇಂಡಿಯನ್ ಪಿನಲ್ ಕೋಡ್ | 4—8—0 |
| 16 | ಕ್ರಿಮಿನಲ್ ಪ್ರೊಸಿಜರ್ ಕೋಡ್ | 3—0—0 |
| 17 | ಲ್ಯಾಂಡ್ ರೆವೆನ್ಯೂ ಕೋಡ್ | 1—0—0 |

ಈ ಪುಸ್ತಕಗಳಲ್ಲದೆ ನಮ್ಮಲ್ಲಿ [illegible] ನಮೂನೆಯ ಕನ್ನಡ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗ್ ಅಪೇಕ್ಷಿಸುವವರು ಕೂಡಲೇ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಲೈಬ್ರರಿಗಳಲ್ಲಿ ಇಡಲು ಯೋಗ್ಯವಾದ ಅನೇಕ ಪುಸ್ತಕಗಳು ನಮ್ಮಲ್ಲಿ ಹಾಜರಿರುತ್ತವೆ.
ವಿಳಾಸ—

ಶ್ರೀ ಸರಸ್ವತೀ ಭಂಡಾರ.
ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು, ಆಪಿಸು ರೋಡ್, ಮಂಗಳೂರು

**ಕಳೆದ ಅಗೋಸ್ತು ತಿಂಗಳ ತಾ 30ಕ್ಕೆ ಜರಗಿದ ಜಿಲ್ಲಾ ಪ್ರಚಾರ ಕಮಿಟಿಯ ಸಭೆಯಲ್ಲಿ ಅಬ್ಕಾರಿ ಖೋತೆಯ ತಿಮ್ಮಪಡಿಯ ಪ್ರಚಾರ ಕಾರ್ಯಕ್ಕೆ ಅಗತ್ಯವೆಂದು ಅಧ್ಯಕ್ಷರಿಂದ ಸೂಚಿಸಲ್ಪಟ್ಟ ಈ ಕೆಳಗಿನ ಸೂಚನೆಗಳು ಅಂಗೀಕೃತವಾಗಿವೆ.**

ನಿರ್ಣಯ—ಈಗ ಚಲಿತವಾಗಿರುವ ಏಲಂ ಪದ್ಧತಿಯ ದೆಸೆಯಿಂದ ಪ್ರಚಾರಕಾರ್ಯವು ಪ್ರಯಾಸಕರವಾಗಿದೆಯೆಂದು ಕಮಿಟಿಯು ಅಭಿಪ್ರಾಯ ಪಡುತ್ತದೆ. ಸಿ. ಪಿ ಬೋರ್ಡಿನ ಅವಗಾಹನೆಗಾಗಿಯೂ ಅಗತ್ಯವಿರುವ ವಿಚಾರಣೆಗಳಿಗಾಗಿಯೂ ಕಮಿಟಿಯು ಈ ಕೆಳಗಿನ ಸೂಚನೆಗಳನ್ನು ಸೂಚಿಸುತ್ತದೆ. ಈ ಸೂಚನೆಗಳು ಎಲ್ಲಾ ಕಮಿಟಿಗಳಿಗೂ ಲೆಜಿಸ್ಲೇಟಿವ್ ಕೌನ್ಸಿಲಿನ ಸ್ಥಳೀಕ ಮೆಂಬರರಿಗೂ ಅವರವರ ಅಭಿಪ್ರಾಯಗಳ ಬಗ್ಗೆ ಕಳುಹಿಸಲ್ಪಡುವುವು.

೧. ಈಗ ರೂಢಿಯಲ್ಲಿರುವ ಗುತ್ತು ಏಲಂ ಪದ್ಧತಿಯ ಕಾರಣದಿಂದ ಪ್ರಚಾರ ಕಾರ್ಯವು ಸಂಪೂರ್ಣ ಫಲಕಾರಿಯಲ್ಲವೆಂದು ತೋರಿಬರುವದಾಗಿದ್ದರೂ ಹೆಚ್ಚು ಕಡಿಮೆ ನಿಷ್ಫಲವಾಗಿರುತ್ತದೆ

೨. ಶರಾಬು ಮತ್ತು ಶೇಂದಿಯ ಇವೆರಡಕ್ಕೂ ಏಲಂ ಪದ್ಧತಿಯ ಬದಲಾಗಿ ಬೇರೆ ಪದ್ಧತಿಯನ್ನನುಸರಿಸತಕ್ಕದ್ದು ಹೆಚ್ಚು ವಿಕ್ರಯವನ್ನು ತೋರಿಸಬೇಕೆಂಬ ಯಾವ ವಿಧದ ಉತ್ತೇಜನವಾದರೂ ಮಾರಾಟಗಾರರಲ್ಲಿ ತೋರಬಾರದು. ಅವರು ತಮ್ಮ ಬಳಿಗೆ ಬಂದವರಿಗೆ ಮಾರುವ ಏಜಂಟರು ಮಾತ್ರವಾಗಿದ್ದು ಅವರಿಗೆ ಸಂಬಳವು ಕೊಡಲ್ಪಡತಕ್ಕದ್ದು

೩. ಸರ್ವಸಾಧಾರಣ ಸಕಲ ಅಮಲ ಪದಾರ್ಥಗಳಿಗೆ ವಿರೋಧವಾಗಿ ಪ್ರಚಾರ ಕಾರ್ಯವನ್ನು ಯಶಸ್ವಿಗೊಳಿಸಲು ಹೆಚ್ಚು ತೀಕ್ಷ್ಣತೆಯ ಅಮಲು ಪದಾರ್ಥದ ಬದಲಾಗಿ ಕಡಿಮೆ ತೀಕ್ಷ್ಣತೆ, ನಂತರ ಅತೀ ಕಡಿಮೆ ತೀಕ್ಷ್ಣತೆಯ ಪದಾರ್ಥವು ಉಪಯೋಗಿಸಲ್ಪಡುವಂತೆ ಸಾಧಿಸತಕ್ಕದ್ದು. ಈ ಉದ್ದೇಶದಿಂದ—

(a) ವಿದೇಶಿ ಮದ್ಯವು ನಿಷೇಧಿಸಲ್ಪಡತಕ್ಕದ್ದು ಅಥವಾ ಮೆಡಿಕಲ್ ಉಪಯೋಗಕ್ಕಾಗಿಯೂ ಔಷಧಗಳ ಬಗ್ಗೆಯೂ ಅವಶ್ಯ ಬೇಕಾದ ಪರಿಮಾಣವು ಅನುಮತಿಸಲ್ಪಡತಕ್ಕದ್ದು.

(b) ವರುಷದಿಂದ ವರುಷಕ್ಕೆ ಶರಾಬಿನ ಸರಬರಾಯಿ ಕಡಿಮೆ ಮಾಡಲ್ಪಟ್ಟು ಶರಾಬಿನ ಬೆಲೆಯೂ ಹೆಚ್ಚಿಸಲ್ಪಡಬೇಕು ಇದರ ಸಂಬಂಧದಲ್ಲಿ ಆಗುವ ಯಾವ ಆದಾಯವು ಇದರಿಂದ ಭರ್ತಿಯಾಗುವುದು ಪ್ರತ್ಯೇಕವು. ಡಿಸ್ಟಿಲರಿಗಳು ಒದಗಿಸಲ್ಪಡುವ ಪರಿಮಾಣವು ಅತಿ ಕಡಿಮೆ ಯಾಗಿದ್ದು ಶರಾಬಿನ ತಯಾರಿಕೆಯ ಪರಿಮಾಣವು ಹತ್ತು ವರ್ಷಗಳಲ್ಲಿ ಇದರ ಪ್ರಯೋಗವು ಸಂಪೂರ್ಣ ನಿಲ್ಲಿಸಲ್ಪಡುವಂತೆ ವರ್ಷ ವರ್ಷಕ್ಕೂ ಒದಗಿಸುವ ಪರಿಮಾಣವು ಕಡಿಮೆ ಮಾಡಲ್ಪಡತಕ್ಕದ್ದು (ಈಗಲೇ ಈ ಕಾರ್ಯವು ಪ್ರಾರಂಭಿಸಲ್ಪಡಬೇಕು.)

(c) ಶರಾಬಿನ ಬೆಲೆಯು ಇನ್ನೂ ಅಧಿಕವಾಗತಕ್ಕದ್ದು ಶರಾಬು ಸಂಪೂರ್ಣ ವಾಗಿ ನಿಲ್ಲುವಂತೆ ನೋಡತಕ್ಕದ್ದು ಅದರಿಯ ವರೆಗೆ ಪ್ರತೀ ವರುಷ ಅತೀ ಕಡಿಮೆ ಸಂಖ್ಯೆಯನ್ನು ಈಗಲೇ ನಿರ್ಣಯಿಸಲ್ಪಡತಕ್ಕದ್ದು ಈ ಅವಧಿಯ ನಂತರ ಕೆಲವು ವರ್ಷಗಳಲ್ಲಿ ಅಂದರೆ ೩ ಮಾರು ೧೦ ವರ್ಷಗಳಲ್ಲಿ ಇದರ ಪ್ರಯೋಗವು ಸಂಪೂರ್ಣ ನಿಲ್ಲಿಸಲ್ಪಡುವಂತೆ ಮಾಡಲ್ಪಡುವ ಸಂಖ್ಯೆಯ ಕ್ರಮೇಣ ಕಡಿಮೆ ಮಾಡಲ್ಪಡುತ್ತಾ ಬರತಕ್ಕದ್ದು ಶರಾಬಿನ ಬೆಲೆಯ ಕಡಿಮೆಯಾಗುವಂತೆ ಕಳೆದ ೧೦ ವರ್ಷಗಳ ಗುತ್ತಿಗೆ ಏಲಂಗಳ ಸರಾಸರಿ ಮೊಬಲಗು ಮತ್ತು ಸರಿ ತರ ತೆರಿಗೆ ಒಟ್ಟುಕೂಡಿ ಆಗುವ ಮೊಬಲಗು ನೋಡಿ ಕೆಲವು ಅಂಗಡಿಗಳನ್ನು ನಿಶ್ಚಯಿಸಿ ಅವರಿಗೆ ಸಂಖ್ಯೆಯನ್ನು ಗೊತ್ತುಪಡಿಸಿ ತಂತ್ರ ಭಟ್ಟಿಗಳಿಗೆ ಸಲ್ಲತಕ್ಕ ಗೇಣಿಯು ನಿಯಮಿಸಲ್ಪಡಬೇಕು ಮತ್ತು ಅದು ಮಾರ ತೆರಿಗೆಯ ಒಟ್ಟು ಯುಕ್ತ ಅಂದಾಜಾಗಿ ಮಾರು ಸರಾಸರಿಯ ಒಪ್ಪಿ ಕೊಳ್ಳತಕ್ಕದ್ದು ನಿಂದಿನ ತೆರಿಗೆ ತೆರಿಗೆಯು ಪ್ರತಿ ತಿಂಗಳಲ್ಲಿ ಕೊಡಲ್ಪಡಬೇಕು ಈ ನಿಯಮಿತ ತಾಸಿನ ಮಾತ್ರ ಕೊಡಲ್ಪಡಬೇಕು ಇನ್ನಾಗಿ ಡಿಪೋಜಿಟಿನ ಆಗಿರಬೇಕು. ಪ್ರತಿಫಲವು ಕೊಡಲ್ಪಡಬೇಕು ಗುತ್ತಿಗಾರನ ನ ತೆರಿಗೆಯನ್ನು ಪೂರೈಸಿದರೆ ತನ್ನ ವ್ಯಾಪಾರವನ್ನು ನಡೆಸಬಹುದು. ನಷ್ಟ ಪಡಬಹುದು.

(d) ತಮ್ಮ ಉಪಯೋಗಗಳಲ್ಲಿ ಅತಿ ಕಡಿಮೆ ಸಹಾಯಗಳು ದಿನಕ್ಕೆ ಅಥವಾ ಮನೆಯವರ ನಿಷೇಧ ಆಗದಂತೆ ಚಿಂತಿಸಿ ಬರುವಾಗ ತಮ್ಮ ಉಳಿಕಾಯದ ಸಹಾಯದಿಂದ ಬೇರೆ ಜೀವನೋಪಾಯವನ್ನು ಹೊಂದುವರೆ ಪಡಗಳ ನಿಯಂತ್ರಣವು ಮಂತ್ರಿಯವರನ್ನು ಉಪಚಾರಕ್ಕಾಗಿ ತರತಕ್ಕದ್ದು ಪ್ರತ್ಯೇಕ ನಿಧಿಗಳ ಮೂಲಕ ದಾರರ ಸಂಖ್ಯೆಯ ನಿಶ್ಚಯ ಸಲ್ಲತಕ್ಕದ್ದು ಸಂಬಂಧ ಪಡುವ ಲೈಸೆನ್ಸು ದರ ಅವರಿಗೆ ಮಾಸಿಕ ಸಂಬಳವು ಕೊಡತಕ್ಕದ್ದು ಅವರ ನಿಯಮ ಪಾಲಿಸದೆ ಸಲ್ಲುವುದು ಈಗಲೇ ಅನಿಸಲ್ಪಡತಕ್ಕದ್ದು ಈ ಸಂಬಂಧ ಮೇಲೆ ಸ್ಥಿರವಾದ ಸಂಖ್ಯೆಯ ಇನ್ನೂ ಅಥವಾ ಹುಮ್ಮಡಿಯಾಗಿರಬೇಕು. ಮದ್ಯಗಳು ನಾಶವಾಗುವಂತೆ ಎರಡು ವರ್ಷಗಳಿಗೊಮ್ಮೆ ಅಥವಾ ಮೂರು ವರ್ಷಗಳಿಗೊಮ್ಮೆ ಬದಲಾಗತಕ್ಕದ್ದು. ಪ್ರತಿ ವ ತೆರಿಗಾರರಿಗೆ ಒಂದು ಲೈಸನ್ಸು ಒದಗಿಸಲ್ಪಟ್ಟು ಆತನ ತಿಳುವಳಿಕೆ ಜೊತೆಗೆ ಎಲ್ಲ ಮಾರಾಟ ಮಾಡಿದರೆ ಅಥವಾ ಕಾನೂನಿಗೆ ವಿರೋಧವಾಗಿ ಒಟ್ಟು ಇಳಿಸಿ ಪುಟಕ್ಕೆ ಸಹಾಯ ಮಾಡಿಕೆರೆ ಆತನ ಲೈಸನ್ಸು ರದ್ದು ಮಾಡಲ್ಪಡತಕ್ಕದ್ದು ಹೀಗೆ ಹೆಚ್ಚು ಸಂಬಳ ಕೊಡಲ್ಪಟ್ಟ ವ್ಯಾಪಾರದಾರನು ತನ್ನ ಲೈಸೆನ್ಸ್ ಕಳಕೊಳ್ಳುವಂತೆ ಜಾಗರೂಕನಾಗಿರುವನು ತನ್ನ ಶಾಪವನ್ನು ಕಳಕೊಳ್ಳುವಂತೆ ಡಿಪೋಜಿಟು ಮೊದಲಿಂದ ತೆಗೆದ ಸರಾಬಿ ಆ ಪೂರ್ಣ ಪರಿಮಾಣವನ್ನು ಪರಿಶೀಲಿಸಿದರೆ ಜಾಗರೂಕನಾಗಿರುವನು ಈ ವಿಧಾನದಿಂದ ಅಬಕಾರಿ ಇಲಾಖೆಯ ಕೆಲಸ ಮಾಡಲ್ಪಡಬಹುದು

ವಿಮಾರ್ಶೆಗಳು.—ಶರಾಬು ಕ್ರಮೇಣವಾಗಿ ಕಡಿಮೆಯಾಗುವ ಅವಧಿಯ ವರೆಗೆ ಶರಾಬನ್ನು ಪ್ರಯೋಗಿಸುವ ಜನತೆ ಲ್ಲಿ ಶರಾಬಿನ ಬೆಲೆಯ ವರ್ಷದಿಂದ ವರ್ಷಕ್ಕೆ ಏರುತ್ತಾ ಹೋಗುವಾಗ ಬೆಲೆಯ ಕಡಿಮೆಯಾದ ಮದ್ಯವನ್ನು ಪ್ರಯೋಗಿಸಲು ಅವಕಾಶವಿರುವುದು. ಅದರ ಕ್ರಮಿಕರ ಸಂಖ್ಯೆಯ ಏರುತ್ತಾ ಬಂದರೂ ಉಪಯೋಗಿಸಲ್ಪಡುವ ಮದ್ಯದ

**ತಾ. 30—8—30ರಲ್ಲಿ ಮುಲ್ಕಿಯಲ್ಲಿ ಜರಗಿದ ದಕ್ಷಿಣ ಕನ್ನಡ ಜಿಲ್ಲಾ ಪ್ರಚಾರ ಕಮಿಟಿಯ ಮೀಟಿಂಗಿನಲ್ಲಿ ಬರುವ ತಿಂಗಳಿಂದ ಪ್ರಾರಂಭ ಮಾಡಲಿಕ್ಕಿರುವ ವಿಶೇಷ ಪ್ರಚಾರ ಕಾರ್ಯದ ಕುರಿತು ಮಾಡಿದ ಠರಾವು.**

ಜಿಲ್ಲಾ [illegible]ಯಾಗುವ ಕೆಲಸವನ್ನು ಮಾಡುವ ಉದ್ದೇಶದಿಂದ ದಕ್ಷಿಣಕ್ಕೆ ಗುರುಪುರ ಹೊಳೆ, ಉತ್ತರಕ್ಕೆ ಉದಿಯಾವರ ಹೊಳೆ ಮತ್ತು ಪೂರ್ವದಲ್ಲಿ ಮಂಗಳೂರು—ಮೂಡಬಿದರೆ—ಕಾರ್ಕಳ ರಸ್ತೆಯೊಳಗಿನ ಪ್ರಾಂತ್ಯವನ್ನು ಬಲವತ್ತಾದ (Intensive) ಪ್ರಚಾರ ಕಾರ್ಯಕ್ಕೋಸ್ಕರ ಕಮಿಟಿಯು ಕಳೆದ ವರ್ಷದ ತಾ ೨೦—೧೧—೨೯ರ ಮೀಟಿಂಗಿನ ೯ನೇ ನಿರ್ಣಯದ ಪ್ರಕಾರ ಈ ಮೊದಲೇ ಪ್ರತ್ಯೇಕಿಸಿಟ್ಟಂತೆ ತಾರೀಕು ೧೫—೯—೩೦ರಿಂದ ಮೂರು ತಿಂಗಳ ಮಾತ್ರ ಅಗತ್ಯ ಕಂಡು ಬಂದಲ್ಲಿ ಹೆಚ್ಚಿನ ಸಮಯದ ವರೆಗೆ ಪ್ರಚಾರಕರೂ ಗೌರವ ಪ್ರಚಾರಕರೂ ಒಟ್ಟು ಕೂಡಿ ತಂಡಗಳಾಗಿ ವಿಭಾಗಿಸಲ್ಪಟ್ಟು ಬೇರೆ ಬೇರೆ ಗ್ರಾಮಗಳಿಗೆ ಹೋಗಿ ಅಲ್ಲಿ ಸಂಪೂರ್ಣ ಪ್ರಚಾರ ಕಾರ್ಯವನ್ನು ನಡೆಸುವಂತೆಯೂ ಮತ್ತು ಪ್ರಚಾರಕರು ಮೇಲೆ ಹೇಳಿದ ಕೆಲಸದಲ್ಲಿರುವಾಗ ತಮ್ಮ ಸ್ವಂತ ಕ್ಷೇತ್ರಗಳಲ್ಲಿ ಈ ಮೊದಲೇ ಮಾಡಿದ ಕಾರ್ಯಕ್ಕೆ ಬಾಧಕ ಬಾರದಂತೆ ನೋಡಿಕೊಳ್ಳುವ ಹಾಗೂ ಕಮಿಟಿ ನಿರ್ಣಯಿಸಿರುತ್ತದೆ. ಈ ನಿರ್ಣಯಕ್ಕೆ ಸೆಂಟ್ರಲ್ ಪ್ರಾಪಗಾಂಡಾ ಬೋರ್ಡಿನ ಅನುಮತಿಯೂ ದೊರಕಿದೆ

ಇಷ್ಟರ ತನಕ ಮಾಡಿದ ಕಾರ್ಯವು ವಿಸ್ತಾರವಾಗಿ ಕಮಿಟಿಯ ಧ್ಯೇಯಗಳನ್ನು ಪ್ರಚಾರಗೊಳಿಸಿ ವಿಸ್ತಾರವಾದ ಪ್ರಚಾರ ಕಾರ್ಯವನ್ನು ಮಾಡುವ ಉದ್ದೇಶದಿಂದಾಗಿದ್ದು, ಇನ್ನು ಮುಂದೆ ಆರಿಸಿ ತೆಗೆದ ಒಂದು ಪ್ರತ್ಯೇಕ ಪ್ರಾಂತ್ಯದಲ್ಲಿ ಬಲವತ್ತಾದ ಪ್ರಚಾರ ಕಾರ್ಯದ ಮೂಲಕ ಸಂಪೂರ್ಣ ಮದ್ಯಪಾನ ನಿಷೇಧವು ಬ್ಯಾರಿಗೆ ಬರುವಂತೆ ಯತ್ನಿಸಲ್ಪಡುವುದು

ಈ ಪ್ರಾಂತ್ಯದಲ್ಲಿಯ ಮಹನೀಯರು ಎಲ್ಲವರ ಸಹಾಯ ಸಹಾನುಭೂತಿಯನ್ನು ನಿರೀಕ್ಷಿಸುತ್ತಿದೆವು ನಮ್ಮ ಪ್ರಚಾರಕರು ಇಲ್ಲಿಯ ಇತರ ಕಡೆಗಳಲ್ಲಿ ಇದು ವರೆಗೆ ಮಾಡಿದ ಕೆಲಸವು ವ್ಯರ್ಥವಾಗದೆ ಬೇರೆ ಕಮಿಟಿಯ ಕಾರ್ಯದಲ್ಲಿ ತಮ್ಮ ಸಹಕಾರವನ್ನು ಕೊಟ್ಟಿರುವ ಅನೇಕರು ಆ ಕಾರ್ಯವನ್ನು ಮುಂದೆಯೂ ಅವರವರ ಪ್ರಾಂತ್ಯದಲ್ಲಿ ಮುಂದುವರಿಸುವರೆಂದು ನಂಬುತ್ತೇವೆ ಯಶಸ್ವಿ ಆಗುವಂತೆಯೂ ಕೇಳಿಕೊಳ್ಳುವೆವು

೧ ನೇ ಕಾರ್ಯವು ಬರುವ ಅಕ್ಟೋಬರ ತಿಂಗಳ ೧೫ರಿಂದ ಪ್ರಾರಂಭವಾಗಲಿಕ್ಕಿರುವುದು.

ಮುಲ್ಕಿ, ೧೭—೯—೧೯೩೦ } ಎಚ್ ಆರ್ ಪೂಂಜ, ಅಧ್ಯಕ್ಷ, ಜಿಲ್ಲಾ ಪ್ರಚಾರ ಕಮಿಟಿ

---

**ಮಿತ್ರ ಭಾಂದವರಿಗೊಂದು ಸೂಚನೆ.**

ಕೆಲವು ಸಮಯಗಳಿಂದ ಅನಾರೋಗ್ಯವಿಲ್ಲದೆ ಇದ್ದ ಮಲೇರಿಯಾನ ಕಂಪೆನಿಯ ಪ್ರೋಪ್ರೈಟರ್ ಪಿ ಎಮ್ ಪಿ. ನಾಯರು ಈಗ ತಾನೇ ದೃಷ್ಟಿ ಪರೀಕ್ಷಿಸುವ ಆರೋಗ್ಯವುಳ್ಳವರಾಗಿರುವುದರಿಂದ ಮಿತ್ರಬಂಧುವರು ಅವರನ್ನು ಅವರ ಸ್ವಂತ ಆಫೀಸಿನಲ್ಲಿಯೇ ಕಂಡುಕೊಳ್ಳಬಹುದು.

ಇವರು ದೃಷ್ಟಿಯನ್ನು ನವೀನ ರೀತಿಯಿಂದ ಪರೀಕ್ಷಿಸಿ ಅವಶ್ಯವಾದ ಯೋಗ್ಯ ದೃಷ್ಟಿ ಚಶ್ಮೆಗಳನ್ನು ಆರಿಸಿ ಕೊಡುವುದರಲ್ಲಿ ಬಹಳ ಸಮರ್ಥರು ಮೂವತ್ತು ವರ್ಷಗಳಿಂದ ಅನೇಕಾನೇಕ ಗ್ರಾಹಕರ ಉತ್ತಮ ಸರ್ಟಿಫಿಕೇಟುಗಳನ್ನು ಸಂಪಾದಿಸಿ ಕೊಂಡಿರುವರು.

ದೃಷ್ಟಿ ಪರೀಕ್ಷೆಗೆ ಬೇಗನೆ ಬಾರದೇ ಉತ್ತಮ ಹೊತ್ತಾಗಿರುವುದು

**ಮಲೇರಿಯಾನ ಕಂಪೆನಿ**
ಹಂಪನಕಟ್ಟೆ ಮಂಗಳೂರು

---

ಪರಿಣಾಮವು ಒಂದೇಯಾಗಿರುವುದು ಇದರಿಂದ ಪ್ರತಿ ವ್ಯಕ್ತಿಯ ಪ್ರಯೋಗಿಸಲ್ಪಡುವ ಮದ್ಯದ ಪರಿಮಾಣವು ಅವರಿಷ್ಟಕ್ಕೆ ಕ್ರಮೇಣವಾಗಿ ಕ್ಷೀಣವಾಗುತ್ತಾ ಬರುವುದು ಅಥವಾ ಸಂಪೂರ್ಣ ನಿಲ್ಲುವುದು ಶರಾಬು ಸಂಪೂರ್ಣ ವಾಗಿ ನಿಲ್ಲುವುದಕ್ಕೆ ಮುಂಚೆ ಶರಾಬಿನ ಅಂಗಡಿಗಳ ಸಂಖ್ಯೆಯೂ ಕ್ರಮೇಣವಾಗಿ ಕಡಿಮೆ ಮಾಡಲ್ಪಡತಕ್ಕದ್ದು ಪ್ರತಿ ವರುಷ ಕನಿಷ್ಠ ಕಡಿಮೆ ಸಂಖ್ಯೆಗಳನ್ನು ನಿಯಮಿಸಿ ಕಿತ್ತೂರಿನಲ್ಲಿ ಯಾವುದಾದರೂ ಕಡ್ಡಾಯದ ನಾಗಲು ಅವಶ್ಯವಿಲ್ಲ—ಸರಕಾರವು ಒಂದೇ ಸವನೆ ನಷ್ಟಪಡುವುದಿಲ್ಲ ಕ್ರಮೇಣವಾಗಿ ಕಳಕೊಳ್ಳುವ ಆದಾಯವು ಹೆಚ್ಚು ತೀಕ್ಷ್ಣತೆಯ ಪದಾರ್ಥದ ಮೇಲೆ ಹೆಚ್ಚು ತೆರಿಗೆಯಿಂದ ಬರುವ ಉತ್ಪತ್ತಿಯಿಂದ ಭರ್ತಿಯಾಗುವುದು ಹಾಗೂ ಕ್ರಮೇಣ ನಷ್ಟವು ಕ್ರಮವಿಲ್ಲದಾಗಿ ಬರುವ ನಷ್ಟಕ್ಕೆ ಸರಕಾರವು ಒಪ್ಪಿಕೊಂಡ ಧೋರಣೆಯ ಕಾರ್ಯದಲ್ಲಿ ನಾಶ ತರಬೇಕಾಗಿದೆ.

**The Canara Bank Ltd, Mangalore.**
**ದಿ ಕೆನರಾ ಬ್ಯಾಂಕ್ ಲಿಮಿಟೆಡ್ ಮಂಗಳೂರು.**

**NOTICE.**

ಇದೇ ಕಳೆದ ತಾರೀಖು 29—8—30ನೇ ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸಿದ ನೋಟೀಸಿಗೆ ಅನುಸಾರವಾಗಿ ಮೃತ ಪಟ್ಟ ಅಲ್ಲಿಮುಮ್ಮದ ಹಾಜಿ ಸಕೂರಿಕೀಟ್ರ ದಾಬ್ತು ಆಭರಣಗಳನ್ನು ಇದೇ ತಿಂಗಳ ತಾ 19ನೇ ಶುಕ್ರವಾರ ಮಧ್ಯಾಹ್ನ ಗಂಟೆ 12ಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿಬಂದ ರೂಪಾಯಿ 2594/ರಲ್ಲಿ ಬ್ಯಾಂಕಿಗೆ ಬರಬೇಕಾದ ಅಸಲು ಬಡ್ಡಿ ವಗೈರೆ ರೂಪಾಯಿ 2579—13—0 ವಜಾ ಮಾಡಿ ಉಳಿದ ರೂಪಾಯಿ 14—3—0 ಸದರೀಯವರ ಲೆಖ್ಖಕ್ಕೆ ಅಮಾನತ ಇಟ್ಟಿದ್ದನ್ನು ಸದರೀಯವರ ವಾರಿಸ್ದಾರರು ಅವರ ಹಕ್ಕಿನ ಸಂಗತಿ ಬ್ಯಾಂಕಿಗೆ ಸಮಾಧಾನ ಪಡಿಸಿ ಪಡಕೊಂಡು ಹೋಗತಕ್ಕದೆಂತಲೂ, ಹಾಗೆ ಕೊಂಡುಹೋಗುವ ವರೇಗೆ ಸದರೀ ಮೊಬಲಗಿಗೆ ಬಡ್ಡಿ ಸಿಕ್ಕಲಿಕ್ಕಿಲ್ಲವಾಗಿಯೂ ಈ ಮೂಲಕ ತಿಳಿಸಲಾಗುತ್ತದೆ ಸದರೀ ಏಲಂನಲ್ಲಿ ಈ ನೋಟೀಸಿನ ಖರ್ಚು ವಜಾ ಮಾಡಲಾಗುವುದು

The Canara Bank Ltd } K Venkat Rao,
Mangalore 20—9—30 } Secretary

---

**ನೋಟೀಸು.**

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ
ಕ್ರಮ ನಂಬ್ರ 312/1930

ರಾವ ಪ್ರ ಯಾನೆ ರಾಮಕೃಷ್ಣ ರಾವ್—ವಾದಿ
ಮತ್ತು
ಶ್ರೀಕಾಂತಯ್ಯ ಸಹಾ—ಪ್ರತಿವಾದಿಯು

1ನೇ ಪ್ರತಿವಾದಿ ರಾಮಕೃಷ್ಣಯ್ಯನವರ ಮಗ ಊರ್ಜಿತೇಲು ಶ್ರೀಕಾಂತಯ್ಯನವರಿಗೆ:—ವಾದಿಯು ನಿಮ್ಮ ಮೇಲೆ ರುಜುವಾತು ಆದವು ದಸ್ತಾವೇಜು ಪ್ರಕಾರ ಬರತಕ್ಕ ಐವಜು ಬರಪಾಡುವರೆ ದಾಖಲು ಮಾಡಿದ ಮೇಲಿನ ವ್ಯಾಜ್ಯವು ತಾರೀಕು 2—10—30ಕ್ಕೆ ತನಿಕೆಗೆ ಇಟ್ಟಿರುತ್ತದೆ ಸದ್ರಿ ದಿವಸ ನೀವು ನಿಮ್ಮ ಉದಾಹರಣೆಯನ್ನು ದಾಖಲು ಮಾಡುವರೆ ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ವ್ಯಾಜ್ಯವು ತೀರ್ಮಾನವಾಗುವುದು ಎಂಬ ಸಂಗತಿ ಈ ಮೂಲಕ ತಿಳಿಸಲಾಗಿಯದೆ

ಪುತ್ತೂರು } H Ganapathi Rao
1—9—3 } ವಾದಿಯ ವಕೀಲ

---

**ನೋಟಿಸು.**

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ
ಕ್ರಮ ನಂಬ್ರ 677/1930

ಕೇರಳಂಗಳದ ಮೂಡು ಮನೆ ಇಟ್ಟಲ್ಲಿತಿಪ್ಪಯ ಮ್ಯಾನೇಜರ್ ತಂತ್ರಿ ವಾದಿ
ಮತ್ತು
ಕೋಡಕ್ಕಾಡು ಅಂಬು ಸಹ 7 ಜನರು—ಪ್ರತಿವಾದಿರು

ಉಮ್ಮ ಗ್ರಾಮದ ಹಳೆ ಸರ್ವೆ ನಂಬ್ರ 213 (ರೀಸರ್ವೆ ನಂಬ್ರ 323)ರ ತಿಂಗಳ ಎಕ್ರೆ 1, ಸೆಂಟ್ಸ್ 46, ಡಿಸ್ಟೆಂಬರ್ ೨೭ ೪—12—2 ವಾರಾಮಾಸಾಯಿ ತೀರ್ಮಾನ ಪ್ಲೈಂಟಿನ ಸಂಗಡ ಹಾಜರು ಪಡಿಸಿದ ನಕ್ಷೆಯಲ್ಲಿ 24/3 C ಎಂದು ನಿಶಾನಿ ಹಾಕಿದ ಸ್ಥಳವನ್ನು ಹುಟ್ಟುವಳಿ ಸಮೇತ ಸ್ವಾಧೀನತೆ ಎಗ್ಗ ಸದರಿ ಕೋರ್ಟಿನ ತರವಾಡಿನ ಮುಂಬರಿಸಿದ ಪ್ರತಿವಾದಿ ಮೇಲೆ ಅವರ ತರವಾಡಿನ ಪ್ರತಿನಿಧಿಯಾಗಿ ವ ಸ್ವಂತನೆಲೆಯಲ್ಲಿ ಕಾಪಾಡು ವಾದಿಯು ಮೇಲ್ಕಂಡ ವ್ಯಾಜ್ಯ ದಾಖಲು ಮಾಡಿರುತ್ತಾನೆ

ಸದರಿ ವ್ಯಾಜ್ಯವು ತಾ 2—10—1930ನೇ ಗುರುವಾರ ದಿವಸ ಪ್ರಥಮ ತನಿಖೆ ಇಟ್ಟಿದೆ ಪ್ರತಿವಾದಿ ದಿವಸದ ಕೋರ್ಟಿಗೆ ತರವಾಡಿನ ಮೆಂಬರರಾಗಿದ್ದು ಈ ವ್ಯಾಜ್ಯದಲ್ಲಿ ಕಕ್ಷಿಯಲ್ಲಿ ಸೇರುವರೆ ಮನಸ್ಸುಳ್ಳವರು ಸದರಿ ತಾರೀಕಿಗೆ ಕೋರ್ಟು ಮುಂದೆ ಹಾಜರಾಗಿ ಅವರ ಆಕ್ಷೇಪಗಳನ್ನು ಹೇಳತಕ್ಕದ್ದು

ಕಾಸರಗೋಡು, } (sd) ಕೆ. ಶ್ಯಾಮ ಶೆಟ್ಟಿ,
೧೯—೯—೧೯೩೦ } ವಾದಿಯ ಕಡೆ ವಕೀಲ್.

## The Canara Bank Limited, Mangalore.
## ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು

Established July 1906 — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

*BRANCHES* -Karkal Kasargod, Cochin, Udipi Gangolli Coondapur, Bombay Puttur & Calicut

ಬ್ರಾಂ:— ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪ್ರ, ಬೊಂಬಾಯಿ ಪುತ್ತೂರು ಮತ್ತು ಕಲ್ಲಿಕೋಟೆ.

| | |
|---|---|
| Authorised and fully paid up Capital Rs 300,000 0-0 | ಅಧಿಕೃ. ... ಪೂರ್ಣವಾಗಿ ... ಮೂಲಧನ ರೂ 300,000 0-0 |
| Reserve and other sinking Funds Rs 431 732-9 7 | ... ರೂ 431,732-9-7 |
| Amount invested on G P Notes Rs 792 462-2-0 | ... ರೂ 7..,462 2-0 |
| Rates of interest on fixed deposits at Head Office and Branch 6¼ for 2 Years 6% 1 Year | ... |
| Season deposits of Rs 1000/- & above terminable by the end of June are received at 5½% p a | ... ರೂ 1000/- ... |

Current Account Deposits received and interest allowed at daily balance of Rs 50 and above that on multiple of Rs 10 ... from 1st January to ... June and ... 2% from 1st July to 31st December. No interest will be allowed ... than Rs 5 during a period of 6 months ending either 30th June or 31st December in an year.

Except by special arrangement no interest is allowed on sums exceeding Rs 0,000 in the case of Head Office and Bombay & Cochin Branches and on sums exceeding Rs 3,000 in the case of the remaining Branches.

Short notice deposits requiring one week's notice for withdrawal given at any time after one month from the date of deposit ... interest is allowed at 4 per annum. Interest on such deposits will cease ... notice.

*For further particulars please apply to*

Canara Bank Ltd. — K. Venkat Rao.
*Mangalore ...-...-930* — *Secretary*

## The Pangal Nayak Bank, Ltd.

| Branch Office Mangalore | Head Office Udipi *Established 192..* | Agency Office Cochin |
|---|---|---|

Authorised Capital Rs 2,00,000 | Paid up Capital Rs 1,75,000-

Issued Capital Rs 1,75,000- | Reserve and other Funds Rs 1,42,810-

**Fixed Deposits** received for 24 months at 6½, 12 months at 6, 9 or 6 months at 5½ and for 3 months at 5 interest being paid every 6 months.

**Current Deposit Accounts** are opened free of charge and interest allowed at 3% from January to June and ... from July to December on Daily balance.

**Short Notice Savings Bank and Cumulative Deposits** are accepted at favourable terms.

**Loans and Advances** are made on pledges of Valuables and on proper personal securities at reasonable terms and every other description of banking business transacted.

*Further information may be had on application to the* SECRETARY *at the* HEAD OFFICE *or to the* AGENT *at the* BRANCH.

Office of the Bank, 22nd July 1930 — P Laxman Nayak, Secretary

### ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಶಂಕರ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅದ್ಭುತವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮಿದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನ ವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳಿಂ... ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಒಂದು ಸೇರಿಗೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಿತ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ಸಹಾಯಕ್ಕೆ ಸಂಪಾದನೆಮಾಡಿರುವುದು

ಇದರ ಶೋಧನ, ರಸಾಯನ, ಸುಖಪ್ರಸವ ಎಂದೀ ಮೂರು ಗುಣಗಳೂ ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ರಕ್ತದ ಅಂಶವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ತುತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲಿ ಆರೋಗ್ಯಗೊಳಿಸುವದು

ರಸಾಯನ ಗುಣದಿಂದ ಬಾಣಂತಿಯು—ಗರ್ಭ ಧಾರಣೆಯಿಂದ ಬಂದ ... ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಪ್ರಸವ ಗುಣದಿಂದ ಬಾಣಂತಿಯರ ಅರಚಿ ಅಗ್ನಿಮಾಂದ್ಯ, ನಿದ್ರಾನಾಶ ನೋವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವೃಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0 ಪೋಸ್ಟೇಜು ವಗೈರೆ ಬೇರೆ

... ಬೇಕಾದವರು ... ವಿಚಾರಿಸಿರಿ ...

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ... ಕನ್ನಡ

---

ಶಾಲಾ ಉಪಾಧ್ಯಾಯರಿಗೆ ಬೇಕಾಗುವಂತಹ ಚೋಕು ಪೆಟ್ಟಿಗೆಗಳು ಕಡಿಮೆ ದರದಲ್ಲಿ ಮಾರಾಟಕ್ಕೆ ತಯಾರಿವೆ.

ಲೆಜ್ಜರ್, ಜರ್ನಲ್, ಮತ್ತು ಕ್ಯಾಶ್ ಬೂಕುಗಳೂ ತರತರದ ಬ್ಯಾಂಡುಗಳಲ್ಲಿ ಮಾರಾಟಕ್ಕಿವೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

---

### ಕೇವಲ ಕುಸುರಿ ಕ್ರಯ.

ಫ್ರಾಂಚ ಲೆವರ್ ವಾಚು, (ಸೆಕೆಂಡ್ ಹೇಂಡ್ ಕೂಡಿರುವುದು) ಕ್ರಯ ರೂ 1-14-0 ಮಾತ್ರ ... ಕ್ರಯ ರೂ 3-8-0 ... ರೂ 4-... ರೂ 5-0-0 (ಖಾತರಿ ... ಗೆರೆಂಟಿ ಇದೆ)

ಅಂಚೆವೆಚ್ಚ ಭಿನ್ನ.
ಇಂಗ್ಲೀಷಿನಿಂದ ಕಾಗದ ಬರೆಯಿರಿ

R C. MUKERJEE,
*12/2 Hart Paul Lane,*
CALCUTTA

---

### ಗ್ರಾಂಡ್ ಫ್ರಿಯಸೆನ್ಸ್ ಸೇಲ್!

ಬರೇ ಮೂರು ರೂಪಾಯಿ ಗಳ ವ್ಯಾಪಾರದಿಂದ 324 ಅಮೂಲ್ಯವಾದ ಪಾರಿತೋಷಕಗಳು! ಸವ್ಯ ಸುಗಂಧ ಪೂರಿತವಾದ ಒಟ್ಟೋ ಮೋತಿಯಾ ತೈಲದ ಆರು ಬಾಟ್ಲಿಗಳನ್ನು ಒನ್ನಿನಿಸೇ ಕೊಂಡುಕೊಳ್ಳುವವರಿಗೆ ಈ ಕೆಳಗೆ ನಮೂದಿಸಿರುವ ೩೨೪ ಅಮೂಲ್ಯ ಬಹುಮಾನಗಳು ಉಚಿತವಾಗಿ ಕೊಡಲಾಗುವವು!

...

ಮುಖ್ಯ ... ೩—೦—೦ ಮಾತ್ರ ... ೦—೧೦—೦

ಪತ್ರವ್ಯವಹಾರವು ಇಂಗ್ಲಿಷನಲ್ಲಿಯೇ ನಾಗರಿಯವುದು.

ಇಂಡಿಯನ್ ಸ್ಟೋರ್ಸ್ ಕಂ.,
47, ಬೆನಿಯಾಪುಕ್ಕೂರ ಸ್ಟ್ರೀಟ್, ಪಿ. ಒ., ಹಟ್ಕೋಲಾ, ಕಲ್ಕತ್ತೆ

INDIAN STORES CO. 47, Lemratola Street, Po, Hatkhola CALCUTTA.

# ಮಹಾತ್ಮಾಜಿಯವರ ಸತ್ಯಾಗ್ರಹ ಸಮಾಚಾರ

ತಾ. ೧೯ ೯—೩೦

**ಮುಂಬಾಯಿಯಲ್ಲಿ**

ಪಟ್ಟಣದ ಸರ್ವಸಾಮಾನ್ಯ ಎಲ್ಲಾ ಸ್ಥಳಗಳಲ್ಲಿಯೂ ಮಹಾತ್ಮಾಜಿಯವರ ಜನನದ ಪುಣ್ಯದಿನವನ್ನು ಆಚರಿಸಲಾಯಿತು.

ಪೋನಿಯ ರಿಪೋರ್ಟು ಸೂಚಿಸುವಂತೆ "ಮಾಸೂರು" ಎಂಬುದೊಂದು ಹಳ್ಳಿಯಲ್ಲಿ ಅನೇಕ ನಿವಾಸಿಕರ ದಸ್ತಗಿರಿಗಳು ನಡೆದಿರುವವು. ಪೋಲೀಸಿನವರು ಸದರಿ ಗ್ರಾಮವನ್ನು ಒಳ ಹೊಕ್ಕು ಡಿಸ್ಟ್ರಿಕ್ಟು ಬೋರ್ಡು ಶಾಲೆಯ ಮೇಲೆ ಏರಿಸಲ್ಪಟ್ಟ ರಾಷ್ಟ್ರಧ್ವಜವನ್ನು ಕಿತ್ತೊಗೆದಿರುವರು. ಅಂತೆಯೇ ರಾಮ ಮಂದಿರದ ಮೇಲೆ ತೂಗಾಡುತ್ತಿದ್ದ ರಾಷ್ಟ್ರಧ್ವಜವೂ ಪೋಲೀಸ ಶಾಕದೃಷ್ಟಿಯನ್ನು ಸೆಳೆಯುತ್ತಿತ್ತು. ಅದನ್ನೂ ಕೂಡ ಪೋಲೀಸರು ಕಿತ್ತೆಸೆದರಲ್ಲದೆ ಅಗ್ನಿದೇವನಿಗೆ ಆಹುತಿಯನ್ನಾಗಿ ಅರ್ಪಿಸಿದರು. ಈ ಕುರಿತು ದಸ್ತಗಿರಿ ಮಾಡಲ್ಪಟ್ಟವರಲ್ಲಿ ೧೩ ಮಂದಿಯನ್ನು ಬಿಡುಗಡೆಹೊಂದಿಸಿರುವರು.

ಈ ವಿಷಯದಲ್ಲಿ ಸತಾರಾ ಬಾರ್—ಎಸೋಸಿಯೇಶನ್ ಸದಸ್ಯರು ಪೋಲೀಸರ ಅತ್ಯಾಚಾರದ ಹಾವಳಿಯ ಕುರಿತಾಗಿ ಹೈಕೋರ್ಟಿನಲ್ಲಿ ದಾವಾಮಾಡುವ ಆಲೋಚನೆಯಲ್ಲಿ ನಿರತರಾಗಿರುವರು.

ಮುಂಬಾಯಿಯಲ್ಲಿ ಗುರುವಾರ ದಿನ ನಡೆದ ಕೌನ್ಸಿಲ್ ಚುನಾವಣೆಯಲ್ಲಿ ದಕ್ಷಿಣ ದಿಕ್ಕಿನ ಮಹಮ್ಮದೀಯ ಲ್ಲಾಗವರ ಶೈಕಿ ಡಾ॥ ಅಲ್ಬಾನ್ ಡಿಸೋಜ (೫೧೩೭ ವೋಟು), ಸರ್ ವಸಂತರಾವ್ ದಾಬೋಲ್ಕರ್ [೧೦೪೪], ಮತ್ತು ಡಾ॥ ಆರ್ ಟಿ. ನಾರಾಯಣ್ [೯೧೯] ಎಂಬವರನ್ನು ಚುನಾಯಿಸಲಾಯಿತು.

ಮುಂಬಾಯಿ ಸಮರ ಸಂಸ್ಥೆಯ ಧ್ಯಕ್ಷರಾದ ಮಿಸಿಸ್ ರಮಾಬಾಯಿ ಕಾಮದಾರರನ್ನೂ ಕಾಂಗ್ರೆಸ್ ಬುಲೆಟಿನ್ ಪ್ರಚಾರಕರಾದ ರಾಮಬೆನ್ ಕಾಮದಾರರನ್ನೂ ದಸ್ತಗಿರಿ ಮಾಡಿರುವರು.

**ಬನಾರಸದಲ್ಲಿ**

ಪೋಲೀಸರು ದಿ ಯೂತ್ ಲೀಗ್ ಆಫೀಸನ್ನು ದರೋಡೆ ಮಾಡಿ ಕೆಲವು ರಿಜಿಸ್ಟರುಗಳನ್ನೂ ಕಾಗದ ಪತ್ರಗಳನ್ನೂ ಕೊಂಡುಹೋಗಿರುವರು.

**ಅಲಹಾಬಾದದಲ್ಲಿ**

ನ್ಯಾಯಸ್ಥಾನದಲ್ಲಿ ವಿಚಾರಣೆ ನಡೆಯುತ್ತಿರುವಾಗಲೇ ಕಕ್ಷಿದಾರರು ರಾಜ್ಯವಿಪ್ಲವವನ್ನುಂಟುಮಾಡುವ ಕೆಲವು ಪದ್ಯಗಳನ್ನು ಹಾಡಿದುದಕ್ಕಾಗಿ ಅಡಿಷನಲ್ ಮ್ಯಾಜಿಸ್ಟ್ರೇಟು ಪ್ರೊಫೆಸರ್ ತ್ರಿಮ್‌ದಾಸ್ ಮತ್ತು ಬದರಿದತ್ತ್ ಎಂಬವರನ್ನು ಐ ಪಿ ಸಿ ೩೪೭ನೇ ಪ್ರಕರಣಕ್ಕೆ ಒಳಪಟ್ಟ ತಕ್ಷೀರಿನ ಮೇಲೆ ಒಬ್ಬೊಬ್ಬನಿಗೆ ೩ ತಿಂಗಳ ಸಾದಾ ಸಜೆಯನ್ನು ವಿಧಿಸೋಣಾಯಿತು.

ಇಲ್ಲಿನ ಸ್ಥಳೀಕ ಸರಕಾರದ ಹುಕುಮಿನ ಮೇಲೆ ಕ್ರೋಸ್‌ವೈಟ್ ಸ್ತ್ರೀ ವಿದ್ಯಾಮಂದಿರಕ್ಕೆ ಸರಕಾರದಿಂ ಕೊಡಲ್ಪಡುವ ರೂ. ೫೫,೦೦೦ದ ಗ್ರಾಂಟನ್ನು ವಜ್ಜಾಪಡಿಸಿರುವರು. ವಿದ್ಯಾರ್ಥಿಗಳು ನಿರಾಧಾರಿಗಳಾಗಿರುವರು.

**ಕರ್ನಾಟಕ (ಹುಬ್ಬಳ್ಳಿ)**

ತಾ ೧೯—೯—೩೦ನೇ ದಿನ ಮಿ॥ ಅಶ್ವತ್ಥನಾರಾಯಣರಾವ್, ಕಂಚಿಲಪ್ಪ ಗೋವಿಂದರಾವ್ ನಂಜುಂಡಯ್ಯ, ರಂಗಸ್ವಾಮಿ ಮತ್ತು ಅಧ್ಯಾತ್ಮಯಾಪ್ಪ ಎಂಬವರನ್ನು ದಸ್ತಗಿರಿ ಮಾಡಿರುವರು. ಎಲ್ಲಾಪುರ ತಾಲೂಕಿನ ೧೫ ಮಂದಿ ಸತ್ಯಾಗ್ರಹಿಗಳು ಕೂಡಲೇ ಜಿಲ್ಲೆಯನ್ನು ಬಿಟ್ಟು ನಂತರದ್ದುಗಳಲ್ಲಿಯೂ ವಸತಿಮಾಡಬಾರದೆಂದು ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರು ನೋಟೀಸುಗಳನ್ನು ಜ್ಯಾರಿಮಾಡಿರುವರಂತೆ!

ತಾ ೨೦.

**ಅಲ್ಲಹಾಬಾದ್.**

ಮಿ॥ ಯಚ್ ಜಿ ಅಲೆಕ್ಸಾಂಡರ್ ಎಂಬವರು ಸಂಧಾನ ವಿಷಯದಲ್ಲಿ ತುಂಬ ಶ್ರದ್ಧೆಯುಂಟಿರುವರು. ತಾ. ೫೧-೯-೩೦ಕ್ಕೆ ಇವರು ಅಲ್ಲಹಾಬಾದಿಗೆ ಒಂದು ತಲ್ಪಿರುವರು. ಪಂಡಿತ ಜವಾಹಿರಲಾಲ ನೆಹರುರವರ ಸಂದರ್ಶನಾರ್ಥವಾಗಿಯೇ ಬಂದರು. ಆದರೆ ನೆಹರುರವರ ದರ್ಶನಕ್ಕೆ ಮಾತ್ರ ಇನ್ನೂ ಅಪ್ಪಣೆ ದೊರೆಯಲಿಲ್ಲವಂತೆ! ಅಪ್ಪಣೆಯನ್ನು ಕೇಳಿದ್ದಕ್ಕೆ ಜವಾಹಿರಲಾಲರು ಸಂಪೂರ್ಣ ನಿರಾಕರಿಸಿರುವರು. ಆ ಮೇಲೆ ಸದರಿ ಅಲೆಕ್ಸಾಂಡರರು ಮೋತಿಲಾಲರನ್ನು ನೋಡುವ ಉದ್ದೇಶದಿಂದ ಮಸೂರಿಗೆ ತೆರಳಿರುವರಂತೆ!

ಪಂಡಿತ ಕೃಷ್ಣಾಕಾಂತ ಮಾಲವೀಯರನ್ನು ಕಾನಪುರದ ಒಂದು ವಾರಂಟು ಹುಕುಮಿನ ಮೇಲೆ ದಸ್ತಗಿರಿ ಮಾಡಿದರೆಂದು ತಿಳಿದುಬರುತ್ತದೆ.

**ಕಲ್ಕತ್ತಾ ದುರ್ಗಾಪೂಜೆ!**

ಕುಗಿಯ ಬಂದಿಖಾನೆಯಲ್ಲಿ ನರಳುತ್ತಿರುವ ರಾಜಕೀಯ ಕೈದಿಗಳು ಜೈಲಿನೊಳಗೆ ದೊಡ್ಡದೊಂದು ದುರ್ಗಾಪೂಜೆಯನ್ನು ಮಾಡಬೇಕೆಂದು ಸನ್ನಾಹಮಾಡುತ್ತಿರುವರು.

**ಮುಂಬಾಯಿ**

ಪಟ್ಟಣದ ಹೆಸರುವಾಸಿ ಪತ್ರಿಕೆಯಾದ ಮುಂಬಾಯಿ ಕ್ರೋನಿಕಲ್ ಪತ್ರಿಕೆಯು ಏನೋ ರಾಜಕೀಯ ವಿಷಯಗಳ ಕುರಿತು ವರದಿಯನ್ನು ಪ್ರಚಾರಗೊಳಿಸಿದುದಕ್ಕಾಗಿ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಚಾರ್ಜುಮಾಡಿರುವರಂತೆ!

ಮುಂಬಾಯಿಯ ಸಮರಸಂಸ್ಥೆಯ ಅಧ್ಯಕ್ಷಸ್ಥಾನವನ್ನು ವಹಿಸಿ ಭಾರತ ಮಾತೆಯ ಮೂರ್ತಿವಿಶೇಷದಂತೆ ರಾಜಿಸುತ್ತಿದ್ದ ಶ್ರೀಮತಿ ರಮಾಬಾಯಿ ಕಾಮದಾರರು ರಾಷ್ಟ್ರಸೇವೆಯಲ್ಲಿ ಮೊದಲಿಗರಾಗಿ ಸೆರೆವಾಸವನ್ನು ಸೇರಿದರಷ್ಟೆ! ಅವರ ಅಸಮಾನ ಹಾಗೂ ಉಜ್ವಲ ರಾಷ್ಟ್ರಪ್ರೇಮವು ತಾನು ದಸ್ತಗಿರಿಮಾಡಲ್ಪಟ್ಟು ಕಾರಾಗೃಹವಾಸಕ್ಕೆ ಹೋಗುವ ಅವಸರದಲ್ಲಿ ಕೊಟ್ಟ ಈ ಕೆಳಗಿನ ಸಂದೇಶದಿಂದಲೇ ವ್ಯಕ್ತವಾಗುವದು.

**ಸಂದೇಶದ ಸಾರಾಂಶ**

'ರಾಷ್ಟ್ರಪ್ರೇಮವು ಪ್ರತಿಯೊಬ್ಬರನ್ನೂ ಆವರಿಸುವದು. ಪರಮಾತ್ಮನು ದೇಶದ ಆಕಾಂಕ್ಷೆಗಳನ್ನು ಪೂರ್ತಿಮಾಡಲಿ! ಮುಂಬಾಯಿಯು ರಣರಂಗದ ಮುಖ್ಯ ಸ್ಥಾನವಾಗಿರಲಿ! ಮುಂಬಾಯಿಯ ಪ್ರತಿಯೊಂದು ಮನೆಯು, ಒಬ್ಬ ಯೋಧನನ್ನೂ ಓರ್ವ ಸೇವಿಕಳನ್ನೂ ಸತ್ಯಾಗ್ರಹ ಸಮರಕ್ಕಾಗಿ ಒದಗಿಸಿಕೊಡಲಿ! ದೇಶದ ಯುವಕರು ತಮ್ಮ ವಿಮಾನಕ್ಕೂ ಸ್ವಾತಂತ್ರ್ಯದ ಸಂಪಾದನೆ ಮಾಡುತ್ತ ಸ್ವತಂತ್ರ ರಕ್ಷಣೆಗಾಗಿ ಸ್ವದೇಶಮಾತೆಯ ಪೀಠದಲ್ಲಿ ತಮ್ಮ ಆತ್ಮಗಳನ್ನು ಅರ್ಪಿಸತಕ್ಕದ್ದು!! ಭಗಿನಿಯರೂ ಕೂಡ ಈ ವಿಷಯದಲ್ಲಿ ತಮ್ಮ ಅಪ್ರತಿಮ ಶೂರೋದಾರ ಗುಣಗಳ ಸಾಹಸವನ್ನು ತೋರುವರೆಂದು ನಂಬುತ್ತೇನೆ. ಯುವಕವರ್ಗವು ಪದವಿಯವರ ಜನರಲರಾದ ಶ್ರೀಮಾನ್ ಜವಾಹಿರಲಾಲ ನೆಹರುರವರು ಸೆರೆವಾಸದಲ್ಲಿದ್ದರೂ ತನ್ನ ಸತ್ಯಾಗ್ರಹ ಸಂಗ್ರಾಮವನ್ನು [illegible] ಪ್ರತಿನಿತ್ಯ ಕಾರ್ಯದಲ್ಲಿ ಪರಮಾತ್ಮನ ಕೃಪೆ ಅನುಗ್ರಹಮಾಡಲಿ!! ಎಂದು ಮೊದಲಾಗಿ ತನ್ನ ಮನೋಭಾವ ತಿಳಿಸಿರುವರು.

ರಮಾಬಾಯಿಯವರು ದಸ್ತಗಿರಿಯ ದಿನವು ಮುಂಬಾಯಿ ನಗರದ ಪ್ರತಿಭಟನೆಯ ದಿವಸವಾಗಿತ್ತು. ಅವರ ಸ್ಮಾರಕಾರ್ಥವಾಗಿ ಮಾರ್ಕೆಟುಗಳು ಮೊದಲಾದ ವ್ಯಾಪಾರ ವ್ಯವಹಾರಗಳು ಮುಕ್ತಾಯಮಾಡಲ್ಪಟ್ಟಿದ್ದವು. ಮಿಲ್ಲುಗಳು ಅನೇಕ ಕಡೆಗಳಲ್ಲಿ ಹರತಾಳವು ಆಚರಿಸಲ್ಪಟ್ಟಿತ್ತು.

**ಮಡಿಕೇರಿ.**

ವೀರರಾಜಪೇಟೆಯಲ್ಲಿ ಮದ್ಯದ ಅಂಗಡಿಗಳನ್ನು ಪಹರೆ ಮಾಡಿದುದಕ್ಕಾಗಿ ಬಿ. ಹೊಳ್ಳಿ ಕೃಷ್ಣಯ್ಯ ಎಂಬ ಸತ್ಯಾಗ್ರಹಿಯನ್ನು ದಸ್ತಗಿರಿ ಮಾಡಿರುವರು. ಸುಮಾರು ೨೦೦೦ ಜನರಿಂದ ಕೂಡಿದ ಮೆರವಣಿಗೆಯು ಕೈದಿಯನ್ನು ಹಿಂಬಾಲಿಸಿತು. ಸದರಿಯವರನ್ನು ಮಡಿಕೇರಿಗೆ ತಂದು ಸಬ್ ಜೈಲಿನಲ್ಲಿ ಇಟ್ಟಿರುವರು. ಇವರ ತನಿಖೆಯು ೨೫ನೇ ತಾರೀಕಿಗೆ ಜರಗಲಿಕ್ಕಿರುವದು.

ತಾ ೨೦—೯—೩೦

**ನವಾಡೆಲ್ಲಿಯಲ್ಲಿ**

ಮಧ್ಯರಾತ್ರಿಯ ಕಗ್ಗತ್ತಲೆಯ ಸಮಯದಲ್ಲಿ ಪೋಲೀಸರು ಸತ್ಯಾಗ್ರಹ ಆಶ್ರಮವನ್ನು ಒಳಹೊಕ್ಕು ೪೬ ಮಂದಿ ಸ್ವಯಂಸೇವಕರನ್ನು ದಸ್ತಗಿರಿ ಮಾಡಿದ್ದಲ್ಲದೆ ಒಳಗಿರುವ ಎಲ್ಲಾ ಕಾಗದ ಪತ್ರ ವಗೈರೆಯ ಆಫೀಸು ಸಾಮಾನುಗಳನ್ನು ಜಪ್ತಿಮಾಡಿರುವರು. ಆತರುವಾಯ ಡಿಲ್ಲಿ ಪಟ್ಟಣದ ರಾಷ್ಟ್ರೀಯ ಸಮರ ಸಂಸ್ಥೆಯ ನಾಲ್ಕನೇ ಡಿಕ್ಟೇಟರರಾದ ಮೌಲಾನಾ ಅಹಮ್ಮದ ಸೈದ್ ಎಂಬವರನ್ನು ಅವರ ಸ್ವಂತ ಮನೆಯಲ್ಲೇ ದಸ್ತಗಿರಿಮಾಡಿರುವರು. ಡಿಕ್ಟೇಟರರು ಎಷ್ಟು ನಿರೋಧಿಸಿದರೂ ಕೇಳದೆ, ಸ್ವಯಂಸೇವಕರು ಅವರ ವಿಯೋಗ ದುಃಖಶಾಂತತೆಗಾಗಿ ಹರತಾಳವನ್ನು ಕೈಕೊಂಡರು.

**ಮದರಾಸಿನಲ್ಲಿ**

ಧುರೀಣರಾದ ಶ್ರೀ। ಕೆ ನಾಗೇಶ್ವರರಾಯರು, ಜಿ. ರಂಗಯ್ಯನಾಯ್ಡು ಮತ್ತು ಪಿ ಎಸ್ ಧರ್ಮರಂಗಾರೂ ೬ ತಿಂಗಳ ಕಠಿಣ ಸಜೆಯನ್ನನುಭವಿಸಿ ಬಿಡುಗಡೆಹೊಂದಿ ಮರಳಿರುವರು. ನಾಗೇಶ್ವರರಾಯರಿಗೆ ಸೆರೆಮನೆಯಲ್ಲಿ ಬಿ ಕ್ಲಾಸಿನ ಅಧಿಕಾರವಿದ್ದಿತಂತೆ! ಅವರಿಗೆ 'ಹಿಂದೂ' ಮತ್ತು 'ಟೈಮ್ಸ್' ಪತ್ರಿಕೆಗಳನ್ನು ಓದಲಿಕ್ಕೆ ಕೊಡುತ್ತಿದ್ದರು.

**ನಾಗಪುರದಲ್ಲಿ**

ರೌಂಡ್‌ಟೇಬಲ ಕಾನ್ಫರೆನ್ಸಿಗೆ ವಿರೋಧವಾಗಿ ಸತ್ಯಾಗ್ರಹಿಗಳಿಂದ ಪೋಷಿಸಲ್ಪಟ್ಟ ಅಸಹಕಾರ ಮೆರವಣಿಗೆಯನ್ನು ಪೋಲೀಸರು ನಿರಾತಂಕವಾಗಿ ಮುಂದುವರಿಯಬಿಟ್ಟರು ಮೆರವಣಿಗೆಯು ಭಾರತಮಾತೆಯ ಸುಪುತ್ರರೆನಿಸುವ ಎಷ್ಟೋ ಮಹನೀಯರಿಂದ ತುಂಬಿದ್ದಿತು. ಬಹಳ ರಾತ್ರಿಯ ವರೆಗೂ ಮೆರವಣಿಗೆಯ ವಿಜೃಂಭಣೆಯಿಂದ ಮುಂಬಾಯಿ ನಗರವು ಅತ್ಯಂತ ಶೋಭಾಯಮಾನವಾಗಿತ್ತು. ಆ ಮೇಲೆ ಸಭೆಸೇರಿ ಅನೇಕ ಠರಾವುಗಳನ್ನು ಪಾಸುಮಾಡಲಾಯಿತು

### ಡೆಲ್ಹಿ

ಇಲ್ಲಿನ ಪೋಲೀಸ್ ಇನ್‌ಸ್ಪೆಕ್ಟರ್ ಜನರಲರು ಗುಂಡಿನ ಏಟುಗಳಿಂದ ವ್ಯತಿಹೊಂದಿದರಷ್ಟೆ! ಆ ಬಾಬ್ತು ೧೩ ಮಂದಿಯನ್ನು ಅಪಾದಿತರೆಂದು ಕೈದುಮಾಡಲಾಗಿದೆ ಸಬ್‌ಡಿವಿಜನಲ್ ಆಫೀಸರರು ಇವರ ಜಾಮೀನು ಅರ್ಜಿಗಳನ್ನು ಕೂಡ ಅಕ್ಟೋಬರ್ ೧ನೇ ತಾರೀಕಿಗೆ ತಳ್ಳಿ ಬಿಟ್ಟಿರುವರಂತೆ!

### ಲಕ್ನೋದಲ್ಲಿ

ಬಾಬು ಮೋಹನಲಾಲ್ ಸಕ್ಸೇನಾ ಎಂಬ ಸತ್ಯಾಗ್ರಹ ನಿಷ್ಠಾವಂತರನ್ನು ಅವಧಿಯು ಮುಗಿಯುವದರೊಳಗಾಗಿ ಸರಕಾರವು ಬಿಡುಗಡೆ ಹೊಂದಿಸಿರುವದು. ಅವರು ತಿಳಿಸುವಂತೆ ಜೈಲುವಾಸವು ಬಹಳ ಕಷ್ಟತರಗತಿಯದೆಂದು ತಿಳಿದುಬರುತ್ತದೆ ಬಂದಿವಾಸರ ಆರೈಕೆಯು ತೀರ ಅಸಮಾಧಾನವಾಗಿರುವದು ಅವರು ಹಿಡಿದು ಗೂಡಿಸುವಂತೆ ಪ್ರಪಂಚದ ಸುಖೋಪಭೋಗಗಳಲ್ಲಿಯೇ ಮುಳುಗಿರಾಗಿದ್ದ ಅದೆಷ್ಟೋ ಜಮೀನುದಾರರು, ಗ್ರ್ಯಾಜುಯೇಟರೇ ಮೊದಲಾದವರು ಕನಿಷ್ಠ ತರಗತಿಯ 'ಸಿ' ಕ್ಲಾಸು ಬಂದಿಖಾನೆಯಲ್ಲಿರಿಸಲ್ಪಟ್ಟಿರುವರು ಲಕ್ನೋ ದೇಶದಲ್ಲಿಯೇ ಸರಕಾರವು ಸಹೋದರರೀರ್ವರಲ್ಲಿ ಒಬ್ಬನನ್ನು ಎ ತರಗತಿಯ ಜೈಲಿನಲ್ಲಿಯೂ ಇನ್ನೊಬ್ಬನನ್ನು ಸಿ ತರಗತಿಯದರಲ್ಲಿಯೂ ಇರಿಸಿರುವರಂತೆ! ಲಕ್ನೋ ಪಟ್ಟಣದಲ್ಲಾದ ೩೦೦ ದಸ್ತಗಿರಿಗಳಲ್ಲಿ ೧೮ ಮಂದಿಯನ್ನು ಮಾತ್ರವೇ ಎ ತರಗತಿಯ ಜೈಲಿಗೆ ಅಟ್ಟಿರುವರು ಮಿಕ್ಕವರಿಗೆ ಸಿ ಕ್ಲಾಸೇ ಗತಿ!

### ಕೇರಳಾ ದೇಶದ

ರಾಷ್ಟ್ರೀಯ ಸಮಿತಿಯ ಡಿಕ್ಟೇಟರರಾಗಿದ್ದ ಮಿ ಇ ಕೆ ಶಂಕರವರ್ಮರಾಜರು ೧೪೪ನೇ ಪ್ರಕರಣದ ಉಲ್ಲಂಘನೆ ಮಾಡಿ ಬಹಿರಂಗವಾಗಿ ಭಾಷಣ ಕೊಟ್ಟದ್ದಕ್ಕಾಗಿ ದಸ್ತಗಿರಿ ಮಾಡಿರುವರು ಕೇರಳಾ ಕೊಂಗ್ರೆಸ್ ಕಮಿಟಿಯವರು ೨ನೇ ತಾರೀಕಿನ ದಿನ ಮಹಾತ್ಮಾಜಿಯವರ ಪುಣ್ಯದಿನವನ್ನು ಬಹಳ ವಿಜೃಂಭಣೆಯಿಂದ ಆಚರಿಸಿದರು.

ತಾ. ೨೮—೯—೩೦

### ಮುಂಬಾಯಿಯಲ್ಲಿ

ಚಕ್ರಗೋಷ್ಠಿ ಸಮ್ಮೇಳನದ ನಿಷೇಧಾರ್ಥವಾಗಿ ಮುಂಬಾಯಿ ನಗರದ ವೀರಪುತ್ರರಿಂದ ಪೋಷಿಸಲ್ಪಟ್ಟ ಮೆರವಣಿಗೆಯನ್ನು ಪೋಲೀಸರು ಯಾವ ರೀತಿಯಿಂದಲೂ ಉಪದ್ರವಿಸಲಿಲ್ಲ ಆದರೆ ಸುಮಾರು ೩೦೦ ಮಂದಿ ಆಯುಧಪಾಣಿಗಳಾದ ಪೋಲೀಸರು ಮತ್ತು ೧೨ ಮಂದಿ ಪೋಲೀಸ್ ಆಫೀಸರರು ಕಮಿಶನರ ಮುಂದಾಳುತ್ವದಲ್ಲಿ ಮೆರವಣಿಗೆಯ ಸಮಾರಂಭವನ್ನು ನೋಡುತ್ತಿದ್ದರು

ಮುಂಬಾಯಿಯ 'ವಾರ್ಲಿ' ಎಂಬ ಸ್ಥಳದಲ್ಲಿ ಪಂಚಮರ ಸಭೆಯೊಂದು ಡಾ ಅಂಬೇಡ್ಕರರ ಪ್ರಮುಖದಲ್ಲಿ ಜರಗಿತು ಸಭೆ ಕೂಡಿದರ ಮುಖ್ಯ ಉದ್ದೇಶವೆಂದರೆ—ಡಾ| ಅಂಬಾಡ್ಕಾರರು ಪಂಚಮರಲ್ಲಿ ಕೆಲವು ದೊಡ್ಡ ಮನುಷ್ಯರನ್ನು ಚಕ್ರಗೋಷ್ಠಿಗೆ ಹೋಗಲು ಮುಂದಾಳುತ್ವವನ್ನು ವಹಿಸಬೇಕೆಂಬುದೇ ಆಗಿರುವದು ಇಷ್ಟೊಂದು ಉತ್ಸಾಹದಿಂದ ಕೂಡಿದ ಸಭೆಯಲ್ಲಿ ಯಾರೋ ಕಲ್ಲುಗಳನ್ನು ಎಸೆದು ಉಪದ್ರಗೊಳಿಸಿದರಂತೆ! ಅಂತೆಯೇ ಎರಡು ಮುಸ್ಲಿಮ್ ಪಾರ್ಟಿಗಳ ಎಡೆಯೂ ಆಯಿತು ಕಲ್ಲು ಹೊಡೆತಗಳಿಂದ ಅಲ್ಲಲ್ಲಿ ಕೂಡುತ್ತಿದ್ದ ಈ ರೀತಿ ಸಭೆಗಳು ಮನ್ನಾಮಾಡಲ್ಪಟ್ಟವು

### ಕರಾಚಿಯಲ್ಲಿ

ಉತ್ಸವಗಳ ಸಮಾರಂಭಗಳಲ್ಲಿ ಸುಡುವ ಮದ್ದು ಮಾರಾಟದ ಎಲ್ಲಾ ವ್ಯಾಪಾರಸ್ಥರು, ಸತ್ಯಾಗ್ರಹ ಚಳವಳಿ ಶಾಂತವಾಗುವ ವರೆಗೆ ತಾವು ಹೊಸ ಮ್ಯಾಲನ್ನು ತರಿಸುವದಿಲ್ಲವೆಂತಲೂ, ಶೇಖರಿಸಿಟ್ಟ ಮದ್ದನ್ನು ಉಪಯೋಗಿಸುವದಿಲ್ಲವೆಂತಲೂ ನವಜೀವನ ಭಾರತ ಸಭೆಯವರಿಗೆ ಮಾತುಕೊಟ್ಟಿರುವರು, ಮಾತ್ರವಲ್ಲದೆ ಮೂರು ಘಂಟೆಗಳ ತನಕ ಚರ್ಚೆ ನಡೆದು ಕೊನೆಗೆ ನವಜೀವನ ಭಾರತ ಸಭೆಯವರ ಬರಾರಿಗೆ ಸಹಿಮಾಡಿರುವರು. ಸಿಗರೇಟುಗಳ ಬಹಿಷ್ಕಾರದ ಕುರಿತು ಬೇಗನೇ ಠರಾವುಗಳು ಪಾಸಾಗಲಿಕ್ಕಿರುವವು

(೧೩ನೇ ಪುಟಕ್ಕೆ ಮುಂದರಿಸಿಯದೆ.)

## The Zandu Pharmaceutical Works, Ltd., Bombay, 14.
## ದಿ ಝೂಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ. 14.

ಲೋಕಪ್ರಸಿದ್ಧವಾದ 'ಝೂಂಡೂ ಯವರ

# ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

ಹಸಿ ಅವಳಕ ಇನ್ನು ಇತರ ವಸ್ತುಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು. ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದುರ್ಬಲತ್ವ, ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ಮತ್ತು ನರಗಳ ನಿಶ್ಶಕ್ತಿ, ಧಾತುಕ್ಷೀಣತೆ, ಪುಷ್ಟಿಹೀನತೆ ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

ಕ್ರಯ 1 ಪೌನು ಸೀಸೆ ರೂ. 2—8—0, ½ ಪೌ ರೂ. 1—5—0, ¼ ಪೌ. ರೂ 0—13—0.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು.— ದಾಮೋದರ್ ಅಂಡ್ ಕಂಪೆನಿ, 78 ಚೈನಾ ಬಜಾರು ರಸ್ತೆ, ಮದ್ರಾಸು

ತೀರ್ಥಹಳ್ಳಿ ಏಜಂಟರು.— ಮೆಸರ್ಸ್ ಪಂಡಿತ ಮತ್ತು ಕಂಪೆನಿ

ಮಂಗಳೂರು ಏಜಂಟರು.— ದಿ ಊಲನ್ ವರ್ಕ್ಸ್.

ಸಿರ್ಸಿ ಏಜಂಟರು.— ಎಸ್. ಎಲ್ ಧಾಕಪ್ಪಾ ಎಂಡ್ ಬ್ರದರ್ಸ್

ಸಬ್ ಏಜಂಟರು — ಯು ಜನಾರ್ಧನರಾವ್ ಪುತ್ತೂರು, ದ. ಕನ್ನಡ

ಮಂಗಳೂರು ಏಜಂಟರು — ಕಿಪ್ಪಣ್ಣ ಶ್ಯಾತ್ರಿ ಬಸ್‌ಪೇಟೆ

☞ ವಿವರ ಕೆಟಲಾಗು ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು



## ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು



## ಮುದಲ್ ತರವಾದ ಬೆಳ್ಳಿ ಉಡಿದಾರ ಹಗ್ಗ.

ESTD 1896.

ಅನೇಕ ವರುಷದಿಂದ ನಾವು ಬೆಳ್ಳಿ ಉಡಿದಾರಗಳನು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿ ಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ಉಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ಧಾರಣೆ ಸಂಸದಲ್ಲಿಯೂ, ಸರಕಿನ ಸಾಮ್ಯದಲ್ಲಿಯೂ ದಕ್ಷಿಣ ಇಂಡಿಯಾವಿನಲ್ಲಿ ಹೆಸರು ಪಡೆದುದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳನ್ನು ಕಳುಹಿಸುತ್ತೇವೆ. ಒಂದು ಸಲ ನಮ್ಮಲ್ಲಿಂದ ತರಿಸಿ ನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ಧಾರಣೆ ಪ್ರಕಾರ ಸಂಕೇತಗಳಿಗ ಧಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,

ಸರಾಫು ವ್ಯಾಪಾರಿ,

ಶೆವ್ವಾಪೇಟೆ, ಸೇಲಂ, (ದಕ್ಷಿಣ ಇಂಡಿಯಾ)



TELEGRAMS 'ASPINWALCO' TELEPHONE No. 15

DISTRIBUTORS

Aspinwall & Co, Ltd

(Address) MANGALORE

*STOCKISTS*

UDIPI

*H Siddaya Hegde*

KASARGODE.

*Rama Nayak*

KANHANGAD

*H S Russool.*

Puttur

*K Venkatraya Pai,*

Imperial Cycle Stores



## Grand Clearing Sale!

ಜಗತ್ಪ್ರಸಿದ್ಧವಾದ ಎಮ್ "ಬಟ್ಟೊ ಫುಲಾರಾಮ" ಸುಗಂಧದ ಬಾಟಲಿಗಳನ್ನು ಮಾರುವ ಅಭಿಪ್ರಾಯದಿಂದ ಕೊಳ್ಳುವವರು ಈ ಕೆಳಗಿನವುಗಳನ್ನು ಧರ್ಮಾರ್ಥವಾಗಿ ಪಡೆಯುವರು —

1 ಕರವಸ್ತ್ರ, 1 ಫೌಂಟನ್‌ಪೆನ್ 1 ಕ್ಲಿಪ್ 1 ಹರಿತವಾದ ಚಾಕು 1 ಸುಗಂಧ ಸಾಬೂನು, 1 ಅಂದವಾದ ಸಿಗರೇಟು ಕೇಸು 12 ಉತ್ತಮ ಬೊಸಿಗೆ 1 ಕೋಟಿಂಗ್ ಪಿನ್ನು 1 ಪಟ್ಟು ಗಡಿಯಾರ 1 ಕನ್ನಡಿ, 1 ಬಾಚಣಿಗೆ, 1 ಕಣ್ಣು 1 ಸ್ಪ್ರಿಂಗ್ ಬ್ರಶ್ಶು 1 ಹರಳಿನ ಉಂಗುರ

ಅಂಚೆವೆಚ್ಚ ಆಣೆ —8—

ಇಂಗ್ಲೀಷಿನಲ್ಲಿ ಬರೆಯಿರಿ,

**Indian Stores,**

*5 Beadon Street,*

CALCUTTA



## FOR YOUR CAR

# WILLARD BATTERIES.

SIMONIZ KLEENER SIMONIZ POLISH

*AGENTS* —

## Messrs. Aspinwall & Co, Ltd.

MANGALORE



**ಒಮ್ಮೆ ಪರೀಕ್ಷಿಸಿರಿ! ತೃಪ್ತಿ ಹೊಂದಿರಿ!**

## ದಿ ಕ್ರೌನ್ ರಬ್ಬರ್ ಸ್ಟಾಂಪು ಕಂಪೆನಿ,

ಹೆಡ್ ಆಫೀಸು ಬಲ್ಮಠ ರಸ್ತೆ, ಕಂಕನಾಡಿ ಪೋಸ್ಟು,

ಮಂಗಳೂರು, ದ ಕನ್ನಡ

## ರಬ್ಬರು ಮೊಹರುಗಳು

ಇಲ್ಲಿ ಉತ್ತಮವಾದ ಎಯರ್‌ಕುಶನ್ ರಬ್ಬರು ಮೊಹರುಗಳೂ, ಹಿತ್ತಾಳಿ ಇತ್ಯಾದಿ ಲೋಹಗಳಲ್ಲಿಯೂ, ಮಾರ್ಬಲ್‌ನಲ್ಲಿಯೂ, ಕೆತ್ತನೆಯ ಕೆಲಸವನ್ನೂ ಎಸಕ ನಾಜೂಕಾಗಿ ಸ್ವಲ್ಪ ಸಮಯದಲ್ಲಿ ಮಾಡಿಕೊಡುತ್ತದೆ

ಹೆಚ್ಚಿನ ಮಾಹಿತಿಯನ್ನು ಪತ್ರಮೂಲಕವಾಗಲೀ, ಆಫೀಸಿನಲ್ಲಿ ಸ್ವತಃ ಬಂದಾಗಲೀ ತಿಳಿದುಕೊಳ್ಳಿ

ಎಮ್ ದೇವದಾಸ ಕಿಣಿ,

ಮೆನೇಜಿಂಗ ಪ್ರೊಪ್ರೈಟರ್



## ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು



### ರಿಸ್ಟ್‌ವಾಚ್ ಉಚಿತ.

ಒಂದು ಜೇಬಿನಲ್ಲಿಡುವ ಗಡಿಯಾರ ಉಚಿತವಾಗಿ ದೊರೆಯುತ್ತದೆ.

ದದ್ರುವಿನಾಶಕ— ಗಜಕರ್ಣ ಕಜ್ಜಿಗಳ ಮೇಲೆ ೨೪ ತಾಸುಗಳಲ್ಲಿ ಖಂಡಿತ ಗುಣಕೊಡುವ ಮಲಾಮು ಕಿಂ ೪ ಆಣೆ ೧೨ ಡಬ್ಬಿಗಳ ಮೇಲೆ ಒಂದು ಟ್ರ್ಯಾನ್ ಪೀಸು ೨೪ ಡಬ್ಬಿಗಳಿಗೆ ೧ ರಿಸ್ಟ್‌ವಾಚ್ ಕಳ್ಳುಹಿಸುವೆವು ಪತ್ರವ್ಯವಹಾರ ಇಂಗ್ಲಿಷಿನಲ್ಲಿ

**ಕಿಂಗ್‌ಖಾರ್ ಕೊರೋನೇಶನ್ ಕಂಪೆನಿ**

ಮುಂಬಾಯಿ.

### ನೈಜಾಮರ ರಾಜ್ಯದ ಆಯವ್ಯಯ.

ಈಗಿನ ರಾಜ್ಯಭಾರದ ಕ್ರಮಕ್ಕನುಸಾರವಾಗಿ ಹೈದರಾಬಾದ ರಾಜಾದಾಯದಲ್ಲಿ ಖರ್ಚುಕಳೆದು ಹೇರಳ ಹಣ ಉಳಿದಿದೆ. ಆದರೆ ರಾಜ್ಯದಲ್ಲಿ ಈಗಿನ ಕಾಲದ ಸುಧಾರಣೆಗಳ ಪ್ರಕಾರ ಆಗತಕ್ಕ ಹಲವು ಕೆಲಸಗಳು ಬಾಕಿಯಲ್ಲಿ ಉಳಿದಿವೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಕೊಡುವದು ಧರ್ಮಾರ್ಥವಾಗಿ ವೈದ್ಯಸಹಾಯವನ್ನು ಒದಗಿಸುವದು, ನೀರಾವರಿ ಕೆಲಸಗಳನ್ನು ಮಾಡಿಸಿ ಬರಗಾಲವನ್ನು ತಡೆಗಟ್ಟುವದು. ಇಲೆಕ್ಟ್ರಿಕ್ ಸ್ಕೀಮುಗಳನ್ನು ತಯಾರಿಸುವದು, ರೈಲುವೆಗಳನ್ನು ಅಭಿವೃದ್ಧಿಪಡಿಸುವದು ಮುಂತಾದ ಕೆಲಸಗಳು ಬಾಕಿಯಲ್ಲಿವೆ ಇವುಗಳನ್ನೆಲ್ಲಾ ಮಾಡಲು ಕೈಹಚ್ಚಿದರೆ ಹಣವು ಭಂಡಾರದಲ್ಲಿ ಉಳಿಯುವುದರ ಬದಲಾಗಿ ವರುಷ ವರುಷ ಹಣದ ಅಡಚಣೆಯು ಉಂಟಾಗಲು ಅವಕಾಶವಿದೆ ಆದುದರಿಂದ ಈಗಲೇ ಸ್ವಲ್ಪ ಹಣವನ್ನು ಜಮಾಯಿಸುತ್ತಾ ಇರುವದು ಒಳ್ಳೇದು

### ದಕ್ಷಿಣ ಆಫ್ರಿಕಾ ಮತ್ತು ಒಸ್ಟ್ರೇಲಿಯದಲ್ಲಿ ರಾಜಕೀಯ ಬದಲಾವಣೆ.

ದಕ್ಷಿಣ ಆಫ್ರಿಕದಲ್ಲಿ ಹಲವು ಸಂಸ್ಥಾನಗಳಿವೆ ಇವುಗಳಿಗೆ ಪ್ರಾಂತೀಕ ಪಾರ್ಲಿಮೆಂಟುಗಳು ಇವೆ ಎಲ್ಲಾ ಸಂಸ್ಥಾನಗಳಿಂದ ಕೂಡಿದ ಯುನಿಯನ್ ಸರಕಾರಕ್ಕೆ ಯುನಿಯನ್ ಪಾರ್ಲಿಮೆಂಟು ಇದೆ ಪ್ರಾಂತ್ಯಗಳಲ್ಲಿ ನಡಿಯಬೇಕಾದ ಕೆಲಸಗಳನ್ನು ಪ್ರಾಂತೀಕ ಸರಕಾರಗಳು ನಡಿಸುತ್ತಾ ಬಂದರೂ ಎರಡು ಮೂರು ಸಂಸ್ಥಾನಗಳೊಳಗಿರಬಹುದಾದ ವಿವಾದಗಳನ್ನು ತೀರಿಸಲಿಕ್ಕೆ ಯುನಿಯನ್ ಪಾರ್ಲಿಮೆಂಟಿಗೆ ಅಧಿಕಾರವಿಲ್ಲದೆ ಸಾಧ್ಯವೇ ಇಲ್ಲ ಆದರೆ ಈಗಿನ ರಾಜ್ಯಭಾರ ಕ್ರಮಗಳ ಪ್ರಕಾರ ಈ ಹಕ್ಕು ಯುನಿಯನ್ ಪಾರ್ಲಿಮೆಂಟಿಗಿರುವುದಿಲ್ಲ ಆದುದರಿಂದ ಈ ವಿಷಯ ರಾಜಕೀಯ ಸುಧಾರಣೆಗಳು ಆಗಬೇಕೆಂಬ ಚಳವಳವು ನಡಿಯುತ್ತಲಿದೆ ಒಸ್ಟ್ರೇಲಿಯದಲ್ಲಿಯೂ ಕೂಲಿಕಾರರು, ರೈಲುವೆಗಳು ಮುಂತಾದರ ಕುರಿತು ವಿವಾದಗಳು ತಪ್ಪುವುದೇ ಇಲ್ಲ, ಇದಕ್ಕಾಗಿ ಎಲ್ಲಾ ಅಧಿಕಾರವು ಒಸ್ಟ್ರೇಲಿಯದ ಕೋಮನ್‌ವೆಲ್ತ ಪಾರ್ಲಿಮೆಂಟಿಗೆ ಇರಬೇಕೆಂದು ವಿವಾದಗಳು ನಡೆಯುತ್ತಲಿವೆ ಆದುದರಿಂದ ಸುಧಾರಣೆಗಳು ಇಲ್ಲಿಯೂ ಅಗತ್ಯ ಇವೆ ಎಂದು ತೋರುತ್ತದೆ. ಎಲ್ಲಿ ನೋಡಿದರೂ ಇದ್ದ ಸರಕಾರಿ ಕ್ರಮದಲ್ಲಿ ತೃಪ್ತಿಯು ಇಲ್ಲವೆಂದೇ ಲೋಕದ ಸ್ಥಿತಿಯಿಂದ ತಿಳಿದುಬರುತ್ತದೆ

### ಆಸ್ಯಾಖಂಡದ ಮಹಿಳೆಯರ ಪರಿಷತ್ತು.

ಆಸ್ಯಾಖಂಡದ ಮಹಿಳೆಯರ ಪರಿಷತ್ತು ಬೇಗನೇ ಲಾಹೋರಿನಲ್ಲಿ ಜರಗಲಿಕ್ಕಿದೆ ಇದಕ್ಕೆ ಪೇಲೆಸ್ಟೈನ್ ಸಿರಿಯಾ, ಸಿಲೋನ್ ನೇಪಾಳ, ಜಪಾನ, ಬರ್ಮಾ, ಇರಾಕ್, ಸಾಯಮ್, ಇಂಡೋಚ್ಯಾನಾ, ಮಲಯಾ ಹವಾಯಿ, ಪರ್ಸಿಯಾ, ಬಲುಚಿಸ್ತಾನ ಮುಂತಾದ ದೇಶಗಳ ಮಹಿಳಾ ಪ್ರತಿನಿಧಿಗಳು ಬರಲಿಕ್ಕಿರುವರು ಈ ಪರಿಷತ್ತಿನಲ್ಲಿ ಮುಖ್ಯವಾಗಿ ಪೌರ್ವಾತ್ಯ ನಾಗರೀಕತೆಯು ಅಳಿದುಹೋಗದಂತೆ ಮಾಡುವದೂ ಪಾಶ್ಚಿಮಾತ್ಯ ನಾಗರೀಕತೆಯ ಕೆಲವು ಸುಗುಣಗಳನ್ನು ಪೌರ್ವಾತ್ಯ ನಾಗರೀಕತೆಯಲ್ಲಿ ಸೇರಿಸಿಕೊಳ್ಳುವಂತೆ ಮಾಡುವದೂ ಇವೇ ಮುಖ್ಯ ಉದ್ದೇಶಗಳಾಗಿವೆ ಈ ಪರಿಷತ್ತಿನಲ್ಲಿ ಗಂಡಸರ ಹಂಗಿಲ್ಲದ ರೀತಿಯ ನಾಗರೀಕತೆಯ ಸೂತ್ರವನ್ನು ಅನುಸರಿಸಿ ಗಂಡಸರೂ ಹೆಂಗಸರೂ ಹೊಟೇಲುಗಳಲ್ಲಿರುವ ರೀತಿಯ ಸುಧಾರಣೆ ಮುಂತಾದ ಸಾಮಾಜಿಕ ಪದ್ಧತಿಗಳನ್ನೇ ನಾಶಮಾಡಿ ಪಶುಸಮಾನವಾದ ನಾಗರೀಕತೆಯ ಸೂತ್ರವನ್ನು ಈ ಮಹಿಳೆಯರು ಅಂಗೀಕರಿಸದೆ ಈಗಿನ ಸಮಾಜ ಕ್ರಮಗಳು ಇದ್ದಂತೆ ಇದ್ದು ವಿದ್ಯೆ, ಕೈಗಾರಿಕೆ ಮ ಮೊದಲಾದ ಉನ್ನತಿ ಜನಾಂಗದ ಉನ್ನತಿ ಸ್ಥಿತಿಯನ್ನೇ ಮೂಲಸೂತ್ರವಾಗಿಟ್ಟುಕೊಂಡು ಗಂಡ ಹೆಂಡಿರು ಎಂಬ ಕ್ರಮವು ಅಳಿದುಹೋಗದಂತೆ ಮುಂಜಾಗ್ರತೆಯನ್ನು ಇಟ್ಟುಕೊಳ್ಳಲಿ

### ಮದರಾಸಿನ ಹೊಸ ಮಂತ್ರಿ ಸಭೆ.

ಮದರಾಸು ಸಂಸ್ಥಾನದ ಚುನಾವಣೆಯು ಮುಗಿಯುತ್ತಾ ಬಂತು ಆದರೆ ವಿಶಾಖ ಪಟ್ಟಣ ಜಿಲ್ಲೆಯ ಚುನಾವಣೆಯು ಇತ್ತಲಾಗಿ ಆದುದರಿಂದ ಮದರಾಸು ಗವರ್ನರರು ಪಶ್ಚಿಮ ಕರಾವಳಿಯ ಸಂಚಾರ ಮುಗಿಸಿ ಮದರಾಸಿಗೆ ಬಂದ ನಂತರ ಅಂದರೆ ದೀಪಾವಳಿ ಹಬ್ಬ ಮುಗಿದು ಕಾರ್ತಿಕ ಶು॥ ಬಿದಿಗೆಯ ದಿವಸ ಹೊಸ ಮಂತ್ರಿ ಸಭೆಯ ಚುನಾವಣೆಯು ನಡಿಯುವದೆಂದು ತಿಳಿದುಬಂದದೆ. ಈ ಸಾರಿಯು ಈ ಚುನಾವಣೆಯಲ್ಲಿ ಮುನಿಸ್ವಾಮಿ ನಾಯ್ಡುರವರ ಜಸ್ಟಿಸ್ ಪಾರ್ಟಿ ಮತ್ತು ಡೋಕ್ಟರ ಸುಬ್ಬರಾಯನರ ನೇಶನಲಿಸ್ಟ ಪಾರ್ಟಿ ಎಂಬ ಎರಡು ಬಲವಾದ ಪಾರ್ಟಿಗಳಾಗಿವೆ ಡೋಕ್ಟರ ಸುಬ್ಬರಾಯನರು ಮುಸಲ್ಮಾನರಿಗೆ ಒಂದು ಮಂತ್ರಿ ಪದವಿ, ಇನ್ನೊಂದು ಬ್ರಾಹ್ಮಣ ಪಾರ್ಟಿಗೆ ಮಂತ್ರಿ ಪದವಿ ಕೊಟ್ಟು ತಾನು ಮುಖ್ಯ ಮಂತ್ರಿಯಾಗುವ ಆಲೋಚನೆ ಮಾಡಿರುವರು ಜಸ್ಟಿಸ್ ಪಾರ್ಟಿಯವರು ಹೆಚ್ಚು ಮಂದಿ ಇರುವದರಿಂದ ಡಾ| ಸುಬ್ಬಾಯನರಿಗೆ ಒಪೊಜಿಶನ್ ಪಾರ್ಟಿಯವರಾಗುವರು ಆದರೆ ಗವರ್ನರರು ಮಂತ್ರಿಸಭೆಯನ್ನು ಮಾಡಲು ಕರೆಯುವರೋ ತಿಳಿಯದು ಈ ಸಾರಿ ದಕ್ಷಿಣ ಕನ್ನಡದ ೩ ೪ ಮೆಂಬರರಲ್ಲಿ ಯಾರಿಗಾದರೂ ಮಂತ್ರಿ ಪದವಿಯು ಸಿಕ್ಕುತ್ತದೋ ನೋಡಲಿಕ್ಕಿದೆ. ಮಂತ್ರಿಗಳಾಗಲಿಕ್ಕೆ ಅನುಭವವೇನು ಆಗತ್ಯವಿಲ್ಲ ಎಲ್ಲಾ ಅನುಭವ ಪ್ರಶ್ನೆಗಳಿಗೆ ಉತ್ತರ ತಯಾರಿಸಿ ಕೊಡಲಿಕ್ಕೂ, ರಿಪೋರ್ಟು ತಯಾರಿಸಲಿಕ್ಕೂ ಸೆಕ್ರೆಟೇರಿಯಲ್ ಡಿಪಾರ್ಟಮೆಂಟು ಇದೆ

### ಜಿನೆವಾ ಲೀಗ್ ಕೊನ್ಫರೆನ್ಸ್.

ಜನೇವಾದಲ್ಲಿ ನಡೆದ ಲೀಗ್ ಕೌನ್ಸಿಲ್ ಮತ್ತು ಎಸಂಬ್ಲಿಯಲ್ಲಿ ಲೋಕದ ರಾಜ್ಯಗಳ ಕುರಿತು ಅನೇಕ ಪ್ರಾಮುಖ್ಯ ವಿಷಯಗಳು ಮುಂದೆ ಬಂದವು ಇದರಿಂದ ಭೂಲೋಕದ ಇತರ ಭಾಗಗಳಿಗೂ, ಹೆಚ್ಚಾಗಿ ಯುರೋಪ ಖಂಡಕ್ಕೂ ಪ್ರಯೋಜನದವುಗಳಾಗಿವೆ ಯುರೋಪ ಖಂಡದ ಸುಮಾರು ೩೭ ರಾಜ್ಯಗಳನ್ನು ಒಟ್ಟುಗೂಡಿಸುವ ಒಂದು ಫ್ರೆಂಚ ಆಲೋಚನೆಯು ಮುಖ್ಯವಾದುದು ಎಲ್ಲಾ ದೇಶಗಳ ಆರ್ಥಿಕ ಸ್ಥಿತಿಯನ್ನು ಉದ್ಧರಿಸುವದು ಇನ್ನೊಂದು ವಿಷಯವಾಗಿದೆ ಈ ವಿಷಯವು ಬ್ರಿಟಿಷ್ ಇಂಪೀರಿಯಲ್ ಕೊನ್ಫರೆನ್ಸಿನ ಮುಂದೆಯೂ ಬಂದಿದೆ ಇನ್ನು ಸಣ್ಣ ಸಣ್ಣ ರಾಜ್ಯಗಳ ಅಭಿವೃದ್ಧಿ ಕುರಿತು ಮ್ಯಾನೆಡೇಟ್ ಕಮಿಶನಿನ ವಿಷಯ ಆಲೋಚಿಸುವದು ಮತ್ತೊಂದು ಇನ್ನು ಕೆಲವು ರಾಜ್ಯದಾಡಳಿತೆಯ ಮೇಲು ವಿಚಾರ ನೋಡಲಿಕ್ಕೆ ಮೆಂಡೇಟರಿ ಕಮಿಶನಿನ ಕೆಲಸ ತನಿಖೆ ಮಾಡುವದು ಇವರ ಕೆಲಸದ ಕುರಿತು ಆ ದೇಶಗಳ ಜನರಿಗೆ ತೃಪ್ತಿಯಿಲ್ಲದೆ ಆ ದೇಶಗಳಲ್ಲಿ ತಳವಳವು ಇದ್ದೆ ಇದೇ ಅದನ್ನು ತೀರ್ಮಾನಿಸುವ ಕೆಲಸವಿದೆ ಪೆಲೆಸ್ಟೈನ್ ದೇಶದಲ್ಲಿ ಯಹೂದ್ಯರೂ ಅರಬಿಯರೂ ಇರುವರು ಇವರಿಗೂ ತೃಪ್ತಿಯಿಲ್ಲ ಒಟ್ಟಾರೆ ಎಲ್ಲರನ್ನು ಸಮಾಧಾನಪಡಿಸುವ ಕೆಲಸವು ಈ ಮಹಾಸಭೆಗೆ ಇದೆ ಸಭೆಯಲ್ಲಿ ಇತ್ಯರ್ಥವಾದ ವಿಷಯಗಳು ಜ್ಯಾರಿಗೆ ತರುವದು ಮಾತ್ರ ಸುಲಭವಾಗಿ ತೋರುವದಿಲ್ಲ

### ಬ್ರಿಟಿಷ ಇಂಪೀರಿಯಲ್ ಕೊನ್ಫರೆನ್ಸ

ಈ ಸಭೆಯು ಇದೇ ೧ನೇ ತಾರೀಕಿಗೆ ಲಂಡನ್ ಫೋರ್ಯಿನ್ ಆಫೀಸಿನಲ್ಲಿ ಆರಂಭವಾಯಿತು ಇದಕ್ಕೆ ಪ್ರತಿನಿಧಿಗಳಾಗಿ ಕೆನಡಾ ದಕ್ಷಿಣ ಆಫ್ರಿಕಾ, ಒಸ್ಟ್ರೇಲಿಯಾ, ನ್ಯೂಜಿಲೆಂಡ, ನ್ಯೂಫೌಂಡ್‌ಲೆಂಡ್‌ನಿಂದ ಇವುಗಳ ಪ್ರತಿನಿಧಿಗಳಾಗಿ ಆಯಾ ದೇಶದ ಮುಖ್ಯ ಮಂತ್ರಿಗಳೇ ಬಂದಿರುವರು ಬ್ರಿಟಿಷ ಮುಖ್ಯ ಮಂತ್ರಿಗಳಾದ ಮಿ ರಾಮ್ಸೆ ಮೆಕ್‌ಡೋನಾಲ್ಡರು ಅಧ್ಯಕ್ಷರಾಗಿರುವರು ಈ ಸಭೆಯಲ್ಲಿ ಮುಖ್ಯವಾಗಿ ಬ್ರಿಟನಿಗೂ ಡೊಮಿನಿಯನುಗಳಿಗೂ ಇರುವ ಪರಸ್ಪರ ಸಮ್ಮಂಧ ಪರಸ್ಪರ ರಾಷ್ಟ್ರಗಳೊಡನೆ ಬ್ರಿಟಿಷ್ ಸಾಮ್ರಾಜ್ಯಕ್ಕಿರುವ ಸಮ್ಮಂದ ಸಾಮ್ರಾಜ್ಯದ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಪಡಿಸುವದು ಇವೇ ಮುಖ್ಯ ವಿಷಯಗಳಾಗಿವೆ ಇವರಲ್ಲಿ ಆಯರಲೆಂಡಿನವರೂ ದಕ್ಷಿಣಆಫ್ರಿಕದವರೂ ಪೂರ್ಣ ಹಕ್ಕುಸ್ವಾತಂತ್ರವೇ ಅವರ ಧ್ಯೇಯವಾಗಿದೆ ಎನ್ನುವರು ಆದರೆ ಬ್ರಿಟಿಷ ಎಂಪಾಯರನ್ನು ಬಿಟ್ಟು ಹೋಗಿ ಹೋಗುವವರಲ್ಲ ಒಸ್ಟ್ರೇಲಿಯಕ್ಕೂ ತಮ್ಮ ಗವರ್ನರ ಜನರಲರನ್ನು ಮಹಾರಾಜರು ಒಸ್ಟ್ರೇಲಿಯದಿಂದಲೇ ಚುನಾಯಿಸಬೇಕೆನ್ನುವರು ಮುಖ್ಯ ಮಂತ್ರಿಗಳಾದ ಮೆಕ್‌ಡೋನಾಲ್ಡರು ಡೊಮಿನಿಯನುಗಳು ರಾಜಕೀಯ ವಿಷಯದಲ್ಲಿ ಸ್ವತಂತ್ರವಾಗಿರಬೇಕೆಂಬುದು ಸಹಜವಾಗಿದೆ, ಆದರೆ ಆರ್ಥಿಕ ವಿಷಯದಲ್ಲಿ ಮಾತೃದೇಶವಾದ ಬ್ರಿಟನ್ ಮತ್ತು ಡೊಮಿನಿಯನುಗಳು ಪರಸ್ಪರ ಸಹಾನುಭೂತಿಯಿಂದ ಇರಬೇಕೆನ್ನುವರು ಈ ಮಹಾಸಭೆಯಲ್ಲಿ ಇಂಡಿಯಕ್ಕೆ ಸಿಕ್ಕಿದ ಮರ್ಯಾದೆಯು ಯಾವ ತರದ್ದೆಂದು ತಿಳಿಯುವದಿಲ್ಲ ಒಟ್ಟಾರೆ ಸ್ವತಂತ್ರ ಮರ್ಯಾದೆಯಿಲ್ಲ ಬಿಕಾನೀರ್ ಮಹಾರಾಜರನ್ನು ವ್ಯಾಸರಾಯರು ಈ ಸಭೆಗೆ ಕಳುಹಿಸಿರುವರು ಆದರೆ ಇವರಿಗೆ ಪ್ರತಿನಿಧಿಗಳ ಹಕ್ಕಿಲ್ಲ ಸ್ಟೇಟ ಸೆಕ್ರಿಟರಿಯವರ ಅಥಿತಿಯಾಗಿ ಅಲ್ಲಿದ್ದಾರೆ ಈ ಸಭೆಯಲ್ಲಿ ನಡಿಯಲಿಕ್ಕಿರುವ ಎಜೆಂಡಾ ಪೇಪರ ಅಂದರೆ ವಿಷಯಗಳ ಪಟ್ಟಿ ಇವರಿಗೆ ಬರಲಿಲ್ಲ. ಲೀಗ್ ಸಭೆಯಲ್ಲಿ ಇಂಡಿಯದ ಪ್ರತಿನಿಧಿಗಳು ಇರುವದೇ ಇಂಡಿಯದ ಮರ್ಯಾದೆ ಯಾವ ತರದ್ದಾಗಿದೆ ಎಂದು ತಿಳುಕೊಳ್ಳಬಹುದೆಂದು ಬೆನ್ನರು ಹೇಳುತ್ತಿರುವರು ಒಟ್ಟಾರೆ ಲೀಗ್ ಸಭೆಯಲ್ಲಿಯೂ, ಇಂಪೀರಿಯಲ್ ಕೊನ್ಫರೆನ್ಸಿನಲ್ಲಿಯೂ ಇಂಡಿಯದ ಪ್ರತಿನಿಧಿಗಳೆಂದು ಹೋಗಿರುವವರಿಗೆ ಬ್ರಿಟಿಷ ಸಾಮ್ರಾಜ್ಯದ ಪ್ರತಿನಿಧಿಗಳೊಡನೆ ಸುಮ್ಮನೆ ಕಳಿತುಕೊಳ್ಳುವ ಅಧಿಕಾರ ಕಂಡುಬರುತ್ತದೆ ಇಂಡಿಯದ ಉದ್ಧಾರದ ಕುರಿತು ಯಾವ ತರದ ಮಾತೆತ್ತಲಿಕ್ಕೂ ಇವರಿಗೆ ಹಕ್ಕಿಲ್ಲವೆಂದೇ ತೋರುತ್ತದೆ

### ಮೈಸೂರು ಎಸೆಂಬ್ಲಿಯಲ್ಲಿ ದಿವಾನರ ಭಾಷಣ.

ಮೈಸೂರು ದಸರಾ ಮಹೋತ್ಸವದ ನಂತರ ಜರಗಿದ ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಅಧಿವೇಶನದಲ್ಲಿ ದಿವಾನರಾದ ಕೃಷ್ಣರಾಯರು ಭಾಷಣ ಕೊಟ್ಟರು ಭೂಲೋಕದಲ್ಲಿ ಬಹಳ ದೀನಾವಸ್ಥೆಗೆ ಬಂದ ವ್ಯಾಪಾರದ ಸ್ಥಿತಿಯು ಮೈಸೂರು ರಾಜ್ಯಕ್ಕೂ ತಪ್ಪದೆಹೋಗಲಿಲ್ಲ ಇದರಲ್ಲಿ ಮೈಸೂರಿನ ಮುಖ್ಯ ಎರಡು ಕೈಗಾರಿಕೆಗಳಾದ ಕಬ್ಬಿಣದ ಕೈಗಾರಿಕೆಯೂ ಗಂಧದ ಎಣ್ಣೆಯ ಕೈಗಾರಿಕೆಯೂ ಹೆಚ್ಚು ನಷ್ಟಹೊಂದಿವೆ ದೇಶದ ಹಲವು ಕೆರೆಗಳೂ ದುರುಸ್ತಿಮಾಡಲ್ಪಟ್ಟಿದೆ ಹೊಸ ಆಸ್ಪತ್ರೆಗಳೂ, ಹೈಸ್ಕೂಲುಗಳೂ ಎಲಿಮೆಂಟರಿ ಶಾಲೆಗಳೂ ಸ್ಥಾಪಿಸಲ್ಪಟ್ಟಿವೆ. ಶಿವಮೊಗ್ಗಕ್ಕಾಗಿ ಹೊಸಳ್ಳಿ ರೈಲುವೇಯೂ ತಯಾರಾಗಿದೆ ಇರ್ವಿನ್ ಕಾಲುವೆಯೂ ದೇಶದ ಹೆಚ್ಚಿನ ಭಾಗವನ್ನು ಬೇಸಾಯಕ್ಕೆ ಯೋಗ್ಯವಾಗಿ ಮಾಡಿದೆ. ಹಲವು ಮಾರ್ಗಗಳೂ ಹೊಸತಾಗಿ ಮಾಡಲ್ಪಟ್ಟಿವೆ ಒಟ್ಟಾರೆ ಎಲ್ಲಾ ವಿಧದಲ್ಲಿಯೂ ಮೈಸೂರು ದೇಶವು ಅಭಿವೃದ್ಧಿಯನ್ನು ಹೊಂದಿದೆ ಎನ್ನಬಹುದು ಆದರೆ ಈ ದೇಶಕ್ಕೂ ಪಶ್ಚಿಮ ಕರಾವಳಿಗೆ ಒಂದು ರೈಲು ಮಾರ್ಗದ ಸಮ್ಮಂಧವಿಲ್ಲದೆ ಇದ್ದುದೂ, ಒಂದು ಬಂದ್ರವಿಲ್ಲದೆ ಇದ್ದುದೂ ಒಂದು ದೊಡ್ಡ ಕೊರತೆಯಾಗಿದೆ. ಆದುದರಿಂದ ಮೈಸೂರು ಸರಕಾರದವರೂ ಇಂಡಿಯಾ ಸರಕಾರದವರೂ ಇನ್ನಾದರೂ ಆಲೋಚಿಸಿ ಕನ್ನಡಾ ಜಿಲ್ಲೆಗೆ ರೈಲುವೆ ಕೂಡಿಸಿ ಬಂದರವನ್ನು ಕಟ್ಟುವ ಆಲೋಚನೆ ಮಾಡುವದು ಒಳ್ಳೇದು

## ನೋಟಗಳು.
## NOTE.. S

ನಮ್ಮ ಜಿಲ್ಲೆಗೆ ಗವರ್ನರರು ಭೇಟಿ ಕೊಡಲು, ದಿನಗಳು ಹತ್ತಿರ ಬಂದವು, ಮಾರ್ಗ ದುರುಸಿ, ಸ್ವಾಗತಮಾಡಲು, ಪ್ರವಸ್ಥೆಗಳು ಫುಲ್ ಸ್ಪೀಡಿನಲ್ಲಿ ನಡಿಯುತ್ತಿವೆ.

* * * *

ಕಂಟ್ರಾಕ್ಟದಾರರು, ಉಸಿರುಕಟ್ಟಿ ಕೆಲಸ ನಡಿಸುತ್ತಿರುವರು ಮಾರ್ಗಗಳ ಅದೃಷ್ಟ.

* * * *

ನಮ್ಮ ಮಂಗಳೂರಿನ ಬಾವುಟೆ ಕಂಬವನ್ನು ನಮ್ಮ ಮಂಗಳೂರು ಮುನಿಸಿಪಾಲಿಟಿಯವರು ತೆಗೆದುಕೊಂಡಿರುವರಂತೆ, ಸರಕಾರದವರು ದೊಡ್ಡ ಉಪಕಾರ ಮಾಡಿಬಿಟ್ಟಿರು

* * * *

ಮುನಿಸಿಪಾಲಿಟಿಯವರು ಮುಂದಕ್ಕೆ ಒಳ್ಳೆ ಅನುಕೂಲತೆ ಮಾಡುವುದರಲ್ಲಿದ್ದಾರೆ ಮಂಗಳೂರಿನ ಜಂಟಲ್‌ಮೇನರಿಗೆ, ಒಂದು ರಿಡಿಂಗ್‌ರೂಮ್, ಟೌನ್‌ಹೋಲಿನ ಆಲೋಚನೆ, ಇತ್ತು, ಆದರೆ ಸದ್ಯಕ್ಕೆ ರಿಡಿಂಗ್‌ರೂಮ್

* * * *

ಮಂಗಳೂರಿನ ದಸರಾ ಕಳೆದುಹೋಯಿತು ಈ ವರ್ಷ ವೇಷಗಳು ಲೆಕ್ಕವಿಲ್ಲದಷ್ಟು ಅಧಿಕಾರಿಗಳು ಲೈಸನ್ಸ ಒಳ್ಳೇ ಉದಾರತೆಯಿಂದ, ಕೇಳಿದವರಿಗೆ ಕೊಟ್ಟಿರುವರು

* * * *

ಇದರಿಂದ ಅಬ್ಕಾರಿ, ಇಲಾಖೆಯವರಿಗೆ, ಮುನಾಫೆ ಹೆಚ್ಚಿತು

* * * *

ಮೈಸೂರಿನ ದಸಾರ, ಮುಗಿಯಿತು, ಉತ್ಸಾಹ, ಜನಸ್ತೋಮ ಅಲ್ಲಿಂದಲ್ಲೇ, ಎಸೆಂಬ್ಲಿಯಲ್ಲಿ ಭಾಷಣಗಳು ಪ್ರಾರಂಭವಾಗಿವೆ.

* * * *

ಕೋಹೋರಿನಲ್ಲಿ ನಡೆದ ಬೊಂಬು ಅನಾಹುತದ ಸಂಬಂಧದಲ್ಲಿ ಸ್ಪೆಶಲ್ ಕೋರ್ಟನವರು ವಿಚಾರಣೆ ಮುಗಿಸಿದರು ಮೂರು ಜನರಿಗೆ, ಫಾಸಿ ಶಿಕ್ಷೆ, ಏಳುಜನರಿಗೆ ಜನ್ಮಟಾಪು ಶಿಕ್ಷೆ, ಉಳಿದವರಿಗೆ ಐದು ವರುಷ

* * * *

## ನೋಟೀಸು.

### ಪುತ್ತೂರು ಡಿಸ್ಟ್ರಿಕ್ಟ ಮುನ್ಸೀಫ ಕೋರ್ಟನಲ್ಲಿ

O. S. 158/1930.

ದಿವಾಣ ಪರಮೇಶ್ವರಿ ಅಮ್ಮ—ವಾದಿಳು.

ಪುಂಡಿಕ್ಕಾ ನಾರಾಯಣ ಭಟ್ಟ ಕೂಡಾ—ಪ್ರತಿವಾದಿರು.

ಸದ್ರಿ ವ್ಯಾಜ್ಯದಲ್ಲಿ ಮೇಲೆ ಹೇಳಿದ ವಾದಿಳು, ಪುಂಡಿಕ್ಕಾ ನಾರಾಯಣ ಭಟ್ಟ ಕೂಡಾ ೧೦ ಜನ ಪ್ರತಿವಾದಿರ ಮೇಲೆ ದಾವಾ ಮೂಲಗೇಣಿ ಆಸ್ತಿ ರದ್ದಿಯಿಂದ ಸ್ವಾಧೀನತೆಗೆ ಕೂಡಾ ಪುತ್ತೂರು ಡಿಸ್ಟ್ರಿಕ್ಟ ಮುನ್ಸೀಫ ಕೋರ್ಟ O. S 158/30ನೇ ದಾವಾ ದಾಖಲ್ಲು ಮಾಡಿರುತ್ತೆ. ಸದ್ರಿ ದಾವೆಯು ವ್ಯಾದೆ ತಾರೀಕು 14—10—'30ಕ್ಕೆಂತ ನಿಶ್ಚಯಿಸಿರುತ್ತದೆ ಆ ತಾರೀಕಿನೊಳಗೆ ಸದ್ರಿ 1ನೇ ಪ್ರತಿವಾದಿಯು ತನ್ನ ಉದಾಹರಣೆ ಏನಾದರೂ ಇದ್ದಲ್ಲಿ ಕೋರ್ಟಗೆ ಹ್ಯಾಜೀರು ಮಾಡಿಕೊಳ್ಳ ತಪ್ಪಿದರೆ ಆತನನ್ನು ಶಿಕ್ಷಾ ಎಂತ ಸ್ಥಾಪಿಸಲಾದೀತು, ತಿಳಿದಿರಲಿ!

ತಾ. 27-9-30. ಪುತ್ತೂರು. } B Ramachandra Rao M A L L Pleader for Plaintiff

---

### ಪುತ್ತೂರು ಡಿಸ್ಟ್ರಿಕ್ಟ ಮುನ್ಸೀಫ್ ಕೋರ್ಟನಲ್ಲಿ

ಕ್ರಮ ನಂಬ್ರ 550 1930

ಹೊಸದುರ್ಗ ಅನಂತ ಶಮ್ತಿ—ವಾದಿ

ಮತ್ತು

ತೋಟಾಲು ಸುಬ್ರಾಯ ಸಹಾ—ಪ್ರತಿವಾದಿರು

ಪುತ್ತೂರು ತಾಲೂಕು ಕೆಡಿಸಾಡಿ ಗ್ರಾಮದಲ್ಲಿರುವ ತೋಟಾಲು ಸುಬ್ರಾಯರ ಮಕ್ಕಳು ೩ನೇ ಪ್ರತಿವಾದಿ ತೋಟಾಲು ವೆಂಕಟ್ರಾವ್, ೪ನೇ ಪ್ರತಿವಾದಿ ತೋಟಾಲು ರಾಮರಾವ್ ಕೂಡಾ ೨ ಜನರಿಗೆ—

ವಾದಿಯು ನಿಮ್ಮ ವಗೈರೆರ ಮೇಲೆ ಅಡವಿನ ಅಸಲು ಬಡ್ಡಿ ಬರಮಾಡುವರೆ ದಾಖಲು ಮಾಡಿದ ಮೇಲಣ ವ್ಯಾಜ್ಯವು ತಾ. ೧೭—೧೦—'೩೦ಕ್ಕೆ ತನಿಖೆಗೆ ಇಟ್ಟಿರುತ್ತದೆ ಸದರಿ ದಿವಸ ನೀವು ನಿಮ್ಮ ಉದಾಹರಣೆಯನ್ನು ದಾಖಲು ಮಾಡುವರೆ ತಪ್ಪಿದ್ದಲ್ಲಿ ನಿಮ್ಮ ಗೈರಹಾಜರಿಯಲ್ಲಿ ಸದರಿ ವ್ಯಾಜ್ಯವು ತೀರ್ಮಾನವಾಗುವದು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ

ಪುತ್ತೂರು ೧—೧೦—೩೦ } H Ganapathy Rao ವಾದಿ ಕಡೆ ವಕೀಲ

---

### ಪುತ್ತೂರು ಡಿಸ್ಟ್ರಿಕ್ಟ ಮುನ್ಸೀಫ ಕೋರ್ಟನಲ್ಲಿ,

ಸ್ಮಾಲ್ ವ್ಯಾಜ್ಯದ ನಂಬ್ರ 193 1930

ಚಂದು ಭಂಡಾರಿ—ವಾದಿ ಮತ್ತು

ವೆಂಕಮ್ಮಾ ಹೆಂಗಸು—ಪ್ರತಿವಾದಿ

ಪುಣಚಾ ಗ್ರಾಮದ ಮೂಡಂಬೈಲು ಹೊಸ ಮನೆಯಲ್ಲಿರುವ ರಾಮ ರೈಗಳ ಸೊಸೆ ವೆಂಕಮ್ಮಾ ಹೆಂಗ್ಸಿನವರಿಗೆ —ವಾದಿಯು ನಿಮ್ಮ ಮೇಲೆ ರೂ 64—13—1 ಬರಮಾಡುವರೆ ದಾಖಲು ಮಾಡಿದ ಮೇಲಣ ವ್ಯಾಜ್ಯವು ತಾ ೧೩—೧೦—೧೯೩೦ಕ್ಕೆ ತನಿಖೆಗೆ ಇಟ್ಟಿರುತ್ತದೆ ಸದ್ರಿ ದಿವಸ ನೀವು ನಿಮ್ಮ ಉದಾಹರಣೆಯನ್ನು ದಾಖಲು ಮಾಡುವರೆ ತಪ್ಪಿದ್ದಲ್ಲಿ ನಿಮ್ಮ ಗೈರಹಾಜರಿಯಲ್ಲಿ ಸದ್ರಿ ವ್ಯಾಜ್ಯವು ತೀರ್ಮಾನವಾಗುವದು ಎಂಬ ಸಂಗತಿ ಈ ಮೂಲಕ ತಿಳಿಸೋಣಾಗಿಯದೆ

ಪುತ್ತೂರು ೧—೧೦—೧೯೩೦ } H Ganapathy Rao ವಾದಿ ಕಡೆ ವಕೀಲ

---

### ದಕ್ಷಿಣ ಕನ್ನಡ ಜಿಲ್ಲಾ ಜಡ್ಜರ ಕೋರ್ಟನಲ್ಲಿ

O P 79/1930

ಪಿ ಸಂಜೀವಾ, ಎಂ ಎ ಬಿ ಎಲ್, ವಕೀಲ್ ಮಂಗಳೂರು ಶಹರಿನಲ್ಲಿರುವವ—ಅರ್ಜದಾರ.

ಅರ್ಜದಾರನು ತನ್ನ ಹೆಂಡ್ತಿ (ಮೃತ) ಡಾಕ್ಟರ್ ಚಂಪಾಬಾಯ್ತು ಬಿ. ಎ., ಎಂ. ಬಿ ಕಸಾಲ ವಗೈರೆ ವಸೂಲು ಮಾಡುವರೆ ತನಗೆ ಸಕ್ಸೆಶನ್ ಸರ್ಟಿಫಿಕೇಟು (Succession Certificate) ಕೊಡಬೇಕೆಂತ ವಗೈರೆ ಕಾಣಿಸಿ ಮೇಲ್ಕಂಡ ಕೋರ್ಟನಲ್ಲಿ ಅರ್ಜಿ ಕೊಟ್ಟಿರುತ್ತಾನೆ ಸದರಿ ಅರ್ಜಿಯು ಇದೇ ಬರುವ ತಾ. 20—10—30ನೇ ದಿನಕ್ಕೆ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟನಲ್ಲಿ ತನಿಖೆಗೆ ಇಟ್ಟಿರುತ್ತದೆ ಯಾರಾದರೂ ಆಕ್ಷೇಪಿಸುವವರಿದ್ದರೆ ತಮ್ಮ ಆಕ್ಷೇಪಣೆಗಳನ್ನು ಆ ದಿವಸ ಸದರಿ ಕೋರ್ಟನಲ್ಲಿ ಹ್ಯಾಜೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು, ೩೦—೯—೧೯೩೦ } K. Rammohan Rao Vakil for Petitioner

---


ಪ್ರತಿಯೊಂದು ಗುಟಿಕಾ ಸುಖ ಜೀವನವನ್ನು ತರುವದು.

ಡಾಕ್ಟರ್ ವಿಲ್ಸನರ

## "ಫೋಸ್ಫೋ—ಇಲೆಕ್ಟ್ರೋಜೆನ್."

(ಎಲ್ಲ ಜನರಿಗೂ ತಾರುಣ್ಯವನ್ನೊದಗಿಸುವ ಪೌಷ್ಟಿಕ ರಸಾಯನ)

ಚೆನ್ನಾಗಿರಿ! ತರುಣರಾಗಿರಿ!! ಉತ್ಸಾಹಿಗಳಾಗಿರಿ!!

ಹೆದರದಿರಿ! ನೀವು ಬಳಲಿದ ಮತ್ತು ಅಶಕ್ತರಾದ ಸ್ತ್ರೀ ಪುರುಷರಾಗಿದ್ದರೆ ಕೃಶ ಶರೀರವೂ, ನಿರ್ಜೀವ ಮುಖಮುದ್ರೆಯೂ ಉಳ್ಳವರಾಗಿ ರಕ್ತ, ಅಸ್ಥಿ, ಮಾಂಸಗಳು ಇಲ್ಲವಾದರೆ ಮಾತನಾಡುವಾಗ, ಕೆಲಸ ಮಾಡುವಾಗ, ನಡೆಯುವಾಗ ಬಳಲಿಕೆ, ಬಿಟ್ಟದೆ, ಹಲವು ತೊಂದರೆಗಳಿಂದ ದುಃಖವೂ ನಿರುದ್ದೇಶ ಜೀವನವೂ ನಿಮಗೆ ಅನುಭವವಾಗುವದಾದರೆ, ನರಗಳ ದೌರ್ಬಲ್ಯ,




ಮೆದುಳಿನ ಶ್ರಮ ಧಾತುನಷ್ಟ ಮೊದಲಾದವುಗಳಿವೆಯೆಂದರೆ ಧೈರ್ಯಗುಂದ ಬೇಡಿರಿ. ನಿಮ್ಮ ಶರೀರಕ್ಕೆ ಕಬ್ಬಿಣದ ಅಸ್ಥಿ, ಕಬ್ಬಿಣದ ಸ್ನಾಯು ಕಬ್ಬಿಣದ ದೇಹವನ್ನ ನಾವು ಉಂಟುಮಾಡುವೆವು ಭಂಗಾರದಂತಹ ಶಕ್ತಿಯುದ್ದು ಸುಂದರ ಮುಖಮುದ್ರೆಯಿಂದ ಕೂಡಿದ ಉಜ್ವಲ ಯುವಕರನ್ನಾಗಿ ನಿಮ್ಮನ್ನು ಮಾಡುವೆವು ಈಗಲೇ ಔಷಧವನ್ನು ಪಡೆದು ಧಾರಾಳವಾಗಿ ಅನುಭವಿಸಿ

ಬಾಟಲಿಗೆ ರೂ 2—2—0 ಮೂರು ಬಾಟಲಿಗಳಿಗೆ ರೂ 4—12—0

ಅಂಚೆ ಮುಫತ್ತು

ಸಬ್ ಏಜಂಟರು:—
ಶಾ ಕಂಪೆನಿ, ಡಾಯ್ಮಂಡ್ ಬಿಲ್ಡಿಂಗ್,
ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು

Frank Robinson & Co.,
Chitnock Place,
Post Box No 2330, CALCUTTA



"If every Wife knew what every Widow knows, every Husband could be Insured

PLACE YOUR LIFE ASSURANCE WITH
**THE SOUTH INDIAN**
Securing to your clients
Low rates of Premium
2. Liberal Policy Conditions.
AND FOR YOURSELF
An Agency with attractive Terms of Commission and Salary in
**The South Indian General Assurance Co, Ltd.,**
Anywhere in CANARA DISTRICTS & HYDERABAD STATE
For terms of Agency please apply to —
H R K IYENGAR
Chief Agent
The S I G A Co, Ltd,
Sanyasigudda MANGALORE
Managing Agents —
K C PANDALAI & CO
7 8 Mclean Street G T MADRAS

ಜೀವವಿಮೆ ಮಾಡುವವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್ನಲ್ಲಿ ವಿಮೆಮಾಡಿರಿ
ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ
ಪ್ರಿಮಿಯಂ ದರಗಳು ಕಡಿಮೆ!
ಶರ್ತಗಳು ತೀರಾ ಸುಲಭ"
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ ದೊರಕುವುದು.
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)
ಚೀಫ್ ಏಜಂಟರು—
ಎಚ್. ಆರ್. ಕೆ. ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.
ದಿ ಎಸ್ ಐ ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು
ಮೇನೇಜಿಂಗ್ ಏಜಂಟರು —
ಕೆ ಸಿ ಪಾಂಡಲೆ ಎಂಡ್ ಕೋ.
7-8 ಮೆಕ್ಲೀನ್ ಸ್ಟ್ರೀಟ್ ಜಿ ಟಿ ಮದ್ರಾಸು



ಸುಲಭ ಕ್ರಯ' ಧಾರಾಳ ಫಲ"

## ದಂತಧಾವನ ಚೂರ್ಣ,
## ಟೂತ್ ಪೌಡರ್.

ಎಲ್ಲಾ ವಿಧದ ಹಲ್ಲುನೋವುಗಳನ್ನೂ, ಹಲ್ಲುಗಳ ನ್ಯೂನತೆಗಳನ್ನೂ ವಾಸಿಗೊಳಿಸುವುದು. ಹಲ್ಲುಗಳ ಎಡೆಯಿಂದ ಒಸರುವ ರಕ್ತ, ಕೀವು ಮೊದಲಾದವುಗಳನ್ನು ನಿಲ್ಲಿಸುವುದು. ಬಾಯಿಯ ದುರ್ಗಂಧವನ್ನು ಹಲ್ಲುಗಳ ಇನ್ನಿತರ ದೋಷಗಳನ್ನೂ ದೂರ ಮಾಡಿ ಬಲವಾಗಲೂ ಹಲ್ಲುಗಳು ಬಿಳುಪಾಗಿಯೂ ಸುವಾಸನೆಯಿಂದಿರುವಂತೆಯೂ ಅತ್ಯುಪಯೋಗಕರವಾಗಿರವುದು. ಪೆಕೆಟು ಒಕ್ಕೆ ೦—೨—೦ ಡಜನ ಪೆಕೆಟುಗಳಿಗೆ ೧—೪—೦. ಇವುಗಳಲ್ಲದೆ ಮಿಕ್ಕಿದ ಉತ್ಕೃಷ್ಟವಾದ ಆಯುರ್ವೇದ ಔಷಧಗಳೂ ನಮ್ಮಲ್ಲಿ ಸಿದ್ಧವಾಗಿವೆ. ಆಸವ, ಅರಿಷ್ಟ, ಭಸ್ಮ, ಚೂರ್ಣ ಕಷಾಯ ಲೇಹ, ತೈಲ ಮೊದಲಾದವುಗಳು. ನಮ್ಮಲ್ಲಿ ಆಗಾಗ್ಗೆ ಹೊಸತಾಗಿ ತಯಾರಿಸಲ್ಪಡುವವು. ಮಾಂದ್ಯ, ವಾತ, ಹೊಂದೀಕದವು ಪಕ್ಷವಾತ ಇಲ್ಲದಿ ಮತ್ತು ರೋಗಗ್ರಸ್ತರಿಗೆ ತಿಳಿಸಿದಲ್ಲಿ ಯುಕ್ತವಾದ ಔಷಧಗಳನ್ನು ಸಿದ್ಧಪಡಿಸಿ ಕಳಹಿಸಲಾಗುವುದು. ಹೆಚ್ಚಿನ ಮಾಹಿತಿ ಬಗ್ಗೆ ಮತ್ತು ಚಿಕಿತ್ಸೆ ಅನುಭವಗಳ ಕುರಿತು ಕೆಳಗಿನ ವಿಳಾಸಕ್ಕೆ ಬರೆಯಿರಿ

ಹೆಚ್ಚಿನ ಸಂಗತಿಗಳನ್ನು ತಿಳಿಯ ಬೇಕಾದವರಿಗೆ ಮಲಯಾಳದಲ್ಲಿ ವ ಕನ್ನಡದಲ್ಲಿ ಔಷಧ ಪಟ್ಟಿ ಇನಾಂ

ಪಿ. ಕರುಣಾಕರ ವೈದ್ಯರ್,
ಆರೋಗ್ಯಾಮೃತ ಔಷಧಾಲಯ
ಕ್ಯಾಂಪ ಬಜಾರ್ ಕಣ್ಣಾನೂರು.

P KARUNAKARAN VYDIAR.
Arogiamritha Aushadhalaya
Camp Bazaar, CANNANORE



**A Best Bargain in Car.**

A chevrolet 4 cylinder car purchased new only 1 year 4 months before, per gallon gives 25 miles. A bumper, 5 new tyres, one horn 2 oil lights and a carrier extra bought will be given with the car Net price Rs. one thousand only. Best opportunity for those requiring a good and cheap car

*For further particulars*

C o Swadeshabhimani
*Mangalore.*

## ಅನುಕ್ರಮಣಿಕೆ.


ಅಗ್ರಲೇಖ

ಸಾಮ್ರಾಜ್ಯವನ್ನು ಬಿಗಿಯುವುದು ೮

ಸ್ವಾಗತ[illegible] ೬

[illegible] ೨

ವರ್ತಮಾನ ಸಂಗ್ರಹಗಳು

ವಿದೇಶ ವರ್ತಮಾನ ೮

ಒಳದೇಶ ವರ್ತಮಾನ ೮ ೯

ದಕ್ಷಿಣ ಕನ್ನಡ—ಮಂಗಳೂರು, ಮುಲ್ಕಿ ಉಡುಪಿ ಅಜೆಕಾರು

[illegible] ಫರಂಗಿಪೇಟ [illegible]

ವಿವಿಧ ಸಮಾಚಾರಗಳು ೧೧

ಮಹಾತ್ಮಾಜಿಯವರ ಸತ್ಯಾಗ್ರಹ ಸಮಾಚಾರ ೯ ೧೪

ಕೊಡಗು ದೇಶದ ರಾಜ್ಯಭಾರ ಕ್ರಮ ೧೫

ವಿದ್ಯೆ ಮತ್ತು ನಡತೆ ೨


# ಸ್ವದೇಶಾಭಿಮಾನಿ.

ತಾರೀಕು ೧೦ನೇ ಶುಕ್ರವಾರ ಒಕ್ಟೋಬರ ೧೯೩೦

## ಸಾಮ್ರಾಜ್ಯವನ್ನು ಬಿಗಿಯುವುದು.

ಇಂಗ್ಲೆಂಡಿನಲ್ಲಿ ಪ್ರತಿ ಒಬ್ಬರ ಬಾಯಿಯಲ್ಲಿಯೂ ಧ್ವನಿಸುವ ಸಾಮ್ರಾಜ್ಯವಾದದ ಭವಿಷ್ಯವೇನು? ವಿಶಾಲ ಧ್ಯೇಯವಾದಿಗಳೂ ಲೋಕ ಹಿತಕಾರಿಗಳೆಂದು ಹೆಗ್ಗಳಿಕೆಗೊಂಡು, ಧನಿಕರ ದಬ್ಬಾಳಿಕೆಯನ್ನು ಖಂಡಿಸಲು ಹೊರಟು ಪ್ರತ್ಯೇಕ ಪಕ್ಷವಾಗಿ ಅಸ್ತಿತ್ವಕ್ಕೆ ಬಂದಿರುವ ಮಜೂರ ಸರಕಾರವು ಕೂಡ ಈ ಸಾಮ್ರಾಜ್ಯವಾದದ ಜಾಲದಿಂದ ತಪ್ಪಿಸಿಕೊಳ್ಳಲಾರದೆ ಹೋಯಿತು. ಸ್ಟೀಲ್ ಫ್ರೇಮ್ ಪ್ರಶಸ್ತಿಯ ಲಾಯಿಡ್ ಜಾರ್ಜರು ಸಾಮ್ರಾಜ್ಯ ಲೋಭದ ಸ್ವಾರ್ಥಿಗಳಾದ ಲಾರ್ಡ ಪೀಲ್ ಲಾರ್ಡ ಲ್ಲಾಯಿಡ್ ಮುಂತಾದವರು ಹಿಂದೂಸ್ಥಾನದ ಅಧೀನತೆಯೇ ಸಾಮ್ರಾಜ್ಯದ ಆಧಾರವೆಂದು ತಿಳಿಯುವರು. ಬ್ರಿಟಿಷ್ ಸಾಮಾನ್ಯ ವ್ಯಕ್ತಿಯೂ ಕೂಡ ಈ ಸಾಮ್ರಾಜ್ಯ ದರ್ಪದ ಮೂರ್ತಿಮಂತ ಚಿತ್ರವಾಗಿದೆ. ಈ ಸಾಮ್ರಾಜ್ಯದ ಸ್ವಾರ್ಥಕ್ಕೆ ಇತರ ಎಲ್ಲಾ ಅಧೀನ ಜನಾಂಗಗಳೂ ಬಲಿಯಾಗಿಡಲ್ಪಡಬೇಕೆ?

ದೊಡ್ಡ ದೊಡ್ಡ ಸಾಮ್ರಾಜ್ಯಗಳು ಹಿಂದಿನ ಕಾಲಗಳಲ್ಲಿ ಬೆಳದು ಅಳಿದು ಹೋಗಿವೆ. ಪ್ರಚಂಡ ಜನಬಲವೂ ಶಸ್ತ್ರಬಲವೂ ಯಾವ ಸಾಮ್ರಾಜ್ಯವನ್ನೂ ಚಿರಾಯುವಾಗಿಮಾಡಲು ಶಕ್ತವಲ್ಲ. ಮತ್ತು ಬ್ರಿಟಿಷ ಸಾಮ್ರಾಜ್ಯವು ಇನ್ನೊಂದು ಮುಖ್ಯ ವಿಷಯವನ್ನು ಲಕ್ಷಿಸಬೇಕಾದ್ದೇನೆಂದರೆ ಹಿಂದಿನ ಸಾಮ್ರಾಜ್ಯಗಳ ಅಳಿವು ಸಾಮ್ರಾಜ್ಯ ರಕ್ಷಣೆಯ ಪ್ರಯತ್ನಗಳಿಂದಲೇ ಆದುದಾಗಿದೆ.

ಬ್ರಿಟಿಷ ಸಾಮ್ರಾಜ್ಯವು ಹಿಂದಿನ ಕಾಲಗಳಿಂದ ತನ್ನ [illegible]ದಿನ ಧೋರಣೆಯನ್ನು ಬಿಡಲಾರದೇಕೆ? ಬ್ರಿಟಿಷ ಸರಕಾರವು ತನ್ನ ಸಾಮ್ರಾಜ್ಯ ಧೋರಣವನ್ನು ಇಳಿತಕ್ಕೆ ತರಬೇಕಾಗಿದೆಂಬುದು ಈಗ ಲಂಡನಿನಲ್ಲಿ ಕೂಡಿದ ಸಾಮ್ರಾಜ್ಯ ಪರಿಷತ್ತೇ ತೋರುವುದು. ಕೆನಡಾ ಆಸ್ಟ್ರೇಲಿಯಾ, ಆಫ್ರಿಕಾ ಐರ್ಲ್ಯಾಂಡು ಮೊದಲಾದ ದೇಶಗಳು ಪಲ್ಲನೆ ಮಾತೃಭೂಮಿಯ ಹಿಡಿತದಿಂದ ಸಡಿಲಿಸಿ ಕೊಂಡುಹೋಗಿದೆ. ಈಗ ಕಡೆಯದಾದ ಪ್ರಿವಿ ಕೌನ್ಸಿಲ್ ಅಧಿಕಾರವನ್ನೂ ಇವುಗಳು ತಮ್ಮ ಮೇಲಿನಿಂದ ತೆಗೆದು ಹಾಕಿದುವು. ಆದುದರಿಂದ ಇನ್ನು ಮುಂದೆ ಈ ಬ್ರಿಟಿಷ ವಸಾಹತುಗಳಿಗೆ ರಾಜಭಕ್ತಿಯ ಹೊರತು ಬೇರಾವ ಬದ್ಧತೆಯೂ ಇಂಗ್ಲೆಂಡಿನೊಡನೆ ಇರುವುದಿಲ್ಲ. ಹೀಗೆ ಇವುಗಳು ವರ್ಷದಿಂದ ವರ್ಷಕ್ಕೆ ತಮ್ಮ ಬಂಧನಗಳನ್ನು ತೆಗೆದು ಹಾಕ[illegible] ಸ್ವತಂತ್ರವಾಗಿ ನಡೆಯ[illegible] ನೋಡಿಯಾದರೂ ಬ್ರಿಟಿಷರು ಸಾಮ್ರಾಜ್ಯವಾದದ ದರ್ಪವನ್ನು ಬಿಟ್ಟುಕೊಳ್ಳುವುದಿಲ್ಲ [illegible]

ಇತ್ತ ಬ್ರಿಟಿಷ ವಿಮಾನವು ಆಕಸ್ಮಾತ್ತಾಗಿ ನಾಶ ಹೊಂದಿದುದರಲ್ಲಿಯೂ ಬ್ರಿಟಿಷ ಸಾಮ್ರಾಜ್ಯವಾದಕ್ಕೆ ದೈವಿಕ್ಕೃತ ಒಂದು ಶಾಪವಿಲ್ಲೆಂದು ಹೇಳಲಾಗುವುದಿಲ್ಲ. ಈ ವಿಮಾನವು ಹಿಂದೂಸ್ಥಾನಕ್ಕೆ ಹೊರಟ ದಿವಸವೇ ಲಂಡನ್ನಿನ ಟೈಮ್ಸ್ ಪತ್ರಿಕಾಕಾರರು ಹೀಗೆಂದು ಟೀಕಿಸಿದರು.—

ಈ ವಿಮಾನ ಪ್ರಯಾಣಕ್ಕೆ ಸಾಮ್ರಾಜ್ಯ ಪರಿಷತ್ತು ಆರಂಭವಾಗುವ ಈ ಸಂದರ್ಭಕ್ಕಿಂತ ಉತ್ತಮವಾದ ಬೇರೆ ಸಂದರ್ಭವಿರುವುದಿಲ್ಲ. ಅದರ ವಿಜಯವು ಕಳೆದ ಕೆಲವು ವರ್ಷಗಳಲ್ಲಿ ಉಂಟಾದ ರಚನಾಶಕ್ತಿಯ ಅಭಿವೃದ್ಧಿಯ ಅತ್ಯುತ್ತಮ ದ್ಯೋತಕವಾಗುವುದಲ್ಲದೆ, ಡೊಮಿನಿಯನ್ನುಗಳನ್ನು ಒಂದರೊಡನೊಂದು ಜೋಡಿಸಲು ಇನ್ನು ಮುಂದೆ ಕೈಕೊಳ್ಳಬಹುದಾದ ಕೆಲಸಗಳ ಸಮರ್ಥನೆಯಾಗುವುದು. ಈ ದೃಷ್ಟಿಯಿಂದ ಇದರ ಜೊತೆಯು ಇನ್ನೊಂದು ವಿಮಾನವು ಕೆನಡಕ್ಕೆ ಹಾರಿದ್ದಕ್ಕಿಂತಲೂ, ಈ ವಿಮಾನವು ಹಿಂದೂಸ್ಥಾನಕ್ಕೆ ಹೋಗಿಬರುವುದರ ಪರಿಣಾಮವು ಹೆಚ್ಚಿನದಾಗಿದೆ.

ವಿಮಾನದ ಅಪಘಾತದಲ್ಲಿ ನಮಗೆಲ್ಲರಿಗೂ ದುಃಖವಿದೆಯಾದರೂ, ಟೈಮ್ಸ್ ಪತ್ರಿಕಾಕಾರರ ಮೇಲಿನ ಟೀಕೆಯಂತೆ ಬ್ರಿಟಿಷ ಸರಕಾರದ ಅಂತರಂಗವಿದ್ದುದಾದರೆ ಈ ಅಪಘಾತದಲ್ಲಿ ದೈವೇಚ್ಛೆಯ ಸ್ಪಷ್ಟ ಚಿಹ್ನೆಯಿದೆಯೆಂದು ನಾವು ಹೇಳಬಹುದಾಗುತ್ತದೆ.

ತಾವೇ ಆಳರಸರು ತಮಗೆ ಅಧೀನವಾಗಿ ಇತರರು ಎಂಬ ಆ ಸಾಮ್ರಾಜ್ಯ ಭಾವನೆಯ ತಳಹದಿಯನ್ನು, ಈ ಮೊದಲು ಸೂಚಿಸಿದಂತೆ, ಕೆನಡಾ ಇತ್ಯಾದಿ ಇತರರೇ ಕುಸಿದುಬಿಟ್ಟಿರುತ್ತಾರೆ. ಆದರೆ ಇವರೆಲ್ಲರೂ ಒಟ್ಟುಗೂಡಿ, ಹಿಂದುಸ್ಥಾನ ಮತ್ತು ಈಜಿಪ್ತವನ್ನು ದಬ್ಬಾಳಿಕೆಯ ಪ್ರಯತ್ನಿಸಬಹುದು. ಇದರೆ ಇದಕ್ಕಿಂತ ಹೆಚ್ಚಾದ ಆಧಾರವು ಬ್ರಿಟನಿಗೆ ಸಿಕ್ಕಲಾರದು. ಲೋಕದ ರಾಜತಂತ್ರವು ಬ್ರಿಟನಿಗೆ ಅನುಕೂಲವಿರುವುದಿಲ್ಲ. ಇಂಗ್ಲೆಂಡಿನಲ್ಲಿಯೇ ಬೆಳೆಯುವ ನಿರುದ್ಯೋಗಿಗಳ ಸಂಖ್ಯೆಯೂ ಪ್ರದೇಶದಲ್ಲಿ ಉಂಟಾದ ವ್ಯಾಪಾರದ ಮೇಲಾಟ ಮತ್ತು ನಿರುದ್ಯೋಗದ ಸಮಸ್ಯೆಯೂ ಯುದ್ಧದಿಂದಲೇ ಒಂದಿಲ್ಲೊಂದು ದಿನ ತೀರ್ಮಾನವಾಗಬೇಕಾಗಿದೆ, ಅಂತಹ ಸಮಯದಲ್ಲಿ ಅತೃಪ್ತ ಹಿಂದೂಸ್ಥಾನವು ಇಂಗ್ಲಂಡಿಗೆ ಹಾನಿಕರವಾಗದಿರಲಾರದು.

ಮುಖ್ಯತಃ, ಕೆನಡಾ ಆಫ್ರಿಕಾ ಮುಂತಾದವರಿಂದ ಕಲಿತಂತೆ ಬ್ರಿಟಿಷ ಸರಕಾರವೂ ಹಿಂದೂಸ್ಥಾನದೊಡನೆ ಸೌಹಾರ್ದವನ್ನು ಬೆಳಸಿ ಹಿಂದೂಸ್ಥಾನವನ್ನು ಸಮಾನತೆಯ ಸ್ನೇಹಿತನಾಗಿ ತಿಳಕೊಂಡರೇನೇ ಬ್ರಿಟಿಷರು ಇಡೀ ಲೋಕವನ್ನಾದರೂ ಧೈರ್ಯದಿಂದ ಎದುರಿಸಬಲ್ಲವರಾಗಬಹುದು. ಇಲ್ಲವಾದರೆ ಹಿಂದುಸ್ಥಾನವೂ ಇನ್ನೊಂದು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕವನ್ನು ಅನುಸರಿಸಿದಂತಾಗುವುದು.

## ವಿದೇಶ ವರ್ತಮಾನ

— ಯಂತ್ರ ಸಾಮಗ್ರಿಗಳ ತವರೂರಾಗಿದ್ದ ಲಂಡನ್ ನಗರವು ವಿಮಾನಗಳ ಕೈಗಾರಿಕೆಯಲ್ಲಿ ಪ್ರಸಿದ್ಧಿಪಟ್ಟಿರುವುದಷ್ಟೆ! ಇತ್ತೀಚೆಗೆ ಅಲ್ಲಿ [illegible] ದೊಡ್ಡದಾದ R 101 ನೇ ವಿಮಾನವೊಂದ ರಚಿಸಲ್ಪಟ್ಟಿತು [illegible] ಹೀಗೆ ಜನತೆಗೆ [illegible] ಎಲ್ಲಾ [illegible] ಗಳಿಂದ ಕೂಡಲ್ಪಟ್ಟಿತು [illegible] ಹಾಗೂ ದೊಡ್ಡದಾ[illegible] ವಿಮಾನವು [illegible] ಅಸಾಮಾನ್ಯವಾಗಿದ್ದಿತು [illegible] ಯಂತ್ರ ಸಾಮಗ್ರಿಗಳು ಬಹಳ ಗಟ್ಟಿಯಾ[illegible] ಭಾರವನ್ನು ಸಹಿಸ[illegible] ಬಲವಾಗಿ[illegible]

[illegible] ನೇ [illegible] ವಿಮಾನವು [illegible] ಲಂಡನ್ [illegible] ಪ್ರಯಾಣಿಕರೊಡನೆ ಹಿಂದೂಸ್ಥಾನಕ್ಕೆ ಹೊರಟಿತು [illegible] ವಿಮಾನವು ಬಹಳ [illegible] ಅದೇ ರಾತ್ರಿ [illegible] ಎಂಬ ಸ್ಥಳಕ್ಕೆ [illegible] ಭಯಂಕರ ಶಬ್ದದಿಂದ [illegible] ಉಳಿದವರು [illegible] ಚಿಕಿತ್ಸೆಗಾಗಿ ಆಸ್ಪತ್ರೆಗೆ ಕೊಂಡೊಯ್ಯಲಾಗಿದೆ. [illegible] ಲಾರ್ಡ ಥೋಮಸ ಎಂಬವರು ಮಡಿದವರಲ್ಲೊಬ್ಬರು.

ಬ್ರಿಟಿಷ ಪತ್ರಿಕೆಗಳ ಪ್ರತಿನಿಧಿಯಾಗಿ [illegible] ಕೆಲಸ ಮಾಡಿದ ಲೋರ್ಡ ಬರ್ಕನ್ ಹೆಡ್ಡರು ೧೯೨೪ರಿಂದ ೨೮ರ ವರೆಗೆ ಇಂಡಿಯಾ ಸೆಕ್ರೆಟರಿಗಳಾಗಿದ್ದರು. ಈಗ ತಾನೇ [illegible]

ಲಂಡನಿನಲ್ಲಿ ಸಾಮ್ರಾಜ್ಯ ಪರಿಷತ್ತಿನ ಸಮಾರಂಭವು [illegible] ಈ ಸಂದರ್ಭದಲ್ಲಿ [illegible] ಇಂಡಿಯಾದ ವಿಷಯವಾಗಿ ಬ್ರಿಟಿಷರಿಗೆ ಎಚ್ಚರವಿತ್ತಿರುವರಂತೆ. ಮತ್ತು ಬಹಳ [illegible] — ಎಂದು ತಿಳಿಯಬರುತ್ತದೆ.

— ಡಿ. ವೆನೆರ್ ಡ್ ಶಾ ಎಂಬ ಇಂಗ್ಲಿಷ [illegible] ಲಂಡನಿನಲ್ಲಿಯೂ ಗಾಂಧೀಜೀಯವರ ಹುಟ್ಟಿದ ದಿನದ ಆಚರಣೆಯು ಕೈಕೊಳ್ಳಲ್ಪಟ್ಟಿರುವದು.

— ಆಸ್ಟ್ರೇಲಿಯದ "ಸಿಡ್ನಿ" ಎಂಬಲ್ಲಿ ಕೆಲಸದಿಂದ ವಿಮೋಚನೆ ಹೊಂದಲ್ಪಟ್ಟ ಸಿಪಾಯಿಗಳ ಪೈಕಿ ಸುಮಾರು ೩೦೦ ಮಂದಿ ಸಿಪಾಯಿಗಳು ಒಟ್ಟುಕೂಡಿ ಕೈಸಾಬೀರದ ಕೌನ್ಸಿಲ್ ಜನರಲರ ಅಪೇಕ್ಷೆಯಂತೆ ಸ್ವರಾಜ್ಯ ಚಳವಳಿಯಲ್ಲಿ ಭಾಗವಹಿಸಿರುವರು.

## ಒಳದೇಶ ವರ್ತಮಾನ.

### ಮೈಸೂರು ಮಂಡಳಿಯ ವರದಿ

ಮೈಸೂರಿನ "ರಿಪ್ರಸೆಂಟೆಟಿವ್ ಮಹಾ ಸಭೆಯು" ತಾರೀಕು ೬—೧೦—೩೦ರಲ್ಲು ಮೈಸೂರು ಅಕ್ಟೋಬರ್ ದಿವಾನರಾದ ಎಮ್ ಎನ್ ಕೃಷ್ಣರಾಯರ ಪ್ರಮುಖವಾಗಿ ಮೊದಲು ಮಾಡಲ್ಪಟ್ಟಿತು. ರಾಜಕೀಯ ಗುಡ್ ವರ್ಕ ವಿಚಾರವಾದ ಶ್ರೀಮಾನ್ ಕೃಷ್ಣರಾಯರು. ಹಲಕೆಲವು ಮೈಸೂರು ರಾಜಕೀಯ ಅವ್ಯವಸ್ಥೆಗಳನ್ನು ಕುರಿತು ಹೃದಯಂಗಮವಾದ ಭಾಷಣವಿತ್ತರು. ಸದರಿಯವರು ಸೂಚಿಸುವಂತೆ ವಿಶ್ವದೇಶಗಳ ಹಾಗೆ ಮೈಸೂರು ಸಂಸ್ಥಾನವೂ ಕೂಡ ಅನೇಕ ಕಷ್ಟಪರಂಪರೆಗಳಿಗೆ ತುತ್ತಾಗಿರುವದು. [illegible] ಅವ್ಯವಸ್ಥೆಯಾಗಿರುವದು. [illegible] ವ್ಯಾಪಾರದ [illegible] ಮೈಸೂರು ಸಂಸ್ಥಾನವನ್ನು ಎರಡು ರೀತಿಯಿಂದ [illegible] ಮೊದಲನೇಯದಾಗಿ ಮೈಸೂರ [illegible] ಸ್ಥಾನಕ್ಕೆ ಹೆಚ್ಚಿನ ನಷ್ಟವನ್ನುಂಟು ಮಾಡಿತು. ಈ ನಷ್ಟವನ್ನು ಭರ್ತಿ ಮಾಡುವ ಉದ್ದೇಶದಿಂದ ಮೈಸೂರು ಸರಕಾರವು ಭದ್ರಾವತಿಯಲ್ಲಿರುವ ಕಬ್ಬಿಣದ ಕಾರಖಾನೆಯಲ್ಲಿ ಕೆಲಸವನ್ನು ಯೋಗ್ಯರೀತಿಯಿಂದ ಮುಂದರಿಸಲು ಮಾಡಿರುವದು. ವ್ಯಾಪಾರದ [illegible] ಮೈಸೂರನ್ನು ಇನ್ನೊಂದು ಬಗೆಯಿಂದ [illegible] ಮೈಸೂರಿನಿಂದ ಮುಖ್ಯವಾಗಿ ಪರದೇಶಗಳಿಗೆ [illegible] ಗಂಧ [illegible] ಸಾಮಾನುಗಳಿಗೆ ಗಿರಾಕಿಗಳು [illegible] ಈ ವಿಷಯದಲ್ಲಿ ಮೈಸೂರು ಸರಕಾರವು ಹೊಸ ಗಿರಾಕಿಗಳನ್ನು ಹುಡುಕಿ ನಷ್ಟವನ್ನು ಭರ್ತಿಮಾಡುವ ಇರಾದೆಯಿಂದ ಬಹಳೇ ಶ್ರಮಿಸುತ್ತಿರುವದು. ಮೈಸೂರು ದೇಶದ ಎರಡನೇ [illegible] ಅಭಿವೃದ್ಧಿ [illegible] ಇತ್ತೀಚೆಗೆ [illegible] ಮೈಸೂರಿನ ಆದಾಯ [illegible] ದೇಶಕ್ಕೆ ಹೆಚ್ಚು [illegible] ಉಂಟಾಗಿರುವದಿಲ್ಲ. Cash certificate ಗಳ [illegible] ಮೈಸೂರು ಸರಕಾರದ Floating Debts ಗಳು ಹೆಚ್ಚುತ್ತಿರುವವು. ಈ [illegible] ಸರಕಾರವು ಇತ್ತೀಚೆಗೆ ಸದರಿ ಸಾಲಗಳ ಅಭಿವೃದ್ಧಿಯ ನಿವಾರಣೆಗೋಸ್ಕರ ಕೆಲವಂಶ ಹಣವನ್ನು [illegible] ಸರಕಾರದಿಂದ ಹೊರಗೆ [illegible] ಭರ್ತಿಗಾಗಿ ಕೃಷಿ ಕೈಗಾರಿಕೆ ಮುಂತಾದ ಅನೇಕ [illegible] ಕೆಲಸಗಳನ್ನು ಮಾಡಿರುವರು. ಈ ಕಾರಣದಿಂದ, ಅಂತಹ ಸಾಲಗಳು ಎಂದೂ ದೇಶದ ಅವನತಿಗೆ [illegible] ಅಸ್ಥಾನ [illegible] ರೂಢಿಸಲ್ಪಟ್ಟ Economic Policy ಯನ್ನು [illegible] ಮುಂತಾದ [illegible] ಸರಕಾರವು ಬೇಕಾದ ಸಾಹಸವನ್ನು ಮಾಡುತ್ತಿರುವದು. ಎಲಿಮೆಂಟರಿ ವಿದ್ಯಾಭ್ಯಾಸ ಮೇಲ್ಮೆಗಾಗಿ ಸರಕಾರವು [illegible] ಹೆಚ್ಚು ಭಾಗ [illegible] ಮಾಡಿರುವದು. ಸ್ಥಳೀಕ ವಿದ್ಯಾಲಯಗಳ ಸರ್ಕಾರಿ [illegible] ಅಧಿಕಾರಗಳು [illegible] ಆದರೆ [illegible] ಅಧಿಕಾರ ಮಾತ್ರ ವಿದ್ಯಾ ಇಲಾಖೆಯು ತಾವೇ ಇಟ್ಟುಕೊಂಡಿರುವರು. ಹಾಗೂ ದಿವಾನರ ಹೇಳಿದಂತೆ ಮೈಸೂರು ಸರಕಾರವು ದೇಶೋನ್ನತಿಯ ಹೆಚ್ಚಿನ ಭಾಗವನ್ನು ಜನಾಂಗಕ್ಕೇನೇ ಬಿಟ್ಟುಕೊಟ್ಟಿರುವರು. ಮತ್ತು [illegible] ಪ್ರಯತ್ನಗಳನ್ನು ಮಾಡುತ್ತಿರುವದು.

### ರಾಜಕೀಯ ಬಂದಿವಾನರ ಜೈಲು ಆಹಾರದ ಕುರಿತು
(ಪತ್ರಿಕೆಗಳ ಅಭಿಪ್ರಾಯ)

[illegible] ರಾಘವರಾವ್ ಎಂಬೊಬ್ಬ ಸತ್ಯಾಗ್ರಹಿಯು ಬಂದಿಖಾನೆಯೊಳಗೆ ಮೃತಿ ಹೊಂದಿದ ಒಂದೆ ಸಂಗತಿಯಿಂದ ರಾಜಕೀಯ ಬಂದಿವಾನರ [illegible] ಸರಕಾರದ ಅಕ್ಕರೆಯು ಅದೆಷ್ಟು ಬರಸ್ಕಾರದಾಗಿರುವದೆಂದು ವಿದಿತವಾಗುತ್ತದೆ. ಬಂದಿವಾನರಾದರೋ ಕಳ್ಳತನ [illegible] ಅಥವಾ ಬದಮಾಶ ಮಾಡಿ ಸೆರೆಮನೆಯನ್ನು ಸೇರಿಲ್ಲ. [illegible] ಅವರನ್ನು ಸರಕಾರವು [illegible] ಅಪರಾಧಿಗಳನ್ನಾಗಿ ಮಾಡಿತು. ಕಳವು ಕೊಲೆ ಮುಂತಾದ ಅನ್ಯಾಯ ಮಾಡಿ [illegible] ವಗೈರೆ ಸಾಧನೆಗಳಿಂದ [illegible] ಸರಕಾರ [illegible] ಪರಿವರ್ತಿಸುವರು. ಸರಕಾರಕ್ಕೆ, [illegible] ರಾಜಕೀಯ [illegible] ಸತ್ಯಾಗ್ರಹ [illegible] ಆದರೆ ಸತ್ಯಕ್ಕೆ ಅಥವಾ ನ್ಯಾಯಕ್ಕೆ ಮಾತ್ರ ಸರಕಾರವು [illegible] ಸತ್ಯಾಗ್ರಹ [illegible] ಸತ್ಯಾಗ್ರಹ ರಂಗದಲ್ಲಿ ಸತ್ಯ ದರ್ಶನೆಯಲ್ಲೇ [illegible] ಮಾಡುವ ಸತ್ಯಾಗ್ರಹಿಗಳ ಮಾತ್ರ ಸರಕಾರ [illegible] ಕೊಲೆ ಪಾತಕ [illegible] ಶಿಕ್ಷೆಗೆ [illegible] ಸರಕಾರಕ್ಕೆ [illegible] ಈ ರೀತಿಯ ಸರಕಾರ ವರ್ತನೆಯು ಸತ್ಯಾಗ್ರಹದಿಂ [illegible] ಕೈಕೊ[illegible] ಯೋಗ್ಯ [illegible] ಅರ್ಹತೆ ಮಾಡುವದು [illegible] ಬಂದಿವಾನರ ಆಹಾರ [illegible] ಗಳ [illegible] ಹಲವು ಕೈದಿಗಳು ಹಲವು ಬಗೆಯಿಂದ [illegible] A ತರಗತಿಯ ಜೈಲಿನಿಂದ ಬಿಡುಗಡೆ ಹೊಂದಿದ ರಾಜಕೀಯ ಕೈದಿಯೊಬ್ಬನು ಸೂಚಿಸುವಂತೆ ಆತನು ಉಳಕೊಂಡಿದ್ದ ಕೋಟಡಿಯಲ್ಲಿ ಒಮ್ಮೆ ಒಂದು ಹಾವಿನ ಸಂದರ್ಶನವಾಯಿತಂತೆ! ಸೊಳ್ಳೆಗಳ ಕಾಟವು ಬಹಳವಾಗಿದ್ದರಿಂದ ರಾತ್ರಿಯಲ್ಲಿ ಕಣ್ಣಿಗೆ ನಿದ್ರೆಯೂ ಕೂಡ ಹಿಡಿಯುತ್ತಿದ್ದಿಲ್ಲ. ಮತ್ತು ಕೋಟಡಿಯೊಳಗೆ ಬೆಳಕೂ ಕಡಿಮೆಯಾಗಿತ್ತು—ಎಂದು ಹೇಳಿರುವ[illegible] A ಕ್ಲಾಸಿನ ಬಂದಿವಾನರ ಸ್ಥಿತಿಗತಿಗಳೇ ಹೀಗಿದ್ದ ಮೇಲೆ B ಮತ್ತು C ತರಗತಿಯವರ ಅಕ್ಕರೆಯ ಕುರಿತು ಯೋಚಿಸಬೇಕೇ?

ಮೇಲೆ ಹೇಳಲ್ಪಟ್ಟ ಮಿ. ರಾಘವರಾಯರೂ, ಆಹಾರದ ಅಭಾವದಿಂದ (Hunger Strike) ಮಾಡಿ ಕೊನೆಗೆ ತನ್ನ ಅಮೂಲ್ಯ ಪ್ರಾಣವನ್ನೇ ದೇಶದ ಮುಕ್ತಿಗಾಗಿ ಸಮರ್ಪಿಸಿದರು. ಜೈಲಿನಲ್ಲಿ ಅನ್ನ ಊಟ ಮಾಡದವರಿಗೆ, ರಾಗಿ—ಜೋಳ ಈ ರೀತಿಯಿಂದ ಕೀಳಾದ ಆಹಾರವನ್ನು ಒದಗಿಸಿ ಕೊಡದೆ ಸರಕಾರವು ಕೈದಿಗಳನ್ನು ಬಹಳ ಕಷ್ಟಕ್ಕೆ ಗುರಿಪಡಿಸಿರುವದು. ಪರಿಣಾಮವಾಗಿ ಅವರ ಆರೋಗ್ಯವು ಮತ್ತಷ್ಟು

ಸಿಟ್ಟು ಹೋಗಿರುವದು. ವೆಂಕಟೇಶ್ವರಲುರವರು ಮಾನ್ಯ ಮಹನೀಯರೂ ಸದಾ ಇಂತಹ ಸಂಘಸ್ಥಗಳಿಗೆ ಗುರಿಪಟ್ಟು ತಮ್ಮ ದೇಶದ ಭಾರತಲ್ಲಿ ಕ್ಷುವಂಶವನ್ನು ಕಳೆದು ಮಾಡಿಕೊಂಡಿರುವರು. ರಾಜಕೀಯ ಬಂದಿವಾನರಲ್ಲಿ ಹಲವರು ವಿದ್ಯಾಭ್ಯಾಸವನ್ನು ಹೊಂದಿದ ನಡು ತರಗತಿಗೆ ಸೇರಿದವರು. ಅವರು ಎಲ್ಲ ಸೌಕರ್ಯಗಳ ಅಭಾವಗಳಿಂದಿರಲು ಬರೀ ಅಲ್ಪ ಮುಖಸಲ್ಲಿ ದೊರೆಯುವ ಮುಷ್ಟಿಗೆ ಅನ್ನವನ್ನಾದರೂ ಕೊಡ ಸರಕಾರವು ರಾಜಕೀಯ ಬಂದಿವಾನರಿಗೆ ನಿರಾಕರಿಸುವದು, ಭಾರತೀಯ ಕೈದಿಗಳಲ್ಲಿ ಎಷ್ಟೇ ಬಡವನಾಗಿದ್ದರೂ, ಬಟ್ಟೆ ಅಥವಾ ಮೈಯನ್ನು ತೊಳೆಯುವುದಕ್ಕಾಗಿ ಸಾಬೂನಾಗಲಿ, ಸೀಗೆ ಪುಡಿಯಾಗಲಿ ಉಪಯೋಗಿಸವವನಿಲ್ಲ - ಸರಕಾರವು ಇವುಗಳ ಅನುಕೂಲತೆಯನ್ನು ನಿರಾಕರಿಸಿರುವದು. ಅಂದ ಮೇಲೆ ಭಾರತೀಯರ ಮೇಲಣ ಸರಕಾರದ ಕೃಪಾ ಕಟಾಕ್ಷವು ಎಷ್ಟರ ಅವನತಿಯನ್ನು ಹೊಂದಿರುವದೆಂದು ಬೇರೆ ವಿವರಿಸಬೇಕೆಂದಿಲ್ಲ — ಎಂದು ದೇಶವಾಗಿ ಪತ್ರಿಕೆಗಳು ತಿಳಿಸುತ್ತವೆ.

— ಬನಾರಸ್, ಮಥುರಾ, ಹುಬ್ಬಳ್ಳಿ, ಹರ್ಪನಹಳ್ಳಿ, ವಿಜಯನಗರ ಮುಂತಾದ ಹಿಂದುಸ್ಥಾನದ ಎಲ್ಲಾ ಪ್ರದೇಶಗಳಲ್ಲಿ ಮಹಾತ್ಮಾಜಿಯವರು ಹುಟ್ಟಿದ ದಿನವನ್ನು ಬಹಳ ವಿಜೃಂಭಣೆಯಿಂದ ಆಚರಿಸಿರುವರು. ಅನೇಕ ಸ್ಥಳಗಳಲ್ಲಿ ರಾಟೆ ಮತ್ತು ತಕ್ಲಿಗಳ ಮೇಲಾಟಗಳನ್ನು ಏರ್ಪಡಿಸಿ, ನೂಲುವಿಕೆಯನ್ನು ಪ್ರೋತ್ಸಾಹಿಸಿರುವರು. ಗಾಂಧಿಜೀಯವರ ಪಟಗಳನ್ನು ಖಾದಿ ಬಟ್ಟೆಗಳಿಂದ ಶೃಂಗರಿಸಿ ಮೆರವಣಿಗೆ ಮಾಡಿದರು. ಪೋಲೀಸರ ಹಾವಳಿಯು ಸಾಕಷ್ಟು ಇದ್ದಿತೆಂದು ತಿಳಿದು ಬರುತ್ತದೆ.

— M & S M. Ry ನೌಕರರು ಈ ತಿಂಗಳ ೬ನೇ ತಾರೀಕಿನಲ್ಲಿ ವಿ. ಗೋವಿಂದ ರಾಜುಲು ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಪೆರಂಬೂರಲ್ಲಿ ದೊಡ್ಡ ದೊಂದು ಸಭೆಸೇರಿ, ತಮಗೆ ಒದಗಿದ ದುರವಸ್ಥೆಗಳ ನಿವಾರಣೋಪಾಯಗಳ ಕುರಿತು ಹಲವರು ಹೃದಯಂಗಮವಾದ ಭಾಷಣಗಳನ್ನಿತ್ತರು. ಕಂಪೆನಿಯಿಂದ ಕೊಡಲ್ಪಡುವ ನೌಕರೀ ಸಂಬಳವು ತೀರ ಕಡಿಮೆಯಾಗಿರುವದರಿಂದ, ಕೆಲಸಗಾರರ ಜೀವನವು ಸರಿಯಾಗಿ ನಡೆಯುವಂತಿಲ್ಲವಾದುದರಿಂದ ನವರಿಯವರ ಜೀವನವು ಯೋಗ್ಯ ರೀತಿಯಿಂದ ನಡೆಯುವಂತೆ ಮಾಡಲು ಅನೇಕ ಠರಾವುಗಳು ಸೂಚಿಸಲ್ಪಟ್ಟವು. ಸಭಿಕರು ಮಹಾತ್ಮಾಜಿಯವರಿಲ್ಲದ ಚಕ್ರಗೋಷ್ಠಿಯ ತೀರ ನಿಷ್ಪ್ರಯೋಜನಕರವಷ್ಟೇ ಮಾತ್ರವಲ್ಲದೆ ಅಂಥಹ ಅನ್ಯಾಯ ಸಭೆಗೆ ತಮ್ಮ ಪ್ರತಿನಿಧಿಗಳಾದರೂ ಪ್ರವೇಶಿಸಲು ಅರ್ಹರ ಉಳ್ಳವರಾಗಬಾರದೆಂದೂ ನಿರ್ಣಯಿಸಿಕೊಂಡರು.

— ಮದ್ರಾಸು ಯುನಿವರ್ಸಿಟಿ ಬೋರ್ಡಿನ ಕಾರ್ಯದರ್ಶಿಯವರಾದ ಪ್ರಿನ್ಸಿಪಾಲ್ ಶೇಷಾದ್ರಿಯವರು (Educational Research) ಸಮಿತಿಯೊಂದನ್ನು ಏರ್ಪಡಿಸುವ ಪ್ರಯತ್ನದಲ್ಲಿರುವರು. (Inter University Conference) ನವರ ಈ ವಿಷಯಗಳಲ್ಲಿ ಕಳೆದ ನವೆಂಬರ ತಿಂಗಳಲ್ಲೇ ಠರಾವನ್ನು ಪಾಸುಮಾಡಿರುವರು.

— ಅಲ್ಲಹಾಬಾದ್ "ಲೀಡರ್" ಪತ್ರಿಕೆಯ ಸಂಪಾದಕರು ಚಕ್ರಗೋಷ್ಠಿಗೆ ಹೋಗಬೇಕೆಂದಿದ್ದರು. ಆದರೆ ಗವರ್ನಮೆಂಟಿನವರು ಅವರನ್ನು ಇಂಗ್ಲಾಂಡಿಗೆ ಹೋಗಲಿಕ್ಕೆ ಪಾಸು ಪೋರ್ಟು ಕೊಡಲಿಲ್ಲವಂತೆ. ಇವರು ಬರೆದ "ಭಾರತನೂ ಅಂಗ್ರೇಜ್ ರಾಜಾ" ಎಂಬ ಪುಸ್ತಕವು ಸರಕಾರದವರಿಂದ ಇಲ್ಲಿ ನಿಷೇಧಿಸಲ್ಪಟ್ಟಿದೆ. ಈ ಕುರಿತು ಅಲ್ಲಹಾಬಾದಿನ ಹೈಕೋರ್ಟು ಮೂಲಕ ತೀರ್ಪನ್ನೇ ಕೊಟ್ಟಿರುವರು. ಮಾಡಿರುವದ ರಿಂದ ಇವರ ಪ್ರಿವಿ ಕೌನ್ಸಿಲಿಕ್ಕೆ ಅಪೀಲು ಮಾಡುವದಕ್ಕಾಗಿ ತೆರಳಬೇಕೆಂದಿದ್ದರು. ಆ ಕಾರಣದಿಂದ ಇವರನ್ನು ಇಂಗ್ಲಾಂಡಿಗೆ ಹೋಗಲು ಸರಕಾರವು ತಡೆಗಟ್ಟಿರುವುದು.

— ರಾಯಪುರದಲ್ಲಿ ಜನರ ಆನಂದೋತ್ಸವಗಳು ಹೆಚ್ಚುತ್ತಿವೆ. ಚರ್ಚ್ ಗ್ರೌಂಡ್ ತಂತಿಗಳನ್ನು ತುಂಡುಮಾಡಿದರೆಂದು, ಪಬ್ಲಿಕ್ ಆಫೀಸುಗಳನ್ನು ಒಳನುಗ್ಗಿ ದರೋಡೆ ಮಾಡಿರುವರಂತೆ. ಈ ರೀತಿಯ ಅವ್ಯವಸ್ಥೆಗಳನ್ನು ಸರಿಪಡಿಸಲು ಬಂದ ಪೋಲೀಸರ ಮೇಲೆಯೂ ಜನರು ಕೈ ಮಾಡಿ ತಂಡವಾಗಿ ವಿರೋಧವನ್ನು ಪ್ರದರ್ಶಿಸಿರುವರು.

— ಪೇಶಾವರದಲ್ಲಿ ಚೀಫ್ ಕಮಿಶನರ ಆಫೀಸಿನ ಗುಮಾಸ್ತನೊಬ್ಬನು ಪಠಾಣಿಯೊಬ್ಬಳ ಓರ್ವ ಸ್ತ್ರೀಯನ್ನು ಕೊಂದಿರುವನಂತೆ.

- ಗೋಪೀನಾಥ ಪುರದಲ್ಲಿ ಅಬ್ಕಾರಿ ಪೋಲೀಸರು ಜಪ್ತಿ ಮಾಡುತ್ತಿದ್ದ ಒಂದೆಡೆಯಲ್ಲಿ, ಜನರಿಂದ ಬೀಗವನ್ನು ಪೆಟ್ಟಿಗೆಗಳ ರಾಜಿಯನ್ನು ನೋಡಿದರು. ಪೋಲೀಸರು ಗುಂಡು ಹಾರಿಸಿದರು. ಆದರೂ ಜನ ಸಮುದಾಯವು ಕೇಳ ಹೊತ್ತು ಚದರಲಿಲ್ಲ. ಎರಡು ಮಂದಿ ಪೋಲಿಸರನ್ನು ಜನರು ಎತ್ತಿಕೊಂಡು ಹೋಗಿ ಚೆನ್ನಾಗಿ ಗುದ್ದು ಕೊಟ್ಟು ಮನ್ನಿಸಿರುವರಂತೆ.

## ಆಸ್ಸಾಂ ಖಂಡದ ಅಖಿಲ ಮಹಿಳಾ ಸಭೆ

ಮುಖ್ಯ ಉದ್ದೇಶಗಳ ಮೇಲಿನ ಸಭೆಯು ಜನವರಿ ತಾರೀಕು ೩೧ರಿಂದ ಫೆಬ್ರುವರಿ ೩ನೇ ತಾರೀಕಿನ ವರೆಗೆ ಲಾಹೋರಿನಲ್ಲಿ ಸೇರಲಿಕ್ಕಿರುವದು.

೧. ಆಸ್ಸಾಂ ಖಂಡದ ಎಲ್ಲಾ ಮಹಿಳೆಯರಲ್ಲಿಯೂ ಐಕ್ಯಭಾವವನ್ನು ಉಂಟು ಮಾಡುವುದು.

೨. ಪಾಶ್ಚಾತ್ಯ ವಿದ್ಯೆಗಳ ಮೂಲವನ್ನೇ ನಿರ್ಮೂಲನಮಾಡಿ ದೇಶ ಸೇವೆಯಲ್ಲಿಯೇ ನಿರತರಾಗುವಂತೆ ಮಾಡುವದು.

೩. ಆಧುನಿಕ ವಿದ್ಯಾಭ್ಯಾಸದ ಕುಂದು ಕೊರತೆಗಳನ್ನು ಸರಿಗೊಳಿಸುವದು.

೪. ಪಾಶ್ಚಾತ್ಯರಿಂದ ಬೇಕಾದ ವಿಷಯಗಳನ್ನು ಮಾತ್ರವೇ ಕಲತು ಕೊಳ್ಳುವಂತೆ ಮಾಡುವದು (ಆರೋಗ್ಯ ಸೂತ್ರಗಳು, ಬಟ್ಟೆಬರೆಗಳ ಶುಚಿತ್ವ ಇತ್ಯಾದಿ.)

೫. ಶಾಂತಿ ರಕ್ಷಣೆ,

ಮೇಲೆ ಹೇಳಿದವಲ್ಲದೆ, ಇನ್ನಿತರ ಎಷ್ಟೋ ವಿಷಯಗಳು ಮೇಲೆ ಹೇಳಿದ ಸಭೆಯಲ್ಲಿ ಚರ್ಚಿಸಲಾಗುವವು. ಇದಕ್ಕಾಗಿ ಪೆಲೆಸ್ಟೈನ್, ಸಿರಿಯಾ, ಇರಾನ್, ಸಿಲೋನ್, ನೇಪಾಳ ಮೊದಲಾದ ದೇಶದವರು ತುಂಬಾ ಸಹಾನುಭೂತಿಯನ್ನು ತೋರಿಸಿರುವರು.

# ದಕ್ಷಿಣ ಕನ್ನಡ.

**ಮಂಗಳೂರು:** — ಮುನಿಸಿಪಾಲಿಟಿಯ ರಿಪೋರ್ಟ ಸೂಚಿಸುವಂತೆ ಮಂಗಳೂರು ಪಟ್ಟಣದಲ್ಲಿ ಈ ವಾರದಲ್ಲಿ ೩೮ ಜನನಗಳೂ ೨೩ ಮರಣಗಳೂ ಆದವು.

ದಕ್ಷಿಣ ಕನ್ನಡಾ ಜಿಲ್ಲಾ ಮಂಗಳೂರು ತಾಲೂಕು ಬೋರ್ಡು ಸಭೆಯು ಇದೇ ತಿಂಗಳ ೧೮ನೇ ತಾರೀಕು ಮಂಗಳವಾರ ಪೂರ್ವಾಹ್ನ ಘಂಟೆ ೧೦-೩೦ಕ್ಕೆ ಸರಿಯಾಗಿ ತಾಲೂಕು ಬೋರ್ಡು ಆಫೀಸಿನಲ್ಲಿ ಜರಗುವದು. ೧೯೨೯—೩೦ನೇ ವರ್ಷಗಳ ರಿಪೋರ್ಟನ್ನು ಸಭೆಯ ಮುಂದೆ ಇಡಲಾಗುವುದು. ಪೂರ್ವಾಹ್ನ ೧೧ ಘಂಟೆ ೭-೩೦ಕ್ಕೆ ಸರಿಯಾಗಿ ಗವರ್ನರ ದೊರೆಗಳಿಗೆ ಸ್ವಾಗತವೀಯಲಾಗುವದು. ಬಂಧುಭಗಿನಿಯರೆಲ್ಲರನ್ನೂ ಆಹ್ವಾನಿಸಲಾಗಿಯದೆ.

ಬಾವಟೆ ಗುಡ್ಡೆಯಲ್ಲಿರುವ ದೀಪಸ್ತಂಭವನ್ನು ಮುನಿಸಿಪಾಲಿಟಿಯವರಿಗೆ ಸರಕಾರವು ಬಿಟ್ಟುಕೊಟ್ಟಿರುವದು. ಅಲ್ಲಿಂದು ವಾಚನಾಲಯವು ತೆರೆಯಲ್ಪಡುವದು.

ಮದ್ರಾಸು ಗವರ್ನರರು ಇದೇ ತಿಂಗಳ ೩೦ ರಿಕ್ಕೆ ಮಂಗಳೂರಿಗೆ ಬರುವರು. ಅವರು ಹಿಂದಿನ ಗವರ್ನರರಿಂದಲೂ ಉನ್ನತವಾದ ಪ್ರವಾಸವನ್ನೇ ನಮ್ಮ ಜಿಲ್ಲೆಯಲ್ಲಿ ಮಾಡಲಿದ್ದಾರೆ. ಮಡಿಕೇರಿಯಿಂದ ಮಂಗಳೂರು, ಕಾರ್ಕಳ, ಸೋಮೇಶ್ವರ, ಹಾಲಾಡಿ, ಕುಂದಾಪುರ ಮೊದಲಾದ ಹಳ್ಳಿಗಳನ್ನು ಸಂದರ್ಶಿಸುವರು. ಅಲ್ಲಲ್ಲಿನ ಹಳ್ಳಿಕಾಡಿನ ರಸ್ತೆಗಳೆಲ್ಲವನ್ನು ಸಂದರ್ಶಿಸಲಿಕ್ಕಿರುವರು. ಆ ಕಾರಣದಿಂದ ಡಿಸ್ಟ್ರಿಕ್ಟು ಮತ್ತು ತಾಲೂಕು ಬೋರ್ಡುಗಳಿಗೆ ಮಾರ್ಗ ರಿಪೇರಿ ಕೆಲಸದ ಅವಸರದಿಂದ ಪುರುಸತ್ತೇ ಇರಲಾರದು. ಅವರು ನೋಡುವ ರಸ್ತೆಗಳನ್ನಾದರೂ ಸರಿ ಪಡಿಸುವ ಕೆಲಸವು ಬೋರ್ಡಿನವರ ಪಾಲಿಗೆ ಬಿದ್ದಿರುವದಷ್ಟೆ. ಇದಕ್ಕಾಗಿ ಬೋರ್ಡಿನವರಿಗೆ ಕೆಲವಟ್ಟಿನ ಖರ್ಚು ಅನಾವ್ಯಯವಾಗುವದೆಂದೇ ತೋರುತ್ತದೆ. ಮೊದಲಿನ ಪದ್ಧತಿಯಂತೆ ಅವರಿಗೆ ಮಂಗಳೂರ ಮಹನೀಯರಿಂದ ಯೋಗ್ಯ ಸ್ವಾಗತಗಳ ಕೊಡಲ್ಪಡುವವು. ಬಾಡಿಗೆ ಬಸ್ಸುಗಳ ವೈಭವಕ್ಕೆ ಕಂದಿರದು. ಅಧಿಕಾರಿಗಳ ಓಡಾಟಕ್ಕೂ ಪೋಲೀಸ ಬಂದೋಬಸ್ತಿಗೂ ಪಾರವೇ ಇಲ್ಲ. ಟೀಪಾರ್ಟಿ ಗಾರ್ಡನ್ ಪಾರ್ಟಿ, ಡಿನ್ನರ್ ಪಾರ್ಟಿ ಮೊದಲಾದ ಪಾರ್ಟಿಗಳಿಗೆ ಹಣವನ್ನು ರಾಶಿಯಾಗಿ ಚೆಲ್ಲಲಿಕ್ಕಿರುವದು.

ಮಂಗಳೂರು ಮುನಿಸಿಪಾಲಿಟಿಯವರು ಬಸ್ಸುಗಳ ಅಕ್ಕಿಗೆ ಹೊಸ ಜೀವವನ್ನು ಕೊಟ್ಟಿರುವರು. ಎಲ್ಲಾ ಬಸ್ಸುಗಳೂ ಹಂಪನಕಟ್ಟೆಯಿಂದಲೇ ಹೊರಡಬೇಕೆಂದು ನಿರ್ಧರಿಸಿರುವರು. ಮುನಿಸಿಪಾಲಿಟಿಯವರು ಮಾರ್ಗಗಳ ಹಂಪನಕಟ್ಟೆಯಲ್ಲಿ ಅಗಲವಾಗಿದ ವುದರಿಂದ ಈ ರೀತಿ ಮಾಡಿದರು. ಆದರೆ ಈ ಕಾನೂನುಗಳ ಜ್ಯಾರಿಯೊಂದಿಗೆ ಮಾರ್ಗಗಳ ದುರಸ್ತಿಯು ಆಗಿರುವಾಗ ಅಗತ್ಯಬೀಳುವದೆಂದು ನಂಬಬೇಕಾಗಿದ ವದು.

**ಉಡುಪಿ** — ಕಳೆದ ವಾರದಲ್ಲಿ ಇಲ್ಲಿನ ಜಿಮ್ಖಾನಾ ಕಮಿಟಿಯವರು ಏರ್ಪಡಿಸಿದ ಕ್ರಿಕೆಟ್ ಪಂದ್ಯಾಟಗಳಲ್ಲಿ ಇಲ್ಲಿನ ಬೋರ್ಡು ಹೈಸ್ಕೂಲಿಗೆ ಜೂನಿಯರ್ ಕಪ್ ಮತ್ತು ಕಾರ್ಕಳ ಬೋರ್ಡು ಹೈಸ್ಕೂಲಿಗೆ ಸೀನಿಯರ್ ಕಪ್ ದೊರೆತಿವೆ. ತಾಲೂಕು ಬೋರ್ಡ ಕಪ್ಪಿನ ಪಂದ್ಯಾಟಗಳು ಪೂರ್ಣವಾಗಲಿಲ್ಲ ಯಾರು ಗೆಲ್ಲುವರೋ ನೋಡಬೇಕು.

ಇದೇ ತಾ ೮ನೇ ಶನಿವಾರ ರಾತ್ರೆ ಸಿಡಿಲು ಮಿಂಚುಗಳು ಬಹಳವಾಗಿ ಪ್ರದರ್ಶಿತವಾದವು. ಭಾರಿಯ ಮಳೆಯೂ ಇತ್ತು. ಅಂದು ಉಡುಪಿಯಲ್ಲಿ ಸೋದೆ ಮಠದ ಹತ್ತಿರ ರಸ್ತೆಯಲ್ಲಿನ ಒಂದು ಮನೆಗೆ ಮಿಂಚು ಬಡಿದು ಸ್ವಲ್ಪ ಮಟ್ಟಿನ ಹಾನಿಯಾಗಿದೆ. ಆದರೆ ಪ್ರಾಣ ಹಾನಿಯಾಗಿಲ್ಲ. ಅಂದೇ ರಾತ್ರಿ ಕಟ್ಟಾಡಿಯ ಗದ್ದೆ ಅಂಗಡಿಯಲ್ಲಿ ಒಂದು ಮನೆಗೆ ಮಿಂಚು ಬಡಿದು ಅದರ ಜ್ವಾಲೆಯಿಂದ ಮೂರು ಮಂದಿ ಸ್ವಲ್ಪ ಮಟ್ಟಿಗೆ ತಮ್ಮ ಚೈತನ್ಯವನ್ನು ಕಳಕೊಂಡಿದ್ದಾರೆ. ಅವರ ಪೈಕಿ ಒಬ್ಬ ಸ್ತ್ರೀಗೆ ಕಿವಿಗಳು ಕಿವುಡಾಗಿವೆ. ಅವರ ಮನೆಯ ಹಲವು ಕದಗಳಲ್ಲಿ ಗೋಡೆಯಲ್ಲಿ ಮತ್ತು ಸಿಕ್ಕು ಬ್ರಿಡ್ಜುವುದಲ್ಲದೆ ಹಲವು ಪಾತ್ರೆ ಮತ್ತು ಇತರ ಸಾಮಾನುಗಳು ಕಂದಾಬಟ್ಟೆ ಆಗಿವೆ. ಅದೇ ಮನೆಯವರ ದನದ ಹಟ್ಟಿಗೂ ಮಿಂಚು ಹೊಡೆದು ಒಂದು ದನವು ವ್ಯಾಕಪಟ್ಟಿದೆ. ಮತ್ತು ೧ ತೆಂಗಿನ ಮರವೂ ಸುಟ್ಟುಹೋಗಿ ಸಂಪೂರ್ಣ ಹಾನಿಯಾಗಿದೆ.

ಹಲವು ಪಂಚಾಂಗ ಕರ್ತರ ಹಲವು ವಿಧಗಳಲ್ಲಿ ಬರೆದಿದ್ದರೂ ಇಲ್ಲಿನ ಮಠಾಧಿಪತಿಗಳು ಆಚರಿಸಲಪಟ್ಟನಿಲ್ಲದು ಸ್ವಾಮಿಗಳದ್ದರೂ ಇದೇ ತಾ ೬ನೇ ಮಂಗಳವಾರ ರಾತ್ರೆ ಚಂದ್ರಗ್ರಹಣವೇನೋ ಸಂಭವಿಸಿಯೇ ಹೋಯಿತು. ಸ್ಪರ್ಶಕಾಲಕ್ಕೆ ಮೋಡವಲ್ಲ ಚಂದ್ರನು ಅವಿತಿದ್ದರೂ ಮೋಕ್ಷಕಾಲದ ವರೆಗೆ (ಸುಮಾರು ರಾತ್ರಿ ೧೨ ಘಂಟೆ) ಚಂದ ಬಿಂಬವು ಕಾಣಿಸಿಯೇ ಇತ್ತು. ಪಂಚಾಂಗ ಕರ್ತರು ಇನ್ನು ಸ್ವಲ್ಪ ಸಾವಧಾನವಾಗಿ ಶಾಸ್ತ್ರಾಧಾರಗಳನ್ನು ದೀರ್ಘ ಹಾಗೂ ಸೂಕ್ಷ್ಮ ದೃಷ್ಟಿಯಿಂದ ಅವಲೋಕಿಸಿ ಅವಶ್ಯ ಮಟ್ಟಿಗೆ ಸ್ಪಷ್ಟಗಳನ್ನು ಒಂದೇ ಪ್ರಕಾರ ಪ್ರಕಟಿಸಿದ್ದಲ್ಲಿ ಜನರ ಅಂಧಶ್ರದ್ಧೆಯ ಮಂದಿಗಳಾದರೂ ವೃಥಾ ನಿಯಮಗಳನ್ನು ಕ್ಲಪ್ತವಂತೆ ಪಾಲಿಸಲು ಅನುಕೂಲಿಸುವುದಲ್ಲವೇ?

ಉಪಾಧ್ಯಾಯರ ಉಡಿಗೆ ತೊಡಿಗೆಗಳ ಎಂತಹದ್ದಿರಬೇಕೆಂದೂ ಅವರನ್ನು ಮೇಲಾಧಿಕಾರಿಗಳು ಹೇಗೆ ಕಾಣಬೇಕೆಂದೂ ಸಭಿಕರಲ್ಲೊಬ್ಬರ (ಕಾರ್ಕಳ ತಾಲೂಕಿನ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರು ಕಳೆದ ತಿಂಗಳಲ್ಲಿ ನಡೆದ ಮಹಾಸಭೆಯು ಸಭಾಧ್ಯಕ್ಷರಾಗಿದ್ದ ಜಿಲ್ಲಾ ವಿದ್ಯಾಧಿಕಾರಿಗಳನ್ನು ಕೇಳಿದ ಪ್ರಶ್ನೆಗಳಿಗೆ ಸದ್ರಿ ಅಧಿಕಾರಿಗಳು ತಕ್ಕುದಾದ ಉತ್ತರಗಳನ್ನು ದಯಪಾಲಿಸಿದರೆಂದು ಪ್ರಕಟವಾಗಿದ್ದಿತಷ್ಟೆ! ಉಡುಪಿಯಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳು ಆಗೋಸ್ಟಿನಲ್ಲಿ ಶಾಲಾ ಇನ್ಸ್‌ಪೆಕ್ಷನಿನ ಕಾಲದಲ್ಲಿ ಈ ಪ್ರಶ್ನೆಗಳ ಬಾಬಿನ ತಮ್ಮ ಅಸಂತುಷ್ಟಿಯನ್ನು ಕೆಲವು ಅಧ್ಯಾಪಕರ ಮಟ್ಟಿಗೆ ವ್ಯಕ್ತ ಮಾಡಿರುವರು. ಮತ್ತು ಈ ಅಧಿಕಾರಿಗಳು ತಮ್ಮ ಕಲ್ಲಿಗೆ ಹೋಸಬರಾಗಿ ಇವರ ಕೈಕೆಳಗೆ ಎಷ್ಟೋ ಮಂದಿ ಬಡ ಉಪಾಧ್ಯಾಯರು ತಮ್ಮ ಕರ್ತವ್ಯ ಪಾಲನೆಯನ್ನು ಮಾಡಬೇಕಾಗಿರುತ್ತದೆ. ಆದುದರಿಂದ ಕಾರ್ಕಳದ ಈ ಬಾತಮಿಯನ್ನು ಪತ್ರಗಳಿಗೆ ಕಳುಹಿದ ಮಾನ್ಯ ಗೃಹಸ್ಥರು ಅಧ್ಯಾಪಕರ ಹಿತಕ್ಕಾಗಿ ಜಿಲ್ಲಾ ವಿದ್ಯಾಧಿಕಾರಿಗಳು ಆಗ್ಗೆ ದಯಪಾಲಿಸಿದ ಸದುತ್ತರಗಳನ್ನು ವೃತ್ತ ಪತ್ರಗಳಿಗೆ ಕಳುಹಿಸಿ ಪ್ರಕಟಿಸಿದ್ದಲ್ಲಿ ಎಲ್ಲ ಅಧ್ಯಾಪಕರು ತನ್ನಿಮಿತ್ತ ತಮ್ಮ ಮೇಲಾಧಿಕಾರರನ್ನು ಮನವಣಿಸು ಅನುಸರಿಸಿ ಅವರ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ತಮ್ಮ ಏಳ್ಗೆಯನ್ನು ಸಾಧಿಸಲಾದೀತಲ್ಲವೇ?

**ಅಜೆಕಾರು** — ಇದೇ ಕಳೆದ ತಾ ೨೭-೯-೩೦ನೇ ಶನಿವಾರ ಅಂಡಾರು ಬೋರ್ಡು ಶಾಲಾ ಮಂದಿರದಲ್ಲಿ ಶಾರದಾ ಪೂಜೆಯೂ 'ಶ್ರೀ ಕೃಷ್ಣ ಸಂಧಾನ'ವೆಂಬ ಮೃದಂಗ ಸೇವಾ ವಿನೋದವೂ ಬಹು ವಿಜೃಂಭಣೆಯಿಂದ ಜರಗಿತು.

ಹೆದ್ರಿ ರೇಂಜಿನ ಎಕ್ಸೈಜ್ ಸಬ್ ಇನ್ಸ್‌ಪೆಕ್ಟರರಾದ ಮ. ರಾ ಎಸ್ ಎಂಬ್ರೋಸಿನರವರಿಗೆ ಸುರತ್ಕಲ್ ರೇಂಜಿಗೆ ವರ್ಗವಾದ್ದರಿಂದ ಅವರ ಸ್ಥಾನಕ್ಕೆ ಉದ್ಯಾವರದ ಶ್ರೀ ರಾಮಸ್ವಾಮಿ ಅಯ್ಯರವರು ಬಂದಿರುವರು.

ಮಲೇರಿಯಾ ಜ್ವರಕ್ಕೆ ದಿವ್ಯೌಷಧವಾದ ಕ್ವಿನೀನನ್ನು ಇಲ್ಲಿನ ಸಹಕಾರ ಸಂಘದ ಕಾರ್ಯದರ್ಶಿಯವರು ಹಂಚುತ್ತಿರುವರು. ಸಂತೋಷ!

ಮಾನ್ಯ ಮದರಾಸು ಗವರ್ನರ ಸಾಹೇಬರು ತಮ್ಮ ಜಿಲ್ಲಾ ಸಂಚಾರದಲ್ಲಿ ತಾ ೨೯-೧೦-೩೦ನೇ ಬುಧವಾರ ಕುಂದಾಪುರದಿಂದ ಹೊರಟು ಸೋಮೇಶ್ವರಕ್ಕಾಗಿ ಮಡಿಕೇರಿಗೆ ಬಸ್ಸಿಯನ್ನು ಸಂದರ್ಶಿಸಿ ಮಂಗಳೂರಿಗೆ ತೆರಳುವರಾಗಿ ತಿಳಿದುಬರುತ್ತದೆ.

ಬರುವ ತಾ ೨೬-೨-೧೯೩೧ನೇ ದಿವಸ ಜರಗಲಿರುವ ಜಾನಕಮ್ಮಾರಿ ಲಕ್ಷ್ಮಿ ಸಿದ್ಧತೆಗಳು ಈಗಲೇ ಪ್ರಾರಂಭವಾಗಿವೆ.

ವರ್ಷಂಪ್ರತಿ ಅಜೆಕಾರಲ್ಲಿ ಅತಿ ಉತ್ಸಾಹದಿಂದ ನಡೆಸುವ ಟಿಫ್ ವಿಂಟನ್ ಆಟವು ಸದ್ಯದಲ್ಲೇ ಪ್ರಾರಂಭವಾಗಲಿರುವುದ ಪರಿಣಾಮ ನೋಡಬೇಕು.

**ಪಡುಬಿದ್ರಿ** — ಇಲ್ಲಿನ ಶಾಲೆಯಲ್ಲಿ ಪ್ರತಿವರ್ಷವೂ ನಡೆಯತಕ್ಕ ಶಾರದಾ ಪೂಜೆಯು ಈ ವರ್ಷವೂ ಬಾಲಕರಿಂದಲೂ ಗ್ರಾಮಸ್ಥರಿಂದಲೂ ಸಾಂಗವಾಗಿ ನೆರವೇರಿಸಲ್ಪಟ್ಟಿತು. ಅಂದಿನ ರಾತ್ರಿ ಅಂದರೆ ತಾ, ೨೯-೯-೩೦ನೇ ಸೋಮವಾರ ರಾತ್ರಿ ಸ್ವಾಮಾಸ್ಕರೀ ಕೂಡಿ 'ಲವಣಾಸುರ ವಿಜಯ' ಮತ್ತು ಭೀಷ್ಮಪರ್ವಗಳೆಂಬ ಎರಡು ಪ್ರಸಂಗಗಳನ್ನು ತಾಳಮದ್ದಳೆಯ ಮೂಲಕ ಜನರ ಮಾನಸ್ಸನ್ನು ಸಂತೋಷಪಡಿಸಿದರು.

**ಮುಲ್ಕಿ**— ಇಲ್ಲಿಯ ಶ್ರೀ ದುರ್ಗಾದೇವಿ ಮಂದಿರ ರಾತ್ರಿ ಶಾಲೆಯಲ್ಲಿ ಎಂದಿನಂತೆ ಈ ವರ್ಷವೂ ನಿನ್ನೆ ತಾ ೩-೧೦-೩೦ನೇ ಗುರುವಾರ ವಿಜಯ ದಶಮಿ ಪುಣ್ಯದಿನದಲ್ಲಿ ರಾತ್ರೆ ಸುಮಾರು ೭॥ ಘಂಟೆಗೆ "ಶ್ರೀ ಶಾರದಾ ಪೂಜೆಯ ಕಂಜಿತ್ ರೂಪದಲ್ಲಿ ಜರಗಿಸಲ್ಪಟ್ಟಿತು. ಊರಿನ ಹಲಕೆಲವು ಗೃಹಸ್ಥರೂ ಸರಕಾರಿ ಉದ್ಯೋಗಸ್ಥರೂ ದಯಮಾಡಿಸಿದ್ದರು. ವಿದ್ಯಾಭಿಮಾನಿ ದೇವತೆಯಾದ ಶ್ರೀ ಸರಸ್ವತೀ ದೇವಿಯು ವರವು ಮನೋಹರವಾಗಿ ಶೃಂಗರಿಸಲ್ಪಟ್ಟು ಒಂದು ಮಂಟಪದೊಳಗೆ ಇರಿಸಲಾಯಿತು. ಪ್ರಥಮದಲ್ಲಿ ಶಾಲಾ ಮುಖ್ಯೋಪಾಧ್ಯಾಯ ಎಂ. ವಿ ಭೋಜರಾಯರು ಇಂದಿನ ದಿನದ ಮಹತ್ತ್ವಿಕೆಯನ್ನು ತಿಳಿಯಪಡಿಸಿ ನೆರೆದು ಬಂದ ಮಹನೀಯರಿಗೆ ಕೃತಜ್ಞತಾಭಾವವನ್ನು ಸೂಚಿಸಿ ಸ್ವಲ್ಪ ಹೊತ್ತು ಮಾತಾಡಿದರು. ನಂತರ ಶಾಲಾ ಬಾಲಕರು ಶ್ರೀ ದೇವತಾ ಪ್ರಾರ್ಥನೆಯನ್ನು ಮಾಡಿಯಾಗಲು ಶ್ರೀದೇವಿ ದೇವಿಯನ್ನು ಷೋಡಶೋಪಚಾರಗಳಿಂದ ಪೂಜಿಸಿ ಮಂಗಳಾರತಿಯನ್ನು ಬೆಳಗಲು ಶಾಲಾ ಉತ್ಕರ್ಷಕ್ಕಾಗಿಯೂ ವಿದ್ಯಾರ್ಥಿಗಳ ಅಭ್ಯುದಯಕ್ಕಾಗಿಯೂ ಮನಸಾ ಪ್ರಾರ್ಥಿಸಲಾಯಿತು. ನಂತರ ಕೂಡಿ ಬಂದ ಸವಸ್ತರಿಗೂ ಸಂತ ಕಚ್ಚಾಯವನ್ನು ಹಂಚಿಯಾಗಲು ಅಂದಿನ ಪೂಜಾ ವಿಧಿಗಳು ಯಥಾಸಾಂಗವಾಗಿ ಅಂತ್ಯಗೊಂಡವು.

**ಫರಂಗಿಪೇಟೆ:** — ಯಾವತ್ತು ಪೂರ್ವಕ ಶ್ರೀ ರಾಮಾಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕಾಲಂಪ್ರತಿ ನವರಾತ್ರಿ ಸಮಯ ಜರಗತಕ್ಕ ಶಾರದಾ ಪೂಜಾ ಸಮಾರಂಭವು ತಾ ೨೯ನೇ ಸೋಮವಾರ ಪ್ರಾರಂಭವಾಗಿ ತಾ. ೨ನೇ ಗುರುವಾರ ಕೊನೆಗೊಂಡಿತು. ಪ್ರತಿನಿತ್ಯ ವಿದ್ಯಾರ್ಥಿಗಳ ಗಾಯನ ಭಜನೆಗಳಿಂದ ಪೂಜೆಗಳು ನೆರವೇರಿಸಲ್ಪಟ್ಟವು. ವಿಶೇಷವಾಗಿ ಬುಧವಾರ ರಾತ್ರಿ ಉಭಯ ಭಾಷಾಕವಿಗಳಾದ ಶ್ರೀ ಬನಶಟ್ಟಿಲ ಪರಮೇಶ್ವರಯ್ಯನವರ ನವರಸಭರಿತವಾದ ನವೀನ ಸುರಸ ಪದ್ಯಗಳ ನೊಡಗೂಡಿದ ಹರಿಕಥಾ ಕಾಲಕ್ಷೇಪವು ಬುದ್ಧಿ ಬೋಧಪರವೂ ಆಹ್ಲಾದಕರವೂ ಆಗಿತ್ತು. ಗುರುವಾರ ಸಾಯಂಕಾಲ ಶಾಲೆಗೆ ಸಂಬಂಧಪಟ್ಟ ಶ್ರೀ ರಾವಸಾಹೇಬ್ ಸ್ಮಿತ್ ರವರ ಮತ್ತು ಶಾಲಾ ಮಕ್ಕಳ ವಿನೋದಕರ ಆಟಗಳು (Camp fire) ನಡೆದು ರಾತ್ರಿ ೧೦ ಘಂಟೆಗೆ ಮಹಾ ಪೂಜೆಯಾಗಿ ಮಕ್ಕಳಿಗೂ ನೆರೆದ ಸಭಿಕರಿಗೂ ಪ್ರಸಾದ ಹಂಚಿದ ಬಳಿಕ ಶಾರದಾ ವಿಸರ್ಜನೆಯಾಗಿ ಸಮಾರಂಭವು ಕೊನೆಗೊಂಡಿತು.

**ಸುಳ್ಯ:** - ಇಲ್ಲಿಯ ತಾಲೂಕು ಬೋರ್ಡು ಶಾಲೆಯಲ್ಲಿ ತಾ ೨೮-೧೦-೩೦ನೇ ಶುಕ್ರವಾರ ರಾತ್ರೆ ಘಂಟೆ ೮ರ ಸಮಯಕ್ಕೆ ಖಿರಾನ್ ಶರೀಫ ಸವಿಸ್ತಾರವಾಗಿ ತಿಳಿಸಲಿಕ್ಕಿರುವುದರಿಂದ ಎಲ್ಲಾ ಮತಬಾಂಧವರೂ ಇತರರು ಬರಬೇಕಾಗಿ ಅಪೇಕ್ಷೆ.

ಸಹಕಾರ ಸಂಘದ ಮಹಾ ಸಭೆಯು ಬಹು ವಿಜೃಂಭಣೆಯಿಂದ ಸಹ್ಯ ವಾಚಕ ಮಂದಿರದಲ್ಲಿ ನಿಯಮಿತವಾಗಿ ಜರಗಿಯದೆ. ಬಾಲ್ಯ ಮಾಡುವಕ್ಕೆ ಈ ಕೆಳಗಿನವರನ್ನು ಪಂಚಾಯಿತ ಮೆಂಬರರನ್ನಾಗಿ ಆರಿಸಿಯದೆ. ಮು ರಾ ರಾ ಗಳಾದ ಬಿ ಜನಾರ್ಧನ ನ್ಯಾಕ, ಹಸೀಫ್ ಸ್ಯಾಬ್, ಯು ಶಿವರಾವ್, ಎ ಎ ಮಾಸ್ತರ, ಕೆ ಈಶ್ವರಪ್ಪಯ್ಯ, ಕೆ ಶೇಷಪ್ಪಯ್ಯ ಮತ್ತು ಬಿ. ನಾರಾಯಣ ಭಟ್ಟ. ಇಲ್ಲಿಯ ಕೋ-ಒಪರೇಟಿವ್ ಯೂನಿಯನ್ ಮಹಾ ಸಭೆಯು ತಾ ೧೧-೧೦-೩೦ನೇ ಶನಿವಾರ ಹಗಲು ಘಂಟೆ ೩ರ ಸಮಯ ಸಹ್ಯ ವಾಚಕ ಮಂದಿರದಲ್ಲಿ ಜರಗಲಿಕ್ಕಿರುವದು.

ಬೆಳೆ ಕಟಾವಿಗೆ ಶುರುಮಾಡಿಯದೆ. ಅಕ್ಕಿ ಕ್ರಯವು ಇನ್ನೂ ಕಮ್ಮಿ ಇದ್ದರೆ ಬಡವರು ಬದುಕುತ್ತಿದ್ದರು.

ಶಾಲಿವಾಹನಶಕ ೧೮೫೨ನೆಯ ಪ್ರಮೋದ, ಸಂ॥ ಆಶ್ವೀಜ ಬ॥ ೪ ಶನಿವಾರದಿಂದ ಪ್ರಮೋ. ಸಂ॥ರದ ಆಶ್ವೀಜ ಬ॥ ೧೦ ಶುಕ್ರವಾರದ ವರೆಗಿನ ಪಂಚಾಂಗ.

(ಗ್ರಾಂಶನಿಯು ಕನ್ಯಾ—ಸಿಸ್ಟಾರಲ)

| ತಾರೀಕು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | ಸೂರ್ಯನಕ್ಷತ್ರ | ಸೂರ್ಯ ಉ | ಸೂರ್ಯ ಅಸ್ತ |
|---|---|---|---|---|---|---|---|---|
| 11 | ಶನಿ | ೪ | ೪೯ ೨ | ಕೃತ್ತಿಕಾ | ೩೭ ೮ | ೩೩ | 6 22 | 6 14 |
| 12 | ರವಿ | ೫ | ೪೬ ೧೪ | ರೋಹಿಣಿ | ೩೩ ೧೪ | ೨೬ | 6 22 | 6 13 |
| 13 | ಸೋಮ | ೬ | ೪೨ ೩೦ | ಮೃಗಶಿರಾ | ೩೪ ೩೦ | ೨೬ | 6 22 | 6 13 |
| 14 | ಮಂಗಳ | ೭ | ೩೮ ೦ | ಆರ್ದ್ರಾ | ೩೧ ೪೬ | ೨೮ | 6 22 | 6 12 |
| 15 | ಬುಧ | ೮ | ೩೩ ೪೬ | ಪುನರ್ವಸು | ೨೮ ೩೦ | [illegible] | 6 23 | 6 12 |
| 16 | ಗುರು | ೯ | ೨೭ ೧೪ | ಪುಷ್ಯಾ | ೨೯ ೪೪ | ೩೦ | 6 23 | 6 11 |
| 17 | ಶುಕ್ರ | ೧೦ | ೨೧ ೧೬ | ಆಶ್ಲೇಷಾ | ೨೦ ೪೬ | ೩೧ | 6 23 | 6 11 |

## ಮಂಗಳೂರಿನ ವಾಯುಸ್ಥಿತಿ.

| ತಾರೀಕು Date | Temperature. ಉಷ್ಣ (ಕಾವು) Maximum ಹೆಚ್ಚಾದದ್ದು | | Rainfall ಮಳೆ ದಿನದ ಮಳೆ | ಜಮಲೆಯ ಮಳೆ |
|---|---|---|---|---|
| | Max mum ಹೆಚ್ಚಾದದ್ದು | Minimum ಕಡಿಮೆ | ದಿನದ ಮಳೆ | ಜಮಲೆಯ ಮಳೆ |
| 19 | 85— 1 | 74— 2 | 0—08 | — |
| 20 | 85— 3 | 74— 5 | 1—09 | — |
| 21 | 83— 4 | 74— 9 | 0—69 | — |
| 22 | 85— 7 | 74— 8 | 0— 03 | — |
| 23 | 87— 3 | 73— 4 | 0—19 | — |
| 24 | 86— 5 | 72 2 | — | — |
| 25 | 85— 7 | 72— 8 | 0—10 | 201 49 |

## ಮಂಗಳೂರಿನ ಪೇಟೆ ಧಾರಣೆ.

| ಜಿನಸು | ಇಂದ ರೂ | ಇಂದ ಆ | ವರೆಗೆ ರೂ. | ವರೆಗೆ ಆ |
|---|---|---|---|---|
| | [illegible] | 1[illegible] | [illegible] | 6 |
| ಮಸ್ತಿ | 7 | 10 | 5 | |
| ಗುಡ್ಡ | [illegible] | 0 | 7 | 14 |
| ರಾಶಿ | 7 | 8 | 8 | 1[illegible] |
| ಊರ ಅವ್ವಲ್ ಬೆಲ್ಲಗೆ | 12 | 0 | 14 | 8 |
| ಬಂಗಾಳ ಬೆಲ್ಲಗೆ ಗೋಣಿ ೧ಕ್ಕೆ | [illegible] | 0 | [illegible] | 12 |
| ಸಂಗ್ರ | 6 | 12 | [illegible] | 0 |
| ಎಂತ್ರದಬೆಲ್ಲಗೆ ಮುಡಿ ೧ಕ್ಕೆ | 11 | | 18 | 0 |
| ಗೋದಿ ಗೋಣಿ ೧ಕ್ಕೆ | [illegible] | 4 | 7 | 0 |
| ಜುರಾಳ ಗೋಣಿ ೧ಕ್ಕೆ | 12 | 8 | 15 | 8 |
| ಕಡಲೆ ಗೋಣಿ ೧ಕ್ಕೆ | 13 | 0 | 15 | 0 |
| ತೊಗರಿ ಗೋಣಿ ೧ಕ್ಕೆ | 15 | 8 | 25 | 0 |
| ತೊಗರಿಬೇಳೆ ಗೋಣಿ ೧ಕ್ಕೆ | 14 | 0 | 15 | 6 |
| ಉದ್ದು ಗೋಣಿ ೧ಕ್ಕೆ | 14 | 8 | — | |
| ಹೆಸರು ಗೋಣಿ ೧ಕ್ಕೆ | 52 | 8 | 56 | [illegible] |
| ಊರು ಬೆಲ್ಲ ಖಂಡಿ ೧ಕ್ಕೆ | 4 | 10 | 5 | [illegible] |
| ಉಪ್ಪು ಗೋಣಿ ೧ಕ್ಕೆ | 70 | 0 | [illegible]5 | |
| ಬೊಬ್ರಿ ಖಂಡಿ ೧ಕ್ಕೆ | 2[illegible] | | 32 | 8 |
| ಹೊಬ್ರಿ ಹಿಂಡಿ ಖಂಡಿ ೧ಕ್ಕೆ | 3[illegible] | [illegible] | 30 | 0 |
| ಎಳ್ಳಿಂಡಿ ಖಂಡಿ ೧ಕ್ಕೆ | 5 | 5 | 5 | 4 |
| ಹೊಬ್ರಿ ಎಣ್ಣೆ ಮುಡಿ ೧ಕ್ಕೆ | 7 | 0 | 7 | 5 |
| ಎಳ್ಳೆಣ್ಣೆ ಮುಡಿ ೧ಕ್ಕೆ | 4 | 7 | 8 | 12 |
| ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ | 3 | 6 | 3 | 8 |
| ಮೋರಿಸ ಸಕ್ಕರೆ ಮುಡಿ ೧ಕ್ಕೆ | 5 | 4 | 7 | [illegible] |
| ಹೊಸ ಮೆಣಸು | 8 | 0 | 8 | 4 |
| ಹಾಸಿನ ಮುಡಿ ೧ಕ್ಕೆ | 2 | 8 | 3 | 12 |
| ಕೊತ್ತುಂಬರಿ ಮುಡಿ ೧ಕ್ಕೆ | 1[illegible] | [illegible] | 200 | [illegible] |
| ನೇಟಿವ್ ಕಾಫಿ ಖಂಡಿ ೧ಕ್ಕೆ | 2[illegible] | 0 | — | |
| ಕಾಳುಮೆಣಸು ಖಂಡಿ ೧ಕ್ಕೆ | 32 | 0 | — | |
| ಯೇಲಕ್ಕಿ ಮುಡಿ ೧ಕ್ಕೆ | 4 | [illegible] | [illegible] | 4 |
| ಗೇರುಬೀಜ ಮುಡಿ ೧ಕ್ಕೆ | 42 | 8 | 4[illegible] | 0 |
| ಕಲ್ಲಿದ್ದಲು ಖಂಡಿ ೧ಕ್ಕೆ | 4 | 8 | 14 | 10 |
| ಕಾಂಮ್ರು ತಗಡು ಮುಡಿ ೧ಕ್ಕೆ | 22 | 0 | 23 | 0 |
| ಕಾಂಮ್ರು ಪಾತ್ರಗಳು ಮುಡಿ ೧ಕ್ಕೆ | 12 | 4 | 12 | 6 |
| ಜಾನುವಾರು ಸೀರು ೧ಕ್ಕೆ | 13 | 0 | 13 | 4 |
| ಹಿತ್ತಾಳೆ ತಗಡು ಮುಡಿ ೧ಕ್ಕೆ | 13 | 9-6 | — | |
| ಸತುವು ೧ಕ್ಕೆ | 37 | 8 | 48 | 12 |
| ಮುಸ್ಸಿಡಾರ ಖಂಡಿ ೧ಕ್ಕೆ | 230 | | — | |
| ಪ್ಲಾಂಟರ ಕಾಫಿ ಖಂಡಿ ೧ಕ್ಕೆ | 85 | | 120 | |
| ಹೊಸ ಅಡಕೆ | 100 | | 120 | |
| ಹಳೆ ಅಡಕೆ | | | | |


# Chikmagalur Public Conveyance Motor Service.

CHIKMAGALUR.

# ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಒಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M. Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಗುರುವಾಯನಕರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

## ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ, ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗ ದಿ 1 30ಕ್ಕೂ, ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟ್ಯಾಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮುಲದ್ವಾರು ಕನ್ನನ್ನೂರು ಪ್ರಾಂತಗಳಿಗೂ ಆಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10 30ಕ್ಕೆ ಬೆಳ್ತಂಗಡಿಗೂ 11 ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೂ, 12 ಗಂಟೆಗೆ ಚಾರ್ಮಾಡಿಗೂ, 12-30ಕ್ಕೆ ಮೈಸೂರು ಗಡಿಗೂ, ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಸುಮಾರು 4 ಗಂಟೆಗೆ ಮೂಡಗೆರೆಗೂ, 5 ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡ್ರಾಪೂರ ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ ಪೂನಾ, ವಗೈರೆ ಪ್ರಾಂತಗಳಿಗ ಹೋಗತಕ್ಕ ಪ್ಯಾಸೆಂಜರುಗಳಿಗ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ ಎನ್ ಹನುಮಂತಪ್ಪ, ಫ್ಯಾರಡೂನ್ ಸೊರಾಬ್, ಕೆ ಸೂರಪ್ಪ ಶೆಟ್ಟಿ

ಪ್ರೊ ಪ್ರೈಟರ‍್ಸ

ಘಾಟಿಯಲ್ಲಿಯೂ ಕೂಡ ಸಿ ಪಿ ಸಿ ಕಂಪೆನಿಯವರ ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

# THE CANARA PUBLIC CONVEYANCE CO., LTD, MANGALORE.

(ESTABLISHED 1914)

# ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

## ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು, ಮತ್ತು ಉತ್ತರ ಹಿಂದುಸ್ತಾನಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ ಕಂಠವಳ ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸ ಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉನ್ನತವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

## ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಷೇತ್ರಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಲಬಾರು, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನೇಕ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಚಾರ್ಮಾಡಿ ಮಾರ್ಗವಾಗಿ ಚಿಕ್ಕಮಗಳೂರಿಗೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

**Secretary,**

*The Canara Public Conveyance Co., Ltd., Mangalore.*

# ವಿವಿಧ ಸಮಾಚಾರಗಳು.

## ಲಾರ್ಡ್ ಇರ್ವಿನರು ತಮ್ಮ ಬಹುಮಾನ ಪಟ್ಟಿ ಹುಗ್ಗಿಗೆ ರಾಜಿನಾಮೆ ಕೊಡುವರೇನು?

ಎಂಬ ವರ್ತಮಾನವು ಡಿಲ್ಲಿಯಲ್ಲಿ ಪ್ರಬಲ ಪ್ರಚಾರವಲ್ಲಿತ್ತು. ಬಿಟ್ಟು ಹೋದಲು, ಅವರು ತಮ್ಮ ಅವಧಿಯು ಪೂರೈಯಾಗುವ ವರೆಗೆ ತನಗಿರುವ ಉದ್ಯೋಗದಲ್ಲಿ ಕುಳಿತಿರಬೇಕಾದ ಅವಶ್ಯಕತೆ ಇರುವುದಿಲ್ಲ ವೆಂತಲೂ, ಆ ಮೇಲೆ ಇಂಗ್ಲಾಂಡಿಗೆ ಹೋಗಿ ಪಾರ್ಲಿಮೆಂಟಿನ ಕಾರ್ಯಕಲಾಪಗಳಲ್ಲಿ ಭಾಗಿಗಳಾಗಲಿಕ್ಕಿರುವರೆಂತಲೂ ತಿಳಿದು ಬರುತ್ತದೆ. ಮುಂದಿನ ವ್ಯಾಸರಾಯರ ಚುನಾವಣೆಯು ಶೀಘ್ರದಲ್ಲೇ ಆಗಲಿಕ್ಕಿರುವದು.

* * *

## ಶೌಕತಾಲಿಯವರ ಸಿಂಹನಾದ.

'ಬಿಹಾರದ ಶಿಕ್ಷೆ ಆದ್ಯಯಾದರೆ ನಾನು ಜವಾಬ್ದಾರನಲ್ಲ.'

ಎಂದು ಶೌಕತಾಲಿಯವರು ಮುಂಬಾಯಿಯ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಪ್ರತಿನಿಧಿಗಳೊಬ್ಬರಿಗೆ ಭೇಟಿ ಕೊಡುವ ಸಂದರ್ಭದಲ್ಲಿ ತಿಳಿಸಿರುವರು. ಮಹಮ್ಮದೀಯರು ಇರುವ ಕಾಪುಗಳಲ್ಲಿ ಕಾಂಗ್ರೆಸ್ ಮುಸಲ್ಮಾನರ, ಶೌಕತಾಲಿಯವರು ಹೇಳುವಂತೆ, ಸಭೆ ಸೇರಿ, ಅಲ್ಲಿಯವರ ಸಾಗಾ ಕೊಡುವಂತೆ ಮಾಡಿದ್ದನೇ ಅವರನ್ನು ಪ್ರೇರಿಸಲ್ಪಟ್ಟ ಅಭಿಪ್ರಾಯವನ್ನು ಬಹು ಪತ್ರಿಕೆಯು ಬರೆದಿರುವುದು. ತಿಳಿಸಿ ಅವರಿಗೆ ಯಾವ ಬಗೆಯ ಪಕ್ಕ ಯಾತ್ರೆ ಇರುವುದಿಲ್ಲವಾಗಿಯೂ, ಅಂತೆಯೇ ಅವರು ಮೇಜನ ಸಮ್ಮೇಳನದಲ್ಲಿ ಪ್ರತ್ಯೇಕ ೨೦೦ ಜನರು. ಭೇದಾ ಭೇದಗಳನ್ನು ಕಲ್ಪಿಸಿ ಐಕ್ಯತೆಯನ್ನು ಮುರಿದಿರುವರಾಗಿಯೂ ತಿಳಿದುಬರುವುದರಿಂದ, ಈ ಕಿರಿಯ ಕಾಂಗ್ರೆಸ್ ಮುಸಲ್ಮಾನರು ಮೆರವಣಿಗೆ ಪತ್ರಿಕೆಗಳನ್ನು ನಡಿಸಿ ಮುಖ್ಯ ಮಹಮ್ಮದೀಯರನ್ನು ತಡೆ ಗಟ್ಟಿದರೆ ಶೌಕತಾಲಿಯವರು ಅವರ ಅನುಯಾಯಿಗಳ ಕೂಡ ಸರ್ವರೀತಿಯನ್ನು ಹಸ್ತಾಕ್ಷಗಿ ಬೀಳ ವಿಘಗಳಿಂದ ಪ್ರತಿಬಂಧಿಸುವರು. ಇಂತಹ ಸಂದರ್ಭದಲ್ಲಿ ಏನಾದರೂ ಶಿಕ್ಷೆ ಆದ್ಯಯಾದರೆ ವರ್ತಮಾನಪತ್ರಿಕೆ ಪತ್ರಿಕೆಗಳು ನಡೆದ ಅನಾಹುತಗಳಿಗೆ ಅವರು ಜವಾಬ್ದಾರರಲ್ಲವಂತೆ!!

* * *

## ಬಾರ್ಡೋಲಿ ರೈತರು ಕಂದಾಯ ಸತ್ಯಾಗ್ರಹದ ಪರಿಣಾಮವಾಗಿ ಊರನ್ನೇ ಬಿಡುವರಂತೆ!

ಬಾರ್ಡೋಲಿ ರೈತರ ಮೂಡಿದ ಕರನಿರಾಕರಣ ಸತ್ಯಾಗ್ರಹವು ದಿನೇ ದಿನೇ ಪ್ರವರ್ಧಮಾನವಾಗುತ್ತಿರುವದು. ಇದರಲ್ಲಿ ಈ ವಿಷಯದ ಉತ್ಸಾಹವು ತುಂಬಿ ತುಳುಕಾಡುತ್ತಿರುವದು. ಮಹಾತ್ಮಾ ಗಾಂಧಿ ಮತ್ತು ಸರದಾರ್ ವಲ್ಲಭಭಾಯಿ ಪಟೇಲರು ಅಲ್ಲಾ ಶಿಬಿರವನಕ್ ಹಾಕು ಸರಕಾರ್ಕೆಂಡರೆ ಕಂದಾಯ ಕೊಡದಿರಬೇಕೆಂದು. ಬಾರ್ಡೋಲಿಯ ಜನರು ಪಟ್ಟ ಯೋಗವನ್ನು ಕೈ ಕೊಂಡಿರುವರು. ಮಹಾತ್ಮರಲ್ಲದೆ ಸರಕಾರವು ಕಂದಾಯ ವಸೂಲಿಗಾಗಿ ಜನರಿಗೆ ಕೊಡುತ್ತಿರುವ ಉಪಟಳಗಳ ಹಾವಳಿಯು ಊರ ಜನರಿಗೆ ದೊಡ್ಡದೊಂದು ಉಪದ್ರವವನ್ನು ಮಾಡಿರುವಂತೆ ತೋರುತ್ತದೆ. ರೈತರನ್ನು ಒಂದು ಪ್ರಕಾರವಾಗಿಯೇ ಊರು ಬಿಡಲು ಪ್ರಯತ್ನಿಸುತ್ತಿರುವರು. ಕೆಲವರು ಅವರವರ ಚರಿಸೊತ್ತುಗಳನ್ನು ಹಾಗೆ ಎಲ್ಲ ಪ್ರಯತ್ನದಲ್ಲೇ ನಿರತರಾಗಿರುವರು. ಅನೇಕರು ತಮ್ಮ ಚರಸೊತ್ತುಗಳನ್ನು ಈ ಕ್ಷೇತ್ರದಲ್ಲೇ ಸಾಗಿಸಿ ವರಿಂದ ಸಂಸಾರವಂತ ಜನರು ಹಲವು ಮಂದಿ ಊರನ್ನು ಬಿಟ್ಟಿರುವರು. ಇದು ವರೆಗೆ ಇಂತಹ ಜನರ ಅನೇಕರು ಹೋಗಿರುವರೆಂದು ತಿಳಿದು ಬರುವದು. ಹೀಗೆ ಹೋಗುವವರು ಪರರ ಬಾರ್ಡೋಲಿಗೇ ಬರುವರೋ ಇಲ್ಲವೋ ಎಂಬ ಅವರ ಮನೋನಿರ್ಧಾರವು ಇನ್ನೂ ತಿಳಿದು ಬರುವುದಿಲ್ಲ. ಹಾಗೂ ಪರಿಣಾಮ ಸಂಶಯದ ಮುಂದೆ ಏನೆಂಬ ಮಾತ್ರ ಧ್ಯೇಯದಿಂದ ಹೂಡಲ್ಪಟ್ಟ ಕರನಿರಾಕರಣ ಸತ್ಯಾಗ್ರಹವು ಬಾರ್ಡೋಲಿಯಲ್ಲಿ ಬಹಳ ಯಶಸ್ವಿಯಾಗಿ ಮುಂದರಿಯುತ್ತಿರುವದು.

* * *

## ಚಿನ್ನ ಬೆಳ್ಳಿ ಕೂಡಿಡುವವರಿಗೂ ಸರಕಾರವು ಶಿಕ್ಷಿಸುವುದೆ?

ರಷ್ಯಾ ಸರಕಾರವು ಆ ಊರಲ್ಲಿ ಚಿನ್ನ ಬೆಳ್ಳಿಯನ್ನು ಕೂಡಿರಿಸುವ ಜನರನ್ನು ಶಿಕ್ಷೆಗೆ ಗುರಿಪಡಿಸುತ್ತಲಿದೆ. ಆ ಜನಗಳು ದೊಡ್ಡ ಗವರ್ನಮೆಂಟನ್ನು ತಲೆ ಕೆಳಗೆ ಮಾಡುವಷ್ಟು ಪ್ರಸಕ್ತ ಉಳ್ಳವರಿರುವರೆಂತ ಈ ಕುರಿತು ಸರಕಾರದವರು ಆ ಪದ್ಧತಿಯನ್ನು ನಿರ್ಮೂಲ ಮಾಡಿ ಕೊಂಡಿರುವರು. ಅದು ತಪ್ಪಿಗಾಗಿ ಇಂಥ ಜನಗಳಿಗೆ ಶಿಕ್ಷಾ ಶಾಸನವು ವಿಧಿಸೋಣಾಗಿದೆ.

* * *

## ಚಕ್ರಿಯ ಮೇಲೆ ಮೆರವಣಿಗೆ ನಡೆಸಿದರು!

ರಾಜ ಬಿಸ್ತ್ರಿರು ಕಾಹಿತರು ಹೋರಾತ್ರ್ಯ ಗಸ್ತಿರು—ಈ ಊರ ಪ್ರಿಯಾ ಕೌನ್ಸಿಲು ಚುನಾವಣೆಯು ನಡೆಯಿತು. ಈ ಸಂದರ್ಭದಲ್ಲಿ ಸ್ವಾಲಿಗೆಗಳಲ್ಲ ರಜೆ, ಆಫೀಸಗಳು ಮುಚ್ಚಲ್ಪಟ್ಟಿವೆ, ಸರ್ವಸಾಧಾರಣ ಜನರಿಗೂ ಆ ಚುನಾವಣೆಯ ಫಲಿತಾಂಶವನ್ನು ತಿಳಿಯುವುದಕ್ಕಾಗಿ ಉತ್ಸಾಹಿಗಳಾಗಿದ್ದರು. ಆದರೆ ಚುನಾವಣೆಯ ವೇಳೆಯಲ್ಲಿ ಆದ ದೃಶ್ಯವೇ ಮನರಂಜಕವಾಗಿತ್ತು! ಸಾಯಂಕಾಲ ಮಹಾಸಭೆ, ಆ ಸಭೆಯ ಸಭಿಕರು ಪರಸ್ಪರ ಬಹಿಷ್ಕಾರದ ಗೊಂಬೆಯೊಂದನ್ನು ಮಾಡಿ ಪಲಕಿಯಲ್ಲಿ ಕುಳ್ಳಿರಿಸಿ ಅಲಂಕರಿಸಲ್ಪಟ್ಟ ಚಕ್ರಿಯ ಮೇಲೆ ಕೊಂಡೊಯ್ದು ನಗರ ಮೆರವಣಿಗೆಯನ್ನು ಮಾಡಿದರು. ಕೊನೆಗೆ ಆ ಗೊಂಬೆಯನ್ನು ಬೆಂಕಿ ಕೊಟ್ಟು ಸುಟ್ಟು ಹಾಕಿದರು. ಈ ರೀತಿಯಿಂದ ಚುನಾವಣೆಯು ಅಂತ್ಯ ಹೊಂದಿತಂತೆ!

## ಕೊಲೆಪಾತಕಿಗಳು ಆತ್ಮಹತ್ಯೆ ಮಾಡಿಕೊಳ್ಳಬಹುದೇ?

ಮರಣ ದಂಡನೆ ವಿಧಿಸಲ್ಪಟ್ಟವರ ಮರಣ ಶಿಕ್ಷೆಯನ್ನು ತೆಗೆದುಹಾಕಬೇಕೆಂಬವಾಗಿ ಇಂಗ್ಲಾಂಡಿನಲ್ಲಿ ಹಲವು ವಿಧದ ಚರ್ಚೆಗಳು ನಡೆಯುತ್ತಿವೆ. ಜನರು ಹಲವು ಅಭಿಪ್ರಾಯಗಳನ್ನು ಸೂಚಿಸುತ್ತಲೇ ಇರುವರು. ಇವರಲ್ಲಿ ಡೀನ್ ಇಂಜಿಯವರೊಬ್ಬರು ತನ್ನ ಅಭಿಮತವನ್ನು ಹೀಗೆ ಹೇಳುವರು—ಮರಣ ದಂಡನೆ ವಿಧಿಸಲ್ಪಟ್ಟವನಿಗೆ ಯಾವ ರೀತಿಯಲ್ಲಿ ಪ್ರಾಣ ಕಳಕೊಳ್ಳುವಿರಿ ಎಂದು ವಿಚಾರ ಮಾಡಲಿಕ್ಕೆ ಬಿಟ್ಟುಬಿಡ ಬೇಕಂತೆ! ಜರ್ಮನಿ ನಾರ್ವೆ ಮೊದಲಾದ ದೇಶಗಳಲ್ಲಿ—ಚೈನಾದಲ್ಲಿ ಮರಣ ದಂಡನೆಗೆ ಗುರಿಯಾದ ಮನುಷ್ಯನು ಉಪವಾಸಾದಿಗಳನ್ನು ಮಾಡಿ ಪ್ರಾಣ ಕಳಕೊಳ್ಳುತ್ತಿದ್ದನು. ಆತ್ಮಹತ್ಯೆ ಮಾಡಿಕೊಳ್ಳುವ ಕೊಲೆಪಾತಕಿಯು ಬಹಳ ಜನರಿಂದ ಕಾರಣ—ಅವನು ಅವನಿಂದಾಗಿ ಇನ್ನೊಬ್ಬನ ಗುಟ್ಟು ಗುಟ್ಟಾಗಿ ಕೊಂದಿರುವುದನ್ನು ನೀಗಾಡಿಸುತ್ತಾನೆ. ಮರಣ ದಂಡನೆಯಾದವನಿಗೆ ವಿಷದ ಮೂಲಕ ಆತ್ಮಹತ್ಯೆಯ ಸಾಧನಗಳನ್ನು ಕಲ್ಪಿಸುವುದು ಉಚಿತ—ಎಂದು ನೇರವಾಗಿ ತನ್ನ ಅಭಿಪ್ರಾಯಗಳನ್ನು ಕೊಟ್ಟಿರುವರು.

* * *

## ಮೆಂಚೆಸ್ಟರಿನಲ್ಲಿ ಶ್ರೀನಿವಾಸ ಶಾಸ್ತ್ರಿಗಳು

Except by special arrangement, no interest is allowed on sums exceeding Rs 10,000/ in the case of Head Office and Bombay & Cochin Branches and on sums exceeding Rs 3 000/ in the case of the remaining Branches

Short notice deposits requiring one week's notice of withdrawal given at any time after one month from the date of deposit are received and interest allowed at 4% per annum Interest on such deposits will cease on notice

*For further particulars please apply to —*

Canara Bank Ltd,
*Mangalore, 13—10—1930*

***K. Venkat Rao,***
*Secretary.*



# The Pangal Nayak Bank, Ltd.

**Branch Office Mangalore** | **Head Office. Udipi** *Established 1920.* | **Agency Office Cochin**

| | |
|---|---|
| Authorised Capital. Rs. 2,00,000- | Paid up Capital. Rs- 1,75,000- |
| Issued Capital Rs 1,75,000- | Reserve and other Funds Rs 1,42,810- |

***Fixed Deposits received for***
***24 months at 6¼***
***12, 15, 18 or 21 months at 6***
***6 or 9 months at 5½***
***3 months at 5***

***Interest being payable every 3 months.***

Current Deposit Accounts are opened free of charge on interest allowed on Daily balances

*Further information may be had on application to the* Secretary *at the* Head Office *or to the* Agent *at the* Branch.

Office of the Bank }
Udipi 6—10—1930 }

P. Laxman Nayak,
Secretary



## "ಗ್ರೇಂಡ್ ಕ್ಲಿಯರೆನ್ಸ ಸೇಲ್"!

ಬರೀ ಮೂರು ರೂಪಾಯಿಗಳ ವ್ಯಾಪಾರದಿಂದ 824 ಅಮೂಲ್ಯವಾದ ಪಾರಿತೋಷಕಗಳು! ನಮ್ಮ ಸುಗಂಧ ಪೂರಿತವಾದ 'ಒಟ್ಟೋ' ಮೋತಿಯಾ ತೈಲದ ಆರು ಬಾಟ್ಲಿಗಳನ್ನು ಒಮ್ಮೆಗೆನೇ ಕೊಂಡುಕೊಳ್ಳುವವರಿಗೆ ಈ ಕೆಳಗೆ ನಮೂದಿಸಿರುವ ೩೨೪ ಅಮೂಲ್ಯ ಬಹುಮಾನಗಳು ಉಚಿತವಾಗಿ ಕೊಡಲಾಗುವವು!



[illegible]

ಮೂಲ್ಯ ರೂ. ೩—೦—೦ ಮಾತ್ರ. ಟಪ್ಪಾಲು ಹಾಸಲು ೦—೧೦—೦.

ಪತ್ರವ್ಯವಹಾರವು ಇಂಗ್ಲೀಷಿನಲ್ಲಿಯೇ ಸಾಗಲಿರುವುದು.

ಇಂಡಿಯನ್ ಸ್ಟೋರ್ಸ ಕೋ,

47, ಬೆನಿಯಾಟೋಲಾ ಸ್ಟ್ರೀಟ್, ಪಿ. ಓ., ಹಟ್ಖೋಲಾ, ಕಲ್ಕತ್ತೆ

**INDIAN STORES CO.** 47, Eematola *Street,* Po, Hatkhola CALCUTTA.

# ಮಹಾತ್ಮಾಜಿಯವರ ಸತ್ಯಾಗ್ರಹ ಸಮಾಚಾರ.

**ತಾ. ೭—೧೦—೩೦.**

**ಮುಂಬಾಯಿಯಲ್ಲಿ.**

ಬಹಿಷ್ಕಾರ ಕಮಿಟಿಯವರು ಪಹರೆಯ ಕಾರ್ಯಕಲಾಪಗಳಲ್ಲಿ ನವೀನ ಏರ್ಪಾಡುಗಳನ್ನು ಮಾಡಿರುವರು. ಇದಕ್ಕನುಸಾರವಾಗಿ ಅನೇಕ ವಿದೇಶಿ ವೈದ್ಯಶಾಲೆಗಳು ಪಹರೆ ಮಾಡಲ್ಪಟ್ಟವು. ಬ್ರಿಟಿಷ್ ಔಷಧಿಗಳನ್ನು ಉಪಯೋಗಿಸಕೂಡದೆಂಬುದೇ ಈ ನವೀನ ಏರ್ಪಾಡುಗಳ ಧ್ಯೇಯ ಸೋಲಾಪುರದಲ್ಲಿ ೩ ಮಂದಿ ಪೋಲೀಸಿನವರನ್ನು ಕೊಂದರೆಂದು ೪ ಸತ್ಯಾಗ್ರಹಿಗಳನ್ನು ದಸ್ತಗಿರಿ ಮಾಡಿ ಮುಂಬಾಯಿಯ ಕೋರ್ಟಿನಲ್ಲಿ ತನಖಿ ನಡೆಸುತ್ತಿದ್ದರಷ್ಟೆ! ಅವರ ಮೇಲಣ ತಪ್ಪಿತವು ಮುಂಬಾಯಿ ಹ್ಯಾಕೋರ್ಟಿನಲ್ಲಿ ಸಿಂಧು ಆಗಿರುವದು. ಆದರೆ ಅವರನ್ನು 'ಪ್ರೀವಿ ಕೌನ್ಸಿಲಿಗೆ ಅಪೀಲು ಮಾಡುವರೆ ಸರಕಾರವು ಅಪ್ಪಣೆ ಕೊಟ್ಟಿರುವದು.

ಮುಂಬಾಯಿಯ ಸಮರಸಂಸ್ಥೆಯಲ್ಲಿ ಅನೇಕ ಬದಲಾವಣೆಗಳಾಗಲಿಕ್ಕಿರುವುವೆಂದು ತೋರುತ್ತದೆ ಪಂಡಿತಜೀಯವರ ಆಲೋಚನೆಯ ಬಗ್ಗೆ ಮಸೂರಿಗೆ ತೆರಳಿದ ನರಿಮೋನ್ ಮತ್ತು ಮಿಹಾರ ಅಲಿಯವರು ಮರಳುತ್ತಲೇ ಈ ಬದಲಾವಣೆಗಳು ತಲೆದೋರುವುವೆಂದು ತಿಳಿದುಬರುತ್ತದೆ

ಮಿ| ಜೆ ಎಮ್. ಸೇನ್‌ಗುಪ್ತರು ಮುಂಬಾಯಿಗೆ ಬಂದಿಳಿದಿರುವರು, ರಾಷ್ಟ್ರೀಯ ಸಮರ ಸಂಸ್ಥೆಯ ಸದಸ್ಯರು ಮಿ| ಗುಪ್ತರಿಗೆ ಯೋಗ್ಯ ಪುರಸ್ಕಾರಗಳಿಂದ ಸನ್ಮಾನಿಸಿರುವರು. ಪಂಡಿತಜೀಯವರ ಆಜ್ಞೆಯಂತೆ, ಸೇನ್‌ಗುಪ್ತರ ಪವಿತ್ರ ದೇಶಪ್ರೇಮ ಸ್ಪರ್ಧೆಗಾಗಿ ಘೋಷಿಸಲ್ಪಟ್ಟ ಸತ್ಯಾಗ್ರಹ ಮೆರವಣಿಗೆಯು ನಿಲ್ಲಿಸಲ್ಪಟ್ಟು, ಲಾಹೋರು ಕೊಲೆಯಲ್ಲಿ ಅಪಾದಿತರಾಗಿ' ಮರಣದಂಡನೆಗೆ ಗುರಿಪಟ್ಟ ಭಗತ್‌ಸಿಂಗರ ಶಿಕ್ಷೆಯನ್ನು ನಿರೋಧಿಸುವಂತೆ ಹರತಾಳವು ಆಚರಿಸಲ್ಪಟ್ಟಿತು ಮಿ| ಸೆನ್‌ಗುಪ್ತರು ಆ ಮೇಲೆ ಮುಂಬಾಯಿ ಕಾಂಗ್ರೆಸ್ ಕಾರ್ಯಾಲಯವನ್ನು ಸಂದರ್ಶಿಸಿದರು. ಅಲ್ಲಿ ಸತ್ಯಾಗ್ರಹಿಗಳು ಮಿ| ಗುಪ್ತರೊಡನೆ ದೇಶಭಕ್ತಿಪರವಾದ ಎರಡು ಮಾತುಗಳನ್ನು ಅಪೇಕ್ಷೆಮಾಡಿದರು ಅದಕ್ಕೆ ಸೇನ್‌ಗುಪ್ತರು ತಾನು ಕಳೆದ ೬ ತಿಂಗಳಲ್ಲಿ ಜೈಲಿನೊಳಗೇ ಕಾಲಹರಣ ಮಾಡಿದೆನೆಂತಲೂ, ಆ ಕಾರಣದಿಂದ ತನಗೆ ಬಾಹ್ಯ ಸಮಾಚಾರಗಳ ತಿಳುವಳಿಕೆಯು ಇರುವುದಿಲ್ಲವೆಂತಲೂ ಉತ್ತರ ಕೊಟ್ಟರು. ಅವರು ಬಿಡುಗಡೆಹೊಂದಿದ ಮೇಲೆ ಹೆಚ್ಚು ಕಮ್ಮಿ ಕೆಲವು ಪ್ರಾಂತ್ಯಗಳನ್ನು ಸುತ್ತಿದರು ಈ ಸಂಚಾರದಿಂದ ಅವರು ಹೊಂದಿದ ಲಾಭವೆಂದರೆ – ಸ್ವಾತಂತ್ರ್ಯ ಚಳವಳಿ ಆಂದೋಲನವು ಪ್ರತಿಯೊಂದು ಹಿಂದೂಸ್ಥಾನದ ಹಳ್ಳಿಕಾಡಿನಲ್ಲಿಯೂ ಪ್ರತಿಧ್ವನಿಸುತ್ತಿರುವುದಂತೆ! ಬ್ರಿಟಿಷರು ಎಷ್ಟೇ ಧೈರ್ಯಶಾಲಿಗಳಾದರೂ ಸ್ವಾತಂತ್ರ್ಯ ಚಳವಳವು ಸವಿನಯವಾಗಿರುವದರಿಂದ ಎಂದೂ ಹಿಂದುಳಿಯಲಾರದು—ಎಂದು ಮೊದಲಾಗಿ ಹೇಳಿದರು

**ಅಲ್ಲಹಾಬಾದ್**

'ಅಭ್ಯುದಯ' ಪತ್ರಿಕೆಯ ಸಂಪಾದಕರಾಗಿದ್ದ ಪಂಡಿತ್ ಕೃಷ್ಣಾಕಾಂತ ಮಾಲವೀಯರನ್ನು ಪಿನಲ್‌ಕೋಡ್ ೧೨೪ (ಎ) ಪ್ರಕರಣದ ಮೇಲೆ ೧ ವರುಷದ ಕಠಿಣ ಸಜೆಗೆ ಗುರಿಪಡಿಸಿರುವರು. ಅವರು ಎ ತರಗತಿಯ ಜೈಲಿನಲ್ಲಿರುವಂತೆ ಮ್ಯಾಜಿಸ್ಟ್ರೇಟರು ಅಪ್ಪಣೆಕೊಟ್ಟಿರುವರು. ಇಲ್ಲಿ ಪಹರೆಯ ಕಾರ್ಯಕಲಾಪಗಳಿಂದ ಮುಚ್ಚಲ್ಪಟ್ಟ ವಿಶ್ವವಿದ್ಯಾಲಯವು ತೆರೆದು ಕೆಲಸವು ತೊಡಗಿರುವದು ಪಾಠಗಳು ನಡೆಯಹತ್ತಿವೆ ವಿದ್ಯಾರ್ಥಿಗಳು ತೀರ ಕೊನ್ನ

**ಮೀರತ್.**

ಕಾಂಗ್ರೆಸ್ ಸಮಿತಿಗಳು ಅನ್ಯಾಯ ಸಮಿತಿಗಳೆಂದು ಈ ಮೊದಲೇ ಪರಿಗಣಿಸಲ್ಪಟ್ಟಿವಷ್ಟೆ! ಈ ರೀತಿಯ' ಸರಕಾರದ ದಬ್ಬಾಳಿಕೆಯನ್ನು ಲಕ್ಷಿಸದೆ ಮೀರತದ ಸ್ವಯಂಸೇವಕರು ಸತ್ಯಾಗ್ರಹ ಚಳವಳವನ್ನು ಬಹಳವಾಗಿ ಮುಂದರಿಸುತ್ತಿರುವರು ಪರಿಣಾಮವಾಗಿ ಸಮರಸಂಸ್ಥೆಯ ಡಿಕ್ಟೇಟರರೇ ಮೊದಲಾದ ಸತ್ಯಾಗ್ರಹ ಮುಖಂಡರನ್ನು ದಸ್ತಗಿರಿ ಮಾಡಿ ಯೋಗ್ಯ ಶಿಕ್ಷೆಗಳಿಗೆ ಗುರಿಪಡಿಸುತ್ತಿರುವರು.

**ಗುಜರಾಥಿನಲ್ಲಿ**

ಕರನಿರಾಕರಣ ಚಳವಳವು ಯೋಗ್ಯರೀತಿಯಲ್ಲಿ ಮುಂದರಿಯುತ್ತಿರುವದು. ಸರಕಾರವು ತೆರಿಗೆ ಕೊಡದಿದ್ದುದಕ್ಕಾಗಿ ಜನರ ಆಸ್ತಿ ಪಸ್ತಿರೆ ಸ್ಥಿರಚರ ಸೊತ್ತುಗಳನ್ನು ಸೂರೆ ಮಾಡುತ್ತಿರುವದು.

**ಅಹಮ್ಮದಾಬಾದದಲ್ಲಿ.**

ನಾಗದ್ಯ ಚವಾನಿಯೆಂಬಲ್ಲಿ ಪೋಲೀಸರು ದರೋಡೆ ಮಾಡಿದರು ಅಲ್ಲಿನ ಲ್ಯಾಬ್ರೆರಿಯನ್ನು ಪೋಲೀಸರು ಹೊತ್ತರು; ಅದಕ್ಕೆ ಸಂಬಂಧಪಟ್ಟ ಕೆಲವು ಕಾಗದಪತ್ರಗಳನ್ನು ಹರದು ಹಾಕಿದರು ಚವಾನಿಯ ಮೂರು ಮಂದಿ ಸ್ವಯಂಸೇವಕರನ್ನು ದಸ್ತಗಿರಿ ಮಾಡಿ ಸುಮಾರು ೪ ಮೈಲುಗಳ ಉದ್ದಕ್ಕೆ ನಡೆಸಿ ಆ ಮೇಲೆ ಅವರನ್ನು ಬಿಟ್ಟುಬಿಟ್ಟರು

**ತಾ ೮—೧೦—೩೦**

**ಬನಾರಸಿನ**

ರಾಮನಗರದಲ್ಲಿ ಪೋಲೀಸರು ಒಂದು ಮನೆಯನ್ನು ದರೋಡೆ ಮಾಡಿದರು ಈ ಸಂದರ್ಭದಲ್ಲಿ ೪ ಪಿಸ್ತೂಲುಗಳೂ ಕೆಲವು ತೋಬಗಳೂ ಸಿಕ್ಕಿರುವವು

**ಲಾಹೋರ್**

ಭಗತ್‌ಸಿಂಗರೇ ಮೊದಲಾದವರಿಗೆ ವಿಧಿಸಲ್ಪಟ್ಟ ಮರಣ ದಂಡನೆಯನ್ನು ನಿಷೇಧಿಸಿ ಜನರು ಹರತಾಳವನ್ನಾಚರಿಸಿದರು ಮಾತ್ರವಲ್ಲದೆ ಈ ವಿಷಯದಲ್ಲಿ ಇನ್ನನೇಕ ಊರುಗಳು ಹರತಾಳಗಳಲ್ಲಿ ಭಾಗವಹಿಸಿರುವವು

**ಅಲ್ಲಹಾಬಾದದಲ್ಲಿ**

ಸಂಯುಕ್ತ ಸಂಸ್ಥಾನಗಳ ಸಮರಸಂಸ್ಥೆಯ ಡಿಕ್ಟೇಟರರಾಗಿದ್ದ ಪಂಡಿತ ಸುಂದರಲಾಲರನ್ನು ಜೈಲಿನಿಂದ ಬಿಡುಗಡೆ ಹೊಂದಿಸಿರುವರು

**ತಾ ೯-೧೦—೩೦**

**ಲಾಹೋರ್**

ಮರಣ ದಂಡನೆಗೆ ಗುರಿಪಟ್ಟ ಭಗತ್‌ಸಿಂಗರ ತೀರ್ಪಿನ ಮೇಲೆ ಅವರು ಪ್ರಿವಿ ಕೌನ್ಸಿಲಿಗೆ ಅಪೀಲು ಮಾಡುವರೆಂದು ವದಂತಿ ಈ ಕುರಿತು ಲಾಹೋರಿನ ಶ್ರೀಮತಿ ಪುರಾಣ ದೇವಿಯೇ ಮೊದಲಾದ ವೀರ ಮಹಿಳೆಯರು ಜೈಲಿನೊಳಗೆ ೫೪ ಘಂಟೆಯ ಅನಶನ ವ್ರತವನ್ನು ಕೈಕೊಂಡರು ಇಲ್ಲಿನ ಡಿ ಎ ವಿ ವಿಶ್ವವಿದ್ಯಾಲಯವು ವಿದ್ಯಾರ್ಥಿಗಳ ಪಹರೆಯ ಕಾರ್ಯಕಲಾಪಗಳಿಂದ ಮುಚ್ಚಲ್ಪಟ್ಟಿತು ಸದರಿ ಕಾಲೇಜಿನ ಪ್ರೊಫೆಸರರಾದ ಸಂತ್ರಾಂ ಸೀಯಾಲ್ ಇವರು ಕ್ಲಾಸಿನೊಳಗೆ ಪಾಠ ನಡೆಸುತ್ತಿರುವಾಗಲೇ ಪೋಲೀಸರು ಬಂದು ಇವರನ್ನು ತಿವಿದರು, ಪರಿಣಾಮವಾಗಿ ಪ್ರೊಫೆಸರು ತುಂಬಾ ಘಾಯಹೊಂದಿರುವರು ನವಜೀವನ ಭಾರತ ಸಭೆಯ ಎಕ್ಸ್ ಜನರಲ್ ಸೆಕ್ರೆಟರಿಯಾಗಿದ್ದ ಮಿ| ಮಂಗಲದಾಸರನ್ನು ದಸ್ತಗಿರಿ ಮಾಡಿ ೧ ವರುಷದ ಕಠಿಣ ಸಜೆಗೆ ಗುರಿಪಡಿಸಿರುವರು

**ಸೂರತದಲ್ಲಿ**

'ನವಯುಗ' ಛಾಪಖಾನೆಯು ಪ್ರೆಸ್ ಆರ್ಡಿನೆನ್ಸು ಮೇರೆಗೆ ಸರಕಾರಕ್ಕೆ ಬಿಟ್ಟುಕೊಡಬೇಕೆಂದೂ ಇಲ್ಲವಾದರೆ ೨೦೦೦ ರೂಪಾಯಿಗಳ ಜವಾಬ್ದಾರಿಕೆಯನ್ನು ತೆಂಬೇಕೆಂತಲೂ ಪ್ರೆಸ್ ಮೆನೇಜರರ ಮೇಲೆ ನೋಟೀಸು ಜ್ಯಾರಿಮಾಡಿದ್ದರಷ್ಟೆ! ಆದರೆ ಸರಕಾರವು ಸದರಿ ಛಾಪಖಾನೆಯನ್ನು ಮ್ಯಾನೇಜರರ ವಶ ಬಿಟ್ಟುಕೊಟ್ಟಿರುವರೆಂದು ತಿಳಿದುಬರುತ್ತದೆ ಮೆನೇಜರರು ತನ್ನ ಮೇಲೆ ಜ್ಯಾರಿಮಾಡಲ್ಪಟ್ಟ ನೋಟೀಸಿಗೆ ಪ್ರತಿಯಾಗಿ ತಾನು ಸರಕಾರಕ್ಕೆ ೨೦೦೦ ರೂಪಾಯಿಗಳ ಜವಾಬ್ದಾರಿಕೆಯನ್ನು ಕೊಡಲು ಬದ್ಧನಲ್ಲವೆಂದು ಹೇಳಲು, ಸರಕಾರವು ಛಾಪಖಾನೆಯನ್ನು ಒಲೋದ್ವಂದಿಯಿಂದ ಕೈವಶಮಾಡಿದರು ಈ ಸಂದರ್ಭದಲ್ಲಿ ಸರಕಾರವು ಸದರಿ ಪ್ರೆಸ್ಸಿನ ಪಹರೆಯ ಕಾರ್ಯಗಳಿಗಾಗಿ ಸಾಧಾರಣ ೨೫೦೦ ರೂಪಾಯಿಗಳನ್ನು ವ್ಯಯಮಾಡಿರುವದಂತೆ!

**ತಾರೀಖು ೧೦—೧೦ ೩೦**

**ಸಿಮ್ಲಾ**

## (ವ್ಯಾಸರಾಯರ ೯ನೇ ಆರ್ಡಿನೆನ್ಸು)

ಈಗಿನ ವ್ಯಾಸರಾಯರ ಅವಧಿಯು ಅಂತ್ಯಗೊಳ್ಳಲಿಕ್ಕೆ ಕೆಲ ತಿಂಗಳುಗಳು ಮಾತ್ರವೇ ಉಳಿದಿರುವವು, ಹಾಗೂ ತನ್ನ ಹುದ್ದೆಯನ್ನು ಅವಧಿಪರ್ಯಂತ ಗೌರವದಿಂದುಳಿಸಿಕೊಂಡು, ಆ ಮೇಲೆ ಪಾರ್ಲಿಮೆಂಟು ಸದಸ್ಯರಾಗಿ ಸುಖದಿಂದಿರೋಣವೆಂದೇ ಅವರ ಧ್ಯೇಯವಂತೆ! ಹಾಗಿದ್ದಲ್ಲಿ ವ್ಯಾಸರಾಯರು ತಾನು ಮಾಡುವ ಕರ್ತವ್ಯಗಳಲ್ಲಿ ನಿಪುಣತೆಯನ್ನು ತೋರಿಸುವ ಸುಸಂದರ್ಭವು ಸಮೀಪಿಸಿತಲ್ಲವೇ! ಬಹುಶಃ ಈ ಕಾರಣದಿಂದಲೇ ಹೊಸ ಹೊಸ ಓರ್ಡಿನೆನ್ಸುಗಳನ್ನು ಹಿಂದುಸ್ಥಾನದ ಮೇಲೆ ಹೊರಿಸುತ್ತಿರುವರು-ಎಂಬುದಾಗಿಯೇ ಊಹಿಸಲಾಗುತ್ತದೆ.

ವ್ಯಾಸರಾಯರಿಂದ ಈಗ ತಾನೇ ಪ್ರಚುರವಾದ ಹೊಸ ಓರ್ಡಿನೆನ್ಸು ಎಂದರೆ-೧೯೩೦ನೇ ಇಸವಿಯ 'ಅನ್ಯಾಯ ಸಮಿತಿಗಳ ಓರ್ಡಿನೆನ್ಸು.' ಈ ಕಾನೂನನ್ನು ಜ್ಯಾರಿಗೆ ತರಲು ಕಾರಣವಾದರೋ—ಸತ್ಯಾಗ್ರಹಿಗಳಿಂದುಂಟಾದ ಜನತೆಯ ನೆಮ್ಮದಿ ಭಂಗವೇ ಆಗಿರುವದಂತೆ! ಸವಿನಯ ಕಾಯಿದೆಭಂಗವು ಮೊದಲುಗೊಂಡು ೫-೬ ತಿಂಗಳುಗಳಾದವು, ಇನ್ನೂ ಚಳವಳವು ಮುಂದರಿಯುತ್ತಲೇ ಇರುವದು ಈ ರೀತಿ ಕಾಯಿದೆಗಳನ್ನು ಮುರಿಯುವ ಸತ್ಯಾಗ್ರಹಿಗಳು ಬ್ರಿಟಿಷ ಅಧಿಪತ್ಯವನ್ನು ತಲೆಕೆಳಗು ಮಾಡುವಷ್ಟು ಸಾಧನೆಗಳನ್ನು ಮಾಡುತ್ತಿರುವರು ಹಳ್ಳಿಹಳ್ಳಿಯ ಜನರಿಗೂ ಕಾಯಿದೆಭಂಗದ ತತ್ವವನ್ನು ಬೋಧಿಸುತ್ತಿರುವರು, ಇದಕ್ಕಾಗಿ ಮೇಲೆ ಹೇಳಲ್ಪಟ್ಟ ಕಾನೂನನ್ನು ಜ್ಯಾರಿಗೆ ತರಬೇಕಾಯಿತು-ಎಂದು ಮೊದಲಾಗಿ ವ್ಯಾಸರಾಯರ ಕಾರಣಗಳು— ಮಾತ್ರವಲ್ಲದೆ ಕ್ರಿಮಿನಲ್ ಲೋ ಎಮೆಂಡ್‌ಮೆಂಟ್ ಆಕ್ಟಿನ ನಂಬ್ರ (XIV of 1908)ನೇ ಒಳಪಟ್ಟ ಶರ್ತಗಳು, 'ಅನ್ಯಾಯ ಕೂಟಗಳೆಂದು ಪರಿಗಣಿಸಲ್ಪಟ್ಟ ಸತ್ಯಾಗ್ರಹ ಸಮಿತಿಗಳ ಸ್ಥಿರ-ಚರ ಸೊತ್ತುಗಳನ್ನು ಸ್ವಾಧೀನಪಡಿಸುವರೆ ಯಾವ ತರದ ಹಕ್ಕು ಬಾಧ್ಯತೆಯೂ ಹೇಳದಿರುವ ಪ್ರಯುಕ್ತ, ಸದರಿ ಅನ್ಯಾಯ ಸಮಿತಿಗಳ ಹಾಗೂ ಸತ್ಯಾಗ್ರಹ ಮುಖಂಡರ ತಪ್ಪಿತಕ್ಕಾಗಿ ಅವರ ಸ್ಥಿರಚರ ಸೊತ್ತುಗಳನ್ನೂ ಕೂಡ ಅಪಹರಿಸುವ ಹಕ್ಕುಳ್ಳ ಹೊಸ ಕಾನೂನನ್ನು ವ್ಯಾಸರಾಯರು ಜ್ಯಾರಿಗೆ ತರಬೇಕಾಯಿತಂತೆ!

ಆದರೆ ವ್ಯಾಸರಾಯರು ತಿಳಿಸುವಂತೆ ಕೆಲವು ನಿರಾಪರಾಧಿಗಳೂ ಈ ಹೊಸ ಓರ್ಡಿನೆನ್ಸಿಗೆ ತುತ್ತಾಗುವರು ಇವರ ಮೇಲೆ ಮಾತ್ರ ವ್ಯಾಸರಾಯರು ಸ್ವಲ್ಪ ಮಟ್ಟಿನ ರಿಯಾಯತಿಯನ್ನು ತೋರಿಸಿರುವರು. ಇಂತಹವರಿಂದ ಅಪಹರಿಸಲ್ಪಟ್ಟ ಆಸ್ತಿಗಳ ಬದಲಾಗಿ ಅವರಿಗೆ ಜೀವನ ನಡಿಸುವಷ್ಟು ಹಣವನ್ನು ಕೊಟ್ಟು ಅವರನ್ನು ಸುಖದಿಂದಿರಿಸುವರು.

ಮಾತ್ರವಲ್ಲದೆ, ಓರ್ಡಿನೆನ್ಸಿನ ಮೇರೆಗೆ ಅಪಹರಿಸಿದ ಆಸ್ತಿಯಲ್ಲಿ ಸರಕಾರಕ್ಕೇನು ಇಚ್ಛೆ ಇರುವುದಿಲ್ಲವಾದುದರಿಂದ, ಅದನ್ನು ತಪ್ಪಿತಸ್ಥನಿಂದ ವಶಪಡಿಸಿ ಮೂರನೇಯವನಿಗೆ ಬಿಟ್ಟುಕೊಡುವದು—ಎಂಬ ಈ ಮಸೂದೆಯನ್ನೂ ಓರ್ಡಿನೆನ್ಸಿಗೆ ಒಳಪಡಿಸಿರುವರು, ಮೂರನೆಯ ಪಾರ್ಟಿಯು ಸದರಿ ಆಸ್ತಿಯ ಸ್ವಾಧೀನತೆಯ ಬಗ್ಗೆ ಸ್ಥಳೀಕ ಸರಕಾರಕ್ಕೆ ಯೋಗ್ಯ ಜಾಮೀನನ್ನು ಕೊಡತಕ್ಕದ್ದು

**ಆರ್ಡಿನೆನ್ಸಿನ ಮಸೂದೆಗಳು:—**

ಈ ಓರ್ಡಿನೆನ್ಸಿನ ಹೆಸರು—'ಅನ್ಯಾಯ ಸಮಿತಿ ಓರ್ಡಿನೆನ್ಸು' (The Unlawful Association Ordinance)

ಈ ಓರ್ಡಿನೆನ್ಸನ್ನು ಇಡೀ ಬ್ರಿಟಿಷ ಇಂಡಿಯದ ಮೇಲೆ (ಬ್ರಿಟಿಷ್ ಬಲೂಚಿಸ್ತಾನ್ ಸೇರಿದ್ದು) ಹೊರಿಸಲಾಗಿದೆ ಅವಶ್ಯಬಿದ್ದಲ್ಲಿ Governor General in Councilರು ಬೇರೆ ದೇಶಗಳ ಮೇಲೂ ಹೊರಿಸುವಷ್ಟು ಅಧಿಕಾರವುಳ್ಳವರಾಗಿರುವರು

ಈ ಪ್ರಕರಣವು ಕೂಡಲೇ ಜ್ಯಾರಿಮಾಡಲ್ಪಟ್ಟಿರುವದು ಇದಕ್ಕೆ ಸಂಬಂಧಿಸಿದ ಉಪಪ್ರಕರಣಗಳು, ವಿಶೇಷ ಸಂದರ್ಭಗಳು ಬಂದೊದಗಿದರೆ ಮಾತ್ರವೇ ಸ್ಥಳೀಕ ಸರಕಾರದವರಿಂದ ಮುಂದಾಗಿ ಗಜೇಟುಗಳಲ್ಲಿ ಪ್ರಕಟಿಸಿ, ಆ ತರುವಾಯ ಜ್ಯಾರಿಯಾಗುವವು.

ಒಂದು ಸ್ಥಳವು ಅನ್ಯಾಯ ಸಮಿತಿಗೆ ಒಳಪಟ್ಟಿರುವದೆಂದು ಊಹಿಸೋಣ. ಆ ಸ್ಥಳವನ್ನು ಸ್ಥಳೀಕ ಸರಕಾರವು ಸ್ವಾಧೀನಪಡಿಸುವರೆ ಸಂಪೂರ್ಣ ಹಕ್ಕುಳ್ಳದ್ದಾಗಿರುವದು ಮ್ಯಾಜಿಸ್ಟ್ರೇಟರು ಈ ಬಗ್ಗೆ ತನಿಖೆ ನಡಿಸಿ ರಿಪೋರ್ಟು ಬರಕೊಳ್ಳತಕ್ಕದ್ದು. ಎಂದು ಮೊದಲಾಗಿ ಶರತಗಳನ್ನು ಹಾಕಿರುವರು, ಇವುಗಳನ್ನು ಮೀರಿ ನಡೆಯುವವನು ಸರಕಾರಕ್ಕೆ ತೀರ ಅನ್ಯಾಯಮಾಡಿದಂತೆಯೇ ಆಗುವದಲ್ಲದೆ, ಅವನು ತಕ್ಕ ಶಿಕ್ಷೆಗೆ ಗುರಿಪಡಬೇಕಾಗುವದು.

(೧೩ನೇ ಪುಟಕ್ಕೆ ಮುಂದರಿಸಿಯದೆ)

**The Zandu Pharmaceutical Works, Ltd., Bombay,14.**

**ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ, ಲಿಮಿಟೆಡ್, ಬೊಂಬಾಯಿ, 14.**

ಲೋಕಪ್ರಸಿದ್ಧವಾದ 'ಝಂಡೂ'ಯವರ

# ಚ್ಯವನಪ್ರಾಶ ಲೇಹವು.

**ಅಮೋಘ ಟಾನಿಕ್ಕು!** **ಅಮೋಘ ಟಾನಿಕ್ಕು!**

ಋಷಿ ಆಮಲಕ ಇನ್ನು ಇತರ ವನೌಷಧಿಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು. ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದುರ್ಬಲತ್ವ, ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ಧೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾಗಿದೆ. ಎಲ್ಲಾ ಅಶಕ್ತಿಗಳನ್ನು **ಸ್ವಲ್ಪ ಕಾಲದಲ್ಲಿಯೇ** ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

ಕ್ರಯ 1 ಪಾವು ಸೀಸೆ ರೂ. 2—8—0, ½ ಪಾ. ರೂ. 1—5—0, ¼ ಪಾ. ರೂ 0—13—0.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು:—ದಾಮೋದರ್ ಅಂಡ್ ಕಂಪೆನಿ, 78 ಛೈನಾ ಬಜಾರು ರಸ್ತೆ, ಮದ್ರಾಸು.

ತೀರ್ಥಹಳ್ಳಿ ಏಜಂಟರು:—ಮೆಸರ್ಸ ಪಂಡಿತ ಮತ್ತು ಕಂಪೆನಿ

ಮಂಗಳೂರು ಏಜಂಟರು:—ದಿ ಯೂನಿಯನ್ ಎಜೆನ್ಸಿ.

ಸಿರ್ಸಿ ಏಜಂಟರು:—ಎಸ್. ಎಲ್ ಧಾಕಪ್ಪಾ ಎಂಡ್ ಬ್ರದರ್ಸ

ಪೇಟೆ ಏಜಂಟರು —ಯು ಜನಾರ್ಧನರಾವ್, ಪುತ್ತೂರು, ದ ಕನ್ನಡ

ಮಂಗಳೂರು ಏಜಂಟರು —ತಿಪ್ಪಜ್ಜ ಶೆಟ್ಟಿ, ಬುಸ್‌ಸ್ಟೇಟ್

☞ ವಿವರ ಕೇಟಲಾಗು ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು

TELEGRAMS. 'ASPINWALCO' TELEPHONE No. 15

DISTRIBUTORS

Aspinwall & Co, Ltd.

(Address) MANGALORE

STOCKISTS

UDIPI

*K Siddaya Hegde*

KASARGODE

*Rama Nayak*

KANHANGAD.

*K S Russool.*

COONDAPUR —

*E Gopal Mukunda Pai,*
General Merchant
COONDAPUR (S Kanara)

BHATKAL —

*Messers Kashimjee Shom shuddeen Saheb Motor Service*

Puttur

*K Venkatraya Pai,*
Imperial Cycle Stores

***FOR YOUR CAR***

## WILLARD BATTERIES.

**SIMONIZ KLEENER** **SIMONIZ POLISH**

*AGENTS —*

## Messrs. Aspinwall & Co, Ltd

MANGALORE

"ಬಿಟ್ಟಿ" "ಪ್ರಗಸಟ್ಟಿ" "ಬಿಟ್ಟಿ"

**ಜೇಬಿನ ಲಿವರ್ ಗಡಿಯಾರವೂ ಕೈ ಗಡಿಯಾರವೂ ಬಿಟ್ಟಿ**

**೩ ತಿಂಗಳೊಳಗಾಗಿ ೩೦೦೦ ಗಡಿಯಾರಗಳನ್ನು ಬಿಟ್ಟಿಯಾಗಿ ಕೊಟ್ಟಿದ್ದೇವೆ**

ರೂ. ೩—೧೫—೦ ಬೆಲೆ ಬಾಳುವ ನಮ್ಮ ತಯ್ಯಾರಿ ೮ ಫೌಂಟನ್ ಪೆನ್ನನ್ನು ಕೊಂಡುಕೊಳ್ಳುವ ನಮ್ಮ ಗಿರಾಕಿಗಳಿಗೆ ಜೇಬಿನ ಲಿವರ್ ಗಡಿಯಾರವನ್ನು ಮುಫತ್ತಾಗಿ ಕೊಡುತ್ತೇವೆ. ಒಂದೇ ಸಲ ಎರಡು ಫೌಂಟನ್ ಪೆನ್ನುಗಳನ್ನು ಕೊಳ್ಳುವವರಿಗೆ ರೂ ೮—೧೪—೦ ಬೆಲೆಯು ಮತ್ತು ಲಿವರ್ ಕೈ ಗಡಿಯಾರವು ಬಿಟ್ಟಿಯಾಗಿ ಕೊಡುವೆವು. ಈ ಪೆನ್ನು ಭಂಗಾರದ ನಿಬ್ಬು ಉಳ್ಳದ್ದಾಗಿಯೂ, ಅಚ್ಚುಕಟ್ಟಾದ ಪಾಯಿಂಟೂ ನಯವಾಗಿ ಬರೆಯುವುದು. ಚಾರ್ಜ್ ಚಕ್ರವರ್ತಿಗಳಂತ ಕೆತ್ತಲ್ಪಟ್ಟದ್ದಾಗಿಯೂ, ಬಂಗಾರದ ಕ್ಲಿಪ್ಪನ್ನು ತೋರಿಸುವುದಾಗಿಯೂ ಇದೆ. ಇವಕ್ಕೆ ೫ ವರ್ಷ ಗ್ಯಾರಂಟಿ ಕೊಡುತ್ತೇವೆ.

ಪತ್ರವ್ಯವಹಾರಗಳು ಇಂಗ್ಲೀಷಿನಲ್ಲಿ ಬರೆಯಬೇಕು.

**Imperial Watch Company.**

(S) Post No. 12, BOMBAY

## ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ, ತಯಾರಿಸಿಕೊಡುವೆವು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

**ಶಾರದಾ ಛಾಪಖಾನೆ,**

ರಥಬೀದಿ, ಮಂಗಳೂರು

## ಮುದಲ್ ತರವಾದ ಬೆಳ್ಳಿ ಉಡಿದಾರ ಹಗ್ಗ.

ESTD 1896.

ಅನೇಕ ವರುಷದಿಂದ ನಾವು ಬೆಳ್ಳಿ ಉಡಿದಾರಗಳನ್ನು **ತಯಾರು ಮಾಡಿ** ಅನೇಕ ವ್ಯಾಪಾರಿಗಳಿಗೂ ಕಳುಹಿಸಿ ಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ಉಡಿದಾರ ಹಗ್ಗಗಳು **ಕೆಲಸ ನೈಸಲ್ಲಿಯೂ, ಧಾರಣೆ ಸಂಸದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ** ದಕ್ಷಿಣ ಇಂಡಿಯಾವಿನಲ್ಲಿ ಹೆಸರು ಪಡೆದುದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳನ್ನು ಕಳುಹಿಸುತ್ತೇವೆ. ಒಂದು ಸಲ ನಮ್ಮಲ್ಲಿಂದ ತರಿಸಿ ನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ಧಾರಣೆ ಪ್ರಕಾರ ಸರಕುಗಳಿಗೆ ಧಾರಣೆ ಹಾಕಿ ಕಳುಹಿಸುತ್ತೇವೆ.

**ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,**

ಪಂಸಾರು ವ್ಯಾಪಾರಿ,

ತಿಪ್ಪಾಪೇಟೆ, ಸೇಲಂ, (ದಕ್ಷಿಣ ಇಂಡಿಯಾ)

## Grand Clearing Sale!

ಅಗತ್ಯವಿದ್ದವರು ನಮ್ಮ "ಒಟ್ಟು ಫುಲಾರಾಮ" ಸುಗಂಧದ ಐದು ಬಾಟಲಿಗಳನ್ನು ತರಿಸುವವರಿಗೆ ಕೆಳಗಿನ ಈ ಕೆಳಗಿನವುಗಳನ್ನು ಧರ್ಮಾರ್ಥವಾಗಿ ಪಡೆಯುವರು —

1 ಕರವಸ್ತ್ರ, 1 ಫೌಂಟನ್ ಪೆನ್ 1 ಕ್ಲಿಪ್ 1 ಹರಿತವಾದ ಚಾಕು 1 ಸುಗಂಧ ಸಾಬೂನು, 1 ಅ ... ಸಿಗರೇಟು ಕೇಸು 12 ಉತ್ತಮ ಮೊಹರು 1 ಕೋಲಿಂಗ್ ಪೆಟ್ಟಿ 1 ಪಟ್ಟಿ ಗಿಲೀಟಿನ ಗುಂಡಿಗಳು, 1 ಕನ್ನಡಿ 1 ಬಾಚಣಿಗೆ, 1 ಕಬ್ಬಿಣ 1 ಶೇವಿಂಗ್ ಬ್ರಶ್, 1 ಹರಳಿನ ಉಂಗುರ.

ಅಂಚೆವೆಚ್ಚ ಆಣೆ 0—8—0

ಇಂಗ್ಲೀಷಿನಲ್ಲಿ ಬರೆಯಿರಿ

**Indian Stores**

*o Beadon Street,*

CALCUTTA

**ಒಮ್ಮೆ ಪರೀಕ್ಷಿಸಿರಿ!** **ತೃಪ್ತಿ ಹೊಂದಿರಿ!**

**ದಿ ಕ್ರೌನ್ ರಬ್ಬರ್ ಸ್ಟಾಂಪು ಕಂಪೆನಿ,**

ಹೆಡ್ಡ ಆಫೀಸು ಬಲ್ಮಠ ರಸ್ತೆ, ಕಂಕನಾಡಿ ಪೋಸ್ಟು,

ಮಂಗಳೂರು, ದ ಕನ್ನಡ

## ರಬ್ಬರು ಮೊಹರುಗಳು

ಇಲ್ಲಿ ಉತ್ತಮವಾದ ಎಯರ್ ಕುಶನ್ ರಬ್ಬರು ಮೊಹರುಗಳೂ, ಹಿತ್ತಾಳೆ ಇತ್ಯಾದಿ ಲೋಹಗಳಲ್ಲಿಯೂ, ಮಾರ್ಬಲ್‌ನಲ್ಲಿಯೂ, ಕೆತ್ತನೆಯ ಕೆಲಸವನ್ನೂ ಬಹಳ ನಾಜೂಕಾಗಿ ಕ್ಲಪ್ತ ಸಮಯದಲ್ಲಿ ಮಾಡಿಕೊಡುತ್ತದೆ

ಹೆಚ್ಚಿನ ಮಾಹಿತಿಯನ್ನು ಪತ್ರಮೂಲಕವಾಗಲೀ, ಆಫೀಸಿನಲ್ಲಿ ಸ್ವತಹ ಬಂದಾಗಲೀ ತಿಳಿದುಕೊಳ್ಳಿರಿ

ಎಮ್ ದೇವದಾಸ ಕಿಣಿ,

ಮೆನೇಜಿಂಗ ಪ್ರೊಪ್ರೈಟರ್

## ಸುವಿಚಾರಗಳು

### ಚೀನಾದೇಶದ ಎರಡು ಸರಕಾರಗಳು

ಚೀನಾದೇಶದ ರಾಜಕೀಯ ಸ್ಥಿತಿಯು ಬಹಳ ದೀನಾವಸ್ಥೆಗೆ ಬಂದಿದೆ. ಕಳೆದ ಎರಡು ಮೂರು ವರುಷಗಳಿಂದ ನೇಶನಲಿಸ್ಟ ಸರಕಾರವು ಸರಿಯಾಗಿ ರಾಜ್ಯಭಾರವನ್ನು ನಡಿಸುತ್ತಾ ಬರುತ್ತಿತ್ತು. ಇದರ ರಾಜಧಾನಿಯು ನೇನಕಿಂಗ್. ಇಲ್ಲಿ ರಾಜ್ಯಭಾರ ನಡಿಸುವವರು ರಾಜಕೀಯ ವಿಷಯದಲ್ಲಿ ಬಹಳ ಪ್ರವೀಣರು. ಆದರೂ ಉತ್ತರ ಭಾಗದ ಜನರಲ್ಲಿ ರಾಜ್ಯದಾಡಳಿತೆಯಲ್ಲಿ ಸಮಾಧಾನವಿಲ್ಲದೆ ಹಳೇ ರಾಜಧಾನಿಯಾದ ಪೆಕಿಂಗ್ ಪಟ್ಟಣದಲ್ಲಿ ಉತ್ತರದ ನಾಲ್ಕು ಸಂಸ್ಥಾನಗಳನ್ನು ಒಂಗಡಿಸಿ ಹೊಸ ಸರಕಾರವನ್ನು ಸ್ಥಾಪಿಸಿರುವರು. ಪೆಕಿಂಗ್ ಪಟ್ಟಣದ ಹೆಸರನ್ನು ಪಿಯುಪಿಂಗ್ ಎಂದು ಬದಲಾಯಿಸಿರುವರು. ಇವರು ಈಗ ದಕ್ಷಿಣ ದಿಕ್ಕಿಗೆ ಬರುತ್ತಿರುವರು. ಈಗ ಯಾಂಗ್‌ಸೀ ನದಿಯು ಎರಡು ರಾಜ್ಯಗಳಿಗೆ ಗಡಿಯಾಗಿದೆ. ಈ ರೀತಿಯಲ್ಲಿ ಎರಡು ಸರಕಾರಗಳು ಸ್ಥಾಪನೆಯಾಗುವಾಗ ದೇಶದ ಆರ್ಥಿಕ ಸ್ಥಿತಿಯು ಬಹಳ ಹೀನಾವಸ್ಥೆಗೆ ಬಂದಿದೆ. ಒಡವರಿಗೂ ಸಾಧಾರಣ ತರದ ಜನರಿಗೂ ಊಟಕ್ಕಿಲ್ಲ. ವ್ಯಾಪಾರವು ಬಿದ್ದಿದೆ. ನಾಣ್ಯಗಳ ಬೆಲೆಯೂ ಬೆಳ್ಳಿಗೆ ಕ್ರಯವೂ ಕಡಿಮೆಯಾಗಿ ಬಿದ್ದಿದೆ. ಇದರಿಂದ ದಕ್ಷಿಣ ದಿಕ್ಕಿನ ಸರಕಾರವು ಬಲಹೀನವಾಗುತ್ತಾ ಬಂದಿದೆ. ಮುಂದಿನ ಸ್ಥಿತಿಯ ಕುರಿತು ನೋಡುವಾಗ ತಿರಿಗಿ ಒಂದೇ ಸರಕಾರವು ಸ್ಥಾಪನೆಯಾಗುವ ಸೂಚನೆಯು ಕಂಡು ಬರುತ್ತದೆ.

### ಇಂಡಿಯಾದ ರೈಲುದರಗಳ ಕಮಿಟಿ.

ರೈಲುವೇಗಳಲ್ಲಿ ಸಾಮಾನು ಕೊಂಡುಹೋಗುವ ದರವನ್ನು ರೈಲುವೇಗಳು ಹಾಳಾಗದಂತೆಯೂ ಕೈಗಾರಿಕೆಗಳು ಉದ್ಧಾರವಾಗುವಂತೆಯೂ ನಿರ್ಣಯಿಸುವುದಕ್ಕೆ ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರತ್ಯೇಕ ಕಮಿಟಿಗಳು ಇವೆ. ಇಂಡಿಯಾದಲ್ಲಿಯೂ ಅದೇ ರೀತಿಯ ಕಮಿಟಿಯನ್ನು ಸ್ಥಾಪಿಸಬೇಕೆಂದು ಇಂಡಿಯಾ ಸರಕಾರಕ್ಕೆ ಮನವಿಗಳು ಎಷ್ಟೋ ವರುಷಗಳಿಂದ ಹೋಗುತ್ತಲಿವೆ. ಈ ವರುಷವೂ ಇತ್ತಲಾಗೆ ಜರಗಿದ ರೈಲುವೇ ದರಗಳ ವರುಷಾವಧಿ ಸಭೆಯಲ್ಲಿ ರೈಲು ದರಗಳನ್ನು ಕಡಿಮೆಮಾಡುವ ಆಲೋಚನೆಯಾ ಬಾರದೆ ಇದ್ದುದು ವಿಷಾದಕರವಾಗಿದೆ. ಯುನೈಟೆಡ್ ಸ್ಟೇಟ್ಸಿನಲ್ಲಿ ರೈಲುವೇ ದರವು ಬಹಳ ಕಡಿಮೆ ಇದ್ದರೂ ಕಂಪೆನಿಗಳಿಗೆ ಹೆಚ್ಚು ಮುನಾಫೆಯು ಸಿಕ್ಕುತ್ತದಂತೆ. ಅಲ್ಲಿಯ ರೈಲುವೇ ಕಂಪೆನಿಗಳಿಗೆ ಎರಡು ಉದ್ದಿಶ್ಯಗಳಿವೆ. ಮೊದಲನೇದು ರೈಲುವೇ ಕಂಪೆನಿಗಳ ಹೋರ್ಡಿನ ಮತ್ತು ಮುನಾಫೆಯನ್ನು ಗಣಿಸುವದು. ಎರಡನೇದು ದೇಶದ ಕೈಗಾರಿಕೆಗಳು ಉದ್ಧಾರವಾಗಬೇಕು, ದೇಶದ ವ್ಯಾಪಾರವೂ ಪ್ರಯಾಣ ಸೌಕರ್ಯವೂ ಹೆಚ್ಚಾಗಬೇಕು ಎಂಬುದು. ಇಂಡಿಯಾದ ರೈಲು ಕಂಪೆನಿಗಳು ತಮ್ಮ ಮುನಾಫೆಯ ಆಲೋಚನೆಯನ್ನು ಮಾತ್ರವೆ ಮಾಡುತ್ತಲಿದ್ದಾರಲ್ಲದೆ ಕೈಗಾರಿಕೆಗಳು ವೃದ್ಧಿಯಾಗಬೇಕು ದೇಶದ ವ್ಯಾಪಾರ ವಹಿವಾಟುಗಳು ಉದ್ಧಾರವಾಗಬೇಕು ಎಂಬ ಆಲೋಚನೆಗಳು ಅವರಿಗಿಲ್ಲ. ಯಾಕೆಂದರೆ ಇಂಡಿಯಾದಲ್ಲಿರುವ ರೈಲು ಕಂಪೆನಿಯ ಮಾಲಿಕರು ವಿದೇಶೀಯರು. ಊರಿನ ಕಂಪೆನಿಗಳಿರುವುದಿಲ್ಲ. ಈಗ ಕೆಲವು ರೈಲುವೇಗಳು ಮಾತ್ರವೇ ರೈಲುವೇ ಬೋರ್ಡಿನ ಕೈಕೆಳಗೆ ಇಂದಿವೆ. ಇನ್ನು ಎಲ್ಲಾ ರೈಲುವೇ ಕಂಪೆನಿಗಳನ್ನು ಸರಕಾರದ ಸ್ವಾಧೀನ ಮಾಡದೆ ಈ ತರದ ಬದಲಾವಣೆಯು ಆಗಲಾರದು.

### ಇಂಡಿಯಾ ಸರಕಾರದ

### ಹೊಸ ಬೇಂಕಿಂಗ್ ಕಮಿಟಿ.

ಇಂಡಿಯಾದಲ್ಲಿರುವ ಬೇಂಕರುಗಳನ್ನು ಯಾವ ರೀತಿಯಲ್ಲಿ ಒಳ್ಳೇ ಸ್ಥಿತಿಗೆ ತರಬಹುದೆಂದು ಆಲೋಚಿಸುವುದಕ್ಕಾಗಿ ಇಂಡಿಯಾ ಸರಕಾರವು ಒಂದು ಕಮಿಟಿಯನ್ನು ನೇಮಿಸಿಯದೆ. ಇದರ ಮೆಂಬರರಾಗಿ ಇಂಗ್ಲಿಷ, ಕೆನಡ, ಜರ್ಮನಿ ಮತ್ತು ಡಚ್ ಬೇಂಕರರ ಪ್ರತಿನಿಧಿಗಳೂ ಇಂಡಿಯಾದ ಕೆಲವು ಬೇಂಕರರ ಪ್ರತಿನಿಧಿಗಳೂ ಇರುವರು. ಇವರಲ್ಲಿ ಇಂಗ್ಲಿಷ ಬೇಂಕರರ ಪ್ರತಿನಿಧಿಗಳೇ ಹೆಚ್ಚಾಗಿರುವರು. ಇಂಡಿಯಾದಲ್ಲಿರುವ ಹೆಚ್ಚಿನ ಬೇಂಕುಗಳು ಇಂಗ್ಲಿಷ ಬೇಂಕುಗಳಾಗಿರುವದೇ ಇದಕ್ಕೆ ಕಾರಣವಾಗಿರಬಹುದು. ಅದಲ್ಲದೆ ಇಂಪೀರಿಯಲ್ ಎಂಬ ಇಂಗ್ಲಿಷ ಬೇಂಕು ಮುಂತಾದವುಗಳ ಡೈರೆಕ್ಟರರೂ ಇಂಗ್ಲೆಂಡಿನಲ್ಲಿಯೇ ಇರುವರು. ಇಂಡಿಯಾದ ದೇಶೀಯ ಬೇಂಕುಗಳ ಪ್ರತಿನಿಧಿಗಳು ಬಹಳ ಕಡಿಮೆ ಇರುವರು. ಕೆನಡದ ಪ್ರತಿನಿಧಿ ಒಬ್ಬರಿರುವರು. ಕೆನಡದಲ್ಲಿ ಸೆಂಟ್ರಲ್ ಬೇಂಕು ಒಂದಿದ್ದು ಬೇರೆ ಬೇರೆ ಕಡೆಗಳಲ್ಲಿ ಅದರ ಶಾಖೆಗಳು ಇರುವದಿಲ್ಲ. ಆ ದೇಶದಲ್ಲಿರುವ ಪ್ರತಿ ಒಂದು ಬೇಂಕು ಸ್ವತಂತ್ರ ಬೇಂಕಾಗಿದೆ. ಬೇಸಾಯಗಾರರಿಗೆ ಇದರಿಂದ ಹೆಚ್ಚು ಪ್ರಯೋಜನವಿದೆಯಂತೆ. ಇದರ ಪ್ರಯೋಜನದ ಕುರಿತು ಅನುಭವ ಕೊಡಲಿಕ್ಕೆ ಈ ಪ್ರತಿನಿಧಿಗಳು ಇರುವರು. ಜರ್ಮನಿಯ ಇಬ್ಬರು ಪ್ರತಿನಿಧಿಗಳಿರುವರು. ಯಾಕಂದರೆ ಇಂಡಿಯಾದಲ್ಲಿ ಜರ್ಮನ ರೀತಿಯ ಬೇಂಕುಗಳನ್ನು ಸ್ಥಾಪಿಸುವ ಆಲೋಚನೆಯು ಇದೆ ಎಂದು ತೋರುತ್ತಿದೆ. ಇನ್ನು ಡಚ್ ಬೇಂಕುಗಳ ಒಬ್ಬ ಪ್ರತಿನಿಧಿಗಳು ಇರುವರು. ಇವರಿಗೆ ಮನೆ ಕೈಗಾರಿಕೆಗಳನ್ನು ಉದ್ಧರಿಸಲು ಸಾಧ್ಯವಾಗುವ ಬೇಂಕು ರೂಲ್ಸುಗಳಿವೆ ಎಂದು ತೋರುತ್ತದೆ. ಇಂಡಿಯಕ್ಕೆ ಇಂಡಿಯಾ ದೇಶದವರ ಧಂಡವಾಳವಿರುವ ಇಂಡಿಯಾದ ಸ್ವತಂತ್ರ ಬೇಂಕುಗಳಿದ್ದರೆ ಮಾತ್ರವೆ ಜನರು ಉಪಯೋಗದ ಹಣದ ಮುನಾಫೆಯು ಇಂಡಿಯದಲ್ಲಿ ಉಳಿಯಲು ಅವಕಾಶವಿದೆ. ಅನ್ಯದೇಶದ ಬೇಂಕುಗಳಿಂದ ಹಣದ ಒಟ್ಟು ಹೊರಗೆ ಹೋಗುವದು.

### ಆಫ್ರಿಕದಲ್ಲಿ ಬ್ರಿಟಿಷರ ಹೊಸ ಕಾರ್ಯಗಳು.

ಇಂಗ್ಲಿಷರ ಅಧೀನತೆಯಲ್ಲಿರುವ ಇಂಡಿಯಾ ಮತ್ತು ಇರಾಕ ಹೆಜಾಜ ಮುಂತಾದ ಏಸ್ಯಾ ಖಂಡದ ದೇಶಗಳಲ್ಲಿ ಸ್ವತಂತ್ರ್ಯಾಭಿಲಾಷೆಯು ಹುಟ್ಟುತ್ತಿರುವ ಸಂಗತಿಯು ಇಂಗ್ಲಿಷ ರಾಜಕೀಯ ವಿಷಯಗಳಲ್ಲಿ ಹೆಚ್ಚು ಬದಲಾವಣೆಗಳನ್ನು ಮಾಡುತ್ತಿರುವದು. ಈಗ ಬ್ರಿಟಿಷರು ಹೇರಳ ಹಣವನ್ನು ಖರ್ಚುಮಾಡಿ ಮಧ್ಯ ಆಫ್ರಿಕದ ಭಾಗಗಳನ್ನು ಸಮುದ್ರ ರಾವಳಿಗೆ ಕೂಡಿಸಲು ರೈಲುವೇ ಲೈನುಗಳನ್ನು ಹಾಕುವವು ನಡೆಯುತ್ತಲಿದೆ. ಮಧ್ಯ ಆಫ್ರಿಕದ ಕಟಂಗ ಎಂಬಲ್ಲಿ ರೋಡಿಯಮ್ ಮತ್ತು ತಾಮ್ರವು ದೊರಕುತ್ತಲಿರುವುದು. ಈಗ ಅಲ್ಲಿಂದ ಕರಾವಳಿಗೆ ರೈಲುವೇ ಹಾಕಿ ಪಶ್ಚಿಮ ಕರಾವಳಿಯಲ್ಲಿರುವ ಲಿಬಿಟೊ ಬಂದರವನ್ನು ಕಟ್ಟಿ ಅದನ್ನು ನೌಕಾ ಸೈನ್ಯವನ್ನು ನಿಲ್ಲಿಸುವ ಬ್ರಿಟಿಷ ಬಂದರವಾಗಿ ಮಾಡಿ ಆಫ್ರಿಕದ ಪೂರ್ವ ಕರಾವಳಿಯಲ್ಲಿರುವ ಬೆಯಿರಾ ಬಂದರಕ್ಕೆ ಕೂಡಿಸಿದರೆ ದಕ್ಷಿಣ ಆಫ್ರಿಕದ ಸುತ್ತು ತಿರುಗದು ಇಂಡಿಯಕ್ಕೆ ಬರುವ ಆಗತ್ಯವಿಲ್ಲ. ಸುಮಾರು ೧೫ ದಿವಸಗಳ ಪ್ರಯಾಣವೂ ಉಳಿಯುವುದು. ಅದಲ್ಲದೆ ಲೋಹಗಳಿಂದ ತುಂಬಿರುವ ಪೋರ್ತುಗೀಸ ಕೊಲೊನಿಗಳೂ ಬ್ರಿಟಿಷರ ಅಧೀನತೆಯಲ್ಲಿಯೇ ಇರಬೇಕಾಗ ಬರು. ಲಿಬಿಟೊ ಬಂದರವನ್ನು ನೌಕಾ ನಿಲ್ದಾಣವಾಗಿ ಮಾಡಿದರೆ ಇಂಡಿಯವನ್ನು ಕಾಯಲಿಕ್ಕೂ ಆಫ್ರಿಕದಲ್ಲಿ ಬೇಕಾದ ಸಮಯ ಸೈನ್ಯ ತರಲಿಕ್ಕೂ ಇಂಗ್ಲಿಷರಿಗೆ ಅನುಕೂಲವಾಗುವದು. ಅದಲ್ಲದೆ ಆಫ್ರಿಕದಲ್ಲಿ ಬಲವಾದ ಕೊಲೊನಿಯಲ್ ಸಾಮ್ರಾಜ್ಯವನ್ನು ಬಲಪಡಿಸಲು ಸಾಧ್ಯವಾಗುವದು. ಆದರೆ ಆಫ್ರಿಕದಲ್ಲಿಯೂ ಬ್ರಿಟಿಷರ ಅಭಿವೃದ್ಧಿಗೆ ತೊಡಕುಗಳು ಕಂಡುಬರುತ್ತಿವೆ. (೧) ಅಮೇರಿಕನರು ಆಫ್ರಿಕದಲ್ಲಿ ಹೇರಳ ಹಣವನ್ನು ಬೇರೆ ಬೇರೆ ಕೆಲಸಗಳಿಗಾಗಿ ಖರ್ಚುಮಾಡಿ ತಮಗೆ ಅಲ್ಲಿ ಕೊಲೊನಿಗಳ ಆವಶ್ಯಕತೆ ಸಾಧಿಸುತ್ತಿರುವರು. (೨) ಫ್ರೆನ್ಸ ದೇಶಕ್ಕೆ ಆಫ್ರಿಕದಲ್ಲಿ ಇಂಗ್ಲಿಷರ ಹಾಗೆಯೇ ಕೊಲೊನಿಗಳು ಇರುವುದರಿಂದ ಫ್ರೆಂಚ ಸರಕಾರವು ತನ್ನ ಕೊಲೊನಿಗಳನ್ನು ಬಲಪಡಿಸಲು ನೋಡುತ್ತಿದೆ. (೩) ಆಫ್ರಿಕದ ಜನರು ತಮ್ಮ ದೇಶವು ಅನ್ಯ ದೇಶೀಯರ ಉಪಯೋಗಕ್ಕೆ ಇರಬಾರದು ತಮ್ಮ ಕೈಯಲ್ಲಿಯೇ ಇರಬೇಕೆಂದು ಸಾಧಿಸುತ್ತಿರುವರು.

---

ಉಡುಪಿಯಲ್ಲಿ ದೊರೆಗಳಿಗೆ ತಾಲೂಕು ಬೋರ್ಡಿನವರ ಒಂದು ಎಡ್ರೆಸ್. ಉಡುಪಿಯವರು ಕೇಳಿದ್ದು ಒಂದು ಕೋಲೇಜು. ಉತ್ತರ ಹಣವಿಲ್ಲ. ಆಕಾಶಕ್ಕೆ ಏಣಿ ಇಟ್ಟದ್ದೆ ಬಂತು.

* * * *

ಅಂತೂ ನಮ್ಮ ಜಿಲ್ಲೆಯ ಉಪಕಾರಗಳನ್ನು ಪಡದು ಸತ್ಯಾಗ್ರಹ ಎಷ್ಟಿದೆ ಎಂಬುದನ್ನು ತಕ್ಕಡಿಯಲ್ಲಿಟ್ಟು ನಿನ್ನೆ ರಾತ್ರಿ ಹತ್ತುವರೆ ಘಂಟೆಗೆ ಹೋಗಿಯೇ ಬಿಟ್ಟರು.

* * * *

ನಮ್ಮ ಸಿಕಿಥಾದರಿಗೆ ಎಡ್ರೆಸ್ ಕೊಡುವಾಗ್ಗೆ ದೊರೆಗಳ ಪರಿಚಯವಾದದ್ದು ಸ್ವಲ್ಪ ತಡವಂತೆ. ಈಗ ಸ್ವಲ್ಪ ಗಾಢ್ರಿಯಲ್ಲಿ ದ್ವಾರಕಿ ಗಾಢ್ರಿ ನಮ್ಮವರೊಳಗೆ ಮುಂದಕ್ಕೇನು? ಒಂದು ಮೀಟಿಂಗು ಯಾಕೆ?

---

## ನೋಟಗಳು

## NOTE..S

ಇಪ್ಪರ ತನಕ ಅಷ್ಟದಿಕ್ಪಾಲಕರಂತೆ, ಎಂಟು ಒರ್ಡಿನೆನ್ಸುಗಳು ಜಾರಿಯಲ್ಲಿದ್ದವು. ಸಾಲದಕ್ಕೆ ಒಂಭತ್ತನೆಯ ಜಾರಿಗೆ ಬಂತು.

* * * *

ಒಂಭತ್ತನೆಯ ಕಾರುಬಾರು, ಮುಂಬಾಯಿಯಲ್ಲಿ ನಡೆದೇ ಹೋಯಿತು. ಇನ್ನು ಹಲವು ಕಡೆಗಳಲ್ಲಿ ಪುರಸೊತ್ತು ಇಲ್ಲದೆ, ಜಾರಿಗೆ ತರುವುದರಲ್ಲಿದ್ದಾರೆ.

* * * *

ಇದರ ಉದ್ದಿಶ್ಯವೇ ಕಾಂಗ್ರೆಸಿನವರಿಗೆ ಮನೆ ಸಿಕ್ಕದ ಹಾಗೆ ಮಾಡುವುದು. ಕಾಂಗ್ರೇಸ ಹೌಸ್ ಇತ್ಯಾದಿ ಇದ್ದರೆ ಸರಕಾರಕ್ಕೆ ಒಳಪಡಿಸುವುದು. ಮನೆಯಲ್ಲಿದ್ದವರಿಗೆ ಆಳರಸರ ಗೆಸ್ಟ ಹೌಸಿಗೆ ಕಳುಹಿಸುವುದು.

* * * *

ಗವರ್ನರ ದೊರೆಗಳು ಸವಾರಿ ನಮ್ಮ ಅತಿ ಸುಂದರವಾದ ಜಿಲ್ಲೆಯನ್ನು ನೋಡಿ ನಿನ್ನೆಯ ದಿನ ರಾತ್ರೆ ಡಿಪಾರ್ಚರ್ ಪ್ರಾಯಿವೆಟ್ (ಗುಪ್ತ) ಯಾಗಿ ಹೊರಟುಹೋದರು.

* * * *

ಮಡಿಕೇರಿಯಿಂದ ದೊರೆಗಳು ಬರುವಾಗ್ಗೆ ನಮ್ಮ ಜಿಲ್ಲೆಯ ಗಡಿಗೆ ಬಂದೊಡನೆ ನಮ್ಮವರ ಸ್ವಾಗತ. ಪುತ್ತೂರಿನಲ್ಲಿ ಕೆಲ ಮಟ್ಟಿಗೆ ಹ ತಾಳವಿತ್ತಂತೆ. ಆದರೆ, ಪುತ್ತೂರಿನ ಜನಸ್ತೋಮ ತೋರಿಸಲು ಜನರು ಮಾರ್ಗದ ಮತ್ತು ಅಂಗಡಿ ಬದಿಯಲ್ಲಿ ದೊರೆಗಳ ಬೇಟಿ ಪಡೆಯಲು ನಿಂತಿದ್ದರಂತೆ.

* * * *

ಮಂಗಳೂರಿಗೆ ಬರುವಾಗ ರಾತ್ರಿ, ಒಂದು ಮುಟ್ಟಿನ ಸಮಯ ಯೋಗ್ಯವಾದುದೇ, ಮರುದಿವಸ ಎಡ್ರೆಸುಗಳ ಸುರಿಮಳೆ, ನಮ್ಮ ಮುನಿಸಿಪಾಲಿಟಿಯವರು ಬಸ್ಸು ಕಂಪೆನಿಯವರಿಗೋಸ್ಕರ ಮಾರ್ಗ ಅಗಲ ಮಾಡಿಸುತ್ತಾರೆ. ಡಿ ಬೋರ್ಡಿನವರು ಜಿಲ್ಲೆಯ ನದಿಗಳಿಗೆ ಸೇತುವೆ ಹಾಕುತ್ತಾರೆ. ಮಾರ್ಗಗಳ ಗ್ರೇಂಟು ಹೆಚ್ಚಿಗೆ ಕೇಳುತ್ತಾರೆ. ಸುಬ್ರಮಣ್ಯದಲ್ಲಿ ಕುಡಿಯಲು ನೀರು ಸಂಬರಾಯಿ ಮಾಡುತ್ತಾರೆ. ಮುಲ್ಕಿಗೆ ಹೈಸ್ಕೂಲ್ ಮಾಡುತ್ತಾರೆ. ಅಂತೂ ಎರಡು ಎಡ್ರೆಸ್ಸುಗಳಲ್ಲಿ ಸಂಗ್ತಿಗಳೆಲ್ಲಾ ಬೇಕಾದ್ದೆ. ಆದರೆ ಮನವಿಮಾಡಿಕೊಳ್ಳುವ ದಿವಸಗಳು ಇವಲ್ಲವೆಂಬು ಯಾರಿಗೂ ಹೊಳೆಯಲಿಲ್ಲ. ಎಡ್ರೆಸುಗಳಿಗೆ ಉತ್ತರ ಸುಲಭ ಶೈಲಿಯಲ್ಲಿಯೇ ಸಿಕ್ಕಿರುತ್ತದೆ. ನಮ್ಮ ಸರಕಾರದವರ ಹತ್ತಿರ ಹಣವಿಲ್ಲ. ಬಾಕಿ ಸಂಗ್ತಿ ಮುಂದಿನಿಂದ.

* * * *

ಇಡೀ ಹಿಂದೂಸ್ಥಾನದಲ್ಲಿ ಸರಕಾರದ ಯುದ್ಧ ಸತ್ಯಾಗ್ರಹ ಚಳವಳಿ ಕಡೆಗೆ ಓಡುತ್ತಿರುವಾಗ್ಗೆ ನಮ್ಮ ಎಡ್ರೆಸ್ ಕೊಟ್ಟ ಮಹಿನೀಯರು ಕಾಲಕ್ಕೆ ತಕ್ಕ ಕೋಲ ಮಾಡುವುದು ಉಚಿತವಿತ್ತು?

* * * *

ನಿನ್ನೆಯ ದಿನ ದೊರೆಗಳು ಕೋಲೇಜುಗಳು, ವರ್ಕಶೋಪುಗಳು ನೋಡುವ ದಿವಸ. ಈ ದಿವಸ ವಿದ್ಯಾರ್ಥಿಗಳಿಗೆ ಸ್ವಲ್ಪ ಬೆತ್ತದ ಪೆಟ್ಟುಗಳ ಫಲಹಾರ ಸಿಕ್ಕಿಹೋಯಿತು.

* * * *

ಕಾರಣ ಗಾಂಧಿ ಟೊಪ್ಪಿ. ನಮ್ಮ ಗುಡ್ಡೆಯ ಮೇಲಿನ ಕೋಲೇಜಿನ ಕೆಲ ವಿದ್ಯಾರ್ಥಿಗಳು ಗಾಂಧಿ ಟೊಪ್ಪಿ ಇಟ್ಟು ಕೋಲೇಜಿಗೆ ಹೋಗುವಾಗ ಅವರು ಕೋಲೇಜಿನ ವಿದ್ಯಾರ್ಥಿಗಳು ಅಲ್ಲವೆಂಗಿ ಸಂಶಯದ ಮೇಲೆ ಬಳಪಡಲಿಲ್ಲ. ವಿದ್ಯಾರ್ಥಿಗಳು ಹಿಂತಿರುಗುವಾಗ್ಗೆ ದೊರೆಗಳ ಸವಾರಿ ಕೋಲೇಜಿಗೆ ಹೋಗುತ್ತಿತ್ತು. ದೊರೆಗಳ ದೃಷ್ಟಿ ಟೊಪ್ಪಿಗಳ ಮೇಲೆ ಬಿದ್ದದ್ದು ಯಾರೊ ಪೋಲಿಸ್ ಮಹಾರಾಯರು ನೋಡಿಬಿಟ್ಟರು. ಇದಕ್ಕೆ ತಕ್ಕ ಪ್ರಾಯಶ್ಚಿತ್ತ ನಡದುಹೋಯಿತು.

* * * *

ಗವರ್ನಮೆಂಟ್ ಕೋಲೇಜಿನ ವಿದ್ಯಾರ್ಥಿಗಳು ಗೆದ್ದುಬಿಟ್ಟರು. ಗಾಂಧಿ ಟೊಪ್ಪಿ ಇಡಬಾರದಾಗಿ ಕೋಲೇಜು ಅಧಿಕಾರಿಗಳ ಬಹು ಪ್ರಯತ್ನ ನಡದಿದ್ದರೂ ವಿದ್ಯಾರ್ಥಿಗಳ ಪ್ರಯತ್ನ ನಡೆದುಹೋಯಿತು. ಟೊಪ್ಪಿಗಳ ಅಂದವನ್ನು ದೊರೆಗಳು ನೋಡಿಯೇ ಬಿಟ್ಟರು.

* * * *

## ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್ ಉಡ್ಪಿ, ಲಿಮಿಟೆಡ್, ಮಂಗಳೂರು.

## ನೋಟೀಸು.

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನಂದರೆ ಈ ಕೆಳಗೆ ಹೆಸರು ಕಾಣಿಸಿದ ಆಸಾಮಿಗಳು ಸದರಿಯವರಿಗೆ ರಿಜಿಸ್ಟ್ರಿ ನೋಟೀಸು ಕೊಟ್ಟಾಗ್ಯೂ ಅಸಲು ವ ಬಡ್ಡಿ ಬಾಕಿ ಇಟ್ಟಿರುವುದರಿಂದ, ಸದರಿಯವರ ನಗಗಳನ್ನು ಇದೇ ನವಂಬರ ತಿಂಗಳ 1ನೇ ಶನಿವಾರ ಅಪರಾಹ್ನ ಗಂಟೆ ೧ಕ್ಕೆ ಏಲಂ ಮಾಡಲಾದೀತು

ಲೋನು ನಂಬ್ರ ವ ತಾರೀಕು, ೨೦೪೧೧/೨೭, ೩ – ೯ – ೨೯೨೭ ನಗಗಳನ್ನು ಈಡಿಟ್ಟ ಅಸಾಮಿಯ ಹೆಸರು–ಉಳ್ಳಾಲ ಸಯ್ಯದ ಬ್ಯಾರಿಗಳವರ ಮಗ ಶೇಕಬ್ಯಾರಿ, ನಗಗಳ ತಪಸೀಲು ಬೆಳ್ಳಿಯ ಸೊಂಟದ ಸರಪಳಿ ೧ ಪಡಕೊಂಡ ಮೊಬಲಗು ರೂ ೧೦, ಬಡ್ಡಿ ಬಾಕಿ ತಾರೀಕು ೩ – ೩೦

ಲೋನು ನಂಬ್ರ ವ ತಾರೀಕು ೨೪೨೫/೨೭ ೩೧ – ೧೦ – ೨೯ ನಗಗಳನ್ನು ಈಡಿಟ್ಟ ಅಸಾಮಿಯ ಹೆಸರು–ಮಂಗಳೂರು ಬೆಂಗ್ರೆಯಲ್ಲಿರುವ ಶಾಂತಪ್ಪನ ಮಗ ಕೆ ಗಣೇಶ ನಗಗಳ ತಪಸೀಲು ಕೊಪ್ಪು ೨ ಸರಪಳಿ ೨ ಬೆಂಡೋಲೆ ೨ ಸೇವಂತಿ ಹೂ ೧, ಪಡಕೊಂಡ ಮೊಬಲಗು ರೂ ೩೨ ಬಡ್ಡಿ ಬಾಕಿ ತಾರೀಕು ೩೦ – ೪ – ೩೦

ಲೋನು ನಂಬ್ರ ವ ತಾ ೬೫೧/೨೮, ೨೨ ೧೨ ೧೯೨೭ ನಗಗಳನ್ನು ಈಡಿಟ್ಟ ಅಸಾಮಿಯ ಹೆಸರು ಮಂಜೇಶ್ವರ ಪೋಸ್ಟು ಮೀಂಜ ಗ್ರಾಮದಲ್ಲಿರುವ ವೆಂಕಪ್ಪ ಭಟ್ಟ ಮಗ ತಿಮ್ಮಯ್ಯ ಭಟ್ಟ ನಗಗಳ ತಪಸೀಲು ಪತ್ತೆ ಗೆಜ್ಜೆಯ ಅಡ್ಡಿಗೆ ಸರ ೧ ಪಡಕೊಂಡ ಮೊಬಲಗು ರೂ. ೪೦, ಬಡ್ಡಿ ಬಾಕಿ ತಾರೀಕು ೭ – ೧೦ – ೨೯

ಲೋನು ನಂಬ್ರ ವ ತಾ ೭೮೩ ೨೯ ೨೨ ೨ ೧೯೨೭ ನಗಗಳನ್ನು ಈಡಿಟ್ಟ ಅಸಾಮಿಯ ಹೆಸರು ಅರ್ಕ ಗ್ರಾಮದಲ್ಲಿರುವ ಶ್ಯಾಲು ಬ್ಯಾರಿಗಳ ಮಗ ಅಬ್ದುಲ್ಲಕಾದ್ರಿ ಬ್ಯಾರಿ ನಗಗಳ ತಪಸೀಲು ಚಿನ್ನದ ವಾಲೆ ಜೊತೆ ೧, ಉರ್ಕ್ವ ೩ ಇರುವ ಸರ ೧, ಗೊಂಡೆ ೩ ಇರುವ ಚವರಿ ೧ ಲಾಕೆಟು ೧ ಅಡ ಕೇದಗೆ ೧ ಪಡಕೊಂಡ ಮೊಬಲಗು ರೂ ೭೦ ಬಡ್ಡಿ ಬಾಕಿ ತಾರೀಕು ೪ ೮ ೨೯

ಲೋನು ನಂಬ್ರ ವ ತಾ ೬೩೯ ೨೮ ೨೨ ೩ ೧೯೨೭ ನಗಗಳನ್ನು ಈಡಿಟ್ಟ ಅಸಾಮಿಯ ಹೆಸರು ಮಂಜೇಶ್ವರ ಪೋಸ್ಟು ಉಪ್ಪಳ ಗ್ರಾಮದಲ್ಲಿರುವ ಮಿದ್ದೀನ ಬ್ಯಾರಿ ಮಗ ಹಾಜಬ್ಯಾರಿ ನಗಗಳ ತಪಸೀಲು ವಾಲೆ ಜೊತೆ ೧ ಸ್ವರ್ಣ ಮುತ್ತು ೧, ಪಡಕೊಂಡ ಮೊಬಲಗು ರೂ ೨೫ ಬಡ್ಡಿ ಬಾಕಿ ತಾರೀಕು ೨೩ ೧೦ – ೨೯

ಲೋನು ನಂಬ್ರ ವ ತಾ ೧೧೧೨ ೨೯ ೭೨ ೧೨ ೧೯೨೭ ನಗಗಳನ್ನು ಈಡಿಟ್ಟ ಅಸಾಮಿಯ ಹೆಸರು, ಬಜಪೆ ಪೋಸ್ಟು ಪೆರಂಕೋಡಿ ಯಲ್ಲಿರುವ ಆರ್ಮ್ಯಯ್ಯನವರ ಮಗ ಭೋಜರಾವ್ ನಗಗಳ ತಪಸೀಲು ರಿಸ್ಟು ಚೈನು ೧ ಗಟ್ಟಿ ಉಂಗುರ ೧ ಪಡಕೊಂಡ ಮೊಬಲಗು ರೂ ೨೫, ಬಡ್ಡಿ ಬಾಕಿ ತಾರೀಕು ೨೨ ೧೦ – ೨೯

ಷರಾ – ಇದರ ಬಡ್ಡಿ ವ ಬಡ್ಡಿ ಬಾಕಿ ಬಡ್ಡಿ ರಿಜಿಸ್ಟ್ರಿ ನೋಟೀಸು ಖರ್ಚು ವ ಈ ನೋಟೀಸಿನ ಖರ್ಚು ಸಹಾ ಬರತಕ್ಕದ್ದು

ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್ ಉಡ್ಪಿ ಲಿಮಿಟೆಡ್ ಮಂಗಳೂರು ತಾ ೭ ೧೦ ೩೦ ) **Vittal Bhandary**, Agent

## ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P No 73/1930

ತೇಜಪ್ಪ ಶೆಟ್ಟಿ—ಅರ್ಜಿದಾರ

ಮತ್ತು

1 ನರ್ಸಿ ಸೆಟ್ಟಿ

2. ಗಿರಿಜ, 3 ಬಾಲಕೃಷ್ಣ, 4 ಕಾಮ 5 ಶೀತಾರಾಮ, 6 ಸದಾನಂದ, 7 ಪದ್ಮನಾಭ—ಮ್ಯಾನರರು — ಎದ್ರಿರು

ಇವರೆಡೆಗೆ

ಕಾರ್ಕಳ ತಾಲೂಕು ಚಂಡ ಗ್ರಾಮದ ಮುತ್ತಯ್ಯ ಸೆಟ್ರ ಮಗ ಈಗ ಮೃತ ಪಟ್ಟಿರುವ ಎಮ್. ಕೃಷ್ಣಯ್ಯ ಶೆಟ್ರ ಬಾಬ್ತು ಅಚ್ಚೀರ್ ದಿ ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್ ಕೆಂಪೆನಿಯ ನಂಬ್ರ 17870ನೇ ರೂಪಾಯಿ 1000/ ರದ ಲೈಫ್ ಎಶ್ಯೂರೆನ್ಸ್ ಪೋಲಿಸಿ ಬಾಬ್ತು ಶಿಕ್ಕತಕ್ಕ ಐವಜನ್ನು ಸದರಿ ಮೃತ ಕೃಷ್ಣಯ್ಯ ಶೆಟ್ರ ಕುಟುಂಬದ ಮೆನೇಜರ ಸದರಿಯವರ ಅಣ್ಣನಾದ ಅರ್ಜಿದಾರನು ಪಡಿಯುವ ಹಾಗೆ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರನು ಮೇಲ್ಕಂಡ ಕೋರ್ಟಿನಲ್ಲಿ ಸದರಿ ಅರ್ಜಿ ದಾಖಲ್ಮಾಡಿ ಸದರಿ ವ್ಯವಹರಣೆಯು ತನ್ನಿಯ ಬಗ್ಗೆ ಇದೇ ಅಕ್ಟೋಬರ ತಿಂಗಳ ತಾ 22ಕ್ಕೆ ಇಟ್ಟಿರುವದರಿಂದ ಆ ಕುರಿತು ಆಕ್ಷೇಪ ಉಳ್ಳವರು ಸದರಿ ತಾರೀಕಿನ ಹಗಲು ಗಂಟೆ 10ಕ್ಕೆ ಈ ಕೋರ್ಟಿ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳಬಹುದು

ಕಾರ್ಕಳ,
೧೦ – ೧೦ – ೩೦ } **S. N. Shetty,** ಅರ್ಜಿದಾರನ ವಕೀಲ್


## The Cochin Soap Works,

IRENJALAKUDA

## ದಿ ಕೊಚ್ಚಿನ್ ಸೋಪ್ ವರ್ಕ್ಸ್.

ಇರಿಂಜಾಲ್ ಕುಡ

BABY BORAX
TRADE MARK

ಕೊಚ್ಚಿನ ತ್ರಿ ಮದರಾಸು ಪಟ್ಟಣಗಳಲ್ಲಿ 1928 –'29 –'30ನೇ ವರ್ಷಗಳಲ್ಲಿ ನಡೆದ ಎಕ್ಸಿಬಿಶನ್ನುಗಳಲ್ಲಿ ಬೆಳ್ಳಿಯ ಪದಕಗಳಿಂದಲೂ ಅನೇಕ ಯೋಗ್ಯತಾ ಪತ್ರಗಳಿಂದಲೂ ಬಹುಮಾನಿಸಲ್ಪಟ್ಟ

ಬೇಬಿ ಬಾರೆಕ್ಸ್ ಸೋಪ್, ಲಿಟ್ಲ್ ಫ್ಲವರ್ ರೋಸ್ ಸೆಂಟೆಡ್ ಸೋಪ್, ಜೋನ್ಸನ್ಸ್ ಬಾರ್ ಸೋಪ್, ಕೋಲ್ ಟಾರ್ ಸೋಪ್ ಮುಂತಾದ ಹೆಸರುವಾಸಿಯಾದ ಸಾಬೂನುಗಳನ್ನು ತಯ್ಯಾರು ಮಾಡುವ ಸಂಸ್ಥೆಯಾಗಿರುವುದು

ಬೇಬಿ ಬಾರೆಕ್ಸ್ ಸೋಪ್—ಜಂತುನಾಶಕ ಉತ್ತಮ ಉತ್ಪತ್ತಿ, ಬಟ್ಟೆ ಒಗೆಯುವದಕ್ಕೂ ಮೈ ತೊಳೆಯುವದಕ್ಕೂ ಉಪಯೋಗಿಸಬಹುದು. ಪ್ರಾಣಿಗಳ ಕೊಬ್ಬು ಅಥವಾ ಅಪಾಯಕರವಾದ ದ್ರವ್ಯಗಳಿಂದ ವಿರಹಿತವಾಗಿರುವುದು. ಅಲ್ಲದೆ ಎಲ್ಲಾ ಸೋಪುಗಳೂ ಬಿಸ್ಸೀಲಿಯಲ್ಲಿ ತಯಾರಿಯಾದ ಸಾಬೂನುಗಳನ್ನು ಸರಿತೂಗುವವು. ಸುಲಭ ಬೆಲೆ ಒಂದು ಪೌಂಡಿನ ಕ್ರಯ 6 ಆಣೆ ಮಾತ್ರ. ಮೆಲ್ಲನೆ ಸವೆಯುವವು. ಹೆಚ್ಚು ಕಾಲದ ವರೆಗೆ ಬರುವವು.

ಲಿಟ್ಲ್ ಫ್ಲವರ್ ರೋಸ್ ಸೆಂಟೆಡ್ ಸೋಪ್—ಇವುಗಳು ಸಾಬೂನುಗಳಲ್ಲಿ ಉತ್ಕೃಷ್ಟವಾಗಿರುವುದು. ಗುಲಾಬಿ ಮತ್ತು ಜೆಸಮಿನ್ ಸುಗಂಧ ಎಣ್ಣೆಗಳಿಂದ ಕೂಡಿರುವುಗಳು. ತುಂಡ ೧ಕ್ಕೆ ಕ್ರಯ ೧ಆಣೆ ಮಾತ್ರ

ಜೋನ್ಸನ್ಸ್ ಬಾರ್ ಸೋಪ್—೨ ಪೌಂಡಿನ ಬಾರ್ ಬಟ್ಟೆಗಳು ತೊಳೆಯಲು ಉಪಯೋಗಿಸಬಹುದು, ಕೆಲಸವು ಅತಿ ಸುಲಭ, ಸಯೋಜನವು ಬಹುವಾಗಿರುವದು. ಬಟ್ಟೆಗಳನ್ನು ಬಹಳ ಅಚ್ಚುಕಟ್ಟಿನಿಂದ ಶುಚಿಮಾಡಿಸುವುದು. ಬಾರು ೧ಕ್ಕೆ 4ಆಣೆ ಬಟ್ಟೆಗೆ ಯಾವ ತರದ ಹಾನಿಯೂ ಉಂಟುಮಾಡುವುದಿಲ್ಲ. ಅದನ್ನು ಮತ್ತಷ್ಟು ಬಲವಂತವನ್ನಾಗಿ ಮಾಡುತ್ತದೆ

ಕೋಲ್ ಟಾರ್ ಸೋಪ್—ಟಾರ್ ಗಿರ ಹೂವಿನ ಎಣ್ಣೆಯಿಂದ ಕೂಡಿರುವುದು ಹಾನಿಕರವಲ್ಲ. ಚರ್ಮ ವ್ಯಾಧಿಗೂ ಕೂಡ ಉಪಯೋಗಿಸಬಹುದು. ಚರ್ಮ ರೋಗಕ್ಕೆ ದಿವ್ಯೌಷಧ

ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸೋಲ್ ಏಜಂಟರು—

ಮೆಸರ್ಸ್ ಬೊಕಂತೂರು ಸರ್ವೋತ್ತಮ ಪ್ರಭು, ಮಂಗಳೂರು.

ಕೆ. ಜೆ. ಲಾಜರ್, ಮೆನೇಜರ್ ಮತ್ತು ಎಕ್ಸ್‌ಪರ್ಟ್.

ಒಂಗಾರದ ಪದಕ ಹಾಗೂ ಯೋಗ್ಯತಾ ಪತ್ರಗಳಿಂದ ಬಹುಮಾನ ಹೊಂದಲ್ಪಟ್ಟವರು

ಏಜಂಟರು ಬೇಕಾಗಿರುವರು



"If every Wife knew what every Widow knows every Husband could be Insured"

PLACE YOUR LIFE ASSURANCE WITH

**THE SOUTH INDIAN**

Securing for your clients

1. Low rates of Premium
2. Liberal Policy Conditions.

AND FOR YOURSELF

An Agency with attractive Terms of Commission and Salary in

**The South Indian General Assurance Co, Ltd.,**

Anywhere in CANARA DISTRICTS & HYDERABAD STATE

For terms of Agency please apply to—

H R K IYENGAR
Chief Agent

The S I G A Co. Ltd,
Sannesgudda MANGALORE

Managing Agent

K C PANDALAI & CO
7 8 Mclean Street G T MADRAS

ಜೀವವಿಮೆ ಮಾಡುವವರು

ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್ನಲ್ಲಿ ವಿಮೆಮಾಡಿರಿ

ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!

ಪ್ರಿಮಿಯಂ ದರಗಳು ಕಡಿಮೆ!

ಷರತ್ತುಗಳು ತೀರಾ ಸುಲಭ!!

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ

ಧಾರಾಳವಾದ ಕಮಿಶನನ್ನೂ ಕೈತುಂಬಾ ಸಂಬಳವೂ ದೊರಕುವುದು

(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)

ಚೀಫ್ ಏಜಂಟರು—

ಎಚ್. ಆರ್. ಕೆ ಅಯ್ಯಂಗಾರ್,

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳ

ದಿ ಎಸ್ ಐ ಜಿ ಎ ಕಂಪೆನಿ ಲಿಮಿಟೆಡ್,

ಸನ್ನಾಸಿಗುಡ್ಡೆ ಮಂಗಳೂರು

ಮೇನೇಜಿಂಗ್ ಏಜಂಟರು —

ಕೆ ಸಿ ಪಾಂಡಲೆ ಎಂಡ್ ಕೋ.

7-8 ಮೆಕಲೀನ್ ಸ್ಟ್ರೀಟ್, ಜಿ. ಟಿ ಮದ್ರಾಸು



ಸುಲಭ ಕ್ರಯ . ಧಾರಾಳ ಫಲ!!

## ದಂತಧಾವನ ಚೂರ್ಣ ಟೂತ್ ಪೌಡರ್.

ಎಲ್ಲಾ ವಿಧದ ಹಲ್ಲುನೋವುಗಳನ್ನೂ, ಹಲ್ಲುಗಳ ನ್ಯೂನತೆಗಳನ್ನೂ ವಾಸಿಗೊಳಿಸುವುದು. ಹಲ್ಲುಗಳ ಎಡೆಯಿಂದ ಒಸರುವ ರಕ್ತ ಕೀವು ಮೊದಲಾದವುಗಳನ್ನು ನಿಲ್ಲಿಸುವುದು. ಬಾಯಿಯ ದುರ್ಗಂಧವನ್ನೂ ಹಲ್ಲುಗಳ ಇನ್ನಿತರ ದೋಷಗಳನ್ನೂ ದೂರ ಮಾಡಿ ಯಾವಾಗಲೂ ಹಲ್ಲುಗಳು ಶುಚಿಯಾಗಿಯೂ ಸುವಾಸನೆಯಿಂದಿರುವಂತೆಯೂ ಅತ್ಯುಪಯೋಗಕರವಾಗಿರುವುದು. ಪೆಕೆಟು ೧ಕ್ಕೆ ೦ – ೨ – ೦ ದಜನ ಪೆಕೆಟುಗಳಿಗೆ ೧ – ೪ – ೦ ಇವುಗಳಲ್ಲದೆ ಮಿಕ್ಕ ಔಷಧ ಉತ್ಕೃಷ್ಟವಾದ ಆಯುರ್ವೇದ ಔಷಧಗಳೂ ಮಾರಾಟಕ್ಕೆ ಸಿದ್ಧವಾಗಿವೆ. ಆಸವ, ಅರಿಷ್ಟ ಭಸ್ಮ ಚೂರ್ಣ ಕಷಾಯ, ಲೇಹ, ತೈಲ ಮೊದಲಾದವುಗಳ ನಮ್ಮಲ್ಲಿ ಆಗಾಗ್ಗೆ ಹೊಸತಾಗಿ ತಯಾರಿಸಲ್ಪಡುವವು. ದೂರದವರು ಮತ್ತು ಹೊರದೇಶದವರು ಪತ್ರ ಮೂಲಕ ರೋಗದ ಮತ್ತು ರೋಗಸ್ಥಿತಿಗಳನ್ನು ತಿಳಿಸಿದಲ್ಲಿ ಯುಕ್ತವಾದ ಔಷಧಗಳನ್ನು ಟಪ್ಪಾಲುದ್ವಾರಾ ಕಳುಹಿಸಲಾಗುವುದು. ಹೆಚ್ಚಿನ ವಿವರ ಬಗ್ಗೆ ಮತ್ತು ಚಿಕಿತ್ಸೆ ಅನುಭಾನುಗಳ ಕುರಿತು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ

ಹೆಚ್ಚಿನ ಸಂಗತಿಗಳನ್ನು ತಿಳಿಯಬೇಕಾದವರಿಗೆ ಮಲಯಾಳದಲ್ಲಿ ಮತ್ತು ಕನ್ನಡದಲ್ಲಿ ಔಷಧ ಪಟ್ಟಿ ಇನಾಂ

ಪಿ ಕರುಣಾಕರ ವೈದ್ಯರ್,
ಆರೋಗ್ಯಾಮೃತ ಔಷಧಾಲಯ
ಕ್ಯಾಂಪ ಬಜಾರ್ ಕಣ್ಣಾನೂರು,

P. KARUNAKARAN VYDIAR·
Arogiamritha Aushadhalaya
Camp Bazaar, CANNANORE.



## ರಿಸ್ಟ್‌ವಾಚ್ ಉಚಿತ.

ಒಂದು ಜೇಬಿನಲ್ಲಿಡುವ ಗಡಿಯಾರ ಉಚಿತವಾಗಿ ದೊರೆಯುತ್ತದೆ.

ದದ್ದು ವಿನಾಶಕ—ಗಜಕರ್ಣ ಕಜ್ಜಿಗಳ ಮೇಲೆ ೨೪ ತಾಸುಗಳಲ್ಲಿ ಖಂಡಿತ ಗುಣಕೊಡುವ ಮಲಾಮು ಕ್ರಯ ೪ ಆಣೆ ೧೨ ಡಬ್ಬಿಗಳ ಮೇಲೆ ಒಂದು ಟ್ಯಾಪ್‌ಪೀಸು ೨೪ ಡಬ್ಬಿಗಳಿಗೆ ೧ ರಿಸ್ಟ್‌ವಾಚ್ ಪುಕ್ಕಟೆ ಸಿಗುವದು. ಪತ್ರವ್ಯವಹಾರ ಇಂಗ್ಲೀಷಿನಲ್ಲಿ

ಕಿಂಗ್ ಜಾರ್ಜ ಕೊರೋನೇಶನ್ ಕಂಪೆನಿ
ಮುಂಬಾಯಿ



## ಕೊ-ಒಪರೇಟಿವ್ ಸೊಸ್ಯಾಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

**ಶಾರದಾ ಛಾಪಖಾನೆ.**
ರಥಬೀದಿ, ಮಂಗಳೂರು.

## ಅನುಕ್ರಮಣಿಕೆ.


ಅಗ್ರಲೇಖ

ಗವರ್ನರ ದೊರೆಗಳ ಆಗಮನ ೮

ಸ್ಫುಟವಿಚಾರಗಳು ೬

[illegible] ೭

ವರ್ತಮಾನ ಸಂಗ್ರಹಗಳು

ವಿದೇಶ ವರ್ತಮಾನ ೮

ಒಳದೇಶ ವರ್ತಮಾನ ೮

ದಕ್ಷಿಣ ಕನ್ನಡ—ಮಂಗಳೂರು, ಕಾಸರಗೋಡು, ಕಡೋಲಿಪರಿ ಗುರುಪುರ, ಬಂಟ್ವಾಳ ಮೂಡ ಪಾಣೆಮಂಗಳೂರು ಕಾರ್ಕಳ, ಉಡುಪಿ ೯ ೧೧

ವಿವಿಧ ಸಮಾಚಾರಗಳು ೧೧

ಮಾನ್ಯ ಮದರಾಸ ಗವರ್ನರರ ಆಗಮನದ ಸಂದರ್ಭದಲ್ಲಿ ಮಂಗಳೂರು ಮ್ಯುನಿಸಿಪಾಲಿಟಿಯವರ ಕೊಟ್ಟ ಬಹುಮಾನ ಪತ್ರದ ಸಾರಾಂಶ ೧೫

ಸ್ಪೀಚ್ ಎಡ್ರೆಸಿಗೆ ಕೊಟ್ಟ ಉತ್ತರ

ಮಾಹಾತ್ಮಾಜಿಯವರ ಸತ್ಯಾಗ್ರಹ ಸಮಾಚಾರ ೪ ೧೩

ಪ್ರಜಾಪ್ರತಿನಿಧಿ ಸಭೆ (ಮೈಸೂರು) [illegible]


# ಸ್ವದೇಶಾಭಿಮಾನಿ.

ತಾರೀಕು ೧೭ನೇ ಶುಕ್ರವಾರ ಒಕ್ಟೋಬರ ೧೯೩೦

## ಗವರ್ನರ್ ದೊರೆಗಳ ಆಗಮನ.

ನಮ್ಮ ಜಿಲ್ಲೆಗೂ ಪ್ರಾಂತಾಧಿಕಾರಿಗಳ ಆಗಮನವಿದೆಯೆಂದು ತಿಳಿದಾಗಲೇ ಇದರ ಆಗತ್ಯವಿರಲಿಲ್ಲವೆಂದು ನಮಗನ್ನಿಸಿದ್ದಿತು. ಪ್ರಥಮತಃ ಇಡೀ ದೇಶದಲ್ಲಿ ಕಾನೂನುಭಂಗದ ಚಳವಳವಿದ್ದು ರಾಜಕೀಯ ವಾತಾವರಣವು ಕ್ಷುಬ್ಧವಾಗಿ ಎದ್ದಿತ್ತು. ದ್ವಿತೀಯತಃ ಆ ಚಳವಳದ ಒಂದಂಶವು ನಮ್ಮ ಜಿಲ್ಲೆಯಲ್ಲಿಯೂ ಮೊಳೆದೋರಿ, ಅಧಿಕಾರಿಗಳ ವರ್ತನದಿಂದಲೇ ಬೆಳೆದು, ಅವರ ದಬ್ಬಾಳಿಕೆಯಿಂದ ಅಸ್ಥಿರತೆಹೊಂದಿದರೂ ಅಧಿಕಾರಿಗಳ ನಿರಂಕುಶ ವರ್ತನದಿಂದ ಸಾರ್ವಜನಿಕ ಮನಸ್ಸು ಕೆಟ್ಟುಹೋದದ್ದು ಇನ್ನೂ ಸಂತೋಷವನ್ನು ತಾಳುವಷ್ಟು ಸ್ಥಿತಿಯಲ್ಲಿರಲಿಲ್ಲ. ತೃತೀಯತಃ ಅಂತಹ ಆಗಮನದಿಂದ ಪ್ರಯೋಜನವಾದರೂ ಏನೆಂಬುದು ಯಾರಿಗೂ ತಿಳಿದಿರಲಿಲ್ಲ.

ಅಂತೂ ಗವರ್ನರರ ಆಗಮನವಾಯಿತು. ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಡಿಸ್ಟ್ರಿಕ್ಟ್ ಪೋಲೀಸ್ ಸುಪರಿಂಟೆಂಡೆಂಟ್, ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರ ಉತ್ಸಾಹದಿಂದಲೂ ಇನ್ನೂ ಕೆಲವು ಆಫೀಸರರು ಸದ್ಗೃಹಸ್ಥರು ಇತ್ಯಾದಿಗಳ ಸಹಕಾರದಿಂದಲೂ ಗವರ್ನರ ದೊರೆಗಳ ಸ್ವಾಗತಕ್ಕಾಗಲೀ, ಆತಿಥ್ಯಕ್ಕಾಗಲೀ ಕೊರತೆಯಾಗಲಿಲ್ಲ.

ಎಂದಿನ ಕ್ರಮದಂತೆ ಎಡ್ರೆಸ್ಸುಗಳೂ ಇದ್ದುವು. ಮುಖ್ಯವಾಗಿ ಡಿಸ್ಟ್ರಿಕ್ಟ್ ಬೋರ್ಡು ಮತ್ತು ಮ್ಯುನಿಸಿಪಾಲಿಟಿಯು ಮಂಗಳೂರಿನ ಪಟ್ಟಿಗೆ ಮಾನಪತ್ರಗಳನ್ನು ಕೊಟ್ಟವು. ಎಡ್ರೆಸ್ಸುಗಳೆಂದರೆ ಗವರ್ನರರು ಮಾಡಿದ ಮಹದುಪಕಾರಗಳ ಪಟ್ಟಿಯಾದರೂ ಆಗಬೇಕು. ಇಲ್ಲವೆ ಜಿಲ್ಲೆಯ ಸ್ಥಿತಿಗತಿಗಳ ಸುಧಾರಣೆಯ ಸರಿ ಚಿತ್ರವಾದರೂ ಆಗಬೇಕು. ಅಥವಾ ಪ್ರಸ್ತುತ ರಾಜಕೀಯ ಆಶಯಗಳ ಮತ್ತು ಸರಕಾರದ ಧೋರಣೆಯ ಮೇಲಿನ ಮೀಮಾಂಸೆಯಾಗಿದ್ದು ಹೆಚ್ಚಿನ ಔದಾರ್ಯವನ್ನು ಪ್ರಾರ್ಥಿಸುವಂತಹುದಾದರೂ ಆಗಬೇಕು. ಆದರೆ ಎಡ್ರೆಸ್ಸುಗಳೆಲ್ಲಾ ಬರೇ ಭಿಕ್ಷಾಪಾತ್ರೆಗಳ ವಿನೀತತೆಗಿಂತ ಹೆಚ್ಚಿನವುಗಳಾಗಿರಲಿಲ್ಲವೆಂಬುದೇ ವಿಷಾದಕರವಾಗಿದೆ. ಫಲತಃ ಭಿಕ್ಷಾಪಾತ್ರೆಗೆ ಸಿಕ್ಕುವುದಕ್ಕಿಂತ ಹೆಚ್ಚು ಮರ್ಯಾದೆಯು ಈ ಎಡ್ರೆಸ್ಸುಗಳಿಗೆ ಸಿಕ್ಕಲಿಲ್ಲವೆಂಬುದೂ ವಿಷಾದಕರವಿದೆ.

ಸಮಗ್ರ ದೇಶವೇ ಕ್ಷುಬ್ಧವಾದ ಈ ಸಮಯದಲ್ಲಿ, ದಿನೇ ದಿನೇ ನೂತನ ಓರ್ಡಿನೆನ್ಸುಗಳು ಹೊರಟು ಸಾವಿರಾರು ಜನರು ಜೈಲಿಗೆ ಸೇರಿಸಲ್ಪಡುವ ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ, ಅಲ್ಲದೆ ಇಂಗ್ಲೆಂಡಿನಲ್ಲಿ ರೌಂಡ್‌ಟೇಬಲಿನ ಸನ್ನಾಹವು ನಡೆಯುತ್ತಿರುವಾಗ, ನಮ್ಮ ಬೋರ್ಡಿಗೂ, ಮ್ಯುನಿಸಿಪಾಲಿಟಿಗೂ ರಾಜಭಕ್ತಿಯುಕ್ತವಾದ ಒಂದು ರಾಜಕೀಯ ಮಾತನ್ನಾದರೂ ಸೇರಿಸಲು ಸಿಕ್ಕದೆಹೋದುದು ಆಶ್ಚರ್ಯಕರವಾಗಿದೆ. ಅದರೂ ಗವರ್ನರರ ಭೇಟಿಯ ಪ್ರಥಮ ಮರ್ಯಾದೆ ಅದು ಎಷ್ಟರಿಕೆಯೊ, ಅದು ತಪ್ಪಿದುದಕ್ಕಾಗ ಆತ್ಮಾಭಿಮಾನಭಂಗದ ಭಾವವೂ ಆಗುವುದರಲ್ಲಿ ನಮ್ಮ ಮುಖಂಡರ ವೀರತೆಯು ಕಡಿಮೆ ತೋರುವುದಿಲ್ಲ.

ಉಡುಪಿ ತಾಲೂಕು ಬೋರ್ಡಿನ ಎಡ್ರೆಸ್ಸು ಮತ್ತೂ ಒಳ್ಳೆಯದಾಗಿತ್ತು, ಗವರ್ನರರಿಗೆ ಅದನ್ನು ಕಂಡು ಆತ್ಮಾನಂದವಾಯಿತು. ಏಕೆಂದರೆ ಇತರ ಎಲ್ಲಾ ಎಡ್ರೆಸ್ಸುಗಳಂತೆ ಬೇಡಿಕೆಗಳು ಅದರಲ್ಲಿ ಹೆಚ್ಚಿರಲಿಲ್ಲ, ಬರೇ ಎರಡು ಬೇಡಿಕೆಗಳು, ಮತ್ತು ಅವನ್ನು ನಿರಾಕರಿಸಲಿಕ್ಕೂ ಗವರ್ನರರಿಗೆ ಹೆಚ್ಚು ತೊಂದರೆಯಾಗಿಲ್ಲ. ಅಂತೂ ಎಡ್ರೆಸ್ಸುಗಳನ್ನು ಬರೆದು ಸಂಪುಟದಲ್ಲಿ ತುಂಬಿ ಕೊಟ್ಟ ಆ ಭಾಗ್ಯವು ಕಡಿಮೆಯದೇ?

ಮುಖ್ಯವಾಗಿ ಸಂತೋಷಿಸಬೇಕಾದುದೆಂದರೆ ಗವರ್ನರರು ಕುಂದಾಪುರದ ವರೆಗೂ ಹೋಗಿ ಸೋಮೇಶ್ವರ ಹಾದಿಯಾಗಿ ತಿರುಗಿ ಬಂದದು. ಏಕೆಂದರೆ, ಗವರ್ನರರ ಆಗಮ ನಿರ್ಗಮಗಳಲ್ಲಿ ನೂತನವೇನೂ ಇಲ್ಲವೆಂದೂ, ಅದರಿಂದ ಹೊಸಲಾಭಗಳು, ಬರತಕ್ಕದಿಲ್ಲವೆಂದೂ ಎಲ್ಲರೂ ತಿಳಕೊಂಡಂತಾಯಿತು.

ಗವರ್ನರರು ಜಿಲ್ಲೆಯನ್ನು ಸಂದರ್ಶಿಸಿ ವಾಪಾಸು ಹೋಗಬೇಕಾದ ಸಮಯದಲ್ಲೇ ದುಃಖಕರ ಘಟನೆಗಳು ಒಂದೆರಡು ನಡೆದುದನ್ನೂ ಇಲ್ಲಿ ಬರೆಯದಿರಲಾರೆವು. ಸರಕಾರದ ಅಧಿಕಾರಿಗಳು ಕಾಯಿದೆಭಂಗದ ಚಳವಳವನ್ನು ಅಡಗಿಸುವ ನೆವದಿಂದ ನಡೆಸಿದ ಕೃತ್ಯಗಳ ನೆನವು ಜನತೆಯಿಂದ ಇನ್ನೂ ಮರೆಯಲ್ಪಟ್ಟಿಲ್ಲವೆಂಬುವುದು ಕೆಲವು ಕಡೆಗಳಲ್ಲಿ ಆಚರಿಸಲ್ಪಟ್ಟ ಚಿಕ್ಕ ಚಿಕ್ಕ ಹರತಾಳಗಳಿಂದ ತಿಳಿದುಬರುವುದು. ಆದರೆ ಕೋಲೇಜುಗಳಲ್ಲಿ ಗವರ್ನರರು ಬರತಕ್ಕಾಗ ಕೂಡಲೇ ಗಾಂಧೀ ಟೊಪ್ಪಿಯನ್ನು ಧರಿಸಬಾರದಾಗಿ ವಿಧಿಸುವುದರಲ್ಲಿ ಯಾವ ದೊಡ್ಡ ರಾಜಭಕ್ತಿಯಿದೆಯೆಂಬ ನವಗೇನೂ ಕಂಡುಬರುವುದಿಲ್ಲ. ಮುಂದಿನ ಜನಾಂಗವಾಗಿ ಏಳಬೇಕಾದ ಆ ವಿದ್ಯಾರ್ಥಿಗಳ ಮನಸ್ಸನ್ನೂ ಈಗಲೇ ಕಡಿಸಿ ಸರಕಾರದ ವಿರೋಧವೆಬ್ಬಿಸಿ ಸರಕಾರವೇ ಇದರಿಂದ ಹೆಚ್ಚು ನಷ್ಟವನ್ನು ಪಡಿಯುವುದು.

ಗವರ್ನರರು ಬಂದರು ಮತ್ತು ಹೋಗುವರು. ಆದರೆ ಅವರು ಬಂದುದರಿಂದ ರಾಜಭಕ್ತಿಯೇ ಜೀವನದ ಒಂದೇ ಒಂದು ಗುರಿಯಾಗಿಟ್ಟವರಿಗಾದರೂ ಏನು ಪ್ರಯೋಜನವಾಯಿತು?

## ವಿದೇಶ ವರ್ತಮಾನ.

— ಲಂಡನ್ ನಗರದಲ್ಲಿ ಮಿ। ಮೆಕ್ಡೊನಾಲ್ಡರು ಲೇಬರ್ ಪಾರ್ಟಿಸಮ್ಮೇಳನದಲ್ಲಿ ಹೃದಯಂಗಮವಾದ ಒಂದು ಭಾಷಣವಿತ್ತರು. ಅವರ ಭಾಷಣದಂತೆ ಪ್ರಪಂಚದಲ್ಲಿ ಕೆಲಸಗಾರರ ದುಸ್ಥಿತಿಯು ಬಹಳ ಶೋಚನೀಯವಾಗಿರುವದು. ಈ ದುರ್ಗತಿಯನ್ನು ಹೋಗಲಾಡಿಸಲು ಸ್ವಾತಂತ್ರವಾಗಿರುವ ಯಾವ ಜನಾಂಗದಿಂದಾದರೂ ಅಸ್ಪಸಾಧ್ಯವಾಗಿರುವದು. ಮೆಕ್ಡೊನಾಲ್ಡರು ಜಿನೀವಾದಲ್ಲಿ ನಡೆದ ಟೆರಿಫ್ ಟ್ರೂಸ್‌ಗೆ ಸಹಿ ಮಾಡಿರುವರು. ಇದರ ಮೂಲಕ ಪ್ರಪಂಚದ ಪ್ರತಿಯೊಂದು ಕೈಗಾರಿಕೆಯು ಜನಾಂಗದವರಲ್ಲಿಯೂ ಸ್ನೇಹಭಾವವನ್ನು ಬೆಳೆಸಿರುವರು. ಆದರೆ ಸದರಿ ಟೆರಿಫ ರಾಜಿ ಪಂಚಾಯತಿಕೆಯು ಎಷ್ಟರ ಬೆಳೆಗೆಯನ್ನು ಪಡೆಯಲಿಕ್ಕಿರುವುದೆಂದು ನೋಡಬೇಕಾಗಿರುವದು. ಒಂದುವೇಳೆ ಮೇಲೆ ವಿವರಿಸಿದ ರಾಜಿ ಪ್ರಸ್ತಾಪವು ಯಶಸ್ವಿಯಾಗದಿದ್ದರೆ ಮೆಕ್ಡೊನಾಲ್ಡರು ತಿಳಿಸುವಂತೆ ಸರಕಾರವು ಬೇರೆ ವಿಧಾನಗಳನ್ನು ಕಂಡುಹಿಡಿಯಲಿಕ್ಕಿರುವುದಂತೆ.

ಮೆಕ್ಡೊನಾಲ್ಡರ ಸೂಚಿಸುವಂತೆ ಬ್ರಿಟಿಷ ಕೈಗಾರಿಕೆಯ ಅವನತಿಯು ಸರಕಾರವು ಹೊರಿಸುವ ತೆರಿಗೆಯಿಂದಾಗಲೀ ದಿನವಹಿ ಬೇಕಾಗುವ ಮಜೂರಿಯ ವ್ಯಯದಿಂದಾಗಲಿ ಉಂಟಾಗಿಲ್ಲ. ವ್ಯಾಪಾರಸ್ಥರು ವ್ಯಾಪಾರವನ್ನು ಲಕ್ಷಿಸದಿರುವುದರಿಂದಲೇ ಆಗಿರುವದು. ಪತ್ರ ದೇಶಾಭಿವೃದ್ಧಿಯ ಮೂಲಕಾರಣವೆಂದರೆ— ಜನರಿಗೆ ಯೋಗ್ಯ ಕೆಲಸವನ್ನು ಏರ್ಪಡಿಸಿ ಕೊಡುವುದೇ. ಇದಕ್ಕಾಗಿ ಸರಕಾರವು ಬೇಕಾದ ಸ್ಕೀಮುಗಳನ್ನು ಏರ್ಪಡಿಸಿರುವದು ಎಂದು ಮೊದಲಾಗಿ ಹೇಳಿರುವರು.

— ಹೋಗ್ ದೇಶದ ವರ್ತಮಾನದಂತೆ ಸೋಫಿಯದಿಂದ ಡಚ್ ಇಂಡೀಸಿಗೆ ಹೊರಟ ಡಚ್ ವಿಮಾನದ ಗಮನವನ್ನು ಟರ್ಕಿ ದೇಶವು ತಡೆ ಮಾಡಿರುವದು. ಟರ್ಕಿಯರ ಅನುಮತಿ ವಿನಾ ಅವರ ರಾಜ್ಯದ ಮೇಲೆ ಯಾವದೇ ವಾಹನವಾದರೂ ಹಾದ ಹೋಗಕೂಡದೆಂದು ಅವರವಾದ. ಟರ್ಕಿ ದೇಶದ ಮೇಲೆ ವಿಮಾನವು ಹಾದ ಹೋಗಬೇಕಾದರೆ ಟರ್ಕಿ ಸರಕಾರದ ಅಪ್ಪಣೆ ಪಡಕೊಳ್ಳತಕ್ಕದ್ದಂತೆ. ಆದುದರಿಂದ ಇನ್ನು ಮುಂದೆ ಡಚ್ ವಿಮಾನವು ಟರ್ಕಿ ದೇಶವನ್ನು ಬಿಟ್ಟು ಗ್ರೀಸ್ ಮತ್ತು ಇಜಿಪ್ಟ ದೇಶಗಳ ಮೇಲೆ ಹಾದ ಹೋಗುವಂತೆ ಏರ್ಪಾಡುಗಳು ನಡೆಯಲಿರುವವು.

— ಚೈನಾದೇಶದ ಸ್ವಾತಂತ್ರ್ಯ ಸಂಗ್ರಾಮದ ಯೋಧರು ದೇಶದ ಮುಖ್ಯ ಪಟ್ಟಣವನ್ನು ವಶಪಡಿಸಿರುವರಂತೆ!

—R ೧೦೧ನೇ ನಾಮಾಂಕಿತದ ವಾಯು ವಿಮಾನವು ನಾಶಹೊಂದಿರುವದಷ್ಟೇ. ಈ ಆಕಾಶ ಕಾರ್ಡಿಂಗ್‌ಟನ್ ದೇಶದವರು ಪತ್ರಿಕೆಗಳಿಗೆ ಬರೆದ ಅಭಿಪ್ರಾಯದಂತೆ, ಆ ಸಂದರ್ಭದಲ್ಲಿ ವಿಮಾನದ ಗೆ ಅಪಘಾತದಿಂದ ತಪ್ಪಿಸಲು ಉಪಾಯಗಳಿದ್ದವೆಂದು ತಿಳಿದೆ ಬರುತ್ತದೆ. ಸದರಿ ವಿಮಾನವು ಕಾರ್ಡಿಂಗಟನ್ ದೇಶದ ಮೇಲೆ ಹಾದು ಹೋಗುವಾಗಲೇ ನಾಶಹೊಂದಿರುವುದರಿಂದ ಆ ದೇಶದವರ ಅಭಿಪ್ರಾಯಗಳು ನಿಜವಾಗಿರಲೂ ಬಹುದೆಂದು ಪತ್ರಿಕೆಗಳು ಸಾರುತ್ತಿವೆ.

— ಲಂಡನ್‌ನಲ್ಲಿ ನೆರವೇರಿದ ಇಂಪೀರಿಯಲ್ ಕಾನ್ಫರೆನ್ಸಿನ ಠರಾವುಗಳ ಮೇರೆಗೆ ಪ್ರತಿಯೊಂದು ಸಂಸ್ಥಾನವು ತನ್ನ ಜನತೆಗೆ ಪ್ರಿವಿ ಕೌನ್ಸಿಲಿಗೆ ಅಪೀಲು ಮಾಡಬಹುದೆಂದು ಕೊಟ್ಟ ಹಕ್ಕು ಸ್ವಾತಂತ್ರ್ಯವನ್ನು ಮನ್ನಾ ಪಡಿಸುವಂತೆ ಠರಾವುಗಳನ್ನು ಪಾಸು ಮಾಡಿರುವರೆಂದು ತಿಳಿದುಬರುತ್ತದೆ. ಈ ಮಸೂದೆಯನ್ನು ಸ್ವೀಕರಿಸುವಂತೆ ಆಯಾಯ ಸಂಸ್ಥಾನದ ಮೂಲ ಕೋರ್ಟುಗಳು ವಿಧಿಮಾಡಲಿಕ್ಕಿರುವವು.

ಲಂಡನ ನಗರದಲ್ಲಿ ಗಾಂಧಿ ಸಮಾಜವು ಏರ್ಪಟ್ಟಿರುವದು. ಆ ಸಂಘದ ಸದಸ್ಯರು ೨ನೇ ತಾರೀಕಿನ ದಿನ ಗಾಂಧಿಜಿಯವರ ಜಯಂತಿ ಉತ್ಸವವನ್ನು ಕೈಕೊಂಡು ಮಹಾತ್ಮಾಜಿಯವರ ಅಹಿಂಸಾ ತತ್ವವು ಪ್ರಪಂಚದ ಪರಸ್ಪರ ದ್ವೇಷಾಸೂಯೆಗಳನ್ನು ತೊಲಗಿಸಲು ಪವಿತ್ರ ಸಾಧನವಾಗಿರುವುದೆಂದು ಮೊದಲಾಗಿ ಭಾಷಣಗಳಾದವು. ಆ ದಿನ ಸಭಾಸದಸ್ಯರು ಮಾಂಸಾಹಾರವನ್ನು ಸಂಪೂರ್ಣ ವರ್ಜಿಸಿರುವರೆಂದು ತಿಳಿದುಬರುತ್ತದೆ.

## ಒಳದೇಶ ವರ್ತಮಾನ.

### ಕರ್ನಾಟಕ ಸಾಹಿತ್ಯ ಸಮ್ಮೇಳನ

ಸ್ವಾಗತ— ಕರ್ನಾಟಕ ಸಾಹಿತ್ಯ ಪರಿಷತ್ತಿನ ೧೬ನೇ ಅಧಿವೇಶನವು ಮೈಸೂರು ವಿಶ್ವವಿದ್ಯಾನಿಲಯದವರಿಂದ ಆಹ್ವಾನಿಸಲ್ಪಟ್ಟು ಕನ್ನಡಿಗರಲ್ಲಿ ಮೊದಲನೇ ಸ್ಥಾನವನ್ನು ಹೊಂದಿದ ದಿವಾನ್ ಎಂ ಎನ ಕೃಷ್ಣರಾಯರವರಿಂದ ಆರಂಭಿಸಲ್ಪಟ್ಟಿತು. ದಕ್ಷಿಣ ಕನ್ನಡದವರನ್ನು ಬಿಟ್ಟು ಹೆಚ್ಚು ಕಮ್ಮಿ ಎಲ್ಲಾ ವಿದ್ಯಾವಂತರೂ ನೆರೆದಿದ್ದರು. ಶ್ರೀಮಾನ್ ಆಲೂರು ವೆಂಕಟರಾಯರೇ ಪರಿಷತ್ತಿನ ಅಧ್ಯಕ್ಷತೆಯನ್ನು ವಹಿಸಿದರು. ಮೈಸೂರಿನ Town Hallಲ್ಲಿ ಸ್ವಾಗತ ಸಮಾರಂಭವು ಆಚರಿಸಲ್ಪಟ್ಟಿತು.

ಸನ್ನಾಹ— ಸ್ವಾಗತ ಮಂಡಳಿಯ ಅಧ್ಯಕ್ಷತೆಯನ್ನು ಶ್ರೀ ಬಿ ಎಂ ಶ್ರೀ ಕಂಠಯ್ಯನವರು ವಹಿಸಿದ್ದರು. ಇವರು ಮಾಡಿದ ಬೇಕಾದ ಸಿದ್ಧತೆಗಳು ಅತಿಥಿಗಳಿಗೆ ತುಂಬ ಅನುಕೂಲತೆಗಳನ್ನು ಒದಗಿಸಿಕೊಟ್ಟವು.

ಕುಮಾರವ್ಯಾಸಜಯಂತಿ— ಅಂದಿನ ಸಂಜೆ ಹೊತ್ತಿನಲ್ಲಿ ಮಹಾರಾಜಾ ಕೊಲೇಜಿನ ಭವ್ಯ ಮಂದಿರದಲ್ಲಿ ಕುಮಾರ ವ್ಯಾಸಜಯಂತಿಯ ಉತ್ಸವವು ಬಹಳ ವಿಜೃಂಭಣೆಯಿಂದ ನೆರವೇರಿತು. ಸಭಾ ಮಂದಿರವು ಜನ ಸಂದಣಿಯಿಂದ ತುಂಬಿತ್ತು. ೯ ಮಂದಿ ಗಮಕಿಗಳು ಗದುಗಿನ ಭಾರತದ ಬೇರೆ ಬೇರೆ ಭಾಗಗಳನ್ನು ಕರ್ಣಾನಂದವಾಗುವಂತೆ ಹಾಡಿದರು.

ಕರುಣ ಲೇಖಕರು ಅನೇಕ ಬಗೆಯ ಲೇಖನಗಳು ವಿಮರ್ಶಾರ್ಥವಾಗಿ ಅಧಿವೇಶನಕ್ಕೆ ಬಂದಿದ್ದವು. ಕವಿತೆ ನಾಟಕ, ಮುಂತಾದ ಲೇಖನಗಳು ಯೋಗ್ಯ ಪುರಸ್ಕಾರವನ್ನು ಹೊಂದಿರುವವು.

ಗಾಯನ— ಸಂಜೆ ೬ ಘಂಟೆ ಹೊತ್ತಿಗೆ ಕಾಲೇಜಿನಲ್ಲಿ ಶ್ರೀ ಬಿಡಾರ ಕೃಷ್ಣಪ್ಪನವರ ನವರಸಭರಿತ ಗಾಯನವೂ ನಡೆಯಿತು.

ಆಫೀಸರರ ಸಮ್ಮೇಳನ— ತಾ ೭ನೇ ದಿನ ಉದ್ಯೋಗಸ್ಥರೆಲ್ಲರೂ ಸಭೆ ಸೇರಿ ಮುಂದಿನ ವರ್ಷದ ಆಯವ್ಯಯವನ್ನು ವಿಮರ್ಶಿಸಲಾಯಿತು. ಬೇಕಾದ ಸೂಚನೆಗಳು ಸೂಚಿಸಲ್ಪಟ್ಟವು. ಸಂಜೆವಾಯ ಸಮ್ಮೇಳನ ಸಮಾರಂಭವು ಕೊನೆಗಂಡಿತು. ೫ ಮತ್ತು ೬ನೇ ತಾರೀಕುಗಳ ರಾತ್ರೆಗಳಲ್ಲಿ ೨ನೇ ಮನೋಹರ ನಾಟಕಗಳನ್ನು ನಟಿಸಿ ಕರ್ನಾಟಕದ ಅನೇಕ ಕಡೆಗಳಿಂದ ಬಂದ ಸಭಿಕರಿಗೆ ನೇತ್ರಾನಂದವನ್ನು ಉಂಟುಮಾಡಿದರು.

ಲಾಹೋರಿನ ಒಳಸಂಚು— ವೀರಪುರುಷರ ಜನ್ಮಭೂಮಿಯಾದ ಲಾಹೋರಿನಲ್ಲಿ ಮಾನ್ಯ ಲಾಲಾ ಲಜಪತರಾಯರೇ ಮೊದಲಾದ ಮಹನೀಯರು ಹುಟ್ಟಿ ರಾಷ್ಟ್ರೋನ್ನತಿಯ ಕಾರ್ಯಕಲಾಪಗಳಲ್ಲೇ ತಮ್ಮ ಅಮೂಲ್ಯ ಪ್ರಾಣಗಳನ್ನು ಕೊಟ್ಟರು. ಅಂತಹ ಸತ್ಯಾಗ್ರಹ ಸಮುದ್ರರಂಗವಾದ ಲಾಹೋರಿನಲ್ಲಿ ನಡೆದ ಒಳಸಂಚಿನ ಮೊಕದ್ದಮೆಯು ಭರತ ಖಂಡಕ್ಕೆ ಆದರ್ಶಪ್ರಾಯವಾಗಿ ಪರಿಣಮಿಸಿರುವದು. ಈ ಮೊಕದ್ದಮೆಯು ನಡೆಯಲು ಕಾರಣವೆಂದರೆ ಕಳೆದ ವರ್ಷ ದಿಲ್ಲಿಯ ಎಸೆಂಬ್ಲಿ ಗೃಹದಲ್ಲಿ ಥಟ್ಟನೆ ಬಾಂಬುಗಳು ಸಿಡಿದು ಅನೇಕ ಹಾನಿಯುಂಟಾಯಿತು. ಕೆಲವು ಪೋಲೀಸು ಅಧಿಕಾರಿಗಳೂ ಹತ್ಯೆಪಟ್ಟರಂತೆ. ಈ ಕೊಲೆಯ ಮೊಕದ್ದಮೆಯಲ್ಲಿ ಅಪರಾಧಿಗಳೆಂದು ಪರಿಗಣಿಸಲ್ಪಟ್ಟವರೆಂದರೆ ಭಗತ್ ಸಿಂಗ, ಸುಖದೇವ್, ರಾಜಗುರು ಕಿಶೋರಿಲಾಲರೇ ಮೊದಲಾದವರು. ಈ ಕೇಸಿನ ವಿಚಾರಣೆಯನ್ನು ಯುರೋಪದಿಂದ ಬಂದ ಸ್ಪೆಶಲ್ ನ್ಯಾಯಾಧೀಶರೇ ನಡೆಸಿದರು. ವಾದವಿವಾದಗಳು ಅನೇಕ ಕಾಲ ನಡೆದವು, ಕೊನೆಗೆ ಸುಮಾರು ೪೦೦ ಪುಟಗಳು ತುಂಬ ದಷ್ಟು ಉದ್ದವಾದ ತೀರ್ಪನ್ನು ಬರೆದರು. ತೀರ್ಪಿನಲ್ಲಿ ಓದಿದಂತೆ ಭಗತ್ ಸಿಂಗ್ ಸುಖದೇವ, ರಾಜಗುರು— ಈ ಮೂವರಿಗೆ ಫಾಶಿ ಶಿಕ್ಷೆಯು ವಿಧಿಸೋಣಾಯಿತು. [illegible] ಇತರರಿಗೆ ಆಜನ್ಮ ದ್ವೀಪಾಂತರವಾಸ ಶಿಕ್ಷೆಯನ್ನು ವಿಧಿಸಲಾಯಿತು. ಭಗತಸಿಂಗರೇ ಮೊದಲಾದವರ ಮರಣ ದಂಡನೆಯನ್ನು ವಿರೋಧಿಸಿ ಅನೇಕ ಕಡೆಗಳಲ್ಲಿ ಹರತಾಳಗಳು ಆಚರಿಸಲ್ಪಟ್ಟವೆ. ಆದರೆ ಭಗತ್ ಸಿಂಗರ ತೀರ್ಪಿನ ಮೇಲೆ ಪ್ರಿವಿ ಕೌನ್ಸಿಲಿಗೆ ಅಪೀಲು ಮಾಡುವರೆಂದು ವದಂತಿ ಇರುವದು.

# ದಕ್ಷಿಣ ಕನ್ನಡ.

**ಮಂಗಳೂರು:—** ಹೆಚ್ಚು ಸಮಯದಿಂದಲೂ ವರ್ತಮಾನ ಪತ್ರಿಕೆಗಳ ಪಲ್ಲವಿಯಾಗಿದ್ದ ಮಾನ್ಯ ಮದರಾಸ್ ಗವರ್ನರರ ಆಗಮನದ ದೃಶ್ಯವು ಅತಿಶೋಭಾಯಮಾನವಾಗಿ ಮಂಗಳೂರಿನಂತಹ ಚಿಕ್ಕ ಪಟ್ಟಣವನ್ನಾದರೂ ಪ್ರೋತ್ಸಾಹಗೊಳಿಸಿತು. ಹಂಪನ್ ಕಟ್ಟೆಯಲ್ಲಿ ಪೂರ್ಣಗೃಹ ತೋರಣ ದಿಂದ ಅಲಂಕರಿಸಲ್ಪಟ್ಟಿತ್ತು. ಏನಾದರೂ ಅನಾಹುತಗಳು ನಡೆಯುವವೋ ಎಂಬ ಭೀತಿಯಿಂದ ಪೋಲಿಸರ ಕೊರತೆಗೆ ಪಾರವೇ ಇದ್ದಿಲ್ಲ. ಮುನಿಸಿಪಾಲಿಟಿ ಮತ್ತು ತಾಲೂಕು ಬೋರ್ಡು ಸದಸ್ಯರು ತಂತಮ್ಮ ಹಾಲು ಹವಾಲೆಗಳನ್ನು ಸೂಚಿಸುವ ಅಭಿನಂದನಾ ಪತ್ರಗಳನ್ನು ಸಮರ್ಪಿಸಿದರು. ಅದರ ಪತ್ರದಲ್ಲಿ ಲಿಖಿಸಲ್ಪಟ್ಟ ಕಷ್ಟಪರಂಪರೆಗಳ ನಿವಾರಣಾರ್ಥವಾಗಿ ಸರಕಾರವು ಅದೆಷ್ಟು ಪ್ರೋತ್ಸಾಹಿಸಲಿಕ್ಕಿದೆಯೆಂದು ನೋಡಲಿಕ್ಕಿರುವದು. ಅಂತೂ ಗವರ್ನರ ಸಾಹೇಬರು ಯೋಗ್ಯ ರೀತಿಯಿಂದ ಮಂಗಳೂರಲ್ಲಿ ಬಹುಮಾನಿಸಲ್ಪಟ್ಟರು.

ಆದರೆ ಸತ್ಯಾಗ್ರಹ ಸಮರ ರಂಗದಲ್ಲಿ ಮಂಗಳೂರು ಅದೆಷ್ಟು ಹಿಂದುಳಿದಿದ್ದರೂ, ತನ್ನ ಕೈಲಾದ ಸಾಹಸವನ್ನು ಮಾಡಿರುವುದಷ್ಟೆ! ಮಂಗಳೂರು ಜನತೆಯ ಅಂತರ್ಯವಾದ ರಾಷ್ಟ್ರ ಪ್ರೇಮವು ಎಷ್ಟೇ ಅಗಾಧವಾಗಿದ್ದರೂ, ಕಾರಣಾಂತರಗಳಿಂದ ಹುಸಿ ಶಾಂತತೆಯನ್ನು ತಾಳಬೇಕಾಯಿತು. ಆದರೂ ಆ ರಾಷ್ಟ್ರ ಪ್ರೇಮವು ಮಂಗಳೂರನ್ನು ಎಂದಾದರೂ ಬಿಟ್ಟಿರುವುದೇ? ಆದುದರಿಂದ ಮಂಗಳೂರಿನವರು ಗವರ್ನರರ ಆಗಮನವನ್ನು ವಿರೋಧಿಸಿ ಕೆಲವೆಡೆಗಳಲ್ಲಿ ಹರತಾಳಗಳೂ ಆಚರಿಸಲ್ಪಟ್ಟವೆ, ಸಾಹುಕಾರರಲ್ಲಿ ಕೆಲವು ಮಂದಿ ತಮ್ಮ ಅಂಗಡಿಗಳನ್ನು ಮುಚ್ಚಿದರು. ಈ ನಡುವೆ ಯಾರೋ ಅಪರಿಚಿತರಾದವರು ಹಂಪನ ಕಟ್ಟೆಯಲ್ಲಿ ಕಟ್ಟಲ್ಪಟ್ಟ ತೋರಣಗಳಿಗೆ ಬೆಂಕಿ ಹಚ್ಚಿ ಸುಟ್ಟಿರುವರು; ಈ ಕೆಲಸದಿಂದ ಕಂಟ್ರಾಕ್ಟುದಾರನಿಗೆ ಕೆಲ ಮಟ್ಟಿಗೆ ನಷ್ಟವೇ ಆಗಿರಬಹುದು. ಈ ಕೆಲಸವನ್ನು ಸರಕಾರದ ಕಣ್ಣೆದುರಿಗೆ ಮಾಡುವುದಿದ್ದರೆ— ಲಾಟಿ ಪೆಟ್ಟು, ಶಿಕ್ಷೆಯಾದರೆ ಜೈಲೊಳಗೆ ಹೋಗಿ ಮೌನವಾಗಿ ಕುಳಿತುಕೊಳ್ಳಬಹುದು, ಆದರೆ ಪೆಟ್ಟಿನ ನೋವನ್ನು ಆದಾರು ಸಹಿಸುವರು? ಹೇಗೂ ಇಂಥ ಅಂಜುಬುರುಕರ ಸಾಹಸಗಳು ದೇಶಕ್ಕೆ ಗೌರವಾಸ್ಪದವಲ್ಲ.

ಈ ವೇಳೆಯಲ್ಲೇ ಸತ್ಯಾಗ್ರಹ ಕ್ಕಾಗಿ ವೆಲ್ಲೂರು ಜೈಲಿನಲ್ಲಿರುತ್ತಿದ್ದ ಶ್ರೀ ಆರ್. ಕೆ. ಪ್ರಭು ಮತ್ತು ಕಾಸರಗೋಡಿಗೆ ಸೇರಿದ ಮಿ. ಉಮೇಶರಾಯರ ಬಂಧವಿಮೋಚನೆಯೂ ಆಯಿತು. ಇವರೀರ್ವರು ತೋರ್ಪಡಿಸಿದ ಉಜ್ವಲ ರಾಷ್ಟ್ರ ಸೇವಾ ತ್ಯಾಗ ಅನೇಕ ಸತ್ಯಾಗ್ರಹಿಗಳು ಅವರನ್ನು ಎದುರುಗೊಂಡು ಸತ್ಕರಿಸಿದರು.

ಮಂಗಳೂರಿನ ಎಲೋಸಿಯಸ ಕಾಲೇಜಿನ ಅಧಿಕಾರಿಗಳು ಗವರ್ನರರು ಬರುವ ಸಂದರ್ಭದಲ್ಲಿ, ವಿದ್ಯಾರ್ಥಿಗಳನ್ನುದ್ದೇಶಿಸಿ ಯಾರು ಗಾಂಧಿ ಟೊಪ್ಪಿಗಳನ್ನಿಟ್ಟು ವಿದ್ಯಾಲಯವನ್ನು ಪ್ರವೇಶಿಸ ಕೂಡದಾಗಿ ಆಜ್ಞೆ ಮಾಡಿದ್ದರು. ಆದರೆ ಓರ್ವ ವಿದ್ಯಾರ್ಥಿಯು ಆಜ್ಞೆಯನ್ನುಲ್ಲಂಘಿಸಿ, ತುಂಬ ಬಡಸಾಡಿಗಳನ್ನೂ ಕೂಡ ಗಾಂಧಿ ಟೊಪ್ಪಿಗಳನ್ನೇ ಧರಿಸಬೇಕೆಂದು ಪ್ರೇರೇಪಿಸಿದನಂತೆ! ಆದಕ್ಕಾಗಿ ಅವನನ್ನು ಶಾಲೆಯಿಂದ ಹೊರಹಾಕಿರುವರೆಂದು ವದಂತಿ. ಈ ವಿಷಯದಲ್ಲಿ ಅವನ ಅನುಯಾಯಿಗಳಾದ ವಿದ್ಯಾರ್ಥಿಗಳು ಗಾಂಧಿ ಟೊಪ್ಪಿಗಳನ್ನೇ ಇಡುವೆವೆಂದು ಮುಷ್ಕರ ಹಿಡಿದಿರುವರಂತೆ.

ಅಂತೆಯೇ ಗವರ್ನಮೆಂಟ್ ಕಾಲೇಜಿನಲ್ಲೂ ಗಾಂಧಿ ಟೊಪ್ಪಿಗಳ ಚಳವಳವು ಹೂಡಲ್ಪಟ್ಟಿರುವದೆಂದು ತಿಳಿದುಬರುತ್ತದೆ.

ಮಂಗಳೂರು ಡಿಸ್ಟ್ರಿಕ್ಟ ಮೆಡಿಕಲ್ ಎಸೋಸಿಯೇಶನಿನ ಸಭೆಯು ಮಾನ್ಯ ಮೇಜರ್ ಎಮ್. ಎನ್. ಮ್ಹೋತಾ I. M. S. ಇವರ ಅಧ್ಯಕ್ಷತೆಯಲ್ಲಿ ತಾ. ೨೫-೧೦-೩೦ನೇ ದಿನ ಅಪರಾಹ್ನ ಘಂಟೆ ೫-೩೦ಕ್ಕೆ ಸರಿಯಾಗಿ ವೆನ್‌ಲೋಕ ಆಸ್ಪತ್ರೆಯಲ್ಲಿ ಜರಗುವದು. ಅಧ್ಯಕ್ಷರು "ಇಂದಿನ ವೈದ್ಯ ವಿದ್ಯೆಯ ಅಭ್ಯಾಸದ ಕುರಿತು" ಭಾಷಣ ಮಾಡುವರು. ಸರ್ವರೂ ಆಹ್ವಾನಿಸಲ್ಪಟ್ಟಿರುವರು.

ಮಂಗಳೂರಿಂದ ಪತ್ರಿಕೆಯ ಕಾರ್ಯಕಲಾಪಗಳ ಅಪವಾದನೆಯ ಮೇಲೆ ದಸ್ತಗಿರಿ ಮಾಡಲ್ಪಟ್ಟು, ಕಣ್ಣಾನೂರು ಸೆಂಟ್ರಲ್ ಜೈಲಿಗೆ ಅಟ್ಟಲ್ಪಟ್ಟ ೨೩ ಮಂದಿ ಸತ್ಯಾಗ್ರಹಿಗಳು ತಾ. ೧೩-೧೦-೩೦ಕ್ಕೆ ಬಿಡುಗಡೆ ಹೊಂದಿ ಮಂಗಳೂರನ್ನು ಸೇರಿರುವರು.

ಮಂಗಳೂರು ಮುನಿಸಿಪಾಲಿಟಿಯ ರಿಪೋರ್ಟು ಸೂಚಿಸುವಂತೆ ಈ ವಾರದಲ್ಲಿ ೩೧ ಜನನಗಳೂ ೩೩ ಮರಣಗಳೂ ಆಗಿವೆ ಎಂದು ತಿಳಿದು ಬರುತ್ತದೆ.

ನಮ್ಮ ಮುನಿಸಿಪಾಲಿಟಿಯು ಸಿಟಿ ಫಾದರುಗಳಿಗೆ ಗವರ್ನರವರಿಗೆ ಎಡ್ರೆಸುಗಳನ್ನು ಒಪ್ಪಿಸುವ ದಿವಸ ಜಿಲ್ಲಾ ಕಲೆಕ್ಟರರು, ಗವರ್ನರರ ಕೂಡೆ ಪರಿಚಯ ಮಾಡುವಾಗ್ಗೆ ಮೊದಲನೇ ಸ್ಥಾನವನ್ನು ಕೊಡದೆ ಇತರರ ಜನರ ಪರಿಚಯವಾದ ಮೇಲೆ ಮಾಡಿದರಂತೆ. ಇದು ವಿಷಯ, ಮುನಿಸಿಪಾಲಿಟಿಯವರು ಒಳಗೆ ಬಂದ ಗಡಿಬಿಡಿ ಎಡ್ರೆಸ್ ಸ್ವಲ್ಪ ಉದ್ದ ಬರೆದಿದ್ದರೆ ಮೊದಲಾಗುತ್ತಿತ್ತು.

## ಇನ್ನಾರು ಹೇಳಬೇಕು?

## "Silvery Spider"

ಮಂಗಳೂರಿಗೆ ಉತ್ತರದಲ್ಲಿರುವ ಕೊಟ್ಟಾರ ರಾಮುಕಮ್ಮಿಯರ ಮನೆ ಚಾವಡಿಯಲ್ಲಿ ಬೆಳ್ಳಿಯಂತೆ ಹೊಳೆಯುವ ಆಶ್ಚರ್ಯವಾದ ಜೇಡನೊಂದು ಬಲೆಯನ್ನು ಹೆಣೆದಿರುತ್ತದೆ. ಇದು ತನ್ನ ಎಂಟು ಕಾಲುಗಳನ್ನು ನಾಲ್ಕು ಜೋಡುಗಳಾಗಿ ಮಾಡಿ ಚತುರ್ದಿಕ್ಕುಗಳನ್ನು ತೋರಿಸುವುದಲ್ಲದೆ, ತಲೆಕೆಳಗಾಗಿ ಮೌನ ವ್ಯಾಖ್ಯಾನದ ವ್ರತವನ್ನು ಆಚರಿಸುವುದು, ಮತ್ತು ಬೆಳ್ಳಿಯಂತೆ ಹೊಳೆವಾದ ಇಂಗ್ಲೀಷು ಅಕ್ಷರಗಳಿಂದ ನಾಲ್ಕು ಮೇಲ್ಪಂಕ್ತಿಗಳನ್ನು ಹಾಕಿ ೪ ರಾಷ್ಟ್ರವನ್ನು ಸಾರುತ್ತಿರುವುದು. ಒಂದನೇದರಲ್ಲಿ M. K. Mahatma ಎಂತಲೂ, ೨ನೇದರಲ್ಲಿ manufacturing ಎಂತಲೂ, ೩ನೇದರಲ್ಲಿ ನಿಡ್ಡಾಗಿ Cotton ಎಂತಲೂ ೪ನೇದರಲ್ಲಿ Winning date approaching ಎಂತಲೂ ಈ ಜೇಡನು ಬರೆದು ಶುಭ ಪತಾಕೆಯನ್ನು ಏರಿಸಿದನೆಂದ ಬಳಿಕ ಮಾನವನಾದ ನಿನಗೆ ನಿನ್ನ ಕರ್ತವ್ಯ ತತ್ಪರನಾಗಿ ಸೇವಾವೃತ್ತಿಯಿಂದ ವಿಮೋಚನನಾಗಬಾರದೇ? ನಾವು ಕಮ್ಮಿಯರ ಮನೆಯಲ್ಲಿ ಜೇಡನು ಮಾಡಿದ ವೃತ್ತಿಯನ್ನು ನಾವೂ ಮಾಡ ತೊಡಗಿದರೆ "ರಾಮ ರಾಜ್ಯ"ವು ಹಿಂದೂಸ್ಥಾನಕ್ಕೆ ಪ್ರಾಪ್ತವಾಗುವುದೆಂಬುದಕ್ಕೆ ಸಂದೇಹವೆ!

"ಪ್ರತ್ಯಕ್ಷದರ್ಶಕ"

ಬೋಳೂರು ಬೊಕ್ಕಪಟ್ಣದಲ್ಲಿರುವ ಮುನಿಸಿಪಲ್ ಆಯುರ್ವೇದ ಧರ್ಮಾಸ್ಪತ್ರೆಯಲ್ಲಿ ಕಳೆದ ಸಪ್ಟಂಬರ ತಿಂಗಳಲ್ಲಿ ಚಿಕಿತ್ಸೋಪಚಾರ ಹೊಂದಿದ ರೋಗಿಗಳ ವಿವರ (೧) ಅಧಿಕ ರೋಗಿಗಳು ೮೫೧ ಈ ಪೈಕಿ ೧೯ ಆದಿದ್ರಾವಿಡರು ಸೇರಿ ೫೯೫ ಹಿಂದೂ (೨೦೮ ಗಂಡಸರು ೧೪೫ ಹೆಂಗಸರು ೨೪೨ ಮಕ್ಕಳು) ೫೦ ಮಹಮ್ಮದೀಯರು (೩೧ ಗಂಡಸರು, ೧೦ ಹೆಂಗಸರು ೧೫ ಮಕ್ಕಳು) ೨೪೬ ಕ್ರಿಶ್ಚನರು (೬೧ ಗಂಡಸರು ೭೯ ಹೆಂಗಸರು ೧೦೬ ಮಕ್ಕಳು) ಮತ್ತು ೬ ಆಂಗ್ಲೋ ಇಂಡಿಯಾನರೂ (೧ ಗಂಡಸು ೩ ಹೆಂಗಸರು ೨ ಮಕ್ಕಳು) (೨) ದಿನವಹಿ ಸರಾಸರಿ ಹಾಜರು — ೧೪೦ (೩) ಅಧಿಕಸಂಖ್ಯೆ — ಒಂದೇ ದಿವಸದಲ್ಲಿ ಹೆಚ್ಚಾಗಿ ಹಾಜರಾದ ಸಂಖ್ಯೆ ೨೬೪

## ಬರುವ ಖಾನೇಶುಮಾರಿ

(ಸಾಮಾನ್ಯ ವದಂತಿ)

ಖಾನೇಶುಮಾರಿಯ ಸುಪರಿಂಟೆಂಡೆಂಟರು ಮದರಾಸು ಪಟ್ಟಣವನ್ನು ಒಮ್ಮೆಗೆ ಸಂದರ್ಶಿಸಿದ್ದಾಯಿತು. ಮಿಕ್ಕುಳಿದ ಪ್ರಾಂತ್ಯಗಳ ಖಾನೇಶುಮಾರಿ ಲೆಕ್ಕ ಸಂಗ್ರಹಕ್ಕಾಗಿ ಸದರಿ ಸುಪರಿಂಟೆಂಡೆಂಟರು ತನ್ನ ಎರಡನೇ ಪ್ರಯಾಣವನ್ನು ಶೀಘ್ರದಲ್ಲೇ ಹೂಡಲಿಕ್ಕಿರುವರು. ಅವರ ಮೊದಲನೇ ಪ್ರಯಾಣವು ಖಾನೇಶುಮಾರಿ ಲೆಕ್ಕ ತಯಾರಿ ಬಗ್ಗೆ ಮನೆಗಳ ಸಂಖ್ಯೆಗಳ ಪಟ್ಟಿ ತಯಾರಿಸುವುದರಲ್ಲೇ ಗತಿಸಿಹೋಯಿತು. ಹಿಂದೂಸ್ಥಾನದ ಖಾನೇಶುಮಾರಿ ಇತ್ಯಾದಿ ಮನೆಗಳನ್ನು ಗಣತಿ ಪಟ್ಟಿಗಳನ್ನು ತಯಾರಿಸುವುದೇ ಮುಖ್ಯ ಕರ್ತವ್ಯವು. ಈ ರೀತಿ ಮಾಡುವುದರಿಂದ ಜನತೆಯ ಲೆಕ್ಕವು ಬಹಳ ಸುಲಭದಿಂದ ಗೊತ್ತುಪಡಿಸಬಹುದಾಗುತ್ತದೆ.

ಮನೆಗಳ ಗಣನಾ ಪ್ರಸಂಗದಲ್ಲಿ ಸುಪರಿಂಟೆಂಡೆಂಟರು ವಿಚಿತ್ರ ದೃಶ್ಯಗಳನ್ನು ನೋಡಿರುವರಂತೆ. ... ಅಮಲುಕೋರನಾಗಿ ಮರದಡಿಯಲ್ಲಿ ಬಿದ್ದಿದ್ದನು. ಇನ್ನೊಬ್ಬ ಹಿಂದೂ ತನ್ನ ಮನೆಯನ್ನೇ ಬಿಟ್ಟು ಅನ್ಯ ವಾಸಾವಲಂಬಿಯಾಗಿದ್ದನು. ಈ ರೀತಿಯ ಅನೇಕ ದೃಶ್ಯಗಳು ಸುಪರಿಂಟೆಂಡೆಂಟರ ದೃಷ್ಟಿಗೆ ಗೋಚರಿಸುವುವೆಂದು ತಿಳಿದುಬರುತ್ತದೆ.

ಸುಪರಿಂಟೆಂಡೆಂಟರ ದ್ವಿತೀಯ ಪ್ರಯಾಣವು ಜಿಲ್ಲಾ ಮತ್ತು ಮುನಿಸಿಪಾಲ್ ಇಲಾಖೆಯಿಂದ ಖಾನೇಶುಮಾರಿ ಲೆಕ್ಕ ತಯಾರಿಯ ಬಗ್ಗೆ ನಿಯಮಿಸಲ್ಪಟ್ಟ ಜನರಿಂದ ಕೆಲಸವು ಸರಿಯಾಗಿ ನಡೆಯುತ್ತಿದೆಯೋ ಇಲ್ಲವೋ ಎಂಬುದನ್ನು ನಿರ್ಧರಿಸುವ ವಿಷಯವನ್ನು ಒಳಗೊಂಡಿರುವದು. ಕೆಲಸಗಾರರು ತಾವು ತಯಾರಿಸುವ ಲೆಕ್ಕಪತ್ರಗಳಲ್ಲಿ ಒಮ್ಮೊಮ್ಮೆ ತಪ್ಪುಗಳನ್ನು ಮಾಡುವದು ರೂಢಿಯಾಗಿರುವುದು. ಇವು ಇನ್ನು ತಿದ್ದುಪಡಿಗೊಳಿಸುವುದೇ ಸುಪರಿಂಟೆಂಡೆಂಟರ ಎರಡನೇ ಪ್ರಯಾಣದ ಮೂಲ ಉದ್ದೇಶವು ಮತ್ತು ಅಂತಹ ಕೆಲಸಗಾರರು ಸರಿಯಾಗಿ ತರಬೇತು ಹೊಂದುತ್ತಿರುವರೋ ಎಂಬುದನ್ನು ಗಮನಿಸುವುದು. ಖಾನೇಶುಮಾರಿಯು ಜನರಿಗೆ ಬಹಳ ಅಗತ್ಯವಾದ ವಿಷಯವಾದುದರಿಂದ ಎಲ್ಲರೂ ಇದಕ್ಕೆ ಪ್ರೋತ್ಸಾಹಿಸುವರೆಂದು ನಂಬಲಾಗುತ್ತದೆ. ಈ ಕುರಿತು ಜನರ ಅಂದಾಜು ಲೆಕ್ಕಗಳನ್ನು ನಂಬಲಾಗದೆಂಬುದೇ ಸುಪರಿಂಟೆಂಡೆಂಟರ ಪ್ರಥಮ ಧ್ಯೇಯವು. ಆದುದರಿಂದ ಈ ವಿಷಯದಲ್ಲಿ ಜನರು ಯೋಗ್ಯ ಸಹಾಯ ಮಾಡಿ ಸರಿಯಾದ ಉತ್ತರವನ್ನು ಕೊಡುವವರಾಗಬೇಕು. ಖಾನೇಶುಮಾರಿ ಲೆಕ್ಕವು ೨೬-೨-೩೧ನೇ ಇಸವಿಗಾಗಿ ಮುಗಿಯತಕ್ಕದ್ದಾಗಿರುತ್ತದೆ. ಈ ಲೆಕ್ಕ ತಯಾರಿ ಮಾಡುವವರ ಸಂಬಳವಿಲ್ಲದ ಮನೆಮನೆಗೆ ಹೋಗಿ ವಿಚಾರಮಾಡಿಕೊಂಡು ಬಹಳ ಜಾಗ್ರತೆಯಿಂದ ಕೆಲಸ ಮಾಡುವ ದೇಶೋಪಕಾರವನ್ನು ಬಯಸುತ್ತಿರುವರು. ಈ ವಿಷಯದಲ್ಲಿ ಜನರು ಸದರಿ ಲೆಕ್ಕ ತಯಾರಿಸುವವರನ್ನು ಅಲ್ಲಗಳೆದ ಪ್ರಶ್ನೆಗಳಿಂದ ತೊಂದರೆ ಕೊಡದೆ ಬೇಕಾದ ವಿವರಗಳನ್ನು ಒದಗಿಸಿಕೊಡಲು ತಪ್ಪದೆ ಯೋಗ್ಯ ರೀತಿಯಿಂದ ಅವರಿಗಾಗುವ ಸಹಾಯ ಮಾಡುವುದಾಗಿಯೂ ತಿಳಿಸಲಾಗುತ್ತದೆ.

## ಲಾಟಿಯ ಊಟ

ಮಂಗಳೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳು ವಿದ್ಯಾರ್ಥಿವರ್ಗವನ್ನುದ್ದೇಶಿಸಿ ಈ ಮೊದಲೇ ಖದ್ದರ್ ಟೊಪ್ಪಿಯನ್ನು ಬಹಿಷ್ಕರಿಸಬೇಕೆಂದು ಬೇಡಿಕೊಂಡಿರುವರಷ್ಟೆ. ಪರಂತು ಮಾನ್ಯ ಮದರಾಸು ಗವರ್ನರರ ಆಗಮನದ ಸಮಯದಲ್ಲಿ ವಿದ್ಯಾಲಯಗಳ ಅಧಿಕಾರಿಗಳು ಮರಳಿ ಒಮ್ಮೆ ವಿದ್ಯಾರ್ಥಿಗಳನ್ನು ಖದ್ದರ್ ಟೊಪ್ಪಿಯ ಬಹಿಷ್ಕಾರ ವಿಷಯದಲ್ಲಿ ಎಚ್ಚರಿಸಿದರು. ಆದರೆ ವಿದ್ಯಾರ್ಥಿ ವರ್ಗವು ಮೇಲಾಧಿಕಾರಿಗಳ ಮಾತನ್ನು ಗಮನಿಸದೆ ಖದ್ದರ್ ಟೊಪ್ಪಿಗಳನ್ನು ಧರಿಸಿದವರಾಗಿ ತಂಡತಂಡವಾಗಿ ಗವರ್ನರರ ಆಗಮನದ ಉತ್ಸವ ಕಾಲದಲ್ಲಿ ತಮ್ಮ ರಾಷ್ಟ್ರಪ್ರೇಮವನ್ನು ತೋರ್ಪಡಿಸುವಂತೆ ವಿದ್ಯಾಲಯಗಳನ್ನು ಬಹಿಷ್ಕರಿಸಲು ಪ್ರಯತ್ನಿಸಿದರು. ಈ ರೀತಿಯ ವರ್ತನೆಯು ಪೋಲೀಸರ ಕೋಪವನ್ನು ಬಗೆಯಿತು. ಆದಕ್ಕಾಗಿ ಪೋಲೀಸರು ವಿದ್ಯಾರ್ಥಿಗಳನ್ನು ತಡೆದರು. ವಿದ್ಯಾರ್ಥಿಗಳು ಚದುರಿಹೋದರು. ಪೋಲೀಸರ ಮಾತನ್ನು ಲಕ್ಷಿಸಲಿಲ್ಲ. ಪರಿಣಾಮವಾಗಿ ಪೋಲೀಸರ ದಬ್ಬಾಳಿಕೆ— ದೊಡ್ಡ ಏಟುಗಳ ಸುರಿಮಳೆ. ಒಂದೆರಡು ವಿದ್ಯಾರ್ಥಿಗಳು ಜಖಂ ಹೊಂದಿರುವರು. ಕೆಲವರ ಗಾಂಧಿ ಕೊಡೆಗಳನ್ನು ಹಿಡಿದೆಳೆದು ಮುರಿದು ಹಾಕಿರುವರಂತೆ! ಗಾಂಧಿ ಟೊಪ್ಪಿಗಳ ಕೋಲಾಹಲ! ಅಂತೂ ಗವರ್ನರ ಸಾಹೇಬರು ಮಂಗಳೂರಿನ ವಿದ್ಯಾಲಯಗಳಿಗೆ ಈ ಮೊದಲೇ ಬಹುಮಾನ ವಚನಗಳನ್ನು ಸೂಚಿಸಿರುವರು. ಆ ವೇಳೆ ಅಂತಹ ವಿದ್ಯಾಲಯಗಳಲ್ಲಿ ವಿದ್ಯಾರ್ಜನೆ ಮಾಡುವ ಮಕ್ಕಳಿಗೆ ಯೋಗ್ಯ ಲಾಟಿ ಪೆಟ್ಟುಗಳಿಂದ ಪ್ರೋತ್ಸಾಹಿಸಿದರೆಂದೂ ಹೇಳಿದರೆ ಅದೊಂದು ಅತಿಶಯೋಕ್ತಿಯಾಗಲಾರದು. ಹಾಗೂ ವಿದ್ಯಾರ್ಥಿವರ್ಗದಿಂದ ಮಾನ್ಯ ಮದ್ರಾಸು ಗವರ್ನರರಿಗೆ ತೋರ್ಪಡಿಸಿದ ಬಹುಮಾನ ಚಿಹ್ನೆಗಳೆಂದರೆ— ಬಿಳಿಯಾದ ಖದ್ದರ್ ಟೊಪ್ಪಿಗಳೇ! ಪ್ರತಿಯಾಗಿ ವಿದ್ಯಾರ್ಥಿಗಳು ಲಾಟೀ ಪ್ರಹಾರ ಕ್ಕೆ ಗುರಿಯಾದರು. ವಿದ್ಯಾರ್ಥಿ ವರ್ಗವು ಇನ್ನು ಮುಂದೆ ಕೆಲದಿನಗಳ ಮಟ್ಟಿಗೆ ಶಾಲೆಗಳನ್ನೇ ಬಹಿಷ್ಕರಿಸಬೇಕೆಂದು ನಿರ್ಧರಿಸಿರುವದು.

**ಕಾಸರಗೋಡು—** ತಾಲೂಕು ಬೋರ್ಡು ಅಧಿಕಾರಿಗಳು ಬಡವರ ಪ್ರಯೋಜನಾರ್ಥವಾಗಿ ಹಾವಿನ ವಿಷವನ್ನು ನಿವಾರಿಸುವ ಮದ್ದನ್ನು ಉಚಿತವಾಗಿ ಕೊಡುವ ನಿರ್ಧಾರವನ್ನು ಮಾಡಿರುವರು. ತಾಲೂಕು ಬೋರ್ಡು ಅಧ್ಯಕ್ಷರು ತಿಳಿಯಪಡಿಸುವಂತೆ ವಿಷದ ಸೋಂಕಿನಿಂದ ನರಳುವವರು ಈ ಔಷಧಿಯನ್ನು ಪಡೆದು ಸುಖವನ್ನು ಹೊಂದಬಹುದು ಎಂಬುದಾಗಿ ತಿಳಿಯಬರುತ್ತದೆ.

**ಕೆದೋಡಿ—** ಇಲ್ಲಿಯ ಪಂಚಾಯತಿ ಕೋರ್ಟು ಮೆಂಬರರ ಅವಧಿ ಮುಗಿದಾಗಿ ಕಳೆದ ತಾ. ೨೫—೯—೩೦ರಲ್ಲಿ ತಾಲೂಕು ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ಗ್ರಾಮಸ್ಥರ ಸಭೆ ಜರಗಿ ೧೨ ಜನರ ಉಮೇದ್ವಾರರಾಗಿ ಇದ್ದವರ ಪೈಕಿ ಈಗಿನ ಪ್ರೆಸಿಡೆಂಟರಾಗಿರುವ ಮುರಾ ಮುಗುಳಿ ರಾಮಕೃಷ್ಣ ಭಟ್ಟ, ಅನೆಕಲ್ಲು ನಾರಾಯಣ ಭಟ್ಟ, ಪೆರ್ಣಿ ಮಹಾಬಲೇಶ್ವರ ಭಟ್ಟ, ಪಟೇಲ ಗಣಪತಿ ಭಟ್ಟ, ಇವರ ಮಗ ರಾಮಕೃಷ್ಣ ಭಟ್ಟ ಹೀಗೆ ೫ ಜನರನ್ನು ಚುನಾಯಿಸಿರುತ್ತಾರೆ. ಆದರೆ ಕಡೆಯವರ ವಿಷಯದಲ್ಲಿ ಗ್ರಾಮಸ್ಥರ ಆಕ್ಷೇಪಣೆ ಹೊರಟಿದೆ. ಮುಂದಿನ ಸಂಗತಿ ನೋಡಬೇಕಷ್ಟೆ!

ಗುರುಪುರ — ಕಳೆದ ತಾರೀಖು ೧೪—೧೦—೩೦ರಲ್ಲಿ ಮಾನ್ಯ ಗವರ್ನರ ದೊರೆಗಳ ಸವಾರಿಯು ಮಂಗಳೂರಿನಿಂದ ಕಾರ್ಕಳಕ್ಕೆ ... ಇಲ್ಲಿ ... ಗುರುಪುರ ಬಾಲಿಕಾ ... ಶಾಲಾ ಮಕ್ಕಳನ್ನು ಕರೆದು ... ದೊರೆಗಳು ... ಇವರು ಮಕ್ಕಳನ್ನು ... ಮಕ್ಕಳ ... ಸತ್ಕಾರಗಳನ್ನು ಸ್ವೀಕರಿಸಿ ಮಕ್ಕಳ ಮತ್ತು ಗ್ರಾಮಸ್ಥರ ... ತನ್ನ ... ಕಾರ್ಕಳಕ್ಕೆ ದಯಮಾಡಿದರು.

ಇಲ್ಲಿಯೇ ... ಒಂದು ... ಕೊಟ್ಟು ... ಹಾವು ಕಚ್ಚಿ ಮೃತಪಟ್ಟಿರುವನಂತೆ. ಪೋಲೀಸ್ ತನಿಖೆಯು ನಡೆಯುತ್ತಿದೆ. ಇನ್ನಾವರೂ ... ಕೊಯ್ಯುವವರು ಜಾಗ್ರತೆಯಿಂದಿರಲಿ.

**ಬಂಟವಾಳ ಮೂಡ:—** ಮದರಾಸು ಗವರ್ನರ ರು ಮಡಿಕೇರಿಯಿಂದ ಮಂಗಳೂರಿಗೆ ಹೋಗುವಾಗ ಜೋಡು ಮಾರ್ಗದ ಹತ್ತಿರ ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘ ಮತ್ತು ಬಂಟವಾಳ ಸೆಂಟರಿನ ಉಪಾಧ್ಯಾಯರ ಸಂಘದ ಕಡೆಯಿಂದ ಒಂದು ಅಂದವಾದ ಆರ್ಚನ್ನು ಕಟ್ಟಿ ಹೂಮಾಲೆಯನ್ನು ಹಾಕಿ ಸತ್ಕರಿಸಿದರು. ಸುಮಾರು ೭೫ ಮಂದಿ ಉಪಾಧ್ಯಾಯರೂ ಸುಮಾರು ೫೦೦ ಮಂದಿ ಮಕ್ಕಳೂ ಸಾಲಾಗಿ ನಿಂತಿದ್ದರು.

ಗೂಡಿನ ಬಳಿ ಬೋರ್ಡು ಶಾಲೆಯ ಕಡೆಯಿಂದ ತಾಲೂಕು ಬೋರ್ಡು ಪ್ರೆಸಿಡೆಂಟರ ಹುಕುಂ ಮೇರೆಗೆ ಆರ್ಚನ್ನು ಕಟ್ಟಿ ಗವರ್ನರ ದೊರೆಗಳಿಗೆ ಹೂಮಾಲೆ ಹಾಕಿದರು.

ಪಾಣೆಮಂಗಳೂರು— ಎಸ್. ವಿ. ಎಸ್. ಶಾಲೆಯವರು ತಮ್ಮ ಶಾಲೆಯ ... ಅಧ್ಯಕ್ಷರ ಹುಕುಂ ಮೇರೆಗೆ ಆರ್ಚನ್ನು ಕಟ್ಟಿ ಗವರ್ನರರಿಗೆ ಬಹುಮಾನ ಕೊಟ್ಟರು.

**ಕಾರ್ಕಳ—** ... ಅಧಿಕಾರಿಗಳೂ ... ತೋರಣ ... ಸತ್ಯಾಗ್ರಹಿಗಳಿಗೆ ... ಇವುಗಳಲ್ಲಿ ... ಇದರಿಂದಲೇ ತಿಳಿಯಬಹುದು. ಗವರ್ನರರ ಸ್ವಾಗತಕ್ಕಾಗಿ ಜನಸಮುದಾಯವು ... ಉತ್ಸಾಹ ... ಕೆಲಸ ಮಾಡುತ್ತಿರುವದೆಂದು ಇಂಥಹ ಸಂದರ್ಭದ ಸ್ವಾಗತದಿಂದ ಯಾರು ... ಸಾಧಿಸಬೇಕೆಂದಿರುವರೋ ಅದು ಜನರ ಸಮುದಾಯಕ್ಕೆ ಬೇಕಾಗಿ ಬಹುದು.

ಉಪಾಧ್ಯಾಯರನ್ನು ಹೇಗೆ ಕಾಣಬೇಕೆಂದೂ ... ಉಪಾಧ್ಯಾಯರ ಮಹಾ ಸಭೆಯು ... ವಿದ್ಯಾರ್ಥಿಗಳು ... ಉಪಾಧ್ಯಾಯರೂ ಮೇಲಧಿಕಾರಿಗಳೂ ... ಅಧಿಕಾರಿಗಳು ಉಪಾಧ್ಯಾಯರನ್ನು ದಯಾ ದೃಷ್ಟಿಯಿಂದ ನೋಡುವವರಾಗಬೇಕೆಂದೂ ವಿದ್ಯಾರ್ಥಿಗಳು ಹೇಳಿದಂತೆ ಅಲ್ಲದೆ ಉಪಾಧ್ಯಾಯರು ... ಅವರ ... ಬೇಕೆಂದೂ ಅವು ... ಯೂ ಇರಬೇಕೆಂದೂ ಕೋಟು ಬೂಟು ಮೊದಲಾದವುಗಳಿಗೆ ... ಸಾರುತ್ತಿರುವದು ಆ ಕ್ರಮವೆಂದೂ ... ತರಬೇಕಾದ ಉಪಾಧ್ಯಾಯರು ಹೆಚ್ಚಿನ ಶಿಸ್ತು ಮತ್ತು ಶಿಷ್ಯ ಸಂಪ್ರದಾಯಗಳನ್ನು ಬಲ್ಲವರೆಂದೂ, ಅವರನ್ನು ಉಳಿದವರು ಅನುಸರಿಸುತ್ತಿರುವದು ಯೋಗ್ಯವೆಂದೂ ಹೇಳಿದಂತಾಗಿ ನನ್ನ ನೆನಪು.

ಕಾರ್ಕಳದ ಹೈಸ್ಕೂಲಿಗೆ ಉಡುಪಿಯ ಕ್ರಿಕೆಟ್ ಪಂದ್ಯಾಟದಲ್ಲಿ ಕಪ್ಪು ದೊರೆತಿರುವದು.

[illegible] ಪ್ರಥಮ. ಸಂ [illegible] ೧೧ [illegible] ಪ್ರಥಮ. ಸರದ [illegible] ಶುಕ್ರವಾರದ ವರೆಗಿನ ಪಂಚಾಂಗ.

([illegible])

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | [illegible] | ಸೂರ್ಯ ಉ | ಅಸ್ತ |
|---|---|---|---|---|---|---|---|---|
| 18 | ಶ | ೧೧ | ೧೫.೨೭ | ಮಘಾ | ೧೬ ೪೦ | ೧ | 6 23 | 6 10 |
| 19 | ರ | ೧೨ | [illegible] | ಪುಬ್ಬಾ | ೧೨ ೪೨ | ೨ | 6 23 | 6 10 |
| 20 | ಸೋಮ | ೧೪ | ೮,೧೬ | ಉತ್ತರಾ | ೮.೭೬ | ೪ | 6 24 | 6 9 |
| 21 | ಭೌಮ | ● | [illegible] | ಹಸ್ತಾ | [illegible] | ೭ | 6 24 | 6 8 |
| 22 | ಬುಧ | ೧ | [illegible] | ಚಿತ್ರಾ | ೪ ೧೮ | [illegible] | 6 24 | 6 8 |
| 23 | ಗುರು | ೨ | [illegible] ೧೮ | ಸ್ವಾತಿ | ೧ ೪೬ | ೬ | 6 24 | 6 8 |
| 24 | ಶುಕ್ರ | ೩ | [illegible] ೦ | ವಿಶಾಖಾ | ೦ ೧೮ | ೬ | 6 24 | 6 [illegible] |

## ಮಂಗಳೂರಿನ ವಾಯುಸ್ಥಿತಿ.

| Date ತಾರೀಖು | Temperature ಉಷ್ಣ (ಕಾವು) Maximum ಹೆಚ್ಚಿನ | | Minimum ಕಡಿಮೆ | | Rainfall ಮಳೆ ದಿನದ ಮಳೆ | ಒಟ್ಟು ಮಳೆ |
|---|---|---|---|---|---|---|
| 10 | 87— | 5 | 75— | 2 | 0—20 | — |
| 11 | 87— | 1 | 72— | 6 | 3—73 | — |
| 12 | 86— | 3 | 75— | 3 | 0—03 | — |
| 13 | 88— | 8 | 74— | 7 | 0—13 | — |
| 14 | 88— | 0 | 74— | 9 | 0—19 | — |
| 15 | 87— | 8 | 73 | 8 | 0—57 | — |
| 16 | 88— | 0 | 77— | 0 | — | 132 18 |

## ಮಂಗಳೂರಿನ ಪೇಟೆ ಧಾರಣೆ.

| ಜಿನಸು | ಇಂದ ರೂ | ಆ | ವರೆಗೆ ರೂ | ಆ |
|---|---|---|---|---|
| ಮಸ್ಸೂರ | 7 | 10 | 8 | 6 |
| ಗುಡ್ಡ | 7 | 10 | | 14 |
| ದಾಲ | [illegible] | 0 | 7 | 8 |
| ಊರ ಅಕ್ಕಿ ಬೆಲ್ಲ[illegible] | 7 | 8 | 8 | 10 |
| ರಂಗೂನ ಬೆಳ್ತಿಗೆ ಗೋಣಿ ಒಳ್ಳೆ | 10 | 8 | 11 | 0 |
| ಸುಗ್ಗಿ | [illegible] | 0 | | 6 |
| ಎಲ್ಲೂ ಬೆಳ್ತಿಗೆ ಮುಡಿ ಒಳ್ಳೆ | 6 | 8 | 6 | 10 |
| ಗೋಧಿ ಗೋಣಿ ಒಳ್ಳೆ | 11 | | 13 | 0 |
| [illegible] ಗೋಣಿ ಒಳ್ಳೆ | [illegible] | 4 | 7 | 0 |
| ಕಡಲೆ ಗೋಣಿ ಒಳ್ಳೆ | 12 | 8 | 15 | 8 |
| ಹೆಸರು ಗೋಣಿ ಒಳ್ಳೆ | 13 | 0 | 15 | 0 |
| [illegible] ಗೋಣಿ ಒಳ್ಳೆ | 15 | 8 | 25 | 0 |
| ಉದ್ದು ಗೋಣಿ ಒಳ್ಳೆ | 14 | 0 | 15 | 0 |
| ಹೆಸರು ಗೋಣಿ ಒಳ್ಳೆ | 14 | 8 | — | |
| [illegible] ಖಂಡಿ ಒಳ್ಳೆ | 52 | 8 | 55 | |
| ಉಪ್ಪು ಗೋಣಿ ಒಳ್ಳೆ | 4 | 10 | 5 | 2 |
| [illegible] ಖಂಡಿ ಒಳ್ಳೆ | 70 | 0 | 5 | |
| [illegible] ಖಂಡಿ ಒಳ್ಳೆ | 31 | | 32 | 8 |
| ಎಳ್ಳಿಂಡಿ ಖಂಡಿ ಒಳ್ಳೆ | 2 | 8 | 30 | 0 |
| [illegible] ಎಣ್ಣೆ ಮುಡಿ ಒಳ್ಳೆ | 5 | 5 | 6 | 4 |
| ಎಳ್ಳೆಣ್ಣೆ ಮುಡಿ ಒಳ್ಳೆ | 7 | 0 | 7 | 5 |
| [illegible] ಒಳ್ಳೆ | 4 | 7 | 8 | 12 |
| [illegible] ಮುಡಿ ಒಳ್ಳೆ | 3 | 6 | 3 | 8 |
| [illegible] | 5 | 4 | 7 | 0 |
| [illegible] ಮುಡಿ ಒಳ್ಳೆ | 8 | 0 | 8 | 4 |
| [illegible] ಮುಡಿ ಒಳ್ಳೆ | 2 | 8 | 3 | 4 |
| [illegible] ಖಂಡಿ ಒಳ್ಳೆ | 190 | 0 | 200 | 0 |
| [illegible] ಖಂಡಿ ಒಳ್ಳೆ | 240 | 0 | | |
| [illegible] ಮುಡಿ ಒಳ್ಳೆ | 32 | 0 | — | |
| [illegible] ಮುಡಿ ಒಳ್ಳೆ | 4 | 2 | 4 | 4 |
| [illegible] ಖಂಡಿ ಒಳ್ಳೆ | 42 | 8 | 45 | 0 |
| [illegible] ಮುಡಿ ಒಳ್ಳೆ | 14 | 8 | 14 | 10 |
| [illegible] ಮುಡಿ ಒಳ್ಳೆ | 20 | 0 | 21 | 0 |
| [illegible] ಒಳ್ಳೆ | 12 | 0 | 12 | 4 |
| [illegible] ಮುಡಿ ಒಳ್ಳೆ | 13 | 0 | 18 | 4 |
| [illegible] ಒಳ್ಳೆ | 13 | 12 | — | |
| [illegible] ಖಂಡಿ ಒಳ್ಳೆ | 37 | 8 | 43 | 12 |
| [illegible] ಖಂಡಿ ಒಳ್ಳೆ | 230 | | — | |
| [illegible] | 85 | | 120 | |
| [illegible] | 100 | | 120 | |


# Chikmagalur Public Conveyance Motor Service.

CHIKMAGALUR

# ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ತಂತಿ ವಿಳಾಸ ಕನ್ವೆಯನ್ಸ್, Tel. Conveyance

## ಕಡೂರು, ಚಿಕ್ಕಮಗಳೂರು, ಮಂಗಳೂರು

(1) ಈ ಕಂಪೆನಿಯವರು ಜನರ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರುವ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು [illegible] ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

### ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10 30ಕ್ಕೆ, ಮೈಸೂರುಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ [illegible] ರೋಡಿಗೆ [illegible] 1 [illegible]ಕ್ಕೂ ಬೆಳ್ತಂಗಡಿಗೆ 1 45ಕ್ಕೆ, ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲುಪಿ, ಆ ಟ್ರೇನಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ ಕಾಸರಗೋಡು, ಮಲಬಾರು ಕಣ್ಣನ್ನೂರು ಪ್ರಾಂತಗಳಿಗೂ ಅಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10-30ಕ್ಕೆ ಬೆಳ್ತಂಗಡಿಗೂ 11 ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೂ, 12 ಗಂಟೆಗೆ ಚಾರ್ಮಾಡಿಗೂ 12 30ಕ್ಕೆ ಮೈಸೂರು ಗಡಿಗೂ, ಸೇರಿ ಅಲ್ಲಿಂದ ಒಡನೆ ಹೊರಟು 2 30ಕ್ಕೆ ಕೊಟ್ಟಿಗೆಹಾರಕ್ಕೂ ಸುಮಾರು 4 ಗಂಟೆಗೆ ಮೂಡಗೆರೆಗೂ, 5 ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿದ್ದಲ್ಲದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7 30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಡ್ರಾಪೂರ ಗೋವಾ, ಲೋಂಡ, ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರಿ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ ಪೂನಾ, ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ

**ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು**

ಬಿ ಎನ್ ಹನುಮಂತಪ್ಪ, ಖ್ಯಾರಡೂನ್ ಸೊರಾಬ್, ಕೆ ಸೂರಪ್ಪ ಸೆಟ್ಟಿ

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ ಪಿ. ಸಿ. ಕಂಪೆನಿಯವರ ಟಿಕ್ಕೆಟುಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.



# THE CANARA PUBLIC CONVEYANCE CO., LTD, MANGALORE.

(ESTABLISHED 1914)

# ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

## ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು

**ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ**

**ನಮ್ಮ ಸುಗಂಧ ಪೂರಿತವಾದ "ಒಟ್ಟೊ" ಮೋತಿಯಾ ತೈಲದ ಆರು ಬಾಟ್ಲಿಗಳನ್ನು ಒಮ್ಮೆಗೇನೇ ಕೊಂಡುಕೊಳ್ಳುವವರಿಗೆ ಈ ಕೆಳಗೆ ನಮೂದಿಸಿರುವ ೩೨೪ ಅಮೂಲ್ಯ ಬಹುಮಾನಗಳು ಉಚಿತವಾಗಿ ಕೊಡಲಾಗುವವು!**



ಬಂಗಾರ ಗಿಲ್ಟಿನ ಕೈ ಗಡಿಯಾರ ೧, ಬೆಳ್ಳಿ ೧ ... ಬಂಗಾರ ಗಿಲ್ಟಿನ ... (ಅನ್ಯಾಪಾದಗಳ ಅಳತೆಯನ್ನು ಕಳುಹಿಸಿ) ಉಚಿತಗಳೊಂದಿಗೆ ಮೂಲ್ಯ ರೂ. ೩—೦—೦ ಮಾತ್ರ ಟಪ್ಪಾಲು ಹಾಸಲು ೦—೧೦—೦.

ಪತ್ರವ್ಯವಹಾರವು ಇಂಗ್ಲೀಷಿನಲ್ಲಿಯೇ ಸಾಗಲಿರುವುದು.

**ಇಂಡಿಯನ್ ಸ್ಟೋರ್ಸ ಕೋ,**
47, ಲೆನಿಯಾಟೋಲಾ ಸ್ಟ್ರೀಟ್, ಪಿ. ಓ., ಹಟ್ಕೋಲಾ, ಕಲ್ಕತ್ತೆ

**INDIAN STORES CO.** 47, Lematola Street, Po, Hatkhola CALCUTTA.

# ಮಹಾತ್ಮಾಜಿಯವರ ಸತ್ಯಾಗ್ರಹ ಸಮಾಚಾರ

ತಾರೀಕು ೧೩—೧೦—೩೦

### ಅಲ್ಲಹಾಬಾದದಲ್ಲಿ

ಜವಾಹಿರಲಾಲ ನೆಹರೂರವರು ಬಹಿರಂಗವಾಗಿ ಭಾಷಣ ಮಾಡುತ್ತಿರಲು, ಪೋಲೀಸ್ ಅಧಿಕಾರಿಗಳು ಸದರಿಯವರ ಮೇಲೆ ೧೪೪ನೇ ಪ್ರಕರಣವನ್ನು ಜ್ಯಾರಿಮಾಡಿದರು ಅವರಿನ್ನುಮುಂದೆ ಆ ರೀತಿ ಬಹಿರಂಗ ಭಾಷಣವನ್ನು ಮಾಡಕೂಡದಾಗಿ ಪೋಲೀಸರ ಕಟ್ಟಪ್ಪಣೆ!

### ಬನಾರಿಸದಲ್ಲಿ

ಸ್ವಾಮಿ ಸಮ್ಮಕ್ಕಿವಾಯ (ಡಿಕ್ಟೇಟರ್) ಜಗನ್ನಾಥ ಶರ್ಮ (ಕಾರ್ಯದರ್ಶಿ) ಮತ್ತು ವಿಭೂತಿಭೂಷಣ (ಪ್ರೆಸಿಡೆಂಟ್)— ಈ ಮೂವರನ್ನು ರಾಜಕೀಯ ಅಪಾದನೆಯ ಮೇಲೆ ದಸ್ತಗಿರಿ ಮಾಡಿರುವರು ಕೈದಿಗಳ ಸ್ಮಾರಕಾರ್ಥವಾಗಿ ಹೋಗಿಸಲ್ಪಟ್ಟ ಸತ್ಯಾಗ್ರಹ ಮೆರವಣಿಗೆಯು ಪೋಲೀಸರಿಂದ ತಡೆಯಲ್ಪಟ್ಟಿತು ಜನಸ್ತೋಮವು ತುಂಬಿತು ಆದರೆ ಅನಾಹುತಗಳೇನೂ ನಡೆದಿಲ್ಲವೆಂಬದಾಗಿ ತಿಳಿದುಬರುತ್ತದೆ ತರುವಾಯ ಇಂಡಿಯನ್ ನೇಶನಲ್ ಕಾಂಗ್ರೆಸಿನ ಆಕ್ಟಿಂಗ್ ಕಾರ್ಯದರ್ಶಿಯಾದ ಪಂಡಿತ ಗೋವಿಂದ ಮಾಲವೀಯರು ಪೋಲೀಸ್ ಅಧಿಕಾರಿಯೊಡನೆ ಕೆಲ ಹೊತ್ತು ಸಂಭಾಷಣೆ ನಡೆಸಿದರು ಸತ್ಯಾಗ್ರಹಿಗಳು ೧೪೪ನೇ ಪ್ರಕರಣವನ್ನು ಜಾರಿಮಾಡಿದ ವಿಷಯವನ್ನು ತಿಳಿಯದವರಾಗಿದ್ದರು

### ನವಾದಿಲ್ಲಿಯಲ್ಲಿ

ಪೋಲೀಸ್ ಆಫೀಸರರು ಚಂದನಿ ಚೌಕ್ ಎಂಬಲ್ಲಿರುವ ರಾಷ್ಟ್ರೀಯ ಸಮಿತಿಯನ್ನು ದಾಳಿಮಾಡಿರುವರು ಆದರೆ ಪೋಲೀಸರು ದಾಳಿ ಮಾಡಲು ತುಂಬಾ ಕಷ್ಟಪಟ್ಟರು ಕಾಂಗ್ರೆಸ್ ಕಾರ್ಯಾಲಯದ ಬಾಗಲು ಒಳಗಿಂದ ಮುಚ್ಚಲ್ಪಟ್ಟಿತ್ತು ಪೋಲೀಸರು ಅದನ್ನು ತೆರೆಯಲಿಕ್ಕಾಗದೆ ಪಕ್ಕದಲ್ಲಿದ್ದ ಇಲೆಕ್ಟ್ರಿಕ್ ಕಂಬಗಳ ಮೂಲಕ ಮೇಲಕ್ಕೇರಿ, ಸದರಿ ಕಾರ್ಯಾಲಯವನ್ನು ಶೋಧನೆಮಾಡಿದರು ಕೆಲ ಹೊತ್ತು ಶೋಧೆಯಾದ ತರುವಾಯ ಪೋಲೀಸರು ಕಾಂಗ್ರೆಸ್ ಸಮಿತಿಯ ಸ್ಯಾನ್ ಬೋರ್ಡನ್ನೂ ಕೆಲವು ಕಾಗದಪತ್ರಗಳನ್ನೂ ಕೊಂಡು ಹೋಗಿರುವರೆಂದು ತಿಳಿದುಬರುತ್ತದೆ ೩ ರಾಷ್ಟ್ರಧ್ವಜಗಳನ್ನೂ ಒಯ್ದಿರುವರು ೧೧ ಮಂದಿ ಸತ್ಯಾಗ್ರಹ ಸ್ವಯಂಸೇವಕರ ದಸ್ತಗಿರಿಗಳೂ ನಡೆದವು ವ್ಹಾಯಿಸರಾಯರು ೯ನೇ ಓರ್ಡಿನೆನ್ಸನ್ನು ಜ್ಯಾರಿಮಾಡಿದುದರಿಂದ ಸದರಿ ಕಾಂಗ್ರೆಸ್ ಸಮಿತಿಗೆ ಸಂಬಂಧಪಟ್ಟ ಎಲ್ಲಾ ಸಾಮಾನುಗಳನ್ನು ಸ್ವಯಂಸೇವಕರು ತಪ್ಪಿಸಿ ಒಂದೆರಡು ಚಾಪೆಗಳನ್ನು ಮಾತ್ರವೇ ಉಳಿಸಿರುವರೆಂದು, ದಾಳಿಗಾಗಿ ಹೋದ ಪೋಲೀಸರಿಂದ ತಿಳಿದುಬರುತ್ತದೆ ಕಾಂಗ್ರೆಸ್ ಪಕ್ಷಪಾತಿಯಾಗಿ ಅಪಾದನೆಗೆ ಒಳಗಾದ ಬೆರಿಸ್ಟರ್ ಫ್ರೈಡ್ ಉಲ್ ಹಾಕ್ ಅನ್ಸಾರಿಯವರ ಮೇಲೆ ಹೂಡಲ್ಪಟ್ಟ ಮೊಕದ್ದಮೆಯು ಇನ್ನೂ ತೀರ್ಮಾನವಾಗಲಿಲ್ಲವೆಂದು ತಿಳಿದುಬರುತ್ತದೆ

### ಪೂನೆಯಲ್ಲಿ

'ಕೋಲಿಗಳು' ಎಂಬ ಕಾಡು ನಿವಾಸಿಗಳ ಹಾವಳಿಯು ಹೆಚ್ಚುತ್ತಿರುವದು ಇವರು ಸತ್ಯಾಗ್ರಹ ಚಳವಳದಲ್ಲಿ ತುಂಬ ಪ್ರೇಮಿಗಳು ಅವರು ಹೇಳುವಂತೆ ಮಹಾತ್ಮಾಜಿಯವರೇ ಅವರ ಅರಸರಂತೆ! ಅವರು ಹೇಳದೆ ಕಾಡ ತೆರಿಗೆಯನ್ನೆಂದೂ ತೆರುವದಿಲ್ಲವೆಂದೇ ಅವರ ದೃಢಪ್ರತಿಜ್ಞೆ ಈ ಬಾಬಿನಲ್ಲಿ ಸದರಿಯವರು ಒಬ್ಬ ಫೋರೆಸ್ಟ್ ಗಾರ್ಡನನ್ನ ಸನ್ಮಾನ ಮಾಡಿ ಪೋಲೀಸರ ರಕ್ಷಣೆಯನ್ನು ಪಡೆಯುವದಕ್ಕಾಗಿ ಪೋಲೀಸ ಸ್ಟೇಶನಿಗೆ ಒಪ್ಪಿಸಿದರಂತೆ! ತಾ ೧೦—೧೦—೩೦ನೇ ದಿನ ಸಹ್ಯಾದ್ರಿಯ ಮಾಂಡ್ಯ ಎಂಬ ಗ್ರಾಮಸ್ಥರು, ಓರ್ವ ಸಬ್ ಇನ್ಸ್ಪೆಕ್ಟರನನ್ನು ಚನ್ನಾಗಿ ಗದರಿಸಿದರು ಆಗ ಜೀವದಾಶೆಯಿಂದ ಪೋಲೀಸರು ಗುಂಡುಬಾರು ಮಾಡದೆ ಪರಾರಿಯಾದರು ಕಳೆದ ಮಂಗಳವಾರದ ದಿನ ಅಲ್ಲಿನ ಪೋಲೀಸ ಸುಪರಿಂಟೆಂಡೆಂಟರು ಸುಮಾರು ೫೦ ಮಂದಿ ಆಯುಧಪಾಣಿಗಳಾದ ಪೋಲೀಸು ಜವಾನರೊಂದಿಗೆ, ಗಲಭೆನಡೆಯುವ ಸ್ಥಳವನ್ನು ಸಂದರ್ಶಿಸಿದರು ಅವರು ತಿಳಿಸುವಂತೆ ಕೋಲಿಗಳ ಸೈನ್ಯವು ಬಹಳ ಬಲವುಳ್ಳದ್ದಾಗಿದ್ದಿತೆಂದು ತಿಳಿದುಬರುತ್ತದೆ ಒಮ್ಮೆಗೆ ಅವರನ್ನು ಎದುರಾಯಿಸುವ ಧೈರ್ಯವು ಸುಪರಿಂಟೆಂಡೆಂಟರಿಗೂ ಇದ್ದಿಲ್ಲ ಆದುದರಿಂದ ಸದರಿಯವರನ್ನು ರಾತ್ರಿ ವೇಳೆಯಲ್ಲೇ ಕೈಸೆರೆಮಾಡಬೇಕೆಂದು ನಿರ್ಧರಿಸಿಕೊಂಡರು, ಅಂತೆಯೇ ಸುಪರಿಂಟೆಂಡೆಂಟರು ತಮ್ಮ ನಿರ್ಧಾರವನ್ನು ಜ್ಯಾರಿಮಾಡಿರುವರು ಆದರೂ ಕೋಲಿಗಳ ಹಾವಳಿಯು ಶಾಂತವಾಗುವಂತೆ ತೋರುವುದಿಲ್ಲ, ಅಲ್ಲಲ್ಲಿ ಸುತ್ತುಮುತ್ತಿನ ಕಾಡುಗುಡ್ಡಗಳಲ್ಲಿ ಸದರಿ ಕೋಲಿಗಳು ಭದ್ರವಾಗಿ ಪಹರೆನಡಿಸುತ್ತಿರುವರು ಮಾಂಡ್ಯಾ ಗ್ರಾಮನಿವಾಸಿಕರು, ಊರನ್ನೇ ತೊರೆದಿರುವರೆಂದು ತಿಳಿದುಬರುತ್ತದೆ.

ಕೆಲವು ಗ್ರಾಮಗಳ ಕಾಡುತೆರಿಗೆಯು ಆಭರಣಗಳ ರೂಪದಿಂದಲೋ ಅಥವಾ ನಾಣ್ಯಗಳ ರೂಪದಿಂದಲೋ ಸರಕಾರಕ್ಕೆ ತೆರಲ್ಪಟ್ಟಿರುವದೆಂದೂ ತಿಳಿಯಲಾಗುತ್ತದೆ—ಆದರೆ ಗ್ರಾಮಗಳ ಪಟೇಲರು ಸುಪರಿಂಟೆಂಡೆಂಟರಿಗೆ ಮರೆಹೊಕ್ಕು ತೆರಿಗೆಯನ್ನ ಸರಿಯಾಗಿ ಕೊಡುತ್ತೇವೆಂದು ನಂಬಿಕೆಕೊಟ್ಟಿರುವರು

### ಅಹಮ್ಮದ ನಗರದಲ್ಲಿ

ಮಿ। ಎಂ ಎಸ್ ಸಾಠೆ ಎಂಬ ಪ್ರಮುಖ ಸತ್ಯಾಗ್ರಹ ಮುಖಂಡರನ್ನು ದಸ್ತಗಿರಿಮಾಡಿ ೧೮ ತಿಂಗಳ ಕಠಿಣ ಸಜೆಗೂ ೩೦೦ ರೂ ಗಳ ಜುಲ್ಮಾನೆಗೂ ಗುರಿಪಡಿಸಿರುವರು ಈ ಜುಲ್ಮಾನೆಯನ್ನು ಪಡೆಯುವದಕ್ಕಾಗಿ ಸದರಿ ಸಾಠೆಯವರ ಸಹೋದರನಿಂದ ನಡೆಯಿಸಲ್ಪಡುತ್ತಿದ್ದ 'ಅಕ್ಷರ್‌ಕೋಟನ್' ಪ್ರೆಸ್ಸನ್ನ ಪೋಲೀಸರು ದಾಳಿಮಾಡಿರುವರು ಆದರೆ ಸದರಿ ಪ್ರೆಸ್ಸಿನ ಮೆನೇಜರರು ಮಾತ್ರ ಬೇರೆಯವರಿರುವದರಿಂದ ಅವರ ಕೂಡೆ ಪತ್ರವ್ಯವಹಾರಗಳು ನಡೆಯುತ್ತಿವೆ ಎಂದೂ ತಿಳಿದುಬರುತ್ತದೆ

### ಕಲ್ಕತ್ತೆಯಲ್ಲಿ

ಬಂಗಾಳ ಓರ್ಡಿನೆನ್ಸಿನ ಮೇರೆಗೆ ಅನೇಕ ಮನೆಗಳು ಪೋಲೀಸರ ಶೋಧನೆಗೆ ತುತ್ತಾದುವೆಂದು ತಿಳಿದುಬರುತ್ತದೆ

ತಾರೀಕು ೧೪—೧೦—೩೦

### ಮುಂಬಾಯಿಯಲ್ಲಿ

ತಾ ೧೪—೧೦—೩೦ನೇ ದಿನ ಜೆ ಎಚ್ ವಿಲ್‌ಸನ್ ಎಂಬವರು ಆಕ್ಟಿಂಗ್ ಪೋಲೀಸು ಕಮಿಶನರ ಸ್ಥಾನವನ್ನು ಅಲಂಕರಿಸಿರುವರು ಅವರ ಪ್ರಕೃತದ ಧ್ಯೇಯವೆಂದರೆ—ವಾನರಸೇನೆ (ಸತ್ಯಾಗ್ರಹಿಗಳು)ಯನ್ನು ನಾಶಪಡಿಸಬೇಕೆಂಬುದೇ ಆಗಿರುವದು ದಾದರ್ ಮತ್ತು ಮಾಹಿಮ್ ಎಂಬ ಎರಡು ಸ್ಥಳಗಳನ್ನು ಇದೇ ದಿನ ಪೋಲೀಸರು ಶೋಧೆಮಾಡಿ ಕೆಲವು ಪತ್ರವ್ಯವಹಾರಗಳನ್ನು ವಶಪಡಿಸಿರುವರು

### ಕರಾಚಿಯಲ್ಲಿ

ಸತ್ಯಾಗ್ರಹ ಸಮಿತಿಯ ಕಾರ್ಯದರ್ಶಿಯಾಗಿದ್ದ ಮಿ ಕಾಹಿಲ್ ರಾಮಾಣಿ ಎಂಬವರು ೧೨ ತಿಂಗಳ ಕಠಿಣ ಶಿಕ್ಷೆಗೆ ಒಳಪಟ್ಟಿರುವರು ಕಾರಣ—ಕಳೆದ ಜೂನ್ ತಿಂಗಳಲ್ಲಿ ಕರಾಚಿ ಪಟ್ಟಣವು ಸರಕಾರದ ಪ್ರೋತ್ಸಾಹದಿಂದ ಇಂಡಿಯಾ ಚಕ್ರವರ್ತಿಯವರ ಜನ್ಮದಿನವನ್ನು ಆಚರಿಸಬೇಕೆಂದು ಸನ್ನಾಹಮಾಡುತ್ತಿರುವಲ್ಲಿ, ಕಾಹಿಲ್ ರಾಮಾಣಿಯವರು ವಿರೋಧಭಾವದಿಂದ ರಾಜದ್ರೋಹಕರ ವಿಷಯಗಳನ್ನು ಅಚ್ಚುಹಾಕಿಸಿ ಪ್ರಚಾರಪಡಿಸಿದರಂತೆ! ಇದಕ್ಕಾಗಿ ಕಾನೂನ ಭಂಗದ ಅಪಾದನೆಯ ಮೇಲೆ, ಇವರು ಈ ಮೊದಲೇ ಶಿಕ್ಷೆಗೆ ಒಳಗಾಗಿದ್ದರು

### ಅಹಮ್ಮದಾಬಾದದಲ್ಲಿ

ದರ್ಶನಾ ಪವರ ಸಂಸ್ಥೆಯ ಡಿಕ್ಟೇಟರರಾಗಿ, ಮಹಾತ್ಮಾಜಿಯವರ ಮುಖ್ಯ ಶಿಷ್ಯರಾದ ಮಿ ಒಾಗನಲಾಲ್ ಜೋಶಿ— ಎಂಬವರು ೩। ತಿಂಗಳ ಸಾದಾ ಸಜೆಗೆ ಒಳಗಾಗಿರುವರು ಕಾರಣ—ಪಿಕೆಟ್ ಮಾಡಿದರಂತೆ! ಆದರೆ ಮ್ಯಾಜಿಸ್ಟ್ರೇಟರು ಅವರನ್ನ ಬಿ ತರಗತಿಯ ಬಂದಿವಾಸಕ್ಕೆ ಶಿಫಾರಸುಮಾಡಿರುವರು

### ದಿಲ್ಲಿಯಲ್ಲಿ

ಪಿಕೆಟಿಂಗ್ ಕಾರ್ಯಕಲಾಪಗಳು ಬಹಳವಾಗಿ ಮುಂದರಿಯುತ್ತಿವೆ ದಸ್ತಗಿರಿಗಳು ನಡೆಯುತ್ತವೆ ಮಿ. ಫ್ರೈಡ್—ಉಲ್ ಹಾಕ್ ಅನ್ಸಾರಿಯವರಿಗೆ ೧೫ ತಿಂಗಳ ಸಾದಾ ಸಜೆಯು ವಿಧಿಯಾಗಿರುವದು

### ಪೇಶಾವರದಲ್ಲಿ

ಪಹರೆಯು ಎಡೆಬಿಡದೆ ನಡೆಯುತ್ತಿರುವದು

### ಅಕ್ರಮಕೂಟಗಳ ಪರಿಚಯ

ಅಕ್ರಮಕೂಟಗಳ ಲೇಖನಗಳು ಪತ್ರಿಕೆಗಳಲ್ಲಿ ಎಡೆಬಿಡದೆ ಪ್ರಕಟವಾಗುತ್ತಿರುವವು ಗುಜರಾಥಿನಲ್ಲಂತೂ ಎಷ್ಟೋ ರಾಷ್ಟ್ರೀಯ ಸಮಿತಿಗಳು ಹಾಗೂ ಸತ್ಯಾಗ್ರಹ ಆಶ್ರಮಗಳು ಸರಕಾರದ ಅಕ್ರಮಕೂಟಶಾಸ್ತ್ರವೆಂಬ ಬೂಕಿನಲ್ಲಿ ದಾಖಲಾದವು ಈ ಚಳವಳಿಯಲ್ಲಿ ಭಾಗವಹಿಸಿದ ನೂರಾರು ಸ್ತ್ರೀಪುರುಷ ಸತ್ಯಾಗ್ರಹ ಧುರೀಣರು ಮುಂಬಾಯಿಯಲ್ಲಿ ಸರಕಾರದ ಬಲೆಗೆ ಬಲಿಬಿದ್ದು ಕಾರಾಗೃಹಗಳನ್ನು ಸೇರಿದರು ಪ್ರಭಾತಫೇರೀ ಮೆರವಣಿಗೆಗಳೆಂದರೆ—ಅಕ್ರಮಕೂಟಶಾಸ್ತ್ರದ ಶಿರೋಲೇಖನಗಳಾಗಿರುವವು. ಈ ಮೆರವಣಿಗೆಗಳಲ್ಲಿ ಭಾಗವಹಿಸಿದ ನೂರಾರು ಜನರು ಈ ಮೊದಲೇ ಜೈಲೊಳಗಾದರು

ಶ್ರೀಯುತ ನರಿಮೋನರು ಮೊನ್ನೆತಾನೇ ಜೈಲಿನಿಂದ ಹೊರಬಂದರು, ಒಂದೆರಡು ದಿವಸದಲ್ಲೇ ಮರಳಿ ಅವರ ದಸ್ತಗಿರಿಯು ನಡೆಯಿತು, ೬ ತಿಂಗಳ ಸಾದಾ ಶಿಕ್ಷೆಯೂ ವಿಧಿಸೋಣಾಯಿತು ಮುಂಬಾಯಿಯ ವಿದೇಶೀ ವಸ್ತ್ರ ವ್ಯಾಪಾರಿಗಳು ತಮ್ಮ ಅಂಗಡಿಗಳನ್ನು ಮುಚ್ಚಿ ಬಹಿಷ್ಕಾರ ಚಳವಳದಲ್ಲಿ ಭಾಗವಹಿಸಿರುವರು. ಭಗತ್‌ಸಿಂಗರೇ ಮೊದಲಾದ ಲಾಹೋರ್ ಪಿತೂರಿಗಾರರ ಮರಣದಂಡನೆಯನ್ನು ನಿರೋಧಿಸಿ ಮುಂಬಾಯಿಯಲ್ಲಿ ಹರತಾಳಗಳು ಆಚರಿಸಲ್ಪಟ್ಟವು ಜನಸ್ತೋಮವು ಮೆರವಣಿಗೆಗಳಿಂದ ರಾಷ್ಟ್ರಗೀತೆಗಳನ್ನು ಹಾಡುತ್ತ ನಗರದಲ್ಲಿ ಸ್ವಾತಂತ್ರ್ಯಪ್ರೇಮವನ್ನು ಬೀರಿದರು ಇದಕ್ಕಾಗಿ ಪೋಲೀಸರ ಲಾಟಿ ಹೊಡೆತಗಳು—ಕಾಲೇಜುಗಳನ್ನೂ ಕೆಲವೆಡೆಗಳಲ್ಲಿ ಒಳಹೊಕ್ಕು ಪೋಲೀಸರು ವಿದ್ಯಾರ್ಥಿ ಹಾಗೂ ಅಧ್ಯಾಪಕ ವರ್ಗವನ್ನು ಮೂಳೆಮುರಿಯುವಷ್ಟು ಹೊಡೆದರು ಅಮೃತಸಾರದ ಮ್ಯಾಜಿಸ್ಟ್ರೇಟರು ೯ ವರ್ಷದ ಹುಡುಗನಿಗೆ ಮೂರು ತಿಂಗಳ ಕಠಿಣ ಸಜೆ ಮತ್ತು ಮೂರು ವರ್ಷಕಾಲ ದೆಹಲಿಯ ಸೆರೆಮನೆಯ ಕಾಲಾವಕಾಶಮಾಡಬೇಕೆಂದು ವಿಧಿಮಾಡಿದರು ಅಂತೂ ಸತ್ಯಾಗ್ರಹವೆಂಬ ಮಾತೃತ್ವದ ಪ್ರತಿಯೊಂದು ಸಮಾಜವು ಅಕ್ರಮಕೂಟವೆಂಬ ಶಾಸ್ತ್ರಕ್ಕೆ ಒಳಗಾಯಿತು

ತಾರೀಕು ೧೫—೧೦—೩೦

### ಮುಂಬಾಯಿಯ ಪಿಕೆಟಿಂಗ್

ವಿದೇಶೀ ವಸ್ತ್ರ ಮಳಿಗಗಳು ಅನೇಕ ಮಂದಿ ಸತ್ಯಾಗ್ರಹ ಸ್ವಯಂಸೇವಕರಿಂದ ಪಹರೆಮಾಡಲ್ಪಟ್ಟವು ಮಂಗಲ್‌ದಾಸ್ ಮಾರ್ಕೇಟುಗಳು ಮುಚ್ಚಲ್ಪಟ್ಟಿದ್ದವು ಮುಂಬಾಯಿ ನಗರವು ೪ ದಿನಗಳ ಹರತಾಳವನ್ನಾಚರಿಸಿತು ಸಾಧಾರಣ ೧೦೦ ಮಂದಿ ಸ್ವಯಂಸೇವಕರು (ಹೆಂಗುಸರು ಮತ್ತು ಗಂಡುಸರು) ಪಿಕೆಟಿಂಗ್ ಕಾರ್ಯದಲ್ಲಿ ಭಾಗವಹಿಸಿದರು ಈ ಬಾಬಿನಲ್ಲಿ ೪೫ ದಸ್ತಗಿರಿಗಳೂ ನಡೆದಿವೆ ೧೦ ಮಂದಿ ಪಹರೆಯ ಕಾರ್ಯಾಸ್ಥಿತರಿಗೆ ಪೋಲೀಸರ ಲಾಟಿಗಳಿಂದ ಕೆಲಮಟ್ಟಿನ ಜಖಂ ಆಗಿರುವದೆಂದೂ ತಿಳಿದುಬರುತ್ತದೆ

### ಮುಂಬಾಯಿಯ ಲಾಠಿ ಚಾರ್ಜ್

ಪಹರೆಯ ಕಾರ್ಯಾಸ್ಥಿತರಾಗಿ ಕ್ರಾಫೋರ್ಡ್ ಮಾರ್ಕೆಟು ಬಳಿ ನೆರೆದಿದ್ದ ಸಣ್ಣದೊಂದು ಜನಸಂದಣೆಯನ್ನು ಪೋಲೀಸರು ಲಾಠಿಗಳಿಂದ ಚದರಿಸಿದರು ೩ ಮಂದಿ ಗಾಯಹೊಂದಿದವರನ್ನು ಕಾಂಗ್ರೆಸ್ ಆಸ್ಪತ್ರೆಗೆ ಕೊಂಡುಹೋಗಿರುವರು ೬ ಮಂದಿಯ ಜಖಮುಗಳು ಅಷ್ಟೊಂದು ಕಠಿಣವಾಗಿಲ್ಲ ಪ್ರಭಾತಫೇರಿಗಳೂ ಲಾಠಿ ಪ್ರಹಾರಗಳ ರುಚಿನೋಡಿರುವವೆಂದು ತಿಳಿದುಬರುತ್ತದೆ ಪ್ರಭಾತಫೇರಿಗಳ ಕುರಿತು ೧೫ ಮಂದಿ ಪುರುಷ ಸ್ವಯಂಸೇವಕರ ದಸ್ತಗಿರಿಗಳಾಗಿರುವವಲ್ಲದೆ, ನಾರೀ ಸತ್ಯಾಗ್ರಹಿಗಳನ್ನು ಪೋಲೀಸರು ಕೈದುಮಾಡಿಲ್ಲವೆಂಬದಾಗಿ ತಿಳಿದುಬರುತ್ತದೆ

### ವಾನರ ಸೇನೆಯ ಘಟನಾವಳಿಗಳು

ತಾ ೧೫—೧೦—೩೦ನೇ ದಿವಸ ವಾನರಸೇನೆಯ ಮೆರವಣಿಗೆಗಳನ್ನ ಪೋಲೀಸರು ಪ್ರತಿಬಂಧಿಸಿದರು ಕ್ಯಾಪ್ಟನರಾದ ಬಟುಕ್ ದೇಸಾಯಿ—ಎಂಬವರು ದಸ್ತಗಿರಿಮಾಡಲ್ಪಟ್ಟರು ಇವರ ದಸ್ತಗಿರಿಯನ್ನು ನಿರೋಧಿಸಿ ವಾನರಸೇನೆಯವರು ತಮ್ಮ ಸಣ್ಣದೊಂದು ಮೆರವಣಿಗೆಯನ್ನು ಹೊರಡಿಸಿದರು ಈ ಮೆರವಣಿಗೆಯನ್ನು ಪೋಲೀಸರು ಏನೂ ಅಡ್ಡಿ ಇಲ್ಲದೆ ಮುಂದರಿಯಬಿಟ್ಟರೆಂದು ತಿಳಿಯಲಾಗುತ್ತದೆ

ವಿಲ್ಲೆಪಾರ್ಲೆ ಸತ್ಯಾಗ್ರಹ ರಂಗಕ್ಕೆ ಸೇರಿದ ಶ್ರೀಮತಿ ಕಮಲಾ ಬೆನ್ನರನ್ನು ತಾ ೨೦—೧೦—೩೦ರಲ್ಲಿ ದಸ್ತಗಿರಿ ಮಾಡಿದರು ಇವರು ಮೇಲೆ ಹೇಳಲ್ಪಟ್ಟ ಕ್ಯಾಂಪಿನ ಸೇನಾಪತಿಯಾಗಿದ್ದರು

ಮುಂಬಾಯಿಯ ಪೀಸ್ ಗೂಡ್ಸ್ ವ್ಯಾಪಾರಸ್ಥರು ಪರದೇಶಿ ಬಟ್ಟೆಗಳ ವ್ಯಾಪಾರವನ್ನು ಇನ್ನೊಮ್ಮೆ ಆರಂಭಿಸಬೇಕೆಂದೇ ನಿರ್ಧರಿಸಿರುವರು.

(೧೩ನೇ ಪುಟಕ್ಕೆ ಮುಂದರಿಯುವದು)

## The Zandu Pharmaceutical Works, Ltd., Bombay, 14
ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ 'ಝಂಡೂ'ಯವರ

# ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!

ಹಸಿ ಆಮಲಕ ಇನ್ನು ಇತರ ವನೌಷಧಿಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು. ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದುರ್ಬಲತ್ವ, ಕೆಮ್ಮು, ಎದೆ ನೆಗಡಿ, ಸ್ವರಭಂಗ, ವೃದ್ಧಾಪ್ಯ, ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

ಕ್ರಯ 1 ಶಾನು ಸೀಸೆ ರೂ. 2—8—0, ½ ಶಾ ರೂ. 1—5—0, ¼ ಶಾ. ರೂ 0—13—0

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು:— ದಾಮೋದರ್ ಅಂಡ್ ಕಂಪೆನಿ, 78 ಛೈನಾ ಬಜಾರು ರಸ್ತೆ, ಮದ್ರಾಸು

ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ

ಮಂಗಳೂರು ಏಜಂಟರು — ದಿ ಊಲನ್ ಮಾರ್ಟ್

ಸಿರ್ಸಿ ಏಜಂಟರು — ಎಸ್. ಎಲ್ ಧಾಕಪ್ಪಾ ಎಂಡ್ ಬ್ರದರ್ಸ್

ಸಬ್ ಏಜಂಟರು — ಯು ಜನಾರ್ಧನರಾವ್, ಪುತ್ತೂರು, ದ ಕನ್ನಡ

ಮಂಗಳೂರು ಏಜಂಟರು — ತಿಪ್ಪಣ್ಣ ಶ್ರೇಷ್ಠಿ, ಬಸ್‌ಸ್ಟೆಟ್

☞ ವಿವರ ಪಟ್ಟಿಗಾಗಿ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.



TELEGRAMS ASPINWALCO' TELEPHONE No. 15

# Gum-Dipped



INSURES MAXIMUM
# MILEAGE

Gum Dipping the extra process of insulating with rubber every fiber of every cord within the tire, is one of many reasons why Firestone Gum Dipped Tires have broken all mileage records. Service with every tire you buy from us.

DISTRIBUTORS

Aspinwall & Co, Ltd
(Address) MANGALORE

STOCKISTS

UDIPI
K Siddaya Hegde

KASARGODE
Rama Nayak

KANHANGAD
K S Russool

COONDAPUR —
C Gopal Mukunda Pai,
General Merchant
COONDAPUR (S Kanara)

BHATKAL
Messers Kashimjee Sham shuddeen Saheb Motor Service

Puttur
K Venkatraya Pai
Imperial Cycle Stores



**FOR YOUR CAR**

## WILLARD BATTERIES.

SIMONZ KLEENER SIMONIZ POLISH

AGENTS —

## Messrs. Aspinwall & Co, Ltd
MANGALORE



"ಬಿಟ್ಟಿ" "ಪುಗಸಟ್ಟೆ" "ಬಿಟ್ಟಿ"



**ಜೇಬಿನ ಲಿವರ್ ಗಡಿಯಾರವೂ ಕೈ ಗಡಿಯಾರವೂ ಬಿಟ್ಟಿ**

**೩ ತಿಂಗಳೊಳಗಾಗಿ ೩೦೦೦ ಗಡಿಯಾರಗಳನ್ನು ಬಿಟ್ಟಿಯಾಗಿ ಕೊಟ್ಟಿದ್ದೇವೆ**

[illegible]

ಪತ್ರವ್ಯವಹಾರಗಳು ಇಂಗ್ಲೀಷಿನಲ್ಲಿ ಬರೆಯಬೇಕು

**Imperial Watch Company,**
(S) Post No, 12, BOMBAY



## ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

**ಶಾರದಾ ಛಾಪಖಾನೆ,**
ರಥಬೀದಿ, ಮಂಗಳೂರು



## ಮುದಲ್ ತರವಾದ ಬೆಳ್ಳಿ ಉಡಿದಾರ ಹಗ್ಗ.
ESTD 1896

ಅನೇಕ ವರುಷದಿಂದ ನಾವು ಬೆಳ್ಳಿ ಉಡಿದಾರಗಳನ್ನು ತಯಾರು ಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿ ಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ಉಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ಧಾರಣೆ ಸಂಸದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದುದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳನ್ನು ಕಳುಹಿಸುತ್ತೇವೆ. ಒಂದು ಸಲ ನಮ್ಮಲ್ಲಿಂದ ತರಿಸಿ ನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ಧಾರಣೆ ಪ್ರಕಾರ ಸರಕುಗಳಿಗೆ ಧಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಸರಾಫ ವ್ಯಾಪಾರಿ,
ಕಿನ್ನಾಪೇಟೆ, ಸೇಲಂ, (ದಕ್ಷಿಣ ಇಂಡಿಯಾ)



## Grand Clearing Sale!

ಜಗತ್ಪ್ರಸಿದ್ಧವಾದ ನಮ್ಮ "ಬಟ್ಟೊ ಫುಲಾರಾಮ" ಸುಗಂಧದ ತಲೆ ಬಾಟಲಿಗಳನ್ನು ನಮ್ಮ ಗಿರಾಕಿಗಳಿಗೆ ಕೊಡಲು, ಅವರು ಈ ಕೆಳಗಿನವುಗಳನ್ನು ಧರ್ಮಾರ್ಥವಾಗಿ ಪಡೆಯುವರು —

1 ಕರವಸ್ತ್ರ 1 ಫೌಂಟನ್ ಪೆನ್ 1 ಕ್ಲಿಪ್ 1 ಹರಿತವಾದ ಚಾಕು 1 ಸುಗಂಧ ಸಾಬೂನು, 1 ಅಂದವಾದ ಸಿಗರೇಟು ಕೇಸು 12 ಉತ್ತಮ ಮೊನೆಗಳು, 1 ಕೋಟಿಂಗ್ ಪೆನ್ಸಿಲ್ 1 ಸಿಟ್ಟಿ ಗಿಲೀಟಿನ ಗುಂಡಿಗಳು, 1 ಕನ್ನಡಿ 1 ಬಾಚಣಿಗೆ 1 ಕತ್ತರಿ 1 ಸ್ಟೋರದ ಬ್ರಶ್ಶು 1 ಹರಳಿನ ಉಂಗುರ

ಅಂಚೆವೆಚ್ಚ ಆಣೆ 1—8—

ಇಂಗ್ಲೀಷಿನಲ್ಲಿ ಬರೆಯಿರಿ

**Indian Stores**
5 Beadon Street,
CALCUTTA



ಒಮ್ಮೆ ಪರೀಕ್ಷಿಸಿರಿ! ತೃಪ್ತಿ ಹೊಂದಿರಿ!

## ದಿ ಕ್ರೌನ್ ರಬ್ಬರ್ ಸ್ಟಾಂಪು ಕಂಪೆನಿ,
ಹೆಡ್ಡ್ ಆಫೀಸು ಬಲ್ಮಠ ರಸ್ತೆ, ಕಂಕನಾಡಿ ಪೋಸ್ಟು,
ಮಂಗಳೂರು, — ಕನ್ನಡ

## ರಬ್ಬರು ಮೊಹರುಗಳು

ಇಲ್ಲಿ ಉತ್ತಮವಾದ ಎಲ್ಲಾ ನಮೂನೆ ರಬ್ಬರು ಮೊಹರುಗಳೂ, ಹಿತ್ತಾಳೆ ಇತ್ಯಾದಿ ಲೋಹಗಳಲ್ಲಿಯೂ ಮಾರ್ಬಲ್ ನಲ್ಲಿಯೂ ಕೆತ್ತನೆಯ ಕೆಲಸವನ್ನೂ ಚಿಕ್ಕ ನಾಜೂಕಾಗಿ ಸ್ವಲ್ಪ ಸಮಯದಲ್ಲಿ ಮಾಡಿಕೊಡಲ್ಪಡುತ್ತದೆ.

ಹೆಚ್ಚಿನ ಮಾಹಿತಿಯನ್ನು ಪತ್ರಮೂಲಕವಾಗಲೀ, ಆಫೀಸಿನಲ್ಲಿ ಸ್ವತಃ ಬಂದಾಗಲೀ ತಿಳಿದುಕೊಳ್ಳಿರಿ.

ಎಮ್ ದೇವದಾಸ ಕಿಣಿ,
ಮೆನೇಜಿಂಗ ಪ್ರೊಪ್ರೈಟರ್.



## ಉಪಾಧ್ಯಾಯರೂ ಯುನಿವರ್ಸಿಟಿ ಪರೀಕ್ಷೆಗಳೂ.

ಇಷ್ಟರ ವರೆಗೆ ಎಲಿಮೆಂಟರಿ ಶಾಲೆಗಳಲ್ಲಿ ಕೆಲಸಮಾಡಿ ಕೊಂಡಿರುವ ಹಾಯರ್ ಎಲಿಮೆಂಟರಿ ಗ್ರೇಡಿನ ಉಪಾಧ್ಯಾಯರೂ ಸೆಕೆಂಡರಿ ಗ್ರೇಡಿನ ಉಪಾಧ್ಯಾಯರೂ ಯುನಿವರ್ಸಿಟಿ ಪರೀಕ್ಷೆಗಳಿಗೆ ಹೋಗಕೂಡದು ಎಂಬ ನಿಬಂಧನೆಯು ಮದರಾಸು ಯುನಿವರ್ಸಿಟಿಯ ಕ್ರಮಗಳಲ್ಲಿತ್ತು. ೧೯೩೦-೩೧ನೇ ಇಸವಿಯ ಮದರಾಸು ಯುನಿವರ್ಸಿಟಿಯ ಕೆಲೆಂಡರಿನ ಒಂದನೇ ವೊಲ್ಯೂಮಿನ ಒಂದನೇ ಭಾಗದ ೪೪೯ನೇ ಪುಟದಲ್ಲಿ ಉಪಾಧ್ಯಾಯ ವೃತ್ತಿಯನ್ನೇ ತಮ್ಮ ಜೀವನೋಪಾಯವನ್ನು ಮಾಡಿಕೊಂಡಿರುವ ಉಪಾಧ್ಯಾಯರಲ್ಲಿ ಶಾಲಾ ಕೊಲೆಜುಗಳಲ್ಲಿ ಹಾಜರಿಯದೇನೆ ವಿನಾಯತಿ ಕೊಡಬಹುದೆಂದು ಮದರಾಸು ಯುನಿವರ್ಸಿಟಿ ಸಿಂಡಿಕೇಟಿನವರು ತಿಳಿಸಿರುತ್ತಾರೆ. ಅದಲ್ಲದೆ ಆಯಾ ಡಿಸ್ಟ್ರಿಕ್ಟ ಎಜ್ಯುಕೇಶನಲ್ ಕೌನ್ಸಿಲಿನವರು ಮಂಜೂರುಮಾಡಿದ ಹಾಯರ್ ಎಲಿಮೆಂಟರಿ ಸೆಕೆಂಡರಿ ಗ್ರೇಡಿನ ಉಪಾಧ್ಯಾಯರಿಗೆ ಹಾಜರಿ ವಿನಾಯತಿ ಸರ್ಟಿಫಿಕೇಟು ಕೊಡಲಾಗುವದೆಂದೂ ಇದೆ. ಹಲವು ವರುಷಗಳಿಂದ ತಮ್ಮ ಗ್ರೇಡನ್ನು ಹೆಚ್ಚಿಸಿಕೊಳ್ಳಬೇಕೆಂದು ಆಸೆಯಿರುವ ಉಪಾಧ್ಯಾಯರಿಗೆ ಬಹಳ ಸಹಾಯವನ್ನು ಮಾಡಿದಂತಾಯಿತು. ಇದರ ಪ್ರಯೋಜನವನ್ನು ಎಷ್ಟು ಮಂದಿ ಉಪಾಧ್ಯಾಯರು ಹೊಂದುವರೋ ನೋಡಲಿಕ್ಕಿದೆ.

## ಇಂಡಿಯಕ್ಕಾಗಿ ಇಂಗ್ಲೆಂಡಿನಲ್ಲಿ ಹೊಸ ಸಾಲ.

ಇಂಡಿಯದಲ್ಲಿ ಕೆಲವು ಅಭಿವೃದ್ಧಿಗಳನ್ನು ಮಾಡುವುದಕ್ಕಾಗಿ ಇಂಡಿಯಾ ಸ್ಟೇಟ ಸೆಕ್ರೆಟೇರಿಯವರು ಇಂಗ್ಲೆಂಡಿನಲ್ಲಿ ಶೇಕಡಾ ೬ರ ದರದಲ್ಲಿ ೧೯೩೫-೩೭ರಲ್ಲಿ ಹಿಂತಿರಿಗಿ ಕೊಡುವ ಕರಾರಿನ ಮೇಲೆ ೧೫ ಮಿಲಿಯ ಪೌಂಡ ಸಾಲಯೆತ್ತಿರುವರು. ಈ ರೀತಿಯ ಹೆಚ್ಚು ದರದ ಬಡ್ಡಿಯಿಂದ ಸಾಲ ತೆಗೆದುದರಿಂದ ಇಂಡಿಯಾ ಆಫೀಸಿಗಾಗಲಿ ಇಂಡಿಯದ ನಿವಾಸಿಗಳಿಗಾಗಲಿ ಹೆಚ್ಚಿನ ಪ್ರಯೋಜನವಾಗುವದು ಕಂಡುಬರುವದಿಲ್ಲ. ವ್ಯಾಪಾರವು ಬಿದ್ದಿರುವದರಿಂದ ಅನೇಕ ಮಂದಿ ಸಾಹುಕಾರರು ತಮ್ಮ ಹಣವನ್ನು ಬಡ್ಡಿಯಿಲ್ಲದೆ ಮೂಲೆಗೆ ಇಡುವದರ ಬದಲಾಗಿ ಸರಕಾರಕ್ಕೆ ಸಾಲಕೊಟ್ಟಿರುವರು. ಆದರೆ ವ್ಯಾಪಾರ ಬಿದ್ದಿರುವದರಿಂದ ಸರಕಾರಕ್ಕೆ ಇನ್‌ಕಮಟೇಕ್ಸ, ವೃತ್ತಿ ತೆರಿಗೆ, ಬಂದರ ಸುಂಕ ಮುಂತಾದ ರೀತಿಯಿಂದ ಸಿಕ್ಕುವ ಆದಾಯವೂ ಕಡಿಮೆಯಾಗಿ ನಷ್ಟವುಂಟಾಗುವದು. ಇದರಿಂದ ಸಾಲದ ವಾಯಿದೆಯ ಅಂತ್ಯದಲ್ಲಿ ಬಡ್ಡಿಯ ರೂಪದಲ್ಲಿ ಹೆಚ್ಚು ಹಣವು ನಷ್ಟವಾಗುವದೆಂದು ತೋರುತ್ತದೆ. ಆದರೆ ಮಾಡತಕ್ಕ ಕೆಲಸಗಳನ್ನು ನಿಲ್ಲಿಸಲು ಸಾಧ್ಯವಿಲ್ಲ. ಹೇಗೂ ಇಲ್ಲಿ ೧೫ ಮಿಲಿಯ ಬೇಕೆಂದು ತಿಳಿದುದಕ್ಕೆ ೯೦ ಮಿಲಿಯ ಸಿಕ್ಕಿತು.

## ಗವರ್ನರರ ಹತ್ತಿರ ಮೋಪಿಳ್ಳಾ ಡೆಪ್ಯುಟೇಶನ್.

ಮಾನ್ಯ ಮದರಾಸು ಗವರ್ನರರು ಮಂಗಳೂರಿಗೆ ಬಂದಾಗ ಮೋಪಿಳ್ಳೆಯ ಪ್ರತಿನಿಧಿಗಳು ಅವರಿಗೆ ಭೇಟಿಕೊಟ್ಟರು. ಇವರು ಮುಂದಿಟ್ಟ ವಿಷಯಗಳಲ್ಲಿ ಮುಖ್ಯವಾದವುಗಳು (೧) ಮೋಪಿಳ್ಳೆಯರು ವಿದ್ಯೆಯಲ್ಲಿ ಬಹಳ ಹಿಂದುಳಿದಿರುವರು. ಇವರು ಪ್ರತ್ಯೇಕ ಹೈಸ್ಕೂಲು ಅಗತ್ಯವಿದೆ. ಅದಷ್ಟು ಹೆಚ್ಚು ಮಂದಿಗೆ ಕೆಲಸ ಕೊಡಬೇಕು ಮುಂತಾಗಿದ್ದವು. ತಾಲೂಕು ಬೋರ್ಡಿನವರು ಮೋಪಿಳ್ಳೆಯವರಿಗಾಗಿ ಅನೇಕ ಮೋಪಿಳ್ಳಾ ಶಾಲೆಗಳನ್ನೂ, ಹಿಂದೂಸ್ಥಾನಿ ಶಾಲೆಗಳನ್ನು ಇತ್ತಲಾಗೆ ಹುಡುಗಿಯರ ಶಾಲೆಗಳನ್ನು ಸ್ಥಾಪಿಸಿರುವರು. ಮಹಮದನ್ ರೇಂಜ ಡಿಸ್ಟ್ರಿಕ್ಟ ಇನ್ಸಪೆಕ್ಟರರನ್ನು ನೇಮಿಸಿರುವರು. ಸ್ಥಾಪಿಸಲ್ಪಟ್ಟ ಶೇ ದಾಸ್ತ ಶಾಲೆಗಳಲ್ಲಿ ಮಹಮ್ಮದಿಯ ಮಕ್ಕಳು ಕಂಡುಬರುವುದಿಲ್ಲ. ಪ್ರತಿ ಶಾಲೆಯಲ್ಲಿಯೂ ಎರಡು ಮೂರು ಮಂದಿ ಉಪಾಧ್ಯಾಯರಿದ್ದರೂ ಒಬ್ಬ ಉಪಾಧ್ಯಾಯರಿಗೆ ಬೇಕಾದಷ್ಟು ಸಹ ಮಕ್ಕಳಿರುವದಿಲ್ಲ ಎಂಬದು ಶಾಲೆಗಳನ್ನು ಸಂದರ್ಶಿಸಿದವರಿಗೆ ತಿಳಿಯುವದು. ಪ್ರತಿನಿಧಿಗಳಿಗೆ ಶಾಲೆಗಳಿಗೆ ಮಕ್ಕಳು ಬರುತ್ತಾರೋ ಇಲ್ಲವೊ ಎಂಬ ಸಂಗತಿ ಗೊತ್ತಿಲ್ಲ. ಸ್ಕೊಲರಶಿಪ್ಪುಗಳನ್ನು ಕೊಡುವಾಗ ಪ್ರತ್ಯೇಕ ಸ್ಕೊಲರಶಿಪ್ಪುಗಳನ್ನು ಸರಕಾರವು ಕೊಡುತ್ತಿರುವದು. ಆದರೆ ಮಕ್ಕಳ ಹೆತ್ತವರು ಮಕ್ಕಳನ್ನು ಶಾಲೆಗಳಿಗೆ ಕಳುಹಿಸದೆ ಇದ್ದರೆ ಯಾರನ್ನು ದೂರುವದು. ಪ್ರತಿನಿಧಿಗಳು ತಮ್ಮ ಕೆಲಸಮಾಡುತ್ತಾರೆ.

## ಡೊಕ್ಟರ ಬಿಸಂಟಮ್ಮನವರು ಇಂಡಿಯಕ್ಕೆ ಬಂದರು.

ಡೊಕ್ಟರ ಬಿಸೆಂಟರು ಯವರೋಪ ಸಂಚಾರಮಾಡಿ ಮುಂಬಾಯಿಗೆ ಬಂದಿರುವರು. ತಾನು ಸಿವಿಲ್ ಡಿಸ್‌ಒಬಿಡಿಯನ್ಸಿಗೆ ಮೊದಲಿನಿಂದಲೂ ವಿರೋಧವಾಗಿದ್ದೇನೆ. ನ್ಯಾಯಕ್ಕೆ ವಿರೋಧವಾಗಿದ್ದೇನೆ. ನ್ಯಾಯಕ್ಕೆ ವಿರುದ್ಧವಾಗಿ ನಡೆದು ಯಾರಾದರೂ ಸಾಯಬೇಕೆಂದು ನಾನು ಹೇಳಲು ಸಿದ್ಧವಿಲ್ಲ. ಕೊಂಗ್ರೆಸ ವರ್ಕಿಂಗ ಕಮಿಟಿಯ ಮೆಂಬರರನೇಕರನ್ನು ಕೈದು ಮಾಡಿದುದರ ವಿಷಯ ನಾನು ಖಂಡಿಸಿ ಇಂಗ್ಲಂಡಿನಲ್ಲಿ ಮಾತನಾಡಿರುತ್ತೇನೆ. ಇಂಡಿಯದಲ್ಲಿ ನಡಿಯುತ್ತಿರುವ ಬೊಯಕೊಟ್‌ನಿಂದ ಇಂಗ್ಲಂಡಿನಲ್ಲಿ ಕೆಲಸವಿಲ್ಲದವರ ಸಂಖ್ಯೆಯು ಹೆಚ್ಚಾಗುತ್ತಾ ಬರುತ್ತಿದೆ. ಪಾರ್ಲಿಮೆಂಟಿನ ಹಲವು ಪಾರ್ಟಿಗಳು ಇಂಡಿಯದ ಕುರಿತು ಒಳ್ಳೇ ಸುಧಾರಣೆಗಳನ್ನು ಕೊಡಬೇಕೆಂದು ಹೇಳುತ್ತಲಿವೆ. ಸ್ಟೇಟ ಸೆಕ್ರೆಟರಿಯವರೂ ಬಹಳ ಪ್ರಯತ್ನ ಪಡುತ್ತಿರುವರು. ಅಮ್ಮನವರೂ ಕಮಿಟಿಯ ಮೆಂಬರರಂತೆ ಇನ್ನು ಇವರು ವರ್ಕಿಂಗ ಕಮಿಟಿಯ ಮೀಟಿಂಗಿಗೆ ಬಂದಾಗ ಇವರು ಏನು ಮಾಡುವರೊ ನೋಡಲಿಕ್ಕಿದೆ.

## ಮದರಾಸು ಸಂಸ್ಥಾನದ ಕೈಗಾರಿಕೆ ವರದಿ.

೧೯೨೯-೩೦ನೇ ಇಸವಿಯ ಕೈಗಾರಿಕೆ ಇಲಾಖೆಯ ರಿಪ್ರೋರ್ಟು ಹೊರಬಿದ್ದಿದೆ. ಇದರ ಪ್ರಕಾರ ಕೈಗಾರಿಕೆ ಅಭಿವೃದ್ಧಿಗಾಗಿ ಧನ ಸಹಾಯದ ಅರ್ಜಿಗಳು ಸರಕಾರಕ್ಕೆ ವಿಶೇಷವಾಗಿ ಬರಲಿಲ್ಲವೆಂದು ತೋರುತ್ತದೆ. ಇತ್ತಲಾಗೆ ತಿದ್ದುಪಡಿಯಾದ ಹೊಸ ಆಕ್ಟಿನ ಪ್ರಕಾರ ಹೆಚ್ಚಿಗೆ ಧನ ಸಹಾಯವು ಮನೆ ಕೈಗಾರಿಕೆಗಳಿಗೆ ಮಾಡಲು ಅನುಕೂಲತೆ ಮಾಡಿಯದೆ. ಕಲ್ಲಿಕೋಟೆಯ ಸಾಬೂನಿನ ಕಾರ್ಖಾನೆಯಲ್ಲಿ ತಯಾರಾದ ಸಾಬೂನಿಗೆ ಗಿರಾಕಿಯಿಲ್ಲದ್ದರಿಂದಲೂ ಪರದೇಶಗಳಿಂದ ಬಂದ ಸಾಬೂನಿನ ಕ್ರಯವು ಕಡಿಮೆಯಾಗಿರುವುದರಿಂದಲೂ ರೂ ೨೧,೩೫೦ ನಷ್ಟವಾಗಿಯದೆಂದು ತೋರುತ್ತದೆ. ಈ ಕಾರ್ಖಾನೆಯನ್ನು ಇನ್ನು ೩ ವರುಷಗಳ ವರೆಗೆ ನಡೆಸಬೇಕೆಂದು ಆಲೋಚನೆ ಇದೆ. ಮದರಾಸಿನ ಪ್ರಿಂಟಿಂಗ ಶಾಯಿ ಕಾರ್ಖಾನೆಯನ್ನು ಬರುವ ಮಾರ್ಚ ವರೆಗೆ ನಡಿಸುವ ಆಲೋಚನೆ ಇದೆ. ಆದರೆ ಎಲ್ಲಾ ತರದ ಮಾದರಿ ಕೈಗಾರಿಕೆ ಕಾರ್ಖಾನೆಗಳನ್ನು ಯಂತ್ರ ಸಾಧನ ವಿದ್ಯೆ ಕಲಿಸುವ ಕಾರ್ಖಾನೆಗಳನ್ನು ವ್ಯಾಪಾರಮಾಡುವ ಆಲೋಚನೆಯಿಂದ ದೂರಪಡಿಸಿ ಶೋಧನಾಕಾರ್ಯಗಳನ್ನು ನಡಿಸುವ ಶಾಲೆಗಳಾಗಿ ಮಾಡಿ ಸ್ವಾಯಂ ಸಂಸ್ಥೆಗಳಾಗಿ ನಡಿಸುವದು ಒಳ್ಳೇದೆಂದು ತೋರುತ್ತದೆ.

## ಕೊ-ಓಪರೇಟಿವ್ ಸೊಸೈಟಿ, ಬೆಂಕುಗಳಲ್ಲಿರುವ ಕುಂದು ಕೊರತೆಗಳು.

ಪ್ರತಿ ಒಂದು ಸಂಘದಲ್ಲಿಯೂ, ಜಿಲ್ಲಾ ಫೆಡರೇಶನಿನಲ್ಲಿಯೂ ಪ್ರೆಸಿಡೆಂಟ ಮತ್ತು ಸೆಕ್ರೆಟರಿ ಎಂಬ ಇಬ್ಬರು ಒನೆರರಿ ಅಧಿಕಾರಿಗಳಿರುವರು. ಸೊಸೈಟಿಯ ಕ್ರಮಗಳಲ್ಲಿ ಇವರಿಬ್ಬರೂ ಮಾಡತಕ್ಕ ಕೆಲಸಗಳನ್ನು ಸರಿಯಾಗಿ ಸೂಚಿಸಿರುವರು. ಆದರೆ ಡಿಸ್ಟ್ರಿಕ್ಟ ಫೆಡರೇಶನಿನಲ್ಲಿಯೂ ಇವರ ಕೆಲಸಗಳು ಯಾವವೆಂದು ತೋರುವದಿಲ್ಲ. ಹೀಗಿರುವುದರಿಂದ ತನಗೆ ಪ್ರೆಸಿಡೆಂಟನಿಗಿಂತ ಹೆಚ್ಚಿಗ ಅಧಿಕಾರ ಉಂಟೆಂದು ಸೆಕ್ರೆಟರಿ ತೋರಿಸಿಕೊಳ್ಳುತ್ತಿರುವನು. ಪ್ರೆಸಿಡೆಂಟನ ಹುಕುಂ ಮೇರೆಗೆ ನಡಿಯಬಾರದೆಂದು ಸೆಕ್ರೆಟರಿಯು ಫೆಡರೇಶನಿನ ತಾಬೇದಾರರಿಗೆ ಹೇಳುವ ವಾಡಿಕೆ ಇದೆ. ಇದರಿಂದ ನೌಕರರಿಗೆ ಕೆಲಸಮಾಡದೆ ಸುಮ್ಮನೆ ಕುಳಿತುಕೊಳ್ಳಲು ಎಡೆ ಸಿಕ್ಕುತ್ತದೆ. ಇದಕ್ಕಾಗಿ ಫೆಡರೇಶನಿನ ಪ್ರೆಸಿಡೆಂಟರಿಗೆ ಫೆಡರೇಶನಿನ ಆಡಳಿತೆಯ ಕುರಿತು ಸರ್ವಾಧಿಕಾರ ಇರಬೇಕು. ನೌಕರರನ್ನು ನೇಮಿಸುವದು ಸರಿಯಾಗಿ ಕೆಲಸಮಾಡಿಸುವದು ಸಸ್‌ಪೆಂಡಮಾಡುವದು, ಜುಲ್ಮಾನೆ ವಿಧಿಸುವದು ಮುಂತಾದ ಅಧಿಕಾರವಿರಬೇಕು. ಸೆಕ್ರೆಟರಿಯು ಪ್ರೆಸಿಡೆಂಟರ ಅನುಮತಿ ಪ್ರಕಾರ ನಡಿಯುವ ಅಧಿಕಾರಿಯಾಗಿರಬೇಕೆಂಬ ಬೈಲೊ ಅಗತ್ಯವಿದೆ. ಇಲ್ಲವಾದರೆ ಎರಡು ಹುದ್ದೆಗಳಲ್ಲಿ ಒಂದನ್ನು ತೆಗೆದು ಹಾಕಿ ಎಲ್ಲಾ ಅಧಿಕಾರ ಒಬ್ಬರಿಗೇನೆ ಕೊಡಬೇಕು. ಎರಡನೇ ಕೊರತೆ ಪ್ರತಿ ಒಂದು ಸಂಘದ ಪ್ರೆಸಿಡೆಂಟನಾಗಲಿ ಸೆಕ್ರೆಟರಿಯಾಗಲಿ ತಾನಿರುವ ಸಂಘದಲ್ಲಿ ಎಷ್ಟು ಕುಂದು ಕೊರತೆಗಳಿದ್ದರೂ ಯೂನಿಯನ್ ಡಿಸ್ಟ್ರಿಕ್ಟ ಬೆಂಕ್, ಮತ್ತು ಫೆಡರೇಶನಿನ ಡೈರೆಕ್ಟರರಾಗಬಹುದು. ಇದರಿಂದ ಹಲವು ತರದ ಕಷ್ಟಗಳು ಒದಗಿವೆ. ಇದಕ್ಕಾಗಿ ಯಾವ ಸಂಘದ ಕೆಲಸವು ತೃಪ್ತಿಕರವಾಗಿದೆ ಎಂದು ಡೆಪ್ಯುಟಿ ರಿಜಿಸ್ಟ್ರಾರರು ಬರೆಯುತ್ತಾರೆ ಆ ಸಂಘದ ಸೆಕ್ರೆಟರಿ ಅಥವಾ ಪ್ರೆಸಿಡೆಂಟರನ್ನು ಯೂನಿಯನ್ ಡಿಸ್ಟ್ರಿಕ್ಟ ಬೇಂಕ ಅಥವಾ ಫೆಡರೇಶನಿನ ಡೈರೆಕ್ಟರ ಆಗಬಹುದೆಂದು ಬೈಲೊ ಆಗಬೇಕು. ಒಳ್ಳೇ ಸಂಘ ಅಂದರೆ (೧) ಬಿನಾಮಿ ಸಾಲಗಳಿರಬಾರದು (೨) ಒಂದು ವರುಷಕ್ಕೆ ಮಿಕ್ಕಿದ ಓವರ್ ಡ್ಯೂ ಇರಬಾರದು (೩) ಯೂನಿಯನುಗಳು, ಡಿಸ್ಟ್ರಿಕ್ಟ ಬೇಂಕುಗಳು, ಫೆಡರೇಶನುಗಳು ಮಾಡಿದ ಕ್ರಮಗಳ ಪ್ರಕಾರ ನಡಿಯುವವುಗಳು. (೪) ಸಾಲ ಕೊಡುವ ಹಣವು ಬೆಂಕಿನಿಂದ ಸಾಲ ಪಡಿಯಲು ಹಕ್ಕಿರುವ ೧೦ ಪಾಲಿಗೆ ಮಿಕ್ಕ ಕೂಡದು. ಮೂರನೇ ಕೊರತೆ ಈಗಿನ ರೂಲ ಪ್ರಕಾರ ಒಂದು ಪಂಚಾಯತದಾರನೊಬ್ಬನೂ, ಸಂಘದ ಸೆಕ್ರೆಟರಿಯೂ, ಅಧ್ಯಕ್ಷನೂ, ಯೂನಿಯನಿನ ಡೈರೆಕ್ಟರನೂ, ಫೆಡರೇಶನಿನ ಡೈರೆಕ್ಟರನೂ ಆಗಬಹುದು. ಇದರಿಂದ ಸುಪರವೈಜರ ಇನ್ಸಪೆಕ್ಟರ ಮೊದಲಾದವರು ಇಂದು ಅವರ ಹಂಗೀಕರಾಗಿ ಕೆಲಸ ಸರಿಯಾಗಿ ಚೆಕ್‌ಮಾಡಲಿಕ್ಕಾಗದೆ ಸೊಸೈಟಿಗಳ ಗುಟ್ಟು ಅವು ಹಾಳಾಗಿ ಮುಚ್ಚಲ್ಪಡುವ ವರೆಗೆ ಹೊರಬೀಳುವದೇ ಇಲ್ಲ. ಆದುದರಿಂದ ಪ್ರತಿ ಒಂದು ಸಂಘದ ಐದು ಮಂದಿ ಪಂಚಾಯತುದಾರರಲ್ಲಿ ಒಬ್ಬನು ಪ್ರೆಸಿಡೆಂಟನೂ ಒಬ್ಬನು ಸೆಕ್ರೆಟರಿಯೂ, ಒಬ್ಬನು ಯೂನಿಯನಿನ ಡೈರೆಕ್ಟರನೂ ಒಬ್ಬನು ಡಿಸ್ಟ್ರಿಕ್ಟ ಬೇಂಕಿನ ಡೈರೆಕ್ಟರನೂ ಒಬ್ಬನು ಫೆಡರೇಶನಿನ ಡೈರೆಕ್ಟರನೂ ಆಗಬೇಕಲ್ಲದೆ ಒಬ್ಬರಿಗೇ ಈ ನಾಲ್ಕೈದು ಅಧಿಕಾರ ಕೊಟ್ಟರೆ ಪರಸ್ಪರ ಸಹಾಯಕ ಸಂಘ, ಯೂನಿಯನ್ ಬೇಂಕ, ಫೆಡರೇಶನ್ ಇವುಗಳ ಕೆಲಸವು ಹಾಳಾಗುವದು.

## ನೋಟಗಳು.

## NOTE...S

ಕಾಂಗ್ರೆಸ್ ಪ್ರೆಸಿಡೆಂಟರಾದ ಜವಾಹಿರಲಾಲರು, ಒಂದು ಸಲ ಕಾರಾಗ್ರಹವಾಸವನ್ನು ಮುಗಿಸಿ ಹೊರ ಬಂದು ಮುಂದಿನ ಆಲೋಚನೆ ಮಾಡುವಾಗಲೆ, ಆಲೋಚನೆಗೆ ೧೪೪ ಕೊಟ್ಟುಬಿಟ್ಟರು. ನಂತರ, ಕೈದುಮಾಡಲ್ಪಟ್ಟರು, ವಿಚಾರಣೆ ಮುಂದಿನಿಂದ, ಅಂತೂ ನೈನಿ ಜೈಲಿಗೆ ಇವರನ್ನು ಬಿಟ್ಟುಕೊಡಲು, ಅದೃಷ್ಟವಿಲ್ಲ.

* * * *

ಮುಂಬಾಯಿಯಲ್ಲಿ, ಲಾಠಿಗಳ ಪೆಟ್ಟು ನಡಿಯುತಾ ಇದೆ. ಕೈದುಮಾಡುವ ಮತ್ತು ಗೆಸ್ಟಹೌಸಿಗೆ ಕಳುಹಿಸುವ ಕೆಲಸ ಜೋರಿನಿಂದ ಸಾಗುತ್ತದೆ. ಒಂಬತ್ತನೇ ಒರ್ಡಿನೆನ್ಸ ಕಾರುಬಾರು.

* * * *

ಪತ್ರಿಕೆಗಳ ಮತ್ತು ಪ್ರೆಸ್‌ಗಳಿಗೆ ಹಾಕಿದ ಬೀಗ ಇನ್ನು ಕೆಲವು ಸಮಯದ ನಂತರ ತೆಗಿಯಬೇಕಾಗಿದೆ. ಅವಧಿ ಹತ್ತಿರ ಬಂತು. ಇದರ ಬದಲು, ಮುಂದೆ ಯಾವುದು ಬರುವುದೋ?

* * * *

ಮಂಗಳೂರಿನ ಮುನಿಸಿಪಾಲಿಟಿಯವರು ೩೬ ಘಾದರರಿಗೆ ಗವರ್ನರರ ಕೂಡೆ ಪರಿಚಯದ ವಿಳಂಬವಾದುದನ್ನು ಇತ್ಯರ್ಥಿಸಲು ಮಾಡಿದ ಸಭೆ ನಡೆದಿದೋ ಇಲ್ಲವೊ ಸಂಗತಿ ಪೂರ್ಣ ತಿಳಿದುಬಂದಿಲ್ಲ. ಆದರೆ ವಿಳಂಬದ ಕುರಿತು ತಕ್ಕ ಸಮಾಧಾನವಾದ ಉದಾಹರಣೆ ಬಂತಂತೆ. ಈಗ ಎಲ್ಲರೂ ಸಮಾಧಾನ.

* * * *

ಸಮಾಧಾನಪಡಿಸಿದ್ದು ಬರೆ ಬಾಯಿಮಾತಿನಲ್ಲಿ. ಬರೆದು ಕಳುಹಿಸಲು ಕಾಗದ ಮುಗಿದಿತ್ತಂತೆ.

* * * *

ಈ ವರ್ಷ ಮುನಿಸಿಪಾಲಿಟಿಯವರು ಮಾರ್ಗ ರಿಪೇರಿ ಹಲವು ಕಡೆಗಳಲ್ಲಿ, ಕಲವೆ ಮಾದರಿ ನಡೆಸಿರುತ್ತದೆ. ಕೆಲಕಡೆಗಳಲ್ಲಿ ಮಾರ್ಗಕ್ಕೆ ಹಾಕಿದ ಕಲ್ಲುಗಳ ಮೇಲೆ, ಮಣ್ಣು ಹಾಕಲಿಲ್ಲ. ಮಣ್ಣು ಸಿಕ್ಕಲಿಲ್ಲವೋ ಅಥವಾ ಇದು ಹೊಸ ಮಾದರಿ, ರಸ್ತೆ ರಿಪೆರಿಯೋ?

* * * *

ಮಂಗಳೂರಿನಲ್ಲಿ ವನಲಕ್ಷ್ಮೀ ಪೂಜೆ, ಅತಿ ಸಂಭ್ರಮದಲಿ ನಡದು ಹೋಯಿತು. ಇಷ್ಟು ವರ್ಷ ವಾಲಗದವರು ಬಂದು ವಾಲಗ ಮಾಡುತ್ತಿದ್ದರು, ಈ ವರ್ಷ ಮಫ್ಸ್ ಪೋಲೀಸಿನವರು ಹಾಜರಿದ್ದರು.

* * * *

ಉಪ್ಪಿನ ಸತ್ಯಾಗ್ರಹದಲ್ಲಿ ಹೋದ ಮಹನಿಯರು, ನೂರಾರು ಮಂದಿ ಹೊರಬಂದರು, ಮುಂದಿನ ಚಳವಳ ಗುಪ್ತದಲ್ಲಿ.

* * * *

ಚಕ್ರಗೋಷ್ಠಿ ದಿನಗಳು ಹತ್ತಿರ ಓಡಿ ಬಂದವು, ಹೋದವರು ಚಳಿಗಾಲದ ಹವೆಯಲ್ಲಿ ಆನಂದಪಡುತ್ತಿರುವರು. ನಡಿಯುವ ಸಂಗತಿ ಮುಂದಿನಿಂದ.

---

## ನೋಟೀಸು.

### ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫಾ ಕೋರ್ಟಿನಲ್ಲಿ

O P No. 62/1930

ಭಾಡ್ಯ, ಸುಬ್ರಾಯ— ಭಾಡ್ಯ ಅನಂತಯ್ಯನವರ ಮಗ ಉಡುಪಿ ತಾಲೂಕು ತೆಂಕನಿಡಿಯೂರು ಗ್ರಾಮದಲ್ಲಿರುವವ—
ಅರ್ಜಿದಾರ.

ಉಡುಪಿ ತಾಲೂಕು ತೆಂಕನಿಡಿಯೂರು ಗ್ರಾಮದ ಭಾಡ್ಯ ಪದ್ಮನಾಭಯ್ಯನವರ ಮಗ ಈಗ ಮೃತಪಟ್ಟಿರುವ ಭಾಡ್ಯ ದಾಸಪ್ಪಯ್ಯನವರೀಗೆ ಉಡ್ಪಿ ಕಚೇರಿಯಲ್ಲಿರುವ ಭಾಡ್ಯ ಅನಂತ ಪದ್ಮನಾಭಯ್ಯ ಕೂಡಾ ೨ ಜನರು ತಾ ೩—೧೨—೧೯೨೪ರಲ್ಲಿ ಬರಸಿ ಕೊಟ್ಟಿರುವ ದಿವಾಂಡು ನೋಟಿನ ಬಾಬ್ತು ಅಸಲು ವ ಬಾಕಿಯುರುವ ಬಡ್ಡಿ ಐವಜನ್ನು ಮತ್ತು ಸದ್ರಿಯವರೀಗೆ ಕ್ಯರೋಡಿ ಲಕ್ಷ್ಮೀನಾರಾಯಣ ಹೆಬ್ಬಾರರ ತಾ. ೨೦—೧೦ '೨೭ರಲ್ಲು ಬರಸಿ ಕೊಟ್ಟ ದಿವಾಂಡು ನೋಟಿನ ಬಾಬ್ತು ಅಸಲು ವ ಬಡ್ಡಿ ಐವಜನ್ನು ಸಹಾ ವಸೂಲು ಮಾಡುವ ಹಕ್ಕನ್ನು ಸದರಿ ಭಾಡ್ಯ ದಾಸಪ್ಪಯ್ಯನವರು ತಾ ೪—೮—೧೯೩೦ರಲ್ಲು ಮೃತಪಟ್ಟ ನಂತರ ಅವರ ವಾರಿಸುದಾರರಾದ ಸದ್ರಿ ತೆಂಕನಿಡಿಯೂರು ಗ್ರಾಮದ ವೆಂಕಟ್ರಮಣಯ್ಯನವರ ಮಗ ಕೃಷ್ಣಯ್ಯರು ಅರ್ಜಿದಾರಗೆ ಟ್ರಾನ್ಸ್‌ಫರ್ ಮಾಡಿಕೊಟ್ಟಿರುವ ಪ್ರಕಾರ ಸದ್ರಿ ಐವಜುಗಳ ವಸೂಲಿ ಬಗ್ಗೆ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರನು ದಾಖಲ್ಲು ಮಾಡಿದ ಸದ್ರಿ ಅರ್ಜಿಯು ತಾ. ೧೪—೧೧—೧೯೩೦ಕ್ಕೆ ತನ್ಕಿಗೆ ಇಟ್ಟಿರುತ್ತದೆ ಆ ಕುರಿತು ಯಾರಿಗಾದರೂ ಆಕ್ಷೇಪವಿದ್ದಲ್ಲಿ ಸದ್ರಿ ತಾ ೧೪—೧೧—೩೦ಕ್ಕೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದೆಂತ ಈ ಮೂಲಕ ಸರ್ವರಿಗೂ ತಿಳಿಸೋಣಾಗುತ್ತದೆ.

ಉಡುಪಿ, ತಾ ೧೪—೧೦—೩೦ } K L Narayana Rao
Advocate for Petitioner

---

ತನ್ಕಿ ತಾರೀಕು 30—10—1930

### ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂ 138/1923
ಕ್ರಮ ಅವ ಲಕ್ಷರಿ ನಂಬ್ರ 1003/1930

ಅರ್ಜಿದಾರ—ವಾದಿ ಗೋವಿಂದ ಭಟ್ಟನ ಮುಕ್ತ್ಯಾರದಾರ ಎರೋಡಿ ನಾರಾಯಣ ಭಟ್ಟ

ವಿ

ಎದ್ರಿ—ಪ್ರತಿವಾದಿ—ಬಡಾಕೆರೆ ಕೃಷ್ಣ ಭಟ್ಟ
ಪ್ರತಿವಾದಿಯಾದ ಕೈರಂಗಳ ಗ್ರಾಮದ ಬಡಾಕೆರೆ ಶಂಕರಭಟ್ಟರ ಮಗ ಕೃಷ್ಣ ಭಟ್ಟರಿಗೆ

ವಾದಿಯ ಪಕ್ಷವಾಗಿ 1923ನೇ ಇಸವಿ ದಶಂಬರ ತಿಂಗಳು 10ರಲ್ಲು ಸದರಿ ಕ್ರಮ ನಂಬ್ರ 138/23ರಲ್ಲಿ ನಿಮ್ಮ ಮೇಲೆ ಕೊಟ್ಟ ಡಿಕ್ರಿಯನ್ನು ಸಮಾಧಾನಪಡಿಸಲಿಕ್ಕೆ ನೀವು ತಪ್ಪಿದರಿಂದ ಕೆಳಗೆ ಷೆಡ್ಯೂಲಿನಲ್ಲಿ ನಮೂದಿಸಿರುವ ಸೊತ್ತನ್ನು ಈ ಕೋರ್ಟಿನವರು ಮತ್ತೊಂದು ಹುಕುಂ ಕೊಡುವ ತನಕ ವಿಕ್ರಯದ ಮೂಲವಾಗಿ—ದಾನದ ಮೂಲವಾಗಿ— ಯಾ —ಅನ್ಯಥಾ— ಪರಾಧಾರೆ ಮಾಡಲು —ಯಾ— ಈ ಸೊತ್ತಿನ ಮೇಲೆ ಸಾಲ ಹೊರಿಸಲು ಕೂಡದೆಂದು ಸದರಿ ಪ್ರತಿವಾದಿರಾದ ನೀವು ನಿರ್ಬಂಧವಾಗಿ ಆತಂಕಿಸಲ್ಪಡತಕ್ಕದ್ದು ಮತ್ತು ಇದರಿಂದ ನಿರ್ಬಂಧವಾಗಿ ಆತಂಕಿಸಲ್ಪಟ್ಟಿದ್ದಾರೆ ಮತ್ತು ಅದನ್ನು ಖರೀದಿ ಮೂಲಕ ದಾನ ಮೂಲಕ—ಯಾ—ಅನ್ಯಥಾ ತೆಗೆದುಕೊಳ್ಳ ಕೂಡದೆಂದು ಎಲ್ಲಾ ಮನುಷ್ಯರು ಆತಂಕಿಸಲ್ಪಡತಕ್ಕದ್ದು ಮತ್ತು ಇದರಿಂದ ಆತಂಕದಿಸಲ್ಪಟ್ಟಿಯತ್ತಾರೆ ಎಂಬ ಸಂಗತಿ ಕೋರ್ಟು ಹುಕುಂ ಪ್ರಕಾರ ಪ್ರಕಟಿಸೋಣಾಗಿಯದೆ

ಷೆಡ್ಯೂಲು.

ಮಟ್ಟು ಸ. ಡಿ ಗೆ ಸೇರಿದ ಕಾಸರಗೋಡು ತಾಲೂಕು ನಂಬ್ರ 30ನೇ ಬಾಯಾರು ಗ್ರಾಮದ—

| ಹಳೇ ಸರ್ವೆ ನಂಬ್ರ | ರಿಸರ್ವೆ ನಂಬ್ರ ಪ-ಸ ಡಿ-ನಂಬ್ರ | ಕಿಸಂ | ವಿಸ್ತೀರ್ಣ | ಆಸೆಸ್ಸ್ಮೆಂಟ್ |
| --- | --- | --- | --- | --- |
| ೨೩೩ | ೩೦೯—೨ | ಪುಂಜ | ೦—೧೪ | ೧—೦—೦ |
| | ೩೦೫—೧ | ಪುಂಜ | ೦—೪೩ | |
| | ೩೧೧—೨ | ಪುಂಜ | ೦—೧೨ | |
| | ೪ | ಪುಂಜ | ೦—೩೫ | |
| ೩೩೪ | ೧ | ಪುಂಜ | ೨— ೦ | ೨—೦—೦ |

ಇವುಗಳಿಗೆ ಕೂಡಿದ ಕಿಸಾರ ಬಾಗಾಯತು ಫಲ ಸೇಲಹೊಲ ಕಾಡುಕರೆ ಕಟ್ಟಡಗಳು ಸಹಾ—ಸರ್ವಾದಿ

ಪುತ್ತೂರು, ೧೬—೧೦—೩೦ } **H. Ganapathy Rao,**
ಅರ್ಜಿದಾರರ ಕಡೆ ವಕೀಲ್

---


**The Cochin Soap Works,** IRENJALAKUDA

**ದಿ ಕೊಚ್ಚಿನ್ ಸೋಪ್ ವರ್ಕ್ಸ್.** ಇರಿಂಜಾಲಕುಡ

BABY BORAX SOAP
TRADE MARK

ಕೊಚ್ಚಿ ವಸ್ತು ಪ್ರದರ್ಶನ ಪಟ್ಟಣಗಳಲ್ಲಿ 1928 '29—'30ನೇ ವರ್ಷಗಳಲ್ಲಿ [illegible] ಅನೇಕ ಯೋಗ್ಯತಾ [illegible]

[illegible] ಸೋಪ್ [illegible]

ದೇಜ ಬಟರ್ಸ್ ಸೋಪ್— [illegible] ಉತ್ತಮ ಉತ್ಕೃಷ್ಟ ಬಟ್ಟೆಗಳ [illegible] ಅಥವಾ [illegible] ಎಲ್ಲಾ ಸೋಪುಗಳ [illegible] ಒಂದು ಪೌಂಡಿನ ಕ್ರಯ 6 ಆಣೆ ಮಾತ್ರ [illegible]

[illegible] ರೋಸ್ ಸೆಂಟೆಡ್ ಸೋಪ್— [illegible] ಉತ್ಕೃಷ್ಟವಾಗಿರುವವು [illegible] ಕ್ರಯ ೨ಆಣೆ ಮಾತ್ರ

ಜೋನ್‌ಸನ್ಸ್ ಬಾರ್ ಸೋಪ್— [illegible] ಬಟ್ಟೆಗಳು [illegible] ಕ್ರಯ 4ಆಣೆ [illegible]

ಕಾರ್ಬೋಲಿಕ್ ಸೋಪ್— [illegible] ಚರ್ಮ ರೋಗಕ್ಕೆ ದಿವ್ಯೌಷಧ

ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸೋಲ್ ಏಜಂಟರು—
ಮೆಸರ್ಸ್ ಬೂಕಂತೂರು ಸರ್ವೋತ್ತಮ ಪ್ರಭು, ಮಂಗಳೂರು.

ಕ. ಜೆ ಲಾಜರ್, ಮೆನೇಜರ್ ಮತ್ತು ಪ್ರೊಪ್ರೈಟರ್.

[illegible] ಹಾಗೂ ಯೋಗ್ಯತಾ ಪತ್ರಗಳಿಂದ ಬಹುಮಾನ ಹೊಂದಲ್ಪಟ್ಟಿವೆ
ಏಜಂಟರು ಬೇಕಾಗಿರುವರು



"If every Wife knew what every Widow knows every Husband could be Insured"

PLACE YOUR LIFE ASSURANCE WITH
**THE SOUTH INDIAN**
Securing to your clients –
1. Low rates of Premium
2. Liberal Policy Conditions.
AND FOR YOURSELF
An Agency with attractive Terms of Commission and Salary in
**The South Indian General Assurance Co, Ltd.**
Anywhere in CANARA DISTRICTS & HYDERABAD STATE
For terms of Agency please apply to —
H R K IYENGAR
Chief Agent
The S I G A Co. Ltd.,
Sanyasigudda MANGALORE
Managing Agent –
K C PANDALAI & CO
7 8 Mclean Street G T MADRAS

ಜೀವವಿಮೆ ಮಾಡುವವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್ಡನಲ್ಲಿ ವಿಮೆಮಾಡಿರಿ
ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!
ಪ್ರಿಮಿಯಂ ದರಗಳು ಕಡಿಮೆ!
ಶರ್ತಗಳು ಶಿಥಿಲ!!
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ ಧಾರಾಳವಾದ ಕಮಿಶನೂ ಕೈತುಂಬಾ ಸಂಬಳವೂ ದೊರಕುವುದು
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)
ಚೀಫ್ ಏಜಂಟರು—
ಎಚ್. ಆರ್. ಕೆ ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ
ದಿ ಎಸ್ ಐ ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು.
ಮೆನೇಜಿಂಗ್ ಏಜಂಟರು —
ಕೆ ಸಿ ಪಾಂಡಲೆ ಎಂಡ್ ಕೋ.
7-8 ಮೆಕಲೀನ್ ಸ್ಟ್ರೀಟ್, ಜಿ. ಟಿ ಮದ್ರಾಸು



ಸುಲಭ ಕ್ರಯ. ಧಾರಾಳ ಫಲ!
ದಂತಧಾವನ ಚೂರ್ಣ
ಟೂತ್ ಪೌಡರ್.

[illegible] ಹಲ್ಲು ನೋವುಗಳಿಗೆ [illegible] ಹಲ್ಲುಗಳ [illegible] ಹಲ್ಲಿನ [illegible]

ಹೆಚ್ಚಿನ ಸಂಗತಿಗಳನ್ನು ತಿಳಿಯಬೇಕಾದವರಿಗೆ [illegible] ಕನ್ನಡದಲ್ಲಿ ಔಷಧ ಪಟ್ಟಿ ಇದೆ.

ಪಿ. ಕರುಣಾಕರ ವೈದ್ಯರ್.
ಆರೋಗ್ಯಾಮೃತ ಔಷಧಾಲಯ
ಕ್ಯಾಂಪ ಬಜಾರ್ ಕಣ್ಣಾನೂರು.
P KARUNAKARAN VYDIAR
Arogiamritha Aushadhalaya
Camp Bazaar, CANNANORE



ರಿಸ್ಟ್‌ವಾಚ್ ಉಚಿತ.
ಒಂದು ಜೇಬಿನಲ್ಲಿಡುವ ಗಡಿಯಾರ ಉಚಿತವಾಗಿ ದೊರೆಯುತ್ತದೆ.
[illegible] ರಿಸ್ಟ್‌ವಾಚ್ [illegible]
ಕಿಂಗ್ ಜಾರ್ಜ ಕೊರೋನೇಶನ್ ಕಂಪೆನಿ
ಮುಂಬಾಯಿ



**ಕೊ-ಒಪರೇಟಿವ್ ಸೊಸ್ಯಾಟಿಗಳಿಗೆ**
ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ತ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

## ಅನುಕ್ರಮಣಿಕೆ.

ಅಗ್ರಲೇಖ.


ಕರ್ನಾಟಕ ಸಾಹಿತ್ಯ ಸಮ್ಮೇಳನ . . . . . ೮
ಸ್ಫುಟವಿಚಾರಗಳು . . . . ೯
ಸೂಚನೆಗಳು . . . . . . ೯

ವರ್ತಮಾನ ಸಂಗ್ರಹಗಳು

ವಿದೇಶ ವರ್ತಮಾನ . . . . . . ೮
ಒಳದೇಶ ವರ್ತಮಾನ . . . . ೮
ಜಿಲ್ಲಾ ವರ್ತಮಾನ—ಮಂಗಳೂರು, ಉಡುಪಿ, ಮೂಲ್ಕಿ, ಬ್ರಹ್ಮಾವರ, ಬ್ರಹ್ಮಾವರ, ಹಂಗಾರಕಟ್ಟೆ, ಕೋಟ, ಕೊಕ್ಕರ್ಣೆ, ಕುಂಬಳೆ, ಪೊಳಲಿ, ಬಂಟ್ವಾಳ, ಕಾಸರಗೋಡು, . ೯
ವಿವಿಧ ಸಮಾಚಾರಗಳು. ೧೧
ಕೊಡಗು ದೇಶದ ರಾಜ್ಯಭಾರ ಕ್ರಮ ೧೫
ಮಹಾತ್ಮಾಜಿಯವರ ಸತ್ಯಾಗ್ರಹ ಸಮಾಚಾರ . . ೪-೧೪



# ಸ್ವದೇಶಾಭಿಮಾನಿ.

ತಾರೀಕು ೨೪ನೇ ಶುಕ್ರವಾರ ಒಕ್ಟೋಬರ ೧೯೩೦


## ಕರ್ನಾಟಕ ಸಾಹಿತ್ಯ ಸಮ್ಮೇಳನ.

ಕಳೆದ ತಿಂಗಳ ಪ್ರಥಮ ವಾರದಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಮೈಸೂರಿನಲ್ಲಿ ಸೇರಿತು. ಸಮಗ್ರ ಕರ್ನಾಟಕಕ್ಕೆ ಅತ್ಯಂತ ಮುಖ್ಯವಾದ ಈ ಪರಿಷತ್ತಿನ ವರದಿಯು ಸರಿಯಾದ ಪ್ರಾಮುಖ್ಯತೆಯಿಂದ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಡದೆ ಇದ್ದುದು ಅತ್ಯಂತ ಶೋಚನೀಯವಿರುತ್ತದೆ. ಸಾಹಿತ್ಯ ಪರಿಷತ್ತು ಸ್ಥಾಪಿಸಲ್ಪಟ್ಟು ಹಲವು ವರ್ಷಗಳಾದರೂ ಅದು ಕರ್ನಾಟಕದ ಜೀವನದಲ್ಲಿ ನೂತನ ಕ್ರಾಂತಿಯನ್ನುಂಟುಮಾಡುವಷ್ಟು ಕ್ರಮದಲ್ಲಿ ವ್ಯವಸ್ಥಿತವಾಗಿಲ್ಲವೆಂಬುವುದು ಇದೊಂದರಿಂದಲೇ ತಿಳಿಯಬಹುದಾಗಿದೆ.

ಸ್ವಾಗತಾಧ್ಯಕ್ಷರು ಶ್ರೀಮಾನ್ ಬಿ. ಎಮ್. ಶ್ರೀಕಂಠಯ್ಯನವರು—ಇವರು ಕರ್ನಾಟಕ ಸಾಹಿತ್ಯ ವರ್ಗಕ್ಕೆ ಚಿರಪರಿಚಿತರು. ಆಂಗ್ಲಭಾಷೆಯಲ್ಲಿ ಒಳ್ಳೇ ಅಭ್ಯಾಸವಿದ್ದು ಕರ್ನಾಟಕ ಭಾಷೆಯಲ್ಲಿ ಹುರುಪುಗೊಂಡವರು ಪಾಶ್ಚಾತ್ಯ—ಪ್ರಾಚ್ಯಗಳ ಅನ್ಯೋನ್ಯವನ್ನು ಹುಡುಕುವವರು ಸಾಹಿತ್ಯದ ಅಭಿವೃದ್ಧಿಯಲ್ಲಿ ವಿಶಾಲವೂ, ವಿಜ್ಞವೂ ಆದ ಅಭಿಪ್ರಾಯಗಳುಳ್ಳವರು ಸ್ವಾಗತಾಧ್ಯಕ್ಷತನವು ಇವರಿಗಿಂತ ಉತ್ತಮ ವ್ಯಕ್ತಿಯನ್ನು ಹೊಂದಲಾರದು ಫಲತಃ ಅವರ ಭಾಷಣವೂ ಸಂದರ್ಭ ಯೋಗ್ಯವಾದುದಾಗಿರುತ್ತದೆ. ಅದು ವಿಶಾಲ ಕರ್ನಾಟಕದ ಭಾವೆಯಲ್ಲಿ ರಚಿಸಲ್ಪಟ್ಟಿದ್ದಿತು, ವಿಶ್ವಭಾವಗಳನ್ನೊಡಗೂಡಿದ್ದಿತು.

ಆದರೆ ಅಧ್ಯಕ್ಷಭಾಷಣವು ಸಂದರ್ಭಕ್ಕೆ ಯೋಗ್ಯವಾದುದಾಗಿ ನಾವು ಹೇಳಲಾರೆವು. ಅಧ್ಯಕ್ಷರು ಶ್ರೀಮಾನ್ ಆಲೂರು ವೆಂಕಟರಾಯರು ಇವರೂ ಕರ್ನಾಟಕಕ್ಕೆ ಚಿರಪರಿಚಿತರು. ಕರ್ನಾಟಕದ ಏಕೀಕರಣವನ್ನೇ ಜೀವನದ ಕಲ್ಪನೆಯಾಗಿ ಮಾಡಿ ಹೆಣಗಾಡಿ ಅದನ್ನು ಕಾರ್ಯರಂಗದಲ್ಲಿ ಅಸ್ತಿತ್ವಕ್ಕೆ ತಂದವರು ಅವರು, ಜಯಕರ್ನಾಟಕದ ಮೊದಲಿನ ಸ್ಥಾಪಕರು ಮತ್ತು ಸಂಪಾದಕರು ಕರ್ನಾಟಕದ ಮೇಲ್ಮೆಗಾಗಿ ಅಖಂಡ ಅತ್ಯಯತ್ನವನ್ನು ಮಾಡಿದವರು, ಆದರೆ ಅಧುನಿಕತೆಯು ಈಗಿನ ಸಮಯದಲ್ಲಿ ಅವರ ವಿಚಾರವು ಸಂಕುಚಿತ ಮತ್ತು ಪ್ರಾಚೀನವಾಗಿರುತ್ತದೆ. ನೂತನ ವಿಚಾರಕ್ರಾಂತಿಯಲ್ಲಿ ಬೇಕಾದ ಆ ವಿಶಾಲವೂ ಗ್ರಾಹಕವೂ ಆದ ಶಕ್ತಿಯ ಅಭಾವವು ಅವರಲ್ಲಿ ಹೆಚ್ಚಾಗಿರುತ್ತದೆ ಫಲತಃ ಅವರ ಭಾಷಣವೂ ಕೂಡ ಅದೇ ಆ ಸಂಕುಚಿತ ಭಾವನೆಗಳ ಮೇರೆಗಳನ್ನು ಮೀರಲಾರದಾಗಿದ್ದಿತು.

ಒಂದು ಪರಿಷತ್ತಿಗೆ ಅಥವಾ ಸಮ್ಮಿಲನಕ್ಕೆ ಅಧ್ಯಕ್ಷರನ್ನಾಗಿ ಮಾಡುವುದು, ಆ ಸಮ್ಮಿಲನವು ಯಾವ ಉದ್ದೇಶಗಳಿಂದ ಕೂಡಿದೆಯೋ ಆ ಉದ್ದೇಶಗಳ ಸ್ಪಷ್ಟವಾದ ನಿರೂಪಣೆಯನ್ನೂ, ಅವುಗಳಿಗೆ ಪರಿಣಾಮಕಾರಿಯಾದ ಕಾರ್ಯಾಕಾರವನ್ನೂ ಕೊಡಲಿಕ್ಕೆ ಅವರಿಂದ ಪ್ರೇರಣೆಯು ಸಿಕ್ಕಲೆಂದಾಗಿದೆ ಆದುದರಿಂದ ಅಧ್ಯಕ್ಷಭಾಷಣವು, ಸ್ಪಷ್ಟವೂ, ವಿವರಪೂರ್ಣವೂ, ಮಾರ್ಗದರ್ಶಕವೂ ಇರಬೇಕು. ಆದರೆ ಈ ಬಾರಿಯ ಅಧ್ಯಕ್ಷಭಾಷಣವು ಈ ಗುಣಗಳನ್ನೊಳಗೊಂಡಿಲ್ಲವೆಂದು ಹೇಳಬಹುದು

ಕರ್ನಾಟಕದ ಸಾಹಿತ್ಯದ ಪರಿಸ್ಥಿತಿಯು ಇತರ ಪ್ರಾಂತ್ಯಗಳ ಸಾಹಿತ್ಯದಂತಿರುವುದಿಲ್ಲ. ಹಿಂದುಸ್ಥಾನದ ಮುಖ್ಯವಾದ ಎಲ್ಲಾ ದೇಶಭಾಷೆಗಳೂ ಸಾಧಾರಣ ಒಳ್ಳೆಯ ಸ್ಥಿತಿಯಲ್ಲಿವೆ. ಆದರೆ ಕರ್ನಾಟಕವು ಮಾತ್ರ ಇನ್ನೂ ಸರಿಯಾಗಿ ತಲೆಯೆತ್ತಲಾರದೆ ಹೋಗಿದೆ ಇದು ಏಕೆ? ಆ ಪ್ರಾಂತ್ಯಗಳಿಗೂ ಕರ್ನಾಟಕಕ್ಕೂ ಇರುವ ಅಂತರವೇನು? ಸಾಹಿತ್ಯವು ವಿಸ್ತೃತ ಪ್ರಸಾರವಾಗುವಂತೆ ಸಾಹಿತ್ಯ ಪರಿಷತ್ತು ಏನು ಮಾಡಬಹುದು ಎಂಬ ವಿಚಾರವು ಇನ್ನೂ ಸಾಹಿತ್ಯ ಸಮ್ಮೇಲನದ ಲಕ್ಷ್ಯಕ್ಕೆ ಬಂದಿರುವಂತೆ ತೋರುವುದಿಲ್ಲ.

ವರ್ಷಕ್ಕೊಂದು ಬಾರಿ ಸಮ್ಮಿಲನ ಕೂಡಿ, ಕುಮಾರವ್ಯಾಸಾದಿಗಳ ಶ್ಲಾಘನೆಯು ನಡಿಯುವಂತೆ, ದೇಶದಲ್ಲಿ ಅವರ ಪದ್ಯ ಗದ್ಯಗಳ ಮರವೂ ಹೆಚ್ಚಾಗುತ್ತಾ ಬರುತ್ತಿದೆ. ಹಿಂದಿನ ಕಾಲದಲ್ಲಿ ಈ ಹಳೇ ಕಾವ್ಯಗಳ ರಸಾಸ್ವಾದನೆಯನ್ನು ಚಿಕ್ಕ ಶಾಸ್ತ್ರಿಯುದವರು ಕೂಡ ಮಾಡುತ್ತಿದ್ದಾಗ, ಈಗಿನ "ಅಕ್ಷರಜ್ಞ" ಗಳ ವ್ಯಾಸಂಗದಲ್ಲಿ ಈ ಕಾವ್ಯಗಳು ಹೈಸ್ಕೂಲು, ಕಾಲೇಜು ವಿದ್ಯಾಭ್ಯಾಸದ ಅಂಶವಾಗಿ ಮಾಡಲ್ಪಟ್ಟರೂ, ಬಿ. ಎ. ಕಲಿತವರು ಕೂಡ ತಿಳಿಯಲಾರದೆ ಇರುತ್ತಾರೆ

ಹಳೇ ಸಾಹಿತ್ಯದ ಅವಸ್ಥೆಯು ಹಾಗಿರುವಾಗ ಹೊಸ ಸಾಹಿತ್ಯದ ಬೆಳವಣಿಗೆಯೂ ಹೇಗಿದೆಯೆಂದು ತಿಳಿಯಬಹುದು. ಶ್ರೀ ರವೀಂದ್ರರ ನಂತರ ಬಂಗಾಳದಲ್ಲಿಯೂ ಕಾವ್ಯ ರಚನೆಯಲ್ಲಿ ನೂತನ ಮಾರ್ಪಾಟುಗಳುಂಟಾಗಿ ಸಾಹಿತ್ಯವು ಉತ್ತಮ ರಚನೆಗಳನ್ನು ಹೊಂದಿತಾದರೂ, ಕರ್ನಾಟಕ ರಚನಾಶಕ್ತಿಯು ಈಗ ಅಲ್ಲಿಯೇ ನಿಂತಂತೆ ತೋರುತ್ತಿದೆ. ಲೇಖನದಲ್ಲಿ ವೈಯಕ್ತಿಕತೆ (Individuality)ಯು ಇರುವುದಿಲ್ಲ ಒರೇ ಅನುಸರಣವೇ ಇತ್ತೀಚೆಗೆ ಹೆಚ್ಚಾಗುತ್ತಾ ಬಂದು, ಉಪನ್ಯಾಸದಲ್ಲಿಯಾಗಲಿ, ಕಾವ್ಯದಲ್ಲಿಯಾಗಲಿ ಕರ್ನಾಟಕದ ವೈಶಿಷ್ಟ್ಯವು ಕಡಿಮೆಯಾಗುತ್ತಾ ಬರುತ್ತಿದೆ

ಇಂತಹ ಮಹತ್ವದ ಸಮಸ್ಯೆಗಳ ಕಡೆಗೆ ಸಮ್ಮೀಲನದ ಲಕ್ಷ್ಯವು ಹರಿದಿಲ್ಲ ಅಲ್ಲದೆ ಪ್ರಕೃತ ಕರ್ನಾಟಕದೊಳಗಿನ ಪ್ರಕಟಣೆಗಳ Publications) ಪರಿಸ್ಥಿತಿ, ವಾಚಕವರ್ಗದ ಪರಿಸ್ಥಿತಿ, ಪತ್ರಿಕಾ ಪ್ರಕಟಣೆಯ ಪರಿಸ್ಥಿತಿ ಮೊದಲಾದ ಕಾರ್ಯಕಾರಿ ಸಮಸ್ಯೆಗಳ ಗೋಜಿಗೂ ಸಮ್ಮಿಲನವು ಹೋದಂತೆ ತೋರುವುದಿಲ್ಲ.

ಸಾಹಿತ್ಯ ಸಮ್ಮಿಲನವು ಬರೇ ವಾರ್ಷಿಕ ಉತ್ಸವವಾಗಿ ಸೇರುವುದರ ಬದಲಿಗೆ ಇನ್ನಾದರೂ ಅದರ ಮೂಲಕ ಪರಿಣಾಮಕಾರಿಯಾದ ಕಾರ್ಯಗಳು ನೆರವೇರಲೆಂದು ನಾವು ಆಶಿಸುತ್ತೇವೆ

## ವಿದೇಶ ವರ್ತಮಾನ.

— ಲಂಡನ ನಗರದಲ್ಲಿ ಹೆಂಗಸರನ್ನು ಪೋಲೀಸು ಡಿಟೆಕ್ಟಿವ್‌ಗಳನ್ನಾಗಿ ನಿಯಮಿಸುವ ಏರ್ಪಾಡುಗಳು ನಡೆಯುತ್ತಿವೆ ಸ್ಕೋಟಲೇಂಡಿಗೆ ಸೇರಿದ ಮಿಸ್ ಟಿಂಟೊ ಎಂಬವಳೇ ಈ ಏರ್ಪಾಡುಗಳ ಮೂಲ ಕಾರಣಳು ಅಂತಹ ಡಿಟೆಕ್ಟಿವ್ ಹೆಂಗಸರಿಗಾಗಿ ಕೆಲವತಗಳಲ್ಲಿ ಪೋಲೀಸು ಸ್ಟೇಷನುಗಳೂ ಏರ್ಪಟ್ಟಿವೆ ಮಿಸ್ಟರ ಮ್ಯಟ- ಎಂಬ ೮ ಮಂದಿ ಸ್ತ್ರೀಯರನ್ನು ಕೆಲಸಕ್ಕಾಗಿ ಚುನಾಯಿಸಿದವರು, ಈ ಸಂಗತಿಯ ಅಭಿವೃದ್ಧಿಯನ್ನು ಅನೇಕರು ನಿರೀಕ್ಷಿಸುತ್ತಿರುವರು

— ಲಂಡನ ಪತ್ರಿಕೆಗಳ ಅಭಿಪ್ರಾಯದಂತೆ ಚಕ್ರಗೋಷ್ಠಿಯು ಪೂರ್ತಿಗೊಳ್ಳುವ ತನಕ ಮುಂದಿನ ವ್ಯಾಸರಾಯರ ಆ ನ ವನೆಯು ಮುಂದರಿಸಲಾಗುವುದೆಂದು ತಿಳಿದು ಬರುತ್ತದೆ. ಮಂತ್ರಿವರ್ಯರ ದ ವಿ ಮೆಕ್ಡೊನಾಲ್ಡರು ರೌಂಡ್‌ಟೇಬಲ್ ಸಮ್ಮೇಳನದಲ್ಲಿ ವ್ಯಾಸರಾಯರ ಚುನಾವಣಾ ವಿಷಯವನ್ನು ಹಿಂದೀಯರೊಡನೆ ಚರ್ಚಿಸಲಿಕ್ಕಿರುವರಂತೆ! ಮತ್ತು ಹಿಂದೀಯರ ಅಭಿಪ್ರಾಯಗಳನ್ನು ಬೆಸ್ಸಾಗಿ ಗಮನಿಸುವರಂತೆ! ಇರ್ವಿನ್ ಪ್ರಭುಗಳು ತಮ್ಮ ಹುದ್ದೆಯ ಅವಧಿಯನ್ನೆಂದೂ ಮುಂದರಿಸಬೇಕೆಂಬ ಕಾಂಕ್ಷೆಯ ಳ್ಳವರಲ್ಲದಿರುವುದರಿಂದ, ಸರ್ ಹರ್ಬರ್ಟ್ ಸಾಮ್ಯುವೇಲರೇ ಮುಂದಿನ ವ್ಯಾಸರಾಯರ ಸ್ಥಾನವನ್ನು ವಹಿಸುವರೆಂದು ಊಹಿಸಲಾಗುತ್ತದೆ ಡೈಲಿ ಹೆರಾಲ್ಡ್ ಪತ್ರಿಕೆಯ ಅಭಿಪ್ರಾಯದಂತೆ ವಿ ಸ್‌ಮು ವೇಲರು ಪಟ್ಟವನ್ನೇರುವರೆಂದರೆ ಅದು ಅಸಂಭವನೀಯವೇ ಆಗಿರುವದು.

— ಲಂಡನ್ ನಗರದಲ್ಲಿ ಇಂಡಿಯದ ಪರವಾಗಿ ಮಿ। ಎಸ್. ಎನ್ ಗುಪ್ತರನ್ನು ಟ್ರೇಡ ಕಮಿಶನರನ್ನಾಗಿ ನಿಯಮಿಸಿರುವರು ವಿ ಧಾನ ಪ್ರಾಂತ್ಯಗಳೂ ಇದೇ ರೀತಿಯ ಕಮಿಶನರನ್ನು ಶೀಘ್ರದಲ್ಲೇ ಏರ್ಪಾಡು ಮಾಡುವರೆಂದು ತಿಳಿದುಬರುತ್ತದೆ.

— ಕಿಸಾಹಿನೆಥ್ ಎಂಬಲ್ಲಿ ಪೋಲೀಸರು ೮ ಮಂದಿ ಪ್ರಾಯಬಂದ ಹುಡುಗಿಯರು ನಗ್ನವಾಗಿ ಸಹ ನರ್ತನ ಮಾಡುವದನ್ನು ನೋಡಿ ಆಶ್ಚರ್ಯ ಹೊಂದಿದರು ಹುಡುಗಿಯರ ಮೈಮೇಲೆ ಒಂದೇ ಒಂದು ಚೂರು ಬಟ್ಟೆಯಾದರೂ ಇದ್ದಿಲ್ಲವಂತೆ! ಪೋಲೀಸರು ಇದೇನಿರಬಹುದೆಂದು ಶೋಧ ಮಾಡಲು, ಅದೇ ಸಮಾಜಕ್ಕೆ ಸೇರಿದ ಇನ್ನೂ ಕೆಲವು ಮಂದಿ ಸ್ತ್ರೀ. ಪುರುಷರನ್ನೂ ಆ ಪಂಗಡದವರ ದೇವಾಲಯವನ್ನೂ ನೋಡಿದರಂತೆ! ಈ ಕರಿತ ವಿಚಾರಣೆಗಳು ನಡೆದು Suffering Saints' ಎಂದ ಕರೆಯಲ್ಪಡುವ ಒಂದು ಪಂಗಡವೇ ಇದುವೆಂದು ತಿಳಿದು ಬಂದದೆ, ಆದರೆ ಪೋಲೀಸರು ಅವರನ್ನು ಯೋಗ್ಯವಾದ ಬಟ್ಟೆಯನ್ನು ಧರಿಸಲಿಲ್ಲವೆಂಬ ಅಪಾದನೆಯ ಮೇಲೆ ಚಾರ್ಜ ಮಾಡಿ ವಿಚಾರಣೆಗೆ ಗುರಿಪಡಿಸಿರುವರು.

ಲಂಡನ್ ನಗರದಲ್ಲಿ ನವೆಂಬ್ರ ೧೨ನೇ ತಾರೀಕಿನ ದಿನ ಅರಸರೇ ಚಕ್ರಗೋಷ್ಠಿಯನ್ನು ಆರಂಭಿಸುವರೆಂದು ತಿಳಿದುಬರುತ್ತದೆ.

## ಒಳದೇಶ ವರ್ತಮಾನ.

— ತಾ. ೧೬ - ೧೦ — ೩೦ನೇ ದಿನ ಕಲ್ಕತ್ತ ನಗರದ ಅಮಿರಾಗಿಯಸ್ ರಸ್ತೆಯಲ್ಲಿದ್ದ ಮಿ। ಮಾನಿಕ್‌ಚಂದ್ ಗೋಕುಲ್‌ಚಂದ್ ಎಂಬವರ ಅಂಗಡಿಯಲ್ಲಿ ಭಯಂಕರ ಕೊಲೆಯೊಂದು ನಡೆದಿರುವದು. ಹಿಜಾಬ್ಬಿಯು ಅಂಗಡಿಯೊಳಗೆ ಹಣ ಲೆಕ್ಕ ಮಾಡುತ್ತಿರಲು ಅಕಸ್ಮಾತ್ತಾಗಿ ಒಂದ ಓರ್ವ ಬಂಗಾಳಿ ಯುವಕನು ಹಿಜಾಬ್ಬಿಯನ್ನು ಕುಟಿತಿವಿಯುವೆನೆಂದು ಹೆದರಿಸುತ್ತಾ ಖಜಾನೆಯ ಬೀಗದ ಕೈಯನ್ನು ಕೊಡೆಂದು ಜುಲುಮಿನಲ್ಲಿ ಕೇಳಲು, ಹಿಜಾಬ್ಬಿಯು, ಜೀವದಾಶೆಯಿಂದ ಬೇಗನೇ ಕೊಟ್ಟನು ಆ ತರುವಾಯ ದರೋಡೆಗಾರರು ಖಜಾನೆಯನ್ನೊಡೆದು ಸಾಧಾರಣ ರೂ. ೨೦,೦೦೦/ ಬೆಲೆಯುಳ್ಳ ಕರೆನ್ಸಿ ನೋಟುಗಳನ್ನೂ ನಾಣ್ಯಗಳನ್ನೂ ಸೂರೆಮಾಡಿದರು. ಈ ನಡುವೆ ಹಿಜಾಬ್ಬಿಯ ಗೋಳು ದರ್ವಾನನು ಕಳ್ಳರ ಹಿಂದೆ ಹತ್ತೆಗಾಗಿ ಓಡಿದನು ಹೋದವನು ದರೋಡೆಗಾರರ ಗುಂಡಿನ ಏಟಿಗೆ ಗುರಿಯಾದನು ೪ ಮಂದಿ ದರೋಡೆಗಾರರು ತಪ್ಪಿಸಿದವರು, ಒಬ್ಬನನ್ನು ಆತನ ಆಯುಧ ಸಮೇತ ಹೆಡ್‌ಕಾನಸ್ಟೇಬಲನ ಕೈವಶವಾಗಿರುವನು. ಆದರೆ ದರೋಡೆಗಾರನಿಗೂ ಹೆಡ್ ಕಾನಸ್ಟೇಬಲನಿಗೂ ಸಣ್ಣದೊಂದು ಮುಷ್ಟಿ ಯುದ್ಧವು ನಡೆದು ಇಬ್ಬರೂ ಅಪಾಯಕರವಲ್ಲದ ಕೆಲವು ಗಾಯಗಳನ್ನು ಹೊಂದಿರುವರಂತೆ!

— ಟ್ರಿವೆಲ್ಲೂರು ಬೈಲಿಗೆ ಒಯ್ಯಲ್ಪಟ್ಟ ಗೋವಿಂದ ರೆಡ್ಡಿ ಎಂಬ ಕೈದಿಯು ಆತ್ಮಹತ್ಯೆ ಮಾಡಿಕೊಳ್ಳುವ ಉದ್ದೇಶದಿಂದ ಮಂಗಳೂರು ಎಕ್ಸ್‌ಪ್ರೆಸ್ ರೈಲು ಗಾಡಿಯ ಅಡಿಗೆ ಬಿದ್ದಿದ್ದನು, ಆದರೆ ಗಾಡಿಯು ಆತನನ್ನು ಅಷ್ಟೊಂದು ಸಂಕಷ್ಟಗಳಿಗೆ ಗುರಿಪಡಿಸಿಲ್ಲ, ಮೈಯ ಕೆಲವೆಡೆಗಳಲ್ಲಿ ಮಾತ್ರವೇ ಗಾಯಗಳಾಗಿರುವವು ಕೂಡಲೆ ಜೊತೆಯಲ್ಲಿದ್ದ ಪೋಲೀಸರು ಆತನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಒಯ್ದರು. ಆರೈಕೆ ಹೊಂದುತ್ತಲೇ, ಪುನಃ ಆತನನ್ನು ವಿಚಾರಣೆಗೆ ಒಳಪಡಿಸಿದರು. ಮೊದಲೇ ಗೋವಿಂದ ರೆಡ್ಡಿಯು ಅಪಾದಿತನು; ಈಗ ಆತನ ಮೇಲೆ ಹೊಸದಾದ ಆತ್ಮಹತ್ಯೆಯ ತಕ್ಸೀರೂ ಹೊರಿಸಲ್ಪಟ್ಟಿತು ಆ ಮೇಲೆ ಟ್ರಿವೆಲ್ಲೂರು ಸಬ್ ಮ್ಯಾಜಿಸ್ಟ್ರೇಟರು ಆತನನ್ನು ೩ ತಿಂಗಳ ಕಠಿಣ ಸಜೆಗೆ ಗುರಿಪಡಿಸಿದರು.

— ಮುಂಬಾಯಿಯ ಕ್ರಾನಿಕಲ್ ಪತ್ರಿಕೆಯು ತಿಳಿಯಪಡಿಸುವಂತೆ ಮಹಾತ್ಮಾಜಿಯವರು ಅಧೀಕಾರರ ಅಪೇಕ್ಷೆ ಮೇರೆಗೆ ತನ್ನ ಆಪ್ತೇಷ್ಟರ ಮತ್ತು ಸಂಬಂಧಿಕರ ಹೆಸರುಗಳನ್ನೊಳಗೊಂಡ ಒಂದು ಪಟ್ಟಿಯನ್ನು ತಯಾರಿಸಿ ಅದರಲ್ಲಿ ಬೇಕಾದವರನ್ನು ತಂಡ ತಂಡವಾಗಿ ಮಹಾತ್ಮಾಜಿಯವರ ದರ್ಶನಕ್ಕೆ ಬಿಡುವಂತೆ ಕೇಳಿಕೊಂಡರು, ಆದರೆ ಮುಂಬಾಯಿಯ (Officialdom) ನವರು ಈ ಪಟ್ಟಿಯನ್ನು ಮಂಜೂರು ಮಾಡಲಿಲ್ಲ ಅವರು ತಿಳಿಯಗೊಡುವಂತೆ ಪಟ್ಟಿಯು ಬರೇ ಸಂಬಂಧಿಕರ ಹೆಸರುಗಳನ್ನು ಮಾತ್ರವೇ ಸೂಚಿಸುವಂತಹದ್ದಿರಬೇಕಂತೆ! ಆದುದರಿಂದ ಗಾಂಧಿಜಿಯವರು ತಾನು ಮಾಡಿದ ಪಟ್ಟಿಯನ್ನು ತಿರಿಗಿ ತಿದ್ದಲು ಗಮನಿಸಲಿಲ್ಲ ಮಹಾತ್ಮಾಜಿಯವರ ಭೂತದಯಾಪರತೆಯೇ ಅವರನ್ನು ತನ್ನ ಪಟ್ಟಿಯನ್ನು ಮುಂದ್ಪಪಡಿಸುವುದರಲ್ಲಿ ತಡೆಗಟ್ಟಿತು ಹಾಗೂ ಮಹಾತ್ಮಾಜಿಯವರು ತನ್ನ ಆಪ್ತರನ್ನು ಕಾಣದೆ ೪ — ೫ ತಿಂಗಳುಗಳು ಆಗಿರುವುವೆಂದು ತಿಳಿಯಲಾಗುತ್ತದೆ,

— ನಾಗಪುರದಲ್ಲಿ ಪಂಡಿತ ಜವಾಹಿರಲಾಲ ನೆಹರುರವರ ದಸ್ತಗಿರಿಯನ್ನು ವಿರೋಧಿಸಿ ಜನರು ಹರತಾಳವನ್ನು ಆಚರಿಸಿದರು. ಎಲ್ಲಾ ಅಂಗಡಿಗಳೂ ಮುಚ್ಚಲ್ಪಟ್ಟಿದ್ದವು ದೀಪಾವಳಿಯ ಉತ್ಸವಗಳಿಗಿಂತಲೂ ಹರತಾಳಗಳೂ ಪುರಜನರನ್ನು ಆನಂದಗೊಳಿಸಿದವು.

— ಪಂಜಾಬಿನಲ್ಲಿ ಪೀಸ್‌ಗೂಡ್ಸ್ ವ್ಯಾಪಾರಸ್ಥರು ಬಹಿಷ್ಕಾರ ಚಳವಳವನ್ನಪೇಕ್ಷಿಸಿ, ವಿದೇಶೀ ಬಟ್ಟೆಗಳಲ್ಲಿ ಇನ್ನೂ ತಮ್ಮ ವ್ಯಾಪಾರಗಳನ್ನು ಮುಂದರಿಸಬೇಕೆಂಬ ನಿರ್ಧಾರ ಮಾಡಿಕೊಂಡಿರುವರು, ಆದರೆ ಕೇವಿರಿಸಿಟ್ಟ ವಿದೇಶಿ ಬಟ್ಟೆಯ ವಿಲೇವಾರಿಯಾಗುವ ತನಕ ಪಂಜಾಬಿಯರು ಬಹಿಷ್ಕಾರ ಚಳವಳವನ್ನು ದೂರೀಕರಿಸ ವರೆಂದು ತಿಳಿದು ಬರುತ್ತದೆ.

— ಪೇಶಾವರದಲ್ಲಿ ತಾ ೨೦-೧೦-೩೦ನೇ ದಿನ ಸಹರೆಯ ಕಾರ್ಯಸ್ಥರಾಗಿದ್ದ ೧೪ ಮಂದಿಯನ್ನು ಪೋಲೀಸರು ದಸ್ತಗಿರಿ ಮಾಡಿರುವರು ಇವರ ಪೈಕಿ ೩ ಮಂದಿ ವಿದ್ಯಾರ್ಥಿಗಳು ೧೫ ವರುಷ ಪ್ರಾಯ ಉಳ್ಳವರೆಂದ ತಿಳಿದ ಬರುತ್ತದೆ ಒಟ್ಟಾರೆ ಈ ಕುರಿತ ೭೦ ದಸ್ತಗಿರಿಗಳ ನಡೆದವು. ಪೋಲೀಸರು ಬೀದಿಗಳಲ್ಲಿ ಹರೋಲ್ಡಿ ಹಾಕಿಕೊಂಡು ನಡಿಸುತ್ತಿರುವರು ೧೬ ಮಂದಿ ಪಿಕೆಟ ಮಾಡಿದವರನ್ನು ಮ್ಯಾಜಿಸ್ಟ್ರೇಟರು ಆರಾರು ತಿಂಗಳ ಕಠಿಣ ಸಜೆಗೆ ಗುರಿಪಡಿಸಿರುವರು

— ಪಂಡಿತ ಜವಾಹಿರಲಾಲ ನೆಹರುರವರನ್ನು ದಸ್ತಗಿರಿ ಮಾಡಿರುವರಷ್ಟೇ! ಆದರೆ ಅವರ ಮೇಲೆ ಹೊರಿಸಲ್ಪಟ್ಟ ದೋಷದ ವಿಯ ವಿಚಾರಣೆಯ ತಾರೀಕನ್ನು ಸರಕಾರವು ಇನ್ನೂ ನಿಶ್ಚಯಿಸಲಿಲ್ಲ ನೈನಿ ಕೋರ್ಟುಗಳು, ದೀಪಾವಳಿಗಾಗಿ ಮುಚ್ಚಲ್ಪಟ್ಟಿರುವುದರಿಂದ, ಸದರಿ ನೆಹರುರವರ ವಿಚಾರಣೆಯು ಆ ಮೇಲೆಯೇ ನಡೆಯಲಾಗುವದೆಂದು ತಿಳಿದುಬರುತ್ತದೆ

ಡಾ। ರವೀಂದ್ರನಾಥ ಠಾಗೂರರವರು ಹೃದ್ರೋಗದಿಂದ ತೊಂದರೆ ಪಡುತ್ತಿರುವುದರಿಂದ ಅಮೇರಿಕದ ಆಮಂತ್ರಣಗಳನ್ನು ತತ್ಕಾಲಕ್ಕೆ ನಿರಾಕರಿಸಿರುವರೆಂದು ತಿಳಿದು ಬರುತ್ತದೆ,

ಮಸೂರಿಯಲ್ಲಿ ಚಿಕಿತ್ಸೆ ಹೊಂದುತ್ತಿರುವ ಮೋತಿಲಾಲರು ಕಫದ ಬಾಧೆಯಿಂದ ತೊಂದರೆ ಪಡುತ್ತಿರುವರು ಮತ್ತು ಕಫದೊಡನೆ ರಕ್ತವು ಹೋಗುತ್ತದೆಂದು ತಿಳಿದು ಬರುತ್ತದೆ,

# ದಕ್ಷಿಣ ಕನ್ನಡ.

**ಮಂಗಳೂರು:**— ತಾ. ೧೩–೧೦ ೩೦ನೇ ದಿವಸ ಇಲ್ಲಿಯ ಗವರ್ನಮೆಂಟು ವಿಶ್ವವಿದ್ಯಾಲಯವು ಮಾನ್ಯ ಮದರಾಸು ಗವರ್ನರರ ಆಗಮನದಲ್ಲಿ ತುಂಬಿದ ಸತ್ಕಾರಗಳಿಂದ ಮನ್ನಿಸಿತು ವಿದ್ಯಾರ್ಥಿ ವರ್ಗವು ಗವರ್ನರರು ಒಳಪ್ರವೇಶಿಸ ತ್ತಲೇ ತಮ್ಮ ತಲೆಯ ಮೇಲಣ ಗಾಂಧಿ ಟೊಪ್ಪಿಗಳನ್ನು ತೆಗೆದು ವಿನಯದಿಂದ ಸಮಸ್ಕರಿಸಿದರು ಈ ಸತ್ಕಾರಗಳಿಗೆ ಗವರ್ನರ ಸಾಹೇಬರಿಂದ ಯೋಗ್ಯ ಪುರಸ್ಕಾರಗಳೂ ದೊರೆತವು ತರುವಾಯ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರಾ। ಚೆಟ್ಟೂರರು ಗವರ್ನರರಿಗೆ ಪ್ರತಿಯೊಂದ ಕ್ಲಾಸಿಗೂ ಕರೆದೊಯ್ದು ಪರಿಚಿತ ಪಡಿಸಿದರು

ಆ ವೇಳೆ ಗವರ್ನರರು ವಿದ್ಯಾರ್ಥಿಗಳನ್ನುದ್ದೇಶಿಸಿ ಬಹಳ ಸ್ವದೇಶಿಯುಳ್ಳವರಾಗಬೇಕೆಂದು ಮೊದಲಾಗಿ ಬುದ್ಧಿವಾದದ ಎರಡು ಮಾತುಗಳನ್ನು ಹೇಳಿ ಕಾಲೇಜಿನ ಅಧಿಕಾರಿಗಳಿಂದ ದೂಷಿಸಲ್ಪಟ್ಟ [illegible] ಪಾರ್ಟಿಯ ಆದರಾತಿಥ್ಯಗಳನ್ನು ಸ್ವೀಕರಿಸಿದರು

ಎಲೋಸಿಯಸ್ ಕಾಲೇಜಿನ ಕೆಥೋಲಿಕರಲ್ಲದ ಎಲ್ಲಾ ವಿದ್ಯಾರ್ಥಿಗಳು ಲಾಟಿ ಪ್ರಹಾರಗಳ ಪ್ರತಿಬಂಧನೆಗಾಗಿ ಒಂದು ದಿನ ಕಾಲೇಜಿಗೆ ಬಾರದೆ ಕುಳಿತರು ಸುಮಾರು ೩೦೦ ಮಂದಿ ವಿದ್ಯಾರ್ಥಿಗಳಿಂದ ಸಹಿ ಹಾಕಲ್ಪಟ್ಟ ಲಾಟಿ ಪ್ರಹಾರಗಳಿಂದ ತಮಗುಂಟಾದ ಅಸಮಾಧಾನವನ್ನು ಕುರಿತು ದೊಡ್ಡದೊಂದು ಅರ್ಜಿಯನ್ನು ವೈಸ್ ರಾಯರ ಸಮಕ್ಷಮ ಅರ್ಪಿಸಲೆಂದು ತಿಳಿದು ಬರುತ್ತದೆ ಇದೇ ತಿಂಗಳ ೧೩ನೇ ತಾರೀಕಿನ ದಿನವೇ ವಿಶ್ವವಿದ್ಯಾಲಯವು ವಿದ್ಯಾರ್ಥಿಗಳ ಅಭಾವದಿಂದ ಕೆಲಸವನ್ನು ನಡೆಸದಂತಾಯಿತು

ತಾರೀಕು ೧೮–೧೦–೩೦ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ೩೩ ಜನನಗಳೂ ೧೦ ಮರಣಗಳೂ ಆದವು

[illegible]

S. Ramachandra Ayyar M. D. I. [illegible]

ಗೀತಾ ಸ್ವಯಂಸೇವಕ

**ಉಡುಪಿ**— [illegible]

[illegible]

**ಮೂಲ್ಕಿ**— ಇಲ್ಲಿಯ ಪ್ರಮುಖ ವರ್ತಕರೂ ಉದಾರ ದಾತೃತ್ವಗುಣಗಳೂ ಆಗಿದ್ದ ಶ್ರೀ ಬೋಳ ಮಾಧವರಾಯರು ಕೆಲವು ಕಾಲದಿಂದೀಚೆಗೆ ದೇಹಾರೋಗ್ಯವಿಲ್ಲದಿದ್ದು ಈ ದಿನ ಮುಂಜಾನೆ (ತಾ. ೨೦–೧೦–೩೦) ಸುಮಾರು ೯ ಘಂಟೆ ಸಮಯಕ್ಕೆ ಪರಲೋಕ ಪ್ರಾಪ್ತರಾದರು ಈ ಮಹನೀಯರು ಸದಾ ಪರೋಪಕಾರಾಂಗಳಾಗಿದ್ದು ಪ್ರತಿ ಒಂದು ಸಾರ್ವಜನಿಕ ಕೆಲಸಗಳಲ್ಲಿ ಹೆಚ್ಚಿನ ಭಾಗವನ್ನು ವಹಿಸಿಕೊಳ್ಳುತ್ತಿದ್ದರು ಇವರು ಅನೇಕ ವರ್ಷಗಳಿಂದ ತಾಲೂಕು ವ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾಗಿದ್ದುದಲ್ಲದೆ ಈ ಜಿಲ್ಲೆಗೆ ಸಂಬಂಧಪಟ್ಟ ಕಿಂಬಹುನ ಎಲ್ಲಾ ಸಂಸ್ಥೆಗಳಲ್ಲಿ ಸೇರಿ ಕೊಂಡಿದ್ದರು ತನ್ನ ನಯಭಯದ ಮಾತುಗಳಿಂದ ಯಾರೊಬ್ಬರ ಮನಸ್ಸನ್ನೂ ನೋಯಿಸದೆ ಸಕಲರನ್ನೂ ತನ್ನವನ್ನಾಗಿ ಮಾಡಿಕೊಂಡು ನಡೆಯುತ್ತಿದ್ದರು ಇವರು ಗೌಡ ಸಾರಸ್ವತ ಬ್ರಾಹ್ಮಣರಲ್ಲಿ ದೊಡ್ಡ ಮನೆತನಕ್ಕೆ ಸೇರಿದವರಾಗಿದ್ದರೂ ತನ ವರನ್ನೂ ಇತರರನ್ನೂ ಸಮಭಾವನೆಯಿಂದ ಕಂಡು ಎಲ್ಲಾ ಜಾತಿ ಮತದವರೊಡನೆ ಐಕ್ಯಭಾವದಿಂದ ನಡೆಕೊಂಡು ಎಲ್ಲರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾದ್ದರು ಇವರ ಅಕಾಲ ಮರಣದಿಂದ ಮೂಲ್ಕಿ ನಮ್ಮ ಜಿಲ್ಲೆಯ ಒಂದು ಅಮೂಲ್ಯ ರತ್ನವನ್ನು ಕಳಕೊಂಡಂತಾಯಿತು ಇವರು ಬರೇ ೫೧ ವರ್ಷ ಪ್ರಾಯದವರಾಗಿದ್ದು ಅನೇಕ ಮಂದಿ ಸಹೋದರರನ್ನೂ ಮಕ್ಕಳು ಮೊಮ್ಮಕ್ಕಳನ್ನೂ ಸಾಕ್ಷಾತ್ ಅನ್ನಪೂರ್ಣ ದೇವಿಯೆನಿಸಿ ಕೊಂಡಿರುವ ಇವರ ಧರ್ಮ ಪತ್ನಿಯನ್ನು ಕೂಡಿದ ವ [illegible] ಕುಟುಂಬವನ್ನೂ ಬಂಧು ಬಾಂಧವ ಇಷ್ಟ ಮಿತ್ರರ [illegible] ವಾದ ಕ್ಷೇತ್ರವನ್ನೂ [illegible] ಬಿಟ್ಟು ಹೋದರು ವ್ಯಾಪಾರ [illegible]

[illegible]

ಬ್ರಹ್ಮಾವರ— [illegible]

[illegible]

ಹಂಗಾರಕಟ್ಟೆ— [illegible]

[illegible]

ಕೋಟ— [illegible]

[illegible]

ಕೆಕ್ಕಾರ್— [illegible]

[illegible] ಯೋಗದ ಉಪಸಂಹರಿಸಿ ಧನ್ಯವಾದದೊಂದಿಗೆ ಸಭೆಯು ಮುಕ್ತಾಯವಾಯಿತು

ಉಡುಪಿ ತಾಲೂಕಿನ ಉಪಾಧ್ಯಾಯರ ಸಂಘದ ವರ್ಷಾಂತ್ಯವಾದ ಸಮ್ಮೇಳನ ಉಡುಪಿಯಲ್ಲಿ ಮಹಾಸಭೆಯು ಜರಗತಕ್ಕದ್ದಿದ್ದರೂ ಬರುವ ಕೊಕ್ಕರಣೆ ಸಂಘದ ಉಪಾಧ್ಯಾಯರ ಮೀಟಿಂಗು ತಾರೀಕು ೮–೧೧ ೩೦ನೆ ಶನಿವಾರ ಕೊಕ್ಕರಣೆಯಲ್ಲಿ ಜರಗುತ್ತದೆ ಹೊಸ ಸದಸ್ಯರ ಚುನಾವಣೆಯಾಗಬೇಕಾದ್ದರಿಂದ ಸಮ್ಮೇಳನ ಪಟ್ಟ ಉಪಾಧ್ಯಾಯರೆಲ್ಲರೂ ಆ ದಿನ ದಯಮಾಡಿಸಬೇಕಾಗಿ ಈ ಮೂಲಕ ತಿಳಿಸಲಾಗಿದೆ

**ಕುಂಬಳೆ**— ಇಲ್ಲಿಯ ಟೌನ್ ರಸ್ತೆ [illegible] ದುರವಸ್ಥೆಯು ನೂತನವಾಗಿದೆ ಕಳೆದ ಜೂನ್ ತಿಂಗಳಲ್ಲೇ ಕೆಲವು ಕಡೆ [illegible] ಕೆಸರು ಮಣ್ಣು ಜೊತೆಗೆ ತೆಗೆದು ಜಮ್ಮಾಸಿದ ರಾಶಿಗಳು ಹುಲ್ಲು ಬೆಳೆದು ಈಗಲೂ ರಮ್ಯವಾಗಿ ಕಾಣುತ್ತದೆ [illegible] ಹುಲ್ಲು ಬೆಳೆದು [illegible] ತೋರುತ್ತದೆ [illegible]

[illegible] (main road) [illegible] ಒಂದು ಪೋಲ (Lane) [illegible]

[illegible]

ಪುತ್ತೂರು— [illegible]

[illegible]

ಬಂಟ್ವಾಳ— [illegible]

[illegible]

ಕಾಸರಗೋಡು— [illegible]

[illegible]

ಕಾಲಿವಾಹನಶಕ ೧೮೫೨ನೇ ಪ್ರಮೋದ, ಸಂ ಕಾರ್ತಿಕ ಶು॥ ೪ ಶನಿವಾರದಿಂದ ಪ್ರಮೋದ ಸಂವತ್ಸರದ ಕಾರ್ತಿಕ ಶು॥ ೯ ಶುಕ್ರವಾರದ ವರೆಗಿನ ಪಂಚಾಂಗ

(ಗ್ರಹಗತಿ ಕಾಲ— ಘಟಿ ಪಳ)

| ತಾರೀಖು | ವಾರ | ತಿಥಿ | ಘಟಿ | ನಕ್ಷತ್ರ | ಘಟಿ | ಸೂರ್ಯೋದಯ ಗತ ಘಟಿ | ಸೂರ್ಯ ಉ | ಅಸ್ತ |
|---|---|---|---|---|---|---|---|---|
| 25 | ಶನಿ | ೪ ೪೯, ೨ | | ಅನುರಾಧಾ | ೧ ೪೪ ೮ | | 6 24 | 6 7 |
| 26 | ರವಿ | ೫ ೪೯, ೩೦ | | ಜ್ಯೇಷ್ಠಾ | ೩ ೪೬ ೯ | | 6 25 | 6 6 |
| 27 | ಸೋಮ | ೬ ೫೨ | ೦ | ಮೂಲಾ | ೬ ೨ ೦೦ | | 6 25 | 6 6 |
| 28 | ಮಂಗಳ | ೭ ೫೫, ೬೩ | | ಪೂ. ಷಾ. | ೧೧ ೧೬ ೧೧ | | 6 25 | 6, 5 |
| 29 | ಬುಧ | ೮ ೬೦ | ೦ | ಉ. ಷಾ | ೧೬ ೪೦ ೧೨ | | 6 25 | 6 5 |
| 30 | ಗುರು | ೮ ೦ ೧೪ | | ಶ್ರವಣ | ೨೨ ೪೨ ೧೪ | | 6.26 | 6. 4 |
| 31 | ಶುಕ್ರ | ೯ | ೫ ೪೨ | ಧನಿಷ್ಠಾ | ೨೯ ೦ ೧೪ | | 6 26 | 6. 4 |

## ಮಂಗಳೂರಿನ ವಾಯುಸ್ಥಿತಿ.

| Date ತಾರೀಖು | Temperature. ಉಷ್ಣ (ಕಾವು) Maximum ಅಧಿಕ | | Minimum ಕಡಿಮೆ | | Rainfall ಮಳೆ ದಿನದ ಮಳೆ | ಜುಮ್ಲಾ ಮಳೆ |
|---|---|---|---|---|---|---|
| 17 | 88— | 7 | 77— | 9 | 0—01 | — |
| 18 | 90— | 6 | 75— | 7 | 0—05 | — |
| 19 | 89— | 0 | 76— | 2 | 0—01 | — |
| 20 | 92— | 0 | 73— | 5 | 1—10 | — |
| 21 | 86— | 7 | 75— | 8 | 0—01 | — |
| 22 | 88— | 0 | 77- | 1 | — | — |
| 23 | 88— | 0 | 75— | 8 | — | 133 36 |

## ಮಂಗಳೂರಿನ ಪೇಟೆ ಧಾರಣೆ.

| ದೇನಸು | ಇಂದ ರೂ | ಆ | ವರೆಗೆ ರೂ | ಆ |
|---|---|---|---|---|
| ಮಸ್ಕತ | 7 | 1[illegible] | 8— | 6 |
| ಗುಡ | 7 | 8 | 7 | 1[illegible] |
| ರಾಬ | 6 | 11 | 7— | 4 |
| ಊರ ಅವ್ವಲ್ ಬೆಳ್ತಿಗೆ | 7 - | 8 | 8 | 10 |
| ರಂಗೂನು ಬೆಳ್ತಿಗೆ ಗೋಣಿ ಗಳ್ಳೆ | 10 — | 8 | 1[illegible] | 0 |
| ಸುಗ್ಗಿ | 7 | 4 | — | 0 |
| ಎಂಜ್ಲ ಬೆಳ್ತಿಗೆ ಮುಡಿ ಗಳ್ಳೆ | 6 - | 8 | [illegible] — | 0 |
| ಗೋದಿ ಗೋಣಿ ಗಳ್ಳೆ | 11 — | | 13 | 0 |
| ಹುರುಳಿ ಗೋಣಿ ಗಳ್ಳೆ | 6 | 8 | — | |
| ಕಡಲೆ ಗೋಣಿ ಗಳ್ಳೆ | 12— | 8 | 15— | 8 |
| ತೊಗರಿ ಗೋಣಿ ಗಳ್ಳೆ | 3 — | 0 | 16 — | 0 |
| ತೊಗರಿಬೇಳೆ ಗೋಣಿ ಗಳ್ಳೆ | 15 — | 8 | 26 — | 0 |
| ಉದ್ದು ಗೋಣಿ ಗಳ್ಳೆ | 13 — | 0 | 14 — | 0 |
| ಹೆಸರು ಗೋಣಿ ಗಳ್ಳೆ | 14— | 8 | - | |
| ಊರು ಬೆಲ್ಲ ಕಂಡಿ ಗಳ್ಳೆ | 14[illegible] — | 8 | 52 — | 0 |
| ಉಪ್ಪು ಗೋಣಿ ಗಳ್ಳೆ | 4 — | 5 | 4 — | 10 |
| ಬೊಬ್ರಿ ಖಂಡಿ ಗಳ್ಳೆ | 70- | 0 | 75 | |
| ಕೊಬ್ರಿ ಹಿಂಡಿ ಖಂಡಿ ಗಳ್ಳೆ | 30 — | | 31 — | 0 |
| ಎಳ್ಳಿಂಡಿ ಖಂಡಿ ಗಳ್ಳೆ | 27 — | 8 | 30 — | 0 |
| ಕೊಬ್ರಿ ಎಣ್ಣೆ ಮಣ ಗಳ್ಳೆ | 5 — | 5 | 6 — | 4 |
| ಎಳ್ಳೆಣ್ಣೆ ಮಣ ಗಳ್ಳೆ | 7 — | 0 | 7 | 5 |
| ಜಮಿನೆಣ್ಣೆ ಪೆಟ್ಟಿಗೆ ಗಳ್ಳೆ | 4 — | 7 | 8 — | 12 |
| ಮೋರಿಸ ಸಕ್ಕರೆ ಮಣ ಗಳ್ಳೆ | 3 — | 6 | 3 — | 8 |
| ಹೊಸ ಮೆಣಸು | 5 — | 4 | 7 — | 0 |
| ಸಾಸಿವೆ ಮುಡಿ ಗಳ್ಳೆ | 8 — | 0 | 8 — | 4 |
| ಕೊತ್ತಂಬರಿ ಮುಡಿ ಗಳ್ಳೆ | 2 — | 8 | 3 — | 4 |
| ನೇಟಿವ್ ಕಾಫಿ ಖಂಡಿ ಗಳ್ಳೆ | 190 — | 0 | 200 — | |
| ಕಾಳುಮೆಣಸು ಖಂಡಿ ಗಳ್ಳೆ | 21 - | 0 | — | |
| ಮೋಲಕ್ಕಿ ಮಣ ಗಳ್ಳೆ | 32 — | 0 | — | |
| ಗೇರುಬೀಜ ಮುಡಿ ಗಳ್ಳೆ | 3 — | 12 | 1 — | 0 |
| ಕಚ್ಚಿಣ ಖಂಡಿ ಗಳ್ಳೆ | 42 — | 8 | 47 — | 0 |
| ತಾಂಬ್ರ ತಗಡು ಮಣ ಗಳ್ಳೆ | 14- | 8 | 14 | 10 |
| ತಾಂಬ್ರ ಪಾತ್ರಗಳು ಮಣ ಗಳ್ಳೆ | 20 — | 0 | 21 — | 0 |
| ಹಿತ್ತಾಳೆ ಸೇರು ಗಳ್ಳೆ | 12 — | 0 | 12 — | 4 |
| ಹಿತ್ತಾಳೆ ತಗಡು ಮಣ ಗಳ್ಳೆ | 13 — | 8 | 18 — | 9 |
| ಕಬ್ಬಿಣ ಗಳ್ಳೆ | 13 — | 12 | — | |
| ಹುಣಸೆಹುಳಿ ಖಂಡಿ ಗಳ್ಳೆ | 37 — | 8 | 43 — | 12 |
| ಕಿರೀಟ ಕಾಫಿ ಖಂಡಿ ಗಳ್ಳೆ | 230 — | | — | |
| ಹೊಸ ಅಡಿಕೆ | 85 — | | 90 — | |
| ಹಳೆ ಅಡಿಕೆ | 00 — | | 120 — | |


# Chikmagalur Public Conveyance Motor Service.

## CHIKMAGALUR.

# ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ ಕನ್ವೆಯನ್ಸ್ Tel: Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು

(1) ಈ ಕಂಪೆನಿಯವರು ಜನರ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡಿಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ [illegible] ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ [illegible] ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗ್ಯೆರೆ ಕಡೆಗಳಿಗೂ, ಬೆಳ್ತಂಗಡಿಯಿಂದ [illegible] ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

### ಮೋಟಾರ ಬಸ್ಸುಗಳು ಹೊರಡುವ ಟ್ರಾಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗ ಸಿದ್ಧವಾಗಿರುವ ನಮ್ಮ ಕಂಪನಿ ಬಸ್ಸಿನಲ್ಲಿ ಹೊರಟು ಮೂಡಿಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ, ಮೈಸೂರು ಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ [illegible] 1 30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲುಪಿ, ಆ ಟ್ರಾಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಜಬಾರು ಕಣ್ಣನ್ನೂರು ಪ್ರಾಂತಗಳಿಗೂ ಆಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ [illegible] ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10-30ಕ್ಕೆ ಬೆಳ್ತಂಗಡಿಗೂ 11 ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೂ, 12 ಗಂಟೆಗೆ ಚಾರ್ಮಾಡಿಗೂ, 12 30ಕ್ಕೆ ಮೈಸೂರು ಗಡಿಗೂ, ಸೇರಿ ಅಲ್ಲಿಂದ ಒಡನೆ ಹೊರಟು 1 30ಕ್ಕೆ ಕೊಟ್ಟಿಗೆಹಾರಕ್ಕೂ ಸುಮಾರು 4 ಗಂಟೆಗ ಮೂಡಿಗೆರೆಗೂ, 5 ಗಂಟೆ ಒಳಗ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗ್ಯೆರ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿದ್ದಪ್ಪಿಟ್ಟಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗ್ಯೆರ ಕಡೆಗಳಿಗೆ ಹೋಗುವ ಪ್ರಯಾಣಿಕರಿಗ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗ ಹುಬ್ಬಳ್ಳಿಗೂ ಗದಗ್, ಪಂಡರಪೂರ, ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ, ವಗ್ಯೆರೆ ಕಡೆಗಳಿಗ ಪ್ರಯಾಣ ಮಾಡತಕ್ಕವರಿಗ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರಿ 8 ಮತ್ತು 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗ್ಯೆರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ ಪೂನಾ, ವಗ್ಯೆರ ಪ್ರಾಂತಗಳಿಗ ಹೋಗತಕ್ಕ ಪ್ಯಾಸೆಂಜರುಗಳಿಗ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ ಎಸ್ ಹನುಮಂತಪ್ಪ, ಫ್ಲೋರಡೂನ್ ಸೊರಾಬ್, ಕೆ ಸೂರಪ್ಪ ಶೆಟ್ಟಿ

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ ಪಿ ಸಿ ಕಂಪೆನಿಯವರ ಟಿಕ್ಕಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

# THE CANARA PUBLIC CONVEYANCE CO., LTD, MANGALORE.

(ESTABLISHED 1914)

# ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

## ಮಂಗಳೂರು.

### ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿಂತವರ ಪ್ರತಿದಿನವೂ ಮೂಲ್ಕಿ ಕಟಪಾಡಿ ಮಾರ್ಗವಾಗಿಯೂ ಎಡಪದವು [illegible] ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕೇವಲ ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಎಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಕಾರ್ಕಳ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

**Secretary,**
*The Canara Public Conveyance Co., Ltd., Mangalore.*

## ವಿವಿಧ ಸಮಾಚಾರಗಳು.

### ನನಗೆ ಅದೊಂದು ದೇವರ ಪೂಜೆ!

ಸೋಲುವಿಳೆಯ ಕುರಿತು ಮಹಾತ್ಮಾಜಿಯವರು "ನನಗೆ ಅದೊಂದು ದೇವರ ಪೂಜೆಯೇ ಆಗಿರುತ್ತದೆಂದು ಹೇಳಿರುವರು. ಈ ಮಾತನ್ನು ಅಕ್ಷರಶಃ ನಡೆಸುವವರೆಂದರೆ— ಮೀರಾ ಬಾಯಿಯವರೇ. ಇತ್ತೀಚೆಗೆ ಮೀರಾಬಾಯಿಯವರು ಸುಮಾರು ಎರಡು ತಿಂಗಳು ಖಾದಿ ಪ್ರಚಾರದ ಕಾರ್ಯದಲ್ಲಿ ಭರತ ಖಂಡದ ಅನೇಕ ಊರುಗಳನ್ನು ಸುತ್ತಿರುವರು. ಈ ಸಮಯದಲ್ಲಿ ಮೀರಾಬಾಯಿಯವರು ಅಲ್ಲಲ್ಲಿ ಖಾದಿ ಪ್ರಚಾರದ ಕುರಿತು ಸಣ್ಣ ಸಣ್ಣ ಭಾಷಣಗಳನ್ನೂ ಕೊಟ್ಟರು. ಖಾದಿಯು ಭರತ ಖಂಡದಲ್ಲಿ ಧಾರಾಳವಾಗಿ ಒದಗಿಸುವಂತೆ ಮಾಡುವುದೇ ಮೀರಾ ಬಾಯಿಯವರ ಧ್ಯೇಯ. ಮಹಾತ್ಮಾಜಿಯವರು ಮೀರಾ ಬಾಯಿಯವರಿಗೆ ಬರೆದ ಪತ್ರವೊಂದು ಪತ್ರದಲ್ಲಿಯೂ ಸೋಲುವಿಕೆಯ ಕುರಿತಾಗಿ ಒಂದೆರಡು ಮಾತುಗಳು ಇದ್ದೇ ಇದ್ದವಂತೆ! ಇದರಿಂದಲೇ ಮಹಾತ್ಮರು ಖಾದಿ ಪ್ರಚಾರದಲ್ಲಿ ಎಷ್ಟರ ಪ್ರೋತ್ಸಾಹವನ್ನೀಯುವರೆಂದು ತಿಳಿದು ಬರುತ್ತದೆ. ಮೀರಾಬಾಯಿಯವರಿಗೆ ರಾಟೆಯ ಶಬ್ದವು ನಿದ್ದೆಯನ್ನುಂಟು ಮಾಡುವದೆಂತಲೂ, ಮತ್ತು ಅದೊಂದು ಬಗೆಯ ಮನೋಲ್ಲಾಸವನ್ನುಂಟುಮಾಡುವ ಗಾನವಾಗಿರುವುದೆಂತಲೂ ಹೇಳಿರುವರು.

* * *

### ವ್ಯಾಸರಾಯರು ಹೆಚ್ಚಿನ ಆರ್ಡಿನೆನ್ಸುಗಳನ್ನು ಯಾಕೆ ಮಾಡಕೂಡದು?

ಮಸೂರಿಯ ಸಮಾಚಾರವು ತಿಳಿಯಗೊಡಿಸುವಂತೆ ಅಲ್ಲಿನ ಜನರು ವ್ಯಾಸರಾಯರ ಅವಗಾಹನೆಗೆ ಬೇಕಾಗಿ ಒಂದು ಹೊಸ ಓರ್ಡಿನೆನ್ಸಿನ ಕ್ರಮವನ್ನು ಸೂಚಿಸಿರುವರು. ಈ ಓರ್ಡಿನೆನ್ಸಿನ ಶರತಗಳ ಮೇರೆಗೆ ಜನರಿಂದ ಸ್ಥಿರಸೊತ್ತುಗಳನ್ನು ಮಾತ್ರವೇ ಸರಕಾರವು ವಶಪಡಿಸಿ ಹಕ್ಕುಳ್ಳಷ್ಟು ಚರಸೊತ್ತುಗಳನ್ನು ಆಯಾಯ ವ್ಯಕ್ತಿಗಳಿಗೇ ಬಿಟ್ಟು ಕೊಡುವದು ಎಂಬುದೇ.

ಈ ರೀತಿಯ ಹೊಸ ಓರ್ಡಿನೆನ್ಸು ಒಂದನ್ನು ಜ್ಯಾರಿ ಮಾಡಿದರೆ ಬಡ ಭಾರತೀಯರಿಗೆ ದೊಡ್ಡದೊಂದು ಉಪಕಾರವಾಗುವದಂತೆ! ಕಾರಣ ವ್ಯಾಸರಾಯರ ೯ನೇ ಓರ್ಡಿನೆನ್ಸಿನ ಮೇರೆಗೆ - ಸತ್ಯಾಗ್ರಹ ಚಳವಳದಲ್ಲಿ ಅಪಾದಿತರೆಂದು ಪರಿಗಣಿಸಲ್ಪಟ್ಟವರ ಸ್ಥಿರಚರ ಸೊತ್ತುಗಳೆರಡನ್ನೂ ಅಪಹರಿಸಬೇಕೆಂದು ಬರೆದಿರುವುದ. ಹೀಗೆ ಮಾಡಿದ್ದಲ್ಲಿ ಬಡ ರಾಷ್ಟ್ರ ಪ್ರೇಮಿಗಳು ತುಂಬಾ ಸಂಕಷ್ಟಗಳಿಗೆ ಗುರಿಪಡಬೇಕಾಗುವದು. ಅಂಥವರ (ಸ್ಥಿರ ಸೊತ್ತುಗಳಿದ್ದಲ್ಲಿ) ಸ್ಥಿರ ಸೊತ್ತುಗಳನ್ನು ಒಮ್ಮೆಗೆ ಸರಕಾರವು ಸೂರೆ ಮಾಡಿಕೊಳ್ಳಲಿ, ತಪ್ಪಾಯ ಅವರು ತಮ್ಮ ಜೀವನವನ್ನು ಅನ್ಯ ದೇಶದಲ್ಲೇ ನಡೆಸಬೇಕಾಗಿ ಬರುವದಲ್ಲವೇ? ಆ ಕಾರಣದಿಂದ, ಅಂಥಹ ಅಪಾದಿತರು ತಮ್ಮ ಕೂಡ ಇದ್ದ ಚರಸೊತ್ತುಗಳನ್ನು (ತಂದಿಗೆ - ಮುಂತಾದ ಮನೆಯ ಸಾಮಾನುಗಳು) ಹೇರಿಕೊಂಡರೆ, ಪರಊರಲ್ಲಿ ಹೋಗಿ ಒಮ್ಮೆಗೆ, ಅವುಗಳ ಅವಶ್ಯಕತೆಗಾಗಿ ಕಷ್ಟಪಡಬೇಕೆಂದಿಲ್ಲ.

ಈ ಕಾನೂನಿನ ಮೇಲೆ ಅಪಾದಿತರೆಂದು ಪರಿಗಣಿಸಲ್ಪಡುವವನು ತಪ್ಪಿತಸ್ಥನಲ್ಲವೆಂದು ಸ್ಥಳೀಕ ಸರಕಾರವು ದೃಢ ಪಡಿಸಿದರೆ, ಅಂಥಹವರಿಗೆ ರಿಯಾಯತಿಯ ಮೇಲೇ ಜೀವನಾಂಶದ ಖರ್ಚಿನ ಮಟ್ಟಿಗೆ ಸ್ವಲ್ಪ ಸಹಾಯ ಧನವನ್ನು ಕೊಡಬಹುದು. ಆದುದರಿಂದ ಈ ವಿಷಯಗಳನ್ನೊಳಗೊಂಡ ೧೦ನೇ ಓರ್ಡಿನೆನ್ಸನ್ನು ವ್ಯಾಸರಾಯರು ಜ್ಯಾರಿಗೆ ತಂದ ಪಕ್ಷದಲ್ಲಿ — ದೇಶಕ್ಕೆ ತುಂಬಾ ಪ್ರಯೋಜನವಾಗುವದೆಂದು ಮಸೂರಿ ದೇಶದ ಜನರ ನಂಬಿಕೆ ಮತ್ತು ಕೋರಿಕೆ!

* * *

### ಮಿ। ನರಿಮೋನರ ಹೊಸ ಯೋಚನೆ.

ಮಿ। ನರಿಮೋನರು ರಾಜಕೀಯ ಆಪಾದನೆಯ ಮೇಲೆ ಆಕೀಸಾ ವರ್ಕೆ ಜೈಲನ್ನು ಹೊಕ್ಕರು — ಹೊರಟರು. ಮೀರೆ ಕಪ್ಪದ ರಾಷ್ಟ್ರೀಯ ದ್ವಾರ ಯೋಚನೆಯು ಅವರನ್ನು ಇತ್ತೀಚೆಗೆ ಮೂರು ತಿಂಗಳ ಶಿಕ್ಷೆಗೆ ಗುರಿಪಡಿಸಿತು. ಹಾಗೂ ಮಿ। ನರಿಮೋನರು ಸ್ವಾತಂತ್ರ್ಯಕ್ಕಾಗಿ ತುಂಬ ಶ್ರಮ ಪಡುತ್ತಿರುವ ಕಾರ್ಯವು ಸ್ತುತ್ಯವಾಗಿರುವದು. ಅವರು ದೇಶದ ಸುಧಾರಣೆಗಾಗಿ ಹೊಸ ಯೋಚನೆಯೊಂದನ್ನು ಸೂಚಿಸಿರುವರು. ದೇಶೀಯ ನ್ಯಾಯಸ್ಥಾನಗಳು - ದೇಶೀಯ ಬ್ಯಾಂಕುಗಳು - ರಾಷ್ಟ್ರೀಯ ವಿದ್ಯಾಸಂಸ್ಥೆಗಳು - ಇವೇ ಹಲವು ಸಂಸ್ಥೆಗಳನ್ನು ದೇಶೀಯರೇ ನಿರ್ಮಿಸಿ ವಿದೇಶೀ ಸಂಸ್ಥೆಗಳಿಗೆ ಬಹಿಷ್ಕಾರ ಹಾಕಬೇಕು; ಇದಕ್ಕೆ ಬೇಕಾದ ಹಣವನ್ನು ಆಯಾ ಊರಿನ ಸತ್ಯಾಗ್ರಹ ಫಂಡುಗಳಿಂದ ಜಮಾಯಿಸ ತಕ್ಕದ್ದು; ಮತ್ತು ವಿದೇಶಿಯರನ್ನು ಬಗ್ಗು ಬಡಿಯಲು ಉತ್ತಮ ಸಾಧನಗಳೆಂದರೆ - ಇದರ ಸಂಸ್ಥೆಗಳ ಯೋಗ್ಯ ಏರ್ಪಾಡುಗಳೇ ಆಗಿರುವುವೆಂದು ಹೇಳಿರುವರು. ಸಂಪೂರ್ಣ ಬಹಿಷ್ಕಾರವೇ ಅವರ ಧ್ಯೇಯವೆಂದು ತಿಳಿಯಲಾಗುತ್ತದೆ.

* * *

### ಎನ್ನಿ ಬಿಸೆಂಟಮ್ಮನವರ ಒಂದು ಮಾತು!

ತಾ. ೨೬-೧೦-೩೦ನೇ ದಿನ ಬಿಸೆಂಟಮ್ಮನವರು ಮುಂಬಾಯನ್ನು ಸೇರ್ಪಡಿಸಿದರು. ಈ ನಡುವೆ ಮುಂಬಾಯಿ ನಗರದಲ್ಲಿ ಆಗಿ ಹೋದ ಎಷ್ಟೋ ದಸ್ತಗಿರಿಗಳ ಕುರಿತು ಅವರ ಮನಸ್ಸು ತುಂಬಾ ನೋಯುವದಂತೆ! ಮತ್ತು ಈ ವಿಷಯದಲ್ಲಿ ಅಮ್ಮನವರು ಇಂಗ್ಲಂಡಿನಲ್ಲಿ ಘನವಾದ ಮಾತುಗಳನ್ನೇ ಆಡಿ ತೋರಿಸುವರೆಂದು ಹೇಳಿದರು. ಬಿಸೆಂಟರು ಕಾಂಗ್ರೆಸ್ ಸದಸ್ಯರಲ್ಲದಿದ್ದರೂ, ಅವರಿಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತುಂಬಾ ಪ್ರೀತಿ, ಆದುದರಿಂದಲೇ ಓಲ್ ಇಂಡಿಯಾ ಕಾಂಗ್ರೆಸ್ ಸಮಿತಿಗೆ ಓರ್ವ ಸದಸ್ಯರಾಗಿರುವರಂತೆ!

ಅವರು ಶುದ್ಧ ಸವಿನಯ ಕಾಯಿದೆ ಭಂಗವನ್ನು ಈ ಮೊದಲೇ ವಿರೋಧಿಸಿರುವರು; ಆದುದರಿಂದ ಅಮ್ಮನವರು ಕಾನೂನನ್ನು ಉಲ್ಲಂಘಿಸುವ ಕಾರ್ಯದಲ್ಲಿ ಪ್ರವೇಶವಿಲ್ಲ. ಕಾನೂನು ಭಂಗದಿಂದಾಗುವ ಎಲ್ಲಾ ಅವಸ್ಥೆಗಳು ಅವರಿಗೆ ಚೆನ್ನಾಗಿ ಗೊತ್ತು. ಆ ಕಾರಣ, ಆಕೆಯು ಯುವಕರನ್ನುದ್ದೇಶಿಸಿ ಕಾನೂನು ಮುರಿಯಿರಿ, ಸ್ವರಾಜ್ಯ ಸಿಕ್ಕುತ್ತದೆ. ಎಂದು ಉಪದೇಶ ಕೊಡುವದಿಲ್ಲವೆಂದು ಅವರೇ ಹೇಳಿರುವರು.

ಭರತ ಖಂಡದ ಸ್ಥಿತ್ಯಂತರಗಳ ಕುರಿತು, ಅಮ್ಮನವರ ಮಾತಿನಂತೆ, ಇಂಗ್ಲಂಡದಲ್ಲಿ ಹೆಚ್ಚು ಆಸಕ್ತಿಯು ತಲೆ ದೋರಿರುವದೆಂದು ತಿಳಿದು ಬರುತ್ತದೆ. ಭಾರತೀಯರ ಬಹಿಷ್ಕಾರ ಚಳವಳದಿಂದುಂಟಾದ ಕೆಲಸದ ಅಭಾವವು ಇಂಗ್ಲಂಡವನ್ನು ಬಹಳವಾಗಿ ಬಾಧಿಸುತ್ತಿರುವದೆಂದೂ ತಿಳಿಸಿದರು.

ಮಿ। ವೆಜ್‌ವುಡ್ ಬೆನ್ನರು ಭಾರತೀಯರ ಮೇಲೆ ತುಂಬ ದಯೆಯುಳ್ಳವರೆಂದು, ಬಿಸೆಂಟಮ್ಮನವರ ಮಾತಿನಿಂದಲೇ ವಿಷದವಾಗುವದು. ಬೆನ್ನರು ಹಿಂದುಸ್ಥಾನದ ಬಂಧವಿಮೋಚನಾ ಕಾರ್ಯದಲ್ಲಿ ತುಂಬಾ ಪ್ರೀತಿ ಇರುವವರು. ಮತ್ತು ಅಮ್ಮನವರಲ್ಲಿರುವ ಭಾರತ ಪ್ರೇಮವೆಂದೂ ಅಳಿಯಲಾರದಂತೆ! ಆದರೆ ಅವರು ಕಾಂಗ್ರೆಸ್‌ಗಳಿಗೆ ಮಾತ್ರ ದೂರ.

* * *

### ಪೋಲೀಸು ಸ್ಟೇಷನಿನ ಎದುರಿನಲ್ಲಿ ಸಾರ್ಜಂಟರಿಗೆ ಗುಂಡು!

ಪೋಲೀಸು ಠಾಣ್ಯವು ಮುಂಬಾಯಿಯ ಲಿವಿಂಗ್‌ಟನ್ ರಸ್ತೆಯಲ್ಲಿದೆ. ಸಾರ್ಜಂಟ ಟೈಲರನು ತನ್ನ ಹೆಂಡತಿಯೊಡನೆ ಮೋಟರು ಹತ್ತಿ ಪೊಲೀಸು ಸ್ಟೇಷನನ್ನು ಪ್ರವೇಶಿಸುವುದಕ್ಕಾಗಿ ಬಂದರು. ಇವರು ತನ್ನ ಇಬ್ಬರು ಸ್ನೇಹಿತರೊಡನೆ ಲಿವಿಂಗ್ಟನ್ ಬೀದಿಗೆ ಕಾಲಿಡುವದೇ ತಡ ೧೧ ರಿವಾಲ್ವರಿನ ಹೊಡೆತಗಳು ಮೇಲಿಂದ ಮೇಲೆ ಸಾರ್ಜಂಟ ಟೈಲರ ಮತ್ತು ಅವರ ಹೆಂಡತಿಯ ಮೇಲೆ ಬಿದ್ದವು. ಹೊಡೆದವರ ಪತ್ತೆಯೇ ಇಲ್ಲ. ಆದರೆ ಸಾರ್ಜಂಟರು ತುಂಬಾ ಭಾಗ್ಯವಂತರು! ಒಂದರ ಮೇಲೊಂದು ಹೊಡೆದ ಗುಂಡಿನ ಏಟುಗಳಲ್ಲಿ ಒಂದಾದರೂ ಅವರ ಮೈಯನ್ನು ನೋಯಿಸಲಿಲ್ಲ! ಇದುವರೆಗೂ ನಡೆದ ಪತ್ತೆಯ ಗೊತ್ತಿನಂತೆ ಪೊಲೀಸು ಠಾಣೆಯ ಮುಂಭಾಗದಲ್ಲೇ ಇದ್ದ ಮೋಟಾರು ಕಾರಿನೊಳಗಿಂದಲೇ ಗುಂಡುಗಳು ಸಿಡಿದಿದ್ದವೆಂದು ತಿಳಿದುಬರುತ್ತದೆ.

ಮೊದಲನೇ ಗುಂಡಿನ ಶಬ್ದವನ್ನು ಸಾರ್ಜಂಟರು — ಯಾರೋ ವಿನೋದಕ್ಕಾಗಿ ಮದ್ದನ್ನು ಸುಡುತ್ತಿರುವರೆಂದು ಯೋಚಿಸಿದರಂತೆ! ಕೊನೆಗೆ ೧೧ ಗುಂಡಿನ ಏಟುಗಳು ಮೇಲಿಂದ ಮೇಲೆ ಸಿಡಿದು ಬಿದ್ದವು. ಇದರಿಂದ ಸಾರ್ಜಂಟರ ಕೈಗೆ ಸ್ವಲ್ಪ ಮಟ್ಟಿನ ಗಾಯವಾಗಿದೆ ಎಂದು ತಿಳಿದುಬರುತ್ತದೆ. ಹಾಗೆಯೇ ಅವರ ಹೆಂಡತಿಗೂ ಹೆಚ್ಚಿನ ಗಾಯಗಳೇನೂ ಆಗದೆ ಇಬ್ಬರೂ ಸಂಕಟದಿಂದ ಪಾರಾಗಿರುವರು. ಇವರನ್ನು ಗುಂಡು ಹಾರಿಸಿದ ಮೋಟಾರು ಗಾಡಿಯನ್ನು ಸಾರ್ಜಂಟರ ಜೊತೆಗಾರನಲ್ಲಿದ್ದ ಕಿಂಗ್ ಎಂಬವನು ಕಾರಿನಲ್ಲಿ ಬೆನ್ನಟ್ಟಿದನು. ಆದರೆ ಆ ಕಾರಿನ ವೇಗವು ಬಹು ಹೆಚ್ಚಿನದಾಗಿದ್ದುದರಿಂದ ಕಿಂಗರಿಗೆ ಅದರ ನಂಬರ ೩೬ ಮಾತ್ರ ಸಿಕ್ಕಿರುವದು.

ಪೋಲೀಸರ ಪತ್ತೆಯು ಅತಿ ಶ್ರದ್ಧೆಯಿಂದ ನಡೆಯುತ್ತಿರುವದು. ಸಂದೇಹದ ಮೇಲೆ ತಿಮ್ಮನೆಂಬೊಬ್ಬ ಕೆಲಸದ ಹುಡುಗನನ್ನು ಪೋಲೀಸರು ವಿಚಾರಣೆ ಮಾಡಿಸುತ್ತಿರುವರು. ಕೆಲವರ ದಸ್ತಗಿರಿಗಳು ನಡೆದಿರುವವು. ಅಂಧೇರಿ ಎಂಬಲ್ಲಿ ಪೋಲೀಸರು ೩೬೪೩ನೇ ನಂಬ್ರದ ಒಂದು ಕಾರನ್ನು ನೋಡಿರುವರಂತೆ. ಮತ್ತು ಅದರಲ್ಲಿ ಕೆಲವು ಉಪಯೋಗಿಸಲ್ಪಟ್ಟ ತೋಟೆಗಳನ್ನೂ ನೋಡಿದರಂತೆ! ಈ ಕುರುಹುಗಳಿಂದ ಬಹುಶಃ ಸಾರ್ಜಂಟ ಟೈಲರನ್ನು ಹೊಡೆದ ಕಾರು ಇದೇ ಆಗಿರಬಹುದೆಂದು ಪೋಲೀಸರ ಅನುಮಾನ. ಈ ಬಾಬಿನಲ್ಲಿ ಸಾಧಾರಣ ೫೦ ದಸ್ತಗಿರಿಗಳು ನಡೆದಿವೆಯೆಂದು ತಿಳಿದುಬರುತ್ತದೆ. ಡಿಪ್ಯುಟಿ ಕಮಿಷನರ್ ಮತ್ತು ಪೋಲೀಸ್ ಸುಪರಿಂಟೆಂಡೆಂಟ ಇವರೀರ್ವರು ಪತ್ತೆಗಾಗಿ ಸ್ವತಃ ಹೊರಟಿರುವರಂತೆ!

* * *

### ಗಡಿ ಪ್ರಾಂತ್ಯಗಳ ಗಡಿಬಿಡಿ

ಅಫ್ರಿದಿಗಳ ಸಾಹಸಗಳು ನಡೆಯುತ್ತಲೇ ಇವೆ. ಮಾಲಿಕ್ ದಿನ್ ಮತ್ತು ಅಕಾಖೇಲ್ ಎಂಬ ಮುಖಂಡರ ಕೈ ಕೆಳಗಿರುವ ಅಫ್ರಿದಿ ಪಂಗಡವು ಜಾಮ್ರುಡ್ ಎಂಬಲ್ಲಿ ಗವರ್ನಮೆಂಟು ಜಿರ್ಗಾದ ಅಧಿವೇಶನಕ್ಕಾಗಿ ಬಂದಿರುವರು. ಟ್ಯಾರಾ ಎಂಬಲ್ಲಿ ಒಂದೆರಡು ಜಿರ್ಗಾ ಸಮಾರಂಭಗಳು ಅಫ್ರಿದಿಗಳಿಂದಲೇ ನೆರವೇರಿಸಲ್ಪಟ್ಟವು. ಈ ಸಂದರ್ಭಗಳಲ್ಲಿ ಹೆಚ್ಚಿನ ಚರ್ಚೆಗಳು ನಡೆದುವು. ಆದರೆ ಗಡಿಬಿಡಿಯ ಶಾಂತತೆಗಾಗಿ ಯಾವ ಯೋಗ್ಯ ಠರಾವುಗಳೂ ಪಾಸಾಗಿಲ್ಲ. ಕೊನೆಗೆ ಸರಕಾರ ಮುಖೇನ ನಡೆಯುವ ಜಿರ್ಗಾ ಸಭೆಯಲ್ಲಾದರೂ ತಮಗೆ ಸಹಾನುಭೂತಿಯು ದೊರೆಯುವದೋ ಎಂದು ಜಾಮ್ರುಡ್ ಎಂಬಲ್ಲಿಗೆ ಬಂದರು. ಅನೇಕ ವಿಷಯಗಳಲ್ಲಿ ಚರ್ಚೆಗಳು ನಡೆದವು. ಆದರೆ ಅಫ್ರಿದಿ ಜನಾಂಗದ ಸುಧಾರಣೆಗಾಗಿ ಯಾವ ಪ್ರಯೋಜನವೂ ದೊರೆಯಲಿಲ್ಲ. ಆದುದರಿಂದ ಅವರು ತಮ್ಮ ಕಾರ್ಯಗಳಲ್ಲಿ ಮುಂದರಿಯುವ ನಿರ್ಧಾರದಲ್ಲಿರುವರು.

ಅವರು ಸರಕಾರದೊಡನೆ ರಾಜಿಯಾಗಬೇಕಿದ್ದರೆ ಸರಕಾರವು ರಾಜಕೀಯ ಬಂದಿವಾನರೆಲ್ಲರನ್ನೂ ಬಿಡುಗಡೆ ಹೊಂದಿಸಿ, ಅಫ್ರಿದಿಗಳಿಗೆ ಎಷ್ಟೋ ಐಶ್ವರ್ಯವನ್ನು ದಂಡವಾಗಿ ತೆರಬೇಕಂತೆ! ಅವರು ಹೇಳುವ ಶರ್ತಗಳಿಗೆ ಸರಕಾರವು ಒಪ್ಪುವದಿದ್ದರೆ ಮಾತ್ರವೇ - ಅವರು ಸರಕಾರಕ್ಕೆ ಲಕ್ಷಿಸುವರು; ಇದಕ್ಕೆ ವ್ಯತಿರಿಕ್ತವಾದ್ದಲ್ಲಿ ಅವರೆಂದೂ ಬ್ರಿಟಿಷ್ ಸರಕಾರದೊಡನೆ ರಾಜಿಗೆ ಒಪ್ಪುವಂತಿಲ್ಲ - ಇದೇ ಅವರ ಧ್ಯೇಯ. ಸರಕಾರಕ್ಕೆ ಸಲಬೇಕಾದ ತೆರಿಗೆ ವಗೈರೆ ಯಾವದನ್ನು ಕೊಡದ ಪೇಶಾವರ ಎಂಬಲ್ಲಿ ಅಫ್ರಿದಿಗಳ ಗಲಾಟೆಯು ಮುಂದರಿಯುತ್ತಿರುವದೆಂದು ತಿಳಿದು ಬರುತ್ತದೆ. ಆದರೆ ಆ ಪ್ರಾಂತ್ಯವನ್ನಾಳುವ ನಾದೀರ್ ಶಹಾ ಎಂಬವರು, ಈ ಗಲಾಟೆಗಳನ್ನು ಎದುರಾಯಿಸುವಷ್ಟು ಧೈರ್ಯ ಹಾಗೂ ಸೈನ್ಯ ಉಳ್ಳವರೆಂದು ತಿಳಿದು ಬರುತ್ತದೆ. ನಾದೀರ್ ಶಹರು ಅಪ್ರಯುಕ್ತ ಕೆಲವು ಸೈನ್ಯವನ್ನೂ ಕಳುಹಿಸಿರುವರೆಂದು ತಿಳಿದು ಬರುತ್ತದೆ.

* * *

### ಸ್ವಾತಂತ್ರ್ಯದ ಅರಿವು.

ಮಹಾತ್ಮಾ ಗಾಂಧಿಯವರು ಹುಟ್ಟುವ ಮೊದಲೇ ನಾವು ಅವರಿಗೆ ಜಗದೀಶ್ವರನು ಅಮಾನುಷ ಶಕ್ತಿಯನ್ನು ಕೊಟ್ಟಿರುವನು ಈ ಭರತ ಖಂಡದ ಸ್ತ್ರೀಯರಲ್ಲಿ ಪೂರ್ವದಲ್ಲಿ ಹಲವು ಮಹಾರಾಣಿಯರು, ಜಸ್ವಂತ ಸಿಂಗರ ಕುಟುಂಬ, ಉದಯಪುರದ ಮಹಾ ರಾಜರ ಮಗಳು ಇವರೇ ಮೊದಲಾದವರು ವೀರ ಮಾತೆಯರಾಗಿಯೂ, ವೀರ ಪುತ್ರಿಯರಾಗಿಯೂ ವೀರ ಪತ್ನಿಯರಾಗಿಯೂ ಇದ್ದರು. ಅಂಥಾ ಅದ್ಭುತವಾದ ಧೈರ್ಯ ಸ್ಥೈರ್ಯಗಳು ಭಾರತ ಪುತ್ರಿಯರಲ್ಲಿ ಇರುವುದೋ ಇಲ್ಲವೋ ಎಂಬ ಸಂದೇಹ ಉಂಟಾಗಿತ್ತು. ಬಾರ್ಡೋಲಿ ಸ್ತ್ರೀಯರ ದೇಶ ಭಕ್ತಿಯನ್ನೂ ಅಂಧ್ರ ದೇಶದ ಸ್ತ್ರೀಯರ ಧೈರ್ಯ ಸ್ಥೈರ್ಯದಿಂದ ಕೂಡಿದ ದೇಶಾಭಿಮಾನವನ್ನು ಕೇವಲ ಹಿಂದಾಳುಗಳ ಗಿದ್ದ ಬಂಗಾಳದ ಸ್ತ್ರೀಯರ ದೇಶ ಸೇವಾ ಶಕ್ತಿಯನ್ನೂ ಬೊಂಬಾಯಿ ಪಟ್ಟಣದ ಪಾರ್ಸೀ ಸ್ತ್ರೀಯರ ಅನನ್ಯ ಅಸಾಧಾರಣವಾದ ದೇಶ ಸೇವೆಯನ್ನು ನೋಡಿದರೆ ಮಹಾತ್ಮಾ ಗಾಂಧಿಯವರ ಧರ್ಮಸಂಸ್ಥಾಪನದ ದೀಕ್ಷೆಯನ್ನು ನೆರವೇರಿಸುವುದಕ್ಕೆ ಈ ಭರತ ಖಂಡದ ವಿದ್ಯಾವತಿಯರು ಮಾತ್ರವೇ ಅಲ್ಲದೆ ಸಾಮಾನ್ಯ ಸ್ತ್ರೀಯರೂ ಕೂಡ ಹೇಗೆ ಶ್ರದ್ಧೆಯಿಂದ ಸರ್ವಸ್ವವನ್ನೂ ಪ್ರಾಣವನ್ನೂ ಒಪ್ಪಿಸುವುದಕ್ಕೆ ಸಿದ್ಧರಾಗಿರುವರೆಂದು ಗೊತ್ತಾಗುತ್ತದೆ ಇದು ದೇವರ ಪ್ರಭಾವವೋ ಮಹಾತ್ಮರ ಶಕ್ತಿಯೋ ಭಾರತೀಯರ ಅದೃಷ್ಟವೋ ಹೇಳುವುದಕ್ಕಾಗ ದು. ಅದು ಹೇಗಾದರೂ ಇರಲಿ ಸಂತೋಷದಿಂದ ದೇಶಹಿತಾರ್ಥವಾಗಿ ಪ್ರಾಣವನ್ನು ಒಪ್ಪಿಸುವುದಕ್ಕೆ ಹೋಗಿ ದಸ್ತಗಿರಿ ಮಾಡಲ್ಪಟ್ಟ ದೇಶ ದ್ರೋಹಿಗಳೆಂದು ಹೇಳಿ ಜಡ್ಜಿಗಳು ೯ ತಿಂಗಳು ಸಜೆಯನ್ನು ವಿಧಿಸಿದರೆ ಜಡ್ಜಿಗಳನ್ನು ಕುರಿತು 'ನಿಮ್ಮ ಶಕ್ತಿ ಇಷ್ಟೇ ತಾನೆ ಎಂದು ಸ್ತ್ರೀಯರು ಹೇಳುವುದನ್ನು ನೋಡಿದರೆ ನಮ್ಮ ಸ್ತ್ರೀಯರು ಜಪಾನ್ ದೇಶದ ಸ್ತ್ರೀಯರಂತೆ ದೇಶ ಸೇವಾರ್ಥವಾಗಿ ಸರ್ವಸ್ವವನ್ನೂ ಪ್ರಾಣವನ್ನೂ ಒಪ್ಪಿಸುವುದಕ್ಕೆ ಹೇಗೆ ಸಿದ್ಧರಾಗಿರುವರೋ ಅದು ಗೊತ್ತಾಗುತ್ತದೆ ಇವರಿಗೆ ಸನ್ಮಂಗಳಗಳಾಗಲಿ ಇವರ ಮೂಲಕ ಇಂಡಿಯಾ ದೇಶಕ್ಕೆ ಗುಲಾಮಗಿರಿಯು ತಪ್ಪಲಿ! ಇವರ ಸಾಹಸದಿಂದ ಬ್ರಿಟಿಷ್ ಧರ್ಮವು ರಕ್ಷಿಸಲ್ಪಡಲಿ ಇವರ ಶ್ರದ್ಧೆಯಿಂದ ಬ್ರಿಟಿಷ್ ಚಕ್ರಾಧಿಪತ್ಯವು ಆ ಚಂದ್ರಾರ್ಕಸ್ಥಾಯಿಯಾಗಿರುವಂತೆ ಮಾಡಲ್ಪಡಲಿ!! ಭಾರತ ಪುತ್ರಿಯರ ಆತ್ಮತ್ಯಾಗವೂ ದೇಶಸೇವಾಧುರಂಧರತೆಯೂ ಮೈಸೂರಿಗೂ ಪ್ರವೇಶಿಸಿರುವುದು ಮುಂದಿನ ತಿಂಗಳು ೧೫-೧೬ರಲ್ಲಿ ಮೈಸೂರು ಪಟ್ಟಣದಲ್ಲಿ ಈ ಸಂಸ್ಥಾನದ ಹೆಂಗಸರ ಕಾನ್ಫರೆನ್ಸ್ ನಡೆಯುವುದು ಈ ಸಂಸ್ಥಾನದ ಎಲ್ಲಾ ಪ್ರಾಂತಗಳ ಪ್ರತಿನಿಧಿಗಳೂ ದಯ ಮಾಡಿಸುವರು ಒಂದೊಂದು ಡಿಸ್ಟ್ರಿಕ್ಟಿಗೆ ೩ ಜನರು ಬರುವಂತೆ ಏರ್ಪಾಡಾಗಿದೆ ಈ ಕಾನ್ಫರೆನ್ಸಿನಲ್ಲಿ ಮೈಸೂರ ಸ್ತ್ರೀಯರು ಧರ್ಮಸಂಸ್ಥಾಪನಕ್ಕೋಸ್ಕರ ಹೇಗೆ ಕೆಲಸಮಾಡಬೇಕು, ಇಂಡಿಯಾ ದೇಶದ ಗುಲಾಮಗಿರಿಯನ್ನು ಹೇಗೆ ತಪ್ಪಿಸಬೇಕು ಬ್ರಿಟಿಷ್ ಜನರಿಗೂ ಭಾರತೀಯರಿಗೂ ಅಕೃತ್ರಿಮವಾದ ಪ್ರೀತಿಯಿರುವಂತೆ ಮಾಡುವುದಕ್ಕೆ ಏನು ಮಾಡಬೇಕು ಇವುಗಳನ್ನೆಲ್ಲಾ ಪರ್ಯಾಲೋಚಿಸುವುದಕ್ಕೆ ದರ್ಶಾವುಗಳನ್ನು ಮಾಡಬಹುದು ಇವರ ಪ್ರಯತ್ನವು ಸಫಲವಾಗಲೆಂದು ನಾವು ಕೋರುತ್ತೇವೆ

---


**ಈ ಸಂದರ್ಭವನ್ನು ಕಳಕೊಳ್ಳಬೇಡಿರಿ!**

**ಸ್ಪ್ರಿಕಿಂಗ್ ಮತ್ತು ವೈಂಡಿಂಗ್ ಎಲಾರ್ಮ್ ಕ್ಲೋಕ್ — ಉಚಿತ**

ರಿವರ್ ರಿಸ್ಟ್ ವಾಚ - (ಚೌಕ ಅಥವಾ ದುಂಡಗೆ) ನಮ್ಮ ರಿವರ್ ವಾಚನ್ನು ಪಡಕೊಳ್ಳುವವರಿಗೆ ಒಂದು ಕ್ಲೋಕ್ ಉಚಿತ ನಮ್ಮ "ಜಿಸ್ಟ್ರಿಯಾ" ಎಸ್ ಎಸ್ ಮದೀನಾ ಶಿಪ್ ಎಂಬ ಟ್ರೇಡ್ ಮಾರ್ಕನ್ನು ವಾಚಿನ ಹಿಂದಿನ ಬಿಲ್ಲೆಯಲ್ಲಿ ಸೋಡಿ-ಸ್ಟೀಲ್ ತಯಾರಿ — ನವೀನವಾಗಿ ಈಗ ತಾನೇ ಸ್ವಿಟ್ಜರ್ಲಾಂಡಿನಿಂದ ಬಂದಿರುವದು ಚಿತ್ರಿತವಾದ ಅಂಕೆಗಳು (ಆರಬಿಕ್ ಅಥವಾ ರೋಮನ್ ಸಂಯೋಗ) ಸಮಯವನ್ನು ತೋರಿಸುವವು ಯಾಂತ್ರಿಕ ಸಾಮಾನುಗಳಿಗೆ ವರ್ಷದ ಗ್ಯಾರಂಟಿ, ಫೇಕ್ಟರಿ ಕ್ರಯ ೩೦/ ರೂಪಾಯಿ ಮಾರಾಟದ ಕ್ರಯ ರೂ ೬—೧೫—೦ ಅಂಚೆವೆಚ್ಚ ೧೩ ಆಣೆ ಮಾತ್ರ

**ಸಿಟಿ ವಾಚ್ ಕೋ, ನಂಬ್ರ 8, ಹಾರ್ವರ್ಡ್ ರೋಡ್, ಗಾಮ್‌ದೇವಿ, ಮುಂಬಾಯಿ**

---

ತಯಾರಾಗಿವೆ — ಮಾರಾಟಕ್ಕೆ ಸಿದ್ಧವಿವೆ! — ತ್ವರೆಮಾಡಿರಿ!

1931ನೇ ಇಸವಿಯ

# ಪ್ರೊಕೆಟ್ ಡೈರಿಗಳು.

1931ನೇ ಇಸವಿಯ

| | | | | | | | |
|---|---|---|---|---|---|---|---|
| ಅಂದವಾದ ಕೆಲಿಕೊ ಬ್ಯಾಂಡಿನ ದೊಡ್ಡ ಸ್ಯಾಜಿನ ಡೈರಿ (ಇಂಗ್ಲೀಷ ಮಟರಿನೊಂದಿಗೆ) | 0 | 9 | 0 | ಕೆಲಿಕೊ ಬ್ಯಾಂಡಿನ ಮೀಡಿಯಮ್ ಸ್ಯಾಜಿದ್ದು | 0 | 8 | 0 |
| ಕೆಲಿಕೊ ಬ್ಯಾಂಡು ದೊಡ್ಡದು ಮುಚ್ಚಳದ್ದು | 0 | 14 | 0 | ಮುಚ್ಚಳದ್ದು | 0 | 12 | 0 |
| ಕೆಲಿಕೊ ಬ್ಯಾಂಡು ದೊಡ್ಡದು (ಕನ್ನಡ ಮಟರಿನೊಂದಿಗೆ) | 0 | 8 | 0 | ಮೀಡಿಯಮ್ ಸ್ಯಾಜ್ ಸ್ಟಿಫ್ ಬ್ಯಾಂಡ್ ಡೈರಿ | 0 | 6 | 0 |
| ಮುಚ್ಚಳದ್ದು | 0 | 14 | 0 | ಸಣ್ಣ ಸ್ಯಾಜಿನ ಕೆಲಿಕೊ ಬ್ಯಾಂಡ್ ಡೈರಿ | 0 | 6 | 0 |
| | | | | ಮುಚ್ಚಳದ್ದು | 0 | 10 | 0 |
| | | | | ಸ್ಟಿಫ್ ಬ್ಯಾಂಡ್ ಡೈರಿ | 0 | 5 | 0 |

**ದೊಡ್ಡ ಸ್ಯಾಜಿನ ಡೈರಿಯಲ್ಲಿ ಟಪ್ಪಾಲು, ಮತ್ತು ಕೋರ್ಟು ವ್ಯವಹಾರ, ಸ್ಟಾಂಪು ಅಕ್ಟು ಮುಂತಾದ ಕ್ರಮಗಳನ್ನು ಕನ್ನಡದಲ್ಲಿ ಕೊಟ್ಟಿರುತ್ತದೆ**

**ರಖಂ ತೆಗೆದುಕೊಳ್ಳುವವರಿಗೂ, ವ್ಯಾಪಾರಿಗಳಿಗೂ ತುಂಬಾ ಕಮಿಶನು ಕೊಡಲಾಗುವದು.**

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

**ಶಾರದಾ ಛಾಪಖಾನೆ,**

ರಥಬೀದಿ, ಮಂಗಳೂರು.

## ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಷ್ಟಾಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ ಸುಖಜೀವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕರದ ಕಂಟನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು

ಕ್ರಯ ಬಾಟ್ಲಿ 1ಕ್ಕೆ 2-0-0 ಪೋಸ್ಟೇಜು ವಗೈರೆ ಬೇರೆ.

ಪುಸ್ತಕರೂಪಿಗೆ "ಆರೋಗ್ಯರತ್ನ" ಎಂಬ ಪುಸ್ತಕಕ್ಕೆ ಬರೆಯಿರಿ

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ ಕನ್ನಡ.



## ಸುಂದರವಾದ ಜರಿಕೆಲಸ ಮಾಡಿದ ಪಟ್ಟೆ — ಸೀರೆಗಳು —

ಪೈನ್ ಗಳ ಮೊಳ ಉದ್ದ ೧೧ ಮೊಳ ಅಗಲ ೨೩ ೩೪ ಲಾಗಾಯತು ರೂ. ೧೫೦ರ ವರೆಗೆ. ಬುಟ್ಟಿಗಳ ಕೃಷ್ಣ ರೂ ೭ಕರ ಲಾಗ್ಯಾತ ರೂಪಾಯಿ ೩೫೦ ವರೆಗೆ. ರವಕೆ ಖಣ, ವ ಡ ಎಲವಸ್ತ್ರ, ಬನ್ಯಾನ್, ಶಾಲ್, ಖದ್ದರ ಮಡಿ, ಕಸ್ತೂರಿ, ಶಿಲಾಜಿತ್ ರುದ್ರಾಕ್ಷಿ, ಹಿತ್ತಾಳೆಯ ಸಾಮಾನುಗಳ ಪೂಜಾ ಸಾಮಗ್ರಿಗಳ ಇತ್ಯಾದಿ ಸದಾ ದೊರೆಯುವವು ಪ್ರೋತ್ಸಾಹಕರವರೆಗೆ ತಕ್ಕ ಪ್ರತಿಫಲ ಸಹ ಕೊಡಲ್ಪಡುವದು ಹೆಚ್ಚಿಗೆ ವಿಷಯ ಕ್ಯಾಟಲಾಗಿನಿಂದ ಅಥವಾ ಪತ್ರ ವ ಖೇರ

ವಿಳಾಸ —
ಕಾಪ್ರ ವಿಶ್ವನಾಥರಾವ್ ಎಂಡ್ ಬ್ರದರ್ಸ
ದುರ್ಗಾಘಾಟ್ ಕಾಶೀ, ಬನಾರಸ್ ಸಿಟಿ



## ಕೇವಲ ಕುಸುರಿ ಕ್ರಯ.

ಪೋಚು, ಲಿವರ್ ಮಶಿನು, (ಸೆಕೆಂಡ್ ಹೇಂಡ್ ಜೋಡಿಸಿದ್ದು) ಕ್ರಯ ರೂ 1—14—0 ಮಾತ್ರ ನಿಕ್ಕಲ್ ಕೇಸಿನ ಫೆಸ್ಸಿಕ್ಕೆ ಸರಿಯಾದ, ಬಹು ಸಮಯ ಬ್ಯಾಳ, ಒಳ್ಳೇ ಸಮಯ ಕೋರಿಸುವುದು ಸಿಲ್ವು ಚೆಟ್ಟಿಯೊಂದಿಗೆ ರೂ. 3—8—0 ನಂಬ್ರ 2 ರೂ 4—0—0 ನಂಬ್ರ 3 ರೂ. 5—0—0. (ಮೂರುವರುಷದ ಗೆರೆಂಟಿ ಇದೆ.)

ಅಂಚೆವೆಚ್ಚ ಅಧಿಕ.
ಇಂಗ್ಲೀಷಿನಿಂದ ಕೂಡಲೇ ಬರೆಯಿರಿ.

**R. C. MUKERJEE,**
*18/2 Hari Paul Lane,*
CALCUTTA.



# The Canara Bank Limited, Mangalore.
## ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

**Established July 1906** — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

***BRANCHES*** **-Karkal Kasargod, Cochin Udipi Gangolli, Coondapur, Bombay Puttur, Calicut & Alleppey**

ಬ್ರಾ:-ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲೆಪ್ಪಿ

| | |
|---|---|
| Authorised and fully paid up Capital Rs 300,000 0—0 | ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕಟ್ಟ ಮೂಲಧನವು ರೂ 300,000 0—0 |
| Reserve and other sinking Funds Rs 431,732—9—7 | ಕ್ಷೇಮನಿಧಿ ಮತ್ತು ಇತರ ಫಂಡುಗಳು ರೂ. 431,732 9—7 |
| Amount invested on G P Notes Rs 817,097—2—0 | ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 817,097—2—0 |
| Rates of interest on fixed deposits at Head Office and Branch 6¼% for 2 Years 6% ,, 1 Year | ಕಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿದರ—ಎರಡು ವರುಷಗಳಿಗೆ ಸೇಕಡಾ 6¼% 1 ವರುಷಕ್ಕೆ ಸೇಕಡಾ 6. |
| Season deposits of Rs 1000/- & above terminable by the end of June are received at 6¼% p a | ಜೂನ್ ಅಂತ್ಯದ ಒಳಗೆ ಸ್ವಾದ ಆಗುವ ರೂ 1000/-ದ ಮತ್ತು ಮೇಲಿನ ಠೇವಣಿಗಳಿಗೆ ಬಡ್ಡಿ ದರ ಸೇಕಡಾ 6¼. |

Current Account Deposits received and interest allowed on daily balance of Rs 50 and above that on multiples of Rs 10/-@ 3% from 1st Janauary to 30th June and @ 2% from 1st July to 31 t December No intere t will be allowed unless the depositor earns not less than Rs. 5/ during a period of 6 months ending either 30th June or 31st December in any year

Except by special arrangement no interest is allowed on sums exceeding Rs 10,000/ in the case of Head Office and Bombay & Cochin Branches and on sums exceeding Rs 3,000 in the case of the remaining Branches

Short notice deposits requiring one week's notice of withdrawal given at an time after one month from the date of deposit are received and interest allowed at 4% per annum Interest on such deposits will cease on notice

*For further particulars please apply to —*

Canara Bank Ltd, — ***K. Venkat Rao,***
*Mangalore, 13—10—1930* — *Secretary*



# The Pangal Nayak Bank, Ltd.

| Branch Office Mangalore | Head Office Udipi, *Established 1920.* | Agency Office. Cochin |
|---|---|---|

| | |
|---|---|
| Authorised Capital Rs 2,00,000- | Paid up Capital. Rs- 1 75,000- |
| Issued Capital Rs 1,75,000- | Reserve and other Funds Rs 1,42,810- |

***Fixed Deposits received for***
***24 months at 6¼%***
***12, 15, 18 or 21 months at 6***
***6 or 9 months at 5½%***
***3 months at 5***

***Interest being payable every 3 months.***

Current Deposit Accounts are opened free of charge and interest allowed on Daily balances

*Further information may be had on application to the* SECRETARY *at the* HEAD OFFICE *or to the* AGENT *at the* BRANCH.

Office of the Bank
Udipi, 6—10—1930

P. Laxman Nayak,
Secretary



## "ಗ್ರೇಂಡ್ ಕ್ಲಿಯರೆನ್ಸ ಸೇಲ್"!

ಬರೇ ಮೂರು ರೂಪಾಯಿಗಳ ವ್ಯಾಪಾರದಿಂದ 324 ಅಮೂಲ್ಯವಾದ ಪಾರಿತೋಷಕಗಳು!
ನಮ್ಮ ಸುಗಂಧ ಪೂರಿತವಾದ 'ಒಟ್ಟೊ' ಮೋತಿಯಾ ತೈಲದ ಆರು ಬಾಟ್ಲಿಗಳನ್ನು
ಒಮ್ಮೆಗನೇ ಕೊಂಡುಕೊಳ್ಳುವವರಿಗೆ ಈ ಕೆಳಗೆ ನಮೂದಿಸಿರುವ ೩೨೪ ಅಮೂಲ್ಯ
ಬಹುಮಾನಗಳು ಉಚಿತವಾಗಿ ಕೊಡಲಾಗುವವು!



[illegible]

ಮೌಲ್ಯ ರೂ. ೩—೦—೦ ಮಾತ್ರ ಟಪ್ಪಾಲು ಹಾಸಲು ೦—೧೦—೦,
ಪತ್ರವ್ಯವಹಾರವು ಇಂಗ್ಲಿಷಿನಲ್ಲಿಯೇ ಸಾಗಲಿರುವುದು.
ಇಂಡಿಯನ್ ಸ್ಟೋರ್ಸ ಕೋ,
47, ಬೆನಿಯಾಟೊಲಾ ಸ್ಟ್ರೀಟ್, ಪಿ. ಓ., ಹಟ್ಖೋಲಾ, ಕಲ್ಕತ್ತೆ

**INDIAN STORES CO.** 47, Peniatola Street, Po, Hatkhola CALCUTTA.

# ಪಂಡಿತ ಜವಾಹಿರಲಾಲ ನೆಹರುರವರ ತನಿಖೆ.

## ಮಹಾತ್ಮಾಜಿಯವರ ಸತ್ಯಾಗ್ರಹ ಸಮಾಚಾರ.

ಪಂಡಿತ ಜವಾಹಿರಲಾಲರ ಮೇಲೆ ಇಂಡಿಯನ್ ಪಿನಲ್ ಕೋಡಿನ ೧೨೪ A, ೧೧೭ ಮತ್ತು unlawful Instigation Ordinanceನ ೩ನೇ ಪ್ರಕರಣಗಳು ಜ್ಯಾರಿಯಾಗಿರುವುವಷ್ಟೆ! ಈ ತಕ್ಸೀರುಗಳಿಗೆ ಒಳಪಟ್ಟ ಜವಾಹಿರಲಾಲರನ್ನು ಮಿ| ಗ್ರೋಸರು (ಮ್ಯಾಜಿಸ್ಟ್ರೇಟ್) ವಿಚಾರಣೆ ನಡೆಸಿದರು ತನಿಖೆಯು ಪೂರ್ವಾಹ್ನ ಘಂಟೆ ೧೧-೧೫ಕ್ಕೆ ತೊಡಗಿತು. ಮಾನ್ಯ ಮೋತಿಲಾಲರೇ ಮೊದಲಾದ ನೆಹರು ಕುಟುಂಬದ ಬಂಧುಭಗಿನಿಯರೆಲ್ಲರೂ ನೆರೆದಿದ್ದರು ಮೊದಲಾಗಿ ಮಿ ಮೆಕರ್ಸ್—ಎಂಬ ಪೋಲೀಸು ಸುಪರಿಂಟೆಂಡೆಂಟರ ತನಿಖೆಯು ನಡೆಯಿತು, ಅವರು ಸ್ಥಳೀಯ ಸರಕಾರದ ಹೇಳಿಕೆಯ ಮೇರೆಗೆ ಜವಾಹಿರಲಾಲರನ್ನು ವಾರಾಂಟು ಮುಖೇನ ದಸ್ತಗಿರಿಮಾಡಬೇಕಾಯಿತೆಂದು ಹೇಳಿದರು, ಮತ್ತು ಮೇಲೆ ಹೇಳಲ್ಪಟ್ಟ ವಾರಾಂಟು ಹುಕುಮಿಗೆ ಸರಕಾರದ ಮುಖ್ಯ ಕಾರ್ಯದರ್ಶಿಯವರು ಸಹಿಮಾಡಿದ್ದರೆಂದೂ ರುಜುಪಡಿಸಿದರು ಆದರೆ ಪಂಡಿತಜೀಯವರು ಈ ಕುರಿತು ಸುಪರಿಂಟೆಂಡೆಂಟರನ್ನು ಅಡ್ಡ ವಿಚಾರಣೆಗೆ ಕರೆಯಲಿಲ್ಲ

ಆ ಮೇಲಿನ ವಿಚಾರಣೆ ಎಂದರೆ—ಸಿ ಐ ಡಿ ಇನ್ಸ್‌ಪೆಕ್ಟರರಾದ ಮಿ| ಭಗವಾನ್ ದಾಸರದ್ದು ಸಬ್ ಇನ್ಸ್‌ಪೆಕ್ಟರರ ವಾಗ್ಮೂಲದ ಅಭಿಪ್ರಾಯದಂತೆ, ಜವಾಹಿರಲಾಲರು ಪುರುಷೋತ್ತುಮದಾಸ್ ಪಾರ್ಕಿನಲ್ಲಿ ಪೇಶಾವರದ ರಿಪೋರ್ಟು, ಆಂಗ್ಲೇಯ ಶಾಸ್ತ್ರಧಾರ ಕ್ರಮಗಳ ಕುಂದುಕೊರತೆಗಳು ಮತ್ತು ಪೇಶಾವರದ ಮುಸಲಿಮ್ ಸಂಗಡದವರ ಧೈರ್ಯ ಸಾಹಸ ಮುಂತಾದವುಗಳ ಕುರಿತು ಭಾಷಣಮಾಡಿದರೆಂದೂ,' ಮತ್ತು ಬ್ರಿಟನ್ನಿನವರ ಸಂಕೇತ ಚಿಹ್ನೆಯಾದ ಯುನಿಯನ್ ಜೇಕ್ ಪತಾಕೆಯನ್ನು ಪರಿತ್ಯಜಿಸಿ ರಾಷ್ಟ್ರೀಯ ಧ್ವಜವನ್ನೇ ಏರಿಸಬೇಕೆಂದು ಒತ್ತಿ ಹೇಳಿದರೆಂದೂ ತಿಳಿದುಬರುತ್ತದೆ ವ್ಯಾಸರಾಯರಾದ ಇರ್ವಿನ್ ಪ್ರಭುಗಳು ಜ್ಯಾರಿಗೆ ತಂದ ಹೊಸ ಹೊಸ ಓರ್ಡಿನೆನ್ಸುಗಳ ಪರಿಣಾಮವನ್ನೂ ಮಂದಟ್ಟುಮಾಡಿದರು, ಅಲ್ಲದೆ ಉಪ್ಪಿನ ಶಾಸನೋಲ್ಲಂಘನೆಯು ಭರತಖಂಡದಲ್ಲಿ, ಹೆಚ್ಚುಕಮ್ಮಿ ಉಪ್ಪಿನ ಕರವನ್ನೇ ಕೊಡದಿರುವಂತೆ ಮಾಡಿರುತ್ತದೆಂಬದಾಗಿ ಹೇಳಿದರೆಂದು ತಿಳಿದುಬರುತ್ತದೆ

### ಜವಾಹಿರಲಾಲರು ವಿಚಾರಣಾ ಸಮಯದಲ್ಲಿ ಮ್ಯಾಜಿಸ್ಟ್ರೇಟರ ಸಮಕ್ಷಮ.

**ಗ್ರೋಸ್ (ಮ್ಯಾಜಿಸ್ಟ್ರೇಟ್)**—'ನೀವು ಪುರುಷೋತ್ತುಮದಾಸ್ ಪಾರ್ಕಿನಲ್ಲಿ ಕೊಟ್ಟ ಭಾಷಣವನ್ನು ನಿರಾಕರಿಸುವಿರೋ?'

**ಪಂಡಿತಜಿ**—'ಭಾಷಣವನ್ನು ನಿರಾಕರಿಸುವದು ನನಗೆ ಸಲ್ಲದು, ಆದರೆ ನನ್ನ ಯೋಜನೆಯು ಮಾತ್ರ ತುಸು ನೊಂದಿರುವುದು'

**ಗ್ರೋಸ**—ನೀವು ಸದರಿ ಭಾಷಣದ ಸಾರಾಂಶವನ್ನಾದರೂ ಸರಿ ಎನ್ನುವಿರೋ?

**ಪಂಡಿತಜಿ.**—'ನಾನು ಉತ್ತರಕೊಡಲು ಇಚ್ಛಿಸುವುದಿಲ್ಲ,' ನಾನೊಂದು ಸ್ಟೇಟ್‌ಮೆಂಟ್ ಮಾತ್ರ ಮಾಡುವೆನು'

**ಮ್ಯಾಜಿಸ್ಟ್ರೇಟ್:**—ಬೇರೇನಾದರೂ ಹೇಳಲಿಕ್ಕಿರುವದೇ-ನಿಮಗೆ?

**ಪಂಡಿತಜಿ:**—ನಾನು ಒಂದು ಸ್ಟೇಟ್‌ಮೆಂಟ್ ಮಾಡಬೇಕೆಂದು ಆಲೋಚಿಸುತ್ತೇನೆ

**ಮ್ಯಾಜಿಸ್ಟ್ರೇಟ್:**—ಅದು ತನಿಖೆಯ ವಿಷಯದಲ್ಲೇ ಆಗಿರುವದೇ?

**ಪಂಡಿತಜೀ.**—ಇಂದಿನ ಕಾರ್ಯಕ್ರಮಗಳೆಲ್ಲವೂ ನನ್ನ ವಿಚಾರಣೆಗೆ ಸಂಬಂಧಿಸಿರುವುವೆಂದೇ ನಂಬಿದ್ದೇನೆ'

**ಮ್ಯಾಜಿಸ್ಟ್ರೇಟ್**—ಒಳ್ಳೇದು, ನೀವು ಸ್ಟೇಟುಮೆಂಟನ್ನು ಓದಿ ಹಾಜರುಪಡಿಸಬಹುದು.

**ಪಂಡಿತಜಿ.**—ಸರಿ! ಎಂದು ಜವಾಹಿರಲಾಲರು ಕುಳಿತ ಸ್ಥಾನದಿಂದ ಎದ್ದು ನಿಂತು, ಸ್ಟೇಟ್‌ಮೆಂಟನ್ನು ಓದಿದರು ಮೊತ್ತ ಮೊದಲು ಅವರ ಸ್ವರವು ಅಷ್ಟು ಸುರಸವಾಗಿದ್ದಿಲ್ಲವೆಂದೂ, ಬರಬರುತ್ತ ಓದುವಿಕೆಯ ಸಾರಾಂಶವು ಜನತೆಗೆ ಸ್ಪಷ್ಟವಾಗುವಂತೆ ಸ್ಟೇಟುಮೆಂಟನ್ನು ೫ ನಿಮಿಷಗಳ ವರೆಗೆ ಓದಿ ತನ್ನ ಯಥಾಸ್ಥಾನವನ್ನಲಂಕರಿಸಿದರೆಂದೂ ತಿಳಿದುಬರುತ್ತದೆ

### ಸ್ಟೇಟ್‌ಮೆಂಟಿನ ಸಾರಾಂಶ

'ಬ್ರಿಟಿಷ್ ಗವರ್ನಮೆಂಟಿನ ಅಧಿಕಾರಿಗಳಿಂದ ಹೊರಿಸಲ್ಪಟ್ಟ ವಿವಿಧ ಅಪಾದನೆಗಳ ಮೇಲೆ, ನಾನು ೫ನೇ ಸಲ ದಸ್ತಗಿರಿ ಮಾಡಲ್ಪಟ್ಟಿರುವೆನು. ಐದನೇ ಸರ್ತಿಯಲ್ಲಿಯೂ ಕೂಡ ಸರಕಾರದ ದೃಷ್ಟಿಗೆ ನಾನು ತಪ್ಪಿತಸ್ಥನೆಂದು ಪರಿಗಣಿಸಲ್ಪಡಬೇಕಾದುದೆನೋ ಸಹಜವು. ಇದು ವರೆಗೂ ನಡೆದ ತನಿಖೆಗಳಲ್ಲಿ ನಾನು ಭಾಗವಹಿಸಲಿಲ್ಲ, ಮುಂದೆ ಭಾಗವಹಿಸಬೇಕೆಂದು ಅಪೇಕ್ಷಿಸುವದೂ ಇಲ್ಲ ಆದರೆ ಇಂದು ನನ್ನನ್ನು ತನಿಖೆ ನಡಿಸುವ ಅಧಿಕಾರಿಗಳ ಹಾಗೂ ನನ್ನನ್ನು ಮೇರೆ ತಪ್ಪಿದ ಬಹುಮಾನದಿಂದ ಕಾಣುವ ಸ್ವಜನರ ಮತ್ತು ಬಾಂಧವರ ತಿಳುವಳಿಕೆ ಬಗ್ಗೆ, ನನ್ನ ಮನಃಪೂರ್ವಕವಾದ ಎರಡು ಮಾತುಗಳನ್ನು ಹೇಳಬೇಕೆಂದಿರುವೆನು' ಎಂದರು

'ನನ್ನನ್ನು ರಾಜದ್ರೋಹಿ ಎಂಬ ತಕ್ಸೀರಿನ ಮೇಲೆ ಚಾರ್ಜು ಮಾಡಿರುವರು, ಮತ್ತು ನಾನು ಬ್ರಿಟಿಷ ಸರಕಾರಕ್ಕೆ ವಿರೋಧವಾಗಿ ದೇಶದಲ್ಲಿ ಅಸಮಾಧನವನ್ನು ಬೀರುತ್ತಿರುವೆನಂತೆ! ಎಂಟೂವರೆ ವರ್ಷಗಳ ಹಿಂದೊಮ್ಮೆ ಇದೇ ರಾಜದ್ರೋಹದ ಅಪಾದನೆಯ ಮೇಲೆ ನನ್ನನ್ನು ಚಾರ್ಜುಮಾಡಿದರು ಆ ಸಂದರ್ಭದಲ್ಲಿಯೇ 'ರಾಜದ್ರೋಹವು ಹಿಂದೀಯರ ಮತವೆಂತಲೂ, ಮತ್ತದನ್ನು ಸಾಧಿಸುವದೇ ಹಿಂದೀಯರ ವೃತ್ತಿಯಾಗಿರುವುದೆಂತಲೂ' ಹೇಳಿರುವೆನು ಕಾರಣ—ಹಿಂದೀಯರಿಗೆ ಸ್ವಾತಂತ್ರ್ಯವಿಲ್ಲ, ಅವರ ಕಷ್ಟಪರಂಪರೆಗಳ ನಿವಾರಣೆಯೂ ಆಗುವದಿಲ್ಲ ಸಾವಿರಾರು ಜನರ ಜೀವನವು ಕಷ್ಟದಾಯಕವಾಗಿರುವದು ಈ ವಿಷಯವು ಇಂಡಿಯದ ಜನತೆಗೆ ಚೆನ್ನಾಗಿ ಗೊತ್ತು ಈ ವಿಷಯದ ದುಷ್ಪರಿಣಾಮಗಳು ನನ್ನ ಮನಸ್ಸಿಗೆ ಅದೆಂದಿಗೆ ಮಂದಟ್ಟಾಗಿರುವವೋ, ಅಂದೇ ಬ್ರಿಟಿಷರೊಡನೆ ಸಮರವನ್ನು ಹೂಡಿರುವೆನು, ನನಗೆ ಅದು ಹೊರತು ಬೇರೆ ಉದ್ಯೋಗವೇ ಇರುವುದಿಲ್ಲ, ಸದಾ ನನ್ನ ಧ್ಯೇಯವು ಬ್ರಿಟಿಷ ಇಂಪೀರಿಯಾಲಿಸಮ್ಮನೊಡನೆ ಕಾದಾಡುವದೇ ಆಗಿರುವದು'

'ಇಂಗ್ಲಿಷ್ ಜನತೆಯೊಂದಿಗೆ ನಮಗೆ ಯಾವ ತರದ್ವೇಷವೂ ಇರುವುದಿಲ್ಲ, ಆದರೆ ಇಂಗ್ಲಿಷ್ ನೌಕರನ ವೃತ್ತಿಯನ್ನು ಮಾತ್ರ ನಾವು ಪರಿತ್ಯಜಿಸಿರುವೆವು, ಅವನೂ ಕೂಡ ನಮ್ಮಂತೆಯೇ ಬ್ರಿಟಿಷ್ ಇಂಪೀರಿಯಾಲಿಸಮ್ಮಿಗೆ ಒಳಗಾಗಿರುವನು, ಆದುದರಿಂದ ಸದರಿ ಇಂಪೀರಿಯಾಲಿಸಮ್ಮನ್ನು ನಿರೋಧಿಸಿಯೇ ನಾವು ಕಾದಾಡುತ್ತಿರುವೆವು—ಅದರೊಡನೆಂದೂ ನಾವು ಸಂಧಿಗೆ ಒಪ್ಪುವದಿಲ್ಲ' ಎಂದು ಹೇಳಿ—'ನಾನು ಇಂಡಿಯದ ಜನತೆಯ ವಿಶ್ವಾಸ—ವಿಧೇಯತೆಗಳಿಗಾಗಿ ನನ್ನ ಹೃದಯಪೂರ್ವಕ ಅಭಿನಂದನೆಗಳನ್ನು ಸಮರ್ಪಿಸಲು ಇಚ್ಛಿಸುವದಿಲ್ಲ, ಆದರೆ ಮಹಾತ್ಮಾಜಿಯವರಿಂದ ಹೂಡಲ್ಪಟ್ಟ ಈ ಪವಿತ್ರ ಸತ್ಯಾಗ್ರಹ ಸಮರರಂಗದಲ್ಲಿ ನನ್ನ ಅತ್ಯಲ್ಪ ಸಾಹಸವನ್ನು ತೋರ್ಪಡಿಸಬೇಕೆಂಬುದೊಂದೇ ಇಚ್ಛೆ! ನನ್ನ ಬಂಧುಭಗಿನಿಯರು ರಾಷ್ಟ್ರೀಯ ಸಮರದಲ್ಲಿ ಜಯಶೀಲರಾಗುವ ತನಕ ಎಡೆಬಿಡದೆ ಪ್ರಯತ್ನಿಸಬೇಕೆಂದು ಮಾತ್ರ ನಾನು ಪ್ರಾರ್ಥಿಸಿಕೊಳ್ಳುವೆನು ಸ್ವಾತಂತ್ರ್ಯ ಹಿಂದುಸ್ಥಾನವು ಚಿರಕಾಲ ಬಾಳಲಿ!' ಎಂದು ಹೇಳಿ ತನ್ನ ಸ್ಟೇಟುಮೆಂಟಿನ ವಾಚನವನ್ನು ಅಂತ್ಯಗೊಳಿಸಿದರು ತರುವಾಯ ಮ್ಯಾಜಿಸ್ಟ್ರೇಟರು ಪಂಡಿತಜೀಯವರೊಡನೆ—'ನೀವು ಅಪರಾಧಿತನೆಂದು ಒಪ್ಪುವಿರೋ ಅಥವಾ ಅಲ್ಲಗಳೆಯುವಿರೋ' ಎಂದು ಪ್ರಶ್ನಿಸಿದರು ಅದಕ್ಕೆ ಪಂಡಿತಜೀಯವರು:—'ನಾನು ಏನನ್ನೂ ಹೇಳುವಂತಿಲ್ಲ ಅಡ್ಡ ವಿಚಾರಣೆಯನ್ನು ಕೂಡ ನಿರಾಕರಿಸಿರುವೆನು, ಆದರೆ ನನ್ನ ಮೇಲೆ ಹೂಡಲ್ಪಟ್ಟ ಚಾರ್ಜು ೧೨೪ A ಪ್ರಕರಣಕ್ಕೆ ಒಳಪಟ್ಟಿರುವದೇ—ಎಂದು ಕೇಳಿಕೊಳ್ಳಲು ಅನುಮತಿ ಕೊಡುವಿರಾ? ಎಂದು ಮ್ಯಾಜಿಸ್ಟ್ರೇಟರಿಗೆ ಮರಳಿ ಪ್ರಶ್ನೆಮಾಡಿದರು

**ಮ್ಯಾಜಿಸ್ಟ್ರೇಟರು**—'ಹೌದು, ೧೨೪ Aಗೆ ಒಳಪಟ್ಟಿರುವದು, ಆದರೆ ನೀವು ಡಿಫೆನ್ಸು ಕೊಡುವರೆ ಮನಮಾಡಿರುವಿರೋ?

'ಇಲ್ಲ' ಎಂಬ ದೃಢವಾದ ಉತ್ತರವೇ ಪಂಡಿತಜೀಯವರಿಂದ ಹೊರಟಿತು.

### ತೀರ್ಪು ಓದಿ ಹೇಳಲಿಲ್ಲ—ಮುಂದರಿಸಿರುವರು.

ಸಿ ಐ, ಡಿ ಇನ್ಸ್‌ಪೆಕ್ಟರರು ಮಾಡಿದ ಶೋರ್ಟ್‌ಹೇಂಡ್ ರಿಪೋರ್ಟನ್ನು ಮ್ಯಾಜಿಸ್ಟ್ರೇಟರು ಇನ್ನೊಮ್ಮೆ ಕೋರ್ಟಿನಲ್ಲಿ ಓದಿಸಿದರು ತರುವಾಯ ಅಪರಾಹ್ನ ಘಂಟೆ ೧-೩೫ಕ್ಕೆ ಸರಿಯಾಗಿ ಮ್ಯಾಜಿಸ್ಟ್ರೇಟರು ತೀರ್ಪನ್ನು ಓದಿಹೇಳುವ ಕೆಲಸವು ಬರುವ ಮಂಗಳವಾರಕ್ಕೆ ಮುಂದರಿಸಿ ಇಡಲಾಗಿರುವದೆಂತಲೂ, ಓದಿ ಹೇಳುವ ಒಂದು ದಿನ ಮುಂಚಿತವಾಗಿ ತೀರ್ಪಿನ ಅಭಿಪ್ರಾಯವನ್ನು ಮಾನ್ಯ ಮೋತೀಲಾಲರಿಗೆ ಅವರ ಆನಂದಭವನದಲ್ಲೇ ತಿಳಿಯಪಡಿಸುವೆನೆಂದು ಬಹಿರಂಗವಾಗಿ ಕೋರ್ಟಿನಲ್ಲಿ ನೆರೆದ ಸಭೆಗೆ ತಿಳಿಯಪಡಿಸಿರುವರು.

ಮಾನ್ಯ ಪಂಡಿತಜೀಯವರು ಐದನೇ ಸಲ ಕಾರಾಗೃಹವನ್ನು ಸೇರಿದರು, ಕಾರಾಗೃಹವನ್ನು ಒಳಹೋಗುವ ಮೊದಲಾಗಿ ತೀರ್ಥರೂಪರಾದ ಮೋತಿಲಾಲರನ್ನು ಸಮ್ಮಭಾವದಿಂದ ಆಲಂಗಿಸಿದರು, ಪತ್ನೀ ಪುತ್ರಿಯರನ್ನು ಆಶೀರ್ವದಿಸಿದರು, ಬಂಧುಗಳಿಗೆ ಹಾಗೂ ತನ್ನ ಅನುಯಾಯಿಗಳಿಗೆ ನೈನಿ ಜೈಲಿನ ಕಂಡಿಯೊಳಗಿಂದ ಐದನೇ ಸರ್ತಿ ಹಸನ್ಮುಖಿಯಾಗಿ ದರ್ಶನಕೊಟ್ಟರು ಆ ಮೇಲೆ ಮಾನ್ಯ ಪಂಡಿತಜೀಯವರಿಗೆ ಇರಿಸಿದ ನೈನಿ ಜೈಲಿನ ಬಲವಾದ ಕಬ್ಬಿಣದ ಬಾಗಲುಗಳು ಮುಚ್ಚಲ್ಪಟ್ಟವು

ತಾ ೨೪—೧೦ -'೩೦

### ಲಖ್ನೌದಲ್ಲಿ

ಮಿ| ಜೆ ಎಮ್ ಸೆನ್‌ಗುಪ್ತರು ಬಹಿರಂಗ ಭಾಷಣಗಳನ್ನು ಕೊಡಕೂಡದಾಗಿ ಪೋಲೀಸರು ಕ್ರಿಮಿನಲ್ ಕೋಡಿನ ೧೪೪ ಪ್ರಕರಣವನ್ನು ಜ್ಯಾರಿಮಾಡಿದರು ಆದರೆ ಸದರಿ ಪ್ರಕರಣವು ಪೋಲೀಸರಿಂದ ಸರಿಯಾಗಿ ಜ್ಯಾರಿಮಾಡಲ್ಪಟ್ಟಿರುವದೆಂಬ ವಿಷಯದಲ್ಲಿ ಮಾತ್ರ ಸ್ವಲ್ಪ ಸಂದೇಹ. ಕಾರಣ:—ಸೆನ್‌ಗುಪ್ತರು ರೈಲಾಫೀಸಿನಲ್ಲಿ ಇಳಿದರು, ಜನಸಂದಣಿಯು ತುಂಬಿದ್ದಿತು ಇಂತಹ ಪ್ರಸಂಗದಲ್ಲಿ ಒಬ್ಬ ಪೋಲೀಸು ಆಫೀಸರನು ಸೇನಗುಪ್ತರ ಮೇಲೆ ಜ್ಯಾರಿಮಾಡಬೇಕಾಗಿದ್ದ ನೋಟೀಸನ್ನು ಕೈಯಲ್ಲಿ ಹಿಡಕೊಂಡು ರೈಲುವೇ ಸ್ಟೇಶನಿಗೆ ಓಡಿಓಡಿ ಬಂದನಂತೆ! ಆದರೆ ಜನಸಮುದಾಯದಲ್ಲಿ ಆಫೀಸರನಿಗೆ ಸೇನಗುಪ್ತರನ್ನು ಕಣ್ಣಾರೆ ನೋಡುವ ಸುಯೋಗವೂ ದೊರೆಯಲಿಲ್ಲ, ಹೋದಂತೆಯೇ ಬರಬೇಕಾಯಿತು

### ಪೇಶಾವರದಲ್ಲಿ

ಅಫ್ರಿದ್ಧಿ ಜಿರ್ಗಾಸಮಾರಂಭವು ಹೆಚ್ಚಿನ ಫಲಕಾರಿಯಾಗಲಿಲ್ಲ ಅಫ್ರಿದ್ಧಿಗಳು ಜನರನ್ನು ಕೂಡಿಸುತ್ತ ತಮ್ಮ ಸೈನ್ಯವನ್ನು ಬಲಪಡಿಸುವರೆಂದು ತಿಳಿದುಬರುತ್ತದೆ

### ಬೆಂಗಳೂರು.

ಇಲ್ಲಿನ ಸತ್ಯಾಗ್ರಹ ಮುಖಂಡರು ತಮ್ಮೂರಲ್ಲಿ ಪಂಡಿತ ಮೋತಿಲಾಲರ ಆರೋಗ್ಯ ರಕ್ಷಣೆಗೆ ಬೇಕಾದ ಎಲ್ಲಾ ಸಲಕರಣೆಗಳನ್ನು ರೂಢಿಸಿ, ಸದರಿಯವರು ಇಷ್ಟಪಟ್ಟರೆ ಬೆಂಗಳೂರಿಗೆ ಬಂದು ಚಿಕಿತ್ಸೆ ಹೊಂದಬಹುದೆಂಬ ವಿಷಯವನ್ನು ತಂತಿಮೂಲಕ ಅವರಿಗೆ ತಿಳಿಸಿರುವರು.

### ಸೂರತ್ತಿನ

ವರ್ತಮಾನದಂತೆ ಬಾರ್ಡೋಲಿಯ ಕರನಿರಾಕರಣ ಚಳವಳಿ ಮುಂದರಿಯುತ್ತಲೇ ಇರುವದೆಂದು ತಿಳಿದುಬರುತ್ತದೆ. ಸೂರತ್ತಿನ ಸತ್ಯಾಗ್ರಹ ಆಶ್ರಮವು ಮುಂಬಾಯಿ ಸರಕಾರದ ಹುಕುಮಿನ ಮೇರೆಗೆ ದೌಡುಮಾಡಲ್ಪಟ್ಟಿರುವದು

ತಾ. ೨೫—೧೦—೩೦

### ಲಾಹೋರಿನಲ್ಲಿ

ಮಿ| ಸೆನ್‌ಗುಪ್ತರು ಭಾಷಣ ಮಾಡುತ್ತಿರಲು ಪೋಲೀಸು ಸುಪರಿಂಟೆಂಡೆಂಟರು ಸದರಿಯವರನ್ನು ದಸ್ತಗಿರಿ ಮಾಡಿದರು ಅಂದಿನ ಸಭೆಯು ಸಾಧಾರಣ ೩೦,೦೦೦ ಜನರಿಂದ ತುಂಬಿದ್ದು ಜಲಿಯನ್‌ವಾಲಾ ಬಾಗಿನಲ್ಲಿ ನೆರೆದಿದ್ದಿತು. ಕೈದುಮಾಡಿದ ಮೇಲೆ ಮಿ| ಗುಪ್ತರನ್ನು ಸುಪರಿಂಟೆಂಡೆಂಟರು ಮೋಟಾರ್‌ಕಾರ್ ಒಳಗೆ ಕೂತುಕೊಳ್ಳಿಸಿ ಬಂದಿಖಾನೆಗೆ ಕರದೊಯ್ದರು.

(೧೩ನೇ ಪುಟಕ್ಕೆ ಮುಂದರಿಸಿಯದೆ.)

**The Zandu Pharmaceutical Works, Ltd., Bombay, 14.**

ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ 'ಝಂಡೂ'ಯವರ

# ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!

ಹಸಿ ಆಮಲಕ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದೌರ್ಬಲ್ಯ, ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

ಕ್ರಯ 1 ಪೌಂಡು ಸೀಸೆ ರೂ. 2—8—0, ½ ಪೌ. ರೂ. 1—5—0, ¼ ಪೌ. ರೂ 0—13—0.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು:—ದಾಮೋದರ್ ಅಂಡ್ ಕಂಪೆನಿ, 78 ಚೈನಾ ಬಜಾರು ರಸ್ತೆ, ಮದ್ರಾಸು.

ತೀರ್ಥಹಳ್ಳಿ ಏಜಂಟರು:—ಮೆಸರ್ಸ್ ಪಂಡಿತ ಮತ್ತು ಕಂಪೆನಿ

ಮಂಗಳೂರು ಏಜಂಟರು:—ದಿ ಯೂನಿಯನ್ ಮಾರ್ಟ್.

ಶಿರ್ಸಿ ಏಜಂಟರು—ಎಸ್. ಎಲ್ ಧಾಕಪ್ಪಾ ಎಂಡ್ ಬ್ರದರ್ಸ್

ಸಬ್ ಏಜಂಟರು.—ಯು. ಜನಾರ್ಧನರಾವ್, ಪುತ್ತೂರು, ದ. ಕನ್ನಡ.

ಮಂಗಳೂರು ಏಜಂಟರು—ತಿಪ್ಪಣ್ಣ ಶ್ಯಾಸ್ತ್ರಿ, ಬುಸ್‌ಬೇಟ್.

☞ ವಿವರ ಕೆಟಲಾಗು ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು



TELEGRAMS 'ASPINWALCO' TELEPHONE NO. 15

DISTRIBUTORS

Aspinwall & Co, Ltd.

(Address) MANGALORE.

*STOCKISTS*

UDIPI
*H Siddaya Hegde*

KASARGODE -
*Rama Nayak*

KANHANGAD -
*H S Russool*

COONDAPUR -
*E Gopal Mukunda Pai,*
General Merchant
COONDAPUR (S Kanara)

BHATKAL -
*Messers KashimjeeShamshuddeen Saheb Motor Service*

Puttur -
*K Venkatraya Pai,*
Imperial Cycle Stores



***FOR YOUR CAR***

## WILLARD BATTERIES.

SIMONZ KLEENER SIMONIZ POLISH.

*AGENTS —*

## Messrs. Aspinwall & Co, Ltd

MANGALORE



"ಬಿಟ್ಟಿ" "ಪುಗಸಟ್ಟೆ" "ಬಿಟ್ಟಿ"



**ಜೇಬಿನ ಲಿವರ್ ಗಡಿಯಾರವೂ ಕೈ ಗಡಿಯಾರವೂ ಬಿಟ್ಟಿ**

**೩ ತಿಂಗಳೊಳಗಾಗಿ ೩೦೦೦ ಗಡಿಯಾರಗಳನ್ನು ಬಿಟ್ಟಿಯಾಗಿ ಕೊಟ್ಟಿದ್ದೇವೆ**

ರೂ. ೩—೧೫—೦ ಬೆಲೆ ಬಾಳುವ ನಮ್ಮ ಡಜ್ಹನ್ ೧ ಫೌಂಟೆನ್ ಪೆನ್ನನ್ನು ಕೊಂಡುಕೊಳ್ಳುವ ನಮ್ಮ ಗಿರಾಕಿಗಳಿಗೆ ಜೇಬಿನ ಲಿವರ್ ಗಡಿಯಾರವನ್ನು ಪುಕಟ್ಟಾಗಿ ಕೊಡುತ್ತೇವೆ ಒಂದೇ ಸಲ ಎರಡು ಫೌಂಟೆನ್ ಪೆನ್ನುಗಳನ್ನು ಕೊಳ್ಳುವವರಿಗೆ ರೂ. ೫—೧೪—೦ ಬೆಲೆಯ ಮತ್ತು ಲಿವರ್ ಕೈ ಗಡಿಯಾರವೂ ಬಿಟ್ಟಿಯಾಗಿ ಕೊಡುವೆವು ಈ ಪೆನ್ನು ಭಂಗಾರದ ನಿಬ್ಬುಳ್ಳದ್ದಾಗಿಯೂ, ಅಚ್ಚುಕಟ್ಟಾದ ಶಾಯಿ ನಯವಾಗಿ ಬರೆಯುವುದೂ, ಜಾರ್ಜ ಚಕ್ರವರ್ತಿಗಳಂತ ಪೆನ್ನುಗಳುಳ್ಳದ್ದಾಗಿಯೂ, ಖರಾರಾಗಿ ಘಂಟೆಯನ್ನು ತೋರಿಸುವುದಾಗಿಯೂ ಇದೆ. ಇವಕ್ಕೆ ೫ ವರ್ಷ ಗ್ಯಾರಂಟಿ ಕೊಡುತ್ತೇವೆ.

ಪತ್ರವ್ಯವಹಾರಗಳು ಇಂಗ್ಲೀಷಿನಲ್ಲಿ ಬರೆಯಬೇಕು.

**Imperial Watch Company.**

(S) Post No. 12, BOMBAY.



## ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು



## ಮುದಲ್ ತರವಾದ ಬೆಳ್ಳಿ ಉಡಿದಾರ ಹಗ್ಗ.

ESTD 1896.

ಅನೇಕ ವರುಷದಿಂದ ನಾವು ಬೆಳ್ಳಿ ಉಡಿದಾರಗಳನ್ನು ತಯಾರು ಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿ ಬರುತ್ತೇವೆ ನೀಡಿಸಿದ ಅನುಭವದ ಮೇಲೆ ನಮ್ಮ ಉಡಿದಾರ ಹಗ್ಗಗಳು ಕೆಲಸ ಸೈಸಲ್ಲಿಯೂ, ಧಾರಣೆ ಸಂಸದಲ್ಲಿಯೂ, ಸರಕಿನ ಸಾಮ್ಯದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದುದಾಗಿದೆ ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳನ್ನು ಕಳುಹಿಸುತ್ತೇವೆ ಒಂದು ಸಲ ನಮ್ಮಲ್ಲಿಂದ ತರಿಸಿ ನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು ಬೆಳ್ಳಿ ಧಾರಣೆ ಪ್ರಕಾರ ಸರಕುಗಳಿಗೆ ಧಾರಣೆ ಹಾಕಿ ಕಳುಹಿಸುತ್ತೇವೆ

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಸರಾಫು ವ್ಯಾಪಾರಿ,
ಕಿಲ್ಲಾಪೇಟೆ, ಸೇಲಂ, (ದಕ್ಷಿಣ ಇಂಡಿಯಾ)



## Grand Clearing Sale!

ಜಗತ್ಪ್ರಸಿದ್ಧವಾದ ನಮ್ಮ "ಒಟ್ಟೊ ಪುಲಾರಾಮ" ಸುಗಂಧದ ಎರಡು ಬಾಟಲಿಗಳನ್ನು ಮೂರು ರೂಪಾಯಿಗಳಿಗೆ ಕೊಳ್ಳುವವರು ಈ ಕೆಳಗಿನವುಗಳನ್ನು ಧರ್ಮಾರ್ಥವಾಗಿ ಪಡೆಯುವರು —

1 ಕರವಸ್ತ್ರ, 1 ಫೌಂಟೆನ್‌ಪೆನ್, 1 ಕ್ಲಿಪ್ 1 ಹರಿತವಾದ ಚಾಕು 1 ಸುಗಂಧ ಸಾಬೂನು, 1 ಅಂದವಾದ ಸಿಗರೆಟು ಕೇಸು, 12 ಉತ್ತಮ ಮೊನೆಗಳ, 1 ಕೋಪಿಂಗ್ ಪೆನ್ಸಿಲು, 1 ಸೆಟ್ಟು ಗಿಲೀಟಿನ ಗುಂಡಿಗಳು, 1 ಕನ್ನಡಿ, 1 ಬಾಚಣಿಗೆ, 1 ಕತ್ತರಿ, 1 ಕ್ಷೌರದ ಬ್ರಶ್ಶು, 1 ಹರಳಿನ ಉಂಗುರ

ಅಂಚೆವೆಚ್ಚ ಅಣೆ 0—8—0
ಇಂಗ್ಲೀಷಿನಲ್ಲಿ ಬರೆಯಿರಿ

**Indian Stores,**
*5 Beadon Street,*
CALCUTTA



**ಒಮ್ಮೆ ಪರೀಕ್ಷಿಸಿರಿ! ತೃಪ್ತಿ ಹೊಂದಿರಿ!**

**ದಿ ಕ್ರೌನ್ ರಬ್ಬರ್ ಸ್ಟಾಂಪು ಕಂಪೆನಿ,**

ಹೆಡ್ ಆಫೀಸು ಬಲ್ಮರ ರಸ್ತೆ, ಕಂಕನಾಡಿ ಪೋಸ್ಟು,
ಮಂಗಳೂರು, ದ ಕನ್ನಡ

## ರಬ್ಬರು ಮೊಹರುಗಳು

ಇಲ್ಲಿ ಉತ್ತಮವಾದ ಎಯರ್‌ಕುಶನ್ ರಬ್ಬರು ಮೊಹರುಗಳೂ, ಹಿತ್ತಾಳೆ ಇತ್ಯಾದಿ ಲೋಹಗಳಲ್ಲಿಯೂ, ಮಾರ್ಬಲ್‌ನಲ್ಲಿಯೂ ಕೆತ್ತನೆಯ ಕೆಲಸವನ್ನೂ ಬಹಳ ನಾಜೂಕಾಗಿ ಕ್ಲಪ್ತ ಸಮಯದಲ್ಲಿ ಮಾಡಿಕೊಡುತ್ತದೆ

ಹೆಚ್ಚಿನ ಮಾಹಿತಿಯನ್ನು ಪತ್ರಮೂಲಕವಾಗಲೀ, ಆಫೀಸಿನಲ್ಲಿ ಸ್ವತಹ ಬಂದಾಗಲೀ ತಿಳಿದುಕೊಳ್ಳಿರಿ

ಎಮ್ ದೇವದಾಸ ಕಿಣಿ,
ಮೆನೇಜಿಂಗ ಪ್ರೊಪ್ರೈಟರ್.

**ಮದರಾಸಿನ ಹೊಸ ಮಂತ್ರಿಮಂಡಲ.**

ಗವರ್ನರರು ಮದರಾಸಿಗೆ ತಲಪಿದೊಡನೆ ಹೊಸ ಮಂತ್ರಿ ಸಭೆಯನ್ನು ನೇಮಿಸುವ ಕಾರ್ಯವು ನಡಿಯಿತು. ಈ ಸಾರಿಯ ಚುನಾವಣೆಯಲ್ಲಿ ಜಸ್ಟಿಸ ಪಾರ್ಟಿಯವರೇ ಪ್ರಬಲರಾಗಿದ್ದುದರಿಂದ ಪದ್ಧತಿ ಮೇರೆಗೆ ಆ ಪಾರ್ಟಿಯ ಮುಂದಾಳುಗಳಾದ **ದಿವಾನ್ ಬಹದೂರ್ ಮುನಿಸ್ವಾಮಿ** ನಾಯ್ಡುರವರನ್ನು ಗವರ್ನರರು ಆಮಂತ್ರಿಸಿ ಅವರನ್ನು ಪ್ರಧಾನ ಮಂತ್ರಿಯವರಾಗಿಯೂ ಕುಮಾರ ಸ್ವಾಮಿ ರೆಡ್ಡಿಯವರನ್ನು ಎರಡನೇ ಮಂತ್ರಿಯವರಾಗಿಯೂ, ಪಿ. ಟಿ. ರಾಜನರನ್ನು ಮೂರನೇ ಮಂತ್ರಿಯವರನ್ನಾಗಿಯೂ ನೇಮಿಸಿರುವರು. ಮೊದಲಿನ ಮಂತ್ರಿಗಳು ರಾಜಿ ಕೊಟ್ಟರು. ಹೊಸ ಮಂತ್ರಿಗಳು ಶುಭಮುಹೂರ್ತದಲ್ಲಿ ಸೋಮವಾರ ೧೧ ಗಂಟೆಗೆ ತಮ್ಮ ಕಾರ್ಯಭಾರವನ್ನು ವಹಿಸಿಕೊಂಡರು. ಇವರಲ್ಲಿ ಯಾರ್‍ಯಾರು ಯಾವ ಯಾವ ಇಲಾಖೆಗಳನ್ನು ವಹಿಸಿಕೊಳ್ಳುವರೋ ನೋಡಲಿಕ್ಕಿದೆ ನ್ಯಾಯವಿಧಾಯಕ ಸಭೆಯ ಅಧಿವೇಶನವು ನವಂಬರ ೬ನೇ ತಾರೀಕಿಗೆ ಜರಗುವದು ಆಗ ಕೌನ್ಸಿಲಿನ ಅಧ್ಯಕ್ಷರ ಚುನಾವಣೆಯು ನಡೆಯುವದು ಮೊದಲಿನ ಪ್ರಧಾನಮಂತ್ರಿಯವರಾದ ಡೊಕ್ಟರ್ ಸುಬ್ಬರಾಯನರು ಕೌನ್ಸಿಲಿನ ಅಧ್ಯಕ್ಷರಾಗಿ ಚುನಾಯಿಸಲ್ಪಡುವರೆಂಬ ವಾರ್ತೆಯಿದೆ ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿನಿಧಿಗಳು ಡೊಕ್ಟರ ಸುಬ್ಬರಾಯನರ ಪಾರ್ಟಿಗೆ ಸೇರಿದ್ದರು ಸುಬ್ಬರಾಯನರು ಅಧ್ಯಕ್ಷರಾದರೆ ಅವರಿಗೆ ನಂತರ ಯಾವ ಪಾರ್ಟಿಯೂ ಇಲ್ಲ ಇವರ ಕಡೆಯವರು ನಿರಾಶರಾದರು ಮುಸಲ್ಮಾನರಿಗೂ, ಬ್ರಾಹ್ಮಣರಿಗೂ ಮಂತ್ರಿಪದವಿ ಸಿಕ್ಕಿತೆಂಬ ಆಸೆಯು ವ್ಯರ್ಥವಾಯಿತು ಈ ಜಿಲ್ಲೆಯ ಮೂವರು ಮೆಂಬರರಿಗೂ ದಕ್ಷಿಣ ಕನ್ನಡ ಜಿಲ್ಲೆಗೆ ಏನಾದರೂ ಒಳ್ಳೇದನ್ನು ಮಾಡಬೇಕೆಂಬ ಆಸೆಯಿದ್ದರೆ ಇವರು ಇನ್ನಾದರೂ ಮಂತ್ರಿಗಳ ಪಾರ್ಟಿಗೆ ಸೇರುವದು ಉತ್ತಮ. ಆದರೆ ಹಣದ ಅಡಚಣೆ ವಿಶೇಷವಾಗಿರುವುದರಿಂದ ಹೊಸ ಮಂತ್ರಿ ಸಭೆಯವರು ಯಾವ ರೀತಿಯಲ್ಲಿ ಕೆಲಸ ನಡಿಸುವರೋ ನೋಡಲಿಕ್ಕಿದೆ ಅದಲ್ಲದೆ ಹೊಸ ಬದಲಾವಣೆಗಳು ಬೇಗನೇ ಆದರೆ ತಿರಿಗಿ ಹೊಸ ಮಂತ್ರಿಸಭೆ ಆಗಬೇಕಾಗುವದು

**ದಕ್ಷಿಣ ಆಫ್ರಿಕದಲ್ಲಿರುವ ಹಿಂದೀಯರ ದೀನಾವಸ್ಥೆ.**

ದಕ್ಷಿಣ ಆಫ್ರಿಕದಲ್ಲಿಯೂ ಕೆನಿಯಾ ಕೊಲೊನಿಯಲ್ಲಿಯೂ ಅನೇಕ ಮಂದಿ ಹಿಂದೀಯರು ಎಷ್ಟೋ ವರುಷಗಳಿಂದ ವಾಸವಾಗಿರುವರು ದಕ್ಷಿಣ ಆಫ್ರಿಕದಲ್ಲಿರುವ ಹಿಂದಿಯರನ್ನು ಅಲ್ಲಿ ನಿಲ್ಲದಂತೆ ಮಾಡಿ ಅವರು ಇಂಡಿಯಕ್ಕೆ ಹಿಂತಿರಿಗಿ ಬರುವಂತೆ ಮಾಡಬೇಕೆಂಬ ಆಲೋಚನೆಯು ದಕ್ಷಿಣ ಆಫ್ರಿಕದ ಸರಕಾರದಲ್ಲಿ ನಡಿಯುತ್ತಲಿದೆ ಕೆಲವು ವರುಷಗಳ ಹಿಂದೆ ಇಂಡಿಯಾ ಸರಕಾರದವರು ದಕ್ಷಿಣ ಆಫ್ರಿಕದ ಸರಕಾರಕ್ಕೆ ಬರೆದು ಹಿಂದಿಯರನ್ನು ರಕ್ಷಿಸಿದ್ದರು ಅಲ್ಲಿಯ ಬಾಧೆಯನ್ನು ತಾಳಲಾರದೆ ಸುಮಾರು ೧೩,೫೦೦ ಮಂದಿ ಹಿಂದೀಯವರು ಇಂಡಿಯಕ್ಕೆ ಈಗ ಬಂದಿರುವರು. ರಕ್ಷಣೆಮಾಡುತ್ತೇವೆಂದು ಇಂಡಿಯಾ ಸರಕಾರಕ್ಕೆ ಬರೆದರೂ ಟ್ರೇನ್ಸವಾಲಿನಲ್ಲಿರುವ ಹಿಂದಿ ವ್ಯಾಪಾರಸ್ತರೂ ಹಿಂದೀ ಭೂಮಾಲಿಕರೂ ಅಲ್ಲಿಯ ಸರಕಾರದ ಬಾಧೆಯಿಂದ ವ್ಯಾಪಾರವನ್ನೂ ಆಸ್ತಿಯನ್ನೂ ಕಳಕೊಳ್ಳುವ ಸಮಯ ಒದಗಿಯದೆ ಹೊಸ ಕಾಯಿದೆ ಮಾಡಿ ಅನ್ಯಾಯವಾಗದಂತೆ ಮಾಡುತ್ತೇವೆಂದು ಸರಕಾರವು ಹೇಳುತ್ತಿದೆ ಆದರೆ ಇನ್ನು ಎರಡು ವರುಷ ಕಳೆಯದೆ ಹೊಸ ಕಾಯದೆ ಮಾಡಲಿಕ್ಕೇನೇ ಸಾಧ್ಯವಿಲ್ಲವಂತೆ ಇದರಿಂದ ಹಿಂದಿಯರ ಸ್ಥಿತಿಯು ಅಷ್ಟರಲ್ಲಿ ಯಾವ ಸ್ಥಿತಿಗೆ ಬರುವದೋ ಹೇಳಲಸಾಧ್ಯ ಆದರೆ ಇಂಡಿಯದ ಪ್ರತಿನಿಧಿಯಾಗಿ ದಕ್ಷಿಣ ಆಫ್ರಿಕದಲ್ಲಿರುವ ಇಂಡಿಯದಿಂದ ಶ್ರೇಯಸ್ಕರವಾದ ಏಜಂಟರ ಗೋಚರಕ್ಕೆ ಇದೆಲ್ಲವೂ ಬರಲಿಲ್ಲವೆಂದೇ ತೋರುತ್ತದೆ.

**ಪೆಲೆಸ್ತಿನ ದೇಶದ ಅರಬಿಯರೂ, ಯೆಹೂದ್ಯರೂ.**

ಪೆಲೆಸ್ತಿನ ದೇಶದಲ್ಲಿ ಅರಬಿಯರು ಮೂಲನಿವಾಸಿಗಳಾಗಿದ್ದು ಎಲ್ಲಾ ತರದ ಹಕ್ಕು ಸ್ವಾತಂತ್ರ್ಯವುಳ್ಳವರಾಗಿದ್ದರು. ಆದರೆ ಯುರೋಪ ಖಂಡದ ಬೇರೆ ಬೇರೆ ದೇಶಗಳ ಐಶ್ವರ್ಯವಂತರಾದ ಯೆಹೂದ್ಯರು ಪೆಲೆಸ್ತಿನ ದೇಶದಲ್ಲಿ ವ್ಯಾಪಾರಸ್ಥರಾಗಿ ಹೋಗಿ ನೆಲೆನಿಂತು ದೇಶದಲ್ಲಿರುವ ಹೆಚ್ಚಿನ ಆಸ್ತಿಯೆಲ್ಲವೂ ಅವರ ಸ್ವಾಧೀನವಾಗಿ ಮೂಲನಿವಾಸಿಗಳಾದ ಅರಬಿಯರಿಗೆ ಬೇಸಾಯ ಮಾಡಿಕೊಂಡು ಜೀವನಮಾಡುವಷ್ಟು ಸ್ಥಳ ಸಹ ಅವರ ಸ್ವಾಧೀನವಿರುವದಿಲ್ಲ ಅಲ್ಲಿರುವ ಬೇಸಾಯಮಾಡಲಿಕ್ಕೆ ಯೋಗ್ಯವಾದ ಖಾಲಿಸ್ಥಳವು ಸಹ ಯೆಹೂದ್ಯರ ಸ್ವಾಧೀನವಾಗಿದೆ. ಈಗ ಪೆಲೆಸ್ತೀನ ದೇಶದ ಮೇಲಾಧಿಕಾರಿಗಳಾಗಿರುವ ಇಂಗ್ಲೀಷರು ಅರಬಿಯರ ರಕ್ಷಣೆಗಾಗಿ ಕೆಲವು ಕಾಯಿದೆಗಳನ್ನು ಮಾಡಿರುವರು ಇದರಿಂದ ಅರಬಿಯರಿಗೆ ಗುಣಾಂಶವಿದೆ ಯೆಹೂದ್ಯರಿಗೆ ಸ್ವಲ್ಪ ಬಾಧಕವಿದೆ ಯೆಹೂದ್ಯರು ಸಿಟ್ಟುಗೊಂಡು ಹೊಸತಾಗಿ ಸ್ಥಾಪಿಸಲ್ಪಡುವ ಸಂಸ್ಕಾರದಲ್ಲಿ ತಾವು ಭಾಗಿಗಳಾಗುವದಿಲ್ಲವೆಂದು ಹಟಸ್ಥರಾಗಿರುವರು ಬ್ರಿಟಿಷ ಸರಕಾರವು ಏನು ಮಾಡುವದೋ ನೋಡಲಿಕ್ಕಿದೆ

**ಮೈಸೂರು ದಿವಾನರೂ ಆರ್ಥಿಕ ಸಭೆಯ ಸಮ್ಮೇಳನವೂ.**

ಮೈಸೂರು ಅರ್ಥಸಾಧಕ ಮಹಾಸಭೆಯನ್ನು ತೆರೆಯುವ ಸಮಾರಂಭದಲ್ಲಿ ಮೈಸೂರು ದೇಶದಲ್ಲಿ ಆದಷ್ಟು ಹೆಚ್ಚಿಗೆ ವಿದ್ಯುಚ್ಛಕ್ತಿ ಯಂತ್ರಗಳನ್ನು ನದಿಗಳಿಗ ಅಣೆಕಟ್ಟುಗಳನ್ನು ಕಟ್ಟಿಸಬೇಕೆಂದು ಹೇಳಿದುದೇ ಪ್ರಾಮುಖ್ಯ ವಿಷಯವಾಗಿದೆ ಇನ್ನೊಂದು ವಿಷಯವೇನೆಂದರೆ ಮೈಸೂರು ರಾಜ್ಯದಲ್ಲಿ ಕಲ್ಲಿದ್ದಲಿನ ಗನಿಗಳು ಇಲ್ಲದೆ ಇರುವುದರಿಂದ ಮರದ ಇದ್ದಲನ್ನು ತಯಾರಿಸಬೇಕೆಂಬುದು. ಈ ರೀತಿಯಲ್ಲಿ ಮಾಡಿದರೆ ಬಹಳ ಕಡಿಮೆ ಖರ್ಚಿನಿಂದ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬಹುದು ಎಂಬದು ಅವರ ಆಲೋಚನೆ ಇದಲ್ಲದೆ ಕಬ್ಬಿಣದ ತಗಡುಗಳನ್ನು ತಯಾರಿಸುವ ಯಂತ್ರಸಾಧನೆಯನ್ನು ಭದ್ರಾವತಿಯಲ್ಲಿ ಸ್ಥಾಪಿಸಬೇಕೆಂಬುದು ಇನ್ನೊಂದು ಆಲೋಚನೆ ಇದಲ್ಲದೆ ಕೈಗಾರಿಕೆ, ಬೇಸಾಯಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಮೈಸೂರು ಯುನಿವರ್ಸಿಟಿಯಲ್ಲಿಯೂ ಬೆಂಗಳೂರಿನ ಇಂಡಿಯನ್ ಸಾಯನ್ಸ್ ಇನ್ಸ್ಟಿಟ್ಯೂಟಿನಲ್ಲಿಯೂ ಶೋಧನಾ ಕಾರ್ಯಗಳನ್ನು ನಡಿಸಲು ಅನುಕೂಲತೆ ಮಾಡಬೇಕೆಂದೂ ಆಲೋಚನೆಯಿಂದಿರುವರು ಈ ಆಲೋಚನೆಗಳನ್ನು ಕಾರ್ಯರೂಪಕ್ಕೆ ತರಲು ಯೋಗ್ಯರಾದವರನ್ನು ಇಂಡಿಯದಲ್ಲಿಯೇ ಹುಡುಕಿದರೆ ಸಿಕ್ಕಲಾರರು. ಆದುದರಿಂದ ಪರದೇಶಗಳಿಂದ ಯಂತ್ರಸಾಧನೆಗಳನ್ನು ಕ್ರಯಕ್ಕೆ ಪಡೆದು ಅವುಗಳನ್ನು ನಡಿಸುವ ವಿದ್ವಾಂಸರನ್ನು ಪರದೇಶಗಳಿಂದ ಕರತಂದು ನಿಲ್ಲಿಸಿ, ರೈಲುವೇ ಪಟ್ಟಿಗಳೂ ಇಂಜನುಗಳೂ, ರೈಲುವೆಗಳಿಗೆ ಬೇಕಾದ ಎಲ್ಲಾ ಸಾಮಾನುಗಳು ಕಾಗದ, ಪಿಂಗಾಣಿ, ಬೆಂಕಿ ಪೆಟ್ಟಿಗೆ, ಗ್ಲಾಸು ಇವುಗಳ ಕಾರ್ಖಾನೆಗಳನ್ನು ಈಗಲೇ ಮೈಸೂರು ದೇಶದಲ್ಲಿ ಸ್ಥಾಪಿಸಿದರೆ ದೇಶಕ್ಕೆ ಬೇಕಾಗುವ ಸಾಮಾನುಗಳು ಕೂಡಲೇ ತಯಾರಾಗುವವು ಮಾತ್ರವಲ್ಲ ಶೋಧನೆಯಲ್ಲಿ ಆಯಷ್ಟು ಕಳೆಯುವ ಆಗತ್ಯವೂ ಇಲ್ಲ ಊರಿನ ಜನರಿಗೆ ಕೆಲಸವೂ ಸಿಕ್ಕಿದಂತಾಗುವದು ಸರಕಾರಕ್ಕೆ ಸುಂಕವೂ ಸಿಕ್ಕುವದು

**ನೊನ್ ಗಜೆಟೆಡ್ ಆಫೀಸರರ ಸಂಬಳ.**

ಮದರಾಸು ಸಂಸ್ಥಾನದಲ್ಲಿರುವ ಡಿಪ್ಯುಟಿ ಕಲೆಕ್ಟರಿಗಿಂತ ಕೆಳಗಿನ ಅಧಿಕಾರಿಗಳೆಲ್ಲರೂ ನೊನ್ ಗಜೆಟೆಡ್ ಆಫೀಸರರಲ್ಲಿ ಸೇರುವರು ದೇಶದ ಆಳ್ವಿಕೆಯ ನೌಕರರಲ್ಲಿ ಇವರು ಬೆನ್ನಾದಿ ಕಲ್ಲಿನಂತೆ ಇರುವರು ಎಲ್ಲಾ ತರದ ಕಂದಾಯ, ತೆರಿಗೆ ಮುಂತಾದವುಗಳನ್ನು ವಸೂಲುಮಾಡುವ ಕೆಲಸ ಇವರದಾಗಿದೆ ಇವರು ಬೆಳಗ್ಗಿನಿಂದ ರಾತ್ರೆ ೧೦ ಗಂಟೆ ವರೆಗೂ ಕೆಲಸಮಾಡುತ್ತಿರುವರು ಆದರೂ ಪೊಲೀಸ ಇಲಾಖೆ, ಟಪ್ಪಾಲು ಇಲಾಖೆ, ತಂತಿ ಇಲಾಖೆ ಇನ್ನು ಅನೇಕ ತರದ ಸುಖ ಜೀವಿಗಳಿರುವ ಇಲಾಖೆಯವರಿಗಿಂತಲೂ ಇವರಿಗೆ ಸಂಬಳವು ಬಹಳ ಕಡಿಮೆ ರಾತ್ರಿ ಹಗಲು ಕೆಲಸಮಾಡುವ ಈ ಇಲಾಖೆಯವರು, ವರುಷ ಕ್ಕೊಂದಾವರ್ತಿ ಸಭೆ ಕೂಡಿ ತಮಗೆ ಸಂಬಳ ಹೆಚ್ಚಿಸಬೇಕೆಂದು ಸರಕಾರಕ್ಕೆ ತಿಳಿಸುತ್ತಿರುವರು ಆದರೆ ಸಂಬಳದ ಸ್ಕೇಲು ಹೆಚ್ಚಾಗುತ್ತಾ ಬರುವದು ತಂತಿ ಟಪ್ಪಾಲು ಇಲಾಖಾ ನೌಕರರಿಗೂ ಗಜೆಟೆಡ್ ಆಫೀಸರರಿಗೂ ಮಾತ್ರವೇ ಆಗಿದೆ ಸರಕಾರದವರು ಈ ಇಲಾಖೆಯವರಿಗೆ, ಟಪ್ಪಾಲು ಇಲಾಖೆಯವರ ಸಂಬಳದಲ್ಲಿ ಕಡಿಮೆಮಾಡಿ ಸಂಬಳ ಹೆಚ್ಚು ಕೊಟ್ಟರೆ ಬಹಳ ಕಷ್ಟ ಪಡುವ ಈ ನೌಕರರನ್ನು ರಕ್ಷಿಸಿದಂತಾಗುವುದು. ಟಪ್ಪಾಲು ಇಲಾಖೆಯ ಸಂಬಳವು ಮಿತಿಮೀರಿದೆ ಇವನ್ನು ವಿವರವಾಗಿ ಹೇಳುವ ಅಗತ್ಯವಿಲ್ಲ. ಎರಡು ಇಲಾಖೆಯವರ ಸಂಬಳ ಹೋಲಿಸಿ ನೋಡಿದರೆ ತಿಳಿಯುವುದು.

# ನೋಟಗಳು.

## NOTE....S

ನಮ್ಮ ಮಂಗಳೂರಿನ ವಿಠೋಬ ದೇವಸ್ಥಾನದಲ್ಲಿ ವರ್ಷಂಪ್ರತಿ ನಡೆಯುವಂತೆ ಸಪ್ತಾಹ ಪ್ರಾರಂಭವಾಗಿದೆ. ಊರ ಜನರ ಹಣ ಸಹಾಯ ಕಡಿಮೆ ಇದ್ದರೂ ಸಿನೆಮಾ ಹಣದಿಂದ ಕೆಲಸ ಮುಂದರಿಸಿತು.

* * * *

ವಿಠೋಬನಿಗೆ ಸಿಟ್ಟೇರಿ, ಆತನ ಎದುರುಗಡೆ ಮನೆಯಲ್ಲಿರುವ ಅಷ್ಟ ಮಂದಿಯವರ ಜುಗಾರಾಟ ನಮ್ಮ ಪೋಲೀಸರಿಗೆ ತೋರಿಸಿಯೇ ಬಿಟ್ಟನು ತೋರಿಸಿದ್ದೇ ತಡ, ರಾತ್ರೆ ಎರಡು ಗಂಟೆ ಸಮಯಕ್ಕೆ ಆಡಲು ಕೂತವರನ್ನು ಕೈದುಮಾಡಿ, ಪೋಲೀಸ್ ಸ್ಟೇಷನಿಗೆ ಒಯ್ದು ಆಯಿತು

* * * *

ನಂಬ್ರದ ವಿಚಾರಣೆ ಮುಂದಿನಿಂದ, ಸತ್ಯಾಗ್ರಹದ ಸಮ್ಮಂಧ ಪೋಲೀಸರಿಗೆ ಪುರುಸತ್ತು ಇರುವದಿಲ್ಲವೆಂದೆಣಿಸಿದರೇನೊ.—

* * * *

ಉಡುಪಿಯಲ್ಲಿ ೧೪೪ನೇ ಪ್ರಕರಣ ಉಲ್ಲಂಘಿಸಿದುದಕ್ಕೆ ಈರ್ವರಿಗೆ ಮೂರು ಮತ್ತು ನಾಲ್ಕು ತಿಂಗಳ ಸಜೆ ಈ ಸಾರಿ ವಾಯಿದೆ ಆದ ಪ್ರಕರಣಕ್ಕೆ ಇನ್ನೂ ಎರಡು ತಿಂಗಳ ಅವಧಿ ಮುಂದರಿಸೋಣಾಗಿಯದೆ.

* * * *

ವಾಯಿದೆ ಹೋದರೂ ಥಕ್ಕನೆ ಊರ್ಜಿತಕ್ಕೆ ತರುವ, ಪ್ರಕರಣದಲ್ಲಿ ಇದು ಒಂದಾಗಿದೆ ಇದಕ್ಕೆ ಯಾವ ಸಂಕ್ಷನೂ ಬೇಡ

* * * *

ವಾಯಿದೆ ಆಗುವ ಪ್ರೆಸ್ ಆಕ್ಟು ಏನು ಮಾಡುವುದು, ಯಾವ ಹೊಸ ಆಕ್ಟ ಹುಡುಕುವುದು, ಶೋಧನೆಯಲ್ಲಿದ್ದಾರೆ. ಹುಕುಂ ಬಂದಿನಿಂದ

* * * *

ರೌಂಡ್‌ಟೇಬಲ್ ಕಾನ್ಫರೇನ್ಸಿಗೆ ಹೋದ ಇಂಡಿಯದ ಪ್ರತಿನಿಧಿಗಳಿಗೆ ಸಿಕ್ಕಿತು ಉಡುಗಿರೆ ಇಂಪಿರಿಯಲ್ ಕಾನ್ಫರೆನ್ಸ ಸಮಯದಲ್ಲಿ, ಇವರಾರೆಂದು ನೋಡುವ ಅಗತ್ಯಬೀಳಲಿಲ್ಲ ಸರಕಾರದ ಆಧಿತ್ಯ ಹೆಚ್ಚಾಗಿ ಒಬ್ಬರು ಸಾಕಾಪ್ಪಾ ಎಂದು ಬಿಟ್ಟರು ಮುಂದಕ್ಕೆ ರೌಂಡ್‌ಟೇಬಲ್

* * * *

ಪಂಡಿತ ಜವಾಹಿರಲಾಲರಿಗೆ ಎರಡು ವರ್ಷ ಕಠಿಣ ಸಜೆ ಕೊಡುವಾಗ ಕಠಿಣ ಶಬ್ದ ಮ್ಯಾಜಿಸ್ಟ್ರೇಟರು ಮರಿಯುವರೇ ಇಲ್ಲ ಕಡಿಮೆಯಾದುದಕ್ಕೆ ೬೦೦ ರೂಪಾಯಿ ಇದೆ, ಅಲ್ಪ ಕಾಲದ ಶಿಕ್ಷೆ ಕೊಟ್ಟು ಪುನಃ ಪುನಃ ನಂಬ್ರಗಳ ಬಾಧೆ ತಪ್ಪಿಸಲು, ಈ ಸಲ ಒಳ್ಳೇ ತಪ್ಪುಗಳನ್ನು ಹುಡುಕಿ ಭರ್ತಿ ಎರಡು ವರ್ಷ.

---

**ವಿದ್ಯಾ ಇಲಾಖೆಯ ಖರ್ಚು ಕಡಿಮೆಮಾಡುತ್ತಾರಂತೆ.**

ಈಗ ಸರಕಾರಕ್ಕೆ ಸಿಕ್ಕುವ ಆದಾಯ ಕಡಿಮೆಯಾದುದರಿಂದ ವಿದ್ಯಾ ಇಲಾಖೆಯಲ್ಲಿಯೂ, ವೈದ್ಯ ಇಲಾಖೆಯಲ್ಲಿಯೂ ಖರ್ಚನ್ನು ಕಡಿಮೆಮಾಡಲು ಆಲೋಚನೆಯಾಗಿ ಒಜೆಟಿನ ಅಂದಾಜಾಗಿಯದಂತೆ ಈ ಇಲಾಖೆಯಲ್ಲಿ ಖರ್ಚು ಕಡಿಮೆಮಾಡುವದಾದರೆ ಡೈರೆಕ್ಟರ, ಡಿಪ್ಯುಟಿ ಡೈರೆಕ್ಟರುಗಳು ಆಫೀಸ ಮೆನೇಜರರು ಎಜ್ಯುಕೇಶನ ಆಫೀಸರರು ಇನ್ಸ್‌ಪೆಕ್ಟ್ರೆಸಂವಳ್ಳ, ಕೊಲೆಜುಗಳ ತಿಬಂದಿ, ಟ್ರೈನಿಂಗ್ ಶಾಲೆಗಳ ತಿಬಂದಿ, ಡಿಪ್ಯುಟಿ ಇನ್ಸಪೆಕ್ಟರರು, ಸಬ್ ಅಸಿಸ್ಟಾಂಟ ಇನ್ಸಪೆಕ್ಟ್ರೆಸ್ಸರವರು ಇವರ ಸಂಬಳ ಮತ್ತು ಭತ್ತೆ ಕಡಿಮೆಮಾಡಿದರೆ ಮಾತ್ರವೇ ಸಾರ್ಥಕವಾದೀತು ಒರೆ ಎಲಿಮೆಂಟರಿ ಶಾಲೆಗಳಲ್ಲಿ ಕೆಲಸಮಾಡುವ ಬೋರ್ಡು ಮತ್ತು ಮುನಿಸಿಪಲ್ ಪಂಚಾಯತ ಶಾಲೆಗಳ ಉಪಾಧ್ಯಾಯರ ಸಂಬಳವು ಈಗಲೇ ಕಡಿಮೆ ಇರುವುದರಿಂದ ಅದನ್ನು ಕಡಿಮೆಮಾಡಲೂ ಬಾರದು ಅವರ ಸಂಖ್ಯೆಯನ್ನು ಕಡಿಮೆ ಮಾಡಲೂ ಬಾರದು ಎಯಿಡೆಡ್ ಶಾಲೆಗಳ ಗ್ರೆಂಟನ್ನು ಕಡಿಮೆ ಮಾಡಿದರೂ ಅನ್ಯಾಯವಾಗುವದು. ಎಲಿಮೆಂಟರಿ ಶಾಲಾ ಉಪಾಧ್ಯಾಯರು ಎಲಿಮೆಂಟರಿ ವಿದ್ಯಾಭ್ಯಾಸದ ಜೀವಾಳವೇ ಆಗಿರುವರು ನ್ಯಾಯವಿಧಾಯಕ ಸಭೆಯ ಮೆಂಬರರು ಈ ಕಡೆ ನಿಗಾಕೊಡಬೇಕಾಗಿದೆ

# ನೋಟೀಸು.

**ಮೂಡು ಕೆರಾರ ಪಂಚಾಯಿತಿ ಕೋರ್ಟಿನಲ್ಲಿ**

C S No 41/1930

ಬಿಡಗ ಉಳಿದಾಡಿ ಗ್ರಾಮದ (ವಾದಿ) ಹಸನ ಬ್ಯಾರಿ ಮಗ ಶೇಕ ಅಬ್ದುಲ್ಲಾ ಬ್ಯಾರಿಗೆ ತಿಳಿಯಪಡಿಸುವುದೇನಂದರೆ:—

ಬಿರುಪುರ ಸಾಲ್ಯರ ರಾಮಚಂದ್ರ ಪೈ ನಿನ್ನ ಮೇಲೆ ದಾಖ್ಲು ಮಾಡಿದ ಈ ವ್ಯಾಜ್ಯದ ವಿಚಾರಣೆಯು ತಾರೀಕು ೫—೧೧—೩೦ಕ್ಕೆ ಇಲ್ಲಿ ಇಡಲ್ಪಟ್ಟಿದೆ. ಅಂದು ನೀನು ಹಾಜರು ಆಗ ತಪ್ಪಿದರೆ ಅದು ಏಕ ಪಕ್ಷ ವಿಚಾರಣೆಯಿಂದ ತೀರ್ಮಾನವಾಗುವುದು.

ಮೂಡು ಕೆರಾರ ಪಂಚಾಯಿತಿ ಕೋರ್ಟು ಇಲ್ಲಿ ತಾರೀಕು ೨೭—೧೦—೩೦ — **R S. Baglodi,** ಪ್ರೆಸಿಡೆಂಟ್.

---

## ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ಸಂಖ್ಯೆ ೫೪೧/೧೯೩೦

ಗೋಪಾಲ ಪೈ, ಪಾಣೆಮಂಗಳೂರು ಚರ್ಚ ಪೈಯವರ ಮಗ ಪುತ್ತೂರು ಕಸಬಾ ಗ್ರಾಮದಲ್ಲಿರುವವ——ವಾದಿ

೧ ತಿಮ್ಮಣ್ಣ ಭಟ್ಟ, ಸೂಡ ಭೀಮಯ್ಯನವರ ಮಗ, ಪುತ್ತೂರು ತಾಲೂಕು ಕಸಬಾ ಗ್ರಾಮಸ್ಥ, ೨ ತಿಮ್ಮಣ್ಣ ಭಟ್ಟ, ಪುತ್ತೂರು ನಾರಾಯಣ ಭಟ್ಟರ ಮಗ, ಪುತ್ತೂರು ತಾಲೂಕು ಇದ್ಯಿದು ಗ್ರಾಮಸ್ಥ—ಪ್ರತಿವಾದಿರು

ಮೇಲ್ಕಂಡ ವ್ಯಾಜ್ಯವು ಸದರಿ ಕೋರ್ಟಿನಲ್ಲಿ ೧೯೩೦ನೆ ಇಸವಿ ನವಂಬರ ತಾ ೧೫ನೇ ದಿವಸ ಹಗಲು ೧೦ ಘಂಟೆಗೆ ಪ್ರತಿವಾದಿರ ಹಾಜರಾತಿಯ ಬಗ್ಗೆ ವ ಸ್ಟೇಟುಮೆಂಟು ಬಗ್ಗೆ ಕೂಡಾ ಇಟ್ಟಿರುವುದರಿಂದ, ಸದರಿ ವಾಯಿದೆ ದಿವಸ ಪ್ರತಿವಾದಿರು ಸದರಿ ಕೋರ್ಟಿನ ಮುಂದೆ ಹಾಜರಾಗಲು ತಪ್ಪಿದ್ದಾದರೆ ಅವರನ್ನು ಗೈರ್ಹಾಜರಿ ಮಾಡಿ ದಾವೆಯನ್ನು ಏಕಪಕ್ಷ ವಿಚಾರಣೆಯಿಂದ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸಿಯದೆ.

ಪುತ್ತೂರು, ೨೦—೧೦—೩೦ — **K. Krishnaraya Shenai** Pleader for Plff.

---

**ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.**

O S No 430/30

ಸುಬ್ರಾಯ ಶ್ಯಾನುಭಾಗ ಎಲ್ಲಂಗಳ ವೆಂಕಯ್ಯ ಶ್ಯಾನುಭಾಗರ ಮಗ, ಮಧೂರು ಗ್ರಾಮದಲ್ಲಿರುವವ——ವಾದಿ

ಮತ್ತು

ಭಾಗೀರಥಿ ಅಮ್ಮ ನೀರಾಳ ಶಂಕರನಾರಾಯಣ ಹೊಳ್ಳರ ವಿಧವೆ, ಮಧೂರು ಗ್ರಾಮದಲ್ಲಿರುವವಳು——ಪ್ರತಿವಾದಿ

ಅಡವು ದಸ್ತಾವೇಜಿನ ಬಡ್ಡಿ ಐವಜು ವಸೂಲಿ ಕುರಿತು ವಾದಿಯು ಪ್ರತಿವಾದಿಳ ಮೇಲೆ ದಾಖ್ಲು ಮಾಡಿದ ಸದರಿ ವ್ಯಾಜ್ಯವು ತಾ ೮—೧೧—೩೦ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ತನ್ಖಿಗೆ ಇಟ್ಟಿದೆ ಆ ಕುರಿತು ಪ್ರತಿವಾದಿಳ ಆಕ್ಷೇಪಣೆ ಇದ್ದ ಪಕ್ಷದಲ್ಲಿ ಸದರಿ ತಾರೀಕಿನ ಒಳಗೆ ಮೇಲ್ಕಂಡ ಕೋರ್ಟಿನಲ್ಲಿ ದಾಖ್ಲು ಮಾಡಬೇಕೆಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ

ಕಾಸರಗೋಡು, ೨೭—೧೦—೩೦ — **C Rama Rao** ವಾದಿ ಕಡೆ ವಕೀಲ್

---

# WANTED.

A Secondary grade trained mistress on Rs 27—1 (Annual)—37 for the Coondapur Board Higher Elementary Girls' School.

*Apply to the*

**President,**

TALUK BOARD, COONDAPUR

---


**The Cochin Soap Works,** IRENJALAKUDA

**ದಿ ಕೊಚ್ಚಿನ್ ಸೋಪ್ ವರ್ಕ್ಸ್.** ಇರಿಂಜಾಲ್‌ಕುಡ

BABY BORAX SOAP TRADE MARK

ಕೊಚ್ಚಿ ವ ತ್ತು ಮದರಾಸು ಪಟ್ಟಣಗಳಲ್ಲಿ 1928 - '29 — '30ನೇ ವರ್ಷಗಳಲ್ಲಿ ನಡೆದ "ಎಕ್ಸಿಬಿಶನ್ಸ್"ಗಳಲ್ಲಿ ಬೆಳ್ಳಿಭಂಗಾರದ ಪದಕಗಳಿಂದಲೂ, ಅನೇಕ ಯೋಗ್ಯತಾ ಪತ್ರಗಳಿಂದಲೂ ಬಹುಮಾನಿಸಲ್ಪಟ್ಟ

ಬೇಬಿ ಬಾರೆಕ್ಸ್ ಸೋಪ್, ಲಿಟ್ಲ್ ಫ್ಲವರ್ ರೋಸ್ ಸೆಂಟೆಡ್ ಸೋಪ್, ಜೋನ್ಸನ್ಸ್ ಬಾರ್ ಸೋಪ್, ಕೋಲ್ ಟಾರ್ ಸೋಪ್ ಮುಂತಾದ ಹೆಸರುವಾಸಿಯಾದ ಸಾಬೂನುಗಳನ್ನು ತಯ್ಯಾರು ಮಾಡುವ ಸಂಸ್ಥೆಯಾಗಿರವುದು

ಬೇಬಿ ಬಾರೆಕ್ಸ್ ಸೋಪ್—ಹಿಂದೂಸ್ಥಾನದ ಉತ್ತಮ ಉತ್ಪತ್ತಿ, ಬಟ್ಟೆ ಒಗೆಯುವದಕ್ಕೂ ಮೈ ತೊಳೆಯಲಿಕ್ಕೂ ಉಪಯೋಗಿಸಬಹುದು. ಪ್ರಾಣಿಗಳ ಕೊಬ್ಬು ಅಥವಾ ಅಪಾಯಕರವಾದ ಮಿಶ್ರಣಗಳಿಂ ವಿರಹಿತವಾಗಿರುವುದು ಅಲ್ಲದೆ ಎಲ್ಲಾ ಸೋಪುಗಳ ಇಸ್ತ್ರೀಯದಲ್ಲಿ ತಯಾರಿಸುವ ಸಾಬೂನುಗಳನ್ನ ಸರಿಹೋಲುವವು ಸುಲಭ ಬೆಲೆ ಒಂದು ಪೌಂಡಿನ ಕ್ರಯ 6 ಆಣೆ ಮಾತ್ರ. ಮೆಲ್ಲನೆ ಸವೆಯುವವು ಹೆಚ್ಚು ಕಾಲ ವರೆಗೆ ಬರುವವು,

ಲಿಟ್ಲ್ ಫ್ಲವರ್ ರೋಸ್ ಸೆಂಟೆಡ್ ಸೋಪ್—ಸ್ನಾನಕ್ಕೆ ಸಾಬೂನುಗಳಲ್ಲಿ ಉತ್ಕೃಷ್ಟವಾಗಿರುವವು ಗುಲಾಬಿ ಮತ್ತು ಜಿಸಮಿನ್ ಸುಗಂಧ ಎಣ್ಣೆಗಳಿಂದ ಕೂಡಿರುವುಗಳು ಒಂದು ೧ಕ್ಕೆ ಕ್ರಯ ೨ಆಣೆ ಮಾತ್ರ

ಜೋನ್‌ಸನ್ಸ್ ಬಾರ್ ಸೋಪ್—(೨ ಪೌಂಡುಗಳ ಬಾರ್) ಬಟ್ಟೆಗಳು ತೊಳೆಯಲು ಉಪಯೋಗಿಸಬಹುದು, ಕೆಲಸವು ಅತೀ ಶೀಘ್ರ, ಪ್ರಯೋಜನವು ಬಹಳವಾಗಿರುವುದ ಬಟ್ಟೆಗಳನ್ನು ಬಹಳ ಜಾಗ್ರತೆಯಿಂದ ಶುಚಿಪಡಿಸುವುದು ಬಾರು ೧ಕ್ಕೆ ೪ಆಣೆ ರಚನೆಗೆ ಯಾವತರದ ಹಾನಿಯೂ ಉಂಟುಮಾಡುವುದಿಲ್ಲ, ಅದನ್ನು ಮತ್ತಷ್ಟು ಬಲವಂತವನ್ನಾಗಿ ಮಾಡುತ್ತದೆ

ಕೋಲ್‌ಟಾರ್ ಸೋಪ್—ಚಾಲ್‌ಮುಗ್ರ ಹೂವಿನ ಎಣ್ಣೆಯಿಂದ ಕೂಡಿರುವುದು ಹಾನಿಕರವಲ್ಲ ಪುಟ್ಟ ಮಕ್ಕಳಿಗೂ ಕೂಡ ಉಪಯೋಗಿಸಬಹುದು ಚರ್ಮ ರೋಗಕ್ಕೆ ದಿವ್ಯೌಷಧ

ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸೋಲ್ ಏಜಂಟರು—

ಮೆಸರ್ಸ್ ಬೋಳಂತೂರು ಸರ್ವೋತ್ತುಮ ಪ್ರಭು, ಮಂಗಳೂರು.

ಕೆ. ಜೆ ಲಾಜರ್, ಮೆನೇಜರ್ ಮತ್ತು ಎಕ್ಸ್‌ಪರ್ಟ್.

ಬಂಗಾರದ ಪದಕ ಹಾಗೂ ಯೋಗ್ಯತಾ ಪತ್ರಗಳಿಂದ ಬಹುಮಾನ ಹೊಂದಲ್ಪಟ್ಟವರು

ಏಜಂಟರು ಬೇಕಾಗಿರುವರು



"If every Wife knew what every Widow knows every Husband would be Insured"

PLACE YOUR LIFE ASSURANCE WITH

**THE SOUTH INDIAN**

Securing for your clients —

1 Low rates of Premium

2. Liberal Policy Conditions.

AND FOR YOURSELF

An Agency with attractive Terms of Commission and Salary in

**The South Indian General Assurance Co, Ltd.,**

Anywhere in CANARA DISTRICTS & HYDERABAD STATE

For terms of Agency please apply to —

H R K IYENGAR Chief Agent

The S I G A Co Ltd, Sanyasigudda MANGALORE

Managing Agents -

K C PANDALAI & CO

7 8 Mclean Street G T MADRAS

**ಜೀವವಿಮೆ ಮಾಡುವವರು**

ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್ಡ್‌ನಲ್ಲಿ ವಿಮೆ ಮಾಡಿರಿ.

ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!

**ಪ್ರಿಮಿಯಂ ದರಗಳು ಕಡಿಮೆ!**

**ಶರ್ತಗಳು ತೀರಾ ಸುಲಭ!!**

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ

**ಧಾರಾಳವಾದ ಕಮಿಶನೂ, ಕೈತುಂಬಾ ಸಂಬಳವೂ ದೊರಕುವುದು**

(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)

ಚೀಫ್ ಏಜಂಟರು—

ಎಚ್. ಆರ್. ಕೆ. ಅಯ್ಯಂಗಾರ್, ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.

ದಿ ಎಸ್ ಐ. ಜಿ ಎ ಕಂಪೆನಿ ಲಿಮಿಟೆಡ್, ಸನ್ಯಾಸಿಗುಡ್ಡೆ ಮಂಗಳೂರು

ಮೇನೇಜಿಂಗ್ ಏಜಂಟರು —

ಕೆ ಸಿ ಪಾಂಡಲೆ ಎಂಡ್ ಕೋ.

7-8 ಮೆಕಲೀನ್ ಸ್ಟ್ರೀಟ್, ಜಿ ಟಿ ಮದ್ರಾಸು



ಸುಲಭ ಕ್ರಯ ಧಾರಾಳ ಫಲ

**ದಂತಧಾವನ ಚೂರ್ಣ ಟೂತ್ ಪೌಡರ್.**

ಎಲ್ಲಾ ವಿಧದ ಹಲ್ಲುನೋವುಗಳನ್ನೂ ಹಲ್ಲುಗಳ ಸ್ವಾಸ್ಥ್ಯ ರೋಗಗಳನ್ನೂ ವಾಸಿಗೊಳಿಸುವುದು ಹಲ್ಲುಗಳ ಎಡೆಯಿಂದ ಒಸರುವ ರಕ್ತ, ಕೀವು ಮೊದಲಾದವುಗಳನ್ನು ನಿಲ್ಲಿಸುವುದು. ಬಾಯಿಯ ದುರ್ಗಂಧವನ್ನೂ ಹಲ್ಲುಗಳ ಇನ್ನಿತರ ದೋಷಗಳನ್ನೂ ದೂರ ಮಾಡಿ ಯಾವಾಗಲೂ ಹಲ್ಲುಗಳು ಶುಚಿಯಾಗಿದ್ದು ಸುವಾಸನೆಯಿಂದಿರುವಂತೆಯೂ ಅತ್ಯುಪಯೋಗಕರವಾಗಿರುವುದು ಪೆಕೆಟು ೧ಕ್ಕೆ ೦—೨—೦ ಡಜನ ಪೆಕೆಟುಗಳಿಗೆ ೧—೪—೦. ಇವುಗಳಲ್ಲದೆ ಮತ್ತೂ ಉತ್ಕೃಷ್ಟವಾದ ಆಯುರ್ವೇದ ಔಷಧಗಳೂ ಮಾರಾಟಕ್ಕೆ ಸಿದ್ಧವಾಗಿವೆ ಆಸವ, ಅರಿಷ್ಟ ಭಸ್ಮ ಚೂರ್ಣ ಕಷಾಯ, ಲೇಹ, ತೈಲ ಮೊದಲಾದವುಗಳು ನಮ್ಮಲ್ಲಿ ಆಗಾಗ್ಗೆ ಹೊಸತಾಗಿ ತಯಾರಿಸಲ್ಪಡುವವು ದೂರದವರು ಮತ್ತು ಹೊರದೇಶದವರು ಪತ್ರ ಮೂಲಕ ರೋಗಿಯ ಮತ್ತು ರೋಗಲಕ್ಷಣಗಳನ್ನು ತಿಳಿಸಿದಲ್ಲಿ ಯುಕ್ತವಾದ ಔಷಧಗಳನ್ನು ಟಪ್ಪಾಲುದ್ವಾರಾ ಕಳುಹಿಸಲಾಗುವುದು ಹೆಚ್ಚಿನ ಮಾಹಿತಿ ಬಗ್ಗೆ ಮತ್ತು ಚಿಕಿತ್ಸೆ ಅನುಭವಗಳ ಕುರಿತು ಕೆಳಗಿನ ವಿಳಾಸಕ್ಕೆ ಬರೆಯಿರಿ

ಹೆಚ್ಚಿನ ಸಂಗತಿಗಳನ್ನು ತಿಳಿಯಬೇಕಾದವರಿಗೆ ಮಲಯಾಳದಲ್ಲಿ ಮತ್ತು ಕನ್ನಡದಲ್ಲಿ ಔಷಧ ಪಟ್ಟಿ ಇನಾಂ

ಪಿ ಕರುಣಾಕರ ವೈದ್ಯರ್.

ಆರೋಗ್ಯಾಮೃತ ಔಷಧಾಲಯ ಕ್ಯಾಂಪ ಬಜಾರ್ ಕಣ್ಣಾನೂರು.

P. KARUNAKARAN VYDIAR.
Arogiamritha Aushadhalaya
Camp Bazaar, CANNANORE.



ರಿಸ್ಟ್‌ವಾಚ್ ಉಚಿತ.

ಒಂದು ಜೇಬಿನಲ್ಲಿಡುವ ಗಡಿಯಾರ ಉಚಿತವಾಗಿ ದೊರೆಯುತ್ತದೆ

ದದ್ರು ವಿನಾಶಕ—ಗಜಕರ್ಣ ಕಜ್ಜಿಗಳ ಮೇಲೆ ೨೪ ತಾಸುಗಳಲ್ಲಿ ಖಂಡಿತ ಗುಣಕೊಡುವ ಮುಲಾಂ ಕ್ರಯ ೪ ಆಣೆ ೧೨ ಡಬ್ಬಿಗಳ ಮೇಲೆ ಒಂದು ಟ್ರಾನ್ಸಿಸು ೨೪ ಡಬ್ಬಿಗಳಿಗೆ ೧ ರಿಸ್ಟ್‌ವಾಚ್ ಉಚಿತ ಸಿಗುವದು ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ಕಿಂಗ್ ಜಾರ್ಜ ಕೊರೋನೇಶನ್ ಕಂಪನಿ ಮುಂಬಾಯಿ



## ಕೊ-ಒಪರೇಟಿವ್ ಸೊಸ್ಯಾಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರ್ಮಗಳು, ರಿಜಿಸ್ತ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

**ಶಾರದಾ ಛಾಪಖಾನೆ.**

ರಥಬೀದಿ, ಮಂಗಳೂರು.

## ಅನುಕ್ರಮಣಿಕೆ.

ಅಗ್ರಲೇಖ.

ರೌಂಡ್‌ಟೇಬಲ್ ಕೊನ್ಫರೆನ್ಸ್ . . . . . ೪
ಸ್ಫುಟವಿಚಾರಗಳು . . . . ೬
ನೋಟಿಸ್‌ಗಳು . . . . . . ,

ವರ್ತಮಾನ ಸಂಗ್ರಹಗಳು

ವಿದೇಶ ವರ್ತಮಾನ . . . . . ೪
ಒಳದೇಶ ವರ್ತಮಾನ . . . . ೪-೯
ದಕ್ಷಿಣ ಕನ್ನಡ—ಮಂಗಳೂರು, ಮೂಲ್ಕಿ, ಫರಂಗಿಪೇಟೆ, ಉಡುಪಿ ಕೋಟೂರು ಜೋಗಟ್ಟೆ, ಗುರುಪುರ, ಮುಲ್ಲಾರು, ಕಲ್ಲಡ್ಕ, ಪಾಣೆ ಮಂಗಳೂರು . . . ೯
ವಿವಿಧ ಸಮಾಚಾರಗಳು . . ೧೧
ಹಾದಿಯನ್ನೇ ಕೊಳ್ಳಿರಿ . . ೧೪
ಗ್ವಾಲಿಯಾರ್ . ,
ಹಲ್ಲಿಲ್ಲದ ನಗೆಯು ಪ್ರಪಂಚವನ್ನೇ ಆವರಿಸಿತು ೨
ಮೈಸೂರು ಸಂಸ್ಥಾನದ ಸ್ತ್ರೀಯರ ಕಾನ್ಫರೆನ್ಸು . ,
ಮಹಾತ್ಮಜಿಯವರ ಸತ್ಯಾಗ್ರಹ ಸಮಾಚಾರ ೯-೧೪

# ಸ್ವದೇಶಾಭಿಮಾನಿ.

ತಾರೀಕು ೩೧ನೇ ಶುಕ್ರವಾರ ಒಕ್ಟೋಬರ ೧೯೩೦

## ರೌಂಡ್‌ಟೇಬಲ್ ಕೊನ್ಫರೆನ್ಸು.

ಸಮಗ್ರ ಹಿಂದೂದೇಶದ ನಿಷೇಧವನ್ನೂ ಲಕ್ಷಿಸದೆ ಬ್ರಿಟಿಷ ಸರಕಾರವು ಸ್ಯಾಮನ್ ಸಮಿತಿಯನ್ನು ನೇಮಿಸಿದುದರ ಪರಿಣಾಮವು ಸ್ಪಷ್ಟವಿದೆ. ಆದರೆ ಆ ಅನುಭವದ ಪಾಠವು ಬ್ರಿಟಿಷರಿಗೆ ಇನ್ನೂ ಸಿಕ್ಕಿಲ್ಲವೆಂದು ರೌಂಡ್‌ಟೇಬಲ್ ಕೊನ್ಫರೆನ್ಸಿನ ಇತಿಹಾಸವನ್ನು ನೋಡಿದರೆ ತಿಳಿಯುವುದು. ಬೇಕಾಗಲಿ, ಬೇಡವಾಗಲಿ, ಕೊನ್ಫರೆನ್ಸು ನವಂಬರ ತಾ ೧೨ಕ್ಕೆ ಕೂಡುವುದೆಂಬುದು ನಿಶ್ಚಯವಾಗಿಯೇ ಹೋಯಿತು. ಬ್ರಿಟಿಷ ದೇವಭಕ್ತರೂ ಸುಮ್ಮನಿರದೆ ಆ ದಿನ ಭಕ್ತಿಭರಿತ ಪ್ರಾರ್ಥನೆಯನ್ನು ಹೇಳಿಕೊಳ್ಳುವರೆಂಬುದು ಒಂದು ಸಮಾಧಾನದ ವಿಷಯ.

ಆದರೆ ಪ್ರಾರ್ಥನೆಯು ರೌಂಡ್‌ಟೇಬಲ್ ಕೊನ್ಫರೆನ್ಸಿಗೆ ಅಗತ್ಯವೊ, ಅಥವಾ ಹಿಂದೂಸ್ಥಾನದ ಸರಕಾರದ ಸೂತ್ರಧಾರಿಗಳ ಒಗ್ಗೆ ಮತ್ತು ಸರಕಾರದ ನೌಕರರ ಬಗ್ಗೆ ಅಗತ್ಯವೊ ಎಂಬುದನ್ನು ಈ ದೇವಭಕ್ತರಿಗೆ ಸಾಮ್ರಾಜ್ಯಭಕ್ತಿಯ ಮುಂದೆ ತಿಳಿದಿಲ್ಲ. ದೇಶದಲ್ಲಿ ನಿರಪರಾಧಿಗಳ ಕಷ್ಟಗಳೂ, ಮಾತೃಭೂಮಿಯ ಸೇವಕರಿಗೆ ತಾಡನ ಪೀಡೆಗಳೂ ಭಯಂಕರವಾಗಿ ನಡೆಯುತ್ತಾ ಇವೆ. ಸಾಮ್ರಾಜ್ಯದ ಹೆಸರಿನಲ್ಲಿ ನಾಗರಿಕತೆಗೂ, ಮಾನುಷತ್ವಕ್ಕೂ ಅಯೋಗ್ಯವಾದ ಕಾರ್ಯಗಳು ಮಾಡಲ್ಪಡುತ್ತವೆ. ಇಂತಹವುಗಳು ಪ್ರಾರ್ಥನೆ ಇದ್ದರೂ ಕ್ಷಮಿಸಲ್ಪಡುವುವೆಂದು ಹೇಳಲಾಗುವುದಿಲ್ಲ, ಪ್ರಾರ್ಥನೆ ಇಲ್ಲದಿದ್ದರೆ ಗತಿಯೇನೆಂದು ಅವರೇ ತಿಳಿದುಕೊಳ್ಳಬೇಕು. ಬರೇ ಬಲಾತ್ಕಾರದಿಂದ ರಾಜ್ಯಡಳಿತಗಳು ಸಾಧ್ಯವೆಂದಿದ್ದುದಾದರೆ ಈ ವರೆಗೂ ಹಿಂದೂಸ್ಥಾನದಲ್ಲಿ ಅವರಂಗಜೇಬನ ಮಕ್ಕಳೇ ಆಳಬೇಕಿತ್ತು, ರಶ್ಯಾದಲ್ಲಿ ಝಾರ್ ಚಕ್ರವರ್ತಿಯ ವಂಶವೇ ಬಾಳಬೇಕಿತ್ತು, ಜರ್ಮನಿಯಲ್ಲಿ ಕೈಸರನೇ ರಾಜ್ಯಸೂತ್ರಾಧಿಕಾರಿಯಾಗಬೇಕಿತ್ತು. ಆದರೆ ಇತಿಹಾಸದ ಕಥೆಯೇ ಬೇರೆ. ಬ್ರಿಟಿಷ ಸರಕಾರವಾದರೂ ಇತಿಹಾಸದ ತೀರ್ಮಾನವನ್ನು ಮೀರುವುದೇ?

ರೌಂಡ್ ಟೇಬಲ್ ಕೊನ್ಫರೆನ್ಸಿಗೆ ಜಯಕರ, ಸಪ್ರೂ, ಜಿನ್ನಾ ಮುಂತಹವರು ಹೋಗಿರುವಾಗ, ಹಿಂದೀಯ ಸ್ವಾಭಿಮಾನದ ರಕ್ಷಣೆಯ ಪ್ರಯತ್ನಗಳು ಅಲ್ಲಿ ನಡೆಯಲಾರವೆಂದು ಹೇಳಬಹುದು. ಆದರೆ ಹಿಂದೀ ಸ್ವಾಭಿಮಾನ ರಕ್ಷಣೆಯ ಪ್ರಯತ್ನಗಳೇ ಹಿಂದೀ ರಾಜಕೀಯ ಸುಧಾರಣೆಗಳ ಸಾಧನೆಯ ಪ್ರಯತ್ನಗಳಿಗಿಂತ ಹೆಚ್ಚಾಗುವುವೇ ಎಂಬ ಅನುಮಾನವೇ ಈಗ ಮುಂದಾಗಿ ತೋರಬಂದಿದೆ. ಬ್ರಿಟಿಷ ಜನಾಂಗವು ಹಿಂದೀ ಜನಾಂಗವು ಸಮಾನತೆಯಿಂದ ಈ ರೌಂಡ್ ಟೇಬಲಿನಲ್ಲಿ ಸ್ವಾಗತೀಕರಿಸುವುದು, ಎಂದು ಬ್ರಿಟಿಷ ಪ್ರಧಾನ ಮಂತ್ರಿಗಳಾದ ಮಿ| ರಾಮ್ಸೆ ಮೆಕ್ಡೊನಾಲ್ಡರು ಹೇಳಿದ್ದರು. ಈ ಸಮಾನತೆಯು ರೌಂಡ್ ಟೇಬಲ್ ಕೊನ್ಫರೆನ್ಸಿನ ಹೊರಗಲ್ಲವೆಂದು ಮೇಲಿನ ಮಾತಿನಿಂದ ಅರ್ಥವಾಗುತ್ತದೋ? ಎಂಬ ಪ್ರಶ್ನೆಯು ಕೆಲವು ದಿನಗಳ ಹಿಂದೆ ಹಿಂದೀ ಪ್ರತಿನಿಧಿಗಳಿಗೆ ದೊರಕಿದ ಮರ್ಯಾದೆಯ ಕ್ರಮವನ್ನು ನೋಡಿದರೆ, ಉಂಟಾಗುವುದು. ಸಾಮ್ರಾಜ್ಯ ಪ್ರತಿನಿಧಿಗಳನ್ನೂ ಹಿಂದೀ ಪ್ರತಿನಿಧಿಗಳನ್ನೂ ವಿಮಾನ ಪ್ರದರ್ಶನದಲ್ಲಿ ಕರೆದಾಗ ಹಿಂದೀ ಪ್ರತಿನಿಧಿಗಳನ್ನು ಕೇಳುವವರೇ ಇರಲಿಲ್ಲ; ಸಾಮ್ರಾಜ್ಯ ಪ್ರತಿನಿಧಿಗಳಿಗೆ ಎಲ್ಲಾ ಸತ್ಕಾರಗಳು ನಡೆಯುತ್ತಿದ್ದಾಗ, ಹಿಂದೀ ಪ್ರತಿನಿಧಿಗಳ ಕಡೆಗೆ ಪ್ರಧಾನ ಮಂತ್ರಿಗಳು ಕಣ್ಣೆತ್ತಿ ಕೂಡ ನೋಡಲಿಲ್ಲ. ಬದಲಿಗೆ ಒಬ್ಬ ಆಫೀಸರರು ಬಂದು "ನಿಮಗೆಲ್ಲರಿಗೆ ಇಂಗ್ಲೀಷು ಮಾತಾಡಲಿಕ್ಕೆ ಬರುತ್ತದೊ" ಎಂದು ಕೇಳಿದರಂತೆ. ಎಲ್ಲರೂ ಬೇಸರಪಟ್ಟು ವಿಮಾನ ಪ್ರದರ್ಶನವು ಆರಂಭಿಸುವ ಮೊದಲೇ ಹಿಂತಿರುಗಿದರು. ಎ. ಜಮುಕರರು "ಇನ್ನು ನಾನು ಬ್ರಿಟಿಷ ಸರಕಾರದ ಆತಿಥ್ಯವನ್ನ ಸ್ವೀಕರಿಸುವುದಿಲ್ಲ"ವೆಂದು ಪ್ರತಿಜ್ಞೆಯನ್ನು ಹಾಕಿಕೊಂಡರು.

ಇಂತಹ ಘಟನೆ ಳಾದರೂ ಈ ಆಶಾವಾದಿಗಳ ಕಣ್ಣನ್ನು ತೆರೆಯಬೇಕು. ಮತ್ತು ಹಿಂದೂದೇಶಕ್ಕೆ ಬೇರೆ ಯಾವ ಲಾಭವಾಗದಿದ್ದರೂ, ಹೋದ ಪ್ರತಿನಿಧಿಗಳು ಏಕಮತ್ಯದಿಂದ ಇದ್ದು ಹಿಂದೀ ಸ್ವಾಭಿಮಾನವನ್ನು ಕಳೆದುಕೊಳ್ಳದಂತೆ ವರ್ತಿಸಿ ಹಿಂದೆ ಬಂದರೆ ಸಾಕು. ಏಕೆಂದರೆ ಸ್ಯಾಮನ್ ಸಮಿತಿಯೊಡನೆ "ಸಮಾನತೆ"ಯ ವೇಷದಲ್ಲಿ ಹೋದ ನಾಯರ್ ಸಮಿತಿಯು ತಮ್ಮೊಳಗಿನ ಅಂತಃಕಲಹಗಳನ್ನು ವಿಲಾಯತಿಯಲೆಲ್ಲಾ ಪ್ರದರ್ಶಿಸಿ "ಕೀರ್ತಿ" ಹೊಂದಿದ್ದಾರೆ. ಅಂತಹ "ಕೀರ್ತಿ"ಯು ಬಾರದಂತೆ ಮಾಡಿದರೆ ಅದೇ ದೊಡ್ಡದು.

## ವಿದೇಶ ವರ್ತಮಾನ.

— ಲಂಡನ್ ನಗರದಲ್ಲಿ ಇಂಡಿಯದಿಂದ ಚಕ್ರಗೋಷ್ಠಿಗಾಗಿ ಹೋದ ಪ್ರತಿನಿಧಿಗಳು ಇಂಡಿಯದ ಸ್ವಾತಂತ್ರ್ಯ ರಕ್ಷಣಾಕಾರ್ಯದಲ್ಲಿ ತಮ್ಮ ಅಮೂಲ್ಯ ಸಾಹಸಗಳನ್ನು ಪ್ರದರ್ಶಿಸುತ್ತಿರುವರೆಂದು ತಿಳಿದುಬರುತ್ತದೆ. ಆದರೆ ಸದರಿಯವರ ಸಾಧನೆಗಳನ್ನು ಆಮೂಲಾಗ್ರವಾಗಿ ನಾಶಪಡಿಸಬೇಕೆಂಬ ಬ್ರಿಟಿಷರ ಪ್ರತಿಕೂಲಚಳವಳವು ಸದಾ ಇಂಡಿಯದ ಡೆಲಿಗೇಟರನ್ನು ಪ್ರತಿಬಂಧಿಸುತ್ತಿರುವುದು. ಇಂಡಿಯದ ಲಿಬರಲ್ ಪಕ್ಷದವರು ಸ್ಯಾಮನರು ವ್ಯಾಸರಾಯರಿಗೆ ಮನವಿಮಾಡಿಕೊಂಡ ವಿಷಯಗಳು ಇಂಡಿಯದ ಬಂಧವಿಮೋಚನೆಯನ್ನು ಮಾಡುವುವೆಂದು ನಂಬಿರುವಂತೆ. ಅಂತೂ ಎಲ್ಲಾ ಒಟ್ಟು ಕೊರದೀಳಬೇಕಾದರೆ ಚಕ್ರಗೋಷ್ಠಿಯ ಸಮ್ಮೇಳನವು ನೆರವೇರಬೇಕಂತೆ! ಹಾಗೂ ಇಂಡಿಯನ್ ಡೆಲಿಗೇಟರ ಪ್ರಯತ್ನಗಳು ಸಾರ್ಥಕತೆಯನ್ನು ಹೊಂದುವದೆಂದರೆ ತೀರ ಕಷ್ಟಸಾಧ್ಯವೆಂದೇ ಭಾಸವಾಗುತ್ತದೆ. ಬರುವ ನವಂಬರ್ ೪ನೇ ತಾರೀಕಿಗೆ ಚಕ್ರವರ್ತಿಯವರು ಧರ್ಮಪತ್ನಿಯೊಡನೆ ಬಕ್ಕಿಂಗಾಮ್ ಅರಮನೆಯಲ್ಲಿ ಹಿಂದೀ ಅರಸರನ್ನು ಸನ್ಮಾನಿಸುವರೆಂದು ತಿಳಿದುಬರುತ್ತದೆ. ಈ ಸಮಾರಂಭದಲ್ಲಿ ಡ್ಯೂಕ್ ಓಫ್ ಯೋರ್ಕರೂ ಭಾಗವಹಿಸುವರು.

— ಆಫ್ರಿಕದಲ್ಲಿ ಒಂದು ಮಗುವು ಚಿಕ್ಕಂದಿನಿಂದಲೇ ಬೆಬೂನ್ ಎಂದು ಕರೆಯಲ್ಪಡುವ ಮಂಗಗಳೊಡನೆ ಬೆಳೆಯುತ್ತಿದ್ದು ಈಗ ೧೪ ವರ್ಷದ ಒಬ್ಬ ಯುವಕನಾಗಿರುವನೆಂದು ತಿಳಿದುಬರುತ್ತದೆ. ಹುಡುಗನು ಚಿಕ್ಕ ಶಿಶುವಿದ್ದಾಗ ಒಮ್ಮೆ ತನ್ನ ತಾಯಿಯು ಕೆಲಸ ಮಾಡುತ್ತಿದ್ದ ಗದ್ದೆಯೊಂದರಲ್ಲಿ ಬಿದ್ದುಹೋಗುತ್ತಿರಲು ಬೆಬೂನ್ ಜಾತಿಗೆ ಸೇರಿದ ಒಂದು ಮಂಗವು ಆ ಮಗುವನ್ನು ಎತ್ತಿಕೊಂಡು ಹೋಯಿತಂತೆ! ಪಕ್ಕದಲ್ಲೇ ಕೆಲಸ ಮಾಡುತ್ತಿದ್ದ ತಾಯಿಯು ಎಷ್ಟು ಗೋಳಿಟ್ಟರೂ ಮಂಗವು ಮಗುವನ್ನು ಬಿಡಲಿಲ್ಲ. ಹಾಗೂ ಅಂದಿನಿಂದ ಸದರಿ ಮಗುವು ಕೋತಿಗಳ ಸಮುದಾಯದಲ್ಲೇ ಬೆಳೆಯುತ್ತಿದ್ದು ಹಣ್ಣು ಹಂಪಲುಗಳೇ ಮೊದಲಾದ ಹಸಿ ತಿಂಡಿಯನ್ನೇ ಮಂಗಗಳಂತೆ ತಿನ್ನುತ್ತ ಒಂದುದಲ್ಲದೆ ಹೆಚ್ಚಾಗಿ ಮರಗಳಲ್ಲೇ ವಾಸಿಸುತ್ತಿದ್ದಿತು. ಸ್ವಭಾವಗಳು ತೀರಾ ಬದಲಾವಣೆ ಹೊಂದಿದ್ದರೂ ರೂಪಭಾವನೆಯಿಂದ ಸದರಿ ಮಗುವಿನ ಗುರುತು ಹಿಡಿದಿರುವರೆಂದೂ, ಆತನಿಗೆ ೧೪ ವರ್ಷ ಪ್ರಾಯ ತುಂಬಿರುವದೆಂದೂ ತಿಳಿದುಬರುತ್ತದೆ.

## ಒಳದೇಶ ವರ್ತಮಾನ.

— ಪಾಟ್ನಾ ನಗರದ ಸಾಂಟಲ್ಪುರ ಜಿಲ್ಲೆಯ ಒಂದಾಲಿ ಎಂಬಲ್ಲಿ ನರಮೇಧವು ಆಚರಿಸಲ್ಪಟ್ಟಿರುವದೆಂದು ತಿಳಿಯಲಾಗುತ್ತದೆ. ಬಲಿದಾನವು ಕೇವಲ ೭ ವರ್ಷದ ಎಳೆ ಹುಡುಗನಾಗಿದ್ದನು. ಅವನ ಮುಂಡ ಮಾತ್ರವೇ ಪತ್ತೆ ಮಾಡುವಾಗ ದೊರಕಿರುವದು ಮತ್ತು ಆ ಮುಂಡವು ಸಾಧು ಸೋನಾರಿ ಎಂಬವನ ಮನೆಯ ಬಾವಿಯಲ್ಲಿ ದೊರೆತಿರುವದೆಂದೂ ತಿಳಿದುಬರುತ್ತದೆ. ಮಾತ್ರವಲ್ಲದೆ ಸದರಿ ಸೋನಾರಿಯ ಮನೆಯನ್ನು ಶೋಧೆ ಮಾಡಲು ಪಶು ಯಜ್ಞದ ಪಿವರಣೆಗಳಿಗಳು, ಕೆಲವು ಹಳೇ ತಾಳೆ ಮಂದ ಎಲೆಗಳೂ ದೊರೆತಿರುವವು. ಯಜ್ಞ ಪಶುವಿನ ತಲೆಯು ಇನ್ನೂ ಪತ್ತೆಯಾಗಲಿಲ್ಲ. ಪೋಲೀಸರು ಈ ಕುರಿತು ಹಲವು ದಸ್ತಗಿರಿಗಳನ್ನು ಮಾಡಿರುವರು.

— ಇಂಡಿಯದ ವಿದೇಶಿ ವ್ಯಾಪಾರಕ್ಕೆ ಸಂಬಂಧಪಟ್ಟ ಸಪ್ಟಂಬರ ತಿಂಗಳಿನ ಲೆಕ್ಕಪತ್ರಗಳನ್ನು ಕಳೆದ ತಿಂಗಳವುಗಳೊಡನೆ ಸರಿಹೋಲಿಸಿ ನೋಡಲು ಹಿಂದೂಸ್ಥಾನಕ್ಕೆ ಆಮದಾಗುವ ವಿದೇಶಿ ಸಾಮಾನುಗಳ ಮೌಲ್ಯವು ಈ ತಿಂಗಳಲ್ಲಿ ೧೫೬ ಲಕ್ಷ ರೂಪಾಯಿಗಳಷ್ಟು ಬಿದ್ದಿರುವುದೆಂದು ತಿಳಿದುಬರುತ್ತದೆ. ಮತ್ತು ರಫ್ತಾಗುವ ವಸ್ತುಗಳಲ್ಲಿ ೧೪ ಲಕ್ಷ ರೂಪಾಯಿಗಳಷ್ಟು ಇಳಿದು ಹೋಗಿರುವವು.

— ಕೋರಮಸ್ ಮಂಡಳರಾದ ಸರ್. ಜೋರ್ಜ್‌ಸ್ಕಿನ್ನಿಯವರು ತಾ ೨೫-೧೦-೩೦ಕ್ಕೆ ಮುಂಬಾಯಿಗೆ ಬಂದಿಳಿದಿರುವರು. ಇವರಿನ್ನು ೫ ದಿನಗಳ ವರೆಗೆ ಮುಂಬಾಯಿಯಲ್ಲೇ ಇದ್ದು ಮಿಲ್ಲುಗಳ ಯಜಮಾನರೊಡನೆಯೂ, ಚೇಂಬರ್ ಓಫ್ ಕೋಮರ್ಸಿನ ಸದಸ್ಯರೊಡನೆಯೂ ಸಭೆಸೇರಿ ಅನೇಕ ವಿಷಯಗಳನ್ನು ಚರ್ಚಿಸಲಿಕ್ಕಿರುವರು. ತಾ. ೩೯ ೧೦—೩೦ನೇ ದಿನ ಸದರಿಯವರು ಕಲ್ಕತ್ತೆಗೆ ಪ್ರಯಾಣ ಬೆಳೆಸಿರುವರೆಂದೂ ತಿಳಿದುಬರುತ್ತದೆ. ಅವರ ಆಗಮನದ ಆವಶ್ಯಕತೆಗಾಗಿ ಮುಂಬಾಯಿ ನಗರವು ಹೆಚ್ಚಿನ ಆತುರತೆಯನ್ನು ಹೊಂದಿರುವದು.

### ಮಾನ್ಯ ಸಿ ರಾಜಗೋಪಾಲಾಚಾರ್ಯರ ವಿಚಾರಣೆ.

— ತಾ. ೨೫—೧೦—೩೦ನೇ ದಿನ ಮಿ| ಸಿ. ರಾಜಗೋಪಾಲಾಚಾರ್ಯರ ವಿಚಾರಣೆ ನಡೆಯಿತು. ವಿಚಾರಣೆಯಲ್ಲಿ ಅಧಿಕಾರಿಗಳು ರಾಜಗೋಪಾಲಾಚಾರ್ಯರನ್ನುದ್ದೇಶಿಸಿ, ಸದರಿಯವರು ಸತ್ಯಾಗ್ರಹ ವಿಷಯಗಳನ್ನೊಳಗೊಂಡ ಅನೇಕ ಭಾಷಣಗಳನ್ನು ಕೊಟ್ಟುದ್ದಕ್ಕಾಗಿ ಅಪರಾಧಿತನನ್ನಾಗಿ ಪರಿಗಣಿಸಿದರಲದೆ ಇನ್ನು ಮುಂದೆ ಸತ್ಯಾಗ್ರಹದಲ್ಲಿ ಭಾಗ ವಹಿಸುವುದಿಲ್ಲವೆಂದು ಆದೇಕೆ ಒಂದು ಕರಾರನ್ನು ಬರಕೊಡಕೂಡದೆಂದು ಪ್ರಶ್ನೆ ಮಾಡಿದರು. ಅವರು ಇತ್ತೀಚೆಗೆ ಮದರಾಸು ಪಟ್ಟಣದಲ್ಲಿ ಕೊಟ್ಟ ಹಲಕೆಲವು ಭಾಷಣಗಳು ಸರಕಾರದ ಜಮಾಮಂದಿಯ ಲೆಕ್ಕಪತ್ರಗಳನ್ನೂ ನಿರೋಧಿಸುವಂತೆ ಜನರನ್ನು ಹುರಿದುಂಬಿಸಿರುವುವಂತೆ! ಹಾಗೂ ರಾಜಗೋಪಾಲಾಚಾರ್ಯರು ವಿಚಾರಣೆಯ ಪ್ರೊಸಿಡಿಂಗ್ಸಿನಲ್ಲಿ ಭಾಗವಹಿಸಲಿಲ್ಲವೆಂದು ತಿಳಿಯಲಾಗುತ್ತದೆ. ಅವರನ್ನು ರಾಜಕೀಯ ಚಳವಳದಲ್ಲಿ ಅಪಾಧಿತರೆಂದು ಪರಿಗಣಿಸಿ ೧೦೭ನೇ ಸೆಕ್ಷನನ್ನು ಜಾರಿಮಾಡಿರುವರು. ಆದರೆ ಪತ್ರಿಕೆಗಳ ಅಭಿಪ್ರಾಯಗಳಂತೆ ಸದರಿಯವರ ಬಹಿರಂಗ ಭಾಷಣಗಳು ಎಷ್ಟೇ ಸರಕಾರದ ವಿರೋಧ ಭಾವವನ್ನು ಸೂಚಿಸಿದ್ದರೂ ಕೇವಲ ಭಾಷಣ ಮಾತ್ರದಿಂದ ಮದರಾಸು ಪಟ್ಟಣದಲ್ಲಿ ನೆಮ್ಮದಿ ಭಂಗವುಂಟಾಗುವದೆಂದು ಊಹಿಸಲೆಂದೂ ಅವಕಾಶವಿಲ್ಲ. ಮತ್ತು ಈ ಕುರಿತು ೧೦೭ನೇ ಸೆಕ್ಷನಿನ ಜ್ಯಾರಿಯೂ ಸರಿಯಲ್ಲವೆಂದು ತಿಳಿದುಬರುತ್ತದೆ. ಪೋಲೀಸರ ಸಾಕ್ಷಿ ವಿಚಾರಣೆಗಳು ಸದರಿ ರಾಜಗೋಪಾಲಾಚಾರ್ಯರ ಬಹಿರಂಗ ಭಾಷಣಗಳ ಕುರಿತು ೧೦೭ನೇ ಪ್ರಕರಣಕ್ಕೆ ಒಳಪಟ್ಟ ಯಾವದೇ ತಕ್ರಾರುಗಳನ್ನು ಕೋರ್ಟು ಮುಂದೆ ರುಜುವಾತು ಪಡಿಸಲಿಲ್ಲವೆಂದೂ ತಿಳಿಯಲಾಗುತ್ತದೆ. ಇನ್ನು ಮುಂದೆ ಸದರಿಯವರ ಭಾಷಣಗಳು ಜನತೆಯ ಮೇಲೆ ಹೆಚ್ಚಿನ ಪರಿಣಾಮವನ್ನು ತಂದೊಡ್ಡುವವೆಂಬ ಭಾವೀ ಅಪಾದನೆಯ ಮೇಲೆ ಪೋಲೀಸರು ರಾಜಗೋಪಾಲಾಚಾರ್ಯರ ಮೇಲೆ ೧೦೭ನೇ ಪ್ರಕರಣವನ್ನು ಜ್ಯಾರಿಮಾಡಿದರು. ಮುಂದಿನ ಭಾಷಣಗಳ ಪರಿಣಾಮವಾಗಿ ಶಾಂತಿಭಂಗವು ಉಂಟಾಗಬೇಕಷ್ಟೆ! ಆದರೊಳಗಾಗಿಯೇ ಪೋಲೀಸರ ಕೆಲಸ ಮುಗಿದುಹೋಯಿತು!" ೧೦೭ನೇ ಸೆಕ್ಷನಿನ ಜ್ಯಾರಿ ಆಯಿತು!

— ತಾ ೨೫—೧೦ ೩೦ನೇ ದಿನ ಮುಂಬಯಿ ಸರಕಾರವು ಪ್ರಚುರ ಪಡಿಸಿದ ಗಜೇಟಿನ ಸಮಾಚಾರದಂತೆ ಸದರಿ ಸರಕಾರವು ಮುಂಬಾಯಿ ನ್ಯಾಯವಿಧಾಯಕ ಸಭೆಯ ಚುನಾವಣೆಯ ಕುರಿತು ವಿಚಾರಿಸಲು ಒಂದು ಕಮಿಶನ್ ಸಂಸ್ಥೆಯನ್ನು ನಿರ್ಮಾಡಿಸಿರುವದು. ಈ ಸಂಸ್ಥೆಯು ದಿವಾನ್‌ಬಹದ್ದೂರ್ ಕೃಷ್ಣನ್ ಮೋಹನಲಾಲ್ ಜಾವರಿ (ಅಧ್ಯಕ್ಷ) ಡಾ| ಡಿಸೋಜ ಮತ್ತು ಮಿ| ವಿಶ್ವನಾಥ ಗಣಪತ್ ದಾಲ್ವಿ ಎಂಬ ಮೂವರಿಂದ ಕೂಡಿರುವದು. ಮಿ| ರಾಮಚಂದ್ರ ಭಟ್ಟ ಕೂಡ ಮುಂಬಾಯಿಯ ನ್ಯಾಯವಿಧಾಯಕ ಸಭೆಯ ಸದಸ್ಯರಾಗಲು ಯತ್ನಿಸುತ್ತಿದ್ದರು. ಆದರೆ ಸದರಿ ರಾಮಚಂದ್ರ ಭಟ್ಟ ಎದ್ರು (ಮೂರು ಮಂದಿ)ರ ಅಭಿಲಾಷೆಯು ಚುನಾವಣೆಗೆ ಆರಂಭವಾದ ಮೇಲೆ ಪೂರ್ತಿಯಾಯಿತು, ಜನತೆಯ ಕೋರಿಕೆಯೂ ಕೈಗೂಡಿತು. ಮಿ| ರಾಮಚಂದ್ರ ಭಟ್ಟ ಚುನಾವಣೆಗೆ ಪ್ರಾರಂಭವಾದ ಮೇಲೆ, ಇಲ್ಲಲಿಲ್ಲ, ತನಗೆ ನ್ಯಾಯವಿಧಾಯಕ ಸಭೆಯ ಮೆಂಬರಿಕೆಯೇ ಬೇಡವೆಂದರು.

ಸಿರಾಜಗಂಜ್ — ಇಲ್ಲಿನ ಸ್ಥಳೀಯ ಸತ್ಯಾಗ್ರಹ ಸಮಿತಿಯ ಅಧ್ಯಕ್ಷರಾದ ವಿ. ಮೌಲವಿ ಇಸ್ಮಾಯಿಲ್ ಹುಸೇನ್ ಸಿರಾಜಿಯೆಂಬವರನ್ನು ಐ ಪಿ ಸಿ ೧೫೩ನೇ ಪ್ರಕರಣದ ಮೇರೆಗೆ ಕೇಸು ನಡೆಸಿ ಎರಡು ತಿಂಗಳ ಕಠಿಣ ಸಜೆಯನ್ನು ವಿಧಿಸಿರುವರು.

— ಮಿಮೆನ್‌ಸಿಂಗ್ ಎಂಬಲ್ಲಿ ಸೆರೆಮನೆಯ ಕ್ರಮಗಳನ್ನುಲಂಘಿಸಿ Hunger strike ಮಾಡಿ ಆಹಾರವನ್ನು ನಿರಾಕರಿಸಿದ ೫೯ ಮಂದಿ ರಾಜಕೀಯ ಕೈದಿಗಳನ್ನು ಚಾರ್ಜು ಮಾಡಿರುವರು. ೧೪ ಮಂದಿಗೆ ಆರಾರು ತಿಂಗಳ ಕಠಿಣ ಸಜೆಯು ವಿಧಿಸಲ್ಪಟ್ಟಿರುವದು. ಮಿ| ಜ್ಞಾನೇಂದ್ರನಾಥ ಮಜುಮ್‌ದಾರರೂ ಅವರಲ್ಲೊಬ್ಬರೆಂದು ತಿಳಿದುಬರುತ್ತದೆ.

— M & S M ರೈಲ್ವೆ ಅಧಿಕಾರಿಗಳು ತಾರೀಖು ೨೬—೧೦—೩೦ರ ಮೊದಲುಗೊಂಡು ಮದರಾಸಿನಿಂದ ದಕ್ಷಿಣಕ್ಕೆ ಹೋಗುವ ಪ್ರಯಾಣಿಕರ ಅನುಕೂಲತೆಯ ಬಗ್ಗೆ ಒಂದು ಸ್ಪೆಶಲ್ ಗಾಡಿಯನ್ನು ಹೊರಡಿಸುವರೆಂದು ತಿಳಿದುಬರುತ್ತದೆ. ಮುಂದಿನ ನೋಟೀಸು ಜ್ಯಾರಿಯ ವರೆಗೆ ಸದರಿ ಗಾಡಿಯು ಸಂಜೆ ೬ ಘಂಟೆಗೆ ಸರಿಯಾಗಿ ಮದರಾಸಿನಿಂದ ಹೊರಟು ಪೊದನೂರು ವರೆಗೆ ಹೋಗಿ ಅಲ್ಲಿ ತಂಗಿಕೊಳ್ಳುವದು. ಪ್ರಯಾಣಿಕರು ಪೊದನೂರಿನಿಂದ ಬೇರೆ ಗಾಡಿಗಳ ಮೂಲಕ ಬೇರೆ ಬೇರೆ ಊರುಗಳಿಗೆ ಹೋಗಬೇಕಾಗುವದು. ಅಲ್ಲಿಂದ ಸದರಿ ಗಾಡಿಯು ದಿಂಡಿಗಲ್ ಮುಂತಾದ ದಕ್ಷಿಣ ದಿಕ್ಕಿನ ಹಲ ಕೆಲವು ಊರುಗಳನ್ನು ಹಾದು ಹೋಗುವದು.

— ಮಳೆಯು ಬಹಳ ಹೆಚ್ಚಾಗಿದ್ದುದರಿಂದ M & S M ರೈಲ್ವೆ ಲೈನು ಕೆಲವೆಡೆಯಲ್ಲಿ (ಟಾಡಾ ಮತ್ತು ಸುಲೂರ್ ಪೇಟೆ ಸ್ಟೇಶನುಗಳ ನಡುವೆ) ತುಂಡರಿಸಿ, ರೈಲಿನ ಕಂಬಿಗಳು ಪ್ರವಾಹಕ್ಕೆ ಹೋಗಿವೆ.

— ತಿರುಚಿನಾಪಳ್ಳಿ, ಕುಂಭಕೋಣ, ತಂಜಾವೂರು ಮುಂತಾದ ಪ್ರದೇಶಗಳಲ್ಲಿ ಮಳೆಯ ಹಾವಳಿಯಿಂದ ತುಂಬ ನಷ್ಟ ಉಂಟಾಗಿರುವದೆಂದು ತಿಳಿದುಬರುತ್ತದೆ.

ಪಂಡಿತ ಜವಾಹಿರಲಾಲರ ವಿಚಾರಣೆಯ ಸಮಯದಲ್ಲಿ ಸಬ್ ಇನ್ಸಪೆಕ್ಟರರು ಸದರಿಯವರು ಕೊಟ್ಟ ಭಾಷಣದ ಕುರಿತಾಗಿ ಮಾಡಿದ ರಿಪೋರ್ಟನ್ನು ಓದಿದರು. ರಿಪೋರ್ಟು ಸೂಚಿಸುವಂತೆ ಪಂಡಿತಜೀಯವರ ಭಾಷಣವು ರಿಪೋರ್ಟಿನ ಸಾರಾಂಶವನ್ನು ಮೀಕ್ಕಿದ್ದಿತೆಂದು ತಿಳಿದುಬರುತ್ತದೆ. ಭಾಷಣದ ಪೂರ್ಣ ಸಾರಾಂಶವನ್ನು ಇನ್ಸಪೆಕ್ಟರರ ರಿಪೋರ್ಟಿನಲ್ಲಿ ಸಂಪೂರ್ಣವಾಗಿ ಸೂಚಿಸದಿರುವುದರಿಂದ ಪಂಡಿತಜೀಯವರು ಇನ್ಸಪೆಕ್ಟರವರ ಬುದ್ಧಿಶಕ್ತಿಯು ತೀರಾ ಸಾಧಾರಣದ್ದೆಂದೇ ವಿಮರ್ಶಿಸಿದರು.

— ತಾ. ೨೬ – ೧೦ – ೩೦ನೇ ದಿನ ಕಾವೇರಿ ನದಿಯ ನೀರು ೨೫ ಫೀಟುಗಳಷ್ಟು ತಗ್ಗಿರುವುದೆಂದು ತಿಳಿಯಬಾಗುತ್ತದೆ, ನೆರೆಯ ಹಾವಳಿಯು ಕಡಿಮೆಯಾಗಿರುವದು

— ಹಾಸನಾಸಂ ಪ್ರಾಂತ್ಯದ ತಹಸಿಲ್ದಾರರ ರಿಪೋರ್ಟಿನ ಅಭಿಪ್ರಾಯದಂತೆ ವೆನ್ನಾರ್ ಹೊಳೆಯ ನೆರೆಯು ಸುಮಾರು ೧೦೦ ಮನೆಗಳುಳ್ಳ ಒಂದು ಗ್ರಾಮವನ್ನು ಬರಿದು ಮಾಡಿರುವದೆಂದು ತಿಳಿದು ಬರುತ್ತದೆ

— ತಾ. ೨೫ – ೧೦ – ೩೦ರಲ್ಲಿ ಢಕ್ಕಾ ಪಟ್ಟಣದ ಸುಪರಿಂಟೆಂಡೆಂಟ್ ಲಾಮೇನರ ಕೊಲೆಯಲ್ಲಿ ಮೆಡಿಕಲ್ ಕಾಲೇಜಿನ ಮೂರು ಮಂದಿ ವಿದ್ಯಾರ್ಥಿಗಳನ್ನೂ ವಿಶ್ವವಿದ್ಯಾಲಯದ ಆರು ಮಂದಿಯನ್ನೂ ದಸ್ತಗಿರಿ ಮಾಡಿ ಕೋರ್ಟಿನಲ್ಲಿ ಹಾಜರು ಪಡಿಸಿದರು, ಆದರೆ ರುಜುವಾತು ಇಲ್ಲದಿರುವುದರಿಂದ ಸದರಿಯವರನ್ನು ಬಿಡುಗಡೆ ಹೊಂದಿಸಿರುವರು. ೫ ಮಂದಿಯನ್ನು ಬೆಂಗಾಲ್ ಓರ್ಡಿನೆನ್ಸು ಮೇರೆಗೆ ಕೈದು ಮಾಡಿ ಢಕ್ಕಾ ಸೆಂಟ್ರಲ್ ಜೈಲಿಗೆ ಕಳುಹಿಸಿರುವರು ತಪ್ಪಿಸಿಕೊಂಡವರ ಮೇಲೆ ವಾರಂಟುಗಳು ಹಾಕಲ್ಪಟ್ಟಿವೆ ಎಂದು ತಿಳಿದುಬರುತ್ತದೆ

— ತಿರುವಣ್ಣಾಮಲೆಯಲ್ಲಿ ಇತ್ತೀಚೆಗೆ ಸ್ಥಾಪಿಸಲ್ಪಟ್ಟ ನೂಲುವಿಕೆಯ ಸಂಸ್ಥೆಯು ಯೋಗ್ಯ ಅಭಿವೃದ್ಧಿಯನ್ನು ತೋರಿಸುತ್ತಿ ಎವದು ಹೊಸ ಮೆಂಬರರು ಬರುತ್ತಲೇ ಇರುವರು ದೀಪಾವಳಿಯ ಮಹೋತ್ಸವ ಸಮಾರಂಭದಲ್ಲಿ ಸದರಿ ಸಂಸ್ಥೆಯ ಮೆಂಬರರು ಸ್ವಂತ ಕೈಯಿಂದ ಮಾಡಿದ ಬಟ್ಟೆಗಳಿಂದ ಅಲಂಕರಿಸಲ್ಪಟ್ಟಿದ್ದರು

## ದಕ್ಷಿಣ ಕನ್ನಡ.

**ಮಂಗಳೂರು:** — ಮಂಗಳೂರು ಪಟ್ಟಣದಿಂದ ಉಪ್ಪಿನ ಸತ್ಯಾಗ್ರಹದ ಕಾರಾಗೃಹವನ್ನು ಸೇರಿದ ಅನೇಕ ಸ್ವಯಂಸೇವಕರು ತಮ್ಮ ಶಿಕ್ಷೆಗಳ ಅವಧಿಯನ್ನು ಪೂರ್ತಿಗೊಳಿಸಿ ಮರಳಿ ಊರನ್ನು ಸೇರಿರುವರು. ಹೆಚ್ಚಾದವರು ಕಣ್ಣಾನೂರು ಸೆಂಟ್ರಲ್ ಜೈಲಿನಲ್ಲೇ ತಮಗೆ ವಿಧಿಸಲ್ಪಟ್ಟ ಸಜಾ ದಿನಗಳನ್ನು ಕಳೆದರು. ಇವರ ಹೇಳಿಕೆಯಂತೆ ರಾಜಕೀಯ ಕೈದಿಗಳಾದ ಮಂಗಳೂರು ಸ್ವಯಂಸೇವಕರಿಗೆ ದೊರೆತ ಸರಕಾರದ ಚಿಕಿತ್ಸೆಗಳು ತೀರ ಅಪ್ರಯೋಜಕವಾಗಿರುವವೆಂದೇ ತಿಳಿದುಬರುತ್ತದೆ. ಆಹಾರವು ತೀರ ಸಾಮಾನ್ಯವಿದ್ದು ಅನೇಕರು ರೋಗ ಪೀಡಿತರಾಗಿ ಹೊರಹೊರಟಿರುವ ಕೆಲವರಿಗೆ ವ್ಯಾಯಾಮವೇ ಕಡಿಮೆಯಾಗಿ ದೇಹವು ಬಹಳ ಕೃಶವಾಗಿ ಎವುದು ಜೈಲು ಅಧಿಕಾರಿಗಳು ಸ್ವಯಂಸೇವಕರ ಹಾಲುಹವಾಲೆಗಳನ್ನಾದರೂ ಕೇಳದೆ ಸ್ವಯಂಸೇವಕ ಕೈದಿಗಳನ್ನು ಮನಬಂದಂತೆ ಗದರಿಸುತ್ತಿದ್ದರು. ಮಾತ್ರವಲ್ಲದೆ ಒಮ್ಮೊಮ್ಮೆ ದೊಡ್ಡಸ್ವಾರ ಬುದ್ಧಿವಾದವನ್ನೂ ಸ್ವಯಂಸೇವಕರು ಕೇಳಬೇಕಿತಂತೆ! ಕೈದಿಗಳ ಕೆಲಸವು ಬಹಳ ಕಷ್ಟದಾಯಕವಾಗಿತ್ತೆಂದೂ ತಿಳಿದುಬರುತ್ತದೆ ಅಷ್ಟು ಕೆಲಸ ಮಾಡಿಸಿ, ಕೊಡುವ ಆಹಾರವೆಂದರೆ — ಗಂಜಿ ಮತ್ತು ಚಟ್ನಿ ಇದೇ ಮಂಗಳೂರು ಸತ್ಯಾಗ್ರಹಿಗಳಿಗೆ ಜೈಲೊಳಗೆ ದೊರೆತ ಸರಕಾರದ ಆತಿಥ್ಯ ಒಂದು ದಿನ ಒಬ್ಬ ಸ್ವಯಂಸೇವಕನಿಗೆ ಜೈಲರ ಊಟ ಪ್ರಶಾ ಮಾಡಿಸಿತಂತೆ! ಆ ಕಾರಣದಿಂದ ಆತನ ಅನ್ಯಾಯವಾದ ಅನೇಕರು ಅರ್ಧ ದಿವಸ ಉಪವಾಸವನ್ನು ಕೈಕೊಂಡರಂತೆ! ಕೊನೆಗೆ ಜೈಲು ಅಧಿಕಾರಿಗಳು ಬಂದು ಸ್ವಯಂಸೇವಕರನ್ನುದ್ದೇಶಿಸಿ ಊಟ ಮಾಡಬೇಕೆಂದು ಉತ್ಸಾಹ ಪಡಿಸಿದ ಮೇರೆಗೆ ಊಟ ಮಾಡಿದರೆಂದೂ ಪದಂತಿ! ಹಾಗೂ ಮಂಗಳೂರು ಸತ್ಯಾಗ್ರಹಿಗಳು ಅರ್ಧ ದಿನ Hunger strike ಮಾಡಿದರೆಂದು ತಿಳಿದುಬರುತ್ತದೆ ಜೈಲಿನಿಂದ ಬಿಡುಗಡೆ ಹೊಂದಿದ ಹಲಕೆಲವು ಸ್ವಯಂಸೇವಕರ ಪರಿಸ್ಥಿತಿಯು ಬಹಳ ಶೋಚನೀಯವಾಗಿರುವದು; ಕೈಯೊಳಗೆ ಒಂದೇ ಒಂದ ಕಾಸಾದರೂ ಇಲ್ಲದೆ ಅನಾಥರಾಗಿಯೇ ಕಷ್ಟಪಡುವ ಸ್ವಯಂಸೇವಕರೆಷ್ಟೋ ಮಂದಿ ಮಂಗಳೂರನ್ನು ಸುತ್ತುತ್ತಿರುವರು ಕೆಲವರಿಗೆ ಸತ್ಯಾಗ್ರಹವು ಬೇಕವೆಂದೇ ಆಗಿರುವುದು ಕೆಲವು ಮಂದಿ ಎಲ್ಲಾದರೂ ಕೆಲಸ ಮಾಡಿ ಜೀವನ ನಡಿಸಬಹುದೆಂಬ ಇರಾದೆಯಿಂದ ನೌಕರಿಯನ್ನು ಹುಡುಕುತ್ತಿರುವರು ಹಾಗೂ ಬಿಡುಗಡೆ ಹೊಂದಲ್ಪಟ್ಟ ಸತ್ಯಾಗ್ರಹಿಗಳು ಸ್ವಸ್ಥಚಿತ್ತರಾಗಿರುವರು. ಅವರ ಸತ್ಯಾಗ್ರಹ ಚಳವಳವು ತುಸು ಶಾಂತವಾಗಿ ಹೊಟ್ಟೆಪಾಡಿನ ಚಳವಳವೇ ಪ್ರಧಾನವಾಗಿರುವದೆಂದು ತಿಳಿದುಬರುತ್ತದೆ ಅವರು ತಿಳಿಯಪಡಿಸುವಂತೆ ಅವರ ಮಟ್ಟಿಗೆ ಬಾಹ್ಯ ಸಹಾಯವು ತೀರ ಕಡಿಮೆಯಾಗಿರುವದೆಂದೂ ತಿಳಿದುಬರುತ್ತದೆ

ಇಲ್ಲಿಯ ವಿಠೋಬ ದೇವಸ್ಥಾನದ ಎದುರು ಹೂವಿನ ನಾಗಪ್ಪ ಕಮ್ತಿಯವರ ಮನೆಯಲ್ಲಿ ನಿನ್ನೆ ರಾತ್ರೆ ೩ ಘಂಟೆಗೆ ಸರಿಯಾಗಿ ಜುಗಾರಿ ಆಡುತ್ತಿದ್ದ ೮ ಮಂದಿಯನ್ನು ಇಲ್ಲಿನ ಸರ್ಕಲ್ ಇನ್ಸಪೆಕ್ಟರರ ಮುಂದಾಳುತ್ವದಲ್ಲಿ ೧೦ – ೨೦ ಜನ ಪೋಲೀಸರು ಕೂಡಿ ದಸ್ತಗಿರಿ ಮಾಡಿ ಬೆಳಗಾಗುವ ತನಕ ರಿಮಾಂಡಿನಲ್ಲಿರಿಸಿ, ಮರುದಿನ ಬೆಳಗ್ಗೆ ಜಾಮೀನಿನಲ್ಲಿ ಬಿಟ್ಟಿರುವರಂತೆ!

ನಿನ್ನೆ ದಿವಸ ಇಲ್ಲಿನ ಉಪ್ಪಿನ ಸತ್ಯಾಗ್ರಹದಲ್ಲಿ ಅಪಾದಿತರೆಂದು ಪರಿಗಣಿಸಲ್ಪಟ್ಟು, ತಮಗೆ ವಿಧಿಯಾದ ಆರು ತಿಂಗಳ ಸಜೆಯನ್ನು ಪೂರ್ತಿಗೊಳಿಸಿ ಬಿಡುಗಡೆ ಹೊಂದಿದ, ಶ್ರೀಯುತ ಬಿ. ಟಿ. ಕೈ, ಮತ್ತು ನಾರಾಯಣ ಭಂಡಾರಿಗಳೆಂಬ ಎರಡು ಮಂದಿ ಸ್ವಯಂಸೇವಕರು ಸಾಯಂಕಾಲದ ಮೈಲುಗಾಡಿಗೆ ಸ್ವದೇಶವನ್ನು ಸೇರಿರುವರು. ಸದರಿಯವರು ಬರುವಾಗ ರೈಲುವೇ ಸ್ಟೇಶನಿನಲ್ಲಿ ರಾ। ಸರ್ಕಲ್ ಇನ್ಸಪೆಕ್ಟರ್ ಮತ್ತು ಸಬ್ ಇನ್ಸಪೆಕ್ಟರವರ ಸವಾರಿ ಹಾಜರಿದ್ದು, ಹೆಚ್ಚೇನು ಗಲಾಟೆಗಳು ಸಂಭವಿಸದಂತೆ ಹೆಚ್ಚಿನ ಪರಿಶ್ರಮಪಟ್ಟರೂ, ಸ್ಥಳೀಕ ಸ್ವಯಂಸೇವಕ ಸತ್ಯಾಗ್ರಹಿಗಳು ಸದರಿ ಬಿಡುಗಡೆ ಹೊಂದಿದವರ ಕೊರಳಿಗೆ ಹೂಮಾಲೆಯನ್ನು ಹಾಕುವ ಸಮಾರಂಭವನ್ನು ನಡಿಸಿಯೇ ಬಿಟ್ಟರು! ಆದರೆ ಜಯಕಾರ ಘೋಷಗಳು ಇದ್ದಿಲ್ಲ.

ಶ್ರೀ ವಿಠ್ಠಲ ರುಕುಮಾಯಿ ದೇವಸ್ಥಾನದಲ್ಲಿ ಸ್ಥಾಪಿಸಲ್ಪಟ್ಟ ಶ್ರೀ ವಿಠ್ಠಲ ರುಕುಮಾಯಿ ಭಜನಿ ಮಂಡಳಿಯವರು ಇದೇ ಪ್ರಮೋದ ಸಂವತ್ಸರದ ಕಾರ್ತಿಕ ಶು ೩ಯು ಚಂದ್ರವಾರ (ತಾ. ೨೭ – ೧೦ – ೩೦)ನೇ ಪ್ರಾತಃಕಾಲ ಘಂಟೆ ೬ಕ್ಕೆ ಭಜನಿ ಸಪ್ತಾಹವನ್ನು ಪ್ರಾರಂಭಿಸುವದೆಂತಲೂ, ಅದೇ ಕಾರ್ತಿಕ ಶು ೧೦ಯು ಚಂದ್ರವಾರ (ತಾರೀಕು ೩ – ೧೧ – ೩೦)ನೇ ಪ್ರಾತಃಕಾಲ ಘಂಟೆ ೬ಕ್ಕೆ ಭಜನಿ ಸಪ್ತಾಹದ ಮಂಗಲಾಚರಣೆಯ ಅವಭೃತಸ್ನಾನ ಮಾಡ ಪದೆಂತ ಸಹಾ ನಿಶ್ಚೈಸಿರುತ್ತದೆ ಶ್ರೀ ಗುರುದೇವತಾನುಗ್ರಹದಿಂದ ಆಚರಿಸತಕ್ಕ ಈ ಭಜನಿ ಸಪ್ತಾಹಕ್ಕೆ ತಾವು ತಮ್ಮಲ್ಲಿಯ ಸಂತವ ಬಳಿಯೊಡನೆ ಇಷ್ಟಮಿತ್ರರೊಡಗೂಡಿ ಬಂದು ಈ ಸಪ್ತಾಹವನ್ನು ಯಥಾಸಾಂಗವಾಗಿ ನಡಿಸಿಕೊಟ್ಟು ಶ್ರೀ ದೇವರ ಗಂಧಪ್ರಸಾದ ವಗೈರೆ ಯಥೋಪಚಾರಗಳನ್ನು ಸ್ವೀಕರಿಸಬೇಕಾಗಿ ಆಮಂತ್ರಣ ಕೊಡಟಿದೆ

ಮುನಿಸಿಪಾಲಿಟಿಯ ರಿಪೋರ್ಟಿನಂತೆ ಮಂಗಳೂರಲ್ಲಿ ತಾರೀಕು ೨೫ನೇ ಅಕ್ಟೋಬರ ೧೯೩೦ಕ್ಕೆ ಅಂತ್ಯವಾಗುವ ವಾರಕ್ಕೆ ಸರಿಯಾಗಿ ೪೫ ಜನನಗಳೂ ೨೩ ಮರಣಗಳೂ ಆಗಿರುವವೆಂದು ತಿಳಿದುಬರುತ್ತದೆ

ಮುಲ್ಕಿ ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿಗಳ ಕರ್ಣಸಂಘದ ಹದಿಮೂರನೆಯ ಸಭೆಯೂ ಇದೇ ಕಳೆದ ತಾ ೧೮ – ೧ – ೩೦ನೇ ಶನಿವಾರ ಪೂರ್ವಾಹ್ನ ಘಂಟೆ ೬ ೩೦ಕ್ಕೆ ಎಂದಿನಂತೆ ಇದೇ ಶಾಲೆಯಲ್ಲಿ ಮ॥ ರಾ॥ ಎಸ್ ಕೆ ನ್ಯಾಯಪತಿ ಆವರ್ಗಳ್‌ರವರ ಅಧ್ಯಕ್ಷತೆಯಲ್ಲಿ ಜರಗಿತು ಮುಂದಿನ ಸಭೆಯು ಇದೇ ಬರುವ ತಿಂಗಳ ತಾ ೧ ೧೧ ೩೦ನೇ ಶನಿವಾರ ಪೂರ್ವಾಹ್ನ ಘಂಟೆ ೮–೩೦ಕ್ಕೆ ಜರಗಿಸುವುದಾಗಿಯೂ ಅಂದು ಶ್ರೀಯುತ ಯಂ ಗೋವಿಂದ ಹೆಗ್ಡೆಯವರು 'ಸಮಯದ ಬೆಲೆ' ಎಂಬುದರ ಕುರಿತು ಒಂದು ಉಪನ್ಯಾಸವನ್ನು ಬರೆದುತಂದು ಓದುವದಾಗಿಯೂ ನಿರ್ಣಯಿಸಲಾಯಿತು

ಇಲ್ಲಿಯ ಸೆಂಟರಿನ ಉಪಾಧ್ಯಾಯರ ಸಂಘದ ಈ ತಿಂಗಳ ಸಾಮಾನ್ಯ ಮಾಸಿಕ ಸಭೆಯು ಇದೇ ಕಳೆದ ತಾ। ೧೮ – ೧೦ – ೩೦ನೇ ಶನಿವಾರ ಅಪರಾಹ್ನ ಘಂಟೆ ೨ ೩೦ಕ್ಕೆ ಸ್ಥಳೀಕ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಅಬ್ಕಾರಿ ಸಬ್ ಇನ್ಸಪೆಕ್ಟರ ಮ॥ ರಾ॥ ಯಂ ಸೋಮಯ್ಯ ಅವರ್ಗಳ್ ಬಿ ಎ ರವರ ಸಭಾಧ್ಯಕ್ಷತೆಯಲ್ಲಿ ಕೂಡಿ ಬಂತು ಈ ಸಂಘದ ಮುಂದಿನ ಸಭೆಯು ಇದೇ ಬರುವ ತಾರೀಕು ೨೯ – ೧೧ – ೩೦ನೇ ಶನಿವಾರ ಅಪರಾಹ್ನ ಗಂಟೆ ೨,೩೦ಕ್ಕೆ ಕೊಳಕಾಡಿ ವಿದ್ಯಾಪ್ರಚಾರಿಣೀ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕೂಡಲಿರುವದು

**ಫರಂಗಿಪೇಟೆ** — ಈ ಸೆಂಟರಿನ ಉಪಾಧ್ಯಾಯರ ಮಾಸಿಕ ಸಭೆಯು ತಾ ೨೫ನೇ ಶನಿವಾರ ದಿನ ಫರಂಗಿಪೇಟೆ ಶ್ರೀರಾಮಾ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಪುತ್ತೂರು ತಾಲೂಕು ಬೋರ್ಡ್ ಪ್ರೆಸಿಡೆಂಟ್ ಶ್ರೀಯುತ ಮೊಳಹಳ್ಳಿ ಶಿವರಾಯರವ ಅಧ್ಯಕ್ಷತೆಯಲ್ಲಿ ಜರಗಿತು ಮೊದಲನೇ ಪುಸ್ತಕದ ೧೯ನೇ ಮತ್ತು ೨೦ನೇ ಆವೃತ್ತಿಗಳಲ್ಲಿ ಹಲವು ಬದಲಾವಣೆಗಳು ಇದ್ದು — ೧೯ನೇ ಆವೃತ್ತಿ ಪುಸ್ತಕಗಳು ಉಪಯೋಗಕ್ಕೆ ಬಾರದೆ ಹಳ್ಳಿಯ ಬಡ ಹೆತ್ತವರು ಹೆಚ್ಚಿನ ನಷ್ಟಕ್ಕೆ ಗುರಿಯಾಗಬೇಕಾದ್ದರಿಂದ ಮುಂದಿನ ಆವೃತ್ತಿಗಳನ್ನು ಮಾಡುವಾಗ ಅಲ್ಪ ಸ್ವಲ್ಪ ಅನಾವಶ್ಯಕ ಬದಲಾವಣೆಗಳಿಂದ ಹಿಂದಿ ಪುಸ್ತಕಗಳು ಅಪ್ರಯೋಜಕಗಳಾಗಿ ಆಗದಂತೆ ಗ್ರಂಥ ಕರ್ತರಿಗೆ ಸೂಚಿಸಬೇಕಾಗಿ ನಿರ್ಣಯಿಸಲಾಯಿತು ಮುಂದಿನ ಸಭೆಯನ್ನು ತಾ ೨೨–೧೧ ೩೦ರಲ್ಲಿ ಫರಂಗಿಪೇಟೆಯಲ್ಲಿ ಜರಗಿಸಬೇಕಾಗಿ ನಿರ್ಧರಿಸಲಾಯಿತು ಬಳಿಕ ಅಧ್ಯಕ್ಷರು ಎ ಮತ್ತು ಎಲ್ ಟಿ ಗ್ರೇಡ್ ಶಿಕ್ಷಣದ ಯೋಗ್ಯತೆಗಳು ಉಪಾಧ್ಯಾಯರ ದೃಷ್ಟಿ ಸೋಕ್ ... ಸಾಧ್ಯವಾಗುವ ರೀತಿಯಲ್ಲಿ ಇಟ್ಟುಕೊಳ್ಳತಕ್ಕ ಕ್ರಮ ಸಂಘಗಳು ಮೆಲ್ಲ ... ಶಿಕ್ಷಣಕ್ಕಿಂತಲೂ ಅವುಗಳಲ್ಲಿ ಇತರ ಚಟುವಟಿಕೆಗಳ ಮೂಲಕ ಆಕರ್ಷಿಸುವ ಉಪಾಯ ಓರ್ವ ಪ್ರೆಸಿಡೆಂಟ್ ಘಂಟಿನ ಪ್ರಯೋಜನವನ್ನು ಎಲ್ಲಾ ಉಪಾಧ್ಯಾಯರು ಹೊಂದುವ ಉಪಾಯ ಉಪಾಧ್ಯಾಯರ ಪೆನ್ಷನ್ ಫಂಡ ವರ್ಧಿಸುವ ವಿಧಾನ ಸೆಂಟರಿನವರು ಪತ್ರಿಕೆಗಳನ್ನು ತರಿಸಿ ಓದುವದರ ಮುಖ್ಯ ಪ್ರಯೋಜನ ಇವೇ ಮೊದಲಾದ ಉಪಯುಕ್ತವಾದ ಸಂಗತಿಗಳ ಕುರಿತು ತಮ್ಮ ಅನುಭವಯುಕ್ತವಾದ ಹಿತನುಡಿಗಳಿಂದ ಮೆಂಬರರು ಕೇಳಿದ ಪ್ರಶ್ನೆಗಳಿಗೆ ಉತ್ತರ ರೂಪವಾಗಿ ತಮ್ಮ ಭಾಷಣವನ್ನು ಮಾಡಿ ಸಭೆಯು ವಂದನೆಯೊಂದಿಗೆ ಮುಕ್ತಾಯ ಮಾಡಲ್ಪಟ್ಟಿತು.

**ತೋಕೂರು ಜೋಗಟ್ಟೆ** — ತಾ ೧೮ ೧೦ ೩೦ನೇ ದಿನ ಮ ರಾ ಮಂಗಳೂರು ತಾಲೂಕು ಬೋರ್ಡ್ ಪ್ರೆಸಿಡೆಂಟರವರು ಮಂಗಳೂರಿನಿಂದ ಬಜಪೆ ಮಾರ್ಗವಾಗಿ ಇಲ್ಲಿಗೆ ಬಂದು ತಾಲ್ಲೂಕು ಬೋರ್ಡಿನಿಂದ ಮಾಡಿಸಿದ ರಾಜರಸ್ತೆಯನ್ನು ನೋಡಿ ಇಲ್ಲಿ ಎಲಿಮೆಂಟರಿ ಶಾಲೆಯನ್ನು ಸಂದರ್ಶಿಸಿ ಸುರತ್ಕಲ್ ಅತ್ತಕಡೆ ಪಯಣ ಬೆಳೆಸಿದರು

**ಗುಪ್ಪುರ** — ಇಲ್ಲಿಯ ಪಂಚಾಯತ ಕೋರ್ಟು ಇದರಿಗೆ ಸುಮಾರು ಎರಡು ತಿಂಗಳುಗಳಿಂದ ಮುಚ್ಚಲ್ಪಟ್ಟಿದೆ ಕಾರಣ ಗೊತ್ತಾಗಲಿಲ್ಲ ಕೋರ್ಟಿನ ರಿಕಾರ್ಡು ಇನ್ಸಪೆಕ್ಷನ್ ಬಗ್ಗೆ ಮಂಗಳೂರು ಡಿ ಮು ಕೋರ್ಟಿಗೆ ಕಳುಹಿಸಿ ಕೊಟ್ಟಿದ್ದರಿಂದ ಎರಡು ಹಪ್ತೆಗಳಿಗೆ ಕೋರ್ಟು ಮುಂದರಿಯದಾಗಿ ಪ್ರಥಮತಃ ಹುಕುಂ ಆನಂತರ ಈ ವರೆಗೂ ಕೋರ್ಟು ಬಾಗಲು ತೆರೆದದ್ದಿಲ್ಲ ಮೆಂಬರರಿಗೂ ಕಕ್ಷಿಗಾರರಿಗೂ ಕೋರ್ಟು ಬಾಗಲಿಗೆ ಕೈಮುಗಿದು ಹೋಗುವ ಕೆಲಸ. ರಿಕಾರ್ಡು ತಲಪಿಕ್ಕೆ ಉಗ್ರಾಣೆಯರು ಸಿಕ್ಕುವುದಿಲ್ಲವೆಂತಲೂ ತಾನೇ ರಾಜೀನಾಮೆ ಕೊಡುವುದರಲ್ಲಿದ್ದೇನೆಂತ ಪ್ರೆಸಿಡೆಂಟರ ಅಪ್ಪಣೆ. ಈ ವಿಷಯದಲ್ಲಿ ರೆವಿನ್ಯೂ ಡಿ ಅಫೀಸರರ ಬಳಿಗೆ ಪ್ರೆಸಿಡೆಂಟರ ರಿಪೋರ್ಟು ಹೋಗಿಯದೆಂತ ತಿಳಿಯುತ್ತೇವೆ. ಇನ್ನಾದರೂ ಸಮಂಧಪಟ್ಟ ಆಫೀಸರರು ಈ ಕುರಿತು ವಿಚಾರ ಕೊಟ್ಟರೆ ಮುಚ್ಚಿದ ಬಾಗಿಲು ತೆರಿಯುವಂತಾಗುತ್ತಿತ್ತು! ಅಥವಾ ಖಾಯಂ ಆಗಿ ಮುಚ್ಚಿಬಿಟ್ಟರೆ ಕೋರ್ಟಿಗೆ ಬಂದು ಹೋಗುವ ಗ್ರಾಮಸ್ಥರಿಗೆ ಉಪಕಾರವಾದರೂ ಮಾಡಿದಂತಾಗುತ್ತಿತ್ತು.

**ಮುಲ್ಲೂರು** — ತಾ ೨೫ – ೧೦ – ೩೦ನೇ ಶನಿವಾರ ೯ ಘಂಟೆಗೆ ಮುಲ್ಲೂರು ಪಂಚ್ಯಾತ ಒಂದು ಮಹಾಸಭೆಯು ಸದರಿ ಸಂಸ್ಥೆಗೆ ಸಮ್ಮಂಧಪಟ್ಟ ಶಾಲೆಯಲ್ಲಿ ರಾಜಶ್ರೀ ಪುತ್ತೂರು ತಾಲೂಕು ಬೋರ್ಡ್ ಪ್ರೆಸಿಡೆಂಟ್ ಮೊಳಹಳ್ಳಿ ಶಿವರಾಯರ ಸಮಕ್ಷಮದಲ್ಲಿ ಜರಗಿತು ಸಭೆಗೆ ಅನೇಕ ಮಂದಿ ಊರ ಪರಊರ ಗೃಹಸ್ಥರು ದಯ ಮಾಡಿಸಿದ್ದರು ಈ ಪಂಚ್ಯಾತ ಬೋರ್ಡ್ ಶಾಲೆಯು ೩ ವರ್ಷಗಳಿಂದ ಮುಲ್ಲೂರು ಶ್ರೀ ಮಲರಾಯಸ್ಥಾನದ ಗೋಪುರದಲ್ಲಿ ನಡೆಯುತ್ತಿದ್ದು, ಪ್ರತ್ಯೇಕ ಕಟ್ಟೋಣವಿಲ್ಲದೆ ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲಿನವರು ಮಂಜೂರಾತಿ ಕೊಡುವುದಕ್ಕೂ ಮದ್ರಾಸು ಪಂಚ್ಯಾತ ರಿಜಿಸ್ಟ್ರಾರರ ಜನರಲರವರು ಗ್ರಾಂಟು ಕೊಡುವುದಕ್ಕೂ ನಿರಾಕರಿಸಿ, ಆ ಬಾಬಿನಲ್ಲಿ ತಕ್ಕ ತನ್ನ ಬಗ್ಗೆ ರಿಕಾರ್ಡುಗಳು ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲ್ ಮೆಂಬರ್ ರಾ। ಮೊಳಹಳ್ಳಿಯವರಿಗೆ ಕಳುಹಿಸಲ್ಪಟ್ಟದ್ದರಿಂದ ಅವರು ಈ ದಿನ ಅಲ್ಲಿಗೆ ಬಂದು ಪಂಚ್ಯಾತದ ಹಾಗು ಪಂಚ್ಯಾತ ಶಾಲೆಯ ಸಕಲ ಸ್ಥಿತಿ ವೃತ್ತಾಂತಗಳನ್ನು ನೋಡಿಯೂ ಕೇಳಿ ತಿಳಿದು ಅನುಭವ ಮಾಡಿಕೊಂಡು ಪ್ರಕೃತ ಈ ಶಾಲೆಗೆ ಹಂಗಾಮಿ ಮಂಜೂರಾತಿಯು ದೊರೆಯಬಹುದಾದರೂ ಇನ್ನು ಮುಂದೆ ಶಾಲೆಯು ಖಾಯಂ ಆಗಿ ನಡೆಯಬೇಕಾದರೆ ಕಟ್ಟೋಣವು ಅತೀ ಅಗತ್ಯವೆಂದು ವಿವರಿಸಿ ಒತ್ತಿ ಹೇಳಿ ಆ ಬಗ್ಗೆ ಎರಡು ಸ್ಥಳಗಳನ್ನು ನೋಡಿ ಆ ಸ್ಥಳಗಳ ಪೈಕಿ ಜಿಲ್ಲಾ ವಿದ್ಯಾಧಿಕಾರಿಗಳು ಮಂಜೂರು ಮಾಡಿದ ಸ್ಥಳದಲ್ಲಿ ಕೂಡಲೇ ಕಟ್ಟೋಣದ ಕೆಲಸವನ್ನು ಪ್ರಾರಂಭಿಸುವದೆಂದು ೧೩ ಮಂದಿ ಸಹಾಯಕರನ್ನು ಗೊತ್ತು ಮಾಡಿ ಅದರ ಪೈಕಿ ರಾ ದಮ್ಮಲೆ ದೇವುಶೆಟ್ಟಿ, ರಾ ಗುಂಡಿಲ ಮಂಜಪ್ಪ ಶೆಟ್ಟಿ, ಮ॥ ಮುಲ್ಲೂರು ಬೆಯ್ಯಪ್ಪರಿಗಳು ಈ ಮೂವರನ್ನು ಕಾರ್ಯನಿರ್ವಾಹಕರನ್ನಾಗಿ ಆರಿಸಿ ಕಟ್ಟೋಣದ ಸಮಸ್ತ ಜವಾಬ್ದಾರಿಗಳು ವಹಿಸಿಕೊಡಲಾಯಿತು, ರಾ। ಮೊಳಹಳ್ಳಿ ಶಿವರಾಯರ ಆಗಮನದಿಂದ ಗ್ರಾಮಸ್ಥರಲ್ಲಿ ಉತ್ಸಾಹ ಹುಟ್ಟಿದಂತೆ ಕಂಡು ಬರುವುದರಿಂದ ಇನ್ನು ಮುಲ್ಲೂರು ಗ್ರಾಮ ಪಂಚ್ಯಾತಿಯು ತನ್ನ ಕರ್ತವ್ಯವನ್ನು ಸರಿಯಾಗಿ ಉತ್ತೇಜನ ಪೂರ್ವಕ ನೆರವೇರಿಸಿ ವೃದ್ಧಿ ಹೊಂದುವುದಾಗಿ ನಿರೀಕ್ಷೆ ಸೋಜಾಗಿಯದೆ,

**ಕಲ್ಲಡ್ಕ** — ಸೆಂಟರಿನ ಉಪಾಧ್ಯಾಯರ ಸಂಘದ ಸಭೆಯು ಇದೇ ತಿಂಗಳ ತಾ ೨೫ನೇ ಶನಿವಾರ ಕಲ್ಲಡ್ಕ ಬೋರ್ಡು ಶಾಲೆಯಲ್ಲಿ ಜರಗಿತು ಈ ವರುಷ ಮಹಾಸಭೆಯನ್ನು ವಾಯಿದೆಹಾಟಿದ್ದರಿಂದ ಮಾಡುವದು ಬೇಡವೆಂದಾಯಿತು. ಮೆಂಬರರಿಗೆ ಸ್ವಲ್ಪ ಸಮ ಉಳಿದಂತಾಯಿತು. ಸೆಕ್ರೆಟರಿಯವರಿಗೆ ಕಷ್ಟ ಪಡುವದು ಉಳಿಯಿತು

**ಪಾಣೆಮಂಗಳೂರು** — ಬೋರ್ಡು ಹುಡುಗಿಯರ ಶಾಲೆಗೆ ಲೋವೆಸ್ಟ್ ಆಂಟಿಯೆ ಮನ್ನು ಮಾಡುವ ಕೋಣೆ ಅಗತ್ಯಬೇಕೆಂದು ಇನ್ಸಪೆಕ್ಟರ್ ಕಾಲದಲ್ಲಿ ಸಬ್ ಅಸಿಸ್ಟಂಟ್ ಇನ್ಸಪೆಕ್ಟರರವರು ಬರೆದಿರುವರು ಮಾರ್ಗದ ಬದಿಯಲ್ಲಿರುವ ಹುಡುಗಿಯರ ಶಾಲೆಗೆ ಮೂತ್ರ ಶಂಕೆಗೆ ಒಂದು ಯೂರಿನಲ್ ಅಥವಾ ಪಾಯಿಖಾನೆ ಬೇಕೆಂದು ಬರಿಯಲು ಇನ್ಸಪೆಕ್ಟರವರ ಗೋಚರಕ್ಕೆ ಬಾರದೆ ಇದ್ದುದು ಆಶ್ಚರ್ಯಕರವಾಗಿದೆ ತೋಟ ಮಾಡಬೇಕಂತೆ ತೋಟಕ್ಕೆ ನೀರು ಹೊಯ್ಯುವವರು ಯಾರು? ಹುಡುಗಿಯರೋ ಮಿಸ್ಟ್ರೆಸುಗಳೋ ಹಿಚ್ಚು ಉಳಿಯುವುದಕ್ಕಾಗಿ ಮೂಜ ಪ್ರೈವೇಟು ಶಾಲೆಗಳು ಕಂಡಕ್ಟರುಗಳನ್ನು ಕೆಲಸಕ್ಕಿಟ್ಟಿದ್ದಾರೆ ಕಂಡಕ್ಟರನ್ನು ಈಗಿನ ಪ್ರೆಸಿಡೆಂಟರು ಒಂದಕ್ಕೆ ಅರ್ಧ ಕಡಿಮೆ ಮಾಡಿದ್ದಾರೆ ಇದರಿಂದ ಶಾಲೆಗಳಲ್ಲಿ ಹುಡುಗರು ... ಅನೇಕ ಹೋದ ಹೋದ ಶಾಲೆಗಳಲ್ಲಿ ಇನ್ಸಪೆಕ್ಟರವರ ಕಣ್ಣಿಗೆ ಬೀಳುತ್ತದೆ

**ಉಡುಪಿ** — ನಮ್ಮ ಪ್ರಾಂತ್ಯದ ಮಾನ್ಯ ಗವರ್ನರರು ನಮ್ಮ ಜಿಲ್ಲೆಗೆ ಬಂದ ವೇಳೆ ಉಡುಪಿಯಲ್ಲಿ ... ರವರನ್ನು ಪೋಲೀಸರು ತಡೆದಿಟ್ಟಿದ್ದರಷ್ಟೆ ಅವರ ಪೈಕಿ ... ಇದೇ ತಾ ೨೫ಕ್ಕೆ ಇಲ್ಲಿನ ಸ್ಟೇಷನರಿ ಸಬ್ ಮೆಜಿಸ್ಟ್ರೇಟರು ... ಸಮನ್ಸು ಕೊಡಲಾಗಿತ್ತು ಅವರು ಪ್ರಚಲಿತವಾಗಿ ... ನೆಯ ಸೆಕ್ಷನನ್ನು ಉಲ್ಲಂಘಿಸಿದರೆಂಬ ಅಪರಾಧದ ಮೇರೆಗೆ ... ತಿಂಗಳ ಮತ್ತು ಇನ್ನೊಬ್ಬನು ೩ ತಿಂಗಳ ಕಠಿಣ ಸಜೆಗೆ ಗುರಿಮಾಡಲ್ಪಟ್ಟಿದ್ದಾರೆ

ಬರುವ ನವಂಬರ ತಾ ೧೦ರಿಂದ ಬರದನೆಯ ಸೆಕ್ಷನ್ ೧೪೪ನೇ ಸೆಕ್ಷನು ಮಂಗಳೂರಿನಲ್ಲಿ ಹಾಕಿದ ಮಂತೆಯೇ ... ಇನ್ನೆರಡು ತಿಂಗಳ ತನಕ ಜಾರಿಯಲ್ಲಿರುವುದು ಪ್ರಕಟವಾಗಿದೆ

... ಕಮಿಟಿಯ ವರವಾದ ... ಪಂಚ್ಯಾತದಲ್ಲಿ ಪ ... ತಾಲೂಕು ಬೋರ್ಡ್ ಕಮ್ಮ ಇಲ್ಲಿನ ... ಕ್ರಿಕೆಟ್ ಟೀಮಿಗೆ ... ಇದೇ ... ಕುಂದಾಪುರ ... ಜಿನಸಿನಲ್ಲಿ ೮ – ೫ ಮಣಗಳಿಂದ ಕ್ರಿಕೆಟ್ ಆಟದಲ್ಲಿ ಜಯಶಾಲಿಯಾಗಿರುವುದು

ಮೋಟಾರು ಟಿಕೇಟಿನ ದರಗಳು ಇನ್ನೂ ಸುಸ್ಥಿತಿಗೆ ಬಂದಿಲ್ಲ. ಇದರ ಕಳೆದ ವಾರಕ್ಕಿಂತ ಕೆಲವು ಕಂಪೆನಿಗಳಲ್ಲಿ ಟಿಕೇಟುಗಳು ಸ್ವಲ್ಪ ಕಡಿಮೆ ಆಗಿನೇ ದೊರಕುತಿವೆ ಬಡ ಪ್ರಯಾಣಿಕರ ಭಾಗ್ಯವು ಇನ್ನೆಷ್ಟು ದಿನಗಳ ವರೆಗೊ ನೋಡಬೇಕ್ಕಿದೆ! ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಎಲ್ಲಾ ವಿಷಯಗಳನ್ನು ಪರಿಶೋಧನೆ ಮಾಡಿ ಸಮಾಲೋಚಿಸಿ ಟಿಕೇಟು ದರಗಳನ್ನು ಆದಷ್ಟು ಕಡಿಮೆ ಮಾಡಲು ಪ್ರಯತ್ನ ಮಾಡಬಹುದಾಗಿತ್ತು.

ಒಂದು ವಾರದಿಂದ ಗಾಳಿಮಳೆಗಳು ಚೆನ್ನಾಗಿ ಬರುತ್ತಿದ್ದು, ಕೊಯ್ಲಿಗೆ ಹಾನಿಕರವಾಗಿದೆಯಲ್ಲದೆ ಜನರ ಆರೋಗ್ಯವೂ ಕೆಟ್ಟಿದೆ, ಅಕ್ಕಿಯ ಧಾರಣೆ ಇಳಿತರವಿಲ್ಲ

ಕುಂದಾಪುರದಲ್ಲಿ ಶ್ರೀ ಕುಂದಾಪುರ ಪುಂಡಲೀಕ ಕಮ್ತಿಯವರ ಮೇಲೆ ಹೂಡಿರುವ ಪ್ರೆಸ್ ಆಕ್ಟಿನ ಮೊಕದ್ದಮೆಯು ಮೊನ್ನೆ ತಾರೀಕು ೨೭ಕ್ಕೆ ಸ್ವಲ್ಪ ವಿಚಾರಣೆಯಾಗಿ ಬರುವ ನವಂಬರ ತಾ. ೧೧ಕ್ಕೆ ಮುಂದೆ ರಿಸಿಡೋಕಾಗಿಯದೆ ಎಂದು ತಿಳಿದುಬರುತ್ತದೆ

ಶಾಲಿವಾಹನಶಕ ೧೮೫೨ನೆಯ ಪ್ರಮೊ. ಸಂ। ಕಾರ್ತಿಕ ಶು। ೧೦ ಶನಿವಾರದಿಂದ ಪ್ರಮೊ. ಸಂ।ರದ ಕಾರ್ತಿಕ ಬ।೧ ಶುಕ್ರವಾರದ ವರೆಗಿನ ಪಂಚಾಂಗ.

(ಗ್ರಾಹ್ಯಂಶೆಯ ಕುರಾ—ಬೋಂಕೆಲ್)

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | [illegible] | ಸೂರ್ಯ ಉ | ಅಸ್ತ |
|---|---|---|---|---|---|---|---|---|
| 1 | ಶನಿ | ೧೦ | ೧೦,೩೧ | ಶತಭಿಷಾ | [illegible] | [illegible] | 6 26 | 6 3 |
| 2 | ರವಿ | ೧೧ | [illegible] | ಪೂ. ಭಾ. | [illegible] | [illegible] | 6 26 | 6 3 |
| 3 | ಸೋಮ | ೧೨ | [illegible] | ಉ. ಭಾ. | [illegible] | [illegible] | 6 27 | 6 3 |
| 4 | ಮಂಗಳ | ೧೩ | [illegible] | ರೇವತೀ | [illegible] | [illegible] | 6 27 | 6. 3 |
| 5 | ಬುಧ | ೧೪ | [illegible] | ಅಶ್ವಿನೀ | [illegible] | [illegible] | 6 27 | 6. 4 |
| 6 | ಗುರು | ⊙ | [illegible] | ಭರಣೀ | [illegible] | [illegible] | 6.28 | 6 2 |
| 7 | ಶುಕ್ರ | ೧ | [illegible] | ಕೃತ್ತಿಕಾ | [illegible] | [illegible] | 6 28 | 6. 2 |

## ಮಂಗಳೂರಿನ ವಾಯುಸ್ಥಿತಿ.

| Date ತಾರೀಖು | Temperature. ಉಷ್ಣ (ಕಾವು) Maximum ಹೆಚ್ಚು | Minimum ಕಡಿಮೆ | Rainfall ಮಳೆ ದಿನದ ಮಳೆ | ಒಟ್ಟು ಮಳೆ. |
|---|---|---|---|---|
| 24 | 89— 7 | 77— 8 | — | — |
| 52 | 89— 7 | 77— 7 | — | — |
| 26 | 85— 8 | 75— 3 | 0—15 | — |
| 27 | 85— 3 | 74— 4 | 0—53 | — |
| 28 | 84— 8 | 74— 5 | 0—64 | — |
| 29 | 79— 8 | 71- 9 | 1—86 | — |
| 30 | 84— 7 | 73— 2 | — | 136 ·54 |

## ಮಂಗಳೂರಿನ ಪೇಟೆ ಧಾರಣೆ.

| ಜಿನಸು | | ಇಂದ ರೂ. ಆ | ವರೆಗೆ ರೂ. ಆ |
|---|---|---|---|
| ಮಸ್ಕತಿ | .. | 7 – 10 | 8 — 4 |
| ಗುಡ್ಡ | ... | 7 – 4 | 7 — 10 |
| ರಾಶಿ | .. | 6 – 14 | 7 — 8 |
| ಊರ ಅವ್ವಲ್ ಬೆಳ್ತಿಗೆ | ... | 7 - 8 | 8 10 |
| ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ | .. | 10 — 8 | 11 – 0 |
| ಸುಗ್ಗಿ | | 7 — 4 | 7 – 6 |
| ಎಲ್ಲಾ ರುಬೆಳ್ತಿಗೆ ಮುಡಿ ೧ಕ್ಕೆ | | 6 — 8 | 6 — 10 |
| ಗೋಧಿ ಗೋಣಿ ೧ಕ್ಕೆ | .. | 11 — | 18 — 0 |
| ಹುರುಳಿ ಗೋಣಿ ೧ಕ್ಕೆ | . | 6 — 8 | — |
| ಕಡಲೆ ಗೋಣಿ ೧ಕ್ಕೆ | ... | 12 – 8 | 15 — 8 |
| ತೊಗರಿ ಗೋಣಿ ೧ಕ್ಕೆ | ... | 13 – 0 | 13 8 |
| ತೊಗರಿಬೇಳೆ ಗೋಣಿ ೧ಕ್ಕೆ | ... | 15 — 8 | 25 — 0 |
| ಉದ್ದು ಗೋಣಿ ೧ಕ್ಕೆ | ... | 13 — 0 | 14 – 0 |
| ಹೆಸರು ಗೋಣಿ ೧ಕ್ಕೆ | .. | 14 — 8 | — |
| ಊರು ಬೆಲ್ಲ ಖಂಡಿ ೧ಕ್ಕೆ | ... | 47 — 8 | 52 – 0 |
| ಉಪ್ಪು ಗೋಣಿ ೧ಕ್ಕೆ | ... | 4 — 6 | 4 — 10 |
| ಬೊಬ್ರ ಖಂಡಿ ೧ಕ್ಕೆ | . | 70 - 0 | 75 - |
| ತೊಪ್ರ ಹಿಂಡಿ ಖಂಡಿ ೧ಕ್ಕೆ | ... | 30 — | 31 — 0 |
| ಎಳ್ಳಿಂಡಿ ಖಂಡಿ ೧ಕ್ಕೆ | . | 27 — 8 | 30 — 0 |
| ತೊಪ್ರ ಎಣ್ಣೆ ಮುಡಿ ೧ಕ್ಕೆ | . | 6 — 5 | 6 — 4 |
| ಎಳ್ಳೆಣ್ಣೆ ಮುಡಿ ೧ಕ್ಕೆ | .. | 7 — 0 | 7 - 6 |
| ಬಿಡುಗನ್ನೆ ಪಟ್ಟಿಗೆ ೧ಕ್ಕೆ | ... | 4 — 7 | 8 - 12 |
| ಮೋರಿಸ ಸಕ್ಕರೆ ಮುಡಿ ೧ಕ್ಕೆ | ... | 3 — 8 | 3 — 8 |
| ಹೊಸ ಮೆಣಸು | ... | 6 — 4 | 7 — " |
| ಸಾಸಿವೆ ಮುಡಿ ೧ಕ್ಕೆ | | 8 — 0 | 8 — 4 |
| ಕೊತ್ತುಂಬರಿ ಮುಡಿ ೧ಕ್ಕೆ | ... | 2 — 8 | 3 — 4 |
| ವೆಲಿಪ್ ಕಾಫಿ ಖಂಡಿ ೧ಕ್ಕೆ | .. | 240 – 0 | — |
| ಕಾಳುಮೆಣಸು ಖಂಡಿ ೧ಕ್ಕೆ | | 240 - 0 | – |
| ಯೇಲಕ್ಕಿ ಮುಡಿ ೧ಕ್ಕೆ | . | 32 — 0 | — |
| ಗೇರುಬೀಜ ಮುಡಿ ೧ಕ್ಕೆ | | 3 — 12 | 4 — 0 |
| ಕಲ್ಲಿದ ಖಂಡಿ ೧ಕ್ಕೆ | ... | 42 — 8 | 46 — 0 |
| ತಾಂಬ್ರ ತಗಡು ಮುಡಿ ೧ಕ್ಕೆ | ... | 14 — 8 | 14 — 10 |
| ತಾಂಬ್ರ ಪಾತ್ರೆಗಳು ಮುಡಿ ೧ಕ್ಕೆ | ... | 20 — 0 | 21 — 0 |
| ಅಡಿಕೆ ಸೇರು ೧ಕ್ಕೆ | ... | 12 — 4 | 12 — 8 |
| ಹಿತ್ತಾಳೆ ತಗಡು ಮುಡಿ ೧ಕ್ಕೆ | ... | 13 — 8 | 13 — 9 |
| ಸೀಸ ೧ಕ್ಕೆ | ... | 13—8—9 | — |
| ಮುಂಡಿಕಾಯಿ ಖಂಡಿ ೧ಕ್ಕೆ | ... | 37 — 8 | 43 — 12 |
| ಪಿಬೆರಿ ಕಾಫಿ ಖಂಡಿ ೧ಕ್ಕೆ | ... | 230 — | — |
| ಕರಿಮೆಣಸು | ... | 85 — | 90 — |
| ಹೊಸಕಾಫಿ | ... | 00 — | 120 — |

# Chikmagalur Public Conveyance Motor Service.

## CHIKMAGALUR.

# ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

### ಚಿಕ್ಕಮಗಳೂರು.

ತಂತಿ ವಿಳಾಸ: ಕನ್ವೆಯನ್ಸ್, Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಮಹಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M. Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

### ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1¼ ಘಂಟೆ ಅವಕಾಶಕೊಟ್ಟು 7¼ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ, ಮೈಸೂರುಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಪ್ಪಿ ಮೋಟಾರ ಸ್ಟೇಶನ್ ಅದ ಧರ್ಮಸ್ಥಳ ರೋಡಿಗೆ ದಿ। 1-30ಕ್ಕೂ, ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲುಪಿ, ಆ ಟ್ಯಾಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು ಕಣ್ಣನೂರು ಪ್ರಾಂತಗಳಿಗೂ ಅಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10-30ಕ್ಕೆ ಬೆಳ್ತಂಗಡಿಗೂ 11 ಗಂಟೆಗೆ ಧರ್ಮಸ್ಥಳದ ರೋಡಾದ ಉಪ್ಪಿ ಸ್ಟೇಷನಿಗೂ, 12 ಗಂಟೆಗೆ ಚಾರ್ಮಾಡಿಗೂ, 12 30ಕ್ಕೆ ಮೈಸೂರು ಗಡಿಗೂ, ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೆ ಸುಮಾರು 4 ಗಂಟೆಗೆ ಮೂಡಗೆರೆಗೂ, 5 ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡರಾಪುರ, ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 8-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ ಪೂನಾ, ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸಂಜರುಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಳಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎಸ್. ಹನುಮಂತಪ್ಪ, ಫ್ಯಾರಡೂನ್ ಸೊರಾಬ್, ಕೆ ಸೂರಪ್ಪ ಶೆಟ್ಟಿ

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ ಪಿ ಸಿ ಕಂಪೆನಿಯವರ ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

# THE CANARA PUBLIC CONVEYANCE CO., LTD, MANGALORE.

(ESTABLISHED 1914)

# ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

## ಮಂಗಳೂರು.

### ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು,

**ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ**

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ ಕಂಬಳೆ ಮಾರ್ಗವಾಗಿಯೂ ಎರಡಾವರ್ತಿ ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕೇವಲ ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

**ಕಾರ್ಕಳ ಗೋಮಟೇಶ್ವರನ**

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

**ಕೊಲ್ಲೂರು ಮೂಕಾಂಬಿಕಾ ದೇವಾಲಯ**

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಹರಿಹರ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

**Secretary,**
*The Canara Public Conveyance Co., Ltd., Mangalore.*

# ವಿವಿಧ ಸಮಾಚಾರಗಳು.

## ಇಂಡಿಯನ್ ರೈಲ್ವೆ ಕಾನ್‌ಫರೆನ್ಸ್

ಹಲಕೆಲವು ರೈಲ್ವೆ ಕಂಪೆನಿಗಳು ಅನುಸರಿಸುವ ಕ್ರಮ ಬದಲಾವಣೆಗಳ ವಿಚಾರವನ್ನು ಪರಿಶೋಧಿಸುವುದಕ್ಕಾಗಿ "ಎಡ್ವೈಸರಿ ಕಮಿಟಿ" ಎಂಬುದೊಂದು ಸಂಘವು ಸ್ಥಾಪಿಸಲ್ಪಟ್ಟಿರುವದು. ಈ ಸಂಘದ ರಿಪೋರ್ಟಿನಲ್ಲಿ ತೋರುವಂತೆ ಮಿ। ಜಾರಾಡರೇ ಮೊದಲಾದವರು ತಮ್ಮ ಅಭಿಪ್ರಾಯಗಳನ್ನು ಸೂಚಿಸುವ ಕೆಲವು ಚಿಕ್ಕ ಭಾಷಣಗಳನ್ನು ಮಾಡಿದರು; ಸದರಿ ಜಾರಾಡರು ತನ್ನ ಭಾಷಣದಲ್ಲಿ ರೈಲ್ವೇ ಆಫೀಸರರ ಆಗತ್ಯತೆಯನ್ನು ಮುಂದಿಟ್ಟು ಮಾಡಿರುವರು; ಮತ್ತು ಅಂತಹ ಆಫೀಸರರು ಕೆಲಸದವರೊಡನೆ ಬಹಳ ಪ್ರೀತಿ ವಾತ್ಸಲ್ಯಗಳಿಂದಿರಬೇಕೆಂದೂ, ಹಾಗೆ ಮಾಡಿದ್ದಲ್ಲಿ ಕೆಲಸಗಾರರ ಕಷ್ಟಗಳನ್ನು ಸ್ವತಃ ತಿಳಿಯಲವಕಾಶ ದೊರೆಯುವದೆಂದೂ ಹೇಳಿದರು. ಜಾರಾಡರು ಕೆಲಸದವರನ್ನು ತುಂಬಾ ಪ್ರೀತಿಸುವರು ಮತ್ತು ಅವರ ಕುಟುಂಬವು ವಂಶಪಾರಂಪರ್ಯವಾಗಿ ಅಭಿವೃದ್ಧಿಯಾಗುವಂತೆ ಸದರಿಯವರ ಮಕ್ಕಳನ್ನೂ ರೈಲ್ವೆ ಕೆಲಸದಲ್ಲಿ ಕೈ ಹಚ್ಚಿಸಿ ಸರಾಗ ಜೀವನ ನಡೆಸುವಂತೆ ಪ್ರೋತ್ಸಾಹಿಸುತ್ತಿರುವರು. ಮಿ। ಜಾರಾಡರು ರೈಲ್ವೆ ನೌಕರರಲ್ಲಿ ಕೆಳ ತರಗತಿಯವರನ್ನು ವಿದ್ಯಾವಂತರನ್ನಾಗಿ ಮಾಡಲು ಯೋಗ್ಯ ಏರ್ಪಾಡುಗಳು ರೈಲ್ವೆ ಅಧಿಕಾರಿಗಳಿಂದಲೇ ನಡೆಯಲ್ಪಟ್ಟಲ್ಲಿ ಇನ್ನಷ್ಟು ಸುಧಾರಣೆಗಳಿಗೆ ಎಡೆಯುಂಟೆಂದೂ ಸೂಚಿಸಿದರು, ಮತ್ತು ಕಡಿಮೆ ಸಂಬಳಕ್ಕೆ ಕೆಲಸ ಮಾಡುವ ಕೀಳು ನೌಕರನಾದರೂ ತನಗೆ ಸಿಗುವ ಸಂಬಳದಿಂದ ಜೀವನವನ್ನು ನಡಿಸುತ್ತಿರುವನು, ಆದರೆ ೮೦ರಿಂದ ೧೦೦ ರೂಪಾಯಿಗಳ ವರೆಗೇರುವ ಸಂಬಳ ತಿನ್ನುವ ಪಾರ್ಸೆಲ್ ಕ್ಲಾರ್ಕ, ಅಸಿಸ್ಟಾಂಟ್ ಸ್ಟೇಶನ್ ಮಾಸ್ಟರ್ — ಮೊದಲಾದವರು ತಮ್ಮ ನೌಕರರಿಂದಲೇ ಸಾಲವನ್ನು ಪಡೆಯುವ ಪ್ರಸಂಗಗಳೂ ಒದಗುತ್ತವೆ. ಅಂತಹ ದುಷ್ಪರಿಣಾಮಗಳಿಂದ ಕಿನೀಕ ಕೆಲಸಗಾರರು ತೊಂದರೆ ಪಡುತ್ತಿರುವರು; ಎಂದು ಹೇಳಿದರು. ಈ ರೀತಿಯ ಕಷ್ಟನಿವಾರಣೆಗಾಗಿ ಬಿ. ಬಿ. ಮತ್ತು ಸಿ. ಐ ರೈಲ್ವೆ ಕಂಪೆನಿಯ ಪ್ರತಿನಿಧಿಯಾದ ಸರ್. ಅರ್ನೆಸ್ಟ್ ಜೇಕಸನ್ ಎಂಬವರು ಕೋಆಪರೇಟಿವ್ ಕ್ರೆಡಿಟ್ ಸೊಸೈಟಿಗಳು ಏರ್ಪಟ್ಟಿರುವುದೆಂದು ಉತ್ತರವಿತ್ತರು. ಈ ಸೊಸೈಟಿಗಳಿಂದ, ೫ ವರ್ಷಕ್ಕೆ ಮಿಕ್ಕಿದ ಸರ್ವಿಸ್ ಉಳ್ಳ ರೈಲ್ವೆ ನೌಕರರಿಗೆ ಸಾಲಕೊಡಲ್ಪಡುವದು ಆದರೆ ಸಾಲ ಪಡಕೊಳ್ಳುವವರು ಎರಡು ಜಾಮೀನುಗಳನ್ನು ಕೊಡತಕ್ಕದ್ದು. ಅವರೂ ಕೂಡ ಸಾಲಗಾರರಂತೆಯೇ ಕಂಪೆನಿಯ ಸರ್ವಿಸ್ ಉಳ್ಳವರಾಗಿರತಕ್ಕದ್ದು ಮತ್ತು ಸರ್. ಅರ್ನೆಸ್ಟರು ತಿಳಿಯಗೊಡುವಂತೆ ಅವರ ಕಂಪೆನಿಯ ಪರವಾಗಿ (Welfare centers)ಗಳು ಸ್ಥಾಪಿಸಲ್ಪಟ್ಟಿರುವವು ಈ ಸಂಸ್ಥೆಗಳು ಕೆಳ ನೌಕರರಿಗೆ ಬೇಕಾದ ಆಹಾರ, ಬಟ್ಟೆ — ಮುಂತಾದುವುಗಳನ್ನು ಒದಗಿಸಿ ಕೊಡುವವು ಈ ಸಂಸ್ಥೆಗಳನ್ನು ಮತ್ತಷ್ಟು ಅಭಿವೃದ್ಧಿಗೊಳಿಸುವ ಏರ್ಪಾಡುಗಳು ಶೀಘ್ರದಲ್ಲೇ ನಡೆಯಲಿಕ್ಕಿರುವವೆಂದು ತಿಳಿದುಬರುತ್ತದೆ.

* * *

## ಇಂಡಿಯದ ಕುರಿತು ಅಮೇರಿಕನ್ ಜರ್ನಲಿಸ್ಟರ ಅಭಿಪ್ರಾಯಗಳು

ಮಿಸ್. ಎಲಿಸಬೆತ್ ಬುಂಡಿ — ಎಂಬ ಅಮೇರಿಕದ ಜರ್ನಲಿಸ್ಟಳೊಬ್ಬಳು ಭರತ ಖಂಡಕ್ಕೆ ಬತ್ತ್ಯಸಿರುವಳು. ಈಕೆಯು ಸೂಚಿಸುವಂತೆ, ಯಾವದೇ ಸರಕಾರವು (ಬ್ರಿಟಿಷ್ ಅಥವಾ ರಾಷ್ಟ್ರೀಯ) ತನ್ನ ಆಡಳಿತೆಗೆ ಒಳಪಟ್ಟ ಜನತೆಯು ಅಭಿವೃದ್ಧಿ ಹೊಂದದ ಹೊರತು, ತನ್ನ ಮೇಲ್ಮೆಯನ್ನು ಬಯಸಲವಕಾಶವಿಲ್ಲವೆಂದು ವಿಶದವಾಗುವದು. ಆಕೆಯು ಹಿಂದುಸ್ಥಾನದಲ್ಲಿ ಮೊದಲ ಭೇಟಿ ಮಾಡಿದ ರಾಜ್ಯವೆಂದರೆ ಬರೋಡ ಅಲ್ಲಿಂದ ಅವಳು ಮುಂದರಿಸಿ ಮಹಾತ್ಮಾಜಿಯವರ ಸಬರ್ಮತಿ ಆಶ್ರಮಕ್ಕೆ ಬಂದಿಳಿದಳು; ಕೆಲಕಾಲ ಅಲ್ಲಿದ್ದು ಆಶ್ರಮದ ಕ್ರಮಗಳನ್ನು ಅವಲಂಬಿಸುವ ಯತ್ನಗಳನ್ನು ಕೈ ಕೊಂಡಳು ಆಕೆಯು ವಿಶದ ಪಡಿಸುವಂತೆ ಅಮೇರಿಕದಲ್ಲಿಯೂ ಕೂಡ ಮಹಾತ್ಮಾಜಿಯವರ ಪವಿತ್ರ ಭಾವನೆಗಳು ಸನ್ಮಾನನೀಯವಾಗಿವೆ, ಮತ್ತು ಅಮೇರಿಕದ ಅನಾ ಪಾಠಕರು ಮಹಾತ್ಮಾಜಿಯವರನ್ನೇ ಅವಲಂಬಿಸಿವೆ ಎಂದಳು ಸುಮಾರು ಎರಡು ಶತಮಾನಗಳ ಹಿಂದೆ ಅಮೇರಿಕಾದಲ್ಲಿ ನಡೆದ ದಂಗೆಯ ಕಾರ್ಯಕಲಾಪಗಳು, ಸದ್ಯ ಮಹಾತ್ಮಾಜಿಯವರಿಂದ ಹೂಡಲ್ಪಟ್ಟ ಸತ್ಯಾಗ್ರಹ ಕಾರ್ಯಕ್ರಮಗಳನ್ನು ಬಹು ಮಟ್ಟಿಗೆ ಸರಿ ಹೋಲುತ್ತಿರುವುವೆಂದೂ ತಿಳಿಸಿರುವಳು. ಆಕೆಯು ಹಿಂದುಸ್ಥಾನದ ಅನೇಕ ವಿಷಯಗಳನ್ನು ಕಲಿತುಕೊಳ್ಳಲು ಬಂದಿರುವಳಂತೆ! ಹಿಂದೀಯರ ಶೋಚನೀಯ ಸ್ಥಿತಿಗಳನ್ನು ಕಣ್ಣಾರೆ ನೋಡಿದಳಂತೆ!! ಅನೇಕರು ಆಕೆಯೊಡನೆ ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಡಿಸುವಂತೆ ಬ್ರಿಟಿಷ್ ಸರಕಾರದೊಡನೆ ಪ್ರಸ್ತಾಪಿಸಬೇಕೆಂದು ಅರಿಕೆ ಮಾಡಿಕೊಂಡರಂತೆ!! ಆಕೆಯು ಹೇಳುವಂತೆ ಭರತಖಂಡದ ಬಂಧವಿಮೋಚನೆಗಾಗಿ, ಜನತೆಯು ಪರಿಶುದ್ಧಹೃದಯದ ಮಾರ್ಗವನ್ನರಿಯುವುದೇ ಮುಖ್ಯ ವಿಷಯವಾಗಿರುವದು ಸತ್ಯಾಗ್ರಹ ದೌಡುಗಳು, ಲಾಠಿ ಹೊಡೆತಗಳು — ಇವೆಲ್ಲ ಅಮೇರಿಕದಲ್ಲಿ ಬಹಳ ಶೂನ್ಯವಾಗಿರುವವು ಮತ್ತು ನಾಡೀ ಸತ್ಯಾಗ್ರಹಗಳ ಕಾರ್ಯಕಲಾಪಗಳ ಕುರಿತು ಯೋಗ್ಯ ಬಹುಮಾನವನ್ನು ತೋರ್ಪಡಿಸಿರುವಳು. ಮಾದಿ ಪ್ರಚಾರಕಾರ್ಯದಲ್ಲಿ ಕುಂದಿದ ಪ್ರೋತ್ಸಾಹವನ್ನು ತೋರಿಸಿರುವಳು. ಇವಳು ರಾಜಪುತಾನಾ ಮುಂತಾದ ಪ್ರಾಂತ್ಯಗಳನ್ನು ಸಂದರ್ಶಿಸುವಳೆಂದೂ ತಿಳಿದುಬರುತ್ತದೆ.

* * *

## ಸರ್ ಹರ್ಬರ್ಟ್ ಸಾಮುವೇಲರ ಒಂದು ಮಾತು!

ಪತ್ರಿಕೆಗಳ ಅಭಿಪ್ರಾಯದಂತೆ ಸರ್ ಹರ್ಬರ್ಟ್ ಸಾಮುವೇಲರೇ ಮುಂದಿನ ವ್ಯಾಸರಾಯರ ಪದವಿಯನ್ನು ಹೊಂದಲಿಕ್ಕಿರುವರೆಂದು ತಿಳಿದುಬರುತ್ತದೆ. "ನಾವು ಭಾರತೀಯರು ಕೇಳುವ ಪ್ರಶ್ನೆಗಳಿಗೆ ಸರಿಯಾದ ಉತ್ತರವಿತ್ತು ಸದರಿಯವರನ್ನು ಸಮಾಧಾನ ಪಡಿಸುವದು ಯೋಗ್ಯ ಹಾಗೂ ಭಾರತೀಯರ ಸ್ವತಂತ್ರಾಭಿಲಾಷೆಯು ಪೂರ್ತಿಮಾಡಿದಂತಾಗುವದು. ಈ ವಿಷಯಕ್ಕೆ ಶೀಘ್ರದಲ್ಲೇ ಯೋಗ್ಯ ಗಮನವೀಯಬೇಕಾಗುವದು" ಎಂದು ಹೇಳಿರುವರು. ಮಿ। ಸಾಮುವೇಲರು 'ದಿ ಕಂಟೆಂಪೊರರಿ ರೀವ್ಯೂ'ನಲ್ಲಿ ಪ್ರಕಟಿಸಿದ ಒಂದು ಲೇಖನದ ಅಭಿಪ್ರಾಯವು ಭರತಖಂಡದ ರಾಜಕೀಯ ಚಳವಳಿದ ಸುಧಾರಣೆಯ ಕುರಿತು ಸದರಿಯವರ ಅತ್ಯಧಿಕ ಪ್ರೀತಿಯನ್ನು ತೋರ್ಪಡಿಸುವದಂತೆ! ಅವರು ವಿಶದಪಡಿಸುವಂತೆ ಬ್ರಿಟಿಷ್ ಮತ್ತು ಹಿಂದೀಯ ಅಭಿಪ್ರಾಯಗಳಿಗೆ ಎಷ್ಟೋ ಅಂತರಂಗಳಿವೆ ಎಂದು ತಿಳಿದುಬರುತ್ತದೆ. ಇಂಡಿಯದವರ ಪ್ರಶ್ನೆ ಎಂದರೆ — "ಬ್ರಿಟಿಷರು ಭಾರತೀಯರನ್ನು ತಮ್ಮ ಅಧೀನದಲ್ಲಿರಿಸುವರೋ ಅಥವಾ ಪಾರತಂತ್ರ್ಯದ ಬಲೆಯಿಂದ ಬಿಡುಗಡೆ ಹೊಂದಿಸುವರೋ" — ಎಂಬುದೇ ಆಗಿರುವದಂತೆ! ಆದರೆ ಸಾಮುವೇಲರು ತಿಳಿಯಗೊಡುವಂತೆ ಸದರಿ ಪ್ರಶ್ನೆಗಳಿಗೆ ಸರಿಯಾದ ಉತ್ತರವೀಯಲು ಅವರು ಶಕ್ತರಾಗಿರುವರೆಂದು ತಿಳಿದು ಬರುತ್ತದೆ. ಮಿ। ಸಾಮುವೇಲರು ಹೇಳುವಂತೆ ಬ್ರಿಟನ್ನಿನವರು ಇಂಡಿಯದವರಿಗೆ ಸ್ವಾತಂತ್ರ್ಯವನ್ನು ದಯಪಾಲಿಸುವುದೇನೋ — ನಿಶ್ಚಯ, ಆದರೆ ಅಂತಹ ಸ್ವರಾಜ್ಯ ಸಂಪಾದನೆಗೆ ಅಡ್ಡಕಟ್ಟುವ ಕೆಲವು ತೊಂದರೆಗಳನ್ನು [ಸತ್ಯಾಗ್ರಹವೇ ಮೊದಲಾದ ವಿಷಯಗಳು] ನೀಗಾಡಿಸಬೇಕೆಂಬುದೇ ಅವರ ಪ್ರಥಮಧ್ಯೇಯವಾಗಿರುವದೆಂದು ತಿಳಿದುಬರುತ್ತದೆ. ಇದಕ್ಕಾಗಿ ಬ್ರಿಟನ್ನಿನವರು ಅನೇಕ ಉಪಾಯಾಂತರಗಳನ್ನು ಹೂಡುತ್ತಿರುವರೆಂದು ವ್ಯಕ್ತಗೊಳಿಸಿರುವರು. ಈ ತರದ ಭಾರತೀಯ ಅವ್ಯವಸ್ಥೆಗಳನ್ನು ಹೋಗಲಾಡಿಸಬೇಕೆಂದು ಅಪೇಕ್ಷಿಸಿದ ಭಾರತೀಯರ ಆಕಾಂಕ್ಷೆಗಳು ಎಂದೂ ಅಸಮಂಜಸವಾಗಿರುವುವೆಂದು ನಂಬಲವಕಾಶವೇ ಇಲ್ಲದಂತೆ! ಆದರೂ ಮಿ। ಸಾಮುವೇಲರು ಹೇಳುವಂತೆ, ಅನೇಕ ಭಾರತೀಯರು ತಮ್ಮ ಸಂಬಿಕೆಗಳನ್ನು ಕೆಡಿಸಿ ಸತ್ಯಾಗ್ರಹವೆಂಬ ಸೈತಾನನ ಪ್ರೇರಣೆಯಿಂದ ಏನೇನೋ ಹೇಳುತ್ತಿರುವರು, ಇದುದರಿಂದ ಬ್ರಿಟನ್ನಿನವರು ಹಿಂದೀ ವಿಧೇಯತ್ವವನ್ನು ಅದೆಂತು ಮನಗಾಣುವರು? ಎಂದು ಹೇಳಿರುವರು.

* * *

## ಗಾಂಧಿಜೀಯವರನ್ನು ನೋಡಲಿಕ್ಕೆ ವ್ಯಾಸರಾಯರ ಅಪ್ಪಣೆ ಬೇಕಲ್ಲವೇ?

ಇಂಡಿಪೆಂಡೆಂಟ್ ಲೇಬರ್ ಪಾರ್ಟಿಯ ಸದಸ್ಯರಾದ ಮಿ। ಬ್ರೈಲ್ಸ್‌ಫೋರ್ಡರು ಮುಂಬಾಯಿಗೆ ಬಂದಿದ್ದಾರೆ. ಇವರು ಮುಂಬಾಯಿಯಲ್ಲಿ ೬ ವಾರ ತಿರುಗಾಡಿ ಅಲ್ಲಿನ ರಾಜಕೀಯ ಚಳವಳಿಯನ್ನು ಪರಿಶೋಧಿಸುವರಂತೆ! ಇವರು ಹಿಂದುಸ್ಥಾನದ ವಿಷಯದಲ್ಲಿ ಎಷ್ಟೋ ಲೇಖನಗಳ ಹಾಗೂ ಪುಸ್ತಕಗಳನ್ನು ಬರೆದು ಪ್ರಚಾರಪಡಿಸಿದವರು. ಆದರೆ ಅವರ ಮಾತಿನಂತೆ ಸದರಿಯವರ ಆಗಮನವೇನೋ ಬಹಳ ಗೂಢವಾಗಿರುದೆಂದು ತಿಳಿದುಬರುತ್ತದೆ. ಮತ್ತು ಮುಂಬಯಿ ಊರಿಗೆ ಹೋಗುವ ಮೊದಲು ಮಹಾತ್ಮಾಜಿಯವರನ್ನು ನೋಡಬೇಕೆಂದು ಹೇಳಿರುವರು. ಪರಂತು ಗಾಂಧಿಜೀಯವರನ್ನು ನೋಡಲು ಬ್ರೈಲ್ಸ್‌ಫೋರ್ಡರಿಗೆ ವ್ಯಾಸರಾಯ ಸಾಹೇಬರ ಅಪ್ಪಣೆ ದೊರೆಯುವದೋ ಇಲ್ಲವೋ — ಎಂಬ ಹೆದರಿಕೆ! ಅಪ್ಪಣೆ ದೊರೆತರೆ ಗಾಂಧಿಜೀಯವರ ಭೇಟಿಯನ್ನು ಮಾಡಲಿಕ್ಕೇಬೇಕೆಂದು ಅವರ ನಿರ್ಧಾರ; ಆದರೆ ಅವರಿಗೆ ಇನ್ನೊಂದು ಯೋಚನೆ — ದುಂಡು ಮೇಜಿನ ಸಮ್ಮೇಳನವು ಹತ್ತಿರ ಬಂದಿದೆ — ಈ ಸಮಯದಲ್ಲೇ ಮಹಾತ್ಮರ ದರ್ಶನ; ಇವೆರಡರ ಐಕ್ಯತೆಯಿಂದ ಏನಾದರೂ ಅವಘಡಗಳು ಬರುವವೋ? ಎಂಬದು. ಚಕ್ರಗೋಷ್ಠಿಯ ಕುರಿತು ಮಿ। ಬ್ರೈಲ್ಸ್‌ಫೋರ್ಡರ ಅಭಿಪ್ರಾಯಗಳು ತೀರ ಸಾಧಾರಣದವುಗಳೇ ಆಗಿವೆ ಎಂದು ತಿಳಿದುಬರುತ್ತದೆ, ಇಂಡಿಯದ ನಿಜವಾದ ಸಂಗತಿಗಳು, ಸದರಿಯವರು ಹೇಳುವಂತೆ, ಪಾರ್ಲಿಮೆಂಟಿಗೆ ಇನ್ನೂ ತಿಳಿದಿಲ್ಲವಂತೆ! ಕಾಂಗ್ರೆಸ್ಸಿನ ಮುಖಂಡರು ಚಕ್ರಗೋಷ್ಠಿಯಲ್ಲಿ ಭಾಗವಹಿಸದಿರುವದರಿಂದ ಇಂಗ್ಲಾಂಡಿನ ಜನತೆಗೆ ರೌಂಡು ಟೇಬಲಿನಲ್ಲಿ ಅಲಕ್ಷ್ಯಭಾವವೇ ತಲೆದೋರಿರುವದಂತೆ! ಹಾಗೂ ಬ್ರೈಲ್ಸ್‌ಫೋರ್ಡರು ಇಂಡಿಯಕ್ಕೆ ಸ್ವರಾಜ್ಯವನ್ನೇ ಅಪೇಕ್ಷಿಸುವರು

* * *

## ಇಂಡಿಯನ್ ಡೆಲಿಗೇಟರೂ ಅತಿಥಿ ಸತ್ಕಾರವೂ

ದುಂಡು ಮೇಜಿನ ಸಮ್ಮೇಳನಕ್ಕಾಗಿ ಹೋದ ಪ್ರತಿನಿಧಿಗಳಿಗೆ ದೊರೆತ ಆದರಾತಿಥ್ಯಗಳು ಬಹಳ ಅಪಾಯಕರದ್ದೆಂದೇ ಭಾಸವಾಗುತ್ತದೆ ಲಂಡನ್ ನಗರದ ಕ್ವೀನ್ಸ್ ಎಂಬಲ್ಲಿ ಇಂಪೀರಿಯಲ್ ಕಾನ್ಫರೆನ್ಸಿನ ಡೆಲಿಗೇಟರಿಗಾಗಿ ವಿವಾಹದ ನಾನಾ ಊಟಗಳು ರೂಢಿಸಲ್ಪಟ್ಟಿದ್ದವು ಉಪಚರಿಸುವದಕ್ಕಾಗಿ ಬೇಕಾದ ಏರ್ಪಾಡುಗಳೂ ತಯಾರಾಗಿದ್ದವು ಆದರೆ ರೌಂಡ್ ಟೇಬಲ್ ಕಾನ್ಫರೆನ್ಸಿಗೆ ಹೋದ ಡೆಲಿಗೇಟರಿಗೆ, ಡೊಮಿನಿಯನ್ ಸ್ಟೇಟ್ಸಿನ ಮೂರ್ತಿಯನ್ನೇ ಕಣ್ಣಾರೆ ಕಾಣುವ ಸಂಯೋಗವು ಒದಗಿರುವದೆಂದು ತಿಳಿದುಬರುತ್ತದೆ ಕಾರಣ ಇಂಡಿಯನರಿಗೆ ಕೂಡಲ್ಲ, ಕುಳಿತುಕೊಳ್ಳುವದಕ್ಕೆ ರೂಮುಗಳಿಲ್ಲ ಆತಿಥ್ಯವಂತೂ ತೀರ ಶೂನ್ಯವಷ್ಟೆ! ಏನೇನೊ ಆಹಾರ ಸಾಮಾಗ್ರಿಗಳನ್ನು ತರಿಸಿ, ಮಾಡಿನ ಮೇಲಿರುವ ಕಾಗೆಯಂತೆ ತಿಂದರು, ಅದೇ ವೇಳೆಯಲ್ಲಿ ಲೇಮ್ಸ ಮೆಕ್ಡೊನಾಲ್ಡರ ಆಗಮನ, ಬ್ರಿಟಿಷ ಸರಕಾರದ ಅತಿಥಿಗಳನ್ನು ನೋಡಿಯೂ ನೋಡದಂತೆ ಮುಂದುವರಿದರು ಮಿ। ಜಯಕರರು "ಇನ್ನು ಮುಂದೆ ಬ್ರಿಟಿಷ ಸರಕಾರದ ಆದರವು ಸಾಕಪ್ಪಾ ಸಾಕು! ನಾನು ಸ್ವೀಕರಿಸುವಂತಿಲ್ಲ" ಎಂದರು. ಹಾಗೂ ಇಂಡಿಯದಿಂದ ಹೋದ ಡೆಲಿಗೇಟರಿಗೆ ದೊರೆತ ಸನ್ಮಾನಗಳು ಇವೇ! ಸನ್ಮಾನವಿತ್ತುದಾದರೂ ಬ್ರಿಟಿಷ್ ಪ್ರಭುಗಳೇ ಆಗಿರುವರು!! ಇಷ್ಟು ಬಹುಮಾನವು ಸಾಕಾಗದೆಂಬಂತೆ ಒಬ್ಬ ಬ್ರಿಟಿಷ ಅಧಿಕಾರಿಯು ಇಂಡಿಯನ್ ಡೆಲಿಗೇಟರನ್ನು ದ್ವೇಷಿಸಿ — "ನಿಮಗೆ ಇಂಗ್ಲೀಷು ಬರುವದೇ?" ಎಂದು ಪ್ರಶ್ನಿಸಿದನೆಂದೂ ತಿಳಿದುಬರುತ್ತದೆ. ಅಂತೂ ಚಕ್ರಗೋಷ್ಠಿಗೆ ಹೋದ ಹಿಂದೀಯ ಪ್ರತಿನಿಧಿಗಳು ಪಾಶ್ಚಾತ್ಯ ಶೀತ ಗಾಳಿಯಲ್ಲಿ ಉಳಕೊಳ್ಳಲಿಕ್ಕಾದರೂ ಸೌಕರ್ಯವಿಲ್ಲದೆ ತಿರುಗುವ ಸುಯೋಗವು ಬಂದೊದಗಿರುವದು,

## ಕರನಿರಾಕರಣೆಗಾಗಿ ಎಮ್ಮೆಯ ಜಪ್ತಿ.

— ಗುಜರಾತದಲ್ಲಿ ಕರನಿರಾಕರಣೆಯು ಬಹಳ ತೀವ್ರವಾಗಿ ನಡೆಯುತ್ತಿರುವದಷ್ಟೆ! ಈ ಕುರಿತು ಸರಕಾರವು ಬಾಕಿಯಾದ ಕಂದಾಯವೆತ್ತುವುದಕ್ಕಾಗಿ ಇತ್ತೀಚೆಗೆ ವಿರಾಡ್ ಎಂಬ ಗ್ರಾಮವನ್ನು ಧಾಳಿ ಇಟ್ಟಿರುವದು. ಡಿಪ್ಯುಟಿ ಕಲೆಕ್ಟರರು ಖುದ್ದಾಗಿ ಸೈನ್ಯವನ್ನು ತೆಗೆದುಕೊಂಡು ಸದರಿ ಗ್ರಾಮವನ್ನು ಪ್ರವೇಶಿಸಿ ನೋಡಲು, ಗ್ರಾಮವು ಪೂರ ಬರಿದಾಗಿದ್ದಿತು. ಮನೆಗಳೆಲ್ಲವೂ ಬೀಗ ಮುದ್ರೆಗಳಿಂದ ಭದ್ರವಾಗಿ ಮುಚ್ಚಲ್ಪಟ್ಟಿದ್ದವು. ಪೋಲೀಸರು ನಿರ್ಜನ ಮನೆ ಮಠಗಳನ್ನೂ ಶೋಧೆ ನಡೆಸಿದರು. ಒಂದು ಮನೆಯ ಒಳಗೆ ಆಹಾರದ ಅಭಾವದಿಂದ ನರಳುತ್ತಿರುವ ಚಿಕ್ಕ ಶಿಶುವನ್ನು ಆರೈಕೆ ಮಾಡುತ್ತ ಒಬ್ಬ ಗೃಹಿಣಿಯು ಕುಳಿತಿದ್ದಳು. ಆಕೆಯೂ ಕೂಡ, ತುಂಬಾ ಮೈಯಲ್ಲಿ ಬಡವಾಗಿದ್ದಳು. ಪೋಲೀಸರು ಅವಳೊಡನೆಯೂ ತೆರಿಗೆ ಕೊಡೆಂದು ಒತ್ತಾಯ ಪಡಿಸುತ್ತಿರಲು ಆಕೆಯು ಮನೆಯ ಬಾಗಿಲನ್ನು ತೆರೆಯದೆ ವ್ಯಸನದಲ್ಲಿ ಒಳಗೇನೇ ಕುಳಿತಳು. ಪೋಲೀಸರ ಜುಲುಂ ಜಾಸ್ತಿ ಆಯಿತು, ಬಾಗಿಲನ್ನು ತುಳಿದು ನುಚ್ಚುನೂರು ಮಾಡಿದರು; ಒಳ ಹೊಕ್ಕರು. ಬಾಕಿಯಾದ ತೆರಿಗೆಯನ್ನು ಕೊಡಲೇಬೇಕೆಂದು ಪೋಲೀಸು ಜವಾನರ ಹಟ. ಪಾಪ! ಆ ಬಡ ಹೆಂಗಸಿನ ಕೂಡೆ ಚಕ್ಕಾಸಾದರೂ ಇದ್ದಿಲ್ಲ; ಏನು ಮಾಡಬಲ್ಲಳು? ಅಷ್ಟರಲ್ಲೇ ಮಗುವಿನ ಆರ್ತಧ್ವನಿಯೂ ಆಕೆಯ ಮನಸ್ಸನ್ನು ಇನ್ನಷ್ಟು ನೋಯಿಸಿತು. ಕೊನೆಗೆ ಆಕೆಯು ಮಗುವಿಗೆ ಹಾಲು ಕೊಡುವದಕ್ಕೆ ಸಾಕುತ್ತಿದ್ದ ಎಮ್ಮೆಯೊಂದನ್ನು ಪೋಲೀಸರು ಕೈವಶ ಮಾಡಿಕೊಂಡು ಹೋಗಿರುವರು. ಈ ಚಿಕ್ಕ ಕಥೆಯಿಂದ ತಿಳಿಯಬಹುದಾದ ಬುದ್ಧಿವಾದವೆಂದರೆ — ಆಧುನಿಕ ಬ್ರಿಟಿಷ್ ಸರಕಾರವು ಭಾರತೀಯರ ಮೇಲಿರಿಸಿದ ಕೃಪಾಕಟಾಕ್ಷದ ಮಹಿಮೆ. ದಯಾಳು ಸರಕಾರವು ಸದರಿ ಎಳೆ ಕೂಸಿಗೆ ಹಾಲಿಲ್ಲದಂತೆ ಮಾಡಿ ಬಡ ಪ್ರಾಣಿಯಾದ ಎಮ್ಮೆಯನ್ನೂ ಒಯ್ದಿರುವದಲ್ಲವೇ? ಅಂದ ಮೇಲೆ ಭಾರತೀಯರು ಕೇಳುವ ಸಾಮಂತ ಸ್ವರಾಜ್ಯವನ್ನು ದಯಪಾಲಿಸುವ ವಿಷಯದಲ್ಲಿ ಬ್ರಿಟಿಷ್ ಸರಕಾರವು ಮಾಡುವ ಪ್ರಯತ್ನಗಳು ತೀರಾ ಸುಳ್ಳೆಂದೇ ಕಂಡು ಬರುವದು.

* * *

## ನಿಮ್ಮ ಪ್ರಯತ್ನಗಳು ಸಾಫಲ್ಯ ಹೊಂದುವ ವರೆಗೂ ಕಾದಾಡಿರಿ!

ಪಂಡಿತ ಜವಾಹರಲಾಲ ನೆಹರುರವರು ಇದೀಗ ಐದನೇ ಸಲ ಕಾರಾಗೃಹವನ್ನು ಸೇರಿದರು. "ಸ್ವಾತಂತ್ರ್ಯಕ್ಕಾಗಿ ಹೋರಾಡಿರಿ, ನಿಮ್ಮ ಪ್ರಯತ್ನಗಳು ಸಫಲತೆಯನ್ನು ಹೊಂದುವ ತನಕ ಎಡೆಬಿಡದೆ ಕಾದಾಡಿರಿ" ಎಂಬುದೇ ಜವಾಹರಲಾಲರು ಭಾರತೀಯರಿಗೆ ಸೂಚಿಸಿದ ಕೊನೆಯ ವರದಿ, 'ಬಂಧವಿಮೋಚನೆಯ ಮೌಲ್ಯವೇ ರಕ್ತಬಿಂದುವು, ಕಷ್ಟಪರಂಪರೆಗಳೇ ಸ್ವಾತಂತ್ರ್ಯದ ಬೆಳಕು' ಎಂದೂ ಹೇಳುವರು. ಪಂಡಿತಜೀಯವರು ತಿಳಿಯಪಡಿಸುವಂತೆ, ಅವರು ಇಂಗ್ಲಿಷ ಜನಾಂಗದವರೊಡನೆ ಯಾವ ತರದ ದ್ವೇಷವನ್ನೂ ಬೆಳೆಸಲಿಲ್ಲ, ಆದರೆ ಇಂಗ್ಲಿಷರ ಸಾಮ್ರಾಜ್ಯಶಾಹಿಯನ್ನು ವಿಶೇಷವಾಗಿ ವಿರೋಧಿಸುತ್ತಿರುವರೆಂದು ವ್ಯಕ್ತಗೊಳಿಸಿರುವರು. ಇದುವರೆಗೂ ಪಂಡಿತಜೀಯವರು ಬ್ರಿಟಿಷ ಇಂಪೀರಿಯಾಲಿಸಮ್ಮಿಗೆ ಎದುರಾಗಿಯೇ ಕಾದಾಡುತ್ತಿದ್ದರು, ಇನ್ನು ಮುಂದೆ ಕೂಡ ಸದರಿ ಬ್ರಿಟಿಷ ಇಂಪೀರಿಯಾಲಿಸಮ್ಮನ್ನು ನಿರೋಧಿಸುವದೇ ಅವರ ಅಂತರ್ಯದ ಧ್ಯೇಯವಿದೆ ಎಂದೂ ತಿಳಿದುಬರುತ್ತದೆ. ಸದರಿಯವರು ತಾನು ಕೋರ್ಟಿನಲ್ಲಿ ಹಾಜರುಪಡಿಸಿದ ಸ್ಟೇಟುಮೆಂಟಿನಲ್ಲಿ ಸೂಚಿಸಿದಂತೆ ರಾಜದ್ರೋಹವು ಭಾರತೀಯರ ಮುಖ್ಯ ವೃತ್ತಿಯಾಗಿರುವದೆಂತಲೂ ಅಸಹಕಾರ ಚಳವಳಿಯು ಹಿಂದುಸ್ಥಾನ ಜನತೆಯ ಮತವಾಗಿರುವದೆಂತಲೂ ತಿಳಿಸಿರುವರು

**The Canara Bank, Ltd., KARKALA**

**ದಿ ಕೆನರಾ ಬೇಂಕ್ ಲಿಮಿಟೆಡ್ ಕಾರ್ಕಳ್.**

### ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವನು ಸದರಿ ಬೇಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡೆದ ಮೊಬಲಗುಗಳನ್ನಾಗಲೀ ಅವುಗಳ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇರುವದರಿಂದ ಅವನಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಅವನು ಕಾಣಕ್ಕೆ ಇಲ್ಲವಾಗಿ ವಾಪಸು ಬಂದಿರುವದರಿಂದ ಈ ಮೂಲಕ ನಮೂದಿಸುತ್ತೇನೆ. ಇದೇ ತಾ ೧೪—೧೧—೧೯೩೦ನೇ ಶುಕ್ರವಾರದ ಒಳಗೆ ಬೇಂಕಿಗೆ ಬರಬೇಕಾದ ಅಸಲು ಬಡ್ಡಿ ವಿವರಗಳನ್ನು ತಂದು ಕೊಟ್ಟು ನಗಗಳನ್ನು ಬಿಡಿಸಿಕೊಂಡು ಹೋಗದಿದ್ದರೆ ಅವುಗಳನ್ನು ಇದೇ ತಾರೀಕು ೨೧—೧೧—೧೯೩೦ನೇ ಶುಕ್ರವಾರ ಮಧ್ಯಾಹ್ನ ೧೨ ಘಂಟೆಗೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

೧ ಸೂಡ ರಾಘವ ಶೆಟ್ಟಿ, ಸಾಲ ಪಡಕೊಂಡ ತಾರೀಕು ೨೧—೧೨—೧೯೨೮, ಸಾಲದ ಮೊಬಲಗು ರೂ ೧೨೫/–, ಬೇಂಕಿಗೆ ಬರಬೇಕಾದ ಅಸಲು ವಗೈರೆ ಏಕೇಣು ರೂಪಾಯಿ ೧೪—೫—೧೦, ಮತ್ತು ಈ ನೋಟೀಸಿನ ಖರ್ಚು ಸಹಾ

Canara Bank, Ltd., Karkala. 29—10—1930

C. Manjunath Kamath, Agent.

## ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತ ಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ.

## ವೈಶ್ವಾನರಾಸವ.

(ಕಾಲರಾ, ಜಂತಿಭೇದಿಗೆ ಸಿದ್ಧೌಷಧ.)

ವಾಂತಿಯು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗ ತನ್ನ ಸ್ವಾಧೀನಕ್ಕೆ ಬರುತ್ತದೆ. ಸೀಸೆ 1ಕ್ಕೆ ರೂ. 1—0—0

## ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0.

## ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಸಂಧುಗಳಿಗೂ, ಗಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ 0—8—0

'ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್‌ಆಫೀಸ್ ಸೀತಾರಾಘವ ವೈದ್ಯಶಾಲಾ, ಮೈಸೂರು

ಏಜಂಟರು —
ಆತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫಾಕ್ಟರಿ
ಮಂಗಳೂರು ಟಿಪಾಗೆ ಮಾತ್ರ.

## ಒಂದೇ ತಾಸಿನಲ್ಲಿ

ನವ ಯೌವನವು ಪಡೆಯಲಪೇಕ್ಷೆಯುಳ್ಳ ಪುರುಷರು

### ರಮಣ ವಿಲಾಸಿನಿ ವಟಿಕಾ

ವನ್ನು ಮಲಗುವುದಕ್ಕೆ ಒಂದು ಘಂಟೆಗೆ ಮುಂಚೆ ಒಂದು ಮಾತ್ರೆಯನ್ನು ಸೇವಿಸಿ ಜೀರ್ಣಕ್ಕೆ ಬರುವಷ್ಟು ಹಾಲು ಕುಡಿದರೆ ಯಥೇಚ್ಛೆಯಾಗಿ ಸ್ತಂಭನವಾಗುವುದು.

16 ಮಾತ್ರೆಗಳಿರುವ ಡಬ್ಬಿ ಕ್ರಯ ರೂ 1—0—0

ಮದನ ಮಂಜರಿ ಫಾರ್ಮಸಿ,
1/94 ಚೀನ ಬಜಾರ್ ಮದರಾಸು

## ಅಕಾಲ ವಾರ್ಧಿಕ್ಯವೇ?

ಇದು ನಮ್ಮ ಭೂಲೋಕ ಅಮೃತವಾದ

### ಮದನಮಂಜರಿ ಮಾತ್ರೆಗಳು

ಸೇವಿಸುವವರನ್ನು ಬಿಟ್ಟು ಪಲಾಯನ ಮಾಡುವುದು ಯಾಕೆ ನೋಡುತ್ತೀರಿ? ಇದನ್ನು ಉಪಯೋಗಿಸಿ ನವ ಯೌವನವನ್ನು ಪಡೆಯಿರಿ 1 ಡಬ್ಬಿ ಕ್ರಯ ರೂ 1—0—0

ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ನಿರೋಗಿಗಳಾಗುವುದಕ್ಕೆ

ಕ್ರಯವು ಇಲ್ಲದೆ ಉಚಿತವಾಗಿ ಕೊಡುವ

### ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ

ರಾಜವೈದ್ಯ ನಾರಾಯಣಜಿ ಕೇಶವಜಿ,
1/94 ಜೈನಾ ಬಜಾರು ರೋಡು ಮದರಾಸು

ತಿಳಿಯದೇ ಧಾತುಕ್ಷಯವಾಗಿ ಕ್ಷೀಣ ಶಕ್ತಿಗಳೂ ಆದ ಮನುಷ್ಯರಿಗೆ ಮಧ್ಯ ತಾರುಣ್ಯದಲ್ಲಿಯೇ ನಿಜವಾಗಿ ಸಂಸಾರ ಸುಖವು ದೊರೆಯದೇ ನಿರುತ್ಸಾಹ ನಿರಾಶೆಗಳು ಹುಟ್ಟುತ್ತವೆ ಇಂಥ ಮನುಷ್ಯರ ಧಾತು ಕ್ಷಯದೋಷವು ಹೋಗಿಸಿ, ಪೂರ್ಣ ಪುರುಷತ್ವವನ್ನು ಕೊಡುವಂತಹದ್ದು.

## ವೈದ್ಯರಾಜ ಶ್ರೀ ಕೇಶವಶಾಸ್ತ್ರೀ ವಿರಜಕರ ಇವರ,

ಶಕ್ತಿಶಾಂತಿ ವರ್ಧಕ ಆರೋಗ್ಯ ಕೊಡುವ

# ಅಮೃತ ಸಿಂಧು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಸವಿ ಹಾಗು ತೀವ್ರ ಗುಣಕೊಡುವ ಔಷಧವು ಮಾಡಲಾಗಿದೆ.

ಇದರ ಉಪಯೋಗದಿಂದ ತಪ್ಪಿಗಿನ ಧೈರ್ಯ, ನಿರ್ಬಲ ಶರೀರ, ನಿರುತ್ಸಾಹ ಮನಸ್ಸು, ಪೌರುಷತ್ವಹೀನ ದೇಹ, ಅನಿಶ್ಚಿತ ಸ್ವಭಾವ, ನಿಸ್ತೇಜತನವನ್ನೂ ಹೇಡಿತನವನ್ನೂ ಅಂಜುಬುರುಕತನ ಅಕಾಲಮುಪ್ಪು, ಸ್ವಪ್ನವಸ್ಥೆ, ವೀರ್ಯದ ನೀರು ಆಲಸ್ಯ, ಕಣ್ಣು ಕೈಕಾಲುಗಳುರಿಯೋಣ, ಉರಿಮೂತ್ರ ಇ ಪ್ರಿಯ ದ ಉರಿ ಪಿತ್ತವಿಕಾರ ಅಗ್ನಿಮಾಂದ್ಯ, ನಿದ್ರಾನಾಶ, ಮಲಾವರೋಧ ಬೆನ್ನು ನೋಯಿಸೋಣ, ಟೊಂಕಶೂಲಿ, ಎಲ್ಲ ರಕ್ತದ ಮೂತ್ರರೋಗ ಮೊದಲಾದ ಎಲ್ಲ ಬೇನೆಗಳು ನಾಶಿಯಾಗಿ ರಸ, ರಕ್ತ, ಅಸ್ಥಿ, ಮಾಂಸ, ವೀರ್ಯ ಮೊದಲಾದ ಏಳು ಧಾತುಗಳ ವೃದ್ಧಿಯಾಗಿ ಇಂದ್ರಿಯದ ಅಶಕ್ತತೆಯು ನಷ್ಟವಾಗಿ ದೇಹದಲ್ಲಿ ಶಕ್ತಿಯೂ ಹುಟ್ಟುತ್ತದೆ ಇದರಿಂದ ನಿಜವಾದ ಸಂಸಾರಸುಖವು ಸಿಗುತ್ತದೆ. ಹೆಂಗಸರ ಮೈಮುಟ್ಟುಶೂಲೆ ಕೆಂಪು ಹಾಗು ಬಿಳಿ ಪ್ರದರ ಮೊದಲಾದ ಸಂತತಿಗೆ ಬಾಧಕವಾದ ಗರ್ಭಾಶಯದ ಎಲ್ಲ ವಿಕಾರಗಳು ಹೋಗಿ ಪ್ರಕೃತಿಯು ಸುಧಾರಿಸುತ್ತದೆ ಈ ಅಮೃತಸಿಂಧುವನ್ನು ನಸಿಕಲ್ಲಿ ಅರ್ಧ ತೊಲೆ ಮತ್ತು ಸಂಜೆಗೆ ಅರ್ಧ ತೊಲೆ ತೆಕ್ಕೊಂಡ ಮೇಲೆ ಆಕಳ ಅಥವಾ ಎಮ್ಮೆಯ ಹಾಲನ್ನು ೧೦ ರಿಂದ ೨೦ ತೊಲೆಯ ವರೆಗೆ ತಕ್ಕೊಳ್ಳಬೇಕು. ಹತ್ತು ದಿವಸಗಳ ವರೆಗೆ ಸಾಕಾಗುವ ೧ ಬಾಟಲಿಗೆ ರೂ. ೧-೪-೦, ೪ ಬಾಟಲಿಗೆ ರೂ. ೪, ೧೨ ಬಾಟಲಿಗೆ ರೂ. ೧೧, ಹಾಗು ೧ ಬಾಟಲಿ ತಕ್ಕೊ ಅಂಚೆ ಹಾಗು ಪೆಟ್ಟಿಗೆಯ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೋ,
5c Divison, ಶಿಹಾಪುರ, ಜಿಲ್ಲಾ ಬೆಳಗಾಂವಿ.

ಗವರ್ನಮೆಂಟಿನಲ್ಲಿ ರಿಜಿಸ್ಟರ ಮಾಡಲ್ಪಟ್ಟ

ಜಗತ್ಪ್ರಸಿದ್ಧವಾದ

## ಎಲ್ಲ ರೋಗಗಳಿಗೆ ಒಂದೇ ಔಷಧ!



# ಅರ್ಕುಶಫಾ ಅಥವಾ ಆರೋಗ್ಯಬಿಂದು.

ಪ್ರವಾಸಿ ಮಿತ್ರ ಮೂರ್ತಿವಂತ ವೈದ್ಯ.

ಇದು ಅರ್ಕವಿದ್ದು ಇದರಲ್ಲಿ ಸೀಸ ರಸಾಯನ ಕೂಡಿರುವುದಿಲ್ಲ ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ ಇದು ಪ್ರಸಿದ್ಧವಾಗಿ ೧೬ ವರ್ಷಗಳು ಆಗುತ್ತ ಬಂದವು ಇವತ್ತಿನ ವರೆಗೆ ಎರಡು ಲಕ್ಷಗಳವರೆಗೆ ಬಾಟಲಿಗಳು ಖರ್ಚಾಗಿರುತ್ತವೆ. ಇವರ ಬಗ್ಗೆ ನಮ್ಮ ಹತ್ತಿರ ಬೇಡುವ ಪತ್ರಗಳು ಛಾಪಿ ಮಾಡಿದ ಯಾದಿಗಳು, ಫ್ರೀಸ್ಟ ಸಾಪತಿಗಳು, ಬಾರೆಸಿ ಬುಕ್ಕುಗಳು ಇರುತ್ತವೆ. ಬೇಕಾದವರು ಖಾತ್ರಿಮಾಡಿಕೊಳ್ಳಬೇಕು ಇದು ಸಟೆಯೆಂದು ಸಿದ್ಧಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು ಈ ಔಷಧವು ಅತ್ಯಂತ ಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತತ್ಕಾಲ ಗುಣಕೊಡುವದು ಮತ್ತು ಎಂಥ ಭಯಂಕರ ರೋಗವು ಇದ್ದರೂ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರ್ಟಿಫಿಕೇಟುಗಳು ನಮ್ಮ ಹತ್ತಿರ ಹಾಜರು ಇರುತ್ತವೆ ಇವನ್ನು ಬರೆಯಲಿಕ್ಕೆ ಕಾಗದವು ಸಾಲದು ಕಾರಣ ಒಂದು ಸಾರೆ ತಕ್ಕೊಂಡು ಅನುಭವ ನೋಡಿರಿ

ರೋಗದ ನಾಮಗಳು —

ಕ್ಷಯರೋಗ, ಬಾಹ್ಯಂತರರೋಗ, ಹಡೆದ ನಂಜು, ದಮ್ಮು, ಕೆಮ್ಮು, ಅವಗ್ಗೆ, ಕಾಲರಾ (ಮಹಾರೋಗ), ಪ್ಲೇಗ, ಇನ್‌ಫ್ಲುಯೆಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗುಲ್ಮರೋಗ, ಮೂಲರೋಗ ಗಂಡಮಾಲೆ, ನಾರುಹುಣ್ಣು ಶಸ್ತ್ರಗಾಯ, ಶಿವಶೂಲಿ ಮೂಗಿನೊಳಗಿನ ಪಿನಸಿ ಮೊದಲಾದವುಗಳು, ಕಣ್ಣುನೋವು ಕಣ್ಣಿನೊಳಗೆ ಹೂ ಬೆಳೆಯೋದು, ಅಜೀರ್ಣ, ಹೊಟ್ಟೆ ಶೂಲಿ ಸಣ್ಣ ಕೂಸುಗಳಿಗೆ ಆದ ರೋಗಗಳ ಬಾಲಗ್ರಹ ಅರಿವೆ, ಮುಟ್ಟುದೋಷ, ಹೊಟ್ಟೆದೊಡ್ಡದಾಗೋದು, ಕೋಡಿಗೆಮ್ಮು, ಮೈ ಹೊರಬೀಳೋದು, ಮತ್ತು ಡಾಕ್ಟರರಿಗೂ ವೈದ್ಯರಿಗೂ ಸಹ ತಿಳಿಯದೆಯಿದ್ದ ರೋಗಗಳು ಈ ಆರೋಗ್ಯಬಿಂದುವಿನಿಂದ ಖಾತ್ರಿಯಿಂದ ಗುಣಬರುವುದು.

೧ ಕಾಲು ತೊಲೆ ಬಾಟ್ಲಿ ಬೆಲೆ ೨ ರೂಪಾಯಿ. ನಮೂನೆ ಉದ್ದಿಷ್ಟ ಜಲದ ತೂಕದ ಬಾಟ್ಲಿ ೧ಕ್ಕೆ ೮ ಆಣೆ, ಖರ್ಚು ಬೇರೆ ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು ೨ ರೂಪಾಯ ಆರ್ಡರು ಬಂದರೆ ಕಳಿಸಲಾದೀತು ಅದರ ಖರ್ಚ ೭ ಆಣೆ ಚಿಕ್ಕ ಬಾಟ್ಲಿ ಒಂದು ಡಜನ ತಕ್ಕೊಳ್ಳುವವರಿಗೆ ನಾಲ್ಕು ಬಾಟ್ಲಿಗಳು ಕಮಿಶನ್ ಸಿಗುತ್ತವೆ ಖರ್ಚ ೯ ಆಣೆ, ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕ್ಕೊಂಡರೂ ಕಮಿಶನ್ ಇಲ್ಲ ವೆಚ್ಚ ೭ ಆಣೆ, ೧ ಕಾಲು ತೊಲೆ ಬಾಟ್ಲಿ ಒಂದೇಸಾರೆ ೪ ತಕ್ಕೊಳ್ಳುವವರಿಗೆ ಒಂದು ಬಾಟ್ಲಿ ಕಮಿಶನು ಸಿಗುತ್ತದೆ ಖರ್ಚು ೯ ಆಣೆ ೧-೨ ಒಂದು ಎರಡು ತಕ್ಕೊಂಡರೆ ಕಮಿಶನ್ ಸಿಗಲಿಕ್ಕಿಲ್ಲಾ, ಖರ್ಚು ೭ ಆಣೆ, ತಕ್ಕೊಳ್ಳುವ ಪ್ರಮಾಣ ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಛಾಪಿಸಿರುತ್ತದೆ. ಪಸಂದಿ ಪ್ರಕಾರ ಬಾಟ್ಲಿ ಕೂಡ ಸಿಗುವುವು, ಈ ಔಷಧವು ಪೇಟೆ ಹೊರಟರೆ ಶಿಲ್ಲಕ ಉಳಿದ ಮಾಲು ಪರತ ತಕ್ಕೊಂಡು ಅದರ ಬೆಲೆ ವಾಪಾಸು ಕೊಡುವೆವು ಈ ಅರ್ಕುಶಫಾ ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸು ಮಾಡಬೇಕಾಗಿಲ್ಲ ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷಿನಲ್ಲಿ ಪೋಸ್ಟು ಜಿಲ್ಲಾ ವಗೈರೆ ಸ್ಪಷ್ಟವಾಗಿ ಬರೆಯಿರಿ.

☞ ನಮ್ಮ ವಿಳಾಸ:— ಎಚ್. ಎಮ್. ಮುಲ್ಲಾ,

ಸಂಪಾದಕ ಅರ್ಕುಶಫಾ, ಹೆಡ್ ಆಫೀಸ
ಪೋಸ್ಟ ಕಾಪೂರ (ಬೆಳಗಾವ.)

## ಜಗತ್ತಿನ ಎಂಟು ಆಶ್ಚರ್ಯಕರ ಉಪಕರಣಗಳು.

# "ಸ್ಪಿರಿಟ್ ಬಾಕ್ಸ್"

ಇದನ್ನು ಅಮೇರಿಕದಿಂದ ನಾವು ಇತ್ತೀಚೆಗ ತರಿಸಿರುವೆವು ಯಾವನಾದರೂ ತನ್ನ ಮೃತಬಂಧುಗಳನ್ನೂ, ಸ್ನೇಹಿತರನ್ನೂ ನೋಡಿ ತೃಪ್ತಿಪಡಲು ಆಶಿಸುವನಾದರೆ ಈ 'ಸ್ಪಿರಿಟ್ ಬಾಕ್ಸಿ'ನ ಮೂಲಕ ನಾಲ್ಕೈದು ನಿಮಿಷಗಳೊಳಗೆ ಅವರನ್ನು ಕಾಣಬಹುದು ಭೂತ ಭವಿಷ್ಯತ್ ವರ್ತಮಾನಗಳಲ್ಲಿನ ಮನುಷ್ಯನ ಆತ್ಮ ಮತ್ತು ಇತರ ವಿಷಯದ ಪ್ರಶ್ನೆಗಳಿಗೆ ಈ ಸ್ಪಿರಿಟ್ ಬಾಕ್ಸ್ ಉತ್ತರವೀಯುವುದು. ಈ ಪೆಟ್ಟಿಗೆಯ ಮಾಹಿತಿ, ಮತ್ತು ಉಪಯೋಗಿಸುವ ಕ್ರಮ ಮೊದಲಾದವುಗಳನ್ನು ಮುದ್ರಿಸಿದ ಪುಸ್ತಕವು ಮುಫತ್ತಾಗಿ ದೊರಕುವದು ಪೆಕಿಂಗ್ ಸಮೇತ ಪೆಟ್ಟಿಗೆಯ ಕ್ರಯ ರೂ. 4—0—0. ಇಂಗ್ಲೀಷಿನಲ್ಲಿಯೇ ಬರೆಯಿರಿ

**The American Trading Co.,**
*19 Goa Bagan Street,*
(Dept No 12) CALCUTTA.

(೮ನೇ ಪುಟದಿಂದ ಮುಂದರಿಸಿಯದೆ)

**ಬೆಳ್ಗಾಂವದಲ್ಲಿ.**

ಹಿಂದೂ ಬುಲೆಟಿನ್ ಹಾಗೂ ಕಾಂಗ್ರೆಸ್ ಬುಲೆಟಿನ್ನು ಪೋಲೀಸರು ದೌಡುಮಾಡಿರುವರು.

**ಬನಾರಿಸದಲ್ಲಿ.**

ಪ್ರೆಸ್‌ಓರ್ಡಿನೆನ್ಸಿಗೆ ಬಲಿದಿದ್ದ "ಆಜ್" ಎಂಬ ವರ್ತಮಾನ ಪತ್ರಿಕೆಯು ಅಕ್ಟೋಬರ ತಾ ೨೯ರ ಮೊದಲುಗೊಂಡು (ಪ್ರೆಸ್ ಆರ್ಡಿನೆನ್ಸು ಅವಧಿಯು ದಾಟಿದ ಮೇಲೆ) ತಿರಿಗಿ ಹೊರಡಿಸಲ್ಪಡುವದೆಂದು ತಿಳಿದುಬರುತ್ತದೆ.

**ಕಲ್ಕತ್ತಾದಲ್ಲಿ.**

ಶ್ರೀಮತಿ ಬಿಮಲಪ್ರತಿಭಾದೇವಿಯರನ್ನು (ನಾಶಿಕ ಸತ್ಯಾಗ್ರಹ ಸಮಿತಿಯ ಕಾರ್ಯದರ್ಶಿ) ವಿದೇಶಿ ಬಟ್ಟೆಗಳ ಮಳಿಗೆಗಳನ್ನು ಪಿಕೆಟ್ ಮಾಡಿದುದಕ್ಕಾಗಿ ೬ ತಿಂಗಳ ಸಜಾವಿಧಿಯಾಗಿತ್ತು. ಸದರಿಯವರನ್ನು ಡಾರ್ಜಲಿಂಗ್ ಜೈಲಿಗೆ ವರ್ಗಾಯಿಸಿರುವರೆಂದು ತಿಳಿದುಬರುತ್ತದೆ. ಅವರು ಕಾಹಿಲೆಯಿಂದ ಪೀಡಿತರಾಗಿರುವರು, ಕೈಕಾಲುಗಳು ಬಾತುಹೋಗಿವೆ ಮತ್ತು ರಕ್ತವನ್ನೇ ಉಗುಳುತ್ತಾರಾಗಿಯೂ ತಿಳಿದುಬರುತ್ತದೆ. ಸದರಿಯವರ ಗಂಡನಾದ ಡಾ॥ ಬೆನಾರ್ಜಿಯವರನ್ನೂ ೬ ತಿಂಗಳ ಸಜೆ ವಿಧಿಸಿ ಡಮ್ ಡಮ್ ಬಂದಿಖಾನೆಯಲ್ಲಿರಿಸಿರುವರೆಂದು ತಿಳಿಯಲಾಗುತ್ತದೆ ಮಿ॥ ರಾಧಾಕೃಷ್ಣನ್ ದೇ ಎಂಬವರು ಮೋಟಾರು ಬಸ್ಸುಗಳನ್ನು ಪಿಕೆಟ್ ಮಾಡಿದುದಕ್ಕಾಗಿ ೪ ತಿಂಗಳ ಕಠಿಣ ಶಿಕ್ಷೆಗೆ ಒಳಪಟ್ಟಿರುವರು.

೨೬—೧೦—೩೦

**ಮುಂಬಾಯಿಯಲ್ಲಿ ಲಾಟಿಪ್ರಹಾರ**

ಮಿ॥ ವಿಲ್ಸನರು ಮುಂಬಾಯಿಯ ಹೊಸ ಪೋಲೀಸ್ ಕಮಿಶನರು, ಸತ್ಯಾಗ್ರಹವನ್ನು ಸಮೂಲ ನಾಶಮಾಡಬೇಕೆಂದು ಪ್ರತಿಜ್ಞೆ ತೊಟ್ಟ ವೀರಪುರುಷರೆಂದರೆ ಇವರೇ.

ಮುಂಬಾಯಿಯಲ್ಲಿ ಪೋಲೀಸರು ಆತಂಕಿಸುತ್ತಿದ್ದರೂ, ತಾ. ೨೬—೧೦—೩೦ನೇ ದಿನ ರಾಷ್ಟ್ರ ಧ್ವಜಾರೋಹಣ ಸಮಾರಂಭವು ಆರಂಭಿಸಲ್ಪಟ್ಟಿತು, ಮೈದಾನದಲ್ಲಿ ಸಭೆ ಜರಗಿತು ಜನಸಂದಣಿಯು ದಟ್ಟವಾಗಿಯೂ ಗುಂಪುಗುಂಪಾಗಿಯೂ ಎಸ್‌ಪ್ಲನೇಡ ಮೈದಾನನ್ನು ಆವರಿಸಿಕೊಂಡಿತ್ತು, ಈ ಮಧ್ಯೆ ಪೋಲೀಸು ಕಮಿಶನರ ಸವಾರಿ, ೬೦ ಸಾರ್ಜಂಟರು, ೫೦೦ ಲಾಟಿ ಹಸ್ತರಾದ ಪೋಲೀಸ್ ಕಾನಸ್ಟೇಬಲರು, ಇವರ ಪ್ರಚಂಡ ಸಾಹಸ ಈ ದೃಶ್ಯವು ನೆರೆದ ಜನರನ್ನು ವಿಸ್ಮಯಗೊಳಿಸಿತು, ಅಲ್ಲದೆ ಜನಸ್ತೋಮವನ್ನು ಚದರಿಸುವದಕ್ಕಾಗಿ ಡಜನ್‌ಕಟ್ಟಲೆಯಲ್ಲಿ ಪೋಲೀಸರೂ, ಅಧಿಕಾರಿಗಳೂ ಬಂದು ಕೂಡುತ್ತಿದ್ದರು.

ಪೂರ್ವಾಹ್ನ ಘಂಟೆ ೮ಕ್ಕೆ ಸರಿಯಾಗಿ ಸ್ವಯಂಸೇವಕರ ಮೂರು ತಂಡಗಳು ರಾಷ್ಟ್ರೀಯ ಧ್ವಜಪಾಣಿಗಳಾಗಿ ಎಸ್‌ಪ್ಲನೇಡ ಮೈದಾನನ್ನು ಸೇರಿದರು, ಅವರ ದಸ್ತಗಿರಿಯೂ ಆಯಿತು ಆ ಮೇಲೆ ಬೋರಿಬಂದರದ ಕಡೆಯಿಂದ ಸಿಖ್ ಸ್ವಯಂಸೇವಕರ ಒಂದು ತಂಡವು ಬಂದಿತು, ಅವರಿಗೆ ಲಾಟಿಯ ಸನ್ಮಾನಗಳು, ಕೊನೆಗೆ ಬಂದವರೆಂದರೆ, ಹಿಂದುಸ್ಥಾನ್ ಸೇವಾದಳಕ್ಕೆ ಸೇರಿದ ನಾರೀ ಸತ್ಯಾಗ್ರಹಿಗಳು ಪ್ರತಿಯೊಬ್ಬಳ ಕೈಯಲ್ಲಿಯೂ ಒಂದೊಂದು ರಾಷ್ಟ್ರಧ್ವಜ, ಆದರೆ, ಇವರ ಮೇಲೆ ಮಾತ್ರ ಪೋಲೀಸರು ಕೈಮಾಡಲಿಲ್ಲವಂತೆ! ಇನ್ನೊಂದು ಖದ್ದರ್‌ಧಾರಿಗಳಾದ ಪುರುಷ ಸ್ವಯಂಸೇವಕ ಪಂಗಡವು ಮೈದಾನನ್ನು ಪ್ರವೇಶಿಸುವ ವೇಳೆಗೆ ಸರಿಯಾಗಿ ಪೋಲೀಸರ ದೊಣ್ಣೆ ತಯ್ಯಾರ್ ಅಂತೂ ೬೦೦ರ ಪ್ರಯತ್ನಗಳೂ ಕೂಡ ನಿರರ್ಥಕವಾದವು. ಹಾಗೂ ಒಂದರ ಹಿಂದೆ ಒಂದರಂತೆ ಸ್ವಯಂಸೇವಕರ ತಂಡಗಳು ಒದು ತ್ತಲೇ ಇದ್ದವು, ಪೋಲೀಸರ ಲಾಟಿಗಳಿಗೆ ಪುರುಸತ್ತೇ ಇಲ್ಲದಂತಾಯಿತು ಸಾಧಾರಣ ಪೂರ್ವಾಹ್ನ ಘಂಟೆ ೧೧ರ ಒಳಗಾಗಿ ಪೋಲೀಸರು, ಜನರನ್ನು ಚದರಿಸುವ ಪ್ರಯತ್ನವು ಕೈಗೂಡಿತು. ೧೫೫ ಮಂದಿ ಗಾಯಹೊಂದಿದವರನ್ನು ಕಾಂಗ್ರೆಸ್ ಆಸ್ಪತ್ರೆಗೆ ಕರದ್ಯೊದಿರುವರು ಪೋಲೀಸರ ದೊಣ್ಣೆ ಏಟುಗಳಾದರೂ, ಸ್ವಯಂಸೇವಕರ ತಲೆಗೆ ಸರಿಯಾಗಿ ಹೊಡೆಯಲ್ಪಟ್ಟಿರುವವು ಎಂದು ತಿಳಿದುಬರುತ್ತದೆ. ೪೫ ಮಂದಿ ಸ್ತ್ರೀಯರ ದಸ್ತಗಿರಿಗಳ ಪೈಕಿ ೫೦ ಮಂದಿಯನ್ನು ಬಿಟ್ಟಿರುವರೆಂದೂ ತಿಳಿದುಬರುತ್ತದೆ.

ಅದೇ ದಿನ ಸಂಜೆಗೆ ಇನ್ನೊಂದು ಲಾಠಿಚಾರ್ಜು; ದೇಶಸೇವಿಕೆಯರಲ್ಲಿ ೫೦ ಮಂದಿ ಗಾಯ ಹೊಂದಿದರು; ಪೈಕಿ ೧೦ ಮಂದಿ ಕಾಂಗ್ರೆಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಈ ಕಾರಣಗಳಿಂದ ಮುಂಬಾಯಿ ನಗರವು ಹರತಾಳವನ್ನಾಚರಿಸಿತು. ಎಲ್ಲಾ ವ್ಯಾಪಾರ ವಹಿವಾಟುಗಳು ಬಂದಾಗಿದ್ದವು

ತಾ ೨೭—೧೦—೩೦.

**ಸತಾರದಲ್ಲಿ.**

ಮಿ॥ ಸೇನಗುಪ್ತರನ್ನು ಕೈದು ಮಾಡಿ, ಢಿಲ್ಲಿಯ ಜೈಲಿಗೆ ತಂದಿರುವರು ಅವರನ್ನು ೧೨೪A ಪ್ರಕರಣದ ಮೇಲೆ ವಿಚಾರಣೆ ನಡೆಸಲಿಕ್ಕಿರುವರೆಂದು ತಿಳಿಯಲಾಗುತ್ತದೆ.

**ಢಿಲ್ಲಿ**

ಇಲ್ಲಿನ ಜೈಲೊಳಗಿರಿಸಲ್ಪಟ್ಟ ಮಿ॥ ಸೇನಗುಪ್ತರನ್ನು ಸದರಿಯವರ ಧರ್ಮಪತ್ನಿಯು ಭೇಟಿಮಾಡಿದರು ಸೇನಗುಪ್ತರು ಆ ಸಮಯದಲ್ಲಿ ಉಲ್ಲಾಸದಿಂದಿದ್ದರು, ಆದರೆ ಮುಖದಲ್ಲಿ ರಕ್ತವು ಒಕಳ ಪ್ರಬಲತೆಯಿಂದ ಹರಿಯುತ್ತಿದ್ದು, ಮುಖವು ತುಸು ಕೆಂಪಡರಿದ್ದಿತು. ಸದರಿಯವರ ತನಿಖೆಯು ತಾ ೩-೧೧-೩೦ಕ್ಕೆ ನಡೆಯುವದೆಂದು ತಿಳಿದುಬರುತ್ತದೆ ಸೇನಗುಪ್ತರನ್ನು ಢಿಲ್ಲಿಗೆ ತಂದ ವಿಷಯವು ಪುರಜನರಲ್ಲೊಬ್ಬನಿಗಾದರೂ ತಿಳಿದಿರಲಿಲ್ಲ

**ಅಮೃತಸಾರದಲ್ಲಿ**

ಮಿ ಸೇನಗುಪ್ತರ ಧರ್ಮಪತ್ನಿಯು ಜನಸಮೂಹಾಯದಿಂದ ಕೂಡಿದ ದೊಡ್ಡದೊಂದು ಸಭೆಯಲ್ಲಿ, ಜನತೆಯು ಆಕೆಯ ಗಂಡನಿಗೆ ತೋರ್ಪಡಿಸಿದ ಮರ್ಯಾದೆಗಾಗಿ ಒಂದು ಭಾಷಣ ವಿತ್ತರು ಸಭೆಯು ಜಲಿಯನ್ ವಾಲಾ ಭಾಗದಲ್ಲಿ ನೆರೆದಿತ್ತು. ಬ್ರಿಟಿಷ್ ವಸ್ತು ಬಹಿಷ್ಕಾರವೇ ಭಾಷಣದ ಮುಖ್ಯ ಸಾರಾಂಶವಾಗಿದ್ದಿತು

**ಲಾಹೋರಿನಲ್ಲಿ**

ಕಂಜಾಪರ್ಹಾರಾ ಎಂಬಲ್ಲಿ ಎಡ್ವೊಕೇಟರಾಗಿದ್ದ ಮಿ ಲಾಲಾ ಬಿಶಾನಾಥ್ ಎಂಬವರ ಮನೆಯು ಪೋಲೀಸರಿಂದ ಶೋಧಿಮಾಡಲ್ಪಟ್ಟಿರುವದು

ಲುಧಿಯಾನಾ ಮಹಿಳಾ ಸತ್ಯಾಗ್ರಹ ದಾಳದ ಅಧ್ಯಕ್ಷರಾದ ಶ್ರೀಮತಿ ಪ್ರಕಾಶವತಿ ದೇವಿಯರನ್ನು ೪ ತಿಂಗಳ ಶಿಕ್ಷೆ ಮತ್ತು ರೂಪಾಯಿ ೧೫೦ರ ಜುಲ್ಮಾನೆ ವಿಧಿಸಿ 'ಎ' ಕ್ಲಾಸು ಸೆರೆಮನೆಯಲ್ಲಿರಿಸಿರುವರು

**ಬೆಂಗಳೂರು.**

ಇಲ್ಲಿನ ಸತ್ಯಾಗ್ರಹ ಸಮಿತಿಯವರು ಪಂಡಿತ ಮೋತಿಲಾಲರನ್ನು ಚಿಕಿತ್ಸೆಗಾಗಿ ಆಮಂತ್ರಿಸಿದ್ದರಷ್ಟೆ! ಇದಕ್ಕೆ ಪ್ರತಿಯಾಗಿ ಮೋತಿಲಾಲರು, ತಾನು ಹುಶಾರಾಗುತ್ತಿರುವದರಿಂದ, ತತ್ಕಾಲಕ್ಕೆ ಬರುವದಿಲ್ಲವೆಂದು ತಂತಿ ಮುಖೇನ ತಿಳಿಸಿರುವರು.

**ಮುಂಬಾಯಿಯಲ್ಲಿ**

ಸೇವಾ ಸಂಸ್ಥೆಯ ಅಧ್ಯಕ್ಷಳಾದ ಶ್ರೀಮತಿ ಅವಂತಿಕಾ ಬ್ಯಾಗೋಖಲೆಯವರ ತನಿಖೆಯು ನಡೆದು ೬ ತಿಂಗಳ ಸಾದಾ ಶಿಕ್ಷೆಯು ವಿಧಿಸಲ್ಪಟ್ಟಿರುವದು, ೪೦೦ ರೂಪಾಯಿಗಳ ಜುಲ್ಮಾನೆಯೂ ವಿಧಿಯಾಗಿರುವದು ಜುಲ್ಮಾನೆ ಕೊಡಲು ತಪ್ಪಿದ್ದಲ್ಲಿ ೩ ತಿಂಗಳ ಅಧಿಕ ಶಿಕ್ಷೆ ಸದರಿಯವರ ಮೇಲೆ ೧೭ (೧) ಮತ್ತು ೧೭ (೨) ಎಂಬ ಎರಡು ಪ್ರಕರಣಗಳಿಗೆ ಒಳಪಟ್ಟ ತಕ್ಸೀರುಗಳು ಜ್ಯಾರಿ ಮಾಡಲ್ಪಟ್ಟಿರುವವು

ಅನ್ಯಾಯ ಸಮಿತಿಯ ಸದಸ್ಯರೆಂಬ ಅಪಾದನೆಯ ಮೇಲೆ ತಾ ೨೭ರಲ್ಲಿ ಮುಂಬಾಯಿ ನಗರದ ಅಜಡ್ ಮೈದಾನಿನಲ್ಲಿ ೨೬ ಮಂದಿಯನ್ನು ದಸ್ತಗಿರಿಮಾಡಿ ಆರಾರು ತಿಂಗಳ ಕಠಿಣ ಸಜೆಯನ್ನು ವಿಧಿಸಿರುವರು, ಪ್ರತಿಯೊಬ್ಬನಿಗೆ ರೂಪಾಯಿ ೩೦೦೦ರ ಜುಲ್ಮಾನೆಯೂ ವಿಧಿಯಾಗಿರುವದು ಜುಲ್ಮಾನೆ ಕೊಡಲು ತಪ್ಪಿದ್ದಲ್ಲಿ ಮೂರು ತಿಂಗಳ ಅಧಿಕ ಶಿಕ್ಷೆ—ಮುಂಬಾಯಿ ಸಮರ ಸಂಸ್ಥೆಗೆ ಮಿ॥ ಚಟ್ಟೋಪಾಧ್ಯಾಯರು ಡಿಕ್ಟೇಟರರಾಗಿ ನಿಯಮಿಸಲ್ಪಟ್ಟಿರುವರು ಅವರು ಕೊಟ್ಟ ಸ್ಟೇಟ್‌ಮೆಂಟಿನ ಸಾರಾಂಶ —

'ಸರಕಾರವು ಭಾರತೀಯರನ್ನು ಜಗಳಕ್ಕೆ ಕರೆದಿರುವದು, ಭಾರತೀಯರು ಅದಕ್ಕೆ ಯೋಗ್ಯ ಉತ್ತರವೀಯಲು ನಿರ್ಧಾರ ಮಾಡಿರುವರು ಸರಕಾರದ ಸಮರರಂಗದ ಆಮಂತ್ರಣೆಗೆ ವಿರೋಧವಾಗಿ ರಾಷ್ಟ್ರೀಯ ಸಮಿತಿಗಳನ್ನು ಸ್ಥಾಪಿಸಿ ಸತ್ಯಾಗ್ರಹ ಚಳವಳವನ್ನು ಮುಂದೊತ್ತುತ್ತಿರುವದೇ ಭಾರತೀಯರು ಸರಕಾರಕ್ಕೆ ಕೊಡುವ ಯೋಗ್ಯ ಉತ್ತರವು ಮತ್ತು ಹಾಗೆ ವರ್ತಿಸುವ ಸುಸಂದರ್ಭವು ಇದೀಗಲೇ ಬಂದಿರುವದು. ಇಡೀ ಭಾರತ ವರ್ಷವು ಸತ್ಯಾಗ್ರಹ ಸಮಿತಿಗಳಿಂದ ತುಂಬಿ ತುಳುಕಾಡಲಿ! ಹಾಗೆ ಮಾಡಿದರೆ ಮಾತ್ರವೇ ನಮ್ಮ ಭಾರತ ಸ್ವತಂತ್ರ್ಯಭ್ಯುದಯವು ಶೀಘ್ರದಲ್ಲೇ ಕೈಗೂಡುವದು, ಭರತಖಂಡದ ಬಂಧವಿಮೋಚನೆಯಾಗುವದು. ಭಾರತೀಯರು ತಮ್ಮ ಪಾದಗಳಿಂದ ರಕ್ತವು ಹರಿಯುವಷ್ಟು ಕಷ್ಟದಾಯಕವಾದ ಪ್ರಯಾಣವನ್ನು ಹೂಡಿರುವರು ಕಷ್ಟಪರಂಪರೆಗಳೆಷ್ಟಿದ್ದರೂ, ಭಾರತೀಯರು, ತಾವು ಕೈಕೊಂಡ ಪ್ರಯಾಣವನ್ನು ಮುಂದರಿಸಿಯೇ ಬಿಡುವ ನಿರ್ಧಾರವನ್ನು ದೃಢೀಕರಿಸಿರುವರು, ಇಂದಿನ ಘಾಯಗಳು ನಾಳೆಗೆ ದೀಪಗಳಂತೆ ಜಾಜ್ವಲ್ಯಮಾನವಾಗಿ ಪ್ರಕಾಶಿಸಲಿಕ್ಕಿರುವವೆಂದು ಮಾತ್ರ, ಭಾರತೀಯರು ಮರೆಯದಿರಲಿ!!

**ಅಲ್ಲಹಾಬಾದದಲ್ಲಿ.**

ಶ್ರೀಮತಿ ಮುಸಾಮತ್ ಕಿಶೋರಿದೇವಿ ಎಂಬೊಬ್ಬ ನಾರೀ ಸತ್ಯಾಗ್ರಹಿಯನ್ನು, ಜನತೆಯ ನೆಮ್ಮದಿಭಂಗ ಉಂಟುಮಾಡಿದಳೆಂಬ ಅಪಾದನೆಯ ಮೇಲೆ ಸಿಟಿ ಮ್ಯಾಜಿಸ್ಟ್ರೇಟರು ೨ ತಿಂಗಳ ಕಠಿಣ ಸಜೆಯನ್ನೂ ರೂಪಾಯಿ ೩೦೦ರ ಜುಲ್ಮಾನೆಯನ್ನೂ ವಿಧಿ ಮಾಡಿರುವರು. ಜುಲ್ಮಾನೆ ಕೊಡಲು ತಪ್ಪಿದ್ದಲ್ಲಿ ಒಂದು ತಿಂಗಳ ಅಧಿಕ ಶಿಕ್ಷೆ

ಪಂಡಿತ ಗೋವಿಂದ ಮಾಲವೀಯರ ಬದಲಾಗಿ ಮಿ॥ ಮಹಾದೇವೋ ದೇಸಾಯಿಯರನ್ನು ಆಲ್ ಇಂಡಿಯಾ ಕಾಂಗ್ರೆಸ್ ಸಮಿತಿಯ ಜನರಲ್ ಕಾರ್ಯದರ್ಶಿಯನ್ನಾಗಿ ನಿಯಮಿಸಿರುವರು ಮಿ ಸೇನಗುಪ್ತರ ಆಕ್ಟಿಂಗ್ ಪ್ರೆಸಿಡೆಂಟ್ ಸ್ಥಾನಕ್ಕೆ ಯಾರನ್ನೂ ನಿಯಮಿಸಿರುವದಿಲ್ಲ, ಈ ಕುರಿತು ಆಲೋಚಿಸುತ್ತಿರುವರು.

**ನವಾಡಿಲ್ಲಿ**

ಕಳೆದ ಎಪ್ರಿಲ್ ತಿಂಗಳಲ್ಲಿ ಜ್ಯಾರಿಗೆ ತರಲ್ಪಟ್ಟ ಪ್ರೆಸ್ ಓರ್ಡಿನೆನ್ಸಿನ ಅವಧಿಯು ಮುಗಿದಿರುವದು ಆ ಕುರಿತು ಮುಂದಿನ ತಿದ್ದುಪಡಿಗಳಾಗಲಿ ಬದಲಾವಣೆಗಳಾಗಲಿ, ಯಾವದೂ ಕಂಡುಬರುವದಿಲ್ಲ

**ಪೇಶಾವರದಲ್ಲಿ**

ಉಪಯೋಗ ಮಾಡದೆ, ಬಿಟ್ಟಿಲ್ಲೇ ಬಚಿಸಲ್ಪಟ್ಟ ಒಂದು ಬಾಂಬು ಪೋಲೀಸರಿಗೆ ದೊರೆತಿರುವದು. ಸದರಿ ಬಾಂಬು ಕೆಲಸದಿಂದ ನಿವೃತ್ತಿಹೊಂದಲ್ಪಟ್ಟ ಸುಭೇದಾರ್‌ಮೇಜರ್ ಸೈಫುಲ್ಲಾಖಾನ್ ಎಂಬವರ ಮನೆಯಲ್ಲಿ ಸಿಕ್ಕಿತೆಂದೂ ತಿಳಿದುಬರುವದು

## ಮಹಾತ್ಮಾಜಿಯವರು ಬಂದಿಖಾನೆಯಿಂದ ಬರೆದ ಪತ್ರದ ಅಭಿಪ್ರಾಯ.

ಗಾಂಧಿಜಿಯವರು ತನ್ನ ಪ್ರತಿಯೊಂದು ಪತ್ರದಲ್ಲಿಯೂ, ಚರಕದ ಕುರಿತು ಒಂದೆರಡು ಮಾತುಗಳನ್ನು ಬರೆಯುವರು. ಅವರು ಆಗಿಂದಾಗ ಸಬರ್ಮತಿ ಆಶ್ರಮಕ್ಕೆ ಪತ್ರಗಳನ್ನು ಬರೆಯುತ್ತಲೇ ಇರುವರು ನೂಲುವಾಗ, ರಾಟೆಯ ಚಕ್ರವು ತಿರುಗುತ್ತಲೇ ಇರುವದಷ್ಟೆ! ಅದರ ತಿರುಗುವಿಕೆಯನ್ನು ಲಕ್ಷಿಸುವಷ್ಟಕ್ಕೆ ಸಮಯವು ತನ್ನ ತಿರುವಳಿಕೆಗ ಜಾರದಂತೆ ದಾಟಿಹೋಗುವದು ಹಗಲಿನ ಅಂತ್ಯದಲ್ಲಿ ನೂಲುವಿಕೆಯ ಪರಿಣಾಮವಾಗಿ ಸುಖವಾದ ನಿದ್ರೆಯೂ ಬರುವದು ಆದುದರಿಂದ, 'ನೂಲುವಿಕೆಯು ಆಹಾರಕ್ಕಿಂತ ನನಗೆ ವಿಶೇಷವಾಗಿರುವದು' ಎಂದೊಮ್ಮೆ ಮಹಾತ್ಮಾಜಿಯವರೇ ಹೇಳಿರುವರು, ಮತ್ತು 'ದಿನದಿಂದ ದಿನಕ್ಕೆ ಚಕ್ರದಲ್ಲಿ ಹೊಸ ಹೊಸ ಕ್ರಮವನ್ನು ತಿದ್ದುಪಡಿ ಮಾಡುತ್ತಿರುವೆನು, ಆದುದರಿಂದ ದಿನ ಹೋದಷ್ಟಕ್ಕೆ ಚಕ್ರವು ನೂಲುವಿಕೆಯನ್ನು ಸರಾಗವಾಗಿ ನಡೆಸುತ್ತಿರುವದು' ಎಂದೂ ತಿಳಿಸಿರುವರು.

ಚಕ್ರದ ಮೇಲೆ ತನ್ನ ಅಧಿಕಾರವು ಎಷ್ಟಕ್ಕೆ ಹೆಚ್ಚುವದೋ, ಅಷ್ಟಕ್ಕೆ ನೂಲುವಿಕೆಯಲ್ಲಿ ಆಯಾಸವಿಲ್ಲದೆ ಸಂತೋಷವು ಅಧಿಕವಾಗುತ್ತಿರುವದು ಮಹಾತ್ಮಾಜಿಯವರು ಬರೆಯುತ್ತಾರೆ — 'ಚಕ್ರವನ್ನು ದಿನೇ ದಿನೇ ವೃದ್ಧಿಗೊಳಿಸುತ್ತಿರುವೆನು, ಆ ಕಾರಣ ನೂಲುವಿಕೆಯು ನನಗೆ ಕಷ್ಟತೋರುವುದಿಲ್ಲ. ಚಕ್ರವು ಸದ್ದಿಲ್ಲದೆ ನಯವಾಗಿ ತಿರುಗುತ್ತಿರುವದು, ನೂಲುವಿಕೆಯು ನಿಜವಾದ ಗಾನಾನಂದವನ್ನುಂಟುಮಾಡುತ್ತದೆ— ಇನ್ನೂ ನನ್ನ ಚಕ್ರವನ್ನು ಉನ್ನತ ರೀತಿಗೆ ತರಬೇಕೆಂಬುದೇ ನನ್ನ ಆಶೆ, ಮತ್ತು ನೂಲುವಿಕೆಯು ಅದೊಂದು ದೈವೀಕ ಕೆಲಸವೆಂದೇ ನಾನು ತಿಳಿಯುತ್ತೇನೆ. ಭಗವಂತನು ಮನಸ್ಸು ಮಾಡಿದರೆ ನನಗೆ ಶಕ್ತಿಯನ್ನೂ ಸಾಮರ್ಥ್ಯವನ್ನು ದಯಪಾಲಿಸುವನೆಂದೇ ನನ್ನ ನಂಬಿಕೆ.'

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ ಫಲಶ್ರೇಷ್ಠ

## ಹೊಸದುರ್ಗ ಅಮೃತೇಶ್ವರೀ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ, ಕ,)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನವೆಂಬ ಬಿರುದು ಪಡೆದು ಪ್ರಸಿದ್ಧರಾದ 'ಭಿಷಕ್ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಲ್ಯಾಣ ಕಷ್ಣ ವೈದ್ಯರಿಂದ [illegible] ಯುಕ್ತ ಸರ್ವ [illegible] ಬಾಧೆ [illegible] ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ವಟಿಕೆ, ಆರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಮಿತದರಗಳಲ್ಲಿ ಸಿಕ್ಕುತ್ತವೆ. ತಯಾರ ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ರೋಗಿಯ ಕುಲ, ಪ್ರಾಯ, [illegible] ಕ್ರಮ, ವೃತ್ತಿ [illegible] ಮೊದಲಾದ [illegible] ಅಭ್ಯಾಸ [illegible] ಆ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಹಿಡಿದು [illegible] ಎಂಬ [illegible] [illegible] ಸಂಗತಿಗಳಲ್ಲಿ ಎಷ್ಟು ಸ್ಪಷ್ಟ ನಡೆದದೆ ಎಂಬೀ ವಿವರಗಳು [illegible] ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡೆಸುವದೆಯೂ ಮತ್ತು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸಿದಲ್ಲಿ [illegible] ಅನುಕೂಲಸ್ಥರಾದ [illegible] ಅವರ ಅಗತ್ಯದ [illegible] ಕೊಡುವದೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅವನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವದೆಯೂ ಸಹಿತ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಆಗತ್ಯಪಡುವವರಿಗೆ ಮದ್ದುಗಳನ್ನು [illegible] ಕೊಡುವರೆ ಕೂಡ ವಿಚಾರಣೆಗಳು ಇವೆ. [illegible] ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡೆಸಲಾಗುವದು.
ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ

Batliwalla's Preparations Cover All Your Needs.
A NAME THAT MERIT HAS MADE FAMOUS.
೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

## ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.
ಬಾಟ್ಲಿವಾಲರ ಎಗ್ಯು ಮಿಕ್ಷ್ಚರ್ ಪಿಲ್ಸ್ — ಮಲೇರಿಯಾ ಜ್ವರ ನಿವಾರಕ, ರೂ ೧.
ಬಾಟ್ಲಿವಾಲರ ಬಾಲಾಮೃತ — ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪
ಬಾಟ್ಲಿವಾಲರ ಟಾನಿಕ್ ಆರ್ ಬಾಮ್ — ತಲೆನೋವು ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಟೈಫಾಯಿಡ ಮಿಕ್ಷ್ಚರ — ಸಂಗ್ರಹಣಿ ಮತ್ತು, ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ ಆಣೆ ೧೪
ಬಾಟ್ಲಿವಾಲರ ಕ್ವಿನೈನ ಟೇಬ್ಲೆಟ್ಸ — ೬ ಮು ಗ್ರೇ ಅಥವಾ ಎರಡು ಗ್ರೇನ ೧ ಬಾಟ್ಲಿಯಲ್ಲಿ ೧೦೦ ಟೇಬ್ಲೆಟ್ಸ ಇರುತ್ತವೆ
ಬಾಟ್ಲಿವಾಲರ ಟಾನಿಕ್ ಗುಳಿಗೆಗಳು — ಧಾತು ಪುಷ್ಟಿಕರ ರೂ ೧—೮—೦ ರೂ, ೧—೪—೦, ೧—೧೨—೦
ಬಾಟ್ಲಿವಾಲರ ಹುಳ ಕಟ್ಟಿ ಔಷಧ ರೂ ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ ೦—೬—೦ LIBERAL DISCOUNT TO TRADE
ಕಾರಖಾನೆ CAWASHAPUR, BOMBAY
ಎಲ್ಲಾ ಕಡೆಗಳಲಿ ಡಾ. ಯಚ್ ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
ಏಜಂಟರು ಬೇಕಾಗಿದ್ದಾರೆ Savani Road, P O Cadell R ad, Bombay No 14

## ಕೇಸರಿಯವರ ರತ್ನತ್ರಯಗಳು.

'ಲೋಧ್ರ'

ಶ್ರೀ ಜಯಲಕ್ಷ್ಮಮ್ಮ ಮಿಸ್ಟ್ರೆಸ್, ಬಾಲಿಕಾ ಪಾಠಶಾಲಾ, ಕೊಳ್ಳೇಗಾಲ 'ಸುಮಾರು ಮೂರು ವರುಷ ಕಾಲವಾಗಿ ಪ್ರತಿ ತಿಂಗಳಲ್ಲಿಯೂ ರಜಸ್ವಲೆಯಾಗುವುದು ತಪ್ಪಿ, ಎರಡು ಮೂರು ತಿಂಗಳಿಗೊಂದಾವರ್ತಿ ರಜಸ್ವಲೆಯಾಗುತ್ತಿದ್ದೆನು. ಇದರಿಂದ ಮೈಭಾರ, ನಡುನೋವು, ಕೈಕಾಲು ನೋವು, ನಿಶ್ಶಕ್ತಿ ಮುಂತಾದ ತೊಂದರೆಗಳನ್ನು ಅನುಭವಿಸುತ್ತಿದ್ದೆನು. ನಿಮ್ಮ 'ಲೋಧ್ರ' ಎಂಬ ಔಷಧಿಯನ್ನು ಎರಡು ಸೀಸೆ ಕುಡಿದುದರಿಂದ ನನ್ನ ತೊಂದರೆಗಳು ನಿವೃತ್ತಿಯಾಗಿ ಈಗ ಸೌಖ್ಯವಾಗಿದ್ದೇನೆ. ಕ್ರಮವಾಗಿ ಪ್ರತಿ ತಿಂಗಳಲ್ಲೂ ರಜಸ್ವಲೆಯಾಗುತ್ತಿದ್ದೇನೆ. ನನ್ನಂಥ ಹೆಂಗಸರಿಗೆ ಇದರ ಗುಣವನ್ನು ತಿಳಿಸಲು ಪ್ರಯತ್ನಿಸುತ್ತೇನೆ.'

'ಅಮೃತ'

ಮಿ। ಎ ಸುಬ್ಬರಾಯರು, ಹೈಕೋರ್ಟ್ ವಕೀಲರು ಮಂಗಳೂರು — 'ನಿಮ್ಮ 'ಅಮೃತ'ವು ಉತ್ತಮವಾದ ರಕ್ತಶೋಧಕೌಷಧವಾಗಿದೆ. ಮತ್ತು ಮಲಬದ್ಧತೆಗೆ ವಿಶೇಷ ಪ್ರಯೋಜನಕಾರಿ.

"ಅರ್ಕ"

ಮ॥ ಚಂಗಯ್ಯನವರು, ಧರ್ಮದಾಯದ ಬೋರ್ಡ್ ಕಮಿಷನರ್, ಬೆಂಗಳೂರು ಡಿಸ್ಟ್ರಿಕ್ಟ್, ಪೂನಮಲ್ಲಿ ಹೈರೋಡ್ ಮದರಾಸ್ — 'ಡಾಕ್ಟರ್ ಕೇಸರಿಯವರಿಂದ ತಯಾರಾದ ಸರ್ವಜನಾದರಣೀಯವಾದ "ಅರ್ಕ" ಎಂಬ ಔಷಧವನ್ನು ನಾನು ಬಹುಕಾಲದಿಂದಲೂ ಬಲ್ಲೆನು. ಇದು ಎಲ್ಲಾ ಬಗೆಯ ಜ್ವರಗಳನ್ನೂ ನಿರಪಾಯವಾಗಿ ನಿಶ್ಚಯವಾಗಿ ಗುಣಪಡಿಸುವುದು. ಈ ಔಷಧವು ಜ್ವರ ನಿಂತನಂತರ ರೋಗಿಯು ಬಲಹೀನನಾಗದಂತೆ ಕಾಪಾಡುವ ಶಕ್ತಿಯುಳ್ಳದ್ದು. ಈ ಔಷಧವನ್ನು ಸೇವಿಸಲು ಹಿತವಾಗಿರುವಂತೆ ತಯಾರಿಸಿರುವ ಕಾರಣ ಹತ್ತಿರ ಇಟ್ಟುಕೊಳ್ಳುವುದಕ್ಕೆ ಪ್ರಯಾಣ ಕಾಲದಲ್ಲೂ ಅನುಕೂಲವಾಗಿದೆ.

### ಕೇಸರಿ ಕುಟೀರಮ್.

ಎಗ್ಮೋರು, ಮದರಾಸು.
ಪೋಸ್ಟ್ ಬಾಕ್ಸ್ 752 ತಂತಿ. "ಕೇಸರಿ" ಫೋನ್ 3486,
ಏಜಂಟರು — ಪಾ ಕಂಪೆನಿ, (ವಿ ಉಲನ್ ಮಾರ್ಟ್) ಮಂಗಳೂರು.

ನೋಡಿದರೆ ಬಿಡದಿರುವ ಕಾದಂಬರಿಗಳು

೧ ತುಳಸೀದಾಸ (ದ ಕಾ) ೧-೮-೦ ೨ ಬಲಿದಾನ ನಾಟಕ (ಪೌ ಕಾ) ೦-೧೦-೦ ೩ ಕಾಯಿಸಾದು (ದ ಕಾ) ೧-೦-೦ ೪ ಫಿರಂಗಿಗಳ ಉತ್ಪಾತ (ದ ಕಾ) ೧-೦-೦ ೫ ಭಗವಾನ್‌ದಾಸ (ದ ಕಾ) ೧-೦-೦, ೬ ಭಯಂಕರ ಕೊಲೆ (ದ ಕಾ) ೦-೧೨-೦ ೭ ಇಂದುಮುಖಿ (ದ ಕಾ) ೦-೧೦-೦, ೮ ಪ್ರಿಯದರ್ಶಿ (ಸಾ ಕಾ) ೦-೧೨-೦ ೯ ವಡಗಾವದ ವಿಜಯ (ದ ಕಾ) ೧-೪-೦ ೧೦ ಅಂಬಿಕೆ (ದ ಕಾ) ೧-೪-೦ ೧೧ ಸ್ವರ್ಗ ಕಮಲಾ (ಸಾ ಕಾ) ೧-೦ ಸೌಭಾಗ್ಯ ತಿಲಕ (ಸಾ ಕಾ) ೧-೦-೦
ಇನ್ನೂ ನೂರಾರು ಬಗೆಯ ಪುಸ್ತಕಗಳು ನಮ್ಮಲ್ಲಿ ಸಿಗುವವು. ನಮ್ಮ ಹೊಸ ಕೆಟಲಾಗಿಗೆ ಬರೆಯಿರಿ, ಬುಕ್ ಸೇಲರರಿಗೆ ಧಾರಾಳವಾದ ಕಮಿಶನ್

ವಿಳಾಸ — ಭಿ ಪ ಕಾಳೆ,
ಶ್ರೀ ಆನಂದವನ, (ದ ಧಾರವಾಡ

Liveliness-zip-pep you get that all the time from an "Exide" because it is built into it
Care and thought in the design—keen discrimination in the selection of material and the experience of thousands of users have made

# Exide

THE LONG-LIFE BATTERY
The C P C, Co, Ltd
MANGALORE

The Kanara Watch House Udipi, S. K.

ಗ್ಯಾರಂಟಿಯುಳ್ಳ ವಸ್ತುಗಳು! ಅತೀ ಕಡಿಮೆ ಬೆಲೆ

## ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ ವಾಚುಗಳೂ, ಕ್ಲೋಕುಗಳೂ, ಟೈಮ್ ಪೀಸುಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೋಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.
ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.
ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸು, ಗ್ರಾಮೋಫೋನು, ಮತ್ತು ಪೆಟ್ರೋಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು.
ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.
ಒಮ್ಮೆ ಪರೀಕ್ಷಿಸಿ ನೋಡಿರಿ!
ಕ್ರಯಪಟ್ಟಿ ಮತ್ತು ಇತರ ಸೂಚನೆಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,
ದಿ. ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಪಿ. ಸೆ. — ನಿಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆ ಹಾಕಿ ಶುದ್ಧ ಮಾಡಿಸಿ ಸ್ವಚ್ಛವಾಗಿರಿಸುವುದರಿಂದ ಹೆಚ್ಚು ಸಮಯ ಬಾಳುವವು.

## ಖಾದಿಯನ್ನೇ ಕೊಳ್ಳಿರಿ.

ಖಾದಿಯ ಆಂದೋಲನವು ಪ್ರಾರಂಭವಾಗಿ ಈಗ ಹತ್ತು ವರ್ಷಗಳಾದವು. ಅದರ ತತ್ವಗಳು ಈಗ ಹಳ್ಳಿಗಾಡ ಜನರ ಅಂತಃಕರಣದಲ್ಲಿಯೂ ಬಿಂಬಿಸಿರುವವು. ಅದುಕಾರಣ ಖಾದಿಯ ಮಹತ್ವದ ಬಗ್ಗೆಯಾಗಲಿ, ಅದರ ಉಪಯುಕ್ತತೆಯ ಬಗ್ಗೆಯಾಗಲಿ, ಉಪನ್ಯಾಸ ಮಾಡುವದು ಅಥವಾ ದೊಡ್ಡ ಲೇಖಗಳನ್ನು ಬರೆಯುವದು ಸದ್ಯಕ್ಕೆ ಅಪ್ರಸ್ತುತವಾಗುವದು. ನಮ್ಮ ಆರ್ಥಿಕ ಹಾಗೂ ರಾಜಕೀಯ ಸ್ವಾತಂತ್ರ್ಯದ ಭವ್ಯವಾದ ಕಟ್ಟಡವು ಖಾದಿಯ ತಳಹದಿಯ ಮೇಲೆಯೇ ನಿಲ್ಲತಕ್ಕದ್ದೆಂಬುದು ಎಲ್ಲರಿಗೂ ಮನವರಿಕೆಯಾಗಿದೆ. ಪರಿಸ್ಥಿತಿಯು ದಿನೇ ದಿನೇ ಬದಲಾಗಹತ್ತಿದೆ. ಈಗ ೩-೪ ತಿಂಗಳುಗಳ ಹಿಂದೆ ಖಾದಿಯು ದೊರೆಯುವದೇ ಅಸಾಧ್ಯವಾಗಿತ್ತು. ನಮ್ಮ ಕರ್ನಾಟಕದಲ್ಲಂತೂ ಮೊದಲೇ ಹುಟ್ಟುವಳಿ ಕಡಿಮೆ. ಅಂದಮೇಲೆ ಕೇಳುವದೇನು? ಜನರು ಒಮ್ಮೆಲೆ 'ಖಾದಿ' 'ಖಾದಿ' ಎಂದು ಏಳಲು ಅವರಿಗೆ ಅಲ್ಪಸ್ವಲ್ಪ ಖಾದಿಯನ್ನು ಪೂರೈಸುವದು ಸಹ ಅ. ಭಾ. ಚರಕ ಸಂಘದಿಂದ ನಡೆಸುತ್ತಿರುವ ಭಾಂಡಾರಗಳಿಗೆ ಸಾಕುಬೇಕಾಯಿತು. ಅಂಗಡಿಗಳೆಲ್ಲ ಬರಿದಾದವು. ಈಗಿದ್ದ ೧೫ ಭಾಂಡಾರಗಳಲ್ಲಿ ಹಲವು ಭಾಂಡಾರಗಳನ್ನು ಮುಚ್ಚಿಬಿಡಬೇಕಾದೀತೆಂದು ಸಂಘದವರು ಬಗೆದಿದ್ದರು. ಅಷ್ಟರಲ್ಲಿಯೇ ಖಾದಿಯ ಮರ್ಮವನ್ನರಿತ ನಮ್ಮ ಕರ್ನಾಟಕಸ್ಥರು ಎಲ್ಲೆಡೆಯಲ್ಲಿ ನೂಲುವ ಸತ್ರವನ್ನೇ ಎಬ್ಬಿಸಿದರು. ಅ. ಭಾ. ಚರಕ ಸಂಘದ ಕರ್ನಾಟಕ ಶಾಖೆಯುವರೂ ತಮ್ಮ ಹುಟ್ಟುವಳಿ ಕೇಂದ್ರಗಳನ್ನು ಹೆಚ್ಚಿಸಿ ಶಕ್ಯವಿದ್ದಲ್ಲೆಲ್ಲ ನೂಲುವ ಕೇಂದ್ರಗಳನ್ನು ಹೊರಡಿಸಿ ನೂಲಿನ ಸಂಗ್ರಹ ಮಾಡಹತ್ತಿದರು. ಮೊದಲು ಖಾದಿಯನ್ನು ನೇಯಲು ಮುಗುಮುರಿಯುತ್ತಿದ್ದ ನೇಕಾರರು ನಾಮುಂದೆ ನೀವ ಂದೆ ಎಂದು ಮುಂದರಿಯಹತ್ತಿದರು. ಹೀಗಾಗಿ ಈಗ ಎರಡೇ ತಿಂಗಳುಗಳಲ್ಲಿ ಕರ್ನಾಟಕವು ಖಾದಿಯ ಹಸಿವನ್ನು ತಣಿಸಲು ಸಮರ್ಥವಾಗಿದೆ. ಜನರಲ್ಲಿಯೂ ಕೂಡ ಈಗ ಮೂರು ತಿಂಗಳುಗಳ ಹಿಂದೆ ಉಕ್ಕುತ್ತಿದ್ದ ಉತ್ಸಾಹವು ಸ್ವಾಭಾವಿಕವಾಗಿ ಅಲ್ಪಮಟ್ಟಿಗೆ ಕುಗ್ಗಿದೆ. ಎಲ್ಲಿ ಹೋದಲ್ಲಿ ಕೈನೂಲು ಬಿದ್ದದೆ. ನೂಲುವ ಕೇಂದ್ರಗಳಿಗೆ ಹೆಣ್ಣುಮಕ್ಕಳು ನೂಲಿನ ಗಂಟುಗಳನ್ನು ಹೊತ್ತುಕೊಂಡು ಬರುತ್ತಿರುವುದನ್ನು ನೋಡಿದರೆ ಆಶ್ಚರ್ಯವಾಗುವಂತಿದೆ. ಮೊದಲು ಎರಡು ಲಡಿಗಳು ದೊರೆಯದಿದ್ದ ಊರುಗಳಲ್ಲಿ ಪ್ರತಿವಾರ ನೂರಾರು ಪಟ್ಟಿಗಳು ಈಗ ಬರುತ್ತಿರುವವು. ಮೊದಲು ಖಾದಿಯಂದರೆ ಉಪವಾಸ ಮಾಡುತ್ತಿದ್ದ ಜನರು ಈಗ ಉತ್ಸುಕತೆಯಿಂದ ಆ ಕಾರ್ಯವನ್ನು ಮಾಡಲು ಮುಂದೆ ಬಂದಿರುವರು. ಹೀಗಾಗಿ ಎಲ್ಲ ಕಡೆಯಲ್ಲಿಯೂ ಖಾದಿಯ ಕಾರ್ಯವು ನಡೆಯುತ್ತಿರುವದು. ನಮ್ಮಲ್ಲಿಯ ಅನೇಕ ವರ್ತಕರು ಖಾದಿಯ ಹುಟ್ಟುವಳಿಯ ಕೇಂದ್ರಗಳನ್ನು ಸ್ಥಾಪಿಸಿ ಪ್ರಮಾಣಪತ್ರದ ಸಲುವಾಗಿ ಅ. ಭಾ. ಚ. ಸಂಘದವರಿಗೆ ಬೆನ್ನುಹತ್ತಿರುವರು. ಎಲ್ಲೆಡೆಗೆ ನಡೆದಿರುವ ಈ ಕಾರ್ಯವನ್ನು ಪರೀಕ್ಷಿಸಿ ಹೊರಹೊಮ್ಮುತ್ತಿರುವ ಈ ಜನತೆಯ ಉತ್ಸಾಹಕ್ಕೆ ಯೋಗ್ಯವಾದ ದಿಶೆಯನ್ನು ತೋರಿಸುವದು ಅವರಿಗೂ ಗಡಚಾಯಿತು. ಈಗ ಅವರಾದರೂ ಒಬ್ಬ ಪರಿಶೋಧಕನನ್ನು ನೇಮಿಸಿರುವರು. ಅವರ ಅನುಮತಿಯಿಂದ ೪-೫ ಸಂಸ್ಥೆಗಳಿಗೆ ಪ್ರಮಾಣಪತ್ರವನ್ನು ಕೊಟ್ಟಿರುವರು. ಆದರೂ ಸದ್ಯಕ್ಕೆ ಕರ್ನಾಟಕದಲ್ಲೆಲ್ಲ ನಡೆದಿರುವ ಈ ಕಾರ್ಯವನ್ನು ಸಂಘಟಿಸುವದೊಂದು ದೊಡ್ಡ ಪ್ರಶ್ನೆಯು ನಮ್ಮೆದುರಿನಲ್ಲಿದೆ. ಅಖಿಲ ಭಾರತ ಚರಕ ಸಂಘದವರಿಂದ ಇದು ನೀಗದಾಗಿದೆ. ಅದರಲ್ಲಿ ಈ ಕಾರ್ಯಕ್ಕೆ ಸಾಲುವಷ್ಟು ಭಂಡವಲು ಇರುವ ಅವರ ಮೂಲ ಭಂಡವಲು ಪ್ರಾರಂಭಕ್ಕೇ ತೀರಿತು. ನಮ್ಮ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಮಂಡಲವೂ, ಜಿಲ್ಲಾ ಕಾಂಗ್ರೆಸ ಮಂಡಲಗಳೂ ಅದಕ್ಕೆ ನೆರವಾಗಬೇಕೆಂದು ತಮ್ಮಲ್ಲಿದ್ದ ಹಣವನ್ನು ಕೊಟ್ಟವು. ಒಟ್ಟು ಸೇರಿ ೨೦ ಸಾವಿರ ರೂಪಾಯಿಗಳು ಈ ಬಗೆಯಾಗಿ ದೊರೆತವು. ಅಹಮ್ಮದಾಬಾದದ ಅ. ಭಾ. ಚ. ಸಂಘದವರು ೭೫೦೦ ರೂ.ಗಳನ್ನು ಕೈಗಡವೆಂದು ಕೊಟ್ಟರು. ಆದರೂ ಪೂರೈಸದಾಗಿದೆ. ಈ ಭಂಡವಲು ಹ್ಯಾಗೆ ತೊಡಕಿದುವದೆಂಬದನ್ನು ಮುಂದಿನ ಪಟ್ಟಿಯಲ್ಲಿ ಕೊಟ್ಟಿರುವೆವು.

ಈ ಮೇರೆಗೆ ಖಾದಿಯ ಆಂದೋಲನವು ಸರ್ವತೋಮುಖವಾಗಿ ನಮ್ಮ ಪ್ರಾಂತದಲ್ಲಿ ನಡೆದುದು ಆನಂದದಾಯಕವು. ಆದರೆ ಜನರಲ್ಲಿ ಇನ್ನೊಂದು ತತ್ವವು ಇನ್ನೂ ಸಾಕಷ್ಟು ಬಿಂಬಿಸಿರುವದಿಲ್ಲೆಂದು ತೋರುತ್ತದೆ. ಅದೇನೆಂದರೆ, ಜನರು ಎಲ್ಲ ಕಡೆಯಲ್ಲಿಯೂ ನೂಲು ಸಂಗ್ರಹಿಸುತ್ತಿರುವರು; ಆ ನೂಲನ್ನು ನೇಯಿಸಿ ಖಾದಿಯನ್ನು ಮಾಡಿಸುತ್ತಿರುವರು. ಇದೆಲ್ಲ ಸರಿಯಾದದ್ದೇ. ಆದರೆ ಆ ಖಾದಿಯನ್ನು ಅಲ್ಲಿಂದಲ್ಲಿಯೇ ನುರಿಸುವ ಬುದ್ಧಿಯು ಮಾತ್ರ ಇನ್ನೂ ತೋರಲೊಲ್ಲದು. ಸಂಗ್ರಹಿಸಿದ ನೂಲನ್ನೂ ಖಾದಿಯ ತಾಗೆಗಳನ್ನೂ ಹೊತ್ತುಕೊಂಡು ಹಲವರು ಬೆಳಗಾಂವಿಯ ಆಫೀಸಿಗೆ ಹೋಗುತ್ತಿರುವರು. ನಮ್ಮಲ್ಲಿ ನೂಲು ಶಿಲುಕು ಬಿದ್ದಿರುವದು; ಖಾದಿಯು ಶಿಲುಕು ಆದೆ, ಅದನ್ನು ಎಲ್ಲಿ ಕಳಿಸಬೇಕೆಂದು ಪತ್ರವ್ಯವಹಾರವನ್ನು ನಡಿಸುತ್ತಿರುವರು. ಇಂಥ ಜನರಲ್ಲಿ ತಾವೇ ಖಾದಿಯನ್ನು ಉಪಯೋಗಿಸದವರೂ ಹಲವರಿರುವರು. ದೇಶದಲ್ಲೆಲ್ಲ ಸಂಗ್ರಹಿಸಿಟ್ಟ ನೂಲನ್ನು ಕೊಂಡು ಖಾದಿಯನ್ನು ನೇಯಿಸಿ ಅದನ್ನು ಅಂಗಡಿಗಳಲ್ಲಿಟ್ಟು ಮಾರುತ್ತ ಕುಳಿತುಕೊಳ್ಳುವದು ಅ. ಭಾ. ಚ. ಸಂಘದ ಧ್ಯೇಯವಾಗಿರದೆ, ಜನತೆಗೆ ಖಾದಿಯ ಮಹತ್ವವನ್ನು ತಿಳಿಸಿ ಆ ಬಗ್ಗೆ ಜನರಲ್ಲಿ ಪ್ರೇಮವನ್ನು ಬೀರಿ ಹಳ್ಳಿಹಳ್ಳಿಗಳಲ್ಲಿ ಜನರು ಹೊಟ್ಟೆಯಂತೆ ತಮ್ಮ ಬಟ್ಟೆಯ ಸಲುವಾಗಿಯೂ ಸ್ವತಂತ್ರರಾಗಿರಬೇಕೆಂಬ ತತ್ವವನ್ನು ಪ್ರಸಾರಗೊಳಿಸುವದೇ ಈ ಸಂಸ್ಥೆಯ ಮುಖ್ಯ ಉದ್ದೇಶವು. ಈ ಉದ್ದೇಶವನ್ನು ಮುಂದಿಟ್ಟುಕೊಂಡೇ ಸಂಸ್ಥೆಯವರು ಕಾರ್ಯ ಮಾಡುತ್ತಿರುವರು. ಈ ಸಂಸ್ಥೆಯು ಮಾರ್ಗದರ್ಶಕವಾಗಿರುವದು. ಒಮ್ಮೆ ಜನತೆಯಲ್ಲಿ ತಮ್ಮ ಬಟ್ಟೆಯನ್ನು ತಾವೇ ಮಾಡಿಕೊಳ್ಳಬೇಕೆಂಬ ಭಾವನೆಯು ನೆಲಗೊಳ್ಳಲು ಆ ಮೇಲೆ ಈ ತರದ ಸಂಸ್ಥೆಯ ಅವಶ್ಯಕತೆಯೇ ಉಳಿಯುವದಿಲ್ಲ. ಕಾಳುಕಡಿಗಳಂತೆ ಖಾದಿಯೂ ಒಂದು ಅಲ್ಲಿಂದಲ್ಲಿಯೇ ಸಿದ್ಧವಾಗಿ ದೊರೆಯುವ ವಸ್ತುವಾಗುವದು. ಇರಲಿ. ಇದು ಮುಂದಿನ ಮಾತಾಯಿತು.

ಸದ್ಯಕ್ಕಂತೂ ನೂಲು ಮಿತಿಮೀರಿ ಬರುತ್ತಿರುವದು. ಎಲ್ಲೆಡೆಯಲ್ಲಿಯೂ ಖಾದಿಯ ಗಂಟುಗಳು ಬರಹತ್ತಿರುವವು. ಖಾದಿಯು ಶಿಲುಕು ಬೀಳಹತ್ತಿರುವದರಿಂದ ನೂಲನ್ನು ಕೊಂಡುಕೊಳ್ಳುವದಿಲ್ಲದಾಗಿದೆ. ಜನರಲ್ಲಿ ಪರಪ್ರಾಂತದಿಂದ ಖಾದಿಯನ್ನು ತಂದು ಮಾರುವ ಪ್ರವೃತ್ತಿಯು ತೋರಹತ್ತಿದೆ. ಆದರೆ ಈ ತರದ ಪ್ರವೃತ್ತಿಯು ನಮ್ಮಲ್ಲಿ ಇದೀಗ ಉತ್ಸಾಹದಿಂದ ಎಲ್ಲ ಸ್ಥಳಗಳಲ್ಲಿ ನಡೆದಿರುವ ಹುಟ್ಟುವಳಿಯ ಕಾರ್ಯಕ್ಕೆ ವಿಘಾತಕವಾಗಿರುವದೆಂಬುದನ್ನು ಅವರರಿಯರು. ಆ ತರದ ಕೈಗಾರಿಕೆಯು ಬೆಳೆಯುವಲ್ಲಿ ಜನರಲ್ಲಿ ಪ್ರಾಂತಾಭಿಮಾನವಿರಿದ್ದರೆ ಅದು ಬೆಳೆಯದು. ಆದ್ದರಿಂದ ಕರ್ನಾಟಕಸ್ಥರೆಲ್ಲರು ಕರ್ನಾಟಕದಲ್ಲಿ ಹುಟ್ಟುತ್ತಿದ್ದ ಖಾದಿಯನ್ನೇ ಕೊಂಡುಕೊಳ್ಳುವದು ಪ್ರಸ್ತುತಕ್ಕೆ ಯೋಗ್ಯವಾದದ್ದು.

ಈ ಅಭಿಮಾನವನ್ನು ಜನತೆಯಲ್ಲಿ ನೆಲಗೊಳಿಸಿ ಕರ್ನಾಟಕದಲ್ಲಿ ಅಲ್ಲಲ್ಲಿ ಸಂಗ್ರಹವಾಗಿ ಕೂತಿರುವ ಖಾದಿಯನ್ನು ಖರ್ಚು ಮಾಡಿಸಿ ಈ ಕೊನೆಯಿಲ್ಲದ ಮೂಲಿಕ ತರದ ಕಾರ್ಯವನ್ನು ಮುಂದೂಡಲು ಅನುಕೂಲತೆಗಳನ್ನು ಒದಗಿಸಿಕೊಡುವ ಉದ್ದೇಶದಿಂದ ಇದೇ ತಿಂಗಳು ೭ನೇ ತಾರೀಕಿನಿಂದ ಒಂದು ವಾರದವರೆಗೆ 'ಸ್ವದೇಶಿ ಸಪ್ತಾಹವನ್ನು' ಕರ್ನಾಟಕದಲ್ಲೆಲ್ಲ ಆಚರಿಸಬೇಕೆಂದು ಗೊತ್ತುಮಾಡಿರುವೆವು. ಆ ಏಳು ದಿನಗಳಲ್ಲಿ ಪ್ರತಿಯೊಬ್ಬ ಕರ್ನಾಟಕಸ್ಥನು ಸ್ವಲ್ಪವಾದರೂ ಕರ್ನಾಟಕದ ಖಾದಿಯನ್ನು ಕೊಳ್ಳುವ ನಿಶ್ಚಯವನ್ನು ಮಾಡಬೇಕೆಂದು ನಮ್ಮ ವಿನಂತಿ. ನಮ್ಮ ಪ್ರಾಂತದಲ್ಲಿ ಎಷ್ಟು ತರದ ಖಾದಿಯೂ ಹೊರಬೀಳಹತ್ತಿರುವದು. ಆದರೂ ಅಚ್ಚು ಹಾಕಿದ ಶಾಲುಗಳು, ಮಫ್ಲರುಗಳು (ಜಾಕಿಟುಗಳು) ಮಾತ್ರ ನಮ್ಮಲ್ಲಿ ಆಗುವುದಿಲ್ಲ. ಅವುಗಳನ್ನು ಇಲ್ಲಿಯೇ ತಯಾರಿಸುವ ಏರ್ಪಾಡು ನಡೆದಿದೆ. ಅದು ಆಗುವ ವರೆಗೆ ನಮ್ಮ ಕರ್ನಾಟಕಸ್ಥರು ಆ ತರದ ಬಟ್ಟೆಗಳ ಮೇಲಿರುವ ಮೋಹವನ್ನು ತೊರೆದು ಬಿಳೀ ಖಾದಿಯಿಂದಲೇ ತಮ್ಮ ನಿರ್ವಾಹವನ್ನು ಸಾಗಿಸಿಕೊಳ್ಳಬೇಕೆಂದು ನಮ್ಮ ಸೂಚನೆಯದೆ.

ಜನತೆಯು ಎಚ್ಚತ್ತು ಕಾರ್ಯಮಾಡತೊಡಗಿದರೆ ಯಾವುದೂ ಅಸಾಧ್ಯವಾಗಿರುವುದಿಲ್ಲ. ಆದರೆ ಜನರಲ್ಲಿ ಆ ತರದ ಭಾವನೆಯು ಮಾತ್ರ ಬೇಕು. ಪ್ರಪಂಚದಲ್ಲಿ ಸ್ವಾತಂತ್ರ್ಯಸುಖವನ್ನ ಭವಿಸುತ್ತಿರುವ ರಾಷ್ಟ್ರಗಳವೆ. ಈ ಅವಕಾಶ ಒದಗಲು ಅವರು ಕೂಡಲೇ ಅದನ್ನು ಪರಿಪಡಿಸಿಕೊಳ್ಳಲಣಿಸುವರು. ಮೊನ್ನೆ ಅಮೇರಿಕೆಯಲ್ಲಿ ಅರಳೆಯ ವ್ಯಾಪಾರವು ಬಿದ್ದು, ಅರಳೆಯ ಗಂಟುಗಳು ಹಾಗೆಯೇ ಬಿದ್ದು, ಒಕ್ಕಲಿಗರು ಗೋಳಾಡಹತ್ತಲು ಪ್ರತಿಯೊಬ್ಬ ಯೋಗ್ಯತೆಯುದ್ದ ಅಮೇರಿಕನ್ನನು ಎರಡು ಗಂಟು ಅರಳೆಯನ್ನು ಕೊಳ್ಳಲೇಬೇಕೆಂದು ಕಟ್ಟುಮಾಡಿಕೊಂಡು ಒಕ್ಕಲಿಗನ ತಲೆಯ ಮೇಲಿನ ಭಾರವನ್ನು ಇಳಿಸಿದರು. ಅದು ಏಕೆ! ಇಂಗ್ಲಂಡದಲ್ಲಿಯೂ ಕೂಡ ನೂಲು ಗಿರಣಿಗಳ ವ್ಯಾಪಾರವು ಕಟ್ಟಾಗಿ ಸರಕು ಹಾಗೆಯೇ ಬೀಳಲು ಕೂಲಿಗೇಡಿತನವು ಹೆಚ್ಚಾಗಹತ್ತಿತು. ಅಗ್ಗೆ ಅವರಾದರೂ ಪ್ರತಿಯೊಬ್ಬ ಇಂಗ್ಲಿಷ ಮನುಷ್ಯನು ಎರಡೆರಡು ನೂಲ ಬಟ್ಟೆಗಳ ಉಡುಪನ್ನು ತಯಾರಿಸಲೇಬೇಕೆಂದು ಕಟ್ಟುಮಾಡಿರುವುದನ್ನು ತಾವು ಓದಿರಬಹುದು. ಇದರಂತೆಯೇ ನಮ್ಮ ಕರ್ನಾಟಕದ ಬಾಂಧವರಲ್ಲಿ ಯೋಗ್ಯತೆಯುದ್ದ ಪ್ರತಿಯೊಬ್ಬನು ಖಾದಿಯ ವಾರದಲ್ಲಿ ಕನಿಷ್ಠ ೫ ವಾರು ಅರಿವೆಯನ್ನಾದರೂ ಕೊಂಡುಕೊಳ್ಳಬೇಕೆಂದು ನಮ್ಮ ಆಗ್ರಹದ ಬೇಡಿಕೆಯದೆ. ಆ ವಾರದಲ್ಲಿ ಖಾದಿಯ ಭಾಂಡಾರಗಳಲ್ಲಿ ಖಾದಿಯು ದೊರೆಯುವದಲ್ಲದೆ ಹೊತ್ತು ಮನೆ ಮನೆಗೆ ಮಾರುವ ವ್ಯವಸ್ಥೆಯನ್ನು ಹಲವು ಕಡೆ ಮಾಡುವೆವು.

ನಮ್ಮ ಪ್ರಾಂತದಲ್ಲಿ ಖಾದಿಯ ಪ್ರಸಾರವು ಹೇಗೆ ನಡೆದಿರುವದೆಂಬುದು ಮುಂದಿನ ಅಂಕಿಗಳಿಂದ ಸ್ಪಷ್ಟವಾಗುವದು —

| | ಹುಟ್ಟುವಳಿ | ಮಾರಾಟ |
|---|---|---|
| ಅಕ್ಟೋಬರ ೧೯೨೯ | ೭೦೮೭ | ೩೩೭೯೬ |
| ನವಂಬರ | ೯೯೩೩ | ೨೩೨೧೩ |
| ಡಿಸೆಂಬರ | ೬೧೯೪ | ೨೭೮೩೨ |
| ಜನೇವರಿ ೧೯೩೦ | ೬೩೮೨ | ೨೭೦೫೯ |
| ಫೆಬ್ರುವರಿ | ೫೩೧೪ | ೨೭೦೨೪ |
| ಮಾರ್ಚ | ೯೮೬೪ | ೪೨೩೧೯ |
| ಎಪ್ರೀಲ | ೬೦೭೨ | ೫೧೦೧೮ |
| ಮೇ | ೭೩೪೩ | ೫೮೦೭೦ |
| ಜೂನ್ | ೯೭೦೭ | ೩೪೨೩೫ |
| ಜುಲೈ | ೧೧೫೭೯ | ೪೪೦೪೭ |
| ಅಗಸ್ಟ | ೧೨೫೩೨ | ೩೨೩೭೨ |

ಟೀಪು: — ಮಾರಾಟದ ಅಂಕಿ ಕಳೆದ ವರ್ಷ ಆ ಭಾಗ ಶಿಲುಕು ಇದ್ದ ಒಟ್ಟಿಯ ಬೆಲೆ, ನಮ್ಮ ಕೇಂದ್ರಗಳ ಹುಟ್ಟಿ ಮಾರಿನ ಬೆಲೆ ಪರಪ್ರಾಂತದಿಂದ ತರಿಸಿ ಖಾದಿಯ ಬೆಲೆ ಸೇರಿರುತ್ತವೆ.

ಅ. ಭಾ. ಚ. ಸಂಘ ಕರ್ನಾಟಕ ಶಾಖೆಯ ಭಂಡವಲದ ವಿನಿಯೋಗವು

ಖಾದೀ ಭಾಂಡಾರಗಳಲ್ಲಿ ೭೭, ೫೦೦ ರೂ
ಹುಟ್ಟುವಳಿ ಕೇಂದ್ರಗಳಲ್ಲಿ ೨೫ ೫೦೦

ಮೂಲ ಭಂಡವಲವಲ್ಲದೆ ಹುಟ್ಟುವಳಿ ಕೇಂದ್ರಗಳಿಗೆ ೧೯ ೫೭೨—೯—೧॥ ಹೆಚ್ಚು ಕೊಟ್ಟಿರುವದು. ಇದರಲ್ಲಿ ೩೮೩೧—೧—೧। ಖಾದೀ ಭಾಂಡಾರಗಳ ಭಂಡವಲದಿಂದ ತೆಗೆದುಕೊಟ್ಟಿರುವದು. ಉಳಿದ ಹಣವನ್ನು ಮೇಲೆ ಹೇಳಿದಂತೆ ಕಾಂಗ್ರೆಸ್ ಸಂಸ್ಥೆಗಳಿಂದ ದೊರಕಿಸಿದೆ. ಮೇಲಿನ ಅಂಕಿಗಳು ಅಗಸ್ಟ ತಿಂಗಳ ವರೆಗಿನ ವ್ಯವಹಾರವನ್ನು ಸೂಚಿಸುವವು.

ಹಣಮಂತರಾವ ಕೌಜಲಗಿ,
ಕಾರ್ಯದರ್ಶಿ ಅ. ಭಾ. ಚ. ಸಂಘ,

## ಗ್ವಾಲಿಯಾರ್.

ಇರ್ವಿನ್ ಪ್ರಭುಗಳ ಅವಧಿಯು ಮುಗಿಯಿತು. ಹೊಸ ವ್ಯಾಸರಾಯರು ಶೀಘ್ರದಲ್ಲೇ ಆ ಸ್ಥಾನವನ್ನು ಅಲಂಕರಿಸಲಿಕ್ಕಿರುವರು. ಬ್ರಿಟಿಷ ಆಧಿಪತ್ಯಕ್ಕಿಂತ ಮಿಗಿಲಾದ ಅಧಿಕಾರವನ್ನು ಇರ್ವಿನರು ಈ ಸಂಸ್ಥಾನದಲ್ಲಿಯೂ ಜ್ಯಾರಿಗೆ ತಂದರು. ಈ ಶಾಸನದಂತೆ.—

(೧) ಬಹಿರಂಗ ಸಭೆಗಳನ್ನು ಜರಗಿಸಕೂಡದು.

(೨) ಭಾಷಣ ಮಾಡಲಾಗದು.

(೩) ಚರಕಾ, ತಕ್ಲಿ ಮೆರವಣಿಗೆಗಳು ನಿರೋಧಿಸಲ್ಪಟ್ಟಿರುವವು.

(೪) ರಾಷ್ಟ್ರೀಯ ಗೀತೆಗಳನ್ನು ಹಾಡಕೂಡದು.

(೫) 'ವಂದೇ ಮಾತರಂ' ಸುದ್ದಿ ಎತ್ತಬಾರದು.

(೬) 'ಗಾಂಧಿಕಿ ಜೈ' ಎನ್ನಬಾರದು.

(೭) 'ಹೆಂಡ ಕುಡಿಯಬೇಡಿ, ಖಾದಿಯನ್ನೇ ಧರಿಸಿರಿ' ಎಂದರೆ ದಸ್ತಗಿರಿ.

ಈ ಸೂತ್ರಗಳನ್ನು ನಿರೋಧಿಸಿದವರಿಗೆ.—

(೧) ೬ರಿಂದ ೧೨ ತಿಂಗಳ ವರೆಗೆ ಜೈಲು.

(೨) ೧೦೦ರಿಂದ ೫೦೦೦ ರೂಪಾಯಿಗಳ ಜುಲ್ಮಾನೆ.

(೩) ಜುಲ್ಮಾನೆ ಕೊಡದಿದ್ದರೆ ಅಧಿಕ ಶಿಕ್ಷೆ.

(೪) ಯುಕ್ತ ಕಂಡರೆ ಜುಲ್ಮಾನೆ ಮತ್ತು ಶಿಕ್ಷೆ ಎರಡೂ ವಿಧಿಸಲಾಗುವದು.

(೫) ಸರಕಾರದ ದೃಷ್ಟಿಗೆ ಪ್ರಜೆಯು ಅಯೋಗ್ಯನೆಂದು ಕಂಡುಬಂದರೆ, ಕೂಡಲೇ ಆತನಿಗೆ ಗಡಿಪಾರ್.

ಉಜ್ಜಯಿನಿಯಲ್ಲಿ ಈ ಪ್ರಕರಣದ ಕಾವು ಚೆನ್ನಾಗಿ ಏರಿರುವದಂತೆ! ಅಲ್ಲಿ ಏರಿಸಲ್ಪಟ್ಟ ರಾಷ್ಟ್ರಧ್ವಜವು ಸರಕಾರದ ಪಾಲಾಯಿತು. ಶ್ರೀಯುತ ಪುಸ್ತಕೆ ಎಂಬವರಿಗೆ—ಸರಕಾರದ ಲಗ್ನ ಪತ್ರಿಕೆ ಬಂದಿರುವದಂತೆ! ನದರಿಯುವದು ಹೊರಡುವದೇ ತಡ!

ಒರೋಡಾ ಸಂಸ್ಥಾನಕ್ಕೂ ಸರಕಾರದ ಓರ್ಡಿನನ್ಸ್ ಆಮಂತ್ರಣೆಗಳು ಮುಟ್ಟಿರುವವೆಂದು ತಿಳಿದುಬರುತ್ತದೆ.

53 ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ

# ಉಪಯೋಗಿಸಲ್ಪಟ್ಟ ಔಷಧಗಳು.

1 **ಧಾತುಪುಷ್ಟಿ ಲೇಹ**—ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ಅಂಗಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲಿ ಧಾತುವು ನಷ್ಟವಾಗುವಿಕೆ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವದು ಜ್ಞಾಪಕ ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ಕುಂದಿಕೊಳ್ಳುವುದು ಕ್ರಯ ಡಬ್ಬಿ 1ಕ್ಕೆ ರೂ 2—8—0 ಮೂರು ಡಬ್ಬಿಗಳಿಗೆ ರೂ 7

2. **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟುದೋಷಗಳು, ಮುಟ್ಟು ಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆ ನೋವು, ಸೊಂಟ ನೋವು, ಸಂತಾನ ಹೀನತೆ, ವಿ... ಮಲಬದ್ಧತೆ ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತೀ ಶೀಘ್ರದಲ್ಲಿಯೇ ಗುಣಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ, ಅಂತರ ಆರೋಗ್ಯವನ್ನು ಒದಗಿಸಿ ಮನೋಭಿಲಾಷೆಯನ್ನು ಪೂರೈಸಿರುವವು ಕ್ರಯ 1 ಬಾಟಲಿ ಔಷಧಕ್ಕೂ ಒಂದು ಡಬ್ಬಿ ಮಾತ್ರೆಗೂ ರೂ 2—4—0 ಮೂರು ಬಾಟಲಿ ಮತ್ತು ಡಬ್ಬಿಗಳಿಗೆ ರೂ 6—4—0.

3 **ಮೇಹ ಕುಠಾರ**—ಇದು ಮೂತ್ರಸ್ಥಾನದಿಂದ ಕೆಂಪು ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ ವ್ರಣವನ್ನೂ ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ 2—8—0 3ಕ್ಕೆ ರೂ 7

4 **ಮಲೇರಿಯಾ ನಿವಾರಣೆ**—ದಿನ ದಿಟ್ಟು ಬರುವ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗಡ್ಡೆಯನ್ನು ಕರಗಿಸಿ, ಶಕ್ತಿಯನ್ನು ಉಂಟುಮಾಡುತ್ತದೆ ಬಾಟ್ಲಿ 1ಕ್ಕೆ ರೂ 1—8—0 3 ಬಾಟ್ಲಿಗಳಿಗೆ ರೂ 4—4—0

5 **ಬಾಲಗ್ರಹ ಗುಟಿಕೆ**—ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ. ಬಾಟ್ಲಿ 1ಕ್ಕೆ ಆಣೆ 10 3ಕ್ಕೆ ರೂ 1—12—0

6 **ಕಸ್ತೂರಿ ಮಿಶ್ರಣ ದಶಮೂಲಾರಿಷ್ಟ**—ಬಾಣಂತಿಯರಿಗೆ ಬಾಟ್ಲಿ 1ಕ್ಕೆ ರೂ 1—8—0 3ಕ್ಕೆ 4—4—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧ ರವಾನಿಸಲಾಗುವದು ಕೆಟಲಾಗು ತರಿಸಿ ನೋಡಿರಿ

ಎಮ್. ಗಣಪಯ್ಯ ಎಂಡ್ ಸನ್ಸ್, ರಥಬೀದಿ, ಮಂಗಳೂರು ದ. ಕ

---

# ಎರಡು ರತ್ನಗಳು.

**ಇನ್ನು ಮಲೇರಿಯಕ್ಕೆ ಹೆದರಬೇಕಾದುದಿಲ್ಲ!**

## ಎಂಟಿ ಮಲೇರಿಯಾ ಮಾತ್ರೆಗಳು

ಮಲೇರಿಯಕ್ಕೆ ಖಂಡಿತವಾದ ಧೃಢವಾದ ಗುಣಕಾರಿ ಒಮ್ಮೆ ಪರೀಕ್ಷಿಸಿ ನೋಡಿದರೆ ಬಿಡಲಾರಿರಿ

**ಬಾಟಲಿಗೆ ರೂ. 2—8—0** **ಅಂಚೆವೆಚ್ಚ ಮತ್ತು ಪೆಕಿಂಗ್ ಬೇರೆ**

## ಆಶ್ಚರ್ಯಕರ ಔಷಧಿ

ಅತಿಸಾರ ಅಜೀರ್ಣದಿಂದಾದ ಎಂತಹ ಮಲಬದ್ಧತೆಯಾದರೂ ಓಡುವದು.

**ಯಾತರಿಂದ?**

ಹಿಂದೀ ಔಷಧಿ ಹಿಂದೀಯರಿಗಾಗಿ HEDAURIN DYSENTERY CHOLERA CURE ಹಿಂದೀಯರಿಂದಲೇ ವ್ಯಾಪಾರಕ್ಕೆ ತರಲ್ಪಟ್ಟದು

ಹಿಂದೀಯರಿಂದಲೇ ಕಂಡುಹಿಡಿಯಲ್ಪಟ್ಟದು

**ಔನ್ಸಿನ ಕ್ರಯ ಆಣೆ 0—15—0** 2 ಔನ್ಸಿನ ಬಾಟಲಿಗೆ ರೂ 1—12—0

**ಪರೀಕ್ಷಿಸಿ ತೃಪ್ತರಾಗಿರಿ!**

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಆಫೀಸು,
ಡೊಂಗರಕೇರಿ ರಸ್ತೆ,
ಮಂಗಳೂರು

ದಿ ಕಿಣಿ ಡಿಸ್ಪೆನ್ಸರಿ,
ಕೊಡಿಯಾಲಬೈಲ್ ಪೋಸ್ಟು,
ದ ಕನ್ನಡಾ

---

ಶರ್ಮಾಸ್ ಫಾರ್ಮಸ್ಯುಟಿಕಲ್ ವರ್ಕ್ಸ್, ಜೋಡುಮಾರ ರಸ್ತೆ, ಮಂಗಳೂರು ದ. ಕ

— ಇವರ —

# ಆಯುರ್ವೇದಿಯ ಸಿದ್ಧೌಷಧಗಳು.

**ಅಶೋಕ ಮಿಶ್ರಣ** ನಿಮ್ಮ ಸಂಸಾರವು ಸಾರಮಯವಾಗಿ ವಿರಾಜಿಸಬೇಕೆಂದಿದ್ದರೆ—ಮುಟ್ಟುದೋಷ, ಬಂಜೆತನ ಬ್ಬಾಣಂತಿಯರ ರೋಗವೇ ಮೊದಲಾದವುಗಳಿಂದ ನಿತ್ಯ ದುಃಖಿನಿಯಾಗಿದೆ ನಿತ್ಯ ಸುಖಿಗಳಾಗಿರಬೇಕೆಂದು ಬಯಸುವಿರಾದರೆ ಇದೋ ವನಿತೆಯರ ಪುನರುಜ್ಜೀವನಕ್ಕೆ ನಂದನವನದಂತಿರುವ 'ಶರ್ಮಾರವರ ಅಶೋಕ ಮಿಶ್ರಣ' ವನ್ನೇ ಸೇವಿಸಿರಿ ಮರೆಯಬೇಡಿ! ಸೀಸೆಯ ಬೆಲೆ ರೂ ಮಾತ್ರ ಟ ಖ ಬೇರೆ

**ಮೇಹರಕ್ಷಾಮೃತಂ**—ಇದೀಗ ಬಗಬಗೆಯ ಮೇಹಾಣುಗಳನ್ನೂ ಸ್ತ್ರೀಯರ ಸಂಸರ್ಗದ ರೋಗಗಳನ್ನೂ ಶೀಘ್ರದಲ್ಲೇ ನಾಶಗೊಳಿಸಬಲ್ಲುದು ಮೂತ್ರಾಶಯದ ಹುಣ್ಣುಗಳಿಗೂ, ಬಿಳಿದು ಇತ್ಯಾದಿ ಸ್ರಾವವಾಗುವದಕ್ಕೂ ದಿವ್ಯವಾದ ಔಷಧವಿದು ಈ 'ಮೇಹರಕ್ಷಾಮೃತ' ವು ಅಮೃತ ಸಮಾನವಾಗಿರುವುದೆಂಬುದನ್ನು ನೆನಪಿನಲ್ಲಿಡಿ! ಸೀಸೆಯ ಬೆಲೆ ರೂ ಮಾತ್ರ ಟ ಖ ಬೇರೆ

ಇವಲ್ಲದೆ ಇನ್ನೂ ಬಗೆಬಗೆಯ ರೋಗಗಳ ಮರ್ಮಕ್ಕೆ ನಾಟುವಂತಿರುವ ಶರ್ಮಾರವರ ಸಿದ್ಧೌಷಧಗಳ ವಿಸ್ತೃತ ಕ್ಯಾಟಲಾಗಿಗೂ ವ್ಯಾಪಾರಸ್ಥರ ನಿಬಂಧನಾದಿಗಳಿಗೂ ಒಂದಾಣೆ ಸ್ಟಾಂಪಿನೊಂದಿಗೆ ಬರೆದು ಕೇಳ್ಳಿರಿ!

ಸಾಮುದ್ರಿಕ ಏಜಂಟರು —

ಶ್ರೀ ರಾಧಾಕೃಷ್ಣ ವಿಲಾಸ, ರಥಬೀದಿ ಮಂಗಳೂರು ದ. ಕ,

---

# ಇಸನೋಫೇಲ

ಇಸನೋಫೇಲ — ಮಲೇರಿಯಾ ಎಂಬ ಮಲಿನ ಜ್ವರಕ್ಕೆ ರೋಗ ಪ್ರತಿಬಂಧಕವಾದ ದಿವ್ಯ ಔಷಧ. ಅದರ ಗುಣ ಆಶ್ಚರ್ಯವಾದ ಪರಿ ಣಾಮಕಾರ್ಯವು ಅಗಿದೆ. ಪರೀಕ್ಷಿಸಿ ಮಲೇರಿಯಾಗೆ ನೀವು ಇಸನೋಫೇಲ ಔಷಧವನ್ನು ಕೇಳಿ!

ಸೋಲ್ ಏಜಂಟರು —

ಮೆಸ್ಸರ್ಸ್ ಗೋರಿಯೋ ಲಿಮಿಟೆಡ್,

ಪಿ ಓ. ಬಾಕ್ಸ್ ೧೫೫ ಕೋಟೆ, ಮುಂಬಾಯಿ

# ಮಲೇರಿಯಾ

---

Diamonds! Diamonds!!

**Ramachandra Krishna Shet**
DONGERKERY MANGALORE

ಉತ್ಕೃಷ್ಟ ತರಗತಿಯ ಚುನ್ನಾತ (first quality Selected) ಎವರ್ ಸ್ಟೋರ್ಸ್‌ನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಹೆಚ್ಚಿನ ಮಾಹಿತಿಗೆ ಬರೆಯಿರಿ

ಕೆ ರಾಮಚಂದ್ರ ಕೃಷ್ಣ ಶೇಟ್, ಜುವೆಲರ್,
ಡೊಂಗರಕೇರಿ, ಮಂಗಳೂರು

---

# ಶಕ್ತಿವಂತ ಕವಚ

ಈ ಕವಚವು ಹಿಮಾಲಯ ಪರ್ವತದ ಯೋಗಿಗಳಿಂದ ಸಿಕ್ಕಿದ್ದಾಗಿರುತ್ತದೆ. ಈ ಕವಚವು ಆಶ್ಚರ್ಯಕರವಾದ ಕೆಲಸಗಳನ್ನು ನಡೆಸಿರುವುದು ಈ ಕವಚವನ್ನು ಧರಿಸುವವರಿಗೆ ತನ್ನ ಕೆಲಸದಲ್ಲಿ ಜಯಪ್ರದವೂ, ವ್ಯಾಪಾರದಲ್ಲಿ ಲಾಭವೂ ವ್ಯಾಜ್ಯಗಳಲ್ಲಿ ಗುಣವೂ, ಗ್ರಹಚಾರ ದೆಸೆಯಿಂದುಂಟಾಗುವ ಕೇಡುಗಳ ನಿವಾರಣೆಯೂ ರೋಗಪೀಡಿತರಾದವರಿಗೆ ಕ್ಷೇಮವೂ, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದೂ ಮತ್ತು ಇತರ ಬಗೆಬಗೆಯ ಲಾಭಗಳು ಉಂಟಾಗುವವು ಕವಚ ೧ಕ್ಕೆ ರೂಪಾಯಿ ೩, 3 ಕವಚಗಳಿಗೆ ೭ 8—0 ಟಪ್ಪಾಲು ಖರ್ಚ 6 ಆಣೆ ಪ್ರತ್ಯೇಕ ನಾವು ರವಾನಿಸಿ ಕೊಡುವ ನಿಯಮದ ಪ್ರಕಾರ ಈ ಕವಚವನ್ನು ಧರಿಸಿದವರಿಗೆ ಲಾಭವಾಗದೆ ಇದ್ದಲ್ಲಿ 10 ರೂಪಾಯಿ ಇನಾಮಾಗಿ ಕೊಡುವೆವು

ಪತ್ರವ್ಯವಹಾರ ಇಂಗ್ಲೀಷಿನಲ್ಲಿಯೇ ನಡಿಸಬೇಕು

**Sadhan Kuti**
Hatkhala, (*Calcutta*)

---

# 'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು ಗೋಚರ ಪ್ರೇತ ಪಿಶಾಚ ಬಾಧೆಯಿಂದ ಅಕಾಲ ಮೃತ್ಯುವನ್ನು ತಪ್ಪಿಸುವದು ಲಾಭ ಜಯ ಆರೋಗ್ಯ ಸುಖ ವನ್ನೀಯುವದು ಅನೇಕರಿಗೆ ನಮ್ಮ ತಾಯಿತ್' ನಂಬಿಕೆಯನ್ನುಂಟು ಮಾಡಿರುತ್ತದೆ

೧ನೇ ನಂಬ್ರ ೧॥ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ ಸ್ಪೆಷಲ್ ರೂಪಾಯಿ ೫ರಿಂದ ... ರೂಪಾಯಿ ವರೆಗೆ ದೈವೀಶಕ್ತಿಯು, ಒಂದು ಸಾರಿ ಪರಿಶೋಧಿಸಿದರೆ ತಮಗೆ ತಿಳಿಯುವದು ಟಪ್ಪಾಲು ಖರ್ಚು ಬೇರೆ

**ಶಿವರಾಮ ಭಟ್ಟ ತೆಂಗಿನಮನೆ,**
ಸಕ್ಲೇಶಪುರ ಪೋಸ್ಟು ಕಡೂರ ಜಿಲ್ಲಾ

EDITED, PRINTED & PUBLISHED BY V S. KAMATH AT M. T A. SHARADA PRESS, MANGALORE

ಚಂದಾ ನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0 Registered No. M. 489. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0

# ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

[illegible]

ಪುಸ್ತಕ ೨೪. ಮಂಗಳೂರು ತಾ. ೭ನೇ ಶುಕ್ರವಾರ ನವಂಬರ ೧೯೩೦ (7—11—30.) ಸಂಚಿಕೆ ೪೪


## THE CANARA BANKING CORPORATION, UDIPI, LTD.

## ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

**Head office:—UDIPI.** **Branches:—COONDAPOOR & Mangalore**

ಹೆಡ್ ಆಫೀಸು:— ಉಡುಪಿ. ಶಾಖೆ:— ಕುಂದಾಪುರ. ಮತ್ತು ಮಂಗಳೂರು

Authorised Capital Rs 3,50,000. Subscribed & Called up Rs. 2,25,000-

ನಿಯಮಿತ ಮೂಲಧನ ರೂ 3,50,000 ಚಂದಾ ಹಾಕಲಿಕ್ಕೆ ಅಪೇಕ್ಷಿಸಿ ವಸೂಲಾದ ಮೂಲಧನ ರೂ 2,25,000

**Statement of Affairs as on 31st October 1930**

| | CAPITAL AND LIABILITIES | | | PROPERTY AND ASSETS | |
|---|---|---|---|---|---|
| 1 | Paid up Capital | Rs 2,24,930-0-0 | 1 | Premises Building Furniture etc | Rs [illegible] |
| 2 | Reserve and other funds | ,, 1,15,400 0 0 | 2 | Investment on G P Notes | ,, 3,7[illegible],414 [illegible] 0 |
| 3 | Deposits | ,, 20[illegible] | 3 | Investment on Approved Securities | ,, [illegible] |
| 4 | Bills for collection as per contra | ,, [illegible] | 4 | Bill for collection | [illegible] |
| 5 | Due to Bankers | ,, [illegible] | 5 | Sundries | ,, [illegible] |
| 6 | Sundries | 81, | 6 | Cash in hand & with banker | [illegible],45 [illegible] |
| | Total | [illegible] | | Total | [illegible] 63 12-4 |

Office of the Corporation, UDIPI, [illegible] —11 '30 **N. ANANDA RAO**, *Secretary & Manager*

## ಅಮೃತಾಂಜನ.

[illegible]

ರಿಂಗ್‌ವರ್ಮ್ ಮುಲಾಮು.— [illegible] ಡಬ್ಬಿಗೆ ಆಕೆ 0, 4, ಚಿ.

ದಂತಮಂಜನ:— [illegible] ಡಬ್ಬಿಗೆ ಆಕೆ 2, 4, ಚಿ.

ಅಮೃತಾಂಜನ ಡಿಪ್ಪೋ,

ಮದರಾಸು ಮತ್ತು ಬೊಂಬಾಯಿ.



ಮಕ್ಕಳ ಸಲುವಾಗಿ,

## ಡೋಂಗರ

ಇವರ

## ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,

ಗಿರಗಾಂವ್, ಮುಂಬಾಯಿ.

ಏಜಂಟರು —ದಿ ಯೂನಿಯನ್ ಮಾರ್ಟ್, ಮಂಗಳೂರು.



## ಶ್ರೀ ಸರಸ್ವತೀ ಭಂಡಾರ

| | | |
|---|---|---|
| 1 | ಸಚಿತ್ರ ರಾಮಾಯಣ ಕಥಾ ಸಂಗ್ರಹ | 1—8—0 |
| 2 | [illegible] ಚರಿತ್ರೆ | 0 12—0 |
| 3 | [illegible] | 2—0—0 |
| 4 | [illegible] | 2—0—0 |
| 5 | [illegible] | 3—0—0 |
| 6 | [illegible] ಕಥೆಗಳು | 0-12—0 |
| 7 | [illegible] | 1—0—0 |
| 8 | [illegible] | 1-12—0 |
| 9 | ಸೌಭಾಗ್ಯ [illegible] | 1—5—0 |
| 10 | [illegible] ಸಾಮ್ರಾಜ್ಯಂ | 1—4—0 |
| 11 | [illegible] | 0—12—0 |
| 12 | ಆನಂದ ಮಠ | 1-12—0 |
| 13 | [illegible] | 0-12—0 |
| 14 | ವಚನ ಭಾರತ | 1—8—0 |
| 15. | ಇಂಡಿಯನ್ ಪಿನಲ್ ಕೋಡ್ | 2—8—0 |
| 16 | ಕ್ರಿಮಿನಲ್ ಪ್ರೊಸೀಜರ್ ಕೋಡ್ | 3—0—0 |
| 17 | ಲ್ಯಾಂಡ್ ರೆವಿನ್ಯೂ ಕೋಡ್ | 1—0—0 |

ಈ ಮೇಲ್ಕಂಡವುಗಳಲ್ಲದೆ ನಮ್ಮಲ್ಲಿ ಇನ್ನೂ ಸಾವಿರಾರು ನಮೂನೆಯ ಕನ್ನಡ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗ್ ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಲೈಬ್ರೆರಿಗಳಲ್ಲಿ ಇಡಲು ಯೋಗ್ಯವಾದ ಅನೇಕ ಪುಸ್ತಕಗಳು ನಮ್ಮಲ್ಲಿ ದಾಸ್ತಾನಿರುತ್ತವೆ.

ವಿಳಾಸ— ಶ್ರೀ ಸರಸ್ವತೀ ಭಂಡಾರ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು, ಆಪಿನ್ನ ರೋಡ್, ಮಂಗಳೂರು ಸಿಟಿ

## ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O S No 359/1930

ಮುಹಮ್ಮದ ಬ್ಯಾರಿ—ಅಬ್ದುಲ್‌ಖಾದರ ಬ್ಯಾರಿ ಮಗ ಪಳ್ಳಿಕೆರೆ ಗ್ರಾಮದಲ್ಲಿರುವವ—ವಾದಿ ಮತ್ತು

ಕಿಮದೆ—ಪೀಡಿಯಕ್ಕಾರನ್ ಮೈದಿನ್ ಹಾಜಿಯಾರರ ಮಗ, ಪಳ್ಳಿಕೆರೆ ಗ್ರಾಮದಲ್ಲಿರುವವ—ಪ್ರತಿವಾದಿ

ವಾದಿಯು ಪ್ರತಿವಾದಿಯ ಮೇಲೆ ದಾಖಲು ಮಾಡಿದ ಸದರಿ ವ್ಯಾಜ್ಯವು ತಾ. 10—11—'30ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ ಆ ಕುರಿತು ಪ್ರತಿವಾದಿಯ ಆಕ್ಷೇಪಣೆ ಇದ್ದಪಕ್ಷದಲ್ಲಿ ಸದರೀ ತಾರೀಕಿನ ಒಳಗೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಬಹುದೆಂಬ ಸಂಗ್ತಿ ಈ ಮೂಲಕ ತಿಳಿಸುವಾಗುತ್ತದೆ

ಕಾಸರಗೋಡು
೩೦—೧೦—೩೦

C Rama Rao
Vakil for Plaintiff

## ನೋಟೀಸು

ಕದ್ರಿಯಲ್ಲಿರುವ ಮಿಜಾರ ತಿಂಮ್ಮಪ್ಪೈಯು ತಿಳಿಸುವದೇನಂದರೆ ಈ ಕೆಳಗೆ ಹೆಸರು ಕಾಣಿಸಿದ ಆಸಾಮಿಗಳು ಆಭರಣದ ಪಟ್ಟಿ ಬರಕೊಟ್ಟು ಇದಿನ ಮೇಲೆ ಪಡಕೊಂಡ ಐವೇಜಿನ ಬಾಬ್ತು ಅಸ್ಲು ಬಡ್ಡಿ ವ್ಯಾದೆಗೆ ಕೊಡದೆ ಇದ್ದ ಕಾರಣ ರಿಜಿಸ್ಟ್ರಿ ನೋಟೀಸು ಬಿಟ್ಟಾಗ್ಯೂ ಅಸ್ಲುಬಡ್ಡಿ ಕೊಡದಿರುವ ಕಾರಣ ಸದ್ರಿಯವರ ಆಭರಣಗಳು ಇದೇ ೧೯೩೦ನೇ ಇಸವಿ ನವಂಬರ ತಾರೀಕು ೧೫ರ ವಳಗೆ ಅಸ್ಲುಬಡ್ಡಿ ತಂದುಕೊಟ್ಟು ಪಟ್ಟಿಯಲ್ಲಿ ತೋರುವ ಆಭರಣಗಳನ್ನು ಬಿಡಿಸಿಕೊಂಡು ಹೋಗತಕ್ಕದ್ದು ಇದಕ್ಕೆ ತಪ್ಪಿದರೆ ಉಳಿದಿರುವ ಪೂರಾ ಆಭರಣಗಳು ಇದೇ ತಿಂಗಳ ತಾರೀಕು ೨೫ನೇ ದಿವಸ ಮಧ್ಯಾಹ್ನ ಘಂಟೆ ೧೨ರ ಸಮಯಕ್ಕೆ ಕೇರಬೀದಿಯಲ್ಲಿರುವ ವಕೀಲ್ ಗಣೇಶಪೈಗಳ ಆಫೀಸಿನ ಎದುರು ಏಲಂ ಮಾಡಲಾದೀತು

ಸಜೀಪ ಮೂಗಣೆ ಪಡುಗ್ರಾಮದ ಮಾದಂತ್ತಾಡಿ ಗುತ್ತಿನಲ್ಲಿರುವ ನಾರ್ಣಶೆಟ್ಟಿ ಅಳಿಯ ಸಂಕಪ್ಪ ರೈ ಅಡವಿಟ್ಟ ತಾ. ೨೮—೬—೧೯೨೮ ಸಾಲದ ಮೊಬಲಗು ರೂ ೨೨೦—೦—೦ ಏಲಂ ತಾರೀಕು ವರೆಗೆ ಬಡ್ಡಿ ೪೦—೦ ೦

ಪಜ್ಪನಾಡಿಯಲ್ಲಿರುವ ಪೆದ್ರು ಸಾಲ್ದಾಂಞಾ ಮಗ ಪ್ರಾನ್ಸಿಸ್ ಸಾಲ್ದಾಂಞಾ ಅಡವಿಟ್ಟ ತಾ ೧ ೧—೧೯೨೯ ಸಾಲದ ಮೊಬಲಗು ರೂ ೩೬—೦—೦ ಏಲಂ ತಾರೀಕು ವರೆಗೆ ಬಡ್ಡಿ ೧೭—೦—೦

ಗುರ್ಪುರ ಪರಾರಿಯಲ್ಲಿರುವ ಮಾಯ ಯೂನೆ ಅಬ್ದುಲ್‌ಕಾದ್ರಿ ಬ್ಯಾರಿ ಮಗ ಬಾವ ಯೂನೆ ಮಮ್ಮುಬ್ಯಾರಿ ಅಡವಿಟ್ಟ ತಾ ೨ ೬ ೨೮ ಸಾಲದ ಮೊಬಲಗು ರೂ ೪೦—೦—೦ ಏಲಂ ತಾರೀಕು ವರೆಗೆ ಬಡ್ಡಿ ೧೮ ೧೨—೦

ಗುರ್ಪುರ ಪರಾರಿಯಲ್ಲಿರುವ ಮಾಯ ಯೂನೆ ಅಬ್ದುಲ್‌ಕಾದ್ರಿ ಬ್ಯಾರಿ ಮಗ ಬಾವ ಯೂನೆ ಮಮ್ಮುಬ್ಯಾರಿ ಅಡವಿಟ್ಟ ತಾ ೨೩ ೬ ೨೯ ಸಾಲದ ಮೊಬಲಗು ರೂ ೨೦ ೦ ೦ ಏಲಂ ತಾರೀಕು ವರೆಗೆ ಬಡ್ಡಿ ೫ ೧೦—೦

ಗುರ್ಪುರ ಪರಾರಿಯಲ್ಲಿರುವ ಮಾಯ ಯೂನೆ ಅಬ್ದುಲ್‌ಕಾದಿ ಬ್ಯಾರಿ ಮಗ ಬಾವ ಯೂನೆ ಮಮ್ಮುಬ್ಯಾರಿ ಅಡವಿಟ್ಟ ತಾ ೪ ೭ ೨೯ ಸಾಲದ ಮೊಬಲಗು ರೂ ೪೦ ೦—೦ ಏಲಂ ತಾರೀಕು ವರೆಗೆ ಬಡ್ಡಿ ೧೦ ೦೦—೦

ಜಪ್ಪು ಮೊಗ್ರು ಗ್ರಾಮದಲ್ಲಿದ್ದ ಮ್ಯಾತಪಟ್ಟ ಮೈದಿನೆ ಬ್ಯಾರಿ ಅಡವಿಟ್ಟ ತಾ ೮ ೨ ೧೯೨೯ ಸಾಲದ ಮೊಬಲಗು ೧೦ ೦—೦ ಏಲಂ ತಾರೀಕು ವರೆಗೆ ಬಡ್ಡಿ ೩—೬ ೦

ಜಪ್ಪು ಮೊಗ್ರು ಗ್ರಾಮದಲ್ಲಿದ್ದ ಮ್ಯಾತಪಟ್ಟ ಮೈದಿನೆಬ್ಯಾರಿ ಅಡವಿಟ್ಟ ತಾ ೩ ೩—೧೯೨೯ ಸಾಲದ ಮೊಬಲಗು ೩ ೦ ೦ ಏಲಂ ತಾ ವರೆಗೆ ಬಡ್ಡಿ ೧ ೦—೦

ಜಪ್ಪು ಮೊಗ್ರು ಗ್ರಾಮದಲ್ಲಿದ್ದ ಮ್ಯಾತಪಟ್ಟ ಮೈದಿನೆ ಬ್ಯಾರಿ ಅಡವಿಟ್ಟ ತಾ ೦೨—೯ ೧೯೨೯ ಸಾಲದ ಮೊಬಲಗು ೮ ೦ ೦ ಏಲಂ ತಾರೀಕು ವರೆಗೆ ಬಡ್ಡಿ ೧—೧೪ ೦

ಜಪ್ಪು ಮೊಗ್ರು ಗ್ರಾಮದಲ್ಲಿದ್ದ ಮ್ಯಾತಪಟ್ಟ ಮೈದಿನೆ ಬ್ಯಾರಿ—ಅಡವಿಟ್ಟ ತಾ ೧೫—೧೦—೧೯೨೯ ಸಾಲದ ಮೊಬಲಗು ರೂ ೧೦ ಏಲಂ ತಾರೀಕು ವರೆಗೆ ಬಡ್ಡಿ ೨ ೫ ೬

ಮಿಜಾರ ತಿಂಮಪ್ಪೈ


The Udipi Mutual Benefit Fund UDIPI

ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರಿಗೆ ಬರೆಯಬಹುದು.

ಎಂ. ಮುಖ್ಯಪ್ರಾಣಭಟ್ಟ. ಪ್ರೊಪ್ರೈಟರ್


## ಪ್ರಿನ್ಸ್ ಓಫ್ ವೇಲ್ಸರ ಭಾಷಣ

ಲೀಗ್ ಓಫ್ ನೇಶನ್ಸ್‌ನವರು ತಾ ೩೦ನೇ ಆಕ್ಟೋಬರ ತಿಂಗಳಲ್ಲಿ ಪ್ರಿನ್ಸ್ ಓಫ್ ವೇಲ್ಸರನ್ನು ಗಿಲ್ಡ್‌ಹೋಲ್ ಎಂಬಲ್ಲಿ ದೊಡ್ಡದೊಂದು ಔತಣಕ್ಕೆ ಆಮಂತ್ರಿಸಿದ್ದರು ಈ ವೇಳೆಯಲ್ಲಿ ಅವರು ಈ ಕೆಳಗಿನ ವಿಷಯಗಳನ್ನೊಳಗೊಂಡ ಒಂದು ಭಾಷಣ ಮಾಡಿದರು 'ಲೋಕ ಶಾಂತಿಯೇ' ಭಾಷಣದ ಶಿರೋಲೇಖವಾಗಿದ್ದಿತು.

ಪ್ರಪಂಚದ ಎಲ್ಲಾ ಊರುಗಳಲ್ಲಿ 'ಲೀಗ್ ಓಫ್ ನೇಶನ್ಸ್' ದಿಂದುಂಟಾಗುವ ಪ್ರಯೋಜನಗಳನ್ನರಿಯದ ಎಷ್ಟೋ ಜನರಿರುವರು ಪ್ರಪಂಚದ ಅತಿ ದೊಡ್ಡ ಮಹಾಯುದ್ಧವನ್ನೂ ಕೂಡ ಒಮ್ಮೆಗೆ ಎದುರಾಯಿಸುವ ಧೈರ್ಯವು "ಲೀಗ್ ಓಫ್ ನೇಶನ್ಸ್"ಗೆ ಇರುವದೆಂದು ಮಾತ ಅನೇಕರು ತಿಳಿಯರು ಅಂಥಹವರನ್ನುದ್ದೇಶಿಸಿ ನಾನು ಧೈರ್ಯದಿಂದ ಹೇಳುವುದೇನೆಂದರೆ—ಪ್ರಪಂಚದ ಶಾಂತಿ ರಕ್ಷಣೆಯು ಧಕ್ಕನೆ ಉಂಟುಮಾಡಬಹುದಾದ ಸನ್ನಾಹಗಳಿಂದ ಹಾಗೂ ಭುಜಬಲದಿಂದ ದೊರಿಯಲಾರದು ಜನಾಂಗಗಳಲ್ಲಿ ಪರಸ್ಪರ ಸ್ನೇಹಭಾವವು ಕ್ರಮೇಣ ಐಕ್ಯತೆಹೊಂದುವದರಿಂದಲೇ ಜನತೆಯ ಮೇಲ್ಮೆಯುಂಟಾಗುವದು ಲೀಗ ಆಫ್ ನೇಶನ್ನು ನಂಬದವರು ಇನ್ನಾವ ಸಹಾಯವನ್ನು ಪಡೆಯಲು ಅರ್ಹರಲ ಮಾತವಲ್ಲದೆ ಪ್ರಕೃತ ನೆರೆದಿರುವ ಈ ಮಹಾಸಭೆಯ ದೃಶ್ಯವು ಪರಸ್ಪರ ಜನಾಂಗಗಳ ಪ್ರೀತಿವಾತ್ಸಲ್ಯವನು ತೋರ್ಪಡಿಸುವದನ್ನು ನೋಡಿ ತುಂಬಾ ಸಂತೋಷಪಟ್ಟಿರುವೆನು ಇಲ್ಲಿ ಕೂಡಿದ ಸಭಿಕರಲ್ಲಿ ಪ್ರಪಂಚದ ಕಾಲುಪಾಲು ಜನಾಂಗವು ಅಡಕವಾಗಿರುವುದು ಇವರಲ್ಲಿ ಭಾಷಾ ಭೇಧ ಮತ ಭೇದಗಳೇ ಮೊದಲಾದ ಭೇದಗಳಿಷ್ಟಿದ್ದರೂ ಪ್ರಕೃತ ಸರ್ವ ಮತಾವಲಂಬಿಗಳು ಐಕ್ಯಭಾವನೆಯಿಂದ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸೇರಿರುವದನ್ನು ನೋಡಿ ನಾನು ಆನಂದಪಡುತ್ತೇನೆ ಅವರೆಲ್ಲರೂ ಅವರವರ ಮಟ್ಟಿನ ಸಿವಿಲ್ ಮತ್ತು ಪೊಲಿಟಿಕಲ್ ಸ್ವತಂತ್ರ್ಯತೆಗಳನ್ನು ಕಾಪಾಡಿ ಕೊಳ್ಳಲು ಹಕ್ಕುಳ್ಳವರಾಗಿರುವರು ಆದರೆ ಅಂತಹ ಸ್ವತಂತ್ರರಕ್ಷಣಾ ದಿನಗಳ ಮಾತ್ರ ಮೇಲೆ ಹೇಳಲ್ಪಟ್ಟ ಜನರ ಪಾಲಿಗೆ ಇಂದು ಅಧೋಗತಿಯನ್ನು ಪಡೆದಿರುವವು ಹಾಗೂ ಸ್ವಾತಂತ ರಕ್ಷಣೆಯು ಯುದ್ಧ ಸನ್ನಾಹಗಳಿಂದ ಎಂದೂ ಸಂಘಟಿಸದು ಕೆನಡದಲ್ಲಿ ಯುದ್ಧದ ಸಮಾಚಾರಗಳು ತೀರಾ ಕಡಿಮೆಯಾಗಿರುವುದರಿಂದ ಅಲ್ಲಿ ಹೆಚ್ಚಿನ ಶಾಂತಿಯು ನೆಲೆಸಿರುವದು ಅಂತೂ ಈ ಮಹಾಸಭೆಯಲ್ಲಿ ಭಾಗ ವಹಿಸಿದ ಪ್ರಪಂಚದ ಜನತೆಯು ಅನ್ಯೋನ್ಯ ಸ್ನೇಹಭಾವದ ಮರ್ಮವನ್ನು ತಿಳಿಯುವದೇ ಲೋಕದ ಶಾಂತಿರಕ್ಷಣೆಯ ಮೂಲ್ಯತತ್ವವಾಗಿರುವದು ಎಂದು ಹೇಳಿ ತನ್ನ ಭಾಷಣವನ್ನು ಪೂರೈಸಿದರು

## WANTED

A Secondary grade trained mistress on Rs 27—1 (Annual)—37 for the Coondapur Board Higher Elementary Girls' School

*Apply to the*

**President,**
TALUK BOARD COONDAPUR

## ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ ಮುನ್ಸೀಫ ಕೋರ್ಟಿನಲ್ಲಿ

ಕ್ರಮ ನಂಬ್ರ 666/1930

ವಾದಿ—ವೈಕುಂಠ ನಾಯಕ

ಪ್ರತಿವಾದಿ—ಹುಸೇನ ಬ್ಯಾರಿ

ಹಾಸನ ಡಿಸ್ಟ್ರಿಕ್ಟ ಸಕಲೇಶಪುರದಲ್ಲಿರುವ ಫರ್ಸಿ ಪಳ್ಳಿಬ್ಯಾರಿ ಮಗ ಹುಸೇನಬ್ಯಾರಿಗೆ ತಿಳಿಯಪಡಿಸುವದೇನೆಂದರೆ —

ಡಿಮೆಂಡ ನೋಟಿನ ಅಸ್ಲು ಬಡ್ಡಿ ಹಣಕ್ಕೆ ವಾದಿಯು ನಿಮ್ಮ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ ಮಾಡಿದ ಸದ್ರಿ ವ್ಯಾಜ್ಯವು ತಾ 20—11—'30ಕ್ಕೆ ತನಿಖೆಗೆ ಇಟ್ಟಿರುವದರಿಂದ ಆ ದಿವಸ ನೀವು ಖುದ್ದುನಿಂದಾಗಲೀ ವಕೀಲ ದ್ವಾರವಾಗಲೀ ಸದರಿ ಕೋರ್ಟು ಮುಂದೆ ಹಾಜರಾಗಿ ಉದಹರಿಸಿಕೊಳ್ಳಲಿಕ್ಕೆ ತಪ್ಪಿದರೆ ನಿಮ್ಮನ್ನು ಏಕ್ಸ್ ಪಾರ್ಟಿ ಮಾಡಿ ತೀರ್ಮಾನಿಸಲಾದೀತು

ಪುತ್ತೂರು
೧೧—೩೦

B. Prabhakar Rao.
Pleader for Plaintiff

## ಮಿತ್ರ ಬಾಂಧವರಿಗೊಂದು ಸೂಚನೆ.

ಕೆಲವು ಸಮಯಗಳಿಂದ ಆರೋಗ್ಯವಿಲ್ಲದೆ ಇದ್ದ ಮಲೇರಿಯಾನ ಕಂಪೆನಿಯ ಪ್ರೋಪ್ರೈಟರ್ ಜಿ ಎಮ್ ಡಿ ಸರು ಈಗ ತಾನೇ ದೃಷ್ಟಿ ಪರೀಕ್ಷಿಸುವ ಆರೋಗ್ಯವುಳ್ಳವರಾಗಿ ರುವುದರಿಂದ ಮಿತ್ರಬಾಂಧವರು ಅವರನ್ನು ಅವರ ಸ್ವಂತ ಆಫೀಸಿನಲ್ಲಿಯೇ ಕಂಡುಕೊಳ್ಳಬಹುದು

ಇವರು ದೃಷ್ಟಿಯನ್ನು ಸೂಕ್ಷ್ಮ ರೀತಿಯಿಂದ ಪರೀಕ್ಷಿಸಿ ಅದಕ್ಕನುಸಾರವಾದ ಯೋಗ್ಯ ದೃಷ್ಟಿ ಚಕ್ರಗಳನ್ನು ಆರಿಸಿ ಕೊಡುವುದರಲ್ಲಿ ಬಹೂ ಸಮರ್ಥರು ಮೂವತ್ತು ವರ್ಷಗಳಿಂದ ಅನೇಕಾನೇಕ ಗ್ರಹಸ್ಥರ ಉತ್ತಮ ಸರ್ಟಿಫಿಕೇಟುಗಳನ್ನು ಸಂಪಾದಿಸಿ ಕೊಂಡಿರುವರು

ದೃಷ್ಟಿ ಪರೀಕ್ಷೆಗೆ ಬೆಳಗಿನ ಜಾಮವೇ ಉತ್ತಮ ಹೊತ್ತಾಗಿರುವುದು

**ಮಲೇರಿಯಾನ ಕಂಪೆನಿ.**
ಹಂಪನಕಟ್ಟೆ, ಮಂಗಳೂರು


ಈ ಸಂದರ್ಭವನ್ನು ಕಳಕೊಳ್ಳಬೇಡಿರಿ

ಸ್ಟ್ರೈಕಿಂಗ್ ಮತ್ತು ವ್ಯಾಂಡಿಂಗ್ ಎಲಾವರ್ಮ ಕ್ಲೋಕ್—ಉಚಿತ

ರಿವರ್ ರಿಸ್ಟ್‌ವಾಚ (ಚೌಕ ಅಥವಾ ದುಂಡಗೆ) ನಮ್ಮ ಗನರ್ ವಾಚನ್ನು ಪಡಕೊಳ್ಳುವವರಿಗೆ ಒಂದು ಕ್ಲೋಕ್ ಉಚಿತ ನವ್ಯ ರಿಜಿಸ್ಟ್ರಿಯಾದ ಎಸ್ ಎಸ್ ಮದೀನಾ ಶಿಪ್ ಎಂಬ ಟ್ರೇಡ್ ಮಾರ್ಕನ್ನು ವಾಚಿನ ಮೇಲು ಭಾಗದಲ್ಲಿ ನೋಡಿರಿ—ಸ್ಪೆಶಲ್ ತಯಾರಿ—ನವೀನವಾಗಿ ಈಗ ತಾನೇ ಸ್ವಿಜರ್ಲಾಂಡಿನಿಂದ ಬಂದಿರುವ ಚಿತ್ತಾಕರ್ಷಕ ಅಂಕೆಗಳು (ಅರೆಬಿಕ್ ಅಥವಾ ರೋಮನ್ ಸರಿಯಾದ ಸಮಯವನ್ನು ತೋರಿಸುವದು ಯಾಂತ್ರಿಕ ಸಾಮಾನುಗಳಿಗೆ ವರ್ಷದ ಗ್ಯಾರಂಟೀ, ಫೇಕರಿ ಕ್ರಯ ೩೦/ ರೂಪಾಯಿ ಮಾರಾಟದ ಕ್ರಯ ರೂ ೬ ೧೫—೦ ಅಂಚೆವೆಚ್ಚ ೧೨ ಆಣೆ ಮಾತ್ರ

ಸಿಟಿವಾಚ್ ಕೋ, ನಂಬ್ರ 8, ಹಾರ್ವಾರ್ಡ್ ರೋಡ್, ಗಾಮ್‌ದೇವಿ, ಮುಂಬಾಯಿ



ತಯಾರಾಗಿವೆ 1931ನೇ ಇಸವಿಯ

ಮಾರಾಟಕ್ಕೆ ಸಿದ್ಧವಿವೆ

# ಪ್ರೊಕೆಟ್ ಡ್ಯಾರಿಗಳು.

ತ್ವರೆಮಾಡಿರಿ 1931ನೇ ಇಸವಿಯ

| | | | |
|---|---|---|---|
| ಅಂದವಾದ ಕೆಲಿಕೊ ಬ್ಯಾಂಡಿನ ದೊಡ್ಡ ಸ್ಯಾಜಿನ ಡ್ಯಾರಿ (ಇಂಗ್ಲೀಷ ಮಟರಿನೊಂದಿಗೆ) | 0 | 9 | |
| ಕೆಲಿಕೊ ಬ್ಯಾಂಡು ದೊಡ್ಡದು ಮುಚ್ಚಳದ್ದು | 0 | 14 | ( |
| ಕೆಲಿಕೊ ಬ್ಯಾಂಡು ದೊಡ್ಡದು (ಕನ್ನಡ ಮಟರಿನೊಂದಿಗೆ) | 0 | 8 | ( |
| ಮುಚ್ಚಳದ್ದು | 0 | 14 | 0 |
| ಕೆಲಿಕೊ ಬ್ಯಾಂಡಿನ ಮಿಡಿಯಮ್ ಸ್ಯಾಜದ್ದು | 0 | 8 | 0 |
| ಮುಚ್ಚಳದ್ದು | 0 | 12 | 0 |
| ಮಿಡಿಯಮ್ ಸ್ಯಾಜ್ ಸ್ಟಿಫ್ ಬ್ಯಾಂಡ್ ಡ್ಯಾರಿ | 0 | 6 | 0 |
| ಸಣ್ಣ ಸ್ಯಾಜಿನ ಕೆಲಿಕೊ ಬ್ಯಾಂಡ್ ಡ್ಯಾರಿ | 0 | 8 | 0 |
| ಮುಚ್ಚಳದ್ದು | 0 | 10 | 0 |
| ಸ್ಟಿಫ ಬ್ಯಾಂಡ್ ಡ್ಯಾರಿ | 0 | 5 | 0 |

ದೊಡ್ಡ ಸ್ಯಾಜಿನ ಡ್ಯಾರಿಯಲ್ಲಿ ಟಪ್ಪಾಲು ಮತ್ತು ಕೋರ್ಟು ವ್ಯವಹಾರ, ಸ್ಟಾಂಪು ಅಳ್ಳ ಮುಂತಾದ ಕ್ರಮಗಳನ್ನು ಕನ್ನಡದಲ್ಲಿ ಕೊಟ್ಟಿರುತ್ತದೆ

ರಖಂ ತೆಗೆದುಕೊಳ್ಳುವವರಿಗೂ, ವ್ಯಾಪಾರಿಗಳಿಗೂ ತುಂಬಾ ಕಮಿಶನು ಕೊಡಲಾಗುವದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

**ಶಾರದಾ ಛಾಪಖಾನೆ,**
ರಥಬೀದಿ, ಮಂಗಳೂರು.

## ಶಾಸ್ತ್ರೀಯ
## ಅಮೂಲ್ಯ ಔಷಧಗಳು.

ಶಿಮ್ಯಶಾಕುಂಕುಮ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು, ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ

### ಕಸ್ತೂರಿಮಿಶ್ರಣ!
### ದಶಮೂಲ ಸುಖಪ್ರದಔಷಧಿ!

ಬಾಲಂತಿಯರ ಸಂಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ [illegible]ವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಥಿತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲಿ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಲಂತಿಯು—ಗರ್ಭಧಾರಣೆ ಬಗ್ಗೆ ಮತ್ತು ಪ್ರಸವದ ಬಗ್ಗೆ ತಳಕೊಂಡಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಸೇವನ ಗುಣದಿಂದ ಬಾಲಂತಿಯ [illegible], ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು

ಕ್ರಯ ಬಾಟ್ಲಿ 1ಕ್ಕೆ 2-0-0 ಪೋಸ್ಟೇಜು ವಗೈರೆ ಬೇ[illegible]

[illegible]

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು, ದ ಕನ್ನಡ

## ಸುಂದರವಾದ ಜರಿಕೆಲಸ ಮಾಡಿದ ಕಾಶಿಯ
## — ಪಟ್ಟೆ ಸೀರೆಗಳು —

ಜರಿ ಅಂಚಿನ [illegible] ಸೀರೆಗಳ [illegible] ಅಗಲ ರೂ [illegible] ರೂ [illegible] ವರೆಗೆ [illegible] ರೂಪಾಯಿ [illegible] ವರೆಗೆ [illegible] ಪಟ್ಟೆ ಎಲವಸ್ತ್ರ, ಉತ್ತರೀಯ, ಶಾಲು, ಪಿತಾಂಬರ, ಕಸ್ತೂರಿ, ರೇಶಮಿ, ರುದ್ರಾಕ್ಷಿ, ಹಿತ್ತಾಳೆಯ ಸಾಮಾನುಗಳ, ಪೂಜಾ ಸಾಮಗ್ರಿಗಳ ಇತ್ಯಾದಿ ಸಹಾ ದೊರೆಯುವವು [illegible] ಕೊಡಲ್ಪಡುವವು ಹೆಚ್ಚಿಗೆ ವಿಷಯ ಕ್ಯಾಟಲಾಗಿನಿಂದ ಅಥವಾ ಪತ್ರ ಮೂಲಕ

ವಿಳಾಸ —
ಕಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ್
ಮಗಾರಘಾಟ್ ಕಾಶೀ ಬನಾರಸ್ ಸಿಟಿ

## ಕೇವಲ ಕಸೂರಿ ಕ್ರಯ.

ಪೋಚು, ಬಿರಸ್ಟ್ ಮಷಿನು, (ಸಿಲಿಂಡರ್ ಜೋಡ್ ಜೋಡಿಸಿದ್ದು) ಕ್ರಯ ರೂ 1-14-0 ಮಾತ್ರ [illegible] ಸಮಯ [illegible] ಒಳ್ಳೆ ಸಮಯ ತೋರಿಸುವುದು [illegible] ಪಟ್ಟಿಯಿಂದಿಗೆ ರೂ 3-8-0 [illegible] ರೂ 4-0-1, [illegible] 3 ರೂ. 5-0-0. (ಮೂರುವರ್ಷದ ಗೆರೆಂಟಿ ಇದೆ).

ಅಂಚೆವೆಚ್ಚ ಬೇರೆ.

ಇಂಗ್ಲೀಷಿನಿಂದ ಕಾಗದ ಬರೆಯಿರಿ.

**R. C. MUKERJEE,**
*12/2 Hari Paul Lane,*
CALCUTTA.

# The Canara Bank Limited, Mangalore.
## ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

Established July 1906 — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

*BRANCHES* -Karkal Kasargod, Cochin Udipi Gangolli Coondapur, Bombay Puttur, Calicut & Alleppey

ಬ್ರಾಂ:-ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಆಲ್ಲಪೆ

| | |
|---|---|
| Authorised and fully paid up Capital Rs 300,000 0-0 | ಅಧಿಕಾರಿಸಲ್ಪಟ್ಟ ಪೂರ್ಣವಾಗಿ ತೆತ್ತ ಮೂಲಧನವು ರೂ 300,000 0-0 |
| Reserve and other sinking Funds Rs 431,732-9-7 | ರಿಸರ್ವ ಮತ್ತು ಇತರ ಫಂಡುಗಳು ರೂ. 431,732-9-7 |
| Amount invested on G P Notes Rs 817,097-2-0 | ಗವರ್ನಮೆಂಟ್ ಪ್ರೊ. ನೋಟುಗಳಲ್ಲಿ ಹಾಕಿದ ರೂ 817,097-2-0 |
| Rates of interest on fixed deposits at Head Office and Branch 6½% for 2 Years 6% , 1 Year | ಹೆಡ್ ಆಫೀಸು ಮತ್ತು ಬ್ರಾಂಚುಗಳಲ್ಲಿ ಫಿಕ್ಸಡ್ ಡಿಪೋಸಿಟುಗಳಿಗೆ ಬಡ್ಡಿ ದರ — ಎರಡು ವರುಷಗಳಿಗೆ ಸೇಕಡಾ 6½% 1 ವರುಷಕ್ಕೆ ಸೇಕಡಾ 6. |
| Season deposits of Rs 1000/- & above terminable by the end of June are received at 6½% p a | ಸೀಜನ್ ಡಿಪೋಸಿಟ್ ರೂ 1000/- ದ ಮೇಲ್ಪಟ್ಟದ್ದಕ್ಕೆ ಬಡ್ಡಿ ದರ ಸೇಕಡಾ 6½. |

Current Account Deposits received and interest allowed on daily balance of Rs 50 and above that on multiple of Rs 10 @ 3 from 1st January to 30th June and @ 2% from 1st July to 31st December No interest will be allowed unless the depositor earns not less than Rs 5 during a period of 6 months ending either 30th June or 31st December in any year

Except by special arrangement no interest is allowed on sums exceeding Rs. 10 000 in the case of Head Office and Bombay & Cochin Branches and on sums exceeding Rs 5 000 in the case of the remaining Branches

Short notice deposits requiring one week's notice of withdrawal given at any time after one month from the date of deposit are received and interest allowed at 4 per annum Interest on such deposits will cease on notice

*For further particulars please apply to*

Canara Bank Ltd, Mangalore 13—10—1930 — **K Venkat Rao,** *Secretary.*

# The Pangal Nayak Bank, Ltd.

| Branch Office Mangalore | Head Office Udipi *Established 1920.* | Agency Office Cochin |
|---|---|---|

| | |
|---|---|
| Authorised Capital Rs 2,00,000- | Paid up Capital Rs. 1,75,000- |
| Issued Capital Rs 1,75,000- | Reserve and other Funds Rs 1,42,810- |

***Fixed Deposits received for***
***24 months at 6½***
***12, 15, 18 or 21 months at 6***
***6 or 9 months at 5***
***3 months at 5***

***Interest being payable every 3 months.***

Current Deposit Accounts are opened free of charge and interest allowed on Daily balances

*Further information may be had on application to the* SECRETARY *at the* HEAD OFFICE *or to the* AGENT *at the* BRANCH

Office of the Bank, Udipi 1-10-1930 — P Laxman Nayak, Secretary

## 'ಗ್ರೇಂಡ ಕ್ಲಿಯರೆನ್ಸ ಸೇಲ್'!

**ಒರೇ ಮೂರು ರೂಪಾಯಿ ಗಳ ವ್ಯಾಪಾರದಿಂದ 324 ಅಮೂಲ್ಯವಾದ ಪಾರಿತೋಷಕಗಳು!**
ನಮ್ಮ ಸುಗಂಧ ಪೂರಿತವಾದ 'ಒಟ್ಟೊ' ಮೋತಿಯಾ ತೈಲದ ಆರು ಬಾಟ್ಲಿಗಳನ್ನು ಒಮ್ಮೆಗೆನೇ ಕೊಂಡು ಕೊಳ್ಳುವವರಿಗೆ ಈ ಕೆಳಗೆ ನಮೂದಿಸಿರುವ ೩೨೪ ಅಮೂಲ್ಯ ಬಹುಮಾನಗಳು ಉಚಿತವಾಗಿ ಕೊಡಲಾಗುವವು'

[illegible] (ನಮ್ಮಪಾರ್ಸಲ ಅರತಿಯ ಸ್ಪಷ್ಟಿಕರ ಹಿಪಿಂ) ಉಚಿತಗಳೊಂದಿಗೆ ಮೌಲ್ಯ ರೂ. 3-0-0 ಮಾತ್ರ ಟಪಾಲಿನ ಹಾಸಲು 0-10-0.

ಪತ್ರವ್ಯವಹಾರವು ಇಂಗ್ಲಿಷನಲ್ಲಿಯೇ ಸಾಗಲಿರುವುದು.

ಇಂಡಿಯನ್ ಸ್ಟೋರ್ಸ ಕೋ,
47, ಬೆನಿಯಾಟೋಲಾ ಸ್ಟ್ರೀಟ್, ಪಿ. ಓ., ಹಟ್ಖೋಲಾ, ಕಲ್ಕತ್ತ

**INDIAN STORES CO.** 47, Beniatola Street, Po., Hatkhola CALCUTTA.

## ಸಾಪ್ತಾಹಿಕ ಸತ್ಯಾಗ್ರಹ ಸಮಾಚಾರ.

### ತಾರೀಖು ೩೦.

**ಮುಂಬಾಯಿ.**

ಕಳೆದ ಆದಿತ್ಯವಾರ ಮುಂಬಾಯಿಯು ಪೋಲೀಸರ ಲಾಠಿ ಹೊಡೆತಗಳಿಗೆ ಗುರಿಪಟ್ಟಿರುವದನ್ನೇ! ಈ ಕುರಿತು ಮುಂಬಾಯಿ ನಗರದ ಹಿಂದೀ ವ್ಯಾಪಾರಿಗಳು, ಮುಂಬಾಯಿ ಗವರ್ನರರಿಗೆ, ತಮಗೊದಗಿದ ಪೋಲೀಸು ಅತ್ಯಾಚಾರಗಳ ಹಾಲುಹವಾಲೆಗಳನ್ನು ಪತ್ರಮುಖೇನ ಮನವಿಮಾಡಿಕೊಂಡಿರುವರು. ಮುಖ್ಯವಾಗಿ ಪತ್ರವು ನಾರೀಸತ್ಯಾಗ್ರಹಿಗಳ ಹಿಂಸೆಯನ್ನು ಮತ್ತಿಷ್ಟು ಒತ್ತಿ ಬರಾಯಿಸಿರುವದೆಂದೂ ತಿಳಿದುಬರುತ್ತದೆ. ರಾಷ್ಟ್ರ ಧ್ವಜಾರೋಹಣದ ಸಮಾರಂಭದಲ್ಲಿ, ಸರಕಾರವು ತಪ್ಪಿತಸ್ಥರನ್ನು ಕೈದು ಮಾಡಬಹುದಿತ್ತಲ್ಲದೆ ಮುಂಬಾಯಿ ಸರಕಾರದ ಅನುಮತಿ ಪ್ರಕಾರವಾದರೂ, ಪೋಲೀಸರಿಗೆ, ಆದಿತ್ಯವಾರದಲ್ಲಿ ನೆರೆದ ಜನಸಂದಣಿಯನ್ನು ಚದರಿಸುವರೆ, ಲಾಟಿಗಳನ್ನುಪಯೋಗಿಸುವ ಕರ್ತವ್ಯವೇ ಇದ್ದಿಲ್ಲ, ಹೆಚ್ಚಾದ ಲಾಟಿ ಹೊಡೆತಗಳು ಸ್ವಯಂ ಸೇವಕರ ತಲೆಗೆ ಸರಿಯಾಗಿ ಹೊಡೆಯಲ್ಪಟ್ಟು, ಅನೇಕರು ಕಷ್ಟನಷ್ಟಗಳಿಗೆ ಒಳಗಾಗಿರುವರು, ಆ ಕಾರಣಗಳಿಂದಲೇ ಸದರಿ ವರ್ತಕ ಸಮಾಜವು ಸರಕಾರದೊಡನೆ ಬಹಳೇ ಮುಷ್ಕರ ಹಿಡಿಯುವ ಕಾರಣವಾಯಿತಂತೆ! ಮಾತ್ರವಲ್ಲದೆ, ಅಂದಿನ ಪೋಲೀಸು ಅತ್ಯಾಚಾರಗಳು, ಅನೇಕ ಶ್ರೀಮಂತ ಕುಟುಂಬಕ್ಕೆ ಸೇರಿದ ನಾರೀ ಸ್ವಯಂಸೇವಕರನ್ನು ಕಾಡಿಗಟ್ಟಿ, ಯೋಗ್ಯ ಸೌಕರ್ಯಗಳಿಲ್ಲದಂತೆ ಮಾಡಿದುದೇ ಮುಂಬಾಯಿ ವರ್ತಕ ಸಮಿತಿಯ ಸದಸ್ಯರನ್ನು, ಸರಕಾರದ ಅನ್ಯಾಯಗಳು ವಿಮರ್ಶಿಸುವಷ್ಟು ಧೈರ್ಯವಂತರನ್ನಾಗಿ ಮಾಡಿತು ಸದರಿಯವರನ್ನು, ನ್ಯಾಯಬಾಹಿರರೆಂದು ಕಂಡಲ್ಲಿ, ಕಾರಾಗ್ರಹಕ್ಕೆ ಅಟ್ಟಬಹುದಾಗಿತ್ತು, ಅದರ ಬದಲಾಗಿ ನಾರೀ ಸತ್ಯಾಗ್ರಹಿಗಳನ್ನು ಪರಿಪರಿಯಾಗಿ ನಿರ್ಬಂಧಿಸಿ ಭಾರತವರ್ಷದ ಪವಿತ್ರ ಧರ್ಮವಾದ ಪಾತಿವ್ರತ್ಯಕ್ಕೇ ಕಳಂಕನ್ನು ತಂದಿರುವದು ಮುಂಬಾಯಿ ಸರಕಾರವು ಮೇಲೆ ಹೇಳಲ್ಪಟ್ಟ ಅತ್ಯಾಚಾರಗಳ ಕುರಿತು ಕೂಡಲೇ ತನಿಖೆನಡಿಸಬೇಕೆಂದೂ ಅಂತಹ ಅತ್ಯಾಚಾರಗಳನ್ನು ಸರಕಾರವು ಯಾವ ಸಬಬಿನ ಮೇಲೆ ಮಾಡಿದುವದೆಂಬುದಕ್ಕೆ ಯೋಗ್ಯ ಕಾರಣಗಳನ್ನು ವರ್ತಮಾನ ಪತ್ರಿಕೆಗಳಲ್ಲಿ ಕೂಡಲೇ ಜಾಹೀರುಪಡಿಸಬೇಕೆಂದೂ, ಮುಂಬಾಯಿ ಸರಕಾರದೊಡನೆ ವರ್ತಕ ಸಮಿತಿಯು ಅಪೇಕ್ಷೆಪಟ್ಟಿರುವದು ಸಾಧಾರಣ ೧೦,೦೦೦ ಜನರಿಂದ ಸಹಿ ಹಾಕಲ್ಪಟ್ಟು, ಮೇಲೆ ನಮೂದಿಸಲ್ಪಟ್ಟ ಎಲ್ಲಾ ವಿಷಯಗಳನ್ನೊಳಗೊಂಡ ಒಂದು ಅರ್ಜಿಯು, ಪರಂಪರಿಕೆ ಬಗ್ಗೆ ಮಾತ್ರವಲ್ಲದೆ ಲಾಠಿ ಹೊಡೆತಗಳ ನ್ಯಾಯಾನ್ಯಾಯಗಳನ್ನು ವಿವರಿಸಲು ದೊಡ್ಡದೊಂದು ಸಭೆ ಜರಗಿಸುವ ಬಗ್ಗೆಯೂ, ಮುಂಬಾಯಿ ವರ್ತಕ ಸಮಿತಿಯವರು ಶೆರಿಫ್ (Sheriff) ಸಾಹೇಬರಿಗೆ ಕಳುಹಿಸಿರುವರು. ಮಾರ್ವಾರಿ ಯುರೋಪಿಯನ್ನರು ಲಾಠಿ ಹೊಡೆತಗಳನ್ನು ನಿರೋಧಿಸಿ ಭಾಷಣಗಳನ್ನು ಮಾಡತ್ತಲೇ ಇರುವರು

**ನಾಗಪುರ**

ಇಲ್ಲಿನ ಸಯನ್ಸ್ (Science) ಕಾಲೇಜಿನ ಪ್ರೊಫೆಸರರಾದ ಶ್ರೀಯುತ ಕೋತರೆ ಎಂಬವರನ್ನು ಐ ಪಿ ಸಿ ೫೦ನೇ ಪ್ರಕರಣದ ಮೇಲೆ ಕೈದುಮಾಡಿ ಜಾಮೀನು ಕೇಳಿರುವರು. ಜಾಮೀನನ್ನು ಕೊಡ ನಿರಾಕರಿಸಿರುವವರಿಂದ ಸದರಿಯವರನ್ನು ಪಬ್ಲಿಕ್ ನ್ಯೂಸನ್ಸ್ ಮಾಡಿದರೆಂದು ಕಾರಾಗ್ರಹಕ್ಕೆ ಅಟ್ಟಿರುವರು

**ಢಿಲ್ಲಿಯಲ್ಲಿ**

ಶ್ರೀಮತಿ ಸೇನ್‌ಗುಪ್ತರನ್ನು ತಾ ೩೦ನೇ ದಿನ ದಸ್ತಗಿರಿ ಮಾಡಲಾಯಿತು. ಅಲ್ಲದೆ ಮಿಕ್ಕ ಎಷ್ಟೋ ಸತ್ಯಾಗ್ರಹಿಗಳೂ, ಕೈದುಮಾಡಲ್ಪಟ್ಟಿರುವರು

### ಢಿಲ್ಲಿಯ ಕೋರ್ಟಿನಲ್ಲಿ ಮಿ| ಸೇನಗುಪ್ತರ ಸ್ಟೇಟ್‌ಮೆಂಟು.

“ನಾನು ಈ ಮೊದಲು ಕೊಟ್ಟ ಕಾರಣಗಳಿಂದಲೇ, ಕೋರ್ಟು ಪ್ರೊಸೀಡಿಂಗ್ಸಿನಲ್ಲಿ ಭಾಗವಹಿಸಲು ಇಚ್ಛಿಸುವದಿಲ್ಲ. ನಾನಿಂದು ಬೇರಿಸ್ಟರನಾಗಿ ವ್ಯಾಜ್ಯದ ಕುರಿತು ವಾದ ವಿವಾದಗಳನ್ನು ನಡೆಸಲಿಕ್ಕೆ ಕೋರ್ಟಿಗೆ ಬಂದಿರುವದಿಲ್ಲ, ಕಾನೂನಿನ ಪಂಡಿತ್ಯಕ್ಕಾಗಿ ಕೋರ್ಟಿಗೆ ಬಂದಿರುವದಿಲ್ಲ, ಅಥವ ವ್ಯವಹರಣೆಯ ಯೋಗ್ಯತೆಯನ್ನು ಬಯಸಿ ಬಂದಿರುವದಿಲ್ಲ. ಆದರೆ ನನ್ನ ಮೇಲೆ ವ್ಯವಹರಣೆ ನಡೆಸಿದವರ ಬುದ್ಧಿಶಕ್ತಿಯು ಮಾತ್ರ ಅವರ್ಣನೀಯವಾಗಿರುವದು.

ತರುವಾಯ ಮಿ| ಸೇನ್‌ಗುಪ್ತರು ಮೆಜಿಸ್ಟ್ರೇಟರನ್ನುದ್ದೇಶಿಸಿ ‘ನೀವು ಹಾಕಿದ ಪ್ರಶ್ನೆಗಳಿಂದ, ಬ್ರಿಟನ್ನಿನವರ ನ್ಯಾಯ ಪರಿಪಾಲನಾ ಕ್ರಮವು ಸಂಪೂರ್ಣ ವ್ಯಕ್ತವಾಗುವದು ಮುಖ್ಯವಾಗಿ, ನ್ಯಾಯಾಧಿಕಾರಿಯು ತಪ್ಪಿತಸ್ಥನೊಡನೆ ‘ನೀನು ಮಾಡಿದ ಭಾಷಣವು ಶೋರ್ಟ್‌ಹೇಂಡ್ ರಿಪೋರ್ಟನ್ನು ಅನುಸರಿಸಿರುವದೇ?’ ಎಂದು ಕೇಳುವ ಪ್ರಶ್ನೆಯು ಕ್ರಿಮಿನಲ್ ಕೋಡಿನ ಕಾನೂನುಗಳಿಗೆ ತೀರ ವಿರೋಧವಾಗಿದೆ. ನಾನು ನನ್ನ ಡಿಫೆನ್ಸಿಗಾಗಿ ಈ ಉದಾಹರಣೆಯನ್ನು ಸೂಚಿಸಲಿಲ್ಲ; ಆದರೆ ಸಾವಿರಾರು ರಾಜಕೀಯ ವ್ಯವಹರಣೆಯನ್ನು ತನಿಖೆ ನಡಿಸುವ ಜಡ್ಜರ ಬುದ್ಧಿ ಚಾತುರ್ಯವನ್ನು ಮಾತ್ರ ವಿಮರ್ಶಿಸಬೇಕಾಯಿತು.

ಮುಖ್ಯವಾಗಿ ನನ್ನ ಮೇಲಣ ಆಪಾದನೆ ಎಂದರೆ—ರಾಜದ್ರೋಹವೇ ಬ್ರಿಟನ್ನಿನವರು ತಮ್ಮ ಹಿತಕ್ಕಾಗಿ ಭಾರತೀಯರನ್ನು ಆಳುತ್ತಾರೆಂದು ಉಚ್ಚರಿಸಿದ ಮಾತ್ರಕ್ಕೆ—ಅದೇ ರಾಜದ್ರೋಹ, ಆದರೂ ಕೂಡ ಸತ್ಯವಾದ ಸಂಗತಿಯನ್ನು ಯಾರಾದರೂ ಅಲ್ಲಗಳೆಯಬಲ್ಲರೆ? ಸಾವಿರಾರು ಭಾರತೀಯರು ಈ ಮೊದಲೇ ಕಾರಾಗ್ರಹವನ್ನು ಸೇರಿದರು ಲಕ್ಷ ಲಕ್ಷ ಜನರು ‘ಹಿಂದುಸ್ಥಾನದಲ್ಲಿ ಬ್ರಿಟಿಷ ರಾಜ್ಯಾಡಳಿತವು ಎಂದು ಕೊನೆಗಾಣುವದು’ ಎಂದು ಎದುರುನೋಡುತ್ತಿರುವರು ಇಂಡಿಯದ ಬಂಧವಿಮೋಚನಾ ಕಾರ್ಯದಲ್ಲಿ ಅದಾವ ಭಾರತೀಯನು ಹಿಂದುಳಿಯಬಲ್ಲನು? ಯಾವನಿಗಾದರೂ ಭಾರತ ಸ್ವಾತಂತ್ರ್ಯವು ಬೇಡವೆಂದಾಗಿರುವದೇ? ಎಂದೂ ಇಲ್ಲ ಆದರೆ, ನನ್ನನ್ನು ಜೈಲಿಗೆ ಅಟ್ಟುವದೇನೋ ಖಂಡಿತವು, ಕಾರಣ — ಈ ಮೊದಲು (ಮೆಜಿಸ್ಟ್ರೇಟನ್ನುದ್ದೇಶಿಸಿ) ನಿಮ್ಮಂತಹ ಮ್ಯಾಜಿಸ್ಟ್ರೇಟರು, ಬ್ರಿಟಿಷ ಸರಕಾರದ ಅಧಿಕಾರ ಪ್ರಭಾವದಿಂದ ಎಷ್ಟೋ ಸಾವಿರ ಮಂದಿಯನ್ನು ಜೈಲಿಗೆ ಕಳುಹಿಸಿರುವರು ಇದೆಲ್ಲವೂ ನನಗೆ ಚೆನ್ನಾಗಿ ಗೊತ್ತು ನಾನೀಗ ಸಂತೋಷದಿಂದ ಸೆರೆಮನೆಯನ್ನು ಸೇರುವೆನು ಆದರೆ, ಭಾರತ ಸ್ವತಂತ್ರಾಭಿಲಾಷಿಗಳಾದ ವೀರ ಮಹಿಳೆಯರು ಹಾಗೂ ವೀರ ಪುರುಷರು ಬ್ರಿಟಿಷ ಸರಕಾರದೊಡನೆ ರಾಜ್ಯಭಾರ ಕ್ರಮದ ಕುಂದುಕೊರತೆಗಳನ್ನು ಕೇಳಿ ಒಹುದಾದ ದಿನಗಳು ಬೆನ್ನ ಹಿಂದೆಯೇ ಸಮೀಪಿಸುತ್ತಿವೆ. ನಾನಿನ್ನು ಹೆಚ್ಚು ಹೇಳಲು ಶಕ್ತನಲ್ಲ” ಎಂದು ಹೇಳಿ ತನ್ನ ಸ್ಟೇಟುಮೆಂಟನ್ನು ಅಂತ್ಯಗೊಳಿಸಿದರು

**ಅಲ್ಲಹಾಬಾದದಲ್ಲಿ**

ಕಾಂಗ್ರೆಸ್ ಕಮಿಟಿಯ ಸದಸ್ಯರು ‘ಜವಾಹರ್‌ವೀಕ್’ ಎಂಬ ಸಪ್ತಾಹವನ್ನು ತೊಡಗಿರುವರು ವಿದೇಶಿ ವಸ್ತು ಬಹಿಷ್ಕಾರ, ತಕ್ಲಿ ಮೆರವಣಿಗೆಗಳು, ಚರಕಾ ತಕ್ಲಿಗಳ ಪಂದ್ಯಾಟಗಳು, ನಿಶಾನಿಷೇಧ ಮುಂತಾದ ವಿಷಯಗಳೇ ಪ್ರತಿದಿನದ ಮೆರವಣಿಗೆಗಳ ಕಾರ್ಯಕ್ರಮಗಳು ಈ ಉತ್ಸವವು ಕೊನೆಗೆ ಬ್ಯಾಸಿಕಲ್, ಒಂಟೆ, ಆನೆ ಮುಂತಾದವುಗಳ ಮೆರವಣಿಗೆಗಳಿಂದ ಅಂತ್ಯಗೊಳ್ಳುವದೆಂದು ತಿಳಿದುಬರುತ್ತದೆ ಮಿ| ರಾಮಕಾಂತ ಮಾಲವೀಯ, ಮೋಹನ್‌ಲಾಲ್ ನೆಹರು, ಮತ್ತು ಶ್ರೀಮತಿ ಕೃಷ್ಣಾ ಕುಮಾರಿ ನೆಹರುರವರ ಮುಂದಾಳುತ್ವದಲ್ಲಿ ಒಂದು ಸ್ವದೇಶಿ ವಸ್ತುಪ್ರದರ್ಶನವೂ ಜರಗಿತು. ಕೆಲವು ವಿದೇಶಿ ವಸ್ತ್ರ ವ್ಯಾಪಾರಿಗಳು ತಮ್ಮ ಹಳೆ ಮಾಲನ್ನು ವಿಕ್ರಯಿಸುವ ವಿಚಾರಗಳನ್ನು ಮಾಡಿರುವರೆಂದು ತಿಳಿದುಬರುತ್ತದೆ

**ಕಲ್ಕತ್ತ**

ಇಲ್ಲಿನ ಕಾಂಗ್ರೆಸ್ ಸಮಿತಿಯವರು, ತಮ್ಮ ಮೇಲೆ ಜಾರಿಮಾಡಲ್ಪಟ್ಟ ೧೪೪ನೇ ಪ್ರಕರಣವನ್ನು ನಿರೋಧಿಸಿ, ಅನೇಕ ವಿದ್ಯಾರ್ಥಿಗಳಿಂದ ಕೂಡಿದ ಮೆರವಣಿಗೆಯೊಂದನ್ನು ಪೋಣಿಸಿ ಪಟ್ಟಣದ ಅನೇಕ ಕಡೆಗಳಲ್ಲಿ ರಾಷ್ಟ್ರಗೀತೆಗಳನ್ನು ಹಾಡುತ್ತ ಬ್ರಿಟಿಷ್ ವಸ್ತು ಬಹಿಷ್ಕಾರವನ್ನು ಬೋಧಿಸುತ್ತಿದ್ದರು ಪೋಲೀಸರ ಪ್ರತಿಬಂಧವು ಹೆಚ್ಚಿನ ಮಟ್ಟಿಗೆ ತೋರಿ ಬಾರದಿದ್ದರೂ, ಕ್ರೌನ್ ಸಿನೆಮಾ ಮಂದಿರದ ಬಳಿಗೆ ಮುಟ್ಟುವಷ್ಟರಲ್ಲಿ, ೫ ಮಂದಿ ಯುರೋಪಿಯನ್ ಸಾರ್ಜಂಟರು ಮೆರವಣಿಗೆಯನ್ನು ಅಡ್ಡಕಟ್ಟಿ, ಸ್ವಯಂಸೇವಕರ ಕೈಯೊಳಗಿದ್ದ ರಾಷ್ಟ್ರ ಧ್ವಜವನ್ನು ಸೂರೆಮಾಡಿದರು ಈ ವಿಷಯದಲ್ಲಿ ದಸ್ತಗಿರಿಗಳೇನೂ ನಡೆದಿಲ್ಲವೆಂದು ತಿಳಿದುಬರುತ್ತದೆ

### ತಾರೀಖು ೩೧

**ಪೇಶಾವರದಲ್ಲಿ.**

ಗುತ್ತಿಗೆಗಳ ಪಹರಾ ಕಾರ್ಯವು ಪೇಶಾವರದಲ್ಲಿ ಬಹಳ ಯೋಗ್ಯರೀತಿಯಲ್ಲಿ ನಡೆಯಲ್ಪಡುತ್ತದೆ. ಸರಕಾರದಿಂದ ಪಹರೆಯ ಕಾರ್ಯಕಲಾಪಗಳನ್ನು ನಿಲ್ಲಿಸುವುದಕ್ಕಾಗಿ ಹೆಚ್ಚಿನ ಪೋಲೀಸರು ನಿಯಮಿಸಲ್ಪಟ್ಟಿರುವರು ಆದರೆ ದಸ್ತಗಿರಿಗಳೇನೂ ನಡೆಯಲಿಲ್ಲವೆಂದು ತಿಳಿದುಬರುತ್ತದೆ.

**ಅಲ್ಲಹಾಬಾದದಲ್ಲಿ.**

ಪಂಡಿತ ಗೋವಿಂದಕಾಂತ ಮಾಲವೀಯರ ವಿಚಾರಣೆಯು ನಡೆಯಿತು. ಮೋತಿಲಾಲ್ ಮತ್ತು ಮದನಮೋಹನ ಮಾಲವೀಯರ ಧರ್ಮಪತ್ನಿಯರು ಆ ದಿನ ಕೋರ್ಟಿನಲ್ಲಿ ಹಾಜರಿದ್ದರು ವಿಚಾರಣೆಯಲ್ಲಿ ಮಾಲವೀಯರು ಭಾಗವಹಿಸಲಿಲ್ಲ. ವಿಚಾರಣೆಯು ಕೈದಾದ ಮೇಲೆ ಮ್ಯಾಜಿಸ್ಟ್ರೇಟರು ಮಾಲವೀಯರೊಡನೆ ಸದರಿ ಮೊಕದ್ದಮೆಯ ತೀರ್ಪನ್ನು ಮುಂದರಿಸಲಾಗಿರುವದೆಂದು ತಿಳಿಸಿದರು. ಅದಕ್ಕೆ ಪಂಡಿತ್ ಮಾಲವೀಯರು “ನಾನು ಕಾನೂನು ಓದುವದನ್ನು ಬಿಟ್ಟು ಕೆಲವೇ ದಿನಗಳು ಸಂದಿರುವವು; ಆದರೆ ಅಪಾದಿತನು ಮೊಕದ್ದಮೆಯಲ್ಲಿ ಭಾಗವಹಿಸದೆ ಹೋದರೂ ಕೂಡ, ಮ್ಯಾಜಿಸ್ಟ್ರೇಟರು ಆತನೊಡನೆ “ಸ್ಟೇಟ್‌ಮೆಂಟ್ ಹಾಜರುಪಡಿಸಲಿಕ್ಕಿರುವುದೇ?” ಎಂದು ಕೇಳುವ ಪದ್ಧತಿ ಉಂಟು, ಈ ಮಾತನ್ನು ರುಜುಪಡಿಸುವ ಕಾನೂನೂ ಇರುವದು” ಎಂದು ಹೇಳಿದರು ಅದಕ್ಕೆ ಮ್ಯಾಜಿಸ್ಟ್ರೇಟರು ನೀವು ಬರಹಮೂಲಕ ನಿಮ್ಮದೊಂದು ಸ್ಟೇಟ್‌ಮೆಂಟನ್ನು ಹಾಜರುಪಡಿಸಬಹುದೆಂದು ಉತ್ತರ ಕೊಟ್ಟರು. ಹಾಗೂ ಗೋವಿಂದಕಾಂತ ಮಾಲವೀಯರು ತನ್ನ ಸ್ಟೇಟ್‌ಮೆಂಟನ್ನು ದಾಖಲು ಪಡಿಸಲಿಲ್ಲವೆಂದು ತಿಳಿದುಬರುತ್ತದೆ

### ತಾರೀಖು ೧

**ಕಲ್ಕತ್ತದಲ್ಲಿ**

ಪೋಲೀಸರು ಅನೇಕ ಸತ್ಯಾಗ್ರಹ ಸಮಿತಿಗಳನ್ನು ಹಾಗೂ ಆಶ್ರಮಗಳನ್ನು ದೌಡುಮಾಡಿ ಸಾಧಾರಣ ೧೦೦ ಮಂದಿ ಸ್ವಯಂಸೇವಕರನ್ನು ದಸ್ತಗಿರಿಮಾಡಿರುವರು ಎಲ್ಲಾ ಕೈದುಗಳು ರಾಜಕೀಯ ಆಪಾದನೆಗಳ ಮೇಲೆಯೇ ಹೊರಿಸಲ್ಪಟ್ಟಿರುವುವೆಂದು ತಿಳಿಯಲಾಗುತ್ತದೆ

**ನಾಗಪುರದಲ್ಲಿ**

ಇಲ್ಲಿನ ೫೬ ಮಂದಿ ದಸ್ತಗಿರಿ ಮಾಡಲ್ಪಟ್ಟ ಸ್ವಯಂಸೇವಕರು ಸರಕಾರದ ಕ್ಷಮಾಪಣೆ ಬೇಡಿ ಬಂದಿಖಾನೆಯಿಂದ ಹೊರ ಹೊರಟಿರುವರೆಂದು ತಿಳಿದುಬರುತ್ತದೆ ಒಟ್ಟಾರೆ ೩೮೫ ಮಂದಿ ಸ್ವಯಂಸೇವಕರು ಕ್ಷಮೆ ಕೇಳಿ ಬಿಡುಗಡೆ ಹೊಂದಲ್ಪಟ್ಟಿರುವರು ೧೪೩ ಸತ್ಯಾಗ್ರಹಿಗಳು ತನಿಖೆ ಸಮಯದಲ್ಲೇ ಮಾಫಿ ಕೇಳಿಕೊಂಡು ಬಿಡುಗಡೆ ಹೊಂದಿರುವರು

**ಕರ್ನಾಟಕದಲ್ಲಿ**

ಕರ್ನಾಟಕ ಸತ್ಯಾಗ್ರಹ ಮಂಡಲಕ್ಕೆ ಸೇರಿದ ಮಿ| ಹರಿ ಅನಂತ ಪೈ ಎಂಬವರು ವ್ಯಾಸರಾಯರ ೫ನೇ ಓರ್ಡಿನೆನ್ಸು ಮೇರೆಗೆ ಅಂಕೋಲೆಯಲ್ಲಿ ದಸ್ತಗಿರಿ ಮಾಡಲ್ಪಟ್ಟಿರುವರು ಸಿರ್ಸಿ, ಸಿದ್ಧಾಪುರ ಕಡೆಗಳಲ್ಲಿ ಜನರು, ದನಕರುಗಳ ಮೇವಿಗಾಗಿ ಹೊರಿಸಲ್ಪಟ್ಟ ಸರಕಾರದ ಸುಂಕವನ್ನು ಕೊಡಬಾರದೆಂದು ಚಳವಳ ಹಬ್ಬಿಸುವದಕ್ಕಾಗಿ ಅನೇಕರು ಸೆರೆಮನೆಯನ್ನು ಸೇರುತ್ತಿರುವರು ಅರಣ್ಯ ಶಾಸನೊಲ್ಲಂಘನೆಯು ತೀವ್ರವಾಗಿ ನಡೆಯುತ್ತಿರುವದು. ಭಟ್ಕಳ್, ಮುರ್ಡೇಶ್ವರ—ಮೊದಲಾದ ಕಡೆಗಳಲ್ಲಿ ಅನೇಕರು ಸತ್ಯಾಗ್ರಹ ಸಂಬಂಧಪಟ್ಟ ವಿವಿಧ ಆಪಾದನೆಯಿಂದ ಸೆರೆಮನೆಗೆ ಆಮಂತ್ರಿಸಲ್ಪಟ್ಟಿರುವರು ಕುಮ್ಟೆಯಲ್ಲಿ, ೩ ಮಂದಿ, ತೆಂಗಿನ ಮರದ ಮೇಲಿಟ್ಟ ಕಳ್ಳಿನ ಪಾತ್ರೆಯನ್ನು ಒಡೆದು ಹಾಕಿದ್ದಕ್ಕಾಗಿ ೭|| ತಿಂಗಳ ಶಿಕ್ಷೆಗೆ ಗುರಿಪಟ್ಟಿರುವರು ತಾಡಾಡಿ ಬಂದರಕ್ಕೆ ಬರುತ್ತಿದ್ದ ವಿದೇಶಿ ಸಾಮಾನುಗಳನ್ನು ೨—೩ ವಾರಗಳಿಂದ ಮನ್ನಾ ಮಾಡಿರುವದೆಂದೂ ತಿಳಿದುಬರುತ್ತದೆ

### ತಾರೀಖು ೨

**ಪೇಶಾವರದಲ್ಲಿ**

“ಕೊಹೊಟಾ” ಎಂಬ ಗ್ರಾಮದಿಂದ ೯ ಮಂದಿ ಸ್ವಯಂಸೇವಕರನ್ನು ಪಿಕೆಟ್ ಮಾಡಿದರೆಂಬ ತಕ್ಸೀರಿನ ಮೇಲೆ ಪೋಲೀಸರು ದಸ್ತಗಿರಿ ಮಾಡಿರುವರು ಇಲ್ಲಿನ ಸಿಟಿ ಮ್ಯಾಜಿಸ್ಟ್ರೇಟರಾದ ಕೆಪ್ಟನ್ ಕೋಬ್ ಎಂಬವರು ಪಾಟ್ನಾ ದೇಶಕ್ಕೆ ಸೇರಿದ ಬಾಬು ವಿದ್ಯಾನಂದರೆಂಬೊಬ್ಬ ಸತ್ಯಾಗ್ರಹಿಯನ್ನು ೧೩೧ನೇ ಪ್ರಕರಣದ ಮೇರೆಗೆ ೬ ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿರುವರು ವಿದ್ಯಾರ್ಥಿಗಳ ಪಹರೆಯ ಕಾರ್ಯಕಲಾಪಗಳು ಪೇಶಾವರದಲ್ಲಿ ಪ್ರಕೃತ ಶಾಂತತೆಯನ್ನು ತಾಳಿರುವವು. ೩ ಮಂದಿ ವಿದ್ಯಾರ್ಥಿಗಳಿಗೆ, ಇನ್ನು ಮುಂದೆ ಪಿಕೆಟ್ ಮಾಡಬಾರದೆಂದು ಎಚ್ಚರಿಸಿ, ಬಿಡುಗಡೆ ಹೊಂದಿಸಿರುವರು.

(೧೩ನೇ ಪುಟಕ್ಕೆ ಮುಂದರಿಸಿಯದೆ.)

**The Zandu Pharmaceutical Works, Ltd., Bombay, 14**
ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ. 14.

ಲೋಕಪ್ರಸಿದ್ಧವಾದ 'ಝಂಡೂ'ಯವರ

# ಚ್ಯವನಪ್ರಾಶ ಲೇಹವು.

**ಅಮೋಘ ಟಾನಿಕ್ಕು!** **ಅಮೋಘ ಟಾನಿಕ್ಕು!**

ಹಸಿ ಆವಳಕ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದುರ್ಬಲತ್ವ, ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

ಕ್ರಯ 1 ಪೌನು ಸೀಸೆ ರೂ. 2—8—0, ½ ಪಾ. ರೂ. 1—5—0, ¼ ಪಾ. ರೂ 0—13—0.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು:— ದಾಮೋದರ್ ಅಂಡ್ ಕಂಪೆನಿ, 78 ಜೈನಾ ಬಜಾರು ರಸ್ತೆ, ಮದ್ರಾಸು

ತೀರ್ಥಹಳ್ಳಿ ಏಜಂಟರು:— ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು:— ದಿ ಊಲನ್ ಮಾರ್ಟ್
ಸಿರ್ಸಿ ಏಜಂಟರು — ಎಸ್. ಎಲ್ ಧಾಕಪ್ಪಾ ಎಂಡ್ ಬ್ರದರ್ಸ್
ಸಬ್ ಏಜಂಟರು — ಯು. ಜನಾರ್ಧನರಾವ್, ಪುತ್ತೂರು, ದ ಕನ್ನಡ
ಮಂಗಳೂರು ಏಜಂಟರು — ತಿಪ್ಪಣ್ಣ ಶ್ಯಾಸ್ತ್ರಿ, ಬುಸ್‌ಸ್ಟೇಟ್

☞ ವಿವರ ಕೆಟಲಾಗು ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು



TELEGRAMS 'ASPINWALCO' TELEPHONE No. 15

DISTRIBUTORS
Aspinwall & Co, Ltd
(Address) MANGALORE.

*STOCKISTS*

UDIPI
*H Siddaya Hegde*

KASARGODE
*Rama Nayak*

KANHANGAD -
*H S Russool*

COONDAPUR -
*C Gopal Mukunda Pai,*
General Merchant,
COONDAPUR (S Kanara)

BHATKAL
*Messers KashimjeeSham shuddeen Saheb Motor Service*

Puttur
*K Venkatraya Pai,*
Imperial Cycle Stores



***FOR YOUR CAR***

# WILLARD BATTERIES.

**SIMONIZ KLEENER** **SIMONIZ POLISH**

*AGENTS —*

**Messrs. Aspinwall & Co, Ltd**
MANGALORE



"ಬಿಟ್ಟಿ" "ಪುಗಸಟ್ಟೆ" "ಬಿಟ್ಟಿ"

**ಜೇಬಿನ ಲಿವರ್ ಗಡಿಯಾರವೂ ಕೈ ಗಡಿಯಾರವೂ ಬಿಟ್ಟಿ**

**೩ ತಿಂಗಳೊಳಗಾಗಿ ೩೦೦೦ ಗಡಿಯಾರಗಳನ್ನು ಬಿಟ್ಟಿಯಾಗಿ ಕೊಟ್ಟಿದ್ದೇವೆ**

ರೂ. ३-೧೫-೦ ಬೆಲೆ ಬಾಳುವ ನಮ್ಮ ರಬ್ಬರ್ ದಿ ಫೌಂಟನ್ ಪೆನ್ನನ್ನು ಕೊಂಡುಕೊಳ್ಳುವ ನಮ್ಮ ಗಿರಾಕಿಗಳಿಗೆ ಜೇಬಿನ ಲಿವರ್ ಗಡಿಯಾರವನ್ನು ಮುಫತ್ತಾಗಿ ಕೊಡುತ್ತೇವೆ. ಒಂದೇ ಸಲ ಎರಡು ಫೌಂಟನ್ ಪೆನ್ನುಗಳನ್ನು ಕೊಳ್ಳುವವರಿಗೆ ರೂ. ७-೧೨-೦ ಬೆಲೆಯು ಮತ್ತು ಲಿವರ್ ಕೈ ಗಡಿಯಾರವೂ ಬಿಟ್ಟಿಯಾಗಿ ಕೊಡುವೆವು. ಈ ಪೆನ್ನು ಭಂಗಾರದ ನಿಬ್ಬು ಉಳ್ಳದ್ದಾಗಿರುವ ಅಚ್ಚುಕಟ್ಟಾದ ಡಾಯಮಂಡ ನಯವಾಗಿ ಬರೆಯುವಂಥ, ಜಾರ್ಜ ಚಕ್ರವರ್ತಿಗಳಿಂದ ಹೊಗಳಲ್ಪಟ್ಟದ್ದಾಗಿಯೂ, ಖರಾಬಾಗಿ ಶಾಯಿಯನ್ನು ತೋರಿಸುವುದಾಗಿಯೂ ಇದೆ. ಇವಕ್ಕೆ ೫ ವರ್ಷ ಗ್ಯಾರಂಟಿ ಕೊಡುತ್ತೇವೆ.

ಪತ್ರವ್ಯವಹಾರಗಳು ಇಂಗ್ಲೀಷಿನಲ್ಲಿ ಬರೆಯಬೇಕು.

**Imperial Watch Company.**
(S) Post No. 12, BOMBAY.



## ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

**ಶಾರದಾ ಛಾಪಖಾನೆ,**
ರಥಬೀದಿ, ಮಂಗಳೂರು



## ಮುದಲ್ ತರವಾದ ಬೆಳ್ಳಿ ಉಡಿದಾರ ಹಗ್ಗ.

ESTD 1896.

ಅನೇಕ ವರುಷದಿಂದ ನಾವು ಬೆಳ್ಳಿ **ಉಡಿದಾರಗಳನ್ನು ತಯಾರುಮಾಡಿ** ಅನೇಕ ವ್ಯಾಪಾರಿಗಳಿಗೂ ಕಳುಹಿಸಿ ಬರುತ್ತೇವೆ ನೀಡಿಸಿದ ಅನುಭವದ ಮೇಲೆ ನಮ್ಮ ಉಡಿದಾರ ಹಗ್ಗಗಳು **ಕೆಲಸ ಶ್ರೈಸಲ್ಲಿಯೂ, ಧಾರಣೆ ಸಂಸದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ** ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದುದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳನ್ನು ಕಳುಹಿಸುತ್ತೇವೆ ಒಂದು ಸಲ ನಮ್ಮಲ್ಲಿಂದ ತರಿಸಿ ನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು ಬೆಳ್ಳಿ ಧಾರಣೆ ಪ್ರಕಾರ ಸಂಕುಗಳಿಗೆ ಧಾರಣೆ ಹಾಕಿ ಕಳುಹಿಸುತ್ತೇವೆ

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಸರಾಫು ವ್ಯಾಪಾರಿ,
ಶಿವ್ವಾಪೇಟೆ, ಸೇಲಂ, (ದಕ್ಷಿಣ ಇಂಡಿಯಾ)



# Grand Clearing Sale!

ಜಗತ್ಪ್ರಸಿದ್ಧವಾದ ನಮ್ಮ "ಒಟ್ಟೊ ಫುಲಾರಾಮ" ಸುಗಂಧದ ಐದು ಬಾಟಲಿಗಳನ್ನು ಮೂರು ರೂಪಾಯಿಗಳಿಗೆ ಕೊಳ್ಳುವವರು ಈ ಕೆಳಗಿನವುಗಳನ್ನು ಧರ್ಮಾರ್ಥವಾಗಿ ಪಡೆಯುವರು —

1 ಕರವಸ್ತ್ರ, 1 ಫೌಂಟನ್‌ಪೆನ 1 ಕ್ಲಿಪ್, 1 ಹರಿತವಾದ ಚೂರಿ 1 ಸುಗಂಧ ಸಾಬೂನ, 1 ಅಂದವಾದ ಸಿಗರೇಟು ಕೇಸು 12 ಉತ್ತಮ ಮೊನೆಗಳು, 1 ಕೋಪಿಂಗ್ ಪೆನ್ಸಿಲು 1 ಸೆಟ್ಟು ಗಿಲ್ಟಿನ ಗುಂಡಿಗಳು, 1 ಕನ್ನಡಿ, 1 ಬಾಚಣಿಗೆ, 1 ಕಣ್ಣಂ 1 ಕ್ಷೌರದ ಬ್ರಶ್ಶು, 1 ಹರಳಿನ ಉಂಗುರ.

ಅಂಚೆವೆಚ್ಚ ಅಣೆ 0—8—0
ಇಂಗ್ಲೀಷಿನಲ್ಲಿ ಬರೆಯಿರಿ

**Indian Stores**
*5 Beadon Street,*
CALCUTT A



**ಒಮ್ಮೆ ಪರೀಕ್ಷಿಸಿರಿ! ತೃಪ್ತಿ ಹೊಂದಿರಿ!**

## ದಿ ಕ್ರೌನ್ ರಬ್ಬರ್ ಸ್ಟಾಂಪು ಕಂಪೆನಿ,

ಹೆಡ್ಡ್ ಆಫೀಸು ಬಲ್ಮಠ ರಸ್ತೆ, ಕಂಕನಾಡಿ ಪೋಸ್ಟು,
ಮಂಗಳೂರು, ದ ಕನ್ನಡ

## ರಬ್ಬರು ಮೊಹರುಗಳು

ಇಲ್ಲಿ ಉತ್ತಮವಾದ ಎಯರ್‌ಕುಶನ್ ರಬ್ಬರು ಮೊಹರುಗಳೂ, ಹಿತ್ತಾಳೆ ಇತ್ಯಾದಿ ಲೋಹಗಳಲ್ಲಿಯೂ, ಮಾರ್ಬಲ್‌ನಲ್ಲಿಯೂ, ಕೆತ್ತನೆಯ ಕೆಲಸವನ್ನೂ ಎಷ್ಟು ನಾಜೂಕಾಗಿ ಕ್ಷಿಪ್ರ ಸಮಯದಲ್ಲಿ ಮಾಡಿಕೊಡುತ್ತದೆ

ಹೆಚ್ಚಿನ ಮಾಹಿತಿಯನ್ನು ಪತ್ರಮೂಲಕವಾಗಲೀ, ಆಫೀಸಿನಲ್ಲಿ ಸ್ವತಃ ಬಂದಾಗಲೀ ತಿಳಿದುಕೊಳ್ಳಿರಿ

ಎಮ್ ದೇವದಾಸ ಕಿಣಿ,
ಮೆನೇಜಿಂಗ ಪ್ರೊಪ್ರೈಟರ್.

## ಸುದ್ದಿ ವಿಚಾರಗಳು

### ಪಾರ್ಲಿಮೆಂಟಿನ ಅಧಿವೇಶನದಲ್ಲಿ ಮಹಾರಾಜರ ಭಾಷಣ.

ಈ ಸಾರಿಯ ಪಾರ್ಲಿಮೆಂಟನ್ನು ಮಹಾರಾಜರು ತೆರೆದರು. ಇವರು ಎಲ್ಲಾ ತರದ ರಾಜವೈಭವಗಳಿಂದ ಹೌಸ್ ಒಫ್ ಲೋರ್ಡ್ಸ್ ಸಭಾಮಂದಿರಕ್ಕೆ ಹೋಗಿ ತಮ್ಮ ಭಾಷಣವನ್ನು ಕೊಟ್ಟರು. ಈ ಭಾಷಣದಲ್ಲಿ ಮುಖ್ಯವಾಗಿ ಇಂಪೀರಿಯಲ್ ಕೊನ್ಫರೆನ್ಸಿಗೂ ರೌಂಡ್ ಟೇಬಲ್ ಕೊನ್ಫರೆನ್ಸಿಗೂ ಬಂದಿರುವ ಬ್ರಿಟಿಷ್ ಸಾಮ್ರಾಜ್ಯದ ಎಲ್ಲಾ ಪ್ರತಿನಿಧಿಗಳು ಕೂಡಿ ಒಂದುದಕ್ಕಾಗಿ ಸಂತೋಷಪಡುತ್ತೇನೆಂದೂ, ಇಂಗ್ಲೆಂಡಿನಲ್ಲಿ ಕೆಲಸವಿಲ್ಲದವರ ಸಂಖ್ಯೆಯು ಹೆಚ್ಚಾಗುತ್ತಾ ಬರುವುದರಿಂದ ಅದನ್ನು ಕಡಿಮೆಮಾಡಲು ಆಲೋಚನೆಗಳು ನಡಿಯುತ್ತಲಿವೆಯೆಂದೂ, ರೌಂಡ್ ಟೇಬಲ್ ಕೊನ್ಫರೆನ್ಸನ್ನು ತಾನೇ ತೆರಿಯುವೆನೆಂದೂ ಇಂಡಿಯದ ಜನರಿಗೆ ಯಾವ ತರದ ರಾಜ್ಯಭಾರವು ಸಮಂಜಸವಾಗಿದೆ ಎಂದು ಆ ಮಹಾ ಸಭೆಯು ಅಂತ್ಯದಲ್ಲಿ ನಿರ್ಣಯಿಸಲ್ಪಡುವದೆಂದೂ, ಬ್ರಿಟಿಷ್ ಸಾಮ್ರಾಜ್ಯದ ವ್ಯಾಪಾರ, ವಹಿವಾಟು, ಕೈಗಾರಿಕೆಗಳು ಅಭಿವೃದ್ಧಿ ಮಾಡಲು ಸಾಧನೆಯು ನಡಿಯುತ್ತಲಿದೆ ಎಂದೂ, ಪೆಲೆಸ್ಟೈನ ದೇಶದ ನಿವಾಸಿಗಳ ಮನಸ್ಸು ಸಮಾಧಾನಪಡಿಸಲು ಸಾಧನೆಯೂ ನಡಿಯುತ್ತಲಿದೆ ಎಂದೂ ಮುಂತಾಗಿ ಹೇಳಿದರು. ಲೇಬರ ಸರಕಾರವು ೧೯೨೯ರಲ್ಲಿ ಸ್ಥಾಪನೆಯಾದರೂ ಮಹಾರಾಜರವರ ಅಸ್ವಸ್ಥದ ಸಮ್ಮಂಧ ಕಳೆದ ಸಾರಿಯ ಪಾರ್ಲಿಮೆಂಟಿನ ಅಧಿವೇಶನವನ್ನು ತೆರಿಯಲು ಅವರಿಗೆ ಸಾಧ್ಯವಾಗಲಿಲ್ಲ. ಈ ವರುಷ ತೆರೆದರು. ಇನ್ನು ಮುಂದೆ ನಡಿಯುವ ಪಾರ್ಲಿಮೆಂಟು ಕೆಲಸದಲ್ಲಿ ರಾಜಕೀಯ, ಆರ್ಥಿಕ ಮತ್ತು ಸಾಮ್ರಾಜ್ಯಕ್ಕೆ ಸಮ್ಮಂದಪಟ್ಟ ಹಲವು ವಿಷಯಗಳ ಕುರಿತು ಲೇಬರ ಸರಕಾರವು ಯಾವ ರೀತಿಯಲ್ಲಿ ಸುಧಾರಿಸುವದೊ ನೋಡಲಿಕ್ಕಿದೆ. ಕನ್ಸರ್ವೇಟಿವ್ ಮೆಂಬರರ ಸಂಖ್ಯೆಯು ಅಧಿಕವಾಗಿದ್ದರೂ ಅವರಲ್ಲಿ ಒಂದಕ್ಕೊಂದು ವಿರೋಧವಾದ ಹಲವು ಪಾರ್ಟಿಗಳಿವೆ. ಪೆಲೆಸ್ಟೈನಿನ ವಿಷಯ ಲೇಬರ ಮೆಂಬರರೊಳಗೆ ಕಲಹವಿದೆ. ಇಂಡಿಯದ ಸ್ಥಿತಿಯು ಕಠಿಣಾವಸ್ಥೆಗೆ ಒಂದಿದೆ ಎಂದೂ 'ಪಾರ್ಲಿಮೆಂಟಿನ ಎಲ್ಲಾ ಪಾರ್ಟಿಯವರಿಗೂ ಈಗ ತಿಳಿದಿದೆ. ಈ ತರದ ಕಷ್ಟಗಳಿರುವಾಗಲೂ, ಇಂಪೀರಿಯಲ್ ಕೊನ್ಫರೆನ್ಸ ನಡಿಯುತ್ತಿರುವಾಗಲೂ, ರೌಂಡ್ ಟೇಬಲ ಕೊನ್ಫರೆನ್ಸ ಹತ್ತಿರ ಬರುವಾಗಲೂ ಈಗಿನ ಪಾರ್ಲಿಮೆಂಟನ್ನು ರದ್ದುಪಡಿಸಿ ಹೊಸ ಪಾರ್ಲಿಮೆಂಟು ಉಂಟುಮಾಡುವದು ಸರಿಯಲ್ಲವೆಂದು ಪತ್ರಿಕೆಗಳು ಹೇಳುತ್ತಿರುವವು.

### ಕೊನ್ಫರೆನ್ಸಿಗೆ ಹೋದ ಇಂಡಿಯದ ಪ್ರತಿನಿಧಿಗಳು

ಇಂಡಿಯದಿಂದ ಹೋಗಲಿದ್ದ ಮಹಾರಾಜರಲ್ಲಿ ಒಬ್ಬರು ರೋಗ್ಯದ ಸಮ್ಮಂಧ ಬರೋಡಾದ ಮಹಾರಾಜರು ತನ್ನ ದಿವಾನರನ್ನ ಕಳುಹಿಸಿದರು. ಪಟಿಯಾಲಾ ಮಹಾರಾಜರು ಮಹಾರಾಜರುಗಳ ಪ್ರತಿನಿಧಿಯಾಗಿ ಪೆರಿಸ್ ವರೆಗೆ ಹೋದರು. ಈಗ ಅಸ್ವಸ್ಥರಲ್ಲಿರುವರು. ಅದಲ್ಲ ತನ್ನ ಪ್ರಜೆಗಳು ತನಗೆ ವಿರೋಧವಾಗಿ ಚಳವಳಿ ಮಾಡುವುದರಿಂದ ಇಂಡಿಯಕ್ಕೆ ಹಿಂತಿರುಗಿ ಹೋಗಲಿಕ್ಕೆ ಅಪ್ಪಣೆ ಬೇಕೆಂದು ಕೇಳುತ್ತಾರಂತೆ. ಮಹಮದಲ್ಲಿಯವರು ಪೆರಿಸ್ ಪಟ್ಟಣದಲ್ಲಿ ಅಸೌಖ್ಯದಿಂದಿರುವರು. ಸೌಖ್ಯವಾದರೆ ಸಭೆಗೆ ಹೋಗುವರಂತೆ. ಜೋರ್ಜ ಮಹಾರಾಜರು ಇಂಡಿಯದ ಪ್ರತಿನಿಧಿಗಳಿಗೂ ಸಾಮ್ರಾಜ್ಯದ ಪ್ರತಿನಿಧಿಗಳೂ ಮುಂತಾದವರಿಗೆ ಒಂದು ಸಾವಿರ ಜನರಿಗೆ ಸಹಸ್ರ ಭೋಜನವಿತ್ತರು. ಈ ಮಧ್ಯದಲ್ಲಿ ಇಂಡಿಯದಲ್ಲಿ ರಾಜ್ಯಭಾರ ಸರಿಯಿಲ್ಲದೆ ಎಲ್ಲಾ ಹಾಳಾಯಿತೆಂದು ಲೋರ್ಡ ಲೊಯಿಡರ ಗ್ರಾಜಿ ಲೋರ್ಡ ಇರ್ವಿನರ ಡಿಸ್‌ಪೆಚ್ ಬೇಗನೇ ಹೊರಬೀಳಲಿರುವದು.

### ಮದರಾಸು ಮಂತ್ರಿಮಂಡಲದ ಕಾರ್ಯನಿರ್ಮಾಣ.

ಮಂತ್ರಿಗಳು ಚುನಾಯಿಸಲ್ಪಟ್ಟು ಪ್ರಮಾಣಮಾಡಿ ಮಂತ್ರಿಪದವಿಯನ್ನು ವಹಿಸಿಕೊಂಡ ಮೇಲೆ ಇವರು ತಾವು ವಹಿಸಿಕೊಳ್ಳುವ ಇಲಾಖೆಯ ವಿಷಯ ಆಲೋಚಿಸಿ (೧) ಮುಖ್ಯಮಂತ್ರಿಯವರಾದ ದಿವಾನ್ ಬಹದ್ದೂರ ಮುನ್ನಿಸ್ವಾಮಿನಾಯ್ಡರವರು ಲೋಕಲ್ ಸೆಲ್ಫ ಗವರ್ನಮೆಂಟ ಗ್ರಾಮ ಪಂಚಾಯತುಗಳು, ಮತಸಮ್ಮಂಧವಾದ ಸಂಸ್ಥೆಗಳು, ಮುನಿಸಿಪಾಲಿಟಿಗಳಲ್ಲಿಯ ಲ್ಯಾಟ ಮತ್ತು ಫಿಡರ್ ರೈಲುವೇ ಮತ್ತು ಟ್ರೇಮುವೇ ಆಹಾರ ಇಲಾಖೆ, ವೈದ್ಯ ಇಲಾಖೆ, ಆರೋಗ್ಯ, ಜನನ ಮರಣ ಇಲಾಖೆಗಳನ್ನು ವಹಿಸುವರು. ಎರಡನೇ ಮಂತ್ರಿಯವರಾದ ರಾ। ಪೊನ್ನಂಬಲ ತ್ಯಾಗರಾಜನವರು ರಿಜಿಸ್ಟ್ರೇಶನ್, ಬೇಸಾಯ ಗೋವೈದ್ಯ ಇಲಾಖೆ, ಕೊ-ಒಪರೇಟಿವ್, ಪಬ್ಲಿಕ್ ವರ್ಕ್ಸ್, ತೂಕಗಳ ಇಲಾಖೆಗಳನ್ನು ವಹಿಸಿಕೊಂಡರು. ಮೂರನೇ ಮಂತ್ರಿಯವರಾದ ದಿವಾನ್ ಬಹದೂರ ಸುಬ್ಬರಾಯಲು ಕುಮಾರಸ್ವಾಮಿ ರೆಡ್ಡಿಯಾರರು ಅಬಕಾರಿ ವಿದ್ಯೆ, ಕೈಗಾರಿಕೆ, ಮೀನು, ಮ್ಯುಜಿಯಮ್, ಜ್ಯುವೊಲೊಜಿಕಲ್ ಗಾರ್ಡನ ಇಲಾಖೆಗಳನ್ನು ವಹಿಸಿಕೊಂಡಿರುವರು. ಒಟ್ಟಾರೆ ಮದರಾಸು ಸರಕಾರಕ್ಕೆ ಒಳಪಟ್ಟ ೯೨ ಇಲಾಖೆಗಳಲ್ಲಿ ೪೪ ಮಧ್ಯವರ್ತಿ ಸರಕಾರಕ್ಕೆ ಸಮಂಧಿಸಿದವುಗಳು ಉಳಿದ ೪೮ ಇಲಾಖೆಗಳಲ್ಲಿ ೩೦ ಇಲಾಖೆಗಳು ರಿಜರ್ವ ಸಬ್ಜೆಕ್ಟುಗಳಾಗಿದ್ದು ಗವರ್ನರ ಮತ್ತು ಎಕ್ಸಿಕ್ಯುಟಿವ್ ಕೌನ್ಸಿಲರ ಕೈಕೆಳಗಿದೆ. ಮಂತ್ರಿಗಳ ಕೈಕೆಳಗೆ ಇರುವ ಇಲಾಖೆಗಳು ೧೮ ಮಾತ್ರ. ಇವರು ಮಾಡಬೇಕಾದ ಕೆಲಸಗಳು ಹಲವು ಇವೆ. ಮೊದಲನೇದಾಗಿ ಇಂಡಿಯಕ್ಕೆ ಡೊಮಿನಿಯನ್ ಸ್ಟೇಟಸ್ ಸಿಕ್ಕುವಂತೆ ಸಾಧಿಸುವದು, ಓರ್ಡಿನೆನ್ಸುಗಳನ್ನೂ ಇತರ ಎಲ್ಲಾ ತರದ ಬಲಾತ್ಕಾರದ ಕಾನೂನುಗಳನ್ನು ತೆಗೆದುಹಾಕುವಂತೆ ಮಾಡುವದು, ಸ್ವದೇಶಿ ವಸ್ತುಗಳನ್ನು ಖಾದಿಯನ್ನು ಪ್ರಚಾರಕ್ಕೆ ತರುವದು, ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಕೊಡಿಸಲಿಕ್ಕೆ ಅನುಕೂಲತೆ ಮಾಡುವದು, ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಹೆಚ್ಚಿಗೆ ಧನ ಸಹಾಯಮಾಡುವದು ಭೂಕಂದಾಯವನ್ನು ನ್ಯಾಯವಿಧಾಯಕ ಸಭೆಯ ಕೈಕೆಳಗೆ ತರುವದು ಕುಡಿಕತನ ನಿಲ್ಲಿಸುವದು, ಇವುಗಳನ್ನು ಈಗಿನ ಮಂತ್ರಿಸಭೆಯವರು ಮತ್ತು ನ್ಯಾಯವಿಧಾಯಕ ಸಭೆಯವರು ತಮ್ಮ ಆಯುಷ್ಯಕಾಲದ ಒಂದೆರಡು ವರುಷಗಳಲ್ಲಿ ಮಾಡಬೇಕು ಇಲ್ಲದಿದ್ದರೆ ಕಳೆದ ಮಂತ್ರಿ ಸಭೆಯವರು ಮಾಡಿದ್ದೇನೂ ಇಲ್ಲ, ಇವರು ಮಾಡಿದ್ದೇನೂ ಇಲ್ಲ ಎಂಬ ಆಕ್ಷೇಪಣೆಗೆ ಗುರಿಯಾಗುವರು.

### ಬ್ರಿಟಿಷ್ ಎಂಪಾಯರ್ ಕುಷ್ಠ ರೋಗಿಗಳ ನಿವಾರಣಾ ಸಂಘ.

ಕುಷ್ಠರೋಗವು ಭೂಲೋಕದಲ್ಲಿಯೇ ಇಲ್ಲದಂತೆ ಮಾಡುವುದಕ್ಕಾಗಿ ಮೇಲಿನ ಸಂಘದವರು ಭೂಲೋಕದ ಎಲ್ಲಾ ಬ್ರಿಟಿಷ ರಾಜ್ಯಗಳಲ್ಲಿಯೂ ಸಾಧಿಸುತ್ತಿರುವರು. ಕುಷ್ಠ ರೋಗವು ಶರೀರದಲ್ಲಿ ಬೆಳೆದು ಹೊರಗೆ ಬೀಳಬೇಕಾದರೆ ೩೦ ವರುಷಗಳಾಯಿದೆ ಬೇಕೆಂಬ ಹಳೆ ಸೂತ್ರವು ಸರಿಯಲ್ಲ. ಈ ರೋಗವು ೩ ವರುಷ ಹೆಚ್ಚಾದರೆ ೫ ವರುಷಗಳಲ್ಲಿ ಬೆಳೆದು ಹೊರಗೆ ಕಾಣಿಸಿಕೊಳ್ಳುತ್ತದೆ. ಇದನ್ನು ಗುಣಮಾಡಲು ಸಾಧ್ಯವಿದೆ ಎಂದು ಈ ಸಂಘದ ಸೆಕ್ರೆಟರಿಯವರಾದ ಕೊಡರೇನರೂ ಮುಂತಾದವರು ಹೇಳುತ್ತಿರುವರು. ಇಂಡಿಯಾ ಸರಕಾರವು ಈ ಸಂಘದವರಿಗೆ ಸಹಾಯಮಾಡಲು ಒಪ್ಪಿ ಇಂಡಿಯದ ಎಲ್ಲಾ ಭಾಗಗಳಿಗೂ ಇದರ ಪರಿಶೋಧನೆಗಾಗಿ ಡಾಕ್ಟರರನ್ನು ಕಳುಹಿಸಿರುವರು. ಅಂಥಾ ಒಬ್ಬ ವೈದ್ಯ ದಕ್ಷಿಣಕನ್ನಡ ಜಿಲ್ಲೆಯ ಎಲ್ಲಾ ಊರುಗಳಲ್ಲಿಯೂ ಸಂಚರಿಸಿ ಶೋಧನೆಮಾಡುತ್ತಿರುವದು ಮಾತ್ರವಲ್ಲ ಸಭೆಕೂಡಿಸಿ ಮೆಜಿಕ್ ಲೆಂಟರ್ನ ಮೂಲಕ ಈ ರೋಗದ ಅವಸ್ಥೆಗಳನ್ನು ತೋರಿಸಿ ಭಾಷಣಕೊಟ್ಟು ವಿವರಿಸಿ ಹೇಳುತ್ತಿರುವರು. ಮಹಾಭಯಂಕರವಾದ ಈ ರೋಗನಿವಾರಣೆಗೆ ಹೊರಟಿರುವ ಈ ಸಂಘದವರಿಗೆ ಎಲ್ಲಾ ತರದ ಸಹಾಯಮಾಡುವುದು ವಿಹಿತವಾಗಿದೆ.

### ದಕ್ಷಿಣ ಇಂಡಿಯದ ನೆರೆಹಾವಳಿ.

ಕಳೆದ ಒಂದು ವಾರದಿಂದ ತಮಿಳು, ಆಂಧ್ರ ದೇಶಗಳಲ್ಲಿ ಮಳೆ, ನೆರೆ ಬಂದು ವಿಶೇಷ ಹಾವಳಿಯುಂಟಾಗಿದೆ. ತಿರುಚಿನಾಪಳ್ಳಿ ತಂಜಾವೂರು ಜಿಲ್ಲೆಗಳಲ್ಲಿಯ ನಿವಾಸಿಗಳ ಅವಸ್ಥೆಯನ್ನು ಹೇಳತೀರದು. ನಿಲ್ಲಲು ಮನೆಗಳಿಲ್ಲ, ಬೆಳೆದ ಪೈರು ನೆರೆಯ ಪಾಲಾಯಿತು. ರೈಲು ಮಾರ್ಗಗಳು ಹಾಳಾಗಿ ಸೌತ್ ಇಂಡಿಯನ್ ರೈಲುವೆ ಕಂಪೆನಿಗೂ, ಮದ್ರಾಸು ಸದರ್ನ್ ಮಾರಾಟ ರೈಲುವೆಗೂ, ಅನೇಕ ಸೇತುವೆಗಳೂ, ಕಲ್ವರ್ಟುಗಳೂ, ರೈಲು ಮಾರ್ಗವೂ ಕೊಚ್ಚಿ ಹೋಗಿ ಲಕ್ಷಾಂತರ ರೂಪಾಯಿ ನಷ್ಟವಾಗಿದೆ. ಮದರಾಸಿನಿಂದಲೂ ಕಲ್ಕತ್ತದಿಂದಲೂ ಟಪಾಲು ಚಲಾವಣೆ ಸರಿಯಿಲ್ಲ. ಗವರ್ನಮೆಂಟ ಬೆನಕೈಟಿಂಗ್ ಹೋಲ್ಸಿ ಸಿಡಿಲು ಬಡೆದು ಸ್ವಲ್ಪ ಜಖಂ ಆಗಿದೆ. ನೀಲಗಿರಿಯ ಸರಕಾರಿ ಕೊರಡ್ಯಾಟ ಫೆಕ್ಟರಿಗೆ ಲಕ್ಷಾಂತರ ರೂಪಾಯಿ ನಷ್ಟ. ರೈಲುವೆ ಚಲಾವಣೆ ಸರಿಯಾಗಲು ಮೂರು ತಿಂಗಳು ಬೇಕಾಗುವದಂತೆ. ಬಡಜನರಿಗೆ ಕಷ್ಟ ಒಂದರೂ ಕೂಲಿ ಕೆಲಸ ಒದಗುವದು. ಒಕ್ಕಲುಗಳು ಧನಿಗೆ ಕೊಡುವ ಗಂಟು ಹೋಯಿತು. ಧನಿಗಳಿಗೆ ಗೇಣಿ ಸಿಕ್ಕದೆ ಸರಕಾರಕ್ಕೆ ಕಂದಾಯ ಕೊಡುವುದು ಕಷ್ಟವಾಯಿತು. ವ್ಯಾಪಾರ ಹಾಳಾಯಿತು. ಇನ್‌ಕಮಟೆಕ್ಸ ನಷ್ಟವಾಯಿತು.

## ನೋಟುಗಳು
## NOTE....S

ಮುಂಬಾಯಿಯಲ್ಲಿ ಪ್ಲಾಥಿಗಳ ಆವೇಶ, ಇನ್ನೂ ಹೆಚ್ಚಾಗುತ್ತಿದೆಯಲ್ಲದೆ, ಕಡಿಮೆಯಾದದ್ದು, ಕಂಡುಬರುವುದಿಲ್ಲ, ಚಳವಳವನ್ನು ಶಾಂತಪಡಿಸುವ ಪೋಲೀಸರು, ಮಹಿಳೆಯರ ಕಡೆ, ಕ್ರಮ ತಪ್ಪಿ ನಡೆಯಲು ಪ್ರಾರಂಭ.

* * * *

ಕ್ರಮ ತಪ್ಪಿದ್ದು ಮತ್ತೇನಲ್ಲ, ಕೈದು ಮಾಡಿ ಪೋಲೀಸ ಲೊಕೇಶನ್‌ನಲ್ಲಿದ್ದ ಇಪ್ಪತ್ತ ಹುಡಿಗಿಯರನ್ನು ನಡು ರಾತ್ರೆ ಹೊರಗೆ ಕರೆದದ್ದು, ಹುಡಿಗಿಯರ ನಂಬ್ರ ತನ್ನಿಯಾಗುವಾಗ, ಇದು ಕೋರ್ಟಿನಲ್ಲಿ ರುಜುವಾತುಯಾಗಿ ರಿಕಾರ್ಡು ಯಾಯಿತು. ಈ ಸಮ್ಮಂಧ ಗಲಾಟೆವೇನೂ ಹೆಚ್ಚಿಗಾಗಿದೆ. ಹೆಚ್ಚಿನ ಸಂಗತಿ ಮುಂದಿನಿಂದ.

* * * *

ವಿಲಾಯತಿಯಲ್ಲಿ, ಪ್ರಾರಂಭವಾಗುವ ಚಕ್ರಗೋಷ್ಟಿಯ ದಿವಸಗಳು ಹತ್ತಿರ ಬಂದವು, ಈಗಾಲೇ, ಹಲವು ಪಕ್ಷಗಳ ಚರ್ಚೆಗಳು ನಡಿಯುತ್ತಾ ಇವೆ. ನಮ್ಮ ಇಂಡಿಯದ ಪ್ರತಿನಿಧಿಗಳಿಗೆ ಮೊಟಾರು ಕಾರುಗಳ ತಯಾರಿಸುವ ಕಾರ್ಖಾನೆಗಳನ್ನು ತೋರಿಸಿದರು.

* * * *

ನೋಡಿದ್ದ ತಡ ಹಿಂದುಸ್ಥಾನದಲ್ಲಿ ಕೂಡ ಬೇಗನೆ ಕಾರುಗಳು ತಯಾರಿಸಿ ದಿವಸಗಳು ಬಂದೀತು ಎಂದು ಒಬ್ಬರು, ಹೇಳಿಯೇ ಬಿಟ್ಟರು.

* * * *

ಚಕ್ರಗೋಷ್ಟಿಗೆ ಹೋದವರಿಗೆ ಅಲ್ಲಿಯ ಸುಂದರ ಲಾವಣ್ಯದಿಂದ ತುಂಬಿದ ಕೆಲವು ಗಾರ್ಡನ್‌ಗಳನ್ನು ಮತ್ತು ಕಲವು ವರ್ಕಶೋಪುಗಳನ್ನು ತೋರಿಸಿ ಬಿಟ್ಟರೆ, ಚಕ್ರಗೋಷ್ಟಿಗೆ ಹೋದ ಪ್ರತಿನಿಧಿಗಳು ಹಿಂದುಸ್ಥಾನಕ್ಕೆ, ಬಂದಕೂಡಲೆ, ಮೊದಲು ತಾವು ನೋಡಿದ ವಿಷಯ ಹೇಳಿ ಕೊನೆಗೆ ಎರಡ ಮಾತುಗಳಲ್ಲಿ ಚಕ್ರಗೋಷ್ಟಿಯ ವಿಷಯ ಮುಗಿಸಬಹುದು.

* * * *

ವಿಲಾಯತಿಯಿಂದ ಬಂದ ಟ್ರೈಲ್ಸ್‌ಫೋರ್ಡರು ಗುಜರಾಥವನ್ನು ಸುತ್ತಾಡಿದರಂತೆ. ಕರ ವಸೂಲುಮಾಡುವ ಕ್ರಮ ನೋಡಿದರಂತೆ. ತನ್ನ ಡೈರಿಯಲ್ಲಿ ದಾಖಲುಯಾಯಿತು. ಈ ಡೈರಿಯನ್ನು ಇವರ ಜನ್ಮಸ್ಥಾನದಲ್ಲಿ ಬಿಚ್ಚುವಾಗ ಬರೆದ ಅರ್ಥ ಬೇರೆಯಾಗುತ್ತದೊ ನೋಡಲಿಕ್ಕಿದೆ.

* * * *

ಉಡ್ಪಿ ತಾಲೂಕಿನಲ್ಲಿ ಶೇಂದಿ ಮಾರಾಟ ಕಡಿಮೆ ನಿಂತಿದಂತೆ ಇದಕ್ಕೆ ಪ್ರತಿಯಾಗಿ ಈರ್ವ ಒಲಂಟಿಯರರಿಗೆ ನೋಟಿಸ್ ಜಾರಿಯಾಗಿದೆ. ಇನ್ನು ಅವರು ಅರಮನೆಗೆ ಹೋಗುವದ ತಡ.

* * * *

ಮುಂಬಾಯಿಯಲ್ಲಿ ಈ ವರ್ಷ ಕಾರ್ತಿಕ ಮಾಸದ ಉತ್ಸವಗಳಿಗೆ ಹೊಂದೇಶದವರ ಪಟಾಕಿ ವಗೈರೆಗಳು ಪೂರಾ ಬೊಯ್‌ಕೊಟ್ ಮಾಡಿದ್ದರು. ಅಂತೆಯೇ ನಮ್ಮ ಮಂಗಳೂರಿನಲ್ಲಿ ಬೊಯ್‌ಕೊಟ್‌ಮಾಡಬೇಕೆಂದು ಕರಪತ್ರಗಳನ್ನು ಹಂಚಿದ್ದರು.

* * * *

ಹಂಚಿದ್ದರ ಫಲ ಹೋದ ವರುಷ ಖರ್ಚಾದ ಪಟಾಕಿಯ, ಅರ್ಧಾಂಶ ಈ ವರುಷ ಖರ್ಚಾಗಲಿಲ್ಲವಂತೆ.

* * * *

ಒಂಟಿವಾಳದ ತುಂಬೆಯಲ್ಲಿ ಒಂದು ಯುರಿನಲ್ ಬೇಕಂತೆ ಹಣದ ಅಭಾವದಿಂದ ಆಸ್ಪತ್ರೆಯಲ್ಲಿ ಹತ್ತಾರು ಹಾಕುವ ಕೆಲಸ ಬಾಕಿ ಇಟ್ಟ ತಾಲೂಕು ಬೋರ್ಡಿನವರ ಹತ್ತಿರ ಯುರಿನಲ್ ಕೇಳುವುದು ಕಷ್ಟೆಂಬುದು ಈ ಅತ್ಮೀದಾರರಿಗೆ ಹೊಳೆಯಲಿಲ್ಲವೆ.

* * * *

### ಗಡಿ ಪ್ರಾಂತ್ಯ ಮತ್ತು ಅಫಘಾನಿಸ್ಥಾನ.

ವಾಯುವ್ಯ ಗಡಿ ಪ್ರಾಂತ್ಯದ ಸರಕಾರವು ರಾಜಿಗಾಗಿ ಅಫ್ರಿದಿಗಳನ್ನು ಬಂದಮಾಡಿದ್ದರು. ಯಾವ ತರದ ರಾಜಿ ಪ್ರಸ್ತಾಪವೂ ಸಾಧ್ಯವಾಗದೆ ಪ್ರತಿನಿಧಿಗಳಾಗಿ ಬಂದಿದ್ದ ೧೫೦೦ ಮಂದಿ ಅಫ್ರಿದಿಗಳು ಸ್ವದೇಶಕ್ಕೆ ಹಿಂತಿರಳಿದರು. ಯೌವನ ಪ್ರಾಯದ ಅಫ್ರಿದಿಗಳು ರಾಜಿಗೆ ಬರಲಿಲ್ಲ. ಅವರು ಸೈನ್ಯ ಕೂಡಿಸಿ ಇನ್ನೊಮ್ಮೆ ಮುಂದರಿಸಿ ಬರಲು ಸಾಧಿಸುತ್ತಿರುವರು. ಇಂಡಿಯಾ ಸರಕಾರವೂ ಒಂದೋಬಸ್ತಿಗಾಗಿ ಸೈನ್ಯವನ್ನು ಗಡಿಯಲ್ಲಿ ಅಗತ್ಯವಿರುವಲ್ಲಿ ನಿಲ್ಲಿಸಿರುವರು. ವಿಮಾನಗಳಲ್ಲಿ ಅಫ್ರಿದಿಗಳಿರುವ ಸ್ಥಳಗಳನ್ನು ಶೋಧಿಸುತ್ತಿರುವರು. ಈ ಮಧ್ಯದಲ್ಲಿ ಅಫಘಾನಿಸ್ಥಾನದ ಖಾಜನಿಯಲ್ಲಿರುವ ಅಫಘಾನ ಪ್ರಜೆಗಳು ದಂಗೆ ಎಬ್ಬಿಸಿರುವರಂತೆ. ರಾಜಧಾನಿಯಿಂದ ಸೈನ್ಯ ಹೋಗಿದೆಯಂತೆ. ಗಡಿ ಪ್ರಾಂತ್ಯದಲ್ಲಿ ಉಪದ್ರ ಕೊಡುತ್ತಿದ್ದ ತುರಂಗಾಜಿಯ ಹಾಜಿಯು ಅಫಘಾನಿಸ್ಥಾನಕ್ಕೆ ಹೋಗಿರುವನಂತೆ.

## ನೋಟೀಸು.

### ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 564/1930

ಎ ಲಕ್ಷ್ಮೀನಾರಾಯಣರಾವ್—ವೆಂಕಟ್ರಮಣಯ್ಯನವರ ಮಗ—ಪುತ್ತೂರು ಕಸಬ—ವಾದಿ.

B. M ಇಬ್ರಾಹಿಂ ಕುಂಞ—ಕೊಪ್ಪಳ ಬೀರು ಮ್ಯಾದಿನ ಬ್ಯಾರಿಗಳ ಮಗ—ಪುತ್ತೂರು ಕಸಬಾ ಹಾಲಿ ಬಂಗ್ರಮಂಜೇಶ್ವರ ಗ್ರಾಮದಲ್ಲಿ—ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನಂದರೆ.—ಪುತ್ತೂರಲ್ಲಿರುವ "The National Live stock Registration Bank Ltd"ನಲ್ಲಿ ಪ್ರತಿವಾದಿಯ ಬಗ್ಗೆ ವಾದಿಯು ಜಾಮೀನು ನಿಂತು ಆ ಕುರಿತು ವಾದಿಯು ಸದ್ರಿ ಬೇಂಕಿಗೆ ಪ್ರತಿವಾದಿಯ ಬಗ್ಗೆ ಸಲಾಯಿಸಿದ ರೂಪಾಯಿ 151-2-0 ವ ಬಡ್ಡಿ ಕೂಡ ರೂ 151—4—6ನ್ನು ಬರಮಾಡಿಕೊಳ್ಳುವರೇ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಸದ್ರಿ ವ್ಯಾಜ್ಯವು ತಾ. 14—11—1930ಕ್ಕೆ ಸದ್ರಿ ಕೋರ್ಟಿನಲ್ಲಿ ತನ್ಖಿಗೆ ಇಟ್ಟಿರುತ್ತದೆ ಆ ದಿವಸ ಹಗಲು 10 ಘಂಟೆ ವಳಗೆ ಪ್ರತಿವಾದಿಯು ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉದಹರಿಸಿಕೊಳ್ಳಬಹುದು ತಪ್ಪಿದ್ದಲ್ಲಿ ಪ್ರತಿವಾದಿಯನ್ನು ಶಿಕ್ಷಾಯಿ ಮಾಡಿ ವ್ಯಾಜ್ಯವು ಏಕ ಪಕ್ಷವಾಗಿ ತೀರ್ಮಾನವಾದೀತೆಂತ ಈ ಮೂಲಕ ಪ್ರಕಟಿಸಲಾಗುತ್ತದೆ

Puttur 31—11—'30 } B Achyuta Baliga
Vakil for Plaintiff

---

### ಪುತ್ತೂರು ಡಿ ಮುನ್ಸೀಫ ಕೋರ್ಟಿನಲ್ಲಿ

ಕ್ರಮ ಸಂಖ್ಯೆ 572 1930

ಬಿ ಪದ್ಮನಾಭ ಬಾಳಿಗ, ವಿಟ್ಠ ಬಾಳಿಗರ ಮಗ—ಮಂಗಳೂರು ತಾಲೂಕು ಬಂಟವಾಳದಲ್ಲಿರುವವ—ವಾದಿ

ಜಾವಾಂ ಕುಂಞ, ಸಾಲೋಧರ ಕುಂಞ ಮಗ—ಪುತ್ತೂರು ತಾಲೂಕು ಮೇಲಾಡಿ ಗ್ರಾಮದ ಮಡಂತ್ಯಾರು—ಪ್ರತಿವಾದಿ

ಸದ್ರೀ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನಂದರೆ—ವಾದಿಯು ಪ್ರತಿವಾದಿಯ ಮೇಲೆ ಆಸ್ತಿ ಸ್ವಾಧೀನತೆಗೂ, ಮಿಗ್ತೆಗೂ ಕೂಡ ರೂಪಾಯಿ 51—0—0ಕ್ಕೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ ೧೪—೧೧—೩೦ಕ್ಕೆ ಸದ್ರಿ ಕೋರ್ಟಿನ ಮುಂದೆ ತನ್ಖಿಗೆ ಇಟ್ಟಿರುತ್ತದೆ ಆ ದಿವಸ ಹಗಲು ೧೦ ಘಂಟೆಗೆ ಪ್ರತಿವಾದಿಯು ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉದಹರಿಸಿಕೊಳ್ಳಬಹುದು ತಪ್ಪಿದ್ದಲ್ಲಿ ಪ್ರತಿವಾದಿಯನ್ನು ಶಿಕ್ಷಾಮಾಡಿ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನವಾದೀತೆಂತ ಈ ಮೂಲಕ ಪ್ರಕಟಿಸಲಾಗಿರುತ್ತದೆ

Puttur, 1—11—30 } B Achyuta Baliga.
Vakil for Plaintiff

---

### ಪುತ್ತೂರು ಡಿ ಮುನ್ಸಿಫ್ ಕೋರ್ಟಿನಲ್ಲಿ.

ಐ ಪಿ ನಂಬ್ರ 20/1930

ಸುಬ್ರಾಯ ಉಂಗ್ರುಪುಳಿತಾಯ ವಾಸ್ತೇವ ಉಂಗ್ರುಪುಳಿತಾಯರ ಮಗ—ಪುತ್ತೂರು ತಾಲೂಕು ನೆಟ್ಟಣಿಗೆ ಮೂಡ್ನೂರು ಗ್ರಾಮದ ಪೆನಾಜೆ—ಅರ್ಜಿದಾರ

ಸುಬ್ರಾಯ ಕೇಕುಂಣಾಯ ಕೂಡಾ ಕ್ರೆಡಿಟರರು—ಯೆದ್ರಿರು

ಮೇಲ್ಕಂಡ ಅರ್ಜಿದಾರನು ಅರ್ಜಿಯಲ್ಲಿ ಕಾಣಿಸಿದ ಸಾಲಗಳು ತನಗೆ ತೀರಿಸಲಿಕ್ಕೆ ಶಕ್ತಿಯಿಲ್ಲವಾದುದರಿಂದ ತನ್ನನ್ನು ಇನ್ಸಾಲ್ವೆಂಟನೆಂತ ಸ್ಥಾಪಿಸಬೇಕಾಗಿ ಈ ಕೋರ್ಟಿನಲ್ಲಿ ದಾಖಲು ಮಾಡಿದ ಮೇಲಿನ್ನ ಅರ್ಜಿಯು 1930ನೇ ಇಸವಿ ನವಂಬರ ತಾರೀಕು 20ಕ್ಕೆ ತನಿಕೆಗೆ ಇಟ್ಟದೆ ಆ ಕುರಿತು ಆಕ್ಷೇಪ ಉಳ್ಳವರು ಸದರಿ ವಾಯಿದೆಗೆ ಹಗಲು ಹತ್ತು ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳತಕ್ಕದ್ದು.

ತಾರೀಕು 1—11—1930 } (Sd.) M. Shiva Rao,
Pleader for Petr.

---


## The Cochin Soap Works, — ದಿ ಕೊಚ್ಚಿನ್ ಸೋಪ್ ವರ್ಕ್ಸ್.

IRENJALAKUDA — ಇರಿಂಜಾಲಕುಡ

ಈ ಕೊಚ್ಚಿನ ಸಾಬೂನುಗಳು ಪಟ್ಟಣಗಳಲ್ಲಿ 1928 '29 - '30ನೇ ವರ್ಷಗಳಲ್ಲಿ ನಡೆದ ಎಕ್ಸಿಬಿಶನ್‌ಗಳಲ್ಲಿ ಬೆಳ್ಳಿಯ ಪದಕಗಳಿಂದಲೂ, ಅನೇಕ ಯೋಗ್ಯತಾ ಪತ್ರಗಳಿಂದಲೂ ಬಹುಮಾನಿಸಲ್ಪಟ್ಟಿದೆ.

ಬೇಬಿ ಬೋರೆಕ್ಸ್ ಸೋಪ್, ಓಟ್ಟೋ ಫ್ಲವರ್ ರೋಸ್ ಸೆಂಟೆಡ್ ಸೋಪ್, ಜೋನ್ಸನ್ಸ್ ಬಾರ್ ಸೋಪ್, ಕೋಲ್ ಟಾರ್ ಸೋಪ್ ಮುಂತಾದ ಹೆಸರುವಾಸಿಯಾದ ಸಾಬೂನುಗಳನ್ನು ತಯಾರು ಮಾಡುವ ಸಂಸ್ಥೆಯಾಗಿರುವುದು

ಬೇಬಿ ಬೋರೆಕ್ಸ್ ಸೋಪ್—ಹಿಂದುಸ್ಥಾನದ ಉತ್ತಮ ಉತ್ಪತ್ತಿ. ಬಟ್ಟೆ ಒಗೆಯುವದಕ್ಕೂ ಮೈ ತೊಳೆಯಲಿಕ್ಕೂ ಉಪಯೋಗಿಸಬಹುದು. ಪ್ರಾಣಿಗಳ ಕೊಬ್ಬು ಅಥವಾ ಅಪಾಯಕರವಾದ ವಿಸ್ತುಗಳಿಂದ ವಿರಹಿತವಾಗಿರುವುದು. ಅಲ್ಲದೆ ಎಲ್ಲಾ ಸೋಪುಗಳು ವಿಲ್ಕ್ರೀಯಲ್ಲಿ ತಯಾರಿಸುವ ಸಾಬೂನುಗಳನ್ನು ಸರಿತೂಗುವದು ಸುಲಭ ಬೆಲೆ ಒಂದು ಪೌಂಡಿಗೆ ಕ್ರಯ 6 ಆಣೆ ಮಾತ್ರ. ಮಲ್ಲಿನ ಸವಿಯವು ಹೆಚ್ಚು ಕಾಲ ವರೆಗೆ ಬರುವದು.

ಓಟ್ಟೋ ಫ್ಲವರ್ ರೋಸ್ ಸೆಂಟೆಡ್ ಸೋಪ್—ಸ್ನಾನದ ಸಾಬೂನುಗಳಲ್ಲಿ ಉತ್ಕೃಷ್ಟವಾಗಿರುವುದು. ಗುಲಾಬಿ ಮತ್ತು ಜಸಮಿನ್ ಸುಗಂಧ ಇದ್ದಾಗ ದ ಕಪಡಿದವುಗಳು ತುಂಡ ೧ಕ್ಕೆ ಕ್ರಯ ೨ ಆಣೆ ಮಾತ್ರ.

ಜೋನ್ಸನ್ಸ್ ಬಾರ್ ಸೋಪ್—ಎಲ್ಲಾ ತರಗತಿ ಬಟ್ಟೆಗಳು ತೊಳೆಯಲು ಉಪಯೋಗಿಸಬಹುದು, ಕೆಲವು ಅತಿ ಪ್ರಯೋಜನವು ಬಹಳವಾಗಿದೆ. ಬಟ್ಟೆಗಳನ್ನು ಬಹಳ ಕಾಲ ಬಾಳುವದು. ಬಾರ್ ೧ಕ್ಕೆ 4 ಆಣೆ. ಬಟ್ಟೆಗೆ ಯಾವ ಕರ ಹಾನಿಯೂ ಉಂಟುಮಾಡುವದಿಲ್ಲ. ಅವು ಮತ್ತಷ್ಟು ಬಲವಂತವನ್ನಾಗಿ ಮಾಡುತ್ತದೆ

ಕೋಲ್‌ಟಾರ್ ಸೋಪ್—ಚರ್ಮದ ರೋಗ ಹೋಗಲು ಎಲ್ಲರಿಂದ ಕೊಡುತ್ತದೆ. ಸಾನವಾಡುವ ಮತ್ತು ಮಕ್ಕಳಿಗೂ ಕೂಡ ಉಪಯೋಗಿಸಬಹುದು. ಚರ್ಮರೋಗಕ್ಕೆ ದಿವ್ಯೌಷಧ

ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸೋಲ್ ಏಜಂಟರು—

ಮೆಸರ್ಸ್ ಬೊಳಂತೂರು ಸಪ್ರೀಕುತ್ತುಮು ಪುಭು, ಮಂಗಳೂರು.

ಕೆ. ಜೆ ಲಾಜರ್ ಮೆನೇಜರ್ ಮತ್ತು ಎಕ್ಸ್‌ಪರ್ಟ್.

ಎಂಗ್ಲೆಂಡ ಪದಕ ಹಾಗೂ ಯೋಗ್ಯತಾ ಪತ್ರಗಳಿಂದ ಬಹುಮಾನ ಹೊಂದಲ್ಪಟ್ಟವರು.

ಏಜಂಟರು ಬೇಕಾಗಿರುವರು.

"If every Wife knew what every Widow knows every Husband would be Insured"

PLACE YOUR LIFE ASSURANCE WITH
**THE SOUTH INDIAN**
Securing to your client
1. Low rates of Premium
2. Liberal Policy Conditions
AND FOR YOURSELF
An Agency with attractive Terms of Commission and Salary in
**The South Indian General Assurance Co, Ltd.,**
Anywhere in CANARA DISTRICTS & HYDERABAD STATE
For terms of Agency please apply to —
H R K IYENGAR
Chief Agent
The S I G A Co Ltd,
Sat a gudd MANGALORE
Managing Agents
K C PANDALAI & CO
7 8 Mc ean Street I MADRAS

ಜೀವವಿಮೆ ಮಾಡುವವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪನಿ ಲಿಮಿಟೆಡ್ಡ್‌ನಲ್ಲಿ ವಿಮೆಮಾಡಿರಿ.
ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!
ಪ್ರಿಮಿಯಂ ದರಗಳು ಕಡಿಮೆ!
ಶರ್ತಗಳು ತೀರಾ ಸುಲಭ!!
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ
ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ ದೊರಕುವುದು.
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)
ಚೀಫ್ ಏಜಂಟರು—
ಎಚ್. ಆರ್. ಕೆ ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.
ದಿ ಎಸ್ ಐ ಜೆ ಎ ಕಂಪೆನಿ ಲಿಮಿಟೆಡ್,
ಸತ್ಯಾಸಿಗುಡ್ಡೆ ಮಂಗಳೂರು
ಮೇನೇಜಿಂಗ್ ಏಜಂಟರು —
ಕೆ ಸಿ ಪಾಂಡಲೆ ಎಂಡ್ ಕೋ.
7-8 ಮೆಕಲೀನ್ ಸ್ಟ್ರೀಟ್, ಜಿ ಟಿ. ಮದ್ರಾಸು

ಸುಲಭ ಕ್ರಯ · ಧಾರಾಳ ಫಲ

## ದಂತಧಾವನ ಚೂರ್ಣ
## ಟೂತ್ ಪೌಡರ್.

ಎಲ್ಲಾ ದಂತ ಸಂಬಂಧವಾದ ರೋಗಗಳನ್ನು ಹಲ್ಲುಗಳ ಬಲಹೀನತೆಗಳನ್ನು ವಾಸಿಮಾಡುವುದು. ಹಲ್ಲುಗಳ ಬುಡದಿಂದ ಬರುವ ರಕ್ತ ಕೀವು ಮೊದಲಾದವುಗಳನ್ನು ನಿಲ್ಲಿಸುವುದು. ಬಾಯಿಯ ದುರ್ಗಂಧವನ್ನು ಹಲ್ಲುಗಳ ಇನ್ನಿತರ ದೋಷಗಳನ್ನೂ ದೂರ ಮಾಡಿ ಯಾವಾಗಲೂ ಹಲ್ಲುಗಳ ಶುಚಿಯಾಗಿಯೂ ಸುವಾಸನೆಯಿಂದಿರುವಂತೆಯೂ ಅತ್ಯುಪಯೋಗಕರವಾಗಿರುವುದು. ಪೆಕೆಟು ೧ಕ್ಕೆ ೦ ೨ ೦ ಡಜನ ಪೆಕೆಟುಗಳಿಗೆ ೧—೪—೦. ಕೈವಾಗಳಲ್ಲದೆ ಮತ್ತು ಉತ್ತಮವಾದ ಆಯುರ್ವೇದ ಔಷಧಗಳೂ ಮಾರಾಟಕ್ಕೆ ಸಿದ್ಧವಾಗಿವೆ. ಆಸವ, ಅರಿಷ್ಟ, ಭಸ್ಮ, ಚೂರ್ಣ, ಕಷಾಯ, ಲೇಹ, ತೈಲ ಮೊದಲಾದವುಗಳು ನಮ್ಮಲ್ಲಿ ಆಗಾಗ್ಗೆ ಹೊಸದಾಗಿ ತಯಾರಿಸಲ್ಪಡುವವು. ಆರ್ಡರುಗಳ ಮತ್ತು ಮೊದಲು ಕೊಡುವ ಪತ್ರ ಮೂಲಕ ಕಾಹಿಲೆ ಮತ್ತು ಲಕ್ಷಣಗಳನ್ನು ತಿಳಿಸಿದಲ್ಲಿ ಯುಕ್ತವಾದ ಔಷಧಗಳನ್ನು ಟಪ್ಪಾಲಿನ ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿವರಗಳ ಬಗ್ಗೆ ಮತ್ತು ಚಿಕಿತ್ಸೆ ಆಯುರ್ವೇದಗಳ ಕುರಿತು ಕೆಳಗಿನ ವಿಳಾಸಕ್ಕೆ ಬರೆಯಿರಿ

ಹೆಚ್ಚಿನ ಸಂಗತಿಗಳನ್ನು ತಿಳಿಯಬೇಕಾದವರಿಗೆ ಮಲಯಾಳದಲ್ಲಿ ಮತ್ತು ಕನ್ನಡದಲ್ಲಿ ಔಷಧ ಪಟ್ಟಿ ಇದೆ.

ಪಿ. ಕರುಣಾಕರ ವೈದ್ಯರ್.
ಆರೋಗ್ಯಾಮೃತ ಔಷಧಾಲಯ
ಕ್ಯಾಂಪ ಬಜಾರ್ ಕಣ್ಣಾನೂರು.

P KARUNAKARAN VYDIAR.
Arogiamritha Aushadhalaya
Camp Bazaar, CANNANORE.

### ರಿಸ್ಟ್‌ವಾಚ್ ಉಚಿತ.

ಒಂದು ಜೇಬಿನಲ್ಲಿರುವ ಗಡಿಯಾರ ಉಚಿತವಾಗಿ ದೊರೆಯುತ್ತದೆ.

ನಮ್ಮ ಏಸನ್ಸ್—ಗಡಿಯಾರ ಕಟ್ಟಗಳ ಮೇಲೆ ೨೪ ಕಾಸುಗಳಲ್ಲಿ ಖಂಡಿತ ಗುಣಕೊಡುವ ಮಾಲು. ಕಿ೦, ೪ ಆಣೆ ೧೨ ಪಟ್ಟಿಗಳ ಮೇಲೆ ಒಂದು ಟ್ಯಾಬ್ಲೆಟು ೨೪ ಪಟ್ಟಿಗಳಿಗೆ ೧ ರಿಸ್ಟ್‌ವಾಚ್ ಪ್ರಕಟಿಸುವದು. ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ಕಿಂಗ್ ಜಾರ್ಜ ಕೊರೋನೇಶನ್ ಕಂಪೆನಿ.
ಮುಂಬಾಯಿ

## ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ಶಾರದಾ ಛಾಪಖಾನೆ.
ರಥಬೀದಿ, ಮಂಗಳೂರು.

## ಅನುಕ್ರಮಣಿಕೆ

ಅಗ್ರಲೇಖ.
ಹಿಂದೂಸ್ಥಾನದ ಸಿನಿಮಾ ಕೈಗಾರಿಕೆ ೪
ಸ್ತ್ರೀ ಅಧಿಕಾರಗಳು ೬
ಟಿಪ್ಪಣಿಗಳು ೭

ವರ್ತಮಾನ ಸಂಗ್ರಹಗಳು
ವಿದೇಶ ವರ್ತಮಾನ ೪
ಒಳದೇಶ ವರ್ತಮಾನ ೪-೮
ಜಿಲ್ಲಾ ವರ್ತಮಾನ-ಮಂಗಳೂರು, ಕಲ್ಲಡ್ಕ, ಬಂಟವಾಳ, ಪಾಣೆಮಂಗಳೂರು, ಗುರ್ಪುರ, ಉಡುಪಿ . . . ೯
ವಿವಿಧ ಸಮಾಚಾರಗಳು . . . ೧೧
ಮಿ. ಬ್ರೈಲ್ಸ್‌ಫೋರ್ಡರು ಗುಜರಾತದಲ್ಲಿ ೧೪
ಕೊಡಗು ದೇಶದ ರಾಜ್ಯಭಾರ ಕ್ರಮ . ,,
ಶ್ರೀನಿವಾಸ ಶಾಸ್ತ್ರಿ ವೇಲ್ಸರ ಭಾಷಣ ೨
ಮಹಾತ್ಮಾಜಿಯವರ ಸತ್ಯಾಗ್ರಹ ಸಮಾಚಾರ . ೪-೧೪

# ಸ್ವದೇಶಾಭಿಮಾನಿ.

## ತಾರೀಕು ೭ನೇ ಶುಕ್ರವಾರ ನವಂಬರ ೧೯೩೦

## ಹಿಂದೂಸ್ಥಾನದ ಸಿನಿಮಾ ಕೈಗಾರಿಕೆ.

ಲೇಖಾಂಕ ೧

ಹಿಂದೂಸ್ಥಾನದಲ್ಲಿ ಚಲಚ್ಚಿತ್ರಗಳ ಪ್ರದರ್ಶನ ಶಾಲೆಗಳ ಸಂಖ್ಯೆಯು ಹೆಚ್ಚುತ್ತಾ ಬಂದ ಹಾಗೆ ಸಿನಿಮಾ ಕೈಗಾರಿಕೆಯನ್ನು ಹಿಂದೂಸ್ಥಾನದಲ್ಲಿ ಬೆಳೆಸುವ ಯೋಗವೂ ಉಂಟಾಯಿತು. ಈ ಸಂದರ್ಭವನ್ನು ಕಂಡೇ ಕೆಲವು ಉಮೇದುವಾರರು ಕೆಲವು ಚಿತ್ರಗಳನ್ನೂ ತಯಾರಿಸಿದರು. ಪ್ರಥಮದ ಚಿತ್ರಗಳಲ್ಲಿ ಹೆಸರುವಾಸಿಯಾದವು ಫಾಲ್ಕೆಯವರ ಮತ್ತು ಪಾಟಣಕರರ ಚಿತ್ರಗಳು. ಇವುಗಳನ್ನು ಹಿಂದೀ ಜನತೆಯು ಬಹಳ ಆಸಕ್ತಿಯಿಂದ ಪ್ರೋತ್ಸಾಹವನ್ನು ಕೊಟ್ಟುದನ್ನು ಕಂಡ ಮೇಲೆ ಹಿಂದೂಸ್ಥಾನದಲ್ಲಿ ಈಗ ಎಲ್ಲೆಲ್ಲೂ ಚಲಚ್ಚಿತ್ರ ರಚನೆಯ ಏರ್ಪಾಡು ಆಗಿ ಹಲವು ಕಂಪೆನಿಗಳು ಅಸ್ತಿತ್ವಕ್ಕೆ ಬಂದಿವೆ.

ಚಲಚ್ಚಿತ್ರಗಳ ಕಲೆಯು ನಾಟಕ ಕಲೆಯನ್ನೆ ಆಧರಿಸಿ ಇರುವಂತಹುದುದಾಗಿದೆ. ಆದರೆ ನಾಟಕ ಕಂಪೆನಿಗಳ ಒಡೆಯರ ಮೇಲೆ ಬಹಳ ದೊಡ್ಡ ಜವಾಬ್ದಾರಿಯಿರುವಾಗ, ಚಲಚ್ಚಿತ್ರಗಳನ್ನು ಏರ್ಪಡಿಸುವವರ ಮೇಲೆ ಈಗಿನ ಪರಿಸ್ಥಿತಿಯಲ್ಲಿ ಜವಾಬ್ದಾರಿಯಿರುವುದಿಲ್ಲ. ಒಂದು ಬಾರಿ ಶ್ರಮಿಸಿ ಅದನ್ನು ತಯಾರಿಸಲಾಯಿತೆಂದ ಮೇಲೆ, ತಯಾರಿಸುವವರು ಸುಮ್ಮನಿದ್ದು ಲಾಭವನ್ನೇ ಲೆಕ್ಕ ಹಾಕುತ್ತಾ ಇದ್ದರೆ ಸರಿ. ಆದರೆ ನಾಟಕ ಕಂಪೆನಿಗಳನ್ನು ಮಾಡಿದವರಿಗೆ ಆ ಕಂಪೆನಿಯನ್ನು ಸ್ಥಾಯಿಯಾಗಿ ಮಾಡಬೇಕಾದರೆ ಬಹಳವಾಗಿ ಕಷ್ಟಪಟ್ಟು, ಕಲೆಯ ಅಭಿವೃದ್ಧಿಯ ಕಡೆಗೆ ನಿಗಾ ಕೊಟ್ಟು, ದಿನ ನಿತ್ಯವೂ ನಡೆಯಬೇಕಾದ ಅತಿಶಯ ಖರ್ಚಿನ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ.

ಹಿಂದೂಸ್ಥಾನದ ಚಲಚ್ಚಿತ್ರಗಳ ಕಂಪೆನಿಗಳು ಮೇಲೆ ತೋರಿದ ರೀತಿಯಲ್ಲಿ ಜವಾಬ್ದಾರಿಯ ಭಾರವನ್ನು ಕಳೆದೇ ಕೆಲಸ ಮಾಡುತ್ತಾರೆ. ಕಲೆಗಾಗಿ ಶ್ರಮ ಪಡುವ ಅಭ್ಯಾಸವು ಹಿಂದೀಯರಲ್ಲಿ ಕಡಿಮೆಯೆನ್ನಬೇಕು. ಹ್ಯಾಗೆ ದುಡ್ಡಿನ ಲಾಭಗಳಿಸಿಕೊಳ್ಳಬಹುದು? ಎಂಬ ಆಕಾಂಕ್ಷೆಯೇ ಕಲೆಯ ಸುಧಾರಣೆಗೆ ತೊಡಕಾಗಿ ಬೆಳೆದಿದೆ. ಆದರಲ್ಲೂ ಒಬ್ಬರ ಹಿಂದೊಬ್ಬರಾಗಿ Cine—Cameraದ ಕ್ರಿಯೆವನ್ನು ನಗದಿಯಾಗಲಿ ಸಾಲ ಮೂಲಕವಾಗಿ ಕೊಡಲು ಶಕ್ತರಾದವರೇ. ಅದೊಂದನ್ನು ಪಡೆದು ಚಲಚ್ಚಿತ್ರಗಳ ರಚನೆಗೆ ಕೈಹಾಕಿ, ಆ ರಚನೆಗೆ ಬೇಕಾದ ದ್ರವ್ಯ ಸಹಾಯವಿರದಿರುವುದೊಂದೆಡೆ, ರಚಿಸಿದ ಫಿಲ್ಮನ್ನು ಮಾರಲಿಕ್ಕೆ ಮೇಲಾಟವನ್ನು ನಡೆಸುವ ಲಾಭಕ್ಕೆ ಕೊರತೆಯಾಗುವುದಿನ್ನೊಂದೆಡೆ, ಈ ರೀತಿಯ ಆಘಾತ ಮಧ್ಯದಲ್ಲಿ ಕಲೆಯ ಬೆಳವಣಿಗೆಯೇ ಆಗದಿರುವುದು ಅತ್ಯಂತ ದುಃಖಕರವಾಗಿದೆ.

ಸಿನಿಮಾ ಕಂಪೆನಿಗಳು ಇತ್ತೀಚೆಗೆ ಬಹಳವಾಗಿ ಹೆಚ್ಚಿದ ಫಲವಾಗಿ ಹಿಂದೀ ಸಿನಿಮಾ ಫಿಲ್ಮುಗಳ ಸಂಖ್ಯೆಯೂ ಬಹಳವಾಗಿ ಹೆಚ್ಚಿರುತ್ತದೆ. ಇವುಗಳಲ್ಲಿ ಕೆಲವೇನೂ ಶ್ರೇಷ್ಠವರ್ಗಕ್ಕೆ ಸೇರುವಂತಹವುಗಳೆಂಬುದು ನಿಜ. ಅಲ್ಲಿ ನಟನಟಿಗಳ ನಟನೆಯೂ ಹತ್ತು ವರ್ಷ ಹಿಂದೆ ಇದ್ದುದಕ್ಕಿಂತ ಈಗ ಬಹುಮಟ್ಟಿಗೆ ಸುಧಾರಿಸಲ್ಪಟ್ಟಿದೆ. ಆದರೆ ಈ ಶ್ರೇಷ್ಠವರ್ಗದ ನಟನಟಿಯರ ನಟನೆಯೂ ಪಾಶ್ಚಾತ್ಯರ ನಟನೆಯ ಮಾನಕ್ಕೆ ಬರುವುದಿಲ್ಲವೆಂದೂ ಒಪ್ಪಬೇಕಾಗಿದೆ. ನಟನೆಯೊಡನೆ ಚಿತ್ರಕಲೆ ಅಂದರೆ ಫೊಟೊಗ್ರಾಫು ತೆಗೆಯುವುದೂ ಬಹಳವಾಗಿ ಸುಧಾರಿಸಲ್ಪಟ್ಟಿದೆ. ಅಗತ್ಯವಿದ್ದ ನೋಟಗಳನ್ನು (Scenic effect) ರಚಿಸಲು ಪಾಶ್ಚಾತ್ಯರ ಉಪಾಯಗಳನ್ನೂ ಅನುಕರಿಸಿ ಫಿಲ್ಮ ಕಲೆಯಲ್ಲಿ ಸುಧಾರಣೆಯನ್ನೂ ಮಾಡಿದ್ದಾರೆ.

ಆದರೆ ಶ್ರೇಷ್ಠವರ್ಗದ ಫಿಲ್ಮಗಳಲ್ಲಿಯೂ ದುಡ್ಡಿನ ಅಭಾವದ ಪರಿಣಾಮವು ಕಾಣದೆ ಇರುವುದಿಲ್ಲ. ಇದರಿಂದ ಸ್ವಾಭಾವಿಕ ಭಾವ ಉಂಟಾಗಲು ಬಹಳ ಕೊರತೆಯುಂಟಾಗುತ್ತಿದೆ. ಈ ಶ್ರೇಷ್ಠವರ್ಗದ ಫಿಲ್ಮುಗಳಲ್ಲಿಯೂ ಕೂಡ ಕಲೆಯ ಮೇಲಿನ ಪ್ರೇಮದಿಂದ ಮಾಡಬೇಕಾದ ಸುಧಾರಣೆಗಳು ಕಾಣಬರುವುದಿಲ್ಲ. ಇನ್ನೊಂದು ದೊಡ್ಡ ತೊಡಕೆಂದರೆ ಕಥಾರಚಯಿತರು ಇಲ್ಲದಿರುವುದು. ಪುರಾಣಗಳನ್ನು ಬಿಟ್ಟರೆ ಉತ್ತಮ ಕತೆಗಳು ಫಿಲ್ಮುಗಳಿಗೆ ಸಿಕ್ಕುವುದಿಲ್ಲ. ಪುರಾಣಕತೆಗಳನ್ನೂ ಅವುಗಳ ಸರಿಯಾಗಿ ಫಿಲ್ಮು ಪ್ರದರ್ಶನವನ್ನೂ, ಪೌರಾಣಿಕ ಭಾವಗಳಿಗೆ ಸರಿಯಾಗಿ ರಚಿಸಲಿಕ್ಕೆ ಫಿಲ್ಮು ಕಂಪೆನಿಗಳಿಗೆ ತಿಳಿಯುವುದಿಲ್ಲ.

[ಸಶೇಷ]

## ವಿದೇಶ ವರ್ತಮಾನ

— ರೌಂಡ್‌ಟೇಬಲ್ ಸಮ್ಮೇಳನಕ್ಕಾಗಿ ಲಂಡನಕ್ಕೆ ಹೋದ ಇಂಡಿಯನ್ ಡೆಲಿಗೇಟರು ಪಾಶ್ಚಾತ್ಯ ಶೀತಗಳಿಗೆ ನಡುಗುವದು, ಸ್ಥಿತಿಯು ಬಂದೊದಗಿರುವದು, ಅನೇಕರು ಶೀತದಿಂದುಂಟಾದ ತಲೆನೋವು ಜ್ವರ ಮೊದಲಾದುದರಿಂದ ನರಳುತ್ತಿ ಇವರು. ಅನೇಕರಿಗೆ ಯೋಗ್ಯ ಆಂಗ್ಲೇಯ ತಿರಸ್ಕಾರಗಳು ದೊರೆತವು. ಅವರೂ ಕೆಲವು ಡೆಲಿಗೇಟರಿಗೆ ಒಂದು ಆಶೆ! ಕಾನ್‌ಫರೆನ್ಸು ಏನಾದರೂ ಒಂದು ಆಗಲೇಬೇಕೆಂದು! ಆದರೆ ಮಾನ್ಯ ಸಪ್ರೂಜಿಯವರು ಹೇಳುವಂತೆ ಅವರೀ ವರ್ಗ ಹುಟ್ಟಿಗೆ ಪಾಶ್ಚಾತ್ಯ ಶೀತ ಗಾಳಿಯೇ ಗತಿ ಎಂದು ತಿಳಿಯುತ್ತದೆ.

— ಮಿ ಎಚ್ ಟಿ ಪಿಡ್ಡಿಂಗ್‌ಟನ್ ಎಂಬ ಆಸ್ಟ್ರೇಲಿಯಾದ ಜಡ್ಜರೊಬ್ಬರು ಮಹಾತ್ಮಾಜಿಯವರನ್ನು ಸಬರ್ಮತಿ ಆಶ್ರಮದಲ್ಲಿ ಭೇಟಿಮಾಡಿದರು, ಆವರೆ ಸದರಿಯವರು ರಾಜಕೀಯ ವಿಷಯಗಳ ಕುರಿತು ಏನನ್ನೂ ಮಾತಾಡಲಿಲ್ಲವಂತೆ. ಆದರೆ ಪಿಡ್ಡಿಂಗ್‌ಟನ್ನರು 'ಸಿಲೋನ್ ಅಬ್ಸರ್ವರ' ಪತ್ರಿಕೆಯಲ್ಲಿ ಪ್ರಕಟಪಡಿಸಿದ ಲೇಖನದಂತೆ ಸದರಿಯವರಿಗೆ ಇಂಡಿಯನರ ಮೇಲೆ ತುಂಬಾ ದಯೆಇರುವದೆಂದೂ ಭಾರತೀಯರು ಸಾಮಂತ ಸ್ವರಾಜ್ಯವನ್ನು ಪಡೆಯಲು ಅರ್ಹರಿರುವರೆಂದೂ ತಿಳಿದುಬರುತ್ತದೆ. ಆದರೆ ಜಡ್ಜರು ಮಹಾತ್ಮಾಜಿಯವರ ವಿಷಯದಲ್ಲಿ 'ಗಾಂಧಿಜಿಯವರ ಸ್ವಾರ್ಥತ್ಯಾಗ ಹಾಗೂ ಅದರ ಪರಿಣಾಮದಿಂದ ಉಂಟಾದ ಆತ್ಮೋನ್ನತಿಯ ಪ್ರಭಾವವು ಅಸಾಧಾರಣವಾದುದು, ಮತ್ತು ಈ ಗುಣಗಳಿಂದಲೇ ಅವರ ಮಹತ್ವವು ಎಲ್ಲರಿಗೆ ಬಯಲಾಗಿ ಇಡೀ ಜಗತ್ತಿನಿಂದ ಕೊಂಡಾಡಲ್ಪಡುವದು' ಎಂದು ತನ್ನ ಹೃದಯಪೂರ್ವಕವಾದ ದನಿಯನ್ನೆತ್ತಿರುವರು.

ಪೋರ್ಟ್‌ಲ್ಯಾಂಡ್ ಎಂಬಲ್ಲಿ ಬರುವ ಶನಿವಾರದ ದಿನ ಕ್ರೊಯ್ಡನ್‌ದಲ್ಲಿ ನಡೆವ ವಿಮಾನಗಳ ವಿನೋದಗಳೆಂತ್ಯೆ ನಾನಾ ಅದ್ಭುತ ಆಟಗಳು ಏರ್ಪಟ್ಟಿ ಎವವು. ರೌಂಡ್‌ಟೇಬಲ್ ಕಾನ್ಫರೆನ್ಸಿಗೆ ಹೋದ ಇಂಡಿಯನ್ ಡೆಲಿಗೇಟರಿಗೂ ಪದ್ಧತಿಯಂತೆ ಆಮಂತ್ರಣಗಳು ಬಂದಿರುವವು. ಆದರೆ ಕ್ರೊಯ್ಡನಿನಲ್ಲಿ ಮೃತ ಸಂಸ್ಕಾರ ಅದರ ಚಿತ್ರಗಳ ಭಾವಚಿತ್ರವು ಇಂಡಿಯನ್ ಡೆಲಿಗೇಟರು ಮನಸ್ಸಿನಿಂದ ಸಂಪೂರ್ಣ ಮಾಯವಾಗಿರದಷ್ಟೆ! ಆ ಕಾರಣದಿಂದ ಕೆಲವರು ಆ ಆಮಂತ್ರಣಗಳನ್ನು ನಿರಾಕರಿಸಿದರೆಂದೂ ಕೆಲವರು ವಿಮಾನದ ಆಟಗಳಲ್ಲಿ ತಮಗೆ ದೊರೆತ ಆದರಕ್ಕೆ ಪ್ರತಿಯಾಗಿ ಇನ್ನು ಮುಂದೆ ಯಾವಂತಹ ಕಷ್ಟಗಳಿಗೆ ಒಳಪಡಲು ಇಚ್ಛಿಸುವದಿಲ್ಲವೆಂದೂ ತಿಳಿಸಿ ಎವರು.

— ನವಂಬರ ತಾ ೧೦ಲ್ಲು ಲಂಡನ್ ನಗರದ ಎಸೆಕ್ಸ ಹಾಲ್‌ನಲ್ಲಿ ಜರಗಿದ ಮಹಾಸಭೆಯಲ್ಲಿ ಇಂಡಿಯನ್ ಡೆಲಿಗೇಟರನ್ನೂ ಆಮಂತ್ರಿಸಿದ್ದರು. ಅಲ್ಲಿಯೂ ಕೂಡ ಸದರಿ ಇಂಡಿಯನ್ ಡೆಲಿಗೇಟರನ್ನು ಹೊರಗೆ ಹೋಗಬೇಕೆಂದು ಆಜ್ಞೆಯಾಗುವದಂತೆ! ಸಭಾಸದಸ್ಯರು ಮುಕ್ತಕಂಠರಾಗಿ 'ನೀವು ನಿಮ್ಮ ಹಟವನ್ನೇ ಸಾಧಿಸುವವಿದ್ದರೆ ಮರಳಿ ಇಂಡಿಯಕ್ಕೆ ಹೋಗಿ ಮನಬಂದಂತೆ ವರ್ತಿಸಬಹುದು' ಎಂದು ಇಂಡಿಯನರಿಗೆ ಬಹಳ ತಿರಸ್ಕಾರದ ಮಾತುಗಳನ್ನಾಡಿದರಂತೆ!

— ಲಂಡನ್ ನಗರದ ಕೋಮನ್ಸ ಸಭೆಯಲ್ಲಿ ಮಿ ಬೆನ್ನರ (ಸ್ಟೇಟ ಸೆಕ್ರೆಟರಿ) ಹೇಳಿದಂತೆ ಇಂಡಿಯದಲ್ಲಿ ಗಲಭೆ ಮಾಡದ (non violence) ೨೩, ೧೩೬ ಮಂದಿ ತಪ್ಪಿತಸ್ಥರಲ್ಲದ ಸತ್ಯಾಗ್ರಹಿಗಳು ಸೆರೆ ಮನೆಯನ್ನು ಸೇರಿರುವರೆಂದು ತಿಳಿದುಬರುತ್ತದೆ.

— ಲಂಡನ ನಗರದಲ್ಲಿ ಸ್ಟೇಟ ಸೆಕ್ರೆಟರಿಯವರು ಕೂಡೆ, ಅವಧಿ ಮುಗಿದ ಮೇಲೆ ಅಗತ್ಯವಿದ್ದ ಆರ್ಡಿನೆನ್ಸುಗಳನ್ನು ಪುನಃ ಊರ್ಜಿತಪಡಿಸಬಾರದೆಂದು ಅನೇಕ ಇಂಗ್ಲೀಷರು ಮನವಿಗಳನ್ನು ಕಳುಹಿಸಿರುವದು ಹಾಗೂ ಅನೇಕ ಬಿಳಿಯರು ಹಿಂದೂಸ್ಥಾನಕ್ಕೆ ಪ್ರತ್ಯಕ್ಷ ಶಾಂತಿಸ್ಥಾಪನೆಯನ್ನೇ ಕೋರುತ್ತಿರುವರೆಂದು ತಿಳಿದುಬರುತ್ತದೆ. ಮುಖ್ಯವಾಗಿ ಪ್ರೆಸ್ ಆರ್ಡಿನೆನ್ಸನ್ನು ಊರ್ಜಿತಪಡಿಸಬಾರದೆಂದೇ ಅವರ ವಾದ. ಆದರೆ ಮಿ! ಬೆನ್ನರು ಮಾತ್ರ ಸದರಿ ಮನವಿಗಳನ್ನು ನಿಧಾನವಾಗಿ ಆಲೋಚಿಸಲಾಗುವುದೆಂದು ಉತ್ತರಕೊಟ್ಟಿರುವರು.

## ಒಳದೇಶ ವರ್ತಮಾನ

— ಕಳೆದ ಮೂರು ವರ್ಷಗಳಿಂದ ಭರತಖಂಡದ ವ್ಯಾಪಾರವು ೫೭೬ ಕೋಟಿ ರೂಪಾಯಿಗಳಷ್ಟು ನಡೆದಿರುವದೆಂದು ತಿಳಿದುಬರುತ್ತಿದೆ. ಈ ಪೈಕಿ ೩೩೪ ಕೋಟಿ ರೂಪಾಯಿಗಳ ಸಾಮಾನು ರಫ್ತಾಗಿರುವದೆಂದೂ ೨೪೮ ಕೋಟಿ ರೂಪಾಯಿಗಳ ಮಾಲು ಆಮದಾಗಿರುವದೆಂದೂ ತಿಳಿದುಬರುತ್ತದೆ. ೧೯೨೮-೨೯ ವರ್ಷದಲ್ಲಿ ೩೩೧ ಕೋಟಿ ರೂಪಾಯಿಗಳ ಮಾಲು ಪರದೇಶಕ್ಕೆ ಹೋಗಿರುವದು. ಆದರೆ ನಮ್ಮ ದೇಶಕ್ಕೆ ಬಂದ ಸಾಮಾನು ೨೯೭ ಕೋಟಿ ರೂಪಾಯಿಗಳದ್ದು ಮಾತ್ರ. ರಫ್ತಾಗುವ ಮಾಲಿನಲ್ಲಿ ೮೨ ಕೋಟಿ ರೂಪಾಯಿಗಳ ಮಾಲು ಯುನೈಟೆಡ್ ಕಿಂಗ್‌ಡಮಿಗೂ, ೫೧ ಕೋಟಿ ರೂಪಾಯಿ ಬೆಲೆಬಾಳುವ ಸಾಮಾನು ಬ್ರಿಟಿಷ್ ಅಧಿಪತ್ಯದ ಇತರ ದೇಶಗಳಿಗೂ ಮತ್ತು ೧೯೮ ಕೋಟಿ ರೂಪಾಯಿ ಬೆಲೆಬಾಳುವ ಸಾಮಾನು ಬ್ರಿಟಿಷ್ ಅಧಿಪತ್ಯದ ಹೊರದೇಶಗಳಿಗೂ ಹೋಗಿರುವದೆಂದು ತಿಳಿದುಬರುತ್ತದೆ.

ಆಮದಿನ ವಿಷಯವನ್ನು ಯೋಚಿಸುವಾಗ ಅದೇ ೧೯೨೮-೨೯ನೇ ವರ್ಷದಲ್ಲಿ ಬ್ರಿಟನ್ನಿನಿಂದ ನಮ್ಮ ದೇಶಕ್ಕೆ ೧೨೯ ಕೋಟಿ ರೂಪಾಯಿ, ಇತರ ಬ್ರಿಟಿಷ ರಾಜ್ಯಗಳಿಂದ ೩೮ ಕೋಟಿ, ಹಾಗೂ ಬ್ರಿಟಿಷ್ ಅಧಿಪತ್ಯದಿಂದ ೧೩೭ ಕೋಟಿ ರೂಪಾಯಿಗಳು ಆಮದಾಗಿರುವವು. ಮಿಕ್ಕ ದೇಶಗಳಿಂದ ೧೩೦ ಕೋಟಿ ರೂಪಾಯಿಗಳು ಮಾತ್ರ.

ಎಂಪ್ಯಾಯರ್ ದೇಶಗಳಿಗೆ ನಾವು ಕಳುಹಿಸುವ ಸಾಮಾನುಗಳೆಂದರೆ ನಾರು, ಟೀ, ಚರ್ಮ, ಎಣ್ಣೆಬೀಜಗಳು ಮತ್ತು ದವಸಧಾನ್ಯ — ಇವೇ ಮುಖ್ಯವಾದವುಗಳು. ಆದರೆ ಎಂಪ್ಯಾಯರ್ ದೇಶಗಳಿಂದ ನಮಗೆ ದೊರೆಯುವ ಸಾಮಾನುಗಳೆಂದರೆ ಗಿರಣಿಯ ಬಟ್ಟೆಗಳು, ಉಕ್ಕು ಮತ್ತು ಕಬ್ಬಿಣದ ಸಾಮಾನುಗಳು ಮಾತ್ರವೇ.

— ನಾಗಪುರದಲ್ಲಿ ಪ್ರೊಫೆಸರ್ ಬಿ ಜಿ ಕೋತರೆಯವರು ಕಾಲೇಜಿನ ಎದುರಲ್ಲಿ ಒಂದು ವಾರ Hunger strike ಮಾಡಿದರು. ೮ನೇ ದಿನ ಸದರಿಯವರ ದಸ್ತಗಿರಿಯೂ ನಡೆಯಿತು.

— ಬಾಂಬಾಯಿ ಸರಕಾರದ ಕರನಿರಾಕರಣೆಯ ಚಳವಳಿಯು ಬಹಳ ತೀವ್ರದಿಂದ ನಡೆಯುತ್ತಿದೆ. ಎವರು ಬೋರಸಾದ ಎಂಬಲ್ಲಿ ೩೦೦೦೦ ಕ್ರಯಕ್ಕಾಗುವ ಜಮೀನನ್ನು ಸರಕಾರವು ೪೩ ರೂಪಾಯಿಗಳಿಗೆ ಲಿಲಾಂ ಮಾಡಿರುವದಂತೆ! ರೈತರೆಲ್ಲರೂ ತಮ್ಮ ಸರ್ವಸ್ವವನ್ನು ಕಳೆದುಕೊಂಡಿ ಎವರು.

— ಮುಂಬಾಯಿಯಲ್ಲಿ ಮಿ. ಎನ್ ಬಿ ಹಾರುಲೆಕಾರರು, ವಿದೇಶೀ ವಸ್ತ್ರ ಬಹಿಷ್ಕರಿಸಿದವರಿಗೆ ಸ್ವದೇಶಿ ಬಟ್ಟೆಯನ್ನು ಸಾಲವಾಗಿ ಕೊಡುವ ಏರ್ಪಾಡನ್ನು ಕೈಕೊಂಡಿರುವರು.

— ಬಂಗಾಳದಲ್ಲಿ ೧೪೦೦೦ ಜನರು ಸತ್ಯಾಗ್ರಹದ ಅಪಾದನೆಯ ಮೇಲೆ ಬಂದೀಖಾನೆಯನ್ನು ಸೇರಿರುವರು. ವಿದೇಶಿ ವಸ್ತ್ರ ಬಹಿಷ್ಕಾರವು ಸರಾಗವಾಗಿ ನಡೆಯುತ್ತಿರುವದು.

— ಪಂಡಿತ ಜವಾಹಿರಲಾಲ್ ಮತ್ತು ಮಿ! ಸೇನಗುಪ್ತರ ದಸ್ತಗಿರಿಗಳನ್ನು ನಿರೋಧಿಸಿ ಭರತಖಂಡದ ಅನೇಕ ಪ್ರಾಂತ್ಯಗಳಲ್ಲಿ ಹರತಾಳಗಳು ಆಚರಿಸಲ್ಪಟ್ಟವು.

ಡಿಲ್ಲಿಯಲ್ಲಿ ಕ್ವೀನ್ ಗಾರ್ಡನ್‌ನಲ್ಲಿ ಒಂದು ಗುಂಡು ಬಾರಿನ ಸಮಾರಾಧನೆಯು ನಡೆದಿರುವುದಂತೆ. ತಕ್ಷೀರು ನಡೆಸಿದವನ ಪತ್ತೆಯೇ ಇಲ್ಲ. ಪೋಲೀಸರು ಆತನನ್ನು ಗೊತ್ತು ಹಚ್ಚುವ ಪ್ರಯತ್ನದಲ್ಲಿರುವರೆಂದು ತಿಳಿದುಬರುತ್ತದೆ. ಲಾತಿಫ್ ಹುಸೇನ್ ಎಂಬೊಬ್ಬನ ತೊಡೆಗೆ ಗುಂಡಿನ ಏಟು ಬಲವಾಗಿ ತಾಗಿರುವದು.

— ಮುಂಬಾಯಿಯಲ್ಲಿ ೩೦ ೦೦೦ ಜನರು ಪೋಲೀಸು ಅತ್ಯಾಚಾರಗಳನ್ನು ವಿರೋಧಿಸಿ ತಮ್ಮ ಸಹಿ ಹಾಕಲ್ಪಟ್ಟ ಅರ್ಜಿಯೊಂದನ್ನು ಚೀಫ್ ಸಾಹೇಬರಿಗೆ ಕಳುಹಿಸಿರುವರಂತೆ! ವಿಚಾರಣೆಯ ಫಲಾಫಲಗಳ ವರದಿಯು ಇನ್ನೂ ಹೊರಬಿದ್ದಿರುವದಿಲ್ಲ.

— ಕಲಕತ್ತಾ ಸಿಟಿ ಮ್ಯಾಜಿಸ್ಟ್ರೇಟರು ಕಾನೂನು ಪ್ರಕಾರ ಪಿಕೆಟಿಂಗ್ ಮಾಡುವವರಿಗೆ ಪೋಲೀಸರು ಆತಂಕಿಸಕೂಡದೆಂದು ಅಪ್ಪಣೆ ಮಾಡಿರುವರಂತೆ.

— ಹೈದರಾಬಾದಿನ ಪೈಗಾಸ್ ದೇಶದ ಜಡ್ಜರೊಬ್ಬರು ಸದರಿ ಊರಿನ ಮುನಿಸಿಪಾಲಿಟಿಯವರು ಮಾರ್ಗ ಸರಿಮಾಡದಿರುವುದರಿಂದ ತನ್ನ ಮೋಟಾರ ಕಾರಿಗೆ ಹಾನಿಯುಂಟಾಗಿರುವದೆಂಬ ಸಬಬಿನ ಮೇಲೆ ಸರಕಾರದ ಮೇಲೆ ಫಿರ್ಯಾದಿ ನಡೆಸಿದುದಕ್ಕಾಗಿ ಬ್ರಿಟಿಷ ಸರಕಾರವು ಅದು ಕಾಸು ಜುಲ್ಮಾನೆ ಕೊಟ್ಟಿರುವುದಂತೆ!

— ಮುಂಬಾಯಿಯಲ್ಲಿ ಮಿ ರಾಜ ಎಂಬವರನ್ನು ಐ ಪಿ ಸಿ ೧೨೪ (ಎ) ಪ್ರಕರಣದ ಮೇಲೆ ರಾಜದ್ರೋಹಕರವಾದ ಭಾಷಣವಿತ್ತರೆಂದು ೨ ವರ್ಷದ ಕಠಿಣ ಸಜೆ ಮತ್ತು ೬೦೦೦ ರೂಪಾಯಿಗಳ ಜುಲ್ಮಾನೆಯನ್ನು ವಿಧಿಸಿರುವರಷ್ಟೆ! ಇವರ ವಿಚಾರಣಾ ಸಮಯದಲ್ಲಿ, ಸದರಿಯವರು ಹಾಜರುಪಡಿಸಿದ ಸ್ಟೇಟುಮೆಂಟನ್ನು ಓದಲಿಕ್ಕೂ ಕೂಡ ಅಪ್ಪಣೆ ದೊರೆಯುವದು ಕಷ್ಟವಾಯಿತಂತೆ! ಅದರೂ ಕೆಲವಂಶ ರಿಪೋರ್ಟನ್ನು ಮಾತ್ರವೇ ಓದಲಾಯಿತು. ಮಿಕ್ಕ ಭಾಗದ ಸಾರಾಂಶವು ರಾಜದ್ರೋಹಕವಾಗಿದ್ದುದರಿಂದ ಓದಬಾರದೆಂದು ಮ್ಯಾಜಿಸ್ಟ್ರೇಟರ ಕಟ್ಟಪ್ಪಣೆಯಾಯಿತಂತೆ! ಹಾಗೂ ಮಿ ರಾಜರು, ಕೊನೆಗೆ ಮ್ಯಾಜಿಸ್ಟ್ರೇಟರೊಡನೆ — 'ಮಿತ್ರವರ್ಯರಾದ ಮ್ಯಾಜಿಸ್ಟ್ರೇಟರೆ! ನಾನು ಹೇಳಲಿಕ್ಕಿರುವ ವಿಷಯವೆಂದರೆ — ನಾನು ರಾಷ್ಟ್ರೀಯ ಚಳವಳಿಯಲ್ಲಿ ಮಾಡಿದ ಕೆಲಸವು ತೀರ ಅಲ್ಪವಾಗಿರುವದು; ಇಷ್ಟು ಮಾತ್ರವಲ್ಲದೆ ಬೇರೇನಿರುವದಿಲ್ಲ' ಎಂದರು. ಈ ಮಾತಿನಿಂದ ಸತ್ಯಾಗ್ರಹಿಯು, ತನ್ನ ವಿರೋಧಿಯನ್ನಾದರೂ ಮಿತ್ರನಂತೆ ಭಾವಿಸುವನೆಂಬುದು ಸ್ಪಷ್ಟ

— ಮುಂಬಾಯಿಯಲ್ಲಿ "ಜನತಾ ಸೇನೆ"ಯ ವ್ಯವಸ್ಥಾಪಕರಾದ ಶ್ರೀ ಎಚ್. ಡಿ. ರಾಜರನ್ನು ದಸ್ತಗಿರಿ ಮಾಡಿ, ವಿಚಾರಣಾ ಸಮಯದಲ್ಲಿ ಮ್ಯಾಜಿಸ್ಟ್ರೇಟರು ಬರುವದರ ಮೊದಲು ಮೇಲೆ ಹೇಳಲ್ಪಟ್ಟ ಸಂಸ್ಥೆಯ ಸದಸ್ಯನೊಬ್ಬನು ಮ್ಯಾಜಿಸ್ಟ್ರೇಟರ ಆಸ್ಥಾನದಲ್ಲಿ ಕುಳಿತು, "ನನಗೀಗ ಸ್ವರಾಜ್ಯ ಸಿಕ್ಕಿತು, ನಾನೀಗ ಮಿ। ರಾಜರ ತನಿಖೆಯನ್ನು ನಡಿಸುವೆನು" ಎಂದನ್ನುವದರೊಳಗೆ ಮ್ಯಾಜಿಸ್ಟ್ರೇಟ ಬಂದರಂತೆ! ಅಷ್ಟರಲ್ಲಿ ಪೋಲೀಸನೊಬ್ಬನು ಸದರಿ ಸದಸ್ಯನನ್ನು ಕೆಳಗೆ ದೂಡಿದನಂತೆ!

— ಶೋಲಾಪುರದಲ್ಲಿ ಅಪ್ರಸಿದ್ಧ ಜಿರ್ಗವು ಫಲಕಾರಿಯಾಗದೆ ಕೊನೆಗಂಡಿರುವದೆಂದು ತಿಳಿದುಬರುತ್ತದೆ

— ಪಂಜಾಬಿನ ಸಯ್ಯಲ್ಕೋಟೆಯ ಸೆಶನ್ಸ್ ಜಡ್ಜರು, ಓರ್ಡಿನನ್ಸು ಕಾನೂನಿನಲ್ಲಿ, 'ಪಿಕೆಟ' ಎಂಬ ಶಬ್ದವೇ ಇಲ್ಲವೆಂಬದಾಗಿ ಹೇಳಿರುವರು, ಮಾತ್ರವಲ್ಲದೆ ಪಿಕೆಟ್ ಮಾಡಿದ ೧೮ ಮಂದಿಯನ್ನು ವಿಚಾರಣೆ ನಡಿಸದೆ ಬಿಟ್ಟಿರುವರಂತೆ!

— ಮಿ। ಸೇನಗುಪ್ತರಿಗೆ ಒಂದು ವರ್ಷದ ಸಾದಾ ಸಜೆಯು ವಿಧಿಯಾಗಿರುವದು ಅವರ ಪತ್ನಿಯನ್ನೂ ತನಿಖೆ ಮಾಡಲಾಗುವದೆಂದು ತಿಳಿಯಲಾಗುತ್ತದೆ. ಪತ್ನಿಯೂ ಕೂಡ ಕೈದುಮಾಡಲ್ಪಟ್ಟವರು

— ಮಹಮ್ಮದಾಲಿಯವರು ರೌಂಡ್‌ಟೇಬಲ್ ಕಾನ್ಫರೆನ್ಸಿನ ಸಮ್ಮೇಳನಕ್ಕೆ ಹೋಗುವುದಕ್ಕಾಗಿ ಬೇಗಬೇಗನೇ ತನ್ನ ರೋಗ ನಿವಾರಣೆಯ ಚಿಕಿತ್ಸೆಯನ್ನು ಪೇರಿಸ್ ಪಟ್ಟಣದಲ್ಲಿ ನಡೆಸುತ್ತಿರುವರು, ಚಿಕಿತ್ಸೆಗಾಗಿ ಮಹಮ್ಮದಾಲಿಯವರು ಲಂಡನಿಗೆ ಹೋಗುವವರಿದ್ದರು ಆದರೆ ರೋಗವು ವಾಸಿ ಮಾಡಿಸಿಕೊಂಡೇ ರೌಂಡ್‌ಟೇಬಿಗ ಹೋಗಬೇಕೆಂದು ಅವರ ಆಸೆ!

— ಪೋಲೀಸರು ಥಿಲ್ಲಿಯಲ್ಲಿ ಇತ್ತೀಚೆಗೆ ಶೋಧೆ ನಡೆಸುತ್ತಿರುವಾಗ ಒಂದು ಬೊಂಬು ತಯಾರು ಮಾಡುವ ಕಾರಖಾನೆಯೊಂದನ್ನು ಗೊತ್ತುಮಾಡಿರುವರು ಪೋಲೀಸರು ಇಲ್ಲಿಂದ ಒಂದು ಕೋವಿ ೧ ಪಿಸ್ತೂಲು ಮತ್ತು ಬೊಂಬು ತಯಾರಿ ಬಗ್ಗೆ ಮಾಡಿಟ್ಟ ಮದ್ದನ್ನು ಕೈವಶಮಾಡಿ, ಯುನಿವರ್ಸಲ್ ಡ್ರಗ್ ಕಂಪೆನಿಯ ಪ್ರೊಪ್ರೈಟರರನ್ನು ದಸ್ತಗಿರಿ ಮಾಡಿರುವರಂತೆ! ಮಹನಾಲಾಲರ ಮನೆಯಲ್ಲಿ ಬೊಂಬು ತಯಾರಿಗೆ ಉಪಯೋಗಪಡುವ ಕೆಲವು ಔಷಧಿಗಳನ್ನು ಮಣ್ಣಿನಡಿಯಲ್ಲಿ ಹೂಳಿಟ್ಟಿದ್ದರು. ಪೋಲೀಸರ ಶೋಧೆಯಲ್ಲಿ ಸದರಿ ಔಷಧಿಗಳು ಪತ್ತೆಯಾಗಿ ಮನೆಯ ಯಜಮಾನರನ್ನು ದಸ್ತಗಿರಿಮಾಡಿರುವರು

— ಮುಂಬಾಯಿಯ ಪ್ರಭಾತಪೇರಿಗಳಲ್ಲಿ ಭಾಗವಹಿಸಿದವರನ್ನು ದಸ್ತಗಿರಿ ಮಾಡುತ್ತಲೇ ಇರುವರು, ಶಿಕ್ಷೆಯು ವಿಧಿಯಾಗುತ್ತಲೇ ಇರುವದು

— ಥಿಲ್ಲಿಯ ಬೊಂಬು ಅಪಘಾತದಲ್ಲಿ ಲಾಹೋರಿನ ಪಿತೂರಿ ಮೊಕದ್ದಮೆಗೆ ಸೇರಿದ ಧನ್ವಂತರಿಯನ್ನು ದಸ್ತಗಿರಿ ಮಾಡಿರುವರು ಈತನು ಲಾಹೋರಿನ ಮೊಕದ್ದಮೆಯಲ್ಲಿ ತಪ್ಪಿಸಿಕೊಂಡವನೆಂದೂ ವರ್ತಮಾನವಿರುವದು, ಧನ್ವಂತರಿಯು ಒಬ್ಬ ಪೋಲೀಸು ಕೊನಸ್ಟೇಬಲರಿಗೆ ಮೂರು ಗುಂಡುಗಳನ್ನು ಬಾರುಮಾಡಿರುವನಂತೆ ಒಂದೇವ ಎಂಬೊಬ್ಬರನ್ನು ಸಂಶಯದ ಮೇಲೆ ಪೋಲೀಸರು ಪತ್ತೆ ಹಚ್ಚುತ್ತಿರುವರು. ಈ ವಿಷಯದಲ್ಲಿ ಊರಿನ ಗಾಂಧಿ ಆಶ್ರಮ, ಡ್ರಗ್ಸ್‌ಸ್ಟೋರ್ ಮುಂತಾದವುಗಳನ್ನು ಪೋಲೀಸರು ಶೋಧೆ ನಡೆಸಿದರಂತೆ!

---

# ದಕ್ಷಿಣ ಕನ್ನಡ.

**ಮಂಗಳೂರು:** — ಮಂಗಳೂರು ತಾಲೂಕು ಬೋರ್ಡಿನ ಬರುವ ಮಹಾಸಭೆಯು ತಾಲೂಕು ಬೋರ್ಡು ಆಫೀಸಿನಲ್ಲಿ ನವಂಬ್ರ ತಾರೀಕು ೨೧ನೇ ಶುಕ್ರವಾರ ಅಪರಾಹ್ನ ಗಂಟೆ ೩ ಕ್ಕೆ ಸರಿಯಾಗಿ ಜರಗುವದು.

Paid up Capital: Rs. 1,75,000-
Reserve and other Funds Rs 1,42,810

***Fixed Deposits received for***
***24 months at 6½***
***12, 15, 18 or 21 months at 6***
***6 or 9 months at 5½***
***3 months at 5***

***Interest being payable every 3 months.***

**Current Deposit Accounts** are opened free of charge on interest allowed on Daily balances

*Further information may be had on application to the* SECRETARY *at the* HEAD OFFICE *or to the* AGENT *at the* BRANCH.

Office of the Bank, Udipi — 0—1930 — **P. Laxman Nayak,** Secretary



## "ಗ್ರೇಂಡ್ ಕ್ಲಿಯರೆನ್ಸ ಸೇಲ್"!

**ಬರೇ ಮೂರು ರೂಪಾಯಿಗಳ ವ್ಯಾಪಾರದಿಂದ 324 ಅಮೂಲ್ಯವಾದ ಪಾರಿತೋಷಕಗಳು! ನಮ್ಮ ಸುಗಂಧ ಪೂರಿತವಾದ 'ಒಟ್ಟೊ' ಮೋತಿಯಾ ತೈಲದ ಆರು ಬಾಟ್ಲಿಗಳನ್ನು ಒಮ್ಮೆಗೆನೇ ಕೊಂಡುಕೊಳ್ಳುವವರಿಗೆ ಈ ಕೆಳಗೆ ನಮೂದಿಸಿರುವ ೩೨೪ ಅಮೂಲ್ಯ ಬಹುಮಾನಗಳು ಉಚಿತವಾಗಿ ಕೊಡಲಾಗುವವು!**

ಬಂಗಾರ ಗಿಲ್ಟಿನ ಕೈ ಗಡಿಯಾರ ೧ [illegible] ಬಂಗಾರ ಗಿಲ್ಟಿನ ಗುಂಡಿಗಳ ಸೆಟ್ಟು ೧ [illegible] ಬಂಗಾರ ಗಿಲ್ಟಿನ [illegible] ಸೇಫ್ಟಿಪಿನ್ನು ಡಜನ್ ೧ ಪೆನ್ಸಿಲು ೧ [illegible] ಡಜನ್ ೧, ಪಿನ್ನುಗಳು ಡಜನ್ ೧ [illegible] ಬಂಗಾರ ಗಿಲ್ಟಿನ ಮೂಗುತಿ ೧ [illegible] ಪಿಸ್ತೂಲು ೧, ಕೇಪುಗಳು ೧೦೦, ಕೈಚೀಲ ೧ [illegible] (ನಿಮ್ಮ ಪಾದಗಳ ಅಳತೆಯ [illegible]) ಇವುಗಳೊಂದಿಗೆ ಮೂಲ್ಯ ರೂ. ೩—೦—೦ ಮಾತ್ರ. ಟಪ್ಪಾಲು ಹಾಸಲು ೦—೧೦—೦.



ಪತ್ರವ್ಯವಹಾರವು ಇಂಗ್ಲಿಷನಲ್ಲಿಯೇ ಸಾಗಲಿರುವುದು.

ಇಂಡಿಯನ್ ಸ್ಟೋರ್ಸ ಕೋ,
47, ಬೆನಿಯಾಟೋಲಾ ಸ್ಟ್ರೀಟ್, ಪಿ. ಓ., ಹಟ್ಕೋಲಾ, ಕಲ್ಕತ್ತೆ

**INDIAN STORES CO.** 47, Beniatola Street, Po, Hatkhola. CALCUTTA.

# ಮಹಾತ್ಮಾಜಿಯವರ ಸತ್ಯಾಗ್ರಹ ಸಮಾಚಾರ.

**ತಾ ೬—೧೧—೧೯೩೦**

**ಮುಂಬಾಯಿಯಲ್ಲಿ.**

ಕಳೆದ ಆದಿತ್ಯವಾರ ದಿನ ನಡೆದ ಪೋಲೀಸು ಅತ್ಯಾಚಾರಗಳನ್ನು ನಿರೀಕ್ಷಿಸಿ, ಶ್ರೀಮಂತ ಹೆಂಗುಸರಿಗುಂಟಾದ ಮಾನಹಾನಿಯನ್ನು ಒತ್ತಿಹೇಳುವಂತೆ, ಮಿ। ಹುಸೇನ್ ಭೈಯ್ಯಾ ಲಾಲ್ಜಿಯವರು ಈ ಕೆಳಗಿನ ಪತ್ರ ಒಂದನ್ನು ಸರ್ ಫ್ರೆಡ್ರಿಕ್ ಸ್ಟ್ಯಾಸ್ಸಿಗೆ ಬರೆದಿರುವರು:—

"ನಾನು ಮುಂಬಾಯಿಯ ಮುನ್ಸಿಪಲ್ ಕಾರ್ಪೊರೇಶನ್ ಮತ್ತು ಇಂಡಿಯನ್ ಮರ್ಚಂಟ್ಸ್ ಚೇಂಬರ್ ಎಂಬೆರಡು ಸಂಸ್ಥೆಗಳ ಅಧ್ಯಕ್ಷನಾಗಿದ್ದು, ಕಳೆದ ಆದಿತ್ಯವಾರ ಮುಂಬಾಯಿ ನಗರದಲ್ಲಿ ನಡೆದ ಪೋಲೀಸು ಅತ್ಯಾಚಾರ ಹಾಗೂ ಮುಖ್ಯವಾಗಿ ಸ್ತ್ರೀಯರಿಗೆ ಉಂಟಾದ ಅವಮಾನಗಳನ್ನು ತಿಳಿಸುವದು ನನ್ನ ಕರ್ತವ್ಯವೆಂದು ಕಂಡುಬಂದುದರಿಂದ ಈ ಪತ್ರವನ್ನು ಬರೆದಿರುತ್ತೇನೆ.

ಹೆಂಗಸರ ಮರ್ಯಾದೆಯನ್ನು ಕಾಪಾಡುವ ಕೆಲಸವು ಪೂರ್ವದೇಶಗಳಲ್ಲಿ ಹಾಗೂ ಇಂಡಿಯದಂತಹ ಪೌರ್ವಾತ್ಯ ದೇಶದಲ್ಲಿ ಪವಿತ್ರ ಧರ್ಮವಾಗಿ ಪರಿಗಣಿಸಲ್ಪಟ್ಟಿರುವದು. ಆ ಪ್ರಯುಕ್ತ, ಈ ಧರ್ಮಕ್ಕೆ ಲೋಪವನ್ನು ತಂದೊಡ್ಡಿದ ಪೋಲೀಸರ ಅತ್ಯಾಚಾರಗಳು ತೀರ ಅಸಹನೀಯವೇ ಸರಿ. ಪೋಲೀಸರು ನಾರೀ ಸತ್ಯಾಗ್ರಹಿಗಳನ್ನು ಮೋಟಾರ್ ಗಾಡಿಯೊಳಗೆ ಕೂತುಕೊಳ್ಳಿಸಿ, ದೂರದಲ್ಲಿದ್ದ ಒಂದು ಕಾಡಿಗೊಯ್ದು, ಅವರ ಅಗತ್ಯತೆಗಳಿಗೆ ಅನುಕೂಲತೆಗಳನ್ನೂ ಕೂಡ ಒದಗಿಸಿ ಕೊಡದೆ, ಅನೇಕ ರೀತಿಯಿಂದ ಕೈಮಾಡಿದ ವಿಷಯವು, ಇಡೀ ಮುಂಬಾಯಿಯನ್ನು ದುಃಖಾಗ್ನಿಯಲ್ಲಿ ಮುಳುಗಿಸಿರುವದು. ಈ ವಿಷಯವನ್ನು ತೀರ್ಮಾನಿಸುವರೆ, ಸಭೆ ಸೇರಿಸಬೇಕೆಂದು ಹಲವರ ಸಹಿಗಳಿಂದ ಕೂಡಿದ ಪತ್ರವೊಂದು, ಶೆರಿಫ್ ಸಾಹೇಬರ ಅವಗಾಹನೆಗಾಗಿ ಈ ಮೊದಲೇ ಕಳುಹಲ್ಪಟ್ಟಿರುವದು. ನವಂಬರ ೬ನೇ ತಾರೀಕಿಗೆ ಮುಂಬಾಯಿ ಕಾರ್ಪೊರೇಶನಿನ ಸ್ಪೆಶಲ್ ಸಭೆಯೂ ಜರಗಲಿಕ್ಕಿರುವದು. ಆದುದರಿಂದ ಈ ವಿಷಯಗಳಲ್ಲಿ ಸರಕಾರವು ಏನು ಆಲೋಚಿಸುತ್ತಿರುವದು ಮತ್ತು ಏನು ಮಾಡಲಿಕ್ಕಿರುವದು ಎಂಬುದನ್ನು ಮಾತ್ರ ತಿಳಿಯಲು ಇಚ್ಛಿಸುತ್ತೇನೆ. ನಾನು ಈ ಪತ್ರವನ್ನು ನನ್ನ ಕರ್ತವ್ಯ ದೃಷ್ಟಿಯಿಂದಲೇ ಬರೆದಿರುವೆನು.

ಮೇಲೆ ಹೇಳಿದಂತೆ ಬರೆದ ಲಾಲ್ಜಿಯವರ ಪತ್ರಕ್ಕೆ ಸರ್ ಫ್ರೆಡ್ರಿಕರ ಉತ್ತರ:-

ಗವರ್ನಮೆಂಟ್ ಹೌಸ್
ಮುಂಬಾಯಿ ೪ನೇ ನವಂಬರ '೩೦

ಪ್ರಿಯ ಲಾಲ್ಜಿಯವರೇ,

ನೀವು ಅಕ್ಟೋಬರ ತಾ ೩೧ಕ್ಕೆ ಬರೆದ ಪತ್ರಕ್ಕಾಗಿ ತುಂಬಾ ಅಭಿನಂದಿಸುವೆನು. ಆದರೆ, ಅಕ್ಟೋಬರ ೨೬ಕ್ಕೆ ನಡೆದ ಸ್ಥಳೀಕ ಗಲಭೆಯ ಕುರಿತು ಮುಂಬಾಯಿ ನಗರವು ಇಷ್ಟೊಂದು ವ್ಯಸನಕ್ಕೀಡಾಗಿರುವದೆಂಬುದರಲ್ಲಿ ಮಾತ್ರ ನಾನು ವಿಷಾದ ಪಡುವೆನು. ನಾನು ಮೇಲೆ ಹೇಳಲ್ಪಟ್ಟ ಗಲಭೆಯ ವಿಷಯದಲ್ಲಿ ಸಾಕಷ್ಟು ಶೋಧನೆಗಳನ್ನು ನಡೆಸಿರುವೆನು, ಆದರೆ ನನ್ನ ತಿಳುವಳಿಕೆಗೆ ಬಂದಂತೆ ೨೬ನೇ ತಾರೀಕಿನ ಗಲಭೆಯು ವರ್ತಮಾನ ಪತ್ರಿಕೆಗಳಲ್ಲಿ ಬಹಳವಾಗಿ ವಿಮರ್ಶಿಸಲ್ಪಡುತ್ತಿರುವದೆಂದು ಮಾತ್ರ ನಂಬಲೇಕಾಗುತ್ತದೆ

ನೀವು ಹೇಳುವಂತೆ ಪೋಲೀಸರು ಹೆಂಗುಸರ ಮೇಲೆ ಕೈ ವರ್ತಿಸಿದರೆಂಬ ವಿಷಯದಲ್ಲಿ, ನಾನು ತಿಳಿದುಕೊಂಡ ಮಟ್ಟಿಗೆ, ಪೋಲೀಸರು ಹೆಂಗುಸರನ್ನು ದಸ್ತಗಿರಿ ಮಾಡಿ ಜೈಲಿಗಟ್ಟುವ ಬದಲಾಗಿ ಸದರಿಯವರನ್ನು ಪೋಲೀಸ್ ಲಾರಿಯಲ್ಲಿರಿಸಿ, ಅವರು ಮಾಡಿದ ತಪ್ಪಿತಕ್ಕಾಗಿ, ಸ್ವಲ್ಪ ದೂರದಲ್ಲಿದ್ದ ಪಟ್ಟಣ ರಸ್ತೆ ಬದಿಯಲ್ಲಿ ತಂದುಬಿಟ್ಟರು. ಮಾತ್ರವಲ್ಲದೆ ಹೆಂಗುಸರನ್ನಿರಿಸಿದ ಸ್ಥಳವು ಬಹಿರಂಗವಾಗಿದ್ದು ಜನರು ಅತ್ತಿತ್ತ ಹಾದುಹೋಗುವ ರಸ್ತೆಯಾಗಿದ್ದಿತು; ಮೋಟಾರ್ ಗಾಡಿಗಳು ಸುಳಿದಾಡುವ ದಾರಿಯಾಗಿದ್ದಿತು. ಅಂತಹ ಸುರಕ್ಷಿತ ಸ್ಥಳದಲ್ಲಿ ಕೈದಿಗಳಾಗಿದ್ದ ಈ ಹೆಂಗಸರಿಗೆ ಯಾವ ತರದ ಭಯವೂ ಇದ್ದಿಲ್ಲ, ಅಲ್ಲದೆ ಹೆಂಗುಸರನ್ನು ಕೈದು ಮಾಡಿದ ತಕ್ಷಣವೇ ಬೇರೆ ಇರುವರು. ಆದುದರಿಂದ ಪೋಲೀಸು ಅಧಿಕಾರಿಗಳ ಮೇಲೆ ಈ ಕುರಿತು ದೋಷಾರೋಪಣೆ ಮಾಡುವ ವಿಷಯದಲ್ಲಿ ನನ್ನ ಮನಸ್ಸು ಒಡಂಬಡದು. ಮಾತ್ರವಲ್ಲದೆ, ಇಂತಹ ಅಲ್ಪ ಕೆಲಸವಾದರೂ ಕೂಡ, ಇನ್ನು ಮುಂದೆ ಸಂಭವಿಸದಂತೆ ಪೋಲೀಸು ಕಮಿಶನರು ತನ್ನ ತೀವ್ರ ಧೈರ್ಯ ಹೇಳಿರುವರು.

ಅದು ಹೊರತು, ಪೋಲೀಸರು ಹೆಂಗಸರ ಮೇಲೆ ಅಕ್ರಮವಾಗಿ ಕೈ ಮಾಡಿದರೆಂಬುದರಲ್ಲಿ ಪೋಲೀಸರು ನ್ಯಾಯಬಾಹಿರ ಸಮಿತಿಯ ಸದಸ್ಯರಿಂದ ಜರಗಿಸಲ್ಪಟ್ಟ ಸಭೆಯನ್ನು ಚದರಿಸುವ ಕೆಲಸದಲ್ಲಿ, ಅಷ್ಟಲ್ಪ ಅಧಿಕಾರವನ್ನು ಮಾತ್ರವೇ ತೋರ್ಪಡಿಸಿದರೆಂದು ನಾನು ಧೈರ್ಯದಿಂದ ಹೇಳಬಲ್ಲೆನು. ಹೆಂಗಸರು ತಮ್ಮ ಕೈಗಳಲ್ಲಿದ್ದ ಚಿಕ್ಕ ಪುಟ್ಟ ರಾಷ್ಟ್ರಧ್ವಜಗಳನ್ನು ಪೋಲೀಸರು ಕೇಳಿದ ಕೂಡಲೆ ಕೊಡದಿರುವವರಿಂದ, ಅವುಗಳನ್ನು ಪೋಲೀಸರೇ ಕಿತ್ತುಕೊಳ್ಳಬೇಕಾಯಿತು. ಈ ಸಂದರ್ಭಗಳಲ್ಲಿ ಪೋಲೀಸರಿಂದಾಗಿ, ಮಹಿಳೆಯರಿಗೆ ಅಲ್ಪಸ್ವಲ್ಪ ನೋವು ಉಂಟಾಗಿರಬಹುದೋ ಏನೋ?

ಹೆಂಗುಸರ ಮೇಲೆ ಅಕ್ರಮವಾಗಿ ಕೈವರ್ತಿಸುವ ಪ್ರಮಾದದಲ್ಲಿ, ನನ್ನಷ್ಟು ವ್ಯಸನ ಪಡುವವರು ಬೇರೆ ಇರಲಾರರು. ಆದರೆ ಈ ವಿಷಯದ ಜವಾಬ್ದಾರಿಕೆ ಮಾತ್ರ, ಆ ಮಹಿಳೆಯರನ್ನು ಹುರಿದುಂಬಿಸಿದವರ ಮೇಲೆಯೇ ಹೊರಿಸತಕ್ಕದ್ದೆಂದು ತೋರುತ್ತದೆ. ಪ್ರೋತ್ಸಾಹಿಸುವವರಿದ್ದುದರಿಂದಲೇ, ಅಬಲೆಯರಾದ ಹೆಂಗುಸರೂ ಕೂಡ ಸವಿನಯ ಕಾಯಿದೆ ಭಂಗದಲ್ಲಿ ಕೈಹಚ್ಚಬೇಕಾಯಿತೆಂದು ತಿಳಿದುಬರುತ್ತದೆ. ಕೆಲತಿಂಗಳುಗಳಿಂದಲೂ, ಕಾಂಗ್ರೆಸ್ ಸದಸ್ಯರು, ಸತ್ಯಾಗ್ರಹ ಚಳವಳದಲ್ಲಿ ಹೆಂಗುಸರನ್ನೇ ಮುಂದೆ ಹೋಗಗೊಟ್ಟು, ದೇಶದಲ್ಲಿ ಅನ್ಯಾಯವನ್ನು ಹರಡುತ್ತಿರುವರು. ಈ ಬಗೆ, ಪೋಲೀಸರು ಅಬಲೆಯರ ಕಡೆಗೆ ತೋರ್ಪಡಿಸಿದ ಅಧಿಕಾರವು, ಇತರ ದೇಶಗಳಲ್ಲಿ ಕಾನೂನುಭಂಗ ಮಾಡಿದ ಮಹಿಳೆಯರ ಮೇಲೆ ತೋರಿಸುವ ಸರಕಾರ ಅಧಿಕಾರಕ್ಕಿಂತ ಎಷ್ಟೋ ಕಡಿಮೆ ಘನತೆಯುಳ್ಳದ್ದಾಗಿರುವದು. ಆದುದರಿಂದ ಇನ್ನು ಮುಂದೆಯಾದರೂ ಜನರು ಸ್ವಸ್ಥಚಿತ್ತರಾಗುವರೆಂದು ನಂಬಬಹುದಲ್ಲವೇ?

ಅಂತೂ, ಸರಕಾರಕ್ಕೆ ಸಂಭವಿಸಿದ ಪ್ರಕೃತದ ತೊಂದರೆಗಳನ್ನು ನೀವು ಅರಿತಿರುವಿರಷ್ಟೆ! ಯಾವದೇ ಸರಕಾರವು ತನ್ನ ಆಡಳಿತಕ್ಕೆ ಒಳಪಟ್ಟ ರಾಜ್ಯಗಳಲ್ಲಿ ಕಾನೂನು ಕಾಯಿದೆಗಳನ್ನು ತಿರಸ್ಕರಿಸಲು ಎಡೆಕೊಡುವುದೇ? ಮತ್ತು ಅಂತಹ ಕಾನೂನು ಭಂಗವು ದೇಶದಲ್ಲಿ ಹೆಚ್ಚುದಷ್ಟಕ್ಕೆ ಸರಕಾರವು ಸದರಿ ಕಾಯಿದೆ ಭಂಗವನ್ನು ನಿಲ್ಲಿಸುವದಕ್ಕಾಗಿ ಯೋಗ್ಯ ವಿಚಾರಣೆಗಳನ್ನು ಮಾಡಬೇಕಾದುದು ಕರ್ತವ್ಯವಲ್ಲವೇ? ರಾಜ್ಯದಲ್ಲಿ ಹೆಂಗಸರೂ ಗಂಡಸರೂ ವಿಧ್ವಂಸ ಭಾವನೆಯಿಂದ ಸರಕಾರವನ್ನು ಉಗ್ರ ಒಡೆಯಬೇಕೆಂದು ಕಾಯಿದೆಭಂಗಕ್ಕೆ ಕೈಹಚ್ಚಿರುವ ವಿಷಾದಕರ ವಿಷಯದಲ್ಲಿ ಸರಕಾರವು ಯೋಗ್ಯ ಗಮನವೀಯದಿರದೆಂದೇ ಹೇಳಬೇಕಾಗುತ್ತದೆ" ಎಂದು ಉತ್ತರ ಕೊಟ್ಟಿರುವರು.

**ಬಪ್ಪಾಲು ಕಟ್ಟೆಗಳ ಪಿಕೆಟಿಂಗ್**

ಮುಂಬಾಯಿಯ ಸಮರಸಂಸ್ಥೆಗೆ ಡಾ। ಬಾಲೇಕರ್ ಎಂಬವರನ್ನು ೧೯ನೇ ಅಧ್ಯಕ್ಷರನ್ನಾಗಿ ನಿಯಮಿಸಿರುವರು. ನಗರದ ಬಪ್ಪಾಲುಕಟ್ಟೆಗಳ ಪಿಕೆಟಿಂಗ್ ಕಾರ್ಯಗಳು ಆರಂಭಿಸಿರುವವು. ತಾರೀಖು ೬—೧೧—೩೦ನೇ ದಿನ ಮುಂಬಾಯಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಪೋಸ್ಟಾಫಿಸಿನ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಹಣವಿಡಬಾರದೆಂದು ಸಾರಿಹೇಳುತ್ತಿದ್ದ ಸತ್ಯಾಗ್ರಹ ಸ್ವಯಂ ಸೇವಕರಿಬ್ಬರನ್ನು ದಸ್ತಗಿರಿ ಮಾಡಿಸಿ, ಆರಾರು ತಿಂಗಳುಗಳ ಕಠಿಣ ಶಿಕ್ಷೆಗೂ ರೂಪಾಯಿ ೫೦೦ ಜುಲ್ಮಾನೆಗೂ ಗುರಿಪಡಿಸಿರುವರೆಂದು ತಿಳಿದುಬರುತ್ತದೆ. ಜುಲ್ಮಾನೆ ಕೊಡಲು ತಪ್ಪಿದ್ದಲ್ಲಿ ಆರು ವಾರಗಳ ಅಧಿಕ ಶಿಕ್ಷೆ.

ಮುಂಬಾಯಿ ಕಾಂಗ್ರೆಸ್ಸಿನ ಆಕ್ಟಿಂಗ್ ಪ್ರೆಸಿಡೆಂಟರಾದ ಪಂಡಿತ್ ವಲ್ಲಭಭಾಯಿಯವರು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರಾದ ಮಹಾದೇವ್ ದೇಸಾಯಿಯವರೊಡನೆ, ಮಾನ್ಯ ಮೋತಿಲಾಲರನ್ನು ನೋಡುವದಕ್ಕಾಗಿ ಅಲ್ಲಹಾಬಾದಿಗೆ ತೆರಳಿರುವರು.

**ಕಲ್ಕತ್ತದಲ್ಲಿ.**

ಎಮ್ ಎಲ್ ಸಿ ಆಗಿದ್ದು ಕಾಂಗ್ರೆಸ್ ಕಾರ್ಯಕಲಾಪಗಳಲ್ಲಿ ಹೆಚ್ಚಿನ ಭಾಗ ವಹಿಸಿದ, ಮಿ। ಸುಭಾಸಚಂದ್ರ ಬೋಸರೊಡನೆ ಸೆರೆಮನೆಗೆ ಆಹ್ವಾನಿಸಲ್ಪಟ್ಟಿದ್ದ ಡಾ। ಜೆ। ಎಮ್ ದಾಸಗುಪ್ತರು ತನಗೆ ವಿಧಿಸಲ್ಪಟ್ಟ ೯ ತಿಂಗಳ ಕಠಿಣ ಶಿಕ್ಷೆಯ ಅವಧಿಯನ್ನು ತೀರಿಸಿ, ಎಲಿಪುರ ಸೆಂಟ್ರಲ್ ಜೈಲಿನಿಂದ ಬಿಡುಗಡೆ ಹೊಂದಲ್ಪಟ್ಟಿರುವರು. ಸದರಿಯವರ ಶಿಕ್ಷಾ ಅವಧಿಯ ಕೊನೆಯ ಎರಡು ತಿಂಗಳನ್ನು ಡಾ। ಗುಪ್ತರು ತನ್ನ ಆರೋಗ್ಯರಕ್ಷಣೆಗಾಗಿ ಮೆಡಿಕಲ್ ಕಾಲೇಜ್ ಆಸ್ಪತ್ರೆಯಲ್ಲಿ ಕಳೆದರು. ಈ ಎರಡು ತಿಂಗಳ ಕಾಲವು, ಗುಪ್ತರಿಗೆ ವಿಧಿಸಿದ ಶಿಕ್ಷೆಯ ಅವಧಿಯಿಂದ ವಿರಹಿತವಾಗಿರುವದೆಂದು ಪರಿಗಣಿಸಲ್ಪಟ್ಟ ಕಾರಣ, ಗುಪ್ತರು ತನ್ನ ಅನುಯಾಯಿಗಳಾಗಿದ್ದ ಸುಭಾಸ್ ಚಂದ್ರರೊಡನೆ ಜೈಲನ್ನು ಬಿಡಲು ಎಡೆದೊರೆಯಲಿಲ್ಲ.

**ತಾರೀಖು ೭.**

**ಮುಂಬಾಯಿಯಲ್ಲಿ.**

ನಾರೀ ಸ್ವಯಂಸೇವಕರು ವಿದೇಶಿ ಬಟ್ಟೆಯ ಮಳಿಗೆಗಳನ್ನು ಎಡೆಬಿಡದೆ ಪಹರೆ ಮಾಡುತ್ತಿರುವರು. ಗಿರಿಗಾಮ್ ರಸ್ತೆಯಲ್ಲಿ, ನಾರೀ ಸ್ವಯಂಸೇವಕರ ದಸ್ತಗಿರಿಗಳನ್ನು ಮನ್ನಿಸಬೇಕೆಂಬ ಇರಾದೆಯಿಂದ ಅನೇಕ ವಿದೇಶಿ ಜವಳಿ ಅಂಗಡಿಗಳು ಮುಚ್ಚಲ್ಪಟ್ಟಿರುವವು. ದಸ್ತಗಿರಿಗಳೂ, ಶಿಕ್ಷೆಯೂ ನಡೆಯುತ್ತಲೇ ಇರುವುವು. ನಾರೀ ಸ್ವಯಂಸೇವಕರಿಗಾದ ಅತ್ಯಾಚಾರಗಳ ಸಂಬಂಧವಾಗಿ, ಮುಂಬಾಯಿ ಮುಖಂಡರು ಶೆರೀಫ್ ಸಾಹೇಬರಿಗೆ ಕಳುಹಿಸಿದ ಅರ್ಜಿಯ ಉತ್ತರವು ಇನ್ನೂ ಹೊರಬೀಳಲಿಲ್ಲ. ಆಲೋಚನೆಯಲ್ಲೇ ಇರುವುದಂತೆ!

**ಅಲ್ಲಹಾಬಾದದಲ್ಲಿ.**

ಸರ್ದಾರ್ ವಲ್ಲಭಭಾಯಿಯವರು, ಮಿ। ಮಹದೇವ ದೇಸಾಯಿಯವರೊಡನೆ "ಆನಂದ ಭವನ"ಕ್ಕೆ ಬಂದು ತಲ್ಪಿರುವರು. ರಾಷ್ಟ್ರ ಜನತೆಯ ಸಪ್ತಾಹೋತ್ಸವವು ಬಹಳ ವಿಜೃಂಭಣೆಯಿಂದ ಜರಗಿತು. ವಲ್ಲಭಭಾಯಿಯವರು, ಲಂಡನಿನಿಂದ ಹಿಂದೂ ಪತ್ರಿಕೆಗೆ ಕಳುಹಿಸಲ್ಪಟ್ಟ Wilson Cable ಮತ್ತು ಸಪ್ರೂರವರ ಹೇಳಿಕೆ—ಇವೆರಡರ ಆಧಾರದ ಮೇಲೆ ರೌಂಡ್‌ಟೇಬಲ್ ಕಾನ್ಫರೆನ್ಸಿನ ಪರಿಣಾಮವನ್ನು ವಿಮರ್ಶಿಸಿದರು. ಪಂಡಿತ್ ಮದನಮೋಹನ ಮಾಲವೀಯರ ಜೈಲುವಾಸದ ಕುರಿತು ತುಂಬ ಅನುಭವವನ್ನು ಕೇಳಿ ತಿಳಿದಿರುವರೆಂದೂ ಪದಂತಿ. ನಾರೀ ಸ್ವಯಂಸೇವಕಿಯರ ಸಾಹಸದ ವಿಷಯದಲ್ಲಿ, ಮಾನ್ಯ ವಲ್ಲಭಭಾಯಿಯವರು ಹೀಗೆಂದರು: ಗಂಡಸರಂತೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಿಂದುಳಿದಿರುವರು. ಅಂದ ಮೇಲೆ ಹೆಂಗಸರು ತಮ್ಮ ಸಹಾನುಭೂತಿಯನ್ನು ತೋರಿಸುವದಕ್ಕಾಗಿ ಮುಂದರಿಯುವುದು ಉಚಿತವಷ್ಟೆ!

ಅಲ್ಲಹಾಬಾದ್ ಮುನ್ಸಿಪಲ್ ಬೋರ್ಡಿನವರು ಶ್ರೀಮತಿ ಕಸ್ತೂರಿ ಬಾಯಿ ಮತ್ತು ಸರ್ದಾರ್ ವಲ್ಲಭಭಾಯಿಯವರನ್ನು ಮನ್ನಿಸುವದಕ್ಕಾಗಿ, ದೊಡ್ಡದೊಂದು ಸಭೆಸೇರಿದರು. ಸ್ವಾಗತವು ಯಶಸ್ವಿಯಾಗಿ ಕೊನೆಗಂಡಿತು. ಬಾರ್ಡೋಲಿಯವರು ವಲ್ಲಭಭಾಯಿಯವರ ಪುರಸ್ಕಾರಾರ್ಥವಾಗಿ ಒಂದು ಡೆಪ್ಯುಟೇಶನನ್ನು ಕಳುಹಿಸಿರುವರಂತೆ!

**ಲಾಹೋರಿನಲ್ಲಿ.**

"ಮಿಲಾಪ್" ಪತ್ರಿಕೆಯ ಎಡಿಟರರ ಮಗನಾದ ಯಾಶಪಾಲ್ ಎಂಬ ಹತ್ತು ವರ್ಷದ ಹುಡುಗನನ್ನು, ರಾಜದ್ರೋಹ ಮಾಡಿದನೆಂಬ ತಕ್ಸೀರಿನ ಮೇಲೆ ಕೈದುಮಾಡಿ, ರೂ. ೧೦,೦೦೦ದ ಜಾಮೀನು ಪಡಕೊಂಡು, ಬಿಟ್ಟಿರುವರಂತೆ. ತಾ. ೧೯ಕ್ಕೆ ಸದರಿ ಮೊಕದ್ದಮೆಯು ವಿಚಾರಿಸಲ್ಪಡುವದೆಂದೂ ತಿಳಿದುಬರುತ್ತದೆ.

**ತಾರೀಖು ೮**

**ಬನಾರಿಸದಲ್ಲಿ.**

ಬಂಧಿಖಾನೆಯಲ್ಲಿದ್ದ ೩೪ ಮಂದಿ 'ಬಿ' ತರಗತಿಯ ರಾಜಕೀಯ ಕೈದಿಗಳು, ತಮಗೊದಗಿದ ಅಸಹನೀಯವಾದ ಸರಕಾರ ಆಜ್ಞೆಗಳಿಗಾಗಿ Hunger Strike ಮಾಡಿರುವರು. ಜೈಲರುಗಳಿಗೆ ಅವರಿಗೆ ಬೇಕಾದ ಆಹಾರ ಕೊಡಲಿಲ್ಲವಂತೆ! ಕೊಟ್ಟ ಆಹಾರವು ತಿನ್ನಲಿಕ್ಕೆ ಸಾಧ್ಯವಿದ್ದಿಲ್ಲವಂತೆ! ಕಳೆದ ಕೆಲವೇ ತಿಂಗಳುಗಳಿಂದ ಬನಾರಿಸದಲ್ಲಿ ಒಟ್ಟಾರೆ ಮೇಲೆ ರಾಜಕೀಯ ಕೈದಿಗಳ ಸಂಖ್ಯೆಯು ೫೦೦೦ ಆಗಿರುವದೆಂದು ತಿಳಿದುಬರುತ್ತದೆ. ಯುನೈಟೆಡ್ ಪ್ರಾಂತ್ಯದಲ್ಲಿ ಕಳೆದ ಒಕ್ಟೋಬರ ೩೧ನೇ ತಾರೀಕಿನ ವರೆಗೆ ೬೩೩ ಮಂದಿಯನ್ನು ಸತ್ಯಾಗ್ರಹ ಪೀಡೆಯ ವಿಮೋಚನೆಗಾಗಿ ಬಂದಿಖಾನೆಗೆ ಕಳುಹಿಸಿರುವರು

**ಕರಾಚಿಯಲ್ಲಿ**

ನಿಶಾನಿಷೇಧತೆ ಮತ್ತು ಉಪ್ಪಿನ ಸತ್ಯಾಗ್ರಹವು ಕ್ರಮವಾಗಿ ಮುಂದರಿಯುತ್ತಿರುವದು. ಪಿಕೆಟಿಂಗ್ ಮಾಡಿದ ೨೮ ಮಂದಿ ಸತ್ಯಾಗ್ರಹಿಗಳನ್ನು ತಾ ೮—೧೧—'೩೦ರಲ್ಲಿ ಸಿಟಿ ಮ್ಯಾಜಿಸ್ಟ್ರೇಟರು, ಪ್ರತಿಯೊಬ್ಬರಿಗೆ ೪ ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿ ಸೆರೆಮನೆಗೆ ಅಟ್ಟಿರುವರು. ಉಪ್ಪಿನ ಸತ್ಯಾಗ್ರಹ ಸಂಬಂಧವಾಗಿ ೩ ಮಂದಿ ಸ್ವಯಂಸೇವಕರನ್ನು ಆರುಮಾಸದ ಕಠಿಣ ಶಿಕ್ಷೆಗೆ ಗುರಿಪಡಿಸಿರುವರು, ೯ ಮಂದಿಗೆ ಲಾಟಿ ಏಟುಗಳು.

(೧೩ನೇ ಪುಟಕ್ಕೆ ಮುಂದರಿಸಿಯದೆ.)

The Zandu Pharmaceutical Works, Ltd., Bombay, 14
ದಿ ಝಾಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ 14

ಲೋಕಪ್ರಸಿದ್ಧವಾದ 'ಝಾಂಡೂ'ಯವರ

## ಚ್ಯವನಪ್ರಾಶ ಲೇಹ್ಯ

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು

[illegible]

ಕ್ರಯ 1 ಪೌಂಡು ಸೀಸೆ ರೂ. 2—8—0, ½ ಪೌ ರೂ 1—5—0, ¼ ಪೌ. ರೂ 0—13—0

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು.— ದಾಮೋದರ್ ಅಂಡ್ ಕಂಪೆನಿ, 78 ಟೈನಾ ಬಜಾರು ರಸ್ತೆ ಮದ್ರಾಸು

ತೀರ್ಥಹಳ್ಳಿ ಏಜಂಟರು.— ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು — ದಿ ಉಡುಪಿ ಎಂಪೋರಿಯಂ
ಉಡುಪಿ ಏಜಂಟರು — ಎಸ್. ಎಲ್ ಭಾಗವತ್ ಎಂಡ್ ಬ್ರದರ್ಸ್
ಪುತ್ತೂರು ಏಜಂಟರು — ಯು ಜನಾರ್ಧನರಾವ್ ಪುತ್ತೂರು, ದ ಕನ್ನಡ
ಮಂಗಳೂರು ಏಜಂಟರು — ಶಿವಪ್ಪ ಕೃಷ್ಣ — ಸ್ಟೇಟ್

☞ ವಿವರ ಪಟ್ಟಿಗಾಗಿ ಬೇಕಾದವರು ಸೋಲ್ ಏಜಂಟರಿಗೆ ಬರೆಯತಕ್ಕದ್ದು

---

TELEGRAMS ASPINWALLCO    TELEPHONE No 15

THE Firestone Gum Dipping process strengthens the tire to meet the demands of hill climbing, quick stops, sudden turns and high speeds. The Firestone tread is scientifically designed to grip the road in emergencies You can have this extra safety on your car. Drive in and use our service.

**Firestone** Gum-Dipped TIRES

DISTRIBUTOR
Aspinwall & Co Ltd
(Accessories) MANGALORE

STOCKISTS
UDIPI — *K Siddaya Hegde*
KASARGODE — *Rama Nayak*
KANHANGAD — *K S Russool*
COONDAPUR — *C Gopal Mukunda Pai*, General Merchant, COONDAPUR (S Kanara)
BHATKAL — *Messers Kashmee Sham shuddeen Saheb Motor Service*
PUTTUR — *K Venkatraya Pai*

---

*FOR YOUR CAR*

## WILLARD BATTERIES

SIMONIZ KLEENER    SIMONIZ POLISH

*AGENTS —*

## Messrs. Aspinwall & Co., Ltd
MANGALORE

---

"ಬಿಟ್ಟಿ"    "ಪ್ರಗಸಟ್ಟಿ"    "ಬಿಟ್ಟಿ"

ಜೇಬಿನ ಲಿವರ್ ಗಡಿಯಾರವೂ ಕೈ ಗಡಿಯಾರವೂ ಬಿಟ್ಟಿ

ಈ ತಿಂಗಳೊಳಗಾಗಿ ೩೦೦೦ ಗಡಿಯಾರಗಳನ್ನು ಬಿಟ್ಟಿಯಾಗಿ ಕೊಟ್ಟಿದ್ದೇವೆ

[illegible]

ಪತ್ರವ್ಯವಹಾರಗಳು ಇಂಗ್ಲೀಷಿನಲ್ಲಿ ಬರೆಯಬೇಕು

**Imperial Watch Company**
(S) Post No 12 BOMBAY

---

## ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು

ಹೆಚ್ಚಿನ ಮಾಹಿತಿಗಾಗಿ [illegible]

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

---

## ಮುದಲ್ ತರವಾದ ಬೆಳ್ಳಿ ಉಡಿದಾರ ಹಗ್ಗ
ESTD 1896

ಅನೇಕ ವರುಷದಿಂದ ನಾವು ಬೆಳ್ಳಿ ಉಡಿದಾರಗಳನ್ನು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸುತ್ತೇವೆ [illegible]

[illegible]

---

## Grand Clearing Sale

"ಬಟ್ಟೆ ಪುಲಾರಾಮ" [illegible]

[illegible]

**Indian Stores**
*5 Beadon Stree*
CALCUTTA

---

ಒಮ್ಮೆ ಪರೀಕ್ಷಿಸಿರಿ! ತೃಪ್ತಿ ಹೊಂದಿರಿ!

'ದಿ ಕ್ರೌನ್' ರಬ್ಬರ ಸ್ಟಾಂಪು ಕಂಪೆನಿ,
ಹೆಡ್ಡ ಆಫೀಸು ಬಲ್ಮಠ ರಸ್ತೆ, ಕಂಕನಾಡಿ ಪೋಸ್ಟು,
ಮಂಗಳೂರು, ದ ಕನ್ನಡ

## ರಬ್ಬರು ಮೊಹರುಗಳು

ಇಲ್ಲಿ ಉತ್ತಮವಾದ [illegible] ರಬ್ಬರು ಮೊಹರು [illegible] ಕಡಿಮೆ ಕ್ರಯಕ್ಕೆ ತಕ್ಕ ಸಮಯದಲ್ಲಿ ಮಾಡಿಕೊಡುತ್ತದೆ

ಹೆಚ್ಚಿನ ಮಾಹಿತಿಯನ್ನು ಪತ್ರಮೂಲಕ [illegible]

ಎಮ್ ದೇವದಾಸ ಶೆಟ್ಟಿ
ಮೆನೇಜಿಂಗ ಪ್ರೊಪ್ರೈಟರ್

## ಕೊಲೊನಿಗಳಿಗೆ ಹೋದ ಕೂಲಿಯಾಳುಗಳ ಗತಿ ಏನು?

ಇಂಡಿಯಾ ದೇಶದಿಂದ ಕೆನಿಯಾ, ದಕ್ಷಿಣ ಆಫ್ರಿಕ, ದಕ್ಷಿಣ ಅಮೇರಿಕದ ಗಿಯಾನಾ, ಸಿಲೋನ್, ಮಲಯ, ಶಾಂತ ಸಾಗರದಲ್ಲಿರುವ ಫಿಜಿ ದ್ವೀಪಗಳು, ಬ್ರೆಜಿಲ್ ಮುಂತಾದ ದೇಶಗಳಿಗೆ ಕೂಲಿಯಾಳುಗಳಾಗಿ ಸಾವಿರಗಟ್ಟಲೆಯಿಂದ ಜನರು ಹೋಗುತ್ತಿರುವರು. ಇವರಲ್ಲಿ ಎರಡು ವಿಧದ ಕೂಲಿಯಾಳುಗಳಿರುವರು. ಕೆಲವರು ಸಿಲೋನ್, ಮಲಯಾ ದೇಶಗಳಿಗೆ ವರುಷಕ್ಕೊಂದಾವರ್ತಿ ಹೋಗಿ ಕೆಲಸ ಮಾಡಿ ಸಂಪಾದಿಸಿದ ಹಣ ತೆಗೆದುಕೊಂಡು ತಮ್ಮ ಹೆಂಡತಿಮಕ್ಕಳ ಬಳಿಗೆ ಬರುವವರು, ಕೆಲವರು ಹೆಂಡತಿಮಕ್ಕಳ ಸಹಿತವಾಗಿ ಹೋಗಿ ಅಲ್ಲಿಯೇ ವಾಸಮಾಡುವರು. ಇವರು ಅಂಥಾ ಕೊಲೊನಿಗಳಲ್ಲಿ ಉಳಕೊಂಡರೆ, ಆ ಕೊಲೊನಿಗಳು ಯುರೋಪಿಯನ್ ಜನರ ಅಧೀನದಲ್ಲಿರುವುದರಿಂದ ಈ ಕೂಲಿಯಾಳುಗಳಿಗೆ ಸ್ವಂತ ಆಸ್ತಿ ಮಾಡಲಿಕ್ಕೂ ಸಾಧ್ಯವಿಲ್ಲ. ದೇಶದ ರಾಜ್ಯಭಾರದಲ್ಲಿ ಇವರಿಗೆ ಯಾವ ತರದ ಹಕ್ಕು ಸ್ವಾತಂತ್ರ್ಯಗಳೂ ಇರುವುದಿಲ್ಲ. ಇದರಿಂದ ದಕ್ಷಿಣ ಆಫ್ರಿಕ, ಕೆನಿಯಾ ಮುಂತಾದ ಕಡೆಗಳಲ್ಲಿರುವ ಜನರು ಬಹಳ ಕಷ್ಟಪಡುತ್ತಿರುವರು. ಇವರು ಹೋದ ರಾಜ್ಯಗಳು ಬ್ರಿಟಿಶ ಸಾಮ್ರಾಜ್ಯದ ಭಾಗಗಳಾಗಿದ್ದರೂ, ಇವರು ಬ್ರಿಟಿಶ ಇಂಡಿಯದವರಾದಾಗ್ಯೂ ಇಂಡಿಯದವರಾದ ಈ ಕೂಲಿಯಾಳುಗಳಿಗೆ ಯಾವತರದ ಸರಿಸಮಾನತೆಯ ಹಕ್ಕುಗಳಿರುವುದಿಲ್ಲ. ಬಿಳೀ ಜನರ ಕೂಲಿಯಾಳುಗಳಾಗಿ ಅವರು ಹೇಳಿದಂತೆ ಕೆಲಸ ಮಾಡಿ ಕಷ್ಟಪಡುವುದು ಮಾತ್ರವೇ ಕಂಡುಬರುತ್ತದಲ್ಲದೆ, ಬೇರೆ ಯಾವ ಪ್ರಯೋಜನವೂ ಇರುವುದಿಲ್ಲ. ಇವರು ಹೆಚ್ಚು ಸಮಯ ಆ ಕೊಲೊನಿಗಳಲ್ಲಿ ಆಯುಷ್ಯವನ್ನು ಕಳೆದುದರಿಂದ ಸ್ವದೇಶಕ್ಕೆ ಮರಳಿಕ್ಕೂ ಸಾಧ್ಯವಿಲ್ಲ. ಆದುದರಿಂದ ಇಂಡಿಯದ ಈ ಕೂಲಿಯಾಳುಗಳ ಸ್ಥಿತಿಯನ್ನು ಉದ್ಧರಿಸಲು ದಾರಿ ಹುಡುಕಬೇಕಲ್ಲವೇ?

## ಬ್ರಿಟಿಷ್ ಸಾಮ್ರಾಜ್ಯದ ಬಿಳೀ ಮತ್ತು ಕಪ್ಪು ಜನರಿಗೆ ಸರಿಸಮಾನತೆಯ ಹಕ್ಕು ಬಾಧ್ಯತೆಗಳು.

ಬ್ರಿಟಿಷ ಸಾಮ್ರಾಜ್ಯದಲ್ಲಿ ಸುಮಾರು ೪೯೦ ಮಿಲಿಯ ಜನರಿರುವರು. ಇವರಲ್ಲಿ ೩೬೦ ಮಿಲಿಯ ಜನರು ಕಪ್ಪು, ಬರೇ ೬೦ ಮಿಲಿಯ ಮಾತ್ರವೇ ಬಿಳೀ ಜನರು. ಈ ೬೦ ಮಿಲಿಯ ಬಿಳೀ ಜನರು ೩೬೦ ಮಿಲಿಯ ಕಪ್ಪು ಜನರನ್ನು ತಮ್ಮ ಕೈಕೆಳಗಿಟ್ಟು ಆಳುತ್ತಿರುವರು. ಈ ಜನರು ಸಮಾಧಾನದಿಂದ ಇರುವುದರಿಂದ ಆಳಲು ಸುಲಭ ಸಾಧ್ಯವಿದೆ. ವಿರೋಧ[illegible] ಈಗಿರುವ ಸೈನ್ಯವೂ ಸಾಲದು. ಯುದ್ಧದ ಹಡಗುಗಳೂ ಸಾಲದು. ವಿಮಾನ ಸೈನ್ಯವೂ ಸಾಲದು. ಆದ್ದರಿಂದ ಕಪ್ಪು ಜನರು ಹೆಚ್ಚಾಗಿ ಸಮಾಧಾನದಿಂದ [illegible] ಇರುವವರಾಗಿರುವರು. ಇಷ್ಟರ ವರೆಗೆ ಬಿಳಿ ಜನರೇ ಶ್ರೇಷ್ಠರು, ಎಂಬ ಭಾವನೆಯು ಎಲ್ಲಾ ಜನರಲ್ಲಿಯೂ ನಾಟಿಕೊಂಡಿತ್ತು. ಈಗ ಆ ಭಾವನೆಯು ಕಡಿಮೆಯಾಗುತ್ತಾ ಬಂದಿದೆ. ಈಗ ಕಪ್ಪು ಜನರು ಬಿಳೀ ಜನರಂತೆಯೇ ಸಮಸಮಾನ ಹಕ್ಕನ್ನು ಕೇಳಲಾರಂಭಿಸಿರುವರು. ಅದನ್ನು ಕೇಳುತ್ತಿರುವಾಗ ಬಿಳೀ ಜನರಿಗೆ ಬೇಸರವಾಗುತ್ತದೆ. ಸಿಟ್ಟು ಬರುತ್ತದೆ. ಆದರೆ ಬ್ರಿಟಿಶ್ ರಾಜತಂತ್ರಜ್ಞರು ಈ ಜನರನ್ನು ಸಮಾಧಾನಪಡಿಸುವುದಕ್ಕಾಗಿ ಇಂಪೀರಿಯಲ್ ಕೊನ್ಫರೆನ್ಸ್ ರೌಂಡಟೇಬಲ್ ಕೊನ್ಫರೆನ್ಸ್ ಮುಂತಾದವುಗಳನ್ನು ಮಾಡುತ್ತಿರುವರು. ಆದರೆ ಸಾಮ್ರಾಜ್ಯದ ಪ್ರತಿ ಒಂದು ಭಾಗದವರೂ, ವ್ಯಾಪಾರ, ಕೈಗಾರಿಕಾ ಸಂಘ, ಹಡಗುಗಳು ಮುಂತಾದವುಗಳು ತಮ್ಮ ಸ್ವಂತದ್ದಾಗಬೇಕೆಂದು ವಾದಿಸುತ್ತಿರುವವು. ಸಾಮ್ರಾಜ್ಯದಲ್ಲಿ ಸಮಾಧಾನವು ಇರಬೇಕಾದರೆ ಒಂದು ತಾಯಿ ಮಕ್ಕಳಂತಿರುವ ಸಾಮ್ರಾಜ್ಯದ ಎಲ್ಲಾ ಭಾಗಗಳಲ್ಲಿರುವ ಬಿಳೀ ಕಪ್ಪು ಜನರನ್ನು ಬಿಟ್ಟುಬಿಟ್ಟು ಸರಿಸಮಾನತೆಯಿಂದಲೂ ಪ್ರೀತಿಯಿಂದಲೂ ನಡಿಸಿದರೆ ಕೊನ್ಫರೆನ್ಸುಗಳು ಫಲಕಾರಿಯಾದಾವು. ಇಲ್ಲದಿದ್ದರೆ ಹಿಂಸೆಗೆ ಮಾತ್ರವೇ ದಾರಿಯಾಗುವುದೆಂದು ತೋರುತ್ತದೆ.

## ಮದರಾಸು ನ್ಯಾಯವಿಧಾಯಕ ಸಭೆಯ ಪ್ರೆಸಿಡೆಂಟರು.

ಮದರಾಸು ನ್ಯಾಯವಿಧಾಯಕ ಸಭೆಯ ಅಧಿವೇಶನವು ೩ನೇ ತಾರೀಕಿನಲ್ಲಿ ಜರಗಿತು. ೧೧೫ ಮಂದಿ ಎಲ್ಲಾ ವಿಧದ ಮೆಂಬರರು ಹಾಜರಿದ್ದರು. ಎಲ್ಲರೂ ಪ್ರಮಾಣ ಮಾಡಿದ ಮೇಲೆ ಅಧ್ಯಕ್ಷರ ಚುನಾವಣೆಯು ನಡಿಯಿತು. ರಾಮಚಂದ್ರ ರೆಡ್ಡಿಯವರೂ, ಯಾಕೂಬ ಹುಸ್ಸೇನರೂ ಉಮೇದುವಾರರಾಗಿದ್ದರು. ಡೋಕ್ಟರ ಸುಬ್ಬರಾಯನರು ಚುನಾವಣೆ ಮುಂದರಿಸಬೇಕೆಂದರು. ಅಧ್ಯಕ್ಷರು ಕೂಡದೆಂದರು. ಯಾಕೂಬ ಹುಸ್ಸೇನರು ಉಮೇದುವಾರಿಕೆ ಹಿಂತೆಗೆದರು. ರಾಮಚಂದ್ರ ರೆಡ್ಡಿಯವರು ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿಸಲ್ಪಟ್ಟರು. ಇವರಿಗೆ ಸಭೆಗಳನ್ನು ನಡಿಸಿ ಅನುಭವವು ಇದೆ. ಅದಲ್ಲದೆ ಹೊಸ ರಿಫೋರ್ಮು ಆದಂದಿನಿಂದ ಎರಡು ಮೂರು ಮಂದಿ ಪ್ರೆಸಿಡೆಂಟರು ಕಾರ್ಯಭಾರ ನಡಿಸಿದುದನ್ನು ಕೌನ್ಸಿಲ್ ಮೆಂಬರರಾಗಿದ್ದು ನೋಡಿ ಅನುಭವ ಪಡೆದಿರುವರು. ಇನ್ನು ಡೆಪ್ಯುಟಿ ಪ್ರೆಸಿಡೆಂಟರ ಚುನಾವಣೆ ಇದೆ. ಶ್ರೀ [illegible] ಮುತ್ತುಲಕ್ಷ್ಮಿ ರೆಡ್ಡಿಯವರು ಈ ಸ್ಥಾನವನ್ನು ವಹಿಸ್ವರು. ಈ ಸಾರಿ ಯಾರು ಮಹಿಳೆಕ್ಕೆ [illegible] ನೋಡಬೇಕಿದೆ. ಯಾರು ಚುನಾವಣೆ ಆದರೂ ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಯಾವ ಪದವಿಯೂ ದೊರೆಯುವುದಿಲ್ಲ. ಮಾರ್ಗ ಮಂತ್ರಿಗಳೂ ಪ್ರೆಸಿಡೆಂಟರೂ ತಮಿಳು ಮತ್ತು ತೆಲುಗು ದೇಶದವರೇ ಆಗಿರುವರು. ಇನ್ನು ಚುನಾವಣೆ ಆಗಲಿರುವ ಡೆಪ್ಯುಟಿ ಪ್ರೆಸಿಡೆಂಟರ ಪದವಿಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿನಿಧಿಗಳಾಗಿರುವವರು ಪಡೆದರೆ ದಕ್ಷಿಣ ಕನ್ನಡಿಗರ [illegible] ಆಸೆಯನ್ನು ಸಲ್ಲಿಸಿದಂತಾಗುವುದು.

## ದಕ್ಷಿಣ ಅಮೇರಿಕದಲ್ಲಿ ರಾಜಕೀಯ ಚಳವಳಿ.

ಸ್ವಲ್ಪ ಸಮಯದಿಂದ ದಕ್ಷಿಣ ಅಮೇರಿಕದಲ್ಲಿರುವ ಹಲವು ರಿಪಬ್ಲಿಕುಗಳಲ್ಲಿ ಕ್ರಾಂತಿಗಳು ಉಂಟಾಗುತ್ತಲೇ ಇವೆ. ಹಳೆ ಸರಕಾರಗಳನ್ನು ತೆಗೆದು ಹಾಕಿ ಹೊಸ ರೀತಿಯ ಸರಕಾರಗಳು ಸ್ಥಾಪಿಸಲ್ಪಟ್ಟವು. ಕೆಲವು ದಿವಸಗಳ ಹಿಂದೆ ಪೇರು ಮತ್ತು ಅರ್ಜೆಂಟೈನ್ ದೇಶಗಳಲ್ಲಿ ರಾಜ್ಯಭಾರವು ಬಿದ್ದುಹೋಗಿ ಹೊಸ ರಾಜ್ಯಭಾರ ಸ್ಥಾಪನೆಯಾಯಿತು. ಕೆಲವು ವಾರಗಳ ಹಿಂದೆ ಬೊಲಿವಿಯದಲ್ಲಿಯೂ [illegible] ಆಯಿತು. ಚಿಲಿಯಲ್ಲಿ ನಡಿಯುತ್ತಲಿದೆ. ಬ್ರೆಜಿಲ್ ಮತ್ತು ಕ್ಯೂಬದಲ್ಲಿ ಭರದಿಂದ ನಡಿಯುತ್ತಲಿದೆ. ಗ್ವಾಟಿಮಾಲ, ಪರಾಗ್ವೆಯಲ್ಲಿ ಇದೇ ಅವಸ್ಥೆಯಾಯಿತು. ಉರಾಗ್ವೆಯಲ್ಲಿ ಪ್ರೆಸಿಡೆಂಟರ ಬದಲಾವಣೆ ಆಗುತ್ತಲೇ ಇದೆ. ಈ ಕ್ರಾಂತಿಗಳನ್ನು ನೋಡಿದರೆ ಇವುಗಳಲ್ಲಿ ಎರಡು ವಿಧವುಗಳಿವೆ ಎಂದು ಕಂಡುಬರುತ್ತದೆ. ಪುರಾತನ ಕಾಲದಲ್ಲಿ ದಕ್ಷಿಣ ಅಮೇರಿಕವು ಸ್ಪೈನ್ ದೇಶದ ಅರಸರ ಕೈಕೆಳಗೆ ಇತ್ತು. ಆ ಸಮಯದಲ್ಲಿ ಸ್ಪೈನ್ ದೇಶದವರ ಕೈಯಿಂದ ತಪ್ಪಿ ಸ್ವತಂತ್ರವಾಗಬೇಕೆಂದಾಯಿತು. ಅರಸರ ಕೈಯಿಂದ ಸ್ವತಂತ್ರವಾಗಿ ಹಲವು ರಿಪಬ್ಲಿಕುಗಳಾದವು. ಈ ಆಧಿಕಾರ [illegible] ಹೊಂದಿದ ಮೇಲೆ [illegible] ಕ್ರಾಂತಿಯು ಉಂಟಾಗುತ್ತಲಿದೆ. ಇವುಗಳಲ್ಲಿ ಬ್ರೆಜಿಲ ಅತೀ ದೊಡ್ಡದಾಗಿದ್ದು ೩ [illegible] ಮಿಲಿಯ ಜನಸಂಖ್ಯೆ ಇದೆ. ಉಳಿದ [illegible] ೩ ಮಿಲಿಯ ಜನಸಂಖ್ಯೆ. [illegible] ದವರಲ್ಲಿ ಹೆಚ್ಚಿನವರು ಬಿಳಿ ಜನರು. [illegible], ಇಕ್ವೆಡೋರ್, ಬೊಲಿವಿಯ ಮತ್ತು ಪರಾಗ್ವೆಯ ಜನರಲ್ಲಿ ಹೆಚ್ಚಿನವರು [illegible]. ಚಿಲಿ, ಕೊಲಂಬಿಯಾ, ವೆನಿಜುವೇಲ [illegible] ಮಿಶ್ರ ಜಾತಿಯವರು. ಬ್ರೆಜಿಲಿನವರಲ್ಲಿ ಹೆಚ್ಚಿನವರು ನೀಗ್ರೋ ಜಾತಿಯವರು. ಈ ರೀತಿಯ [illegible] ಈ ಬಂಡವಾಳದವರು ಸ್ವತಂತ್ರರಾಗಿ ಸೂರ್ಯ [illegible].

## ಬ್ರಿಟಿಷ್ ಮಂತ್ರಿ ಮಂಡಲದಲ್ಲಿ ಒಡಕು.

ಬ್ರಿಟಿಷ್ ಮಂತ್ರಿ ಮಂಡಲದಲ್ಲಿ ಒಡಕು ಉಂಟಾಗಲು ಆಸ್ಪದಗಳು ಕಂಡು ಬರುತ್ತಲಿವೆ. ಈ ಒಡಕು ಉಂಟಾಗಲು ಮುಖ್ಯ ಕಾರಣವೇನೆಂದರೆ ಇಂಗ್ಲೆಂಡಿನಲ್ಲಿ ಕೆಲಸ [illegible] ಸಂಖ್ಯೆಯು ಹೆಚ್ಚುತ್ತಿದ್ದು [illegible] ಆ ಕಾರಣದಿಂದ ದೇಶಕ್ಕೆ ನಿರುದ್ಯೋಗಿಗಳ ಕಲಸ [illegible] ಗಿಸುವುದಕ್ಕೆ ಅನುಕೂಲತೆಮಾಡಬೇಕೆಂದು [illegible] ಒಂದು ಶಾಖೆಯು ಹೇಳುತ್ತಿರುವುದು. [illegible] ಕೋಶಾಧಿಪತಿ ಮಂತ್ರಿಗಳಾದ ಸ್ನೋಡನರಿಗೆ [illegible] ಇಂಡಿಯಾ ಸೆಕ್ರೆಟರಿಯವರಾದ ವೆಜ್‌ವುಡ್‌ಬೆನ್ನರೂ, [illegible] ಇವರ ಸ್ನೇಹಿತರು. ಸ್ನೋಡನರು ರಾಜಿನೆಕೊಟ್ಟರೆ ಇವರಿಬ್ಬರೂ ರಾಜಿನೆಕೊಡುವರೆಂಬ ವಾರ್ತೆ ಹಬ್ಬಿದೆ. ರೌಂಡ್ ಟೇಬಲ್ ಕೊನ್ಫರೆನ್ಸಿನ ಸಮಯ ಈ ಒಡಕು ಉಂಟಾಗುತ್ತದೋ ಎಂಬ ಸಂಶಯವು ಹಲವರಲ್ಲಿ ಹುಟ್ಟಿದೆ.

## ನೋಟಗಳು.

## NOTE.. S

ಮುಂಬಾಯಿಯಲ್ಲಿ ಜನ್ಮರಿಗೆ ಬಂದ ಹೊಸ ಓರ್ಡಿನೆನ್ಸು ಕರ್ನಾಟಕದಲ್ಲಿಯೂ ಜನ್ಮರಿಗೆ ಬಂತು. ಕರ್ನಾಟಕ ಕಾಂಗ್ರೆಸ ಕಮಿಟಿ, ಯುತ್‌ಲೀಗ್ ಕಮಿಟಿ, ಹಿಂದೂಸ್ಥಾನ ಸೇವಾದಲ, ಇದಕ್ಕೂ ಲಗಾವುಮಾಡಿಯೇ ಬಿಟ್ಟರು. ಮುಂದಿನ ಕಾರಬಾರು ಜಾರಿಗೆ ತರುವಾಗ.

•   •   •   •

ಮೊನ್ನೆಯ ದಿವಸ ಮುಂಬಾಯಿಯಲ್ಲಿ ನಡೆದ ಗಲಾಟೆಯು ಸನ್ನಂದ ಮಹಿಳೆಯರಿಗುಂಟಾದ ಅಪಮಾನದ ವಿಷಯ ಗವರ್ನರರಿಗೆ ಬರೆದ ಕಾಗದಕ್ಕೆ ಉತ್ತರ ಆಕ್ಷಣವೇ ಬಂದು ಬಿಟ್ಟಿತು.

•   •   •   •

ಉತ್ತರ ವಿಶ್ವೇಸಿಲ್ಲ. ಪೋಲೀಸ ಮಹನೀಯರು ಮಾಡಿದ ಕೆಲಸ ಅನ್ಯೋನ್ಯ ರೀತಿಯಲ್ಲಿ ತಪ್ಪಲ್ಲ. ಕಾನೂನಿನ ಮರ್ಯಾದೆ ಉಳಿಸಲು ಹಾಗೆ ಮಾಡಬೇಕಾಗುತ್ತದಂತೆ. ಇನ್ನೊಂದು ಮಾತು ಕಾಂಗ್ರೆಸಿನವರು ಮಹಿಳೆಯರ ಮುಖಾಂತರ ಸರಕಾರದವರ ಹತ್ತಿರ ಎದುರಾಡುತ್ತಾರಾಗಿ ಬರೆದೇ ಬಿಟ್ಟರು. ಇದೊಂದು ಅವರಿಗೆ ದೊಡ್ಡ ವಿಭವವಾಗಿದೆ.

•   •   •   •

ದಾರವಾಡದಲ್ಲಿ ಕೊಂಗ್ರೆಸ್ ಹೌಸ್ ಸರಕಾರದ ವಶವಾಯಿತು. ಕೊಂಗ್ರೆಸ್ ಧ್ವಜ ಹೋಗಿ, ಯೂನಿಯನ್ ಮೇಲೆ ಹೋಗಿ ಕೀರಿತು. ಹುಬ್ಬಳ್ಳಿಯಲ್ಲಿ ಸೇವಾದಲ ಆಫೀಸ್ ಜಪ್ತಿಯಾಯಿತು. ಜಪ್ತಿ ಮುಗಿದೊಡನೆ ಬಲವಾದ ಬೀಗ ಹಾಕಿ ಮೊಹರು ಹಾಕಿರುವರು. ಹೊಸ ಆರ್ಡಿನೆನ್ಸಿನ ರಭಸ.

•   •   •   •

ಮುಂಬಾಯಿ ಪೋಲೀಸ್ ಕಮಿಶನರು ವರ್ತಮಾನ ಪತ್ರಿಕೆಗಳ ಮೇಲೆ ಬಿದ್ದಿದ್ದಾರೆ. ಪತ್ರಿಕೆಗಳು ಅವರ ಮೇಲೆ ಬಿದ್ದಿದ್ದಾವೆ. ಮುಖ್ಯ ಸಂಗತಿ ಇದ್ದದ್ದು ಬರಿಯಬಾರದಾಗಿ.

•   •   •   •

ನಮ್ಮ ಮಂಗಳೂರಿಗೆ ಒಂದು ಸಿನೆಮಾ ಸ್ಟಾರ್ ಬಂದಿರುತ್ತದೆ. ಸ್ಟಾರಿನ ನರ್ತನ ಗಾಯನ ನೃತ್ಯಾ ಸಿನೆಮದಲ್ಲಿ ಮೊದಲಿನ ದಿವಸ ರಾಷ್ಟ್ರೀಯ ಹಾಡನ್ನು ಹಾಡಿ ನಮ್ಮ ಪೋಲೀಸರಿಗೆ ಸ್ವಲ್ಪ ಕೆಲಸವಾಯಿತು. ಊರಲ್ಲಿ ೧೪೪ನೇ ಕಲಂ ಜಾರಿಯಲ್ಲಿ ಇರುವಾಗ ಪಬ್ಲಿಕ್ ಸ್ಥಳದಲ್ಲಿ ರಾಷ್ಟ್ರೀಯ ಹಾಡನ್ನು ಹಾಡಬಾರದಾಗಿ ಹುಕುಂ ಹೊರಟಿತು.

•   •   •   •

ನಂತರ ರಾಷ್ಟ್ರೀಯ ಹಾಡನ್ನು ಹಾಡಲಿಕ್ಕೆ ಅಪ್ಪಣೆ ಬೇಕೆಂದಾಯಿತು. ಯಾವುದಕ್ಕೂ ಸಾಹೇಬರು ಊರಲ್ಲಿರಲಿಲ್ಲ.

•   •   •   •

೧೪೪ನೇ ಕಲಂ ಪುನಃ ಊರ್ಜಿತವಾಯಿತು, ಮಂಗಳೂರಿಗಾಯಿತು. ಇನ್ನು ಕಾರ್ಕಳಕ್ಕೆ ಮಾತ್ರ ಬಾಕಿ.

•   •   •   •

ವಿಲಾಯತಿಯಲ್ಲಿ ನಡೆಯುತ್ತಿದೆ, ಚಕ್ರಗೋಷ್ಠಿ. ಈ ಗೋಷ್ಠಿ ಒಳ್ಳೆಯ ಸಮಯದಲ್ಲಿ ಪ್ರಾರಂಭವಾಗಿದೆ. ಇಂಡಿಯದಿಂದ ಹೋದ ಮೆಂಬರರೆಲ್ಲರೂ ಸೌಖ್ಯದಲ್ಲಿರುವರು. ಬಾಕಿ ವರ್ತಮಾನ ಬರುವ ವಾರದಲ್ಲಿ.

•   •   •   •

ಚಕ್ರಗೋಷ್ಠಿಯು ಪ್ರಾರಂಭವಾಗುವ ದಿನ ಸೂಚಿಸುವುದಕ್ಕಾಗಿ ಕಲ್ಕತ್ತಾ ಮತ್ತು ಇತರ ಕಡೆಗಳಲ್ಲಿ ಹರತಾಳವನ್ನು ಆಚರಿಸಿರುವರು. [illegible] ಚಕ್ರಗೋಷ್ಠಿಯನ್ನು ನಿಷೇಧಿಸಿ ದೊಡ್ಡ ಮೆರವಣಿಗೆ ಮಾಡಬೇಕೆಂದು ನಿಶ್ಚಯಿಸಿದ್ದು ಪೋಲೀಸರು ಮೆರವಣಿಗೆ ಮಾಡದಿರುವುದಕ್ಕಾಗಿ ನೋಟೀಸು ಕೊಟ್ಟಿರುವರು. [illegible] ಮಾಡಲಾಯಿತೆಂದು ಪ್ರಥಮ ಸೂಚನೆ ಬಂತು.

•   •   •   •

ಚಕ್ರಗೋಷ್ಠಿಯಲ್ಲಿ ಇಂಗ್ಲಿಷ್ ಮಹಾರಾಜರು ಭಾಷಣ ಮಾಡಿದ ನಂತರ ಮಾತಾಡಿದವರು, ನಮ್ಮ ಹಿಂದೂ ಸಭ್ಯನವರು.

•   •   •   •

ವಿಲಾಯತಿ ಚಕ್ರಗೋಷ್ಠಿಯ ಸಭೆಯಲ್ಲಿ ಅರಸರು ಕೊಟ್ಟ ಭಾಷಣ ಹಿಂದೂಸ್ಥಾನದಲ್ಲಿ ಕೇಳಲು, ಲಾಹೋರಿನಲ್ಲಿ ರೇಡಿಯೊ ಸ್ಟೇಶನ ಸ್ಥಾಪಿಸುತ್ತಿರುವರು. ಅಲ್ಲಿ ಮಾತಾಡುವುದೇ ತಡ, ಇಲ್ಲಿ ಕೇಳುವ ಸರ್ವ ತಯಾರಿ ನಡದಿದೆ.

•   •   •   •

ಸ್ಟೇಟ್ ಡೆಲಿಗೇಟರೊಳಗೂ ಇತರರೊಳಗೂ ಈಗಲೇ ಬಂದಿರುತ್ತದಂತೆ ಸ್ವಲ್ಪ ವ್ಯತ್ಯಾಸ. ವ್ಯತ್ಯಾಸವನ್ನು ಇತ್ಯರ್ಥ ಪಡಿಸುವ ಗಡಿಬಿಡಿಯಲ್ಲಿದ್ದಾರೆ. ಇವರದೆಲ್ಲ ಮುಗಿಯಬೇಕು ತಾ ಗಾರರೊಳಗೆ, ನಂತರ ಚರ್ಚೆ ರೌಂಡ್‌ಟೇಬಲಿನ ಹತ್ತಿರ.

## ನೋಟೀಸು

ದಕ್ಷಿಣಕನ್ನಡ ಪುತ್ತೂರು ಡಿ ಮುನ್ಸಿಫ್ ಕೋರ್ಟಿನಲ್ಲಿ

O S No 554/1930

ಬಂವಾರು ನರ್ಸಪ್ಪಯ್ಯ—ವಾದಿ

ಧಾನ್ಯೂರ ಶಾಕೂರ—ಅಮ್ಮೆಂಬಳ ದಾಸಪ್ಪ ರಾಗೂರಿರ ಮಗ—ಮಂಗಳೂರು ಶಹಾರ ಪೈಕಿ ಬಂದರ—ಪ್ರತಿವಾದಿ

ವಾದಿಯು ದಾಖಲು ಮಾಡಿದ ಮೇಲಿನ ವಾಜ್ಯವನ್ನು ತನ್ನ ಬಗ್ಗೆ ತಾ ೨೧—11—30ಕ್ಕೆ ವ್ಯಾದೆ ಇಟ್ಟಿರುವುದರಿಂದ ಸದರಿ ಪ್ರತಿವಾದಿಯು ಆ ದಿವಸ 11 ಘಂಟೆಗೆ ಕೋರ್ಟಿಗೆ ಹಾಜರಾಗದಿದ್ದರೆ ಸದರಿ ವ್ಯಾಜ್ಯವು ಆತನ ಗೈರು ಹಾಜರಿಯಲ್ಲಿ ತೀರ್ಮಾನವಾದೀತು.

ಪುತ್ತೂರು, ತಾ. 10—11—30 — S Narsappaiya, Vakil for plaintiff

---

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

[illegible] 485 1930

ಅಬ್ದುಲ್ಲ ಬ್ಯಾರಿ—ಹಮ್ಮದಕುಟ್ಟಿ [illegible]—ಕಾಸರಗೋಡು ತಾಲೂಕು [illegible] ಕಸಬಾ [illegible] ನೀರಲ್ಲಿರುವವ—ವಾದಿ ಮತ್ತು

ಮಹಮ್ಮದ ಬ್ಯಾರಿ [illegible] ಸದ್ರಿ ತಾಲೂಕು ಮುಟ್ಟತ್ತೋಡಿ ಗ್ರಾಮ [illegible] ಪ್ರತಿವಾದಿ

ಸದ್ರಿ ವಾದಿಯು ಪ್ರೋ ನೋಟಿನ [illegible] ರೂ. ೧೫೫—೧೫—೦ಕ್ಕೆ ಪ್ರತಿವಾದಿಯ ಮೇಲೆ [illegible] ಮಾಡಿದ ವ್ಯಾಜ್ಯವು ಅಖೈರ ತನ್ನಿಕೆಗೆ ತಾ. [illegible]ಕ್ಕೆ ಇಟ್ಟಿರುತ್ತದೆ ಆ ದಿವಸ ಪ್ರತಿವಾದಿಯು ಹಾಜರಾಗದಿದ್ದರೆ ಏಕ್ಸ ಪಾರ್ಟಿಯಾಗಿ ತೀರ್ಮಾನವಾದೀತೆಂದು [illegible] ಈ ಮೂಲಕ ತಿಳಿಸಲಾಗುತ್ತದೆ

Kasaragod 5—11—1930 — K. Mammunhi, Vakil for Plaintiff

---

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

ಕ್ರಮ ನಂಬ್ರ [illegible]

ಪಕ್ಕಿರಬ್ಬ ಬ್ಯಾರಿ—ವಾದಿ ಮತ್ತು

ನಯ್ಯದ [illegible]—ಪ್ರತಿವಾದಿ

ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ [illegible] ವ್ಯಾಜ್ಯವು ತಾರೀಕು 14—11—30ಕ್ಕೆ ತನಿಖೆಗೆ [illegible] ಆ ದಿವಸ ಪ್ರತಿವಾದಿರು ಹಾಜರಾಗದಿದ್ದರೆ [illegible] ಪ್ರತಿವಾದಿರ ಗೈರಾಜರಿ ಸದರಿ ವ್ಯಾಜ್ಯವು ತೀರ್ಮಾನವಾಗುವದೆಂಬದಾಗಿ ಈ ಮೂಲಕ ತಿಳಿಸಲಾಗುತ್ತದೆ.

ಕಾಸರಗೋಡು 4—11—30 — K. Shama Shetty. [illegible]

---

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

I P [illegible]

ಕೊಗ್ಗ ಭಟ್ಟ—ಅಪ್ಪಯ್ಯನವರ [illegible] ಹಾಲಿ ಕಾಸರಗೋಡು ಕಸಬೆಯಲ್ಲಿರ [illegible]

1 ಕದ್ಮಯ್ಯ ಪೆರ್ಗಡ, [illegible] ಭಟ್ಟ, [illegible] ಮಾರು ರಾಮ ಕಂಪ್ರ [illegible], [illegible] ಪಕೀರ ಶೆಟ್ಟಿ [illegible] ರಾಮವೆಂಕಟಪ್ಪಯ್ಯ [illegible] 7 ಮಟಿ ಈಶ್ವರ ಭಟ್ಟ, 8 [illegible] ಶೇಡ್ಯಾಪು ತೊನ್ನಪ್ಪ, 10 [illegible] ಪೂವಣಿ, 11 ನಂಬ್ರ 2808ನೇ [illegible] ಸಹಕಾರ ಸಂಘದ ಅಧ್ಯಕ್ಷರು, 13 [illegible] 15 [illegible] ಹೆಗ್ಡೆ—ಎದ್ರಿರು

ಮೇಲ್ಕಂಡ ಅರ್ಜಿದಾರನು ಎದ್ರಿರು [illegible] ಲಿಕ್ಕೆ ಸಾಧ್ಯವಿಲ್ಲವೆ ತನ್ನನ್ನು ದಿವಾಳಿ ಎಂತ [illegible] ಮೇಲ್ಕಂಡ ಕೋರ್ಟಿನಲ್ಲಿ ದಿವಾಳಿ ಅರ್ಜಿ [illegible] ಸದ್ರಿ ಅರ್ಜಿ ತನಿಖೆ ವ್ಯಾದೆಯಾಗಿ ತಾ ೨೦—೧೧—[illegible] ಆ ದಿವಸ ಪೂರ್ವಾಹ್ನ ೧೧ ಗಂಟೆಗೆ ಸದ್ರಿ [illegible] ಆಕ್ಷೇಪಣೆ ಇದ್ದವರು ಸದ್ರಿ ಕೋರ್ಟಿನ [illegible] ಹಾಜರು ಮಾಡಿಕೊಳ್ಳತಕ್ಕದ್ದು ಎಂತ ಕೋರ್ಟಿನ [illegible] ಪ್ರಕಾರ ಈ ಮೂಲಕ ತಿಳಿಸಲಾಗುತ್ತದೆ

ಪುತ್ತೂರು 5—11—1930 — B Shivarama Holla, Advocate for Petitioner


**The Cochin Soap Works,** IRENJALAKUDA

ದಿ ಕೊಚ್ಚಿನ್ ಸೋಪ್ ವರ್ಕ್ಸ್. ಇರಿಂಜಾಲಕುಡ

[illegible] ಕೊಚ್ಚಿ ಮತ್ತು ಮದರಾಸ ಪಟ್ಟಣಗಳಲ್ಲಿ 1928—29—30ನೇ ಇಸವಿಗಳಲ್ಲಿ ನಡೆದ "ಎಕ್ಸಿಬಿಶನ್"ಗಳಲ್ಲಿ ಪೆಟ್ಟಿಫಲಗಳ [illegible] ಅನೇಕ ಯೋಗ್ಯತಾ ಪತ್ರಗಳಿಂದಲೂ ಬಹುಮಾನಿಸಲ್ಪಟ್ಟ.

ಬೇಬಿ ಬಾರೆಕ್ಸ್ ಸೋಪ್, [illegible] ಸೋಪ್, ಜೋನ್ಸನ್ಸ್ ಬಾರ್ ಸೋಪ್ [illegible] ಮುಂತಾದ [illegible] ಸಾಬೂನುಗಳನ್ನು ತಯ್ಯಾರ ಮಾಡುವ ಸಂಸ್ಥೆಯಾಗಿರುವುದು.

ಬೇಬಿ ಬಾರೆಕ್ಸ್ ಸೋಪ್—[illegible] ಬಟ್ಟೆ ಒಗೆಯುವ [illegible] ಉಪಯೋಗಿಸಬಹುದು. [illegible] ಅಥವಾ [illegible] ವಿಶ್ವಾಸಗಳಿಂದ [illegible] ಹಿಂದಿನ ಸೋಪುಗಳು ಪಿಸ್ತೋಲಿಯ ದಲ್ಲಿ ತಯಾರಾದ ಸಾಬೂನುಗಳ [illegible] ಬೆಲೆ ಒಂದು ಪೌಂಡು ತೂಕ 6 [illegible] ಹೆಚ್ಚು ಕಾಲ ವರೆಗೆ [illegible]

[illegible] ಫ್ಲವರ್ ರೋಸ್ ಸೆಂಟಡ್ ಸೋಪ್—[illegible] ಬೂಜಾಗಳಲ್ಲಿ ಉತ್ಕೃಷ್ಟವಾಗಿರುವುದು [illegible] ಸುಗಂಧ ಎಣ್ಣೆಗಳಿಂದ [illegible] ಮಾತ್ರ

ಜೋನ್ಸನ್ಸ್ ಬಾರ್ ಸೋಪ್—[illegible] ಬಟ್ಟೆಗಳನ್ನು [illegible] ಉಪಯೋಗಿಸಬಹುದು, [illegible]

[illegible]

ಮಂಗಳೂರು ಮತ್ತು ದಕ್ಷಿಣ ಕನ್ನಡ [illegible] ಸೋಲ್ ಏಜಂಟರು—

ಮೆಸರ್ಸ್ ಜೂಳಂತೂರು ಸಪ್ಲೋತ್ತಮ ಪ್ರಭು, ಮಂಗಳೂರು

ಕ. ಜ ಲಾಜರ್ ಮೆನೇಜರ್ ಮತ್ತು ಎಕ್ಸ್‌ಪರ್ಟ

[illegible] ಹಾಗೂ [illegible] ಪತ್ರಗಳಿಂದ [illegible] ಹೊಂದಲ್ಪಟ್ಟವರು

ಏಜಂಟರು ಬೇಕಾಗಿರುವರು.



"If every Wife knew what every Widow knows every Husband would be Insured

PLACE YOUR LIFE ASSURANCE WITH
**THE SOUTH INDIAN**
securing for your clients
Low rates of Premium
2. Liberal Policy Conditions.
AND FOR YOURSELF
An Agency with attractive Terms of Commission and Salary in,
**The South Indian General Assurance Co, Ltd.**
[illegible] where in CANARA DISTRICTS & HYDERABAD STATE
[illegible] Agency please apply to —
[illegible] R K IYENGAR, Chief Agent
The S I G A Co Ltd., [illegible] guddy MANGALORE,
Managing Agent
K C PANDALAI & CO
[illegible] Street [illegible] MADRAS

ಜೀವವಿಮೆ ಮಾಡುವವರ
ದಿ ಸೌತ್ ಇಂಡಿಯನ್ ಜನರಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್‌ನಲ್ಲಿ ವಿಮೆಮಾಡಿರಿ
ನಿಮಗೂ, ನಿಮ್ಮ [illegible] ಪ್ರಯೋಜನ ಮತ್ತು [illegible]
ಪ್ರೀಮಿಯಂ ದರಗಳು ಕಡಿಮೆ!
[illegible]
ಕನ್ನಡ ಜಿಲ್ಲಾ ಮತ್ತು [illegible] ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವ[illegible]
ಧಾರಾಳವಾದ ಕಮಿಶನನ್ನೂ [illegible] ಸಂಬಳವನ್ನೂ ದೊರಕುವುದು.
(ಹೆಚ್ಚಿನ ಮಾಹಿತಿಗಾಗಿ [illegible])
ಚೀಫ್ ಏಜಂಟರು—
[illegible]
ದಿ ಎಸ್ [illegible] ಕಂಪೆನಿ [illegible]
[illegible]
ಮೇನೇಜಿಂಗ್ ಏಜಂಟ್—
ಕೆ ಸಿ ಪಾಂಡಲೆ ಎಂಡ್ ಕೋ.
[illegible] ಮದ್ರಾಸ



[illegible] ಧಾರಾಳ ಫಲ
### ದಂತಧಾವನ ಚೂರ್ಣ
### ಟೂತ್ ಪೌಡರ್.

[illegible]

ಪಟ್ಟಿನ ಸಂಗ್ರಹಗಳನ್ನು ತಿಳಿಯಬೇಕಾದವರಿಗೆ [illegible] ಪಟ್ಟಿ [illegible]

ಪಿ ಕರುಣಾಕರ ವೈದ್ಯರ್.
ಆರೋಗ್ಯಾಮೃತ ಔಷಧಾಲಯ
ಕ್ಯಾಂಪ ಬಜಾರ್ ಕಣ್ಣಾನೂರು.
P KARUNAKARAN VYDIAR
Arogiamritha Aushadhalaya
Camp Bazaar, CANNANORE



ರಿಸ್ಟ್‌ವಾಚ್ ಉಚಿತ
[illegible] ದೊರೆಯುತ್ತದೆ
[illegible]
ಕಿಂಗ್ ಜಾರ್ಜ ಕೋರೋನೇಶನ್ [illegible]



### ಕೋ-ಆಪರೇಟಿವ್ ಸಂಘಗಳಿಗೆ
ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳು ಮತ್ತು ಇತರ ಫಾರ್ಮುಗಳೂ ಮಾರಾಟಕ್ಕಿವೆ
ಶಾರದಾ ಛಾಪಖಾನೆ
[illegible], ಮಂಗಳೂರು

### ಕೊಲೊನಿಗಳಿಗೆ ಹೋದ ಕೂಲಿಯಾಳುಗಳ ಗತಿ ಏನು?

ಇಂಡಿಯಾ ದೇಶದಿಂದ ಕೆನಿಯಾ, ದಕ್ಷಿಣ ಆಫ್ರಿಕ, ದಕ್ಷಿಣ ಅಮೇರಿಕದ ಗಿಯಾನಾ, ಸಿಲೋನ್, ಮಲಯ, ಶಾಂತ ಸಾಗರದಲ್ಲಿರುವ ಫಿಜಿ ದ್ವೀಪಗಳು ಬ್ರೆಜಿಲ್ ಮುಂತಾದ ದೇಶಗಳಿಗೆ ಕೂಲಿಯಾಳುಗಳಾಗಿ ಸಾವಿರಗಟ್ಲೆಯಿಂದ ಜನರು ಹೋಗುತ್ತಿರುವರು. ಇವರಲ್ಲಿ ಎರಡು ವಿಧದ ಕೂಲಿಯಾಳುಗಳಿರುವರು. ಕೆಲವರು ಸಿಲೋನ್, ಮಲಯಾ ದೇಶಗಳಿಗೆ ವರುಷಕ್ಕೊಂದಾವರ್ತಿ ಹೋಗಿ ಕೆಲಸ ಮಾಡಿ ಸಂಪಾದಿಸಿದ ಹಣ ತೆಗೆದುಕೊಂಡು ತಮ್ಮ ಹೆಂಡತಿಮಕ್ಕಳಿದ್ದಲ್ಲಿಗೆ ಬರುವವರು. ಕೆಲವರು ಹೆಂಡತಿಮಕ್ಕಳ ಸಹಿತವಾಗಿ ಹೋಗಿ ಅಲ್ಲಿಯೇ ವಾಸಮಾಡುವರು. ಇವರು ಅಂಥಾ ಕೊಲೊನಿಗಳಲ್ಲಿ ಉಳುಕೊಂಡರೆ, ಆ ಕೊಲೊನಿಗಳು ಯುರೋಪಿಯನ್ ಜನರ ಅಧೀನದಲ್ಲಿರುವುದರಿಂದ ಈ ಕೂಲಿಯಾಳುಗಳಿಗೆ ಸ್ವಂತ ಆಸ್ತಿ ಮಾಡಲಿಕ್ಕೂ ಸಾಧ್ಯವಿಲ್ಲ. ದೇಶದ ರಾಜ್ಯಭಾರದಲ್ಲಿ ಇವರಿಗೆ ಯಾವ ತರದ ಹಕ್ಕು ಸ್ವಾತಂತ್ರ್ಯಗಳೂ ಇರುವುದಿಲ್ಲ. ಇದರಿಂದ ದಕ್ಷಿಣ ಆಫ್ರಿಕ, ಕೆನಿಯಾ ಮುಂತಾದ ಕಡೆಗಳಲ್ಲಿರುವ ಜನರು ಬಹಳ ಕಷ್ಟಪಡುತ್ತಿರುವರು. ಇವರು ಹೋದ ರಾಜ್ಯಗಳು ಬ್ರಿಟಿಶ ಸಾಮ್ರಾಜ್ಯದ ಭಾಗಗಳಾಗಿದ್ದರೂ, ಇವರು ಬ್ರಿಟಿಶ ಇಂಡಿಯದವರಾದಾಗ್ಯೂ ಇಂಡಿಯದವರಾದ ಈ ಕೂಲಿಯಾಳುಗಳಿಗೆ ಯಾವತರದ ಸರಿಸಮಾನತೆಯ ಹಕ್ಕುಗಳಿರುವುದಿಲ್ಲ. ಬಿಳೀ ಜನರ ಕೂಲಿಯಾಳುಗಳಾಗಿ ಅವರು ಹೇಳಿದಂತೆ ಕೆಲಸ ಮಾಡಿ ಕಷ್ಟಪಡುವುದು ಮಾತ್ರವೇ ಕಂಡುಬರುತ್ತದಲ್ಲದೆ, ಬೇರೆ ಯಾವ ಪ್ರಯೋಜನವೂ ಇರುವುದಿಲ್ಲ. ಇವರು ಹೆಚ್ಚು ಸಮಯ ಆ ಕೊಲೊನಿಗಳಲ್ಲಿ ಆಯುಷ್ಯವನ್ನು ಕಳೆದುದರಿಂದ ಸ್ವದೇಶಕ್ಕೆ ಬರಲಿಕ್ಕೂ ಸಾಧ್ಯವಿಲ್ಲ. ಆದುದರಿಂದ ಇಂಡಿಯದ ಈ ಕೂಲಿಯಾಳುಗಳ ಸ್ಥಿತಿಯನ್ನು ಉದ್ಧರಿಸಲು ದಾರಿ ಹುಡುಕಬೇಕಲ್ಲವೇ?

### ಬ್ರಿಟಿಷ್ ಸಾಮ್ರಾಜ್ಯದ ಬಿಳೀ ಮತ್ತು ಕಪ್ಪು ಜನರಿಗೆ ಸರಿಸಮಾನತೆಯ ಹಕ್ಕು ಬಾಧ್ಯತೆಗಳು.

ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸುಮಾರು ೪೪೦ ಮಿಲಿಯ ಜನರಿರುವರು. ಇವರಲ್ಲಿ ೩೮೦ ಮಿಲಿಯ ಜನರು ಕಪ್ಪು. ಬರೀ ೬೦ ಮಿಲಿಯ ಮಾತ್ರವೇ ಬಿಳೀ ಜನರು. ಈ ೬೦ ಮಿಲಿಯ ಬಿಳೀ ಜನರು ೩೮೦ ಮಿಲಿಯ ಕಪ್ಪು ಜನರನ್ನು ತಮ್ಮ ಕೈಕೆಳಗಿಟ್ಟು ಆಳುತ್ತಿರುವರು. ಈ ಜನರು ಸಮಾಧಾನದಿಂದ ಇರುವುದರಿಂದ ಆಳಲು ಸುಲಭ ಸಾಧ್ಯವಿದೆ. ವಿರೋಧವಾದರೆ ಈಗಿರುವ ಸೈನ್ಯವೂ ಸಾಲದು. ಯುದ್ಧದ ಹಡಗಗಳೂ ಸಾಲದು. ವಿಮಾನ ಸೈನ್ಯವೂ ಸಾಲದು. ಆದರೆ ಕಪ್ಪು ಜನರು ಹೆಚ್ಚಾಗಿ ಸಮಾಧಾನದಿಂದ ಇದ್ದು ಯಜಮಾನರಿಗೆ ತಲೆಬಗ್ಗಿಸುವವರಾಗಿರುವರು. ಇಷ್ಟರ ವರೆಗೆ ಬಿಳೀ ಜನರೇ ಶ್ರೇಷ್ಠರು, ಎಂಬ ಭಾವನೆಯು ಎಲ್ಲಾ ಜನರಲ್ಲಿಯೂ ನಾಟಿಕೊಂಡಿತ್ತು. ಈಗ ಆ ಭಾವನೆಯು ಕಡಿಮೆಯಾಗುತ್ತಾ ಬಂದಿದೆ. ಈಗ ಕಪ್ಪು ಜನರು ಬಿಳೀ ಜನರಂತೆಯೇ ಸರಿಸಮಾನ ಹಕ್ಕನ್ನು ಕೇಳಲಾರಂಭಿಸಿರುವರು. ಅದನ್ನು ಕೇಳುತ್ತಿರುವಾಗ ಬಿಳೀ ಜನರಿಗೆ ಬೇಸರವಾಗುತ್ತದೆ. ಸಿಟ್ಟು ಬರುತ್ತದೆ. ಆದರೆ ಬ್ರಿಟಿಶ್ ರಾಜತಂತ್ರಜ್ಞರು ಈ ಜನರನ್ನು ಸಮಾಧಾನಪಡಿಸುವುದಕ್ಕಾಗಿ ಇಂಪೀರಿಯಲ್ ಕೊನ್ಫರೆನ್ಸ, ರೌಂಡಟೇಬಲ್ ಕೊನ್ಫರೆನ್ಸ ಮುಂತಾದವುಗಳನ್ನು ಮಾಡುತ್ತಿರುವರು. ಆದರೆ ಸಾಮ್ರಾಜ್ಯದ ಪ್ರತಿಒಂದು ಭಾಗದವರೂ, ವ್ಯಾಪಾರ, ಕೈಗಾರಿಕೆ, ಸುಂಕ, ಹಡಗಗಳು ಮುಂತಾದವುಗಳು ತಮ್ಮ ಸ್ವಂತದ್ದಾಗಿರಬೇಕೆಂದು ವಾದಿಸುತ್ತಿರುವವು. ಸಾಮ್ರಾಜ್ಯದಲ್ಲಿ ಸಮಾಧಾನವು ಇರಬೇಕಾದರೆ ಒಂದೇ ತಾಯಿ ಮಕ್ಕಳಂತಿರುವ ಸಾಮ್ರಾಜ್ಯದ ಎಲ್ಲಾ ಭಾಗಗಳಲ್ಲಿರುವ ಬಿಳೀ, ಕಪ್ಪು ಎಂಬ ಭೇದವನ್ನು ಬಿಟ್ಟುಬಿಟ್ಟು ಸರಿಸಮಾನತೆಯಿಂದಲೂ ಪ್ರೀತಿಯಿಂದಲೂ ನಡಸಿದರೆ ಕೊನ್ಫರೆನ್ಸುಗಳು ಫಲಕಾರಿಯಾದಾವು. ಇಲ್ಲದಿದ್ದರೆ ಖರ್ಚಿಗೆ ಮಾತ್ರವೇ ದಾರಿಯಾಗುವುದೆಂದು ತೋರುತ್ತದೆ.

### ಮದರಾಸು ನ್ಯಾಯವಿಧಾಯಕ ಸಭೆಯ ಪ್ರೆಸಿಡೆಂಟರು.

ಮದರಾಸು ನ್ಯಾಯವಿಧಾಯಕ ಸಭೆಯ ಅಧಿವೇಶನವು ೩ನೇ ತಾರೀಕಿನಲ್ಲಿ ಜರಗಿತು. [illegible] ಮಂದಿ ಎಲ್ಲಾ ವಿಧದ ಮೆಂಬರರು ಹಾಜರಿದ್ದರು. ಎಲ್ಲರೂ ಪ್ರಮಾಣ ಮಾಡಿದ ಮೇಲೆ ಅಧ್ಯಕ್ಷರ ಚುನಾವಣೆಯು ನಡೆಯಿತು. ರಾಮಚಂದ್ರ ರೆಡ್ಡಿಯವರೂ, ಯಾಕೂಬ ಹುಸ್ಸೇನರೂ ಉಮೇದುವಾರರಾಗಿದ್ದರು. ಡೊಳ್ಳರ ಸುಬ್ಬರಾಯನರು ಚುನಾವಣೆ ಮುಂದರಿಸಬೇಕೆಂದರು. ಅಧ್ಯಕ್ಷರು ಕೂಡದೆಂದರು. ಯಾಕೂಬ ಹುಸ್ಸೇನರು ಉಮೇದುವಾರಿಕೆ ಹಿಂತೆಗೆದರು. ರಾಮಚಂದ್ರ ರೆಡ್ಡಿಯವರು ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿಸಲ್ಪಟ್ಟರು. ಇವರಿಗೆ ಸಭೆಗಳನ್ನು ನಡಸಿ ಅನುಭವವು ಇದೆ. ಅದಲ್ಲದೆ ಹೊಸ ರಿಫೋರ್ಮ್ ಆದಂದಿನಿಂದ ಎರಡು ಮೂರು ಮಂದಿ ಪ್ರೆಸಿಡೆಂಟರು ಕಾರ್ಯಭಾರ ನಡಸಿದುದನ್ನು ಕೌನ್ಸಿಲ್ ಮೆಂಬರರಾಗಿ ನೋಡಿ ಅನುಭವ ಪಡೆದಿರುವರು. ಇನ್ನು ಡೆಪ್ಯುಟಿ ಪ್ರೆಸಿಡೆಂಟರ ಚುನಾವಣೆ ಇದೆ. ಕಳೆದ ಸಾರಿ ಮುತ್ತುಲಕ್ಷ್ಮಿ ರೆಡ್ಡಿಯವರು ಈ ಸ್ಥಾನವನ್ನು ವಹಿಸಿದ್ದರು. ಈ ಸಾರಿ ಯಾರು ವಹಿಸಲಿಕ್ಕಿರುವರೋ ನೋಡಲಿದೆ. ಯಾವ ಚುನಾವಣೆ ಆದರೂ ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಯಾವ ಪದವಿಯೂ ದೊರೆಯುವುದಿಲ್ಲ. ಮಂತ್ರಿಗಳೂ ಪ್ರೆಸಿಡೆಂಟರೂ ತಮಿಳು ಮತ್ತು ತೆಲುಗು ದೇಶದವರೇ ಆಗಿರುವರು. ಇನ್ನು ಚುನಾವಣೆ ಆಗಲಿರುವ ಡೆಪ್ಯುಟಿ ಪ್ರೆಸಿಡೆಂಟರ ಪದವಿಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿನಿಧಿಗಳಾಗಿರುವವರು ಪಡೆದರೆ ದಕ್ಷಿಣ ಕನ್ನಡಿಗರ ಒಂದಿಷ್ಟು ಆಸೆಯನ್ನು ಸಲ್ಲಿಸಿದಂತಾಗುವುದು.

### ದಕ್ಷಿಣ ಅಮೇರಿಕದಲ್ಲಿ ರಾಜಕೀಯ ಚಳವಳ.

ಸ್ವಲ್ಪ ಸಮಯದಿಂದ ಈಚೆಗ ದಕ್ಷಿಣ ಅಮೇರಿಕದಲ್ಲಿರುವ ಹಲವು ರಿಪಬ್ಲಿಕುಗಳಲ್ಲಿ ಕ್ರಾಂತಿಗಳು ಉಂಟಾಗುತ್ತಲೇ ಇವೆ. ಹಳೆ ಸರಕಾರಗಳನ್ನು ತೆಗೆದು ಹಾಕಿ ಹೊಸ ರೀತಿಯ ಸರಕಾರಗಳು ಸ್ಥಾಪಿಸಲ್ಪಟ್ಟವು. ಕೆಲವು ದಿವಸಗಳ ಹಿಂದೆ ಪೇರು ಮತ್ತು ಅರ್ಜೆಂಟೈನ್ ದೇಶಗಳಲ್ಲಿ ರಾಜ್ಯಭಾರವು ಬಿದ್ದುಹೋಗಿ ಹೊಸ ರಾಜ್ಯಭಾರ ಸ್ಥಾಪನೆಯಾಯಿತು. ಕೆಲವು ವಾರಗಳ ಹಿಂದೆ ಬೊಲಿವಿಯದಲ್ಲಿಯೂ ಹೀಗೆಯೇ ಆಯಿತು. ಚೀಲಿಯಲ್ಲಿ ನಡಿಯುತ್ತಲಿದೆ. ಬ್ರೆಜಿಲ್ ಮತ್ತು ಕ್ಯೂಬದಲ್ಲಿ ಭರದಿಂದ ನಡಿಯುತ್ತಲಿದೆ. ಗ್ವಾಟಿಮಾಲ, ಪರಾಗ್ವೆಯಲ್ಲಿ ಇದೇ ಅವಸ್ಥೆಯಾಯಿತು. ಉರಾಗ್ವೆಯಲ್ಲಿ ಪ್ರೆಸಿಡೆಂಟರ ಬದಲಾವಣೆ ಆಗುತ್ತಲೇ ಇದೆ. ಈ ಕ್ರಾಂತಿಗಳನ್ನು ನೋಡಿದರೆ ಇವುಗಳಲ್ಲಿ ಎರಡು ವಿಧದವುಗಳಿವೆ ಎಂದು ಕಂಡು ಬರುತ್ತದೆ. ಪುರಾತನ ಕಾಲದಲ್ಲಿ ದಕ್ಷಿಣ ಅಮೇರಿಕವು ಸ್ಪೈನ್ ದೇಶದ ಅರಸರ ಕೈಕೆಳಗೆ ಇತ್ತು. ಆ ಸಮಯದಲ್ಲಿ ಸ್ಪೈನ್ ದೇಶದವರ ಕೈಯಿಂದ ತಪ್ಪಿ ಸ್ವತಂತ್ರವಾಗಬೇಕೆಂದಾಯಿತು. ಅರಸರ ಕೈಯಿಂದ ಸ್ವತಂತ್ರವಾಗಿ ಹಲವು ರಿಪಬ್ಲಿಕುಗಳಾದವು. ಈಗ ಅಧಿಕಾರ ಅಪೇಕ್ಷೆಯುಳ್ಳ ತಂಡ ತಂಡ ಮುಂದಾಳುಗಳಿಂದ ಕ್ರಾಂತಿಯು ಉಂಟಾಗುತ್ತಲಿದೆ. ಇವುಗಳಲ್ಲಿ ಬ್ರೆಜಿಲ್ ಅತೀ ದೊಡ್ಡದಾಗಿದ್ದು ೩೦ ಮಿಲಿಯ ಜನ ಸಂಖ್ಯೆ ಇದೆ. ಉರಾಗ್ವೆ ಅತೀ ಸಣ್ಣದು ೩ ಮಿಲಿಯ ಜನ ಸಂಖ್ಯೆ. ಉರಾಗ್ವೆ ಮತ್ತು ಅರ್ಜೆಂಟೈನಿನ ಜನರಲ್ಲಿ ಹೆಚ್ಚಿನವರು ಬಿಳಿ ಜನರು. ಪೆರು, ಇಕ್ವೆಡೋರ್, ಬೊಲಿವಿಯ ಮತ್ತು ಪರಾಗ್ವೆಯ ಜನರಲ್ಲಿ ಹೆಚ್ಚಿನವರು ರೆಡ್ ಇಂಡಿಯಾನರು. ಚಿಲಿ, ಕೊಲಂಬಿಯಾ, ವೆನಿಜುವೇಲಾದವರು ಮೆಸ್ಟಿಜೊ ಎಂಬ ಮಿಶ್ರ ಜಾತಿಯವರು. ಬ್ರೆಜಿಲಿನವರಲ್ಲಿ ಹೆಚ್ಚಿನವರು ನಿಗ್ರೊ ಜಾತಿಯವರು. ಈ ರೀತಿಯಲ್ಲಿದ್ದರೂ ಈ ಖಂಡದವರು ಸ್ವತಂತ್ರರಾಗಿ ನೂರಾರು ವರುಷಗಳು ಕಳೆದವು.

### ಬ್ರಿಟಿಷ್ ಮಂತ್ರಿ ಮಂಡಲದಲ್ಲಿ ಒಡಕು.

ಬ್ರಿಟಿಷ್ ಮಂತ್ರಿ ಮಂಡಲದಲ್ಲಿ ಒಡಕು ಉಂಟಾಗಲು ಆಸ್ಪದಗಳು ಕಂಡು ಬರುತ್ತಲಿವೆ. ಈ ಒಡಕ ಉಂಟಾಗಲು ಮುಖ್ಯ ಕಾರಣವೇನೆಂದರೆ ಇಂಗ್ಲಾಂಡಿನಲ್ಲಿ ಕೆಲಸವಿಲ್ಲದವರ ಸಂಖ್ಯೆಯು ಹೆಚ್ಚಾಗುತ್ತಾ ಬರುವುದರಿಂದ ಸಾಲವನ್ನು ತೆಗೆದು ಆ ಹಣದಿಂದ ದೇಶಕ್ಕೆ ಪ್ರಯೋಜನಕರವಾದ ಕೆಲಸಗಳನ್ನು ಒದಗಿಸುವುದಕ್ಕೆ ಅನುಕೂಲತೆಮಾಡಬೇಕೆಂದು ಪಾರ್ಲಿಮೆಂಟಿನ ಒಂದು ಶಾಖೆಯು ಹೇಳುತ್ತಿರುವುದು. ಸಾಲ ತೆಗಿಯಲು ಕೋಶಾಧಿಪತಿ ಮಂತ್ರಿಗಳಾದ ಸ್ನೊಡನರಿಗೆ ಮನಸ್ಸಿಲ್ಲ. ಇಂಡಿಯಾ ಸೆಕ್ರೆಟರಿಯವರಾದ ವೆಜ್‌ವುಡ್‌ಬೆನ್ನರೂ, ಅಲೆಕ್ಸಾಂಡರ ಇವರ ಸ್ನೇಹಿತರು. ಸ್ನೊಡನರು ರಾಜಿಕೊಟ್ಟರೆ ಇವರಿಬ್ಬರೂ ರಾಜಿಕೊಡುವರೆಂಬ ವಾರ್ತೆ ಹಬ್ಬಿದೆ. ರೌಂಡ್ ಟೇಬಲ್ ಕೊನ್ಫರೆನ್ಸಿನ ಸಮಯ ಈ ಒಡಕು ಉಂಟಾಗುತ್ತದೊ ಎಂಬ ಸಂಶಯವು ಹಲವರಲ್ಲಿ ಹುಟ್ಟಿದೆ.

## ನೋಟಗಳು.
## NOTES

ಮುಂಬಾಯಿಯಲ್ಲಿ ಜ್ಯಾರಿಗೆ ತಂದ ಹೊಸ ಓರ್ಡಿನೆನ್ಸು ಕರ್ನಾಟಕದಲ್ಲಿಯೂ ಜ್ಯಾರಿಗೆ ಬಂತು. ಕರ್ನಾಟಕ ಕಾಂಗ್ರೆಸ ಕಮಿಟಿ, ಯುತ್‌ಲೀಗ್ ಕಮಿಟಿ, ಹಿಂದೂಸ್ಥಾನ ಸೇವಾದಳ, ಇದಕ್ಕೂ ಲಗಾವುಮಾಡಿಯೇ ಬಿಟ್ಟರು. ಮುಂದಿನ ಕಾರಬಾರು ಜಾರಿಗೆ ತರುವಾಗ.

* * * *

ಮೊನ್ನೆಯ ದಿವಸ ಮುಂಬಾಯಿಯಲ್ಲಿ ನಡೆದ ಗಲಾಟೆಯ ಸಮ್ಮಂದ ಮಹಿಳೆಯರಿಗುಂಟಾದ ಅಪಮಾನದ ವಿಷಯ ಗವರ್ನರರಿಗೆ ಬರೆದ ಕಾಗದಕ್ಕೆ ಉತ್ತರ ಆಕ್ಷಣವೇ ಬಂದು ಬಿಟ್ಟಿತು.

* * * *

ಉತ್ತರ ಮತ್ತೇನಿಲ್ಲ. ಪೋಲೀಸ ಮಹನೀಯರು ಮಾಡಿದ ಕೆಲಸ ಅವರೊಂದು ರೀತಿಯಲ್ಲಿ ತಪ್ಪಲ್ಲ. ಕಾನೂನಿನ ಮರ್ಯಾದೆ ಉಳಿಸಲು ಹಾಗೆ ಮಾಡಬೇಕಾಗುತ್ತದಂತೆ. ಇನ್ನೊಂದು ಮಾತು ಕಾಂಗ್ರೆಸಿನವರು ಮಹಿಳೆಯರ ಮುಖಾಂತರ ಸರಕಾರದವರ ಹತ್ತಿರ ಎದುರಾಡುತ್ತಾರಾಗಿ ಬರೆದೇ ಬಿಟ್ಟರು. ಇದೊಂದು ಅವರಿಗೆ ದೊಡ್ಡ ಅವಘಡವಾಗಿದೆ.

* * * *

ಧಾರವಾಡದಲ್ಲಿ ಕೊಂಗ್ರೆಸ್ ಹೌಸ್ ಸರಕಾರದ ವಶವಾಯಿತು. ಕೊಂಗ್ರೆಸ್ ಧ್ವಜ ಹೋಗಿ, ಯೂನಿಯನ್ ಮೇಲೆ ಹೋಗಿ ತೀರಿತು. ಹುಬ್ಬಳ್ಳಿಯಲ್ಲಿ ಸೇವಾದಲ ಆಫೀಸ್ ಜಪ್ತಿಯಾಯಿತು. ಜಪ್ತಿ ಮುಗಿದೊಡನೆ ಬಲವಾದ ಬೀಗ ಹಾಕಿ ಮೊಹರು ಹಾಕಿರುವರು. ಹೊಸ ಆರ್ಡಿನೆನ್ಸಿನ ರಭಸ.

* * * *

ಮುಂಬಾಯಿ ಪೋಲೀಸ್ ಕಮಿಶನರು ವರ್ತಮಾನ ಪತ್ರಿಕೆಗಳ ಮೇಲೆ ಬಿದ್ದಿದ್ದಾರೆ. ಪತ್ರಿಕೆಗಳು ಅವರ ಮೇಲೆ ಬಿದ್ದಿದ್ದಾವೆ. ಮುಖ್ಯ ಸಂಗತಿ ಇದ್ದದ್ದು ಬರಿಯಬಾರದಾಗಿ.

* * * *

ನಮ್ಮ ಮಂಗಳೂರಿಗೆ ಒಂದು ಸಿನೆಮಾ ಸ್ಟಾರ್ ಬಂದಿರುತ್ತದೆ. ಸ್ಟಾರಿನ ನರ್ತನ ಗಾಯನ ಕೃಷ್ಣಾ ಸಿನೆಮದಲ್ಲಿ ಮೊದಲಿನ ದಿವಸ ರಾಷ್ಟ್ರೀಯ ಹಾಡನ್ನು ಹಾಡಿ ನಮ್ಮ ಪೋಲೀಸರಿಗೆ ಸ್ವಲ್ಪ ಕೆಲಸವಾಯಿತು. ಊರಲ್ಲಿ ೧೪೪ನೇ ಕಲಂ ಜಾರಿಯಲ್ಲಿ ಇರುವಾಗ ಪಬ್ಲಿಕ್ ಸ್ಥಳದಲ್ಲಿ ರಾಷ್ಟ್ರೀಯ ಹಾಡನ್ನು ಹಾಡಬಾರದಾಗಿ ಹುಕುಂ ಹೊರಟಿತು.

* * * *

ನಂತರ ರಾಷ್ಟ್ರೀಯ ಹಾಡನ್ನು ಹಾಡಲಿಕ್ಕೆ ಅಪ್ಪಣೆ ಬೇಕೆಂದಾಯಿತು. ಯಾವುದಕ್ಕೂ ಸಾಹೇಬರು ಊರಲ್ಲಿರಲಿಲ್ಲ.

* * * *

೧೪೪ನೇ ಕಲಂ ಪುನಃ ಉದ್ದಿಗಾಯಿತು, ಮಂಗಳೂರಿಗಾಯಿತು. ಇನ್ನು ಕಾರ್ಕಳಕ್ಕೆ ಮಾತ್ರ ಬಾಕಿ.

* * * *

ವಿಲಾಯತಿಯಲ್ಲಿ ನಡೆಯುತ್ತಿದೆ ಚಕ್ರಗೋಷ್ಠಿ. ಶಾ ಗಾಳಿಕ್ಕೆ ಒಳ್ಳೆಯ ಸಮಯದಲ್ಲಿ ಪ್ರಾರಂಭವಾಗಿದೆ. ಇಂಡಿಯದಿಂದ ಹೋದ ಮೆಂಬರರೆಲ್ಲರೂ ಸೌಖ್ಯದಲ್ಲಿರುವರು. ಬಾಕಿ ವರ್ತಮಾನ ಬರುವ ವಾರದಲ್ಲಿ.

* * * *

ಚಕ್ರಗೋಷ್ಠಿಯು ಪ್ರಾರಂಭವಾಗುವ ದಿನ ಸೂಚಿಸುವುದಕ್ಕಾಗಿ ಕಲ್ಕತ್ತಾ ಮತ್ತು ಇತರ ಕಡೆಗಳಲ್ಲಿ ಹರತಾಳವನ್ನು ಆಚರಿಸಿರುವರು. ಮುಂಬಾಯಿಯಲ್ಲಿ ಚಕ್ರಗೋಷ್ಠಿಯನ್ನು ನಿಷೇಧಿಸಿ ದೊಡ್ಡ ಮೆರವಣಿಗೆ ಮಾಡಬೇಕೆಂದು ನಿಶ್ಚಯಿಸಿದರು. ಪೋಲೀಸರು ಮೆರವಣಿಗೆ ಮಾಡಬಿಡಕೂಡದಾಗಿ ಸೊಂಟ ಕಟ್ಟಿರುವರು. ಮುಂದಕ್ಕೆ ಲಾಠಿಗಾರರ ಪ್ರಭಾವ ನೋಡಬೇಕಷ್ಟೆ.

* * * *

ಚಕ್ರಗೋಷ್ಠಿಯಲ್ಲಿ ಇಂಗ್ಲಿಷ್ ಮಹಾರಾಜರ ಭಾಷಣ ಮುಗಿದೊಡನೆ ನಂತರ ಮಾತಾಡುವವರು, ನಮ್ಮ ಹಿಂದೂಸ್ಥಾನದವರು.

* * * *

ವಿಲಾಯತಿ ಚಕ್ರಗೋಷ್ಠಿಯ ಸಭೆಯಲ್ಲಿ ಅರಸರು ಕೊಟ್ಟ ಭಾಷಣ ಹಿಂದೂಸ್ಥಾನದಲ್ಲಿ ಕೇಳಲು, ಲಾಹೋರಿನಲ್ಲಿ ರೇಡಿಯೊ ಕ್ಲಬ್ಬಿನವರು ಸಾಧಿಸುತ್ತಿರುವರು. ಅಲ್ಲಿ ಮಾತಾಡುವುದೇ ತಡ, ಇಲ್ಲಿ ಕೇಳಿಸುವ ಸರ್ವ ತಯಾರಿ ನಡೆದಿದೆ.

* * * *

ಸ್ಟೇಟ್ ಡೆಲಿಗೇಟರೊಳಗೂ ಇತರರೊಳಗೂ ಈಗಲೇ ಬಂದಿರುತ್ತದಂತೆ ಸ್ವಲ್ಪ ವೈಮನಸ್ಯ. ವೈಮನಸ್ಯವನ್ನು ಇತ್ಯರ್ಥಪಡಿಸುವ ಗಡಿಬಿಡಿಯಲ್ಲಿದ್ದಾರೆ. ಇವರದೆಲ್ಲ ಮುಗಿಯಬೇಕು ತಾ ಗಗರೊಳಗೆ. ನಂತರ ಚರ್ಚೆ, ರೌಂಡ್‌ಟೇಬಲಿನ ಹತ್ತಿರ.

## ನೋಟೀಸು

ದಕ್ಷಿಣಕನ್ನಡ ಪುತ್ತೂರು ಡಿ ಮುನ್ಸಿಫ್ ಕೋರ್ಟಿನಲ್ಲಿ
O. S No. 554/1930

ಬರಿಮಾರು ನರ್ಸಪ್ಪಯ್ಯ—ವಾದಿ

ಧಾಸ್ತೂರ ಶಾಕೂರ—ಅಮ್ಮೆಂಬಳ ದಾಸಪ್ಪ ರಾಕೂಂ ಮಗ— ಮಂಗಳೂರು ಕಸಾರ ಬೈಕೆ ಬಂದರ—ಪ್ರತಿವಾದಿ

ವಾದಿಯು ದಾಖಲು ಮಾಡಿದ ವೇಲಿನ ವ್ಯಾಜ್ಯವನ್ನು ತನಿಖೆ ಬಗ್ಗೆ ತಾ 21—11—30ಕ್ಕೆ ವ್ಯಾದೆ ಇಟ್ಟಿರುವುದರಿಂದ ಸದರಿ ಪ್ರತಿವಾದಿಯು ಆ ದಿವಸ 11 ಘಂಟೆಗೆ ಕೋರ್ಟಿಗೆ ಹಾಜರಾಗದಿದ್ದರೆ ಸದರಿ ವ್ಯಾಜ್ಯವು ಆತನ ಗೈರು ಹಾಜರಿಯಲ್ಲಿ ತೀರ್ಮಾನವಾದೀತು.

ಮೊಕ್ಕಾಂ ಪುತ್ತೂರು, ತಾ. 10—11—30 } S Narsappay, Vakil for plaintiff

---

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
ಅ ಮ ಸಂ 485 1930

ಅಬ್ದುಲ್ಲ ಬ್ಯಾರಿ—ಹಮ್ಮದಕುಟ್ಟಿ ಬ್ಯಾರಿಗಳ ಮಗ— ಕಾಸರಗೋಡು ತಾಲೂಕು [illegible] ಕಸಬಾ ಗ್ರಾಮದ [illegible] ನೀರಲ್ಲಿರುವವ—ವಾದಿ ಮತ್ತು

ಮಹಮ್ಮದ ಬ್ಯಾರಿ—ಅಬ್ದುಲ್ಲ [illegible] ಮಗ ಸದ್ರಿ ತಾಲೂಕು ಮುಟ್ಟತ್ತೋಡಿ ಗ್ರಾಮದ [illegible]—ಪ್ರತಿವಾದಿ

ಸದ್ರಿ ವಾದಿಯು ಪ್ರೋ ನೋಟಿನ ಅಸ್ಲು [illegible] ದಾವಾ ೧೯—೧೧—೩೦ಕ್ಕೆ ಪ್ರತಿವಾದಿಯ ಮೇಲೆ [illegible] ಮಾಡಿದ ವ್ಯಾಜ್ಯವು ಆಖೈರ ತನಿಖೆ ಬಗ್ಗೆ ತಾ ೧೨—೧೧—೩೦ಕ್ಕೆ ಇಟ್ಟಿರುತ್ತದೆ ಆ ದಿವಸ ಪ್ರತಿವಾದಿಯು ಹಾಜರಾಗದಿದ್ದರೆ ಏಕ್ಸ ಪಾರ್ಟಿಯಾಗಿ ತೀರ್ಮಾನವಾದೀತೆಂದು [illegible] ಈ ಮೂಲಕ ತಿಳಿಸಲ್ಪಡುತ್ತದೆ

Kasaragod 5—11—1930 } K. Mammunhi, Vakil for Plaint

---

ಕಾಸರಗೋಡು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ
ಕ್ರಮ ಸಂ 700/1930

ಪಕ್ಕೀರಬ್ಬ ಬ್ಯಾರಿ—ವಾದಿ ಮತ್ತು
ಸಯ್ಯದಕಾಸಿಂ ಸ್ವಾಬ ಸಹು—ಪ್ರತಿವಾದಿ

ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ವೇಲ್ಯೂದ ವ್ಯಾಜ್ಯವು ತಾರೀಕು 14—11—30ಕ್ಕೆ ತನಿಕೆಗೆ ಇಟ್ಟಿರುತ್ತದೆ ಆ ದಿವಸ ಪ್ರತಿವಾದಿಯು ಹಾಜರಾಗ [illegible] ಪ್ರತಿವಾದಿರ ಗೈರಾಯ ಸದರಿ ವ್ಯಾಜ್ಯವು ತೀರ್ಮಾನವಾಗುವ ದೆಂಬದಾಗಿ ಈ ಮೂಲಕ ತಿಳಿಸಲಾಗುತ್ತದೆ.

ಕಾಸರಗೋಡು 4—11—30 } K. Shama Shetty. ವಾದಿ ವಕೀಲರು

---

ಪುತ್ತೂರು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ
I P 21/1930

ಕೊಗ್ಗ ಭಟ್ಟ—ಅಪ್ಪ ಯಾನ ನಾರಾಯಣ ಭಟ್ಟ ಮ ಹಾಲಿ ಕಾಸರಗೋಡು [illegible]—ಅರ್ಜಿದಾರ

1 ಪದ್ಮಯ್ಯ ಹೆಗ್ಗಡೆ, [illegible] ಅನಂತ ಭಟ್ಟ, [illegible] ಮಾರು ರಾಮ ಚಂದ್ರ ಶ್ಯಾನುಭೋಗ, [illegible] ಪಕೀರ ಶೆಟ್ಟಿ, [illegible] ಭೀಮಿವೆಂಕಟ್ರಾಯ ಶ್ಯಾನುಭೋಗ, [illegible] ಪ್ಪಮ್ಮ 7 ಮಜಿ ಈಶ್ವರ ಭಟ್ಟ, 8 ವರ್ನ ಮ್ಯಾಲ [illegible] ವೇದ್ಯಾವು ಹೊನ್ನಮ್ಮ, 10 [illegible] ಪೂವಣಿ, 11 ನಂಬ್ರ 2803ನೇ ಪುತ್ತೂರು ವರ್ತಕರ ಸಹ ಕಾರ ಸಂಘದ ಅಧ್ಯಕ್ಷರು, 12 ರಾಮಯ ಹೆ [illegible] 13 [illegible] ಹೆಗ್ಡೆ—ಎದ್ರಿರು

ಮೇಲ್ಕಂಡ ಅರ್ಜಿದಾರನು ಎದ್ರಿರ ಸಾಲಗಳನ್ನು ಸಲ್ಲಿಸ ಲಿಕ್ಕೆ ಸಾಧ್ಯವಿಲ್ಲದೆ ತನ್ನನ್ನು ದಿವಾಳಿ ಎಂತ ಸ್ಥಾಪಿಸಬೇಕಾಗಿ ಮೇಲ್ಕಂಡ ಕೋರ್ಟಿನಲ್ಲಿ ದಿವಾಳಿ ಅರ್ಜಿ ದಾಖಲು ಮಾಡಿದ್ದಾನೆ ಸದ್ರಿ ಅರ್ಜಿ ತನಿಖಿ ವ್ಯಾದೆಯು ತಾ ೨೦—೧೧—೧೯೩೦ಕ್ಕೆ ಉಂಟು ಆ ದಿವಸ ಪೂರ್ವಾಹ್ನ ೧೧ ಗಂಟೆಗೆ ಸದ್ರಿ ಅರ್ಜಿ ಕುರಿತು ಆಕ್ಷೇಪಣೆ ಉಳ್ಳವರು ಸದ್ರಿ ಕೋರ್ಟು ಮುಂದೆ ಹ್ಯಾಜೀರು ಮಾಡಿಕೊಳ್ಳತಕ್ಕದ್ದು ಎಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸಲಾಗುತ್ತದೆ

ಮೊಕ್ಕಾಂ ಪುತ್ತೂರು, 5—11—1930 } B. Shivarama Holla, Advocate for Petitioner


**The Cochin Soap Works,** IRENJALAKUDA

**ದಿ ಕೊಚ್ಚಿನ್ ಸೋಪ್ ವರ್ಕ್ಸ್,** ಇರಿಂಜಾಲಕುಡ.

[illegible] ಕೊಚ್ಚಿ ಮತ್ತು ಮದರಾಸ, ಪಟ್ಟಣಗಳಲ್ಲಿ 1928—'29—'30ನೇ ಇಸವಿಗಳಲ್ಲಿ ನಡೆದ "ಎಕ್ಸಿಬಿಶನ್" ಗಳಲ್ಲಿ ಬೆಳ್ಳಿಭಂಗಾರದ ಪದಕಗಳಿಂದಲೂ, ಅನೇಕ ಯೋಗ್ಯತಾ ಪತ್ರಗಳಿಂದಲೂ ಬಹುಮಾನಿಸಲ್ಪಟ್ಟು

ಬೇಬಿ ಬಾರೆಕ್ಸ್ ಸೋಪ್, ಲಿಟ್ಲ್ ಫ್ಲವರ್ ರೋಸ್ ಸೆಂಟೆಡ್ ಸೋಪ್, ಜೋನ್ ಸನ್ಸ್ ಬಾರ್ ಸೋಪ್, ಕೋಲ್ ಟಾರ್ ಸೋಪ್ ಮುಂತಾದ ಹೆಸರುವಾಸಿಯಾದ ಸಾಬೂ ನುಗಳನ್ನು ತಯ್ಯಾರ ಮಾಡುವ ಸಂಸ್ಥೆಯಾಗಿರುವುದು

ಬೇಬಿ ಬಾರೆಕ್ಸ್ ಸೋಪ್—ಹಿಂದೂಸ್ತಾನದ ಉತ್ತಮ ಉತ್ಪತ್ತಿ, ಬಟ್ಟೆ ಒಗೆಯು ವುದಕ್ಕೂ ಮೈ ತೊಳೆಯುವದಕ್ಕೂ ಉಪಯೋಗಿಸಬಹುದು [illegible] ಅಥವಾ ಅಪಾಯಕರವಾದ ಮಿಶ್ರಣಗಳಿಂದ ವಿರಹಿತವಾಗಿರುವುದು ಅಲ್ಲದೆ ಎಲ್ಲಾ ಸೋಪುಗಳು [illegible] ಕಯಾರಿಂದ [illegible] ಸಾಬೂನುಗಳನ್ನು [illegible] ಒಂದು ಪೌಂಡಿನ ಕ್ರಯ 6 ಆಣೆ ಮಾತ್ರ [illegible] ಹೆಚ್ಚು ಕಾಲ ವರೆಗೆ [illegible]

ಲಿಟ್ಲ್ ಫ್ಲವರ್ ರೋಸ್ ಸೆಂಟೆಡ್ ಸೋಪ್—[illegible] ಸಾಬೂನುಗಳಲ್ಲಿ ಉತ್ಕೃಷ್ಟವಾಗಿರುವುದು ಗುಲಾಬಿ [illegible] ಗಂಧ [illegible] ಒಂದು ಬಿಲ್ಲೆ ಕ್ರಯ ೧ಆಣೆ ಮಾತ್ರ

ಜೋನ್ಸನ್ಸ್ ಬಾರ್ ಸೋಪ್—[illegible] ಬಾರ್ ಬಟ್ಟೆಗಳು ತೊಳೆಯಲು ಉಪಯೋಗಿಸಬಹುದು, ಕೆಲವು [illegible] ಬಟ್ಟೆಗಳ [illegible] ರಲ್ಲಿ 4ಆಣೆ [illegible]

ಕೋಲ್ ಟಾರ್ ಸೋಪ್—[illegible]

ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸೋಲ್ ಏಜಂಟರು—

ಮೆಸರ್ಸ್ ಬೋಳಂತೂರು ಸರ್ವೋತ್ತಮ ಪ್ರಭು, ಮಂಗಳೂರು.

ಕೆ. ಜೆ ಲಾಜರ್ ಮೆನೇಜರ್ ಮತ್ತು ಎಕ್ಸ್‌ಪರ್ಟ್.

ಬಂಗಾ [illegible] ಪದಕ ಹಾಗೂ ಯೋಗ್ಯತಾ ಪತ್ರಗಳಿಂದ ಬಹುಮಾನ ಹೊಂದಲ್ಪಟ್ಟವರು

ಏಜಂಟರು ಬೇಕಾಗಿರುವರು



"If every Wife knew what every Widow knows every Husband would be Insured

PLACE YOUR LIFE ASSURANCE WITH
**THE SOUTH INDIAN**
Securing for your clients
1 Low rates of Premium
2. Liberal Policy Conditions.
AND FOR YOURSELF
An Agency with attractive Terms of Commission and Salary in
**The South Indian General Assurance Co, Ltd.,**
Anywhere in CANARA DISTRICTS & HYDERABAD STATE
For terms of Agency please apply to —
H R K IYENGAR
Chief Agent
The S I G A Co Ltd,
Sinivasigudda MANGALORE
Managing Agents
K C PANDALAI & CO
78 Mclean Street G T MADRAS

ಜೀವವಿಮೆ ಮಾಡುವವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಸ್ಯೂರೆನ್ಸ್ ಕಂಪೆನಿ ಲಿಮಿಟೆಡ್ಡ್‌ನಲ್ಲಿ ವಿಮೆಮಾಡಿರಿ
ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!
ಪ್ರಿಮಿಯಂ ದರಗಳು ಕಡಿಮೆ!
ಷರ್ತಗಳು ತೀರಾ ಸುಲಭ!!
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ
ಧಾರಾಳವಾದ ಕಮಿಶನ್ನೂ ತೈನಾತಿ ಸಂಬಳವೂ ದೊರಕುವುದು
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)
ಚೀಫ್ ಏಜಂಟರು—
ಎಚ್ ಆರ್ ಕೆ ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳ
ದಿ ಎಸ್ ಐ. ಜಿ ಎ ಕಂಪೆನಿ ಲಿಮಿಟೆಡ್,
ಶಿನ್ಯಾಸಿಗುಡ್ಡೆ ಮಂಗಳೂರು
ಮೇನೇಜಿಂಗ್ ಏಜಂಟರು —
ಕೆ ಸಿ ಪಾಂಡಲೆ ಎಂಡ್ ಕೋ.
78 ಮೆಕಲೀನ್ ಸ್ಟ್ರೀಟ್ ಜಿ ಟಿ ಮದ್ರಾಸು



ಸುಲಭ ಕ್ರಯ ಧಾರಾಳ ಫಲ

## ದಂತಧಾವನ ಚೂರ್ಣ
## ಟೂತ್ ಪೌಡರ್.

[illegible] ಹಲ್ಲುನೋವುಗಳು [illegible] ಹಲ್ಲುಗಳ [illegible] ಹಲ್ಲುಗಳ [illegible] ಕೆಲವು ಸಮಯ ಉಪಯೋಗಿಸಿದರೆ [illegible] ಸಿಕ್ಕೆ [illegible] ಬಿಲ್ಲೆಗಳಿಗೆ [illegible]

ಹೆಚ್ಚಿನ ಸಂಗತಿಗಳನ್ನು ತಿಳಿಯಬೇಕಾದವರಿಗೆ ಮಲಯಾಳದಲ್ಲಿ ಮತ್ತು ಕನ್ನಡದಲ್ಲಿ ಔಷಧ ಪಟ್ಟಿ ಇದೆ

ಪಿ ಕರುಣಾಕರ ವೈದ್ಯರ್,
ಆರೋಗ್ಯಾಮೃತ ಔಷಧಾಲಯ
ಕ್ಯಾಂಪ ಬಜಾರ್ ಕಣ್ಣಾನೂರು

P KARUNAKARAN VYDIAR
Arogiamritha Aushadhalaya
Camp Bazaar, CANNANORE



ರಿಸ್ಟ್‌ವಾಚ್ ಉಚಿತ

[illegible] ಜೇಬಿನಲ್ಲಿ [illegible] ಉಚಿತವಾಗಿ ದೊರೆಯುತದೆ

[illegible] ರಿಸ್ಟ್‌ವಾಚ್ [illegible]

ಕಿಂಗ್‌ಜಾರ್ಜ ಕಾರ್ಪೋರೇಶನ್ ಕಂಪೆನಿ
ಮುಂಬಯಿ



ಕೋ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ

ಶಾರದಾ ಛಾಪಖಾನೆ
ರಥಬೀದಿ, ಮಂಗಳೂರು

## ಅನುಕ್ರಮಣಿಕೆ.

ಅಗ್ರಲೇಖ.

ಹಿಂದೂಸ್ಥಾನದ ಸಿನಿಮಾ ಕೈಗಾರಿಕೆ . . . ೮
ಸ್ಫುಟವಿಚಾರಗಳು . . ೬
ನೋಟಗಳು . . . . ೯

ವರ್ತಮಾನ ಸಂಗ್ರಹಗಳು

ವಿದೇಶ ವರ್ತಮಾನ . . . ೮
ಒಳದೇಶ ವರ್ತಮಾನ . ೮
ದಕ್ಷಿಣ ಕನ್ನಡ—ಮಂಗಳೂರು, ಉಡುಪಿ, ಸುಬ್ರಹ್ಮಣ್ಯ, ಕಾರ್ಕಳ, ಕುಂದಾಪುರ, ಮೂಲ್ಕಿ, ಬಂಗಾಡಿ, ಬಂಟವಾಳ, ಕುಂಬಳೆ ಗುರ್ಪುರ, ಹೊಸದುರ್ಗ . ೯
ವಿವಿಧ ಸಮಾಚಾರಗಳು ೧೧
ಇಂಡಿಯವೂ ಸ್ವರಾಜ್ಯವೂ ೧೩
ಕೊಡಗು ದೇಶದ ರಾಜ್ಯಭಾರ ಕ್ರಮ .
ಸ್ವದೇಶಿ ಎಂದರೇನು? ೨
ಮಹಾತ್ಮಾಜಿಯವರ ಸತ್ಯಾಗ್ರಹ ಸಮಾಚಾರ ೯ ೧೩

ಸ್ವದೇಶಾಭಿಮಾನಿ.

ಕಾರ್ತಿಕ ೧೪ನೇ ಶುಕ್ರವಾರ ನವಂಬರ ೧೯೩೦

## ಹಿಂದೂಸ್ಥಾನದ ಸಿನೆಮಾ ಕೈಗಾರಿಕೆ.

ಹಿಂದೂಸ್ಥಾನದ ಸಿನೆಮಾ ಕೈಗಾರಿಕೆಯು ಯಾರ ಕೈಕೆಳಗಿದ್ದರೂ ಅದು ಅನುಸರಿಸುವ ಕತೆಗಳು ಹೆಚ್ಚಾಗಿ ಹಿಂದೂ ಕತೆಗಳೇ ಆಗಿವೆ. ಈ ವರೆಗಿನ ಇಂತಹ ಕತೆಗಳಲ್ಲಿ ಹಲವು ಸಾಮಾಜಿಕ ಮತ್ತು ಐತಿಹಾಸಿಕ ಕತೆಗಳಿರುವುವಾದರೂ, ಹೆಚ್ಚಿನವುಗಳು ಮತ್ತು ಆಕರ್ಷಕವಾದವುಗಳು ಪೌರಾಣಿಕ ಕತೆಗಳೇ ಆಗಿವೆ. ಪೌರಾಣಿಕ ಕತೆಗಳಲ್ಲಿ ಯಾವ ನ್ಯೂನತೆಗಳಿಂಟಾಗುವದಾದರೂ, ಅವು ಹಿಂದೂ ಮತದ ಪ್ರಬಲ ಆಧಾರಗಳಾಗಿವೆಯೆಂಬುದನ್ನು ನಾವು ಅಲ್ಲವೆನ್ನಲಾರೆವು. ಇಂತಹ ಪೌರಾಣಿಕ ಕತೆಗಳು ಚಲಚ್ಚಿತ್ರ ರೂಪದಿಂದ ಫಿಲ್ಮಿನ ಮೇಲೆ ಅಭಿನಯಿಸುವಾಗ ಅವರಲ್ಲಿ ಹಿಂದೂ ಮತದ ಹಿತದ ದೃಷ್ಟಿಯು ಪ್ರಧಾನವಾಗಿರತಕ್ಕುದಿದೆ, ಆ ಧಾರಣೆಗಳಲ್ಲದಿದ್ದರೂ ಚಲಚ್ಚಿತ್ರದಲ್ಲಿ ನವೀನತೆಯನ್ನುಂಟುಮಾಡುವ ಉದ್ದೇಶದಿಂದ ಮತ ಭಾವನೆಗೆ ವಿರೋಧವುಂಟಾಗುವ ನಟನೆಗಳನ್ನೂ ದೃಶ್ಯಗಳನ್ನೂ ತಾರದಿರುವುದು ಅವಶ್ಯವಿದೆ.

ಈಗ ತೋರಿಬರುತ್ತಿರುವ ಚಲಚ್ಚಿತ್ರಗಳ ಪ್ರತ್ಯೇಕ ಹೆಸರು ತೆಗೆದು ವಿವರಿಸುವುದು ನಮ್ಮ ಪ್ರಕೃತದ ಉದ್ದೇಶವಲ್ಲ. ಆದರೆ ಸರ್ವಸಾಧಾರಣವಾಗಿ ಹೇಳುವುದಾದರೆ ಕೆಲವು ಕಡೆಗಳಲ್ಲಿ ಈ ಹಿಂದೂ ಪೌರಾಣಿಕ ಕತೆಗಳ ಚಲಚ್ಚಿತ್ರಗಳಲ್ಲಿ ಹಿಂದೂ ಮತದ ಭಾವನೆಗಳಿಗಾಗಲಿ ಅಥವಾ ಕತೆಯ ಪಾವಿತ್ರ್ಯಕ್ಕಾಗಲಿ ಸರಿಯಾದ ಬೆಲೆ ಕೊಡಲ್ಪಡುವುದಿಲ್ಲ, ಪಾಶ್ಚಾತ್ಯರು ತಯಾರಿಸಿರುವ ಕ್ರಿಸ್ತೀಯ ಮತದ ಚಿತ್ರಗಳನ್ನೂ ಆ ವಿಷಯದಲ್ಲಿ ಪೌರಾತ್ಯ ಹಿಂದೂ ಮತದ ಚಲಚ್ಚಿತ್ರಗಳೊಡನೆ ಸರಿಹೋಲಿಸಿ ನೋಡಿದಲ್ಲಿ ನಮ್ಮ ಅಭಿಪ್ರಾಯವು ಸ್ಪಷ್ಟವಾಗುವುದು.

ಇಂತಹ ಪೌರಾಣಿಕ (ಕ್ರಿಸ್ತೀಯ) ಚಲಚ್ಚಿತ್ರಗಳನ್ನು ಪಾಶ್ಚಾತ್ಯರು ತಯಾರಿಸುವಾಗ ಚಿತ್ರ ತಯಾರಿಯ ಜವಾಬ್ದಾರಿಯುಳ್ಳವರು ಆ ಪೌರಾಣಿಕ ಸಮಯದ ಕಾಲದ ವಿವರವನ್ನು ತಿಳಿದ ಕಲಾಜ್ಞರು, ಪಾತ್ರಗಳ ವೇಷ ಭೂಷಣದ ಪ್ರತಿ ವಿವರವನ್ನೂ ಶ್ರಮ ಪೂರ್ವಕ ಕಲೆಹಾಕುವವರು. ಮೂಲ ಪೌರಾಣಿಕ ಕತೆಯನ್ನೂ ಚೆನ್ನಾಗಿ ಓದಿ ಮನನಮಾಡಿಕೊಳ್ಳುವರು. ಆ ಮೇಲೆ ದೃಶ್ಯ, ಜನರ ಉಡಿಗೆ ತೊಡಿಗೆ, ನಡೆನುಡಿಗಳ ಕ್ರಮ ಇತ್ಯಾದಿಗಳನ್ನೆಲ್ಲಾ ನಿರ್ಣಯಿಸುವರು. ಪ್ರತಿ ನಟನನ್ನು ಆರಿಸುವಾಗ ಅವನ ಪಾತ್ರಕ್ಕೆ ಸರಿಯಾದ ಮುಖಭಾವ ಅಂಗರಚನೆ ಇತ್ಯಾದಿ ಇದೆಯೋ ಎಂದು ನೋಡುವರು.

ಆದರೆ ಹಿಂದೀ ಚಲಚ್ಚಿತ್ರಗಳಲ್ಲಿ ಈ ರೀತಿಯಲ್ಲಿ ಶ್ರಮಪಡುವವರು ಬಹಳ ವಿರಳ ಇಲ್ಲವೆಂದರೂ ಹೇಳಬಹುದು. ಹಿಂದೀ ಪೌರಾಣಿಕ ಹೆಸರನ್ನು ನೋಡಿದ ಕೂಡಲೆ, ಉತ್ಸಾಹದಿಂದ ಚಿತ್ರ ನೋಡಲು ಹೋಗುವ ಹಿಂದೂಗಳ ಸಂಖ್ಯೆಯು ಹೆಚ್ಚು. ಆದರೆ ಅದು ಪೌರಾಣಿಕ ರೀತಿಯನ್ನು ಅನುಸರಿಸಿದೆಯೋ, ತಮ್ಮ ಮತವನ್ನು ಗೌರವಿಸಿದೆಯೋ ಎಂಬುದನ್ನು ನೋಡುವವರಿಲ್ಲ. ಹಲವು ಚಿತ್ರಗಳಲ್ಲಿ ಪೌರಾಣಿಕತೆಯ ವೈಶಿಷ್ಟ್ಯಗಳೇ ಕಾಣುವುದಿಲ್ಲ. ಯಾರೊಬ್ಬ ಇಂಗ್ಲೀಷರವನು ತನ್ನ ಮನಸ್ಸಿಗೆ ಅನುಸಾರವಾಗಿ ಪುರಾಣಗಳೆಂದೆತ್ತಿ ಕತೆ ಬರೆದ ಮೇಲೆ ಅದನ್ನೆತ್ತಿ ಸಿನೆಮಾ ಕಂಪೆನಿಯವರು ಅಭಿನಯಿಸಿದಂತೆ ತೋರುತ್ತಿದೆ.

ಪೌರಾಣಿಕವಾಗಲಿ, ಐತಿಹಾಸಿಕವಾಗಲಿ, ಸಾಮಾಜಿಕವಾಗಲಿ, ಯಾವುದೊಂದು ತರದ ಕತೆಯನ್ನು ಅಭಿನಯಿಸುವಾಗ ಸಂಬಂಧಪಟ್ಟ ಸಮಾಜದ ಭಾವನೆ ಗೌರವಗಳನ್ನು ಮನ್ನಿಸುವುದು ಫಿಲ್ಮ್ ರಚಯಿತರ ಕರ್ತವ್ಯವಿರುತ್ತದೆ. ಅಂತಹ ಮಾನತೆಯು ಇದೆಯೆಂದು ನೋಡುವುದು ಫಿಲ್ಮ ಪ್ರದರ್ಶಕರ ಮತ್ತು ಪ್ರೇಕ್ಷಕರ ಕರ್ತವ್ಯವಿರುತ್ತದೆ. ಈ ಜವಾಬ್ದಾರಿಯ ಭಾವನೆಯೇ ಇಲ್ಲದೆ, ಪ್ರದರ್ಶಕರೂ ಪ್ರೇಕ್ಷಕರೂ ಫಿಲ್ಮುಗಳನ್ನು ಪ್ರೋತ್ಸಾಹಿಸುವುದಾದರೆ ಸಿನೆಮಾ ಕೈಗಾರಿಕೆಯ ಅಭಿವೃದ್ಧಿಯು ತಡೆಹೊಂದುವುದಲ್ಲದೆ ಮತಭಾವನೆಗಳಿಗೂ ತೊಡಕುಂಟಾಗುವುದು.

ಉದಾಹರಣಾರ್ಥವಾಗಿ, ಒಂದು ಹಿಂದೂ ಮತಸಂಬಂಧದ ಚಿತ್ರದಲ್ಲಿ, ಸಿನೆಮಾ ಕಂಪೆನಿಯ ಚಾಲಕರು ಪಾರ್ಸಿಗಳು, ರಚನಾ ವಿವರವನ್ನು ಕೊಟ್ಟವರು ಒಬ್ಬರು ರೆವರೆಂಡ್ (?) ಫಾದರರು, ಅಭಿನಯಗಾರರೂ ಒಬ್ಬ ಪಾರ್ಸಿಗಳು ಫಲತಃ ಆ ನಟನೆಗೂ ಹಿಂದೂ ವೈಶಿಷ್ಟ್ಯಕ್ಕೂ ಯಾವ ಸಂಬಂಧವೂ ಇರಲಿಲ್ಲ. ಆದರೆ ಹಿಂದೂ ಕತೆ, ಹಿಂದೂ ದೇವಸ್ಥಾನ ಇತ್ಯಾದಿಗಳೆಲ್ಲಾ ಒಂದುದರಿಂದ ಹಿಂದೂಗಳಿಗೆ ಅದು ಬಹು ಆಕರ್ಷಕವಾಯಿತು. ಫಿಲ್ಮ ಕಂಪೆನಿಗೆ ದುಡ್ಡು ಆಯಿತು. ಆದರೆ ನಷ್ಟ ಯಾರಿಗೆ? ಹಿಂದೂಗಳಿಗೆ ಮತ್ತು ಹಿಂದೂ ಮತಕ್ಕೆ—ಮತ್ತು ಸಿನೆಮಾ ಕೈಗಾರಿಗೆ ಕೂಡ, ಇತ್ತೀಚೆಗೆ ಮಂಗಳೂರಿಗೆ ಬಂದ ಒಂದು ಫಿಲ್ಮಿನಲ್ಲಿ ಪೌರಾಣಿಕತೆಯ ಅನುಸರಣವೇ ಇರಲಿಲ್ಲ. ಅಭಿನಯವು ಅತ್ಯಂತ ಹೀನವಾಗಿದ್ದಿತು, ಫೋಟೋ ತೆಗೆದದ್ದು ಕೂಡ ಚೆನ್ನಾಗಿರಲಿಲ್ಲ. ಪ್ರದರ್ಶಕರಾದರೂ ಇಂತಹ ಫಿಲ್ಮುಗಳಿಗೆ ಬಹಿಷ್ಕಾರವನ್ನು ಹಾಕಿ ಹಿಂದೀ ಸಿನೆಮಾ ಕೈಗಾರಿಕೆಯ ಅಭಿವೃದ್ಧಿಯನ್ನು ಸಾಧಿಸಬಾರದೆ?

ಸಶೇಷ

## ವಿದೇಶ ವರ್ತಮಾನ

— ಡಾ ವೆಲ್ಸರು ಮೆಕ್ಡೊನಾಲ್ಡರಿಗೆ ಬರೆಯುತ್ತಾರೆ— ಒಂದೋ ಇಂಡಿಯದೊಡನೆ ಸಿಗಿರುವ ಕರ್ತವ್ಯವನ್ನು ಶೀಘ್ರದಲ್ಲೇ ಪೂರ್ತಿಗೊಳಿಸು ಇಲ್ಲವಿದ್ದರೆ ನಿನ್ನ ಹುದ್ದೆಗೆ ತಿಲಾಂಜಲಿಯನ್ನಾದರೂ ಇಡು ಎಂದು.

ಲಂಡನಿನಲ್ಲಿ ಮಿ। ಬೆನ್ನರು ನವಂಬ್ರ ತಾ ೧೨ನೇ ದಿನ ಇಂಡಿಯಾ ನ್ಯಾಶನಲ್ ಯರ ದಿಕ್ಸೀಚನ್ನು ಪಾರ್ಲಿಮೆಂಟ ಸದಸ್ಯರಿಗೂ ರೌಂಡ ಟೇಬ್ಲಿಗೆ ಹೋದ ಇಂಡಿಯನ್ ಡೆಲಿಗೇಟರಿಗೂ ಕರಪತ್ರಗಳ ಮುಖೇನ ತಿಳಿಯಪಡಿಸಿದರೆಂದು ವರ್ತಮಾನ.

— ಮೇಜರ್ ಗೇಮ್ ಪೋಲ್ ಎಂಬವರು ಕೇಳುತ್ತಾರೆ— ಚೆನ್ನೊಡನೆ ಇಂಡಿಯಾದಿಂದ ಕಳುಹಲ್ಪಟ್ಟ ರಿಕ್ರೂಟರು ಎಷ್ಟಿದ್ದಾರೆಯೂ ಎಷ್ಟು ಸ ಕಾರಕ್ಕೆ ಸಂಬಂಧಿಸಿರುವವರೆ? ಎಂದು.

ಲಂಡನ್ ವರ್ತಮಾನ ಪತ್ರಿಕೆಗಳನ್ನು ನೋಡಿ ಭಾರತೀಯ ದರ್ಶಕರು ಇಂಡಿಯದ ಪರಿಸ್ಥಿತಿಗಳ ಕುರಿತು ಪ್ರಶ್ನೆ ಹಾಕಿದರಂತೆ. ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಬೆನ್ನರಿನ್ನೂ ಕೊಡಲಿಲ್ಲ. ಎಲ್ಲ ವಿಷಯ ಕಾನ್ಫರೆನ್ಸಿನಲ್ಲಿ ಆಲೋಚಿಸಲ್ಪಡುವವಂತೆ! ಸದ್ಯಕ್ಕೆ ಇಂಡಿಯದ ವಿಷಯವು ಪ್ರತಿಯೊಬ್ಬ ಇಂಗ್ಲೀಷು ವ್ಯಕ್ತಿಯ ನಾಲಗೆಯಲ್ಲಿಯೂ ನಲಿದಾಡಹತ್ತಿದೆ ಬವರು.

— ಮಹಮ್ಮದಲಿಯವರು ಲಂಡನಿನಲ್ಲಿ ಮುಸಲ್ಮಾನ ಸಭೆಯ ಅಧಿವೇಶನದಲ್ಲಿ ಹೇಳಿದ್ದೇನೆಂದರೆ ಈಗಲೇ ಇಂಡಿಯಕ್ಕೆ ಸ್ವರಾಜ್ಯವನ್ನು ಬಿಟ್ಟುಕೊಡುತ್ತೀರೋ ಅಥವಾ ಇಂಡಿಯವು ಬ್ರಿಟಿಷರ ಅಧೀನತೆಯಿಂದ ಹೊರಹೊರಡಬೇಕೋ ಎಂದು ಇದರ ಉತ್ತರ ಮಾತ್ರ ದೊರೆಯಲಿಲ್ಲ.

ರೌಂಡ ಟೇಬಲ್ ಕಾನ್ಫರೆನ್ಸಿನಲ್ಲಿ ಅರಸರು ತನ್ನ ಭಾಷಣವನ್ನು ಗಟ್ಟಿಯಾಗಿ ಕೇಳಿಸುವಂತೆ ಚಿನ್ನ ಬೆಳ್ಳಿಯಿಂದ ನಿರ್ಮಿತವಾದ ಮ್ಯಾಕ್ರೋಫೋನ್ ಎಂಬ ಯಂತ್ರವನ್ನು ಉಪಯೋಗಿಸುವರಂತೆ! ಇದು ಅರಸರ ಉಪಯೋಗಕ್ಕೆ ಮಾತ್ರ. ವಿಶೇಷ ಸಂದರ್ಭಗಳಲ್ಲಿಯೇ ಈ ಯಂತ್ರವನ್ನು ಉಪಯೋಗಿಸುವರು, ಕೆಲವು ಡೆಲಿಗೇಟರಿಗೂ ಮ್ಯಾಕ್ರೋಫೋನುಗಳನ್ನು ಕೊಡಲಾಗುವುದಂತೆ!

— R ೧೦೧ ವಿಮಾನದ ಅಪಘಾತದ ವಿಚಾರಣೆಯು ಲಂಡನಿನಲ್ಲಿ ನಡೆಯುತ್ತಿರುವದು. ಇದು ವರೆಗೂ ತಿಳಿದುಬಂದಂತೆ, ಆ ವಿಮಾನವು ಆ ಸಂದರ್ಭದಲ್ಲಿ ಹೊರಟದ್ದೇ ತಪ್ಪೆಂಬದಾಗಿ ತಿಳಿದುಬರುತ್ತದೆ.

## ಒಳದೇಶ ವರ್ತಮಾನ.

— "ಕ್ವೆಟ್ಟಾ" ಎಂಬಲ್ಲಿ ನವಂಬರ ತಾ ೭ನೇ ದಿನ ದರೋಡೆಗಾರರ ಚಿಕ್ಕದೊಂದು ಸಂಗಡವು ಕೋವಿಗಳನ್ನೂ ಕೋವಿಯ ಮದ್ದನ್ನೂ ತುಂಬಿಸಿರುವ ಲೋರಿಯೊಂದನ್ನು ಸೂರೆ ಮಾಡಿರುವರು. ದರೋಡೆಗಾರರು ಲೋರಿಗೆ ಗುಂಡುಬಾರು ಮಾಡಿದರು. ಪೋಲೀಸರು ಮೊದಲನೆಯ ಗುಂಡುಬಾರು ಮಾಡಿದೊಡನೆ ತಮ್ಮ ವಶವಿದ್ದ ಕೋವಿಗಳಿಂದ ಪ್ರತಿಯಾಗಿ ಗುಂಡು ಹಾರಿಸಿದ್ದಲ್ಲದೆ, ಲೋರಿಯನ್ನು ಅತಿವೇಗದಿಂದ ಮುಂದಕ್ಕೆ ನಡೆಸಹತ್ತಿದರು. ಆದರೆ ದರೋಡೆಗಾರರು ಲೋರಿಯ ಟಾಯರುಗಳಿಗೆ ತಾಗುವಂತೆ ಗುಂಡು ಬಾರು ಮಾಡಲುಪಕ್ರಮಿಸಿದುದರಿಂದ ಪೋಲೀಸರು ಲೋರಿಯನ್ನು ಮುಂದೊಯ್ಯಲಾರದಂತಾಯಿತು. ಹಾಗೂ ದರೋಡೆಗಾರರು ಗುಂಡಿನ ಸುರಿಮಳೆಯನ್ನೇ ಸುರಿಸಲಾರಂಭಿಸಿದರು. ಡ್ರೈವರನೂ ಓರ್ವ ಪೋಲೀಸು ಕಾನಸ್ಟೇಬಲನೂ ಮೃತಪಟ್ಟಿರುವರಂತೆ! ಬಹುಮಂದಿಗೆ ಗಾಯವಾಗಿರುವದೆಂದೂ ತಿಳಿದುಬರುತ್ತದೆ. ಅಲ್ಲದೆ ದರೋಡೆಗಾರರು ಪೋಲೀಸರಿಂದ ಒಂದು ರೈಫಲನ್ನೂ ಕೋವಿ ಮದ್ದನ್ನೂ ಸೂರೆಮಾಡಿರುವರು. ಮಿಲಿಟರಿ ಬರುವುದರೊಳಗಾಗಿ ದರೋಡೆಗಾರರು ತಪ್ಪಿಸಿಕೊಂಡು ಎತ್ತಲೋ ಓಡಿ ಹೋಗಿರುವರಂತೆ!

— ಲಾಹೋರಿನಲಿ ಹರಿಚರನ್ ಎಂಬೊಬ್ಬ ಕಂಪೌಂಡ್ರ ವಶ ಉಪಯೋಗಿಸದಿರುವ ಒಂದು ಬೊಂಬು ಬೊಂಬು ತಯಾರಿ ಬಗ್ಗೆ ಬೇಕಾದ ಕೆಲವು ಔಷಧಿಗಳೂ ಪತ್ತೆಯಾಗಿರುವವು. ಈ ಕುರಿತು ಪೋಲೀಸರು ಅನೇಕರ ಮನೆಗಳನ್ನು ಶೋಧೆ ನಡಿಸುತ್ತಲೂ ಕೆಲವರನ್ನು ದಸ್ತಗಿರಿ ಮಾಡುತ್ತಲೂ ಇರುವರು. ಹಾಗೂ ಹರಿಚರನರು ಕೈದು ಮಾಡಲ್ಪಟ್ಟಿರುವ.

ಮದ್ರಾಸು ಪ್ರಾಂತ್ಯದ ಅತಿಶಯ ಮಳೆಯ ದೆಸೆಯಿಂದ, ತಿರುಚಿನಾಪಳ್ಳಿ ತಂಜಾವೂರು ಮೊದಲಾದ ಪ್ರಾಂತ್ಯಗಳು ಹೆಚ್ಚಿನ ನೆರೆಯ ಹಾವಳಿಗೆ ತುಂಬಾ ನಷ್ಟವನ್ನು ಹೊಂ

ಪ್ರೆಸ್ ಓರ್ಡಿನೆನ್ಸಿನ ಅವಧಿಯು ಮುಗಿದ ಕಾರಣ ಮಸ್ತಾಪಡಿಸಲ್ಪಟ್ಟ ಅನೇಕ ರಾಷ್ಟ್ರೀಯ ಪತ್ರಿಕೆಗಳು ಮತ್ತೊಮ್ಮೆ ಊರ್ಜಿತಕ್ಕೆ ಬಂದಿವೆ.

— ಹಿಂದು ಮೋಹನ ಪರಿಷತ್ತಿನಲಿ ಮೊದಲಾಗಿ ಸಾಮಂತ ಸ್ವರಾಜ್ಯದ ಪ್ರಶ್ನೆಯನ್ನೇ ಎತ್ತಬೇಕೆಂದು ರಾಮಸ್ವಾಮಿ ಅಯ್ಯರ್ ಸಪ್ರುಮೊದಲಾದವರು ಯೋಚಿಸುತ್ತಿದ್ದಾರೆ.

— ಮುಂಬಾಯಿಯ ಕಾಂಗ್ರೆಸ್ಸಿನ ಆಕ್ಟಿಂಗ ಪ್ರೆಸಿಡೆಂಟರಾಗಿದ್ದ ಮಿ ಹರಿಸ್ ಚಟ್ಟೋಪಾಧ್ಯಾಯರನ್ನು ಕೈದ ಮಾಡಿ ಸೆರೆಮನೆ ತೋರಿಸಿರುವರು. ಚಟ್ಟೋಪಾಧ್ಯಾಯರು ಸತ್ಯಾಗ್ರಹದಲಿ ಭಾಗವಹಿಸಲಿಲ್ಲವಂತೆ!

ಮಹಾತ್ಮಾಜಿಯವರನ್ನು ಹಿಂಬಾಲಿಸಿ ಧರ್ಸಾನದ ಉಪ್ಪಿನ ಸತ್ಯಾಗ್ರಹಕ್ಕಾಗಿ ಟೊಂಕಕಟ್ಟಿ ಸಬರ್ಮತಿಯ ಸೆರೆಮನೆಯನ್ನು ಪ್ರವೇಶಿಸಿದ ಮಾನ್ಯ ಅಬ್ಬಾಸ್ ತಯಾಬ್ಜಿಯವರು ತನ್ನ ಜೈಲುವಾಸವನ್ನು ಮುಗಿಸಿ, ಹೊರಬಂದಿರುವರು. ಅವರು ತಾನಿನ್ನೂ ಜೈಲನ್ನು ಸೇರಬೇಕೆಂದು ಪ್ರಯತ್ನದಲ್ಲಿರುವೆನೆಂದೂ ಹೇಳಿರುವರು.

— ಮುಂಬಾಯಿಯಲ್ಲಿ ಸ್ವದೇಶಿ ಸ್ಟಾಂಪು (Stamps) ಗಳನ್ನು ತಯಾರಿಸಬೇಕೆಂದು ಪ್ರೋತ್ಸಾಹವು ಹೆಚ್ಚುತ್ತಿರುವುದೆಂದು ತಿಳಿದುಬರುತ್ತದೆ. ಭಾರತೀಯ ಕೈಗಾರಿಕೆಗಳಲಿ ಸ್ಟಾಂಪ ತಯಾರಿಯು ಕೆಲಸವು ಬಹಳ ಅಗತ್ಯವಾಗಿರುವುದೆಂದು ಮುಂದರಲ್ಲದೂ ತುಂಬಾ ಪ್ರೋತ್ಸಾಹವೀಯುತ್ತಿರುವರು.

— ಫ್ರೆಂಚ್ ಚಂದ್ರನಾಗೋರದಲಿ ಕೆಲಮಂದಿ ಪ್ರೆಂಚ ದಂಗೆಕೋರರ ಪತ್ತೆಹಚ್ಚಿ ಕೈದುಮಾಡಿದುದಕ್ಕಾಗಿ ಬಂಗಾಳ ಸರಕಾರವು ಪೋಲೀಸು ಇನ್ಸ್ಪೆಕ್ಟರಿಗೂ ೦ ಮಂದಿ ದಳೇ ಮುಖದ ಸಾರ್ಜಂಟರಿಗೂ ೪೫೦ ರೂಪಾಯಿಗಳನ್ನು ಬಹುಮಾನವಾಗಿ ಕೊಟ್ಟಿರುವರಂತೆ.

ಮದ್ರಾಪುರ ತಾಲೂಕಿನಲ್ಲಿ ೩೨ ಗ್ರಾಮಗಳಿಗೆ ಸೇರಿದ ಸುಮಾರು ೪೦೦ ಜನರು ನೇಜರ್ಲೇಂಡ್ ಎಂಬ ಪೋಲಿಟಕಲ್ ಏಜಂಟರೊಡನೆ ತಮ್ಮ ಪಾಲುಗಾರಿಗಳ ಬಗೆಗೆ ಅರಿಕೆ ಮಾಡಿಕೊಂಡರಂತೆ. ಏಜಂಟರು ಜನತೆಗೆ ಯೋಗ್ಯ ಸಮಾಧಾನವನ್ನು ಹೇಳಿರುವರೆಂದು ತಿಳಿದುಬರುತ್ತದೆ.

— ರಾಜಶ್ಯಾ ಜಿಲ್ಲೆಯ ಆರ್ಥಿಕ ಬಲಹೀನತೆಯು ೨ ಮಂದಿ ಗಂಡಸರ ಮತ್ತು ೨ ಮಂದಿ ಹೆಂಗಸರ ಮರಣಕ್ಕೆ ಮೂಲಕಾರಣವಾಗಿರುವದೆಂದು ತಿಳಿದುಬರುತ್ತದೆ. ಎರಡು ಮಂದಿ ಮಹಮ್ಮದಿ ಸಹೋದರರು ಕುಟುಂಬ ದ್ವೇಷದಿಂದ ವಿಭಾಗಿಸಲ್ಪಟ್ಟು ತಮ್ಮ ಹೆಂಡಿರು ಮಕ್ಕಳೊಡನೆ ಬೇರೆಬೇರೆಯಾಗಿ ಜೀವನ ನಡಿಸುತ್ತಿದ್ದರು. ಮರಣದ ಹಿಂದಿನ ದಿವಸದಲ್ಲಿ ಹಿರೇ ಅಣ್ಣನು ಸಹೋದರನ ದರಿದ್ರಾವಸ್ಥೆ ಹಾಗೂ ಊಟಕ್ಕೂ ಕೂಡ ಅಕ್ಕಿ ಇಲ್ಲದಿರುವ ಬಡತನವನ್ನು ನೋಡಿ ಸಹಿಸಲಾರದೆ, ಒಂದು ಸೇರು ಅಕ್ಕಿಯನ್ನು ತನ್ನ ಹೆಂಡತಿಗೆ ತಿಳಿಯದಂತೆ ಕೊಟ್ಟನಂತೆ! ಅಕ್ಕಿಯನ್ನು ತಂದು ಕಿರೇ ಸಹೋದರನ ಹೆಂಡತಿಯು ಅನ್ನ ಮಾಡಲಾರಂಭಿಸಿದಳು. ಅಷ್ಟರಲ್ಲಿಯೇ ಹಿರೇಯವನ ಪತ್ನಿಯು ಬಂದು ಮಾತ್ಸರ್ಯದಿಂದ ಅನ್ನದ ಮಡಿಕೆಯನ್ನು ಒಡೆದುಹಾಕಿದಳಂತೆ! ಹೊರಗೆ ಹೋದ ಕಿರೇ ಸಹೋದರನು ಬಂದು ನೋಡಲು ಹೆಂಡತಿಮಕ್ಕಳ ಗೋಳು ಉಸಿರೆತ್ತದೆ ಆತನು ಪಕ್ಕದ ಕೋಣೆಯೊಂದರಲ್ಲಿ ಹೋಗಿ ಆತ್ಮಹತ್ಯಮಾಡಿಕೊಂಡನಂತೆ! ಆ ಕೂಡಲೇ ಹೊರಗೆ ಹೋಗಿದ್ದ ಹಿರೇಯವನೂ ಬಂದನು. ಹೆಂಡತಿಯ ಅಕ್ರಮವಾದ ಕೃತ್ಯವನ್ನರಿತನು. ತುಸು ಯೋಚಿಸಿದನು. ಕರುವಾಯ ಕತ್ತಿಯೊಂದನ್ನು ಕೆಗೆದು ಹೆಂಡತಿಯನ್ನು ಕಡಿದನು. ತಾನೂ ಪ್ರಾಣವನ್ನು ಕಳಕೊಂಡನು. ಹಾಗೂ ಒಂದು ಸೇರು ಅಕ್ಕಿಯು ಮೂರು ಜನರ ಪ್ರಾಣ ತೆಗೆಯಿತು.

# ದಕ್ಷಿಣ ಕನ್ನಡ.

## ಹಿಂದೀ ಪ್ರಚಾರ

**ಮಂಗಳೂರು:** — ಹಿಂದೀ ವರ್ಗಗಳು, ಮಹಿಳಾ ಸಭೆ ಮತ್ತು ಗಣಪತಿ ಹ್ಯಾಸ್ಕೂಲಿನಲ್ಲಿ ತೆರೆಯಲಾಗಿವೆ. ಹಿಂದಿಯನ್ನು ಕಲಿಯಬಯಸುವ ಸ್ತ್ರೀಪುರುಷರು ಶ್ರೀಮತಿ ಗಂಗಾಬಾಯಿ ಕೇಳ್ಕರ ಮತ್ತು ಪಂಡಿತ ದೇವದೂತ ವಿದ್ಯಾರ್ಥಿ ಇವರನ್ನು ಕಾಣಬೇಕಾಗಿ ವಿನಂತಿ. ಮಹಿಳಾ ಸಭೆಯ ವರ್ಗವು ಸ್ತ್ರೀಯರ ಸಲುವಾಗಿ ಸೋಮವಾರ ಮಂಗಳವಾರ ಮತ್ತು ಶುಕ್ರವಾರ ಅಪರಾಹ್ನ ೪ ಗಂಟೆಯಿಂದ ೫ರ ವರೆಗೆ ನಡೆಯುವುದು. ಗಣಪತಿ ಹ್ಯಾಸ್ಕೂಲಿನ ವರ್ಗವು ಪುರುಷರ ಸಲುವಾಗಿ ಮಂಗಳವಾರ ಮತ್ತು ಗುರುವಾರ ಅಪರಾಹ್ನ ೫-೩೦ ಗಂಟೆಯಿಂದ ೬-೩೦ರ ವರೆಗೂ ಆದಿತ್ಯವಾರ ೪ರಿಂದ ೫ರ ವರೆಗೂ ಇರುವದು.

ಮಂಗಳೂರು ಮುನಿಸಿಪಾಲಿಟಿ ರಿಪೋರ್ಟಿನಂತೆ ಈ ವಾರದಲಿ ೩೪ ಜನನಗಳೂ ೩೧ ಮರಣಗಳೂ ಆದವು.

### ಡೈಮಂಡ್ ಜುಬ್ಲಿ, ಗಣಪತಿ ಹೈಸ್ಕೂಲ್ [illegible]

ಗಣಪತಿ ಹ್ಯಾಸ್ಕೂಲಿನ ಡೈಮಂಡ್ ಜುಬ್ಲಿಯನ್ನು ಬರುವ ದಶಂಬರ ತಿಂಗಳಲ್ಲಿ ನೆರವೇರಿಸಬೇಕೆಂದು ನಿರ್ಧಾರಮಾಡಿರುವರು. ಈ ಸಂದರ್ಭದಲ್ಲಿ, ಸದರಿ ಶಾಲೆಯ ಎಲ್ಲಾ ಬಿಟ್ಟುಹೋದ ವಿದ್ಯಾರ್ಥಿಗಳು ತಮ್ಮ ವಿಳಾಸಗಳನ್ನು 'Old Boys Association'ದ ಕಾರ್ಯದರ್ಶಿಯವರಿಗೆ ದಶಂಬರ ಮುಂಚಿತವಾಗಿ ಕಳುಹಿಸಿಕೊಡಬೇಕೆಂದು ಅಪೇಕ್ಷಿಸೋಣಾಗುತ್ತದೆ. ೬ ವರೆಗೂ ಹಳೇ ವಿದ್ಯಾರ್ಥಿಗಳು, ಇದೊಂದು ಜನರಲ್ ಆಮಂತ್ರಣೆ ಎಂದೇ ಊಹಿಸತಕ್ಕದ್ದು. ಹಳೇ ವಿದ್ಯಾರ್ಥಿಗಳ ಕೂಟವು 'Rupee Fund'ನ್ನು ಏರ್ಪಡಿಸಿರುವದು. ಎಲ್ಲರೂ ಈ ಫಂಡಿಗೆ ತಮ್ಮ ಇಚ್ಛಾನುಸಾರವಾಗಿ ದ್ರವ್ಯ ಸಹಾಯ ಮಾಡಬೇಕೆಂದೇ ವಿನಂತಿ.

### ಮಂಗಳೂರು ಮುನ್ಸಿಪಾಲಿಟಿ

#### ಮುನ್ಸಿಪಾಲ್ ಆಕ್ಟಿನ ೧೦೪ ಮತ್ತು ೧೦೫ನೇ ಪ್ರಕರಣದ ಮೇರೆಗೆ ನೋಟೀಸು

ಮಂಗಳೂರಿನಲ್ಲಿ ಚಲಾವಣೆ ಆಗುವ ಬೈಸಿಕಲ್ ಮತ್ತು ಬಿಲ್ಲುಗಳಿಲ್ಲದ ಎತ್ತಿನ ಗಾಡಿ ವ ಕೈಗಾಡಿಗಳ ಮಾಲ್ಲಿಕರು ಇದೇ ನವಂಬರ ತಿಂಗಳ ತಾ ೩೦ರ ಒಳಗೆ ಆಫೀಸು ಇರುವ ಸಮಯದಲ್ಲಿ ಒಂದು ಅವರವರ ಬೈಸಿಕಲ್ಲುಗಳಿಗೆ ಚಾಲ್ತಿ ಕಂತಿನ ಲೈಸನ್ಸು ಮತ್ತು ಬಿಲ್ಲೆ [illegible] ಕೊಂಡು ಗಾಡಿಗಳಿಗೆ ಸಹಾ ಅವುಗಳ ಚೆಂಗೆ ಕೊಟ್ಟು ರಿಜಿಸ್ಟರ್ ಮಾಡಿ ನಂಬ್ರ ಹಾಕಿಸತಕ್ಕದ್ದು. ಹಾಗೆ ಬಿಲ್ಲೆ ಇಲ್ಲದಿರುವ ಬೈಸಿಕಲ್‌ಗಳನ್ನು ಮತ್ತು ನಂಬ್ರ ಹಾಕದಿರುವ ಗಾಡಿಗಳನ್ನು ಇಲಾಖೆಯವರು ವಶಕ್ಕೆ ಸ್ವಾಧೀನ ಮುನಿಸಿಪಾಲ್ ಆಕ್ಟಿನ ಮೇರೆಗೆ [illegible] ದಂಡನೆಗೆ ಒಳಪಡಿಸುವರೆಂಬ ಸಂಗ್ತಿ ಕರಪತ್ರಗಳ ಮೂಲಕ ತಿಳಿಸಲಾಗಿತ್ತು.

ಸದರಿ ಪಡಕೊಂಡ ಬೈಸಿಕಲ್ಲಿನ ಬಿಲ್ಲೆಗಳನ್ನು ಅವುಗಳ ಬೈಸಿಕಲ್ಲಿನ ಮುಂದುಗಡೆ ಬಹಿರಂಗವಾಗಿ ತೋರುವ ಹಾಗೆ ಇಡತಕ್ಕದ್ದು.

"ನವೀನ ಕಲಾದರ್ಶಕ ಸಭೆ" ಇವರು ತಾ ೨೯-೧೧-೩೦ನೇ ಶನಿವಾರ ರಾತ್ರೆ ಘಂಟೆ ೯-೩೦ಕ್ಕೆ ಒಂದೇ [illegible] "Only a draught" ಎಂಬ ನಾಟಕವನ್ನು [illegible] ಸಿನೇಮಾ ಥಿಯೇಟರಿನಲಿ ಅಭಿನಯಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

**ಉಡುಪಿ** — ಈ ವರ್ಷ ಇಲ್ಲಿ [illegible] ದೇವಳದಲ್ಲಿ ವಾಡಿಕೆಯಂತೆ ನಡೆಯುವ ದೀಪೋತ್ಸವ [illegible] ಜನರು ಉದಾರ ಮನಸ್ಸಿನಿಂದ ಪಟಾಕಿ [illegible]ಯನ್ನು ಬಹಿಷ್ಕರಿಸಿದರು.

ಇದೇ ತಾ ೮ಕ್ಕೆ ಇಲ್ಲಿನ ಸ್ಟೇಶನ್ [illegible] ಮುಂದೆ ಹಾಜರಾಗಬೇಕಾಗಿ [illegible] ಸ್ವಯಂಸೇವಕರಿಗೆ ಸಮ್ಮನ್ಸು ಹೊರಟಿತ್ತಾದರೂ ಇಬ್ಬರಿಗೆ ನೋಟೀಸು ಜಾರಿಯಾಗದ್ದರಿಂದ ಸದ್ರಿಯವರ ಮೇಲೆ ಹೊರಿಸಲಾದ ಸೆಕ್ಷನ್ ೧೪೪ನ್ನು ಉಲ್ಲಂಘಿಸಿದ ತಕ್ಷೀರಿನ ವಿಚಾರಣೆಯು ಇದೇ ತಾ ೧೮ಕ್ಕೆ ಮುಂದರಿಸಲಾಗಿದೆ.

'ರಾಮಬಾಣ' ಎಂಬದಾಗಿ ಸತ್ಯಾಗ್ರಹ ಸಮಾಚಾರದ ಪತ್ರಿಕವು ಶ್ರೀ [illegible] ಶೆಟ್ಟಿಯೆಂಬೋರ್ವ ಸತ್ಯಾಗ್ರಹಿಯು ನವಂಬರ ಮೊದಲನೆ ವಾರದ ಸಂಚಿಕೆಯಾಗಿ ಹೊರಬಿದ್ದವೆ.

ಮಂಗಳೂರಿನಲ್ಲಿ, ಸತ್ಯಾಗ್ರಹ ಚಳವಳದ ಶಾಂತತೆಗೋಸ್ಕರ ೧೪೪ನೇ ಪ್ರಕರಣವು ಮುಂದರಿಸಿ ಜ್ಯಾರಿಯಾಗಿರುವದು. ಇನ್ನೆರಡು ತಿಂಗಳ ವರೆಗೂ ಸದರಿ ಪ್ರಕರಣವು ತನ್ನ ಅಧಿಕಾರವನ್ನು ನಡಿಸುತಿರುವದಂತೆ! ಹಾಗೂ ಪ್ರಕೃತ ಮಂಗಳೂರಿನಲ್ಲಿ ಚಳವಳವು ಶಾಂತತೆಯನ್ನು ತಾಳಿರುವದು.

**ಸುಬ್ರಹ್ಮಣ್ಯ!** — ಮಹೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ವಾಡಿನಂತೆ ಲಕ್ಷದೀಪ ಉತ್ಸವವು ಇದೇ ಬರುವ ಅಮವಾಸ್ಯೆಯು ತಾ ೧೯-೧೧-೩೦ನೇ ಬುಧವಾರವೂ (ಅಹ್ವಾನ ಪತ್ರಿಕೆಯಲ್ಲಿ ತಾ. ೨೦-೧೧-೩೦ ಎಂದು ಪರಾಮೋಶಿಯಿಂದ ತಪ್ಪು ಬಿದ್ದದ್ದಾಗಿರುತ್ತದೆ) ಪಂಚಮಿ ಉತ್ಸವವು ತಾ. ೨೫-೧೧-೩೦ನೇ ಮಂಗಳವಾರವೂ, ಚಂಪಾಷಷ್ಠಿ ಮಹೋತ್ಸವವು ತಾ ೨೬-೧೧-೩೦ನೇ ಬುಧವಾರವೂ ಜರುಗುವದಾಗಿಯೂ, ಈಗಲೇ ಮೋಟಾರು ಬಸ್ಸುಗಳು ಜಾನುವಾರು ಸಂತೆಯ ಸ್ಥಳದ ವರೆಗೂ ಹೋಗುತ್ತಿರುವದರಿಂದ ಭಕ್ತಾದಿಗಳಿಗೆ ಸ್ಥಳಕ್ಕೆ ಸೇರಲು ಅನುಕೂಲವಾಗಿರುವುದಾಗಿಯೂ ದೇವಸ್ಥಾನದ ಅಧಿಕಾರಿಗಳು ತಿಳಿಸುತ್ತಾರೆ.

**ಕಾರ್ಕಳ** — ಇಲ್ಲಿ ಕೆಲದಿನಗಳ ಹಿಂದಿನಿಂದ ಪ್ರಭಾತಫೇರಿಗೆ ಆರಂಭವಾಗಿರುವುದು. ಜನರ ಪ್ರೋತ್ಸಾಹವು ಅಷ್ಟಿಷ್ಟು ಇದೆ. ೧೪೪ನೇ ಕಲಮಿನ ಅವಧಿಯು ಮುಗಿದು ಸುಮಾರು ಒಂದು ತಿಂಗಳಾಗುತ್ತಬಂತು. ಆದರೂ ಅದರ ಹೊಸ ಅವತಾರವು ಸಧ್ಯದಲ್ಲಿಯೇ ಆಗುವುದೆಂದು ನಾಲ್ಕು ದಿಕ್ಕಿನ ಸುದ್ದಿ!

ಲಕ್ಷ ದೀಪೋತ್ಸವದ ಸಂದರ್ಭದಲ್ಲಿ ನಮ್ಮ ಪಟಾಕಿ ಸಾಹುಕಾರರ ಮುಖ ಸಪ್ಪಗೆ! ಪಾಪ! ಪಟಾಕಿ ಬಹಿಷ್ಕಾರ ಸಂದರ್ಭದಲ್ಲಿ ಹಿರಿಯರಿಗಿಂತಲೂ ಕಿರಿಯರ ಉತ್ಸಾಹವು ಮಿಗಿಲು! ಹೀಗೆ ಕಿರಿಯರ ಇಂಥ ಉದ್ಧಟತನದಿಂದ ಹಿರಿಯರು ಮೂಗಿನ ಮೇಲೆ ಬೆರಳಿಡುವಂತಾಗಿದೆ!

**ಕುಂದಾಪುರ** — ಉಪ್ಪಿನ ಕಾನೂನು ಭಂಗದ ಚಳವಳದಲ್ಲಿ ಜೈಲಿಗೆ ಹೋದ ಶ್ರೀ ಕೃಷ್ಣರಾಯ ಕೊಡಗಿ ಮತ್ತು ಶ್ರೀ ಎಸ್ ಎಸ್ ಹೆಗ್ಗಡೆಯವರು ತಮ್ಮ ಆರು ತಿಂಗಳ ಕಾರಾಗೃಹವಾಸವನ್ನು ಅನುಭವಿಸಿ ತಾ ೮ನೇ ಶನಿವಾರ ಕುಂದಾಪುರಕ್ಕೆ ಹಿಂತಿರುಗಿ ಬಂದಿರುತ್ತಾರೆ. ಅದೇ ದಿನ ಶ್ರೀ ಕೋಣಿ ಅಣ್ಣಪ್ಪ ಕಾರಂತರು ಕುಂದಾಪುರವು ರಾಷ್ಟ್ರೀಯ ಚಳವಳದಲಿ ಎಷ್ಟು ಹಿಂದ ಬಿದಿರುವುದೆಂಬದರ ಕುರಿತು ಹೃದಯಂಗಮವಾದ ಭಾಷಣವಿತ್ತರು.

ಮುದ್ರಣಾಲಯ ಶಾಸನದ ಪ್ರಕಾರ ತಪ್ಪಿತಸ್ಥರಾದ ಶ್ರೀ ಪುಂಡರೀಕ ಕಾಮತರವರ ವಿಚಾರಣೆ ಇದೇ ತಾ ೧೩ನೇ ಬುಧವಾರ ನಡೆಯುವುದು.

ಕುಂದಾಪುರ ಹೈಸ್ಕೂಲಿನ ಇನ್ಸಪೆಕ್ಷನ್ ತಾ ೧೦ನೇ ಸೋಮವಾರದಿಂದ ನಡೆಯುತ್ತಿರುವುದು.

**ಮೂಲ್ಕಿ** — ಇಲಿಯ ಬೋರ್ಡ ಹಾಯರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿಗಳ ತರ್ಕ ಸಂಘದ ಕಡೆಯಿಂದ ಪ್ರಥಮ ಚಿಕಿತ್ಸೆಯ ಕುರಿತಾದ ಸಂಪೂರ್ಣ ಅನುಭವವನ್ನು ಕೆಲವು ಭಾಷಣ ರೂಪದಿಂದ ಕೊಡುವುದಾಗಿ ಇಲ್ಲಿಯ ಜನಪ್ರಿಯ ಯಲ್ ಎಫ್ ಅಸಿಸ್ಟಂಟ್ ಸರ್ಜನ್ ಮ ರಾ ರಾ ಎಂ ಉಮೇಶರಾವ್ ಅವರ್ಗಳ್ ಯಲ್ ಎಂ ಎಸ್ ರವರು ದಯಾಭಾವದಿಂದ ಒಪ್ಪಿ ಇಂದು ತಾ ೮-೧೧-೩೦ನೇ ಶನಿವಾರ ಅಪರಾಹ್ನ ಘಂಟೆ ೩-೪ರ ವರೆಗೆ ಅದರ ಕುರಿತಾದ ಪ್ರಥಮ ಭಾಷಣವನ್ನು ಕೊಟ್ಟರು.

**ಒಂಗೊಡಿ.** ಈ ಕಡೆಯಲ್ಲಿ ಒಂದು ರೂರಲ್ ಆಸ್ಪತ್ರೆಯನ್ನು ತೆರೆಯುವ ಕುರಿತು ಆಲೋಚಿಸುವದಕ್ಕೋಸ್ಕರ ಮುಲವಂತಿಗೆ ಮಿತ್ತಬಾಗಿಲು ಇಂದಬೆಟ್ಟು, ಕಡಿರುದ್ಯಾವರ ಮತ್ತು ನಾವೂರು ಗ್ರಾಮಗಳ ಜನರ ಮಹಾಸಭೆಯು ಇದೇ ನವಂಬರ ತಿಂಗಳ ತಾ ೨ನೇ ಆದಿತ್ಯವಾರ ಮಧ್ಯಾಹ್ನ ೧ ಗಂಟೆ ೨ಕ್ಕೆ ಇಲ್ಲಿಯ ಬೋರ್ಡು ಶಾಲೆಯಲ್ಲಿ ಪುತ್ತೂರು ತಾಲೂಕು ಬೋರ್ಡು ಪ್ರೆಸಿಡೆಂಟರ ಅಧ್ಯಕ್ಷತೆಯಲ್ಲಿ ಜರಗಿ ಕೆಳಗೆ ಕಾಣಿಸಿದ ನಿರ್ಣಯಗಳು ಪಾಸಾದುವು.

೧ ನಾವೂರು ಇಂದಬೆಟ್ಟು ಕಡಿರುದ್ಯಾವರ ಮಿತ್ತಬಾಗಿಲು ಮುಲವಂತಿಗೆ ಈ ೫ ಗ್ರಾಮಗಳಲ್ಲಿರುವ ಪಂಚಾಯತುಗಳ ಫಂಡಿನಿಂದ ಪ್ರತಿ ಪಂಚಾಯತದವರು ಹೊಸ ಆಕ್ಟಿನ ಮೇರೆಗೆ ತನ್ನ ಮುಂದೆ ತನಗೆ ಸಿಕ್ಕುವ ಪ್ರೈ ಸೆಸ್ಸಿನ ಮೊತ್ತದ ಅರೆವಾಸಿ ಮೊಬಲಗನ್ನು ಆಸ್ಪತ್ರೆಯ ಗೋಸ್ಕರ ಕೊಡಬೇಕು.

೨ ಆಸ್ಪತ್ರೆಯು ಮಿತ್ತಬಾಗಿಲು ಗ್ರಾಮದ ಕಿಲ್ಲೂರು [illegible] ಇರಬೇಕೆಂತ ನಿರ್ಣಯಿಸಿದುದರಿಂದ ಮೇಲೆ ಕಾಣಿಸಿದಂತೆ ಸಹಾಯಧನವನ್ನು ಮಿತ್ತಬಾಗಿಲು ಪಂಚಾಯತದವರಿಗೆ ಮಿಕ್ಕಾದ ಪಂಚಾಯತುಗಳು ಕೊಡತಕ್ಕದೆಂತಲೂ ಆಸ್ಪತ್ರೆಗೆ ಸರಕಾರದಿಂದ ಸಿಕ್ಕತಕ್ಕ ಸಹಾಯ ಧನದ ಮಂಜೂರಾತಿಯ ಕುರಿತು ಮಿತ್ತಬಾಗಿಲು ಪಂಚಾಯತದವರೇ ಮುಂದಿನ ಪತ್ರವ್ಯವಹಾರ ನಡಿಸಬೇಕೆಂತಲೂ ನಿರ್ಣಯಿಸಲಾಯಿತು.

೩ ಖಾಯಂ ಕಟ್ಟಡ ಆಗುವ ವರೆಗೆ ಆಸ್ಪತ್ರೆ ಮ ನಾರ್ಣಪ್ಪರ ಪಕ್ಕದ ಬಗ್ಗೆ ತನ್ನ ಭಂಡಸಾಲೆಯ ಮಾಳಿಗೆ ಮ ಕೆಳಗಿನ ಹಿಂದಿನ ಕೋಣೆ ಕನ್ನು ಧರ್ಮಾರ್ಥವಾಗಿ ಬಿಟ್ಟುಕೊಡುವುದಾಗಿ ೯ ಕಿಲ್ಲೂರು ಲಕ್ಷ್ಮೀನಾರಾಯಣರಾಯರ ಸಭೆಯಲ್ಲಿ ಮಾಡಿದ ವಾಗ್ದಾನವನ್ನು ವಂದನಾಪೂರ್ವಕವಾಗಿ ಸ್ವೀಕರಿಸಲಾಯಿತು.

ಪ್ರಾಮುಖ್ಯ ಏಜಂಟರು —

ಶ್ರೀ ರಾಧಾಕೃಷ್ಣ ವಿಲಾಸ, ರಥಬೀದಿ ಮಂಗಳೂರು. ದ. ಕ.


EDITED, PRINTED & PUBLISHED BY V S KAMATH AT M. T. A. SHARADA PRESS, MANGALORE.

ಮುಂಗಡ ನಿರ್ಣಯಃ—ವರ್ಷ ಒಂದಕ್ಕೆ ರೂಪಾಯಿ 2—0—0  Registered No. M. 489.  ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

# ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವು ಸುತ್ತುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಪಡೆತು ಕ್ಷುದ್ರರ ತೆರದಿ ಕುಳಿತರೆ ತೆರಳಿ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೪. ಮಂಗಳೂರು ತಾ. ೨೧ನೇ ಶುಕ್ರವಾರ ನವಂಬರ ೧೯೩೦ (21—11—'30.) ಸಂಚಿಕೆ ೪೬.


## THE CANARA BANKING CORPORATION, UDIPI, LTD.

## ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

**Head office:—UDIPI.** Branches:—COONDAPOOR & Mangalore.

ಹೆಡ್ ಆಫೀಸು:—ಉಡುಪಿ. ಶಾಖೆ:—ಕುಂದಾಪುರ. ಮತ್ತು ಮಂಗಳೂರು

Authorised Capital Rs 3,50,000- Subscribed & Called up Rs. 2,25,000-

ನಿಯಮಿತ ಮೂಲಧನ ರೂ 3,50 000- ವಂದಾ ಹಾಕಲಿಕ್ಕೆ ಅಪೇಕ್ಷಿಸಿದ ವ ವಸೂಲಾದ ಮೂಲಧನ ರೂ 2,25,000-

**Statement of Affairs as on 31st October 1930**

| | Capital and Liabilities | | | Property and Assets | |
|---|---|---|---|---|---|
| 1 | Paid up Capital | Rs. 2,24,930–0–0 | 1 | Premises Building Furniture etc | Rs 42,912–[illegible]–4 |
| 2 | Reserve and other funds | „ 1,68,400–6–0 | 2 | Investment on G. P. Notes | „ 3,70,414 5–0 |
| 3 | Deposits | „ 20,50,224 7 [illegible] | 3 | Investment on Approved Securities | „ 22,10,830 12–11 |
| 4 | Bills for collection as per contra | „ 8,150 10–3 | 4 | Bills for collection | „ 8,1[illegible] 10 3 |
| 5 | Due to Bankers | „ 1,32,054–7–[illegible] | 5 | Sundries | „ 32,8[illegible]4 1 [illegible] |
| 6 | Sundries | „ 81,266–3–0 | 6 | Cash in hand & with bankers | „ [illegible]0,453 9–7 |
| | Total | 26,95,631 12 4 | | Total | 26,95,631 12–4. |

Office of the Corporation, UDIPI, S K [illegible]—11—'30.  **N. ANANDA RAO**, *Secretary & Manager.*

## ಅಮೃತಾಂಜನ.

ಪ್ರಸಿದ್ಧವಾದ ನಮ್ಮ ತಲೆನೋವಿನ ದಿವ್ಯೌಷಧವಾದ ಅಮೃತಾಂಜನವು ಪ್ರಪಂಚದ ಎಲ್ಲೆಡೆಯಲ್ಲಿಯೂ ಪ್ರಸಿದ್ಧವಾಗಿರುತ್ತದೆ. ... ಅಮೃತಾಂಜನವು ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ. ದಸ್ತಗೆ ಆಣೆ 10, ಟ. ಖ. ಬೇರೆ.

**ರಿಂಗ್‌ವರ್ಮ್ ಮುಲಾಮು:**— ರಿಂಗ್‌ವರ್ಮ್, ಕಜ್ಜಿ ಮೊದಲಾದ ಸರ್ವ ಚರ್ಮರೋಗಗಳಿಗೆ ... ದಿವ್ಯ ಔಷಧಿ, ... ರೋಗದ ಔಷಧಿಗಳಲ್ಲಿ ... ದಸ್ತಗೆ ಆಣೆ 6, ಟ. ಖ. ಬೇರೆ.

**ದಂತಮಂಜನ:**—ಹಿಂದುಸ್ಥಾನದಲ್ಲಿ ... ಹಲ್ಲು ... ಹಲ್ಲುಗಳನ್ನು ಬೆಳ್ಳಗೆ ... ದಸ್ತಗೆ ಆಣೆ 2, ಟ. ಖ. ಬೇರೆ.

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.



ಮಕ್ಕಳ ಸಲುವಾಗಿ,

## ಡೋಂಗರ

ಇವರ

## ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

**ಕೇ. ಟಿ. ಡೋಂಗರೇ ಕಂಪೆನಿ,**
ಗಿರಗಾಂವ, ಮುಂಬಾಯಿ.

ಏಜಂಟರು —ದಿ ಗುಲಾಬ್ ಮಾರ್ಟ್, ಮಂಗಳೂರು.



## ಶ್ರೀ ಸರಸ್ವತೀ ಭಂಡಾರ

| | | |
|---|---|---|
| 1 | ಸಚಿತ್ರ ರಾಮಾಯಣ ಕಥಾ ಸಂಗ್ರಹ | 1—8—0 |
| 2 | ಮದನಮೋಹನ ರಾಜ ಚರಿತ್ರೆ | 0—12—0 |
| 3. | ತಾರಾಧರೀ ಕಂಕಣ | 2—[illegible]—[illegible] |
| 4. | ವಿಧ್ಯಮಂಜರಿ ಕಥೆಗಳು | 4—[illegible]—0 |
| 5. | ಮಹಾಭಕ್ತ ವಿಜಯ | 3—0—0 |
| 6 | ಶೃಂಗಾರ ಕುಶಸ್ಥಲೀ ಕಥೆಗಳು | 0—12—0 |
| 7. | ಮಂಜು ಘೋಷಾ | 1—0—0 |
| 8. | ವಿಮಲಾ ದೇವಿ | 1—12—0 |
| 9 | ಸೌಭಾಗ್ಯ ಬಳೆ | [illegible]—8—0 |
| 10. | ಧರ್ಮ ಸಾಮ್ರಾಜ್ಯಂ | 1—4—0 |
| 11 | ರಾಮ ರಾಜ್ಯ | 0—12—0 |
| 12. | ಆನಂದ ಮಠ | 1—12—0 |
| 13. | ಲಾವಣ್ಯ ತಿಲೋತ್ತಮ | 0—12—0 |
| 14 | ನಚನ ಭಾರತ | 1—8—0 |
| 15. | ಇಂಡಿಯನ್ ಪೀನಲ್ ಕೋಡ್ | 2—8—0 |
| 16. | ಕ್ರಿಮಿನಲ್ ಪ್ರೊಸೀಜರ್ ಕೋಡ್ | 3—0—0 |
| 17. | ಲ್ಯಾಂಡ್ ರೆವೆನ್ಯೂ ಕೋಡ್ | 1—0—0 |

ಈ ಪುಸ್ತಕಗಳಲ್ಲದೆ ನಮ್ಮಲ್ಲಿ ಇನ್ನು ನಾವಿರಾರು ನಮೂನೆಯ ಕನ್ನಡ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗ್ ಅಪೇಕ್ಷಿಸುವವರು ಕೂಡಲೇ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶಾಲೆಗಳಲ್ಲಿ ಇಡಲು ಯೋಗ್ಯವಾದ ಅನೇಕ ಪುಸ್ತಕಗಳು
ವಿಳಾಸ— ನಮ್ಮಲ್ಲಿ ದೊರೆಯುತ್ತವೆ.

**ಶ್ರೀ ಸರಸ್ವತೀ ಭಂಡಾರ,**
ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು. ಅಲವಾಯ್ ರೋಡ್, ಮಂಗಳೂರು.

## ನೋಟೀಸು.

ಪುತ್ತೂರು ತಾಲೂಕು ಬೋರ್ಡ ಪ್ರೆಸಿಡೆಂಟರು,

ಮ. ರಾ. ರಾ. ಎಂ ಶಿವರಾವ್ ಅವರಿಗಳವರು

ಬರುವ 1931ನೇ ಇಸವಿ ಎಪ್ರಿಲ್ ಶುರುವಿನಿಂದ ಬಾಬು ವರುಷಕ್ಕೆ ಈ ತಾಲೂಕಿನಲ್ಲಿ [illegible] ಗಳನ್ನೇ ಇಡಬೇಕೆಂಬ ಪುತ್ತೂರು ಡಿವಿಜನ್ ಪಬ್ಲಿಕ ವರ್ಕ್ಸ ಕಮಿಟಿಯವರು ಇದೇ ತಾ ೧೫ರಲ್ಲಿ ಕೂಡಿದ ಮೀಟಿಂಗಿನಲ್ಲಿ ನಿರ್ಣಯವಾಗಿ ಈ ಕುರಿತು ಆಕ್ಷೇಪಗಳಿದ್ದರೆ ಅವುಗಳನ್ನು ಬರುವ ದಶಂಬರ ತಾ ೬೦ ವರೆಗೆ ತಲುಪುವಂತೆ ಸದರಿ ಕಮಿಟಿಯ ಕಾರ್ಯದರ್ಶಿಯವರಾದ ಪುತ್ತೂರು ತಾಲೂಕು ತಹಶಿಲ್ದಾರರಿಗೆ ತಲುಪುವಂತೆ ಕಳುಹಿಸಬೇಕಾಗಿಯೂ ನೋಟೀಸು ದಿವ್ಸರೆ. ತಾ. 31ಕ್ಕೆ ಕೂಡಿದ ಸಭೆಯು ಪ್ರಕಟಿಸಿದಿಂಗ್ಸು ರದ್ದಾಯಿತು ಈ ಮುಂಚೆ ಕಳುಹಿಸಿದ ಆಕ್ಷೇಪಣೆಗಳು ಪ್ರಯೋಜನವಿಲ್ಲ. ಆದುದರಿಂದ ಪುನ ಈಗ ಆಕ್ಷೇಪಗಳನ್ನು ಕಳುಹಿಸಬೇಕಷ್ಟೇ ಪಂಚಾಯತುಗಳಾಗಲೀ ಖಾಸಗಿ ಜನರಾಗಲೀ ಯಾರೂ ಆಕ್ಷೇಪ ಹೇಳುವರೆ ಅರ್ಹರು ಸಕಾರಣವಾದ ಆಕ್ಷೇಪಗಳನ್ನು ವಿವರ್ಸಿ ಕಾಣಿಸಬೇಕು. ಮೇಲೆ ಹೇಳಿದ ಅವಧಿ ಯೊಳಗೆನೇ ತಲುಪುವಂತೆ ಎಚ್ಚರಿಕೆಯಿಂದಿರಬೇಕು

ಪುತ್ತೂರು, 17–11–30. | M. Shiva Rao. ಪ್ರೆಸಿಡೆಂಟ್, ಪುತ್ತೂರು ತಾಲೂಕು ಬೋರ್ಡ

## ನೋಟೀಸು

ಪುತ್ತೂರು ಡಿಸ್ಟ್ರಿಕ್ಟ ಮುನ್ಸೀಫ ಕೋರ್ಟಿನಲ್ಲಿ
O S No 607 1930.

ಎಮ್ ಶಂಕರನಾರಾಯಣರಾವ್— ವಾದಿ

ಅಮ್ಮನೆ ಬ್ಯಾರಿ ಅಬ್ದುಲ್ಲಾ ಬ್ಯಾರಿ ಮಗ ಪುತ್ತೂರು ತಾಲೂಕು ನೇರೆಂಕಿ ಮಾಗಣೆ ಬಜತ್ತೂರು ಗ್ರಾಮದ ಪಾಲ್ ಜಾವಡಿ ಎಂಬಲ್ಲಿರುವವ—ಪ್ರತಿವಾದಿ

ಸದರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಸದರಿ ವಾದಿಯು ಮೇಲ್ಕಂಡ ಕೋರ್ಟಿನಲ್ಲಿ ನೀವು ಸದರಿ ವಾದಿಗೆ ತಾ 10—8—27ರಲ್ಲು ರೂ, 100ಕ್ಕೆ ಬರಕೊಟ್ಟ ಡಿ ಪ್ರೋ. ನೋಟಿನ ಅಸಲು, ಬಡ್ಡಿ ವಸೂಲಿ ಕುರಿತು ರೂಪಾಯಿ 137—1—4ಕ್ಕೂ, ಕೋರ್ಟ ಖರ್ಚ ಮುಂದಣ ಬಡ್ಡಿಗೆ ಕೂಡಾ ನಿಮ್ಮ ಮೇಲೆ ಮಾಡಿರುವ ಮೇಲ್ಕಂಡ ವ್ಯಾಜ್ಯವು ತಾ 1—12—30ಕ್ಕೆ ಅಖೈರಿ ಪಡಿಚಾ ಬಗ್ಗೆ ಸದರಿ ಕೋರ್ಟ ನಲ್ಲಿ ಇಟ್ಟಿದೆಯಾಗಲೂ, ಆ ಕುರಿತು ನಿಮಗೇನಾದರೂ, ಆಕ್ಷೇಪ ವಿದ್ದಲ್ಲಿ, ಆ ದಿನ ಬೆಳಗ್ಗೆ 10 ಗಂಟೆಗೆ ಇದೇ ಕೋರ್ಟಿನಲ್ಲಿ ಹಾಜರಾಗಿ ಅಪ್ಪಹೇಳಿ ಮಾಡಿಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮ ಗೈರುಹಾಜರಿಯಿಂದ ಸದರಿ ವ್ಯಾಜ್ಯವನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತೆಂತ ಈ ಮೂಲಕ ನಿಮಗೆ ತಿಳಿಸಿಯದೆ

ಕೋರ್ಟು ಪುತ್ತೂರು, ತಾ 17–11–3 | (Sd) M Sadashiva Rao, Vakil for Plff

The Canara Banking Corporation Udipi Limited, Coondapur

### ನೋಟೀಸು.

ಈ ಕೆಳಗೆ ಬರೆದು ಕಾಣಿಸಿದ ಸದರಿ ಬ್ಯಾಂಕಿನಿಂದ [illegible] ಬಡ್ಡಿಯನ್ನಾಗಲೀ [illegible] ಸದರಿ ಯವರಿಗೆ ಪತ್ರ ರಿಜಿಸ್ಟ್ರಿ ನೋಟೀಸು [illegible] ಇರುವ ಕಾರಣದಿಂದಲೂ ಈಗ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದ್ರಿಯವರಿಂದ ಬೇಂಕಿಗೆ ಸಲ್ಲತಕ್ಕ [illegible] ಅಸಲು ಬಡ್ಡಿ ಖರ್ಚು, ರಿಜಿಸ್ಟ್ರಿ ನೋಟೀಸ [illegible] ಈ ನೋಟೀಸು ಖರ್ಚ ಸಹ ಇದೇ ಇಸವಿ ಡಿಸೆಂಬರ ತಿಂಗಳ ತಾ ೧ನೇ ಸೋಮವಾರದ ಒಳಗೆ ತಂದು ಕಟ್ಟಿ ಅಡವಿಟ್ಟ ನಗವನ್ನು ಸದ್ರಿಯವರು ಬಿಡಿಸಿಕೊಂಡು ಹೋಗದಿದ್ದರೆ ಸದ್ರಿಯವರು ಅಡವಿಟ್ಟ ನಗವನ್ನು ಇದೇ ೧೯೩೦ನೇ ಇಸವಿ ದಶಂಬರ ತಿಂಗಳ ತಾ ೬ನೇ ಶನಿವಾರ ದಿವಸ ಮಧ್ಯಾಹ್ನ ಘಂಟೆ ೧ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು,

ಸಾಲದ ನಂಬ್ರ ೧೯ ೮—೧ ೧೯೩೦ ಸಾಲಗಾರನ ಹೆಸರು—ಕುಂದಾಪುರ ತಾಲೂಕು ಹಂಗ್ಲೂರು ಗ್ರಾಮದಲ್ಲಿರುವ ಪ್ರದರಸಾಹೇಬರ ಮಗ ಹಂಗ್ಲೂರು ಉಮ್ಮರಸಾಹೇಬ ಸಾಲದ ಮೊಬಲಗು ರೂ, ೪೦ ೦—೦

ಷರಾ — ತಾ. ೮ – ೧ – '೩೦ರಿಂದ ಬಡ್ಡಿ ಬಾಕಿ ಇರುತ್ತದೆ

ಬೇಂಕಿನ ಆಫೀಸು ಕುಂದಾಪುರ ತಾ. ೧೭–೧೧–೧೯೩೦. | (Sd) K. Nagesha Kamath. Agent

## ಪ್ರಕಟಣೆ.

ಈ ಮೂಲಕ ಎಲ್ಲಾ ಜನರಿಗೂ ತಿಳಿಯಪಡಿಸುವುದೇನೆಂದರೆ:—ನಾನು ಇದೇ ತಿಂಗಳ ತಾ ೧೧—೧೧—೩೦ನೇ ಮಂಗಳವಾರ ದಿವಸ ನಿಡ್ಪಳ್ಳಿಯಿಂದ ಮಂಗಲಾಪುರಿ ಸ್ಟೇಷನಿಗೆ [illegible] ಒಂದು ವಸ್ತ್ರದ ಗಂಟಿನಲ್ಲಿ [illegible] ಕೂಡ್ಲು ಗ್ರಾಮದಲ್ಲಿರುವ ನಾರಾಯಣ ಶ್ಯಾನುಭಾಗರ ಮಗ ಪದ್ಮನಾಭ ಅರಳಿತ್ತಾಯರು ರೂ. ೫೦೦ಕ್ಕೆ ರಿಜಿಸ್ಟ್ರಿ ನಿಶಿರ ಮೂಲಿಕ ಕಬ್ಬು ಅಡವು ದಸ್ತಾವೇಜು ೧, ತಾಮ್ರದ ಕರಡಿಗೆಯಲ್ಲಿರುವಂಥಾ ಸಾಲಗ್ರಾಮ ೧, ಅಂದಾಜು ಕ್ರಯ ಬಾಳುವ ರೂ ೧೬ರ ಕೆಂಪು ಪಟ್ಟೆ ಮಡಿ ೧, ಅದರಲ್ಲಿದ್ದ ಆಣೆ ೦—೧೨—೦ ಕೂಡ, ನಾನು ಮಂಗಳಾಪುರಿ ರೈಲುವೇ ಸ್ಟೇಷನಿನಲ್ಲಿ ಇಳಿಯುತ್ತಾ, ರೈಲುಬಂಡಿಯಲ್ಲಿ ಸದ್ರಿ ವಸ್ತ್ರದ ಗಂಟನ್ನು ಬಿಟ್ಟೆರುತ್ತೇನೆ ವಸ್ತ್ರದ ಗಂಟನ್ನು ವ ಅದರಲ್ಲಿದ್ದ ಅಡವು ದಸ್ತಾವೇಜನ್ನೂ, ದೇವರ ಸಂಪುಷ್ಟವನ್ನೂ ಯಾರಿಗಾದರೂ ಸಿಕ್ಕಿದವರು ನನಗೆ ತಂದುಕೊಟ್ಟಲ್ಲಿ ರೂಪಾಯಿ ೫ನ್ನೂ ಅವರಿಗೆ ಹೋಗುವ ಬರುವ ಖರ್ಚನ್ನೂ ಕೊಡುವರೆ ಈ ಮೂಲಕ ವಾಗ್ದಾನ ಮಾಡಿರುತ್ತೇನೆ ಪದ್ಮನಾಭ ಅರಳಿತ್ತಾಯರಿಗೆ ಅಡವು ದಸ್ತಾವೇಜು ಗೈರುವಿಲೆ ಆದ ವಿಷಯದಲ್ಲಿ ಅಲ್ಲಾದಾ ರಿಜಿಸ್ಟ್ರಿ ನೋಟೀಸು ಮೂಲಕ ತಿಳಿಸಿರುತ್ತದೆ —

ಕಾಸರಗೋಡು ತಾಲೂಕು ಕುಡ್ಲ ಗ್ರಾಮದಲ್ಲಿರುವ ಕೋಟೆಬೈಲು ವಿಷ್ಣು ಅರಳಿತ್ತಾಯನ ರುಜು

ತಾ ೧೬ ೧೧ ೩೦

## ಕುಷ್ಠವ್ಯಾಧಿ.

### ಅದನ್ನು ತಡೆವ ಮತ್ತು ಗುಣಪಡಿಸುವ ಉಪಾಯ

ಒಂದು ಜನಾಂಗದ ತಳಹದಿಯು ಆ ದೇಶದ ಪುತ್ರ ಪುತ್ರಿಯರ ಆರೋಗ್ಯಪಾಲನೆಯಲ್ಲೂ ಆರೋಗ್ಯಕ್ಕಾಗಿ ರೋಗ ನಿವಾರಕ ಮತ್ತು ಪ್ರತಿಬಂಧಕ ವಿಧಿಗಳನ್ನು ಕೈಕೊಳ್ಳುವುದರಲ್ಲಿಯೂ ಅವರಿಗೆ ಆರೋಗ್ಯ ವಿಷಯಕರವಾದ ಶಿಕ್ಷಣ ಕೊಡುವುದರಲ್ಲಿಯೂ ಹೊಂದಿಕೊಂಡಿದೆ

ಲೌಕಿಕ ಮನುಷ್ಯರು ಈ ಭಯಂಕರ ರೋಗದ ಅಂಟುವಿಕೆಯು ಮತ್ತು ತೀವ್ರ ಹರಡುವಿಕೆಯ ವಿಷಯವಾಗಿ ತಿಳಿಯದವರಾಗಿಯುತ್ತಾರೆ ಇದರ ಫಲವಾಗಿ ಈ ರೋಗವು ಹೆಚ್ಚಿದಂತೆ ಮಾನವನ ಪೌರುಷತ್ವವು ಕಡಮೆಯಾಗಲು ಕಾರಣವಾಗಿದೆ, ೧೯೨೧ನೇ ಇಸವಿಯ ಖಾನೇಶುಮಾರಿ ಲೆಕ್ಕದಂತೆ ಮದರಾಸು ಅಧಿಪತ್ಯದಲ್ಲಿ ೧೫,೦೦೦ ಕುಷ್ಠ ರೋಗಪೀಡಿತರಿರುವರೆಂದು ತಿಳಿದುಬಂದಿದೆ ಈಗಲಂತೂ ಕೆಲವು ಡಾಕ್ಟರ ಎಣಿಕೆಯಂತೆ ೧೯೨೧ನೇ ಇಸವಿಯ ಏಳು ಪಾಲಷ್ಟು ಹೆಚ್ಚಾಗಿ ಈ ರೋಗಿಗಳ ತಂಡವು ಬೆಳೆದಿದೆಯೆಂದು ತಿಳಿದುಬರುವುದು, ಇದರಿಂದ ಹೆಚ್ಚಿನ ಸಂಭವಗಳಲ್ಲಿ ಸಾಮಾನ್ಯರಿಂದ – ಅನುಭವವು ಸಾಕಷ್ಟು ಇಲ್ಲದ ಪ್ರಯುಕ್ತ ಆ ರೋಗವನ್ನು ಪತ್ತೆ ಹಿಡಿಯಲಾಗದೆಂಬುದು ಖಚಿತ

ಸಂಕ್ಷೇಪವಾಗಿ ಆ ರೋಗವನ್ನು ಮೂರು ತರಗತಿಗಳಾಗಿ ವಿಭಾಗಿಸಬಹುದು –

#### ೧ ಇತರರಿಗೆ ಹರಡಲಾರದಂಥ ಪ್ರಥಮಾವಸ್ಥೆ.

ಮೊದಲು ಚರ್ಮದ ಮೇಲೆ ಬಿಳಿ ಅಥವಾ ನಸುಕೆಂಪಾದ ಒಂದು ಸಣ್ಣ ಚಿಹ್ನೆಯು ಕಂಡುಬರುವುದು ಇದು ಚರ್ಮಕ್ಕಿಂತ ಮೇಲೆ ಎದ್ದ ಹಾಗೆ ಕಾಣುವುದಿಲ್ಲ ಇದರ ಮೊದಲನೆ ಲಕ್ಷಣವೆಂದರೆ, ಸ್ಪರ್ಶ ಉಷ್ಣ ಶೀತ ಮತ್ತು ನೋವು ಇವುಗಳ ಸಂವೇದನಾಶಕ್ತಿಯು ನಾಶವಾಗುವಿಕೆ

#### ೨ ಹರಡಬಹುದಾದ ಮಧ್ಯಮಾವಸ್ಥೆ

ಇಲ್ಲಿ ಚರ್ಮದ ಮೇಲೆ ಕಾಣಿಸಿಕೊಂಡ ಆ ಗುರುತುಗಳು ಕಂದುಗಾಗಿ ಚರ್ಮದಿಂದ ಕೊಂಚ ಮೇಲೆ ಎದ್ದು ಮೈಮೇಲೆಲ್ಲ ಸಣ್ಣ ಗುಳ್ಳೆಗಳು ಕಾಣಿಸಿಕೊಳ್ಳುವವು ರೋಗಿಯ ಕಿವಿಗಳೂ ಮುಖವೂ ಈ ಗುಳ್ಳೆಗಳಿಂದ ದಪ್ಪನಾಗಿ ಊದಿದಂತೆ ಕಾಣಿಸಿಕೊಂಡಾಗ – ಅದೀಗ ಅತ್ಯಂತ ಅಂಟುಕಾರಿ ಅವಸ್ಥೆಯೆನಿಸುವುದು ಗುಳ್ಳೆಯಿದ್ದ ಭಾಗವೆಲ್ಲ ಈ ಅವಸ್ಥೆಯಲ್ಲಿ ಅಸಂಖ್ಯಾತ ಅಣುಗಳಿಂದ ತುಂಬಿರುವುದು ಇವನ್ನು ಆ ಭಾಗವು ಸವೆದಾಗ ಸುಲಭವಾಗಿ ಹೊರಗೆ ಹರಡಿಬಿಡು ವಂತಾಗುವುದು ಇಂಥ ಅವಸ್ಥೆಯಲ್ಲಿ ಶೀತವೂ ಹೆಚ್ಚುವುದು ಸ್ವಾಭಾವಿಕ;—ಹಾಗಾಗಿ ತಿಂಬಳಕೆಯಿಂದಿಗೂ ಆಸ್ಪತ್ರೆಯಲ್ಲಿ ರೋಗಾಣುಗಳು ಹೊರಡುತ್ತವೆ.

#### ೩. ಸೋಂಕದ ಕೊನೆಯಾವಸ್ಥೆ ಅಥವಾ ಸುಟ್ಟು ಹೋದ ಅವಸ್ಥೆ

ಇಲ್ಲಿ ರೋಗದ ಉಗ್ರತೆಯು ಶಿಥಿಲವಾಗುತ್ತಿದ್ದರೂ ಅದು ಗಳಸ್ರಾವಿಯು [illegible] ಬಂದು, ಅತಿ ಅದೃಶ್ಯವಾಗುವವು ಈ ಸ್ಥಿತಿಯಲ್ಲಿ ರೋಗಿಯು ಅಂಗಹೀನನಾಗುವಿಕೆಗಾರಂಭವಾಗಿ, ಬೆರಳುಗಳನ್ನೂ ಹೆಬ್ಬೆಟ್ಟುಗಳನ್ನೂ ಕಳೆದುಕೊಂಡು ಸ್ನಾಯುಶಕ್ತಿಯು ಕಡಮೆಯಾಗುವುದು ಗುಣಪಡಿಸಲಾಗದಂತೆ ಸ್ಥಿತಿಯದು ಇಂಥವನನ್ನು ಯಾರೂ ಗುಣಪಡಿಸಲಾರರು ಸಮಾಜವು ಬಹಿಷ್ಕರಿಸುವುದು ಬಹಳ ದುಃಖಕರ ಸ್ಥಿತಿಯದು

ರೋಗದ ಮಧ್ಯಮಾವಸ್ಥೆಯಲ್ಲಿ ಅದರ ಹರಡುವಿಕೆಯ ಸ್ವಭಾವವನ್ನು ಜನಸಾಮಾನ್ಯರು ತಿಳಿದುಕೊಂಡಂತಿಲ್ಲ ಈ ರೋಗವು ಒಬ್ಬನಿಂದ ಮತ್ತೊಬ್ಬನಿಗೆ ಹರಡಲು ಮೂರು ಮಾರ್ಗಗಳಾಗಿವೆ –

(೧) ರೋಗಿಯ ಹಾಸಿಗೆಯನ್ನು ನಿರೋಗಿಯಾದ ಮತ್ತೊಬ್ಬನು ಉಪಯೋಗಿಸುವುದು.

(೨) ಆ ರೋಗಿಯು ವಾಸಿಸುವ ಮನೆಯಲ್ಲೇ ತಿರುಗಿ ವಾಸಿಸಿ ಅವನ ವಸ್ತ್ರಾದಿಗಳನ್ನು ಉಪಯೋಗಿಸುವುದು

(೩) ಇಂಥ ಅಂಟುರೋಗವಿದ್ದವರೊಡನೆ ಕೂಡಿಕೊಂಡಿರುವುದು.

ವಿಶೇಷವಾಗಿ ಎಳೆಚರ್ಮವಿದ್ದು ಈ ವ್ಯಾಧಿಗೆ ಬಲುಬೇಗನೇ ತುತ್ತಾಗಬಹುದಾದ ಮಕ್ಕಳು, ಮತ್ತು ಫರಂಗಿ ಇತ್ಯಾದಿ ರೋಗದಿಂದಲೂ ಸಾಕಷ್ಟು ಪೌಷ್ಟಿಕ ಆಹಾರವಿಲ್ಲದೆ ಅಥವಾ ಉಪವಾಸದಿಂದ ಇಲ್ಲವೇ ರೋಗಗಳಿಂದ ಶಕ್ತಿಗುಂದಿದ ಮನುಷ್ಯರು ಈ ರೋಗಿಗಳೊಡನೆ ಹೆಚ್ಚಾಗಿ ವ್ಯವಹಾರವಿಟ್ಟುಕೊಂಡಲ್ಲಿ ತಾವೂ ಆ ರೋಗವನ್ನು ಅಂಟಿಸಿಕೊಳ್ಳುವುದು ನಿಶ್ಚಯ

ಮೊದಲಿನ ಎರಡು ಅವಸ್ಥೆಗಳಲ್ಲಿ ಈ ರೋಗವನ್ನು ಗುಣಪಡಿಸಲು ಸಾಧ್ಯವಿದೆ ಅದೆಲ್ಲವೂ – ರೋಗದ ಅವಧಿಯ ಪ್ರಮಾಣದಲ್ಲಿ ಚಿಕಿತ್ಸೆಯ ಅವಧಿ ಇತರ ರೋಗಗಳ ಸಮ್ಮಿಲನ ಆರೋಗ್ಯದಾಂಗ ಮತ್ತು ಪಥ್ಯದ ಸ್ಥಿತಿ, ವ್ಯಾಯಾಮ ಪಥ್ಯದ ವಿಷಯವಾಗಿ ಜಾಗರೂಕತೆ ಮತ್ತು ದೀರ್ಘಾಯುಷ್ಯ ಇವುಗಳ ಮೇಲೆ ಹೊಂದಿದೆ

ಸರಕಾರಿ ನೌಕರರು ರೋಗಪೀಡಿತರಾದರೆ ಅವರ ಚಿಕಿತ್ಸೆಗಾಗಿ ಈ ಪ್ರಾಂತ್ಯದಲ್ಲಿ ಎಂಟು ಸಂಸ್ಥೆಗಳಿವೆ ವಸತಿಗೆ ಯೋಗ್ಯ ನಿವಾಸವಿಲ್ಲದ ಅಥವಾ ಮನೆಯಿದ್ದರೂ ಅದರಲ್ಲಿ ಪಥ್ಯ ಇತ್ಯಾದಿ ಚಿಕಿತ್ಸೋಪಾಯಗಳಿಗೆ ಅನುಕೂಲವಿಲ್ಲದವರು 'ಕುಷ್ಠರೋಗಿಗಳ ಚಿಕಿತ್ಸಾಲಯ (Leper Asylum)ಗಳಲ್ಲಿ ಆಶ್ರಯಪಡಬಹುದು ಇತರರಿಗೆ ಗೊತ್ತಾದ ಆಯಾ ಪ್ರದೇಶಗಳಲ್ಲಿ ಇರಿಸಲಾದ ವೈದ್ಯಕೀಯ ಸಂಸ್ಥೆಗಳಲ್ಲಿ ಹೊರಗಿನ ರೋಗಿಗಳಾಗಿ (out patients) ಚಿಕಿತ್ಸೆ ಆಗುತ್ತದೆ ಮಂಗಳೂರು ತಾಲೂಕು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತೀ ಹೆಚ್ಚಿನ ಕುಷ್ಠವ್ಯಾಧಿ ಪೀಡಿತ ಪ್ರದೇಶವಾಗಿದೆಯೆಂದು ತಿಳಿದು ಬಂದಿದೆ, ಇಲ್ಲಿಯ ಸರಕಾರೀ ಆಸ್ಪತ್ರೆಯಲ್ಲಿ (Government Headquarters, Hospital) ಪ್ರತಿ ಬುಧವಾರ ಮತ್ತು ಶನಿವಾರಗಳಲ್ಲಿ ಅಪರಾಹ್ನದಲ್ಲೂ, ಕಂಕನಾಡಿಯ ಸೈಂಟ್ ಜೋಸೆಫ್ ಕುಷ್ಠವ್ಯಾಧಿ ಚಿಕಿತ್ಸಾಲಯದಲ್ಲಿ ಮಂಗಳವಾರ ಮತ್ತು ಶುಕ್ರವಾರ ಅಪರಾಹ್ನದಲ್ಲೂ ಕುಷ್ಠವ್ಯಾಧಿ ಪೀಡಿತರಿಗೆ ಹೊರಗಿನ ರೋಗಿಗಳಾಗಿ ಚಿಕಿತ್ಸೆ ಮಾಡಲಾಗುತ್ತದೆ.

## ತಂಜಾವೂರು—ತಿರುಚಿನಾಪಳ್ಳಿ—ಮೊದಲಾದ ದೇಶಗಳಲ್ಲಿ ಉಂಟಾದ ನೆರೆಹಾವಳಿ.

ಮಾನ್ಯ ಗವರ್ನರ ಸಾಹೇಬರು ತಿರುಚಿನಾಪಳ್ಳಿ ಮತ್ತು ತಂಜಾವೂರು ಪ್ರಾಂತ್ಯಗಳಲ್ಲಿ ಉಂಟಾದ ನೆರೆಯ ಹಾವಳಿಯನ್ನು ಕಣ್ಣಾರೆ ನೋಡಿ ತುಂಬಾ ನಷ್ಟಸಂಭವಿಸಿರುವದೆಂದು ತಿಳಿಸಿರುವರು. ಈ ಕುರಿತು, ಆ ಊರುಗಳ ಬಡಬಗ್ಗರ ಕಷ್ಟಪರಂಪರೆಗಳನ್ನು ನಿವಾರಿಸುವರೆ ಗವರ್ನರರು, ಮದರಾಸ್ ಸರಕಾರಕ್ಕೆ ಮನವಿಗಳನ್ನು ಕಳುಹಿಸಿರುವರಂತೆ ಮೊದಲಾಗಿ ಆಲೋಚಿಸತಕ್ಕ ವಿಷಯವೆಂದರೆ ಜನರಿಗುಂಟಾದ ನಷ್ಟ ಅನೇಕ ಮನೆ ಮಾರುಗಳೂ ದನಕರುಗಳೂ ಹೊಲಗದ್ದೆಗಳೂ ನೀರಿನ ಪಾಲಾಗಿರುವವು ನೆರೆಯಿಂದ ಈ ಕುರಿತು ಈಗಿನ ಪೈರುಗಳಿಗೆ ಸಂಭವಿಸಿದ ನಷ್ಟವೆಂದರೆ ೩೬ ಲಕ್ಷ, ಮತ್ತು ಒಂದು ಕೋಟಿ ರೂಪಾಯಿಗಳೆಂದು ಊಹಿಸಲಾಗುತ್ತದೆ ಈ ಅಂದಾಜು ಲೆಕ್ಕವು ಸರಿಯಾದ್ದೆಂದು ತಂಜಾವೂರು ಜಿಲ್ಲೆಯ ಕಲೆಕ್ಟರರೇ ಹೇಳಿದರಂತೆ' ಹಾಗೂ ಆ ದೇಶದ ಒಡ್ಡು ರೈತರ ಬಂಗಿಗಾಗಿ ತಿರುಗಿ ವಗೈರೆಗಳನ್ನು ಕಡಿಮೆ ಮಾಡಿಸಬೇಕೆಂದು ಅವರು ಮನವಿಗನ್ನು ಮಾಡಿರುವರೆಂದು ತಿಳಿದುಬರುತ್ತದೆ

ಈ ಸಂದರ್ಭವನ್ನು ಕಳಕೊಳ್ಳಬೇಡಿರಿ!

ಸ್ಪ್ರಿಂಗ್ ಮತ್ತು ವ್ಯಾಂಡಿಂಗ್ ಎಲಾರ್ಮ್ ಕ್ಲೋಕ್ — ಉಚಿತ.

ರಿಸ್ಟ್ ವಾಚು — (ಬೌಕ ಅಥವಾ ದುಂಡಗೆ) ನಮ್ಮ ರಿಸ್ಟ್ ವಾಚನ್ನು ಪಡಕೊಳ್ಳುವವರಿಗೆ ಒಂದು ಕ್ಲೋಕ್ ಉಚಿತ ನಮ್ಮ ರಿಜಿಸ್ಟರ್ ಆದ 'ಎಸ್. ಎಸ್ ಮದೀನಾ ಶಿಪ್' ಎಂಬ ಟ್ರೇಡ್ ಮಾರ್ಕನ್ನು ಹಾಕಿದ ಮಿಂಚು ಕಲ್ಲಿಯಲ್ಲಿ ನಿಕ್ಕಿ – ಸ್ಟೀಲ್ ತಯಾರಿ – ನವೀನವಾಗಿ ಈಗ ತಾನೇ ಸ್ವಿಜರ್ಲಂಡಿನಿಂದ ಬಂದಿರುವವು. ಚಿತ್ತಾಕರ್ಷವಾದ ಅಂಕೆಗಳು (ಅರೆಬಿಕ್ ಅಥವಾ ರೋಮನ್) ಸರಿಯಾದ ಸಮಯವನ್ನು ತೋರಿಸುವವು. ಯಾಂತ್ರಿಕ ಸಾಮಾನುಗಳಿಗೆ ವರ್ಷದ ಗ್ಯಾರೆಂಟಿ, ಫೇಕ್ಟರಿ ಕ್ರಯ ೨೦/ ರೂಪಾಯಿ ಮಾರಾಟದ ಕ್ರಯ ರೂ. ೬—೧೫—೦ ಅಂಚೆವೆಚ್ಚ ೧೨ ಆಣೆ ಮಾತ್ರ.

ಸಿಟಿವಾಚ್ ಕೋ, ನಂಬ್ರ 8, ಹಾರ್ಮೋನ ರೋಡ್, ಗಾಮ್‌ದೇವಿ, ಮುಂಬಾಯಿ.

## ಶಾಸ್ತ್ರೀಯ
## ಅಮೂಲ್ಯ ಔಷಧಗಳು.

ಅಮೃತಾಕಾಶಂಕರೀಯ ತೈಲ—ಇದು ಪೂರ್ವದಲ್ಲಿ ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. ೮ ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಗಳಿಂದ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ವಣಮೂಲ ಸುಖಪ್ರದಔಷಧಿ!
ಬಾಲಕಿಯರ ನವಜೀವನಕ್ಕೆ ಸಂಜೀವನವಾಗಿರುವುದು

ಇದರ ಶೋಧನ, ರಸಾಯನ, ಸುಖಜೀವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ದೋಷ ಕಳೆದು ಕಂಜನ್ನು ಹೊರಗೆ ಹಾಕಿ ಪ್ರಸವದಿಂದ ಸ್ವಚ್ಛವಾದ ಗರ್ಭಕೋಶವನ್ನು ಎಂದಿನಂತೆ ದಿವಸಗಳಲ್ಲೇ ಅಕುಂಚಿಸುವುದು.

ರಸಾಯನ ಗುಣದಿಂದ ಬಾಣಂತಿಯು —ಗರ್ಭ ಧಾರಣೆಯ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳೆಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಶಾಂತಿ, ಅಗ್ನಿ ಮಾಂದ್ಯ, ನಿದ್ರಾನಾಶ ವಾತ ಅತಿಸಾರ ಕೆಮ್ಮು ಮೊದಲಾಗುವುದಲ್ಲದೆ ಪ್ರಸವದ ನಂತರ ಉಂಟಾಗುವ ಧರ್ನುರ್ವಾತ ಶೋಕದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಪ್ರಾಯ ಬಾಟ್ಲಿ 1ಕ್ಕೆ 2—0—0 ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಅಮೂಲ್ಯ ಔಷಧ ರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು. ದ ಕನ್ನಡ



## The Canara Bank Limited, Mangalore.
## ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

Established July 1906 — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

**BRANCHES**—Karkal Kasargod, Cochin Udipi Gangolli Coondapur, Bombay Puttur Calicut & Alleppey

ಬ್ರಾಂಚುಗಳು—ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ, ಪುತ್ತೂರು, ಕಲ್ಲಿಕೋಟೆ ಮತ್ತು ಅಲ್ಲಪೆ

| | |
|---|---|
| Authorised and fully paid up Capital Rs. 300,000 - 0 - 0 | ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ 300,000 0—0 |
| Reserve and other sinking Funds Rs 431,732 - 9 - 7 | ಶೇಖರ ನಿಧಿ ಮತ್ತು ಇತರ ಫಂಡುಗಳು. ರೂ. 431,732 9—7 |
| Amount invested on G P Notes Rs 817,097 - 2 - 0 | ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ 817,097—2—0 |
| Rates of interest on fixed deposits at Head Office and Branch 6¼% for 2 Years, 6% ,, 1 Year | ಖಾಯಂ ಠೇವಣಾತಿಗಳ ಮೇಲೆ ಹೆಡ್ಡಾಫೀಸಿನ ಬಡ್ಡಿ ದರ ಎರಡು ವರುಷಗಳಿಗೆ ನೂರಕ್ಕೆ 6¼% 1 ವರುಷಕ್ಕೆ ನೂರಕ್ಕೆ 6. |
| Season deposits of Rs 1000/- & above terminable by the end of June are received at 6½% p a | ಜೂನ್ ಅಖೈರು ಒಳಗೆ ತೀರುವ ಅವಧಿ ರೂ 1000/- ದ ಮೇಲ್ಪಟ್ಟ ಸೀಸನ ಡಿಪೋಸಿಟುಗಳಿಗೆ ಬಡ್ಡಿ ದರ ನೂರಕ್ಕೆ 6½. |

Current Account Deposits received and interest allowed on daily balance of Rs 50 and above that on multiples of Rs 10 @ 3% from 1st Janauary to 30th June and @ 2% from 1st July to 31st December. No interest will be allowed unless the depositor earns not less than Rs 5 during a period of 6 months ending either 30th June or 31st December in any year.

Except by special arrangement, no interest is allowed on sums exceeding Rs 10,000 in the case of Head Office and Bombay & Cochin Branches and on sums exceeding Rs 5,000 in the case of the remaining Branches.

Short notice deposits requiring one week's notice of withdrawal given at any time after one month from the date of deposit are received and interest allowed at 4 per annum. Interest on such deposit will cease on notice.

*For further particulars please apply to*

Canara Bank Ltd,
*Mangalore, 13—10—1930* (year as printed: "1950")

**K. Venkat Rao,**
Secretary



## The Pangal Nayak Bank, Ltd.

| | | |
|---|---|---|
| Branch Office Mangalore | Head Office Udipi *Established 1920.* | Agency Office Cochin |

| | |
|---|---|
| Authorised Capital Rs 2,00,000- | Paid up Capital Rs 1,75,000- |
| Issued Capital Rs 1,75,000- | Reserve and other Funds Rs 1,42,610 |

***Fixed Deposits received for***
***24 months at 6½***
***12, 15, 18 or 21 months at 6***
***6 or 9 months at 5½***
***3 months at 5***

***Interest being payable every 3 months.***

Current Deposit Accounts are opened free of charge and interest allowed on Daily balances.

*Further information may be had on application to the* SECRETARY *at the* HEAD OFFICE *or to the* AGENT *at the* BRANCH

Office of the Bank
Udipi 6 - 10 - 1930

P Laxman Nayak,
Secretary



## ಸುಂದರವಾದ ಜರಿಕೆಲಸ ಮಾಡಿದ ಕಾಶಿಯ
## — ಪಟ್ಟೆ ಸೀರೆಗಳು —

ಜರಿ ಅಂಚುಗಳುಳ್ಳ ಪ್ಯೂರ್ ಸಿಲ್ಕ್ ಸೀರೆ ಉತ್ತಮ ನಮೂನೆ ಆಗಲು ರೂ ೫೦ ಯಾಗಾಯಿತು. ರೂ ೧೫೦ರ ವರೆಗೆ ಬುಟ್ಟಿಗಳ ಸೀರೆಗಳು ರೂ ೧೫೦ರಿಂದ ರೂಪಾಯಿ ೫೦೦ ವರೆಗೆ ರವಕೆ ಖಣ, ತಗಡು, ಎಲಚಿ, ಬಟ್ಟಾನಿ, ಶಾಲು, ಪಿತ್ತಳೆ ಮುದ್ರಿ, ಕಸ್ತೂರಿ, ಶಿಲಾಜಿತ್, ರುದ್ರಾಕ್ಷಿ ಹಿತ್ತಾಳೆಯ ಸಾಮಾನುಗಳು, ಪೂಜಾ ಸಾಮಗ್ರಿಗಳು ಇತ್ಯಾದಿ ಸಿಗುವುದು. ಪ್ರೋತ್ಸಾಹಿಸುವವರಿಗೆ ತಕ್ಕ ಪ್ರತಿಫಲ ಸಹ ಕೊಡಲ್ಪಡುವದು. ಹೆಚ್ಚಿಗೆ ವಿಷಯ ಕ್ಯಾಟಲಾಗಿನಿಂದ ಅಥವಾ ಪತ್ರ ಮೂಲಕ.

ವಿಳಾಸ —
ರಾವ್ ವಿಶ್ವನಾಥರಾವ್ ಎಂಡ್ ಬ್ರದರ್ಸ್,
ಮಣಿಕರ್ಣಿಕಾಘಾಟ್, ಕಾಶೀ ಬನಾರಸ್ ಸಿಟಿ



## The Udipi Mutual Benefit Fund, UDIPI
## ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ನಡಿಸುವಂತೆ ಎಲ್ಲಾ ತರದ ವಹಿವಾಟುಗಳೂ ಕುರಿಫಂಡುಗಳೂ ನೆಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯಬಹುದು.

ಎಂ. ಮುಖ್ಯಪ್ರಾಣಭಟ್ಟ. ಪ್ರೊಪ್ರೈಟರ್,



ತಯಾರಾಗಿವೆ — ಮಾರಾಟಕ್ಕೆ ಸಿದ್ಧವಿವೆ — ತ್ವರೆಮಾಡಿರಿ

1931ನೇ ಇಸವಿಯ
## ಪ್ರೊಕೆಟ್ ಡಾೖರಿಗಳು.
1931ನೇ ಇಸವಿಯ

| | | | | | | |
|---|---|---|---|---|---|---|
| ಅಂದವಾದ ಕೆಲಿಕೊ ಬ್ಯಾಂಡಿನ ದೊಡ್ಡ ಸೈಜಿನ ಡಾೖರಿ (ಇಂಗ್ಲೀಷ ಮುಟಾಸೆಯೊಂದಿಗೆ) | | | ಕೆಲಿಕೊ ಬ್ಯಾಂಡಿನ ಮಧ್ಯಮ ಸೈಜಿನದ್ದು | | | 0 |
| ಕೆಲಿಕೊ ಬ್ಯಾಂಡು ದೊಡ್ಡದು ಮುಚ್ಚಳದ್ದು | 1 | 0 | ಮುಚ್ಚಳದ್ದು | | | 0 |
| ಕೆಲಿಕೊ ಬ್ಯಾಂಡು ದೊಡ್ಡದು (ಕನ್ನಡ ಮುಟಾಸೆಯೊಂದಿಗೆ) | 1 | 0 | ಮೀಡಿಯಮ್ ಸೈಜ ಲೈಫ್ ಬ್ಯಾಂಡ್ ಡಾೖರಿ | | | 0 |
| ಮುಚ್ಚಳದ್ದು | 14 | 0 | ಸಣ್ಣ ಸೈಜಿನ ಕೆಲಿಕೊ ಬ್ಯಾಂಡ್ ಡಾೖರಿ | 0 | 0 | 0 |
| | | | ಮುಚ್ಚಳದ್ದು | | 10 | 0 |
| | | | ಲೈಫ್ ಬ್ಯಾಂಡ್ ಡಾೖರಿ | 1 | 0 | 0 |

ದೊಡ್ಡ ಸೈಜಿನ ಡಾೖರಿಯಲ್ಲಿ ಟಪ್ಪಾಲು ಮತ್ತು ಕೋರ್ಟು ವ್ಯವಹಾರ, ಸ್ಟಾಂಪು ಆಕ್ಟು ಮುಂತಾದ ಕ್ರಮಗಳನ್ನು ಕನ್ನಡದಲ್ಲಿ ಕೊಟ್ಟಿರುತ್ತದೆ

ರಖಂ ತೆಗೆದುಕೊಳ್ಳುವವರಿಗೂ, ವ್ಯಾಪಾರಿಗಳಿಗೂ ತುಂಬಾ ಕಮಿಶನು ಕೊಡಲಾಗುವದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

# ಮಹಾತ್ಮಾಜಿಯವರ
# ಸತ್ಯಾಗ್ರಹ ಸಮಾಚಾರ.

### ತಾರೀಖು ೧೩.

**ಮುಂಬಾಯಿಯಲ್ಲಿ.**

ಹೆಂಗುಸರಿಗುಂಟಾದ ಪೋಲೀಸು ಅತ್ಯಾಚಾರಗಳನ್ನು ಮುಂಬಾಯಿ ಮುಖಂಡರು, ಈ ಮೊದಲೇ ಶೆರಿಫ್ ಸಾಹೇಬರ ಕೂಡ ಮನವಿಮಾಡಿಕೊಂಡಿದ್ದರಷ್ಟೇ! ಆದರೆ ಶೆರೀಫರು ಮುಖಂಡರ ಕಡೆಗೆ ಗಮನವೀಯಲಿಲ್ಲ. ಆದುದರಿಂದ, ಸುಮಾರು ೪೦ ಸತ್ಯಾಗ್ರಹ ಮುಂದಾಳುಗಳು ಒಟ್ಟು ಸೇರಿ, ಮೇಲೆ ಹೇಳಿದ ಅತ್ಯಾಚಾರಗಳನ್ನು ವಿಮರ್ಶಿಸುವದಕ್ಕಾಗಿ, ತಾ ೧೯ಕ್ಕೆ ಸಾರ್ವಜನಿಕ ಸಭೆಯೊಂದನ್ನು ಕೂಡಿಸಬೇಕೆಂದು ನಿರ್ಣಯಿಸಿದರು.

ಪಿಕೆಟಿಂಗ್ ಕಾರ್ಯಕ್ರಮಗಳು, ಮುಂಬಾಯಿಯಲ್ಲಿ ಬಹಳ ಯಶಸ್ವಿಯಾಗಿ ನಡೆಯುತ್ತಿವೆ. ಅನೇಕ ನಾರೀ ಸತ್ಯಾಗ್ರಹಿಗಳು ವಿದೇಶಿ ಬಟ್ಟೆ ಮಳಿಗೆಗಳನ್ನು ಪ್ರತಿದಿನವೂ ಪಹರೆ ಮಾಡುತ್ತಿರುವರು. ತಾ ೧೩—೧೧—೩೦ನೇ ದಿನ ಮುಂಬಾಯಿ ನಗರದ ಗಿರಿಗಾಮ್ ರಸ್ತೆಯಲ್ಲಿ ವಿದೇಶೀ ಬಟ್ಟೆಯ ಮಳಿಗೆಗಳನ್ನು ಪಹರೆ ಮಾಡಿದ ಎರಡು ಮಂದಿ ನಾರೀ ಸ್ವಯಂ ಸೇವಕರು ಕೈದುಮಾಡಲ್ಪಟ್ಟಿರುವರು. ಸ್ಪೆನ್ಸರ್ಸ್ ಕಂಪೆನಿಯ ಮುಂಭಾಗದಲ್ಲಿ ಪಹರಿಸ್ಥಿತರಾದ ೧ ಮಂದಿ ಪುರುಷ ಸ್ವಯಂಸೇವಕರ ದಸ್ತಗಿರಿಯೂ ಆಗಿರುವದು.

ರೌಂಡ್‌ಟೇಬಲ್ ಕಾನ್ಫರೆನ್ಸಿಗೆ ವಿರೋಧವಾಗಿ ಮುಂಬಾಯಿ ಸಮರ ಸಂಸ್ಥೆಯ ಸದಸ್ಯರು, ತಮ್ಮ ವಿರೋಧ ಚಳವಳಿವನ್ನು ತೋರಿದ್ದಕ್ಕಾಗಿ ೪ ಮಂದಿಯನ್ನು ಕೈದುಮಾಡಿ, ಒಬ್ಬೊಬ್ಬನಿಗೆ ೯ ತಿಂಗಳ ಕಠಿಣ ಶಿಕ್ಷೆಯನ್ನೂ, ರೂಪಾ ೩೦೦೦ ಮೇರೆಗೆ ಜುಲುಮಾನೆಯನ್ನೂ ವಿಧಿಸಿರುವರು. ಜುಲ್ಮಾನೆ ಕೊಡಲು ತಪ್ಪಿದ್ದಲ್ಲಿ ಮೂರು ತಿಂಗಳ ಅಧಿಕ ಶಿಕ್ಷೆ.

ಮಿ। ಕ್ಯಾರಾಸ್ ಎಂಬ ಒಂದನೇ ಕ್ಲಾಸ್ ಮ್ಯಾಜಿಸ್ಟ್ರೇಟರು ಶಾಂತರೀತಿಯ ಪಿಕೆಟಿಂಗ್ ವರ್ತನೆಯು ಅನ್ಯಾಯಕರವಲ್ಲವೆಂಬ ನೆಪದಿನ ಮೇಲೆ, ಪಹರಿಸ್ಥಿತರಾದ ೩ ಮಂದಿ ಸ್ವಯಂಸೇವಕರ ತನಿಖೆಯನ್ನು ಮುಂದರಿಸಿರುವರು.

**ಮೈಸೂರಿನಲ್ಲಿ.**

ಮಹಾರಾಣಿ ಕಾಲೇಜ್ ಮತ್ತು ಮಹಿಳಾ ಹೈಸ್ಕೂಲುಗಳ ವಿದ್ಯಾರ್ಥಿಗಳು ತಾ ೧೩—೧೧—೩೦ನೇ ದಿನ, ಚಕ್ರಗೋಷ್ಠಿ ಅಧಿವೇಶನದ ನಿರೋಧಾರ್ಥವಾಗಿ, ವಿದ್ಯಾಲಯಗಳನ್ನು ಬಹಿಷ್ಕರಿಸಿರುವರು. "ಮರಿಮಲ್ಲಪ್ಪಾ ಹೈಸ್ಕೂಲ್" ಎಂಬ ಸರಕಾರೀ ವಿದ್ಯಾಲಯವು ಮಾತ್ರ ಆದಿನ ಎಂದಿನಂತೆ ಕೆಲಸ ನಡೆಸುತ್ತಿದ್ದಿತು. ಆದರೆ, ಮಹಾರಾಣೀ ಕಾಲೇಜಿನ ಸ್ತ್ರೀ ವಿದ್ಯಾರ್ಥಿಗಳು, ಸದರಿ ಸರಕಾರೀ ಸಂಸ್ಥೆಯನ್ನು ಪಿಕೆಟ್ ಮಾಡಿದರು, ಆ ಸಂಸ್ಥೆಯ ಮುಖ್ಯೋಪಾಧ್ಯಾಯರು, ಪಹರೆಗಾರ್ತಿಯರಿಗೆ, ತನ್ನ ಶಾಲೆಯನ್ನು ಮುಚ್ಚುವೆನೆಂದು ವಾಗ್ದಾನ ಮಾಡಿದ್ದರಂತೆ! ಆದರೂ ಕೂಡ ಸ್ತ್ರೀ ವಿದ್ಯಾರ್ಥಿಗಳು ತಮ್ಮ ಕರ್ತವ್ಯವನ್ನು ಮಾಡಿದರು, ಮತ್ತೂ ಕೂಡ, ಶಾಲೆಯು ಕೆಲಸ ನಡಿಸುತ್ತಿರುವದನ್ನು ಕಂಡು, ಕೆಲಮಂದಿ ಪುರುಷ ಸ್ವಯಂ ಸೇವಕರು ಪಿಕೆಟ್ ಮಾಡಲಾರಂಭಿಸಿದರು. ಶಾಲಾ ಕಂಪೌಂಡದಲ್ಲಿ ಒಬ್ಬ ಸರ್ಜಂಟು [illegible] ಕೂಡಲೆ ಪೋಲೀಸರು ಬಂದು, ಶಾಲಾ ಕಂಪೌಂಡನ್ನು ಒಳಪ್ರವೇಶಿಸುತ್ತಿದ್ದ ಹಲವರನ್ನು ತಡೆಗಟ್ಟಿದರು. ಪರಿಣಾಮವಾಗಿ ರಸ್ತೆಯಲ್ಲಿ ಜನಸಮ್ಮರ್ದವು ಹೆಚ್ಚಾಗತೊಡಗಿತು. ಪೋಲೀಸರು ವಿದ್ಯಾರ್ಥಿಗಳನ್ನು ಚದರಿಸುತ್ತಿರಲು, ಅವರ ಮೇಲೆ ಯಾರೋ ಕಲ್ಲೆಸೆದರಂತೆ! ಆ ಕೂಡಲೆ, ಲಾಠಿ ಚಾರ್ಜ್ ಆರಂಭ. ಪರಿಣಾಮವಾಗಿ ಸುಮಾರು [illegible] ವಿದ್ಯಾರ್ಥಿಗಳು ಏಟು ಹೊಂದಿರುವರು. ಹೆಚ್ಚಿನ ಗಾಯಹೊಂದಿದ ಒಬ್ಬ ವಿದ್ಯಾರ್ಥಿಯನ್ನು ಚಿಕಿತ್ಸೆಗಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಿರುವರು. ಅದೇ ದಿನ ಸಂಜೆಗೆ, ಪೋಲೀಸರ ಅಕೃತ್ಯಗಳನ್ನು ನಿಂದಿಸಿ, ಸುಬ್ಬರಾಯನಕೆರೆ ಪಾರ್ಕ್ ಎಂಬಲ್ಲಿ ದೊಡ್ಡದೊಂದು ಸಾರ್ವಜನಿಕ ಸಭೆ ಕೂಡಿದ್ದಿತು. ಈ ಸಭೆಯಲ್ಲಿ ಜಿಲ್ಲಾ ಸೂಪರಿಂಟೆಂಡೆಂಟ್, ಅಸಿಸ್ಟಾಂಟ್ ಸುಪರಿಟೆಂಡೆಂಟ್, ಮತ್ತು ಅನೇಕ ಮಂದಿ ಇನ್ಸ್‌ಪೆಕ್ಟರರೂ, ಪೋಲೀಸರೂ ಹಾಜರಿದ್ದರು.

**ಬೆಂಗಳೂರಲ್ಲಿ.**

ಚಕ್ರಗೋಷ್ಠಿಗೆ ಪ್ರತಿಕೂಲವಾಗಿ, ಸಾರ್ವಜನಿಕ ಸಭೆಯೊಂದು ಜರಗಿತು. ಶ್ರೀಯುತ ಪಿ ಎಸ್. ಸಂಜೀವರಾಯರು ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು. ಸ್ವಾಮಿ ವಿಜೇಂದ್ರ ಸೂರ್ಜಿ ಎಂಬವರು ರೌಂಡ್‌ಟೇಬಲ್ ಸಮ್ಮೇಳನದ ನಿರ್ಬಲ ಪರಿಣಾಮಗಳ ಕುರಿತು ಹೃದಯಂಗಮವಾದ ಭಾಷಣಮಿತ್ತರು; ಮತ್ತು ಕಾಂಗ್ರೆಸ್ ಕಾರ್ಯ ಕಲಾಪಗಳು ಇನ್ನಷ್ಟು ಅಭಿವೃದ್ಧಿ ಹೊಂದುವಂತೆ ಪ್ರಯತ್ನಿಸಬೇಕೆಂದು ಸಭಿಕರೊಡನೆ ಅಪೇಕ್ಷಿಪಟ್ಟರು. ಸಭಾಂತ್ಯದಲ್ಲಿ ಅನೇಕರು ಕೊಂಗ್ರೆಸ್ ಮೆಂಬರರಾಗಿ ಸೇರಿದರು.

**ಕಲ್ಕತ್ತದಲ್ಲಿ.**

ತಾ ೧೨—೧೧—೩೦ನೇ ದಿನ ಚಕ್ರಗೋಷ್ಠಿಯನ್ನು ನಿರೋಧಿಸಿ, ಹರತಾಳ ಆಚರಿಸಬೇಕೆಂದು ನೋಟೀಸುಗಳನ್ನು ಪ್ರಚಾರ ಪಡಿಸಿದುದಕ್ಕಾಗಿ, ಪೋಲೀಸರು "ಆನಂದ ಬಜಾರ್" ಪತ್ರಿಕೆಯ ಆಫೀಸನ್ನೂ, ಪತ್ರಿಕಾ ಕರ್ತರ ಮನೆಯನ್ನೂ ಶೋಧೆ ನಡಸಿದರು. ನೋಟೀಸುಗಳ ಪ್ರತಿಗಳು ದೊರೆಯಲಿಲ್ಲ. ದಸ್ತಗಿರಿಗಳೂ ನಡದಿಲ್ಲ.

**ಬನಾರಿಸದಲ್ಲಿ.**

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಯವರಾದ ಮಿ। ಶ್ರೀ ಪ್ರಕಾಶ್ ಎಂಬವರ ಗಾಡಿಯನ್ನು ಸರಕಾರವು ಏಲಂ ಹಾಕಿತು, ಗಾಡಿಗೆ ಯಾರೊಬ್ಬ ಗಿರಾಕಿಯೂ ದೊರೆಯಲಿಲ್ಲ. ಮಿ। ಪ್ರಕಾಶರ ಮೇಲೆ ಹೊರಿಸಲ್ಪಟ್ಟ ೧೦೦ ರೂಪಾಯಿಗಳ ಜುಲ್ಮಾನೆಯನ್ನು ಎತ್ತುವದಕ್ಕಾಗಿ ಅವರ ಗಾಡಿಯನ್ನು ಏಲಂ ಕರೆದರಂತೆ! ಅಷ್ಟಲ್ಲದೆ ಪ್ರಕಾಶರಿಗೆ ೬ ತಿಂಗಳ ಸಾದಾಸಜೆಯೂ ವಿಧಿಸಲಾಯಿತೆಂದು ತಿಳಿದುಬರುತ್ತದೆ.

**ಪೇಶಾವರದಲ್ಲಿ.**

ಸೀಡಿಷಸ್ ಮೀಟಿಂಗ್ಸ್ ಆಕ್ಟನ್ವಯ ೬ ತಿಂಗಳಿಗೆ ಮುಂದರಿಸಲಾಗಿರುವ ಆಲ್ ಇಂಡಿಯಾ ಖಿಲಾಫತ್ ಕಮಿಟಿಯ ಕಾರ್ಯದರ್ಶಿಯವರಾದ ಮಿ। ಅಲ್ಲಾ ಬಾಕ್ಸ್ ಯುಸುಫಿ— ಎಂಬವರ ದಸ್ತಗಿರಿಯನ್ನು ನಿರೋಧಿಸಿ ಖಿಲಾಫತ್ ಕಮಿಟಿಯವರು ಸಭೆ ಸೇರಿ ಠರಾವುಗಳನ್ನು ಪಾಸ್ ಮಾಡಿರುವರು.

### ತಾರೀಖು ೧೪

**ನವಾ ಢಿಲ್ಲಿಯಲ್ಲಿ.**

"ಹಿಂದುಸ್ಥಾನ್ ಟೈಮ್ಸ್" ಎಂಬ ಪತ್ರಿಕಾ ಆಫೀಸನ್ನು ಪೋಲೀಸರು ಶೋಧಮಾಡಿರುವರು. "ಜವಾಹರ್ ಪ್ರೆಸ್ಸಿಗೆ" ದೌಡಿಕ್ಕಿ ಕಾಗದಪತ್ರಗಳಿಂದ ತುಂಬಿದ ನಾಲ್ಕು ಪೆಟ್ಟಿಗೆಗಳನ್ನು ಸ್ವಾಧೀನಪಡಿಸಿರುವರು. ವಿಶೇಷ ಗಲಭೆಗಳೇನೂ ನಡೆದಿಲ್ಲ. ಮಾತ್ರವಲ್ಲದೆ ಇನ್ನಷ್ಟೋ ಆಫೀಸುಗಳು ಪೋಲೀಸರಿಂದ ಶೋಧಿಸಲ್ಪಟ್ಟಿರುವವು. "ಜವಾಹರ್ ಪ್ರೆಸ್ಸ್"ನಿಂದ "ಜವಾಹರ್ ದಿನ"ದ ಸಮಾರಂಭದಲ್ಲಿ ಹಂಚೋಣವಾದ "Eight Days Interlude" ಎಂಬ ಕರಪತ್ರದ ೧೦೦೦ ಪ್ರತಿಗಳನ್ನು ಪೋಲೀಸರು ವಶಪಡಿಸಿರುವರು. ಕೆಲವು ಪತ್ರಿಕಾ ಪ್ರಚಾರಕರ ಮನೆಗಳೂ ಶೋಧಿಸಲ್ಪಟ್ಟವು. ಜಿಲ್ಲಾ ಕೊಂಗ್ರೆಸ್ ಕಮಿಟಿಯ ಆಫೀಸನ್ನು, ಪೋಲೀಸರು ದೌಡಿಕ್ಕಿದ ಸಂದರ್ಭದಲ್ಲಿ, ಹಳೇ ಮೋಟಾರ್‌ಗಾಡಿಯೊಂದು ಪೋಲೀಸರ ಪಾಲಾಗಿರುವದೆಂದು ತಿಳಿದುಬರುತ್ತದೆ.

ಹಿಂದೊಮ್ಮೆ ೫ ಗರ್ವಾಲ್ ಸ್ವಯಂಸೇವಕರ ಮುಂದಾಳಾಗಿ, ಧರ್ಸನದಲ್ಲಿ ಹೂಡಲ್ಪಟ್ಟ ಉಪ್ಪಿನ ಸತ್ಯಾಗ್ರಹಕ್ಕೆ ಬೆಂಬಲಿಸಿ [illegible] ಪ್ರೈಸಿನಲ್ಲಿ, ತನಗೆ ವಿಧಿಸಲ್ಪಟ್ಟ ಮೂರು ತಿಂಗಳ ಸಜಾ ಅವಧಿಯನ್ನು ಪೂರೈಸಿಕೊಂಡು, ಹೊರಹೊರಟ ಮಾನ್ಯ [illegible] ಸಿಂಗ್ ಎಂಬ ಸತ್ಯಾಗ್ರಹಿ ಮುಖಂಡರಲ್ಲಿ "Eight Days' Interlude" ಎಂಬ ಕರಪತ್ರದ ೪೦೦೦ ಪ್ರತಿಗಳನ್ನು ಕೈವಶ ಹಿಡಿದುಕೊಂಡು, [illegible] ಸಂಚಾರಾರ್ಥವಾಗಿ ಅಹಮ್ಮದಾಬಾದಿಗೆ ಪ್ರಯಾಣ ಹೊರಬೇಕೆಂದು ಡೆಲ್ಲಿ ಸ್ಟೇಶನಲ್ಲಿ, ಗಾಡಿಯನ್ನು ಕಾಯುತ್ತಿರಲು, ಪೋಲೀಸರು ಬಂದು, ಅವರ ಕೈಯೊಳಗಿನ ಕರಪತ್ರಗಳನ್ನು ಸೆಳಕೊಂಡು ಸದರಿಯವರನ್ನು ದಸ್ತಗಿರಿ ಮಾಡಿರುವರೆಂದು ತಿಳಿದುಬರುತ್ತದೆ. ಅವರನ್ನು ಯಾವ ಪ್ರಕರಣದ ಮೇಲೆ ಕೈದುಮಾಡಿದರೆಂಬ ಸಮಾಚಾರ ಮಾತ್ರ ಇನ್ನೂ ಹೊರಬಿದ್ದಿರುವದಿಲ್ಲ.

**ಮುಂಬಾಯಿಯಲ್ಲಿ.**

ಕೆಲ ದಿನಗಳ ಹಿಂದೆ ಪಿಕೆಟಿಂಗ್ ಮಾಡಿದರೆಂದು ೬ ಮಂದಿ ಸ್ವಯಂಸೇವಕರನ್ನು ದಸ್ತಗಿರಿ ಮಾಡಿ, ಮಿ। ಜಿ ಆರ್ ಕೈರಾಸ್ ಎಂಬ ಮ್ಯಾಜಿಸ್ಟ್ರೇಟರು ತನಿಖೆ ನಡಿಸಿ, ಯೋಗ್ಯ ಕಾರಣಗಳು ತೋರದಿದ್ದುದರಿಂದ, ತೀರ್ಪನ್ನು ಮುಂದರಿಸಿಟ್ಟಿದ್ದರಷ್ಟೆ! ಆ ವಿಷಯದಲ್ಲಿ ಮ್ಯಾಜಿಸ್ಟ್ರೇಟರು ತೀರ್ಪು ಕೊಟ್ಟರು. ತೀರ್ಪಿನ ಅಭಿಪ್ರಾಯವು ಸ್ವಯಂಸೇವಕರಿಗೆ ಗುಣವಾಗಿದ್ದುದರಿಂದ, ಮೊಕದ್ದಮೆಯು ನಿಷ್ಪ್ರಯೋಜಕವಾಗಿರುವದು.

ನಾರೀ ಸತ್ಯಾಗ್ರಹಿಗಳ ಪಿಕೆಟಿಂಗ್ ಕಾರ್ಯವು ಮುಂದರಿಯುತ್ತಲೇ ಇರುವದು. ದಸ್ತಗಿರಿಗಳು ನಡೆಯುತ್ತಲೇ ಇರುವವು.

### ತಾರೀಖು ೧೫.

**ಮುಂಬಾಯಿಯಲ್ಲಿ.**

ಮುಂಬಾಯಿ ನಗರದ ಮಾಂಡ್ವಿ ಎಂಬಲ್ಲಿ ಪಿ. ವಲ್ಲಭಭಾಯಿಯವರ ಮುಂದಾಳುತನದಿಂದ, "ಸರ್ದಾರ್ ವಲ್ಲಭದಾಸ್ ಖಾದಿ ಬಜಾರ್" ಎಂಬ ಖಾದಿ ಭಂಡಾರವನ್ನು ತೆರೆದಿರುವರು. ಈ ಸಂದರ್ಭದಲ್ಲಿ, ಪಿ. ವಲ್ಲಭಭಾಯಿಯವರು ಕೊಟ್ಟ ಗುಜರಾತೀ ಭಾಷಣದ ಸಾರಾಂಶವು ಈ ಕೆಳಗೆ ಕೊಡಲಾಗಿದೆ:—ಮೊತ್ತ ಮೊದಲು, ವಲ್ಲಭಭಾಯಿಯವರು, ಆಗೋಸ್ತು ೧ನೇ ತಾರೀಕಿಗೆ ನಡೆದ "ತಿಲಕ ವರ್ಧಂತಿ"ಯ ಉತ್ಸವ ಹಾಗೂ ಆ ನಿಮಿತ್ತದಿಂದ ತನಗುಂಟಾದ ಬಂಧನದ ಕುರಿತು ಕೆಲ ಮಾತುಗಳನ್ನಾಡಿದರು. ವಲ್ಲಭಭಾಯಿಯವರು "ನಾನು ಜೈಲಿನಿಂದ ಹೊರಹೊರಡುವುದರ ಮೊದಲಾಗಿ, ಪಂಡಿತ ಜವಾಹಿರಲಾಲರ ಅಪ್ಪಣೆಯಂತೆ, ಕಾಂಗ್ರೆಸ್ ಪ್ರೆಸಿಡೆಂಟ್ ಸ್ಥಾನವನ್ನು ವಹಿಸಬೇಕಾಗಿ ಬಂತು. ಮಾನ್ಯ ಜವಾಹಿರಲಾಲರು ಬಂದು ವಾರದೊಳಗೆ ಸೆರೆಮನೆಗೊಳಗಾದರು. ಆ ವೇಳೆ, ಮೋತಿಲಾಲರ ಅಪ್ಪಣೆಯನುಸಾರವಾಗಿ, [illegible] ಕಾಂಗ್ರೆಸ್ಸಿನ ಆಕ್ಟಿಂಗ್ ಪ್ರೆಸಿಡೆಂಟರಾದರು. ನಾನು ಜೈಲಿನಿಂದ ಬಿಡುಗಡೆಹೊಂದುವವರೊಳಗಾಗಿ, ಅವರೂ ಕೂಡ ಸೆರೆಮನೆಯನ್ನು ಸೇರಿದರು. ನಾನಿನ್ನು ಎಷ್ಟು ಕಾಲದ ವರೆಗೆ ಹೊರಗಿರಬಲ್ಲೆನೆಂದು ಹೇಳಲಾರೆ. ಆದಷ್ಟು ಬೇಗನೆ ನನ್ನ ಗುಜರಾತದ ಆಪ್ತ ರೈತರನ್ನು ನೋಡಬೇಕೆಂದಿರುವೆನು. ಒಂದು ವೇಳೆ, ಗುಜರಾತಿಗೆ ಹೋಗಬೇಕೆಂದು ಹೊರಟರೂ ಕೂಡ, ನಾನೆಷ್ಟು ದಿನಗಳ ವರೆಗೆ ಸ್ವತಂತ್ರನಾಗಿರುವೆನೆಂದು ಹೇಳಲು ತೀರ ಅಸಾಧ್ಯ. ಪಿ. ಜೈರಾಮ್‌ದಾಸರ ಮೇಲೆ ಜ್ಯಾರಿಮಾಡಲ್ಪಟ್ಟ ೧೪೪ನೇ ಪ್ರಕರಣದ ದೃಷ್ಟಾಂತದಿಂದ ನಾನಿನ್ನು ಎಷ್ಟು ಕಾಲದ ವರೆಗೆ, ಜೈಲನ್ನು ಬಿಟ್ಟಿರಬಲ್ಲೆನೆಂದು ಹೇಳಲು ಬರುವದಿಲ್ಲ. ಅದಂತಿರಲಿ! ನಾನು ಸೆರೆಮನೆಯ ಒಳಗಿರಲಿ—ಹೊರಗಿರಲಿ—ಆ ವಿಷಯದಲ್ಲಿ ಹೆಚ್ಚಿನ ವ್ಯತ್ಯಾಸವು ಇರಲಾರದು. ನಾನು ಮೊದಲನೇ ಸರ್ತಿಯಲ್ಲಿ ಬಂದಿಖಾನೆಯನ್ನು ಪ್ರವೇಶಿಸುವಾಗಲೇ, ಗುಜರಾತಿನ ಒಕ್ಕಲಿಗರಿಗೆ ಬೇಕಾದ ಹಾಗೂ ನಾನು ಬೋಧಿಸಬೇಕಿದ್ದ ವಿಷಯವನ್ನು ತಿಳಿಸಿರುವೆನು, ಅದಕ್ಕೆ ಪ್ರಕೃತ ಹೆಚ್ಚೇನೂ ಕೂಡಿಸಬೇಕಿರುವದಿಲ್ಲ.

ನನಗೆ ಮೋತಿಲಾಲರನ್ನು ಕಾಣಬೇಕೆಂದು ಕುತೂಹಲವಿತ್ತು. ಅವರು ಎರವಾಡಕ್ಕೆ ಬಂದಾಗ ಕೆಲಮಟ್ಟಿನ ಅಸ್ವಾಸ್ಥ್ಯದಲ್ಲಿದ್ದರು. ನಾನು ಅವರನ್ನು ನೋಡಿದೆ, ಆದರೆ ನಾನೇ ಅನಾರೋಗ್ಯದಿಂದ ತೊಂದರೆಪಟ್ಟೆನು. ಜ್ವರವು ನನ್ನನ್ನು ಹೇಗೆ ಬಾಧಿಸಿತೋ—ನಾನರಿಯೆನು. ಆ ವಿಷಯದಲ್ಲಿ ನಾಚಿಕೆಪಡಬೇಕಾಗಿದೆ.

ಸತ್ಯಾಗ್ರಹ ಚಳವಳಕ್ಕೆ ಬೇರೆ ಮುಖಂಡರು ಬೇಕೆಂದು ನನಗೆ ಕಂಡುಬರುವದಿಲ್ಲ. ರೈತರ ಪಾಲಿಗಾದರೆ—ಅವರಿಗಿದ್ದ ಆಸ್ತಿ—ಧಾನ್ಯ ವಗೈರೆಗಳನ್ನು ಕಳಕೊಳ್ಳುವ ಪ್ರಸಂಗಗಳು ಒಂದಿರುವುದರಿಂದ, ಒಡೆತನವೇ ಅವರಿಗೆ ಇದೆ. ಗುಜರಾತ್ ಜನತೆಯು ವ್ಯಾಪಾರದ ನಾಯಕರುಗಳಲ್ಲಿಯೂ, ಮುದ್ದು ಮಾತುಗಳಲ್ಲಿಯೂ ತುಂಬ ತಿಳುವಳಿಕೆಯುಳ್ಳದ್ದಾಗಿರುವುದೆಂಬುದು ನನಗೆ ಚೆನ್ನಾಗಿ ಗೊತ್ತು. ಅಭಿಮಾನವನ್ನು ಕಾಯುಕೊಂಡರೆ, ಹಣವನ್ನು ಶೀಘ್ರದಿಂದಲೇ ಗಳಿಸಬಹುದು.

"ವ್ಯಾಪಾರ ಎಷ್ಟೆಲ್ಲರೂ, ಬಡವರಾಗಿರುವರೆಂಬ ವಿಷಯವನ್ನು ನಾನು ಕೇಳಿಬಲ್ಲೆನು. ಬಟ್ಟೆನ ಹಣವನ್ನು ಮಾರ್ಕೇಟುಗಳಲ್ಲಾಗಲಿ, ಬೇರೆ ವಿಧದಿಂದಾಗಲಿ ಚೆಲ್ಲಿ ಐಹಿಕ ಸುಖವನ್ನು ಬಯಸುವುದಕ್ಕಿಂತ, ತನ್ನ ಸರ್ವಸ್ವವನ್ನು ದೇಶಕ್ಕಾಗಿ ಅರ್ಪಿಸುವುದೆಷ್ಟೋ ಲೇಸು. ನಾನು ರೈತರಿಗೆ, ಅನ್ಯಾಯಕ್ಕೆ ಕೈಹಚ್ಚದೆ ಶಾಂತತೆಯಿಂದಲೇ ವರ್ತಿಸತಕ್ಕದ್ದೆಂದು ಈ ಮೊದಲೇ ಸಾರಿ ಹೇಳಿರುವೆನು. ಜುಲುಂ ಜಾಸ್ತಿಯಾಗುವ ಸಂಭವಗಳಲ್ಲಿ ಊರನ್ನೇ ಬಿಟ್ಟು ಪರಊರಿಗೆ ಪ್ರಯಾಣ ಬೆಳೆಸುವುದೇ ಲೇಸೆಂದೂ ತಿಳಿಸಿರುವೆನು. ಎಲ್ಲರೂ—ಇಂದಲ್ಲ—ಒಂದು ದಿನ ಮಡಿಯಬೇಕು. ಆದರೆ, ದೇಶದ ಗೌರವವನ್ನು ಕಾಪಾಡುವ ಸದುದ್ದೇಶದಿಂದ ಮಡಿದರೆ, ಅದೊಂದು ಗೌರವಾಸ್ಪದವಾದ ಮರಣವಲ್ಲವೇ?

(೧೩ನೇ ಪುಟಕ್ಕೆ ಮುಂದರಿಸಿಯದೆ.)

## The Zandu Pharmaceutical Works, Ltd., Bombay, 14.

## ದಿ ಝೂಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ 'ಝೂಂಡೂ ಯವರ

# ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!

ಹಸಿ ಆವಳೆ ಅನ್ನು ಇತರ ವನೌಷಧಿಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದುರ್ಬಲತ್ವ, ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

ಕ್ರಯ 1 ಪೌನು ಸೀಸೆ ರೂ. 2—8—0, ½ ಪಾ. ರೂ. 1—5—0, ¼ ಪಾ. ರೂ 0—13—0.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು:—ದಾಮೋದರ್ ಅಂಡ್ ಕಂಪೆನಿ, 78 ಜೈನಾ ಬಜಾರು ರಸ್ತೆ, ಮದ್ರಾಸು.

ತೀರ್ಥಹಳ್ಳಿ ಏಜಂಟರು:—ಮೆಸರ್ಸ್ ಪಂಡಿತ ಮುತ್ತು ಕಂಪೆನಿ

ಮಂಗಳೂರು ಏಜಂಟರು:—ದಿ ಯೂನಿಯನ್ ಎಜೆಂಟ್ಸ್.

ಉಡುಪಿ ಏಜಂಟರು —ಎಸ್. ಎಲ್ ಧಾಕಪ್ಪಾ ಎಂಡ್ ಬ್ರದರ್ಸ್

ಸಬ್ ಏಜಂಟರು —ಯು ಜನಾರ್ಧನರಾವ್, ಪುತ್ತೂರು, ದ. ಕನ್ನಡ

ಮಂಗಳೂರು ಏಜಂಟರು.—ತಿಪ್ಪಣ್ಣ ಶಾಸ್ತ್ರಿ, ಬಸ್‌ಸ್ಟೇಟ್

☞ ವಿವರ ಕೆಟಲಾಗು ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು



TELEGRAMS ASPINWALCO TELEPHONE No. 15

The Mark of Quality

DISTRIBUTORS

Aspinwall & Co. Ltd

(Access) MANGALORE

THE Firestone Gum-Dipping process strengthens the tire to meet the demands of hill climbing, quick stops, sudden turns and high speeds The Firestone tread is scientifically designed to grip the road in emergencies. You can have this extra safety on *your car*, Drive in and use our service.

**Firestone**

Gum-Dipped TIRES

*STOCKISTS*

UDIPI
*H Siddaya Hegde*

KASARGODE
*Rama Nayak*

KANHANGAD
*H S Russool*

COONDAPUR –
*C Gopal Mukunda Pai*
General Merchant
COONDAPUR (S Kanara)

BHATKAL
*Messers Kashimjee Sham shuddeen Saheb Motor Service*

Puttur
*K Venkatraya Pai*
Imperial Cycle Stores



***FOR YOUR CAR***

# WILLARD BATTERIES.

SIMONIZ KLEENER SIMONIZ POLISH

*AGENTS* —

## Messrs. Aspinwall & Co, Ltd.

MANGALORE



"ಬಿಟ್ಟಿ" "ಪುಗಸಟ್ಟೆ" "ಬಿಟ್ಟಿ"

**ಜೇಬಿನ ಲಿವರ್ ಗಡಿಯಾರವೂ ಕೈ ಗಡಿಯಾರವೂ ಬಿಟ್ಟಿ**

**೩ ತಿಂಗಳೊಳಗಾಗಿ ೩೦೦೦ ಗಡಿಯಾರಗಳನ್ನು ಬಿಟ್ಟಿಯಾಗಿ ಕೊಟ್ಟಿದ್ದೇವೆ**

ರೂ. ೨–೧೫ ಬೆಲೆ ಬಾಳುವ ನಮ್ಮ ತಯಾರಿ ಫೌಂಟನ್ ಪೆನ್ನನ್ನು ಕೊಂಡುಕೊಳ್ಳುವ ನಮ್ಮ ಗಿರಾಕಿಗಳಿಗೆ ಜೇಬಿನ ಲಿವರ್ ಗಡಿಯಾರವನ್ನು ಬಿಟ್ಟಿಯಾಗಿ ಕೊಡುತ್ತೇವೆ ಒಂದೇ ಸಲ ಎರಡು ಫೌಂಟನ್ ಪೆನ್ನುಗಳನ್ನು ಕೊಳ್ಳುವವರಿಗೆ ರೂ ೫–೧೪ ಬೆಲೆಯ ಮತ್ತು ಲಿವರ್ ಕೈ ಗಡಿಯಾರವೂ ಬಿಟ್ಟಿಯಾಗಿ ಕೊಡುವೆವು ಈ ಪೆನ್ನು ಬಂಗಾರದ ನಿಬ್ಬುಳ್ಳದ್ದಾಗಿಯೂ, ಅಚ್ಚುಕಟ್ಟಾದ ಮಾಯದ ಶಾಯಿ ಬರೆಯುವುದೂ, ಜಾರ್ಜ್ ಚಕ್ರವರ್ತಿಗಳಿಂದ ಹೊಗಳಲ್ಪಟ್ಟದ್ದಾಗಿಯೂ ಖಂಡಿತವಾಗಿ ಫೌಂಟನ್ನು ತೋರಿಸುವುದಾಗಿಯೂ ಇದೆ. ಇದಕ್ಕೆ ೫ ವರ್ಷ ಗ್ಯಾರಂಟಿ ಕೊಡುತ್ತೇವೆ

ಪತ್ರವ್ಯವಹಾರಗಳು ಇಂಗ್ಲೀಷಿನಲ್ಲಿ ಬರೆಯಬೇಕು

**Imperial Watch Company.**

(S) Post No. 12, BOMBAY.



## ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

**ಶಾರದಾ ಛಾಪಖಾನೆ,**

ರಥಬೀದಿ, ಮಂಗಳೂರು



## ಮುದಲ್ ತರವಾದ ಬೆಳ್ಳಿ ಉಡಿದಾರ ಹಗ್ಗ.

ESTD 1896.

ಅನೇಕ ವರುಷದಿಂದ ನಾವು ಬೆಳ್ಳಿ **ಉಡಿದಾರಗಳನ್ನು ತಯಾರು ಮಾಡಿ** ಅನೇಕ ವ್ಯಾಪಾರಿಗಳಿಗೂ ಕಳುಹಿಸಿ ಬರುತ್ತೇವೆ ನೀಡಿಸಿದ ಅನುಭವದ ಮೇಲೆ ನಮ್ಮ ಉಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ಧಾರಣೆ ಸರಸದಲ್ಲಿಯೂ, ಸರಕಿನ ನಾಜೂಕದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದದ್ದಾಗಿದೆ ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳನ್ನು ಕಳುಹಿಸುತ್ತೇವೆ ಒಂದು ಸಲ ನಮ್ಮಲ್ಲಿಂದ ತರಿಸಿ ನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು ಬೆಳ್ಳಿ ಧಾರಣೆ ಪ್ರಕಾರ ಸರಕುಗಳಿಗೆ ಧಾರಣೆ ಹಾಕಿ ಕಳುಹಿಸುತ್ತೇವೆ

ಕೆ. ಎಸ್ ನಾರಾಯಣಶೆಟ್ಟಿ ಅಂಡ್ ಸನ್ಸ್,

ಸಗಟು ವ್ಯಾಪಾರಿ,

ಶಿವ್ವಪೇಟ, ಸೇಲಂ, (ಸೌತ ಇಂಡಿಯಾ)



### ರಿಸ್ಟ್‌ವಾಚ್ ಉಚಿತ.

ಒಂದು ಜೇಬಿನಲ್ಲಿಡುವ ಗಡಿಯಾರ ಉಚಿತವಾಗಿ ದೊರೆಯುತ್ತದೆ

ವಿವರ:—ಗಡಿಯಾರ ಚಿತ್ರಗಳ ಮೇಲೆ ೨೪ ಕಾಸುಗಳಲ್ಲಿ ಬರೆದ ಗುರುತುಗಳ ... ೫೦ ... ೧೨ ಚಿತ್ರಗಳ ಮೇಲೆ ಒಂದು ಟ್ರಾನ್ಸ್ ... ೨೪ ಚಿತ್ರಗಳಿಗೆ ೧ ರಿಸ್ಟ್‌ವಾಚ್ ಪತ್ರಿಕೆ ... ಪತ್ರವ್ಯವಹಾರ ಇಂಗ್ಲೀಷಿನಲ್ಲಿ

**ಕಿಂಗ್ ಬಾಜಾರ್ ಕೊರೋನೇಶನ್ ಕಂಪೆನಿ**

ಮುಂಬಾಯಿ



## ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

**ಶಾರದಾ ಛಾಪಖಾನೆ,**

ರಥಬೀದಿ, ಮಂಗಳೂರು



ಒಮ್ಮೆ ಪರೀಕ್ಷಿಸಿರಿ! ತೃಪ್ತಿ ಹೊಂದಿರಿ!

ದಿ ಶ್ರೈನ್ ರಬ್ಬರ್ ಸ್ಟಾಂಪು ಕಂಪೆನಿ,

ಹೆಡ್ ಆಫೀಸು ಬಲ್ಮಠ ರಸ್ತೆ, ಕಂಕನಾಡಿ ಪೋಸ್ಟು,

ಮಂಗಳೂರು, ದ ಕನ್ನಡ

## ರಬ್ಬರು ಮೊಹರುಗಳು

ಇಲ್ಲಿ ಉತ್ತಮವಾದ ಎಯರ್‌ಕುಶನ್ ರಬ್ಬರು ಮೊಹರುಗಳೂ, ಡೇಟ್ ಇತ್ಯಾದಿ ಲೋಹಗಳಲ್ಲಿಯೂ, ಮಾರ್ಬಲ್‌ನಲ್ಲಿಯೂ ಕೆತ್ತನೆಯ ಕೆಲಸವನ್ನೂ ಬಹಳ ನಾಜೂಕಾಗಿ ಕ್ಲುಪ್ತ ಸಮಯದಲ್ಲಿ ಮಾಡಿಕೊಡುತ್ತದೆ

ಹೆಚ್ಚಿನ ಮಾಹಿತಿಯನ್ನು ಪತ್ರಮೂಲಕವಾಗಲೀ, ಆಫೀಸಿನಲ್ಲಿ ಸ್ವತಹ ಬಂದಾಗಲೀ ತಿಳಿದುಕೊಳ್ಳಿರಿ

ಎಮ್ ದೇವದಾಸ ಶೆಣೈ,

ಮೆನೇಜಿಂಗ ಪ್ರೊಪ್ರೈಟರ್

## ೫ ಮಹಾರಾಜರು ರೌಂಡ್‌ಟೇಬಲ ಕೊನ್ಫರೆನ್ಸನ್ನು ತೆರೆದರು.

ಲಂಡನ್ ನಗರದಲ್ಲಿ ಎಲ್ಲಾ ತರದ ರಾಜ ವೈಭವಗಳಿಂದ ಸೆಂಟ್ ಜೇಮ್ಸ್ ಅರಮನೆಯಲ್ಲಿ ಜೋರ್ಜ ಮಹಾರಾಜರು ೧೨ನೇ ತಾರೀಕಿನಲ್ಲಿ ರೌಂಡ್‌ಟೇಬಲ್ ಕೊನ್ಫರೆನ್ಸನ್ನು ತೆರೆದರು. ಭಂಗಾರದ ಸಿಂಹಾಸನದ ಬಲಭಾಗದಲ್ಲಿ ಮುಖ್ಯ ಮಂತ್ರಿಗಳೂ, ಇಂಡಿಯದ ರಾಜರುಗಳೂ ಅವರ ಮಂತ್ರಿಗಳೂ ಕುಳಿತಿದ್ದರು ಮುಂದುಗಡೆಯಲ್ಲಿ ಬ್ರಿಟಿಷ ಇಂಡಿಯದ ಪ್ರತಿನಿಧಿಗಳೂ, ಎಡಗಡೆಯಲ್ಲಿ ಜಿನ್ನರೂ, ಬ್ರಿಟಿಷ ಪ್ರತಿನಿಧಿಗಳೂ ಕುಳಿತಿದ್ದರು ರಾಜರ ಭಾಷಣ ಎಂಟು ನಿಮಿಷ ಮಾತ್ರ ನಡೆಯಿತು ಮುಖ್ಯ ಮಂತ್ರಿಗಳ ಭಾಷಣ ಹತ್ತು ನಿಮಿಷದಲ್ಲಿ ತೀರಿತು. ಎಲ್ಲಾ ಸಭಾ ಕಾರ್ಯ ಐವತ್ತು ನಿಮಿಷಗಳಲ್ಲಿ ತೀರಿತು. ಆದರೆ ರಾಜರ ಭಾಷಣದಲ್ಲಿಯಾಗಲೀ ಮುಖ್ಯ ಮಂತ್ರಿಯವರ ಭಾಷಣದಲ್ಲಿಯಾಗಲೀ ಇಂಡಿಯಕ್ಕೆ ಯಾವತರದ ರಾಜ್ಯಭಾರವು ಕೊಡಲ್ಪಡುವುದು ಎಂಬುದರ ವಿಷಯ ಒಂದೇ ಒಂದು ಆಶಾದಾಯಕವಾದ ಮಾತಿಲ್ಲ ಮುಖ್ಯ ಮಂತ್ರಿಗಳು ಯಾವ ತರದ ಸರಕಾರವನ್ನು ಇಂಡಿಯಕ್ಕೆ ಕೊಡುತ್ತೇನೆಂದು ಈ ಸಾರಿ ಖಂಡಿತವಾಗಿ ಹೇಳ್ತಾರು ಎಂದು ಕಾದುಕೊಂಡಿದ್ದವರ ಆಶೆಯು ನಿರಾಶೆಯಾಯಿತು. ರಾಷ್ಟ್ರೀಯ ಚಳವಳಗಾರರು ಈ ಕೊನ್ಫರೆನ್ಸಿನಿಂದ ಯಾವದೊಂದು ಪ್ರಯೋಜನವಾಗಲಾರದೆಂದು ಮೊದಲೇ ಹೇಳಿರುವರು. ಇನ್ನು ಪ್ರತಿನಿಧಿಗಳಲ್ಲಿ ಕೆಲವರು ಮಾತನಾಡಿದ ವಿಷಯಗಳಿವೆ. ಬ್ರಿಟಿಷ ಇಂಡಿಯದ ನಿವಾಸಿಗಳಿಗೆ ಬ್ರಿಟಿಷ ಕೋಮನ್‌ವೆಲ್ತಿನಲ್ಲಿ ಸರಿಸಮಾನ ಹಕ್ಕನ್ನು ಕೇಳುವುದರ ಕುರಿತು ನನ್ನ ಪೂರ್ಣ ಸಹಾನುಭೂತಿಯಿದೆ ಎಂದು ಕಾಶ್ಮೀರ ಮಹಾರಾಜರು ಹೇಳಿದರು ''ಡೊಮಿನಿಯನ್ ಪ್ರತಿನಿಧಿಗಳೇ! ಬ್ರಿಟಿಷ ಸಾಮ್ರಾಜ್ಯದಲ್ಲಿ ಇನ್ನೊಂದು ಡೊಮಿನಿಯನ್ ಉಂಟುಮಾಡಲು ನಾವು ಇಲ್ಲಿಗೆ ಬಂದಿದ್ದೇವೆಂದು'' ಜಿನ್ನರು ಹೇಳಿದರು ಬ್ರಿಟಿಷ ಸಾಮ್ರಾಜ್ಯದಲ್ಲಿರುವ ಎಲ್ಲಾ ಜನಾಂಗಗಳಿಗೂ ಒಂದೇ ರೀತಿಯ ರಾಜ್ಯಭಾರ, ನ್ಯಾಯ ನೀತಿ ಇರುವದು ಸಹಜವಾದುದು ಇಂಡಿಯಕ್ಕೂ ಇದೇ ರೀತಿಯ ಹಕ್ಕು ಸಿಕ್ಕಬೇಕೆಂದರು ಇನ್ನು ಕ್ರಮಪ್ರಕಾರ ವಾದವಿವಾದಗಳು ೧೭ನೇ ತಾರೀಕಿನಿಂದ ಆಗುತ್ತಲಿವೆ. ಫಲಿತಾಂಶವನ್ನು ಕಾಯುತ್ತಿರಬೇಕು. ಒಟ್ಟಾರೆ ಯಾವತರದ ಗಲಾಟೆಯೂ ಇಲ್ಲದೆ ಸಭೆ ತೆರೆಯುವ ಸಮಾರಂಭವು ಮುಗಿಯಿತು

## ಮದರಾಸು ಎಕ್ಸೈಜ ಇಲಾಖೆಯೂ ಮದ್ಯಪಾನ ನಿಷೇಧವೂ.

೧೯೨೯—೩೦ನೇ ಇಸವಿಯ ಎಕ್ಸೈಜ್ ಇಲಾಖೆಯ ರಿಪೋರ್ಟು ಹೊರಬಿದ್ದಿದೆ ಈ ವರುಷದಲ್ಲಿಯೂ ''ಕುಡಿತ ಕಡಿಮೆಯಾಗಬೇಕು. ಆದರೆ ಸರಕಾರಿ ಆದಾಯ ಕಡಿಮೆಯಾಗಬಾರದು'' ಎಂಬ ಸೂತ್ರವನ್ನು ಅನುಸರಿಸಿ ಕೆಲಸವು ನಡೆದಿದೆ ಎಂದು ತೋರುತ್ತದೆ ಮದ್ಯಪಾನ ನಿಷೇಧ ಕೆಲಸಕ್ಕಾಗಿ ಸರಕಾರವು ೪ ಲಕ್ಷ ರೂಪಾಯಿ ಖರ್ಚುಮಾಡಿದರೂ ಏನೊಂದೂ ಪ್ರಯೋಜನವಾಗಿದೆ ಎಂದು ತೋರುವುದಿಲ್ಲ. ಸರಕಾರಕ್ಕೆ ಈ ವರುಷ ೨೭ ಲಕ್ಷ ರೂಪಾಯಿ ಹೆಚ್ಚಿಗೆ ಆದಾಯವು ಸಿಕ್ಕಿದೆ. ವಿದೇಶಿ ಮದ್ಯವು ಬರುವದು ಕಳೆದ ವರುಷಕ್ಕಿಂತಲೂ ಹೆಚ್ಚಾಗಿದೆ ಐಶ್ವರ್ಯವಂತರಲ್ಲಿ ವಿದೇಶಿ ಮದ್ಯ ಕುಡಿಯುವದು ಹೆಚ್ಚಾಗುತ್ತಾ ಬಂದಿದೆ. ಇವರು ಚಿಲ್ಲರೆಯಾಗಿ ಬಾಟ್ಲಿ ಕೊಂಡುಕೊಳ್ಳುವ ಬದಲಾಗಿ ಪೆಟ್ಟಿಗೆಗಳನ್ನೇ ತೆಗೆದುಕೊಳ್ಳುತ್ತಾರಂತೆ. ಉಪಾಧ್ಯಾಯರೂ ಪರಸ್ಪರ ಸಹಾಯಕ ಸಂಘದ ಮೆಂಬರರೂ ಕುಡಿಯಬಾರದೆಂದು ಸರ್ಕ್ಯುಲರುಗಳು ಇವೆ. ಹೆಂಗಸರು ಕುಡಿತದ ವಿರುದ್ಧ ಪ್ರಚಾರಕಾರ್ಯ ಮಾಡಿದರೆ ಕುಡಿತವು ಕಡಿಮೆಯಾದೀತೆಂದು ಕಮಿಶನರ ಭಾವನೆ. ಇವರೆ ಮಾತಿನಿಂದ ಹೆಂಗಸರು ಪಿಕೆಟ್ ಮಾಡಕೂಡದೆಂದು ತೋರುತ್ತದೆ. ಯಾಕೆಂದರೆ ಇವರನ್ನು ಕಾರಾಗೃಹಕ್ಕೆ ನೂರಾರುಗಟ್ಟಲೆ ಕಳುಹಿಸಿರುವರು ಎಂಬುದನ್ನು ಹೇಳುವದಿಲ್ಲ. ಹೆಂಡತಿಯು ಕುಡಿಯಬಾರದೆಂದು ಗಂಡನಿಗೆ ಹೇಳಬಹುದು. ಆದರೆ ಪಾಶ್ಚಿಮಾತ್ಯ ನಾಗರೀಕತೆಯಲ್ಲಿ ಮುಳುಗಿದ ಗಂಡ ಹೆಂಡಿರಿಬ್ಬರೂ ಕುಡಿದರೆ ಇವರಿಗೆ ಹೇಳುವವರು ಯಾರು! ಕಳೆದ ಸಾರಿಯ ಮಂತ್ರಿಗಳಿಗೆ ಎಷ್ಟು ಕಷ್ಟಪಟ್ಟರೂ, ಮದ್ಯಪಾನ ನಿಲ್ಲಿಸಲು ಸಾಧ್ಯವಾಗಲಿಲ್ಲ. ಹೊಸ ಮಂತ್ರಿ ಸಭೆ ಏನು ಮಾಡುತ್ತದೋ ನೋಡಲಿಕ್ಕಿದೆ.

## ಮದರಾಸು ಕೌನ್ಸಿಲಿನಲ್ಲಿ ನೋನ್ ಒಫಿಸಿಯಲ್ ವಿಷಯಗಳಿಗೆ ಈ ಸಾರಿ ಗವರ್ನರರು ಸಮಯ ಕೊಡಲಿಲ್ಲ.

ಪ್ರತಿ ಒಂದು ಸಂಸ್ಥಾನದ ನ್ಯಾಯವಿಧಾಯಕ ಸಭೆಗಳ ಕಾರ್ಯಕ್ರಮಗಳಲ್ಲಿ ಸರಕಾರಿ ಮೆಂಬರರು ಸಭೆಯ ಮುಂದೆ ತರುವ ವಿಷಯಗಳಿಗೆ ಪ್ರತ್ಯೇಕ ಸಮಯ, ಚುನಾಯಿಸಲ್ಪಟ್ಟ ಮೆಂಬರರು ಸಭೆಯ ಮುಂದೆ ತರುವ ವಿಷಯಗಳಿಗೆ ಪ್ರತ್ಯೇಕ ಸಮಯವನ್ನು ನಿರ್ಣಯಿಸುವ ಕ್ರಮವಿತ್ತು ಈ ಸಾರಿಯ ಅಧಿವೇಶನದಲ್ಲಿ ಮೆಂಬರರು ಮುಂದೆ ತರುವ ವಿಷಯಗಳಿಗೆ ಸಮಯ ಕೊಡಲಿಲ್ಲ. ಕೌನ್ಸಿಲ್ ಅಧ್ಯಕ್ಷರ ಹತ್ತರ ವಿಚಾರಿಸಿ ಗವರ್ನರರು ಈ ಸಮಯ ನಿರ್ಣಯಿಸುವ ಪದ್ಧತಿಯಾಗಿತ್ತು. ಅಧ್ಯಕ್ಷರು ಪದವಿ ವಹಿಸಿಕೊಂಡೊಡನೆಯೇ ಈ ಅವಸ್ಥೆಯಾಯಿತು ಕೌನ್ಸಿಲ್ ಮೀಟಿಂಗು ಆಗದೆ ಏಳು ತಿಂಗಳಾಯಿತು ಸತ್ಯಾಗ್ರಹ ಚಳವಳ ಮುರಿಯುವಾಗ ಪೋಲೀಸರು ಮಾಡಿದ ಅತ್ಯಾಚಾರಗಳು ರಾಜಕೀಯ ಕೈದಿಗಳನ್ನು ಬಹಳ ದೀನಾವಸ್ಥೆಯಿಂದ ನಡಿಸಿದ ವಿಷಯ, ಕುಡಿತದ ನಿಷೇಧ ಮತ್ತು ಸ್ವದೇಶಿ ಚಳವಳಕ್ಕೆ ಉಂಟಾದ ತಡೆ. ಮುನಿಸಿಪಾಲಿಟಿ ಮತ್ತು ಲೋಕಲ್ ಬೋರ್ಡುಗಳ ಮೇಲಿನ ಆರ್ಡರುಗಳು ಮುಂತಾದ ರಾಜಕೀಯ ವಿಷಯಗಳನ್ನು ಕೌನ್ಸಿಲಿನ ಮುಂದೆ ತರುವದು ಬಾಕಿಯಿದೆ. ಇತ್ತಲಾಗಿನ ದಕ್ಷಿಣ ಹಿಂದೂದೇಶದ ನೆರೆಯ ಹಾವಳಿ ವಿಷಯಗಳು ಇನ್ನು ಹಲವು ವಿಷಯಗಳು ಬಾಕಿ ಇವೆ. ಇವುಗಳನ್ನು ಈ ಸಾರಿ ಬಾಕಿ ಇಟ್ಟರೆ ಇನ್ನು ಸಭೆ ಕೂಡುವುದು ಫೆಬ್ರವರಿಯಲ್ಲಿ ಆಗ ಬಜೆಟಿನ ವಿಷಯ ಮಾರ್ಚ ಅಖೈರಿ ವರೆಗೆ ಕೆಲಸವಿದೆ ಆದುದರಿಂದ ಹೊಸ ಮಂತ್ರಿಗಳು, ಹೊಸ ಅಧ್ಯಕ್ಷರು, ಹೊಸ ಮೆಂಬರರು ಏನು ಮಾಡುವರೋ ನೋಡಲಿದೆ

## ವ್ಯಾಸರಾಯರ ಡಿಸ್‌ಪೆಚ್.

ಇದೇ ೧೪ನೇ ತಾರೀಕಿಗೆ ಇಂಡಿಯಕ್ಕೆ ಯಾವ ತರದ ರಾಜ್ಯಭಾರ ಕೊಡಬಹುದೆಂದು ಇಂಡಿಯಾ ಸರಕಾರದ ಪರವಾಗಿ ವ್ಯಾಸರಾಯರು ಇಂಗ್ಲೆಂಡಿಗೆ ಕಳುಹಿಸಿದ ಡಿಸ್‌ಪೆಚ್ ಹೊರಬಿದ್ದಿದೆ. ೨೫೦ ಪುಟಗಳಿವೆ, ವ್ಯಾಸರಾಯರು ಇಂಡಿಯದ ಜನರ ಮನಸ್ಸಿಗೆ ಒಪ್ಪುವ ರೀತಿಯ ರಾಜಕೀಯ ಬದಲಾವಣೆಗಳನ್ನು ಪಾರ್ಲಿಮೆಂಟಿಗೆ ಸೂಚಿಸಿಯಾರು ಎಂದು ಕೆಲವರಲ್ಲಿದ್ದ ಆಶೆಯು ವ್ಯರ್ಥವಾಯಿತು. ರೌಂಡ್‌ಟೇಬಲ್ ಕೊನ್ಫರೆನ್ಸಿನ ಸಮಯ ವ್ಯಾಸರಾಯರು ನವಂಬರ ಮತ್ತು ಜುಲಾಯಿ ತಿಂಗಳ ಭಾಷಣಗಳಲ್ಲಿ ಇಂಡಿಯದ ಜನರಿಗೆ ಹೆಚ್ಚಿನ ಸ್ವಾತಂತ್ರ್ಯಗಳನ್ನು ಕೊಡುತ್ತೇನೆಂದು ಹೇಳಿರುವರೆಂದು ಶ್ರೀನಿವಾಸ ಶಾಸ್ತ್ರಿಗಳು ರೌಂಡ್‌ಟೇಬಲ್ ಸಭೆಯಲ್ಲಿ ಹೇಳಿದರು ಆದರೆ ಡಿಸ್‌ಪೇಚಿನಲ್ಲಿ ಇದೇನು ಕಾಣುವುದಿಲ್ಲ ಇದರಲ್ಲಿ ಸ್ವತಂತ್ರಾಧಿಕಾರ ಕೊಡಲು ಇನ್ನೂ ಸಮಯ ಒದಗಿಲ್ಲ ಇನ್ನು ಸ್ವಲ್ಪ ಸಮಯದ ವರೆಗೆ ಬ್ರಿಟನ್ ಮತ್ತು ಇಂಡಿಯವು ಒಟ್ಟಿಗಿದ್ದೇ ರಾಜ್ಯಭಾರ ನಡಿಸಬೇಕು ಎಂದು ಬರೆದಿರುವರು ಇನ್ನು ಮುಂದೆ ಎಕ್ಸಿಕ್ಯೂಟಿವ್ ಮಂಡಲವೂ ಎಸೆಂಬ್ಲಿಯೂ ಏಕ ಮನಸ್ಸಿನಿಂದ ಕೆಲಸ ಮಾಡಬೇಕೆಂದು ಬರೆದಿರುವರು. ಇದು ಎಷ್ಟರ ಮಟ್ಟಿಗೆ ಸಾಧ್ಯವಾಗುವುದೋ ತಿಳಿಯದು ಯಾಕೆಂದರೆ ಆ ಮಂಡಲದವರು ಸೆಕ್ರೆಟರಿ ಒಫ್ ಸ್ಟೇಟ್ರ ಅನುಮತಿಯಂತೆ ಕೆಲಸ ನಡಿಸುವವರು. ಕೆಲವು ಮಂದಿ ಮಂತ್ರಿಗಳನ್ನು ಇಂಡಿಯಾ ಸರಕಾರದಲ್ಲಿ ನೇಮಿಸಲು ಬರೆದಿರುವರು ಹೀಗೆ ಮಾಡಿದರೆ ಸರಕಾರಿ ಪಕ್ಷಕ್ಕೆ ಬೆಂಬಲವು ಹೆಚ್ಚುವುದು. ಯಾಕೆಂದರೆ ಮಂತ್ರಿಗಳು ಅವರ ಪಾರ್ಟಿಯೂ ಸರಕಾರದ ಕಡೆಗೆ ಸೇರಿ ಇಷ್ಟರ ವರೆಗೆ ಸರಕಾರಕ್ಕೆ ಎಸೆಂಬ್ಲಿಯಲ್ಲಿ ಅಪಜಯವಾಗುತ್ತಿದ್ದಂತೆ ಇನ್ನು ಮುಂದೆ ಆಗಲು ಸಾಧ್ಯವಾಗದು ಇನ್ನು ಬರ್ಮಾ, ಸಿಂಧೂದೇಶ, ಒರಿಸ್ಸಾ ಮುಂತಾದ್ದನ್ನು ಪ್ರತ್ಯೇಕಿಸುವ ಆಲೋಚನೆ ಇದರಲ್ಲಿ ತೋರುತ್ತಿದೆ ಒಟ್ಟಾರೆ ಸೈನ್ಯ, ಹಣದ ಅಧಿಕಾರ, ರೈಲುವೇ ವ್ಯಾಪಾರ, ಸುಂಕ ಹೊರಗಿನ ರಾಜ್ಯಗಳೊಡನೆ ಸಮ್ಬಂಧ ಇವುಗಳನ್ನು ಎಸೆಂಬ್ಲಿಗೆ ಬಿಟ್ಟು ಕೊಡುವ ಸೂಚನೆಯು ಕಂಡುಬರುವುದಿಲ್ಲ. ಇದರಲ್ಲಿ ಇಂಡಿಯದ ಜನರು ಕೇಳುವ ರೀತಿಯ ಬದಲಾವಣೆಗಳು ಒಂದೂ ಕಂಡುಬರುವದಿಲ್ಲ ಒಟ್ಟಾರೆ ಈ ಡಿಸ್‌ಪೆಚ್ ಪ್ರಾಂತೀಯ ಸರಕಾರಗಳ ವಿಷಯ ಸೈಮನ್ ರಿಪೋರ್ಟಿನಿಂದ ಒಂದು ಹೆಜ್ಜೆ ಮುಂದರಿಸಲಿಲ್ಲ ಇಂಡಿಯಾ ಸರಕಾರದ ಅಧಿಕಾರ ಈಗ ಇರುವಂತೆಯೇ ಇರುವುದು·

## ನೋಟ್ಟುಗಳು.
## NOTE....S

ತಾ. ೧೨ಕ್ಕೆ ಲಂಡನಿನಲ್ಲಿ ಚಕ್ರಗೋಷ್ಠಿಯು ಪ್ರಾರಂಭವಾಗಿ ಅರಸರು ಭಾಷಣ ಕೊಟ್ಟರು, ಎಲ್ಲರೂ ಕೇಳಿದರು, ಅನಂತರ ಸಭೆಯನ್ನು ಹದಿನೇಳಕ್ಕೆ ಮುಂದರಿಸಿದರು.

* * * *

ಭಾಷಣ ಪ್ರಾರಂಭ ಮಾಡುವ ಮೊದಲು ಸಂತೋಷ ವ್ಯಕ್ತಪಡಿಸಿದ ಮುಖ್ಯ ಸಂಗತಿ, ತಾನು ನಿಮ್ಮೆಲ್ಲರನ್ನು ಈ ಸ್ಥಳದಲ್ಲಿ ನೋಡಿದ್ದು ಬಹಳ ಆನಂದ ಸಂಗತಿ ಎಂದು ಹೇಳಿರುವರು, ಬಾಕಿ ಸಂಗತಿ ಎಲ್ಲಾ ಬಳ್ಳೆಯದೇ.

* * * *

ಎಂಟು—ಹತ್ತು ಮಿನಿಟಿನೊಳಗೆ, ಭಾಷಣ ಮುಗಿಯಿತು. ಅರಸರ ಸವಾರಿ, ಬಂದ ಹಾಗೆ ವಾಪಾಸು, ಅ ಮನೆಗೆ ತೆರಳಿತು. ನಂತರದ ವಹಿವಾಟಿಗೆ ಮುಖ್ಯ ಮಂತ್ರಿಯವರು ಚೆಯರ್‌ಮೆನರಾಗಿ ಆರಿಸಲ್ಪಟ್ಟರು

* * * *

ಚೆಯರ್‌ಮೆನರು, ನಮ್ಮವರಿಗೆ ತಿಳಿಸಿದ ಮುಖ್ಯ ಸಂಗತಿ, ನೀವು ಮಾತಾಡುವದು ಕೇಳಲಿಕ್ಕೆ, ನಾವು ಇಲ್ಲಿ ಇದ್ದೇವೆ, ಇದ್ದ ಸಂಗತಿ ಸರಿಯಾಗಿ ಮಾಡಬಹುದು ಇದಕ್ಕೊಂದು ಯಾವ ಅಡ್ಡಿ ಮಾಡಲಿಲ್ಲ ದೊಡ್ಡ ರಿಯಾತಿ.

* * * *

ಇನ್ನೊಂದು ವಿಚಿತ್ರದ ಸಂಗತಿ ಅರಸರು ಬೇಟಿಕೊಟ್ಟ ಇಂಥಾ ಸಭೆಗಳು ಇತ್ತಲಾಗೆ ಹಲವು ವರ್ಷಗಳಿಂದೀಚೆಗೆ ನಡೆಯಲಿಲ್ಲ ಎಂಬುದನ್ನು ಮುಖ್ಯ ಮಂತ್ರಿಯವರು ಸಹ ಹೇಳಿಯೇ ಬಿಟ್ಟರು

* * * *

ಒಟ್ಟಾರೆ ನಮ್ಮ ಇಂಡಿಯನ್ ಡೆಲಿಗೇಟರಿಗೆ, ಸಭೆಯ ಪ್ರಾಮುಖ್ಯತೆಯನ್ನು ಇನ್ನೊಂದು ಅರಸರು ನೋಡಲು ಸಿಕ್ಕಿದ ಅದೃಷ್ಟವನ್ನು ಚೆನ್ನಾಗಿ ವರ್ಣಿಸಿರುವರು.

* * * *

ತಾ ೧೭ಕ್ಕೆ ಹಲವರ ಭಾಷಣಗಳಾದವು ಇಂಡಿಯನ್ ಮಹಾರಾಜರುಗಳ ಭಾಷಣಗಳಾದವು. ಎಲ್ಲಾ ರಿಕಾರ್ಡು ಆಗುತ್ತಾ ಇದೆ ಕೊನೆಯ ಪರಿಣಾಮ ಕನ್ನಡಿಯೊಳಗಿನ ಗಂಟು ನೋಡಿ. ಗಂಟಿನ ಫೋಟೋ ಹಿಂದೂಸ್ಥಾನಕ್ಕೆ ತಂದರಾಯಿತು.

* * * *

ಉಡುಪಿಯಲ್ಲಿ ಪೋಲೀಸರಿಗೆ ಅಕಸ್ಮಾತ ಒಂದು ಕನಸು ಬಿದ್ದಿತಂತೆ ಸಾರಾಂಶ ೧೪ನೇ ಹುಕುಂ ಉಲ್ಲಂಘನೆಮಾಡುತ್ತಾರಾಗಿ ಕನಸಿನ ನಿಜಸ್ಥಿ ನೋಡಲು ಕೂಡಲೇ ಮಂಗಳೂರಿನ ನೀಲ ಟೊಪ್ಪಿಯ ಪೋಲೀಸರು ಉಸಿರುಕಟ್ಟಿ ಏಕದಮ್ ಹೊರಟುಬಿಟ್ಟರು, ಅಲ್ಲಿ ಹೋಗಿ ನೋಡುವಾಗ ಎಲ್ಲಾ ಸಮಾಧಾನ, ಮುಖ್ಯತಃ ಬಸ್ಸು ಕಂಪೆನಿಯವರಿಗೆ ಸ್ವಲ್ಪ ಬಾಡಿಗೆ ಕೊಟ್ಟಂತಾಯಿತು.

* * * *

ಅದೇ ದಿವಸ ಮಂಗಳೂರಿನಲ್ಲಿ ಒಂದು ಟೆಕ್ಸಿಯವರ ಜೀಲತುಂಬಿದೆ ಓವರ್ ಇನ್ಸ್‌ಪೆಕ್ಟರ್ ಮಹಾರಾಯರೂ, ಕೆಲ ಕೆಂಪು ಟೊಪ್ಪಿಯವರೂ ಒಟ್ಟಿಗೆ ಒಂದು ಟೆಕ್ಸಿಯಲ್ಲಿ ಮಂಗಳೂರನ್ನು ಸುತ್ತಾಡುತ್ತಿದ್ದರು ಉದ್ದೇಶ್ಯ ಯಾರಿಗೂ ತಿಳಿದುಬಂದಿಲ್ಲ

* * * *

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸತ್ಯಾಗ್ರಹ ನಿಲ್ಲಿಸಿದೆವು, ನಿಂತಿತು ಎಂಬ ಮಾತು ಈಗ ಚಾಲ್ತಿಯಲ್ಲಿರುವುದಾದರೂ, ಉಡುಪಿಯಲ್ಲಿ ಸ್ವಲ್ಪ ಕುರುಹ ಕಾಣುತ್ತಿದೆ. ನಾಲ್ಕು ಜನ ಸತ್ಯಾಗ್ರಹಿಗಳಿಗೆ ೧೪ನೇ ಕಲಂ ಉಲ್ಲಂಘನೆ ಒಗ್ಗೆ ಮೂರು ತಿಂಗಳ ಶಿಕ್ಷೆ ಒಕ್ಕಿಸ್ ಸಿಕ್ಕಿದೆ

* * * *

ಮುಂಬಾಯಿಯಲ್ಲಿ ಎರಡು ವಸ್ತ್ರದ ದೊಡ್ಡ ಮಾರ್ಕೆಟು ಒಂದು ಇಡಲ್ಪಟ್ಟಿದೆ ಎಷ್ಟು ಸಮಯದ ವರೆಗೆ ಎಂಬುದು ಬಂದು ಇಟ್ಟವರೆ ನಿರ್ಧರಿಸಲಿಲ್ಲ ಮುಂಬಾಯಿ ಸತ್ಯಾಗ್ರಹರಂಗಕ್ಕೆ ಮೊದಲನೇ ಸ್ಥಾನದಲ್ಲಿದೆ

* * * *

ವಲ್ಲಭಾಯಿ ಪಟೇಲರಿಗೆ ಮೊದಲನೇ ಆಮಂತ್ರಣ ಕೊಟ್ಟಾಯಿತು ಎರಡನೇ ಬಂಧನ ಆಮಂತ್ರಣ ಯಾವಾಗ ಹೊರಡುತ್ತದೊ

ಕೇವಲ ಕಡಿಮೆ ಕ್ರಯ.

ಕ್ರಯ ರೂ 1-14-0 ಮಾತ್ರ. ನಿಕ್ಕಲ್ ಕೇಸಿನ ಛಪ್ಪಟ್ಟೆ ಗಡಿಯಾರ, ಬಹು ಸಮಯ ಬಾಳಿ, ಒಳ್ಳೇ ಸಮಯ ತೋರಿಸುವದು ಸಿಲ್ಕು ಪಟ್ಟಿಯೊಂದಿಗೆ ರೂ 3-8-0 ನಂಬ್ರ 2 ರೂ 4-0-0 ನಂಬ್ರ 3 ರೂ. 5-0-0. (ಮೂರುವರುಷದ ಗೆರೆಂಟಿ ಇದೆ)

ಅಂಚೆವೆಚ್ಚ ಅಣೆ ೬
ಇಂಗ್ಲೀಷಿನಿಂದ ಕಾಗದ ಬರೆಯಿರಿ

R C. MUKERJEE,
*18/2 Hari Paul Lane*
CALCUTTA.

# Grand Clearing Sale!

ಜಗತ್ಪ್ರಸಿದ್ಧವಾದ ನಮ್ಮ "ಒಟ್ಟೊ ಫುಲಾರಾಮ" ಸುಗಂಧದ ಐದು ಬಾಟ್ಲಿಗಳನ್ನು ಮೂರು ರೂಪಾಯಿಗೆ ಕೊಳ್ಳುವವರು ಈ ಕೆಳಗಿನವುಗಳನ್ನು ಧರ್ಮಾರ್ಥವಾಗಿ ಪಡೆಯುವರು. -

1 ಕರವಸ್ತ್ರ, 1 ಫೌಂಟೆನ್ ಪೆನ್ನು, 1 ಕ್ಲಿಪ್, 1 ಪರಿಮಳದ ಎಣ್ಣೆ, 1 ಸುಗಂಧ ಸಾಬೂನು, 1 ಅಂದವಾದ ಸಿಗರೆಟು ಕೇಸು 12 ಸ್ವಾತ್ರದ ಮೊಳೆಗಳು, 1 ಕೋಪಿಯಿಂಗ್ ಪೆನ್ಸಿಲು, 1 ಸೆಟ್ಟು ಗಿಲೀಟು ಗುಂಡಿಗಳು, 1 ಕನ್ನಡಿ, 1 ಬಾಚಣಿಗೆ, 1 ಕತ್ತರಿ 1 ಸ್ಪ್ರಿಂಗ್ ಬ್ರಷ್, 1 ಹರಳಿನ ಉಂಗುರ

ಅಂಚೆವೆಚ್ಚ ಅಣೆ 0-8-0
ಇಂಗ್ಲೀಷಿನಲ್ಲಿ ಬರೆಯಿರಿ

Indian Stores
*6 Beadon Street*
CALCUTTA


## ನೋಟೀಸು

ಪುತ್ತೂರು ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ
ಕ್ರಮ ನಂಬ್ರ 741/1930

ಸಂಕಮ್ಮ ಹೆಂಗ್ಸು, ಮಂಜು ಪೂಜಾರಿಯ ಹೆಂಡತಿ — ಪುತ್ತೂರು ತಾಲೂಕು ಅರ್ಯಾಪು ಗ್ರಾಮದ ಕೂರೇಲು ಎಂಬಲ್ಲಿ- ವಾದಿಳು

ಮಾಂಕು ಪೂಜಾರಿ, ಮೈಂದ ಪೂಜಾರಿ ಅಳಿಯ ಸದ್ರಿ ಅರ್ಯಾಪು ಗ್ರಾಮದ ಬಳಿಕೆ ಎಂಬಲ್ಲಿರುವವ- ಪ್ರತಿವಾದಿ.

ಮೇಲ್ಕಂಡ ವ್ಯಾಜ್ಯವು ಪ್ರತಿವಾದಿಯ ಹಾಜರಾತಿಯ ಬಗ್ಗೆ ವ ಸ್ಟೇಟುಮೆಂಟು ಬಗ್ಗೆ ಸಹಾ ಗಡುವಿನ ಇಸವಿಯ ಡಿಸೆಂಬರ ತಿಂಗಳ ತಾರೀಕು ೩ನೇ ದಿವಸ ಹಗಲು ಹತ್ತು ಘಂಟೆಗೆ ಸದರಿ ಕೋರ್ಟಿನಲ್ಲಿ ವ್ಯಾಯದೆ ಆಗಿರುವದರಿಂದ ಸದ್ರಿ ವ್ಯಾಯದೆಗೆ ಸದ್ರಿ ಪ್ರತಿವಾದಿಯು ಹಾಜರಾಗಿ ಉತ್ತರಿಸಲಿಕ್ಕೆ ತಪ್ಪಿದರೆ ಆತನನ್ನು ಶಿಕ್ಷ್ಯಾವಾಗಿ ಏಕಪಕ್ಷ ವಿಚಾರಣೆಯಿಂದ ತೀರ್ಮಾನ ಕೊಡಾದೀತು ಎಂದು ಸದ್ರಿ ಕೋರ್ಟು ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸಿಯದೆ.

ಪುತ್ತೂರು
ತಾ ೮-೧೧ ೩೦ } **H P. A. Jain.**
Pleader for Plaintiff

## ನೋಟೀಸು

**ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.**
O P ನಂಬ್ರ 91/1930

ಅಮ್ಮೆಂಬಳ ರಾಮರಾವ್—ಅರ್ಜಿದಾರ

ಮಂಗಳೂರು ಶಹಾರಿನಲ್ಲಿ ಮೃತಪಟ್ಟ ಬೆಂದರ್ಕ ನಾರಾಯಣರಾಯರಿಗೆ ಬರತಕ್ಕ ಸಾಲಗಳನ್ನು ವಸೂಲು ಮಾಡುವರೆ ತನಗೆ ಸಕ್ಸೆಶನು ಸರ್ಟಿಫಿಕೇಟು ಕೊಡಿಸಬೇಕಾಗಿ ಅಪೇಕ್ಷಿಸಿ ಅರ್ಜಿದಾರನು ಮೇಲ್ಕಂಡ ಅರ್ಜಿ ದಾಖಲುಮಾಡಿರುತ್ತಾನೆ ಸದರಿ ಅರ್ಜಿಯು ತಾ 1—12—30ಕ್ಕೆ ತನ್ಕಿಗೆ ಇಟ್ಟಿರುತ್ತದೆ ಈ ಬಗ್ಗೆ ಆಕ್ಷೇಪಿಸುವವರು ತಮ್ಮ ಆಕ್ಷೇಪಣೆಗಳನ್ನು ಸದರಿ ತಾರೀಕಿನ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಈ ಕೋರ್ಟಿನ ಮುಂದೆ ಹಾಜರುಮಾಡತಕ್ಕದ್ದು ಎಂತ ಈ ಮೂಲಕ ತಿಳಿಸುವದಾಗುತ್ತದೆ

ಮಂಗಳೂರು,
ತಾ. 17-11-30. } **G. Somashekara Rao,**
Vakil for Petitioner.


**The Cochin Soap Works,**
IRENJALAKUDA

ದಿ ಕೊಚ್ಚಿನ್ ಸೋಪ್ ವರ್ಕ್ಸ್.
ಇರಿಂಜಾಲಕುಡ

ಕೊಚ್ಚಿ ವಸ್ತು ಪ್ರದರ್ಶನ ಪಟ್ಟಣಗಳಲ್ಲಿ 1928 '29-'30ನೇ ವರ್ಷಗಳಲ್ಲಿ ನಡೆದ ಎಕ್ಸಿಬಿಶನ್‌ಗಳಲ್ಲಿ ಬೆಳ್ಳಿಯ ಪದಕಗಳೊಂದಿಗೂ ಅನೇಕ ಯೋಗ್ಯತಾ ಪತ್ರಗಳು ನಮಗೆ ದೊರಕಿರುತ್ತವೆ.

ಬೇಬಿ ಬೊರೆಕ್ಸ್ ಸೋಪ್, ಚಟ್ಟ್ ಫ್ಲವರ್ ರೋಸ್ ಸೆಂಟೆಡ್ ಸೋಪ್, ಜೋನ್ಸನ್ಸ್ ಬಾರ್ ಸೋಪ್ ಕೋಲ್ ಟಾರ್ ಸೋಪ್ ಮುಂತಾದ ಹೆಸರುವಾಸಿಯಾದ ಸಾಬೂನುಗಳನ್ನು ತಯ್ಯಾರ ಮಾಡುವ ಸಂಸ್ಥೆಯಾಗಿರುವದು

ಬೇಬಿ ಬೊರೆಕ್ಸ್ ಸೋಪ್—ಸ್ನಾನಕ್ಕೆ ಉತ್ತಮ ಉತ್ಪತ್ತಿ, ಬಟ್ಟೆ ಒಗೆಯುವದಕ್ಕೂ ಮೈ ತೊಳೆಯುವದಕ್ಕೂ ಉಪಯೋಗಿಸಬಹುದು ಪ್ರಾಣಿಗಳ ಕೊಬ್ಬು ಅಥವಾ ಆಪಾಯಕರವಾದ ದ್ರವ್ಯಗಳು ವರ್ಜಿತವಾಗಿರುವದು ಅಲ್ಲದೆ ಎಲ್ಲಾ ಸೋಪುಗಳ ಬಿಕ್ರೀಯಲ್ಲಿ ತಯಾರಾದ ಸಾಬೂನುಗಳನ್ನು ಸಂಹರಿಸುವದು ಸುಲಭ ಬೆಲೆ ಒಂದು ಪೌಂಡಿನ ಕ್ರಯ 6 ಆಣೆ ಮಾತ್ರ. ಮಲ್ಲನ ನವೆಯುವದು ಹೆಚ್ಚು ಕಾಲ ಬರುವದು

ರೆಡ್ ಫ್ಲವರ್ ರೋಸ್ ಸೆಂಟೆಡ್ ಸೋಪ್—ಇವುಗಳು ಸಾಬೂನುಗಳಲ್ಲಿ ಉತ್ಕೃಷ್ಟವಾಗಿರುವವು ಗುಲಾಬಿ ಮತ್ತು ಜೆಸ್ಮಿನ್ ಸುಗಂಧ ಎಣ್ಣೆಗಳ ಪ್ರತಿದಿನ ಉಪಯೋಗಿಸಬಹುದು ಕ್ರಯ 1 ಆಣೆ ಮಾತ್ರ

ಜೋನ್ಸನ್ಸ್ ಬಾರ್ ಸೋಪ್—ಬಟ್ಟೆಗಳನ್ನು ತೊಳೆಯಲು ಉಪಯೋಗಿಸಬಹುದು, ಕೆಲವು ಅತ್ಯವಶ್ಯ ಪ್ರಯೋಜನವುಳ್ಳವಾಗಿವೆ ಬಟ್ಟೆಗಳನ್ನು ಬಹಳ ಜಾಗ್ರತೆಯಿಂದ ಶುಚಿಮಾಡುವದು ಬಾರು ಒಂದಕ್ಕೆ 4ಆಣೆ ಬಟ್ಟೆಗೆ ಯಾವ ಹಾನಿಯೂ ಉಂಟುಮಾಡುವದಿಲ್ಲ ಅದನ್ನು ಮತ್ತಷ್ಟು ಬಲವಂತವನ್ನಾಗಿ ಮಾಡುತ್ತದೆ

ಕೋಲ್‌ಟಾರ್ ಸೋಪ್—ಚರ್ಮದ ರೋಗಗಳನ್ನು ವಾಸಿಮಾಡುವದು ಸ್ನಾನಕ್ಕೆ ಉಪಯೋಗಿಸಬಹುದು ಕ್ರಯ ಬಹಳ ಕಡಿಮೆ

ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸೋಲ್ ಏಜಂಟರು—

ಮೆಸರ್ಸ್ ಬೋಳಂತೂರು ಸಪ್ಲೈ ಕಂಪೆನಿ, ಮಂಗಳೂರು.

ಕೆ. ಜೆ ಲಾಜರ್, ಮೆನೇಜರ್ ಮತ್ತು ಪ್ರೊಪ್ರೈಟರ್.

ಎಲ್ಲಾ ಪಟ್ಟಣ ಹಾಗೂ ಹಳ್ಳಿಗಳಲ್ಲಿ ಒಳ್ಳೆ ಜಾಮೀನು ಕೊಡಲ್ಪಡುವ ಏಜಂಟರು ಬೇಕಾಗಿರುವರು

"If every Wife knew what every Widow knows every Husband would be Insured"

PLACE YOUR LIFE ASSURANCE WITH
THE SOUTH INDIAN
Securing for your clients
1. Low rates of Premium
2. Liberal Policy Conditions
AND FOR YOURSELF
An Agency with attractive Terms of Commission and Salary in
**The South Indian General Assurance Co, Ltd.,**
Anywhere in CANARA DISTRICTS & HYDERABAD STATE
For terms of Agency please apply to —
H R K IYENGAR
Chief Agent
The S I G A Co Ltd,
Sanyasigudda MANGALORE
Managing Agent
K C PANDALAI & CO
78 Mclean Street G T MADRAS

ಜೀವವಿಮೆ ಮಾಡುವವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಸ್ಯೂರೆನ್ಸ್ ಕಂಪನಿ ಲಿಮಿಟೆಡ್ಡಿನಲ್ಲಿ ವಿಮೆಮಾಡಿರಿ
ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳವೆ!
ಪ್ರಿಮಿಯಂ ದರಗಳು ಕಡಿಮೆ!
ಶರ್ತಗಳು ತೀರಾ ಸುಲಭ!
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪನಿಯ ಏಜಂಟರಾಗಿ ಕೆಲಸಮಾಡುವವರಿಗೆ
**ಧಾರಾಳವಾದ ಕಮಿಶನನ್ನೂ ತುಂಬಾ ಸಂಬಳವೂ ದೊರಕುವುದು**
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)
ಚೀಫ್ ಏಜಂಟರು—
ಎಚ್ ಆರ್. ಕೆ ಅಯ್ಯಂಗಾರ್,
ಕನ್ನಡ ಜಿಲ್ಲೆ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ
ದಿ ಎಸ್ ಐ. ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡ ಮಂಗಳೂರು
ಮೇನೇಜಿಂಗ್ ಏಜಂಟರು —
ಕೆ ಸಿ ಪಾಂಡಲೆ ಎಂಡ್ ಕೋ.
78 ಮೆಕ್‌ಲೀನ್ ಸ್ಟ್ರೀಟ್, ಜಿ ಟಿ ಮದ್ರಾಸು

"ಗ್ರೇಂಡ್ ಕ್ಲಿಯರೆನ್ಸ ಸೇಲ್"!
ಬರೇ ಮೂರು ರೂಪಾಯಿ ಗಳ ವ್ಯಾಪಾರದಿಂದ 324 ಅಮೂಲ್ಯವಾದ ಪಾರಿತೋಷಕಗಳು!
ನಮ್ಮ ಸುಗಂಧ ಪೂರಿತವಾದ "ಒಟ್ಟೊ" ಮೋತಿಯಾ ತೈಲದ ಆರು ಬಾಟ್ಲಿಗಳನ್ನು ಒಮ್ಮೆಗೇ ಕೊಂಡುಕೊಳ್ಳುವವರಿಗೆ ಈ ಕೆಳಗೆ ನಮೂದಿಸಿರುವ ೩೨೪ ಅಮೂಲ್ಯ ಬಹುಮಾನಗಳು ಉಚಿತವಾಗಿ ಕೊಡಲಾಗುವವು!

ಬಂಗಾರ ಗಿಲೀಟಿನ ಕೈ ಗಡಿಯಾರ ೧ ಪೆನ್ನು ೧ ಫೌಂಟನ್ ಪೆನ್ನು ೧ ಸೊಗಸಾದ ಕನ್ನಡಿ ೧ ನಾಜೂಕಾದ ಬಾಚಣಿಗೆ ೧, ಪರಿಮಳದ ಸಾಬೂನು ೧ ಬಂಗಾರ ಗಿಲೀಟಿನ ಉಂಗುರ ೧ ಬಂಗಾರ ಗಿಲೀಟಿನ ಗುಂಡಿಗಳ ಸೆಟ್ಟು ೧ ನಾಜೂಕಾದ ಕತ್ತರಿ ೧ ಜೇಬು ಫೌಂಟೆನ್ ಪೆನ್ ೧ ಸಿಗರೇಟು ಕೇಸು ೧, ಕ್ಲಿಪ್ಪು ೧ ಬಂಗಾರ ಗಿಲೀಟಿನ ಫ್ರೇಮು ಇರುವ ಕನ್ನಡಕ ೧ ಲಿಬರ್ಟಿ ಬೆಲ್ಟು ೧ ಸೇಫ್ಟಿ ಪಿನ್ನು ಡಜನ್ ೧, ಪೆನ್ಸಿಲು ೧ ಮಕ್ಕಳ ಗಳ ಬೊಂಬೆ ೧, ಮಣಿ ಗಳ ಸರ ೧ ಪಿನ್ನು ಡಜನ್ ೧ ಹೇರ್ ಪಿನ್ನು ೩೦೦ ಬಂಗಾರ ಗಿಲೀಟಿನ ಬಟನ್ ಜೋಡು ೧, ಬಂಗಾರ ಗಿಲೀಟು ಸೂಜಿಗಳು ೧ ಬಂಗಾರ ಗಿಲೀಟಿನ ಬ್ರೂಚ್ ಮತ್ತು ಜೋಡು ೧ ಪಿನ್ನುಗಳು ೧ ಕೀಪುಗಳ ೧೦೦ ಕೈಚೀಲ ೧ ಬೆಲ್ಟು ೧, ಸೂಜಿಗಳ ೨೫ ಮತ್ತು ಟೂತ್ಬ್ರಶ್ ಜೋಡು ೧ (ಹೆಂಗಸರ ಚಪ್ಪಲಿ ೧ ಜೋಡು) ಉಚಿತಗಳಾಗಿವೆ

ಮೌಲ್ಯ ರೂ ೩-೦-೦ ಮಾತ್ರ. ಟಪ್ಪಾಲು ಹಾಸಲು ೦-೧೦-೦

ಪತ್ರವ್ಯವಹಾರವು ಇಂಗ್ಲೀಷಿನಲ್ಲಿಯೇ ಸಾಗಲಿರುವುದು
ಇಂಡಿಯನ್ ಸ್ಟೋರ್ಸ ಕೋ.
47 ಬೆನಿಯಾಟೋಲಾ ಸ್ಟ್ರೀಟ್, ಪಿ ಓ, ಹಟ್ಖೋಲಾ ಕಲ್ಕತ್ತೆ
**INDIAN STORES CO** 47 Beniatola Street, Po, Hatkhola CALCUTTA

## ಅನುಕ್ರಮಣಿಕೆ.

ಅಗ್ರಲೇಖ.
ರೌಂಡ್ ಟೇಬಲ್ ಕೊನ್ಫರೆನ್ಸು ೮
ಸ್ಫುಟಟಿಪ್ಪಣಿಗಳು ೯
ನೋಟಿಗಳು ೨
ವರ್ತಮಾನ ಸಂಗ್ರಹಗಳು
ವಿದೇಶ ವರ್ತಮಾನ ೮
ಒಳದೇಶ ವರ್ತಮಾನ. ೮ ೯
ಪತ್ರಿಕಾ ಸಂಗ್ರಹ—ಮಂಗಳೂರು, ಉಡುಪಿ, ಮೂಲ್ಕಿ, ಕೋಲಾರ, ಕಲ್ಯಾಣಿ ೯
ವಿವಿಧ ಸಮಾಚಾರಗಳು ೧೧
ಹಿಂದೂಸ್ಥಾನದ ಇತಿಹಾಸ ೧೫
ಕೊಡಗು ದೇಶದ ರಾಜ್ಯಭಾರ ಕ್ರಮ ೨
ಉಪನ್ಯಾಸ ೨
ತಂಜಾವೂರು—ತಿರುಚಿನಾಪಳ್ಳಿ—ಮೊದಲಾದ ದೇಶಗಳಲ್ಲಿ ಉಂಟಾದ ನೆರೆಹಾವಳಿ
ಮಹಾತ್ಮರವರ ಸ್ವಾತಂತ್ರ್ಯ ಸಮಾಚಾರ ೪ ೧೬

# ಸ್ವದೇಶಾಭಿಮಾನಿ.

ತಾರೀಕು ೨೧ನೇ ಶುಕ್ರವಾರ ನವಂಬರ ೧೯೩೦

## ರೌಂಡ್ ಟೇಬಲ್ ಕೊನ್ಫರೆನ್ಸು.

ಲಂಡನ್ನಿನ ಚಕ್ರವರ್ತಿಯವರ ಅರಮನೆಯಲ್ಲಿ ರೌಂಡ್ ಟೇಬಲ್ ಕೊನ್ಫರೆನ್ಸು ಭರದಿಂದ ಸಾಗುತ್ತಿದೆ ಹಿಂದೂಸ್ಥಾನದ ಭಾವೀ ಸರಕಾರವು ಎಂತಹುದುದಿರಬೇಕೆಂದು ನಿಶ್ಚಯಿಸುವುದೇ ಅದರ ಉದ್ದೇಶ ಹಿಂದೂ ದೇಶವು ಸ್ವಾತಂತ್ರ್ಯವಲ್ಲದ ಯಾವ ಬದಲಾವಣೆಯೂ ಬೇಡವೆಂದು ಕಾಯಿದೆ ಭಂಗ ಚಳವಳದಲ್ಲಿ ಕೈಯಿಕ್ಕಿರುವುದಾದರೂ ಆಶಾವಾದಿಗಳು ಈ ಕೊನ್ಫರೆನ್ಸಿನಿಂದ ಏನಾದರೂ ಲಾಭವನ್ನು ದೇಶಕ್ಕೆ ಉಂಟುಮಾಡಿಕೊಳ್ಳಲೇ ಬೇಕೆಂಬ ದೃಢ ನಿಶ್ಚಯದಿಂದ ಲಂಡನ್ನಿನಲ್ಲಿ ಸೇರಿರುವರು

ಮುಂದಾಗಿ ಹಿಂದೂ ಮುಸಲ್ಮಾನ ಒಪ್ಪಂದವನ್ನು ಉಂಟುಮಾಡಿಕೊಳ್ಳುವುದೇ ಕಷ್ಟವಾಯಿತು ಮಿ ಜಿನ್ನಾರವರು ಮುಸಲ್ಮಾನರ ಕಡೆಯಿಂದ ಹದಿನಾಲ್ಕು 'ಪೋಂಟು''ಗಳನ್ನು ಮುಂದೆ ಹಾಕಿದರು, ಅದರ ಚರ್ಚೆಯಲ್ಲಿ ಒಹಳ ಭಿನ್ನಾಭಿಪ್ರಾಯಗಳು ಉಂಟಾದುವು ಆದರೂ ಏನೊಂದರೊಂದು ಒಮ್ಮತಕ್ಕೆ ಬರಬೇಕೆಂಬ ಸದುದ್ದೇಶವು ಎಲ್ಲರಲ್ಲಿಯೂ ಇದೆಯಾಗಿ ತೋರಿ ಬರುವುದರಿಂದ, ಇದು ಮೆಲ್ಲ ಮೆಲ್ಲನೆ ತೀರ್ಮಾನ ಹೊಂದಬಹುದೆಂದು ತೋರುವುದು

ಈ ವರೆಗೆ ನಡೆದ ಭಾಷಣಗಳನ್ನು ನೋಡಿದರೆ ಹಿಂದೂಸ್ಥಾನಕ್ಕೆ ಪ್ರಯೋಜನವಾಗಲಿ, ಆಗದಿರಲಿ, ಸ್ವರಾಜ್ಯ ಸಿಕ್ಕಲಿ ಸಿಕ್ಕದಿರಲಿ, ಒಮ್ಮನಸ್ಸಿನಿಂದ ಎಲ್ಲರೂ ಹಿಂದೀ ಸ್ವರಾಜ್ಯವನ್ನು ಬ್ರಿಟಿಷರಲ್ಲಿ ಕೇಳುವರೆಂಬುದು ಸಮಾಧಾನಕರವಾದ ವಿಷಯವಾಗಿದೆ ಈ ಮೊದಲಿನ ಸಾಯಿಮನ ಕಮಿಟಿಯಂತೆ ಅಂತಃಕಲಹದಿಂದ ಭಿನ್ನ ಭೇದಗಳು ಪರ್ಯಾಲೋಚಿತವಾಗಲಾರವೆಂದು ಈಗ ಆಶಿಸಬಹುದಾಗಿ ತೋರುವುದು ಉದಾರ ಪಕ್ಷವಾದಿಗಳಾದ ಸಪ್ರೂರವರೂ, ಹಿಂದೂ ಕಡೆಯಿಂದ ಜಯಕರರೂ ಮುಸಲ್ಮಾನ ಕಡೆಯಿಂದ ಸರ್ ಮಹಮ್ಮದ್ ಶಾಫಿಯವರೂ, ಆಶ್ರಿತ ರಾಜರುಗಳ ಕಡೆಯಿಂದ ಬಿಕಾನೇರರೂ ಹಿಂದೂಸ್ಥಾನದ ಡೊಮಿನಿಯನ್ ಸ್ಟೇಟಸ್‌ನ ಹಕ್ಕನ್ನು ಏಕ ಕಂಠದಿಂದ ಸಮರ್ಥಿಸಿರುತ್ತಾರೆ ಸ್ವಾರ್ಥಲೋಭವನ್ನೇ ನಡೆಸಿಕೊಂಡು ಬಂದ ಯುರೋಪಿಯನ್ ಪಕ್ಷದ ಸರ್ ಹ್ಯೂಬರ್ಟ್ ಕಾರರವರೂ "ಹಿಂದೀ ಆಶಯಗಳೊಡನೆ ನಮ್ಮ ಸಂಪೂರ್ಣ ಸಹಾನುಭೂತಿಯಿದೆ' ಎಂದು ಹೇಳಬೇಕಾಯಿತು ಆಂಗ್ಲೊ ಇಂಡಿಯನ್ ಪಕ್ಷದ ಪರವಾಗಿ ಕರ್ನಲ್ ಗಿಡ್ನಿಯವರೂ ಹಿಂದೀ ಆಶಯದ ವಿರೋಧವಾಗಿ ಮಾತನಾಡಲಾರದೆ ತಮ್ಮ ಹಕ್ಕನ್ನು ಕಾದಿಟ್ಟರೆ ಸಾಕೆಂದರು ಬ್ರಿಟಿಷ ನಿಯೋಜಿತ ಧೋರಣದ ಪ್ರತಿನಿಧಿಗಳಾಗಿ ರೌಂಡ ಟೇಬಲ್ ಕೊನ್ಫರೆನ್ಸಿನಲ್ಲಿ ಕುಳಿತಿರುವ ಲೋರ್ಡ ಪೀಲರು ಹಿಂದೂಸ್ಥಾನದ ಒಮ್ಮತದ ವಾಣಿಯನ್ನು ಕೇಳಿ ತಮ್ಮ ನಿರೋಧವನ್ನು ಬಲವಾಗಿ ಪ್ರತಿಪಾದಿಸಲು ಶಕ್ತರಾಗಲಿಲ್ಲ

ಆದುದರಿಂದ ಈ ವರೆಗಿನ ರೌಂಡ್ ಟೇಬಲ್ ಕೊನ್ಫರೆನ್ಸಿನ ಘಟನೆಗಳನ್ನು ನೋಡಿದರೆ, ಕೊನ್ಫರೆನ್ಸನ್ನು ಸೇರಿದ ಮೇಲೆ ಪರಸ್ಪರದಿಯಿಂದ ಹೊಂದುಗೆಡಲೇಕಾದರೆ ಹಿಂದೀಯರು ತಮ್ಮ ಕೇಳುವಿಕೆಗಳನ್ನು ಏಕಕಂಠದಿಂದ ಸಾರಬೇಕು. "ನಿಮ್ಮಲ್ಲಿಯೇ ಒಮ್ಮತವಿಲ್ಲದ ಮೇಲೆ ನಾವೇನು ಮಾಡಲಿ?" ಎಂದು ಹೇಳಲ್ಪ ಕಾದುಕೊಂಡಿರುವ ಬ್ರಿಟಿಷ ತಂತ್ರಜ್ಞರ ಆಶಾಭಂಗವಾಗಬೇಕು

ಈ ಬಾರಿ ಆಶ್ರಿತ ರಾಜರು ಕೂಡ ಹಿಂದೀ ಆಶಯಗಳನ್ನು ಪ್ರೋತ್ಸಾಹಿಸಿದ್ದಾರೆಂಬುದು ಅತ್ಯಂತ ತೃಪ್ತಿಕರವಾದ ವಿಷಯವಾಗಿದೆ ಮಾತ್ರವಲ್ಲ ಇದರಿಂದ ಹಿಂದೂಸ್ಥಾನದಲ್ಲಿ ಕನ್ಯಾಕುಮಾರಿ ಯಿಂದ ಕಾಶ್ಮೀರದ ವರೆಗೆ ಉಂಟಾದ ರಾಜಕೀಯ ಜಾಗೃತಿಯೂ ಸ್ಪಷ್ಟವಾಗಿ ಕಂಡುಬರುತ್ತಿದೆ.

ಹೇಗೂ ಕೂಡಿಬಂದಿರುವ ಈ ರೌಂಡ್ ಟೇಬಲ್ ಕೊನ್ಫರೆನ್ಸಿನಲ್ಲಿ ನಡೆಯುವ ಈ ಘಟನೆಗಳನ್ನು ಹಿಂದೀಯರು ಆಗಾಗ ಲಕ್ಷಿಸುತ್ತಾ ಇದ್ದರೆ ಕೆಟ್ಟದಾಗದು ಹಿಂದೂಸ್ಥಾನವು ಸ್ವಾತಂತ್ರ್ಯವನ್ನೇ ಬಯಸುವುದು ಸಹಜವಾದರೂ, ಪ್ರಕೃತದ ಕಾಲಕ್ಕನುಸಾರವಾಗಿ, ಸಂದರ್ಭವನ್ನು ನೋಡಿ ದೇಶದ ಹಿತದ ಮತ್ತು ಶಾಂತತೆಯ ಉದ್ದೇಶದಿಂದ, ಆ ಆಶಯವನ್ನು ಕೆಲ ಮಟ್ಟಿಗೆ ತಗ್ಗಿಸುವುದು ಅಗತ್ಯವಾಗಬಹುದು ಮತ್ತು ದೇಶದ ಸ್ವಾಭಿಮಾನಕ್ಕೂ, ಅಭಿವೃದ್ಧಿಗೂ ಅನುಕೂಲವಾದ ಡೊಮಿನಿಯನ್ ಸ್ಟೇಟಸ ಆಗಲಿ ಅಂತಹ ಸುಧಾರಣೆಯು ದೊರೆಯುವುದು ಸಾಧ್ಯವೆಂದಾದರೆ, ಅಥವಾ ರೌಂಡ್‌ಟೇಬಲ್ ಕೊನ್ಫರೆನ್ಸಿನಲ್ಲಿ ಅಂತಹ ತೀರ್ಮಾನವು ಉಂಟೆಂದರೆ ದೇಶವು ತನ್ನ ತೀವ್ರ ಚಳವಳವನ್ನು ತಗ್ಗಿಸಲಿಕ್ಕೂ ಒಂದು ಸಂದರ್ಭವುಂಟಾಗುವುದು.

ಇನ್ನು Unitary ಅಂದರೆ ಒಂದೇ ಕೇಂದ್ರಿತ ಪ್ರಭುತ್ವದ ಸರಕಾರವು ಒಳ್ಳಿಯದೊ ಇಲ್ಲವೇ Federal ಅಂದರೆ ಸಂಯುಕ್ತ ರಾಷ್ಟ್ರರೂಪದ ಸರಕಾರವು ಒಳ್ಳಿಯದೊ ಎಂಬ ಒಂದು ಪ್ರಶ್ನೆಯು ಇದೆ ದ್ವಿತೀಯ ಕ್ರಮವನ್ನು ಹಲವರು ವಿರೋಧಿಸುವರಾದರೂ ಸರಿಯಾದ ಕ್ರಮದಲ್ಲಿ ದೇಶದ ರಾಜಕೀಯ ಮತ್ತು ಸಾಂಪತ್ತಿಕ ಬೆಳವಣಿಗೆಗೆ ಸಹಾಯವಾಗಬಹುದಾದ ರೀತಿಯಲ್ಲಿ ಯಾವ ತರದ ಸರಕಾರವನ್ನು ರೂಪಿಸಿದರೂ ಹಿಂದೀಯರು ನಿರಾಕರಿಸಲಾರರು

---

## ವಿದೇಶ ವರ್ತಮಾನ

ಮಾನ್ಯ ಜಯಕರರು ಚಕ್ರಗೋಷ್ಠಿಗಾಗಿ ಇಂಡಿಯದಿಂದ ಹೋದ ಪ್ರತಿನಿಧಿಗಳೊಬ್ಬರು ಕಳೆದ ಮಂಗಳವಾರದ ಸಭೆಯಲ್ಲಿ ಮಹಮ್ಮದಿ ಡೆಲಿಗೇಟರ ಪರವಾಗಿ ಮಿ ಜಿನ್ನರು ಮುಂದೆ ತಂದ ೧೪ ಕರಾರುಗಳ ಕುರಿತು ಚರ್ಚೆ ನಡೆಯಿತು ಮಿ ಜಯಕರರು ಮಹಮ್ಮದೀ ಡೆಲಿಗೇಟರೊಡನೆ ಚರ್ಚೆ ನಡೆಸಿದರು ಆದರೆ ಜಯಕರರಿಗೂ ಮಹಮ್ಮದೀಯ ಪ್ರತಿನಿಧಿಗಳಿಗೂ ಯಾವ ತರದ ಸಂಬಂಧವೂ ಇಲ್ಲವೆಂತ ತೋರುತ್ತದೆ ಹಾಗೂ ಮುಸಲ್ಮಾನರ ಕರಾರುಗಳಿಗೆ ಮಿ ಜಯಕರರು ಒಪ್ಪಲಿಲ್ಲವೆಂದು ತಿಳಿದು ಬರುತ್ತದೆ

— ಮಿ ಸಪ್ರೂರವರು ೨ ೩ ಭಾಷಣಗಳನ್ನು ಕೊಟ್ಟಿರು ಎಲ್ಲಾ ಭಾಷಣಗಳು ಹಿಂದೀ ಪ್ರತಿನಿಧಿಗಳಿಂದ ಮಾತ್ರವಲ್ಲದೆ ಬ್ರಿಟಿಷ್ ಪ್ರಭುಗಳಿಂದಲೂ ಕೂಡ ಯೋಗ್ಯ ಪುರಸ್ಕಾರಗಳನ್ನು ಪಡೆದಿರುವುವೆಂದು ತಿಳಿದು ಬಹು ಸಂತೋಷ ಇಂಡಿಯದ ಪರಿಸ್ಥಿತಿಯ ವಿಷಯದಲ್ಲಿ ಮಿ ಸಪ್ರೂರವರು ನಾಟಕ ರೂಪದಂತಿರುವ ಭಾಷಣಗಳನ್ನು ಕೊಟ್ಟು ಸರ್ವರಿಗೂ ಆನಂದ ಪಡಿಸಿದರಲ್ಲದೆ ವಿಷಯವು ನೆರೆದ ಸಭಿಕರ ಮನಸ್ಸಿಗೆ ಮುಂದಟ್ಟಾಗುವಂತೆ ವಿವರಿಸಿದರು ಆ ಕುರಿತು ಮುಖ್ಯ ಮಂತ್ರಿಯಾದ ಮಿ ಮೆಕ್ಡೊನಾಲ್ಡರಿಗೆ ತುಂಬಾ ಸಂತೋಷ ಉಂಟಾಗಿ ಸಪ್ರೂರವರಿಗೆ ಅಭಿನಂದನೆಗಳನ್ನು ಹೇಳಿದರಂತೆ ಅವರ ಭಾಷಣದ ರಚನೆಯಲ್ಲಿ ವಿಧೇಯತೆ ನ್ಯಾಯ ಸಮ್ಯಭಾವ ಸಂಪೂರ್ಣತೆ ಮೊದಲಾದ ವಿಷಯ ವಿಶೇಷಗಳು ಅಡಕವಾಗಿದ್ದವು, ಸೈಮನ್ ಮತ್ತು ಇರ್ವಿನ್ ಪ್ರಭುಗಳು ಮಾಡಿದ ರಿಪೋರ್ಟುಗಳ ಆಧಾರದಿಂದ ಇಂಡಿಯದ ಸ್ಥಿತಿಗತಿಗಳನ್ನು ನಿರ್ಧರಿಸಬಾರದೆಂದೇ ಇವರ ವಾದ

— ಟೋಕಿಯೋ ಎಂಬಲ್ಲಿ ಪ್ರೀಮಿಯರ ಹಾಮಾಗುಚಿ ಎಂಬವರನ್ನು ರೈಲ್ವೇ ಸ್ಟೇಶನಿನಲ್ಲಿ ತರುಣನೊಬ್ಬನು ತಿವಿದು ಗಾಯಪಡಿಸಿದನು ಈ ವಿಷಯದಲ್ಲಿ ಗಾಯಗೊಂಡಿದ ವ್ಯಕ್ತಿಯು ಮರಣಯಾತನೆಯಿಂದ ನರಳುತ್ತಿರುವನೆಂದೂ ತಿಳಿದುಬರುತ್ತದೆ ಅಪರಾಧಿಯನ್ನು ಪೋಲೀಸರು ಪತ್ತೆಹಚ್ಚಿ ಚಾರ್ಜ ಮಾಡಿರುವರು ಈತನು ಅನೇಕ ವರುಷಗಳಿಂದಲೂ ಮಂಚೂರಿಯಾದಲ್ಲಿ ಹಲವು ಕೊಲೆಗಳನ್ನು ದರೋಡೆಗಳನ್ನೂ ನಡೆಸುತ್ತಿದ್ದನಂತೆ

ರಷ್ಯಾದಲ್ಲಿ ಸಾಲ್ವೇಶನ್ ಸೈನ್ಯದ ಕಮಿಷನರು ಸಭೆಸೇರಿ ಸರ್ವಸಮ್ಮತಿಯಿಂದ ಸಂಸ್ಥೆಯ ಎಲ್ಲಾ ಅಧಿಕಾರವು ಇದುವರೆಗೆ ನಡೆದುಬಂದಂತೆ ಒಬ್ಬನಿಂದಲೇ ನಿರ್ವಹಿಸಲ್ಪಡದಂತಲೂ ಆ ಬಗ್ಗೆ ಟ್ರಸ್ಟೀಸ ಲಿಮಿಟೆಡ್ ಸಂಸ್ಥೆಯೊಂದನ್ನು ಏರ್ಪಡಿಸಬೇಕೆಂತಲೂ ಠರಾವುಗಳು ಪಾಸುಮಾಡಿರುವರು

— ಬಿಕಾನೀರ ಮಹಾರಾಜರು ಚಕ್ರಗೋಷ್ಠಿ ಸಮ್ಮೇಳನದಲ್ಲಿ ಹೇಳಿದಂತೆ ಬ್ರಿಟಿಷ ಪ್ರಭುತ್ವವು ಇಂಡಿಯಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡಿಕೊಡದಲ್ಲಿ, ಇಂಡಿಯವು ಕೋಮನ್‌ವೆಲ್ತಿನಿಂದ ಬಿಂಗಡಿಸಲ್ಪಡುವುದರಲ್ಲಿ ಸಂದೇಹವಿಲ್ಲವೆಂದು ತಿಳಿದುಬರುತ್ತದೆ

— ಪ್ರೆಸ್ಟನ್ನಿನ ಬಿಶಪ್ಪರು ಲಂಕಾಷೈರ ನಗರದ ಅನೇಕ ಕಡೆಗಳಲ್ಲಿ ಲೇಬರ್ ಸರಕಾರದ ಸಭೆಗಳನ್ನು ಸೇರಿಸಿ ಇಂಡಿಯಾದೇಶದ ಕಾರ್ಮಿಕರುಗಳ ಕುರಿತು ಉಪನ್ಯಾಸಗಳನ್ನಿತ್ತರು ಅಂತೂ ಭಾಷಣಗಾರರು ಭಾರತೀಯರ ಮೇಲೆ ಪೂರ್ಣ ದಯೆಯನ್ನು ತೋರಿಸಿರುವರೆಂದು ತಿಳಿದುಬರುತ್ತದೆ. ಹಲವು ಇಂಗ್ಲೀಷ ಬಂಧುಗಳೂ ಕೂಡ ಭರತಖಂಡದ ಕೆಲಸಗಾರರ ಉಪಕಾರಗಳನ್ನು ಎಣಿಸಿ ಮರುಕಗೊಂಡರಂತೆ.

---

## ಒಳದೇಶ ವರ್ತಮಾನ.

— ಕರಾಚಿಯಲ್ಲಿ ಕಳೆದ ಮಂಗಳವಾರ ಪೋಲೀಸು ಸ್ಟೇಶನಿನ ಕಂಪೌಂಡೊಳಗೆ ೧೨ ಇಂಚು ಉದ್ದದ ಒಂದು ಖಡ್ಗವು ದೊರೆತಿರುವದು ಸದರಿ ಆಯುಧವು ಹೊಯಿಗೆಯಿಂದ ತುಂಬಿದ ಒಂದು ರಟ್ಟಿನ ಪೆಟ್ಟಿಗೆಯಲ್ಲಿ ದೊರೆತಿರುವುದೆಂದೂ ತಿಳಿದುಬರುತ್ತದೆ ಆಯುಧದ ಹಿಡಿಯಲ್ಲಿ ಭಯಾನಕವಾದ ವಾರ್ತೆಯೊಂದು ಕೆತ್ತಲ್ಪಟ್ಟಿದ್ದಿತು.

ಮುಂಬಾಯಿಯ ನಗರ ಸಂಸ್ಥೆಗೆ ಮಿ ಜೋಸೆಫ್ ಬೆಪ್ಟಿಸ್ಟ ಎಂಬವರು ಹೊಸ ಪ್ರೆಸಿಡೆಂಟರಾಗಿರುವರು

— ಹಿಮೆನ್‌ಸಿಂಗ ಎಂಬಲ್ಲಿ ಸರಕಾರವು ರೈತರ ಕಷ್ಟ ವಿಮೋಚನೆಗಾಗಿ ೬೫ ೦೦೦ ರೂಪಾಯಿಗಳನ್ನು ಸೆಂಕ್ಷನ್ ಮಾಡಿರುವದು ಸದರಿ ವಿವೇಚನ್ನು ಜಮಾಲ ಪುರದಲ್ಲಿಯೂ ಕಿಶೋರ ಜಂಗ್ ಸಬ್‌ಡಿವಿಜನಿನಲ್ಲಿಯೂ ಹಂಚುವರೆಂದು ತಿಳಿದುಬರುತ್ತದೆ

— ಮುಂಬಾಯಿಯಲ್ಲಿ ಪಿ. ಜೋಶಿ ಎಂಬವರು ತನ್ನ ಕಟ್ಟೋಣವನ್ನು ಕಾಂಗ್ರೆಸಿನವರ ಉಪಯೋಗಾರ್ಥವಾಗಿ ಬಿಟ್ಟುಕೊಟ್ಟರೆಂಬ ಆಪಾದನೆಯ ಮೇಲೆ ಸೆಕೆಂಡ್ ಕ್ಲಾಸು ಮ್ಯಾಜಿಸ್ಟ್ರೇಟರು ಸದರಿಯವರನ್ನು ೫ ತಿಂಗಳ ಕಠಿಣ ಶಿಕ್ಷೆಗೆ ಗುರಿಪಡಿಸಿರುವರು

— ನಾಗಪುರದಲ್ಲಿ ಕೌನ್ಸಿಲು ಚುನಾವಣೆಯ ಸ್ಥಳಗಳಲ್ಲಿ ಪಹರೆಯು ತೊಡಗಿರುವದು ಸಹಾಯ್ಯಕರಾದವರನ್ನು ಕೈದುಮಾಡುತ್ತಲೇ ಇರುವರು

— ಮುಂಬಾಯಿಯ ಹೈಕೋರ್ಟಿಗೆ ಒಬ್ಬ ಎಡಿಷನಲ್ ಜಡ್ಜರನ್ನು ನಿಯಮಿಸಿರುವರು ಮೊದಲೇ ಹತ್ತು ಮಂದಿ ಇದ್ದರು ಹೊಸದಾಗಿ ನೇಮಿಸಲ್ಪಟ್ಟ ಮಿ ಬಿ ಜೆ ವಾಡಿಯಾರವರು ಹನ್ನೊಂದನೆಯವರು ಇವರು ೧೭ನೇ ತಾರೀಕಿಗೆ ಚಾರ್ಜ ವಹಿಸಿರುವರೆಂದು ತಿಳಿದುಬರುತ್ತದೆ

ಮುಂಬಾಯಿಯ ಕಾಂಗ್ರೆಸ ಸಮಿತಿಯವರು ವಿದೇಶಿ ಬಟ್ಟೆ ವ್ಯಾಪಾರಿಗಳ ಮಳಿಗೆಗಳ ಮೇಲೆ ತಮ್ಮ ನೋಟೀಸುಗಳನ್ನಿತ್ತು ಬಹಿಷ್ಕಾರ ಚಳವಳಕ್ಕೆ ಭಾಗಿಗಳಾಗಬೇಕೆಂದು ಈ ಮೊದಲೇ ಸಾರುತ್ತಿದ್ದರಷ್ಟೆ ಇಂಥಾ ಬಹಿಷ್ಕಾರ ಹಾಕಿದುದರಿಂದಾಗಿ ವ್ಯಾಪಾರಸ್ಥರನೇಕರು ಬಹಳ ಕ್ಲೇಶಕ್ಕೆ ಸಿಗಿಬಿದ್ದಿರುವರು ಇವರ ಉದ್ಧಾರಕ್ಕಾಗಿ ಸ್ವದೇಶಿ ಮಿಲ್ ಮಾಲೀಕರಿಗೂ ಸ್ವದೇಶಿ ವ್ಯಾಪಾರಸ್ಥರಿಗೂ ಒಂದು ಒಪ್ಪಂದವಾಗುವ ಸಂಭವವಿರುವದು ಅದರ ಶರ್ತಗಳೆಂದರೆ—

೧ ವ್ಯಾಪಾರಿಗಳೆಲ್ಲರೂ ಮುಂದೆ ಪರದೇಶೀ ಜವಳಿಯನ್ನು ತರಿಸುವುದೇ ಇಲ್ಲವೆಂದು ಪ್ರತಿಜ್ಞೆ ಮಾಡಿಕೊಳ್ಳುವುದು ೨ ಈ ಒಪ್ಪಂದದ ಕಾರ್ಯಕ್ರಮಗಳು ಜ್ಯಾರಿಯಲ್ಲಿರುವ ವರೆಗೂ ವಿದೇಶಿ ಬಟ್ಟೆಯ ವ್ಯಾಪಾರಸ್ಥರು ತಮ್ಮ ಕೂಡೆ ಶೇಖರಿಸಿಡಲ್ಪಟ್ಟ ಬಟ್ಟೆಯನ್ನು ಜವಾಬ್ದಾರಿಯಾಗಿರಿಸುವರೆ ಮಿಲ್ ಯಜಮಾನರೊಡನೆ ಅಥವಾ ಅವರಿಂದ ಅಧಿಕಾರ ಹೊಂದಿದ ವ್ಯಾಪಾರದ ಏಜಂಟರ ವಶವಿರಿಸುವದು ೩ ಸ್ವದೇಶಿ ವ್ರತವನ್ನಾಚರಿಸುವ ಜವಳಿ ವ್ಯಾಪಾರಿಗಳು ತಾವು ಭದ್ರತೆಗಾಗಿ ಇಡಬಹುದಾದ ವಿದೇಶೀ ಬಟ್ಟೆಯ ಬದಲಾಗಿ, ಮಿಲ್ ಮಾಲೀಕರು ಸದರಿ ಬಟ್ಟೆಯ ಮೌಲ್ಯದಲ್ಲಿ ನೇಕಡಾ ೭೦ರಷ್ಟು ಮೌಲ್ಯದ ಸ್ವದೇಶೀ ಬಟ್ಟೆಯನು ಸಾಲಕೊಡುವ ವ್ಯವಸ್ಥೆಯನ್ನು ಏರ್ಪಡಿಸುವದು ೪ ವಿದೇಶಿ ಜವಳಿ ವ್ಯಾಪಾರಸ್ಥರಿಂದ ಜವಾಬ್ದಾರಿಯಾಗಿ ಪಡೆಕೊಂಡ ಮಿಲ್ ವರ್ತಕರ ಸಂದೇಶ ಅರಿವೆಯು, ಕಾಂಗ್ರೆಸ್ ಸಮಿತಿಯವರು ಠರಾವುಗಳಂತೆ ವಿನಿಯೋಗಿಸಲ್ಪಡುವದು ೫ ಈ ಒಪ್ಪಂದವು ಬಹಿಷ್ಕಾರ ಚಳವಳದ ಅಂತ್ಯದ ವರೆಗೂ ಜ್ಯಾರಿಯಲ್ಲಿ ಇರುವದು ಎಂದು ಮೊದಲಾದ ಶರತ್ತುಗಳಿಂದ ಕೂಡಿದ ಒಪ್ಪಂದವೊಂದು ಶೀಘ್ರದಲ್ಲೇ ಮುಂಬಾಯಿಯಲ್ಲಿ ಜ್ಯಾರಿಯಾಗುವದೆಂದು ತಿಳಿದುಬರುತ್ತದೆ

— ಮೋತಿಲಾಲರ ಸುಪುತ್ರಿಯಾದ ಶ್ರೀಮತಿ ಕೃಷ್ಣಾ ನೆಹರುರವರಿಗೆ ವಿಧಿಸಲ್ಪಟ್ಟ ಜುಲ್ಮಾನೆಯನ್ನು ಯಾರೋ ಕೊಟ್ಟರಂತೆ ಈ ಕುರಿತು ಮೋತೀಲಾಲ್ಜಿಯವರು ಬರೆಯುವದೇನಂದರೆ — ಕೃಷ್ಣೆಯಾದ ನನ್ನ ಮಗಳಿಗೆ ವಿಧಿಸಲ್ಪಟ್ಟ ೫೦ ರೂಪಾಯಿ ಜುಲ್ಮಾನೆಯನ್ನು ಯಾರೋ ಸರಕಾರಕ್ಕೆ ಕೆತ್ತಿರುವರೆಂದು ತಿಳಿದುಬರುತ್ತದೆ ಈ ವರ್ತಮಾನವು ನಿಜವಾದ್ದಾದರೆ ಜುಲ್ಮಾನೆ ಕೊಟ್ಟ ಆಸಾಮಿಯು, ನನಗೆ ನನ್ನ ಮಗಳಿಗೆ ಮತ್ತು ಇಡೀ ದೇಶಕ್ಕೆ ದ್ರೋಹಿಯೆಂದೇ ತಿಳಿಯುತ್ತೇನೆ ಆತನ ಹೆಸರು ಈ ಕಾಲದ ವರೆಗೂ ಗುಪ್ತದಿಂದಿರದು ಆತನನ್ನು ನಾನು ಅಜಾತಶತ್ರುವೆಂದೇ ಬಗೆಯುತ್ತೇನೆ

— ರೌಂಡ್‌ಟೇಬಲ್ ಸಭೆಯಲ್ಲಿ ಚಕ್ರವರ್ತಿಗಳು ಮಾಡಿದ ಭಾಷಣವು ಇಂಡಿಯದಲ್ಲಿಯೂ ಕೇಳಿಸುವಂತೆ ಲಾಹೋರಿನ ರೇಡಿಯೊ ಕ್ಲಬ್ಬಿನವರು ಪ್ರಯತ್ನಿಸಿದರು

— ಕರಾಚಿಯ ವರ್ತಕನೊಬ್ಬನು ನಾನೊಬ್ಬ ರೋಬಿನ್‌ಹುಡ್ ಎಂದು ಹೇಳಿದನಂತೆ ಈತನು ದೊಡ್ಡ ಕಳ್ಳನು, ತಾನು ಕರಾಚಿಯಲ್ಲಿ ವಸತಿ ಮಾಡಿದ ಸ್ವಲ್ಪ ಸಮಯದಲ್ಲಿಯೇ, ಕರಾಚಿ ವ್ಯಾಪಾರಸ್ಥರಿಂದ ಸುಮಾರು ೨೫೦೦೦ ರೂ.ಗಳನ್ನು ಮೋಸದಿಂದ ದರೋಡೆಮಾಡಿದನು ಅನೇಕ ಫೋರ್ಜರಿ ಕೇಸುಗಳು ಈತನ ಮೇಲೆ

ಹೆಸು, ಅವುಗಳಲ್ಲಿ ತಪ್ಪಿಸಿಕೊಂಡವನು ಕರಾಚಿಯ ಕ್ಲಾರ್ಕ್ ಸ್ಟ್ರೀಟ್ ರಸ್ತೆಯಲ್ಲಿ ತೆರೆಯಲ್ಪಟ್ಟ 'ಕಾಂತಿಲಾಲ್ ಚಿಮನ್ ಲಾಲ್' ಎಂಬ ದೊಡ್ಡದೊಂದು ಫರ್ಮಿನ ಮನೇಜರನು, ನಗರದ ಅನೇಕ ವರ್ತಕರೊಡನೆ ಸ್ನೇಹ ಬೆಳೆಸುತ್ತಿದ್ದು, ಅವರೆಲ್ಲರಿಗೆ ಕೊನೆಗೆ ಟೋಪಿ ಹಾಕಿ, ಪತ್ತೆ ಇಲ್ಲದೆ ಓಡಿಹೋದನಂತೆ! ಅನೇಕ ವರ್ತಕರ ಲಕ್ಷಾಂತರ ಬೆಲೆಯ ಕೈ ಚೀಟಿಗಳು ಮತ್ತು ಹುಂಡಿಗಳನ್ನು, ಸದರಿ ಮ್ಯಾನೇಜರನು ಸ್ವಾಧೀನಪಡಿಸಿದ್ದನಂತೆ! ಇದಕ್ಕಾಗಿ, ಮೋಸಹೊಂದಿದ ವರ್ತಕರು, ಅನೇಕ ದಿನ ಮುಚ್ಚಲ್ಪಟ್ಟಿದ್ದ ಸದರಿ ಅಂಗಡಿಯನ್ನು ಪೋಲೀಸು ಸಹಾಯದಿಂದ ಪ್ರವೇಶಿಸಿ ನೋಡಲು, ಒಂದು ಕಬ್ಬಿಣದ ಪೆಟ್ಟಿಗೆ (Iron Safe) ಯು ಸಿಕ್ಕಿರುವದು. 'ರೋಬಿನ್ ಹುಡ್'ನ ವಿಷಯಗಳಿಂದ ಕೂಡಿದ ಒಂದು ಕಾಗದವೂ ದೊರಕಿರುವದು. ಕಾಗದದ ಅಭಿಪ್ರಾಯದಂತೆ, ರೋಬಿನ್ ಹುಡ್ ಎಂಬವನು ಕರಾಚಿಯ ಅನೇಕ ವರ್ತಕರು, ತಮ್ಮ ಹಣವನ್ನು ಬಡವರ ಕಷ್ಟಗಳನ್ನು ನೀಗಾಡಿಸಲಿಕ್ಕಾಗಿ ಉಪಯೋಗಿಸದ ಪ್ರಯುಕ್ತ, ಅಂಥವರ ಐಶ್ವರ್ಯವನ್ನು ರೋಬಿನ್ ಹುಡ್ಡನು ಸೂರೆಮಾಡಿರುವ ವಿಷಯವು ಸಹಜವಾಗಿರುವದೆಂದೂ ಬರೆದಿದ್ದಿತು. ಪೋಲೀಸರು ಆ ಫರ್ಮಿಗೆ ಸಂಬಂಧಿಸಿದ ಸ್ಟಾಕ್ ರೆಜಿಸ್ಟರ್, ಮತ್ತು ಕೆಲವು ಪತಸೊತ್ತುಗಳನ್ನು ವಶಪಡಿಸಿ, ಇತ್ತ ಹಚ್ಚುವ ವಿಷಯದಲ್ಲಿ ಪ್ರಯತ್ನಿಸುವರೆಂದು ತಿಳಿದುಬರುತ್ತದೆ

— ನವಾಶಿಲ್ಲಿಯಲ್ಲಿ, ಕಟ್ಕರಾಜ್ಯದ ಮಹಾರಾಜರು, ಇಂಡಿಯ ರಾಜರ ಸಮಿತಿಯ ಪರವಾಗಿ, ಜೋರ್ಜ್ ಚಕ್ರವರ್ತಿಗಳಿಗೆ, ತಮ್ಮವರ ಹೃದಯಪೂರ್ವಕ ವಿನಂತಿಗಳನ್ನೂ ಸ್ವಾಮಿಭಕ್ತಿಯನ್ನೂ ತಿಳಿಸುವ ಅಭಿನಂದನ ಪತ್ರಿಕೆ ಮುಖೇನ ತಿಳಿಸುವರು. ಚಕ್ರವರ್ತಿಯವರು ಹಿಂದೆ ಮಾಡಿದ ಚರಗೋಷ್ಠಿಯ ಸಾಫಲ್ಯವನ್ನು ಹೊಂದಿ ಹಿಂದೇ ಅವರ ಕೋರಿಕೆ ಚಕ್ರವರ್ತಿಯವರು ಅಂತಿ ಸಮಾಚಾರಕ್ಕೆ ಉತ್ತರವನ್ನೂ, ದಯಪಾಲಿಸುವರು

— 'ಗವರ್ನರ್ ಇನ್ ಕೌನ್ಸಿಲ್' ಇವರು ಠಿವಿಸ್ತು ಕಲೆಕ್ಟರರಿಗೆ ೧೪೪ ಕಲಮಿನ ಅಧಿಕಾರವನ್ನು, ಹಗಲು ಹೊತ್ತಿನ ಯಾವ ಸಮಯದ ಲ್ಲಿಯೂ ಜಪ್ತಿಮಾಡಬಹುದೆಂಬ ಹೆಚ್ಚಿನ ಅಧಿಕಾರವನ್ನು ಕೊಟ್ಟಿರುವರೆಂದು ತಿಳಿದು ಬರುತ್ತದೆ,

— ಕರಾಚಿಯ ರೋಬಿನ್ ಹುಡ್' ಎಂಬ ದರೋಡೆಗಾರನು ಬರೆದ ಪತ್ರವು ಕೈಸೇರಿರುವದು ಅದರ ಅಭಿಪ್ರಾಯವನ್ನು ಈ ಕೆಳಗೆ ಕೊಡಲಾಗಿದೆ

ಪತ್ರದಲ್ಲಿ ಹೇಳುವಂತೆ ರೋಬಿನ ಹುಡ್ಡನು ಸಿಂಧ ಪ್ರಾಂತ್ಯದಲ್ಲಿ, ನೆರೆಯ ಹಾವಳಿಯಿಂದ, ಉಂಟಾದ ರೈತರ ಕಷ್ಟಗಳನ್ನು ಪತ್ರಿಕೆ ಓದಿ ತಿಳಿದು ತುಂಬಾ ಮನನೊಂದನು. ಅದಕ್ಕಾಗಿ ಆತನು ಹೊಸದೊಂದು ಆಲೋಚನೆಯನ್ನು ಮಾಡಬೇಕಾಯಿತು ಆತನು ಆಲೋಚಿಸಿದಂತೆ, ಐಶ್ವರ್ಯವಂತರೇ ಬಡವರ ಬಡತನವನ್ನು ಹೋಗಲಾಡಿಸಲು ಶಕ್ತಿಯುಳ್ಳವರೆಂದು ತಿಳಿದುಬಂದಿತು. ಅಂದಿನಿಂದ ಆತನು, ಅನೇಕ ಊರ ವರ್ತಕರೊಡನೆ ಸ್ನೇಹ ಬೆಳಸಿ ಅವರ ಹಸರಿನ ಹುಂಡಿಗಳನ್ನೂ, ಇತರ ಧಾಕಲೆಗಳನ್ನೂ ಬಹಳ ಆಶ್ಚರ್ಯ ರೀತಿಯಿಂದ ವಶಮಾಡಿ, ದುಡ್ಡು ಮಾಡಿದನಂತೆ! ಮತ್ತು ಹಾಗೆ ಸಂಪಾದಿಸಿದ ಹಣವು, ಸಿಂಧೂದೇಶದ ಬಡವರ ಹಿತಕ್ಕಾಗಿಯೇ ವ್ಯಯ ಮಾಡಲ್ಪಡುವದೆಂದೂ ಬರೆದಿದ್ದಿತು. 'ಒಬ್ಬ ಬಡ ಮನುಷ್ಯ' ಎಂದು ಪತ್ರಕ್ಕೆ ಸಹಿಯನ್ನು ಹಾಕಿರುವನು

— ಅಮೃತಸರದಲ್ಲಿ ಪೋಲೀಸರು ಗುಲಾಮ್ ಮಹಮ್ಮದ್ ಎಂಬವರ ಮನೆಗೆ ದಾಳಿಯಿಕ್ಕಿದರು, ಶೋಧೆ ನಡೆಯಿತು. ಮೂರು ಜನ ವ್ಯಕ್ತಿಗಳ ದಸ್ತಗಿರಿಯೂ ನಡೆಯಿತು. ಕೈವಶಮಾಡಲ್ಪಟ್ಟವರ ಕೈಯಲ್ಲಿ ೩ ಪಿಸ್ತೂಲುಗಳೂ ಕೆಲವು ತೋಟೆಗಳೂ ಸಿಕ್ಕಿದವು. ಇವರು ಲಾಹೋರಿನ ಬಾಂಬು, ಸ್ಫೋಟನದ ಮೊಕದ್ದಮೆಯಲ್ಲಿ ಸೇರಿದವರೆಂದು ಪೋಲೀಸರು ಊಹಿಸಿರುವರಂತೆ! ಬೇಗಾಗುವದರ ಮೊದಲು ಅವರನ್ನು, ಪತ್ತೆ ಹಚ್ಚುವದಕ್ಕಾಗಿ ಲಾಹೋರಿಗೆ ಕಳುಹಿಸಿದ್ದಾರೆ. ಕೈವಶಮಾಡಲ್ಪಟ್ಟವರು ತಮ್ಮ ಹೆಸರುಗಳನ್ನು ಮಾತ್ರ ಹೇಳಲಿಲ್ಲವಂತೆ!

— ಪೆಷಾವರ್ ಎಂಬಲ್ಲಿ, ಒಂದು ರೈಲುಗಾಡಿಯು, ಮೋಟಾರು ಬಸ್ಸಿನೊಡನೆ ಹಿಡಿದುಬಿದ್ದುದರಿಂದ ೧೪ ಮಂದಿ ಜಖಂ ಪಟ್ಟಿರುವರೆಂದೂ, ೫ ಮಂದಿ ಕೊಲ್ಲಲ್ಪಟ್ಟಿರುವರೆಂದೂ ತಿಳಿದುಬರುತ್ತದೆ ಗಾಯಹೊಂದಿದವರೆಲ್ಲರೂ ಮಹಮ್ಮದೀಯರಂತೆ!

ಮೈಸೂರು ದೇಶದಲ್ಲಿ ನೆರವೇರಿಸಲ್ಪಟ್ಟ ಹೆಂಗಸರ ಕಾನ್ ಫರೆನ್ಸಿಗೆ ಯುವರಾಣಿಯರು ಅಧ್ಯಕ್ಷರಾಗಿದ್ದರು ಅವರ ತನ್ನ ಭಾಷಣದಲ್ಲಿ ಮೈಸೂರೊಳಗಿನ ಸ್ತ್ರೀ ಸಮಾಜದ ಅಭಿವೃದ್ಧಿಯ ಕುರಿತು ಕೆಲ ಮಾತುಗಳನ್ನಾಡಿದರು. ವಿದ್ಯಾಭ್ಯಾಸದ ಮಟ್ಟಿಗೆ ಇದ್ದ ಕುಂದಕಗಳನ್ನು ವ್ಯಕ್ತಪಡಿಸಿದರು. ಮಾತ್ರವಲ್ಲದೆ ಯೋಗ್ಯರೀತಿಯ ಶಿಕ್ಷಣವು ಸಾಮಾಜಿಕ ಕೆಡುಕುಗಳನ್ನೂ ನಿವಾರಿಸಲು ಮೂಲಕಾರಣವೆಂದ್ರು ತಿಳಿಯಪಡಿಸಿದರು. ಪ್ರೆಸಿಡೆಂಟರ ಅಧ್ಯಕ್ಷತೆಯಲ್ಲಿ ಮೈಸೂರು ನಗರದೊಳಗಿರುವ ಎಲ್ಲಾ ಹುಡುಗಿಯರಿಗೆ ಒತ್ತಾಯದ ವಿದ್ಯಾಭ್ಯಾಸ ಕ್ರಮಗಳನ್ನು ಏರ್ಪಡಿಸಬೇಕೆಂದು ಠರಾವುಗಳು ಪಾಸಾದವು

— ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕಾರ್ಪೋರೇಶಿಯಮ್ ಮತ್ತು ಕಾಶ್ಮೀರು ಶಾಲುಗಳ ವ್ಯಾಪಾರಿಗಳು, ಮೈಸೂರು — ಇವರ ೫ ಸುಂದರವಾದ ಕ್ಯಾಲೆಂಡರುಗಳು ಸ್ವದೇಶಾಭಿಮಾನಿಯ ಕೈಸೇರಿರುವವು. ಕ್ಯಾಲೆಂಡರುಗಳು ಅಂದವಾದ ಮುದ್ರಣದಿಂದ ಛಾಪಿಸಲ್ಪಟ್ಟಿವೆ

— ಡೆನೆಟರಿ ಎಂಬಲ್ಲಿನ ಜಡ್ಜರಾದ ಎಸ್. ಡೀ ಎಸ್ ಎಂಬವರು ನವೀನ ರೀತಿಯ ತನಿಖೆಯೊಂದನ್ನು ನಡೆಸಿದರು. ಅವರು ಲೈಟ್ ಇಲ್ಲದೆ ತನ್ನ ಮೋಟಾರ್ ಕಾರನ್ನು ಓಡಿಸಿದರು. ಇದು ನಿಜವಾಗಿಯೂ, ಮೋಟಾರು ಗಾಡಿಗಳಿಗೆ ಸಂಬಂಧಪಟ್ಟ ಕಾನೂನಿಗೆ ವಿರೋಧವಷ್ಟೆ! ಆದುದರಿಂದ ಜಡ್ಜರು ತಾನು ಮಾಡಿದ ತಪ್ಪಿತಕ್ಕಾಗಿ, ತನಿಖೆ ನಡೆಸುವವರಾರೆಂದು ಆಲೋಚಿಸಹತ್ತಿದರು. ಕೊನೆಗೆ ಅವರ ಕೋರ್ಟಿನಲ್ಲಿ, ಅವರ ವಿಚಾರಣೆಯನ್ನು, ಅವರೇ ನಡೆಸಿ ಜುಲ್ಮಾನೆಯನ್ನು ತನಗೆ ತಾನೇ ವಿಧಿಸಿಕೊಂಡರಂತೆ;

ಇದೇ ರೀತಿಯ ಇನ್ನೊಂದು ಕಥೆಯು, ಕೆಲಕಾಲ ಹಿಂದೆ ಸೌತ್ ಆಫ್ರಿಕದಲ್ಲಿಯೂ ನಡೆದಿರುವದಂತೆ! ಒಬ್ಬ ಮ್ಯಾಜಿಸ್ಟ್ರೇಟರು ತನ್ನ ಡಿಪ್ಯುಟಿಯೊಡನೆ, ಮೋಟಾರ್ ಕಾರಿನಲ್ಲಿ, ಲೈಟ್ ಇಲ್ಲದೆ, ತಿರುಗಿದರು, ಮೋಟಾರ್ ಆಕ್ಟನ್ನು ಉಲ್ಲಂಘಿಸಿದರು. ತನಿಖೆ ನಡಿಸುವವರಾರು? ಎಂದು ತಮ್ಮೊಳಗೆ ವಿವಾದ ಹುಟ್ಟಿತು. ಕೊನೆಗೆ ಅವರ ನಿರ್ಧಾರವೆಂದರೆ — ಒಬ್ಬನ ವಿಚಾರಣೆಯನ್ನು ಇನ್ನೊಬ್ಬ ನಡಿಸುವದು, ಆ ಹೋಲಿ ವಿಚಾರಣೆ ಮಾಡಿದವನನ್ನು, ತನಿಖೆ ಮುಗಿದವನು, ವಿಚಾರಿಸುವದು. ಈ ರೀತಿಯ ನಿಯಮಗಳನ್ನಿಟ್ಟು ವಿಚಾರಣೆ ನಡೆಯಿತು. ಮ್ಯಾಜಿಸ್ಟ್ರೇಟರು, ಡಿಪ್ಯುಟಿಗೆ ೫ ಶಿಲ್ಲಿಂಗ್ ಜುಲ್ಮಾನೆ ಮಾಡಿದರು, ಅದರೆ ಡಿಪ್ಯುಟಿಯು ಮ್ಯಾಜಿಸ್ಟ್ರೇಟರಿಗೆ ೧೦ ಶಿಲ್ಲಿಂಗು ಜುಲ್ಮಾನೆ ಕೊಡಬೇಕೆಂದು ತೀರ್ಪು ಮಾಡಿದರು

— ಕಲ್ಕತ್ತೆಯಲ್ಲಿ ಡಾ। ನಾರಾಯಣ ಚಂದ ರೈ ಮತ್ತು ೯ ಜನ ಬಂಗಾಲಿ ಜನರ ಮೇಲೆ ಸ್ಪೆಶಲ್ ಟ್ರಿಬ್ಯೂನಲವರು ಇಂಡಿಯನ ಪಿನಲ್ ಕೋಡಿನ ಕಾನ್ಸ್ಪಿರಸಿ ಆಕ್ಟು, ಮರ್ಡರ್ ಆಕ್ಟು, ಎಕ್ಸ್‌ಪ್ಲೋಸಿವ್ ಆಕ್ಟು ಮುಂತಾದ ಪ್ರಕರಣದ ಮೇರೆಗೆ ಅನೇಕ ಚಾರ್ಜುಗಳನ್ನು ಹೊರಿಸಿರುವರೆಂದು ತಿಳಿದುಬರುತ್ತದೆ

— ಅಹಮ್ಮದಾಬಾದದಲ್ಲಿ ಮಿ। ವಲ್ಲಭಭಾಯಿಯವರು ಮಹಾದೇವ ದೇಸಾಯಿಯವರೊಡನೆ ರೈಲ್ವೆ ಸ್ಟೇಶನಿನಲ್ಲಿ ಬಂದಿಳಿದರು. ಸ್ಟೇಶನಿನಲ್ಲಿ ಜನಸಮುದಾಯವು ವಲ್ಲಭಭಾಯಿಯವರ ಸಂದರ್ಶನಾರ್ಥವಾಗಿ ನೆರೆದಿದ್ದಿತು. ಅವರನ್ನು ಸನ್ಮಾನಿಸುವದಕ್ಕಾಗಿ ದೊಡ್ಡದೊಂದು ಮೆರವಣಿಗೆಯ ಸಿದ್ಧತೆಗಳೂ ಏರ್ಪಟ್ಟಿದ್ದವು. ಆದರೆ ವಲ್ಲಭಭಾಯಿಯವರ ಅಪೇಕ್ಷೆಯಂತೆ ಮೆರವಣಿಗೆಯ ಸಮಾರಂಭವು ಜರಗಲಿಲ್ಲ. ಹಾಗೂ ಅವರಿಬ್ಬರು ಪಟ್ಟಣವನ್ನು ಪ್ರವೇಶಿಸುತ್ತಿರುವಾಗಲೇ ಮ್ಯಾಜಿಸ್ಟ್ರೇಟರು ಅವರಿಬ್ಬರ ಮೇಲೆಯೂ ೧೪೪ನೇ ಪ್ರಕರಣವನ್ನು ಜಾರಿ ಮಾಡಿದರು, ಇನ್ನೂ ಎರಡು ತಿಂಗಳುಗಳ ವರೆಗೆ ಅವರು ಅಹಮ್ಮದಾಬಾದ ಜಿಲ್ಲೆಯೊಳಗೆ ಬಹಿರಂಗ ಭಾಷಣಗಳನ್ನು ಮಾಡಕೂಡದಂತೆ!

— ಅಹಮ್ಮದಾಬಾದದ ಪರದೇಶಿ ಜವಳಿ ಅಂಗಡಿಗಾರರಿಗೆ ಕ್ರಾಂತಿಕಾರಕ ಪತ್ರಗಳು ಹೋಗಹತ್ತಿವೆ. ಪರದೇಶಿ ಅರಿವೆಯನ್ನು ರಾಷ್ಟ್ರೀಯ ಸಭೆಯ ಆಜ್ಞೆಯನ್ನು ಮೀರಿ ಮಾರುವವರಿಗೆ ಗಲ್ಲಿಗೇರಿಸಲ್ಪಡುವದೆಂಬದಾಗಿ ಪತ್ರ

— ಮುಂಬಾಯಿಯಲ್ಲಿ ಪೋಲೀಸರು ಸಭೆ ಚದರಿಸುವಾಗ ಪೋಲೀಸ ಸಾರ್ಜಂಟ್ ರಾದ ಡಾ. ಸೂನನ್ ರವರೂ, ಸಾರ್ಜಂಟ ರಿಮದವರೂ ತಮಗೆ ಸಿಪಾಯರಿಂದ ಹೊಡೆದರೆಂದು ಡಾ. ಮುರೇರವರೂ, ಮಿ. ಹೊರ್ನಿಮನ್ ರವರೂ ಫಿರ್ಯಾದು ದಾಖಲುಮಾಡಿದ್ದಾರೆ

— ಚಿರನೇರಪಲ್ಲಿ ಜಂಗಲ ಸತ್ಯಾಗ್ರಹ ನಡೆದಾಗ ಪೋಲೀಸರು ಸುಕುಮಾರನ ಮೇಲೆ ಗುಂಡು ಹಾರಿಸಿ ಅನರ್ಥ ಮಾಡಿದ ಪ್ರಕರಣದ ಚೌಕಶಿಯನ್ನು ಶ್ರೀ। ಜಮುನಾದಾಸ ಮೆಹಥಾ ಪ್ರಭೃತಿಗಳು ನಡೆಸುತ್ತಿದ್ದಾರೆ. ಆ ಮಂಡಳದ ಮುಂದೆ ಸಾಕ್ಷಿ ಕೊಟ್ಟ ಮೂವರಿಗೆ ಸೆರೆಹಿಡಿಯಲ್ಪಟ್ಟಿತು

— ಲಾಹೋರಿನೊಳಗೆ ಪೋಲೀಸರ ಗುಂಡು ತಾಗಿ ವಿಶೇಷನಾಥ ಎಂಬವನು ತೀರಿಕೊಂಡನು. ದೊಡ್ಡ ಸ್ಮಶಾನಯಾತ್ರೆ ಹೊರಡುವದಿತ್ತು, ಪೋಲೀಸರು ಅಡ್ಡಿಮಾಡಿ ಶವವನ್ನು ಸೆಳೆಕೊಂಡು ಜನಸ್ತೋಮವನ್ನು ಚದರಿಸಿದರು

— ವಾಯುವ್ಯ ಸರಹದ್ದಿನ ಮೇಲಿನ ಕಾಂಜರಬೇಲ ಮುಲಕದಿನ ಮೇಲೆ ತದವಾರ ಕಾಕಿಖೇಲ ಘುಕಾಖೇಲ, ಮುಂತಾದ ಅಫ್ರಿದಿ ಜಾತಿಯವರು ಬ್ರಿಟಿಷ ಸರಕಾರದ ದ್ರೋಹ ಮಾಡುವವರಾದ್ದರಿಂದ ಅವರಿಗೆ ಬ್ರಿಟಿಷ ಪ್ರಜೆಗಳು ಉಳಿಯಲಿಕ್ಕೆ ಮನೆ ಕೊಡಬಾರದು, ಊಡಿಗೆ ತೊಡಿಗೆ ಕೊಡಬಾರದು. ತಿಂಡಿತಿನಿಸ ಕೊಡಲಾಗದು, ವಾಹನ ಕೊಡಲಾಗದು. ಮದ್ದುಗುಂಡು ಕೊಡಲಾಗದು. ಹೀಗೆ ಪೇಶಾವರದ ಡಿಪ್ಯುಟಿ ಕಮಿಶನರರ ಜಾಹೀರನಾಮೆ

— ಕಲಕತ್ತೆಯ ಸರಕಾರ ಗಝೆಟಿನಲಿ ರಾಜ್ಯಕ್ರಾಂತಿಯ ಸಂಶಯದ ಮೇಲೆ ವಿಚಾರವಿಲ್ಲದೆ ಹಿಡಿದ ಕೈದಿಗಳ ನಡುವಳಿಯ ಕುರಿತು ನಿಯಮಗಳಾಗಿವೆ. ಕೈದಿಗಳು ಪ್ರೋಬಿಯಟ್ಟಿಸಿದರೆ, ಪಾರಾಗಲೆತ್ನಿಸಿದರೆ ಅವರ ಮೇಲೆ ಶಸ್ತ್ರದ ಉಪಯೋಗ ಮಾಡಬಹುದು, ಗುಂಡು ಹಾರಿಸಬಹುದು. ಜೈಲ ಅಧಿಕಾರಿಗಳು ಸೆರೆಮನೆ ತಪಾಸ ಮಾಡಬಂದಾಗ ಕೈದಿಗಳು ಎದ್ದು ನಿಲ್ಲಬೇಕು. ಈ ನಿಯಮಗಳಂತೆ ನಡೆಯದಿದ್ದರೆ ಏಕಾಂತವಾಸ ಮೊದಲಾದ ವಿವಿಧ ಶಿಕ್ಷೆಗಳು ವಿಧಿಸಲ್ಪಡುವವು

— ಕಲಕತ್ತಾ ಮುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ ಸುಭಾಷ ಚಂದ್ರ ಬೋಸರವರು ಮಹಾತ್ಮರ ಕ್ಷೇಮಸಮಾಚಾರ ಕೇಳಿದ್ದರು. ನಾನು ಕ್ಷೇಮದಿಂದಿದ್ದೇನೆ, ಅಕ್ಷೇಮವಾದರೆ, ಕೂಡಲೆ ವಿವರಗಳು ಪ್ರಕಟವಾಗುತ್ತವೆ ಎಂಬದಾಗಿ ಮಹಾತ್ಮರು ಉಲ್ಲಾಸದಿಂದ ಉತ್ತರ ಕಳುಹಿದ್ದಾರೆ

ಶ್ರೀ ಕಾಶೀಕ್ಷೇತ್ರದ ಮುನಿಸಿಪಾಲಿಟಿಯವರು ಕೊನೆಗೆ ಸರಕಾರದ ಹೇಳಿಕೆಯಂತೆ ತಮ್ಮ ಚೀಫ್ ಆಫೀಸರರನ್ನು ಪದಚ್ಯುತ ಮಾಡಿದರು. ಈಗ ಆ ಮುನಿಸಿಪಾಲಿಟಿಗೆ ಇನ್ನೊಂದು ನೋಟೀಸು ಕೊಡಲಾಗಿದೆ. 'ಮಾರ್ಚ ೨೨ ೧೮ನೇಗೆ ಗಾಂಧಿದಿನದ ರಜೆ ಅಕ್ಟೋಬರ ತಾ. ೨ನೇ ಗಾಂಧಿ ಜಯಂತಿಯ ರಜೆ, ಎಪ್ರಿಲ್ ೧೩ನೇ ತಾರೀಕಿಗೆ ಜಾಲಿಯನವಾಲಾಬಾಗ ದಿನದ ರಜೆ, ಹೀಗೆ ೩ ದಿನ ರಜೆ ಕೊಡುವದು ಕಾಯದೆಗೆ ಸಮ್ಮತವಾದದಲ್ಲ, ಎಂಬದಾಗಿ ಕಮಿಶನರರು ಬರೆದು ಈ ವಿಷಯ ಬೋರ್ಡಿನ ಕಡೆ ಪುನರಾಲೋಚಿಸಿ ಠರಾಯಿಸಬೇಕಾಗಿ ಅಪ್ಪಣೆ ಮಾಡಿದ್ದಾರೆ. ಬೋರ್ಡಿನವರು ಹಿಂದಿನ ಠರಾವುಗಳನ್ನು ಸ್ಥಿರಪಡಿಸಿದ್ದಲ್ಲಿ ಗಾಂಧಿ ದಿನ ಹಾಗೂ ಜಯಂತಿ ರಜೆಗಳ ಬಗ್ಗೆ ತಮ್ಮ ಆಕ್ಷೇಪವಿಲ್ಲವಾಗಿಯೂ, ಜಾಲಿಯನವಾಲಾಬಾಗ ದಿನ ರಜೆ ಕೊಟ್ಟ ಬಗ್ಗೆ ಮುನಿಸಿಪಾಲಿಟಿಯ ಆಕ್ಟಿನಂತೆ ಮುನಿಸಿಪಾಲಿಟಿಯ ಮೇಲೆ ತಕ್ಕ ಇಲಾಜು ನಡಿಸಲ್ಪಡುವದಾಗಿಯೂ ಎಚ್ಚರಿಕೆ ಕೊಟ್ಟಿದ್ದಾರೆ.

— ಮುಂಬಾಯಿಯಲ್ಲಿ ಇತ್ತೀಚೆಗೆ 'ರಿಪಬ್ಲಿಕನ್ ಆರ್ಮಿ'ಯ ಪರವಾಗಿ ಮುಂಬಾಯಿ ನಗರದ ೪ನೇ ತರಗತಿಯ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಿಗೆ ಬಂಗಾಳಿ ಸೇನಗುಪ್ತನ ಸಹಿ ಇರುವ ಪತ್ರವೊಂದು ಕಳುಹಲ್ಪಟ್ಟಿರುವದಷ್ಟೆ! ಅದೇ ರೀತಿಯ ಇನ್ನೊಂದು ಪತ್ರವು ಮುಂಬಾಯಿ ನಗರದ ಪೋಲೀಸ್ ಡಿಪ್ಯುಟಿ ಕಮಿಷನರಾದ ಖಾನ್ ಬಹದ್ದೂರ ಕಾಶಿಗಾರ್ ಎಂಬವರಿಗೂ ತಲ್ಪಿರುವದು ಎಂದು ತಿಳಿದುಬರುತ್ತದೆ,

## ದಕ್ಷಿಣ ಕನ್ನಡ.

**ಮಂಗಳೂರು:** — ತಾ. ೨೩-೧೧-೩೦ನೇ ದಿನ ಸಾಯಂ ಘಂಟೆ ೪-೩೦ಕ್ಕೆ ಸರಿಯಾಗಿ ಮಂಗಳೂರಿನ ಮಹಿಳಾ ಸಭಾ ಹೋಲ್'ನಲ್ಲಿ ಒಂದು ಗಾಯನ ಸಮ್ಮೇಳನವು ಸೇರಲಿಕ್ಕಿರುವದು. ಮಹಿಳಾ ಸಭೆಯ ಕೆಲವು ಸದಸ್ಯರೂ, ಸ್ನೇಹಿತರೂ, ಇಂಪಾದ ಗಾನದಿಂದ ಸಭಿಕರನ್ನು ಆನಂದಗೊಳಿಸುವರು

ಎಲ್ಲಾ ಮಹಿಳೆಯರ ಸಾದರಾಗಮನವನ್ನಪೇಕ್ಷಿಸುವ,

ಕಾಂಥಿಮಿ, ಆರ್ ಪೂಂಜ,

ಮಹಿಳಾ ಸಭೆಯ ಕಾರ್ಯದರ್ಶಿ

ಮುನಿಸಿಪಲ್ ಆಯುರ್ವೇದ ಧರ್ಮಾಸ್ಪತ್ರೆ, ಚೊಕ್ಕಪಟ್ಟಣ, ಬೋಳೂರು — ಇಲ್ಲಿ ಕಳೆದ ಒಕ್ಟೋಬರ್ ತಿಂಗಳಲ್ಲಿ ಚಿಕಿತ್ಸೆ ಹೊಂದಿದ ರೋಗಿಗಳ ವಿವರ — ೧, ಅಭಿನವ ಸಂಖ್ಯೆ - ೮೫೪೮ ಪೈಕಿ ೭ ಅವಿದ್ಯಾವಿದರು ಸೇರಿ ೫೩೧ ಹಿಂದೂ, ೫೧ ಮುಸಲ್ಮಾನರೂ ೨೩೬ ಕ್ರಿಶ್ಚನ್ನ ಮತ್ತು ೪ ಆಂಗ್ಲೋ ಇಂಡಿಯನ್ನರೂ ಆಗಿದ್ದರು ೩. ಉಪಸ್ಥಿತಿ ದಿನವಹಿ ಸರಾಸರಿ ಹಾಜರಾದ ರೋಗಿಗಳ ಸಂಖ್ಯೆ ೧೩೬ ೪. ಅಧಿಕಸಂಖ್ಯೆ - ಒಂದೇ ದಿವಸದಲ್ಲಿ ಹೆಚ್ಚಾಗಿ ಹಾಜರಾದ ಸಂಖ್ಯೆ ೧೧೯

ನಂಬ್ರ ೨೪೬೩ನೇ ಮಂಗಳೂರು ಕೋಪರೇಟಿವ್ ಟೌನ್ ಬೆಂಕ ಲಿಮಿಟೆಡ್ — ಈ ಬೇಂಕಿನ ವರ್ಷಾವಧಿ ಮಹಾ ಸಭೆಯು ಇದೇ ಬರುವ ಡಿಶಂಬರ ೩೭ನೇ ಆದಿತ್ಯವಾರ ಮಧ್ಯಾಹ್ನ ೩ ಘಂಟೆಗೆ ಈ ಬೇಂಕಿನ ಆಫೀಸಿನಲ್ಲಿ ಜರಗುವದು. ಎಲ್ಲಾ ಮೆಂಬರರು ದಯಮಾಡಿ ಬರಬೇಕಾಗಿ ಅಪೇಕ್ಷಿಸೋಣಾಗುತ್ತದೆ

ಮಂಗಳೂರು ಮುನ್ಸಿಪಾಲಿಟಿಯ ರಿಪೋರ್ಟಿನ ಮೇರೆಗೆ, ಮಂಗಳೂರು ನಗರದ ತಾ. ೧೫ನೇ ನವಂಬ್ರಕ್ಕೆ ಅಂತ್ಯವಾಗುವ ವಾರದಲ್ಲಿ ೩೭ ಜನನಗಳೂ, ೨೩ ಮರಣಗಳೂ ಆಗಿವೆ ಎಂದು ತಿಳಿದುಬರುತ್ತದೆ

**ಪೊಳಲಿ.** — ಶ್ರೀ ರಾಜರಾಜೇಶ್ವರಿ ಕೃಪಾಪೋಷಿತ ಭಜನಾ ಮಂಡಲಿಯವರಿಂದ ಶ್ರೀ ದೇವರ ಸನ್ನಿಧಿಯಲ್ಲಿ ಪ್ರತಿ ವರ್ಷ ಕಾರ್ತಿಕ ಶು ೧೫ರಿಂದ ನಡಿಸಿ ಬರುವ ಸಾಪ್ತಾಹಿಕ ಭಜನೆಯು ಇದೇ ತಾ. ೬ನೇ ಗುರುವಾರ ಹುಣ್ಣಿಮೆ ವರೆಗೆ ಅಹೋರಾತ್ರಿ ವಿಜೃಂಭಣೆಯಿಂದ ಮಹಾ ಭಜನೋತ್ಸವವು ನಡೆಯಿತು. ಇದರೆಡೆಯಲ್ಲಿ ಸಣ್ಣ ಸಣ್ಣ ಎಳೆ ಮಕ್ಕಳ ಭಜನೆಯೂ ಇನ್ನೊಂದೆಡೆಯಲ್ಲಿ ಈ ವರ್ಷವೇ ಹೊಸದಾಗಿ ಪ್ರಾರಂಭಿಸಿದ ಪೊಳಲಿ ಶ್ರೀ ವಿದ್ಯಾವಿಲಾಸ ಶಾಲೆಯ ಹೆಣ್ಣು ಮಕ್ಕಳ ಭಜನೆಯೂ ಪ್ರೇಕ್ಷಕರಿಗೆ ಸಂತೋಷಗೊಳಿಸುತ್ತಿತ್ತು

**ಮೂಲ್ಕಿ:** — ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿಗಳ ತರ್ಕ ಸಂಘದ ೧೫ನೇ ಸಭೆಯು ನಿನ್ನೆ ತಾ. ೧೫-೧೧-೩೦ನೇ ಶನಿವಾರ ಪೂರ್ವಾಹ್ನ ಘಂಟೆ ೮-೩೦ಕ್ಕೆ ಇಲ್ಲಿಯ ಆಕ್ಟಿಂಗ್ ಸಬ್ ರಿಜಿಸ್ಟ್ರಾರ್ ಮಾ. ರಾ. ಎಸ. ಕೆ ಪತ್ತನ್ನ, ಅವರ್ಗಳ್ ಬಿ. ಎ. ರವರ ಅಧ್ಯಕ್ಷತೆಯಲ್ಲಿ ನೆರೆದು ಬಂತು. ಹಾಜರಿಯು ಸಮಾಧಾನಕರವಾಗಿತ್ತು

ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿಗಳ ತರ್ಕ ಸಂಘದ ಕಡೆಯಿಂದ ಇದೇ ತಿಂಗಳ ಕಳೆದ ತಾರೀಕು ೮-೧೧-೩೦ನೇ ಶನಿವಾರ ಅಪರಾಹ್ನ ಘಂಟೆ ೨ರಿಂದ ೩ರ ವರೆಗೆ ಮಾ. ರಾ. ರಾ. ಯಂ. ಉಪೇಂದ್ರರಾವ್ ಎಲ್. ಎಮ್. ಎಂಡ್ ಎಸ್ ಎಲ್ ಎಫ್ ಅಸಿಸ್ಟಾಂಟ ಸರ್ಜನ್ ಮೂಲ್ಕಿ ಇವರು ಪ್ರಥಮ ಚಿಕಿತ್ಸೆಯ ಕುರಿತು ಒಂದು ಅಮೂಲ್ಯ ಭಾಷಣವನ್ನು ಕೊಟ್ಟರು

**ಕಳ್ಳಿಗೆ:** ಇದೇ ಬರುವ ತಾ. ೧೨-೧೨-೩೦ನೇ ಶುಕ್ರವಾರ ರಾತ್ರೆ ೮ ಘಂಟೆಗೆ ಕಳ್ಳಿಗೆ ಬೋರ್ಡ್ ಶಾಲೆಯ ಕಟ್ಟಡದಲ್ಲಿ ಯಕ್ಷಗಾನ ಸಭೆಯ ದ್ವಿತೀಯ ವಾರ್ಷಿಕೋತ್ಸವವನ್ನು ಶ್ರೀಯುತ ಬಲಿಪನಾರಾಯಣ ಭಾಗವತರಿಂದಲೂ ಇತರ ಯಕ್ಷಗಾನ ವಿಶಾರದರಿಂದಲೂ ನೆರವೇರಿಸಲ್ಪಡುವದೆಂತ ಸಂಕಲ್ಪಿಸಿಯದೆ. ಆ ಕುರಿತು ಮಹನೀಯರಿಗೆಲ್ಲಾ ಸುಸ್ವಾಗತವಿದೆ

**ಉಡುಪಿ:** — ೧೪೪ನೇ ಸೆಕ್ಷನನ್ನು ಮೀರಿದರೆಂಬ ತಕ್ಸೀರಿನ ಮೇಲೆ ಶ್ರೀ ಮಂಜುನಾಥ ಕಲ್ಕೂರ ಮಂಜುನಾಥಾಚಾರ್ಯರೇ ಮೊದಲಾದ ೪ ಮಂದಿ ಸತ್ಯಾಗ್ರಹಿಗಳ ಮುಂದರಿಸಿಹೋದ ವಿಚಾರಣೆಯು ತಾ. ೧೮ಕ್ಕೆ ಸ್ಪೆಶಲ್ ಮೆಜಿಸ್ಟ್ರೇಟರ ಮುಂದೆ ನಡೆದು, ನಾಲ್ವರೂ ಮೂರು ಮೂರು ತಿಂಗಳ ಕಠಿಣ ಸಜೆ ವಿಧಿಸಲ್ಪಟ್ಟರೆಂದು ತಿಳಿದು ಬರುತ್ತದೆ

ತಾ. ೧೬ನೇ ಆದಿತ್ಯವಾರಕ್ಕೆ ಜವಾಹರ ದಿನ'ವನ್ನು ಆಚರಿಸಬೇಕೆಂಬ ವಿಜ್ಞಾಪ್ತಿಪತ್ರಿಕಾ ಆದಕ್ಕೆ ತಕ್ಕ ಸಿದ್ಧತೆಗಳು ನಡೆದಿದ್ದವು. ಆದರೆ ಆ ದಿನ ಏನೂ ಕಂಡುಬಾರದುದು ಬಹಳ ಶೋಚನೀಯವಾಗಿದೆ ಬಹುಶಃ ಜವಾಹರ ದಿನ'ವನ್ನು ಮುಂದರಿಸಿಟ್ಟಿರಬಹುದು. ಇದಕ್ಕಾಗಿಯೇ ಮಂಗಳೂರಿನಿಂದ ಬಂದ ರಿಜರ್ವ ಪೋಲೀಸರ ಪ್ರದರ್ಶನೆ ದಿಂದಲೋ ಏನೋ ತಿಳಿಯದು

[illegible] ಮಂಗಳೂರಿನ ಪ್ರಕಾರ [illegible]
[illegible] ಪ್ರಕಾರ [illegible]
[illegible] ಪಂಚಾಂಗ.
([illegible])

| ತಾರೀಖು | ವಾರ | ತಿ. | ಘಳಿಗೆ | ನಕ್ಷತ್ರ | ಘಳಿಗೆ | [illegible] | ಸೂರ್ಯ ಉ | ಅಸ್ತ |
|---|---|---|---|---|---|---|---|---|
| 22 | ಶನಿ | [illegible] | [illegible] | [illegible] | [illegible] | [illegible] | 6 35 | 6 0 |
| 23 | ರವಿ | [illegible] | [illegible] | [illegible] | [illegible] | [illegible] | 6 36 | 6 0 |
| 24 | ಸೋಮ | [illegible] | [illegible] | [illegible] | [illegible] | [illegible] | 6 36 | 6 0 |
| 25 | ಮಂಗಳ | [illegible] | [illegible] | [illegible] | [illegible] | [illegible] | 6 37 | 6. 1 |
| 26 | ಬುಧ | [illegible] | [illegible] | [illegible] | [illegible] | [illegible] | 6 37 | 6 1 |
| 27 | ಗುರು | [illegible] | [illegible] | [illegible] | [illegible] | [illegible] | 6.38 | 6. 1 |
| 28 | ಶುಕ್ರ | [illegible] | [illegible] | [illegible] | [illegible] | [illegible] | 6.38 | 6. 1 |

## ಮಂಗಳೂರಿನ ವಾಯುಸ್ಥಿತಿ.

| ತಾರೀಖು Date | Temperature. ಉಷ್ಣ (ಶಾಖ) Maximum ಹೆಚ್ಚಿನದು | Minimum ಕಡಿಮೆ | Rainfall ಮಳೆ ದಿನದ ಮಳೆ | ಒಟ್ಟು ಮಳೆ |
|---|---|---|---|---|
| 14 | 89—8 | 68—6 | 0—04 | — |
| 15 | 91—3 | 69—7 | — | — |
| 16 | 90—3 | 71—4 | — | — |
| 17 | 91—6 | 75—4 | 0—01 | — |
| 18 | 91—3 | 75—7 | — | — |
| 19 | 89—7 | 75 3 | — | — |
| 20 | 89—8 | 75—0 | — | 136 80 |

## ಮಂಗಳೂರಿನ ಪೇಟೆ ಧಾರಣೆ.

| ಜಿನಸು | ಇಂದು ರೂ. ಆ. | ಹಿಂದಿನ ರೂ. ಆ. |
|---|---|---|
| ಮುಸ್ತು | 7—1[illegible] | 8—0 |
| ಗುಳ್ಳು | 7— | 7—6 |
| ಹೊಸ ರಾಶಿ | 6—8 | — |
| ಉಪ್ಪರ್ ಅಕ್ಕರ್ ಭತ್ತಗೆ | 7—8 | 8—4 |
| ರಂಗೂನು ಬೆಳ್ತಿಗೆ ಗೋಣಿ ಗಳ್ಳ | 10—[illegible] | 10—2 |
| ಸುಗ್ಗಿ | 6—12 | —4 |
| ಎಣ್ಣೆ ಬೆಳ್ತಿಗೆ ಮುಡಿ ಗಳ್ಳ | 6—8 | 6—0 |
| ಗೋಧಿ ಗೋಣಿ ಗಳ್ಳ | 11— | 16—0 |
| ಹುರುಳಿ ಗೋಣಿ ಗಳ್ಳ | 6—8 | — |
| ಕಡಲೆ ಗೋಣಿ ಗಳ್ಳ | 10—8 | 16—5 |
| ತೊಗರಿ ಗೋಣಿ ಗಳ್ಳ | 2—0 | 13 0 |
| ಕಡಲೆಬೇಳೆ ಗೋಣಿ ಗಳ್ಳ | 12—0 | 26—0 |
| ಉದ್ದು ಗೋಣಿ ಗಳ್ಳ | 12—0 | 12 8 |
| ಹೆಸರು ಗೋಣಿ ಗಳ್ಳ | 12—0 | — |
| ಊರು ಬೆಲ್ಲ ಖಂಡಿ ಗಳ್ಳ | 4[illegible]—8 | 52—0 |
| ಉಪ್ಪು ಗೋಣಿ ಗಳ್ಳ | 4—6 | 4—1[illegible] |
| ಕೊಬ್ಬರಿ ಖಂಡಿ ಗಳ್ಳ | 70—0 | [illegible]5 |
| ಕೊಬ್ಬರಿ ಹಿಂಡಿ ಖಂಡಿ ಗಳ್ಳ | 30— | 31—0 |
| ಎಳ್ಳಿಂಡಿ ಖಂಡಿ ಗಳ್ಳ | 2[illegible]—8 | 30—0 |
| ಕೊಬ್ಬರಿ ಎಣ್ಣೆ ಮುಡಿ ಗಳ್ಳ | 5—4 | 6—4 |
| ಎಳ್ಳೆಣ್ಣೆ ಮುಡಿ ಗಳ್ಳ | 6—12 | 7 0 |
| ಹರಳೆಣ್ಣೆ ಬೆಳ್ತಿಗೆ ಗಳ್ಳ | 4—7 | 8 12 |
| ಕೊಬ್ಬರಿ ಸಕ್ಕರೆ ಮುಡಿ ಗಳ್ಳ | 3—9 | 3—4 |
| ಹೊಸ ಹುಣಸೆ | 6—8 | — |
| ಸಾಸಿವೆ ಮುಡಿ ಗಳ್ಳ | 7—8 | 6—0 |
| ಕೊತ್ತಂಬರಿ ಮುಡಿ ಗಳ್ಳ | 2—8 | 3—0 |
| ಪೇಟೆಪ್ ಚಾಕ್ ಖಂಡಿ ಗಳ್ಳ | 440—0 | — |
| [illegible] ಖಂಡಿ ಗಳ್ಳ | 2[illegible] 0 | — |
| ಮೆಣಸು ಮುಡಿ ಗಳ್ಳ | 2[illegible]—0 | — |
| ಗೇರುಬೀಜ ಮುಡಿ ಗಳ್ಳ | 3—12 | — |
| ಅಲ್ಲಮ ಖಂಡಿ ಗಳ್ಳ | 42—8 | 4—0 |
| ಅಂದ್ರ ತಗಡು ಮುಡಿ ಗಳ್ಳ | 14—8 | 14—10 |
| ಅಂದ್ರ ಪಾತ್ರೆಗಳು ಮುಡಿ ಗಳ್ಳ | 20—0 | 21—0 |
| [illegible] ಸೀರು ಗಳ್ಳ | 12—4 | 12—8 |
| [illegible] ತಗಡು ಮುಡಿ ಗಳ್ಳ | 13—0 | 13—0 |
| ಹೊಗೆ ಗಳ್ಳ | 13-0-0 | — |
| [illegible] ಖಂಡಿ ಗಳ್ಳ | 37—8 | 43—12 |
| [illegible] ಚಾಕ್ ಖಂಡಿ ಗಳ್ಳ | 230— | — |
| [illegible] | 100— | 124— |
| [illegible] | 60— | 85— |


# Chikmagalur Public Conveyance Motor Service.
## CHIKMAGALUR.
# ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್
## ಚಿಕ್ಕಮಗಳೂರು.

ತಂತಿ ವಿಳಾಸ ಕನ್ವೆಯನ್ಸ್. Tel. Conveyance.
ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಜಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M. Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

### ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1¼ ಘಂಟೆ ಅವಕಾಶಕೊಟ್ಟು 7¼ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ, ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಅದ ಧರ್ಮಸ್ಥಳ ರೋಡಿಗೆ ದಿನ 1-30ಕ್ಕೂ, ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟ್ಯಾಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು ಕಣ್ಣನ್ನೂರು ಪ್ರಾಂತಗಳಿಗೂ ಅಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10-30ಕ್ಕೆ ಬೆಳ್ತಂಗಡಿಗೂ 11 ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ 12 ಗಂಟೆಗೆ ಚಾರ್ಮಾಡಿಗೂ, 12-30ಕ್ಕೆ ಮೈಸೂರು ಗಡಿಗೂ, ಸೇರಿ ಅಲ್ಲಿಂದ ಒಡನೆ ಹೊರಟು 2 30ಕ್ಕೆ ಕೊಟ್ಟಿಗೆಹಾರಕ್ಕೂ, ಸುಮಾರು 4 ಗಂಟೆಗೆ ಮೂಡಗೆರೆಗೂ, 5 ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿದಲ್ಪಟ್ಟಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7 30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಡರಪೂರ ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 8 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ ಪೂನಾ, ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರವಾಸಿಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ ಎಸ್ ಹನುಮಂತಪ್ಪ, ಪ್ಯಾರಜಾನ್ ಸಾಹೇಬ್, ಕೆ ಸೂರಪ್ಪ ಸೆಟ್ಟಿ
ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ ಪಿ ಸಿ ಕಂಪೆನಿಯವರ
ಟಿಕ್ಕೆಟುಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.



# THE CANARA PUBLIC CONVEYANCE CO., LTD, MANGALORE.
(ESTABLISHED 1914)
# ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,
## ಮಂಗಳೂರು.

### ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ
ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ [illegible] ಮಾರ್ಗವಾಗಿಯೂ ಎರಡಾವರ್ತಿ [illegible] ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕೇವಲ ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ ಒಂದೇ ಶಿಲೆಯಲ್ಲಿ ನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ
ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ
ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲುಪಬಹುದು
'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲುಪುವಿರಿ.
ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.
ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.
ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.
ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಚಾರ್ಮಾಡಿ ಮಾರ್ಗವಾಗಿ ಶಿಮೊಗ್ಗೆಕ್ಕೆ ಹದಿನಾಲ್ಕು ಘಂಟೆಗಳೊಳಗೂ ತಲುಪುವವು.
ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

**Secretary,**
*The Canara Public Conveyance Co., Ltd., Mangalore.*

## ವಿ ವಿ ಧ ಸ ಮಾ ಚಾ ರ ಗ ಳು.

### ಇಂಡಿಯಾ ಡಿಸ್ಪೇಚಿನ ಸಾರಾಂಶ.

ಇಂಡಿಯಾ ಸರಕಾರವು ತಮ್ಮ ಸಲಹೆಗಳನ್ನು ಲಂಡನ್ ಕಾನ್ಫರೆನ್ಸಿಗೆ ಕಳುಹಿಸಿರುವದಷ್ಟೆ! ಅವುಗಳ ಸಾರಾಂಶವನ್ನು ಕೆಳಗೆ ಕೊಡಲಾಗಿದೆ.

೧. ಸೈಮನ್ನರು ತಮ್ಮ ವರದಿಯಲ್ಲಿ ಪ್ರಕಟಪಡಿಸಿದಂತೆ, ಪ್ರಾಂತ್ಯಗಳಿಗೆ ಅಖಿಲ ಭಾರತದ ಹಿತವನ್ನು ಪರ್ಯಾಲೋಚಿಸಿ, ಎಷ್ಟು ಆಡಳಿತೆಯ ಸ್ವಾತಂತ್ರ್ಯವನ್ನು ಕೊಡಬಹುದೋ, ಅಷ್ಟನ್ನು ಮಾತ್ರವೇ ಕೊಡಬಹುದು. ಹಾಗೂ ಸೈಮನ್ ವರದಿಯು ಮಾನ್ಯವೇ

೨. ಚುನಾವಣೆಯ ಸ್ಥಳಗಳನ್ನು, ಚುನಾವಣಾ ಸಮಿತಿಯ ಒಪ್ಪಿಗೆ ಇಲ್ಲದೆ ಬದಲಾಯಿಸಕೂಡದು.

೩ ಎಲ್ಲಾ ಪ್ರಾಂತ್ಯಗಳಲ್ಲಿ ಹಳೇ ಶಾಸನಗಳನ್ನು ನಿರ್ಮಿಸತಕ್ಕದ್ದು.

೪. ಬರ್ಮಾವನ್ನು ಭರತಖಂಡದಿಂದ ಪ್ರತ್ಯೇಕಿಸಬೇಕು

೫. ಇಂಡಿಯಾ ಸರಕಾರವು 'ಡ್ಯಾಯರ್ಕಿ'ಯಾಗಿರುವದು ಉಚಿತ.

೬ ಯುರೋಪಿಯನರ ಮತ್ತು ಆಂಗ್ಲೋ ಇಂಡಿಯನರ ಹಿತಕ್ಕಾಗಿ ಹೆಚ್ಚಿನ ಏರ್ಪಾಡುಗಳು ನಡೆಯತಕ್ಕದ್ದು

೭. ವೈಸರಾಯರು ಸಾಮ್ರಾಜ್ಯ ಸರಕಾರದ ಏಜಂಟರಾಗಿರತಕ್ಕದ್ದು.

. ಭರತಖಂಡದ ಶಾಂತಿ ರಕ್ಷಣಾ ಕಾರ್ಯವು ಪಾರ್ಲಿಮೆಂಟಿಗೆ ಸೇರಿದ್ದು

೯. ಭಾರತದ ಕೇಂದ್ರ ಶಾಸನ ಸಭೆ ಸೈನ್ಯ ಸಂರಕ್ಷಣೆ ಮುಂತಾದ ವಿಚಾರಗಳಲ್ಲಿ ಈಗಿನ ಏರ್ಪಾಡುಗಳೇ ಸ್ಥಿರವಾಗತಕ್ಕದ್ದು

ಎಂದು ಮೊದಲಾದ ಹಲವು ಸಲಹೆಗಳಿಂದ ಕೂಡಿದ ರಿಪೋರ್ಟುಗಳು ಲಂಡನಿಗೆ ಕಳುಹಲ್ಪಟ್ಟಿರುವವು.

* * *

### ನಾಗಪುರದಲ್ಲಿ ಪೋಲೀಸ್ ಕಾರ್ಯಕ್ರಮಗಳು.

ನಾಗಪುರದಲ್ಲಿ ಚುನಾವಣಾ ಸ್ಥಳಗಳನ್ನು ಪಿಕೆಟ್ ಮಾಡಲಾರಂಭಿಸಿರುವರಷ್ಟೆ! ಆ ಕುರಿತು ಪೋಲೀಸರ ಆತಂಕಗಳು ಹೊರಟವೆ ದಸ್ತಗಿರಿಗಳಿಗೆ ಪ್ರಾರಂಭ. ಒಂದು ದಿವಸದೊಳಗಾಗಿ ೧೭ ಮಂದಿಯನ್ನು ದಸ್ತಗಿರಿಮಾಡಿರುವರು ದಸ್ತಗಿರಿ ಮಾಡಲ್ಪಟ್ಟವರೆಲ್ಲರಿಗೂ, ಪಿಕೆಟಿಂಗ ಓರ್ಡಿನೆನ್ಸಿನಲ್ಲಿ ಬರೆಯಲ್ಪಟ್ಟ ಶಿಕ್ಷೆಗಳಲ್ಲಿ ಕಠಿಣವಾದವುಗಳನ್ನೇ ವಿಧಿಸಿರುವರು. ಹೆಚ್ಚಿನ ಜುಲ್ಮಾನೆಯೂ ವಿಧಿಸಲ್ಪಟ್ಟಿರುವದು.

ಚಿಕ್ಕ ಮಕ್ಕಳ ವಾನರಸೇನಾ ಬಲದ ನಾಯಕನಾಗಿದ್ದ ೧೫ ಪ್ರಾಯದ ಸಕ್ಕರದಾಂಡೆ ಎಂಬ ಹುಡುಗನನ್ನು ೬ ತಿಂಗಳ ಕಠಿಣ ಶಿಕ್ಷೆಗೂ, ೩೦೦ ರೂಪಾಯಿಗಳ ಜುಲ್ಮಾನೆಗೂ ವಿಧಿಮಾಡಿರುವರು. ಮಿ. ಗುಲ್ವೆ ಎಂಬ ಸತ್ಯಾಗ್ರಹ ಸಮರಸಂಸ್ಥೆಯ ಕಾರ್ಯದರ್ಶಿಯವರನ್ನು 'ಸಿ' ಕ್ಲಾಸ್ ಜೈಲಿನಲ್ಲಿರಿಸಿರುವರು.

. ಅಬಕಾರಿ ಕಂಟ್ರಾಕ್ಟುದಾರರು ಕೂಡ, ಗುತ್ತಿಗೆಗಳನ್ನು ಏಲಂ ಕರಿಯಬಾರದೆಂದು, ಸತ್ಯಾಗ್ರಹಿಗಳು ಸಾರಿ ಹೇಳುತ್ತಿರುವರು ಕೆಲ ಮರದಿ ಮುಖಂಡರು ೧೦೦ ರೂಪಾಯಿಗಳ ವರೆಗೇರುವ ಜುಲ್ಮಾನೆಗೆ ಒಳಪಟ್ಟಿರುವರು.

* * *

### ಮುಂಬಾಯಿಯ ಇಂಡಿಯನ್ ಚೇಂಬರ್ ಸದಸ್ಯರ ಪತ್ರದ ಸಾರಾಂಶ

ಗುಜರಾತದಲ್ಲಿ, ಸರಕಾರವು ತೀರ್ವೆ ವಸೂಲು ಮಾಡುವದರ ಕುರಿತಾಗಿ ಅಸಮಂಜಸವಾದ ಕ್ರಮಗಳನ್ನು ಕೈಗೊಂಡಿರುವದು ತೆರಿಗೆ ಸಂದಾಯದ ಕಾಲವು ಜನವರಿ ತಿಂಗಳಾಗಿದ್ದರೂ ಕೂಡ, ಸರಕಾರವು ರೈತರಿಂದ ತೆರಿಗೆಯನ್ನು ವಸೂಲು ಮಾಡುವ ಕೆಲಸಕ್ಕೆ ಈಗಲೇ ಕೈ ಹಚ್ಚಿರುವದು. ಕೆಲವರಿಂದ, "ತೆರಿಗೆ ಕೊಡುತ್ತೇನೆಂದು ವಾಗ್ದತ್ತವನ್ನು ಪಡೆದಿರುವದು

ಈ ರೀತಿಯ ಅನ್ಯಾಯವನ್ನು ಸಹಿಸಲಾರದೆ, ಮುಂಬಾಯಿಯ ವರ್ತಕ ಸಮಿತಿಯು ಪರವಾಗಿ ಸರಕಾರಕ್ಕೆ ಈ ಕೆಳಗಿನ ಪತ್ರ ಒಂದನ್ನು ಬರೆದಿರುವರು.

"ಗುಜರಾತಿನಿಂದ ಹೊರಡುವ ರಿಪೋರ್ಟುಗಳಿಂದ ತೋರಿಬರುವಂತೆ, ಆ ದೇಶದ ಬಡರೈತರು ಕರನಿರಾಕರಣೆಯನ್ನು ಪ್ರೋತ್ಸಾಹಿಸಿದುದರಿಂದ, ಜಮೀನು ಮನೆಗಳನ್ನು ಬಿಟ್ಟು, ನೆರೆಹೊರೆಯ ಹಳ್ಳಿಗಳಿಗೆ ಹೋಗಬೇಕಾದ ದುರ್ಗತಿಯು ಲಭಿಸಿರುವದು. ೧೯೩೧ನೇ ಇಸವಿಯ ಜನವರಿ ಮತ್ತು ಮಾರ್ಚ ತಿಂಗಳುಗಳಲ್ಲಿ ಕೊಡಬೇಕಾದ ತೆರಿಗೆಯನ್ನು ಸರಕಾರವು ಈಗಲೇ ವಸೂಲಿ ಮಾಡಹತ್ತಿರುವದು ತೆರಿಗೆ ಕೊಡಲಾರೆವೆಂಬ ಅಸ್ಥೈರ್ಯ ಉಳ್ಳವರಿಂದ, ತೆರಿಗೆ ಕೊಡುವದರ ಕುರಿತು ಒಪ್ಪಂದ ಮಾಡಿಸುವರು. ಮಾತ್ರವಲ್ಲದೆ, ಗತ ತೀರ್ವೆಯನ್ನೂ ಕೂಡ ವಸೂಲಿ ಮಾಡುವರಲ್ಲದೆ, ಈಗಿನ ತೀರ್ವೆಯ ವಸೂಲಾತಿಯಲ್ಲಿ ಸರಕಾರವು ಕೈಕೊಂಡ ಕ್ರಮಗಳು ಕೇವಲ ಅಯೋಗ್ಯವಾಗಿರುವವು. ಈ ವರುಷ, ರೈತರ ದವಸಧಾನ್ಯಗಳಿಗೆ ಕ್ರಯವು ಬಹಳ ಅಗ್ಗವಾಗಿರುವದರಿಂದ, ಅವರ ವರ್ಷಾವಧಿ ಆದಾಯದಲ್ಲಿ ಸಾಧಾರಣ ಸೇಕಡಾ ೫೦ರಷ್ಟು ನಷ್ಟವಾಗುವ ಸಂಭವ ಉಂಟು. ಆದುದರಿಂದ ಸರಕಾರವು, ಈ ವಿಷಯದಲ್ಲಿ ಕರುಣೆ ತೋರಿಸಬೇಕೆಂದು ಅಪೇಕ್ಷಿಸಲಾಗುತ್ತದೆ. ರೈತರ ಕಷ್ಟಗಳು ಹೆಚ್ಚಿದಷ್ಟಕ್ಕೆ, ಸರಕಾರದ ದಬ್ಬಾಳಿಕೆಯೂ ಹೆಚ್ಚುತ್ತಿರುವದು ಕಮಿಟಿಯ ಅರಿವಿಗೆ ಬಂದಂತೆ, ಗುಜರಾತದ ರೈತರು, ರಾಜಕೀಯ ವಿಷಯಗಳ ಕುರಿತು, ಕರನಿರಾಕರಣೆಯನ್ನು ಮಾಡಿರುವರೆಂದು ತೋರುವದಿಲ್ಲ. ಆದರೆ ಸರಕಾರದ ಜುಲುಂ ಮಾತ್ರ, ರೈತರ ಕಡೆಗೆ ಹೆಚ್ಚುತ್ತಿರುವದು ಇದು ಮಾತ್ರ ಅಸಹನೀಯವೆಂದು ತಿಳಿಯಲಾಗುತ್ತದೆ ರೆವಿನ್ಯೂ ಕೋರ್ಟಿನ ಶರ್ತಗಳಂತೆ ಸರಕಾರವು, ತೆರಿಗೆ ವಸೂಲಿಯ ಕುರಿತು, ರೈತರ ಮೇಲೆ ಹೊರಿಸಬಹುದಾದ ಯಾವತರದ ಧೋರಣೆಗಳನ್ನಾದರೂ ಸ್ವೀಕರಿಸಲು ಅವರು ಸಿದ್ಧರಾಗಿರುವರು. ಕೆಲವು ತಾಲೂಕುಗಳಲ್ಲಿ, ಪೋಲೀಸರು ಒಕ್ಕಲಿಗರನ್ನು, ತೆರಿಗೆ ವಸೂಲಿಗಾಗಿ ಹೊಡೆಯುತ್ತಿರುವರು, ಅವರಿಂದ ಬಾಕಿಯಾದ ಹಾಗೂ, ಮುಂದೆ ಸಲ್ಲತಕ್ಕ ತೆರಿಗೆಯನ್ನೂ ಕೂಡ, ಹೆದರಿಸಿ ವಸೂಲಿಮಾಡುತ್ತಿರುವರು ಈ ರೀತಿಯ ಸರಕಾರದ ಅತ್ಯಾಚಾರಗಳನ್ನು ಸಹಿಸಲಾರದೆ, ಅನೇಕ ಬಡ ರೈತರು ತಮ್ಮ ಊರುಮನೆಗಳನ್ನು ಬಿಟ್ಟು ನೆರೆಗ್ರಾಮಗಳಿಗೆ ಪ್ರಯಾಣ ಹೂಡಿರುವರು

ರೈತರ ಸುಖಶಾಂತಿಯೇ ದೇಶೋದ್ಧಾರಕ್ಕೆ ಮೂಲಕಾರಣವು ಆದುದರಿಂದ, ರೈತರಿಗುಂಟಾದ ಕಷ್ಟಗಳು ಅಸಹನೀಯವೆಂದೇ ಕಮಿಟಿಯ ನಿರ್ಧಾರ

* * *

### ಜವಶೇರ್ ಪುರದಲ್ಲಿ ಪೋಲೀಸರು ಗುಂಡು ಬಾರು ಮಾಡಿದರು

ಜವಶೇರ್ ಪುರದಲ್ಲಿ ಹೊಸದೊಂದು ವರ್ತಮಾನ, ಕಳ್ಳು ಸರಾಯಿಗಳ ಮಾರಾಟವು ಹೆಚ್ಚಿರುವದರಿಂದ, ದವಸಧಾನ್ಯಗಳಿಗೆ ಬೆಲೆಯು ಹೆಚ್ಚಾದುವಂತೆ! ಆದುದರಿಂದ ರೈತ್ತಿ ಕೂಲಿಗಳು ಮುಷ್ಕರ ಹಿಡಿದು, ಸರಾಯಿ, ಮಾರಾಟದ ಅಂಗಡಿಗಳ ಮೇಲೆ ಧಾಳಿಕ್ಕಿದರು ಕೂಲಿಯವರ ಉಪಟಳವು ಸಹಿಸಲಾರದಂತಾಯಿತು. ಮದ್ಯದಂಗಡಿಗಳನ್ನು ಕಾಯಲಿಕ್ಕಾಗಿ ಪೋಲೀಸ್ ಸಹಾಯವು ಬೇಕಾಗಿತೋರಿ ಬಂತು ಪೋಲೀಸು ಜವಾನರು ಅಂಗಡಿಗಳನ್ನು ಕಾಯುತ್ತಿರಲು ಒಂದು ದಿನ, ಕೂಲಿಗಳ ಒಂದು ತಂಡವು, ಪಹರೆಮಾಡುತ್ತಿದ್ದ ಪೋಲೀಸು ಜವಾನರನ್ನು ಹೆದರಿಸತೊಡಗಿತು ಕೆಲವು ಪೋಲೀಸಿನವರಿಗೆ ಪೆಟ್ಟು ಬಿತ್ತು, ಒಬ್ಬ ಪೋಲೀಸಿನವನಿಗೇನೋ ಗಾಯಪಡಿಸಿದರಂತೆ! ಆ ಕೂಡಲೇ ಪೋಲೀಸ್ ಅಸಿಸ್ಟಂಟ್ ಸುಪರಿಂಟೆಂಡೆಂಟರು ಈ ವರ್ತಮಾನವನ್ನು ಕೇಳಿ, ಆಯುಧಪಾಣಿಗಳಾದ ಒಂದು ಪೋಲೀಸ್ ತಂಡವನ್ನು ಗಲಭೆ ನಡೆಯುತ್ತಿದ್ದ ಸ್ಥಳಕ್ಕೆ ಕಳುಹಿಸಿದರು ಇವರು ಆ ದಿನ, ಸಂಜೆಯೊಳಗಾಗಿ ೧೦೧ ಮಂದಿಯನ್ನು ದಸ್ತಗಿರಿ ಮಾಡಿದರು

ಅಷ್ಟರಲ್ಲಿ, ಕೂಲಿಯಾಳುಗಳ ಒಂದು ಗುಂಪು ಬಂದು ಕೈದು ಮಾಡಲ್ಪಟ್ಟವರನ್ನು, ಪೋಲೀಸರ ವಶದಿಂದ ಬಿಡಿಸುವ ಪ್ರಯತ್ನ ಮಾಡಿದರು ಕೂಲಿಗಳ ಜುಲುಂ ಹೆಚ್ಚಿತು, ಪೋಲೀಸರಿಗೆ ಸಹಾಯವಿಲ್ಲದಾಯಿತು ಕೊನೆಗೆ ಕೂಲಿಗಳು ಪೋಲೀಸರ ಮೇಲೆ ಕಲ್ಲುಗಳನ್ನು ಎಸೆಯಹತ್ತಿದರು ಅನೇಕ ಪೋಲೀಸರಿಗೆ ಗಾಯವಾಯಿತು. ಆ ಮೇಲೆ ಪೋಲೀಸರು, ಆತ್ಮರಕ್ಷಣೆಗಾಗಿ ಗುಂಡುಹಾರಿಸಬೇಕಾಯಿತು ಸುಮಾರು ೨೩ ಮಂದಿ ಅಪಾಯಕ್ಕೀಡಾದುವರೆಂದು ತಿಳಿದುಬರುತ್ತದೆ ಇಬ್ಬರು ಸತ್ತರು, ೪ ಮಂದಿಗೆ ಕಠಿಣ ಜಖಂ, ಮಿಕ್ಕವರಲ್ಲಿ ಕೆಲವರಿಗೆ ಗಾಯಪಟ್ಟಿರುವರೆಂದು ತಿಳಿದುಬರುತ್ತದೆ ೨೪ ಮಂದಿ ಪೋಲೀಸಿನವರಿಗೂ ಗಾಯವಾಗಿರುವದಂತೆ!

* * *

### ನವಂಬ್ರ ೧ನೇ ತಾರೀಕಿನ 'ಸ್ಟೇಟ್ಸ್ ಮೇನ್' ಪತ್ರಿಕೆಯಲ್ಲಿ ಲಂಡನ್ ಕರೆಸ್ಪೋಂಡೆಂಟರ ಸೂಚನೆ.

ರೌಂಡ್ ಟೇಬಲಿಗಾಗಿ ಹೋದ ಬಂಗಾಳೀ ಡೆಲಿಗೇಟರು ಪ್ಯಾರಿಸ್ ಪಟ್ಟಣವನ್ನು ಸೇರಿದೊಡನೆ, ಅವರಿಗೆ ಫ್ರೆಂಚರೊಡನೆ ಸ್ನೇಹ ಬೆಳೆಸಲು ಕಷ್ಟವಾಯಿತಂತೆ! ಕೊನೆಗೆ ಒಬ್ಬ ಇಂಗ್ಲೀಷ ವ್ಯಕ್ತಿಯು, ಇಂಡಿಯನ್ ಡೆಲಿಗೇಟರ ಸ್ಥಿತಿಯನ್ನು ನೋಡಿದವನಾಗಿ, ಅವರಿಗೆ ಸಹಾಯಮಾಡಿದನಂತೆ! ಆ ಇಂಗ್ಲೀಷ್ ವ್ಯಕ್ತಿಯು, ಡೆಲಿಗೇಟರಿಗೆ ಊಟ ಉಪಚಾರಗಳಿಗೆ ಬೇಕಾದ ಏರ್ಪಾಡುಗಳನ್ನು ಒದಗಿಸಿಕೊಟ್ಟು, ಅವರನ್ನು ರೈಲ್ವೆ ಸ್ಟೇಶನ್ ವರೆಗೆ ತಂದು ಬಿಟ್ಟರು. ಪೋರ್ಟ್ ಸ್ಟೇಶನ್ ಎಂಬಲ್ಲಿ ಇನ್ನೊಂದು ಸೋಜಿಗವು ನಡೆದಿರುವದಂತೆ! ಇಂಗ್ಲೀಷ್ ಪದ್ಧತಿಗಳನ್ನರಿಯದವರೊಬ್ಬರು ಒಬ್ಬ ಪೋಲೀಸನೊಡನೆ ಅಯ್ಯಾ, ನನ್ನ ಮೂಟೆ ಹೊತ್ತವನಿಗೆ ಏನು ಕೊಡಬೇಕು? ಎಂದು ಕೇಳಿದರು ಅದಕ್ಕೆ ಪೋಲೀಸಿನವನು (ಆ ದೇಶದ ಪದ್ಧತಿಯಂತೆ) ಅವನಿಗೊಂದು 'ಬೋಬ' ಕೊಡೆಂದು ಹೇಳಿದನು. ಪ್ರಶ್ನೆ ಕೇಳಿದ ಆಸಾಮಿಯು 'ಬೋಬ' ಎಂದರೇನೆಂದು ಆಶ್ಚರ್ಯಪಟ್ಟು ನಿಂತುಕೊಂಡರು ಅಷ್ಟರಲ್ಲಿ, ಪೋಲೀಸಿನವನು 'ಒಂದು ಶಿಲಿಂಗ್ ಕೊಡಿರಿ' ಎಂದನು ಆ ಮೇಲೆ ಪ್ರಶ್ನೆಮಾಡಿದವರಿಗೆ 'ಬೋಬ' ಎಂಬುದರ ಅರ್ಥವು ತಿಳಿದು ಬಂತು

* * *

### ಬ್ರೈಲ್ಸ್ ಫರ್ಡರವರು ಕೊಟ್ಟ ಸೂಚನೆಗಳು.

ಈಗ ಕೆಲ ದಿವಸಗಳಿಂದಲೂ ಭರತದೇಶದಲ್ಲಿ ಜನರ ಪರಿಸ್ಥಿತಿಯನ್ನು ತಿಳಿಯಲು ಸಂಚರಿಸುತ್ತಿರುವ ಪಾಶ್ಚಾತ್ಯದೇಶದ ಎಚ್ ಎನ ಬ್ರೈಲ್ಸ್ ಫರ್ಡರವರು ಹಿಂದುಪತ್ರಿಕೆಯ ಪ್ರತಿನಿಧಿಯೊಡನೆ ಸಂಭಾಷಿಸುವಾಗ್ಗೆ ತಮ್ಮ ಅಭಿಪ್ರಾಯವನ್ನು ಈ ರೀತಿಯಾಗಿ ತಿಳಿಸಿರುವರು.

ನಾನು ಭರತದೇಶಕ್ಕೆ ಬಂದು ೩ ವಾರಗಳು ಮಾತ್ರವಾಗಿರುವುವು. ಈ ಅವಧಿಯಲ್ಲಿ ನಾನು ಬೊಂಬಾಯಾಧಿಪತ್ಯದ, ಬೊಂಬಾಯಿ, ಸೂರತು, ಪೂನಾ, ಅಹಮ್ಮದಾಬಾದು ಪಟ್ಟಣಗಳಲ್ಲಿ ಸಂಚರಿಸಿ ನೋಡಿದೆನು. ಇವೆಲ್ಲಕ್ಕಿಂತಲೂ ಗುಜರಾತಿನಲ್ಲಿರುವ ಗ್ರಾಮಗಳಲ್ಲಿ ನಾನು ೫ ದಿನಗಳ ವರೆಗೆ ಸಂಚರಿಸಿ ನೋಡಿದ ವಿಷಯಗಳು ಮುಖ್ಯವಾಗಿರುತ್ತವೆ. ಈ ಮೂರು ವಾರವೂ ನಾನು ಸಂಪೂರ್ಣವಾಗಿ ಭಾರತೀಯರ ಸಂಗಡಲೇ ಇದ್ದೆನು. ಬೊಂಬಾಯಾಧಿಪತ್ಯದ ಪ್ರಜೆಗಳ ಸ್ಥಿರವಾದ ಸಂಕಲ್ಪ ವಿಚಾರದಲ್ಲಿ ನನಗೆ ಸ್ಥಿರವಾದ ನಂಬಿಕೆಯುಂಟಾಯಿತು, ಅವರುಗಳಲ್ಲಿ ಹುಟ್ಟಿರುವ ಐಕ್ಯಮತ್ಯವು ಪ್ರತಿಯೊಬ್ಬ ಮನುಷ್ಯನಿಗೂ ಕೂಡ ಸ್ಪಷ್ಟವಾಗಿ ಗೋಚರವಾಗುತ್ತದೆ. ಕೆಲ ಗ್ರಾಮಗಳಲ್ಲಿ ಕೆಲ ಮಹಮ್ಮದೀಯರ ವಿನಾ ಇತರರೆಲ್ಲರೂ ಗಾಂಧಿ ಟೊಪ್ಪಿಯನ್ನು ಧರಿಸಿರುವರು. ಒಟ್ಟಿನ ಮೇಲೆ ಹಿಂದುಗಳೆಲ್ಲರೂ ಕಾಂಗ್ರೆಸ್ ಪಕ್ಷದಲ್ಲೇ ಇರುತ್ತಾರೆ ಮಹಮ್ಮದೀಯರಲ್ಲೂ ಅರ್ಧಭಾಗದವರು ಕಾಂಗ್ರೆಸ್ ಪಕ್ಷದಲ್ಲೇ ಇರುತ್ತಾರೆಂದು ತಿಳಿದುಬಂತು, ಅಂದರೆ ವಿದ್ಯಾಧಿಕಾರದ ಯುವಜನರೆಲ್ಲರೂ ಕಾಂಗ್ರೆಸ್ ಪಕ್ಷದಲ್ಲೇ ಇರುತ್ತಾರೆ.

### ಭಾರತೀಯರೆಲ್ಲರೂ ಕೋಪೋದ್ರೇಕರಾಗಿರುತ್ತಾರೆ.

ನಾನು ಎಲ್ಲಿಗೆ ಹೋದರೂ 'ರೌಂಡ್ ಟೇಬಲ್ ಸಭೆಯಿಂದ ಆವ ಫಲ ಪ್ರಾಪ್ತಿಯಾಗುವದು? ಕಾರ್ಮಿಕ ಅಂದರೆ ಲೇಬರ್ ಪ್ರಭುತ್ವದವರು ನಿಷ್ಕಪಟವಾಗಿ ಕೆಲಸ ಮಾಡುತ್ತಿದ್ದಾರೆಯೆ' ಎಂದು ಎಲ್ಲರೂ ನನ್ನನ್ನು ಕೇಳತೊಡಗಿದರು ಎರಡು ಪಕ್ಷಗಳಲ್ಲೂ ಸರಿಯಾದ ನಾಯಕರಿದ್ದಲ್ಲಿ ರೌಂಡುಟೇಬಲು ಸಭೆಯಿಂದ ಸ್ವಲ್ಪ ಪ್ರಯೋಜನವಾಗಬಹುದು' ಎಂದು ನಾನು ಪ್ರತಿಯೊಂದು ಸ್ಥಳದಲ್ಲೂ ಮೊಂಡತನದಿಂದ ಪ್ರತಿ ನಿತ್ಯವೂ ಅವರೊಡನೆ ಚರ್ಚಿಸುತ್ತಿದ್ದೆನಲ್ಲದೆ ರೌಂಡುಟೇಬಲು ಸಭೆಯಿಂದುಂಟಾಗುವ ಫಲವು ಅತಿಯಲ್ಲಿ ಸಮಾಧಾನಕರವಾಗಿಯೋ ಇರುವುದು ಅದರಿಂದ ಪ್ರಜೆಗಳಿಗೆ ಕೊಂಚಮಟ್ಟಿಗೆ ತೃಪ್ತಿಯೂ ಕೊಂಚಮಟ್ಟಿಗೆ ಆಶಾಭಂಗವೂ ಆಗದೆ ಇರುವುದಿಲ್ಲ ಪ್ರಜೆಗಳು ಶಾಂತಮನಸ್ಸಿನಿಂದಿದ್ದು ಹೊರತು ಅಂತಹ ಫಲವನ್ನು ಸರಿಯಾಗಿ ಗ್ರಹಿಸಲಾರರು ಸದ್ಯದಲ್ಲಿ ಸರಕಾರದ ಅತ್ಯಧಿಕವೂ ಕಠಿಣವೂ ಆದ ಆರ್ಡಿನೆನ್ಸ್ ವಿಧಾನವು ಆರಂಭಿಸುತ್ತಿರುವುದರಿಂದ ಭಾರತೀಯರೆಲ್ಲರೂ ಬಹಳ ಉಗ್ರತರ ಪರವಶರಾಗುತ್ತಿರುವರು.

---

### ನೋಟೀಸು.

### ಪುತ್ತೂರು ಡಿ ಮುನ್ಸೀಫ ಕೋರ್ಟಿನಲ್ಲಿ

O P No 667 1930

ಮಹಾಬಲಭಟ್ಟ,—ವಾದಿ, ರಾಮಚಂದ್ರ ಭಟ್ಟ ಕೂಡಾ— ಪ್ರತಿವಾದಿಯು.

ಸದರಿ ವಾದಿಗೆ ಪ್ರತಿವಾದಿಯು ರಾಮಚಂದ್ರ ಭಟ್ಟ ಕೂಡಾ 3 ಜನರು ರೂಪಾಯಿ 350ಕ್ಕೆ ಒರಕೊಟ್ಟ ತೋರದವು ದಸ್ತ್ಯವಜಿಯ ಶರ್ತ ಪ್ರಕಾರದ ಬಡ್ಡಿ ಬಾಕಿ ವಗೈರೆಗ ದಾಖಲು ಮಾಡಿದ ಸದರಿ ವ್ಯಾಜ್ಯವು ತಾ 26—11—30ಕ್ಕೆ ತನ್ನಿಗೆ ಇಟ್ಟಿರುತ್ತದೆ.

ಆ ಮೇರಿಂದ ಸದರಿ ವ್ಯಾಜ್ಯದಲ್ಲಿ ಏನಾದರೂ ಆಕ್ಷೇಪಣೆಗಳು ಇದ್ದರೆ ಆ ದಿವಸ 10 ಗಂಟೆಗೆ ಈ ಕೋರ್ಟಿನ ಮುಂದೆ ಸ್ವತಹಾ ಆಗಲಿ ವಕೀಲರ ಮುಖಾಂತರವಾಗಲಿ ಹಾಜರಾಗಿ ವ್ಯವಹರಿಸತಕ್ಕದ್ದು ತಪ್ಪಿದರೆ ಏಕಪಕ್ಷ ವಿಚಾರಣೆಯಿಂದ ತೀರ್ಮಾನ ಲಾದೀತು. ತಿಳಿದಿರಿ

ಪುತ್ತೂರು, ತಾ. 20—11—30 }

C S Shastry,
Vakil for Petitioner

---

### ನೋಟೀಸು.

ಮ ರಾ ರಾ ಮಂಗಳೂರು ಕೋ-ಆಪರೇಟಿವ್ ಟೌನ್ ಬ್ಯಾಂಕಿನ ಡೆಪ್ಯುಟಿ ರಿಜಿಸ್ಟ್ರಾರಾದ ಪಿ ಮಾಧವರಾವ್ ಅವರ್ಗಳವರು ಈ ಮೂಲಕ ತಿಳಿಯಪಡಿಸುವುದೇನಂದರೆ —ಕೊಡಿಯಾಲಬೈಲು ಕೋ ಆಪರೇಟಿವ್ ಕಪ್ಪೋಣದಲ್ಲಿ 1930ನೇ ಇಸವಿ ಡಿಸೆಂಬರ 3ನೇ ತಾರೀಕಿನ ದಿನ ಅಪರಾಹ್ನ ಪಾಂಚ ತಿಕ್ಕ ಸರಿಯಾಗಿ, 10—R—9789ನೇ ನಂಬ್ರದ ಟ್ರ್ಯಾಕ್ಟರ್ ಒಂದನ್ನು ಬಹಿರಂಗವಾಗಿ ಏಲಂ ಮಾಡಲಾಗುವದು

ಏಲಮಿಗೆ ನಿಂತ ಆಸಾಮಿಯು, ತಾನು ಹೇಳಿದ ಏಲೇಬಿನ 1ನೇ ಅಂಶಕ್ಕೆ ಕಡಿಮೆಯಾಗದಂತೆ ಹಣವನ್ನು ಕೂಡಲೇ ತೆರತಕ್ಕದ್ದು. ಬಾಕಿ ಏಲೇಬನ್ನು 15 ದಿನಗಳೊಳಗಾಗಿ ಸಲಿಸತಕ್ಕದ್ದು ತಪ್ಪಿದ್ದಲ್ಲಿ ಮೊದಲು ಕಟ್ಟಿದ ಹಣವನ್ನು ಸರಕಾರ ಲೆಕ್ಕಕ್ಕೆ ವಜಾ ಕಳದು, ಮತ್ತೊಮ್ಮೆ ಟ್ರ್ಯಾಕ್ಟರನ್ನು ಏಲಂ ಕರೆಯಲಾದೀತು.

ವಿಶಿನನ್ನು ನೋಡುವ ಇಚ್ಛೆಯುಳ್ಳವರು 11 ಘಂಟೆಯಿಂದ 5 ಘಂಟೆಯ ಒಳಗೆ ಆಫೀಸು ಸಮಯದಲ್ಲಿಯೇ ನೋಡಬಹುದು.

---

### ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

ಸ್ಮಾಲ ನಂಬ್ರ 246/1930.

ದೇಜಪ್ಪ ಮಾಡ—ವಾದಿ

ನರ್ಸ್ಯ ಶೆಟ್ಟಿ, ಇನ್ನ ಅಣ್ಣುಜಿಗೊಳಿ ಕೊರಗು ಶೆಟ್ರ ಅಳಿಯ ನವಿಸಾಲ ಗ್ರಾಮದ ಪಡುಬಿದ್ರೆ ಪೇಟೆಯಲ್ಲಿರುವವ—ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ವ ಇತರ ಎಲ್ಲಾ ಜನರಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ: —

ವಾದಿಗೆ ಪ್ರತಿವಾದಿಯಿಂದ ಬರಾ ರೂಪಾಯಿ 80ಕ್ಕೆ ಪ್ರತಿವಾದಿಯ ಮೇಲೆ ವಾದಿಯು ಮೇಲ್ಕಂಡ ವ್ಯಾಜ್ಯವನ್ನು ದಾಖಲು ಮಾಡಿರುತ್ತಾನೆ ಸದ್ರಿ ವ್ಯಾಜ್ಯ ಇದೇ ಬರುವ ಡಿಸೆಂಬರ ತಿಂಗಳ ತಾ 8ಕ್ಕೆ ಇಡಲ್ಪಟ್ಟಿದೆ ಪ್ರತಿವಾದಿಯು ಸದ್ರಿ ತಾರೀಕಿಗೆ ಬೆಳಗ್ಗೆ 10 ಘಂಟೆಗೆ ಕೋರ್ಟಿಗೆ ಹಾಜರಾಗಿ ಉತ್ತರಿಸದಿದ್ದರೆ ಸದ್ರಿ ವ್ಯಾಜ್ಯ ಎಕ್ಸಪಾರ್ಟಿಯಾಗಿ ತೀರ್ಮಾನಿಸಲ್ಪಡುವದು.

ಕಾರ್ಕಳ, ತಾ. 19-11-30

K. G. Kamath,
Vakil for Plaintiff.

## ಲೋಕಾಮಯಹರ ಕಸ್ತೂರೀ ಮಾತ್ರೆಗಳು

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತ ಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ.

### ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ವಾಂತಿಯಾಗುತ್ತಿರುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗಿದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0

### ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸುತ್ತಿದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0.

### ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಬಂಧುಗಳಿಗೂ, ಗಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ. 0—8—0

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು

ಏಜೆಂಟರು —
ಆತ್ಮಾವರ ಸೋಮಯ್ಯ ಮತ್ತು ಕಂಪೆನಿ

---

## ಒಂದೇ ತಾಸಿನಲ್ಲಿ

ನವ ಯೌವನವನ್ನು ಪಡೆಯಲಪೇಕ್ಷೆಯುಳ್ಳ ಪುರುಷರು

### ರಮಣ ವಿಲಾಸಿನಿ ವಟಿಕಾ

ವನ್ನು ಮಲಗುವುದಕ್ಕೆ ಒಂದು ಘಂಟೆಗ ಮುಂಚೆ ಒಂದು ಮಾತ್ರೆಯನ್ನು ಸೇವಿಸಿ ಜೀರ್ಣಕ್ಕೆ ಬರುವಷ್ಟು ಹಾಲು ಕುಡಿದರೆ ಯಥೇಚ್ಛೆಯಾಗಿ ಸ್ತಂಭನವಾಗುವುದು.

16 ಮಾತ್ರೆಗಳಿರುವ ಡಬ್ಬಿ ಕ್ರಯ ರೂ. 1—0—0

ಮದನ ಮಂಜರಿ ಫಾರ್ಮಸಿ,
1/94 ಚೀನ ಬಜಾರ್ ಮದರಾಸು.

## ಅಕಾಲ ವಾರ್ಧಿಕ್ಯವೇ?

ಇದು ನಮ್ಮ ಭೂಲೋಕ ಅಮೃತವಾದ

### ಮದನಮಂಜರಿ ಮಾತ್ರೆಗಳು

ಸೇವಿಸುವವರನ್ನು ಬಿಟ್ಟು ಪಲಾಯನ ಮಾಡುವುದು ಯಾಕೆ ಗೋಳಾಡುತ್ತೀರಿ? ಇವನ್ನು ಉಪಯೋಗಿಸಿ ನವ ಯೌವನವನ್ನು ಪಡೆಯಿರಿ 1 ಡಬ್ಬಿ ಕ್ರಯ ರೂ 1—0—0.

ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ನಿರೋಗಿಗಳಾಗುವುದಕ್ಕೆ ಕ್ರಯವು ಇಲ್ಲದೆ ಉಚಿತವಾಗಿ ಕೊಡುವ

### ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ

ರಾಜವೈದ್ಯ ನಾರಾಯಣಜಿ ಕೇಶವಜಿ,
1/94 ಚೈನಾ ಬಜಾರು ರೋಡು, ಮದರಾಸ.

---

ತಿಳಿಯದೇ ಧಾತುಕ್ಷಯವಾಗ ಕ್ಷೀಣ ಶಕ್ತಿಗಳೂ ಆದ ಮನುಷ್ಯರಿಗೆ ಮಧ್ಯ ತಾರುಣ್ಯದಲ್ಲಿಯೇ ನಿಜವಾಗಿ ಸಂಸಾರ ಸುಖವು ದೊರೆಯದೇ ನಿರುತ್ಸಾಹ ನಿರಾಶೆಗಳು ಹುಟ್ಟುತ್ತವೆ. ಇಂಥ ಮನುಷ್ಯರ ಧಾತು ಕ್ಷಯದೋಷವು ಹೋಗಿಸಿ, ಪೂರ್ಣ ಪುರುಷತ್ವವನ್ನು ಕೊಡುವಂತಹದ್ದು.

### ವೈದ್ಯರಾಜ ಶ್ರೀ ಕೇಶವಶಾಸ್ತ್ರೀ ವಿರಜಕರ ಇವರ,

ಶಕ್ತಿ ಶಾಂತಿ ವರ್ಧಕ ಆರೋಗ್ಯ ಕೊಡುವ

## ಅಮೃತಸಿಂಧು.

### ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಸವಿ ಹಾಗು ತೀವ್ರ ಗುಣಕೊಡುವ ಔಷಧವು ಮಾಡಲಾಗಿದೆ.

ಇದರ ಉಪಯೋಗದಿಂದ ಸಪ್ಪಗಿನ ಚರ್ಯೆ, ನಿರ್ಬಲ ಶರೀರ, ನಿರುತ್ಸಾಹ ಮನಸ್ಸು, ಪೌರುಷತ್ವಹೀನ ದೇಹ, ಅನಿಶ್ಚಿತ ಸ್ವಭಾವ, ನಿಸ್ತೇಜಸವನ್ನೂ ಹೇಡಿತನವನ್ನೂ, ಅಂಜುಬುರುಕತನ, ಅಕಾಲಮುಪ್ಪು, ಸ್ವಪ್ನಾವಸ್ಥೆ, ವೀರ್ಯದ ನೀರು, ಆಲಸ್ಯ, ಕಣ್ಣು ಕತ್ತಲುಗಳು, ಇಂದ್ರಿಯದ ಉರಿ, ಪಿತ್ತವಿಕಾರ, ಅಗ್ನಿಮಾಂದ್ಯ, ಶಿರಃಶೂಲ, ಮಲಾವರೋಧ, ಬೆನ್ನು ನೋವು, ಎಲ್ಲ ವಾತಪಿತ್ತರೋಗ ಮೊದಲಾದ ಎಲ್ಲ ಬೇನೆಗಳು ನಾಶಿಯಾಗುತ್ತವೆ, ರಕ್ತ, ಅಸ್ಥಿ, ಮಜ್ಜಾ ವೀರ್ಯ ಮೊದಲಾದ ಏಳು ಧಾತುಗಳ ವೃದ್ಧಿಯಾಗಿ ಇಂದ್ರಿಯದ ಅಶಕ್ತತೆಯು ನಷ್ಟವಾಗಿ ದೇಹದಲ್ಲಿ ಶಕ್ತಿಯೂ ಹುಟ್ಟುತ್ತದೆ. ಇದರಿಂದ ನಿಜವಾದ ಸಂಸಾರಸುಖವು ಸಿಗುತ್ತದೆ. ಹೆಂಗಸರ ಮುಟ್ಟಿನ ಶೂಲೆ, ಬಿಳಿ ಪ್ರದರ ಮೊದಲಾದ ಸಂತತಿಗೆ ಬಾಧಕವಾದ ಗರ್ಭಾಶಯದ ಎಲ್ಲ ವಿಕಾರಗಳು ಹೋಗಿ ಸ್ತ್ರೀಯು ಗರ್ಭಧಾರಿಸುತ್ತದೆ. ಈ ಅಮೃತಸಿಂಧುವನ್ನು ಅರ್ಧ ತೊಲೆ ಮತ್ತು ಸಂಜೆಗೆ ಅರ್ಧ ತೊಲೆ ತೆಕ್ಕೊಂಡ ಮೇಲೆ ಆಕಳ ಅಥವಾ ಎಮ್ಮೆಯ ಹಾಲನ್ನು ೧೦ ರಿಂದ ೨೦ ತೊಲೆಯ ವರೆಗೆ ತೆಕ್ಕೊಳ್ಳಬೇಕು. ಹತ್ತು ದಿನಗಳ ವರೆಗೆ ಸಾಕಾಗುವ ೧ ಬಾಟಲಿಗೆ ರೂ. ೧—೪—೦, ೪ ಬಾಟಲಿಗೆ ರೂ. ೪, ೧೨ ಬಾಟಲಿಗೆ ರೂ. ೧೧, ಹಾಗು ೧ ಬಾಟಲಿ ಫ್ರೀ. ಅಂಚೆ ಹಾಗು ಕಟ್ಟುಗಳ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೋ,
5C Divison, ನಿಪ್ಪಾಣಿ, ಜಿಲ್ಲಾ ಬೆಳಗಾಂವಿ.

---

ಗವರ್ನಮೆಂಟಿನಲ್ಲಿ ರಿಜಿಸ್ಟರ ಮಾಡಲ್ಪಟ್ಟ

ಜಗತ್ಪ್ರಸಿದ್ಧವಾದ

### ಎಲ್ಲ ರೋಗಗಳಿಗೆ ಒಂದೇ ಔಷಧ!

## ಅರ್ಕಶಫಾ ಅಥವಾ ಆರೋಗ್ಯಬಿಂದು.

ಪ್ರವಾಸಿವಿ: ಶ್ರೀ ಮೂರ್ತಿವಂತವೈದ್ಯ.

ಇದು ಅರ್ಕವಿದ್ದು ಇದರಲ್ಲಿ ನೀರು ರಸಾಯನ ಕೂಡಿರುವುದಿಲ್ಲ. ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ಇದು ಪ್ರಸಿದ್ಧವಾಗಿ ೧೬ ವರ್ಷಗಳು ಆಗುತ್ತ ಬಂದವು ಇವತ್ತಿನ ವರೆಗೆ ಎರಡು ಲಕ್ಷಗಳವರೆಗೆ ಬಾಟಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತಿರ ಬೇಡುವ ಪತ್ರಗಳು ಡಿ. ಪಿ. ಮಾಡಿದ ದಾಖಲೆಗಳು, ಫೋಟೋ ಪಾವತಿಗಳು, ಬಾರಿಸಿ ಬುಕ್ಕುಗಳು ಇರುತ್ತವೆ. ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟೆಯೆಂದು ಸಿದ್ಧಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಕ್ಷಣ ಗುಣಕೊಡುವದು. ಮತ್ತು ಎಂಥ ಭಯಂಕರ ರೋಗವು ಇದ್ದರೂ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರ್ಟಿಫಿಕೇಟುಗಳು ನಮ್ಮ ಹತ್ತಿರ ಹಾಜರು ಇರುತ್ತವೆ ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದು ಸಾರಿ ತೆಕ್ಕೊಂಡು ಅನುಭವ ನೋಡಿರಿ

ರೋಗದ ನಾಮಗಳು —

ಕ್ಷಯರೋಗ, ಬಂಗಾರರೋಗ, ಹಳೆ ನೆಗಡಿ, ದಮ್ಮು, ಕೆಮ್ಮು, ಅಪಸ್ಮಾರ, ಕಾಲರಾ (ಮಹಾರೋಗ), ಪ್ಲೇಗ, ಇನ್‌ಫ್ಲುಯೆಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗುಲ್ಮರೋಗ, ಮೂಲರೋಗ ಗಂಡಮಾಲೆ, ನಾರುಹುಣ್ಣು, ಶಸ್ತ್ರಗಾಯ, ಕಿವಿಶೂಲೆ, ಮೂಗಿನೊಳಗಿನ ಹಿಸಿ ಮೊದಲಾದವುಗಳು, ಕಣ್ಣುನೋವು, ಕಣ್ಣಿನೊಳಗೆ ಹೂ ಬೀಳೋದು, ಅಜೀರ್ಣ, ಹೊಟ್ಟೆ ಶೂಲೆ, ಸಣ್ಣ ಕೂಸುಗಳಿಗೆ ಆದ ರೋಗಗಳು, ಬಾಲಗ್ರಹ, ವಾಂತಿ, ಮುಟ್ಟಿನದೋಷ, ಹೊಟ್ಟೆದೊಡ್ಡದಾಗೋದು, ಕೋಡಿಗೆಮ್ಮು, ಮೈ ನೊಂದೇಳೋದು, ಮತ್ತು ದಾಂಪತ್ಯರಿಗೂ ಸ್ತ್ರೀಯರಿಗೂ ಸಹ ತಿಳಿಯದಂತಹ ರೋಗಗಳು ಈ ಆರೋಗ್ಯಬಿಂದುವಿನಿಂದ ಖಾತ್ರಿಯಿಂದ ಗುಣಬರುವವು.

೧ ಕಾಲು ತೊಲಿ ಬಾಟ್ಲಿ ಒಂದಕ್ಕೆ ೨ ರೂಪಾಯಿ. ನಮೂನೆ ಉದ್ದಿಕ್ಕ ೫ ಆಣೆ ತೂಕದ ಬಾಟ್ಲಿ ೧ಕ್ಕೆ ೮ ಆಣೆ, ಖರ್ಚು ಬೇರೆ ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೨ ರೂಪಾಯಿ ಆರ್ಡರು ಬಂದರೆ ಕಳಿಸಲಾಗುವದು. ಅದರ ಖರ್ಚ ೭ ಆಣೆ. ಚಿಕ್ಕ ಬಾಟ್ಲಿ ಒಂದು ಡಜನ ತಕ್ಕೊಳ್ಳುವವರಿಗೆ ನಾಲ್ಕು ಬಾಟ್ಲಿಗಳು ಕಮಿಶನ್ ಸಿಗುತ್ತವೆ. ಖರ್ಚು ೯ ಆಣೆ; ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕ್ಕೊಂಡರೂ ಕಮಿಶನ್ ಇಲ್ಲ. ವೆಚ್ಚ ೭ ಆಣೆ, ೧ ಕಾಲು ತೊಲಿ ಬಾಟ್ಲಿ ಒಂದೇಸಾರಿ ೩ ತಕ್ಕೊಳ್ಳುವವರಿಗೆ ಒಂದು ಬಾಟ್ಲಿ ಕಮಿಶನು ಸಿಗುತ್ತದೆ ಖರ್ಚು ೯ ಆಣೆ; ೧-೨ ಒಂದು ಎರಡು ತಕ್ಕೊಂಡರೆ ಕಮಿಶನ್ ಸಿಗುವದಿಲ್ಲ. ಖರ್ಚು ೭ ಆಣೆ, ತಕ್ಕೊಳ್ಳುವ ಪ್ರಮಾಣ ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಛಾಪಿಸಿರುತ್ತದೆ, ಪಸಂದಿ ಪ್ರಕಾರ ಬಾಟ್ಲಿ ಕೂಡ ಸಿಗುವುದು. ಈ ಔಷಧವು ಹೊಟೆಲ್ ಹೋಟೆಲ್ ಕಿಲ್ಲಿಕ ಉಳಿದ ಮಾಲು ಪರತ ತಕ್ಕೊಂಡು ಅದರ ಬೆಲೆ ವಾಪಾಸು ಕೊಡುವೆವು. ಈ ಅರ್ಕಶಫಾ ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ ಇದರ ಬಗ್ಗೆ ನಮಗೆ ಬಹಳ ಶಿಫಾರಸು ಮಾಡಬೇಕಾಗಿಲ್ಲ. ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷಿನಲ್ಲಿ ಪೋಸ್ಟು ಜಿಲ್ಲಾ ವಗೈರೆ ಸ್ಪಷ್ಟವಾಗಿ ಬರೆಯಿರಿ.

☞ ನಮ್ಮ ವಿಳಾಸ.— ಎಚ್. ಎಮ್. ಮುಲ್ಲಾ,
ಸಂಚಾಲಕ ಅರ್ಕಶಫಾ, ಹೆಡ್ ಆಫೀಸ
ಪೋಸ್ಟ ಕಾಪೂರ (ಬೆಳಗಾವ)

---

ಸುಲಭ ಕ್ರಯ! ಧಾರಾಳ ಫಲ!

## ದಂತಧಾವನ ಚೂರ್ಣ ಟೂತ್ ಪೌಡರ್.

ಎಲ್ಲಾ ವಿಧದ ಹಲ್ಲುನೋವುಗಳನ್ನೂ, ಹಲ್ಲುಗಳ ಸಡಿಲಗಳನ್ನೂ ವಾಸಿಗೊಳಿಸುವುದು. ಹಲ್ಲುಗಳ ಎಡೆಯಿಂದ ಒಸರುವ ರಕ್ತ, ಕೀವು ಮೊದಲಾದವುಗಳನ್ನು ನಿಲ್ಲಿಸುವುದು. ಬಾಯಿಯ ದುರ್ಗಂಧವನ್ನೂ ಹಲ್ಲುಗಳ ಇನ್ನಿತರ ದೋಷಗಳನ್ನೂ ದೂರ ಮಾಡಿ ಯಾವಾಗಲೂ ಹಲ್ಲುಗಳು ಶುಚಿಯಾಗಿಯೂ ಸುವಾಸನೆಯಿಂದಿರುವಂತೆಯೂ ಅತ್ಯುಪಯೋಗಕರವಾಗಿರುವುದು ಬೆಲೆ ೧ಕ್ಕೆ ೦—೨—೦. ಡಜನ ಬೆಲೆಯು ೧—೪—೦. ಇವುಗಳಲ್ಲದೆ ಮಿಕ್ಕ ಉತ್ಕೃಷ್ಟವಾದ ಆಯುರ್ವೇದ ಔಷಧಗಳು ಮಾರಾಟಕ್ಕೆ ಸಿದ್ಧವಾಗಿವೆ. ಆಸವ, ಅರಿಷ್ಟ, ಭಸ್ಮ, ಚೂರ್ಣ ಕಷಾಯ, ಲೇಹ, ತೈಲ ಮೊದಲಾದವುಗಳ ನಮ್ಮಲ್ಲಿ ಆಗಾಗ್ಗೆ ಹೊಸದಾಗಿ ತಯಾರಿಸಲ್ಪಡುವವು. ದೂರದವರು ಮತ್ತು ಹೊರದೇಶದವರು ಪತ್ರ ಮೂಲಕ ಕಾಯಿಲೆ ಮತ್ತು ರೋಗಸ್ಥಿತಿಗಳನ್ನು ತಿಳಿಸಿದಲ್ಲಿ ಯುಕ್ತವಾದ ಔಷಧಗಳನ್ನು ಟಪ್ಪಾಲುದ್ವಾರಾ ಕಳುಹಿಸಲಾಗುವುದು. ಪಟ್ಟಿ ಬೆಲೆ ಮತ್ತು ಚಿಕಿತ್ಸೆ ಅನುಪಾನಗಳ ಕುರಿತು ಕೇಳಿದ ವಿಳಾಸಕ್ಕೆ ಬರಕೊಳ್ಳಿರಿ

ಪಟ್ಟಿನ ಸಂಗತಿಗಳನ್ನು ತಿಳಿಯ ಬೇಕಾದವರಿಗೆ ಮಲಯಾಳದಲ್ಲಿ ಮತ್ತು ಕನ್ನಡದಲ್ಲಿ ಔಷಧ ಪಟ್ಟಿ ಇನಾಂ

ಪಿ. ಕರುಣಾಕರ ವೈದ್ಯರ್,
ಆರೋಗ್ಯಾಮೃತ ಔಷಧಾಲಯ
ಕ್ಯಾಂಪ ಬಜಾರ್ ಕಣ್ಣಾನೂರು,

P Karunakaran Vydiar.
Arogiamritha Aushadhalaya
Camp Bazaar, Cannanore.

(೯ನೇ ಪುಟದಿಂದ ಮುಂದರಿಯುವದು)

"ಇಂಡಿಯಾ ಪಟದಲ್ಲಿ, ಇಂದಿಗೆ ಕಂಗೊಳಿಸುತ್ತಿರುವ ಆ ಗುಜರಾತ್ ಪ್ರಾಂತ್ಯವು ಮಾಯವಾಯಿತೆಂದಾದರೂ ಕೂಡ ನಾನು ಲಕ್ಷಿಸಲಾರೆನು. ಇನ್ನೊಂದು ಹೊಸದಾದ ಇಂಡಿಯಾ ಪಟವನ್ನು ಬರೆಯುವ ಸುದಿನಗಳು ಸಮೀಪಿಸುತ್ತಿವೆ ಎಂದು ನಾನು ಬಲ್ಲೆನು. ಅಂಥಾ ಪಟದಲ್ಲಿ, ಗುಜರಾಥವು ಗೌರವಾಸ್ಪದವಾದೊಂದು ಸ್ಥಾನ ವಹಿಸುವದೆಂಬುದು ತೀರ ನಿಸ್ಸಂದೇಹವು."

ಸರ್ದಾರ ವಲ್ಲಭಭಾಯಿಯವರು, ಮುಂಬಾಯಿಯ ವಿದೇಶೀ ಬಟ್ಟೆ ವ್ಯಾಪಾರಿಗಳೊಡನೆ, ಸದರಿಯವರು ತಮ್ಮ ವ್ಯಾಪಾರವನ್ನು ಮುಂದರಿಸಬಾರದೆಂದು ಬೇಡಿಕೊಂಡರು. "ಸ್ವಾತಂತ್ರ್ಯವು ಪೂರ್ಣವಿದ್ದಲ್ಲಿ ಎಲ್ಲಾ ವಿದೇಶೀ ಸಾಮಾನುಗಳನ್ನು ಥಿಲ್ಲಿ ಗೋಯ್ದು ಈಗಲೇ ಸುಟ್ಟುಹಾಕುತ್ತಿದ್ದೆನು. ಈ ಸರಕಾರವು, ಲಾಠಿ ಚಾರ್ಜುಗಳನ್ನು ಎಷ್ಟು ಕಾಲದ ವರೆಗೆ ಹೊರಿಸಬಲ್ಲುದು? ಇರ್ವಿನ್ ಪ್ರಭುಗಳು, ಇದುವರೆಗೆ ಜನರಿಗೆ ತಂದ ಒರ್ಡಿನೆನ್ಸುಗಳ ಸಂಖ್ಯೆಯು ಶತ್ಯವುಟ್ಟಿಸುವದು ಪ್ರಭುಗಳು, ಇನ್ನೊಂದು ಒರ್ಡಿನೆನ್ಸನ್ನು ಜನರಿಗೆ ತರಬೇಕೆಂದು ನನ್ನ ಆಶೆ ಹಾಗೆ ಮಾಡಿದ್ದಲ್ಲಿ, ಕ್ರೈಸ್ತನಂತೆ ದಶಾಜ್ಞೆಗಳಿಗೆ, ಇರ್ವಿನರೂ ಯಜಮಾನರಾಗುವರು. ಗೃಹಸ್ಥರೇ! ಲಾಠಿ ಪೆಟ್ಟುಗಳೇ ಮೊದಲಾದ, ಸರಕಾರದ ಶಾಸನ ಚಳವಳವು ಎಷ್ಟು ಕಾಲ ನೆಲೆ ನಿಲ್ಲಬಲ್ಲುದು? ಸ್ವರಾಜ್ಯವು ನಮಗೆ ದೊರೆಯುವುದರಲ್ಲಿ ಸಂದೇಹವಿಲ್ಲ. ನೀವು ಈಗ ವ್ಯಯಮಾಡಿದ ಚಿಕ್ಕಸಾರ್ಗವೂ ಕೂಡ, ಸತ್ಯಾಗ್ರಹದ ಮೂಲಕ ನಿಮಗೆ ಹಿಂದಕ್ಕೆ ದೊರೆಯುವದೆಂದು ನಾನು ಭರವಸೆ ಕೊಡುವೆನು. ಪಂಡಿತ ಜವಾಹಿರಲಾಲರು ಇದೇ ಮಾತನ್ನು ಹೇಳಿರುವರು. ಮತ್ತೊಮ್ಮೆ ನಾನದನ್ನೇ ಉಚ್ಚರಿಸುವೆನು."

ತಾರೀಕು ೧೫

**ಕರಾಚಿಯಲ್ಲಿ**

ಸಿಂಧ್ ಎಸೋಸಿಯೇಶನಿನ ಅಧ್ಯಕ್ಷರಾದ ಸಿ. ಎಸ್. ಶಹಾಣಿ ಎಂಬವರು ಮಿ। ರೆವ್ಸ್ಲಿ ಮೆಕ್ಡೊನಾಲ್ಡರು ಮಿ। ವೆಜ್‌ವುಡ್ ಬೆನ್ನರು ಮತ್ತು ಸಪ್ರುಜಯಕರರೇ ಮೊದಲಾದವರಿಗೆ ಈ ಕೆಳಗಿನ ಸಮಾಚಾರವನ್ನು ತಂತಿ ಮುಖೇನ ತಿಳಿಸಿರುವರು.

'ಸಿಂಧು' ಪ್ರಾಂತ್ಯದಲ್ಲಿ ನಡೆದ ಇನ್ನೂರು ಗ್ಯಾಂಗ್ ದರೋಡೆಗಳನ್ನು ಲಕ್ಷ್ಯಕ್ಕೆ ತಂದುಕೊಳ್ಳತಕ್ಕದ್ದು. ಸುಕ್ಕೂರು ರೋಹ್ರಿ, ಮೊದಲಾದ ಕಡೆಗಳಲ್ಲಿ ಹಿಂದುಗಳನೇಕರು ಅವಮಾನ ಹೊಂದಿದರು, ಜಖಂಪಟ್ಟರು ಮಾತ್ರವಲ್ಲದೆ ಅನೇಕರು ಕೊಲ್ಲಲ್ಪಟ್ಟರು. ಯಾವ ರೀತಿಯಿಂದಲೂ ಸಿಂಧ ಪ್ರಾಂತ್ಯವನ್ನು ವಿಭಾಗಿಸುವದು ಅವಶ್ಯವೆಂದು ತೋರುವುದಿಲ್ಲ. ಸಿಂಧನ್ನು ವಿಭಾಗಿಸಿದ್ದಲ್ಲಿ, ಸಿಂಧ ಪ್ರಾಂತ್ಯದ ಹಿಂದುಗಳು ಕಷ್ಟಪಡಬೇಕಾಗುವದು.

**ಅಲ್ಲಹಾಬಾದದಲ್ಲಿ**

ಯುನೈಟೆಡ್ ಪ್ರಾವಿನ್ಸುಗಳ ಡಿಕ್ಟೇಟರಾಗಿದ್ದ ಪಂಡಿತ ಸುಂದರಲಾಲರನ್ನು ರಾಜದ್ರೋಹಕರವಾದ ಭಾಷಣ ವಿತ್ತರೆಂಬ ಅಪಾದನೆಯ ಮೇಲೆ ದಸ್ತಗಿರಿಮಾಡಿ, ತನಿಖೆ ನಡೆದಿರುವದು. ಇವರು ಕರನಿರಾಕರಣೆಯನ್ನು ತನ್ನ ಭಾಷಣದಲ್ಲಿ ಒತ್ತಿ ಹೇಳದ ರಂತೆ ತನಿಖೆಯ ತೀರ್ಪನ್ನು ಓದಿ ಹೇಳಲಿಲ್ಲ.

**ಬೆಳ್ಗಾವುದಲ್ಲಿ**

ವಿದೇಶಿ ಬಟ್ಟೆ ವ್ಯಾಪಾರಗಳಿಗೂ, ಕಾಂಗ್ರೆಸ್ ಅಧಿಕಾರಿಗಳಿಗೂ, ಪರದೇಶಿ ಬಟ್ಟೆ ಬಹಿಷ್ಕಾರದ ವಿಷಯದಲ್ಲಿ ಒಪ್ಪಂದ ನಡೆದು ವ್ಯಾಪಾರಸ್ಥರು, ಕಾಂಗ್ರೆಸ್ ಮುಖಂಡರ ಕಾರ್ಯಕ್ರಮಗಳನ್ನು ಸ್ವೀಕರಿಸಿದುದರಿಂದ ಪಹರೆಯು. ಕೆಲಸವು ಪ್ರಸ್ತುತ ಮನ್ನಾಪಡಿಸಿರುವರು. ಪಹರಾನ್ನಿತರು ತಮ್ಮ ಕರ್ತವ್ಯವನ್ನು ಹಿಂತೆಗೆದಿರುವರು.

ತಾರೀಕು ೧೬

**ಮುಂಬಾಯಿಯಲ್ಲಿ**

"ಜವಾಹರ್‌ದಿನ"ವು ಬಹಳ ವಿಜೃಂಭಣೆಗಳಿಂದ ಆಚರಿಸಲ್ಪಟ್ಟಿತು. ಈ ಕುರಿತು ಅನೇಕ ಸತ್ಯಾಗ್ರಹ ಸ್ವಯಂಸೇವಕರನ್ನೂ ಸ್ವಯಂಸೇವಕಿಯರನ್ನೂ ದಸ್ತಗಿರಿ ಮಾಡಿದರು. ಪೋಲೀಸರ ಅಪ್ಪಣೆಯನ್ನು ನಿರೋಧಿಸಿ, ಮೆರವಣಿಗೆ ಹೊರಡಿಸಿದುದಕ್ಕಾಗಿ, "ವಿಲ್ಲೆ ಪಾರ್ಲೆ" ಎಂಬಲ್ಲಿ ೧೫ ಹೆಂಗುಸರನ್ನೂ, ೬ ಮಂದಿ ಗಂಡಸರನ್ನೂ ದಸ್ತಗಿರಿ ಮಾಡಿರುವರು. ಅದೇಕಾರಣದಿಂದ ಮುಂಬಾಯಿಯ ನೆರೆಪ್ರಾಂತ್ಯವಾದ "ಘಾಟ್‌ಕೋಪಾರ" ಎಂಬಲ್ಲಿ ಸುಮಾರು ೧೫ ಮಂದಿ ಗಂಡಸರು ಮತ್ತು ಅಷ್ಟೇ ಹೆಂಗುಸರನ್ನು ಕೈದು ಮಾಡಿರುವರೆಂದು ತಿಳಿದು ಬರುತ್ತದೆ.

ಮುಂಬಾಯಿಯಲ್ಲಿ, ಅದೇದಿನ, ಹಲವು ಸಭೆಗಳೂ ಜರಗಿದವು, ಸಭೆಗಳಲ್ಲಿ ಜವಾಹಿರಲಾಲನೆಹರುರವರ ಭಾಷಣದ ಪ್ರತಿಗಳನ್ನು, ಸರ್ವರಿಗೂ ತಿಳಿಯ ಪಡಿಸುವಂತೆ ಓದಿ ಹೇಳಲಾಯಿತು. ಎರಡು—ಮೂರು ಮೆರವಣಿಗೆಗಳೂ ಹೊರಟವು, ಆದರೆ ಪೋಲೀಸರು, ಮೆರವಣಿಗೆಯಲ್ಲಿ ಭಾಗವಹಿಸಿದ ಮುಖಂಡರನ್ನು ದಸ್ತಗಿರಿ ಮಾಡಿರುವರೆಂದು ತಿಳಿದು ಬರುತ್ತದೆ.

ಚೌಪಾಟಿಯಲ್ಲಿಯೂ, ಸಭೆಜರಗಿಸುವ ಏರ್ಪಾಡುಗಳು ನಡೆದಿದ್ದುವು. ಆದರೆ ಪೋಲೀಸರ ಉಪಟಳಿಯಿಂದ, ಸಭೆಯು ಯೋಗ್ಯರೀತಿಯಲ್ಲಿ ಕೂನೆಗಾಣಲಿಲ್ಲ. ಆದರೂ, ಮುಂಬಾಯಿ ಸಮರಸಂಸ್ಥೆಯ ಅಧ್ಯಕ್ಷರು, ಇನ್ನೆರಡು ಮಂದಿ ಸತ್ಯಾಗ್ರಹಿಗಳೊಡನೆ, ಗಲಭೆಯ ಮಧ್ಯದಲ್ಲೇ ಪಂಡಿತ ಜವಾಹಿರಲಾಲರ ಭಾಷಣವನ್ನು ಓದಿ ಹೇಳಲಾರಂಭಿಸಿದರು. ಆ ಕೂಡಲೆ, ಅವರ ದಸ್ತಗಿರಿಯೂ ಆಯಿತು.

ಪೋಲೀಸರು ಹಿಂದುಸ್ಥಾನ್ ಸೇವಾದಳಕ್ಕೆ ದೌಡಿಕ್ಕಿ ೨೩ ಮಂದಿಯನ್ನು ದಸ್ತಗಿರಿ ಮಾಡಿರುವರೆಂದು ತಿಳಿದುಬರುತ್ತದೆ.

**ಅಹಮ್ಮದಾಬಾದದಲ್ಲಿ**

'ನವಜೀವನ ಪ್ರೆಸ್ಸ'ನ್ನು ಪೋಲೀಸರು ದೌಡು ಮಾಡಿರುವರು. ಸಾಮಾನುಗಳೆಲ್ಲವೂ ಪೋಲೀಸರ ರಾಶಿಕೆ ಒಯ್ಯಲ್ಪಟ್ಟವು. ಪ್ರೆಸ್ಸಿನ ಯಜಮಾನರಿಗೆ ಪ್ರೆಸ್ಸಿನ ಬೀಗದ ಕೈ ಒಪ್ಪಿಸಿ, ಸರಕಾರಕ್ಕೆ ಒಪ್ಪಿಸಿ ಕೊಡಬೇಕೆಂದು ನೋಟೀಸು ಜಾರಿ ಮಾಡಿರುವರು.

ತಾರೀಕು ೧೬

**ಅಹಮ್ಮದಾಬಾದದಲ್ಲಿ**

ಮಿ. ಸರ್ದಾರ್ ಗೋಪಾಲ್ ದಾಸರ ಧರ್ಮಪತ್ನಿಯಾದ ಶ್ರೀಮತಿ ಭಕ್ತಿಲಕ್ಷ್ಮೀ ಎಂಬವರು ಹೊಸತಾದ "ಕಾಂಗ್ರೆಸ್ ಹೌಸ್" ಒಂದನ್ನು ತೆರೆದಿರುವರೆಂದು ತಿಳಿದುಬರುತ್ತದೆ. ಒಂದು ಸತ್ಯಾಗ್ರಹ ಮೆರವಣಿಗೆಯೂ ಜರಗಿದ್ದಿತು. ಪೋಲೀಸರು ಮೆರವಣಿಗೆಯ ಜನರನ್ನು ಚದರಿಸುವ ವಿಷಯದಲ್ಲಿ ಲಾಠಿಗಳನ್ನು ಉಪಯೋಗಿಸಿದರು. ಸುಮಾರು ೨೫ ಮಂದಿ ಪೆಟ್ಟು ಹೊಂದಿರುವರು. ಪೋಲೀಸರ ಅತ್ಯಾಚಾರವನ್ನು ನಿರೋಧಿಸಿ, ಕೆಲವು ಮೆರವಣಿಗೆಗಳು ಹೊರಡಿಸಲ್ಪಟ್ಟವು. ಇವುಗಳನ್ನು ಚದರಿಸಲು ಪೋಲೀಸರು ಗಮನವೀಯಲಿಲ್ಲವೆಂದು ತಿಳಿದುಬರುತ್ತದೆ.

ಪೋಲೀಸರು, ಸ್ಥಳೀಯ ಸತ್ಯಾಗ್ರಹ ಮುಖಂಡರನೇಕರನ್ನು ದಸ್ತಗಿರಿ ಮಾಡಿರುವರು. ಗುಜರಾಥದ ರಾಷ್ಟ್ರೀಯ ಸಮರ ಸಂಸ್ಥೆಯ ಡಿಕ್ಟೇಟರಾದ ಶ್ರೀಮತಿ ಸರಳಾದೇವಿ ಅಂಬಾಲಾಲ್, ಅವರ ಮಗಳು ಮತ್ತು ಕೆಲವು ಮುನ್ಸಿಪಲ್ ಸದಸ್ಯರನ್ನೂ ಕೈದು ಮಾಡಿರುವರು. ರಾತ್ರಿ ಹೊತ್ತಿನಲ್ಲಿಯೂ, ದಸ್ತಗಿರಿಗಳು ನಡೆಯಲ್ಪಡುವುವೆಂದು ತಿಳಿದುಬರುತ್ತದೆ. ಈ ವರೆಗೆ ಸುಮಾರು ೨೦೦ ಮಂದಿಯನ್ನು ದಸ್ತಗಿರಿ ಮಾಡಿರುವರೆಂದು ವರ್ತಮಾನವಿದೆ.

**ಕರಾಚಿಯಲ್ಲಿ**

ಜಿಲ್ಲಾ ಕಲೆಕ್ಟರಿಂದ ಜನರಿಗೆ ತರಲ್ಪಟ್ಟ ೧೪೪ನೇ ಪ್ರಕರಣವನ್ನು ಉಲ್ಲಂಘಿಸಿ ಮಿ। ಜೈರಾಮದಾಸರು ಮತ್ತು ಸಿಂಧದ ಕಾಂಗ್ರೆಸ್ ಅಧ್ಯಕ್ಷರಾದ ಮಿ। ದೌಲತ್‌ರಾಮ್ ಎಂಬವರನ್ನು ಕೈದುಮಾಡಿರುವರು.

**ಪೇಶಾವರದಲ್ಲಿ**

ಆಫ್ರಿದಿ ಜಿರ್ಗವು ಜಾಮ್ರುಡ್ ಎಂಬಲ್ಲಿ ಜರಗಿತು. ಆದರೆ, ಪರಿಣಾಮವು ನಿಷ್ಪ್ರಯೋಜಕವೆಂದೇ ತಿಳಿದುಬರುತ್ತದೆ. ಪಿಕೆಟಿಂಗ್ ಕಾರ್ಯಕ್ರಮಗಳು ಎಂದಿನಂತೆ ಜರಗುತ್ತಿವೆ, ಆ ಕುರಿತು ದಸ್ತಗಿರಿಗಳೂ ನಡೆಯುತ್ತಿವೆ.

ಅಲ್ಲಹಾಬಾದ್, ನಾಗಪುರ, ಸೂರತ್ ಮತ್ತು ಬನಾರಿಸ್ ಎಂಬ ಹಲವು ಕಡೆಗಳಲ್ಲಿ 'ಜವಾಹರ್ ದಿನ'ವು ಭಯಭಕ್ತಿಗಳಿಂದ ಆಚರಿಸಲ್ಪಟ್ಟಿತು. ಬನಾರಿಸದಲ್ಲಿ ಪಿಕೆಟ್ ಮಾಡಿದ ೬ ಮಂದಿ ಸತ್ಯಾಗ್ರಹಿಗಳನ್ನು ದಸ್ತಗಿರಿ ಮಾಡಿರುವರೆಂದು ತಿಳಿದು ಬರುತ್ತದೆ.

**ಮುಂಬಾಯಿಯಲ್ಲಿ**

ತಾ. ೧೬ನೇ ದಿನ ಮಧ್ಯರಾತ್ರಿ ಸಮಯದಲ್ಲಿ, ಹಳೇ ಕಾಂಗ್ರೆಸ್ ಖಚೇರಿ ಬಳಿ, ಒಂದು ಬೋಂಬ್ ಸ್ಫೋಟನವು ನಡೆದು, ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿತು. ಲೆಮಿಂಗ್‌ಟನ್ ಪೋಲೀಸು ಠಾಣೆಯಿಂದ ಹೊಸ ಪೋಲೀಸ್ ತಂಡವು ಆ ಸ್ಥಳಕ್ಕೆ ಬರುವಂತೆ ಸಮಾಚಾರಗಳು ಕಳುಹಲ್ಪಟ್ಟವು. ಪತ್ತೆ ಮಾಡುವಾಗ, ಸ್ಫೋಟನವು ಬೋಂಬಿನದಲ್ಲವೆಂತಲೂ, ಬರೇ crakerನ್ನು ಯಾರೋ ಬಿಸಾಡಿದುದರಿಂದ, ಬೋಂಬ್ ಸ್ಫೋಟನದಂತೆ ಶಬ್ದವಾಯಿತೆಂದೂ, ತಿಳಿದುಬರುತ್ತದೆ. ದಸ್ತಗಿರಿಗಳೇನೂ ನಡೆದಿರುವದಿಲ್ಲ.

ಬಂಗಾಳ ಸೇನಗುಪ್ತನ ಸಹಿ "ಜವಾಹಿರಲಾಲ್ ಜಿಂದಾಬಾದ್" ಎಂಬ ಸ್ಥಳ, ಈ ಸ್ಥಳದಿಂದ, ಮೇಲೆ ಹೇಳಲ್ಪಟ್ಟ ವ್ಯಕ್ತಿಯು ರುಜು ಹಾಕಿದ ಎಂದು ಪತ್ರವು, ಮುಂಬಾಯಿಯ ಛನೇ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಾದ ಮಿ। ಎ. ಎನ್. ಮೆಹತ ಎಂಬವರ ಕೈಸೇರಿರುವದು. ಪತ್ರದೊಡನೆ "ಕಪ್ಪು ಹುಡಿ" (Black Powder) ಯ ಒಂದು ಕಟ್ಟು ಸಹ ಮ್ಯಾಜಿಸ್ಟ್ರೇಟರಿಗೆ ತಲ್ಪಿರುವದು. ಪತ್ರದ ಸಾರಾಂಶವು ಈ ಕೆಳಗೆ ಕೊಡಲಾಗಿದೆ.

"ಅಯ್ಯಾ,

ನಿಮ್ಮ ಅನಿರೀಕ್ಷಿತವಾದ ತೀರ್ಪುಗಳನ್ನು ನೋಡಿ ನಾವು ತುಂಬಾ ವಿಷಾದಪಡುವೆವು. ನೀವು ಹಿಂದೀಯರಲ್ಲಿ ಹುಟ್ಟಿ ಬೆಳೆದಿರುವರೇನೋ ನಿಸ್ಸಂದೇಹವಾದ ವಿಷಯವು. ಆದರ ಮಾತೃ ಭೂಮಿ ಮತ್ತು ತಾಯಿಯನ್ನು ಮರೆತವರಾಗಿ ಯಂತ್ರ ಸಾಮಗ್ರಿಯಂತೆ (ಸಾಕಿದ ನಾಯಿಯಂತೆ) ಗುಲಾಮಗಿರಿ ಎಂಬ 'ಜೇನ'ನ್ನೂ ನೆ ವರ್ತಿಸುತ್ತಿರುವಿರಿ. ಆ ಪ್ರಯುಕ್ತ, ನಾವು ನಿಮ್ಮನ್ನು ಈ ಮೂಲಕ ಎಚ್ಚರಿಸುವುದೇನೆಂದರೆ—ಕೂಡಲೇ ನೀವು ಪ್ರಭುಗಳಿಗೆ ಹೊಗಳಿಕೆಗಳನ್ನು ಬಿಟ್ಟು, ನಮ್ಮ ಹುಟ್ಟೂರನ್ನು, ವಿದೇಶೀ ನರಿಗಳಿಂದ ಬಿಡುಗಡೆ ಹೊಂದಿಸುವ ಪವಿತ್ರ ರಿಪಬ್ಲಿಕನ್ ಸರಕಾರಕ್ಕೆ ಸೇರಿರಿ. ತುಂಬಾ ನಮಸ್ಕಾರಗಳು. ಪರಿಣಾಮವೇನೆಂದು ಚೆನ್ನಾಗಿ ಪರ್ಯಾಲೋಚಿಸಿರಿ. ಇತಿ ರಿಪಬ್ಲಿಕನ್ ಪಾರ್ಟಿಯ ಪರವಾಗಿ ಎಚ್ಚರಿಸುವವ—

ಬಂಗಾಳೀ ಸೇನ್‌ಗುಪ್ತ

**ಲಾಹೋರಿನಲ್ಲಿ**

ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟರಾದ ಮಿ. ತೇಜಸಿಂಗ್ ಎಂಬವರನ್ನು, ಮ್ಯಾಜಿಸ್ಟ್ರೇಟರು ಐ. ಪಿ. ಸಿ. ೧೨೪ನೇ ಪ್ರಕರಣದ ಮೇರೆಗೆ ೫ ವರ್ಷದ ಕಠಿಣ ಸಜೆ ವಿಧಿಸಿದ್ದರು. ಆದರ ತೇಜಸಿಂಗರು ಸೆಷನ್ಸ್ ಕೋರ್ಟಿನಲ್ಲಿ ಅಪೀಲು ನಡಿಸಿದರು. ಅಪೀಲು ತನಿಖೆಯ ಸಮಯದಲ್ಲಿ ಪೋಲೀಸರ ಸಾಕ್ಷಿ ರುಜುವಾತುಗಳು ಬಲಹೀನವೆಂದು ಕಂಡುಬಂದುದರಿಂದ, ಜಡ್ಜರು ಮೊಕದ್ದಮೆಯನ್ನು ತೆಗೆದುಹಾಕಿದರು. ಅಪಾದಿತರಿಗೆ ಶಿಕ್ಷೆಯು ಬಿಟ್ಟುಹೋಗಿರುವುದು.

ತಾ. ೧೬ನೇ ರಾತ್ರಿಯಲ್ಲಿ ಅಪರಿಚಿತರಾದ ಕೆಲವರು, ಇಲ್ಲಿನ ಸಿಟಿ ಮ್ಯಾಜಿಸ್ಟ್ರೇಟು ಕೋರ್ಟಿಗೆ ಬೆಂಕಿ ಹಚ್ಚುವ ಸಾಧನೆಗಳನ್ನು ನಡೆಸಿರುವರಂತೆ! ಸುಮಾರು ರಾತ್ರಿ ೧೦ ಘಂಟೆ ಸಮಯಕ್ಕೆ ಕೋರ್ಟನ್ನು ಕಾಯುತ್ತಿದ್ದ ಗಾರ್ಡರೊಬ್ಬರು, ರಿಕಾರ್ಡು ಕೋಣೆಯಿಂದ ಹೊಗೆ ಹೊರಡುವದನ್ನು ನೋಡಿದರು. ಕೂಡಲೆ ಗಾರ್ಡರು, ಮುಖ್ಯ ಪೇದೆಯು ಬರುವಂತೆ ಹೇಳಿ ಕಳುಹಿಸಿದರು. ಅವನ ಸಹಾಯದಿಂದ ಬೆಂಕಿಯು ನೊಂದಿಸಲ್ಪಟ್ಟಿತು. ತರುವಾಯ ಶೋಧ ನಡಸಿದ್ದಲ್ಲಿ, ಒಂದು ಬಾಟ್ಲಿ ಪೆಟ್ರೋಲ್ ಎಣ್ಣೆಯು ಕಾಣಸಿಕ್ಕಿತು. ಬೆಂಕಿಯ ದೆಸೆಯಿಂದ ಒಂದು ಬಾಗಿಲು ಮಾತ್ರವೇ ಸುಟ್ಟುಹೋಗಿರುವುದೆಂದು ತಿಳಿದುಬರುತ್ತದೆ.

**ಅಲ್ಲಹಾಬಾದದಲ್ಲಿ**

ಕಾಂಗ್ರೆಸ್ ಡಿಕ್ಟೇಟರಾದ ಪಂಡಿತ್ ಸುಂದರಲಾಲ್ ಎಂಬವರನ್ನು, ಜಿಲ್ಲಾ ಮ್ಯಾಜಿಸ್ಟ್ರೇಟರು ೧೨೪A ಪ್ರಕರಣದ ಮೇರೆಗೆ, ಪುರುಷೋತ್ತಮದಾಸ್ ಪಾರ್ಕಿನಲ್ಲಿ ರಾಜದ್ರೋಹಕರವಾದ ಭಾಷಣವಿತ್ತರೆಂದು, ತನಿಖೆ ನಡಿಸಿ, ಒಂದು ವರ್ಷದ ಕಠಿಣ ಸಜೆಗೂ ೫೦೦ ರೂಪಾಯಿಗಳ ಜುಲ್ಮಾನೆಗೂ ಗುರಿಪಡಿಸಿರುವರು. ಜುಲ್ಮಾನೆ ಕೊಡಲು ತಪ್ಪಿದ್ದಲ್ಲಿ ೬ ತಿಂಗಳ ಹೆಚ್ಚಿನ ಸಜೆಯನ್ನು ಅನುಭವಿಸಬೇಕಂತೆ. ಇವರು ಕೊಟ್ಟ ಭಾಷಣದಲ್ಲಿ ಕರನಿರಾಕರಣೆಯನ್ನು, ಸಭಿಕರೆಲ್ಲರೂ ಅಂಗೀಕರಿಸುವಂತೆ ಅಪೇಕ್ಷಪಟ್ಟರೆಂಬ ಸಬಬಿನ ಮೇಲೆ, ಇನ್‌ಸ್ಟಿಗೇಶನ್ ಒರ್ಡಿನೆನ್ಸಿನ ಪ್ರಕರಣದಂತೆ, ೬ ತಿಂಗಳ ಕಠಿಣ ಶಿಕ್ಷೆಗೆ ಗುರಿಪಡಿಸಿರುವರು. ಮೇಲೆ ಹೇಳಿದ ಎರಡು ಬಗೆಯ ಶಿಕ್ಷೆಗಳನ್ನು ಸುಂದರಲಾಲರು ಒಟ್ಟೊಟ್ಟಿಗೆ ಅನುಭವಿಸಬೇಕೆಂದು ಮ್ಯಾಜಿಸ್ಟ್ರೇಟರ ಅಪ್ಪಣೆಯಾಗಿರುವುದು.

ಪರೀಕ್ಷಿಸಿರಿ! ಚಿಕಿತ್ಸೆಯ ಶುಲ್ಕ ಅಗ್ಗ

ಹಾನಿ ಬಾರದು ಭಯವಿಲ್ಲ

## ಹೊಸದುರ್ಗ ಅಮ್ಮತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಂಞಂಗಾಡ್ (S.I.R.)

[illegible] ವೈದ್ಯ [illegible] ಮುಖ್ಯವಾಗಿ [illegible] ವೈದ್ಯರತ್ನ ... 'ಧನ್ವಂತರಿ ವೈದ್ಯ ರತ್ನ ...' [illegible]

ಮುಖಾಂತರ ವ್ಯವಹಾರ ನಡೆಸಬಹುದು

ಹೊರಡ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮ್ಮತೇಶ್ವರಿ ವೈದ್ಯಶಾಲಾ ಹೊಸದುರ್ಗ

ಪೋಸ್ಟ್ ಕಾಂಞಂಗಾಡ (ದ. ಕ.)



### ನೋಡಿದರೆ ಬಿಡದಿರುವ ಕಾದಂಬರಿಗಳು

[illegible]

ಇನ್ನೂ ನಾನಾ ಬಗೆಯ ಪುಸ್ತಕಗಳ ನಮ್ಮಲ್ಲಿ ಸಿಗುವವು. ನಮ್ಮ ಹೊಸ ಲಿಷ್ಟಿಗಾಗಿ ಬರೆಯಿರಿ, ಬುಕ್ ಸೆಲ್ಲರರಿಗೆ ಧಾರಾಳವಾದ ಕಮಿಶನ್

ವಿಳಾಸ — ಧಿ. ಪ. ರಾವ್,

ಪೋ. ಆನಂದವನ, [ಜಿ. ಧಾರವಾಡ

Liveliness-zip pep you get that all the time from an Exide because it is built into it

Care and thought in the design keen discrimination in the selection of material and the experience of thousands of users have made

**Exide**

THE LONG-LIFE BATTERY

The C P C. Co. Ltd

MANGALORE



**Batliwalla's Preparations Cover All Your Needs.**

A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

## ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಅಗ್ಯು ಮಿಕ್ಶ್ಚರ್ ಪಿಲ್ಸ್ — ಮಲೇರಿಯಾ ಜ್ವರ ನಿವಾರಣ ರೂ ೧

ಬಾಟ್ಲಿವಾಲರ ಬಾಲಾಮೃತ — ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪

ಬಾಟ್ಲಿವಾಲರ ಕಾಲರ್ [illegible] — [illegible] ಎಲ್ಲಾ ತರದ ನೋವುಗಳಿಗೂ [illegible] ಔಷಧ ಆಣೆ [illegible]

ಬಾಟ್ಲಿವಾಲರ ಸ್ಟ್ರೆಂಥ್ [illegible] — [illegible] ಮತ್ತು ಶಾಲಾ [illegible] ಔಷಧ ಆಣೆ ೧೪

ಬಾಟ್ಲಿವಾಲರ ಕ್ವಿನೀನ ಟೇಬ್ಲೆಟ್‌ಗಳು — ಒಂದು ಗ್ರೇನ ಅಥವಾ ಎರಡು ಗ್ರೇನ ೧ ಬಾಟ್ಲಿಯಲ್ಲಿ ೧೦೦ ಟೇಬ್ಲೆಟ್ [illegible]

ಬಾಟ್ಲಿವಾಲರ ಟಾನಿಕ ಗುಳಿಗೆಗಳು — ಧಾತು ಪುಷ್ಟಿಕರ ರೂ ೧—೨—೦ ರೂ ೧—೪—೦ ೧—೧೨—೦

ಬಾಟ್ಲಿವಾಲರ ಹುಳ ಕಡ್ಡಿ ಔಷಧ ರೂ ೦—೬—೦

ಬಾಟ್ಲಿವಾಲರ ದಂತಧಾವನ ಚೂರ್ಣ ರೂ ೦—೬—೦ LIBERAL DISCOUNT TO TRADE

ಕಾರ್ಖಾನೆ-CAWASHAPUR, BOMBAY

ಎಲ್ಲಾ ಕಡೆಗಳಲಿ ಡಾ. ಯಚ್ ಎಲ್ ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

ಏಜಂಟರು ಬೇಕಾಗಿದ್ದಾರೆ. Sayani Road, P O Cadell R ad Bombay No 14



## ಕೇಸರಿಯವರ ರತ್ನತ್ರಯಗಳು.

### 'ಲೋಧ್ರ'

ಶ್ರೀ ಜಯಲಕ್ಷ್ಮಮ್ಮ ಮಿಸ್ಸಸ್, ಬಾಲಿಕಾ ಪಾಠಶಾಲಾ, ಕೊಳ್ಳೇಗಾಲ "ಸುಮಾರು ಮೂರು ವರುಷ ಕಾಲವಾಗಿ ಪ್ರತಿ ತಿಂಗಳಲ್ಲಿಯೂ ರಜಸ್ವಲೆಯಾಗುವುದು ತಪ್ಪಿ, ಎರಡು ಮೂರು ತಿಂಗಳಿಗೊಂದಾವರ್ತಿ ರಜಸ್ವಲೆಯಾಗುತ್ತಿದ್ದೆನು. ಇದರಿಂದ ಮೈಭಾರ, ನಡುನೋವು, ಕೈಕಾಲು ನೋವು, ನಿಶ್ಶಕ್ತಿ ಮುಂತಾದ ತೊಂದರೆಗಳನ್ನು ಅನುಭವಿಸುತ್ತಿದ್ದೆನು. ನಿಮ್ಮ 'ಲೋಧ್ರ' ಎಂಬ ಔಷಧಿಯನ್ನು ಎರಡು ಸೀಸೆ ಕುಡಿದುದರಿಂದ ನನ್ನ ತೊಂದರೆಗಳು ನಿವೃತ್ತಿಯಾಗಿ ಈಗ ಸ್ವಸ್ಥವಾಗಿದ್ದೇನೆ. ಕ್ರಮವಾಗಿ ಪ್ರತಿ ತಿಂಗಳಲ್ಲೂ ರಜಸ್ವಲೆಯಾಗುತ್ತಿದ್ದೇನೆ. ನನ್ನಂಥ ಹೆಂಗಸರಿಗೆ ಇದರ ಗುಣವನ್ನು ತಿಳಿಸಲು ಪ್ರಯತ್ನಿಸುತ್ತೇನೆ."

### 'ಅಮೃತ'

ಮಿ। ಎ. ಸುಬ್ಬರಾಯರು, ಹೈಕೋರ್ಟ್ ವಕೀಲರು ಮಂಗಳೂರು—ನಿಮ್ಮ 'ಅಮೃತ'ವು ಉತ್ತಮವಾದ ರಕ್ತಶೋಧಕ ಔಷಧವಾಗಿದೆ. ಮತ್ತು ಮಲಬದ್ಧತೆಗೆ ವಿಶೇಷ ಪ್ರಯೋಜನಕಾರಿ.

### "ಅರ್ಕ"

ಮ॥ ಚೆಂಗಯ್ಯನವರು, ಧರ್ಮಾದಾಯದ ಬೋರ್ಡ್ ಕಮಿಶನರ್, ಬೆಂಗಳೂರು ಡಿಸ್ಟ್ರಿಕ್ಟ್, ಪೂನಮಲ್ಲಿ ಹೈರೋಡ್ ಮದರಾಸ್—'ಡಾಕ್ಟರ್ ಕೇಸರಿಯವರಿಂದ ತಯಾರಾದ ಸರ್ವಜನಾದರಣೀಯವಾದ "ಅರ್ಕ" ಎಂಬ ಔಷಧಿವನ್ನು ನಾನು ಬಹುಕಾಲದಿಂದಲೂ ಬಲ್ಲೆನು. ಇದು ಎಲ್ಲಾ ಬಗೆಯ ಜ್ವರಗಳನ್ನೂ ನಿರಪಾಯವಾಗಿ ನಿಶ್ಚಯವಾಗಿ ಗುಣಪಡಿಸುವುದು. ಈ ಔಷಧವು ಜ್ವರ ನಿಂತನಂತರ ರೋಗಿಯು ಬಲಹೀನನಾಗದಂತೆ ಕಾಪಾಡುವ ಸದ್ಗುಣವುಳ್ಳದ್ದು. ಈ ಔಷಧವನ್ನು ಸೇವಿಸಲು ಹಿತವಾಗಿರುವಂತೆ ತಯಾರಿಸಿರುವ ಕಾರಣ ಹತ್ತಿರ ಇಟ್ಟುಕೊಳ್ಳುವುದಕ್ಕೆ ಪ್ರಯಾಣ ಕಾಲದಲ್ಲೂ ಅನುಕೂಲವಾಗಿದೆ.'

## ಕೇಸರಿ ಕುಟೀರಮ್.

ಎಗ್ಮೋರು, ಮದರಾಸು.

ಪೋಸ್ಟ್ ಬಾಕ್ಸ್ 752 — ತಂತಿ "ಕೇಸರಿ" — ಫೋನ್ 8486

ಏಜಂಟರು — ಪಾ ಕಂಪೆನಿ, (ದಿ ಉಲನ್ ಮಾರ್ಟ್) ಮಂಗಳೂರು.



The Kanara Watch House Udipi, S. K.



ಗ್ಯಾರಂಟಿಯುಳ್ಳ ವಾಚು! — ಅತೀ ಕಡಿಮೆ ಬೆಲೆ

## ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ವಾಚುಗಳೂ, ಕ್ಲೋಕುಗಳೂ, ಟೈಮ್ ಪೀಸಗಳೂ, ಎಲಿಕ್ಟ್ರಿಕ್ ಮತ್ತು ಪೆಟ್ರೊಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

**ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.**

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸು, ಗ್ರಾಮೊಫೋನು, ಮತ್ತು ಪೆಟ್ರೊಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು. ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,

ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಪಿ. ಸೂ. — ನಿಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಕೊಡಿಸಿ ಸ್ವಚ್ಛವಾಗಿರಿಸುವುದರಿಂದ ಸರಿಯಾದ ಸಮಯವು ದೊರಕುವುದು.

## ಹಿಂದುಸ್ಥಾನದ ಇತಿಹಾಸ.

### ಅಶೋಕನ ರಾಜ್ಯಭಾರಕ್ರಮ.

ಹಿಂದುಸ್ಥಾನದ ಪ್ರಾಚೀನ ಇತಿಹಾಸದಲ್ಲಿ ಮಗೆದಾಧಿಕರಿಯಾಗಿದ್ದು ಮಹಾಪುರುಷನೆಂದೂ, ರಾಜಋಷಿಯೆಂದೂ ದೇಶವಿದೇಶಿಯ ಚರಿತ್ರೆಗಾರರಿಂದ ಕೊಂಡಾಡಲ್ಪಟ್ಟಿರುವ ಅಶೋಕ ಮಹಾರಾಜನ ರಾಜ್ಯಭಾರಕ್ರಮವನ್ನು ಪರಿಶೀಲಿಸಿದರೆ, ನವನಾಗರಿಕತೆಯನ್ನು ಹೊಂದಿ, ನವೀನತೆಯ ಪರಮಾವಧಿಯೆಂದೆನಿಸಿಕೊಂಡಿರುವ ಈಗಿನ ಕಾಲದ ನಿವಾಸಿಗಳಾದ ನಾವು ಕೂಡಾ ಕಲಿಯಬೇಕಾದುದು ಬಹಳವೇ ಇದೆಯೆಂದು ನಿಸ್ಸಂದೇಹವಾಗಿ ಹೇಳಬಹುದು. ಅಲ್ಲದೆ ಆ ಕಾಲದಲ್ಲಿ ಅಂದರೆ ಸುಮಾರು ಎರಡು ಸಾವಿರ ವರ್ಷಗಳ ಹಿಂದೆ—ಈಗ ಇರತಕ್ಕ ಉಗಿಬಂಡಿ, ತಂತಿ, ವಾಯುವಿಮಾನ ಇವೇ ಮೊದಲಾದ ಪ್ರಯಾಣ ಅಥವಾ ವ್ಯವಹಾರ ಸೌಕರ್ಯಗಳು ಇಲ್ಲದ ದೆಸೆಯಿಂದ ಪ್ರಜೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದಲ್ಲದೆ ಪ್ರಬಲರಾದ ಶತ್ರುಗಳ ಬಾಧೆಯನ್ನು ಪರಿಹರಿಸುವುದಾಗಲಿ ರಾಜಕೀಯ ಆರ್ಥಿಕ ಮತ್ತು ಸಾಮಾಜಿಕ ಸಂಸ್ಥೆಗಳನ್ನು ಏರ್ಪಡಿಸಿ ನಡಿಸುವುದಾಗಲಿ ಬಹು ಕಷ್ಟತರವಾಗಿತ್ತೆಂದ ಮೇಲೆ ಅಶೋಕ ಮಹಾರಾಜನ ಮಹತ್ವಿಕೆಯು ಎಷ್ಟೆಂದು ವಿದಿತವಾಗುವುದು

ಅಶೋಕನು ಮೌರ್ಯವಂಶದವನು ಬಿಂದುಸಾರನೆಂಬವನ ಮಗನು. ವಿಕ್ರಮಾದಿತ್ಯನ ಮೊಮ್ಮಗನು ಈತನು ಸುಮಾರು ಎರಡು ಸಾವಿರ ವರುಷಗಳ ಹಿಂದೆ ಅಂದರೆ ಕ್ರಿ. ಶ. ಮುಂಚೆ ೨೭೨ರಿಂದ ೨೩೨ರ ವರೆಗೆ ಸುಮಾರು ೪೦ ವರುಷ ಕಾಲ ರಾಜ್ಯಭಾರ ನಡಿಸಿದನು ಪಿತೃಪಿತಾಮಹರ ದಿಗ್ವಿಜಯಗಳ ದೆಸೆಯಿಂದ ಬಹು ವಿಸ್ತಾರವಾದ ರಾಜ್ಯವು ಪಟ್ಟವೇರುವಾಗಲೇ ಅಶೋಕನ ಕೈವಶವಾಯಿತು ಉತ್ತರ ಹಿಂದುಸ್ಥಾನವಲ್ಲದೆ, ದಕ್ಷಿಣ ಹಿಂದುಸ್ಥಾನದಲ್ಲಿ ಕಳಿಂಗ, ಚೋಳ, ಪಾಂಡ್ಯ, ಕೇರಳಪುತ್ರ, ಸತ್ಯಪುತ್ರ, (ತುಳುರಾಜ್ಯ) ಮೊದಲಾದ ರಾಜ್ಯಗಳಲ್ಲದೆ, ಉಳಿದ ಪ್ರಾಂತ್ಯಗಳೆಲ್ಲವೂ ಅಶೋಕನ ಪಾಲಿಗೆ ಸೇರಿತ್ತು

ಕಳಿಂಗ ದೇಶವು ಆ ಕಾಲದಲ್ಲಿ ಬಹು ಪ್ರಬಲಾವಸ್ಥೆಯಲ್ಲಿದ್ದುದರಿಂದ ಮೌರ್ಯರಾಜ್ಯಕ್ಕೆ ಸೇರಲು ಒಡಂಬಡಲಿಲ್ಲ ಅದ ಪ್ರಯುಕ್ತ ಅಶೋಕನು ಕಾರುಣ್ಯಮದದಿಂದಲೋ ಅಥವಾ ಸಾಮ್ರಾಜ್ಯಯೋಜನೆಯ ಆಸೆಯಿಂದಲೋ ಕಳಿಂಗರಾಜನ ಮೇಲೆ ದಂಡೆತ್ತಿಹೋದನು ಆದರೆ ಯುದ್ಧವು ಭೀಕರವಾಗಿ ಪರಿಣಮಿಸಿತು, ಇತ್ತಂಡದಲ್ಲಿ ಅಸಂಖ್ಯಾತ ಯೋಧರು ಮಡಿದರು ಈ ಕ್ರೂರ ದೃಶ್ಯವನ್ನು ನೋಡಿ ಅಶೋಕನ ಕೋಮಲವಾದ ಮನಸ್ಸು ಕರಗಿಹೋಯಿತು. ಪಶ್ಚಾತ್ತಾಪವು ಅಂಕುರಿಸಿತು ಪ್ರಾಣಹಿಂಸೆಯು ಅನಾವಶ್ಯಕವೆಂದು ತೋರಿ, ಇನ್ನು ಮುಂದೆ ಎಂದೆಂದಿಗೂ ಯುದ್ಧವನ್ನು ಮಾಡಲೊಲ್ಲೆನೆಂದು ಘೋರತರವಾದ ಶಪಥವನ್ನು ಮಾಡಿ ಅದರಂತೆಯೇ ಕೊನೆಯವರೆವಿಗೂ ವರ್ತಿಸಿದನು.

ಇಷ್ಟರಲ್ಲಿ ಬೌದ್ಧಮತದ ಗಾಳಿಯು ಈತನ ಮೇಲೆ ಬೀಸಿತು ಜೇನಿಗೆ ಸಕ್ಕರೆ ಸೇರಿಸಿದಂತಾಯಿತು ಅಹಿಂಸಾತತ್ವವು ಪ್ರಬಲವಾಗಿ ಬೆಳೆದು ಅಶೋಕನ ರಾಜ್ಯಭಾರಕ್ರಮದ ಅಡಿಗಲ್ಲಾಗಿ ಪರಿಣಮಿಸಿತು ತಾನು ಬೌದ್ಧಮತವನ್ನು ಅವಲಂಬಿಸಿದ್ದಲ್ಲದೆ ಅದರ ಸೂತ್ರಗಳನ್ನು ಮನೋವಾಕ್ಕಾಯ ಕರ್ಮಗಳಲ್ಲಿಯೂ ಪಾಲಿಸಿದ್ದಲ್ಲದೆ ತನ್ನ ಸಹೋದರ ಮಹೇಂದ್ರನನ್ನೂ, ಸಹೋದರಿ ಸಾಂಗಮಿತ್ರೆಯನ್ನೂ, ಮಗಳಾದ ಚಾರುಮತಿಯನ್ನೂ ದೇಶವಿದೇಶಗಳಿಗೆ ಬೌದ್ಧಮತವನ್ನು ಸಾರಲು ಕಳುಹಿಸಿದನು ತಾನಾದರೋ ಉಪಗುಪ್ತನೆಂಬೊಬ್ಬ ಗುರುವಿನ ಸಹಿತ, ಹಿಮಾಲಯ ತಪ್ಪಲನ್ನು, ಗಯ, ನೇಪಾಳ ಮೊದಲಾದ ಬೌದ್ಧಮತಸ್ಥರಿಗೆ ಶ್ರೇಷ್ಠವಾದ ಕ್ಷೇತ್ರಗಳನ್ನು ಸಂದರ್ಶಿಸಿ, ಅಲ್ಲಲ್ಲಿ ಆ ಕಾಲದ ವಿಷಯವಿಶೇಷ ಮಾಹಿತಿಯನ್ನು ಕೊಡತಕ್ಕ ಲಿಪಿಯುಕ್ತವಾದ ಕಲ್ಲುಗಂಬಗಳನ್ನು ನಿರ್ಮಿಸಿದನು. ತನ್ನ ರಾಜ್ಯಭಾರದ ೧೩ನೇ ೧೪ನೇ ವರುಷದಲ್ಲಿ ತನ್ನ ಆಳ್ವಿಕೆಯ ಕ್ರಮಗಳನ್ನು ಪ್ರಜಾಜನರೆಲ್ಲರಿಗೂ ಕಲ್ಲುಗಂಬಗಳ ಮೂಲಕ ತಿಳಿಸಿ ಪ್ರತಿಯೊಬ್ಬರು ಧರ್ಮಜೀವನವನ್ನು ನಡಿಸಬೇಕೆಂದು ವಿಷದಪಡಿಸಿದನು. ಈತನು ನಿರ್ಮಿಸಿದ ಕಲ್ಲುಗಂಬಗಳಿಂದ ಪ್ರಾಣಹಿಂಸೆ ಮಾಡಬಾರದು, ಮಾತಾಪಿತೃಗಳಿಗೂ, ಗುರುಹಿರಿಯರಿಗೂ ಮರ್ಯಾದೆ ಕೊಡತಕ್ಕದ್ದು, ಸತ್ಯವನ್ನು ಪಾಲಿಸತಕ್ಕದ್ದು, ಪರರನ್ನೂ ಪರರ ಮತಾಚಾರಗಳನ್ನೂ ನಿಂದೆಮಾಡಬಾರದು, ಮನೋವಾಕ್ಕಾಯ ಕರ್ಮಗಳಲ್ಲಿಯೂ ಪರಿಶುದ್ಧವಾಗಿರಬೇಕು, ಕಿರಿಯವರ ಮೇಲೂ ಸೇವಕರ ಮೇಲೂ ದಯೆತೋರಿಸಬೇಕು—ಇವೇ ಮುಂತಾದ ಹಲವು ಸಲಹೆಗಳು ಪ್ರಜೆಗಳ ಹಿತಕ್ಕಾಗಿ ಕೊಡಲ್ಪಟ್ಟಿರುವ ಹಾಗೆ ಕಾಣುತ್ತದೆ. ಅಶೋಕನು ಪ್ರಾಣಹಿಂಸೆಗೆ ಹೆದರಿ ಮಾಂಸಾಹಾರವನ್ನೂ ಮೃಗಬೇಟೆಯನ್ನೂ ಬಿಟ್ಟುಬಿಟ್ಟನು ಪ್ರಜೆಗಳು ಕೂಡ ಯಾವ ದಿನಗಳಲ್ಲಿ ಯಾವ ಯಾವ ಮೃಗಗಳನ್ನು ಆಹಾರಕ್ಕಾಗಿ ಕೊಲ್ಲಬಹುದೆಂಬುದನ್ನು ನಿರ್ಧರಿಸಿದನು. ಬೌದ್ಧಮತವನ್ನು ಪ್ರಚಾರಕ್ಕೆ ತರುವ ಬಗ್ಗೆ ಸುಮಾರು ಕ್ರಿ. ಶ. ಮುಂಚೆ ೨೪೪ನೇ ವರುಷ ಒಂದು ಮಹಾಸಭೆಯನ್ನು ಏರ್ಪಡಿಸಿದನು. ಪ್ರಜೆಗಳನ್ನು ತನ್ನ ಮಕ್ಕಳೋಪಾದಿ ಸಲಹಿದನು ಕೊನೆಗೆ ರಾಜ್ಯಭಾರವನ್ನು ತನ್ನ ಮಂತ್ರಿಗೂ ಪುತ್ರನಿಗೂ ಬಿಟ್ಟುಕೊಟ್ಟು ತಾನು ಕಾವಿಬಟ್ಟೆಯನ್ನು ಧರಿಸಿ ರಾಜಋಷಿಯಂತೆ ಮೆರೆದನು

ರಾಜ್ಯವಂತೂ ಬಹು ವಿಸ್ತಾರವಾಗಿತ್ತು ಆದರೆ ಅಶೋಕನು ತನ್ನ ರಾಜ್ಯಭಾರಕ್ರಮದಿಂದಲೂ, ಸುಧಾರಣೆಗಳಿಂದಲೂ ಧರ್ಮಜೀವನದಿಂದಲೂ ರಾಜ್ಯದಲ್ಲೆಲ್ಲಿಯೂ ಸುಖವೂ ಶಾಂತಿಯೂ ನೆಲಸುವಂತೆ ಮಾಡಿದನು ಈತನ ರಾಜ್ಯಭಾರಕ್ರಮವನ್ನು ವಿಚಾರಿಸಿದರೆ ಈತನ ಬುದ್ಧಿಚಾತುರ್ಯವೂ ಪ್ರಜೆಗಳ ಮೇಲಿನ ನಿಷ್ಕಳಂಕವಾದ ಪ್ರೀತಿಯೂ ವ್ಯಕ್ತವಾಗದಿರದು.

ಅಶೋಕನ ಕಾಲದಲ್ಲಿ ೬,೦೦,೦೦೦ ಕಾಲಾಳುಗಳೂ, ೩೦,೦೦೦ ಅಶ್ವಾರೂಢರೂ, ೯,೦೦೦ ಆನೆಗಳೂ, ಅನೇಕ ಹಡಗು ಪಡೆಗಳೂ ಇದ್ದ ಹಾಗೆ ಕಂಡುಬರುತ್ತದೆ ಸೈನ್ಯದ ಕಾರ್ಯಕಲಾಪಗಳನ್ನು ನಡಿಸುವ ಬಗ್ಗೆ ಅಶೋಕನು ಆರು ಶಾಖೆಗಳುಳ್ಳ ಸಮರಸಭೆಯೊಂದನ್ನು ನಿರ್ಮಿಸಿದನು ಆರು ಶಾಖೆಗಳ ಸದಸ್ಯರು, ಕಾಲಾಳು, ಅಶ್ವಪಡೆ, ರಥ, ಆನೆ ಸರಬರಾಯಿ ಮತ್ತು ಹಡಗುಪಡೆ ಮುಂತಾದ ಆರು ವಿಷಯಗಳನ್ನು ಕ್ರಮವಾಗಿ ಯೋಚಿಸಿ ನಡಿಸುತ್ತಿದ್ದರು ಸೈನಿಕರಿಗೆ ಬೇಕಾದ ಶಸ್ತ್ರಾಸ್ತ್ರಗಳನ್ನೂ ಉಡುಪು ಉಡುಗೆರೆಗಳನ್ನೂ ಅರಸನೇ ಕೊಡುತ್ತಿದ್ದನು ರಥಕ್ಕೆ ನಾಲ್ಕು ಆನೆಗಳನ್ನು ಕಟ್ಟುತ್ತಿದ್ದರು ಪ್ರತಿ ಆನೆಯ ಮೇಲೆ ಶಸ್ತ್ರಧಾರಿ ಆದ ಮೂರು ಯೋಧರು ಕುಳಿತುಕೊಳ್ಳುತ್ತಿದ್ದರು ಯುದ್ಧದಲ್ಲಿ ನಿಯಮವಿತ್ತು ಬೇಸಾಯಗಾರರಿಗೆ ಯೋಧರಿಂದ ಹಾನಿಯಿಲ್ಲ ಅಲ್ಲದೆ ಶತ್ರುರಾಜರ ಮನೆ ಮಾರುಗಳನ್ನು ಸೂರೆಮಾಡುವುದಾಗಲಿ, ಮರಗಳನ್ನು ಕಡಿಯುವುದಾಗಲಿ, ಪಟ್ಟಣಗಳನ್ನು ಸುಟ್ಟುಹಾಕುವುದಾಗಲಿ ಇರಲಿಲ್ಲ

ಎಚ್. ಎನ್.

[ಸಶೇಷ].

---

## ಕೊಡಗು ದೇಶದ ರಾಜ್ಯಭಾರ ಕ್ರಮ.

ಲೇಖಕ:—ಎಮ್. ಜಿ. ಐಗಳ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಮಾರ್ಕ್ವಿಸ್ ಒಫ್ ವೆಲ್ಲೆಸ್ಲಿಯು ರಾಜನಿಗೆ ಒಂದು ಖಡ್ಗವನ್ನು ಇನಾಮಾಗಿ ಕೊಟ್ಟನು. ವೀರರಾಜನಿಗೆ ಸೋದೆಯಲ್ಲಿ ಮೊಮ್ಮಗನು ಹುಟ್ಟಿದಾಗ ಇವನು ಮಹಾದೇವಿ ರಾಣಿಯೊಡನೆ ಸುಖದಿಂದ ಇದ್ದನು. ಈ ರಾಣಿಯಲ್ಲಿ ಇವನಿಗೆ ಇಬ್ಬರು ಹೆಣ್ಣು ಮಕ್ಕಳು ಹುಟ್ಟಿದರು ಆದರೆ ಗಂಡು ಮಕ್ಕಳು ಹುಟ್ಟದೆ ಇದ್ದುದರಿಂದ ಅವನಿಗೆ ಮನಸ್ಸಿನಲ್ಲಿ ಬಹಳ ಬೇಸರ ಉಂಟಾಯಿತು ಕುಟುಂಬದವರ ಮೇಲೆ ಅವಿಶ್ವಾಸ ಉಂಟಾಯಿತು. ತನಗೆ ಯಾರಾದರೂ ವಿಷ ಹಾಕಿ ಕೊಲ್ಲುವರೋ ಎಂಬ ಸಂಶಯವು ಹುಟ್ಟುತ್ತಲೇ ಇತ್ತು. ಒಂದೊಂದು ಸಾರಿ ಹುಚ್ಚನಂತೆ ನಟಿಸುತ್ತಿದ್ದನು. ರಾಜನ ಮನಸ್ಸಿನಲ್ಲಿಂದ ಆಶೆಗಳೂ ನಿರಾಶೆಗಳೂ ಹುಟ್ಟುತ್ತಲೇ ಇದ್ದವು.

### ವೀರರಾಜೇಂದ್ರನ ವೀಲು

ವೀರರಾಜನ ಕಡೆಯ ಮಾತುಗಳು:—ರಕ್ತಾಕ್ಷಿ ಸಂವತ್ಸರದ ಪುಷ್ಯ ಶು| ೭ನೆಯ ದಿವಸ (೧೮೦೫ನೇ ದಶಂಬರ—ಜನವರಿ) ಮಾರ್ಕ್ವಿಸ್ ಒಫ್ ವೆಲ್ಲೆಸ್ಲಿಯು ಬಂಗಾಳದಿಂದ ಕಳುಹಿಸಿದ ಬಹುಮಾನದ ಖಡ್ಗವನ್ನು ಕೆಪ್ಟನ್ ಮೆಹೂನಿಯು ತೆಗೆದುಕೊಂಡು ಬಂದು ವೀರರಾಜನ ನಡುವಿಗೆ ಕಟ್ಟಿದನು. ೧೮೦೭ನೇ ಇಸವಿಯ ಮಾಘ ಮಾಸದಲ್ಲಿ ವೀರರಾಜನು ಕೆಪ್ಟನ್ ಮೆಹೂನಿಗೆ ಹೀಗೆ ಹೇಳಿದನು ನಾನು ಮಹಾದೇವಿ ರಾಣಿಯನ್ನು ಮದುವೆಯಾಗಿ ಅವಳೊಡನೆ ಸಿಂಹಾಸನದಲ್ಲಿ ಕುಳಿತಿರುವಾಗ ಇವಳಲ್ಲಿ ಹುಟ್ಟಿದ ಮಗನು ನನ್ನ ಉತ್ತರಾಧಿಕಾರಿಯಾಗುವನು ಎಂದು ನಾನು ನೆನಸಿದ್ದೆ. ಆದರೆ ಅವಳಿಗೆ ಇಬ್ಬರು ಹೆಣ್ಣು ಮಕ್ಕಳು ಮಾತ್ರವೇ ಹುಟ್ಟಿದ್ದಾರೆ ಇನ್ನು ಮುಂದೆ ಅವಳಲ್ಲಿ ಗಂಡು ಮಗನು ಹುಟ್ಟಿದರೆ ಅವನು ನನ್ನ ಉತ್ತರಾಧಿಕಾರಿಯಾಗಬೇಕು ಆದರೆ ಅವಳಲ್ಲಿ ಗಂಡು ಮಗನು ಹುಟ್ಟಬೇಕೆಂದು ದೇವರ ಮನಸ್ಸಿನಲ್ಲಿ ಇಲ್ಲದಿದ್ದರೆ ನನ್ನ ಭಂಗಾರದವಳ ಮಕ್ಕಳಾದ ರಾಜಶೇಖರಪ್ಪ, ಶಿಶುಶೇಖರಪ್ಪ ಮತ್ತು ಚಂದ್ರಶೇಖರಪ್ಪ ಇವರು ಪಟ್ಟಕ್ಕೆ ಬರಬೇಕು' ಎಂದು ಹೇಳಿ ಕಳುಹಿಸಿದನು

ಇದರ ನಂತರ ಮಹಾದೇವಿ ರಾಣಿಗೆ ಇನ್ನಿಬ್ಬರು ಹೆಣ್ಣು ಮಕ್ಕಳು ಜನಿಸಿದರು. ಈ ರಾಣಿಯು ಕಲಿವರ್ಷ ೪೯೧೯ನೇ (೧೮೦೭) ಪ್ರಭವ ಸಂವತ್ಸರದ ಜೇಷ್ಠ ಶು ೭ರಲ್ಲಿ ಕಾಲವಾದಳು. ಇವಳ ಮರಣಾನಂತರ ತನಗೆ ಗಂಡು ಮಕ್ಕಳು ಹುಟ್ಟುವರೆಂಬ ಆಸೆಯು ತೀರಿತು. ತನ್ನ ಭಂಗಾರದವಳ ಮಕ್ಕಳಿಗೆ ಪಟ್ಟ ಸಿಕ್ಕಿದರೆ ತನ್ನ ರಾಣಿಯ ಮಕ್ಕಳಾದ ದೇವಮ್ಮಾಜಿ, ಮುದ್ದಮ್ಮಾಜಿ, ರಾಜಮ್ಮಾಜಿ, ಮಹಾದೇವಮ್ಮಾಜಿ ಈ ನಾಲ್ವರು ರಾಜಕುಮಾರಿಯರಿಗೆ ಅಪಾಯ ಬರುವುದೆಂದು ಹೆದರಿಕೆಯಾಯಿತು ಅದಕ್ಕಾಗಿ ಇವನು ವೀಲನ್ನು ಬರೆದನು. ನನ್ನ ಹಿರೇ ಮಗಳಾದ ದೇವಮ್ಮಾಜಿಯಲ್ಲಿ ಗಂಡು ಮಗನು ಹುಟ್ಟಿದರೆ ಅವನಿಗೆ ವೀರರಾಜನೆಂಬ ಹೆಸರನ್ನಿಟ್ಟು ರಾಜ ಮುದ್ರೆಯನ್ನೂ ಮಾರ್ಕ್ವಿಸ್ ಒಫ್ ವೆಲ್ಲೆಸ್ಲಿಯು ಕೊಟ್ಟ ಖಡ್ಗವನ್ನೂ ಕೊಟ್ಟು ಪಟ್ಟವನ್ನು ಕಟ್ಟಬೇಕು ಅವಳಲ್ಲಿ ಗಂಡು ಮಗನು ಹುಟ್ಟದೆ ಇದ್ದರೆ ಅವಳ ತಂಗಿಯಂದಿರಲ್ಲಿ ಹುಟ್ಟಿದ ಗಂಡು ಮಕ್ಕಳಲ್ಲಿ ಹಿರೇಯವನಿಗೆ ಪಟ್ಟಗಟ್ಟಬೇಕು ಈ ನಾಲ್ವರು ರಾಣಿಗಳಲ್ಲಿ ಮಕ್ಕಳಿದ್ದರೆ ತನ್ನ ಭಂಗಾರದವಳ ಮಕ್ಕಳಿಗೆ ರಾಜ್ಯಭಾರವನ್ನು ವಹಿಸಿ ಕೊಡಕೂಡದು ಈ ನಾಲ್ವರು ರಾಣಿಯವರ ಸಂತತಿಯು ಅಳಿದುಹೋದರೆ ಭಂಗಾರದವಳ ೩ ಮಂದಿ ಗಂಡು ಮಕ್ಕಳಲ್ಲಿ ಯೋಗ್ಯತೆಯುಳ್ಳವನಿಗೆ ಪಟ್ಟಗಟ್ಟಬೇಕು ಅಥವಾ ಅವರ ಸಂತತಿಯವರಿಗಾಗಲೀ ರಾಜ್ಯಭಾರವನ್ನು ವಹಿಸಿಕೊಡಬೇಕು ಮನುಷ್ಯನ ಅವಸ್ಥೆಯು ಇಂಥಾ ರೀತಿಯಲ್ಲಿಯೇ ಇದ್ದೀತೆಂದು ಹೇಳಲು ಸಾಧ್ಯವಿಲ್ಲದ್ದರಿಂದ ನಾನು ಇದನ್ನು ಬರೆದಿಟ್ಟಿದ್ದೇನೆ ನನ್ನ ಕುಟುಂಬದವರಿಗೆ ಏನೊಂದು ಹಾನಿ ಬಾರದಂತೆ ಇಂಗ್ಲಿಷ ಸರಕಾರವು ಅವರ ರಕ್ಷಕರಾಗಿರಬೇಕು. ಮತ್ತು ಈ ವೀಲಿನಲ್ಲಿ ಬರದಂತೆ ನಡಿಸಬೇಕು.

ಈ ಸಂಗತಿಯು ನನ್ನ ಉತ್ತರಾಧಿಕಾರಿಗಳಿಗೆ ತಿಳಿಯುವಂತೆ ಇದಕ್ಕೆ ರಾಜಮುದ್ರೆಯನ್ನು ಒತ್ತಿ ಅರಮನೆಯ ಭಂಡಾರದಲ್ಲಿ ಇಟ್ಟಿರುತ್ತೇನೆ. ರಾಜೇಂದ್ರ ನಾಮೆಯಲ್ಲಿ ಬರೆದ ವಿಷಯಗಳು ಇಲ್ಲಿಗೆ ಮುಗಿದವು

### ದೊಡ್ಡ ವೀರರಾಜೇಂದ್ರನ ದುಃಖಕರವಾದ ಮರಣ

೧೮೦೭—೧೮೦೯

ಮಹಾದೇವಿ ರಾಣಿಯ ಮರಣಾನಂತರ ವೀರರಾಜನ ಅನೇಕ ಕ್ರೂರಕೃತ್ಯಗಳನ್ನು ಮಾಡಲಾರಂಭಿಸಿದನು ಅವಳಲ್ಲಿ ಗಂಡು ಮಗನು ಹುಟ್ಟದೆ ಇದ್ದುದರಿಂದ ತನಗೆ ಉತ್ತರಾಧಿಕಾರಿ ಇಲ್ಲವೆಂಬ ನಿರಾಶೆಯುಂಟಾಯಿತು ಅವನು ಮಹಾದೇವಿ ಅಮ್ಮಾಜಿಯನ್ನು ಬಹಳ ಪ್ರೀತಿಯಿಂದ ನೋಡುತ್ತಿದ್ದನು ವೀರರಾಜನ ಮನಸ್ಸಿನಲ್ಲಿ ಯಾವ ತರದ ಬೇಸರವಿದ್ದರೂ ಅವಳು ಅದನ್ನು ಹೋಗಲಾಡಿಸುತ್ತಿದ್ದಳು ಅವಳ ಮರಣಾನಂತರ ಅವನು ಹುಚ್ಚನಂತೆ ನಟಿಸಲಾರಂಭಿಸಿದನು ತಲೆಗೇರಿದ ಹುಚ್ಚು ಇಳಿದೊಡನೆಯೇ ತನ್ನ ಪ್ರಿಯಳಾದ ಮಹಾದೇವಿಯು ತನ್ನನ್ನು ಒಬ್ಬಂಟಿಗನಾಗಿ ಬಿಟ್ಟುಹೋದಳಲ್ಲಾ ಎಂದು ಚಿಂತಿಸುವನು ಅವನನ್ನು ಪ್ರೀತಿಸುವವರು ಯಾರೂ ಇರಲಿಲ್ಲ ಬೇರೆಯವರ ಮೇಲೆ ಅವನಿಗೆ ನಂಬಿಕೆಯೂ ಇರಲಿಲ್ಲ.

ಮಹಾದೇವಿ ರಾಣಿಗೆ ನಾಲ್ಕು ಮಂದಿ ಹೆಣ್ಣು ಮಕ್ಕಳಿದ್ದರು ಅವಳು ಸಾಯುವಾಗ ಹಿರಿಯ ಮಗಳಿಗೆ ೮ ವರುಷ ಪ್ರಾಯವಾಗಿತ್ತು ತಂದೆಯ ದುಃಖವನ್ನು ಶಮನಮಾಡುವವರು ಇವರೇ ನಾಲ್ಕು ಮಂದಿಯಲ್ಲದೆ ಮತ್ತೆ ಯಾರೂ ಇರಲಿಲ್ಲ. ತನ್ನ ಭಂಗಾರದವಳ ಮಗಳ ಮಕ್ಕಳಲ್ಲಿ ಒಬ್ಬನಿಗೆ ಪಟ್ಟಗಟ್ಟುವದೆಂದು ಮೊದಲು ಆಲೋಚಿಸಿದ್ದನು. ಈಗ ಅವನ ಆಲೋಚನೆಯು ಬದಲಾಯಿತು ಮಹಾದೇವಿ ರಾಣಿಯ ಮಕ್ಕಳಲ್ಲಿ ಒಬ್ಬಳು ಪ್ರಾಯಭರಿತಳಾಗಿ ಅವಳಿಗೆ ಒಬ್ಬ ಗಂಡು ಮಗನು ಹುಟ್ಟಿದರೆ ಅವನು ತನ್ನ ಉತ್ತರಾಧಿಕಾರಿಯಾಗಬಹುದೆಂದು ಆಲೋಚಿಸಿದ್ದನು ಹಿರಿಯವಳಾದ ದೇವಮ್ಮಾಜಿಗೆ ೯ ವರ್ಷದಲ್ಲಿಯೇ ಮಲ್ಲಪ್ಪನೆಂಬ ಕೊಡಗನಿಗೆ ಮದುವೆ ಮಾಡಿಕೊಟ್ಟಿದ್ದನು. ಅವಳಿಗೆ ಒಂದು ಲಕ್ಷ ರೂಪಾಯಿ ಬೆಲೆಬಾಳುವ ವಸ್ತ್ರಾಭರಣಗಳನ್ನು ಕೊಟ್ಟಿದ್ದನು ಮಹಾದೇವಿ ರಾಣಿಯು ಕಾಲವಾದ ನಂತರ ಯಾರಾದರೂ ತನಗೆ ವಿಷ ಹಾಕಿ ಕೊಲ್ಲುವರೆಂಬ ಸಂಶಯವು ಹುಟ್ಟಿತು ಅವಳನ್ನು ಮಾಟಮಾಡಿ ಯಾರೋ ಕೊಂದಿರಬೇಕೆಂದು ಸಂಶಯವು ಹುಟ್ಟಿತು. ತನಗೂ ಯಾರಾದರೂ ಮಾಟಮಾಡಿ ಕೊಲ್ಲುವರೊ ಎಂಬ ಸಂಶಯ ಉಂಟಾಯಿತು. ಈ ರೀತಿಯಲ್ಲಿ ಸಂಶಯದಿಂದ ಅನೇಕರನ್ನು ಕೊಲ್ಲಿಸಿದನು.

[ಸಶೇಷ].

53 ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ

## ಉಪಯೋಗಿಸಲ್ಪಟ್ಟ ಔಷಧಗಳು.

1. ಧಾತುಪುಷ್ಟಿ ಲೇಹ—ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲಿ ಧಾತುವು ನಷ್ಟವಾಗುವಿಕೆ, ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಉರಿಯುವದು ಮುಂತಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ಹೊಂದಿಕೊಳ್ಳುವುದು ಕ್ರಯ ಡಬ್ಬಿ 1ಕ್ಕೆ ರೂ 2—8—0 ಮೂರು ಡಬ್ಬಿಗಳಿಗೆ ರೂ 7

2. ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆ ನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತೀ ಶೀಘ್ರದಲ್ಲಿಯೇ ಗುಣಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ, ಆಂತರಿಕ ಆರೋಗ್ಯವನ್ನು ಒದಗಿಸಿ ಮನೋಭಿಲಾಷೆಯನ್ನು ಪೂರೈಸಿರುವವು ಕ್ರಯ 1 ಬಾಟಲಿ ಔಷಧಕ್ಕೂ, ಒಂದು ಡಬ್ಬಿ ಮಾತ್ರೆಗೂ ರೂ. 2—4—0 ಮೂರು ಬಾಟಲಿ ಮತ್ತು ಡಬ್ಬಿಗಳಿಗೆ ರೂ. 6—4—0,

3 ಮೇಹ ಕುಠಾರ—ಇದು ಮೂತ್ರಸ್ಥಾನದಿಂದ ಕೆಂಪು ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ ವ್ರಣವನ್ನೂ ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ 2—8—0. 3ಕ್ಕೆ ರೂ. 7

4. ಮಲೇರಿಯಾ ನಿವಾರಕ—ದಿನ ಬಿಟ್ಟು ಬರುವ ಜ್ವರ, 2 ಯಾ 3 ದಿವಸಕ್ಕೊಂದುಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗಡ್ಡೆಯನ್ನು ಕರಗಿಸಿ, ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1ಕ್ಕೆ ರೂ. 1—8—0. 3 ಬಾಟ್ಲಿಗಳಿಗೆ ರೂ. 4—4—0

5. ಬಾಲಗ್ರಹ ಗುಳಿಗೆ—ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ. ಬಾಟ್ಲಿ 1ಕ್ಕೆ ಆಣೆ 10 3ಕ್ಕೆ ರೂ. 1—12—0.

6 ಕಸ್ತೂರಿ ಮಿಶ್ರಿತ ಕನಕಾಸವಾರಿಷ್ಟ—ದಮ್ಮುಕೆಮ್ಮಿಗೆ. ಬಾಟ್ಲಿ 1ಕ್ಕೆ ರೂ 1—8—0. 3ಕ್ಕೆ 4—4—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧ ರವಾನೆ ಮಾಡುವೆವು ಕೆಟಲಾಗು ತರಿಸಿ ನೋಡಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್, ರಥಬೀದಿ, ಮಂಗಳೂರು, ದ ಕ

ಮಲೇರಿಯಾ

ಮಲೇರಿಯಾ ಎಂಬ

ಮಲೇಜ್ವರ

ಜಗ ಪ್ರಸಿದ್ಧವಾದ ದಿವ್ಯ ಔಷಧ

ಇಸನೊಫೇಲ

Diamonds! Diamonds!!

**Ramachandra Krishna Shet**

DONGERKERY, MANGALORE.

ಉತ್ಕೃಷ್ಟ ತರಗತಿಯ ಜುನ್ನಾಕ (first quality Selected) ಎಮ್ ಸ್ಟೋರಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಕ್ಕಿರುತ್ತವೆ ಹೆಚ್ಚಿನ ಮಾಹಿತಿಗೆ ಬರೆಯಿರಿ

ಕೆ ರಾಮಚಂದ್ರ ಕೃಷ್ಣ ಶೇಟ್, ಜುವೆಲ್ಲರ್

ಡೊಂಗರಕೇರಿ, ಮಂಗಳೂರು

## ಎರಡು ರತ್ನಗಳು.

ಇನ್ನು ಮಲೇರಿಯಕ್ಕೆ ಹೆದರಬೇಕಾದುದಿಲ್ಲ!

ಎಂಟಿ ಮಲೇರಿಯಾ ಮಾತ್ರೆಗಳು

ಮಲೇರಿಯಕ್ಕೆ ಖಂಡಿತವಾದ, ಭದ್ರವಾದ ಗುಣಕಾರಿ ಒಮ್ಮೆ ಪರೀಕ್ಷಿಸಿ ನೋಡಿದರೆ ತಿಳಿಯುವದು

ಬಾಟಲಿಗೆ ರೂ. 2—8—0 ಅಂಚೆವೆಚ್ಚ ಮತ್ತು ಪೇಕಿಂಗ್ ಬೇರೆ

ಆಶ್ಚರ್ಯಕರ ಔಷಧಿ

ಅತಿಸಾರ, ಅಜೀರ್ಣದಿಂದಾದ ಎಂತಹ ಮಲಬದ್ಧತೆಯಾದರೂ ಓಡುವದು.

ಏತರಿಂದ?

ಹಿಂದೀ ಔಷಧಿ ಹಿಂದೀಯರಿಗಾಗಿ HEDAURIN FOR DYSENTERY CHOLERA CURE ಹಿಂದೀಯರಿಂದಲೇ ವ್ಯಾಪಾರಕ್ಕೆ

ಹಿಂದೀಯರಿಂದಲೇ ಕಂಡುಹಿಡಿಯಲ್ಪಟ್ಟದು ತರಲ್ಪಟ್ಟದು

ಬಿಲ್ಲಿನ ಕ್ರಯ ಆಣೆ 0—15—0 2 ಬಿಲ್ಲಿನ ಬಾಟಲಿಗೆ ರೂ 1—12—0.

ಪರೀಕ್ಷಿಸಿ ತೃಪ್ತರಾಗಿರಿ!

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಆಫೀಸು, ದಿ ಕಿಣಿ ಡಿಸ್ಪೆನ್ಸರಿ,

ಡೊಂಗರಕೇರಿ ರಸ್ತೆ, ಕೊಡಿಯಾಲಬೈಲ್ ಪೋಸ್ಟು,

ಮಂಗಳೂರು. ದ. ಕನ್ನಡ

## ಶಕ್ತಿವಂತ ಕವಚ

ಈ ಕವಚವು ಹಿಮಾಲಯ ಪರ್ವತದ ಯೋಗಿಗಳಿಂದ ಸಿಕ್ಕಿದ್ದಾಗಿರುತ್ತದೆ. ಈ ಕವಚವು ಆಶ್ಚರ್ಯಕರವಾದ ಕೆಲಸಗಳನ್ನು ನಡೆಸಿರುತ್ತದೆ ಈ ಕವಚವನ್ನು ಧರಿಸುವವರಿಗೆ ತನ್ನ ಕೆಲಸದಲ್ಲಿ ಜಯಪ್ರದವೂ, ವ್ಯಾಪಾರದಲ್ಲಿ ಲಾಭವೂ, ವ್ಯಾಜ್ಯಗಳಲ್ಲಿ ಗೆಲವೂ, ಗ್ರಹಚಾರ ದೆಸೆಯಿಂದುಂಟಾಗುವ ಕೇಡುಗಳ ನಿವಾರಣೆಯೂ, ರೋಗಪೀಡಿತರಾದವರಿಗೆ ಕ್ಷೇಮವೂ, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದೂ ಮತ್ತು ಇತರ ಬಗೆಬಗೆಯ ಲಾಭಗಳು ಉಂಟಾಗುವವು ಕವಚ 1ಕ್ಕೆ ರೂಪಾಯಿ ೩. 3 ಕವಚಗಳಿಗೆ ೭—8—0 ಟಪ್ಪಾಲು ಖರ್ಚು 6 ಆಣೆ ಪ್ರತ್ಯೇಕ. ನಾವು ರವಾನಿಸಿ ಕೊಡುವ ನಿಯಮದ ಪ್ರಕಾರ ಈ ಕವಚವನ್ನು ಧರಿಸುವವರಿಗೆ ಲಾಭವಾಗದೆ ಇದ್ದಲ್ಲಿ 10 ರೂಪಾಯಿ ಇನಾಮಾಗಿ ಕೊಡುವೆವು.

ಪತ್ರವ್ಯವಹಾರ ಇಂಗ್ಲೀಷಿನಲ್ಲಿಯೇ ನಡಸಬೇಕು

**Sadhan Kuti**

Hatkhala, (*Calcutta.*)

## ಶರ್ಮಾಸ್ ಫಾರ್ಮಸ್ಯುಟಿಕಲ್ ವರ್ಕ್ಸ್, ಜೋಡುಮಠ ರಸ್ತೆ, ಮಂಗಳೂರು ದ. ಕ.

— ಇವರ —

## ಆಯುರ್ವೇದಿಯ ಸಿದ್ಧೌಷಧಗಳು.

ಅಶೋಕ ಮಿಶ್ರಣ — ಸಂಸಾರವು ಸಾರಮಯವಾಗಿ ವಿರಾಜಿಸಬೇಕೆಂದಿದ್ದರೆ—ಮುಟ್ಟಿನದೋಷ, ಬಂಜೆತನ ಬಾಣಂತಿಯರ ರೋಗವೇ ಮೊದಲಾದವುಗಳಿಂದ ನಿತ್ಯ ದುಃಖಿನಿಯಾಗಿರದೆ ನಿತ್ಯ ಸುಖಿಗಳಾಗಿರಬೇಕೆಂದು ಬಯಸುವಿರಾದರೆ ಇದೋ ವನಿತೆಯರ ಪುನರುಜ್ಜೀವನಕ್ಕೆ ನಂದನವನದಂತಿರುವ 'ಶರ್ಮರವರ ಅಶೋಕ ಮಿಶ್ರಣ'ವನ್ನೇ ಸೇವಿಸಿರಿ. ಮರೆಯಬೇಡಿ! ಸೀಸೆಯ ಬೆಲೆ ರೂ 2—0—0 ಮಾತ್ರ ಟ ಖ ಬೇರೆ

**ಮೇಹರಕ್ಷಾಮೃತಂ** — ಇದೀಗ ಬಗೆಬಗೆಯ ಮೇಹಾಣುಗಳನ್ನೂ, ಸ್ತ್ರೀಯರ ಸಂಸರ್ಗದ ರೋಗಗಳನ್ನೂ ಶೀಘ್ರದಲ್ಲೇ ನಾಶಗೊಳಿಸಬಲ್ಲುದು ಮೂತ್ರಾಶಯದ ಹುಣ್ಣುಗಳಿಗೂ, ಬಿಳಿದು ಇತ್ಯಾದಿ ಸ್ರಾವವಾಗುವದಕ್ಕೂ ದಿವ್ಯವಾದ 'ಔಷಧಿಯು. ಈ 'ಮೇಹರಕ್ಷಾಮೃತ'ವು ಅಮೃತ ಸಮಾನವಾಗಿರುವುದೆಂಬುದನ್ನು ನೆನಪಿನಲ್ಲಿಡಿ! ಸೀಸೆಯ ಬೆಲೆ ರೂ 2—0—0 ಮಾತ್ರ! ಟ ಖ ಬೇರೆ.

ಇವಲ್ಲದೆ ಇನ್ನೂ ಬಗೆಬಗೆಯ ರೋಗಗಳ ಮಮೂಕ್ಕೆ ನಾಟುವಂತಿರುವ ಶರ್ಮರವರ ಸಿದ್ಧೌಷಧಗಳ ವಿಸ್ತೃತ ಕ್ಯಾಟಲಾಗಿಗೂ ವ್ಯಾಪಾರಸ್ಥರ ನಿಬಂಧನಾದಿಗಳಿಗೂ ಒಂದಾಣೆ ಸ್ಟಾಂಪಿನೊಂದಿಗೆ ಬರೆದು ಕೇಳ್ಕಿರಿ!

ಸಾಮುಖ್ಯ ಏಜಂಟರು —

ಶ್ರೀ ರಾಧಾಕೃಷ್ಣ ವಿಲಾಸ, ರಥಬೀದಿ ಮಂಗಳೂರು. ದ ಕ,

## 'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು— ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು ಭೂತಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು ಲಾಭ, ಜಯ, ಕಾರ್ಯಾನುಕೂಲವನ್ನೀಯುವದು ಅನೇಕರಿಗೆ ಈ ನಮ್ಮ 'ತಾಯಿತ್' ನಂಬಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ ಸ್ಪೆಶಲ್ ರೂಪಾಯಿ ೫೦ರಿಂದ ೫೦೦ ರೂಪಾಯಿ ವರೆಗೆ ದೈವೀಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

**ಶಿವರಾಮ ಭಟ್ಟ ತೆಂಗಿನಮನೆ,**

ಸಕ್ಕರ್ ಪೋಸ್ಟು ಕಡೂರ್ ತಾಲ್ಲೂ

EDITED, PRINTED & PUBLISHED BY V. S KAMATH AT M. T A. SHARADA PRESS, MANGALORE

ಚಂದಾ ನಿರ್ಣಯ:— ವರ್ಷ ಒಂದಕ್ಕೆ ರೂಪಾಯಿ 2-0-0

Registered No. M. 489.

ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

# ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾಃ ನ ಭೇಜಿರೇ ಭೀಮವಿಷೇಣ ಭೀತಿಮ್ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ[illegible] ಗರವ ಮಥಿಸಲು ಸುರಾಸುರರಂ ಹರುಷವಾಯಿತೆ ತುಸ್ಟಿ ನಿಸ್ವವ ಸಹುತ ಬರುತಿರುವ ॥
ಗರಲಕವರಂಜಿದರೆ ಸುಧೆಯನು ಮರೆತು[illegible] ಕ್ಕೃದ್ರ[illegible] ತಿಂ[illegible] ಕುಳಿತರೆ ತೆರಳ ಎಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೪. ಮಂಗಳೂರು ತಾ. ೨೮ನೇ ಶುಕ್ರವಾರ ನವಂಬರ ೧೯೩೦ (28 11—30.) ಸಂಚಿಕೆ ೪೭


## THE CANARA BANKING CORPORATION, UDIPI, LTD.

## ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. Branches:—COONDAPOOR & Mangalore

ಹೆಡ್ ಆಫೀಸು: ಉಡುಪಿ. ಶಾಖೆ:—ಕುಂದಾಪುರ. ಮತ್ತು ಮಂಗಳೂರು

Authorised Capital Rs. 3,50,000. Subscribed & Called up Rs. 2,25,000

ನಿಯಮಿತ ಮೂಲಧನ ರೂ. 3,50,000 ಚಂದಾ ಹಾಕಲ್ಪಟ್ಟ ಮತ್ತು ವಸೂಲಾದ ಮೂಲಧನ ರೂ. 2,25,000

Statement of Affairs as on 31 October 1930

| Capital and Liabilities | | Property and Assets | |
|---|---|---|---|
| 1 Paid up Capital | Rs. 2,25,[illegible] | 1 Premises Building Furniture etc | Rs. [illegible] |
| 2 Reserve and other funds | [illegible] 5,400 0 0 | 2 Investment on G. P. Notes | [illegible] 14 5 0 |
| 3 Deposits | [illegible] | 3 Investment on Approved Securities | [illegible] 12 [illegible] |
| 4 Bills for collection as per contra | | 4 Bills for collection | [illegible] |
| 5 Due to Banks | | 5 Sundries | [illegible] |
| 6 Sundries | 8 [illegible] | 6 Cash in hand & with banks | [illegible]45 |
| Total | [illegible] 12 [illegible] | Total | 26,[illegible] 12 [illegible] |

Office of the Corporation, UDIPI [illegible] 11—30

N. ANANDA RAO *Secretary & Manager*

## ಅಮೃತಾಂಜನ.

[illegible]

ರಿಂಗ್‌ವರ್ಮ್ ಮುಲಾಮು.— [illegible]

ದಂತಮಂಜನ:— [illegible]

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.



ಮಕ್ಕಳ ಸಲುವಾಗಿ,

## ಡೋಂಗರ

ಇವರ

## ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದುಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಆತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪನಿ,

ಗಿರಗಾಂವ, ಮುಂಬಾಯಿ.

ಏಜಂಟರು —ದಿ ಉಲನ್ ಮಾರ್ಟ್, ಮಂಗಳೂರು.



## ಶ್ರೀ ಸರಸ್ವತೀ ಭಂಡಾರ

| | | |
|---|---|---|
| 1 | ಸಚಿತ್ರ [illegible] ಕಥಾ ಸಂಗ್ರಹ | 1—8—0 |
| 2 | [illegible] ಚರಿತ್ರೆ | 0—12—0 |
| 3 | [illegible] | [illegible]—0 |
| 4 | [illegible] ಕಥೆಗಳು | 2—0—0 |
| | ಮಹಾಭಾರತ ವಿಜಯ | 3—0—0 |
| 6 | ಶೃಂಗಾರ [illegible] ಕಥೆಗಳು | —14—0 |
| 7. | [illegible] | 1—0—0 |
| 8 | ವಿಮಲಾ ದೇವಿ | 1—12—0 |
| 9 | ಸೌಭಾಗ್ಯ [illegible] | 0—8—0 |
| 10 | [illegible] | 1—4—0 |
| 11 | [illegible] | 0—12—0 |
| 12 | ಆನಂದ ಮಠ | 1—12—0 |
| 13 | [illegible] | 0—12—0 |
| 14 | ವಚನ ಭಾರತ | 1—8—0 |
| 16. | ಇಂಡಿಯನ್ ಪಿನಲ್ ಕೋಡ್ | 2—8—0 |
| 16 | ಕ್ರಿಮಿನಲ್ ಪ್ರೊಸೀಜರ್ ಕೋಡ್ | 3—0—0 |
| 17 | ಲ್ಯಾಂಡ್ ರೆವಿನ್ಯೂ ಕೋಡ್ | 1—0—0 |

ಈ ಮೇಲ್ಕಂಡವುಗಳಲ್ಲದೆ ನಮ್ಮಲ್ಲಿ ಇನ್ನೂ ಸಾವಿರಾರು ನಮೂನೆಯ ಕನ್ನಡ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗ್ ಅಪೇಕ್ಷಿಸುವವರು ಕೂಡಲೇ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಲೈಬ್ರರಿಗಳಲ್ಲಿ ಇಡಲು ಯೋಗ್ಯವಾದ ಅನೇಕ ಪುಸ್ತಕಗಳು ನಮ್ಮಲ್ಲಿ ಹಾಜರಿರುತ್ತವೆ.

ವಿಳಾಸ— ಶ್ರೀ ಸರಸ್ವತೀ ಭಂಡಾರ.

[illegible] ಪುಸ್ತಕ [illegible] ಆಫೀಸಿನ ಕಂಪೌಂಡ್, ಮಂಗಳೂರು [illegible]

ಮಂಗಳೂರು 15ನೇ ನವಂಬರ 1930.

# ದಿ ಜೆನಿತ್ ಲೈಫ್ ಎಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಮುಂಬಾಯಿ.

ಅಯ್ಯಾ!

ನನ್ನ ಮೃತಪಟ್ಟ ಪುರುಷೋತ್ತಮನೆಂಬ ಮಗನು ಈ ಕೆಳಗಿನ ಕಂಪೆನಿಗಳಲ್ಲಿ ವಿಮೆ ಮಾಡಿರುವನು.

(1) ಆಸ್ಟ್ರೇಲೇಸ್ಯದ ನೇಶನಲ್ ಮ್ಯುಚುವಲ್ ಲೈಫ್ ಎಸೋಸಿಯೇಶ

(2) ಭಾರತ್ ಇನ್‌ಶೂರೆನ್ಸ್ ಕೋ ಲಿಮಿಟೆಡ್,

(3) ಝೆನಿತ್ ಲೈಫ್ ಎಸ್ಯೂರೆನ್ಸ್ ಕೋ. ಲಿಮಿಟೆಡ್

ಇದೇ ತಿಂಗಳ 5ನೇ ತಾರೀಕಿಗೆ, ತಮ್ಮ ಹಕ್ಕುಬಾಧ್ಯತೆಗಳನ್ನು ತೋರಿಸುವ ಪತ್ರಗಳು ಎಲ್ಲಾ ಕಂಪೆನಿಗಳಿಗೆ ಕಳುಹಿಸಲಾಗಿರುವವು. ನಿಮ್ಮ ಮುಖ್ಯ ಏಜೆಂಟರಾದ ಮೆಸರ್ಸ್ ಕಾವಾರ್ ಎಂಡ್ ಕೋ—ಇವರು ತಮ್ಮ ಈ ಕೆಳಗಿನ ತಂತಿ ಸಮಾಚಾರವನ್ನು 14ನೇ ತಾರೀಕಿಗೆ ಪಡೆದಿರುವರು

ಪೋಲಿಸಿ ನಂಬ್ರ 6387 ರಾಜಪ್ಪನವರ ಹಕ್ಕು ಬಾಧ್ಯತೆಯು ಅಂಗೀಕರಿಸೋಣಾಗಿಯದೆ. ಪೋಲಿಸಿಯು ಚೆಕ್ಕಾಗಿ ಮಾಡಲಿಕ್ಕೆ ಕಳ ಹಲ್ಪಟ್ಟಿರುವದು—ಝೆನಿತ್ ಲೈಫ್

ಪೋಲಿಸಿಯು ಈ ಹೊತ್ತು ಬಂದು ತಲ್ಪಿರುವದು ನಾನದನ್ನು ನಿಮ್ಮ ಮುಖ್ಯ ಏಜಂಟರಾದ ಕಾವಾರ್ ಎಂಡ್ ಕೋ—ಇವರಿಗೆ ಕೊಟ್ಟ ಕೂಡಲೆ, ನನ್ನ ಹಕ್ಕಿನ ಐವೇಜನ್ನು ಸಂಪೂರ್ಣವಾಗಿ ಕೊಟ್ಟಿರುವರು . ಆದರೆ ಇತರ ಕಂಪೆನಿಗಳಿಂದ ಹಕ್ಕು ಬಾಧ್ಯತೆಯ ಪತ್ರಗಳು ತಲ್ಪಿದ ವಿಷಯದಲ್ಲಿ ಉತ್ತರವೇ ಇಲ್ಲ

ಝೆನಿತ್ ಕಂಪೆನಿಯು, ಹಣ ಸಂದಾಯದ ವಿಷಯದಲ್ಲಿ ಬಹಳ ತೀವ್ರವಾಗಿರುವುದೆಂದು ಇದು ವರೆಗೂ ಕೇಳಿದ್ದೆನು. ಆದರೆ ಈಗ ನನ್ನ ಸ್ವಾನುಭವವು ಮೇಲಿನ ಕಂಪೆನಿಯ ವಿಷಯದಲ್ಲಿ ಸಂಪೂರ್ಣ ವಿಶ್ವಾಸವನ್ನು ಹುಟ್ಟಿಸಿರುವದು

ಇತಿ ನಿಮ್ಮ ನಂಬಿಗಸ್ಥ,

ಎ. ರಾಜಪ್ಪ,

ಪಿ ಡಬ್ಲ್ಯು ಡಿ ಕಂಟ್ರಾಕ್ಟರ್



## ಆಶ್ಚರ್ಯಕರ ಔಷಧಿ

ಅತಿಸಾರ, ಅಜೀರ್ಣದಿಂದಾದ ಎಂತಹ ಮಲಬದ್ಧತೆಯಾದರೂ ಓಡುವದು.

ಏ ತ ರಿ ಂ ದ ?

ಹಿಂದೀ ಔಷಧಿ. ಹಿಂದೀಯರಿಗಾಗಿ ಹಿಂದೀಯರಿಂದಲೇ ಕಂಡುಹಿಡಿಯಲ್ಪಟ್ಟದ್ದು ಹಿಂದೀಯರಿಂದಲೇ ವ್ಯಾಪಾರಕ್ಕೆ ತರಲ್ಪಟ್ಟದ್ದು

HEDAURIN
DYSENTERY
CHOLERA CURE

ಬಿಲ್ಲಿನ ಕ್ರಯ ಆಣೆ 0—15—0 2 ಬಿಲ್ಲಿನ ಬಾಟಲಿಗೆ ರೂ 1—12—0

ಪ ರೀ ಕ್ಷಿ ಸಿ ತೃ ಪ್ತ ರಾ ಗಿ ರಿ !

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಆಫೀಸು,
ಡೊಂಗರಕೇರಿ ರಸ್ತೆ,
ಮಂ ಗ ಳೂ ರು .

ದಿ ಕಿಣಿ ಡಿಸ್ಪೆನ್ಸರಿ,
ಕೊಡಿಯಾಲಬೈಲ್ ಪೋಸ್ಟು,
ದ. ಕನ್ನಡಾ



ಶೆಣೈಸ್ ಫಾರ್ಮಸ್ಯುಟಿಕಲ್ ವರ್ಕ್ಸ್, ಜೋಡುಮರ ರಸ್ತೆ, ಮಂಗಳೂರು ದ. ಕ.

— ಇವರ —

## ಆಯುರ್ವೇದಿಯ ಸಿದ್ಧೌಷಧಗಳು.

**ಅಶೋಕ ಮಿಶ್ರಣ** — ನಾರಿಯರ ಸಂಸಾರವು ಸಾರಮಯವಾಗಿ ವಿರಾಜಿಸಬೇಕೆಂದಿದ್ದರೆ—ಮುಟ್ಟುದೋಷ, ಬಂಜೆತನ ಬಾಣಂತಿಯರ ರೋಗವೇ ಮೊದಲಾದವುಗಳಿಂದ ನಿತ್ಯ ದುಃಖಿನಿಯಾಗಿರದೆ ನಿತ್ಯ ಸ ಖಿ ಳಾಗಿರಬೇಕೆಂದು ಬಯಸುವಿರಾದರೆ ಇದೋ ವನಿತೆಯರ ಪುನರುಜ್ಜೀವನಕ್ಕೆ ನಂದನವನದಂತಿರುವ ' ಶಣೈರವರ ಅಶೋಕ ಮಿಶ್ರಣ' ವನ್ನೇ ಸೇವಿಸಿರಿ ಮರೆಯಬೇಡಿ! ಸೀಸೆಯ ಬೆಲೆ ರೂ 2—0—0 ಮಾತ್ರ ಟ ಖ ಬೇರೆ

**ಮೇಹರಕ್ಷಾಮೃತಂ** — ಇದೀಗ ಬಗೆಬಗೆಯ ಮೇಹಾಣುಗಳನ್ನೂ, ಸ್ತ್ರೀಯರ ಸಂಸರ್ಗದ ರೋಗಗಳನ್ನೂ ಶೀಘ್ರದಲ್ಲೇ ನಾಶಗೊಳಿಸಬಲ್ಲುದು ಮೂತ್ರಾಶಯದ ಹುಣ್ಣುಗಳಿಗೂ, ಬಿಳಿದು ಇತ್ಯಾದಿ ಸ್ರಾವವಾಗುವದಕ್ಕೂ ದಿವ್ಯವಾದ ಔಷಧ ವಿದು ಈ "ಮೇಹರಕ್ಷಾಮೃತ"ವು ಅಮೃತ ಸಮಾನವಾಗಿರುವುದೆಂಬುದನ್ನು ನೆನಪಿನಲ್ಲಿಡಿ! ಸೀಸೆಯ ಬೆಲೆ ರೂ 3—0—0 ಮಾತ್ರ! ಟ ಖ ಬೇರೆ.

ಇವಲ್ಲದೆ ಇನ್ನೂ ಬಗೆಬಗೆಯ ರೋಗಗಳ ಪರಿಹಾರಕ್ಕೆ ನಾವು ತಯಾರಿಸುವ ಶಣೈರವರ ಸಿದ್ಧೌಷಧಗಳ ವಿಸ್ತೃತ ಕ್ಯಾಟಲಾಗಿಗೂ ವ್ಯಾಪಾರಸ್ಥರ ನಿಬಂಧನಾದಿಗಳಿಗೂ ಒಂದಾಣೆ ಸ್ಟಾಂಪಿನೊಂದಿಗೆ ಬರೆದು ಕೇಳ್ಕೊಳ್ಳಿರಿ!

ಪ್ರಾಮುಖ್ಯ ಏಜಂಟರು —

ಶ್ರೀ ರಾ ಘ ವೇಂ ದ್ರ ವಿ ಲಾ ಸ , ರಥಬೀದಿ ಮಂಗಳೂರು ದ. ಕ.



## WANTED

Agents who can turn out good busi ness in the towns of Buntwal, Puttur & Karkal and other important centres

Apply without delay to —

**The Bombay Life office,**
Mangalore or Udipi

N B —Ask for our Scheme of Prizes for 1930


## ನೋಟೀಸು.

ಪುತ್ತೂರು ಡಿ. ಮುನ್ಸೀಫ ಕೋರ್ಟಿನಲ್ಲಿ

ಕ್ರಮ ನಂ 595/1930

ವಾದಿ—ಧರ್ಮಸ್ಥಳ ಮಂಜಪ್ಪ ಹೆಗಡೇರು.

ಪ್ರತಿವಾದಿ—ಗೋಸಾವಿಯಾ ಸ್ವಾಬಾ.

ಮಂಗಳೂರು ತಾಲೂಕು ಇರ್ವತ್ತೂರು ಗ್ರಾಮದ ಶಿಟ್ಟಿಬೆಟ್ಟು ಎಂಬಲ್ಲಿರುವ ಅಲ್ಲಿ ಸ್ವಾಬರ ಮಗ ಗೋಸಾವಿಯಾ ಸ್ವಾಬರಿಗೆ ತಿಳಿಯಪಡಿಸುವದೇನಂದರೆ —

ಸದರಿ ವಾದಿರು ನಿಮ್ಮ ಮೇಲೆ ಮಿಗ್ರ ಸಮೇತ ಆಸ್ತಿ ಸ್ವಾಧೀನತೆ ಕುರಿತು ಮೇಲ್ಕಂಡ ಕೋರ್ಟಿನಲ್ಲಿ ಮಾಡಿದ ಸದರಿ ವ್ಯಾಜ್ಯವು ಇದೇ 1930ನೇ ಇಸವಿ ದಶಂಬರ ತಿಂಗಳ ತಾರೀಕು 6ನೇ ಹಗಲು 10 ಗಂಟೆಗೆ ಸದರಿ ಕೋರ್ಟಿನಲ್ಲಿ ತನ್ಕಿಗೆ ಇಟ್ಟಿರುವದರಿಂದ ನೀವು ಆ ದಿವಸ ಖುದ್ದುನಿಂದಾಗಲೀ ವಕೀಲರದ್ವಾರವಾಗಲೀ ಹಾಜರಾಗಿ ಉದಹರಿಸಿಕೊಳ್ಳಲಿಕ್ಕೆ ತಪ್ಪಿದರೆ ನಿಮ್ಮನ್ನು ಏಕಪಕ್ಷ ಮಾಡಿ ತೀರ್ಮಾನಿಸಲಾದೀತು

ತಾ 24 11 30 ) ಪುತ್ತೂರು }

**S. Ananda Rau,**
Vakil for Plaintiff

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ

O. S No 415/1930

ಮಾರುವಳ ಧರ್ಮ ಭಟ್ಟ—ವಾದಿ

ಸಂಕಮ್ಮ ಕೂಡಾ—ಪ್ರತಿವಾದಿರು

ಸದರಿ ವಾದಿಗೆ ಸಂಕಮ್ಮ ಕೂಡಾ 3 ಜನರು ರೂಪಾಯಿ 228ಕ್ಕೆ ಬರಕೊಟ್ಟ ಡಿ ಪ್ರೋ ನೋಟಿನ ಮೇಲೆ ದಾಕಲ್ಲಮಾಡಿದ ಸದರಿ ವ್ಯಾಜ್ಯವು ತಾ 5—12—30ಕ್ಕೆ ತನ್ಕಿಗ ಇಟ್ಟಿರುತ್ತದೆ.

ಆದುದರಿಂದ ಸದರಿ ವ್ಯಾಜ್ಯದಲ್ಲಿ ಏನಾದರೂ ಆಕ್ಷೇಪಣೆಗಳು ಇದ್ದರೆ ಸದರಿ ದಿವಸ 10 ಗಂಟೆಗೆ ಈ ಕೋರ್ಟಿನ ಮುಂದೆ ಸ್ವತಹಾ ಆಗಲಿ ವಕೀಲರ ಮುಖಾಂತರವಾಗಲಿ ಹಾಜರಾಗಿ ಉದಹರಿಸತಕ್ಕದ್ದು ಇದಕ್ಕೆ ತಪ್ಪಿದರೆ ಏಕಪಕ್ಷ ವಿಚಾರಣೆಯಿಂದ ತೀರ್ಮಾನಿಸಲಾದೀತು, ತಿಳಿದಿರಿ.

ಪುತ್ತೂರು } ತಾ 20-11-30 }

**C. S. Shastry,**
Vakil for Plff.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂ 746/1930

ಕುಂಞಾಲಿ ಬ್ಯಾರಿ, ಮಹಮ್ಮದ ಬ್ಯಾರಿಯ ಮಗ— ಕಾಸರಗೋಡು ತಾಲೂಕು ಕೂಡ್ಲು ಗ್ರಾಮದ ಚೇರಂಗೈ ಎಂಬಲ್ಲಿರುವವ—ವಾದಿ

ಮತ್ತು

೧ ಕುಂಞಾಮ ಯಾನೆ ಅಬ್ದುಲ್ಲ ಬ್ಯಾರಿ, ೨ ಕುಂಞಾಮದೆ ಬ್ಯಾರಿ ೩ ಆಸ್ಯಂಮ, ೪ ಮರಿಯುಮ್ಮ ಯಾನೆ ಮರಿಂಞಾ—ಇವರೆಲ್ಲರೂ ಮೃತಪಟ್ಟ ಮಹಮ್ಮದೆ ಬ್ಯಾರಿಯ ಮಕ್ಕಳು, ಕೂಡ್ಲು ಗ್ರಾಮದ ಕಾವುಗೋಳಿಯಲ್ಲಿರುವವರು—ಪ್ರತಿವಾದಿರು

ಇವರುಗಳಿಗೆ /

ಪ್ರತಿವಾದಿರ ತಂದೆ ಮೃತಪಟ್ಟ ಮಹಮ್ಮದೆ ಬ್ಯಾರಿಯು ವಾದಿಗೆ ತಾ 8—10—1917ರಲ್ಲಿ ಬರಕೊಟ್ಟ ಅಡವು ದಸ್ತಾವೇಜು ಪ್ರಕಾರ ಹಣಕ್ಕ ಐವಜನ್ನು ಬರಮಾಡಿಕೊಳ್ಳುವ ಬಗ್ಗೆ ವಾದಿಯು ಮೇಲ್ಕಂಡ ವ್ಯಾಜ್ಯ ದಾಕಲು ಮಾಡಿರುತ್ತಾನೆ ಸದ್ರಿ ವ್ಯಾಜ್ಯವು ತನ್ಕಿ ಬಗ್ಗೆ ಸದ್ರಿ ಕೋರ್ಟಿನಲ್ಲಿ ತಾರೀಕು 29—11—'30ಕ್ಕೆ ಇಟ್ಟಿರುತ್ತದೆ ಪ್ರತಿವಾದಿರು ಆ ದಿವಸ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸುವರೆ ತಪ್ಪಿದ್ದಲ್ಲಿ ವ್ಯಾಜ್ಯವು ಆ ದಿವಸ ಏಕಪಕ್ಷವಾಗಿ ತೀರ್ಮಾನವಾದೀತೆಂತ ಈ ಮೂಲಕ ತಿಳಿಯಪಡಿಸೋಣಾಗುತ್ತದೆ.

ಕಾಸರಗೋಡು ತಾ. ೨೧-೧೧-೩೦

(ಸಹಿ) ಕೆದ್ಲ ಲಕ್ಷ್ಮಣ ರಾವ್
ವಾದಿಯ ಕಡೆ ವಕೀಲ್

## ಶಾಸ್ತ್ರೀಯ
## ಅಮೂಲ್ಯ ಔಷಧಗಳು.

ಅಮೃತಾಶುಂಠಾದಿ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು ಮಾತ್ರವಲ್ಲ ಆಯುರಾರೋಗ್ಯ ಅಧಿಕ ಸಾಮರ್ಥ್ಯವನ್ನೀಯುವುದು. ೩ ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಕ್ಷಯರೋಗ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0. ಅಂಚೆ ವೆಚ್ಚ ಬೇರೆ

### ಕಸ್ತೂರಿಮಿಶ್ರಣ!
### ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಜೀವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಮಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಥಿತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದಲ್ಲಿರುವಾಗ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳೆಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಧನುರ್ಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು

ಕ್ರಯ ಬಾಟ್ಲಿ 1ಕ್ಕೆ 2-0-0 ಪೋಸ್ಟೇಜು ವಗೈರೆ ಬೇರೆ

ಹೆಚ್ಚಿನ ವಿವರಗಳಿಗೆ "ಆಯುರ್ವೇದ ಚಿಕಿತ್ಸಾ ರಹಸ್ಯ" ಎಂಬ ಪುಸ್ತಕವನ್ನು ಓದಿರಿ

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ ಕನ್ನಡ

## ಸುಂದರವಾದ ಜರಿಕೆಲಸ ಮಾಡಿದ ಕಾಶಿಯ
## — ಪಟ್ಟೆ ಸೀರೆಗಳು —

ಜರಿ ಅಂಚುಗಳುಳ್ಳ ಪ್ಲೈನ್ ಸೀರೆಗಳ ಮೇಲೆ ... ಧರ್ಮ ರೂ ೩೪ ಲಾಗಾಯತು ರೂ ೧೫೦ರ ವರೆಗೆ ಬುಟ್ಟಿಗಳ ... ರೂ ೭೫ರಿಂದ ಲಾಗಾಯತು ರೂಪಾಯಿ ೩೦೦ ವರೆಗೆ ... ಬಟ್ಟೆಗಳು, ಶಾಲು, ಪಿತಾಂಬರ, ಕಸ್ತೂರಿ, ಕೇಸರಿ ... ಪೂಜಾ ಸಾಮಾನುಗಳು ಇತ್ಯಾದಿ ... ಹೆಚ್ಚಿನ ವಿಷಯ ಕ್ಯಾಟಲಾಗಿನಿಂದ ತಿಳಿಯಬಹುದು.

ವಿಳಾಸ —
ಶಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ್
ಮಣಿಕರ್ಣಿಕಾ ಘಾಟ್, ಕಾಶಿ, ಬನಾರಸ್ ಸಿಟಿ

## The Udipi Mutual Benefit Fund, UDIPI
## ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರಿಗೆ ಬರೆಯಬಹುದು.

ಎಂ. ಮುಖ್ಯಪ್ರಾಣಭಟ್ಟ, ಪ್ರೊಪ್ರೈಟರ.

# The Canara Bank Limited, Mangalore.
## ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

Established July 1906. — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

BRANCHES -Karkal, Kasargod, Cochin Udipi Gangolli Coondapur, Bombay Puttur, Calicut & Alleppey

ಬ್ರಾ:—ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಆಲ್ಲಪೆ

| | |
|---|---|
| Authorised and fully paid up Capital Rs 300 000 - 0 - 0 | ಅಧಿಕಾರಗೊಳಿಸಲ್ಪಟ್ಟ ಪೂರ್ತಿಯಾಗಿ ಕೊಡಲ್ಪಟ್ಟ ಮೂಲಧನವು ರೂ 300,000 0—0 |
| Reserve and other sinking Funds Rs 431 732 - 9 - 7 | ಕ್ಷೇಮನಿಧಿ ಮತ್ತು ಇತರ ಫಂಡುಗಳು ರೂ. 431,732 - 9 - 7 |
| Amount invested on G P Notes Rs 817,097 - 2 - 0 | ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ 817,097 - 2 - 0 |
| Rates of interest on fixed deposits at Head Office and Branch 6¼% for 2 Years 6% ,, 1 Year | ಕಾಯಂ ಠೇವಣಿಗಳ ಮೇಲೆ ಕೊಡಲಾಗುವ ಬಡ್ಡಿ ದರ—ಎರಡು ವರುಷಗಳಿಗೆ ಸೇಕಡಾ 6¼% 1 ವರುಷಕ್ಕೆ ಸೇಕಡಾ 6. |
| Season deposits of Rs 1000/- & above terminable by the end of June are received at 6¼% p. a | ಜೂನ್ ಅಂತ್ಯದ ಒಳಗೆ ಮುಗಿಯುವ ರೂ 1000/- ದ ಮೇಲ್ಪಟ್ಟ ಸೀಸನ್ ಡಿಪೋಜಿಟುಗಳಿಗೆ ಬಡ್ಡಿ ದರ ಸೇಕಡಾ 6¼. |

Current Account Deposits received and interest allowed on daily balance of Rs 50 and above that on multiples of Rs 10 @ 3% from 1st Janauary to 30th June and @ 2% from 1st July to 31st December No interest will be allowed unless the depositor earns not less than Rs 5/ during a period of 6 months ending either 30th June or 31st December in any year

Except by special arrangement, no interest is allowed on sums exceeding Rs 10,000/ in the case of Head Office and Bombay & Cochin Branches and on sums exceeding Rs 3,000 in the case of the remaining Branches

Short notice deposits requiring one week's notice of withdrawal given at any time after one month from the date of deposit are received and interest allowed at 4 per annum Interest on such deposits will cease on notice

*For further particulars please apply to —*

Canara Bank Ltd, *Mangalore, 15—10—1930* — **K. Venkat Rao,** *Secretary.*

# The Pangal Nayak Bank, Ltd.

Branch Office Mangalore — **Head Office. Udipi** *Established 1920.* — Agency Office Cochin

| | |
|---|---|
| Authorised Capital: Rs. 2,00,000- | Paid up Capital Rs. 1,75,000- |
| Issued Capital Rs. 1,75,000- | Reserve and other Funds Rs 1,42,810- |

***Fixed Deposits received for***
***24 months at 6%***
***12, 15, 18 or 21 months at 6***
***6 or 9 months at 5½***
***3 months at 5***

***Interest being payable every 3 months.***

Current Deposit Accounts are opened free of charge and interest allowed on Daily balances

*Further information may be had on application to the* SECRETARY *at the* HEAD OFFICE *or to the* AGENT *at the* BRANCH

Office of the Bank, Udipi 6 - 10 - 1930 — P Laxman Nayak, Secretary

ತಯಾರಾಗಿವೆ — ಮಾರಾಟಕ್ಕೆ ಸಿದ್ಧವಿವೆ — ತ್ವರೆಮಾಡಿರಿ

## 1931ನೇ ಇಸವಿಯ ಪೋಕೆಟ್ ಡಾಯರಿಗಳು. 1931ನೇ ಇಸವಿಯ

| | | | | | | | |
|---|---|---|---|---|---|---|---|
| ಅಂದವಾದ ಕೆಲಿಕೊ ಬ್ಯಾಂಡಿನ ದೊಡ್ಡ ಸ್ಯಾಜಿನ ಡ್ಯಾರಿ (ಇಂಗ್ಲೀಷ ಮಟರಿನೊಂದಿಗೆ) | 0 | 9 | 0 | ಕೆಲಿಕೊ ಬ್ಯಾಂಡಿನ ಮಿಡಿಯಮ್ ಸ್ಯಾಜಿನದ್ದು | 0 | ~ | 0 |
| ಕೆಲಿಕೊ ಬ್ಯಾಂಡು ದೊಡ್ಡದು ಮುಚ್ಚಳದ್ದು | 0 | 14 | 0 | ,, ,, ಮುಚ್ಚಳದ್ದು | 0 | 12 | 0 |
| ಕೆಲಿಕೊ ಬ್ಯಾಂಡು ದೊಡ್ಡದು (ಕನ್ನಡ ಮಟರಿನೊಂದಿಗೆ) | 0 | 8 | 0 | ಮಿಡಿಯಮ್ ಸ್ಯಾಜ್ ಸ್ಟಿಫ್ ಬ್ಯಾಂಡ್ ಡ್ಯಾರಿ | 0 | 6 | 0 |
| ,, ಮುಚ್ಚಳದ್ದು ,, | 0 | 14 | 0 | ಸಣ್ಣ ಸ್ಯಾಜಿನ ಕೆಲಿಕೊ ಬ್ಯಾಂಡ್ ಡ್ಯಾರಿ | 0 | 6 | 0 |
| | | | | ,, ಮುಚ್ಚಳದ್ದು | 0 | 10 | 0 |
| | | | | ಸ್ಟಿಫ್ ಬ್ಯಾಂಡ್ ಡ್ಯಾರಿ | 0 | 5 | 0 |

**ದೊಡ್ಡ ಸ್ಯಾಜಿನ ಡ್ಯಾರಿಯಲ್ಲಿ ಟಪ್ಪಾಲು ಮತ್ತು ಕೋರ್ಟು ವ್ಯವಹಾರ, ಸ್ಟಾಂಪು ಆಕ್ಟು ಮುಂತಾದ ಕ್ರಮಗಳನ್ನು ಕನ್ನಡದಲ್ಲಿ ಕೊಟ್ಟಿರುತ್ತದೆ**

ರಖಂ ತೆಗೆದುಕೊಳ್ಳುವವರಿಗೂ, ವ್ಯಾಪಾರಿಗಳಿಗೂ ತುಂಬಾ ಕಮಿಶನು ಕೊಡಲಾಗುವದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

## ಮಹಾತ್ಮಾಜಿಯವರ
# ಸತ್ಯಾಗ್ರಹ ಸಮಾಚಾರ.

ತಾರೀಖು ೧೪.

**ಮುಂಬಾಯಿಯಲ್ಲಿ.**

ನಾರೀ ಸತ್ಯಾಗ್ರಹಿಗಳ ಮೇಲೆ ಹೊರಿಸಲ್ಪಟ್ಟ ಪೋಲೀಸು ಅತ್ಯಾಚಾರಗಳನ್ನು ತಿರೀಫ ಸಾಹೇಬರು ವಿಚಾರಣೆ ನಡಿಸದಿದ್ದು ದರಿಂದ ಅನೇಕ ಪ್ರಮುಖ ಸತ್ಯಾಗ್ರಹ ಮುಖಂಡರು ಈ ದಿನ ಅಪರಾಹ್ನ ಘಂಟೆ ೩ಕ್ಕೆ ಸರಿಯಾಗಿ ಮುಂಬಾಯಿಯ "ಆಜಾದ" ಮೈದಾನಿನಲ್ಲಿ ಸಭೆಸೇರಿ ಪೋಲೀಸು ಅತ್ಯಾಚಾರಗಳನ್ನು ನಿರೋಧಿಸಿದರು. ಹೆಚ್ಚು ಹೊತ್ತಿನ ವರೆಗೂ ಚರ್ಚೆ ನಡೆದು ಯಾವ ವಿಧದಲ್ಲಿಯಾದರೂ ಕೂಡ ಪೋಲೀಸು ಅತ್ಯಾಚಾರಗಳನ್ನು ಖಂಡಿಸಲಿಕ್ಕೇಬೇಕೆಂದು ಠರಾವುಗಳನ್ನು ಪಾಸುಮಾಡಿರುವರೆಂದು ತಿಳಿದುಬರುತ್ತದೆ.

ಮುಂಬಾಯಿಯ "ಮಂಗಲದಾಸ್ ಮಾರ್ಕೆಟ"ನ್ನು ಈ ದಿನ ತೆರೆದಿದ್ದರು. ಆ ಕೂಡಲೆ ದೇಶಸೇವಿಕಾ ಸಂಘದ ನಾರೀ ಸತ್ಯಾಗ್ರಹಿಗಳು ಅಂಗಡಿಯ ಬಾಗಲಲ್ಲಿ ನಿಂತು ಪಿಕೆಟ್ ಮಾಡಲಾರಂಭಿಸಿದರು. ಅದಕ್ಕಾಗಿ ಮಾರ್ಕೆಟನ್ನು ಮುಚ್ಚಿದರು. ಆದರೆ ವರ್ತಕನೊಬ್ಬನು ಹಟಸಾಧನೆಯಿಂದ ತನ್ನ ಅಂಗಡಿಯನ್ನು ಕೆಲಹೊತ್ತಿನ ವರೆಗೂ ತೆರೆದಿಟ್ಟನು. ಎರಡು ಮಂದಿ ನಾರೀ ಸತ್ಯಾಗ್ರಹಿಗಳು ಆತನ ಅಂಗಡಿಯನ್ನು ಪಿಕೆಟ್ ಮಾಡಲಾರಂಭಿಸಿದರು. ಆ ಕೂಡಲೇ ಅವರ ದಸ್ತಗಿರಿಯೂ ನಡೆಯಿತು. ಅಂಗಡಿಯ ಬಳಿಯಲ್ಲಿ ಜನರು ಗುಂಪುಗುಂಪಾಗಿ ನೆರೆದರು. ಆ ಮೇಲೆ ವರ್ತಕನು ತನ್ನ ಅಂಗಡಿಯ ಬಾಗಿಲನ್ನು ಮುಚ್ಚಲೇ ಬೇಕಾಯಿತು.

ಮುಂಬಾಯಿಯ 'ಪೀಸ್‌ಗೂಡ್ಸ್' ವ್ಯಾಪಾರಸ್ಥರು ಸಭೆ ಸೇರಿ ಮೂಳ್ಜಿಜೇತಾ ಮಾರ್ಕೆಟ್ ಎಂಬ ದೊಡ್ಡ ವಿದೇಶೀಜವಳಿ ಅಂಗಡಿಗಳನ್ನು ಪುನಃ ತೆರೆಯಬೇಕೆಂಬ ನಿರ್ಧಾರ ಮಾಡಿದರು. ಆದರೆ ಸೇಕಡಾ ೮೦ ಮಂದಿಯೂ ಮೇಲೆ ಹೇಳಿದ ನಿರ್ಧಾರಕ್ಕೆ ಪ್ರತಿಕೂಲರಾಗಿದ್ದುದರಿಂದ ಮಾರ್ಕೇಟನ್ನು ಎಂದಿನಂತೆಯೇ ಮುಚ್ಚಿರುವರು.

**ನಾಗಪುರದಲ್ಲಿ.**

ವಿದೇಶಿ ಬಟ್ಟೆಯನ್ನು ತರಿಸುವದಿಲ್ಲವೆಂದೂ ಕೇವಲಖಾದಿ ಇಟ್ಟು ವ್ಯಾಪಾರವನ್ನು ನಡೆಸುವ ಮೂರು ತಿಂಗಳೊಳಗೆ ಏರ್ಪಾಡು ಕ್ತೇವೆಂದೂ ಒಪ್ಪಿಗೆ ಇತ್ತು, ಕಾಂಗ್ರೆಸ್ ಕಾರ್ಯಕ್ರಮಗಳನ್ನು ಅನುಸರಿಸಿರುವ ಒಂದು ಬರಾರಿಗೆ ಅರಿನ ಸುಮಾರು ೬೦ ಮಂದಿ ಮುಖ್ಯ ವರ್ತಕರು ಸಹಿಮಾಡಿರುವರು. ಪರದೇಶೀ ಬಟ್ಟೆ ಮಾತ್ರವಲ್ಲದೆ Silk (ರೇಷ್ಮೆ) ಕೂಡ ತ್ಯಜಿಸಬೇಕೆಂದು ನಾಗಪುರದ ಸುತ್ತುಮುತ್ತಲಿದ್ದ ಎಲ್ಲಾ ಊರುಗಳು ಘೋರ ಪ್ರತಿಜ್ಞೆಗಳನ್ನು ತೊಟ್ಟಿರುವರೆಂದು ತಿಳಿದುಬರುತ್ತದೆ.

ನಾಗಪುರದ ಬಂದಿಖಾನೆಯಲ್ಲಿರುವ ರಾಜಕೀಯ ಅಪರಾಧಿಕರು ಒಳ್ಳೇ ಆಹಾರವನ್ನು ಕೊಡದಿದ್ದುದಕ್ಕಾಗಿ Hunger strike ಮಾಡಿದರೆಂದು ತಿಳಿದುಬರುತ್ತದೆ. 'ಜನರಲ್ ಅವಾರಿ' ಎಂಬವರು ಮುಷ್ಕರ ಹಿಡಿದವರಲ್ಲೊಬ್ಬರು. ಇವರ ಜೊತೆಕು ಇನ್ನೆಂಟು ಮಂದಿ ಅಪರಾಧಿತರೂ ಕೂಡ, ಕೆಲವು ದಿನಗಳಿಂದ ಉಪವಾಸ ವ್ರತವನ್ನು ಕೈಕೊಂಡಿರುವರೆಂದು ತಿಳಿದುಬರುತ್ತದೆ.

**ಕಲ್ಕತ್ತೆಯಲ್ಲಿ.**

ಬೋರಿಬು ಸ್ಟ್ರೀಟಿನದ ವರ್ತ್ಕವರ್ಗವನ್ನು ತನಿಖೆ ನಡೆಸುವದಕ್ಕಾಗಿ ಸ್ಪೆಶಲ್ ಟ್ರಿಬ್ಯುನಲ್‌ನ್ನು ನಿಯಮಿಸಿರುವದಷ್ಟೆ! ವಿಚಾರಣಾ ಸಮಯದಲ್ಲಿ ಅನೇಕ ಅಪರಾಧಿತರು ಪೋಲೀಸ್ ಅತ್ಯಾಚಾರಗಳ ಚರಿತ್ರೆಯನ್ನು ಕೋರ್ಟಿನಲ್ಲಿ ಬಹಿರಂಗವಾಗಿ ಅರಿಕೆಮಾಡಿಕೊಂಡರು. ಕಲ್ಕತ್ತಾ ಕಾರ್ಪೊರೇಶನಿನ ಸದಸ್ಯರಾದ ಡಾ| ನಾರಾಯನ್ ರೇ ಎಂಬವರು ಪೋಲೀಸರ ವರ್ತನೆಗೆ ಬಲಿಪಟ್ಟವರಲ್ಲೊಬ್ಬರು. ನಾರಾಯನ್ ರೈರವರಿಂದ ಸ್ಟೇಟುಮೆಂಟನ್ನು ಪಡೆಯುವ ಉದ್ದೇಶದ ಮೇಲೆ ಅವರನ್ನು ಪೋಲೀಸರು ಒಕ್ಕಲಿಲ್ಲದ ಮನೆಗೆ ಕರದೊಯ್ದು, ನಿರಪರಾಧಿ ಮತ್ತು ಶಸ್ತ್ರಹೀನರಾದ ಅವರನ್ನು ಅನೇಕರಿದ್ದಾ 'ಕೂಡು ಎಳ' ಎಂಬ ನಾಮೋಲ್ಲೇಖಮಾಡುತ್ತ ಬಟ್ಟೆ ತೆಗೆಯಲಿಕ್ಕೆ ಬೇಕಾಗಿ ಜುಲುಂ ಮಾಡಿದರಂತೆ! ನಾರಾಯಣ ರೈಗಳಿಂತೂ ಆಹಾರವಿಲ್ಲದೆ ನರಳುತ್ತಿದ್ದರಷ್ಟೆ! ಪೋಲೀಸರ ಕಟ್ಟಪ್ಪಣೆಯನ್ನು ಕೈಕೊಳ್ಳದ ಕಾರಣ, ಒಬ್ಬ ಪೋಲೀಸು ಇನ್ಸ್‌ಪೆಕ್ಟರು ಸರದಿಯವರನ್ನು ದಾಳಿ ಮಾಡಲು ಯತ್ನಿಸಿದರು; ಪ್ರಯತ್ನಗಳು ಫಲಕಾರಿಯಾಗಲಿಲ್ಲ. ತರುವಾಯ ಅವರನ್ನು ಓರ್ವ ಮ್ಯಾಜಿಸ್ಟ್ರೇಟರ ಮನೆಗೆ ಕರದೊಯ್ದರು; ರೈಗಳು ಮ್ಯಾಜಿಸ್ಟ್ರೇಟರ ಕೂಡೆ ಹೊಟ್ಟೆಯ ಹಸಿವೆಗಾಗಿ ಒಂದು ಮುಷ್ಟಿ ಅನ್ನವನ್ನು ದಯಪಾಲಿಸಬೇಕೆಂದು ಅಪೇಕ್ಷಿಸಿದ್ದರು. ಆ ಮೇಲೆ ಪೋಲೀಸರ ಒತ್ತಾಯವನ್ನು ತಡೆಯಲಾರದೆ ಮ್ಯಾಜಿಸ್ಟ್ರೇಟರ ಮುಂದೆ ಒಂದು ಸ್ಟೇಟ್‌ಮೆಂಟನ್ನು ಬರಾಯಿಸಿ ತನ್ನ ಸಹಿಯನ್ನು ಕೊಟ್ಟರಂತೆ!

ತಾರೀಖು ೧೫.

**ಮುಂಬಾಯಿಯಲ್ಲಿ.**

ಪೂನೆಯ ಮ್ಯಾಜಿಸ್ಟ್ರೇಟರು, ಮಿ| ಡಿ. ಎಲ್. ಘಾಟಲ್ ಎಂಬವರನ್ನು, ಪೋಲೀಸ್ ಸುಪರಿಂಟೆಂಡೆಂಟರ ಹುಕುಮನ್ನು ಉಲ್ಲಂಘಿಸಿ, ಮೆರವಣಿಗೆ ಹೊರಡಿಸಿದುದಕ್ಕಾಗಿ ಆರೋಪಮಾಡಿದ್ದರಷ್ಟೆ! ಅವರ ಮೇಲೆ ಹೊರಿಸಲ್ಪಟ್ಟ, ಮುಂಬಾಯಿ ಪೋಲೀಸು ಆಕ್ಟಿನ ೩೮ನೇ ಪ್ರಕರಣದ ಮೇರೆಗೆ, ಚೀಫ್ ಜಸ್ಟಿಸರು, ಮೊಕದ್ದಮೆಯನ್ನು ತನಿಖೆ ನಡೆಸಿದರು; ತೀರ್ಪನ್ನು ಓದಲಾಯಿತು. ತೀರ್ಪಿನ ಅಭಿಪ್ರಾಯದಂತೆ, ಮೆರವಣಿಗೆ ಹೊರಡಿಸುವವರು, ಮುಂದಾಗಿ ಡಿ. ಎಸ್. ಪಿ.ಯಿಂದ ಅಪ್ಪಣೆ ಪಡಕೊಳ್ಳಬೇಕೆಂಬ ನಿಯಮವು ತೀರ ಅಸಮಂಜಸವಾಗಿರುವದೆಂದು ವಿಧಿಯಾಗಿರುವದು. ಪೋಲೀಸರು ಈ ಕುರಿತು ಮೆರವಣಿಗೆಯನ್ನು ಎಂದೂ ಪ್ರತಿಬಂಧಿಸಬಾರದೆಂದೂ ತಿಳಿದುಬರುತ್ತದೆ. ಹಾಗೂ ಮೊಕದ್ದಮೆಯು ಡಿಸ್‌ಮಿಸ್ ಆಯಿತು. ಡಿ. ಎಸ್. ಪಿ.ಯ ಅಧಿಕಾರಗಳಿಗೆ ಮಿತಿಯುಂಟೆಂದಾಯಿತು.

ಅಖಿಳಭಾರತ ಹಿಂದುಸ್ಥಾನೀ ಸೇವಾದಳದ ವ್ಯವಸ್ಥಾಪಕರಾಗಿದ್ದ ಡಾ| ಎನ್. ಎಚ್. ಹರ್ಡೀಕರರ ಮನೆಯು, ಸಿ. ಐ. ಡಿ. ಪೋಲೀಸರಿಂದ ಶೋಧ ನಡಿಸಲ್ಪಟ್ಟಿತು. ಸೇವಾದಳದ ಒಂದು ಬೇಜ್ ಮತ್ತು ಉಡುಪು (Uniform) ಮಾತ್ರವೇ ಪೋಲೀಸರಿಗೆ ದೊರೆತಿರುವದೆಂದು ತಿಳಿದುಬರುತ್ತದೆ.

ಮುಂಬಾಯಿ ಕೋಟೆಯ ಬಳಿಯಲ್ಲಿ ಒಬ್ಬ ನಾರೀ ಸತ್ಯಾಗ್ರಹಿಯನ್ನೂ ಐದು ಮಂದಿ ಪುರುಷ ಸ್ವಯಂಸೇವಕರನ್ನೂ ಪಿಕೆಟ್ ಮಾಡಿದುದಕ್ಕಾಗಿ ದಸ್ತಗಿರಿಮಾಡಿರುವರು.

**ನಾಗಪುರದಲ್ಲಿ.**

"ಇಂಟಿಮಿಡೇಶನ್ ಆರ್ಡಿನೆನ್ಸಿ"ನ ಮೇರೆಗೆ ೫ ಮಂದಿ ಪಹರಾಸ್ಥಿತರಾದ ಸ್ವಯಂಸೇವಕರಿಗೆ ಆರಾರು ತಿಂಗಳ ಕಠಿಣ ಶಿಕ್ಷೆಯು ವಿಧಿಯಾಗಿರುವದು. ಚುನಾವಣಾ ಸ್ಥಳಗಳನ್ನು ಪಿಕೆಟ್ ಮಾಡಿದುದಕ್ಕಾಗಿ ಆರು ಮಂದಿಗೆ ಆರಾರು ತಿಂಗಳ ಸಜೆಯೂ ವಿಧಿಯಾಗಿರುವದು.

**ಯೋಟ್‌ಮಾಲ್**

ಇಲ್ಲಿಯ ಗುತ್ತಿಗೆಗಳ ಹರಾಜು ಮುಗಿಯಿತು. ೧೭ ಮದ್ಯದಂಗಡಿಗಳು ಗಿರಾಕಿಗಳಿಲ್ಲದೆ, ಹರಾಜಾಗಲಿಲ್ಲ. ಕೆಲವು ಅಂಗಡಿಗಳು ಮೂರಾಣೆವರೆ ಹರಾಜು ಮಾಡಲ್ಪಟ್ಟವು. ಲೈಸೆನ್ಸು ದಾರರಿಂದ ಸರಕಾರಕ್ಕೆ ಸಂಭವಿಸಿದ ನಷ್ಟವು, ಸುಮಾರು ೧೧ ಲಕ್ಷ ರೂಪಾಯಿಗಳಷ್ಟಿರಬಹುದೆಂದು ಊಹಿಸಲಾಗಿಯದೆ.

**ಲಾಹೋರದಲ್ಲಿ.**

"ಮಿಲಾಪ್" ಪತ್ರಿಕೆಯ ಸಂಪಾದಕರ ಮುದ್ದು ಮಗನಾದ ಯಶ್‌ಪಾಲ್ ಎಂಬ ೧೮ ವರುಷ ವಯಸ್ಸಿನ ಎಳೆ ಹುಡುಗನನ್ನು ಐ. ಪಿ. ಸಿ. ೧೨೪ ಎ ಪ್ರಕರಣದ ಮೇರೆಗೆ ದಸ್ತಗಿರಿಮಾಡಿರುವರು. ಆದರೆ, ಅಪರಾಧಿಕನು, ತನ್ನ ಮೊಕದ್ದಮೆಯನ್ನು, ಹೈ ಕೋರ್ಟಿಗೆ ಟ್ರಾನ್ಸ್‌ಫರ್ ಮಾಡಬೇಕೆಂದು ಯೋಚಿಸುತ್ತಿರುವನು.

ದಿವಂಗತರಾದ ಮಾನ್ಯ ಲಾಲಾಲಜಪತ್‌ರಾಯರ ಪುತ್ರಿಯಾದ ಶ್ರೀಮತಿ ಪಾರ್ವತಿದೇವಿ ಮತ್ತು ಶ್ರೀಮತಿ ಪ್ರಿಯಾನಾದೇವಿ ಎಂಬಿಬ್ಬರನ್ನು, ಸರಕಾರವು ಕೇಳಿದ ರೂಪಾಯಿ ೧೧,೦೦೦ದ ಜಾಮೀನು ನಿರಾಕರಣೆಗಾಗಿ, ಕ್ರಿಮಿನಲ್ ಕೋಡಿನ ೧೧೦ನೇ ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟರು ಆರಾರು ತಿಂಗಳ ಸಾದಾ ಸಜೆಯನ್ನು ವಿಧಿಸಿರುವರು.

**ಕರಾಚಿಯಲ್ಲಿ.**

ಮುನ್ಸಿಪಾಲಿಟಿ ಅಧ್ಯಕ್ಷರಾದ ಮಿ| ಜಮ್‌ಶೆಡ್ ಎನ್. ಆರ್. ಮೆಹತರು ಬರೆಯುತ್ತಾರೆ:—

"ನವಂಬರ ೧೫ನೇ ತಾರೀಖು ಸಂಜೆಗೆ, ನಾನು "ಕಸ್ಟಮ್ಸ್ ಹೌಸ್"ನ ಹೊರಬಾಗಲು ಬಳಿಯಲ್ಲಿ ನಿಂತುಕೊಂಡಿದ್ದೆನು. ಆ ವೇಳೆಗೆ ಸರಿಯಾಗಿ ಪೋಲೀಸರ ಮೋಟಾರ್ ಸ್ಕ್ವಾಡೊಂದು ಆ ದಾರಿಯಾಗಿ ಹಾದುಹೋಯಿತು. ಪಕ್ಕದಲ್ಲಿ ಗವರ್ನರ ಸಾಹೇಬರ ಕಾರೊಂದು ನಿಂತಿದ್ದಿತು. ಅಷ್ಟರಲ್ಲಿ ಹಲವು ಕಾರುಗಳು ಅತ್ತಿತ್ತ ತಿರುಗಹತ್ತಿದವು. ತಂಡತಂಡವಾಗಿ ಓಡುತ್ತಿದ್ದ ಕಾರುಗಳ ಸದ್ದಿನೊಡನೆ, "ನಾಶೀಕ" ಎಂಬೊಂದು ಮಾತೂ ಹೊರಟಿತು. ನಾನದನ್ನು ಕೇಳಿದೆನು. ಆ ಕೂಡಲೆ, ಜನ ಸಮುದಾಯದಿಂದ, ಕಾರುಗಳಿಗೆ ತಗಲುವಂತೆ, ಮಣ್ಣು ಹೆಂಟೆಯನ್ನೂ, ಕಲ್ಲುಗಳನ್ನೂ ಎಸೆಯಲಾರಂಭಿಸಿದರು; ಎಸೆದವರಾರೆಂದು ತಿಳಿಯಲಿಲ್ಲ. ಕಾರಿನೊಳಗೆ ಉಗುಳುವುದಕ್ಕಾಗಿ ಯಾರೋ ಪ್ರಯತ್ನಿಸಿದರು. ಕಟ್ಟಕಡೆಗೆ, ಒಬ್ಬ ಚಿಕ್ಕ ಹುಡುಗನು, ಕಾರಿಗೆ ಕಲ್ಲೆಸೆಯುವದನ್ನು ನೋಡಿದೆನು. ಆ ಮೇಲೆ ನಾನು ಅನೇಕ ಗ್ರಹಿಣೀ ಗೃಹಸ್ಥರನ್ನು ಭೇಟಿಮಾಡಿದೆನು, ಅವರೂ ಕೂಡ, ಕೆಲಮಟ್ಟಿಗೆ ಕಲ್ಲಿನ ಹೊಡೆತಗಳ ರುಚಿಯನ್ನು ಪರೀಕ್ಷಿಸಿದವರಾಗಿದ್ದರು. ಕೆಲವರು ತವ್ಮ ಮೈಮೇಲೆ ಯಾರೊ ಉಗುಳಿದರೆಂದೂ ಹೇಳಿದರು.

ಮೇಲೆ ಹೇಳಲ್ಪಟ್ಟ ಕಾರುಗಳ ಮತ್ತು ಗಾಡಿಗಳ ಚಲನೆಯು ಸುಮಾರು ೩೪ ನಿಮಿಷಗಳ ತನಕ ಮಾತ್ರವೇ ಇದ್ದಿತು. ತರುವಾಯ ನಾನು, ರಸ್ತೆಯ ಪಡುದಿಕ್ಕಿನಲ್ಲಿದ್ದ ದಾರಿಯಿಂದ ಮುಂದರಿಯಲು ಪ್ರಯತ್ನಪಟ್ಟೆನು. ಪೋಲೀಸರು ಮೆಲ್ಲಮೆಲ್ಲನೆ ತಮ್ಮ ಕಾರ್ಯಕ್ರಮಗಳನ್ನು ಹಿಂದೆಗೆಯಹತ್ತಿದ್ದರು; ಅವರು ಕಸ್ಟಮ್ಸ್ ಹೌಸಿನ ಕಡೆಗಾಗಿ ಹೋಗುತ್ತಿರುವುದನ್ನು ನೋಡಿದೆನು. ಇದನ್ನು ನೋಡುತ್ತಿದ್ದ ನಾನು—"ಗಲಭೆಯು ಶಾಂತವಾಯಿತು, ಪೋಲೀಸರು ಹಿಂತೆಗೆದರು"—ಎಂದಾಲೋಚಿಸಿದೆನು. ಎಲ್ಲರೂ ಅವರವರ ಮನೆಗೆ ಹೋಗಲು ಸಮಯವಾಯಿತೆಂದು ಆಲೋಚಿಸುತ್ತಿರುವಷ್ಟರಲ್ಲಿ, ಒಂದು ರಾಷ್ಟ್ರೀಯ ಮೆರವಣಿಗೆಯು, ಸಿಟಿಯ ಕಡೆಗೆ ಪ್ರಯಾಣ ಬೆಳಸುವುದನ್ನು ನೋಡಿದೆನು. ಜನಸಂದಣಿಯಲ್ಲಿದ್ದ ನಾರೀ ಸ್ವಯಂಸೇವಕರು, ಕ್ರಮವಾಗಿ ಸಾಲುಕಟ್ಟಿಕೊಂಡು, ಮೆರವಣಿಗೆಯಲ್ಲಿ ಭಾಗವಹಿಸಿದವರಾಗಿ ಸಿಟಿಯ ಕಡೆಗೆ ತಿರುಗುತ್ತಿದ್ದರು. ಮಾರ್ಗವು ತುಸು ವಕ್ರಾಕೃತಿಯನ್ನು ಹೊಂದಿದ್ದುದರಿಂದ, ಮೆರವಣಿಗೆಯಲ್ಲಿ ಭಾಗವಹಿಸಿದವರೆಲ್ಲರೂ, ತಮ್ಮ ಮೆರವಣಿಗೆಯನ್ನು ಸಿಟಿಯ ಕಡೆಗೆ ಕೊಂಚ ತಿರುಗಿಸಬೇಕಾಯಿತು. ಮೆರವಣಿಗೆಯಲ್ಲಿದ್ದ ನಾರೀ ಸ್ವಯಂಸೇವಕರು ಮುಂದುವರಿಯುವಷ್ಟಕ್ಕೆ ಅವರ ದೃಷ್ಟಿಯು ಕಸ್ಟಮ್ ಹೌಸಿನ ಮೇಲೆ ಬಿದ್ದಿತು. ಒಬ್ಬರುತ್ತ ನಾರೀ ಸತ್ಯಾಗ್ರಹಿಗಳು ಕಸ್ಟಮ್ಸ್ ಆಫೀಸಿಗೆ ಎದುರಾದರು. ಆ ಕೂಡಲೆ ದೂರದಿಂದ ಓಡಿಬರುತ್ತಿದ್ದ ಕೆಲವು ಕಾರುಗಳನ್ನು ನೋಡಿದೆನು. ಅಷ್ಟು ವೇಗದಿಂದ ಬರುತ್ತಿರುವ ಕಾರುಗಳು ಮೆರವಣಿಗೆಯ ಜನರನ್ನು ಏನಾದರೂ ಅಪಾಯಗೊಳಿಸದೆ ಇರಲಾರವೆಂದು ನನಗೆ ದೃಢ ನಂಬಿಕೆಯುಂಟಾಯಿತು. ಪೋಲೀಸರು, ಈ ವೇಳೆಯಲ್ಲೇ ಆ ಸ್ಥಳದಿಂದ ಹೊರಟುಹೋಗಿದ್ದರು. ಆದುದರಿಂದ ನನ್ನ ಮನಸ್ಸು ತುಂಬಾ ಕಳವಳಗೊಂಡಿತು. ತನ್ನಿಂದ ಕೈಲಾದಷ್ಟು ಸಹಾಯವನ್ನು ಮಾಡಬೇಕೆಂದಾಲೋಚಿಸಿ ರಸ್ತೆಯ ನಡುವೆ ಹೋಗಿ ನಿಂತುಕೊಂಡೆನು. ಮೊದಲನೇ ಕಾರು ಬಂದೊಡನೆ, ಡ್ರೈವರನ ಕಡೆಗೆ ನೋಡಿ, ಕಾರನ್ನು ನಿಲ್ಲಿಸುವಂತೆ ಬೇಡಿಕೊಂಡೆನು. ಆತನ ಕಾರು ಬಹಳ ವೇಗದಿಂದ ಬರುತ್ತಿದ್ದಿತು. ಬೆಳಕು ಚೆನ್ನಾಗಿದ್ದುದರಿಂದ, ಡ್ರೈವರನು, ಮೆರವಣಿಗೆಯ ಜನಸಂದಣಿಯನ್ನು ದೂರದಿಂದಲೇ ನೋಡಿರಬಹುದೆಂದು ನಂಬಲಾಗುತ್ತದೆ. ನಾರೀ ಸ್ವಯಂಸೇವಕಿಯರ ತಂಡವು ನನ್ನ ಬೆನ್ನ ಹಿಂದೆಯೇ ಇದ್ದಿತು; ಕಾರು ಬಂದೊಡನೆ, ಹೆಂಗಸರು ಮೋಟಾರಿನ ಕಡೆಗೆ ದೃಷ್ಟಿ ಇಟ್ಟು ನನಗೂ ಡ್ರೈವರನಿಗೂ ನಡೆಯುತ್ತಿದ್ದ ಸಂಭಾಷಣೆಯನ್ನು ಕೇಳುತ್ತಿದ್ದರು. ಡ್ರೈವರನು ಎಷ್ಟು ಹೇಳಿದರೂ, ಕಾರನ್ನು ನಿಲ್ಲಿಸಲಿಕ್ಕೆ ಒಪ್ಪಲಿಲ್ಲ. ನನ್ನನ್ನು ಬದಿಗೆ ತಳ್ಳಿ ಕಾರನ್ನು ಮುಂದೆ ನಡೆಸಿದನು. ನನಗೆ ತುಸು ನೋವು ಉಂಟಾಯಿತು. ನಾನು ನೆಲದ ಮೇಲೆ ಬಿದ್ದಿದ್ದೆನು. ಆ ಕೂಡಲೆ ಯಾರೋ ನನ್ನನ್ನೆತ್ತಿ ಬದಿಗಿರಿಸಿದರು.

ನಾನು ಘಾಯಹೊಂದಿರುವೆನೆಂದು ತಿಳುವಳಿಕೆಯು, ಡ್ರೈವರನ ಮನಸ್ಸಿಗೆ ಹೊಳೆಯಲಿಲ್ಲ. ಆತನು ಕಾರನ್ನು ಓಡಿಸುತ್ತ, ಮೆರವಣಿಗೆಯಲ್ಲಿ ಭಾಗವಹಿಸಿದ, ಪ್ರತಿಯೊಂದು ಹೆಂಗಸನ್ನು ಗಾಯಪಡಿಸಿ, ಮುಂದರಿದನು; ಪರಿಣಾಮಗಳನ್ನು ಲಕ್ಷ್ಯಮಾಡದೆ, ಡ್ರೈವರನು ಲಕ್ಷಿಸಲಿಲ್ಲ. ಕಟ್ಟಕಡೆಗೆ, ಜನಸ್ತೋಮವು ರೇಗಿತು, ಕಾರಿನ ಮೇಲೆ ದೌಡಿಕ್ಕಲಾರಂಭಿಸಿದರು. ಗಲಭೆಗೆ ಪುನರಾರಂಭ ಇದನ್ನರಿತು, ಪೋಲೀಸರೂ, ಅಲ್ಲಿಗೆ ಬಂದು ಸೇರಿದರು. ಕಾಂಗ್ರೆಸ್ ಸ್ವಯಂಸೇವಕರೂ ಕೂಡ, ಕಾರಿದ್ದಲ್ಲಿಗೆ ಓಡಿಬಂದು, ಜನರನ್ನು ಅತ್ತಿತ್ತ ಚದರಿಸತೊಡಗಿದರು. ಕಾರಿನ ಸುತ್ತುಮುತ್ತಲು ಜನರು ಗುಂಪುಗುಂಪಾಗಿ ನೆರೆದರು. ಡ್ರೈವರನಿಗೂ, ಕಾರಿನ ಒಳಗಡೆ ಕುಳಿತಿದ್ದ ಇನ್ನೊಬ್ಬರಿಗೂ, ಚೆನ್ನಾಗಿ ಹೊಡೆದರು. ಪೋಲೀಸರು

(೧೩ನೇ ಪುಟಕ್ಕೆ ಮುಂದರಿಯುವದು.)

**The Zandu Pharmaceutical Works, Ltd., Bombay, 14.**

**ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.**

ಲೋಕಪ್ರಸಿದ್ಧವಾದ 'ಝಂಡೂ'ಯವರ

# ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!

ಹಸಿ ಆಮಲಕ ಅನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು. ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ, ನಾನಾ ವಿಧವಾದ ಮೂಲವ್ಯಾಧಿ, ಕೆಮ್ಮು, ಎದೆ ನೋವು, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗಿರುವುದು ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲ್ಪಡುವ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

ಕ್ರಯ 1 ಪೌನು ಸೀಸೆ ರೂ. 2—8—0 ½ ಪೌ. ರೂ. 1—5—0, ¼ ಪೌ. ರೂ. 0—13—0.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು:— ದಾಮೋದರ್ ಅಂಡ್ ಕಂಪೆನಿ, 78 ಭೈನಾ ಬಜಾರು ರಸ್ತೆ, ಮದ್ರಾಸು

ತೀರ್ಥಹಳ್ಳಿ ಏಜಂಟರು:— ಮೆಸರ್ಸ್ ಪಂಡಿತ ಮತ್ತು ಕಂಪೆನಿ

ಮಂಗಳೂರು ಏಜಂಟರು:— ದಿ ಯೂನಿಯನ್ ಮಾರ್ಟ್

ಶಿರಸಿ ಏಜಂಟರು.— ಎಸ್. ಎಲ್ ಧಾರಪ್ಪಾ ಎಂಡ್ ಬ್ರದರ್ಸ್

ಸಬ್ ಏಜಂಟರು — ಯು. ಜನಾರ್ಧನರಾವ್, ಪುತ್ತೂರು, ದ. ಕನ್ನಡ

ಮಂಗಳೂರು ಏಜಂಟರು — ಕೃಷ್ಣ ಶಾಸ್ತ್ರಿ, ಮಾರ್ಕೆಟ್

☞ ವಿವರ ಕೆಟಲಾಗು ಬೇಕಾದವರು ಸೋಲ್ ಏಜಂಟರಿಗೆ ಬರೆಯತಕ್ಕದ್ದು.



TELEGRAMS 'ASPINWALCO' TELEPHONE No. 15

THE Firestone Gum-Dipping process strengthens the tire to meet the demands of hill climbing, quick stops, sudden turns and high speeds. The Firestone tread is scientifically designed to grip the road in emergencies. You can have this extra safety on your car. Drive in and use our service.

**Firestone** Gum-Dipped TIRES

The Mark of Quality

DISTRIBUTORS

Aspinwall & Co, Ltd

(Address) MANGALORE

*STOCKISTS*

UDIPI - *H Siddaya Hegde*

KASARGODE *Rama Nayak*

KANHANGAD *H S Russool.*

COONDAPUR - *G Gopal Mukunda Pai*, General Merchant, COONDAPUR (S Kanara)

BHATKAL *Messers KoshimjeeShamshuddeer Saheb Motor Service*

Puttur *K Yenkatraya Pai*, Imperial Cycle Stores



***FOR YOUR CAR***

# WILLARD BATTERIES.

**SIMONIZ KLEENER** **SIMONIZ POLISH**

*AGENTS* —

## Messrs. Aspinwall & Co, Ltd.

MANGALORE



"ಬಿಟ್ಟಿ" "ಪುಗಸಟ್ಟೆ" "ಬಿಟ್ಟಿ"



**ಜೇಬಿನ ಲಿವರ್ ಗಡಿಯಾರವೂ ಕೈ ಗಡಿಯಾರವೂ ಬಿಟ್ಟಿ**

**೩ ತಿಂಗಳೊಳಗಾಗಿ ೩೦೦೦ ಗಡಿಯಾರಗಳನ್ನು ಬಿಟ್ಟಿಯಾಗಿ ಕೊಟ್ಟಿದ್ದೇವೆ**

[illegible] ರೂ. ೨-೧೫-೦ ಬೆಲೆ ಬಾಳುವ ನಮ್ಮ ನಿಬ್ಬು ಫೌಂಟನ್ ಪೆನ್ನನ್ನು ಕೊಂಡುಕೊಳ್ಳುವ ನಮ್ಮ ಗಿರಾಕಿಗಳಿಗೆ ಜೇಬಿನ ಲಿವರ್ ಗಡಿಯಾರವನ್ನು ಮುಫತ್ತಾಗಿ ಕೊಡುತ್ತೇವೆ. ಒಂದೇ ಸಲ ಎರಡು ಫೌಂಟನ್ ಪೆನ್ನುಗಳನ್ನು ಕೊಳ್ಳುವವರಿಗೆ ರೂ. [illegible] ಬೆಲೆಯ ಮುಕ್ತ ಲಿವರ್ ಕೈ ಗಡಿಯಾರವು ಬಿಟ್ಟಿಯಾಗಿ ಕೊಡುವೆವು. ಈ ಪೆನ್ನು ಭಂಗಾರದ ನಿಬ್ಬುಳ್ಳದ್ದಾಗಿಯೂ, ಅಚ್ಚುಕಟ್ಟಾದ ಬಾಯಿಯುಳ್ಳ ನಯವಾಗಿ ಬರೆಯುವುದೂ, ಫಾರ್ ಬಕ್ಕತಾಗಳಿಂದ ಹೊಗಳಲ್ಪಟ್ಟದ್ದಾಗಿಯೂ, [illegible] ಇವಕ್ಕೆ ೫ ವರ್ಷ ಗ್ಯಾರಂಟಿ ಕೊಡುತ್ತೇವೆ.

ಪತ್ರವ್ಯವಹಾರಗಳು ಇಂಗ್ಲೀಷಿನಲ್ಲಿ ಬರೆಯಬೇಕು.

**Imperial Watch Company.**

(9) Post No. 12, BOMBAY.



## ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

**ಶಾರದಾ ಛಾಪಖಾನೆ,**

ರಥಬೀದಿ, ಮಂಗಳೂರು



## ಮುದಲ್ ತರವಾದ ಬೆಳ್ಳಿ ಉಡಿದಾರ ಹಗ್ಗ.

ESTD 1896

ಅನೇಕ ವರುಷದಿಂದ ನಾವು ಬೆಳ್ಳಿ **ಉಡಿದಾರಗಳನ್ನು ತಯಾರುಮಾಡಿ** ಅನೇಕ ವ್ಯಾಪಾರಿಗಳಿಗೂ ಕಳುಹಿಸಿ ಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ಉಡಿದಾರ ಹಗ್ಗಗಳು **ಕೆಲಸ ನೈಸಲ್ಲಿಯೂ, ಧಾರಣೆ ಸಂಸದಲ್ಲಿಯೂ, ಸರಕಿನ ನಾಣ್ಯತದಲ್ಲಿಯೂ** ದಕ್ಷಿಣ ಇಂಡಿಯಾವಿನಲ್ಲಿ ಹೆಸರು ಪಡೆದುದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳನ್ನು ಕಳುಹಿಸುತ್ತೇವೆ. ಒಂದು ಸಲ ನಮ್ಮಲ್ಲಿಂದ ತರಿಸಿ ನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ಧಾರಣೆ ಪ್ರಕಾರ ಸರಕುಗಳಿಗೆ ಧಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,

ಸಗಟು ವ್ಯಾಪಾರಿ,

ಕಿಮ್ಮಾಪೇಟೆ, ಸೇಲಂ, (ದಕ್ಷಿಣ ಇಂಡಿಯಾ)



ರಿಸ್ಟ್‌ವಾಚ್ ಉಚಿತ

[illegible]

**ಕಿಂಗ್ ಜಾರ್ಜ್ ಕೋರೋನೇಶನ್ ಕಂಪೆನಿ**

ಮುಂಬಾಯಿ



## ಕೋ-ಒಪರೇಟಿವ್ ಸೊಸ್ಯಾಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

**ಶಾರದಾ ಛಾಪಖಾನೆ.**

ರಥಬೀದಿ, ಮಂಗಳೂರು



**ಒಮ್ಮೆ ಪರೀಕ್ಷಿಸಿರಿ!** **ತೃಪ್ತಿ ಹೊಂದಿರಿ!**

## ದಿ ಕ್ರೌನ್ ರಬ್ಬರ್ ಸ್ಟಾಂಪು ಕಂಪೆನಿ,

ಹೆಡ್ ಆಫೀಸು ಬಲ್ಮಠ ರಸ್ತೆ, ಕಂಕನಾಡಿ ಪೋಸ್ಟು,

ಮಂಗಳೂರು, ದ. ಕನ್ನಡ

# ರಬ್ಬರು ಮೊಹರುಗಳು

ಇಲ್ಲಿ ಉತ್ತಮವಾದ ಎಯರ್‌ಕುಶನ್ ರಬ್ಬರು ಮೊಹರುಗಳೂ, ಹಿತ್ತಾಳೆ ಇತ್ಯಾದಿ ಲೋಹಗಳಲ್ಲಿಯೂ, ಮಾರ್ಬಲ್‌ನಲ್ಲಿಯೂ, ಕೆತ್ತನೆಯ ಕೆಲಸವನ್ನೂ ಗಿರಾಕಿಗಳಿಗೆ ಕ್ಲಪ್ತ ಸಮಯದಲ್ಲಿ ಮಾಡಿಕೊಡುತ್ತದೆ.

ಹೆಚ್ಚಿನ ಮಾಹಿತಿಯನ್ನು ಪತ್ರಮೂಲಕವಾಗಲೀ, ಆಫೀಸಿನಲ್ಲಿ ಸ್ವತಹ ಬಂದಾಗಲೀ ತಿಳಿದುಕೊಳ್ಳಿರಿ

ಎಮ್. ದೇವದಾಸ ಕಿಣಿ,

ಮೆನೇಜಿಂಗ ಪ್ರೊಪ್ರೈಟರ್

## ರೌಂಡ್ ಟೇಬಲ್ ಪರಿಷತ್ತು.

ರೌಂಡ್‌ಟೇಬಲ್ ಪರಿಷತ್ತಿನ ಕಾರ್ಯಕಲಾಪಗಳು ಮಂತ್ರಿವರ್ಯರಾದ ಮೆಕ್‌ಡೋನಲ್ಡ್ ಸಾಹೇಬರವರ ಅಧ್ಯಕ್ಷತೆಯಲ್ಲಿ ಸುವ್ಯವಸ್ಥಿತವಾಗಿ ನಡಿಯುತ್ತಲಿರುತ್ತವು. ಇದರಲ್ಲಿ ಪ್ರಾಮುಖ್ಯ ವಿಷಯವಾವುದೆಂದರೆ ಹಿಂದು, ಮುಸಲ್ಮಾನ, ಸಿಖ್ಖ ಪ್ರತಿನಿಧಿಗಳ ಮತ್ತು ಆಶ್ರಿತ ಸಂಸ್ಥಾನಗಳ ರಾಜರ ಸರ್ವತೋಮುಖವಾದ ಒಮ್ಮತವು. ಸಾಮಂತ ರಾಜರ ಸಹಕಾರವೂ ಬೆಂಬಲವೂ ಬ್ರಿಟಿಷ್ ಪ್ರತಿನಿಧಿಗಳಿಗೆ ಆಶ್ಚರ್ಯವನ್ನುಂಟುಮಾಡಿರುತ್ತದೆ. ಇಂಥಾ ಒಮ್ಮತವನ್ನು ನೋಡಿ ಲೋರ್ಡ್ ಪೀಲ್ ಸಾಹೇಬರು ತಲ್ಲಣಗೊಂಡು ಏನೇನೋ ಗದರಿಸಿದರಂತೆ. ಇವರ ಭಾಷಣವನ್ನು ಕೇಳಿ ಡಾ| ಮುಂಜೆ, ಶ್ರೀನಿವಾಸ ಶಾಸ್ತ್ರಿ, ಮೌಲಾನಾ ಮಹಮ್ಮದಾಲಿಯೇ ಮೊದಲಾದವರು ತೀವ್ರವಾದ ಭಾಷಣಗಳನ್ನು ಮಾಡಿ ಸಭಾಸದರೆಲ್ಲರನ್ನು ಹುರುಪುಗೊಳಿಸಿದರು. ಮೌಲಾನಾ ಮಹಮ್ಮದಾಲಿಯವರು ತಾನು ಸ್ವಾತಂತ್ರ್ಯವನ್ನು ಪಡೆಯದೆ ಹಿಂದೂಸ್ಥಾನಕ್ಕೆ ಕಾಲಿಡಲಿಕ್ಕಿಲ್ಲವೆಂದೂ ತನಗೆ ವಿಲಾಯತಿಯಲ್ಲೇ ಸಮಾಧಿ ಕಟ್ಟಬೇಕಾಗುವುದೆಂದೂ, ಜೋರ್ಜ್ ಎಂಬ ವ್ಯಕ್ತಿಯಲ್ಲಿ ತನಗೆ ಅಪಾರ ನಂಬಿಕೆ ಇರುವುದೆಂದೂ ನುಡಿದುಬಿಟ್ಟರು. ಡಾ ಮುಂಜೆ, ತೇಜ್ ಬಹದ್ದೂರ್ ಸಪ್ರು, ಶ್ರೀನಿವಾಸ ಶಾಸ್ತ್ರಿ, ಮಹಮ್ಮದಾಲಿ ಮೊದಲಾದ ಪ್ರಮುಖರು ತಮ್ಮ ಯಥಾರ್ಥತೆಯಿಂದಲೂ ವಾಕ್ಚಾತುರ್ಯದಿಂದಲೂ ವಿರೋಧಕಡೆಯವರ ಮನಸ್ಸನ್ನು ಸೆಳೆದುಬಿಟ್ಟಿರುವರೆಂದೂ, ಲೋರ್ಡ್ ರೀಡಿಂಗ್ ಸಾಹೇಬರೂ ಮಂತ್ರಿವರ್ಯರಾದ ಮೆಕ್‌ಡೋನಲ್ಡ್ ಸಾಹೇಬರೂ ಹಿಂದೂಸ್ಥಾನದ ನಿಜ ಸಂಗತಿಯನ್ನು ಈಗಲಾದರೋ ತಿಳಿದು ಹಿಂದುಸ್ಥಾನದ ಹಿತಸಾಧನೆಯಲ್ಲಿ ಬಹು ಆಸಕ್ತಿಯುಳ್ಳವರಂತೆ ತೋರ್ಪಡಿಸುತ್ತಾರೆಂದು ಸುದ್ದಿಯಿದೆ. ಹಿಂದೂಸ್ಥಾನಕ್ಕೆ ಸಂಯುಕ್ತ ರಾಜ್ಯಭಾರಕ್ರಮವೇ ಅತ್ಯಗತ್ಯವೆಂದು ಎಲ್ಲಾ ಸದಸ್ಯರೂ ಒಪ್ಪಿರುವರಂತೆ. ಆದರೆ ಪರಿಷತ್ತಿನ ಫಲಿತಾಂಶವೇನಾಗಬಹುದೆಂದು ಈಗಲೇ ಊಹಿಸಲು ಸಾಧ್ಯವಿಲ್ಲ. ಯಾಕೆಂದರೆ ಹಿಂದು ಮುಸಲ್ಮಾನರೊಳಗಿನ ಶರ್ತಗಳು ಇನ್ನೂ ಇತ್ಯರ್ಥವಾಗಲಿಕ್ಕಿವೆ. ಜಯಕರರ ಪಂಗಡದವರು ತಮಗೆ ಗುಣವಾಗದಿದ್ದರೆ 'ವೋಕ್‌ಔಟ್' ಮಾಡಲು ಸಿದ್ಧರಿರುವರಂತೆ. ಆದುದರಿಂದ ಸಂಯುಕ್ತ ರಾಜ್ಯಪದ್ಧತಿಯ ವಿವಿಧ ಸೋಪಾನಗಳನ್ನು ಚರ್ಚಿಸುವಲ್ಲಿ ಭಾವೀ ರಾಜ್ಯಭಾರದಲ್ಲಿ ಹಿಂದು ಮುಸಲ್ಮಾನರ ಪ್ರಾತಿನಿಧ್ಯದ ಕುರಿತು ತೀವ್ರ ಚರ್ಚೆಯು ಬಂದು ಇವರಿಬ್ಬರ ನ್ಯಾಯುವು ಬ್ರಿಟಿಷರ ಲಯವಾಗಿ ಪರಿಣಮಿಸಬಹುದೋ ಎಂಬ ಭೀತಿಯು ಈ ಸಂದಿಗ್ಧ ಸಮಯದಲ್ಲಿ ಹಿಂದೂಸ್ಥಾನದ ಹಿತಚಿಂತಕರನ್ನು ಕಳವಳಗೊಳಿಸುವುದೇನಾಶ್ಚರ್ಯ!

## ಬಾರ್ಡೋಲಿಯ ಸಮಾಚಾರ.

ಮೆಸರ್ಸ್ ಎಲ್ ಆರ್ ತಯಬ್ಜೀಯವರೂ ಜಿ ಕೆ ಮೇಥಾರವರೂ ಗುಜರಾಥಿನ ಪರಿಭವದ ವಿಷಯದಲ್ಲಿ ಹಿಂದೀ ವರ್ತಕರ ಸಂಘಕ್ಕೆ ಕಳುಹಿಸಿರುವ ವರದಿಯಿಂದ ಬಾರ್ಡೋಲಿ ಮತ್ತು ಬೋರ್ಸಾದ್ ತಾಲೂಕುಗಳ ರೈತರ ಕಷ್ಟಸಂಕಷ್ಟಗಳು ಪರಮಾವಧಿಯನ್ನು ಮುಟ್ಟಿರುವ ಹಾಗೆ ಕಾಣುತ್ತದೆ. ಅಹಿಂಸಾಪರ ಕರನಿರಾಕರಣೆಯೇ ಈ ಪರಿಸ್ಥಿತಿಗೆ ಕಾರಣವು. ಅಲ್ಲಿಯ ರೈತರು ಮಹಾತ್ಮಾ ಗಾಂಧಿಯವರನ್ನೂ ಸರ್ದಾರ್ ವಲ್ಲಭಾಯ ಪಟೇಲರನ್ನೂ ಒಂದು ವಿಮೋಚನ ಮಾಡದ ವಿನಹ ಭೂಕಂದಾಯವನ್ನು ಎಂದೆಂದಿಗೂ ಕೊಡೆವೆಂಬ ಹಟವನ್ನು ತೊಟ್ಟಿರುವರಂತೆ. ರೆವೆನ್ಯೂ ಇಲಾಖೆಯವರೂ ಪೋಲೀಸಿನವರೂ ತೆರಿಗೆ ವಸೂಲಿ ಬಗ್ಗೆ ಜನರಿಗೆ ತರುತ್ತಿರುವ ನೀತಿಗೆ ವಿರುದ್ಧವಾದ ಸ್ವೇಚ್ಛಾಪರ ನಡತೆಗಳು ಈ ಬಡ ರೈತರ ಮನೋನಿರ್ಧಾರವನ್ನು ಇನ್ನಷ್ಟು ಬಲಗೊಳಿಸಿರುವುದು. ಸುಮಾರು ೧೧೦೦೦ ನಿವಾಸಿಕರು ತಂತಮ್ಮ ಮನೆಮಾರುಗಳನ್ನೂ ಹೊಲಗದ್ದೆಗಳನ್ನೂ ತೊರೆದುಬಿಟ್ಟು ಬರೋಡವೇ ಮೊದಲಾದ ಆಶ್ರಿತ ಸಂಸ್ಥಾನಗಳಿಗೆ ಹೋಗಿ ಸೇರಿ ಅಲ್ಲಲ್ಲಿ ಬಯಲು ಪ್ರಾಂತ್ಯಗಳ ಮೇಲೆ ಚಿಕ್ಕ ಚಿಕ್ಕ ಚಪ್ಪರಗಳನ್ನು ಕಟ್ಟಿಕೊಂಡು ಹಸಿವು, ಬಿಸಿಲು, ಮಳೆ, ಗಾಳಿಗಳಿಗೀಡಾಗಿ ಪರಿತಪಿಸುತ್ತಿರುವುದನ್ನು ನೋಡಿದರೆ ಎಂತಹ ಕಲ್ಲೆದೆಯು ಕೂಡಾ ಕರಗಿ ನೀರಾಗದಿರದು. ಬಾರ್ಡೋಲಿಯವರು ಮುಂದೊಮ್ಮೆ ತಮ್ಮ ಸಹನಶಕ್ತಿಯನ್ನು ಪ್ರದರ್ಶಿಸಿ ಪ್ರಸಿದ್ಧಿಹೊಂದಿರುವದರಿಂದ ಯಾವದೇ ತರದ ದಬ್ಬಾಳಿಕೆಗೂ ತುತ್ತಾಗಲು ಸಿದ್ಧರೇ ಇರುವುದರಲ್ಲಿ ಸಂದೇಹವಿಲ್ಲ. ಕೇವಲ ಅಹಿಂಸಾಪರ ಚಳವಳವು ಹಿಂಸಾಪರ ಸಾಧನಗಳಿಂದ ಎಂದೆಂದಿಗೂ ಉಪಶಮನವಾಗದೆಂದು ನಮಗನ್ನಿಸುತ್ತದೆ. "ಕೃಷಿತೋ ನಾಸ್ತಿ ದುರ್ಭಿಕ್ಷಂ" ಆದುದರಿಂದ ರೈತರು ಕೆಟ್ಟರೆ ಮುಂದೆ ದುರ್ಭಿಕ್ಷೆಯೇ ಗತಿಯಲ್ಲವೇ. ಆದುದರಿಂದ ಸರಕಾರವು ಇನ್ನಾದರೂ ಈ ಬಡ ರೈತರ ಸಂಕಷ್ಟಗಳನ್ನು ವಿಚಾರಿಸಿ ಪರಿಹರಿಸುವುದೋ ಎಂಬುದನ್ನು ನೋಡಲಿಕ್ಕಿದೆ.

## ಲಾಠಿ ಪ್ರಯೋಗ.

ವಿಲಾಯತಿಯಲ್ಲಿ ಸಂಧಾನ ಪ್ರಯತ್ನಗಳು ನಡಿಯುತ್ತಿರುವಾಗ ಹಿಂದೂಸ್ಥಾನದಲ್ಲಿ ಅಲ್ಲಲ್ಲಿ ಲಾಠಿ ಪ್ರಯೋಗವೂ ನಡಿಯುತ್ತಲಿದೆ. ಸ್ವಾತಂತ್ರ್ಯದ ಸಲುವಾಗಿ ಕಾರಾಗೃಹಕ್ಕೆ ತಳ್ಳಲ್ಪಟ್ಟ ವಿವಿಧ ತರದ ಸಂಕಷ್ಟಗಳಿಗೆ ಒಳಗಾಗಿರುವ ಕೈದಿಗಳ ವಿಷಯದಲ್ಲಿ ರೌಂಡ್‌ಟೇಬಲ್ ಪರಿಷತ್ತಿನ ಸದಸ್ಯರು ಏನೂ ಮಾತೆತ್ತಿದ ಹಾಗೆ ಕಾಣುವುದಿಲ್ಲ. ಸ್ವರಾಜ್ಯ ಪಕ್ಷದವರು ಪರಿಷತ್ತಿನಲ್ಲಿ ಭಾಗಿಗಳಾಗಿರುತ್ತಿದ್ದರೆ ಹೀಗಾಗುತ್ತಿದ್ದಿಲ್ಲವೆಂದು ತೋರುತ್ತದೆ. ಹಿಂದುಸ್ಥಾನದ ರಾಜಕೀಯ ವಾತಾವರಣದಲ್ಲಿ ಕಾಲವಹಿಮೆಯು ದೆಸೆಯಿಂದ ತೀವ್ರ ಬದಲಾವಣೆಗಳು ಆಗಿರುವವೆಂದೂ ಈ ಪರಿವರ್ತನೆಗ ತಕ್ಕಂತೆಯೇ ರಾಜ್ಯಭಾರ ಕ್ರಮವನ್ನು ಬದಲಾಯಿಸುವುದು ಅತ್ಯಗತ್ಯವೆಂದೂ ಲೋರ್ಡ್ ರೀಡಿಂಗರೂ ಮತ್ತು ಮಂತ್ರಿವರ್ಯರಾದ ಮೆಕ್‌ಡೋನಲ್ಡ್ ಸಾಹೇಬರೂ ಪರಿಷತ್ತಿನಲ್ಲಿ ಹೇಳಿರುತ್ತಾರೆ. ಅಂಥಾ ನಿರ್ಧಾರಕ ರಾಜ್ಯಭಾರ ಕ್ರಮವನ್ನು ಅಹಿಂಸಾಪರ ರೀತಿಯಲ್ಲಿ ಎದುರಾಯಿಸುವವರಿಗೆ ಲಾಠಿ ಪ್ರಯೋಗವೂ ಕಾರಾಗೃಹವೂ ಬಹುಮಾನವೇ? ಮುಂಬಾಯಿಯಲ್ಲಿ ಪೋಲೀಸಿನವರು ಸ್ತ್ರೀಯರ ಮೇಲೆ ಕೈಮಾಡಿದ ವಿಷಯವನ್ನು ಹಿಂದಿನ ವರೆ ಮಹಾಸಭೆಯೊಂದು ಬರೆದಿತು. ಮದ್ರಾಸು ನ್ಯಾಯವಿಧಾಯಕ ಸಭೆಯ ಮೊನ್ನೆಯ ಅಧಿವೇಶನದಲ್ಲಿ ನಮ್ಮ ಪ್ರತಿನಿಧಿಯವರಾದ ಯು ಸಿ ಸುಬ್ರಮಣ್ಯ ಭಟ್ಟರವರು ನಿಂದಿತರಾದ ಮಂಗಳೂರಿನ ವಿದ್ಯಾರ್ಥಿಗಳ ಮೇಲೆ ಪೋಲೀಸಿನವರು ಮಾಡಿದ ಲಾಠಿ ಪ್ರಯೋಗದ ವಿಷಯದಲ್ಲಿ ಕೇಳಿದ ಪ್ರಶ್ನೆಗಳಿಗೆ ಸರಕಾರದಿಂದ ದೊರಕಿರುವ ಅಲಕ್ಷ್ಯ ಭಾವದ ಉತ್ತರಗಳನ್ನು ಪರಿಶೀಲಿಸಿದರೆ ಸೋಜಿಗವಾಗುವದು. ಅಲ್ಲದೆ ಸ್ವಾಮಿ ವೆಂಕಟಾಚಲಮ್ ಚೆಟ್ಟಿಯವರು ಅದೇ ಅಧಿವೇಶನದಲ್ಲಿ ಪೋಲೀಸಿನವರ ಅತ್ಯಾಚಾರದ ವಿಷಯದಲ್ಲಿ ತಂದೊಡ್ಡಿದ ಠರಾವು, ರಾವಿಗ ಸರಕಾರದಿಂದ ದೊರತ ಉತ್ತರವೂ, ಅದೇ ಠರಾವು ರಾವನ್ನು ಸಕಾಲದಲ್ಲಿ ವೋಟಿಗೆ ಹಾಕದೆ ಮೂಲೆಗೊತ್ತಲು ಹೋಮ್ ಮೆಂಬರರು ಮಾಡಿದ ಕುಹಕ ಯತ್ನವೂ ನ್ಯಾಯವಿಧಾಯಕ ಸಭೆಗಳ ವಿಷಯದಲ್ಲಿ ನಂಬುಗೆಯಿರುವ ಜನರಿಗೂ ವಿಸ್ಮಯವನ್ನುಂಟುಮಾಡದಿರದು.

## ನ್ಯಾಯಶೀಲತೆಯ ನಿದರ್ಶನ.

ಉಪದೇಶಕ್ಕಿಂತಲೂ ನಿದರ್ಶನವೇ ಉತ್ತಮವೆಂದು ಹೇಳುವರು. ಕನೆಕ್ಟಿಕಟ್ ಎಂಬಲ್ಲಿ ಡೇವಿಸ್ ಎಂಬ ನ್ಯಾಯಾಧಿಪತಿಯು ತನ್ನ ಕೋರ್ಟಿನಲ್ಲಿಯೇ ತನ್ನ ಮೇಲೆ ಮೋಟರು ಕಾನೂನನ್ನು ಉಲ್ಲಂಘಿಸಿದನೆಂಬ ಆರೋಪವು ಬರಲು ತಾನೇ ಆ ನಿಯಮವನ್ನು ತಪ್ಪಿ ಮಾಡಿ ತನ್ನ ಮೇಲೆಯೇ ಹೆಚ್ಚಿನ ದಂಡವನ್ನು ವಿಧಿಸಿದನಂತೆ. ಪೂರ್ವ ಆಫ್ರಿಕದಲ್ಲಿ ಒಬ್ಬ ಮೆಜಿಸ್ಟ್ರೇಟನು ಆತನ ಡ್ರೈವರು ರಾತ್ರಿಕಾಲದಲ್ಲಿ ಬೆಳಕಿಲ್ಲದ ಮೋಟರಿನಲ್ಲಿ ಪ್ರಯಾಣ ಬೆಳಸಿದ ತಪ್ಪಿಗಾಗಿ ಇಬ್ಬರೂ ಶಿಕ್ಷೆಗೆ ಒಳಗಾಗಲು ಒಪ್ಪಿಕೊಂಡನಂತೆ. ಮೊದಲು ಮೆಜಿಸ್ಟ್ರೇಟನು ತನ್ನ ಡ್ರೈವರಿಗೆ ೫ ಶಿಲಿಂಗ್ ದಂಡವನ್ನು ವಿಧಿಸಿದನಂತೆ. ಅನಂತರ ಡ್ರೈವರಿಯು ತನ್ನ ಮೇಲಧಿಕಾರಿಯನ್ನು ತನಿಖೆ ಮಾಡಿ ೫೦ ಶಿಲಿಂಗ್ ದಂಡವನ್ನು ವಿಧಿಸಿದನಂತೆ. ಇಂಥಾ ನ್ಯಾಯಶೀಲರಾದ ನ್ಯಾಯಾಧಿಪತಿಗಳನ್ನು ಹೊಂದುವ ಅದೃಷ್ಟವು ಹಿಂದೂಸ್ಥಾನಕ್ಕಿದೆಯೇ?

## ಕೆಂಪು ನೋಟೀಸುಗಳು.

ಕೆಂಪು ನೋಟೀಸುಗಳು ಮುಂಬಾಯಿಯ ಕೆಲವು ಆಫೀಸರರಿಗೂ ಬರಲು ಪ್ರಾರಂಭವಾಗಿದೆ. ಪ್ರಕೃತದ ರಾಷ್ಟ್ರೀಯ ಅಹಿಂಸಾಪರ ಸಮರದಲ್ಲಿ ಇಷ್ಟರವರಿಗೂ, ಪ್ರಥಮ ಸ್ಥಾನವನ್ನು ಪಡೆದಿರುವ ಮುಂಬಾಯಿಯ ಶ್ರೇಯಸ್ಸಿಗೆ ಇದೊಂದು ಕಳಂಕವೇ ಹೌದು. ಇದು ಗುಪ್ತವಾಗಿ ಕೆಲಸಮಾಡುತ್ತಿರುವ ಆವುದೊಂದು ಕ್ರಾಂತಿಕರ ಪಂಗಡದ ಕೆಲಸವಂತೆ. ಅಲ್ಲಲ್ಲಿ ಕೆಲವು ಬಿಳೀ ಜನರನ್ನು ಅಥವಾ ಸರಕಾರಿ ಹುದ್ದೆದಾರರನ್ನೋ ಬೋಂಬು ಗುಂಡುಗಳಿಂದ ಕೊಲ್ಲುವುದರಿಂದಲೂ ಭಯೋತ್ಪಾದನೆಯ ಪತ್ರಗಳನ್ನು ಸರಕಾರಿ ಆಫೀಸರರಿಗೆ ಬರೆದು ಕಳುಹಿಸುವುದರಿಂದಲೂ, ಸ್ವರಾಜ್ಯ ಸಿಕ್ಕುವದೆಂದರೆ ಅದೆಂತಾ ಹುಚ್ಚು. ಪ್ರಕೃತದ ಸಮರದಲ್ಲಿ ರಾಷ್ಟ್ರೀಯ ಪಕ್ಷವು ಕೇವಲ ಅಹಿಂಸಾಪರ ಮಾರ್ಗಗಳನ್ನು

## ನೋಟಗಳು.

## NOTE.. S

ಲಂಡನ್ ಪರಿಷತ್ತಿನಲ್ಲಿ ಭಾಷಣಗಳ ಫಲಾಟೆ ಮುಗಿಯಿತು. ಹಲವರು ಉದ್ಬುದ್ಧ ಭಾಷಣಗಳನ್ನಿತ್ತರು, ಮಹಮ್ಮದೀಯರ ಸಿಂಹ, ಎಂದೆನಿಸಿಕೊಳ್ಳುವ ಮಹಮ್ಮದಾಲಿಯವರು ಸ್ವರಾಜ್ಯ ಕೊಟ್ಟ ವಿನಹ, ಪುನಹ ಹಿಂದುಸ್ಥಾನಕ್ಕೆ ಬರುವದೇ ಇಲ್ಲವೆಂದು ಹೇಳಿಬಿಟ್ಟರು. ಇವರ ಸಲುವಾಗಿ ಅಲ್ಲಿಯೇ ಒಂದು ಗೋರಿ ಕಟ್ಟಬೇಕಾದೀತು. ಎಂಬುದನ್ನು ಕೂಡ ತಿಳಿಸಿ ಗದರಿಸಿರುವರು. ಅಂತೂ ಎಲ್ಲರ ಸ್ವರಾಜ್ಯ ಸಾಧನೆ.

* * * *

ಮಿ ಬೆನ್ ಮಂತ್ರಿಯವರು, ಹಿಂದುಸ್ಥಾನದ ಮೇಲಿರುವ ಒಳ್ಳೆ ಪ್ರೀತಿಯನ್ನು ತಮ್ಮ ಒಳ್ಳೆ ಮಾತುಗಳಿಂದ ತಿಳಿಸಿರುವರು. ಹೊಸ ಬದಲಾವಣೆ ಬಹಳ ಅಗತ್ಯವೆಂಬುದು ವ್ಯಕ್ತಪಡಿಸಿರುವರು. ಹೊಸ ಬದಲಾವಣೆ ಯಾವಾಗ, ಎಂಬುದು ಹೊಂದುವುದಿಲ್ಲ.

* * * *

ಮುಂಬಾಯಿಯಲ್ಲಿ ಬಾರ್ಡೋಲಿ ದಿವಸದ ಸಲುವಾಗಿ ಹೊರಡಲಿಕ್ಕಿರುವ ಕಾಂಗ್ರೆಸಿನವರ ಮೆರವಣಿಗೆಗೆ, ಪೋಲೀಸ್ ಕಮಿಶನರು, ಮಾಡಬಾರದಾಗಿ ಹುಕುಂ ಕೊಟ್ಟಿರುವರು. ನಡೆದರೆ, ಲಾಠೀರಾಯರ ಕಾರುಬಾರು.

* * * *

ಇತ್ತಲಾಗ, ಜೈಲುಗಳಲ್ಲಿ ಹೆಚ್ಚು ಸ್ಥಳ ಖಾಲಿಬಿದ್ದಿರುವದು, ಕಾರಣ, ಜವಾಹಿರ ಲಾಲ್, ಮಾಳವೀಯವರಿಗೆ, ಕಾಂಗ್ರೆಸಿನವರಿಗೆ ಸಹಾಯ ಮಾಡಿದರೆ, ಸೆರೆಮನೆಗೆ ಕಳುಹಿಸುವುದು. ದಿವಸಕ್ಕ ಸರಾಸರಿ ನೂರಕ್ಕೆ ಮಿಕ್ಕುತ್ತದೆ.

* * * *

ಕರಾಚಿಯಲ್ಲಿ ೮೦೦ ಜನ ಕಾಂಗ್ರೆಸ್ ವಲಂಟೀಯರರು, ಅಲ್ಲಿಯ ಸ್ಮಾಲ್‌ಕೋಜ್ ಕೋರ್ಟಿನ ಒಳಗೆ ಪ್ರವೇಶಮಾಡಿ ಒಳಗೆ ಯಾರೂ ಇಲ್ಲದ್ದನ್ನು ಕಂಡು, ಅಲ್ಲಿರುವ ಬರೆಯುವ ಮಶಿಯನ್ನು ಮೇಜುಗಳ ಮೇಲೆ ಚೆಲ್ಲಿಹಾಕಿ, ಓಡಿಹೋದರಂತೆ. ಇದರಿಂದ ಯಾವ ಲಾಭಸಿಕ್ಕಿತೋ, ತಿಳಿಯಲಿಲ್ಲ.

* * * *

ಹಿಂದೂಸ್ಥಾನಕ್ಕೆ ಯಾವ ನಮೂನೆಯ ವ್ಯಾಸರಾಯರನ್ನು ಕಳುಹಿಸುವುದು ಎಂಬ ದೊಡ್ಡ ಆಲೋಚನೆಯು ನಡಿಯುತ್ತಿದೆ. ಯಾರು ಹೆಚ್ಚಿನ ಮತ್ತು ಹೊಸ ಮಾದರಿ ಆರ್ಡಿನೆನ್ಸುಗಳನ್ನು ತೋರಿಸಿ ಕೊಡುವರೋ ಅಂಥವರು ಚುನಾಯಿಸಿದರೆ ಈಗಿನ ಕಾಲಕ್ಕೆ ಬೇಕಾದವರು ಸಿಕ್ಕಿದರೆಂದಾಯಿತ, ಲಿ ಪಾರ್ಟಿ, ಈ ಪಾರ್ಟಿಯಿಂದ ಎಂಬ ಚರ್ಚೆ ನಡಿಯುತ್ತಾ ಇದೆ.

* * * *

ನಮ್ಮ ಮದ್ರಾಸು ಕೌನ್ಸಿಲಿನಲ್ಲಿ, ಮಂಗಳೂರಿನಲ್ಲಿ ನಿರಪರಾಧಿ ಜನರ ಮೇಲೆ, ಲಾಠಿ ಪ್ರಯೋಗ ಮಾಡಿದರ ವಿಷಯ, ಪ್ರಶ್ನೆಗಳು ಕೇಳಿದಕ್ಕೆ ಅಲಕ್ಷ್ಯಭಾವದ ಉತ್ತರಗಳನಿತ್ತು, ಮೂಲೆಗುಂಪಾಯಿತು. ಮೇಲಿಂದ ಹೊಟ್ಟ ಈ ಲಾಠಿಗ ಕೇಳಿಗರಿಂದ ಕೇಳಿದಕ್ಕೆ ಯಾವ ಉತ್ತರ ದೊರೆಯಿತು.

---

ಮುಂದೊತ್ತಿ ತ್ತಿರುವಾಗ, ನಿಮ್ಮ ಪ್ರಮ ಖರೂ ಮಹಿಳೆಯರೂ, ತಮ್ಮ ತನ ಮನ ಧನಗಳನ್ನ ಸ್ವದೇಶಕ್ಕಾಗಿ ಅರ್ಪಿಸುತ್ತಿರುವಾಗ ಕ್ರಾಂತಿ ಪಾರ್ಟಿಯ ಈ ದುರ್ವರ್ತನವು ಕೇವಲ ಅಸಂಬಂಧವೆಂದೂ ಅಸಹನೀಯವೆಂದೂ ಭಾವಿಸಲ್ಪಡುವದು. ಅಲ್ಲದೆ ಹಿಂದುಸ್ಥಾನದ ಭಾವೀ ರಾಜ್ಯಭಾರ ಕ್ರಮವನ್ನು ಪರ್ಯಾಲೋಚಿಸುವರೇ ಈಗ ಸಾಗನೇ ಕೂಡಿರುವ ಪರಿಷತ್ತಿನ ಕಾರ್ಯಕ್ಕೆ ಇನ್ನಷ್ಟು ತೊಡಕುಂಟಾದ ಹಾಗಾಗುವುದು. ಸರಕಾರದವರ ದ್ಯೋತಿಯನ್ನು ಮೂಲದಲ್ಲಿಯೇ ತಿದ್ದುವುದು ರಾಷ್ಟ್ರೀಯ ಪ್ರಮುಖರ ಧ್ಯೇಯವಾಗಿರುವಲ್ಲಿ ವೈಯಕ್ತಿಕ ದ್ವೇಷಸಾಧನೆಗಳಿಗೆ ಅವಕಾಶವೆಲ್ಲಿ? ಹಿಂದುಸ್ಥಾನಕ್ಕೆ ಸ್ವರಾಜ್ಯ ದೊರೆತರೂ ಕಾನೂನುಗಳು ಬೇಡವೇ? ಶಾಂತಿರಕ್ಷಣೆಯ ಬಗ್ಗೆ ಪೋಲೀಸಿನವರೂ ನ್ಯಾಯಾಧಿಪತಿಗಳೂ ಬೇಡವೇ? ಹೀಗಿರುವಲ್ಲಿ ಜವಾಬ್ದಾರಿಯುಳ್ಳ ರಾಷ್ಟ್ರ ಕಾನೂನುಗಳನ್ನು ಹುದ್ದೆದಾರರು ಕಾಪಾಡುವದು ಅವರವರ ಕರ್ತವ್ಯವಲ್ಲವೇ? ಒಂದು ವೇಳೆ ಅಂಥಾ ಹುದ್ದೇದಾರರು ತಮ್ಮ ತಮ್ಮ ಕೆಲಸದಲ್ಲಿ ಅವಶ್ಯವಿಲ್ಲದಷ್ಟು ಅಸಕ್ತಿಯನ್ನ ನಿರ್ದಯೆಯನ್ನು ತೋರಿಸಿದರೂ ನ್ಯಾಯವಿರುದ್ಧವಾದ ಕೆಂಪು ನೋಟೀಸುಗಳು ಅವರನ್ನು ಇನ್ನಷ್ಟು ಗರ್ವಿಷ್ಠರನ್ನಾಗಿ ಮಾಡುವವೆಂದು ನಮ್ಮ ಮತ. ಪ್ರಕೃತದ ಶಾಂತಿಸಮರದ ಫಲಿತಾಂಶವೇನಾಗಬಹುದೆಂದು ನೋಡಲು ಭೂಲೋಕವೇ ತವಕಪಡುತ್ತಿರುವದು. ಯಾವುದೇ ದೃಷ್ಟಿಯಿಂದ ನೋಡಿದರೂ ಕೆಂಪು ನೋಟೀಸುಗಳಿಂದ ಅಪ್ರಯೋಜನವೇ ಹೊರತು ಪ್ರಯೋಜನವಿಲ್ಲ. ಆದುದರಿಂದ ಹಿಂದುಸ್ಥಾನದ ಹಿತಚಿಂತಕರು ಕೆಂಪು ನೋಟೀಸುಗಳಲ್ಲಿ ಸೂಚಿತವಾದ ವೈಕಾರಿಕ ಮನೋವೃತ್ತಿಯನ್ನು ಮನೋವಾಕ್ಕಾಯ ಕರ್ಮಗಳಲ್ಲಿಯೂ ಖಂಡಿಸುವದು ಧರ್ಮವಾಗಿದೆ.

## ಕೇವಲ ಕುಸುರಿ ಕ್ರಯ.

ಕ್ರಯ ರೂ. 1—14—0 ಮಾತ್ರ. [illegible] ಗಡಿಯಾರ ಬಾಳಿಕೆ ಬರುವ [illegible] ನಂಬ್ರ 1 ರೂ. 3—8—0 ನಂಬ್ರ 2 ರೂ. 4—0—0 ನಂಬ್ರ 3 ರೂ. 6—0—0. (ಮಾರುವವರುಗಳ ಗೆರಂಟಿ ಇದೆ.)

[illegible]

R. C. MUKERJEE,
*12/2 Hari Paul Lane*
CALCUTTA

---

# Grand Clearing Sale!

ಜಗತ್ಪ್ರಸಿದ್ಧವಾದ ನಮ್ಮ "ಒಟ್ಟೊ ಫುಲಾರಾಮ್" ಸುಗಂಧದ ಆರು ಬಾಟಲಿಗಳನ್ನು ಮೂರು ರೂಪಾಯಿಗಳಿಗೆ ಕೊಳ್ಳುವವರು ಈ ಕೆಳಗಿನವುಗಳನ್ನು ಧರ್ಮಾರ್ಥವಾಗಿ ಪಡೆಯುವರು. —

1 ಕರವಸ್ತ್ರ, 1 ಫೌಂಟನ್ ಪೆನ್, 1 [illegible], 1 [illegible] 1 ಸುಗಂಧ ಸಾಬೂನು, 1 [illegible], 12 [illegible], 1 [illegible], 1 [illegible], 1 [illegible], 1 ಬಾಚಣಿಗೆ, 1 [illegible], 1 [illegible], 1 ಹರಳಿನ ಉಂಗುರ.

ಅಂಚೆವೆಚ್ಚ ಅಣೆ 0—8—0
ಇಂಗ್ಲೀಷಿನಲ್ಲಿ ಬರೆಯಿರಿ

**Indian Stores,**
*5 Beadon Street,*
CALCUTTA

---

## ನೋಟೀಸು

ಪುತ್ತೂರು ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ
ಕ್ರಮ ನಂಬ್ರ 482/1930

ವಾಸ್ಕೋ [illegible] —ವಾದಿ.

ಹಮ್ಮದಿ ಬ್ಯಾರಿ ಕೂಡಾ—ಪ್ರತಿವಾದಿರು

ಸದರಿ ವ್ಯಾಜ್ಯದ 2ನೇ ಪ್ರತಿವಾದಿ ಪುತ್ತೂರು ತಾಲೂಕು [illegible] ಗ್ರಾಮದ [illegible] ಹಮ್ಮದೆ [illegible] ಬ್ಯಾರಿ ಮಗ [illegible] ಬ್ಯಾರಿಗಳಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ —

ಸದರಿ ವಾದಿಯು ಮೇಲ್ಕಂಡ ಕೋರ್ಟಿನಲ್ಲಿ [illegible] ಬಾಕಿಯ ವಸೂಲಿ ಕುರಿತು ರೂ 145—9—[illegible] ವ [illegible] ಮುಂದಣ ಬಡ್ಡಿಗೆ ಕೂಡಾ [illegible] ಮಾಡಿರುವ ಈ ದಾವೆಯು ತಾ 16—12—30[illegible] ಮುಂದೊಕಲೂ, ಆ ಕುರಿತು ನಿಮಗೇನಾದರೂ ಆಕ್ಷೇಪವಿದ್ದರೆ ಆ ದಿನ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ [illegible] ತಪ್ಪಿದರೆ ನಿಮ್ಮ ಗೈರುಹಾಜರಿಯಿಂದಲೇ ಈ ವ್ಯಾಜ್ಯ ತೀರ್ಮಾನಿಸಲಾದೀತೆಂತ ಈ ಮೂಲಕ ನಿಮಗೆ ತಿಳಿಸಿಯದೆ

ಪುತ್ತೂರು [illegible] 24—11—30 } (Sd) M. Sadashiva Rao
Vakil for Plaintiff

---

**In the Court of the District Munsiff**
**CANNANORE**

Small Cause Suit No 58?/30

Pathuparambath Pokker—Pltf

Matapurath Sulaiman's son Patanna yit Udinur Valiapurat Assainar and another . Dft.

Take notice that if the defendants do not put in their appearance on 4—12—30 the suit will be heard exparte

**T. V. Kunhiraman Nair, B.A.B.L**
Vakil for Plaintiff.

---


**The Cochin Soap Works,** ದಿ ಕೊಚ್ಚಿನ್ ಸೋಪ್ ವರ್ಕ್ಸ್.
IRENJALAKUDA ಇರಿಂಜಾಲಕುಡ

ಕೊಚ್ಚಿ [illegible] 1928—29 [illegible] ನಡೆದ [illegible] ಗಳಲ್ಲಿ [illegible] ಅನೇಕ ಯೋಗ್ಯತಾ ಪತ್ರಗಳಿಂದಲೂ [illegible]

[illegible] ಸೋಪ್, [illegible] ಸೋಪ್, [illegible] ಸೋಪ್ [illegible]

ಬೇಬಿ ಬಾರಿಕ್ಸ್ ಸೋಪ್—[illegible]

[illegible]

[illegible] ರೋಸ್ ಸೆಂಟೆಡ್ ಸೋಪ್—[illegible]

ಜೋನ್ಸನ್ಸ್ [illegible] ಸೋಪ್—[illegible]

ಕೊಪ್ಪರ್ ಸೋಪ್—[illegible]

ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸೋಲ್ ಏಜಂಟರು—

ಮೆಸರ್ಸ್ ಬೋಳಂತೂರು ಸರ್ವೋತ್ತಮ ಪ್ರಭು, ಮಂಗಳೂರು.

ಕೆ. ಜೆ ಲಾಜರ್, ಮೆನೇಜರ್ ಮತ್ತು ಎಕ್ಸ್ಪರ್ಟ್

[illegible]

ಏಜಂಟರು ಬೇಕಾಗಿದೆ


---


**"If every Wife knew what every Widow knows every Husband would be Insured."**

PLACE YOUR LIFE ASSURANCE WITH
**THE SOUTH INDIAN**
Securing for your clients —
1. Low rates of Premium
2. Liberal Policy Conditions
AND FOR YOURSELF
An Agency with attractive Terms of Commission and Salary in
**The South Indian General Assurance Co., Ltd.,**
Anywhere in CANARA DISTRICTS & HYDERABAD STATE
For terms of Agency please apply to —
H. R. K. IYENGAR
Chief Agent
The S. I. G. A. Co. Ltd.,
San ?asigudd MANGALORE
Managing Agent
K. C. PANDALAI & CO
7 8 Mclean Street G. T. MADRAS

ಜೀವವಿಮೆ ಮಾಡುವವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಸ್ಯೂರೆನ್ಸ್ ಕಂಪೆನಿ ಲಿಮಿಟೆಡ್ನಲ್ಲಿ ವಿಮೆಮಾಡಿರಿ
ನಿಮಗೂ, ನಿಮ್ಮ [illegible] ಪ್ರಯೋಜನ ಮತ್ತು [illegible]!
ಪ್ರಿಮಿಯಂ ದರಗಳು ಕಡಿಮೆ!
[illegible]
ಕನ್ನಡ ಜಿಲ್ಲೆ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ
ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ ದೊರಕುವುದು
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)
ಚೀಫ್ ಏಜಂಟರು—
ಎಚ್. ಆರ್. ಕೆ ಅಯ್ಯಂಗಾರ್,
[illegible] ಜಿಲ್ಲೆ ಮತ್ತು ಹೈದರಾಬಾದ್ ಪ್ರಾಂತ್ಯಗಳಿಗೆ.
ದಿ ಎಸ್ ಐ. ಜಿ ಎ ಕಂಪೆನಿ ಲಿಮಿಟೆಡ್,
[illegible]ಗುಡ್ಡೆ ಮಂಗಳೂರು
ಮೆನೇಜಿಂಗ್ ಏಜಂಟರು —
ಕೆ. ಸಿ. ಪಾಂಡಲಿ ಎಂಡ್ ಕೋ.
7 8 ಮೆಕ್ಲೀನ್ ಸ್ಟ್ರೀಟ್ ಜಿ ಟಿ ಮದ್ರಾಸು


---


## 'ಗ್ರೇಂಡ್ ಕ್ಲಿಯರೆನ್ಸ ಸೇಲ್'!

ಬರೇ ಮೂರು ರೂಪಾಯಿಗಳ ವ್ಯಾಪಾರದಿಂದ 824 ಅಮೂಲ್ಯವಾದ ಪಾರಿತೋಷಕಗಳು! ನವ್ಯ ಸುಗಂಧ ಪೂರಿತವಾದ 'ಒಟ್ಟೊ' ಮೋತಿಯಾ ತೈಲದ ಆರು ಬಾಟ್ಲಿಗಳನ್ನು ಒಮ್ಮೆಗೇ ಕೊಂಡುಕೊಳ್ಳುವವರಿಗೆ ಈ ಕೆಳಗೆ ನಮೂದಿಸಿರುವ [illegible] ಅಮೂಲ್ಯ ಬಹುಮಾನಗಳು ಉಚಿತವಾಗಿ ಕೊಡಲಾಗುವವು!



[illegible]

ಮೌಲ್ಯ ರೂ. ೩—೦—೦ ಮಾತ್ರ ಟಪ್ಪಾಲು ಹಾಸಲು ೦—[illegible]—೦
ಪತ್ರವ್ಯವಹಾರವು ಇಂಗ್ಲಿಷಿನಲ್ಲಿಯೇ ಸಾಗಬೇಕು
ಇಂಡಿಯನ್ ಸ್ಟೋರ್ಸ್ ಕೋ.,
47, ಬೆನಿಯಾಟೋಲಾ ಸ್ಟ್ರೀಟ್, ಪಿ. ಓ., ಹಟ್ಖೋಲಾ ಕಲ್ಕತ್ತೆ
**INDIAN STORES CO.** 47 Beniatola Street, Po. Hatkhola CALCUTTA.



## ಅನುಕ್ರಮಣಿಕೆ.


ಅಗ್ರಲೇಖ.

ಹಿಂದೂಸ್ಥಾನದ ಸಿನೆಮಾ ಕೈಗಾರಿಕೆ . . . ೮

ಸ್ಫುಟವಿಚಾರಗಳು . . . ೬

ನೋಟಗಳು . . . . . . ,

ವರ್ತಮಾನ ಸಂಗ್ರಹಗಳು

ವಿದೇಶ ವರ್ತಮಾನ . . . . . ೮

ಒಳದೇಶ ವರ್ತಮಾನ . . . . ೮ ೯

ದಕ್ಷಿಣ ಕನ್ನಡ—ಕೊಂಗಳೂರು, ಸಂಪಾಜೆ, ಪಂಗಬೆಟ್ಟು

ಕೊಡಗು . . . . . ೯

Provoking and thought Provoking ,

ವಿವಿಧ ಸಮಾಚಾರಗಳು . ೧೧

ಹಿಂದೂಸ್ಥಾನದ ಇತಿಹಾಸ ೧೪

ಕೊಡಗು ದೇಶದ ರಾಜ್ಯಭಾರ ಕ್ರಮ ,

ವಾಚಕಾಭ್ಯಾಸಿಯವರ ಸತ್ಯಾಗ್ರಹ ಸಮಾಚಾರ ೪ ೧೫


# ಸ್ವದೇಶಾಭಿಮಾನಿ.

ತಾರೀಕು ೨೮ನೇ ಶುಕ್ರವಾರ ನವಂಬರ ೧೯೩೦

## ಹಿಂದೂಸ್ಥಾನದ ಸಿನೆಮಾ ಕೈಗಾರಿಕೆ.

ಲೇಖಾಂಕ 4.

"ಸಿನೆಮಾ ಸ್ಟಾರ್" ಎಂಬ ಪಾಶ್ಚಾತ್ಯ ಹೆಸರು ಹಿಂದೂಸ್ಥಾನದಲ್ಲಿಯೂ ಪ್ರಾಬಲ್ಯವನ್ನು ಹೊಂದದೆ ಇಲ್ಲ. ಏಕೆಂದರೆ ಯಾರೊಬ್ಬ "ಸ್ಟಾರ್" ಇಲ್ಲದಿದ್ದರೆ ಸಿನೆಮಾ ಫಿಲ್ಮಿಗೆ ಮರ್ಯಾದೆ ಬರುವುದಿಲ್ಲ. ಆದರೆ ಹಿಂದೀ ಸಿನೆಮಾ ಸ್ಟಾರುಗಳ ಕತೆಯೇನು? ಅವರ ಯೋಗ್ಯತೆಗಳೇನು? ಅವು ಮಾತ್ರ ವಿಮರ್ಶಿಸಿದರೆ ಹಿಂದೂಸ್ಥಾನದಲ್ಲಿ ನಿಜವಾಗಿ 'ಸ್ಟಾರ್' ಎಂದು ಹೇಳಲ್ಪಡತಕ್ಕವರು ಒರೀ ಕೆಲವೇ ಮಂದಿ ಎನ್ನಲೂ ಬಹುದು, ಇಲ್ಲವೇ ಪಾಶ್ಚಾತ್ಯ ಪೂರ್ಣತೆಯ ನಟನೆಯನ್ನು ಬಲ್ಲ ಹಿಂದೀ "ಸ್ಟಾರ್"ಗಳೇ ಇಲ್ಲವೆನ್ನಲೂ ಬಹುದು.

ಕೆಲವು ಸಿನೆಮಾ ಸ್ಟಾರುಗಳು ಪಾಶ್ಚಾತ್ಯ ದೇಶಗಳಿಂದ ಬಂದಿರುವರಾದರೂ ಹಿಂದೂ ಹೆಸರುಗಳನ್ನು ಧರಿಸಿ, ಹಿಂದೀ ವೇಶವನ್ನು ತೊಟ್ಟು, ಹಿಂದೀಯರೆಂಬ ಸುಳ್ಳು ಭಾವನೆಯನ್ನು ಕೊಡುವರು. ನಿಜವಾದ ಪಾಶ್ಚಾತ್ಯ ಸ್ಟಾರುಗಳಿಗೆ ಸ್ವದೇಶದಲ್ಲಿಯೇ ಅಪರಿಮಿತ ಲಾಭವು ಸಾಧ್ಯವಿರುವಾಗ, ಇಲ್ಲಿ ಬರುವವರಲ್ಲಿ ಎಂತಹ ಯೋಗ್ಯತೆಯು ಇರಬಹುದೆಂಬುದನ್ನು ನಾವು ಬೇರೆ ಹೇಳಬೇಕಾಗಿಲ್ಲ. ಅದರಲ್ಲಿಯೂ ಪಾಶ್ಚಾತ್ಯ ಸ್ತ್ರೀ ಪುರುಷರು ಪೌರ್ವಾತ್ಯ ಹಾವಭಾವಗಳನ್ನು ಅಭಿನಯಿಸುವಾಗ ಎಷ್ಟು ಅಸ್ವಾಭಾವಿಕತೆಯು ತೋರಿಬರುವುದೆಂದು ನೋಡಿದವರು ಹೇಳಬಲ್ಲರು.

ಹಾಗೆಂದು ಹಿಂದೀ 'ಸ್ಟಾರ್'ಗಳು ಅಭಿನಯದಲ್ಲಿ ಪ್ರವೀಣರೆಂದು ನಾವು ಹೇಳಲಾರೆವು. ಹೆಚ್ಚಿನಮಟ್ಟಿನ ಈ "ಸ್ಟಾರ್" ರೀತಿಯು ಸಂಬಂಧಪಟ್ಟ ಫಿಲ್ಮ ಕಂಪೆನಿಗಳ ತಯಾರಿ ಯಾಗಿದೆ. ಮತ್ತು ಒಂದು ಬಾರಿ ಒಂದು ತರದ ಅಭಿನಯವು ಹಿಂದೀ ಪ್ರೇಕ್ಷಕ ವರ್ಗವನ್ನು ಬಹು ಸಂಖ್ಯಾತವಾಗಿ ಎಳೆಯಬಲ್ಲದಾಯಿತೆಂದು ತಿಳಿದರೆ, ಮತ್ತೆ ಪುನಃ ಪುನಃ ಅದೇ ರೀತಿಯ ಅಭಿನಯವೇ ಆ ಮೇಲಿನ ಫಿಲ್ಮುಗಳಲ್ಲಿ ಕಂಡುಬರುವುದು. ಆದರೆ ಈಗಿನ ಪ್ರೇಕ್ಷಕ ವರ್ಗದ ಮಾನದಿಂದ ಅಭಿನಯ ಶ್ರೇಷ್ಠತೆಯನ್ನು ನಿರ್ಣಯಿಸಲಾಗುವುದಿಲ್ಲವೆಂದೂ, ಫಿಲ್ಮು ಕಂಪೆನಿಗಳು ಉತ್ತಮ ವರ್ಗದ ಅಭಿನಯದ ಮೂಲಕ ಪ್ರೇಕ್ಷಕ ವರ್ಗದಲ್ಲಿ ಕಲಾಜ್ಞಾನವನ್ನುಂಟುಮಾಡಬೇಕಲ್ಲದೆ, ಪ್ರೇಕ್ಷಕರ ಅಜ್ಞಾನದ ಮಟ್ಟಕ್ಕೆ ಅಭಿನಯವನ್ನು ಇಳಿಸಬಾರದೆಂದೂ ಫಿಲ್ಮು ಕಂಪೆನಿಗಳು ತಿಳಿಯುವುದು ಆವಶ್ಯಕ.

ಅಭಿನಯದಲ್ಲಿ ಸ್ವಾಭಾವಿಕತೆಯನ್ನು ತರುವುದು ಸಾಮಾನ್ಯ ಕೆಲಸವಲ್ಲ. ಪಾಶ್ಚಾತ್ಯರಿಗೆ ಶತಮಾನಗಳ ತರಬೇತಿಯಿದೆ; ವ್ಯವಸ್ಥಿತ ಅಭ್ಯಾಸವಿದೆ. ಪೌರ್ವಾತ್ಯರಿಗೆ ತರಬೇತಿಯೂ ಇಲ್ಲ, ವ್ಯವಸ್ಥಿತ ಅಭ್ಯಾಸವೂ ಇಲ್ಲ. ಕೆಲವು ಅಭಿನಯಕಾರರಲ್ಲಿ ಒಳ್ಳೇ ಸುಧಾರಣೆಯಾಗಿದೆ ಎಂಬುದು ಸಂತೋಷಕರವಿದೆ. ಆದರೆ ಅವರಿಗೆ ಇನ್ನೂ ತರಬೇತಿಯು ಅವಶ್ಯವಿದೆಯೆಂದೂ, ಅಭಿನಯ ವಿಜ್ಞಾನದ ಬೋಧೆಯು ಅವರಿಗೆ ಆಗಬೇಕೆಂದೂ ಒಪ್ಪಲೇ ಬೇಕು.

ಫಿಲ್ಮುಗಳು ಕಲೆಯ ಅಭಿವೃದ್ಧಿಯನ್ನು ಉದ್ದೇಶಿಸುವುದಕ್ಕಿಂತಲೂ, ಪ್ರೇಕ್ಷಕರನ್ನು ಅಸಭ್ಯ ಚಿತ್ರಗಳಿಂದ ಆಕರ್ಷಿಸಿ ದುಡ್ಡು ಮಾಡುವುದನ್ನು ಕೆಲವು ಫಿಲ್ಮುಗಳ ಹೆಂಗಸರ ಅರ್ಧನಗ್ನ ಚಿತ್ರಗಳನ್ನೂ, ನೃತ್ಯಗಳನ್ನೂ ನೋಡಿದರೆ ಕಂಡುಬರುವುದು. ಈಗ ಸಾಧಾರಣ ಅರ್ಧನಗ್ನ ಸ್ತ್ರೀಯರಿರುವ ಚಿತ್ರಗಳೇ ಕಡಿಮೆ. ಇನ್ನು ಕೆಲವುಗಳು ಖಡ್ಗ ಯುದ್ಧದಿಂದ ಜನರು ಆಕರ್ಷಿಸಲ್ಪಡುವರೆಂದು ಕಂಡರೆ, ಎಲ್ಲಾ ಫಿಲ್ಮುಗಳಲ್ಲಿ ಖಡ್ಗಯುದ್ಧವೇ ಬರುವುದು. ಈ ಖಡ್ಗಯುದ್ಧದ ವೈಶಿಷ್ಟ್ಯವೆಂದರೆ ಅದರ ಅಸ್ವಾಭಾವಿಕತೆ, ಖಡ್ಗಗಳನ್ನು ಹಿಡಿಯಲಿಕ್ಕೂ ಕೂಡ ಗೊತ್ತಿಲ್ಲದವರು ವೀರಯೋಧರಾಗಿ ಒಂದು ಕೋಲನ್ನು ತಿರುಗಿಸುವ ಹಾಗೆ ಖಡ್ಗಗಳನ್ನು ತಿರುಗಿಸುವರು. ಇಂತಹ ನಿದರ್ಶನಗಳನ್ನೆಷ್ಟೋ ಈಗಿನ ಫಿಲ್ಮುಗಳಲ್ಲಿ ತೋರಿಸಬಹುದು.

ಇನ್ನೊಂದು ಮಾತು, ಉತ್ತಮ ಕಥಾಂಶಯುತ ಅಭಾವವನ್ನು ನಾವು ಮೊದಲೇ ಹೇಳಿರುವೆವು. ಪ್ರದರ್ಶಿಸಲ್ಪಡುವ ಘಟನೆಗಳ ಶಿರೋಲೇಖವನ್ನು ಬರೆಯುವವರೂ ಹಿಂದೀ ಚಲಚ್ಚಿತ್ರಗಳ ಕಂಪೆನಿಗಳಿಗೆ ದೊರಕುವುದಿಲ್ಲವೆಂಬುದು ಆಶ್ಚರ್ಯವಲ್ಲವೇ? ಈ ಶಿರೋಲೇಖವೆಂದರೆ ಪಾಶ್ಚಾತ್ಯರಲ್ಲಿ ಒಂದು ಪ್ರತ್ಯೇಕ ಕಲೆಯೇ ಆಗಿದೆಯೆಂದು ಹೇಳಬಹುದು. ಪಾಶ್ಚಾತ್ಯ ಚಿತ್ರಗಳು ಪ್ರದರ್ಶಕರ ಮೇಲೆ ಎಷ್ಟು ಪರಿಣಾಮಕಾರಿಯೋ, ಅವುಗಳ ಶಿರೋಲೇಖಗಳು ಅವುಗಳಿಗಿಂತ ಹೆಚ್ಚೇ ಪರಿಣಾಮಕಾರಿಯಾಗಿವೆ. ಆದರೆ ಹಿಂದೀ ಸಿನೆಮಾಗಳಲ್ಲಿ ಶಿರೋಲೇಖ ಬರಿಯುವುದೆಂದರೆ ಚಿತ್ರಗಳ ಅರ್ಥ ಕೊಡಬಲ್ಲ ಒಂದಿಷ್ಟು ಶಬ್ದಗಳ ರಾಶಿಯನ್ನು ತೋರಿಸುವುದಾಗಿದೆ. ಹಿಂದೀ ಗುಜರಾಥಿ ಮೊದಲಾದ ಭಾಷೆಗಳ ಪರಿಸ್ಥಿತಿ ನಮಗೆ ತಿಳಿದಿಲ್ಲ. ಇಂಗ್ಲೀಷಿನ ಮಟ್ಟಿಗೆ, ಹಲವು ಫಿಲ್ಮುಗಳಲ್ಲಿ ಗೌರವಾನ್ವಿತ ಆಕರ್ಷಕ ಭಾಷೆ ಇರುವ ಬದಲಿಗೆ, ಇದ್ದ ವಾಕ್ಯಗಳಲ್ಲಿ ವ್ಯಾಕರಣವೇ ಇಲ್ಲ, ಶಬ್ದಗಳಲ್ಲಿ ಅಕ್ಷರಗಳೇ ಸರಿಯಿಲ್ಲ! ಇಂತಹ ಅತೀ ಸಾಮಾನ್ಯ ಕೆಲಸದಲ್ಲಿಯೂ ಜಾಗ್ರತೆ ತೆಗದುಕೊಳ್ಳದವರು ಬೇರೆ ಏನು ಬೆಲೆ ಕೊಟ್ಟಾರು? ಈ ಶಿರೋಲೇಖಗಳ ಪ್ರದರ್ಶನದಲ್ಲಿಯೂ ಕ್ರಮವಿಲ್ಲ. ಕೆಲವುಗಳು ಓದಿ ಆಗುವುದಕ್ಕಿಂತ ಮೊದಲೇ ಓಡಿಬಿಡುವವು. ಇನ್ನು ಕೆಲವು ಓದಿ ಬೇಸರ ಬಂದರೂ ಎದುರಿನಲ್ಲಿರುವುವು.

ನಾವು ಇಲ್ಲಿ ಹಿಂದೀ ಸಿನೆಮಾದೊಳಗಿನ ಕೆಲವೇ ಕೊರತೆಗಳನ್ನು ತೋರಿಸಿರುವೆವು. ಸಿನೆಮಾ ಪ್ರೇಕ್ಷಣವು ಫಿಲ್ಮ ಕಂಪನಿಗಳಿಗೆ ದುಡ್ಡು ಮಾಡಿಕೊಡುವ ವಿಷಯವಾಗಿರದೆ ಒಂದು ಕಲೆಯ ಅಭಿವೃದ್ಧಿಯಾಗಲೆಂದೇ ನಮ್ಮ ಉದ್ದೇಶವಾಗಿದೆ. ಪ್ರದರ್ಶಕರೂ ಪ್ರೇಕ್ಷಕರೂ ಸಹಕರಿಸಿದರೆ ಈ ಕಲೆಯ ಅಭಿವೃದ್ಧಿಯು ಶೀಘ್ರವಾಗುವದು.

## ವಿದೇಶ ವರ್ತಮಾನ.

— ಲಾರ್ಡ್ ಗೋಶೆಲ್ ಎಂಬವರು ಇಂಡಿಯದ ವೈಸರಾಯರಾಗುವರೆಂದು ವರ್ತಮಾನ. ಅವರು ಲೇಬರ್ ಪಕ್ಷದವರು. ಈ ವಿಷಯದಲ್ಲಿ ಡೈಲಿ ಹೆರೊಲ್ಡ ಪತ್ರಿಕೆಯು ಟೋರೀಸ್ ಮತ್ತು ಲಿಬರಲ್ ಪಕ್ಷದವರು ಲೇಬರ್ ಪಕ್ಷದವರನ್ನು ಇವ ಜವಾಬ್ದಾರಿಕೆಯ ಯಾವದೇ ಕೆಲಸದಲ್ಲಿ ಇದುವರೆಗೂ ನೇಮಿಸಿರುವುದುಂಟೇ? ಎಂದು ಪ್ರಶ್ನೆ ಹಾಕಿರುವದು.

— ಇಂಡಿಯದ ಕಾಂಗ್ರೆಸ್ ಸದಸ್ಯರು ವಿಷದಪಡಿಸಬಹುದಾದ ಸ್ವಾತಂತ್ರ್ಯ ಕೋರಿಕೆ ಇಡೀ ಇಂಡಿಯಕ್ಕೆ ಸ್ವತಂತ್ರ ... ಕಾಂಗ್ರೆಸ್ ... ಮೊದಲಾದ ... ವರ್ತಮಾನಗಳು ನಡೆಯುತ್ತಿರುವ ... ಹೇಳಿದರು.

— ಲಂಡನ ನಗರದ ಲಂಕೇಶ್ಯಾರ್ ಎಂಬಲ್ಲಿ ೩೦೦೦೦ ಜನರನ್ನು ಹತ್ತಿ ಕಾರಖಾನೆಗಳ ಕೆಲಸಕ್ಕೆ ಸೇರಿಸಿರುವರೆಂದು ತಿಳಿದುಬರುತ್ತದೆ. ಹಾಗೂ ಚರ್ಚಾಗೋಷ್ಠಿಯ ಆಧಾರದ ಮೇಲೆ ಲಂಕೇಶ್ಯಾರದ ಗಿರಣಿಗಳು ನವಚೇತನವನ್ನು ಹೊಂದಿರುವವೆಂದು ತಿಳಿದುಬರುತ್ತದೆ.

— ಲಿಯನ್ಸ್ ಎಂಬಲ್ಲಿ ಭೂಮಿಯೊಡೆದು ಹೆಚ್ಚಿನ ನಷ್ಟವುಂಟಾಗಿರುವದು, ಅನೇಕರು ಸತ್ತುಹೋಗಿರುವರು. ಸಾವಿರಾರು ಮನೆಗಳು ನೆಲಸಮವಾಗಿರುವವು. ಪೊಲೀಸರು ಮಣ್ಣಿನ ಅಡಿಗೆ ಹೂಳಲ್ಪಟ್ಟ ಶವಗಳನ್ನು ಎತ್ತುವದಕ್ಕಾಗಿ ಪ್ರಯತ್ನಿಸುತ್ತಿರುವರು.

## ಒಳದೇಶ ವರ್ತಮಾನ.

— ನಾಗಪುರ ಜೈಲಿನಲ್ಲಿ, ರಾಜಕೀಯ ಬಂದಿವಾನರ ಆರೈಕೆಯು ಏನೂ ಸಮಾಧಾನಕರವಾಗದಿದ್ದುದರಿಂದ ಕೆಲಮಂದಿ Hunger Strike ಮಾಡಿದರೆಂದು ತಿಳಿದುಬಂತ್ತದೆ. 8-9 ಮಂದಿ ರಾಜಕೀಯ ಕೈದಿಗಳು ಒಂದು ವಾರದಿಂದ ಆಹಾರವನ್ನು ಬಿಟ್ಟಿರುವರಂತೆ; ಶ್ರೀ ಸೇಠ್ ಪೂನಮಚಂದ್ರರೆ (ರಾಜಕೀಯ ಕೈದಿ) ಪ್ರಾಯಶ್ಚಿತ್ತದಲ್ಲಿ ೪೦ ಪೌಂಡುಗಳಷ್ಟು ಭಾರವು ಕಡಿಮೆಯಾಗಿರುವದು. ಇವರಿಗೆ "ಸಿ" ಕ್ಲಾಸ್ ಕೈದಿಗಳಿಗೆ ಕೊಡುವ ಆಹಾರವನ್ನೇ ಕೊಟ್ಟಿರುತ್ತಾರೆ. ಆದರು, ಸಹೋದರ ವರ್ಗದ ಕೈದಿಗಳ ಕಷ್ಟಗಳನ್ನು ನೋಡಿ ತನಗೆ "ಬಿ" ಕ್ಲಾಸ್ ಆಹಾರದ ಏರ್ಪಾಡುಗಳಿದ್ದರೂ, ಅವುಗಳನ್ನು ಲಕ್ಷಿಸದೆ, "ಸಿ" ತರಗತಿಯವರಿಗೆ ಕೊಡುವ ಆಹಾರವನ್ನೇ ಕೊಡಬೇಕೆಂದು ಅಪೇಕ್ಷಪಟ್ಟರಂತೆ! ಅದಕ್ಕಾಗಿ ಅವರಿಗೆ "ಸಿ" ತರಗತಿಯ ಬಂದಿವಾನರಿಗೆ ಕೊಡುವ ಆಹಾರವನ್ನು ಕೊಟ್ಟರು. ಆದುದರಿಂದ ಅವರ ದೇಹವು ಬಹಳ ಕೃಶವಾಗಿ, ವ್ಯಾಪಾರವೂ ಕಡಿಮೆಯಾಗಿರುವದು.

— ಅಹಮ್ಮದಾಬಾದಿನ ವಾರ್ತೆಯೊಂದರಿಂದ ತಿಳಿದುಬರುವದೇನೆ ಶ್ರೀಯುತ ವಲ್ಲಭಾಯಿಯವರು ಸ್ವಲ್ಪ ಮಟ್ಟಿನ ಜ್ವರದಿಂದ ಪೀಡಿತರಾಗಿರುವರೆಂದು ತಿಳಿದುಬರುತ್ತದೆ.

— ಸೇನಗುಪ್ತರು ... ವಾಗಿ ಥೆಲ್ಲಿಯ ಜೈಲೊಳಗೆ ... ಯಾರೂ ... ದರ್ಶನವನ್ನು ಜೈಲಧಿಕಾರಿಗಳು ನಿರಾಕರಿಸಿರುವರು. ಸೇನಗುಪ್ತರು ಕೆಲವು ದಿನಗಳಿಂದ ಅಸೌಖ್ಯದಲ್ಲಿರುವರು. ಅದಕ್ಕಾಗಿ, ಅವರು ಬಂದಿಖಾನೆಯಲ್ಲಿ ಒಂದೆರಡು ದಿನ ಉಪವಾಸ ವ್ರತವನ್ನು ಕೈಕೊಂಡರಂತೆ!

— ಪ್ರೆಸ್ಸಿನ ಕಾರ್ಯಾಲಯ (ಅಹಮ್ಮದಾಬಾದು) — ಈ ಸಂಸ್ಥೆಯ ಮನೇಜರರ ಸೂಚನೆಯಂತೆ, ಮೇಲೆ ಹೇಳಲ್ಪಟ್ಟ ಸಂಸ್ಥೆಯವರಿಂದ ಪ್ರಚುರಗೊಳಿಸಲ್ಪಟ್ಟ "ಗಾಂಧಿಯ ಓಟ" (Gandhi march) ಎಂಬ ಕರಪತ್ರಗಳ 1000 ಪ್ರತಿಗಳು ಅಹಮ್ಮದಾಬಾದು ಟಪ್ಪಾಲಾಫೀಸಿನಲ್ಲಿ ಪೋಸ್ಟು ಮಾಡಲ್ಪಟ್ಟಿದ್ದುವು. ಆದರೆ ಪೋಸ್ಟಮಾಸ್ಟರರು ತಿಳಿಸುವಂತೆ, ಅವೆಲ್ಲವನ್ನೂ ಪೋಲೀಸರು ಬಂದು, ಟಪ್ಪಾಲು ದ್ವಾರಾ ಕಳುಹಕೂಡದೆಂಬುದಾಗಿ ಕೈವಶಮಾಡಿದರಂತೆ.

— ಬಂಗಾಳದಲ್ಲಿ ಬಂದಿಖಾನೆಗಳಿಗೆ ವಿದ್ಯುಚ್ಛಕ್ತಿಯ ಶಂತಿಗಳ ಆವರಣವನ್ನು ಹಾಕುವದಕ್ಕಾಗಿ ಏರ್ಪಾಡುಗಳು ನಡೆಯುತ್ತಿವೆ. ಇವುಗಳನ್ನು ಮುಟ್ಟಿದ ಕೂಡಲೆ ಸಾಯಬೇಕು. ಈ ರೀತಿಯ ನವೀನ ಹಾಗೂ ಕುಲುಮೋಚಾಯದ ಶಿಕ್ಷಾಕ್ರಮವು ಇನ್ನರಿಗೆ ಬರುವದೆಂದು ಪ್ರಕಟವಾಗಿರುವದೆ.

— ಪಂಡಿತ ಮೋತಿಲಾಲರವರ ಆರೋಗ್ಯದ ಕುರಿತು ಹೆಚ್ಚಿನ ಚಿಂತೆಯು ನಿಷ್ಪ್ರಯೋಜಕ, ಆರೋಗ್ಯವು ಕ್ರಮೇಣ ಚೇತರಿಸಿಗುವುದು — ಎಂದು ಮೊದಲಾಗಿ ಅವರಿಗೆ ಚಿಕಿತ್ಸೆ ಮಾಡುತ್ತಿರುವ ಡಾಕ್ಟರರೇ ಸುದ್ದಿ ಹೊರಡಿಸಿರುವರು.

### ಬಟ್ಟೆ ಉಡದಿದ್ದರೆ ನಗ್ನನಾಗುವದಲ್ಲವೇ?

ಎಂದು ಹೇಳಿದರು — ಮುಂಬಾಯಿಯ ಹಣ್ಣು ಮಾರುವರೊಬ್ಬರು. ಅವರು ಪಾರ್ಸಿ ಮತದವರು, ತೀರ ಬಡವರಂತೆ! ಇಂಗ್ಲೀಷರ ಬಟ್ಟೆಯಿಂದ ಮಾಡಲ್ಪಟ್ಟ ಉಡುಪನ್ನು ತೊಟ್ಟಿದ್ದರು. ತಾರೀಖು ೭ — ೧೧ — ೩೦ನೇ ದಿನ, ಅವರು ಹೊಸ ಟ್ಯಾಂಕ್ಸ್ ಯಲ್ಲಿ ತನ್ನ ಸಮೀಪದಲ್ಲಿ ಒಂದು ಸರಸವಾದ ಭಾಷಣಕೊಡುತ್ತಿದ್ದರು. ಭಾಷಣದ ಸಾರಾಂಶವೆಂದರೆ ಸ್ವದೇಶೀ ವ್ರತದ ಗುಣಾವಗುಣಗಳು, ಬಹಿಷ್ಕಾರದಿಂದೇ — ಬಹಳ ಸ್ಫೂರ್ತಿದಾಯಕವಾಗಿದ್ದಿತು. ಭಾಷಣದ ಹೇಳಿಕೆಯಂತೆ, ಭಾಷಣಗಾರನಷ್ಟು ರಾಷ್ಟ್ರ ಪ್ರೇಮಿಯು ಇನ್ನೊಬ್ಬನಿಲ್ಲವೆನ್ನಿಸುವಂತಿದೆ. ಆದರೆ — ಕೊಟ್ಟದ್ದಾರೆ ವಿಲಾಯತಿ ಬಟ್ಟೆಯ ಉಡುಪನ್ನು, ಭಾಷಣಕಾರರು ಸ್ವದೇಶದ ವಿಳಿಗೆಯ ... ಈ ದೃಶ್ಯವು ನೋಡುವವರಿಗೆ ಕೆಲಮಟ್ಟಿನ ಸೋಜಿಗವುಂಟುಮಾಡಿತು, ಒಬ್ಬೊಬ್ಬರಿಗೆ, ಭಾಷಣಕಾರರ ಗುಣಾವಗುಣ ವಿಮರ್ಶೆಯೂ ನಡೆಯಿತು. ಕೆಲವರಿಗೆ ಸಭಿಕರಲ್ಲಿ ಸಂದೇಹ ಹುಟ್ಟಿತು. ಅಂತಹ ಸಂಶಯವನ್ನು ನೀಗಾಡಿಸುವದಕ್ಕಾಗಿ ಅನೇಕರು ಭಾಷಣವನ್ನು ಕಂಬ್ಳಿಕರಿಸಿ ಸತ್ಯಪರಿಶೋಧನೆಗಾಗಿ ಹೊರಟರು. ಜನಸಮೂಹವು ಭಾಷಣಗಾರನ ಸುತ್ತುಮುತ್ತ ಸೇರಿತು. ಆಗ ವೃದ್ಧ ಭಾಷಣಕರ್ತನು — 'ನಾನೊಬ್ಬ ಬಡ ಕಾರ್ಮಿಕನು, ಎರಡು ಸದರೀ ಉಡುಪನ್ನು ಕಳಕೊಂಡರೆ ಉಡಲಿಕ್ಕೆ ಬಟ್ಟೆಯೇ ಇಲ್ಲ. ಇದ್ದುದನ್ನು ಕಳಕೊಂಡು, ಸ್ವದೇಶೀ ಬಟ್ಟೆಯನ್ನು ಕೊಂಡುಕೊಳ್ಳಲು ದುಡ್ಡಿಲ್ಲ. ಬಟ್ಟೆ ಉಡದಿದ್ದರೆ ನಗ್ನನಾಗುವದಿಲ್ಲವೇ? ಎಂದನು.

ಈ ಮಾತನ್ನು ಕೇಳಿ ಒಬ್ಬ ಹಿಂದೂ ಶ್ರೀಮಂತ ಯಾವಕನು, ವೃದ್ಧನಾದ ಭಾಷಣಕರ್ತನನ್ನು ಸ್ವದೇಶೀ ಬಟ್ಟೆ ಅಂಗಡಿಗೆ ಕರೆದೊಯ್ದು ಅವರಿಗೆ ಬೇಕಾದ ಒಂದು ಖಾದಿಯ ಉಡುಪನ್ನು ಮಾಡಿಕೊಟ್ಟನು. ಜನಸಮೂಹವು ಸಂತೋಷದ ಅಧಿಕ್ಯತೆಯಿಂದ ಖಾದೀ ಬಟ್ಟೆಯ ಅಂಗಡಿಯ ವರೆಗೆ, ನಗುತ್ತ ಸಂತೋಷದಿಂದ ಬಂದಿದ್ದರು.

— ಅಲಹಾಬಾದದಲ್ಲಿ ಶ್ರೀ ಬಾಬು ಸಂಗಮಲಾಲ ಅಗರ್ವಾಲ ಎಂಬ ಹಮೀರು ವಕೀಲರು ಕಾರ್ಯದರ್ಶಿಯಾಗಿ ರಾಜಕೀಯ ವಿಷಯಗಳಿಗಾಗಿ ನರಳುತ್ತಿರುವ ಬಡ ಸತ್ಯಾಗ್ರಹಿಗಳ ಉದ್ಧಾರಕ್ಕೋಸ್ಕರ ಒಂದು ಸಹಾಯ ಸಮಿತಿಯನ್ನು ಏರ್ಪಡಿಸಿರುವರು. ಈ ಸಮಿತಿಗೆ ಸಂಬಂಧಿಸಿದ ಒಂದು ಹಣದ ಫಂಡೂ ಏರ್ಪಟ್ಟಿರುವದು. ಯಥಾಸಕ್ತಿ ವಂತಿಗೆಗಳನ್ನು ವಸೂಲಿ ಮಾಡಲು ಮೊದಲುಮಾಡಿರುವರು. ಡಿಸೆಂಬರ ೧ನೇ ತಾರೀಖಿನಿಂದ, ಧನಸಹಾಯದ ಹಂಚೋಣವನ್ನು ಆರಂಭಮಾಡಲಿಕ್ಕಿರುವರೆಂದು ತಿಳಿದು ಬರುತ್ತದೆ.

— ಸಿಡ್ನಿಯಲ್ಲಿ ಆಶ್ಚರ್ಯಕರವಾದ ದರೋಡೆಯೊಂದು ನಡೆದಿರುವದು. ಇಲ್ಲಿನ ಇಂಗ್ಲಿಷ್ ಸ್ಕಾಟಿಶ್ ಆಸ್ಟ್ರೇಲಿಯನ್ ಬೇಂಕಿನಲ್ಲಿ, ಖಜಾನೆಯು ಬಟ್ಟೆಂಟಿಗಸಾಗಿರುವ ಸಮಯವನ್ನು ಹಾರೈಸಿ ಒಬ್ಬ ಅಪರಿಚಿತ ಮನುಷ್ಯನು ಹಟಾತ್ತಾಗಿ ಒಳನುಗ್ಗಿ ಯಾವದೋ ಒಂದು ಅಂಗಡಿಯನ್ನು ವಿಚಾರಿಸಿದನು. ಖಜಾನೆಯ ಅಧಿಕಾರಿಯು ಉತ್ತರ

[illegible]

# ದಕ್ಷಿಣ ಕನ್ನಡ.

**ಮಂಗಳೂರು:** — [illegible]

[illegible]

**ಕಂಬಳೆ** — [illegible]

**ಫಲಂಗಿಪೇಟೆ** — [illegible]

**ಉಡುಪಿ** — [illegible]

[illegible]

## Provoking and thought Provoking.

### A "POPULAR" VOICE.

DEAR EDITOR

With its usual effusion, your contemporary has come forward with abuses to all that its proprietory anger could bring within its vision The once champion of the District Board President has now come down upon that authority with a vehemence, which if not a raving is at least an attack unwarranted by the present situation

Your contemporary's leader styled [illegible] as quite usual when one wants to blackmail, is neither logical nor bears any facts Why the President should bear the responsibility for the competition of bus fares in the District passes one's comprehension If the Bus Owner's cannot agree between themselves and if the secret object of some bus concerns is to be able to undersell by a little when others maintain rates I do not know how the District Board President can come out with a whip to whip these not too insensible bus owners

What is the function of the District Board President? Is he there to protect the interests of the Bus Owners as against all others who equally like bus owners want to exist? I know that bus owners want an order to be passed — "let taxis be stopped and bus fares be increased" This is very nice very good — for whom? Not for the public, it is for the bus owners If a taxi owner can ply at reduced fares and offer a more efficient conveyance to the public why should it be commanded out of the field? Has the president nothing but the interests of the bus owner to be considered? Is there not a wider interest called public interest? If your contemporary thinks that the tax on taxis is too low, let it be equitably raised But why should the public be robbed of a conveyance which is comparatively very convenient

Further when as I am told the proper allotment of service to taxis is still under consideration, and the rates restriction was kept in abeyance at the specific request of the bus owners themselves pending further decision by the District Magistrate is it not surprising to see that one of these bus owners should [illegible] abuse on the District Board President and on all the other bus owners?

It is a very curious mentality which tolerates [illegible] bus owners, because, as your contemporary so sweepingly alleges of their having [illegible] is because they want to dupe the share holders Is the status and the conscience of all the other bus owners given in charge of our contemporary and its allied Motor Service? Let there be logical arguments and not large imputations Certainly the editor of your contemporary cannot claim a monopoly of good intentions promoter as he is of more than one limited liability concerns which require no little confidence from the public

The comments on limited concerns is very wonderful A few years back, this contemporary came forward as a champion of the shareholders of one concern with a leader [illegible] imputing that the concern is being mismanaged and that it would soon go into liquidation due to bad management Today its prosperity is envied and is used as a butt end to discredit the management While the other two limited concerns are also not spared from [illegible]

Who were the competitors when Kanara Motor Service and [illegible] Motor Service and also Dattatraya Motor Service fell? The limited liability concern thus represented by [illegible] as 'traitors' ([illegible]) was certainly not the competitor, since this concern had no lines on these sections While on the other hand after the advent of this much blackmailed concern on other lines, other competitors have progressed simply because it has not only managed their affairs well, but also has given inspiration for good management to others

The leader of your contemporary is not only provoking, but also thought provoking I have gone into the subject only because I was struck with the brazen statements in it produced more by personal animus than by sound logic It is for the public to think about various intentions expressed in the article

Yours very truly

'Reader

[illegible]
ತಾ [illegible] ಶನಿವಾರದಿಂದ [illegible] ತಾ [illegible] ಶುಕ್ರವಾರದ ವರೆಗಿನ ಪಂಚಾಂಗ
(ಗ್ರಹಣ [illegible])

| [illegible] | | | | | | | ಸೂರ್ಯೋದಯ | |
|---|---|---|---|---|---|---|---|---|
| | | | | | | | ಘ | ಪ |
| 29 | [illegible] | [illegible] | [illegible] | [illegible] | [illegible] | [illegible] | 6 39 | 6 1 |
| 30 | ರವಿ | [illegible] | [illegible] | [illegible] | [illegible] | [illegible] | 6 40 | 6 1 |
| 1 | [illegible] | [illegible] | [illegible] | [illegible] | [illegible] | [illegible] | 6 40 | 6 1 |
| 2 | [illegible] | [illegible] | [illegible] | [illegible] | [illegible] | [illegible] | 6 41 | 6. 2 |
| 3 | ಬುಧ | [illegible] | [illegible] | [illegible] | [illegible] | [illegible] | 6 41 | 6 2 |
| 4 | ಗುರು | [illegible] | [illegible] | [illegible] | [illegible] | [illegible] | 6.41 | 6. 2 |
| 5 | ಶುಕ್ರ | [illegible] | [illegible] | [illegible] | [illegible] | [illegible] | 6 42 | 6. 2 |

## ಮಂಗಳೂರಿನ ವಾಯುಸ್ಥಿತಿ.

| Date | Temperature. ಉಷ್ಣ (ಕಾವು) Maximum | | Minimum | | Rainfall ಮಳೆ ದಿನದ ಮಳೆ | ಒಟ್ಟು ಮಳೆ |
|---|---|---|---|---|---|---|
| 14 | 89— 8 | | 68— 6 | | 0—04 | — |
| 15 | 91— 3 | | 69— 7 | | — | — |
| 16 | 90— 3 | | 71— 4 | | — | — |
| 17 | 91— 0 | | 75— | | 0—01 | — |
| 18 | 91— 3 | | 75— 7 | | — | — |
| 19 | 89 — 7 | | 75 | | — | — |
| 20 | 89— 8 | | 75— 0 | | — | 136 80 |

## ಮಂಗಳೂರಿನ ಪೇಟೆ ಧಾರಣೆ.

| [illegible] | ಈಗ ರೂ ಆ | ಮೊದಲು ರೂ ಆ |
|---|---|---|
| ಮುಕ್ಕ [illegible] | [illegible]—10 | 8— [illegible] |
| ಗುಡ್ಡ | 7— [illegible] | [illegible]— 6 |
| ಹೊಸ [illegible] | 5—8 | — |
| [illegible] | [illegible] 8 | 8 4 |
| [illegible] | 10— | 10 — |
| [illegible] | 6—12 | [illegible]— 4 |
| [illegible] | 6— 8 | 6—10 |
| [illegible] | 1— | 15— 0 |
| [illegible] | 6— 8 | — |
| [illegible] | 10— 8 | 15— 8 |
| [illegible] | 2— 0 | 13— 0 |
| [illegible] | 12— 0 | 25— 0 |
| [illegible] | 12— 0 | 12 8 |
| [illegible] | 12— 0 | — |
| [illegible] | 4[illegible]— 8 | 52— 0 |
| [illegible] | 4— 6 | 4—10 |
| [illegible] | 7 — 0 | [illegible] |
| [illegible] | 30— | 31— 0 |
| [illegible] | 2[illegible]— 8 | 30— 0 |
| [illegible] | 5— 4 | 6— 4 |
| [illegible] | 6—12 | 7— 0 |
| [illegible] | 4— 7 | 8—12 |
| [illegible] | 8— 8 | 3— 4 |
| [illegible] | 6— 8 | — |
| [illegible] | 7— 8 | 8— 0 |
| [illegible] | 2— 8 | 3— 0 |
| [illegible] | 2[illegible]— [illegible] | — |
| [illegible] | 20[illegible] [illegible] | - |
| [illegible] | 27— 0 | — |
| [illegible] | 3—12 | — |
| [illegible] | 42— 8 | 4 — 0 |
| [illegible] | 14— 8 | 14—10 |
| [illegible] | 20— 0 | 21— 0 |
| [illegible] | 12— 4 | 12— 8 |
| [illegible] | 13— 9 | 13— 0 |
| [illegible] | 13—9—0 | — |
| [illegible] | [illegible]— 8 | 43—10 |
| [illegible] | 330— | — |
| [illegible] | 100— | 124— |
| [illegible] | 60[illegible] | 85— |


# Chikmagalur Public Conveyance Motor Service

CHIKMAGALUR.

# ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ- ಕನ್ವೆಯನ್ಸ್ — Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಒಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡಿಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ [illegible] ಹೊರಟು ಗುರುವಾಯನಕೆರೆ ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಬಂಟ್ವಾಳ [illegible], ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ

(2) ಕಡೂರಿನಿಂದ ಬೆಳಿಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಿಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ [illegible]ಗಳಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು [illegible] ಮೋಟಾರ ಸ್ಟೇಶನ್ [illegible] 1 30ಕ್ಕೂ ಬೆಳ್ತಂಗಡಿಗೆ 1 45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟ್ರಾಮಿನಲ್ಲಿ ಸಿದ್ಧವಾಗಿರುವ [illegible] ಮೇಲ್ [illegible], ಮಲಬಾರು ಕನ್ನಡನ್ನೂರು ಪ್ರಾಂತಗಳಿಗೂ ಅಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ [illegible] ಗಂಟೆಗೆ [illegible] ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10 30ಕ್ಕೆ ಬೆಳ್ತಂಗಡಿಗೂ 11 ಗಂಟೆಗೆ ಧರ್ಮಸ್ಥಳದ ರೋಡಾದ [illegible] ಸ್ಟೇಷನಿಗೂ 12 ಗಂಟೆಗೆ ಚಾರ್ಮಾಡಿಗೂ 1 30ಕ್ಕೆ [illegible] ಗಡಿಗೂ, ಸೇರಿ [illegible] ಒಡನೆ ಹೊರಟು [illegible] 30ಕ್ಕೆ [illegible], ಸುಮಾರು 4 ಗಂಟೆಗೆ ಮೂಡಿಗೆರೆಗೂ [illegible] ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿದ್ದಿರುತ್ತದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7 30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ [illegible], ಪಂಡರಪುರ [illegible] ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ [illegible] ಬೆಂಗಳೂರು ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು

ಬಿ ಎಸ್ ಹನುಮಂತಪ್ಪ, ಷ್ಯಾರಖಾನ್ ಸೊರಾಬ್, ಕೆ ಸೂರಪ್ಪ ಶೆಟ್ಟಿ

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ ಪಿ ಸಿ ಕಂಪೆನಿಯವರ
ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು

# THE CANARA PUBLIC CONVEYANCE CO., LTD, MANGALORE.

(ESTABLISHED 1914)

# ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

## ಮಂಗಳೂರು.

### ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು ಮತ್ತು ಉತ್ತರ [illegible] ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬೇಕೆನ್ನುವಿರಾದರೆ ಪ್ರತಿದಿನವೂ [illegible] ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ [illegible] ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೊಮ್ಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು
'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ
ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೆ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ ಶಿಮೊಗ್ಗ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು,

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು

**Secretary,**
The Canara Public Conveyance Co., Ltd., Mangalore.

## ವಿವಿಧ ಸಮಾಚಾರಗಳು.

### ಚಕ್ರಗೋಷ್ಠಿಯಲ್ಲಿ ಹಲವು ಡೆಲಿಗೇಟರು ಮಾತಾಡಿದರು.

ಲಂಡನ್ ಕಾನ್ಫರೆನ್ಸಿನ ಕಾರ್ಯಕ್ರಮಗಳನ್ನು ನೆರವೇರಿಸುವದಕ್ಕಾಗಿ "ಕಾರ್ಯ ನಿರ್ವಾಹಕ ಕಮಿಟಿ" ಎಂಬ ಪ್ರತ್ಯೇಕ ಸಂಸ್ಥೆಯೊಂದನ್ನು ನಿರ್ಮಿಸಿರುವರು. ಈ ಸಮಿತಿಗೆ ಸೇರಿದ ಸದಸ್ಯರು ನಿರ್ಧರಿಸಿದಂತೆ "ಫೆಡರಲ್" ಸರಕಾರದ ನಿರ್ಮಾಣಗಳು ಇಂಡಿಯದಲ್ಲಿ ಅದಷ್ಟು ಬೇಗನೇ ಮುಂದೆ ತರಬೇಕೆಂಬ ಮಸೂದೆಗಳು ಪಾಸಾಗತಕ್ಕವುಗಳು. ಅನೇಕ ಬ್ರಿಟಿಷ್ ಪ್ರಭುಗಳು ಈ ವಿಷಯದಲ್ಲಿ ತಮ್ಮ ಸಹಾನುಭೂತಿಯನ್ನು ತೋರಿಸುತ್ತಿದ್ದರು. ಸ್ಯಾಮುಯೆಲ್ ವರದಿಯನ್ನು ಇರ್ವಿನ್ ಪ್ರಭುಗಳ ರಿಕಾರ್ಡುಗಳಿಗೆ ಅನೇಕ ಬ್ರಿಟಿಷರೇ ಮನ್ನಣೆ ನೀಯಲಿಲ್ಲವೆಂದು ತಿಳಿದುಬರುತ್ತದೆ.

ಕಾನ್ಫರೆನ್ಸಿನ ಮುಖ್ಯ ಉದ್ದೇಶವೆಂದರೆ - ಇಂಡಿಯದ ನಿಜಸ್ಥಿತಿಗಳನ್ನು ಪರ್ಯಾಲೋಚಿಸುವದು, ಭಾರತೀಯ ಪ್ರಕೃತದ ಇತಿಹಾಸವನ್ನೇ ಮಾರ್ಪಡಿಸಿ ಹೊಸದೊಂದು ಸರಕಾರವನ್ನು ನೆಲೆನಿಲ್ಲುವಂತೆ ಮಾಡುವದು, ಈ ಕುರಿತು ಮಾಡಬಹುದಾದ ನಿರ್ಧಾರಗಳ ಪರಿಣಾಮವನ್ನು ಹಂಬಲಿಸುವವರನೇಕರು. ಅಂತಹವರ ಆಶೆಗಳು ನಿರಾಶೆಯಾಗವೆಂದೇ ಪತ್ರಿಕಾ ಪ್ರಬಾಂಶದ ಅಭಿಮತ. ಕಾನ್ಫರೆನ್ಸಿಗೆ ಸೇರಿದ ಡೆಲಿಗೇಟರಿಗೆ ಹಿತವಾಗಲೀ, ಅಹಿತವಾಗಲೀ ಮುಖ್ಯ ಸರಕಾರಕ್ಕೆ ಹೆಚ್ಚಿನ ಅಧಿಕಾರ ಜವಾಬ್ದಾರಿಕೆಗಳನ್ನು ಕೊಡುವದರ ಕುರಿತು ಚರ್ಚೆ ಗಳೇನೋ ನಡೆಯುತ್ತಿರುವವು. ಆದರೆ - ಎಷ್ಟು ಜವಾಬ್ದಾರಿಕೆ ಅಥವಾ ಅಧಿಕಾರ - ಎಂಬ ಪ್ರಶ್ನೆ ಮಾತ್ರ ಚರ್ಚಿಸಲಿಕ್ಕಿರುವದು. ಹಾಗೂ ಮುಖ್ಯ ಸರಕಾರಕ್ಕೆ ಹೆಚ್ಚಿನ ಜವಾಬ್ದಾರಿಕೆಗಳನ್ನು ಕೊಡಬಹುದೆಂಬ ವಿಷಯದಲ್ಲಿ ಬ್ರಿಟಿಷರೂ ಕೂಡ ಇಂಡಿಯನರ ಮೇಲೆ ಕರುಣೆ ತೋರಿಸುತ್ತಿರುವರೆಂದು ತಿಳಿದುಬರುತ್ತದೆ. ಕನ್‌ಸರ್ವೇಟಿವ್ ಪಕ್ಷದವರೂ ಇಂಡಿಯನ್ ಪ್ರಶ್ನೆಯನ್ನು ಬಹುಮಾನಪೂರ್ವಕವಾಗಿ ಕಾಣುತ್ತಿರುವರು. ದಿವಾನ ಸಪ್ರು ಜಯಕರರು, ಇಂಡಿಯವನ್ನು ತಮ್ಮ ಆನಂದಕರ ಭಾಷಣಗಳಿಂದ ಸ್ಥಿತಿಗತಿಗಳು ಮುಂದಟ್ಟಾಗುವಂತೆ ವರ್ಣಿಸಿರುವರು. ಇದುವರೆಗೂ ನಡೆದ ಕಾನ್ಫರೆನ್ಸು ಕಾರ್ಯಕ್ರಮಗಳಿಂದ ತಿಳಿದುಬರುವಂತೆ, ಇಂಡಿಯದ ಮುಖ್ಯ ಸರಕಾರವು ಕೆಲಮಟ್ಟಿನ ಜವಾಬ್ದಾರಿಕೆಗಳನ್ನು ಹೊಂದಲಿಕ್ಕಿರುವದೆಂದು ತಿಳಿದು ಬರುತ್ತದೆ. ಕೂಡಲೆ ಡೊಮಿನಿಯನ್ ಸ್ಟೇಟಸ್ಸನ್ನು ಕೊಡಬೇಕೆಂಬ ಭಾರತೀಯರ ಪ್ರಶ್ನೆ ಮಾತ್ರ ಮುನ್ನಾ ಮಾಡಲ್ಪಟ್ಟಿರುವದು.

ಮಿ॥ ಪಿ ಡಬ್ಲ್ಯು ವಿಲ್ಸನ್ನರು ಬರೆಯುತ್ತಾರೆ — 'ರೌಂಡ್ ಟೇಬಲ್ ಕಾನ್ಫರೆನ್ಸಿನಿಂದ ನಿರ್ಮಿತ ಕಾರ್ಯನಿರ್ವಾಹಕ ಸಭಾಸದಸ್ಯರು ಭಾರತೀಯರ ಪ್ರಶ್ನೆಗೆ ಸರಿಯಾದ ಉತ್ತರವೀಯದಿದ್ದರೆ, ಕಾಂಗ್ರೆಸ್ಸಿನವರು ಮಾಡುವ ಒಪ್ಪಂದ ಪತ್ರಕ್ಕೆ ಬ್ರಿಟಿಷ ಪ್ರಭುತ್ವವು ಸಹಿಮಾಡದಿದ್ದರೆ ಭಾರತೀಯರು ಕಾನ್ಫರೆನ್ಸಿನಿಂದ ಹೊರಹೊರಡುವದೇ ಲೇಸಂತೆ.' ಆದರೆ ಬಿಸಿನೆಸ್ ಕಮಿಟಿಯು ಮಿ॥ ವಿಲ್ಸನ್ನರ ಸೂಚನೆಯಂತೆ ವರ್ತಿಸಲಿಲ್ಲವೆಂದು ಹಲವರು ವಾದವಿವಾದಗಳನ್ನು ನಡೆಸುತ್ತಿರುವರು. ಅನೇಕ ತಿದ್ದುಪಡಿಗಳು ಬಿಸಿನೆಸ್ ಕಮಿಟಿಯ ಅವಗಾಹನೆಗಾಗಿ ಕಳುಹಲ್ಪಟ್ಟಿರುವವು. ಮಿ॥ ಜಿನ್ನರೂ ಕೂಡ ಮೇಲೆ ಹೇಳಿದ ಬದಲಾವಣೆಗಳನ್ನು ಪರ್ಯಾಲೋಚಿಸಿ ಉತ್ತರ ಕೊಡುವರಂತೆ. ಮಾನ್ಯ ಸಪ್ರು ಜಯಕರರಿಗೂ ಮಹಮ್ಮದಿ ಡೆಲಿಗೇಟರಿಗೂ ಇದ್ದ ವಿವಾದಾಂಶವು ಕ್ರಮೇಣ ಐಕ್ಯಭಾವವನ್ನು ಹೊಂದಲಿಕ್ಕಿರುವದು. ಆದರೆ ಮಿ॥ ಜಿನ್ನರಿಗೆ, ತಾವು ಮುಂದೆ ತಂದ ೧೪ ಕಲಮುಗಳ ಯೋಗ್ಯ ಉತ್ತರವು ಇನ್ನೂ ದೊರೆಯಲಿಲ್ಲವಂತೆ.

ಇತ್ತೀಚೆಗೆ ಇಂಡಿಯದ ಸತ್ಯಾಗ್ರಹ ಮುಖಂಡರಾದ ಮಿ॥ ಪೆಲ್ಲರ ಮತ್ತು ನಾರಾಯಣಜೀ ಎಂಬವರು ಈ ತ ವರ್ಷದಲ್ಲಿ ನಡೆಯುತ್ತಿರುವ ಪೋಲೀಸ ಅತ್ಯಾಚಾರಗಳನ್ನು ತಂತಿ ಮುಖೇನ ಚಕ್ರಗೋಷ್ಠಿಯ ಅವಗಾಹನೆಗಾಗಿ ತಿಳಿಸಿರುವರಷ್ಟೆ. ಈ ಕುರಿತು ಇಂಡಿಯದಲ್ಲಿ ಪ್ರಬಲಿಸಲ್ಪಟ್ಟ ಸರಕಾರಿ ಶಾಸನಗಳನ್ನು ಹಿಂದೆಗೆಯಬೇಕೆಂಬ ಮಸೂದೆಗಳೂ ಚಕ್ರಗೋಷ್ಠಿಯಲ್ಲಿ ಮುಂದೆ ತರಲ್ಪಟ್ಟವು.

ಪಾಟಿಯಾಲಾ ಮಹಾರಾಜರು, ಮಾನ್ಯ ಸಪ್ರೂರವರು ಹೇಳಿದಂತೆ ಹಿಂದೀ ರಾಜರ ಪರವಾಗಿ ಹೇಳಿದ್ದೇನೆಂದರೆ — ನಾವು ಭರತಖಂಡದ ರಾಜಮಹಾರಾಜರೆಂದೆನಿಸುವದು ಮಾತ್ರ, ಪ್ರಥಮತಃ ನಾವು ಇಂಡಿಯನರೇ ಆಗಿರುವೆವೆಂದು ತಿಳಿಯುವದೇ ನಮ್ಮ ಕರ್ತವ್ಯವಾಗಿರುವದ.'

ಡಾ॥ ಮುಂಜೆಯವರು — "ಇಂಡಿಯವನ್ನು ಸರಕಾರದ ಬಲತ್ಕಾರದಿಂದ ಎಂದೂ ಬಗ್ಗುಬಡಿಸಲಸಾಧ್ಯವು" ಎಂದರು. ಮಾತ್ರವಲ್ಲದೆ ಇವರು ತನ್ನ ಭಾಷಣದಲ್ಲಿ 'ಹಿಂದುಗಳೆಂದರೆ ಇಂಡಿಯವೇ ಆಗಿರುತ್ತದೆ' ಎಂಬ ಭಾವನೆಯನ್ನು ಸಭಿಕರಿಗೆ ಮಂದಟ್ಟಾಗುವಂತೆ ವಿವರಿಸಿದರು. ಡಾ॥ ಮುಂಜೆಯವರು ಹೇಳಿದಂತೆ ಬ್ರಿಟಿಷ ಸಾಮ್ರಾಜ್ಯದೊಳಗೆ ಇಂಡಿಯವು ಇನ್ನೊಂದು ಸ್ವತಂತ್ರ ಪ್ರಾಂತ್ಯವಾಗಿ (Dominion) ಪರಿವರ್ತನೆ ಹೊಂದಲಿಕ್ಕಿರುವದೆಂದು ತಿಳಿದು ಬರುತ್ತದೆ. ಹೀಗೆಂದರೆ ಇಂಡಿಯವು ಸ್ವಾತಂತ್ರ್ಯ ಸಾಮ್ರಾಜ್ಯವನ್ನು ಪಡೆಯುವದರಲ್ಲಿ ಯಶಸ್ವಿಯಾಗಲಿಕ್ಕೇ ಬೇಕೆಂದು ಮುಂಜೆಯವರ ವಾದ. ಕೆನಡಾ ದೇಶದ ವ್ಯಕ್ತಿಯಂತೆ ಡಾ॥ ಮುಂಜೆಯವರೂ ಕೂಡ ತನ್ನ ದೇಶವಾದ ಭರತಖಂಡದಲ್ಲಿ ಸ್ವತಂತ್ರತೆಯನ್ನು ಕಾಪಾಡಿಕೊಳ್ಳಬೇಕೆಂದು ಮಹತ್ಪ್ರಯತ್ನಗಳನ್ನು ಮಾಡಿರುವರು. ಇಂಡಿಯದ ಹಕ್ಕುಬಾಧ್ಯತೆಗಳನ್ನು ಇಂಡಿಯನರೇ ಕಾದಿರತಕ್ಕದ್ದು, ಆ ಭಾರವು ಬ್ರಿಟಿಷರಿಗೆಂದಿಗೂ ಬಿಟ್ಟುಕೊಡಲಾಗದು, ಎಂದು ಮೊದಲಾಗಿ ವಿವಾದಗಳನ್ನು ಮಾಡಿದರು.

ಮಿ॥ ಮಹಮ್ಮದಾಲಿಯವರು, ತನ್ನ ಭಾಷಣದಲ್ಲಿ, ಜೋರ್ಜ ಚಕ್ರವರ್ತಿಯವರನ್ನು ಅಭಿಮಾನಪೂರ್ವಕವಾದ ಉಪಚಾರದ ಮಾತುಗಳಿಂದ ಸನ್ಮಾನಿಸಿದರು. ಹಾಗೂ, ಅವರು ಹೇಳುವಂತೆ, ಜೋರ್ಜ ಚಕ್ರವರ್ತಿಯವರಿಗೆ ಗೊತ್ತಿರುವಷ್ಟು ಇಂಡಿಯದ ನಿಜಸ್ಥಿತಿಗಳು, ಬೇರೆ ಯಾರಿಗೂ ತಿಳಿಯಲಾರದೆಂದು ಊಹಿಸಲಾಗುತ್ತದೆ. ಮಹಮ್ಮದಾಲಿಯವರು 'ಗುಲಾಮರ ರಾಜ್ಯ'ವಾದ ಇಂಡಿಯಕ್ಕೆ ಎಂದಿಗೂ ಹಿಂದಿರುಗಲಾರೆನೆಂದೂ ಹೇಳಿದರು. ಅವರು ಗುಲಾಮಗಿರಿ ರಾಜ್ಯಕ್ಕೆ ಬರುವಾಗ ಸ್ವಾತಂತ್ರ್ಯದ ತಿರುಳನ್ನು ತಂದೇ ತರುವರಂತೆ. ಯಾವ ರೀತಿಯಲ್ಲಿಯೂ, ಮಹಮ್ಮದಾಲಿಯವರ ಆಶೆಗಳು ಕೈಗೂಡದಿದ್ದಲ್ಲಿ, ಅವರಿಗೊಂದು ಗೋರಿಯನ್ನಾದರೂ ಇಂಗ್ಲಾಂಡದಲ್ಲೇ ಕಟ್ಟಿಸುವಂತೆ ಬೇಡಿಕೊಂಡಿರುವರು. ಮಹಮ್ಮದಾಲಿಯವರು ಹೇಳಿದರು - ಇಂಡಿಯದ ವಿದ್ಯಾರ್ಥಿಗಳಿಗೆ ತಪ್ಪಾದ ಚರಿತ್ರೆಗಳನ್ನು (History) ವಿದ್ಯಾಲಯಗಳಲ್ಲಿ ಎಳೆಪ್ರಾಯದಿಂದಲೂ ಕಲಿಸುವದರಿಂದ, ಚರಿತ್ರೆಯಲ್ಲಿ ಹೇಳಲ್ಪಟ್ಟ ಸುಳ್ಳನ್ನು ಕಲಿಯುತ್ತಾರಲ್ಲದೆ ಅನೇಕ ಅಂತಃಕಲಹಗಳಿಗೂ ಎಡೆದೊರೆಯುವ ಸಂಭವವಿರುವದು — ಎಂದು ಕೊನೆಗೆ ಮಹಮ್ಮದಾಲಿಯವರು ತನ್ನ ಮನೋಭಾವವನ್ನು ಮರೆಮಾಜದೆ ಇಂಡಿಯದ ಅವ್ಯವಸ್ಥೆಯ ಚಿತ್ರಪಟವನ್ನು ಕಾನ್‌ಫರೆನ್ಸಿನಲ್ಲಿ ಪ್ರದರ್ಶಿಸಿದರು. ಅವರು ಇನ್ನೊಮ್ಮೆ ಭಾಷಣಕೊಡುವದರ ಮೊದಲು, ಚೆಯರ್‌ಮೇನರ ಬಾಯಿಯಿಂದ ನಾನು ಇಂಡಿಯಕ್ಕೆ ಸ್ವಾತಂತ್ರ್ಯವನ್ನು ಕೊಟ್ಟೆನು ಎಂದು ಹೊರಡುವ ಮಾತುಗಳನ್ನು ಅವರು ಕಿವಿಯಾರೆ ಕೇಳಬೇಕಂತೆ. ಅದುವರೆಗೂ, ಮಹಮ್ಮದಾಲಿಯವರನ್ನು ಭಾಷಣಕೊಡಬೇಕೆಂದು ಯಾರೂ ಆಮಂತ್ರಿಸಬಾರದಂತೆ. ಅಕ್ಟೋಬರ ಮಟ್ಟಿಗೆ ಲಂಡನಿನಲ್ಲಿ ಮಹಮ್ಮದಾಲಿಯವರು ಇಂಡಿಯದ ಅವ್ಯವಸ್ಥೆಗಳನ್ನು ವಿವರಿಸಿದರು.

ಮಿ॥ ಶೌಕತರು ಕಾನ್‌ಫರೆನ್ಸಿನಲ್ಲಿ, ಕ್ರೈಸ್ತರ ಪರವಾಗಿ ಭಾಷಣವಿತ್ತರು. ಅಲ್ಲದೆ ಕ್ರೈಸ್ತರು ಸತ್ಯಾಗ್ರಹ ಚಳವಳಿಗೆ ತಮ್ಮ ಪೂರ್ಣ ಸಹಾಯವನ್ನು ದಯಪಾಲಿಸುವರೆಂದೂ ಹೇಳಿದರು. ಇಂಡಿಯದ ಅವ್ಯವಸ್ಥೆಯ ಚಲಚಿತ್ರವನ್ನು ಕಾನ್‌ಫರೆನ್ಸ್ ಥಿಯೇಟರಿನಲ್ಲಿ ಪ್ರದರ್ಶಿಸಿದರು. ಬಾರ್ತಪೀರ ಮಹಿಳೆಯರು, ಸತ್ಯಾಗ್ರಹ ರಣರಂಗದಲ್ಲಿ ಅದೆಷ್ಟು ಧೈರ್ಯದಿಂದ ಟೊಂಕಕಟ್ಟಿ ಮುಂದೆ ಬಂದು ದೇಶದ ಸ್ವಾತಂತ್ರ್ಯವನ್ನು ಕಾಪಾಡುತ್ತಿರುವರೆಂಬುದನ್ನೂ ಸ್ಪಷ್ಟೀಕರಿಸಿದರು.

ಮಹಮ್ಮದೀ ಪ್ರತಿನಿಧಿಯಾದ ಬೇಗಮ್ ಶಹಾನವಾಜರು ಇಂಡಿಯದ ಸ್ತ್ರೀಸಮಾಜಕ್ಕೆ, ಹೆಚ್ಚಿನ ರಾಜಕಾರ್ಯಗಳಲ್ಲಿ ಭಾಗವಹಿಸುವ ಹಕ್ಕು ಸ್ವಾತಂತ್ರ್ಯವನ್ನು ಕೊಡಿಸುವಂತೆ ಅಪೇಕ್ಷಿಸಿದ್ದರು.

ಮಿ॥ ಜಿನ್ನರು ಹೇಳಿದ ಸ್ಯಾಮುಯೆಲ್ ರಿಪೋರ್ಟು ಸತ್ತುಹೋಯಿತು. ಇರ್ವಿನರ ಇಂಡಿಯಾ ಡಿಸ್ಪೇಚಿನ ಸಂಬರವು ಅಡಗಿಬಿತ್ತು. ಪ್ರಕೃತ 'ಆಲ್ ಇಂಡಿಯಾ ಡೊಮಿನಿಯನ' (ಅಖಿಲಭಾರತ ರಾಷ್ಟ್ರ) ಮಾತ್ರವೇ ನಮಗೆ ಬೇಕಾದುದು. ಇಂಡಿಯವು ಬಲ್ಲೋಚಿಸಿದಂತೆ ಅವಳ ಮನೆಯಲ್ಲಿ, ಅವಳು ರಾಣಿಯಾಗಿರುವದೇನೋ ನಿಜವು. ಇದಕ್ಕಾಗಿಯೇ ಇಂಡಿಯನರು ಹೋರಾಡುತ್ತಿರುವರು ಎಂದು ಮೊದಲಾಗಿ ವಿಶದಪಡಿಸಿದರು.

ಮಿ॥ ಪೀಲರ ಭಾಷಣದಂತೆ — ಇಂಡಿಯಕ್ಕೆ ಬೇಕಾದಷ್ಟು ಹೊಗಳಿಕೆ ದೊರೆಯಿತು, ಇಂಡಿಯದ ಪ್ರಶ್ನೆ ಮಾತ್ರ ಆಲೋಚನೆಯಲ್ಲೇ ಬಿದ್ದಿರುವದು. ಯೋಗ್ಯ ಉತ್ತರವು ಇನ್ನೂ ಹೊಳೆಯಲಿಲ್ಲ. ಆದರೆ ಇವರ ಅಭಿಮತದಂತೆ ಇಂಡಿಯಾ ಸರಕಾರವು ಈಗ ನಡೆಸುವ ಕಾರಭಾರವು ಬಹಳ ಯೋಗ್ಯತೆಯುಳ್ಳದ್ದು, ಬಲಹೀನರಾದ ಇಂಡಿಯನರು ಸ್ವಾತಂತ್ರ್ಯಹೊಂದಲಿಕ್ಕೆ ಅರ್ಹರಲ್ಲ. ಅಂತಹವರಿಗೆ ಸ್ವತಂತ್ರತೆಯನ್ನು ಕೊಟ್ಟರೆ ಇಂಗ್ಲಿಷರು ಮೋಸಹೊಂದುವರು. ಆದುದರಿಂದ ಇಂಡಿಯವು ಸ್ವತಂತ್ರತೆಯನ್ನು ಹೊಂದುವಷ್ಟು ಬಲವಂತವಾಗಲಿ. ತರುವಾಯ ಇಂಡಿಯದ ಪ್ರಶ್ನೆಯನ್ನು ಪರ್ಯಾಲೋಚಿಸುವ" ಎಂದು ಮೊದಲಾಗಿ ಸಭಿಕರಿಗೆ ಬುದ್ಧಿ ಹೇಳುವಂತೆ ಭಾಷಣವಿತ್ತರು.

ಡಾ॥ ಅಂಬೇಡ್ಕಾರರು ಅಸ್ಪೃಶ್ಯರ ಸ್ಥಿತಿಯು ಎಷ್ಟರ ಅವನತಿಯನ್ನು ಪಡೆದಿರುವುದೆಂದು ವಿವರಿಸಿದರು. ಅವರ ಉದ್ಧಾರಕ್ಕಾಗಿ ಏರ್ಪಾಡುಗಳು ಆಗಲಿಕ್ಕೇಬೇಕೆಂದು ಒತ್ತಿಹೇಳಿದರು. ಹಾಗೂ ಚಕ್ರಗೋಷ್ಠಿಯ ಕಾರ್ಯಕಲಾಪವು ನಡೆಯುತ್ತಲೇ ಇದೆ.

### ಮೆಕ್ಡೊನಾಲ್ಡರು ಚಕ್ರಗೋಷ್ಠಿಯಲ್ಲಿ

ಕಾನ್‌ಫರೆನ್ಸಿನಲ್ಲಿ ಇಂಡಿಯನ್ ಡೆಲಿಗೇಟರಿಗೆ ಮೆಕ್ಡೊನಾಲ್ಡರು ಬೇಕಾದ ಮರ್ಯಾದೆಯನ್ನಿತ್ತರು. ಇಂಡಿಯನರ ಮೇಲಿರುವ ಅವರ ಕರುಣೆಯು ಅಸದೃಶವಾಗಿರುವದು. ಇಂಡಿಯಾ ಪ್ರತಿನಿಧಿಗಳನ್ನು ಸ್ನೇಹಿತರೆಂದು ಸಂಬೋಧಿಸಿದರು. ಇಂಡಿಯಾ ಸರಕಾರ ಬದಲಾವಣೆಯಾಗಲು ಒಂದು ಮೈಲು ದಾರಿ ಮಾತ್ರ ಉಳಿದಿರುವದೆಂದರು. ಈ ಒಂದು ಮೈಲು ದಾರಿ ನಡೆಯಲು ಎಷ್ಟು ಕಾಲವಾಗುವದೆಂಬ ಪ್ರಶ್ನೆಗೆ ಮಾತ್ರ ಉತ್ತರವೀಯಲಿಲ್ಲ. ಇಂಡಿಯನ್ ಡೆಲಿಗೇಟರು ಮಾಡಿದ ಅನೇಕ ಸ್ಫೂರ್ತಿದಾಯಕ ಭಾಷಣಗಳನ್ನು ಕೇಳಿ ಮೆಕ್ಡೊನಾಲ್ಡರು ಇಂಡಿಯದ ಪರಿಸ್ಥಿತಿಯನ್ನು ಚೆನ್ನಾಗಿ ಮನಗಂಡರು. 'ನಾವೆಲ್ಲರೂ ಕಾರ್ಯಸಿದ್ಧಿಗಾಗಿ ಇಲ್ಲಿ ಬಂದು ನೆರೆದಿರುವೆವು' ಎಂಬ ಆಶಾವಾಕ್ಯವೂ, ಮಿ॥ ಮೆಕ್ಡೊನಾಲ್ಡರಿಂದ ಹೊರಟಿತು. ಒಂಟಿದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ ಎಂಬಂತೆ, ಮಿ॥ ಮೆಕ್ಡೊನಾಲ್ಡರು, ಕಳೆದುಹೋದ ಎಲ್ಲಾ ರಾಜಕೀಯ ಬದಲಾವಣೆಗಳನ್ನು ಬದಿಗಿಟ್ಟು ಹೊಸದೊಂದು ರಾಜ್ಯಾಂಗವನ್ನು ಇಂಡಿಯದಲ್ಲಿ ನಿರ್ಮಿಸಬೇಕೆಂಬ ಮನಸ್ಸುಳ್ಳವರಾಗಿ ಇವರೆಂದು ತಿಳಿದುಬರುತ್ತದೆ. ಮಾತ್ರವಲ್ಲದೆ, ಬ್ರಿಟಿಷ ಸರಕಾರದ ಮುಖಾಂತರ ಮಾಡಿಕೊಂಡ ನಿಬಂಧನೆಗಳು ಭಾರತೀಯ ಮನಸ್ಸಿಗೆ ಯೋಗ್ಯ ಗಮನವೀಯಲಾಗುವದೆಂದು ನಂಬಲಾಗುತ್ತದೆ. ಮತ್ತು ಈ ವಿಷಯವನ್ನು ಮುಖ್ಯ ಮಂತ್ರಿಗಳಾದ ಮಿ॥ ಮೆಕ್ಡೊನಾಲ್ಡರು ತನ್ನ ಭಾಷಣದಲ್ಲಿ ಮಂಡಿಸಿಟ್ಟಿರುವರೆಂದೂ ತಿಳಿಯಲಾಗುತ್ತದೆ. ಮಿ॥ ಮೆಕ್ಡೊನಾಲ್ಡರು ವಿವರಿಸುವಂತೆ, ಇಂಪೀರಿಯಲ್ ಕಾನ್‌ಫರೆನ್ಸಿನಲ್ಲಿ ಉಂಟಾದ ತೊಂದರೆಗಳೇ, ರೌಂಡ್‌ಟೇಬಲಿನಲ್ಲಿಯೂ ಉಂಟಾಗಿರುವವು. 1926ನೇ ವರ್ಷದಲ್ಲಿ ಇಂಪೀರಿಯಲ್ ಕಾನ್‌ಫರೆನ್ಸಿನ ಸದಸ್ಯರು ಒಂದು ಒಪ್ಪಂದ (Declaration) ಮಾಡಿದರು; 1930ರಲ್ಲಿ Declaration ಮುರಿಯಿತು. ಹಾಗೂ ಮಿ॥ ಮೆಕ್ಡೊನಾಲ್ಡರಿಗೆ ಇಂಡಿಯದ ಮೇಲೆ ತುಂಬಾ ದಯೆಯಿರುವದೆಂದು ತಿಳಿದುಬರುತ್ತದೆ.

---

## Notice.

**In the Court of the District Judge of South Kanara.**

O. P. No 94/1930.

In the matter of the debts of Naramachari deceased

Baskara – minor, by his guardian and mother Kamalamma – Petitioner.

Notice is hereby given that application has been made to the above court for a grant of a Certificate to the Petitioner represented by his guardian and mother the said Kamalamma empowering him to collect the debts of his father Specified in the Schedule to the above petition – and that the 2nd day of December 1930 has been appointed for the hearing of the said application

Mangalore 26 – 11 – 1930 | P. D'Souza, B.A., B.L. VAKIL FOR PETITIONER

---

## The Canara Bank Ltd, Mangalore.

## ದಿ ಕೆನರಾ ಬ್ಯಾಂಕ್ ಲಿಮಿಟೆಡ್ ಮಂಗಳೂರು.

### NOTICE

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಆಭರಣಗಳ ಆಧಾರದ ಮೇಲೆ ಪಡೆದ ಮೊಬಲಗು ವ್ಯಾದಗೆ ಕೊಡದೆ ಇದ್ದುದರಿಂದ 1ನೇಯವರಿಗೆ ಬಿಟ್ಟ ನೋಟೀಸು ವಾಪಾಸು ಬಂದುದರಿಂದ 2ನೇಯವರು ಕಾಣಸಿಕ್ಕದೆ ಇದ್ದುದರಿಂದ ಸಹ ಸದರೀ ಆಭರಣಗಳನ್ನು ಇದೇ ತಾ 6–12–30ರ ವಳಗೆ ಬೇಂಕಿಗೆ ಸಲ್ಲತಕ್ಕ ಅಸಲು ಬಡ್ಡಿ ಖರ್ಚು ಕಟ್ಟಿ ನಗಗಳನ್ನು ಬಿಡಿಸಿ ಕೊಂಡುಹೋಗದಿದ್ದರೆ ಅವುಗಳನ್ನು ತಾರೀಕು 16–12–30ನೇ ಮಂಗಳವಾರ ಮಧ್ಯಾಹ್ನ ಘಂಟೆ 12ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಲಿಲಾಂ ಮಾಡೋಣಾಗುವದು

1 ಸಾಲಪಡೆದವನ ಹೆಸರು ಕನ್ನಿಯರು ಗ್ರಾಮದ ಮುಗ್ರೋಡಿ ತಿಮ್ಮಪ್ಪ ಶೆಟ್ಟಿಯವರ ಅಳಿಯ ತಿಮ್ಮಪ್ಪ ಶೆಟ್ಟಿ, ಅಡವಿಟ್ಟ ತಾರೀಕು 23–11–29, ಸಾಲದ ಮೊಬಲಗು – [illegible], ಲಿಲಾಂ ತಾರೀಕು ವರೆಗೆ ಬಡ್ಡಿ ವಗೈರೆ – [illegible]

2 ಸಾಲಪಡೆದವನ ಹೆಸರು ಸೋಮೇಶ್ವರ ಗ್ರಾಮದ ಉಚ್ಚಿಲ ರಿ. ಜ್ವೆ ಬ್ಯಾರಿಯವರ ಮಗ ಇಬ್ರಾಹಿಂ ಬ್ಯಾರಿ, ಅಡವಿಟ್ಟ ತಾರೀಕು 4–8–28 ಸಾಲದ ಮೊಬಲಗು [illegible] ಲಿಲಾಂ ತಾರೀಕು ವರೆಗೆ ಬಡ್ಡಿ ವಗೈರೆ – [illegible]

ಈ ನೋಟೀಸಿನ ಖರ್ಚು ಅಲ್ಲಾದಾ ಕೊಡತಕ್ಕದ್ದು

The Canara Bank Ltd Mangalore 25–11–30 | K. Venkat Rao Secretary

---

## ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ಼ ಕೋರ್ಟನಲ್ಲಿ.

O. P No 08 1930.

(1) ಮುತ್ತಕ್ಕ ಸೆಟ್ಟಿ, (2) ಸುಬ್ಬಣ್ಣ ಸೆಟ್ಟಿ, (3) ಅನಂತ ಸೆಟ್ಟಿ, ಮರಿಯಮ್ಮ ಸೆಟ್ಟಿ ಮಕ್ಕಳು, ಉಡ್ಪಿ ತಾಲೂಕು ಹಾರಾಡಿ ಗ್ರಾಮ —ಅರ್ಜಿದಾರರು

ಅರ್ಜಿದಾರರ ಸಹೋದರ ಕೃಷ್ಣಯ ಸೆಟ್ಟಿಯು ದಿ ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟಡ್ ಅಜ್ಮೀರ್ ಎಂಬ ಕಂಪೆನಿಯಲ್ಲಿ ರೂಪಾಯಿ 1000/ರ ಇನ್ಸೂರಿಗ ಸೇರಿ ನಂಬ್ರ 21210ನೆಗೆ ತಾರೀಕು 16–3–29ರಲ್ಲು ಪೋಲಿಸಿ ಪಡೆದು ಈಗ ಆತ ಮೃತಪಟ್ಟಿರುವದರಿಂದ ಸದರಿ ಇನ್ಶೂರ್ ಐವಜು ವಸೂಲುಮಾಡುವರೇ ತಮ್ಮೆಲ್ಲರ ಬಗ್ಗೆ 1ನೇ ಅರ್ಜಿದಾರಳ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲುಮಾಡಿದ ಮೇಲಿನ ಅರ್ಜಿಯು ಮೇಲ್ಕಂಡ ಕೋರ್ಟನಲ್ಲಿ ತಾ 19–12–30ರಲ್ಲು ತನಿಖೆಗೆ ಇಟ್ಟಿರುವದರಿಂದ ಆಕ್ಷೇಪವುಳ್ಳವರು ಅರ್ಜಿ ತನಿಖೆ ಸಮಯ ಜಾಹೀರುಮಾಡಿಕೊಳ್ಳತಕ್ಕದ್ದು

ಉಡ್ಪಿ ತಾ. 22.11.30 | ಕೆ. ಜಿ. ಬಲ್ಲಾಳ್, ಅರ್ಜಿದಾರರ ಕಡೆ ವಕೀಲ್.

## ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ಕಾಂಬಿಸಲದೊದನೆಯಾಗಲಿ, ಹಸಿಗೇಯೊಗಲಿ ಉಪಯೋಗಿಸು ತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡು ತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತ, ಜ್ವರ, ಪಕ್ಷವಾತ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

### ವೈಶ್ವಾನರಾಸವ.

( ಕಾಲರಾ, ವಾಂತಿಭೇದಿಗೆ ಸಿದ್ಧೌಷಧ. )

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗ ವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0

### ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿ ರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿವಾತಜ್ವರಗಳಿಗೂ ಅಮೃತವಾಗಿರುತ್ತದೆ.

ಸೀಸೆ 1ಕ್ಕೆ ರೂ. 1—0—0.

### ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಕಂದುಗಳಿಗೂ, ಗಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ. 0—8—0

"ಭಿಷಕ್‍ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಲೋಕಾಂಬಿಕಾ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ | ಏಜಂಟರು —
ಹೆಡ್ ಆಫೀಸ್ ಲೋಕಾಂಬಿಕಾ ವೈದ್ಯಶಾಲಾ, ಮೈಸೂರು | ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಡೋಲಾ ಫಾರ್ಮಸಿ ಮಂಗಳೂರು ಟವರ್ ಹತ್ತಿ



## ಒಂದೇ ತಾಸಿನಲ್ಲಿ

ನವ ಯೌವನವು ಪಡೆಯಬೇಕೆನ್ನುಳ್ಳ ಪುರುಷರು

### ರಮಣ ವಿಲಾಸಿನಿ ವಟಿಕಾ

ವನ್ನು ಮಲಗುವುದಕ್ಕೆ ಒಂದು ಘಂಟೆಗೆ ಮುಂಚೆ ಒಂದು ಮಾತ್ರೆಯನ್ನು ಸೇವಿಸಿ ಜೀರ್ಣಕ್ಕೆ ಬರುವಷ್ಟು ಹಾಲು ಕುಡಿದರೆ ಯಥೇಚ್ಛೆಯಾಗಿ ಸ್ತಂಭನವಾಗುವುದು.

16 ಮಾತ್ರೆಗಳುಳ್ಳ ಡಬ್ಬಿ ಕ್ರಯ ರೂ 1—0—0

ಮದನ ಮಂಜರಿ ಫಾರ್ಮಸಿ,
1/94 ಚೀನ ಬಜಾರ್ ಮದರಾಸು



## ಅಕಾಲ ವಾರ್ಧಕ್ಯವೇ?

ಇದು ನಮ್ಮ ಭೂಲೋಕ ಅಮೃತವಾದ

### ಮದನಮಂಜರಿ ಮಾತ್ರೆಗಳು

ಸೇವಿಸುವವರನ್ನು ಬಿಟ್ಟು ಪಲಾಯನ ಮಾಡುವುದು ಯಾಕೆ ಗೋಚಾಡುತ್ತೀರಿ? ಇವನ್ನು ಉಪಯೋಗಿಸಿ ನವ ಯೌವನವನ್ನು ಪಡೆಯಿರಿ 1 ಡಬ್ಬಿ ಕ್ರಯ ರೂ 1—0—0

ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ನಿರೋಗಿಗಳಾಗುವುದಕ್ಕೆ

ಕ್ರಯವು ಇಲ್ಲದೆ ಉಚಿತವಾಗಿ ಕೊಡುವ

### ವೈದ್ಯ ವಿದ್ಯ

ಎಂಬ ಪುಸ್ತಕವನ್ನು ಓದಿ, ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿ

ರಾಜವೈದ್ಯ ನಾರಾಯಣಜಿ ಕೇಶವಜಿ,
1/94 ಚೈನಾ ಬಜಾರು ರೋಡು, ಮದರಾಸು



ತಿಳಿಯದೇ ಧಾತುಕ್ಷಯವಾಗಿ ಕ್ಷೀಣ ಶಕ್ತಿಗಳೂ ಆದ ಮನುಷ್ಯರಿಗೆ ಮಧ್ಯ ತಾರುಣ್ಯದಲ್ಲಿಯೇ ನಿಜವಾಗಿ ಸಂಸಾರ ಸುಖವು ದೊರೆಯದೇ ನಿರುತ್ಸಾಹ ನಿರಾಶೆಗಳು ಹುಟ್ಟುತ್ತವೆ ಇಂಥ ಮನುಷ್ಯರ ಧಾತು ಕ್ಷಯರೋಗವು ಹೋಗಿಸಿ, ಪೂರ್ಣ ಪುರುಷತ್ವವನ್ನು ಕೊಡುವಂತಹದ್ದು.

## ವೈದ್ಯರಾಜ ಶ್ರೀ ಕೇಶವಶಾಸ್ತ್ರೀ ವಿರಜಕರ ಇವರ,

ಶಕ್ತಿ ಶಾಂತಿ ವರ್ಧಕ ಆರೋಗ್ಯ ಕೊಡುವ

# ಅಮೃತ ಸಿಂಧು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಸವಿ ಹಾಗು ತೀವ್ರ ಗುಣಕೊಡುವ ಔಷಧವು ಮಾಡಲಾಗಿದೆ.

ಇದರ ಉಪಯೋಗದಿಂದ ಸಪ್ಪಗಿನ ಚಹರೆ, ದುರ್ಬಲ ಶರೀರ, ನಿರುತ್ಸಾಹ ಮನಸ್ಸು, ಪೌರುಷತ್ವಹೀನ ದೇಹ, ಅಸ್ಥಿರ ಸ್ವಭಾವ, ನಿಸ್ತೇಜತನವನ್ನೂ ಹೇಡಿತನವನ್ನೂ ಅಂಜುಬುರಕತನ, ಅಕಾಲಮುಪ್ಪು, ಸ್ವಪ್ನಾವಸ್ಥೆ, ಧಿಯರ್ದ ನೀರು, ಆಲಸ್ಯ, ಕಣ್ಣು ಕತ್ತಲೆಗಳುರಿಯುವಿಕೆ, ಉರಿಮೂತ್ರ, ಇಂದ್ರಿಯ ... ಪಿತ್ತವಿಕಾರ, ಅಗ್ನಿಮಾಂದ್ಯ, ನಿದ್ರಾನಾಶ, ಮಲಾವರೋಧ, ಬೆನ್ನು ನೋಯು ನೋವು, ಕೊಂಡಕಾಲು, ಎಲ್ಲ ರಕ್ತದ ಮೂತ್ರರೋಗ ಮೊದಲಾದ ಎಲ್ಲ ಬೇನೆಗಳ ನಾಶಿಯಾಗಿ ರಸ, ರಕ್ತ, ಅಸ್ಥಿ, ಮಜ್ಜಾ ವೀರ್ಯ ಮೊದಲಾದ ಏಳು ಧಾತುಗಳ ವೃದ್ಧಿಯಾಗಿ ಇಂದ್ರಿಯಗಳ್ಗೆ ಅಶಕ್ತತೆಯು ನಷ್ಟವಾಗಿ ದೇಹದಲ್ಲಿ ಶಕ್ತಿಯೂ ಹುಟ್ಟುತ್ತದೆ ಇದರಿಂದ ಸುಖವಾದ ಸಂಸಾರಸುಖವು ಸಿಗುತ್ತದೆ. ಹೆಂಗಸರ ಮುಟ್ಟುಶೂಲೆ, ಕೆಂಪು ಹಾಗು ಬಿಳಿ ಪ್ರದರ ಮೊದಲಾದ ಸಂತತಿಗೆ ಬಾಧಕವಾದ ಗರ್ಭಾಶಯದ ಎಲ್ಲ ವಿಕಾರಗಳು ಹೋಗಿ ಪ್ರಕೃತಿಯು ಸುಧಾರಿಸುತ್ತದೆ. ಈ ಅಮೃತಸಿಂಧುವನ್ನು ನಸುಕಿನಲ್ಲಿ ಅರ್ಧ ತಾಸ ಮತ್ತು ಸಂಜೆಗೆ ಅರ್ಧ ತಾಸ ಕಳೆದು ... ೧೦ ರಿಂದ ೨೦ ತೊಲೆಯ ವರೆಗೆ ತಕ್ಕೊಳ್ಳಬೇಕು. ಹತ್ತು ದಿವಸಗಳ ವರೆಗೆ ಸಾಕಾಗುವ ೧ ಬಾಟಲಿಗೆ ರೂ. ೧–೪–೦, ೪ ಬಾಟಲಿಗೆ ರೂ. ೪, ೧೨ ಬಾಟಲಿಗೆ ರೂ. ೧೧, ಹಾಗು ೧ ಬಾಟಲಿ ... ಅಂಚೆ ಹಾಗು ಪ್ಯಾಕಿಂಗ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೋ,
3c Divison, ನಿಪ್ಪಾಣಿ, ಜಿಲ್ಲಾ ಬೆಳಗಾಂವಿ.



## ಗವರ್ನಮೆಂಟಿನಲ್ಲಿ ರಿಜಿಸ್ಟರ ಮಾಡಲ್ಪಟ್ಟ

ಜಗತ್ಪ್ರಸಿದ್ಧವಾದ

## ಎಲ್ಲ ರೋಗಗಳಿಗೆ ಒಂದೇ ಔಷಧ!

## ಅರ್ಕಶಫಾ ಅಥವಾ ಆರೋಗ್ಯಬಿಂದು.

ಪ್ರಮಾಣಪತ್ರ ಮರ್ಕಿಂಟವೈದ್ಯ.

ಇದು ಅರ್ಕವು, ಇದರಲ್ಲಿ ನೀರು ರಸಾಯನ ಕೂಡಿಲ್ಲ ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ಇದು ಪ್ರಸಿದ್ಧವಾಗಿ ... ವರ್ಷಗಳು ಆಗುತ್ತ ಬಂದವು. ಇವತ್ತಿನ ವರೆಗೆ ಎರಡು ಲಕ್ಷಗಳವರೆಗೆ ಬಾಟಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತಿರ ಬೇಕಾದ ಪತ್ರಗಳು ... ಮಾಡಿದ ದಾಖಲೆಗಳು, ಪೋಸ್ಟು ಕಾರ್ಡುಗಳು, ಬಾರಿಸಿ ಬುಕ್ಕುಗಳು ಇರುತ್ತವೆ. ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ನಕಲೆಯೆಂದು ಸಿದ್ಧಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯಾಗಿದ್ದು, *ಎರಡು ತಾಸಿನ ಯಾವತ್ತು ರೋಗಕ್ಕೆ ತತ್ಕಾಲ ಗುಣಕೊಡುವದು.* ಮತ್ತು ಎಂಥ ಭಯಂಕರ ರೋಗವು ಇದ್ದರೂ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟಿಫಿಕೇಟುಗಳು ನಮ್ಮ ಹತ್ತಿರ ಹಾಜರು ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು ... ತಕ್ಕೊಂಡು ಅನುಭವ ನೋಡಿರಿ

ರೋಗದ ನಾವಗಳು —

ಕ್ಷಯರೋಗ, ... ಕೆಮ್ಮು, ... ಪ್ಲೇಗ ಇನ್‍ಫ್ಲುಯೆಂಜಾ ... ಜ್ವರ, ಗುಲ್ಮರೋಗ, ... ಗಂಡಮಾಲೆ ... ಕಣ್ಣುನೋವು, ಕಿವಿನೋವು ... ಅಜೀರ್ಣ ... ಬಾಲಗ್ರಹ ... ರೋಗಗಳ ... ಆರೋಗ್ಯಬಿಂದುವಿನಿಂದ ಖಾತ್ರಿಯಾಗಿ ಗುಣಬರುವದು.

... ದೊಡ್ಡ ಬಾಟ್ಲಿ ೧ಕ್ಕೆ ... ಆಣೆ ... ಬಾಟ್ಲಿ ಕಳಿಸಲಾಗದು ... ಕಮಿಶನ್ ಸಿಗುತ್ತದೆ ... ಈ ಔಷಧವು ... ಇದರ ಬಗ್ಗೆ ನಮಗೆ ಬಹಳ ಶಿಫಾರಸು ಮಾಡಬೇಕಾಗಿಲ್ಲ. ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷಿನಲ್ಲಿ ಪೋಸ್ಟು ಜಿಲ್ಲಾ ವಗೈರೆ ಸ್ಪಷ್ಟವಾಗಿ ಬರೆಯಿರಿ.

ನಮ್ಮ ವಿಳಾಸ — ಎಚ್. ಎಮ್. ಮುಲ್ಲಾ,
ಸಂಪಾದಕ ಅರ್ಕಶಫಾ, ಹೆಡ್ ಆಫೀಸ
ಪೋಸ್ಟ ... (ಬೆಳಗಾವ)



ಸುಲಭ ಕ್ರಯ ಧಾರಾಳ ಫಲ

## ದಂತಧಾವನ ಚೂರ್ಣ

## ಟೂತ್ ಪೌಡರ್.

ಎಲ್ಲಾ ವಿಧದ ಹಲ್ಲುನೋವುಗಳನ್ನೂ ಹಲ್ಲುಗಳ ನ್ಯೂನತೆಗಳನ್ನೂ ವಾಸಿಗೊಳಿಸುವುದು ಹಲ್ಲುಗಳ ಎಡೆಯಿಂದ ಒಸರುವ ರಕ್ತ, ಕೀವು ಮೊದಲಾದವುಗಳನ್ನು ನಿಲ್ಲಿಸುವುದು ಬಾಯಿಯ ದುರ್ಗಂಧವನ್ನೂ ಹಲ್ಲುಗಳ ಇನ್ನಿತರ ದೋಷಗಳನ್ನೂ ದೂರ ಮಾಡಿ ಯಾವಾಗಲೂ ಹಲ್ಲುಗಳು ಶುಚಿಯಾಗಿದ್ದು ಸುವಾಸನೆಯಿಂದಿರುವಂತೆಯೂ ಅತ್ಯುಪಯೋಗಕರವಾಗಿರುವುದು. ಪೆಕೆಟು ೧ಕ್ಕೆ ೦–೨–೦ ಡಜನ ಪೆಕೆಟುಗಳಿಗೆ ೧–೪–೦. ಇವುಗಳಲ್ಲದೆ ಮತ್ತೂ ಇತರ ಉತ್ಕೃಷ್ಟವಾದ ಆಯುರ್ವೇದ ಔಷಧಗಳೂ ಮಾರಾಟಕ್ಕೆ ಸಿದ್ಧವಾಗಿವೆ. ಆಸವ, ಅರಿಷ್ಟ, ಭಸ್ಮ, ಚೂರ್ಣ ಕಷಾಯ, ಲೇಹ, ತೈಲ ಮೊದಲಾದವುಗಳು ನಮ್ಮಲ್ಲಿ ಆಗಾಗ್ಗೆ ಹೊಸತಾಗಿ ತಯಾರಿಸಲ್ಪಡುವವು. ಪರಿಂದವರು ... ಹೊರದೇಶದವರು ಪತ್ರ ಮೂಲಕ ತಾಹಿಲೆ ಮತ್ತು ರೋಗಸ್ಥಿತಿಗಳನ್ನು ತಿಳಿಸಿದಲ್ಲಿ ಯುಕ್ತವಾದ ಔಷಧಗಳನ್ನು ಟಪ್ಪಾಲುದ್ವಾರಾ ಕಳುಹಿಸಲಾಗುವುದು. ಹೆಚ್ಚಿನ ವಿವರ ಬಗ್ಗೆ ಮತ್ತು ಚಿಕಿತ್ಸೆ ಅನುಭವಗಳ ಕುರಿತು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಹೆಚ್ಚಿನ ಸಂಗತಿಗಳನ್ನು ತಿಳಿಯ ಬೇಕಾದವರಿಗೆ ಮಲಯಾಳದಲ್ಲಿ ಮತ್ತು ಕನ್ನಡದಲ್ಲಿ ಔಷಧ ಪಟ್ಟಿ ಇನಾಂ

ಪಿ. ಕರುಣಾಕರ ವೈದ್ಯರ್.
ಆರೋಗ್ಯಾಮೃತ ಔಷಧಾಲಯ
ಕ್ಯಾಂಪ ಬಜಾರ್ ಕಣ್ಣಾನೂರು,

P. KARUNAKARAN VYDIAR.
Arogiamritha Aushadhalaya
Camp Basaar, CANNANORE.

(೪ನೆಯ ಪುಟದಿಂದ ಮುಂದುವರಿಯುವದು.)

ಲಾಠಿಗಳಿಂದ ಜನರನ್ನು ಗದರಿಸುತ್ತ ಗಲಭೆಯಾಗದಂತೆ ಪ್ರಯತ್ನಿಸುತ್ತಿದ್ದರು ಕಾಂಗ್ರೆಸ್ ಸ್ವಯಂಸೇವಕರು ರೇಗಿದ ಜನಸಂದಣಿಯನ್ನು ಚದರಿಸಿ ಶಾಂತಿರಕ್ಷಣೆಗಾಗಿ ತಮ್ಮ ಅಮೂಲ್ಯ ಸಾಹಸವನ್ನು ತೋರ್ಪಡಿಸಿದರು ಹಾಗೂ, ಡಕ್ಕೈವರನ ಉದ್ಧಟತನವು ವ್ಯಕ್ತಗೊಳಿಸಿದಂತಾಯಿತು, ಕಾರಿನ ಒಳಗೆ ಕುಳಿತಿದ್ದ ಗೃಹಸ್ಥನ ಅಪ್ಪಣೆಯ ಮೇರೆಗೆ ಡ್ರೈವರನು ಈ ರೀತಿ ವರ್ತಿಸಿರಬಹುದೆಂಬ ಸಂದೇಹವು ನನ್ನನ್ನು ಪದೇಪದೇ ಬಾಧಿಸಹತ್ತಿತು ಆದರೆ ನಿಜಸ್ಥಿತಿಯು ಹೇಗಿರುವದೆಂಬುದರ ಕುರಿತು ನಾನು ಯಾವ ತರದ ನಿರ್ಧಾರವನ್ನೂ ಹೇಳಲಾರೆನು ಗಲಭೆಯ ಪರಿಣಾಮವಾಗಿ ೪ ಮಂದಿ ಹೆಂಗಸರೂ ಒಂದು ಹುಡುಗಿಯೂ ಜಖಂಪಟ್ಟರು ಮಾತ್ರವಲ್ಲದೆ ಪೋಲೀಸ್ ಲಾಠಿಗಳ ಹೊಡೆತದಿಂದ ಒಂದೆರಡು ಮಂದಿಗೆ ಗಾಯ ಉಂಟಾಗಿರುವುದು. ಒಬ್ಬ ಹುಡುಗನೂ ಕೂಡ, ಲಾಠಿಗಳಿಂದ ಹೊಡೆಯಲ್ಪಟ್ಟನು ಆತನ ತಲೆಗೆ ಹೊಡೆಯಲ್ಪಟ್ಟ ಲಾಠಿ ಏಟುಗಳು, ಹುಡುಗನನ್ನು ಚನ್ನಾಗಿ ನೋಯಿಸಿರುವವು. ಆತನನ್ನು ಸಿವಿಲ್ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಮಾಡಿಸಲಾಯಿತು, ತರುವಾಯ ಅವನನ್ನು ಆತನ ಸ್ವಂತ ಮನೆಗೆ ಕಳುಹಿಸಿಕೊಟ್ಟರು ಅವನ ಪರವಾಗಿ ಆತನ ಸಂಬಂಧಿಕರೊಬ್ಬರು ವಾರಂಟು ಹುಕುಮೊಂದಕ್ಕೆ ಸಹಿಯನ್ನೂ ಮಾಡಿದರು.

ಸತ್ಯಾಗ್ರಹ ಸ್ವಯಂಸೇವಕರು ತಮ್ಮ ಸಹಾಯವನ್ನು ತೋರಿಸದಿದ್ದರೆ ಕಾರೊಳಗಿದ್ದ ಗೃಹಸ್ಥನೂ, ಡ್ರೈವರನೂ ತಮ್ಮ ಪ್ರಾಣಗಳನ್ನೇ ಕಳಕೊಳ್ಳಬೇಕಿತ್ತು ಇದೆಲ್ಲವನ್ನೂ ನಾನು ಕಣ್ಣಾರೆ ನೋಡಿದೆನು ಇಷ್ಟೆಲ್ಲ ಅನಾಹುತಗಳು ಉಂಟಾಗಲು ಮೂಲಕಾರಣವೆಂದರೆ—ಡ್ರೈವರನ ಉದ್ಧಟತನವೇ ಆಗಿರುವದು ಆತನು ಹಿಂದುಮುಂದಿನ ಪರಿಣಾಮಗಳನ್ನು ಲಕ್ಷಿಸದೆ, ಒಂದೇ ಸವನೆ ಅಬಲೆಯರಾದ ಹೆಂಗುಸರ ಮೇಲೆ ಕಾರನ್ನು ನಡಿಸಿದನು ನಾಶವಷ್ಟು ಜಖಮೂ ಆಯಿತು ಯಾರೊಬ್ಬನೂ ಡ್ರೈವರನ ಸುದ್ದಿಯನ್ನು ಎತ್ತಲಿಲ್ಲ. ನಿಷ್ಕಾರಣವಾಗಿ ಆತನು ಒಬ್ಬ ಸತ್ಯಾಗ್ರಹ ಸ್ವಯಂಸೇವಕರಿಗೆ ನೋಯಿಸಿದನೆಂದು ಹೇಳಿದರೆ ಅದೊಂದು ಅತಿಶಯೋಕ್ತಿಯಾಗಲಾರದು ಇದಕ್ಕಾಗಿ ನಾನು ಪೋಲೀಸು ಅಧಿಕಾರಿಗಳೊಡನೆ ದೂರು ಕೊಡುವಂತಿಲ್ಲ, ಕಣ್ಣಾರೆ ನೋಡಿದ ವಿಷಯಗಳನ್ನು ಮಾತ್ರವೇ ವಿವರಿಸಿರುವೆನು' ಎಂದು ಮೊದಲಾಗಿ ಹೇಳಿದರು

ತಾರೀಖು ೨೦

## ಮುಂಬಾಯಿಯಲ್ಲಿ

ಶ್ರೀಯುತ ವಿಠ್ಠಲಭಾಯಿ ಪಟೇಲರು ಅಂಬಾಲಾ ಜೈಲಿನಲ್ಲಿರುವರಷ್ಟೆ! ಆ ಜೈಲಿನ ಸುಪರಿಂಟೆಂಡೆಂಟರು ಮುಂಬಾಯಿಯ ಡಾ॥ ಪಿ. ಟಿ. ಪಟೇಲರ ಕೂಡ ತಿಳಿಯಪಡಿಸಿದಂತೆ, ವಿಠ್ಠಲಭಾಯಿ ಪಟೇಲರು ಅಜೀರ್ಣದಿಂದ ಕೊಂಚ ಕಷ್ಟಪಡುತ್ತಿರುವರೆಂದು ತಿಳಿದುಬರುತ್ತದೆ ಆದರೆ ಈ ವಿಷಯದಲ್ಲಿ ಹೆಚ್ಚಿನ ಆತುರಪಡಬೇಕಾಗಿರುವದಿಲ್ಲವೆಂದು ಸುಪರಿಂಟೆಂಡೆಂಟರೇ ಹೇಳಿರುವರು. ಸರಕಾರವು ಅವರನ್ನು ಮುಂಬಾಯಿ ಸಂಸ್ಥಾನದ ಜೈಲುಗಳಿಗೆ ವರ್ಗಾಯಿಸುವರೆಂಬ ವದಂತಿಯೂ ಇರುವದು ಮಾತ್ರವಲ್ಲದೆ ವಿಠ್ಠಲಭಾಯಿಯವರ ಚಿಕಿತ್ಸೆಗಾಗಿ ಈಗಿರುವ ಸಿವಿಲ್ ಸರ್ಜನರ ಸಹಾಯಕ್ಕಾಗಿ ಸರಕಾರವು ಒಬ್ಬೊಬ್ಬ ಡಾಕ್ಟರನ್ನು ಇನ್ನೂ ನಿಯಮಿಸಲಿಕ್ಕಿರುವದೆಂದು ತಿಳಿದುಬರುತ್ತದೆ

ಪತ್ರಿಕೆಗಳು ಸೂಚಿಸಿದಂತೆ ಜೈಲಲ್ಲಿರುವ ಮಹಾತ್ಮಾಜಿಯವರು ಲಂಕಾಶಾಯರಿಗೆ ವಿರೋಧಾರ್ಥವಾಗಿ ಹೊಸ ಹಣ್ಣು ಹಂಪಲುಗಳನ್ನು ಪರಿತ್ಯಜಿಸಿರುವರೆಂದು ವರ್ತಮಾನವು ಹರಡಿತ್ತು ಆದರೆ ಮುಂಬಯಿಯ ಸುದ್ದಿಗಾರರು ತಿಳಿಸುವಂತೆ ಮೇಲೆ ಹೇಳಲ್ಪಟ್ಟ ವರ್ತಮಾನವು ಸುಳ್ಳಾಗಿರುವದೆಂದು ತಿಳಿದು ಬರುತ್ತದೆ.

ಮುಂಬಾಯಿಯಲ್ಲಿ ತಾ ೨೦ನೇ ದಿನ ಡಾ॥ ದೇಶಮುಖರ ಅಧ್ಯಕ್ಷತೆಯಲ್ಲಿ ದೊಡ್ಡದೊಂದು ಸಭೆ ಸೇರಿ, ಕಳೆದ ತಿಂಗಳ ೨೬ನೇ ತಾರೀಕಿಗೆ ನಾರೀಸತ್ಯಾಗ್ರಹಿಗಳಿಗುಂಟಾದ ಪೋಲೀಸು ಹಾವಳಿಯನ್ನು ಅನೇಕ ಠರಾವುಗಳ ಮೂಲಕ ಖಂಡಿಸಲಾಯಿತು ಹಲವರ ಗಂಭೀರವಾಥ ಭಾಷಣಗಳೂ ನಡೆದವು ಜನಸಂದಣಿಯು ಬಹಳವಾಗಿದ್ದಿತು. ನಾರೀಸ್ವಯಂಸೇವಕರು ಚಿಕ್ಕ ಪುಟ್ಟ ರಾಷ್ಟ್ರಧ್ವಜಗಳನ್ನು ಹಿಡಕೊಂಡು, ಸಾಲುಸಾಲಾಗಿ ಸಭಾಸ್ಥಾನಕ್ಕೆ ಬಂದು ಸೇರುತ್ತಿದ್ದರು

ಡಾ॥ ದೇಶಮುಖರು ತನ್ನ ಭಾಷಣದಲ್ಲಿ ಮುಂಬಾಯಿ ಚೀಫ್ ಸಾಹೇಬರ ಕೃತ್ಯವನ್ನು ಖಂಡಿಸಿದರು ನ್ಯಾಯವಾಗಿ ೫,೦೦೦ ಜನರ ಕೋರಿಕೆಯಂತೆ ಶೇಠರು ಸಭೆ ಜರಗಿಸಿ, ಹೆಂಗುಸರಿಗುಂಟಾದ ಪೋಲೀಸು ಅನ್ಯಾಯಗಳನ್ನು ವಿಮರ್ಶಿಸುವದು ಅತೀ ಅಗತ್ಯವಾಗಿದ್ದಿತು, ಆದರೆ ಅವರು ಹಾಗೆ ಮಾಡದಿರುವದು ಬಹಳ ಶೋಚನೀಯವಾಗಿರುವದೆಂದರು ಡಾ॥ ದೇಶಮುಖರು ಪೋಲೀಸು ಸುಪರಿಂಟೆಂಡೆಂಟರ ಕೃತ್ಯವನ್ನೂ ವಿಮರ್ಶಿಸಿದರು ಸುಪರಿಂಟೆಂಡೆಂಟರ ಅನ್ಯಾಯವನ್ನು ಗವರ್ನರರೂ ಕೂಡ ಲಕ್ಷಿಸಲಿಲ್ಲವಂತೆ! ಆದುದರಿಂದ ಡಾ॥ ದೇಶಮುಖರು ಗವರ್ನರ್ ಸಾಹೇಬರ ಕೃತ್ಯವು ಬ್ರಿಟಿಷರ ವೀರತ್ವಕ್ಕೆ ಸಲ್ಲದೆಂದರು ಮಹಿಳಾವರ್ಗದ ಸಾಹಸಕೃತ್ಯಗಳನ್ನು ಬಹಳವಾಗಿ ಕೊಂಡಾಡಿದರು ಭಾರತವೀರ ಮಹಿಳೆಯು ಸತ್ಯಾಗ್ರಹ ರಣರಂಗದಲ್ಲಿ ಹೆಣ್ಣು ಸಿಂಹದಂತೆ ತನ್ನ ಅಪ್ರತಿಮ ಸಾಹಸವನ್ನು ತೋರ್ಪಡಿಸುತ್ತಿರುವಳೆಂದೂ ಹೇಳಿದರು ಕಟ್ಟಕಡೆಗೆ ಡಾ॥ ದೇಶಮುಖರು ಪ್ರತಿ ವರ್ಷದ ಒಕ್ಟೋಬರ ೨೬ನೇ ತಾರೀಕನ್ನು 'ಹಿಂದೀ ಮಹಿಳೆಯರ ದಿನ'ವೆಂಬ ಅಂಕಿತದಿಂದ ಎಲ್ಲರೂ ಆಚರಿಸತಕ್ಕದ್ದೆಂದು ಹೇಳಿ, ತನ್ನ ಭಾಷಣವನ್ನು ಅಂತ್ಯಗೊಳಿಸಿದರು

ಆ ವೇಳೆ ಸರ್ ಪುರುಷೋತ್ತಮದಾಸ್ ಠಾಕೂರದಾಸರು ಎಂಬವರು ಜಸ್ಕ ಭಾಷಣ ಒಂದನ್ನು ಮಾಡಿದರು ಭಾಷಣದ ಸಾರಾಂಶವೇನೆಂದರೆ ಠಾಕೂರದಾಸರು ೨೬ನೇ ಒಕ್ಟೋಬರಲ್ಲಿ ನಡೆದ ಪೋಲೀಸರ ಹಿಂಸೆಯು ಅಸಹನೀಯವಾಗಿದ್ದಿತೆಂದೂ, ಅಂತಹ ಹಿಂಸಾಸ್ಪದವಾದ ವಿಷಯವನ್ನು ತಾನು ಕಣ್ಣಾರೆ ನೋಡಿದೆನೆಂದೂ ಹೇಳಿದರು 'ಪರದೇಶೀ ವಸ್ತುವನ್ನು ಬಹಿಷ್ಕರಿಸಿರಿ ಎಂದು ಉಚ್ಚರಿಸುತ್ತಾ, ಓಡಿಯುದ್ದಕ್ಕೂ ಅಲೆದಾಡುತ್ತಿದ್ದ ವಿದ್ಯಾರ್ಥಿಗಳ ಪಂಗಡ ಒಂದನ್ನು ಕೆಲವು ಪೋಲೀಸ ಸಾರ್ಜಂಟರು ಚೆನ್ನಾಗಿ ಹೊಡೆದರು ಈ ದೃಶ್ಯವು ಎಂಥವನ ಕಲ್ಲೆದೆಯನ್ನಾದರೂ ಕರಗಿಸದಿರದೆಂದು ಸ್ಫೂರ್ತಿದಾಯಕ ಮಾತುಗಳಿಂದ ವಿವರಿಸಿದರು, ವಿದ್ಯಾರ್ಥಿವರ್ಗವನ್ನು ಸಮಾಧಾನಪಡಿಸಲಿಕ್ಕಾಗದ ನಮ್ಮ ಬ್ರಿಟಿಷ್ ಸರಕಾರಕ್ಕೆ ಇಂಡಿಯವನ್ನಾಳುವ ಹಕ್ಕೇ ಇರುವದಿಲ್ಲವೆಂದರು ನನಗೇನೂ ಕಾನೂನಿನ ಮಾಹಿತಿ ಇರುವದಿಲ್ಲ ಆದರೂ ಪೋಲೀಸರು ಹೆಂಗುಸರನ್ನು ಪಟ್ಟಣದ ಹೊರವಲಯಕ್ಕೆ ಕರೆದೊಯ್ದು, ಅವರ ಸೌಕರ್ಯಗಳನ್ನು ಒದಗಿಸಿಕೊಡದೆ ದಾರಿಹೋಕರಂತೆ ಬಿಟ್ಟು ಬರಲು ಯಾವ ಕಾನೂನು ಆಧಾರವಾಗಿದ್ದಿತೋ—ತಿಳಿಯೆನು ಎಂದೂ ಹೇಳಿದರು 'ರಾಜಕೀಯ ಬಂದಿವಾನರಾಗಿ, ಜೈಲಿನೊಳಗಿರುವ ಶ್ರೀಮಂತ ಹೆಂಗುಸರ ಮಾಂಗಲ್ಯಚಿಹ್ನೆಯಾದ ಕಂಕಣಗಳನ್ನು ಒಡೆಯುವದು, ಅವರ ಹಣೆಯ ಮೇಲಿನ ಕುಂಕುಮವನ್ನಳಿಸುವುದು—ಇವೇ ಮೊದಲಾದ ಗವರ್ನಮೆಂಟ್ ಅತ್ಯಾಚಾರಗಳನ್ನು ಎಂದಿಗೂ ಮರೆಯಲಿಸಾಧ್ಯ'ವೆಂದರು ಮಾತ್ರವಲ್ಲದೆ ಠಾಕೂರ್‌ದಾಸರು ಸರಕಾರದ ಉತ್ತರಕ್ಕಾಗಿ ಕೆಲವು ಮಾತುಗಳನ್ನಾಡಿ ಈ ಕೆಳಗಿನ ಠರಾವುಗಳನ್ನು ಪಾಸ್‌ಮಾಡಿರುವರು

ಇಂದಿನ ಸಭೆಯು, ಭಾರತವೀರ ಮಹಿಳೆಯರಿಗೆ ತಾ ೨೬—೧೦—'೩೦ನೇ ದಿನ ಉಂಟಾದ ಪೋಲೀಸು ನಿರ್ಬಂಧ ಹಾಗೂ ಅವರನ್ನು ಪಟ್ಟಣದ ಹೊರ ಪ್ರಾಂತ್ಯದಲ್ಲಿ ಅಸಹಾಯರಾಗಿ ಬಿಟ್ಟು ಬಂದ ಪೋಲೀಸು ಅತ್ಯಾಚಾರಗಳನ್ನು ನಿರಾತಂಕವಾಗಿ ಖಂಡಿಸಿರುವುದು ಮಾತ್ರವಲ್ಲದೆ ಈ ತರದ ಪೋಲೀಸರ ಅನ್ಯಾಯವು ಭಾರತ ಮಹಿಳಾವರ್ಗಕ್ಕೆ ಒಂದು ಬಗೆಯ ಕೊರತೆಯನ್ನೇ ಉಂಟುಮಾಡಿರುವುದು' ಎಂದು ಮೊದಲಾಗಿ ಠರಾವುಗಳನ್ನು ಪಾಸುಮಾಡಿದರು

## ಅಲ್ಲಹಾಬಾದದಲ್ಲಿ

ವಿದೇಶೀಯ ವಸ್ತ್ರ ವ್ಯಾಪಾರಿಗಳು, ಪೋಲೀಸ್ ಸಹಾಯವಿದ್ದರೂ ಕೂಡ, ತಮ್ಮ ಆತ್ಮ ಸಂತೋಷದಿಂದ, ಸತ್ಯಾಗ್ರಹ ಸ್ವಯಂಸೇವಕರ ದಸ್ತಗಿರಿಗಳನ್ನು ಮನ್ನಾಪಡಿಸಬೇಕೆಂಬ ಸದುದ್ದೇಶದಿಂದ ಅಂಗಡಿಗಳನ್ನು ಮುಚ್ಚಿರುವರು ಸ್ವಯಂಸೇವಕರ ಪಿಕೆಟಿಂಗ್ ಕಾರ್ಯಕ್ರಮಗಳು ಯಶಸ್ವಿಯಾಗಿ ಮುಂದರಿಯುತ್ತವೆ

## ಬೆಳಗಾವಿನಲ್ಲಿ

ಮಿ। ಹನುಮಂತರಾವ್ ಕೌಜಲ್ಗಿ ಎಂಬವರನ್ನು ೬ ತಿಂಗಳ ಕಠಿಣ ಶಿಕ್ಷೆಗೂ ರೂ ೩೦೦ರ ಜುಲ್ಮಾನೆಗೂ ಗುರಿಪಡಿಸಿರುವರು ಇವರ ಮೇಲಿನ ತಕ್ಸೀರು ಬೇರೇನಿಲ್ಲ—ಸರಕಾರಿ ಮರಗಳನ್ನು ಹುಕುಮಿಲ್ಲದೆ ಕಡಿಯುವಂತೆ ಜನರನ್ನು ಪ್ರೋತ್ಸಾಹಿಸಿದ್ದು—ಅವರನ್ನು ಮ್ಯಾಜಿಸ್ಟ್ರೇಟರು ಬಿ ಕ್ಲಾಸ್ ಜೈಲಿಗೆ ಶಿಫಾರಸು ಮಾಡಿರುವರು.

ತಾರೀಖು ೨೧

## ಮುಂಬಾಯಿಯಲ್ಲಿ

ಮಿ ಕಾಂಟಲ್ಪಾಲರು ತಾ ೨೦—೧೧—೩೦ನೇ ದಿನ ಕಸ್ಟಮ್ಸ್ ಹೌಸನ್ನು ಪಿಕೆಟ್ ಮಾಡಿದಕ್ಕಾಗಿ ವಿಚಾರಣೆ ನಡೆಸ್ಸಿ ಬರೇ ಕುಡಿಯಬಾರದೆಂದು ಸಾರಿ ಹೇಳುವ ನೀತಿಬೋಧೆಯು ತಪ್ಪಾಗುವದಿಲ್ಲವೆಂಬ ಸಬಬಿನ ಮೇಲೆ, ಒಬ್ಬ ಸ್ವಯಂಸೇವಕನನ್ನು ಬಿಡುಗಡೆಹೊಂದಿಸಿರುವರು

## ಪೇಶಾವರದಲ್ಲಿ

ಪಿಕೆಟ್ ಮಾಡಿದನೆಂಬ ಅಪಾದನೆಯ ಮೇಲೆ ಬಂದಿಖಾನೆಯಲ್ಲಿರಿಸಲ್ಪಟ್ಟ ಹಾಶೆಮ್ ಗುಲ್ ಎಂಬೊಬ್ಬ ಸ್ವಯಂಸೇವಕನು ಮರಣಹೊಂದಿರುವನೆಂದು ವರ್ತಮಾನವು ಹರಡಿದ್ದಿತು ಆದರೆ ಸತ್ಯಸ್ಥಿತಿಯು ಈಗ ಹೊರಬಿದ್ದಿರುವದು ಸ್ವಯಂಸೇವಕನು ನಿಜವಾಗಿಯೂ ಮರಣಹೊಂದಿರುವನು ಆತನು ಕಾರಾಗೃಹಾಂತರದಿಂದ ಹುಸು ಕಾಹಿಲೆಗೆ ಒಳಪಟ್ಟಿದ್ದನಂತೆ! ಒಂದು ರಾತ್ರೆಯಲ್ಲಿ ಆತನ ಸ್ಥಿತಿಯು ಬಹಳ ಕಷ್ಟದಾಯಕವಾಯಿತು ಸಬ್ ಅಸಿಸ್ಟೆಂಟ್ ಸರ್ಜನರು ಪಕ್ಕದಲ್ಲೇ ಇದ್ದು ಚಿಕಿತ್ಸೆಮಾಡುತ್ತಿದ್ದುದರಿಂದ ಅಂದಿನ ರಾತ್ರಿಯು ಕಳೆದು ಬೆಳಗಾಯಿತು ಕಾಹಿಲೆಯು ವಾಸಿಯಾಗುವದೆಂಬ ಭರವಸೆಗೆ ಆರಂಭ, ಕೆಲಹೊತ್ತಿನ ಮೇಲೆ ಸ್ವಯಂಸೇವಕನು Heart failure ಆಗಿ ತೀರಿಹೋದನು ಇದಕ್ಕಾಗಿ, ಪೇಶಾವರವು ಹರತಾಳವನ್ನಾಚರಿಸಿತು ಈ ಊರಿನ ಪಹರೆಯ ಕಾರ್ಯಕಲಾಪಗಳು ಬಹಳ ಯಶಸ್ವಿಯಾಗಿ ನಡೆಯುತ್ತಿವೆ

ತಾರೀಖು ೨೨

## ಪೇಶಾವರದಲ್ಲಿ

ಗಡಂಗುಗಳನ್ನು ಮಾತ್ರವಲ್ಲದೆ ಸಮಾಜಕ್ಕೆ ಅಯೋಗ್ಯವೆಂದು ಕಂಡುಬರುವ ಕೆಲವು ಮನೆಗಳನ್ನೂ ಪಿಕೆಟ್ ಮಾಡಲಾರಂಭಿಸಿರುವರೆಂದು ತಿಳಿದುಬರುತ್ತದೆ ಈ ದಿನ ಒಬ್ಬ ಅಫ್ರಿದಿಯವನನ್ನು ಮಾರ್ಶಲ್ ಲಾ ಆರ್ಡಿನೆನ್ಸಿನ ಮೇರೆಗೆ ೨ ತಿಂಗಳ ಶಿಕ್ಷೆಯು ವಿಧಿಸೋಣಾಗಿರುವದು ೧೧ ಮಂದಿ ಪಠಾಣ್ಯಾತರಿಗೆ ಆರಾರು ತಿಂಗಳ ಕಠಿಣ ಶಿಕ್ಷೆ ಒಬ್ಬನಿಗೆ ೪ ತಿಂಗಳ ಶಿಕ್ಷೆಯೂ ರೂ ೨೫೦ ಜುಲ್ಮಾನೆಯೂ ವಿಧಿಯಾಗಿರುವದು

## ಪಂಟ್ನಾದಲ್ಲಿ

ಅಖಿಲ ಭಾರತ ಹಿಂದೂ ಮಹಾಸಭೆಯ ಕಾರ್ಯದರ್ಶಿಯವರಾಗಿದ್ದ ಮಿ, ಜಗತ್ ನಾರಾಯಣ ಲಾಲ್ ಎಂಬ ಪ್ರಮುಖ ಸತ್ಯಾಗ್ರಹ ಮುಖಂಡರು ಸತ್ಯಾಗ್ರಹದ ಅಪಾದನೆಯ ಮೇಲೆ ೯ ತಿಂಗಳ ಕಠಿಣ ಸಜೆಯನ್ನು ಅನುಭವಿಸುತ್ತಿದ್ದರಷ್ಟೆ' ಅವರನ್ನು ಪಿಕೆಟಿಂಗ್ ಆರ್ಡಿನೆನ್ಸಿನ ಮೇಲೆ ವಿಚಾರಣೆ ನಡೆಸಿ ಮರಳಿ ೬ ತಿಂಗಳ ಶಿಕ್ಷೆಗೆ ಗುರಿಪಡಿಸಿರುವರೆಂದು ತಿಳಿದುಬರುತ್ತದೆ. ಹಾಗೂ ಒಂದು ಶಿಕ್ಷೆಯು ಮುಗಿಯುವದರೊಳಗಾಗಿ ಇನ್ನೊಂದು ಶಿಕ್ಷೆಯು ಬಂದಿರುವದು

## ಸೂರತದಲ್ಲಿ

'ಜವಾಹರ್‌ಲಾಲ್ ದಿನದ' ಸಮಾರಂಭದಲ್ಲಿ ಭಾಗವಹಿಸಿದಕ್ಕಾಗಿ ಸಿಟಿ ಮ್ಯಾಜಿಸ್ಟ್ರೇಟರು ಸುಮಾರು ೨೫ ಮಂದಿಯ ಮೇಲೆ ೧೪೪ನೇ ಪ್ರಕರಣವನ್ನು ಜ್ಯಾರಿಮಾಡಿದ್ದರಷ್ಟೆ' ಅವರ ತನಿಖೆ ನಡೆಯಿತು ಮ್ಯಾಜಿಸ್ಟ್ರೇಟರು ವಿಚಾರಣಾ ಸಮಯದಲ್ಲಿ—ನೀವೆಲ್ಲರೂ ಬೇರೆ ಬೇರೆಯಾಗಿ ರೂ. ೨೦೦ರಂತೆ ಜಾಮೀನು ಕೊಡಿರಿ ನಿಮ್ಮನ್ನೆಲ್ಲರನ್ನೂ ಹೋಗಬಿಡುವೆನು ಎಂದರು ಸ್ವಯಂಸೇವಕರು ಜಾಮೀನು ಕೊಡಲಿಕ್ಕೆ ಒಪ್ಪಲಿಲ್ಲ ಆದುದರಿಂದ ಮ್ಯಾಜಿಸ್ಟ್ರೇಟರು ಅವರಿಗೆ ವಿವಿಧ ಶಿಕ್ಷೆಯನ್ನು ವಿಧಿಸಿರುವರೆಂದು ತಿಳಿದುಬರುತ್ತದೆ

## ಮುಂಭಾಯಿಯಲ್ಲಿ

ನೂರಾರು ಮುಸಲ್ಮಾನರ ಯೋಗದಿಂದ ಕೂಡಿದ ಒಂದು ಪಂಗಡವು ಒಂದು ನಾಟಕ ಶಾಲೆಯನ್ನು ಮುತ್ತಿ, ಅಲ್ಲಿ ಅಭಿನಯಿಸುತ್ತಿದ್ದ ನಾಟಕಕ್ಕೆ ತಡೆಯುಂಟುಮಾಡಿದರು ನಾಟಕದ ಕಥಾಭಾಗದಲ್ಲಿ ಕೆಲವಂಶಗಳನ್ನು ಮಹಮ್ಮದೀಯರು ಪ್ರದರ್ಶಿಸಬಾರದೆಂದು ವಾದಿಸುತ್ತಿದ್ದರಂತೆ ಅವುಗಳ ಪ್ರದರ್ಶನವು ಹೊರಬಿದ್ದುದಕ್ಕಾಗಿ, ಮಹಮ್ಮದೀಯರು ಹಾಗೆ ಮಾಡಿದರೆಂದು ಊಹಿಸಲಾಗುತ್ತದೆ ಗಲಭೆಯುಂಟಾದ ಕೂಡಲೆ ನಾಟಕ ನಾಡುವವರು ಪೋಲೀಸ್ ಸಹಾಯವನ್ನಪೇಕ್ಷಿಸಿದರು ಅರ್ಧ ಡಜನ್ ಪೋಲೀಸು ಅಧಿಕಾರಿಗಳ ಮುಂದಾಳುತನದಲ್ಲಿ, ೫೦ ಮಂದಿ ಪೋಲೀಸ್ ಕಾನ್‌ಸ್ಟೇಬ್ಲರು ಆ ಸ್ಥಳಕ್ಕೆ ಬಂದು ಸೇರಿದರು ಇನ್ನೊಂದೆಡೆಯಲ್ಲಿ ಸುಮಾರು ೩೦೦ ಮಂದಿ ಕಿಲಾಫತ್ ಸ್ವಯಂಸೇವಕರೂ ಬಂದು ಸೇರಿದರು ಕೊನೆಗೆ ನಾಟಕದ ಮ್ಯಾನೇಜರರು ಮಹಮ್ಮದೀಯರಿಗೆ ವಿರೋಧಕರವಾದ ಕಥಾ ಭಾಗಗಳು ಅಭಿನಯಿಸಲಾರವೆಂದು ಅಭಯವಿತ್ತುದರಿಂದ, ಜನಸ್ತೋಮವು ಚದರಿತು ಒಬ್ಬ ಸಾರ್ಜಂಟರನ್ನು ಮಾತ್ರ ಯಾರೋ ನೋಯಿಸಿರುವರೆಂದು ವದಂತಿ

ಪರೀಕ್ಷಿಸಿರಿ! ಶಾಶ್ವತವಾಗುವಿರಿ!!
ಕಿಮ್ಮತ್ತು ಅಗ್ಗ ಗುಣ ಶ್ರೇಷ್ಠ

## ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

[illegible]

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.)



### ನೋಡಿದರೆ ಬಿಡದಿರುವ ಕಾದಂಬರಿಗಳು

[illegible]

ವಿಳಾಸ — [illegible]






Liveliness—zip-pep-you ... that all the time from an "Exide" because it is built into it

Care and thought in the design—keen discrimination in the selection of material and the experience of thousands of users have made

**Exide**

THE LONG-LIFE BATTERY

The O. P. C. Co. Ltd
MANGALORE



**Batliwalla's Preparations Cover All Your Needs.**

A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

## ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಝಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

[illegible]

LIBERAL DISCOUNT TO TRADE

ಕಾವಸಜಿ—CAWASHAPUR, BOMBAY.

ಎಲ್ಲಾ ಕಡೆಗಳಲಿ ... ಡಾ. ಯಚ್ ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

ಏಜಂಟರು ದೊರೆಯುವರು ... Sayani Road, P O Cadell R ad Bombay No 14



## ಕೇಸರಿಯವರ ರತ್ನತ್ರಯಗಳು.

### 'ಲೋಧ್ರ'

[illegible]

### 'ಅಮೃತ'

ಮಿ॥ ಎ. ಸುಬ್ಬರಾಯರು, ಹೈಕೋರ್ಟ್ ವಕೀಲರು ಮಂಗಳೂರು.—ನಿಮ್ಮ 'ಅಮೃತ'ವು ಉತ್ತಮವಾದ ರಕ್ತಶೋಧಕೌಷಧವಾಗಿದೆ ಮತ್ತು ಮಲಬದ್ಧತೆಗೆ ವಿಶೇಷ ಪ್ರಯೋಜನಕಾರಿ.

### "ಆರ್ಕ"

[illegible]

## ಕೇಸರಿ ಕುಟೀರಮ್.

ಎಗ್ಮೋರು, ಮದರಾಸು.

ಪೋಸ್ಟ್ ಬಾಕ್ಸ್ 752 ತಂತಿ. "ಕೇಸರಿ" ಫೋನ್ 8486.

ಏಜಂಟರು—ಷಾ ಕಂಪೆನಿ, (ದಿ ಉಲನ್ ಮಾರ್ಟ್) ಮಂಗಳೂರು.



The Kanara Watch House Udipi, S. K.



ಗ್ಯಾರಂಟಿಯುಳ್ಳ ವಾಚುಗಳು! ಅತೀ ಕಡಿಮೆ ಬೆಲೆ

## ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ವಾಚುಗಳೂ, ಕ್ಲೋಕುಗಳೂ, ಟೈಮ್ ಪೀಸುಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೋಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

**ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.**

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸು, ಫೊನೊಗ್ರಾಫ್, ಮತ್ತು ಪೆಟ್ರೋಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು. ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

[illegible]

ಮ್ಯಾನೇಜರ್,
ದಿ. ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಪಿ. ಸೂ.— [illegible]

## ಹಿಂದುಸ್ಥಾನದ ಇತಿಹಾಸ.

### [illegible]

---------

ಅಶೋಕನ ಕಾಲದಲ್ಲಿ ಸ್ಥಿರವಾದ ಮತ್ತು ಕ್ರಮವಾದ ರಾಜ್ಯಭಾರಕ್ರಮವಿದ್ದಂತೆ ಕಂಡುಬರುತ್ತದೆ. ಪಾಟಲೀಪುತ್ರವು ರಾಜಧಾನಿಯಾಗಿಯೂ, ಅಶೋಕನ ಪ್ರಧಾನಸ್ಥಾನವಾಗಿಯೂ ಇತ್ತು. ಆದರೆ ಅತನ ರಾಜ್ಯವು ಬಹು ವಿಸ್ತಾರವಾಗಿದ್ದ ಕಾರಣ ತಕ್ಷಶಿಲಾ, ಉಜ್ಜಯಿನಿ, ಗಿರಿನಾರು, ಸುವರ್ಣಗಿರಿ, ತೋಶಲಿ ಮೊದಲಾದ ಸ್ಥಳಗಳಿಗೆ ಅಶೋಕನು ತನ್ನ ಕುಟುಂಬದವರನ್ನು ತನ್ನ ಪ್ರತಿನಿಧಿಯಾಗಿ ಕಳುಹಿಸಿ ಆ ಮೂಲಕ ದೂರದ ಪ್ರಾಂತ್ಯಗಳನ್ನು ಆಳುತ್ತಿದ್ದನು.

ಪಾಟಲಿಪುತ್ರದಲ್ಲಿ ೩೦ ಸದಸ್ಯರಿಂದೊಡಗೂಡಿದ ಒಂದು ಕಾರ್ಯನಿರ್ವಾಹಕ ಸಭೆಯಿತ್ತು. ಆ ಸಭೆಯು ಐದೈದು ಸದಸ್ಯರಿದ್ದ ಕಡಿದಿನ ಆರು ಶಾಖೆಯಾಗಿ ವಿಭಾಗಿಸಲ್ಪಟ್ಟಿತ್ತು. ಈ ಮಂಡಳಿಯು ಸಾರ್ವಜನಿಕ ಕಾರ್ಯಕಲಾಪಗಳನ್ನು ನಡಿಸುತ್ತಿತ್ತು. ಇದರಲ್ಲಿ ಮೊದಲನೆ ಶಾಖೆಯು ಕಲೆ ಮತ್ತು ಕೈಗಾರಿಕೆ, ಎರಡನೇದು ಅತಿಥಿಸತ್ಕಾರ ಪ್ರಯಾಣ ಸೌಕರ್ಯ, ಮೂರನೇದು ಜನನಮರಣ ಲೆಕ್ಕ ಮತ್ತು ಕಂದಾಯ, ನಾಲ್ಕನೇದು ವ್ಯಾಪಾರ, ತೂಕ, ಲೈಸನ್ಸ್ ತೆರಿಗೆ, ವ್ಯಾಪಾರ ತೆರಿಗೆ, ಐದನೇದು ಕೈಗಾರಿಕೆ, ಆರನೇದು ಅಮದು ವಸ್ತುಗಳ ವಿಚಾರ— ಹೀಗೆ ಬೇರೆಬೇರೆ ಶಾಖೆಗಳು ಬೇರೆಬೇರೆ ವಿಚಾರಗಳನ್ನು ನೋಡಿಕೊಳ್ಳುತ್ತಿತ್ತು.

ಅಶೋಕನ ಪುರೋಭಿವೃದ್ಧಿಯನ್ನು ಎಂದೂ ಉಪೇಕ್ಷಿಸಲಿಲ್ಲ. ಅತನು ಕಾಶ್ಮೀರದಲ್ಲಿ ಶ್ರೀನಗರ, ನೇಪಾಳದಲ್ಲಿ ಲಲಿತಪಟ್ಟಣವೆಂಬ ಅನೇಕಾನೇಕ ಪುರಗಳನ್ನು ಕಟ್ಟಿಸಿದನು. ಅಲ್ಲದೆ ಅಲ್ಲಲ್ಲಿ ಆಶ್ಚರ್ಯಕರವಾದ ಅನೇಕಾನೇಕ ಮನೆಗಳನ್ನೂ ಗೋಪುರಗಳನ್ನೂ ಉದ್ಯಾನವನಗಳನ್ನೂ ಕಟ್ಟಿಸಿದನೆಂದೂ ಅವುಗಳು ಸುಮಾರು ೪೦೦ ವರುಷಗಳ ನಂತರವೂ ಇದ್ದವೆಂದೂ ಚರಿತ್ರಕಾರರು ಹೇಳುವರು. ಇದೂ ಅಲ್ಲದೆ ಅಶೋಕನು ತನ್ನ ನಾಡಿನ ಗಡಿಗಳನ್ನು ಸೂಚಿಸುವ ಬಗ್ಗೆ ಅಲ್ಲಲ್ಲಿ ನೆಡಿಸಿದ ಇತಿಹಾಸಯುಕ್ತವಾದ ಕಲ್ಲುಗಂಬಗಳೂ, ಬೌದ್ಧಮತ ಪ್ರಚಾರಕ್ಕಾಗಿ ನಿರ್ಮಿಸಿದ ಸ್ತೂಪ, ಬೆಗೋಡಗಳೆಂಬ ಬಸ್ತಿಗಳೂ, ದೇವಾಲಯಗಳೂ, ಗೋಪುರಗಳೂ ಈಗಲೂ ಕಾಣಸಿಕ್ಕಿದ್ದು ಅಶೋಕನ ಕಲಾಕೌಶಲ್ಯವನ್ನೂ, ಮಹತ್ವವನ್ನೂ ಸೂಚಿಸುತ್ತವೆ.

ಅಶೋಕನ ಕಾಲದಲ್ಲಿ ಅನೇಕ ತೆರಿಗೆಗಳಿದ್ದು ಅವುಗಳಲ್ಲಿ ನೆಲತೆರಿಗೆಯೇ ಪ್ರಾಮುಖ್ಯವಾಗಿತ್ತು. ಆದರೆ ರೈತರಿಗೂ, ವ್ಯಾಪಾರಸ್ಥರಿಗೂ, ಪ್ರಯಾಣಿಕರಿಗೂ ಸರಕಾರದಿಂದ ಬಹು ಪ್ರಯೋಜನವು ಸಿಕ್ಕುತ್ತಿತ್ತು. ನೀರಾವರಿ ಕಾಮಗಾರಿಗಳ ಜಾಗ್ರತೆ ನೋಡಲಿಕ್ಕೂ, ಕಾಲುವೆಗಳನ್ನು ದುರುಸ್ತಿ ಮಾಡಿಸಲಿಕ್ಕೂ ಕಾಡುಗಳನ್ನೂ ಬೀದಿಗಳನ್ನೂ ಹೆದ್ದಾರಿಗಳನ್ನೂ ರಕ್ಷಿಸಲಿಕ್ಕೂ ಬೇರೆಬೇರೆ ಸಂಸ್ಥೆಗಳಿದ್ದವು. ಪ್ರಜೆಗಳ ಸಂಕಷ್ಟಗಳನ್ನು ತಿಳಿದುಕೊಳ್ಳುವುದಕ್ಕೂ ಅವರಿಗೆ ಸಭ್ಯತೆಯನ್ನೂ ಸದ್ಗುಣಗಳನ್ನೂ ಅಹಿಂಸಾತತ್ವವನ್ನೂ ಕಲಿಸಿಕೊಡುವುದಕ್ಕೂ ಪ್ರತ್ಯೇಕವೊಂದು ಸಂಸ್ಥೆಯಿತ್ತು. ಪ್ರಯಾಣಿಕರಿಗೂ ವಿಶೇಷ ಸೌಕರ್ಯಗಳಿದ್ದುವು. ಅಶೋಕನು ಜನಜಾನುವಾರುಗಳಿಗೆ ನೆರಳನ್ನೀಯುವುದಕ್ಕಾಗಿ ಅಲ್ಲಲ್ಲಿ ಮರಗಳನ್ನೂ ಕಟ್ಟೆಗಳನ್ನೂ ಕಟ್ಟಿಸಿದನು. ಪ್ರಯಾಣಿಕರಿಗೆ ಫಲವಸ್ತುವನ್ನೀಯುವ ಬಗ್ಗೆ ಅಲ್ಲಲ್ಲಿ ಮಾವಿನ ಮರಗಳನ್ನು ನೆಡಿಸಿದನು. ಅಲ್ಲದೆ ನೀರಡಿಕೆಯನ್ನು ಪರಿಹರಿಸುವ ಬಗ್ಗೆ ಎಂಟು ಮೈಲುಗಳಿಗೆ ಒಂದರಂತೆ ಬಾವಿಗಳನ್ನು ತೋಡಿಸಿದನು. ತನ್ನ ರಾಜ್ಯದಲ್ಲಿರುವ ರೋಗರುಜಿನೆಗಳನ್ನು ನಿವಾರಿಸುವ ಬಗ್ಗೆ ಅಲ್ಲಲ್ಲಿ ಧರ್ಮಾಸ್ಪತ್ರೆಗಳನ್ನೂ ಪಶುಚಿಕಿತ್ಸಾಗೃಹಗಳನ್ನೂ ಏರ್ಪಡಿಸಿದನು.

ಅಶೋಕನ ಕಾಲದಲ್ಲಿ ಸಮಸ್ತ ಕಲೆಗಳು ವೃದ್ಧಿಯನ್ನು ಹೊಂದಿದವು. ಅತನ ಕಾಲದಲ್ಲಿ ನಿರ್ಮಿಸಲ್ಪಟ್ಟಿರುವ ಕಲ್ಲುಗಂಬಗಳನ್ನು ನೋಡಿದರೆ ೨೦೦೦ ವರುಷಗಳ ಹಿಂದೆ ಶಿಲ್ಪಶಾಸ್ತ್ರವು ಎಷ್ಟರಮಟ್ಟಿಗೆ ಉನ್ನತಾವಸ್ಥೆಯಲ್ಲಿತ್ತು ಎಂಬುದು ವ್ಯಕ್ತವಾಗುತ್ತದೆ. ಪಾಟಲೀಪುರವು ಸಕಲಕಲಾಕೌಶಲ್ಯಕ್ಕೂ ತವರುಮನೆಯಾಗಿದ್ದಿತು. ರಾಜ್ಯಸಭಾ ಮಂಟಪವು ಕೆತ್ತನೆ ಕೆಲಸಗಳಿಂದಲೂ ಬೆಳ್ಳಿಬಂಗಾರದಾಭರಣಗಳಿಂದಲೂ ಬಹು ಉತ್ತಮತರದ ಸುವರ್ಣಮಯವಾದ ಜರತಾರಿ ವಸ್ತ್ರಉಡುಪುಗಳಿಂದಲೂ, ಮುತ್ತಿನ ಪಲ್ಲಂಕಿಗಳಿಂದಲೂ ಶೋಭಾಯಮಾನವಾಗಿತ್ತು.

ಆಗಿನ ಕಾಲದ ಪುರುಷರು ಸತ್ಯವಂತರಾಗಿಯೂ ವೀರರಾಗಿಯೂ ಇದ್ದರು. ಸ್ತ್ರೀಯರು ಗುಣವಂತೆಯರಾಗಿದ್ದರು. ಗುಲಾಮಗಿರಿಯು ಇರಲಿಲ್ಲ. ಎಲ್ಲೆಲ್ಲಿಯೂ ಪರಸ್ಪರ ನಂಬಿಕೆಯೂ ವಿಶ್ವಾಸವೂ ಕಾಣಬರುತ್ತಿತ್ತು. ಆ ಕಾಲದಲ್ಲಿ ಕಳ್ಳರಿದ್ದಿಲ್ಲ. ಮನೆಗಳಿಗೆ ಬೀಗವಿರಲಿಲ್ಲ. ಪ್ರತಿಯೊಂದು ಹಳ್ಳಿಯು ಸ್ವಪೋಷಿತವಾಗಿದ್ದು ಸಕಲ ಜಾತಿಯವರು ಒಕ್ಕಟ್ಟಿನಿಂದಲೂ ಪ್ರೀತಿಯಿಂದಲೂ ಇದ್ದ ಹಾಗೆ ಕಂಡುಬರುತ್ತದೆ. ಅಶೋಕನು ಪ್ರಜಾಜನರೆಲ್ಲರಿಗೂ ಮಾದರಿಯಾಗಿಯೂ ಧರ್ಮದೇವತೆಯಾಗಿಯೂ ಇದ್ದನು. ಆದುದರಿಂದಲೇ ದೇಶವಿದೇಶೀಯ ಚರಿತ್ರಗಾರರು ಅಶೋಕನ ೪೦ ವರುಷದ ಧರ್ಮರಾಜ್ಯವನ್ನು ವಿಧವಿಧವಾಗಿ ಕೊಂಡಾಡುತ್ತಿರುವರು.

ಎಚ್. ಎನ್.

---

## ಕೊಡಗು ದೇಶದ ರಾಜ್ಯಭಾರ ಕ್ರಮ.

### ಲೇಖಕ:— ಎಮ್. ಜಿ. ನಾಗಪ್ಪ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ವೀರರಾಜನ ಅಂತಃಪುರವನ್ನು ಕಾಯಲಿಕ್ಕೆ ಮೈಸೂರಿನಿಂದ ತರಿಸಿದ ಅನೇಕ ಮಂದಿ ಶಿಖಂಡಿಗಳು ಇದ್ದರು. ಅವನ ಅಂಗರಕ್ಷಣೆಗಾಗಿ ಆಫ್ರಿಕದ ಸಿದ್ದಿಯರು ಅನೇಕರಿದ್ದರು. ಆದರೆ ಅರಮನೆಯ ಕಾವಲುಗಾರರೂ ಸೈನ್ಯದ ಉದ್ಯೋಗಸ್ಥರೂ ಹೆಚ್ಚಾಗಿ ಕೊಡಗರೇ ಆಗಿದ್ದರು. ಈ ಕೊಡಗು ಮುದ್ದೇದಾರರು ವೀರರಾಜನ ಕೆಟ್ಟ ಕೆಲಸಗಳನ್ನು ನೋಡಿ ಸಹಿಸಲಾರದೆ ರಾಜನನ್ನು ಕೊಲ್ಲುವದಕ್ಕಾಗಿ ಆಲೋಚಿಸಿದರು. ದಿವಸವನ್ನೂ ಗಳಿಗೆಯನ್ನೂ ನಿಶ್ಚಯಿಸಿದರು. ಕೋಟೆಯ ಹೆಬ್ಬಾಗಲುಗಳಲ್ಲಿಯೂ ಅರಮನೆಯ ದ್ವಾರಗಳಲ್ಲಿಯೂ ಇರುವ ಕಾವಲುಗಾರರೆಲ್ಲರೂ ಒಟ್ಟುಕೂಡಿದ್ದರಿಂದ ಇವನನ್ನು ಕೊಲ್ಲುವುದರಲ್ಲಿ ಸಂದೇಹವಿರಲಿಲ್ಲ. ಆದರೆ ನಿಶ್ಚಯಿಸಿದ ಗಳಿಗೆಗೆ ಸ್ವಲ್ಪ ಸಮಯವಿರುವಾಗ ವೀರರಾಜನಿಗೆ ಈ ಸಂಗತಿಯು ತಿಳಿಯಿತು. ವೀರರಾಜನು ಹಾಸಿಗೆಯಲ್ಲಿ ಮಲಗಿದೊಡನೆಯೇ ತನ್ನನ್ನು ನಿದ್ದೆ ಬಿದ್ದ ಸಮಯದಲ್ಲಿ ಕೊಲ್ಲಲಿಕ್ಕೆ ಆಲೋಚಿಸಿದ್ದಾರೆಂದು ತಿಳಿಯಿತು. ಅವನು ಕೂಡಲೇ ಎದ್ದು ವಸ್ತ್ರವನ್ನು ಮಡಚಿ ತನ್ನ ಹಾಗೆಯೇ ಕಾಣುವಂತೆ ಮಾಡಿ ಅದರ ಮೇಲೆ ತಾನು ಹೊದ್ದುಕೊಳ್ಳುವ ರತ್ನಕಂಬಳಿಯನ್ನು ಹೊದಿಸಿದನು. ಅಷ್ಟರಲ್ಲಿ ಕೊಡಗರು ಬಂದು ರಾಜನು ಮಲಗಿದ್ದಾನೆಂದು ನೆನಸಿ ಆ ವಸ್ತ್ರವನ್ನು ಚೂರುಚೂರು ಮಾಡಿದರು. ಆದರೆ ಅಷ್ಟರಲ್ಲಿ, ರಾಜನಿಗೆ ಯಾರೋ ಸೂಚನೆ ಕೊಟ್ಟದ್ದರಿಂದ ರಾಜನು ತಲೆತಪ್ಪಿಸಿಕೊಂಡು ಓಡಿಹೋಗಿದ್ದಾನೆಂದು ತಿಳಿಯಿತು. ಕೊಡಗರೆಲ್ಲರೂ ಗಾಬರಿಗೊಂಡರು. ಅಷ್ಟರಲ್ಲಿ ವೀರರಾಜನು ಹೊರಗೆ ಓಡಿಹೋಗಿ ತನ್ನ ಅಂಗರಕ್ಷಕರಾದ ಸಿದ್ದಿಯರನ್ನು ಕರೆಸಿದನು. ಅವರಿಂದ ಕೋಟೆಯ ಹೆಬ್ಬಾಗಲುಗಳನ್ನು ಮುಚ್ಚಿಸಿದನು. ಅರಮನೆಯ ಅಂಗಳದಲ್ಲಿ ೩೦೦ ಮಂದಿ ಕೊಡಗರು ಕೂಡಿದ್ದರು. ಅವರೆಲ್ಲರನ್ನು ಕಡಿದುಹಾಕಬೇಕೆಂದು ವೀರರಾಜನು ಅಪ್ಪಣೆಕೊಟ್ಟನು. ವೀರರಾಜನು ಅರಮನೆಯ ಕಿಟಕಿಯಿಂದ ಗುಂಡು ಹೊಡೆದು ದಂಗೆಗಾರರಲ್ಲಿ ಅನೇಕ ಮಂದಿಯನ್ನು ಕೊಂದುಹಾಕಿದನು. ಕಟುಕರ ಕೈಯಲ್ಲಿ ಸಿಕ್ಕಿದ ಕೊಡಗರೆಲ್ಲರೂ ಕೊಲ್ಲಲ್ಪಟ್ಟರು. ಮುನ್ನೂರು ಮಂದಿ ದಂಗೆಗಾರರಲ್ಲಿ ೨೫ ಮಂದಿಯನ್ನು ತಾನೊಬ್ಬನೇ ಕೊಂದಿದ್ದನೆಂದು ವೀರರಾಜನು ಬರೆದಿರುತ್ತಾನೆ. ಇವರನ್ನು ಕೊಂದ ರಕ್ತದಿಂದ ಆಫ್ರಿಕದ ಸಿದ್ದಿಯರ ಕಾಲುಗಳು ಮುಳುಗಿದ್ದವು. ರಕ್ತವು ಅರಮನೆಯ ಅಂಗಳದಿಂದ ಮಳೆನೀರಿನ ಹಾಗೆ ಹರಿದುಹೋಯಿತು. ಹೀಗೆ ಅರಮನೆಯ ಮುಂಭಾಗದಲ್ಲಿ ಆ ದಿನದ ಬೆಳಗ್ಗಿನ ಜಾವದಲ್ಲಿ ೩೦೦ ಮಂದಿ ಕೊಡಗರು ಮಡಿದಿದ್ದರು. ಕೊಡಗರು, ಆ ದಿನ ಮರಣಪಟ್ಟವರ ಸಂಖ್ಯೆಯು ೮೦೦ ಮಂದಿ ಎಂದು ಹೇಳುತ್ತಾರೆ. ಇದು ನಿಜವಾಗಿರಬಹುದು. ಯಾಕಂದರೆ ಈ ೩೦೦ ಮಂದಿ ಕೊಡಗರ ಕುಟುಂಬದವರನ್ನು ಕೊಲ್ಲಿಸಿ ಅವರ ಹೆಂಡರನ್ನು ಗುಲಾಮರಿಗೆ ಹಂಚಿಕೊಟ್ಟನಂತೆ. ಈ ಕೊಲೆಯು ೧೮೦೭ರ ಅಂತ್ಯದಲ್ಲಿ ಅಥವಾ ೧೮೦೮ರ ಆದಿಭಾಗದಲ್ಲಿ ಆಗಿರಬಹುದು. ಕೊಡಗರು ದಂಗೆ ಎದ್ದಿದ್ದರೆಂದೂ ತಾನು ಅವರೆಲ್ಲರನ್ನೂ ನಾಶಮಾಡಿ ದಂಗೆ ಅಡಗಿಸಿದ್ದೆನೆಂದೂ ವೀರರಾಜನು ಮದರಾಸು ಗವರ್ನರನಿಗೂ, ಗವರ್ನರ್ ಜನರಲನಿಗೂ ಬರೆದು ತಿಳಿಸಿದನು. ಆದರೆ ಈ ಕೊಲೆಯು ವೀರರಾಜನ ತಲೆಗೇರಿದ ಹುಚ್ಚುತನದಿಂದಲೇ ಆದುದೆಂದು ಯಾರಿಗೂ ಸಂಶಯವಿಲ್ಲದೆ ತಿಳಿದಿತ್ತು. ಆದರೂ ಇಂಗ್ಲಿಷರು ಅದರಲ್ಲಿ ಕೈಹಾಕಲಿಲ್ಲ. ಯಾಕೆಂದರೆ ಅವರಿಗೆ ಸರಿಯಾದ ವರ್ತಮಾನವೂ ಸಿಕ್ಕಲಿಲ್ಲ. ಅಲ್ಲದೆ ವೀರರಾಜನು ಅವರ ಮಿತ್ರನಾಗಿದ್ದನು.

೧೮೦೭ನೇ ಇಸವಿ ಅಕ್ಟೋಬರು ತಿಂಗಳಲ್ಲಿ ವೀರರಾಜೇಂದ್ರನು ಗವರ್ನರ್ ಜನರಲ್ ಲಾರ್ಡ್ ಮಿಂಟೋಗೆ ಒಂದು ಕಾಗದವನ್ನು ಬರೆದನು. ತನ್ನ ರಾಣಿಯು ಮೃತಪಟ್ಟಿದ್ದಳೆಂದೂ ತನಗಿದ್ದ ನಾಲ್ಕು ಮಂದಿ ಹುಡುಗಿಯರಲ್ಲಿಯೂ ತನ್ನ ಉತ್ತರಾಧಿಕಾರಿಗಳು ಯಾರಾಗಬೇಕೆಂದು ಅದರಲ್ಲಿ ಬರೆದಿದ್ದನು. ೧೮೦೮ರಲ್ಲಿ ತನ್ನ ಮಗಳು ದೇವಮ್ಮಾಜಿಗೆ ಪಟ್ಟವು ಸಿಕ್ಕುವದೆಂದೂ ಎನೋ ಒಂದು ಸಂಶಯವು ಹುಟ್ಟಿತು. ಗವರ್ನರ್ ಜನರಲನಿಂದ ಆ ಪತ್ರಕ್ಕೆ ಉತ್ತರವು ಬರಲಿಲ್ಲ. ತಮ್ಮಂದಿಯರಾದ ಅಪ್ಪಾಜಿಯೂ ಲಿಂಗರಾಜನೂ ಈ ಮಕ್ಕಳನ್ನು ಕೊಂದು ರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳುವರೆಂದು ಸಂಶಯ ಹುಟ್ಟಿತು. ಕೂಡಲೇ ಅಪ್ಪಾಜಿಯನ್ನು ಕೊಂದು ಅವನ ತಲೆಯನ್ನು ತರುವುದಕ್ಕಾಗಿ ಕೆಲವು ಕೊಲೆಗಾರರನ್ನು ಅಪ್ಪಗಳಕ್ಕೆ ಕಳುಹಿಸಿದನು. ಲಿಂಗರಾಜನನ್ನು ಕೊಂದು ಅವನ ಶಿರಸ್ಸನ್ನು ತರುವುದಕ್ಕಾಗಿ ಇನ್ನೂ ಕೆಲವು ಮಂದಿ ಕಟುಕರನ್ನು ಹಾಲೇರಿಗೂ ಕಳುಹಿಸಿದನು. ಅಷ್ಟರಲ್ಲಿ ವೀರರಾಜನ ತಲೆಗೇರಿದ ಹುಚ್ಚು ಇಳಿಯಿತು. ಅಪ್ಪಾಜಿಯನ್ನೂ ಲಿಂಗರಾಜನನ್ನೂ ಕೊಲ್ಲಬಾರದಾಗಿ ಕೆಲವು ದೂತರನ್ನು ಓಡಿಸಿದನು. ಅಪ್ಪಗಳಕ್ಕೆ ಕಳುಹಿಸಿದ ದೂತರಿಗೆ ಅಲ್ಲಿಂದ ಅಪ್ಪಾಜಿಯ ತಲೆಯನ್ನು ಕಡಿದು ತೆಗೆದುಕೊಂಡು ಬರುವ ದೂತರು ಇದಿರು ಸಿಕ್ಕಿದರು. ಹಾಲೇರಿಯು ಸ್ವಲ್ಪ ದೂರವಿದ್ದುದರಿಂದ ಲಿಂಗರಾಜನಿಗೆ ವರ್ತಮಾನವು ಹೇಗೋ ಸಿಕ್ಕಿ ಅವನು ತಲೆತಪ್ಪಿಸಿಕೊಂಡು ಓಡಿಹೋದನು. ದೂತರು ಅಪ್ಪಾಜಿಯ ತಲೆಯನ್ನು ತಂದು ವೀರರಾಜನ ಮುಂದಿರಿಸಿದರು.

ಅಪ್ಪಾಜಿಯನ್ನು ಕೊಂದುದಕ್ಕಾಗಿ ವೀರರಾಜನಿಗೆ ಬಹಳ ದುಃಖವಾಯಿತು. ಅಪ್ಪಾಜಿಯ ಹೆಂಡಿರುಮಕ್ಕಳನ್ನೂ ಅವನ ಆಸ್ತಿಯನ್ನೂ ಲಿಂಗರಾಜನು ನೋಡಿಕೊಳ್ಳಬೇಕೆಂದು ಅವನಿಗೆ ತಿಳಿಸಿದನು. ಅಪ್ಪಾಜಿಗೆ ೬೦೦೦ ಕಂಠೀರವ ವರಹ ಉತ್ಪತ್ತಿ ಬರುವ ಆಸ್ತಿಯನ್ನು ಜಹಗೀರಾಗಿ ಕೊಟ್ಟಿದ್ದನು. ಲಿಂಗರಾಜನಿಗೆ ೫೦೦೦ ಕಂಠೀರವ ವರಹ ಉತ್ಪತ್ತಿ ಇರುವ ಜಹಗೀರನ್ನು ಕೊಟ್ಟಿದ್ದನು. ಈಗ ಹಾಲೇರಿ ಮತ್ತು ಅಪ್ಪಗಳ ಜಹಗೀರುಗಳನ್ನು ಒಂದಾಗಿ ಮಾಡಿದನು. ವೀರರಾಜನಿಗೆ ಲಿಂಗರಾಜನನ್ನು ನೋಡಬಾರದಾಗುತ್ತಿದ್ದಿಲ. ಇವನು ಬಹಳ ಕೆಟ್ಟವನೆಂದು ವೀರರಾಜನು ಎಣಿಸಿದ್ದನು.

ಮೈಸೂರು ರೆಸಿಡೆಂಟನಾದ ಕೋಲಸಾಹೇಬನಿಗೆ ೧೮೦೯ನೇ ಇಸವಿಯ ಆದಿಭಾಗದಲ್ಲಿ ವೀರರಾಜನಿಗೆ ಹುಚ್ಚು ಹಿಡಿದಿದೆಂಬ ವರ್ತಮಾನವು ಸಿಕ್ಕಿತು. ಅವನು ಡಾಕ್ಟರ್ ಇಂಗಲ್‌ಡ್ಯೂ ಎಂಬ ವೈದ್ಯನನ್ನು ಕೂಡಲೇ ಮಡಿಕೇರಿಗೆ ಕಳುಹಿಸಿದನು. ಈ ವೈದ್ಯನು ಬರುವಾಗ ವೀರರಾಜನ ಅವಸ್ಥೆಯನ್ನು ಹೇಳತೀರದು. ಈ ವೈದ್ಯನು ಬಂದ ಮೇಲೆ ವೀರರಾಜನ ಹುಚ್ಚು ಕಡಿಮೆಯಾಯಿತು. ಫೆಬ್ರವರಿ ತಿಂಗಳಲ್ಲಿ ತಿರುಗಿ ಹುಚ್ಚು ಹೆಚ್ಚಾಗಿ ತನ್ನ ನಾಲ್ಕು ಮಂದಿ ದಿವಾನರನ್ನು ಕೊಲ್ಲಿಸಿದನು. ಮರುದಿವಸ ಆ ದಿವಾನರನ್ನು ಕರೆಕಳುಹಿಸಿದನು. ತನ್ನ ಅಪ್ಪಣೆಯ ಪ್ರಕಾರ ಅವರನ್ನು ಕೊಂದರೆಂದು ತಿಳಿದು ಬಹಳ ದುಃಖಪಟ್ಟು ತನ್ನ ಕೋಣೆಯ ಬಾಗಿಲು ಮುಚ್ಚಿ ಅನ್ನನೀರು ತೆಗೆದುಕೊಳ್ಳದೆ ಕೆಲವು ದಿವಸ ಅಲ್ಲಿಯೇ ಇದ್ದನು. ಹುಚ್ಚು ಹಿಡಿದ ಸಮಯದಲ್ಲಿ ದಿವಾನರನ್ನು ಕೊಂದು ಹೆಸರು ಎಲ್ಲಾ ಮುಳುಗಿಹೋಗಿತ್ತು. ಅದರ ನೋವು ಬಹಳ ಹೆಚ್ಚಾಯಿತು. ಮಿ. ಕೋಲನು ಈ ಸಂಗತಿಯನ್ನು ಗವರ್ನರ್ ಜನರಲನಿಗೆ ಮಾರ್ಚ ೪ನೇ ತಾರೀಖಿನಲ್ಲಿ ಪತ್ರ ಬರೆದು ತಿಳಿಸಿದನು. ಇಂಗ್ಲೀಷರು ತನಗೆ ಅವಮಾನ ಮಾಡುವರೆಂದು ತಿಳಿದು ಒಂದು ಕತ್ತಿಯಿಂದ ತನ್ನ ಕುತ್ತಿಗೆಯನ್ನು ಕೊಯ್ದುಕೊಂಡನು. ಆದರೆ ಅದರಿಂದ ಪ್ರಾಣಹೋಗಲಿಲ್ಲ. ವೈದ್ಯನು ಕೂಡಲೇ ರಕ್ತವನ್ನು ನಿಲ್ಲಿಸಿ ರಾಜನನ್ನು ಸಮಾಧಾನಪಡಿಸಿದನು. ಆದರೂ ವೀರರಾಜನು ಸಮಾಧಾನ ತಪ್ಪಿದವನಾಗಿ ತನ್ನ ಮಗಳಾದ ದೇವಮ್ಮಾಜಿಯಿಂದ ಸ್ವಲ್ಪ ವಿಷವನ್ನು ತರಿಸಿ ಕುಡಿದನು. ಕೂಡಲೇ ಡಾಕ್ಟರ್ ಇಂಗಲಡ್ಯೂ ಎಂಬ ವೈದ್ಯನು ಬೇರೆ ಮದ್ದನ್ನು ಕೊಟ್ಟು ನಿಃಯಂತೆ ಮಾಡಿದನು. ಈ ವೈದ್ಯನು ಈ ಅವಸ್ಥೆಯನ್ನೆಲ್ಲ ರೆಸಿಡೆಂಟನಾದ ಕೋಲಧೊರೆಗೆ ತಿಳಿಸಿದನು. ಕೋಲಧೊರೆಯು ಕೂಡಲೇ ಬಂದು ವೀರರಾಜನ ಸ್ಥಿತಿಯನ್ನು ನೋಡಿ ಬಹಳ ಬೇಸರಪಟ್ಟು ವೀರರಾಜನಿಗೆ ಸಮಾಧಾನ ಮಾಡಿ ದೇವಮ್ಮಾಜಿಗೆ ಪಟ್ಟ ಸಿಕ್ಕುವ ಹಾಗೆ ಮಾತುಕೊಟ್ಟನು. ಅಷ್ಟರಲ್ಲಿ ವೀರರಾಜನು ೧೮೦೭ರಲ್ಲಿ ಬರೆದ ಕಾಗದಕ್ಕೆ ಗವರ್ನರ್ ಜನರಲನಿಂದ ಪ್ರತ್ಯುತ್ತರವು ಬಂತು. ವೀರರಾಜನಿಗೆ ಬಹಳ ಸಂತೋಷವಾಯಿತು. ದೇವಮ್ಮಾಜಿಯ ಹೆಸರಲ್ಲಿ ಮದರಾಸು ಸರಕಾರದ ಖಜಾನೆಯಲ್ಲಿ ೧೬೦,೦೦೦ ವರಹಗಳನ್ನು ಇಡುವಂತೆ ರೆಸಿಡೆಂಟನಾದ ಕೋಲಧೊರೆಯೊಡನೆ ಕೊಟ್ಟನು. ಅನಂತರ ತಿರುಗಿ ಮೊದಲಿನಂತೆಯೇ ಹುಚ್ಚು ಹಿಡಿದು ವೀರರಾಜನು ೧೮೦೯ನೇ ಇಸವಿ ಜೂನ್ ೯ನೇ ತಾರೀಖಿನಲ್ಲಿ ಕಾಲವಾದನು.

[ಸಶೇಷ.]

ಪರೀಕ್ಷಿಸಿರಿ! ಪ್ರಾಪ್ತಿಯಾಗುವದು!!
ಔಷಧಿಯು ಅಗ್ಗ ಶುಶ್ರೂಷೆ ಉತ್ತಮ

## ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದೀಯ ವೈದ್ಯ ಶಾಖೆಗಳಲ್ಲಿ ಮುಖ್ಯವಾಗಿ ಶರೀರದಿಂದ ವೈದ್ಯಶಿರೋಮಣಿ ಎಂಬ ಬಿರುದು ಪಡೆದು ಪ್ರಸಿದ್ಧರಾದ 'ವೈದ್ಯ ಶ್ರೀ ವೈದ್ಯ ರತ್ನ ಪರಮೇಶ್ವರ ಮೂಸಾದ' ಅವರ ಶಿಷ್ಯರಿಗೆ ವಿದ್ಯಾಭ್ಯಾಸ ಹೊಂದಿ [illegible] ರೋಗಗಳಲ್ಲಿ [illegible] ರೋಗಿಗಳು [illegible]

ಮ್ಯಾನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.)



### ನೋಡಿದರೆ ಬಿಡದಿರುವ ಕಾದಂಬರಿಗಳು

೧ ತುಳಸೀದಾಸ (ಧ ಕಾ) ೧ ೮ ೦ ೨ ಜಲಂಧರ ನಾಟಕ (ನಾ ಕಾ) ೦-೧೦-೦ ೩ ಕಾಯಿನಾಡು (ಐ ಕಾ) ೧ ೦ ೦ ೪ ಫಿರಂಗಿಗಳ ಉತ್ಪಾತ (ಐ ಕಾ) ೧ ೦ ೦ ೫ ಭಗವಾನ್‌ದಾಸ (ಐ ಕಾ) ೧ ೦-೦ ೬ ಭಯಂಕರ ಕೊಲೆ (ಪ ಕಾ) ೦ ೧೨ ೦ ೭ ಇಂದುಮುಖಿ (ಪ ಕಾ) ೦ ೧೦ ೦ ೮ ಗೃಹಲಕ್ಷ್ಮಿ (ಸಾ ಕಾ) ೦-೧೨-೦ ೯ ವಡಗಾವದ ವಿಜಯ (ಐ ಕಾ) ೧ ೪ ೦ ೧೦ ಅಂಧಳೆ (ಪ ಕಾ) ೧ ೪-೦ ೧೧ ಸಪ್ತಗುಣ ಕಮಲಾ (ಸಾ ಕಾ) ೧೨ ಸೌಭಾಗ್ಯ ತಿಲಕ (ಸಾ ಕಾ) ೧ ೦ ೦

ಇನ್ನೂ ನೂರಾರು ಒಳ್ಳೆಯ ಪುಸ್ತಕಗಳು ನಮ್ಮಲ್ಲಿ ಸಿಗುವವು. ನಮ್ಮ ಹೊಸ ಕ್ಯಾಟಲಾಗಿಗೆ ಬರೆಯಿರಿ, ಬುಕ್ ಸೆಲ್ಲರರಿಗೆ ಧಾರಾಳವಾದ ಕಮಿಶನ್

ವಿಳಾಸ — ಧಿ ಪ ಕಾಳೆ,
ಶ್ರೀ ಆನಂದವನ, (ಜಿ ಧಾರವಾಡ

Livéliness-zip-pep you [illegible] that all the time from an "Exide" because it is built into it.

Care and thought in the design—keen discrimination in the selection of material and the experience of thousands of users have made

# Exide

THE LONG-LIFE BATTERY
The C P C, Co, Ltd
MANGALORE



**Batliwalla's Preparations Cover All Your Needs.**
A NAME THAT MERIT HAS MADE FAMOUS.
೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

## ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಜಿಬಿಷನ್‌ದೊಳಗೆ ಬೆಳ್ಳಿ, ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಅಗ್ಯು ಮಿಕ್ಸ್ಚರ್ ಪಿಲ್ — ಮಲೇರಿಯಾ ಜ್ವರ ನಿವಾರಕ ರೂ ೧
ಬಾಟ್ಲಿವಾಲರ ಟಾನಿಕ್ — ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪
ಬಾಟ್ಲಿವಾಲರ ಕಿಂಗ್ ಆಫ್ ಪೈನ್ — ತಲೆಶೂಲೆ, ವಾತ ವೇದನೆ, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨
ಬಾಟ್ಲಿವಾಲರ ಕ್ಲೋರೋಡೈನ — ಅತಿಸಾರ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ ಆಣೆ ೧೪
ಬಾಟ್ಲಿವಾಲರ ಕ್ವಿನೀನ ಮಾತ್ರೆಗಳು — ಒಂದು ಗ್ರೇನ ಅಥವಾ ಎರಡು ಗ್ರೇನ ೧ ಬಾಟ್ಲಿಯಲ್ಲಿ ೧೦೦ ಮಾತ್ರೆಗಳು ಇರುತ್ತವೆ
ಬಾಟ್ಲಿವಾಲರ ಟಾನಿಕ ಗುಳಿಗೆಗಳು — ಧಾತು ಪುಷ್ಟಿಕರ ರೂ ೧—೨—೦ ರೂ ೧—೪—೦ ೧—೧೨—೦
ಬಾಟ್ಲಿವಾಲರ ತಲೆ ಶಕ್ತಿ ಔಷಧ ರೂ ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ ರೂ ೦—೬—೦ LIBERAL DISCOUNT TO TRADE

ಕಾಂನಪತ್ರ —CAWASHAPUR, BOMBAY
ಎಲ್ಲಾ ಕಡೆಗಳಲಿ ಡಾ. ಯಚ್ ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
ಏಜಂಟರು ಬೇಕಾಗಿದ್ದಾರೆ. Sayani Road, P O Cadell R ad Bombay No 14



## ಕೇಸರಿಯವರ ರತ್ನತ್ರಯಗಳು.

### 'ಲೋಧ್ರ'

ಶ್ರೀ ಜಯಲಕ್ಷ್ಮಮ್ಮ ಮಿಸ್ಸೆಸ್, ಬಾಲಿಕಾ ಪಾಠಶಾಲೆ, ಕೊಳ್ಳೇಗಾಲ 'ಸುಮಾರು ಮೂರು ವರುಷ ಕಾಲವಾಗಿ ಪ್ರತಿ ತಿಂಗಳಲ್ಲಿಯೂ ರಜಸ್ವಲೆಯಾಗುವುದು ತಪ್ಪಿ, ಎರಡು ವ ಮೂರು ತಿಂಗಳಿಗೊಂದಾವರ್ತಿ ರಜಸ್ವಲೆಯಾಗುತ್ತಿದ್ದೆನು ಇದರಿಂದ ವೈಭಾರ, ನಡುನೋವು, ಕೈಕಾಲು ನೋವು, ನಿಶ್ಶಕ್ತಿ ಮುಂತಾದ ತೊಂದರೆಗಳನ್ನು ಅನುಭವಿಸುತ್ತಿದ್ದೆನು ನಿಮ್ಮ 'ಲೋಧ್ರ' ಎಂಬ ಔಷಧಿಯನ್ನು ಒಂದು ಸೀಸೆ ಕುಡಿದುದರಿಂದ ನನ್ನ ತೊಂದರೆಗಳು ನಿವೃತ್ತಿಯಾಗಿ ಈಗ ಸೌಖ್ಯವಾಗಿದ್ದೇನೆ ಕ್ರಮವಾಗಿ ಪ್ರತಿ ತಿಂಗಳಲ್ಲಿ ರಜಸ್ವಲೆಯಾಗುತ್ತಿದ್ದೇನೆ ನನ್ನಂಥ ಹೆಂಗಸರಿಗೆ ಇದರ ಗುಣವನ್ನು ತಿಳಿಸಲು ಪ್ರಯತ್ನಿಸುತ್ತೇನೆ'

### 'ಅಮೃತ'

ಮಿ॥ ಎ ಸುಬ್ಬರಾಯರು ಹೈಕೋರ್ಟ್ ವಕೀಲರು ಮಂಗಳೂರು.—ನಿಮ್ಮ 'ಅಮೃತ'ವು ಉತ್ತಮವಾದ ರಕ್ತಶೋಧಕೌಷಧವಾಗಿದೆ ಮತ್ತು ಮಲಬದ್ಧತೆಗೆ ವಿಶೇಷ ಪ್ರಯೋಜನಕಾರಿ.

### "ಅರ್ಕ"

ಮ॥ ಚೆಂಗಯ್ಯನವರು, ಧರ್ಮಾದಾಯದ ಬೋರ್ಡ್ ಕಮಿಷನರ್, ಬೆಂಗಳೂರು ಡಿಸ್ಟ್ರಿಕ್ಟ್, ಪೂನಮಲ್ಲಿ ಹೈರೋಡ್ ಮದರಾಸ್— 'ಡಾಕ್ಟರ್ ಕೇಸರಿಯವರಿಂದ ತಯಾರಾದ ಸರ್ವಜನಾದರಣೀಯವಾದ "ಅರ್ಕ" ಎಂಬ ಔಷಧವನ್ನು ನಾನು ಬಹುಕಾಲದಿಂದಲೂ ಬಳಸುತ್ತಿದ್ದೇನೆ. ಇದು ಎಲ್ಲಾ ಬಗೆಯ ಜ್ವರಗಳನ್ನೂ ನಿರಪಾಯವಾಗಿ ನಿಶ್ಚಯವಾಗಿ ಗುಣಪಡಿಸುವುದು. ಈ ಔಷಧವು ಜ್ವರ ನಿಂತನಂತರ ರೋಗಿಯು ಬಲಹೀನನಾಗದಂತೆ ಕಾಪಾಡುವ ಸದ್ಗುಣವುಳ್ಳದ್ದು ಈ ಔಷಧವನ್ನು ಸೇವಿಸಲು ಹಿತವಾಗುವಂತೆ ತಯಾರಿಸಿರುವ ಕಾರಣ ಚಿಕ್ಕ ಮಕ್ಕಳಿಗೂ ಸ್ತ್ರೀಯರಿಗೂ ಪ್ರಯಾಣ ಕಾಲದಲ್ಲಿ ಅನುಕೂಲವಾಗಿದೆ'

## ಕೇಸರಿ ಕುಟೀರಮ್.

ಎಗ್ಮೋರು, ಮದರಾಸು.
ಪೋಸ್ಟ್ ಬಾಕ್ಸ್ 752 ತಂತಿ "ಕೇಸರಿ" ಫೋನ್ 3486.

ಏಜಂಟರು—ಷಾ ಕಂಪೆನಿ, (ದಿ ಉಲನ್ ಮಾರ್ಟ್) ಮಂಗಳೂರು.



The Kanara Watch House Udipi, S. K.



ಗ್ಯಾರಂಟಿಯುಳ್ಳ ವಸ್ತುಗಳು! ಅತೀ ಕಡಿಮೆ ಬೆಲೆ

## ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ವಾಚುಗಳೂ, ಕ್ಲಾಕುಗಳೂ, ಟೈಮ್ ಪೀಸಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೊಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸು, ಫೋನೋಗ್ರಾಫು, ಮತ್ತು ಪೆಟ್ರೊಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು.

ರಿಪೇರಿ ಮಾಡುವಾಗ ಹಂದಿಗೆಯು ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯಪಟ್ಟಿ ಮತ್ತು ಇತರ ಸೂಚನೆಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಮ್ಯಾನೇಜರ್,
ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಪಿ. ಸೊ.—ನಿಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಕೊಡಿಸಿ ಸ್ವಚ್ಛಮಾಡಿಸುವುದರಿಂದ ಸರಿಯಾದ ಸಮಯವು ದೊರಕುವುದು.

# ಹಿಂದುಸ್ಥಾನದ ಇತಿಹಾಸ.

## ಅಶೋಕನ ರಾಜ್ಯಭಾರಕ್ರಮ.

ಅಶೋಕನ ಕಾಲದಲ್ಲಿ ಸ್ಥಿರವಾದ ಮತ್ತು ಕ್ರಮವಾದ ರಾಜ್ಯಭಾರಕ್ರಮವಿದ್ದಂತೆ ಕಂಡುಬರುತ್ತದೆ. ಪಾಟಲೀಪುತ್ರವು ರಾಜಧಾನಿಯಾಗಿಯೂ, ಅಶೋಕನ ನಿವಾಸಸ್ಥಾನವಾಗಿಯೂ ಇತ್ತು. ಆದರೆ ಆತನ ರಾಜ್ಯವು ಬಹು ವಿಸ್ತಾರವಾಗಿದ್ದ ಕಾರಣ ತಕ್ಷಶಿಲಾ, ಉಜ್ಜಯಿನಿ, ಗಿರಿನಾರು, ಸುವರ್ಣಗಿರಿ, ತೋಸಲಿ ಮೊದಲಾದ ಸ್ಥಳಗಳಿಗೆ ಅಶೋಕನು ತನ್ನ ಕುಟುಂಬದವರನ್ನು ತನ್ನ ಪ್ರತಿನಿಧಿಯಾಗಿ ಕಳುಹಿಸಿ ಆ ಮೂಲಕ ದೂರದ ಪ್ರಾಂತ್ಯಗಳನ್ನು ಆಳುತ್ತಿದ್ದನು.

ಪಾಟಲೀಪುತ್ರದಲ್ಲಿ ೩೦ ಸದಸ್ಯರಿಂದೊಡಗೂಡಿದ ಒಂದು ಕಾರ್ಯನಿರ್ವಾಹಕ ಸಭೆಯಿತ್ತು. ಈ ಸಭೆಯು ಐದೈದು ಸದಸ್ಯರಿಂದ ಕೂಡಿದ ಆರು ಶಾಖೆಯಾಗಿ ವಿಭಾಗಿಸಲ್ಪಟ್ಟಿತ್ತು. ಈ ಮಂಡಳಿಯು ಸಾರ್ವಜನಿಕ ಕಾರ್ಯಕಲಾಪಗಳನ್ನು ನಡಿಸುತ್ತಿತ್ತು. ಇದರಲ್ಲಿ ಮೊದಲನೆ ಶಾಖೆಯು ಕಲೆ ಮತ್ತು ಕೈಗಾರಿಕೆ, ಎರಡನೇದು ಅತಿಥಿಸತ್ಕಾರ ಪ್ರಯಾಣ ಸೌಕರ್ಯ, ಮೂರನೇದು ಜನನಮರಣ ಲೆಖ್ಖ ಮತ್ತು ಕಂದಾಯ, ನಾಲ್ಕನೇದು ವ್ಯಾಪಾರ, ತೂಕ, ಲೈಸನ್ಸ್ ಶುಲ್ಕ, ವ್ಯಾಪಾರ ಶುಲ್ಕ, ಐದನೇದು ಕೈಗಾರಿಕೆ, ಆರನೇದು ಆಮದು ವಸ್ತುಗಳ ವಿಚಾರ— ಹೀಗೆ ಬೇರೆಬೇರೆ ಶಾಖೆಗಳು ಬೇರೆಬೇರೆ ವಿಚಾರಗಳನ್ನು ನೋಡಿಕೊಳ್ಳುತ್ತಿತ್ತು.

ಅಶೋಕನ ಪುರೋಭಿವೃದ್ಧಿಯನ್ನು ಎಂದೂ ಬಿಟ್ಟಿರಲಿಲ್ಲ. ಆತನು ಕಾಶ್ಮೀರದಲ್ಲಿ ಶ್ರೀನಗರ, ನೇಪಾಳದಲ್ಲಿ ಲಲಿತಪಟ್ಟಣವೆಂಬ ಅನೇಕಾನೇಕ ಪುರಗಳನ್ನು ಕಟ್ಟಿಸಿದನು. ಅಲ್ಲದೆ ಅಲ್ಲಲ್ಲಿ ಆಶ್ಚರ್ಯಕರವಾದ ಅನೇಕಾನೇಕ ಮನೆಗಳನ್ನೂ ಗೋಪುರಗಳನ್ನೂ ಉದ್ಯಾನವನಗಳನ್ನೂ ಕಟ್ಟಿಸಿದನೆಂದೂ ಅವುಗಳು ಸುಮಾರು ೪೦೦ ವರುಷಗಳ ನಂತರವೂ ಇದ್ದವೆಂದೂ ಚರಿತ್ರೆಗಾರರು ಹೇಳುವರು. ಇದೂ ಅಲ್ಲದೆ ಅಶೋಕನು ತನ್ನ ನಾಡಿನ ಗಡಿಗಳನ್ನು ಸೂಚಿಸುವ ಬಗ್ಗೆ ಅಲ್ಲಲ್ಲಿ ನೆಡಿಸಿದ ಇತಿಹಾಸಯುಕ್ತವಾದ ಕಲ್ಲುಗಂಬಗಳೂ, ಬೌದ್ಧಮತ ಪ್ರಚಾರಕ್ಕಾಗಿ ನಿರ್ಮಿಸಿದ ಸ್ತೂಪ, ಬೆಗೋಡಗಳೆಂಬ ವಿಸ್ತ್ರಗಳೂ, ದೇವಾಲಯಗಳೂ, ಗೋಪುರಗಳೂ ಈಗಲೂ ಕಾಣಸಿಕ್ಕುವು. ಅಶೋಕನ ಕಲಾಕೌಶಲ್ಯವನ್ನೂ, ಮಹತ್ವವನ್ನೂ ಸೂಚಿಸುತ್ತವೆ.

ಅಶೋಕನ ಕಾಲದಲ್ಲಿ ಅನೇಕ ತೆರಿಗೆಗಳಿದ್ದು ಅವುಗಳಲ್ಲಿ ನೆಲತೆರಿಗೆಯೇ ಪ್ರಾಮುಖ್ಯವಾಗಿತ್ತು. ಆದರೆ ಕೃಷಿಕರಿಗೂ, ವ್ಯಾಪಾರಸ್ಥರಿಗೂ, ಪ್ರಯಾಣಿಕರಿಗೂ ಸರಕಾರದಿಂದ ಬಹು ಪ್ರಯೋಜನವು ಸಿಕ್ಕುತ್ತಿತ್ತು. ನೀರಾವರಿ ಕಾಮಗಾರಿಗಳ ಜಾಗ್ರತೆ ನೋಡಲಿಕ್ಕೂ, ಕಾಲುವೆಗಳನ್ನು ದುರಸ್ತಿ ಮಾಡಲಿಕ್ಕೂ ಕಾಡುಗಳನ್ನೂ ಬೀದಿಗಳನ್ನೂ ಹೆದ್ದಾರಿಗಳನ್ನೂ ರಕ್ಷಿಸಲಿಕ್ಕೂ ಬೇರೆಬೇರೆ ಸಂಸ್ಥೆಗಳಿದ್ದವು. ಪ್ರಜೆಗಳ ಸಂಕಷ್ಟಗಳನ್ನು ತಿಳಿದುಕೊಳ್ಳುವುದಕ್ಕೂ ಅವರಿಗೆ ಸಭ್ಯತೆಯನ್ನೂ ಸದ್ಗುಣಗಳನ್ನೂ ಅಹಿಂಸಾತತ್ವವನ್ನೂ ಕಲಿಸಿಕೊಡುವುದಕ್ಕೂ ಪ್ರತ್ಯೇಕವೊಂದು ಸಂಸ್ಥೆಯಿತ್ತು. ಪ್ರಯಾಣಿಕರಿಗೂ ವಿಶೇಷ ಸೌಕರ್ಯಗಳಿದ್ದುವು. ಅಶೋಕನು ಜನಜಾನುವಾರುಗಳಿಗೆ ನೆಳಲನ್ನೀಯುವುದಕ್ಕಾಗಿ ಅಲ್ಲಲ್ಲಿ ಮರಗಳನ್ನೂ ಕಟ್ಟೆಗಳನ್ನೂ ಕಟ್ಟಿಸಿದನು. ಪ್ರಯಾಣಿಕರಿಗೆ ಫಲವಸ್ತುವನ್ನೀಯುವ ಬಗ್ಗೆ ಅಲ್ಲಲ್ಲಿ ಮಾವಿನ ಮರಗಳನ್ನು ನೆಡಿಸಿದನು. ಅಲ್ಲದೆ ನೀರಡಿಕೆಯನ್ನು ಪರಿಹರಿಸುವ ಬಗ್ಗೆ ಎಂದು ಪೈಲುಗಳಿಗೆ ಒಂದರಂತೆ ಬಾವಿಗಳನ್ನು ತೋಡಿಸಿದನು. ತನ್ನ ರಾಜ್ಯದಲ್ಲಿರುವ ರೋಗರುಜನೆಗಳನ್ನು ನಿವಾರಿಸುವ ಬಗ್ಗೆ ಅಲ್ಲಲ್ಲಿ ಧರ್ಮಾಸ್ಪತ್ರೆಗಳನ್ನೂ ಪಶುಚಿಕಿತ್ಸಾಗೃಹಗಳನ್ನೂ ಏರ್ಪಡಿಸಿದನು.

ಅಶೋಕನ ಕಾಲದಲ್ಲಿ ಸಮಸ್ತ ಕಲೆಗಳೂ ವೃದ್ಧಿಯನ್ನು ಹೊಂದಿದವು. ಆತನ ಕಾಲದಲ್ಲಿ ನಿರ್ಮಿಸಲ್ಪಟ್ಟಿರುವ ಕಲ್ಲು ಗಂಬಗಳನ್ನು ನೋಡಿದರೆ ೨೦೦೦ ವರುಷಗಳ ಹಿಂದೆ ಶಿಲ್ಪಶಾಸ್ತ್ರವು ಎಷ್ಟರಮಟ್ಟಿಗೆ ಉನ್ನತಾವಸ್ಥೆಯಲ್ಲಿತ್ತು ಎಂಬುದು ವ್ಯಕ್ತವಾಗುತ್ತದೆ. ಪಾಟಲೀಪುರವು ಸಕಲಕಲಾಕೌಶಲ್ಯಕ್ಕೂ ತವರುಮನೆಯಾಗಿದ್ದಿತು. ರಾಜ್ಯಸಭಾ ಮಂಟಪವು ಕೆತ್ತನೆ ಕೆಲಸಗಳಿಂದಲೂ ಬೆಳ್ಳಿಬಂಗಾರದ ಆಭರಣಗಳಿಂದಲೂ ಬಹು ಉತ್ತಮತರದ ಸುವರ್ಣಮಯವಾದ ಜರತಾರಿ ವಸ್ತ್ರ ಉಡುಪುಗಳಿಂದಲೂ, ಮುತ್ತಿನ ಪಲ್ಲಂಕಿಗಳಿಂದಲೂ ಶೋಭಾಯಮಾನವಾಗಿತ್ತು.

ಆಗಿನ ಕಾಲದ ಪುರುಷರು ಸತ್ಯವಂತರಾಗಿಯೂ ವೀರರಾಗಿಯೂ ಇದ್ದರು. ಸ್ತ್ರೀಯರು ಗುಣವಂತೆಯರಾಗಿದ್ದರು. ಗುಲಾಮಗಿರಿಯು ಇರಲಿಲ್ಲ. ಎಲ್ಲೆಲ್ಲಿಯೂ ಪರಸ್ಪರ ನಂಬಿಕೆಯೂ ವಿಶ್ವಾಸವೂ ಕಾಣಬರುತ್ತಿತ್ತು. ಆ ಕಾಲದಲ್ಲಿ ಕಳ್ಳರಿದ್ದಿಲ್ಲ. ಮನೆಗಳಿಗೆ ಬೀಗವಿರಲಿಲ್ಲ. ಪ್ರತಿಯೊಂದು ಹಳ್ಳಿಯು ಸ್ವಪೋಷಿತವಾಗಿದ್ದು ಸಕಲ ಜಾತಿಯವರು ಒಕ್ಕಟ್ಟಿನಿಂದಲೂ ಪ್ರೀತಿಯಿಂದಲೂ ಇದ್ದ ಹಾಗೆ ಕಂಡುಬರುತ್ತದೆ. ಅಶೋಕನು ಪ್ರಜಾಜನರೆಲ್ಲರಿಗೂ ಮಾದರಿಯಾಗಿಯೂ ಧರ್ಮದೇವತೆಯಾಗಿಯೂ ಇದ್ದನು. ಆದುದರಿಂದಲೇ ದೇಶವಿದೇಶೀಯ ಚರಿತ್ರೆಗಾರರು ಅಶೋಕನ ೪೦ ವರುಷದ ಧರ್ಮರಾಜ್ಯವನ್ನು ವಿಧವಿಧವಾಗಿ ಕೊಂಡಾಡುತ್ತಿರುವರು.

ಎಚ್. ಎಸ್.

---

# ಕೊಡಗು ದೇಶದ ರಾಜ್ಯಭಾರ ಕ್ರಮ.

ಲೇಖಕ:—ಎಮ್. ಜಿ. ಏಗಲ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ವೀರರಾಜನ ಅಂತಃಪುರವನ್ನು ಕಾಯಲಿಕ್ಕೆ ಮೈಸೂರಿನಿಂದ ತರಿಸಿದ ಅನೇಕ ಮಂದಿ ಹಿಜಡಿಗಳು ಇದ್ದರು. ಅವನ ಅಂಗರಕ್ಷಣೆಗಾಗಿ ಆಫ್ರಿಕದ ಸಿದ್ದಿಯರು ಅನೇಕರಿದ್ದರು. ಆದರೆ ಅರಮನೆಯ ಕಾವಲುಗಾರರೂ ಸೈನ್ಯದ ಉದ್ಯೋಗಸ್ಥರೂ ಹೆಚ್ಚಾಗಿ ಕೊಡಗರೇ ಆಗಿದ್ದರು. ಈ ಕೊಡಗು ಹುದ್ದೇದಾರರು ವೀರರಾಜನ ಕೆಟ್ಟ ಕೆಲಸಗಳನ್ನು ನೋಡಿ ಸಹಿಸಲಾರದೆ ರಾಜನನ್ನು ಕೊಲ್ಲುವದಕ್ಕಾಗಿ ಆಲೋಚಿಸಿದರು. ದಿವಸವನ್ನೂ ಗಳಿಗೆಯನ್ನೂ ನಿಶ್ಚಯಿಸಿದರು. ಕೋಟೆಯ ಹೆಬ್ಬಾಗಲುಗಳಲ್ಲಿಯೂ ಅರಮನೆಯ ದ್ವಾರಗಳಲ್ಲಿಯೂ ಇರುವ ಕಾವಲುಗಾರರೆಲ್ಲರೂ ಒಟ್ಟುಕೂಡಿದ್ದರಿಂದ ಇವನನ್ನು ಕೊಲ್ಲುವುದರಲ್ಲಿ ಸಂದೇಹವಿರಲಿಲ್ಲ. ಆದರೆ ನಿಶ್ಚಯಿಸಿದ ಗಳಿಗೆಗೆ ಸ್ವಲ್ಪ ಸಮಯವಿರುವಾಗ ವೀರರಾಜನಿಗೆ ಈ ಸಂಗತಿಯು ತಿಳಿಯಿತು. ವೀರರಾಜನು ಹಾಸಿಗೆಯಲ್ಲಿ ಮಲಗಿದೊಡನೆಯೇ ತನ್ನನ್ನು ನಿದ್ರೆ ಬಿದ್ದ ಸಮಯದಲ್ಲಿ ಕೊಲ್ಲಲಿಕ್ಕೆ ಆಲೋಚಿಸಿದ್ದಾರೆಂದು ತಿಳಿಯಿತು. ಅವನು ಕೂಡಲೇ ಒಂದು ವಸ್ತ್ರವನ್ನು ಮಡಚಿ ತನ್ನ ಹಾಗೆಯೇ ಕಾಣುವಂತೆ ಮಾಡಿ ಅದರ ಮೇಲೆ ತಾನು ಹೊದ್ದುಕೊಳ್ಳುವ ವಸ್ತ್ರ ಕಂಬಳಿಯನ್ನು ಹೊದಿಸಿದನು. ಅಷ್ಟರಲ್ಲಿ ಕೊಡಗರು ಒಂದು ರಾಜನು ಮಲಗಿದ್ದಾನೆಂದು ನೆನೆಸಿ ಆ ವಸ್ತ್ರವನ್ನು ಚೂರು ಚೂರು ಮಾಡಿದರು. ಆದರೆ ಅಷ್ಟರಲ್ಲಿ, ರಾಜನಿಗೆ ಯಾರೋ ಸೂಚನೆ ಕೊಟ್ಟದ್ದರಿಂದ ರಾಜನು ತಲೆತಪ್ಪಿಸಿಕೊಂಡು ಓಡಿಹೋಗಿದ್ದಾನೆಂದು ತಿಳಿಯಿತು. ಕೊಡಗರೆಲ್ಲರೂ ಗಾಬರಿಗೊಂಡರು. ಅಷ್ಟರಲ್ಲಿ ವೀರರಾಜನು ಹೊರಗೆ ಓಡಿಹೋಗಿ ತನ್ನ ಅಂಗರಕ್ಷಕರಾದ ಸಿದ್ದಿಯರನ್ನು ಕರೆಸಿದನು. ಅವರಿಂದ ಕೋಟೆಯ ಹೆಬ್ಬಾಗಲುಗಳನ್ನು ಮುಚ್ಚಿಸಿದನು. ಅರಮನೆಯ ಅಂಗಳದಲ್ಲಿ ೩೦೦ ಮಂದಿ ಕೊಡಗರು ಕೂಡಿದ್ದರು. ಅವರೆಲ್ಲರನ್ನು ಕಡಿದುಹಾಕಬೇಕೆಂದು ವೀರರಾಜನು ಅಪ್ಪಣೆಕೊಟ್ಟನು. ವೀರರಾಜನು ಅರಮನೆಯ ಕಿಟಿಕಿಯಿಂದ ಗುಂಡು ಹೊಡೆದು ದಂಗೆಗಾರರಲ್ಲಿ ಅನೇಕ ಮಂದಿಯನ್ನು ಕೊಂದುಹಾಕಿದನು. ಕಟುಕರ ಕೈಯಲ್ಲಿ ಸಿಕ್ಕಿದ ಕುರಿಗಳಂತೆ ಎಲ್ಲರೂ ಕೊಲ್ಲಲ್ಪಟ್ಟರು. ಮುನ್ನೂರು ಮಂದಿ ದಂಗೆಗಾರರಲ್ಲಿ ಐವತ್ತು ಮಂದಿಯನ್ನು ತಾನೊಬ್ಬನೇ ಕೊಂದಿದ್ದೆನೆಂದು ವೀರರಾಜನು ಬರೆದಿರುತ್ತಾನೆ. ಇವರನ್ನು ಕೊಂದ ರಕ್ತದಿಂದ ಆಫ್ರಿಕದ ಸಿದ್ದಿಯರ ಕಾಲುಗಳು ಮುಳುಗಿದವು. ರಕ್ತವು ಅರಮನೆಯ ಅಂಗಳದಿಂದ ಒಂದು ನದಿಯ ಹಾಗೆ ಹರಿದುಹೋಯಿತು. ಹೀಗೆ ಅರಮನೆಯ ಮುಂಭಾಗದಲ್ಲಿ ಆ ದಿನದ ಬೆಳಗ್ಗಿನ ಜಾವದಲ್ಲಿ ೩೦೦ ಮಂದಿ ಕೊಡಗರು ಮಡಿದಿದ್ದರು. ಕೊಡಗರು, ಆ ದಿನ ಮರಣಪಟ್ಟವರ ಸಂಖ್ಯೆಯು ೮೦೦ ಮಂದಿ ಎಂದು ಹೇಳುತ್ತಾರೆ. ಇದು ನಿಜವಾಗಿರಬಹುದು. ಯಾಕಂದರೆ ಈ ೩೦೦ ಮಂದಿ ಕೊಡಗರ ಕುಟುಂಬದವರನ್ನು ಕೊಲ್ಲಿಸಿ ಅವರ ಹೆಂಡರನ್ನು ಗುಲಾಮರಿಗೆ ಹಂಚಿಕೊಟ್ಟಿರಬಹುದು. ಈ ಕೊಲೆಯು ೧೮೦೭ರ ಅಂತ್ಯದಲ್ಲಿ ಅಥವಾ ೧೮೦೮ರ ಆದಿಭಾಗದಲ್ಲಿ ಆಗಿರಬಹುದು. ಕೊಡಗರು ದಂಗೆ ಎಬ್ಬಿಸಿದ್ದರೆಂದೂ ತಾನು ಅವರೆಲ್ಲರನ್ನೂ ನಾಶಮಾಡಿ ದಂಗೆ ಅಡಗಿಸಿದ್ದೆನೆಂದೂ ವೀರರಾಜನು ಮದ್ರಾಸು ಗವರ್ನರನಿಗೂ, ಗವರ್ನರ ಜನರಲನಿಗೂ ತಿಳಿಸಿದನು. ಆದರೆ ಈ ಕೊಲೆಯು ವೀರರಾಜನ ಕ್ರೂರತನದಿಂದಲೇ ಆದುದೆಂದು ಬ್ರಿಟಿಷ ಸರಕಾರಕ್ಕೆ ತಿಳಿದಿತ್ತು. ಆದರೂ ಇಂಗ್ಲಿಷರು ಅದರಲ್ಲಿ ಕೈಹಾಕಲಿಲ್ಲ. ಯಾಕಂದರೆ ಅವರಿಗೆ ಸರಿಯಾದ ವರ್ತಮಾನವೂ ಸಿಕ್ಕಲಿಲ್ಲ. ಅಲ್ಲದೆ ವೀರರಾಜನು ಅವರ ಮಿತ್ರನಾಗಿದ್ದನು.

೧೮೦೭ನೇ ಇಸವಿ ಅಕ್ಟೋಬರ ತಿಂಗಳಲ್ಲಿ ವೀರರಾಜೇಂದ್ರನು ಗವರ್ನರ ಜನರಲರಿಗೆ ಲಾರ್ಡ ಮಿಂಟೋಗೆ ಒಂದು ಕಾಗದವನ್ನು ಬರೆದನು. ತನ್ನ ರಾಣಿಯು ಮೃತಪಟ್ಟದ್ದರಿಂದಲೂ ತನಗೆ ೪ ನಾಲ್ಕು ಮಂದಿ ಹುಡುಗಿಯರಲ್ಲಿಯೂ ತನ್ನ ಉತ್ತರಾಧಿಕಾರಿಗಳು ಯಾರಾಗಬೇಕೆಂದು. ಅದರಲ್ಲಿ ಬರೆದಿದ್ದನು. ೧೮೦೮ರಲ್ಲಿ ತನ್ನ ಮಗಳಾದ ದೇವಮ್ಮಾಜಿಗೆ ಪಟ್ಟವು ಸಿಕ್ಕುವದೂ ಇಲ್ಲವೋ ಎಂಬ ಸಂಶಯವು ಹುಟ್ಟಿತು. ಗವರ್ನರ ಜನರಲನಿಗೆ ಬರೆದ ಪತ್ರಕ್ಕೆ ಉತ್ತರವು ಬರಲಿಲ್ಲ. ತಮ್ಮಂದಿಯರಾದ ಅಪ್ಪಾಜಿಯೂ ಲಿಂಗರಾಜನೂ ಈ ಮಕ್ಕಳನ್ನು ಕೊಂದು ರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳುವರೆಂದು ಸಂಶಯ ಹುಟ್ಟಿತು. ಕೂಡಲೇ ಅಪ್ಪಾಜಿಯನ್ನು ಕೊಂದು ಅವನ ತಲೆಯನ್ನು ತರುವುದಕ್ಕಾಗಿ ಕೆಲವು ಕೊಲೆಗಾರರನ್ನು ಅಪ್ಪಗಳಕ್ಕೆ ಕಳುಹಿಸಿದನು. ಲಿಂಗರಾಜನನ್ನು ಕೊಂದು ಅವನ ಶಿರಸ್ಸನ್ನು ತರುವುದಕ್ಕಾಗಿ ಇನ್ನೂ ಕೆಲವು ಮಂದಿ ಕಟುಕರನ್ನು ಹಾಲೇರಿಗೂ ಕಳುಹಿಸಿದನು. ಅಷ್ಟರಲ್ಲಿ ವೀರರಾಜನ ತಲೆಗೇರಿದ ಹುಚ್ಚು ಇಳಿಯಿತು. ಅಪ್ಪಾಜಿಯನ್ನೂ ಲಿಂಗರಾಜನನ್ನೂ ಕೊಲ್ಲಬಾರದಾಗಿ ಕೆಲವು ದೂತರನ್ನು ಓಡಿಸಿದನು. ಅಪ್ಪಗಳಕ್ಕೆ ಕಳುಹಿಸಿದ ದೂತರಿಗೆ ಅಷ್ಟರಲ್ಲಿ ಅಪ್ಪಾಜಿಯ ತಲೆಯನ್ನು ಕಡಿದು ತೆಗೆದುಕೊಂಡು ಬರುವ ದೂತರು ಇದಿರು ಸಿಕ್ಕಿದರು. ಹಾಲೇರಿಯು ಸ್ವಲ್ಪ ದೂರವಿದ್ದುದರಿಂದ ಲಿಂಗರಾಜನಿಗೆ ವರ್ತಮಾನವು ಹೇಗೋ ಸಿಕ್ಕಿ ಅವನು ತಲೆತಪ್ಪಿಸಿಕೊಂಡು ಓಡಿಹೋದನು. ದೂತರು ಅಪ್ಪಾಜಿಯ ತಲೆಯನ್ನು ತಂದು ವೀರರಾಜನ ಮುಂದಿರಿಸಿದರು.

ಅಪ್ಪಾಜಿಯನ್ನು ಕೊಂದುದಕ್ಕಾಗಿ ವೀರರಾಜನಿಗೆ ಬಹಳ ದುಃಖವಾಯಿತು. ಅಪ್ಪಾಜಿಯ ಹೆಂಡತಿಮಕ್ಕಳನ್ನೂ ಅವನ ಆಸ್ತಿಯನ್ನೂ ಲಿಂಗರಾಜನು ನೋಡಿಕೊಳ್ಳಬೇಕೆಂದು ಅವನಿಗೆ ತಿಳಿಸಿದನು. ಅಪ್ಪಾಜಿಗೆ ೬೦೦೦ ವರಹದ ವರ್ಷ ಉತ್ಪತ್ತಿ ಬರುವ ಆಸ್ತಿಯನ್ನು ಜಹಗೀರಾಗಿ ಕೊಟ್ಟಿದ್ದನು. ಲಿಂಗರಾಜನಿಗೆ ೬೦೦೦ ವರಹದ ವರ್ಷ ಉತ್ಪತ್ತಿ ಇರುವ ಜಹಗೀರನ್ನು ಕೊಟ್ಟಿದ್ದನು. ಈಗ ಹಾಲೇರಿ ಮತ್ತು ಅಪ್ಪಗಳ ಜಹಗೀರುಗಳನ್ನು ಒಂದಾಗಿ ಮಾಡಿದನು. ವೀರರಾಜನಿಗೆ ಲಿಂಗರಾಜನನ್ನು ನೋಡಿದರಾಗುತ್ತಿದ್ದಿಲ್ಲ. ಇವನು ಒಳ್ಳೇ ಹೆದ್ದನೆಂದು ವೀರರಾಜನು ಎಣಿಸಿದ್ದನು.

ಮೈಸೂರು ರೆಸಿಡೆಂಟನಾದ ಕೊಲಸಾಹೇಬನಿಗೆ ೧೮೦೯ನೇ ಇಸವಿಯ ಆದಿಭಾಗದಲ್ಲಿ ವೀರರಾಜನಿಗೆ ಹುಚ್ಚು ಹಿಡಿದಿದೆಂಬ ವರ್ತಮಾನವು ಸಿಕ್ಕಿತು. ಅವನು ಡೊಕ್ಟರ ಇಂಗಲಡ್ಯೂ ಎಂಬ ವೈದ್ಯನನ್ನು ಕೂಡಲೇ ಮಡಿಕೇರಿಗೆ ಕಳುಹಿಸಿದನು. ಈ ವೈದ್ಯನು ಬರುವಾಗ ವೀರರಾಜನ ಅವಸ್ಥೆಯನ್ನು ಹೇಳತೀರದು. ಈ ವೈದ್ಯನು ಬಂದ ವೇಳೆ ವೀರರಾಜನ ಹುಚ್ಚು ಕಡಿಮೆಯಾಯಿತು. ಫೆಬ್ರುವರಿ ತಿಂಗಳಲ್ಲಿ ತಿರುಗಿ ಹುಚ್ಚು ಹೆಚ್ಚಾಗಿ ತನ್ನ ನಾಲ್ಕು ಮಂದಿ ಪಿವಾಸರನ್ನು ಕೊಲ್ಲಿಸಿದನು. ಮರುದಿವಸ ಆ ದಿವಾನರನ್ನು ಕರೆಕಳುಹಿಸಿದನು. ತನ್ನ ಅಪ್ಪಣೆಯ ಪ್ರಕಾರ ಅವರನ್ನು ಕೊಂದರೆಂದು ತಿಳಿದು ಬಹಳ ದುಃಖಪಟ್ಟು ತನ್ನ ಕೋಣೆಯ ಬಾಗಿಲು ಮುಚ್ಚಿ ಅನ್ನನೀರು ತೆಗೆದುಕೊಳ್ಳದೆ ಕೆಲವು ದಿವಸವಿದ್ದನು. ಹುಚ್ಚು ಹಿಡಿದ ಸಮಯದಲ್ಲಿ ವಿಪ್ರ ಒಂದು ಹೆಸರು ಮುರಿದುಕೊಳ್ಳುತ್ತ. ಅದರ ನೋವು ಬಹಳ ಹೆಚ್ಚಾಯಿತು. ಮಾರ್ಚ ತಿಂಗಳು ಈ ಸಂಗತಿಯನ್ನು ಗವರ್ನರ ಜನರಲನಿಗೆ ಮಾರ್ಚ ೯ನೇ ತಾರೀಕಿನಲ್ಲಿ ಪತ್ರ ಬರೆದು ತಿಳಿಸಿದನು. ಇಂಗ್ಲೀಷರು ತನಗೆ ಅವಮಾನ ಮಾಡುವರೆಂದು ತಿಳಿದು ಒಂದು ಕತ್ತಿಯಿಂದ ತನ್ನ ಕುತ್ತಿಗೆಯನ್ನು ಕೊಯ್ದುಕೊಂಡನು. ಆ ಗಾಯದಿಂದ ಪ್ರಾಣಹೋಗಲಿಲ್ಲ. ವೈದ್ಯನು ಕೂಡಲೇ ರಕ್ತವನ್ನು ನಿಲ್ಲಿಸಿ ರಾಜನನ್ನು ಸಮಾಧಾನಪಡಿಸಿದನು. ಆದರೂ ವೀರರಾಜನು ಸಮಾಧಾನ ತಪ್ಪಿದವನಾಗಿ ತನ್ನ ಮಗಳಾದ ದೇವಮ್ಮಾಜಿಯಿಂದ ಸ್ವಲ್ಪ ವಿಷವನ್ನು ತರಿಸಿ ಕುಡಿದನು. ಕೂಡಲೇ ಡೊಕ್ಟರ ಇಂಗಲಡ್ಯೂ ಎಂಬ ವೈದ್ಯನು ಬೇರೆ ಮದ್ದನ್ನು ಕೊಟ್ಟು ವಾಂತಿಯಾಗುವಂತೆ ಮಾಡಿದನು. ಈ ವೈದ್ಯನು ಈ ಅವಸ್ಥೆಯನ್ನೆಲ್ಲ ರೆಸಿಡೆಂಟನಾದ ಕೋಲಧೊರೆಗೆ ತಿಳಿಸಿದನು. ಕೋಲಧೊರೆಯು ಕೂಡಲೇ ಬಂದು ವೀರರಾಜನ ಸ್ಥಿತಿಯನ್ನು ನೋಡಿ ಬಹು ಬೇಸರಪಟ್ಟು, ವೀರರಾಜನಿಗೆ ಸಮಾಧಾನ ಪಡಿಸಿ ದೇವಮ್ಮಾಜಿಗೆ ಪಟ್ಟ ಸಿಕ್ಕುವ ಹಾಗೆ ಮಾತುಕೊಟ್ಟನು. ಅಷ್ಟರಲ್ಲಿ ವೀರರಾಜನು ೧೮೦೭ರಲ್ಲಿ ಬರೆದ ಕಾಗದಕ್ಕೆ ಗವರ್ನರ ಜನರಲನಿಂದ ಪ್ರತ್ಯುತ್ತರವು ಬಂತು. ವೀರರಾಜನಿಗೆ ಬಹಳ ಸಂತೋಷವಾಯಿತು. ದೇವಮ್ಮಾಜಿಯ ಹೆಸರಲ್ಲಿ ಮದರಾಸು ಸರಕಾರದ ಖಜಾನೆಯಲ್ಲಿ ೧೭೦,೦೦೦ ವರಹಗಳನ್ನು ಇಡುವಂತೆ ರೆಸಿಡೆಂಟನಾದ ಕೋಲಧೊರೆಯೊಡನೆ ಕೊಟ್ಟನು. ಅನಂತರ ತಿರುಗಿ ಮೊದಲಿನಂತೆಯೇ ಹುಚ್ಚು ಹಿಡಿದು ವೀರರಾಜನು ೧೮೦೯ನೇ ಇಸವಿ ಜೂನ್ ೯ನೇ ತಾರೀಕಿನಲ್ಲಿ ಕಾಲವಾದನು.

[ಸಶೇಷ]

53 ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ

# ಉಪಯೋಗಿಸಲ್ಪಟ್ಟ ಔಷಧಗಳು.

1. ಧಾತುಪುಷ್ಟಿ ಲೇಹ—ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಶರೀರಕ್ಕೆ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಜಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವದು ಇತ್ಯಾದಿ ರೋಗಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ಹೊಂದಿಕೊಳ್ಳುವುದು. ಕ್ರಯ ಡಬ್ಬಿ 1ಕ್ಕೆ ರೂ. 2—8—0 ಮೂರು ಡಬ್ಬಿಗಳಿಗೆ ರೂ 7.

2. ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟುದೋಷಗಳು, ಮುಟ್ಟು ಹೆಚ್ಚು ಕಡಿಮೆಯಾಗುವುದು, ಹೊಟ್ಟೆ ನೋವು, ಸೊಂಟ ನೋವು, ಸಂತಾನ ಹೀನತೆ, ಮಲಬದ್ಧತೆ, ಬಿಳಿಜ್ವರ, ಕೈಕಾಲು ಉರಿ ಮತ್ತು ಗರ್ಭಕೋಶದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ, ಆರೋಗ್ಯವನ್ನು ಒದಗಿಸಿ ಮನೋಭಿಲಾಷೆಯನ್ನು ಪೂರೈಸಿರುವವು. ಕ್ರಯ 1 ಬಾಟ್ಲಿ ಔಷಧಕ್ಕೂ ಒಂದು ಡಬ್ಬಿ ಮಾತ್ರೆಗೂ ರೂ. 2—4—0 ಮೂರು ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ 6—4—0.

3. ಮೇಹ ಕುಠಾರ—ಇದು ಮೂತ್ರಸ್ಥಾನದ ಕೆಂಪು ಬಿಳಿದು, ಹಳದಿಯಂತೆ ಹೋಗುವ ರೋಗವನ್ನೂ ವ್ರಣವನ್ನೂ ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ 2—8—0. 3ಕ್ಕೆ ರೂ. 7

4. ಮಲೇರಿಯಾ ನಿವಾರಕ—ದಿನ ಬಿಟ್ಟು ಬರುವ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗಡ್ಡೆಯನ್ನು ಕರಗಿಸಿ, ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1ಕ್ಕೆ ರೂ. 1—8—0. 3 ಬಾಟ್ಲಿಗಳಿಗೆ ರೂ. 4—4—0.

5. ಬಾಲಗ್ರಹ ಗುಟಿಕೆ—ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ. ಬಾಟ್ಲಿ 1ಕ್ಕೆ ಆಣೆ 10. 3ಕ್ಕೆ ರೂ. 1—12—0

6 ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ—ಬಾಣಂತಿಯರಿಗೆ ಬಾಟ್ಲಿ 1ಕ್ಕೆ ರೂ 1—8—0 3ಕ್ಕೆ 4—4—0

ಎಲ್ಲಾ ನಮೂನೆಯ ಔಷಧಗಳು ದೊರೆಯುತ್ತವೆ ... ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧ ... ಕೆಟಲಾಗು ತರಿಸಿ ನೋಡಿರಿ

ಎಮ್. ಗಣಪಯ್ಯ ಎಂಡ್ ಸನ್ಸ್, ರಥಬೀದಿ, ಮಂಗಳೂರು, ದ. ಕ.



# ಮಲೇರಿಯಾ

ಮಲೇರಿಯಾ ಎಂಬ

ಮಾಲೇಜ್ವರ

ಜಗ ಪ್ರಸಿದ್ಧವಾದ ದಿವ್ಯ ಔಷಧ

# ಇಸನೋಫೀಲ



Diamonds! Diamonds!!

**Ramachandra Krishna Shet**

DONGERKERY, MANGALORE.

ಉತ್ಕೃಷ್ಟ ತರಗತಿಯ ಫಸ್ಟ್ಕ್ಲಾಸ (first quality Selected) ಎಸ್ ಸ್ಟೆಡೆಡ್ಡಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಕ್ಕಿರುತ್ತವೆ. ಹೆಚ್ಚಿನ ಮಾಹಿತಿಗೆ ಬರೆಯಿರಿ

ಕೆ. ರಾಮಚಂದ್ರ ಕೃಷ್ಣ ಶೇಟ್, ಜುವೆಲರ್,

ಡೊಂಗರಕೇರಿ, ಮಂಗಳೂರು



For the uplift of the Motherland For the Happiness of the people

# THE BOMBAY LIFE ASSURANCE COMPANY, LTD.,

(ಕ್ರಿಸ್ತಶಕ 1908)

*Chairman*—Sir Lalubhai Samaldas, Kt C. I E J P

Agencies & Branches throughout India, Burma, & Ceylon

AN INDIAN CONCERN UNDER INDIAN MANAGEMENT Offers Attractive Schemes of Assurance with Non-Forfeiture and Permanent Disability Benefits Policy conditions very Liberal

**Yearly Increase in New Business proves its popularity.**

| Year | New Business |
|---|---|
| 192_ | Rs. 22,18,500. |
| 192_ | Rs 32,08,000. |
| 1927 | Rs. 38,77,000 |
| 1928 | Rs 42,62,000 |
| 1929 | Rs 51,22,500 |

| | |
|---|---|
| Total Assurance in Force exceeds over | Rs 2 25,00,000 |
| Total Funds exceeds | Rs. 24 00,000 |
| Yearly Income exceeds | Rs 10,00,000 |
| Claims paid over | Rs 15 00 000 |

**1930 our Valuation Year Take a Policy now and share in the Profits.**

WANTED Energetic & influential Agents in all principal Towns in Mysore State and other unrepresented parts in Madras Presidency Mr K Padmanabha Pai B A, Chief Secretary of the Madras Branch will be in Bangalore City to organise Agencies for Mysore State for about a month Please apply for agency before it is too late either in person or by letter Very attractive terms to really capable Agents

**The Bombay Life Office** Vishweshwarapuram Circle BANGALORE CITY. OR **The Bombay Life Office.** Post Box No 337, MOUNT ROAD, MADRAS

OR

To our Offices in Udipi or Mangalore, South Kanara District



ಶಕ್ತಿವಂತ ಕವಚ.

ಈ ಕವಚವು ... ಯೋಗಿಗಳಿಂದ ಸಿದ್ಧಮಾಡಿಸಿದ್ದು. ಈ ಕವಚದ ... ಈ ಕವಚವನ್ನು ಧರಿಸುವವರಿಗೆ ... ವ್ಯಾಪಾರದಲ್ಲಿ ಲಾಭವೂ, ವ್ಯಾಜ್ಯಗಳಲ್ಲಿ ಗೆಲುವೂ, ಗ್ರಹಚಾರ ದೆಸೆಯಿಂದ ಉಂಟಾಗುವ ... ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದೂ ಮತ್ತು ಇತರ ಬಗೆಬಗೆಯ ಲಾಭಗಳು ಉಂಟಾಗುವವು ...

Sadhan Kuti.

Hatkhala, (*Calcutta*)



# 'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧೀರಜಾ ಮಾತ ದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು ರೋಗ, ಭಯ, ... ಮೊದಲಾದವುಗಳನ್ನು ನೀಗುವದು. ಜನರಿಗೆ ತಮ್ಮ 'ತಾಯಿತ್' ಸಂಧಿಸಿಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧೦ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಶಲ್ ರೂಪಾಯಿ ೫೦ರಿಂದ ೫೦೦ ರೂಪಾಯಿ ವರೆಗೆ ದೈವೀಶಕ್ತಿಯು, ಒಂದು ಸಾರಿ ಪರೀಕ್ಷಿಸಿ ನೋಡಿದರೆ ನಿಮಗೆ ತಿಳಿಯುವದು ಟಪ್ಪಾಲು ಖರ್ಚು ಬೇರೆ.

**ಶಿವರಾಮ ಭಟ್ಟ ತೆಂಗಿನಮನೆ,**

ಸಕ್ಕಿಟ್ಟರ್ ಪೋಸ್ಟ್ ಕಾರ್ ... 



ಈ ಸಂದರ್ಭವನ್ನು ಕಳಕೊಳ್ಳಬೇಡಿರಿ!

ಸ್ಪ್ರಿಂಗ್ ಮತ್ತು ವೈಂಡಿಂಗ್ ಎಲಾರ್ಮ್ ಕ್ಲೋಕ್—ಉಚಿತ.

ಲಿವರ್ ರಿಸ್ಟ್‌ವಾಚ. - (ಚೌಕ ಅಥವಾ ದುಂಡಗೆ) ನಮ್ಮ ಲಿವರ್ ವಾಚನ್ನು ಕೊಳ್ಳುವವರಿಗೆ ... ಕ್ಲೋಕ್ ಉಚಿತ. ... ಟ್ರೇಡ್ ಮಾರ್ಕನ್ನು ... ಸ್ಪೆಶಲ್ ತಯಾರಿ—ನವೀನವಾಗಿ ... ಕ್ರಯ ೫೦/ ರೂಪಾಯಿ ... ರೂ. ೬—೧೪—೦ ...

ಸಿಟಿವಾಚ್ ಕೋ, ನಂಬ್ರ ೩, ... ರೋಡ್, ಗಾಮ್‌ದೇವಿ, ಮುಂಬಾಯಿ


EDITED, PRINTED & PUBLISHED BY V. S. KAMATH AT M T A. SHARADA PRESS, MANGALORE.

ಮುಂಗಡ ವಾರ್ಷಿಕ ವರ್ಗಣಿ: — ವರ್ಷ ಒಂದಕ್ಕೆ ರೂಪಾಯಿ 2 – 0 – 0     Registered No. M. 489.     ಟಪ್ಪಾಲು ಹಾಸಲು ಸೇರಿ ರೂಪಾಯಿ 2 – 13 – 0.

# ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರಕ್ಷೈರ್ಮಹಾರ್ಹ್ಯಸ್ತುತುಹುರ್ನ ದೇವಾ । ನ ದೇವರೇ ಛಿನ್ನುಮಿದೇಶ ಬಂಧಿವರ್ ... ವಿನಾ ನ ... ।।
ದೊರೆಯಲನುಪಮರತ್ನಗಳು ... ಹರುಷವಾಯಿತೆ ... ನಿಶ್ಚಯ ಸುಧೆಕ ... ।।
ಗರಳಕವರಂಜಿದರೆ ಸುಧೆಯನು ... ।।

ಪುಸ್ತಕ ೨೪.     ಮಂಗಳೂರು ತಾ ೫ನೇ ಶುಕ್ರವಾರ ಡಿಸೆಂಬರ ೧೯೩೦     (5 – 12 – '30.)     ಸಂಚಿಕೆ ೪೮


## THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

**Head office:—UDIPI.**     **Branches: —COONDAPOOR & Mangalore**
ಹೆಡ್ ಆಫೀಸು: — ಉಡುಪಿ.     ಶಾಖೆ: — ಕುಂದಾಪುರ. ಮತ್ತು ಮಂಗಳೂರು

Authorised Capital Rs 3,50,000· Subscribed & Called up Rs. 2,25,000·
ನಿಯಮಿತ ಮೂಲಧನ ರೂ. 3,50,000 ಚಂದಾ ಹಾಕಿದ್ದು ಅಪೇಕ್ಷಿಸಿ ವಸೂಲಾದ ಮೂಲಧನ ರೂ. 2,25,000

**Statement of Affairs as on 31st October 1930**

| | Capital and Liabilities | | | Property and Assets | |
|---|---|---|---|---|---|
| 1 | Paid up Capital | Rs 2,24,93[illegible] | 1 | Premises Building Furniture etc | Rs [illegible] |
| 2 | Reserve and other funds | [illegible]400 0 0 | 2 | Investment on G P Notes | „ 3,7 414 5 0 |
| 3 | Deposits | [illegible] | 3 | Investment on Approved Securities | [illegible] 12 0 |
| 4 | Bills for collection as per contra | [illegible] | 4 | Bills for collection | [illegible] |
| 5 | Due to Bankers | [illegible] | 5 | Sundries | [illegible] |
| 6 | Sundries | 81,[illegible] | 6 | Cash in hand & with bankers | [illegible] |
| | Total | [illegible] | | Total | [illegible] |

Office of the Corporation Udipi [illegible]     **N. ANANDA RAO** *Secretary & Manager*






# ಅಮೃತಾಂಜನ.

[illegible]

ರಿಂಗ್‌ವರ್ಮ್ ಮುಲಾಮು — [illegible]

ದಂತಮಂಜನ: — [illegible]

ಅಮೃತಾಂಜನ ಡಿಪೋ,

ಮದರಾಸು     ಮತ್ತು     ಬೊಂಬಾಯಿ.



ಮಕ್ಕಳ ಸಲುವಾಗಿ,

# ಡೋಂಗರ

ಇವರ

# ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ

**ಕೇ. ಟಿ. ಡೋಂಗರೇ ಕಂಪೆನಿ,**
ಗಿರಗಾಂವ, ಮುಂಬಾಯಿ.

ಏಜಂಟರು — ದಿ ಅಲಾಯಿಡ್ ಮಾರ್ಟ್, ಮಂಗಳೂರು.



## ಶ್ರೀ ಸರಸ್ವತೀ ಭಂಡಾರ

| | | |
|---|---|---|
| 1 | ಸಚಿತ್ರ ರಾಮಾಯಣ ಕಥಾ ಸಂಗ್ರಹ | 1 – 8 – 0 |
| 2 | ಮದನಮೋಹನ ರಾಜ ಚರಿತ್ರೆ | 0 – 12 – 0 |
| 3 | ಮಾಧವ ಕಂಕಣ | 4 – 0 – 0 |
| 4 | ವಿಧ್ಯಾಮಂಜರಿ ಕಥೆಗಳು | 2 – 0 – 0 |
| 5 | ಮಹಾಭಕ್ತ ವಿಜಯ | 3 – 0 – 0 |
| 6 | ಶೃಂಗಾರ ಕಸಸ್ಯ ಕಥೆಗಳು | 0 – 12 – 0 |
| 7 | ಮಂಜು ಘೋಷ | 1 – 0 – 0 |
| 8 | ವಿಮಲಾ ದೇವಿ | 1 – 12 – 0 |
| 9 | ಸೌಭಾಗ್ಯ ಲತಿಕ | – 8 – 0 |
| 10 | ಧರ್ಮ ಸಾಮ್ರಾಜ್ಯ | 1 – 4 – 0 |
| 11 | ರಾಮ ರಾಜ್ಯ | 0 – 12 – 0 |
| 12 | ಆನಂದ ಮಠ | 1 – 12 – 0 |
| 13 | ಅಮಲ್ಯ ಚರಿತ್ರೆ | 0 – 12 – 0 |
| 14 | ವಚನ ಭಾರತ | 1 – 8 – 0 |
| 15 | ಇಂಡಿಯನ್ ಪಿನಲ್ ಕೋಡ್ | 4 – 8 – 0 |
| 16 | ಕ್ರಿಮಿನಲ್ ಪ್ರೊಸೀಜರ್ ಕೋಡ್ | 3 – 0 – 0 |
| 17 | ಲ್ಯಾಂಡ್ ರೆವಿನ್ಯೂ ಕೋಡ್ | 1 – 0 – 0 |

ಈ ಮೇಲ್ಕಂಡವುಗಳಲ್ಲದೆ ನಮ್ಮಲ್ಲಿ ಇನ್ನು ಸಾವಿರಾರು ನಮೂನೆಯ ಕನ್ನಡ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗ್ ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶಾಲೆಗಳಲ್ಲಿ ಓದಲು ಯೋಗ್ಯವಾದ ಅನೇಕ ಪುಸ್ತಕಗಳು
ವಿಳಾಸ —     ನಮ್ಮಲ್ಲಿ ಮಾರಾಟವಾಗುತ್ತವೆ

— ಶ್ರೀ ಸರಸ್ವತೀ ಭಂಡಾರ.
ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು, ಅಂಬಲ್ಪಾಡಿ ರೋಡ್, ಮಂಗಳೂರು.

ಮಂಗಳೂರು 15ನೇ ನವಂಬರ 1930

# ಧಿ ಜೆನಿತ್ ಲ್ಯಾಫ್ ಎಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್., ಮುಂಬಾಯಿ.

ಅಯ್ಯಾ!

ನನ್ನ ಮೃತಪಟ್ಟ ಪುರುಷೋತ್ತುಮನೆಂಬ ಮಗನು ಈ ಕೆಳಗಿನ ಕಂಪೆನಿಗಳಲ್ಲಿ ವಿಮೆಮಾಡಿರುವನು.

(1) ಆಸ್ಟ್ರೇಲಿಯದ ನೇಶನಲ್ ಮ್ಯುಚುವಲ್ ಲ್ಯಾಫ್ ಎಸೋಸಿಯೇಶನ್

(2) ಭಾರತ್ ಇನ್‌ಶೂರೆನ್ಸ್ ಕೋ ಲಿಮಿಟೆಡ್.,

(8) ಝೆನಿತ್ ಲ್ಯಾಫ್ ಎಶ್ಯೂರೆನ್ಸ್ ಕೋ ಲಿಮಿಟೆಡ್

ಇದೇ ತಿಂಗಳ 5ನೇ ತಾರೀಕಿಗೆ, ತಮ್ಮ ಹಕ್ಕುಬಾಧ್ಯತೆಗಳನ್ನು ತೋರಿಸುವ ಪತ್ರಗಳು ಎಲ್ಲಾ ಕಂಪೆನಿಗಳಿಗೆ ಕಳುಹಿಸಲಾಗಿರುವವು. ನಿಮ್ಮ ಮುಖ್ಯ ಏಜಂಟರಾದ ಮೆಸರ್ಸ್ ಕಾವರ್ಶರ್ ಎಂಡ್ ಕೋ—ಇವರು ತಮ್ಮ ಈ ಕೆಳಗಿನ ತಂತಿ ಸಮಾಚಾರವನ್ನು 14ನೇ ತಾರೀಕಿಗೆ ಪಡೆದಿರುವರು.

'ಪೋಲಿಸಿ ನಂಬ್ರ 6337 ರಾಜಪ್ಪನವರ ಹಕ್ಕು ಬಾಧ್ಯತೆಯು ಅಂಗೀಕರಿಸೋಣಾಗಿಯದೆ ಪೋಲಿಸಿಯು ಇಶ್ಚಾರ್ಜ ಮಾಡಲಿಕ್ಕೆ ಕಳುಹಿಸಲ್ಪಟ್ಟಿದೆ ಮದು—ಝೆನಿತ್ ಲ್ಯಾಫ್'

ಪೋಲಿಸಿಯು ಈ ಹೊತ್ತು ಬಂದು ತಲ್ಪಿರುವದು ನಾನದನ್ನು ನಿಮ್ಮ ಮುಖ್ಯ ಏಜಂಟರಾದ ಕಾವರ್ಶರ್ ಎಂಡ್ ಕೋ—ಇವರಿಗೆ ಕೊಟ್ಟ ಕೂಡಲೆ, ನನ್ನ ಹಕ್ಕಿನ ಐವೇಜನ್ನು ಸಂಪೂರ್ಣವಾಗಿ ಕೊಟ್ಟಿರುವರು ಆದರೆ ಇತರ ಕಂಪೆನಿಗಳಿಂದ ಹಕ್ಕು ಬಾಧ್ಯತೆಯ ಪತ್ರಗಳು ತಲ್ಪಿದ ವಿಷಯದಲ್ಲಿ ಉತ್ತರವೇ ಇಲ್ಲ

ಝೆನಿತ್ ಕಂಪೆನಿಯು, ಹಣ ಸಂದಾಯದ ವಿಷಯದಲ್ಲಿ ಬಹಳ ತೀವ್ರವಾಗಿರುವುದೆಂದು ಇದು ವರೆಗೂ ಕೇಳಿದ್ದೆನು ಆದರೆ ಈಗ ನನ್ನ ಸ್ವಾನುಭವವು ಮೇಲಿನ ಕಂಪೆನಿಯ ವಿಷಯದಲ್ಲಿ ಸಂಪೂರ್ಣ ವಿಶ್ವಾಸವನ್ನು ಹುಟ್ಟಿಸಿರುವದು

ಇತಿ ನಿಮ್ಮ ನಂಬಿಗಸ್ಥ,

ಎ. ರಾಜಪ್ಪ,

ಪಿ ಡಬ್ಲ್ಯು ಡಿ ಕಂಟ್ರಾಕ್ಟರ್

## ಆಶ್ಚರ್ಯಕರ ಔಷಧಿ

ಅತಿಸಾರ, ಅಜೀರ್ಣದಿಂದಾದ ಎಂತಹ ಮಲಬದ್ಧತೆಯಾದರೂ ಓಡುವದು.

ಏತರಿಂದ?

ಹಿಂದೀ ಔಷಧಿ ಹಿಂದೀಯರಿಗಾಗಿ ಹಿಂದೀಯರಿಂದಲೇ ವ್ಯಾಪಾರಕ್ಕೆ ತರಲ್ಪಟ್ಟಿದು
ಹಿಂದೀಯರಿಂದಲೇ ಕಂಡುಹಿಡಿಯಲ್ಪಟ್ಟಿದು

HEDAURIN
DYSENTERY
CHOLERA CURE

ಔನ್ಸಿನ ಕ್ರಯ ಆಣೆ 0—15—0 2 ಔನ್ಸಿನ ಬಾಟಲಿಗೆ ರೂ 1—12—0

ಪರೀಕ್ಷಿಸಿ ತೃಪ್ತರಾಗಿರಿ!

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಆಫೀಸು,
ಡೊಂಗರಕೇರಿ ರಸ್ತೆ,
ಮಂಗಳೂರು.

ಧಿ ಕಿಣಿ ಡಿಸ್ಪೆನ್ಸರಿ,
ಕೊಡಿಯಾಲಬೈಲ್ ಪೋಸ್ಟು,
ದ ಕನ್ನಡಾ

## ಶರ್ಮಾಸ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಜೋಡುಮಠ ರಸ್ತೆ, ಮಂಗಳೂರು ದ. ಕ.

— ಇವರ —

## ಆಯುರ್ವೇದಿಯ ಸಿದ್ಧೌಷಧಗಳು.

ಅಶೋಕ ಮಿಶ್ರಣ — ನಿಮ್ಮ ಸಂಸಾರವು ಸಾರವುಳ್ಳದಾಗಿ ಪರಿಣಮಿಸಬೇಕೆಂದಿದ್ದರೆ—ಮುಟ್ಟುದೋಷ, ಬಂಜೆತನ, ಬಾಣಂತಿಯರ ರೋಗವೇ ಮೊದಲಾದವುಗಳಿಂದ ನಿಮ್ಮ ದುಃಖಿನಿಯಾಗಿದೆ ನಿಮ್ಮ ಸುಖಿನಿಯಾಗಬೇಕೆಂದು ಬಯಸುವಿರಾದರೆ ಇದೋ ವನಿತೆಯರ ಪ್ರಸನ್ನಜೀವನಕ್ಕೆ ನಂದನವನದಂತಿರುವ 'ಶರ್ಮರವರ ಅಶೋಕ ಮಿಶ್ರಣ' ವನ್ನೇ ಸೇವಿಸಿ ಮರೆಯಬೇಡಿ! ಸೀಸೆಯ ಬೆಲೆ ರೂ 2—0—0 ಮಾತ್ರ ಟಿ ಪಿ ಬೇರೆ

ಮೇಹರಕ್ಷಾಮೃತಂ — ಇದೀಗ ಎಲ್ಲಕಡೆಯ ಮೇಹರೋಗಗಳನ್ನು, ಸ್ತ್ರೀಯರ ಸಂಸರ್ಗದ ರೋಗಗಳನ್ನು ಶೀಘ್ರದಲ್ಲೇ ನಾಶಗೊಳಿಸಬಲ್ಲುದು ಮೂತ್ರಾಶಯದ ಹುಣ್ಣುಗಳಿಗೂ, ಬಿಳಿದು ಇತ್ಯಾದಿ ಸ್ರಾವವಾಗುವದಕ್ಕೂ ದಿವ್ಯವಾದ ಔಷಧಿದು ಈ 'ಮೇಹರಕ್ಷಾಮೃತ'ವು ಅಮೃತ ಸಮಾನವಾಗಿರುವುದೆಂಬುದನ್ನು ನೆನಪಿನಲ್ಲಿಡಿ! ಸೀಸೆಯ ಬೆಲೆ ರೂ 2—0—0 ಮಾತ್ರ ಟಿ ಪಿ ಬೇರೆ

ಇವಲ್ಲದೆ ಇನ್ನೂ ಎಲ್ಲಬಗೆಯ ರೋಗಗಳ ಪರಿಹಾರಕ್ಕೆ ಸಾಟಿಯಿಲ್ಲದ ಶರ್ಮರವರ ಸಿದ್ಧೌಷಧಗಳ ವಿಸ್ತೃತ ಪಟ್ಟಿಯಾಗಿಯೂ ವ್ಯಾಪಾರ ನಿಬಂಧನಾವಳಿಗಳಿಗೂ ಒಂದಾಣೆ ಸ್ಟ್ಯಾಂಪನ್ನು ಕಳಿಸಿ ಬರೆದು ಕೇಳ್ಕೊಳ್ಳಿರಿ!

ಪ್ರಾಮುಖ್ಯ ಏಜಂಟರು —

ಶ್ರೀ ರಾಮಕೃಷ್ಣ ವಿಲಾಸ, ರಥಬೀದಿ ಮಂಗಳೂರು ದ. ಕ.

## ದಕ್ಷಿಣ ಕನ್ನಡ ಜಿಲ್ಲಾ ಪ್ರಚಾರ ಕಮಿಟಿಯು ಪ್ರಬಲ ಪ್ರಚಾರ ಕಾರ್ಯ

ಮೂರು ವಂಗಡಗಳಾಗಿ ಕಳುಹಿಸಲ್ಪಟ್ಟ ಪ್ರಚಾರಕರು ತಾರೀಖು [illegible] ರಿಂದ ಕನಕ ಒಂದು ವಾರದ ಅವರ ಪ್ರಚಾರ ಕಾರ್ಯ ದಲ್ಲಿ ಇತರ ಕೆಲಸ ವಿನಹ ಈ ಕೆಳಗಿನ ಪೂರ್ಣ ಪಂಚಾಯ್ತಿ ವ್ಯಾಖ್ಯಾನಗಳನ್ನು ಮಾಡಿಕೊಂಡಿರುವರು. ಕಾರ್ಯದ ಅನುಭವವು ವಿರುದ್ಧ ಒಂದ ಹಾಗೆ ವ್ಯಾಖ್ಯಾನಗಳು ಹೆಚ್ಚುತ್ತಿ ಇಕ್ಕುವದೆಂದು ನಂಬಿರುವೆವು ಪ್ರಗತಿ ಕಾರ್ಯದಲ್ಲಿ ಸಹಕರಿಸಲು ಮನಸ್ಸಿಲ್ಲ ಎಲ್ಲವರ [illegible] ಯುವ ಉದ್ವಿಗ್ನ ಪ್ರಕಟಿಸುವವಲ್ಲದೆ ಅವರು ಕೂಡಾ ಆವರವರ ಕರ್ತವ್ಯವೆಂದು ಗ್ರಹಿಸಿ ಪ್ರಚಾರಕರು ಬರುವ ಅಗತ್ಯತೋರಿಸದೆ ಅವರವರ ಗ್ರಾಮದ ಪ್ರಾಂತ್ಯಗಳಲ್ಲಿ ಪೂರ್ಣ ಪಂಚಾಯ್ತಿ ಪ್ರತಿಜ್ಞೆಗಳನ್ನು ಪಡೆಯುವ ಕೆಲಸವನ್ನು ಅವರ ಕರ್ತವ್ಯದ ಕಡೆಗೆ ಎಚ್ಚರಿಸುವುದೇ ನಮ್ಮ ಮುಖ್ಯ ಧ್ಯೇಯವೆಂದು ಈಗ ಇಟ್ಟುಕೊಂಡಿರುವೆವು

ಪಡುಬಿದ್ರೆ ಪಾರ್ಟಿ — ಹೆಜಮಾಡಿ ಗ್ರಾಮದಲ್ಲಿ ೪೪ ವ್ಯಾಖ್ಯಾನ. ಮೂಲ್ಕಿ ಪಾರ್ಟಿ ಬಪ್ಪನಾಡ [illegible] ಕಿಲ್ಪಾಡಿ ಗ್ರಾಮಗಳಲ್ಲಿ ೨೨ ವ್ಯಾಖ್ಯಾನ ಸುರತ್ಕಲ್ ಪಾರ್ಟಿ — ಸುರತ್ಕಲ್ ಗ್ರಾಮದಲ್ಲಿ ೩೦ ವ್ಯಾಖ್ಯಾನ

ಪಿ ಸೂ ಪ್ರತಿಜ್ಞಾ ಪತ್ರದ ನಕಲನ್ನು ಈ ಮೊದಲೇ ಪ್ರಕಟಿಸಿರುವೆವು

ದ. ಕ ಜಿಲ್ಲಾ ಪ್ರಚಾರ ಕಮಿಟಿ, ಕುಡಿಕತನದ ಹಾವಳಿಯ ಕುರಿತು ಬರೆಯಲ್ಪಡುವ ನಾಟಕಗಳು, ಚಿತ್ರಪಟಗಳು, ವಿದ್ಯಾರ್ಥಿಗಳಿಗೆ ಕೊಡುವ ಇನಾಮುಗಳ ವಿವರ

ತಾ ೩—೧೧—೩೦ರಲ್ಲಿ ಮಂಜೂರಾದ ಕಮಿಟಿಯ ೧ನೇ ಠರಾವು— ಇನಾಮುಗಳಿಗಾಗಿ ಪ್ರತ್ಯೇಕಿಸಲ್ಪಟ್ಟ ರೂ ೧೦೦ ನೂರು ರೂಪಾಯಿಗಳ ಮೊಬಲಗು ಈ ಕೆಳಗೆ ನಮೂದಿಸಿರುವಂತೆ ಹಂಚಲ್ಪಡುವದು

(i) ಇಂಗ್ಲೀಷು ನಾಟಕ, ಹ್ಯಾಸ್ಕೂಲುಗಳು ಸೆಕೆಂಡರಿ ಟ್ರೈನಿಂಗ್ ಶಾಲೆಗಳು ಮತ್ತು ಕೊಲೇಜುಗಳು, ಇವುಗಳಲ್ಲಿ ಅತ್ಯುತ್ತಮವಾದ ನಾಟಕಕ್ಕೆ — ರೂ ೪೦ (ನಾಲ್ವತ್ತು ರೂಪಾಯಿಗಳ ಒಂದು ಇನಾಮು)

ನಾಟಕವು ಸುಲಭ ಶೈಲಿಯಲ್ಲಿ ಬರೆಯಲ್ಪಟ್ಟು ಅಭಿನಯಿಸಲ್ಪಡುವಾಗ ಒಂದು ತಾಸಿಗೆ ಮೀರಬಾರದು ನಾಟಕದ ಪಾರ್ಟಿಯು ಅದನ್ನು ಬರುವ ೧೯೩೧ನೇ ಜನವರಿ ತಿಂಗಳ ತಾ ೧ರಿಂದ ಫೆಬ್ರವರಿ ತಾ ೧೫ರೊಳಗೆ ಅಭಿನಯಿಸಲು ಸಿದ್ಧವಾಗಿರತಕ್ಕದ್ದು ಸ್ಪರ್ಧಿಸುವವರೆಲ್ಲರಿಗೆ ಅನುಕೂಲವಾದ ಮತ್ತು ಪ್ರತ್ಯೇಕ ವಿಷಯಗಳನ್ನು ಕಮಿಟಿಯು ಒದಗಿಸುವುದು ಮತ್ತು ನಾಟಕವು ಅಭಿನಯಿಸಲ್ಪಡುವಾಗ ಒಂದು ಸಿಲೆಕ್ಷನ್ ಕಮಿಟಿಯು ಸಂಬಂಧಪಟ್ಟ ದಾಖಲೆಗಳನ್ನು ಸಂದರ್ಶಿಸುವುದು

(ii) ಕನ್ನಡ ನಾಟಕ — ಸೆಕೆಂಡರಿ ಶಾಲೆಗಳು ಹಾಯರ್ ಮತ್ತು ಲೋವರ್ ಎಲಿಮೆಂಟರಿ ಶಾಲೆಗಳು ಮತ್ತು ಹಾಯರ್ ಲೋವರ್ ಎಲಿಮೆಂಟರಿ ಟ್ರೈನಿಂಗ ಶಾಲೆಗಳು — ಇವುಗಳಲ್ಲಿ ಅತ್ಯುತ್ತಮವಾದ ನಾಟಕಕ್ಕೆ ರೂ ೧೬/ (ಹದಿನಾರು ರೂಪಾಯಿಗಳ ಇನಾಮು ೧) ಶರ್ತಗಳು ಮೇಲಿನಂತೆ

(iii) ಕನ್ನಡ ಅಥವಾ ತುಳುಭಾಷೆಯಲ್ಲಿ ಬರೆಯಲ್ಪಟ್ಟ ಅತ್ಯುತ್ತಮವಾದ ಸಂಭಾಷಣೆಗಳಿಗಾಗಿ ರೂ ೧೦/— ಹತ್ತು ರೂಪಾಯಿಗಳ ಎರಡು ಇನಾಮುಗಳು ಬರೆಯಲ್ಪಟ್ಟ ಸಂಭಾಷಣೆಯು ಸುಲಭ ಶೈಲಿಯಲ್ಲಿದ್ದು ಉದ್ದವಾಗಿರಬಾರದು

(iv) ಉತ್ತಮ ಚಿತ್ರಪಟಗಳಿಗಾಗಿ ಮೂರು ಮೂರು ರೂಪಾಯಿಗಳ ಎಂಟು ಇನಾಮುಗಳು

ಪಿ ಸೂ. — ಮೇಲೆ ಹೇಳಿದ ಇನಾಮುಗಳ ಪೈಕಿ ಯಾವುದಕ್ಕಾದರೂ ಸ್ಪರ್ಧಿಸುವವರು ಇಲ್ಲದ ಪಕ್ಷಕ್ಕೆ ಬೇರೆ ಇನಾಮುಗಳ ಸಂಖ್ಯೆ ವ ಮೌಲ್ಯವು ಹೆಚ್ಚಿಸಲ್ಪಡಲಾಗುವದು

ಮೂಲ್ಕಿ. 18—11—'30. } ಯಂ. ಆರ್. ಪೂಂಜ, ಅಧ್ಯಕ್ಷ, ದ. ಕ. ಜಿಲ್ಲಾ ಪ್ರಚಾರ ಕಮಿಟಿ, ಮೂಲ್ಕಿ.

## WANTED

Agents who can turn out good business in the towns of Buntw.., Puttur & Karkal and other important centres

Apply without delay to —

**The Bombay Life office,**
Mangalore or Udipi.

N. B.—Ask for our Scheme of Prizes for 1930

## Grand 'Clearing Sale!

ಅಗತ್ಯವಿಲ್ಲದಾಗ ನಮ್ಮ "ಬಿಟ್ಟೊ ಫುಲಾರಾಮ"

ಸುಗಂಧದ ಐದು ಬಾಟಲಿಗಳನ್ನು ಮೂರು ರೂಪಾಯಿಗಳಿಗೆ ಕೊಳ್ಳುವವರು ಈ ಕೆಳಗಿನವುಗಳನ್ನು ಧರ್ಮಾರ್ಥವಾಗಿ ಪಡೆಯುವರು —

1 ಕರವಸ್ತ್ರ, 1 ಫೌಂಟನ್ ಪೇನು, 1 ಕ್ಲಿಪ್, 1 ಹರಿಕಾರದ ಚೂರಿ, 1 ಸುಗಂಧ ಸಾಬೂನು, 1 ಅಂದವಾದ ಸಿಗರೇಟು ಕೇಸು, 12 ಉತ್ತಮ ಮೊಳೆಗಳು, 1 ಕೋಪಿಂಗ್ ಪೆನ್ಸಿಲು, 1 ಪಟ್ಟಿ ಗಡಿಯಾರ ಸೂಜಿಗಳು, 1 ಕನ್ನಡಿ, 1 ಬಾಚಣಿಗೆ, 1 ಚಿತ್ರ, 1 ಸ್ಪ್ರಿಂಗ ಬ್ರಷ್, 1 ಹರಳಿನ ಉಂಗುರ. ಅಂಚೆವೆಚ್ಚ ಆಣೆ 0—8—0

ಇಂಗ್ಲೀಷಿನಲ್ಲಿ ಬರೆಯಿರಿ.

**Indian Stores,**
*6 Beadon Street,*
**CALCUTTA**

## ಶಾಸ್ತ್ರೀಯ
# ಅಮೂಲ್ಯ ಔಷಧಗಳು.

ಅಮೃತಾಕಾಶಂಕುಮ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0. ಅಂಚೆಯು ವೆಚ್ಚ ಬೇರೆ

ಚ್ಯವನಪ್ರಾಶ.—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ ಕ್ಷಯರೋಗ, ಶ್ವಾಸಕಾಸ, ಕ್ಷಯ ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ

### ಕಸ್ತೂರಿಮಿತ್ರಳೇ!
### ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಜೀವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕಂದ ಕಂಟವನ್ನು ಹೊರಗೆ ಹಾಕಿ ಪ್ರಸವದಿಂದ ಅಸ್ವಸ್ಥವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು

ಕ್ರಯ ಬಾಟ್ಲಿ 1ಕ್ಕೆ 2-0-0 ಪೋಸ್ಟೇಜು ವಗೈರೆ ಬೇರೆ

ಹೆಚ್ಚಿನ ಮಾಹಿತಿಗೆ "ಆಯುರ್ವೇದ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ ಕನ್ನಡ



## ಸುಂದರವಾದ ಜರಿಕೆಲಸ ಮಾಡಿದ ಕಾಶಿಯ
## — ಪಟ್ಟೆ ಸೀರೆಗಳು —

ಜರಿ ಅಂಚುಗಳುಳ್ಳ ಪ್ಲೈನ್ ಸೀರೆಗಳ ಮೇಲೆ ಉತ್ತಮ ಜರಿ ಮೇಲೆ ಆಗಲ ರೂ ೩೦ ಲಾಗಾಯತು ರೂ ೧೫೦ರ ವರೆಗೆ ಬುಟ್ಟಿಗಳುಳ್ಳವು ರೂ ೭೫ರಲಾಗ್ಯಾತು ರೂಪಾಯಿ ೩೫೦ ವರೆಗೆ ಪಕೆ ಖಾಬ ವ ದಿ ಎಲವಸ್ತ್ರ ಬಚ್ಚಾಸ್, ಶಾಲು, ಖದ್ದರುಮಾಲು, ಕಸ್ತೂರಿ ಶಿಲಾಜಿತ್ ರುದ್ರಾಕ್ಷಿ ಹಿತ್ತಾಳೆಯ ಸಾಮಾನುಗಳು ಪೂಜಾ ಸಾಮಾಗ್ರಿಗಳು ಇತ್ಯಾದಿ ಸಹಾ ದೊರೆಯುವುವು ಪ್ರೋತ್ಸಾಹಿಸುವವರಿಗೆ ತಕ್ಕ ಪ್ರತಿಫಲ ಸಹ ಕೊಡಲ್ಪಡುವದು. ಹೆಚ್ಚಿಗೆ ವಿಷಯ ಕ್ಯಾಟಲಾಗಿನಿಂದ ಅಥವಾ ಪತ್ರ ಮೂಲಕ

ವಿಳಾಸ —

ರಾವು ವಿಶ್ವನಾಥರಾವ್ ಎಂಡ್ ಬ್ರದರ್ಸ್
ದುರ್ಗಾಘಾಟ್ ಕಾಶೀ ಬನಾರಸ್ ಸಿಟಿ



## The Udipi Mutual Benefit Fund, UDIPI
## ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗ ಬರೆಯಬಹುದು.

ಎಂ. ಮುಖ್ಯಪ್ರಾಣಭಟ್ಟ, ಪ್ರೊಪ್ರೈಟರ್



# The Canara Bank Limited, Mangalore.
## ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

Established July 1906 — 1906 ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

*BRANCHES* -Karkal Kasargod, Cochin Udipi Gangolli Coondapur, Bombay Puttur Calicut & Alleppey

ಬ್ರಾ:-ಕಾರ್ಕಳ, ಕಾಸರಗೋಡು ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲಿಪ

| | |
|---|---|
| Authorised and fully paid up Capital Rs 300,000 - 0 - 0 | ಅಧಿಕಾರಗೊಂಡಲ್ಪಟ್ಟು ಪೂರ್ಣವಾಗಿ ಕಟ್ಟ ಮೂಲಧನವು ರೂ 300,000 0 – 0 |
| Reserve and other sinking Funds Rs 431 732 - 9 - 7 | ಕ್ಷೇಮನಿಧಿ ಮತ್ತು ಇತರ ಫಂಡುಗಳು ರೂ 431,732 9 – 7 |
| Amount invested on G P Notes Rs 817 097 - 2 - 0 | ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ 817,097 – 2 – 0 |
| Rates of interest on fixed deposits at Head Office and Branch 6¼% for 2 Years 6% , 1 Year | ಠಾಯಂ ಡಿಪಾಜಿಟುಗಳ ಮೇಲೆ ಕೊಡಲ್ಪಡುವ ಬಡ್ಡಿದರ ಎರಡು ವರುಷಗಳಿಗೆ ಸೇಕಡಾ 6¼% 1 ವರುಷಕ್ಕೆ ಸೇಕಡಾ 6 |
| Season deposits of Rs 1000/- & above terminable by the end of June are received at 6¼% p a | ಜೂನ್ ಅಂತ್ಯದ ಒಳಗೆ ವ್ಯಾದೆ ಆಗುವ ರೂ 1000/- ದ ಮೇಲ್ಪಟ್ಟ ಸೀಸನ್ ಡಿಪೋಜಿಟುಗಳಿಗೆ ಬಡ್ಡಿದರ ಸೇಕಡಾ 6¼ |

Current Account Deposit received and interest allowed on daily balance of Rs 50 and above that on multiples of Rs o @ 3% from 1st Janauary to oth June and @ 2% from 1st July to 3 st December No nterest will be allowed unless the depositor earns not less than Rs .! during a period of months ending either 30 1 June o 31st December in any year

Except by special arrangement no intere t is allowed on sums exceeding Rs 10 000 in the case of Head Office and Bombay & Cochin Branches and on sums exceeding R 5 000/ in the case of the remaining B anches

Short notice deposits requiring one week notice of withdrawal given at any time after o e month fron the date of depo it are recei ed and intere t allowed at 4 per ann im Interest on such deposits wil cea e on notice

*For further particular p ease apply to —*

Canara Bank Ltd,
*Mangalore 13—10—1930*

***K. Venkat Rao,***
*Secretary*



# The Pangal Nayak Bank, Ltd.

| | | |
|---|---|---|
| Branch Office Mangalore | Head Office Udipi *Established 1920* | Agency Office Cochin |

| | |
|---|---|
| Authorised Capital Rs 2 00,000 | Paid up Capital Rs 1 75,000 |
| Issued Capital Rs 1 75,000 | Reserve and other Funds Rs 1,42 810- |

***Fixed Deposits received for***
***24 months at 6,***
***12, 15, 18 or 21 months at 6***
***6 or 9 months at 5***
***3 months at 5***

***Interest being payable every 3 months.***

Current Deposit Accounts are opened free of charge and interest allowed on Daily balances

*Further information may be had on application to the* SECRETARY *at the* HEAD OFFICE *or to the* AGENT *at the* BRANCH.

Office of the Bank
Udipi 6 10 – 1930

P Laxman Nayak,
Secretary



ತಯಾರಾಗಿವೆ।  ಮಾರಾಟಕ್ಕೆ ಸಿದ್ಧವಿವೆ  ತ್ವರೆಮಾಡಿರಿ

1931ನೇ ಇಸವಿಯ

# ಪ್ರೊಕೆಟ್ ಡಾಯರಿಗಳು.

1931ನೇ ಇಸವಿಯ

| | | | | | | | |
|---|---|---|---|---|---|---|---|
| ಅಂದವಾದ ಕೆಲಿಕೊ ಬ್ಯಾಂಡಿನ ದೊಡ್ಡ ಸೈಜಿನ ಡಯರಿ (ಇಂಗ್ಲೀಷ ಮಟೆರಿನೊಂದಿಗೆ) | | 0 | 0 | ಕೆಲಿಕೊ ಬ್ಯಾಂಡಿನ ಮೀಡಿಯಮ್ ಸೈಜದ್ದು | 0 | [illegible] | [illegible] |
| ಕೆಲಿಕೊ ಬ್ಯಾಂಡು ದೊಡ್ಡದು ಮುಚ್ಚಳದ್ದು | [illegible] | 14 | 0 | „ ಮುಚ್ಚಳದ್ದು | 0 | [illegible] | 0 |
| ಕೆಲಿಕೊ ಬ್ಯಾಂಡು ದೊಡ್ಡದು (ಕನ್ನಡ ಮಟೆರಿನೊಂದಿಗೆ) | 0 | 8 | [illegible] | ಮೀಡಿಯಮ್ ಸೈಜ್ ಸ್ಟಿಫ್ ಬ್ಯಾಂಡ್ ಡಯರಿ | [illegible] | 8 | 0 |
| ಮುಚ್ಚಳದ್ದು | 0 | 14 | 0 | ಸಣ್ಣ ಸೈಜಿನ ಕೆಲಿಕೊ ಬ್ಯಾಂಡ್ ಡಯರಿ | 0 | 6 | 0 |
| | | | | ಮುಚ್ಚಳದ್ದು | | 10 | 0 |
| | | | | ಸ್ಟಿಫ್ ಬ್ಯಾಂಡ್ ಡಯರಿ | 0 | 5 | 0 |

ದೊಡ್ಡ ಸೈಜಿನ ಡಯರಿಯಲ್ಲಿ ಟಪ್ಪಾಲು ಮತ್ತು ಕೋರ್ಟು ವ್ಯವಹಾರ, ಸ್ಟಾಂಪು ಆಕ್ಟು ಮುಂತಾದ ಕ್ರಮಗಳನ್ನು ಕನ್ನಡದಲ್ಲಿ ಕೊಟ್ಟಿರುತ್ತದೆ

ರಖಂ ತೆಗೆದುಕೊಳ್ಳುವವರಿಗೂ, ವ್ಯಾಪಾರಿಗಳಿಗೂ ತುಂಬಾ ಕಮಿಶನು ಕೊಡಲಾಗುವದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

# ಮಹಾತ್ಮಾಜಿಯವರ ಸತ್ಯಾಗ್ರಹ ಸಮಾಚಾರ.

**ತಾರೀಖು ೨೯**

**ಮದರಾಸಿನಲ್ಲಿ.**

ತಮಿಳು ದೇಶದ ಕಾಂಗ್ರೆಸ್ ಕಾರ್ಯನಿರ್ವಾಹಕ ಸಭೆಯ ಸದಸ್ಯರು ಮದರಾಸು ಮಹಾಜನ ಸಭೆಯವರ ಮುಂದಾಳುತನದಲ್ಲಿ ಮದರಾಸು ಪಟ್ಟಣದ 'ಗೋಖಲೆ ಹೋಲ್'ನಲ್ಲಿ ಸಭೆಸೇರಿ 'The call of the country' (ದೇಶದ ಕೂಗು) ಎಂಬ ವಿಷಯದ ಕುರಿತು ಮಿ। ನಾಗೇಶ್ವರರಾವ್ ಪಂತುಲು ಎಂಬವರು ಹೃದಯಂಗಮವಾದ ಒಂದು ಭಾಷಣವಿತ್ತರು. ಅದರ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ.

"ನನ್ನನ್ನು ಈ ಸಭೆಯ ಚೆಯರ್‌ಮೇನರನ್ನಾಗಿ ಚುನಾಯಿಸಿದುದರಿಂದ, ನನ್ನ ಅನೇಕ ಮಂದಿ ಸ್ನೇಹಿತರನ್ನು ಪ್ರಸ್ತುತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸುವಂತೆ ಎಚ್ಚರಿಸಲು ನನಗೊಂದು ಸುಸಂದರ್ಭವು ದೊರಕಿತು. ಭರತಖಂಡದ ರಾಜಕೀಯ ವಿಷಯಗಳಲ್ಲಿ ಯಾವ ಬದಲಾವಣೆಗಳು ಉಂಟಾದುವೆಂದರೆ— ಭಾರತೀಯರು ಇಂಡಿಯಾ ಸರಕಾರದೊಡನೆ ಕೇಳುತ್ತಿರುವ ಎಲ್ಲಾ ಪ್ರಶ್ನೆಗಳಿಗೂ ಯೋಗ್ಯ ಉತ್ತರವು ದೊರೆತಂತಾಯಿತು. ಆಬಾಲವೃದ್ಧ ಭಾರತೀಯರಲ್ಲಿ ಪ್ರತಿಯೊಬ್ಬನು ಭರತಖಂಡದ ಬಂಧವಿಮೋಚನಾಕಾರ್ಯದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸತಕ್ಕದ್ದು, ಮತ್ತು ಹಾಗೆ ಮಾಡುವದು ಭಾರತೀಯರ ಕರ್ತವ್ಯವು. ತರುಣದೇಶಸೇವಕರಾದರೂ ಕೂಡ, ತಮ್ಮ ಮೇಲೆ ಹೊರಿಸಲ್ಪಡುವ ಸರಕಾರದ ಕಠಿಣ ಶಿಕ್ಷೆಯನ್ನು ಲಕ್ಷಿಸದೆ, ಎದೆಯೊಡ್ಡಿ ಜೈಲನ್ನು ಪ್ರವೇಶಿಸುತ್ತಿರುವರು. ಪ್ರಾಯಬಾರದ ಅನೇಕ ಎಳೆ ಹುಡುಗರನ್ನು ಸರಕಾರವು ಸತ್ಯಾಗ್ರಹದ ಅಪರಾಧದ ಮೇಲೆ ಬೋರ್ಸ್ಟಲ್ ಶಾಲೆಗಳಿಗೆ ಕಳುಹಿಸುತ್ತಿರುವದು. ಈ ವಿಷಯಗಳನ್ನು ಪರ್ಯಾಲೋಚಿಸಿದರೆ ಸರಕಾರವು ಸತ್ಯಾಗ್ರಹ ಚಳವಳವನ್ನು ನಾಶಪಡಿಸಲು ಎಷ್ಟು ಸಾಧನಮಾಡುತ್ತಿರುವುದೆಂದು ವಿದಿತವಾಗುವದು. ಇಂಡಿಯನರು ಕೇಳುವ ಪ್ರಶ್ನೆಯು ಸ್ವಾತಂತ್ರ್ಯವನ್ನೊಂದೇ ಅಥವಾ ಸಾಮಂತ ಸ್ವರಾಜ್ಯವನ್ನು ಸರಿಸಿರಲಿ— ಯಾವ ಪ್ರಶ್ನೆಗಾದರೂ ಯೋಗ್ಯ ಉತ್ತರವನ್ನೀಯುವದರಲ್ಲಿ ಇಂಡಿಯಾ ಸರಕಾರವು ಇನ್ನೂ ಆಲೋಚನೆಯಲ್ಲೇ ಬಿದ್ದಿರುವದು. ಅದಂತಿರಲಿ! ಭಾರತೀಯರು ಭರತಖಂಡದ ಬಂಧವಿಮೋಚನೆಯ ಕುರಿತು ಆಲೋಚಿಸಬೇಕಾದುದು ಅವರ ಮೊದಲನೆಯ ಕರ್ತವ್ಯವು. ಮುಂಬಾಯಿ ಗುಜರಾತ್ ಮತ್ತು ಉತ್ತರ ದೇಶಗಳ ಕರ್ತವ್ಯಸಾಧನೆಯು ನಿದರ್ಶನೀಯವಾಗಿದೆ. ಇಂಡಿಯಾ ಸರಕಾರದಿಂದ ಜಾರಿಗೆ ತರಲ್ಪಟ್ಟ ಹೊಸಹೊಸ ಕಾನೂನುಗಳ ನಿರ್ಬಂಧವು ಭರತಖಂಡದ ಜನತೆಯನ್ನು ಚಿತ್ರ ವಿಚಿತ್ರ ಚಕಿತವನ್ನಾಗಿ ಮಾಡಿತು. ದೇಶದ ಏಳಿಗೆಯನ್ನಪೇಕ್ಷಿಸುವ ಜನರನ್ನು ಬಗ್ಗು ಬಡಿಯಬೇಕೆಂಬುದೇ ಸರಕಾರದ ಧ್ಯೇಯ. ಹಾಗೂ ಸರಕಾರದ ದಬ್ಬಾಳಿಕೆಗಳನ್ನು ಎದುರಾಯಿಸುವಷ್ಟು ಧೈರ್ಯವಿಲ್ಲದ ಬಲಹೀನರಾದ ಭಾರತೀಯರು ಕಟ್ಟಕಡೆಗೆ ಸ್ವದೇಶೀ ವ್ರತವನ್ನಾದರೂ ಕೈಕೊಳ್ಳುವರೆಂದು ನಂಬುತ್ತೇನೆ. ಮದರಾಸ್ ಪಟ್ಟಣದಲ್ಲಿ ಸತ್ಯಾಗ್ರಹ ಚಳವಳವು ಶಾಂತವಾಗಿರುವದೆಂದು ಮದರಾಸ್ ಸರಕಾರವು ಕಳುಹಿಕೊಟ್ಟ ರಿಕಾರ್ಡುಗಳಲ್ಲಿ ಉಲ್ಲೇಖಿಸಲ್ಪಟ್ಟಿರುವದು. ಇದೊಂದು ಕೊರತೆಯಲ್ಲವೇ – ಮದರಾಸ್ ಜನತೆಗೆ? ಆದುದರಿಂದ ಇನ್ನಾದರೂ ಮದರಾಸ್ ನಗರವು ಇಂಡಿಯಾದ ಬಂಧವಿಮೋಚನಾಕಾರ್ಯದಲ್ಲಿ ಹಿಂದುಳಿಯುವದೇ? ಭಾರತೀಯರಿಂದ ಮೊದಲು ಮಾಡಲ್ಪಟ್ಟ ಬಹಿಷ್ಕಾರ ಚಳವಳವು ಹೆಚ್ಚಿನ ಫಲಕಾರಿಯಾಗಿರುವದು" ಎಂದು ಮೊದಲಾಗಿ ಹೇಳಿದರು.

**ತಾರೀಖು ೩೦**

**ತಿರೂರಿನಲ್ಲಿ**

ಮುಂಬಾಯಿಗೆ ಸೇರಿದ ಗುಜರಾತೀ ಮಹಿಳೆಯಾದ ಶ್ರೀಮತಿ ಪದ್ಮಾವತಿ 'ಅಮ್ಮಾಳ್' ಎಂಬವರ ಮುಂದಾಳುತನದಲ್ಲಿ ರಾಷ್ಟ್ರಧ್ವಜಾರೋಹಣ ಉತ್ಸವವು ಜರಗಿತು. ಪೋಲೀಸರು ಅಲ್ಲಲ್ಲಿನ ಪ್ರದರ್ಶನದ ಮೇಲೆ ಮೆರವಣಿಗೆಯನ್ನು ಮಾಡಬಾರದೆಂದು ರಾಷ್ಟ್ರಧ್ವಜಾರೋಹಣದಲ್ಲಿ ಭಾಗವಹಿಸಿದವರನ್ನು ಆತಂಕಿಸಿದರು. ಆದರೂ ಕೂಡ, ಕೆಲಸವು ಪೂರ್ತಿಯಾಯಿತು. ಅನೇಕರ ದಸ್ತಗಿರಿಗಳು ಆದವು. ಮುಖ್ಯವಾಗಿ ಶ್ರೀ। ಪದ್ಮಾವತಿಯಮ್ಮನವರನ್ನೇ ಕೈದುಮಾಡಿರುವರು. ಅವರು ಕೊಟ್ಟ ಸಂದೇಶದ ಸಾರವನ್ನು ಈ ಕೆಳಗೆ ಕೊಡಲಾಗಿದೆ.

"ನಾನು ಗುಜರಾತಿನಿಂದ ಬಂದಿರುವೆನಾದರೂ ಕೂಡ, ತಮಿಳು ದೇಶದ ನಿವಾಸಿಕಳಂತಿರುವೆನು. ತಮಿಳು ನಾಡಿನಲ್ಲೇ ಹುಟ್ಟಿ ಬೆಳೆದಿರುವೆನೆಂಬುದೇ ನನ್ನ ಭಾವನೆ. ಆದುದರಿಂದ ತಮಿಳು ನಾಡಿನ ಸಹೋದರ ಸಹೋದರಿಯರಿಗೆ ನಾನು ಹೇಳುವದೇನೆಂದರೆ.— ಇನ್ನಾದರೂ ಎಚ್ಚರಗೊಳ್ಳಿರಿ, ಸಬರ್ಮತೀ ಆಶ್ರಮದ ಯೋಗಿವರ್ಯರಿಂದ ಹೂಡಲ್ಪಟ್ಟ ಸತ್ಯಾಗ್ರಹ ಸಮರರಂಗದಲ್ಲಿ, ಮಾನವಕುಲದ ಬಂಧವಿಮೋಚನೆಗಾಗಿ ಅಮೂಲ್ಯ ಸಾಹಸವನ್ನು ತೋರ್ಪಡಿಸಿರಿ; ಭಾರತ ಮಹಿಳೆಯರು ಮೌನವಾಗಿ ಸ್ವಾರ್ಥತ್ಯಾಗ ಮಾಡಿ, ದೇಶದ ಹಿತಕ್ಕಾಗಿ ಎಲ್ಲಾ ಕಷ್ಟಗಳನ್ನು ಸಹಿಸುವರೆಂಬುದರಲ್ಲಿ ಸಂದೇಹವಿಲ್ಲ. ತಮಿಳು ದೇಶದ ನನ್ನ ಭಗಿನೀ ವರ್ಗವು ಹೆಚ್ಚಿನ ಜವಾಬ್ದಾರಿಕೆಯನ್ನು ಹೊಂದಿರತಕ್ಕದ್ದೇ ಬೇಕು. ಆದುದರಿಂದ ಅಂತಹವರು ಸತ್ಯಾಗ್ರಹ ಸಮರರಂಗದಲ್ಲಿ ಯೋಗ್ಯವಾದ ಭಾಗವಹಿಸಿ ಯಶಸ್ವಿಗಳಾಗಬೇಕೆಂದು ನನ್ನ ಅಪೇಕ್ಷೆ" ಎಂದು ಹೇಳಿ ಜೈಲನ್ನು ಸೇರಿದರು.

**ಮುಂಬಾಯಿಯಲ್ಲಿ**

ಪ್ರತಿ ತಿಂಗಳಲ್ಲಿಯೂ ನೆರವೇರಿಸಬರುವ ರಾಷ್ಟ್ರಧ್ವಜಾರೋಹಣ ಸಮಾರಂಭವು ಎಂದಿನಂತೆ ಕಳೆದ ತಿಂಗಳ ಅಂತ್ಯದಲ್ಲಿಯೂ ನೆರವೇರಿತು. ಮುಂಬಾಯಿ ಸಮರ ಸಂಸ್ಥೆಯು ಸಮಾರಂಭದ ಕಾರ್ಯಭಾಗವನ್ನು ನಿರ್ವಹಿಸುವದರಲ್ಲಿ ಸಂಪೂರ್ಣ ಸಹಾನುಭೂತಿಯನ್ನು ತೋರಿಸಿರುವದು. ಪೋಲೀಸರು ಸಮಾರಂಭ ಸಂಭ್ರಮಗಳನ್ನು ಆತಂಕಿಸಬೇಕೆಂದು ಅತ್ಯುತ್ಸಾಹಪೂರ್ವಕವಾಗಿದ್ದರೂ ಕೂಡ ಹೆಚ್ಚಿನ ತೊಂದರೆಗಳನ್ನುಂಟುಮಾಡಲಿಲ್ಲವೆಂದು ತಿಳಿದುಬರುತ್ತದೆ. ಆದರೆ ಧ್ವಜೋತ್ಸವದ ಕೊನೆಯಲ್ಲಿ ಪೋಲೀಸರು ಕಾಣಿಸಿಕೊಂಡರು. ಇಂಡಿಯನ್ ಮರ್ಕಂಟೈಲ್ ಬ್ಯಾಂಕಿಗೆ ಹೋಗಬೇಕೆಂದು ಹೊರಟ ಸತ್ಯಾಗ್ರಹಿಗಳನ್ನು ಪ್ರತಿಬಂಧಿಸಿದರು. ಸತ್ಯಾಗ್ರಹಿಗಳು ಉತ್ಸಾಹಭರಿತರಾಗಿ ಮುಂದರಿಯುತ್ತಿದ್ದರು. ಕಟ್ಟಕಡೆಗೆ, ಜನಸಮುದಾಯವನ್ನು ಚದರಿಸುವದಕ್ಕಾಗಿ ಪೋಲೀಸರು ಲಾಠಿಚಾರ್ಜ ಮಾಡಬೇಕಾಯಿತಂತೆ! ಪರಿಣಾಮವಾಗಿ ಸುಮಾರು ೨೫ ಮಂದಿಯು ಸಂಕಷ್ಟಗಳಿಗೀಡಾಗಿರುವರೆಂದು ತಿಳಿದುಬರುತ್ತದೆ.

ರಾಷ್ಟ್ರಧ್ವಜದ ಅರೆಹೇರ ಸಮಾರಂಭವು ಶಾಂತರೀತಿಯಿಂದ ಪೂರ್ತಿಗೊಂಡರೂ ಕೂಡ, ಎಸ್ಪ್ಲನೇಡ್ ಪೋಲೀಸ್ ಸ್ಟೇಶನ್ ಒಳಯಲ್ಲಿ ಅನೇಕರು ಗುಂಪು ಕೂಡಿ, ಕೆಲವು ಪೋಲೀಸರು ಕಾನ್‌ಸ್ಟೇಬಲರ ಮೇಲೆ ಕಲ್ಲೆಸೆದರಂತೆ! ಕಲ್ಲಿನ ಏಟು ಪೋಲೀಸರಿಗೆ ಗಾಯವಾಗಿರುವದು. ಆದುದರಿಂದ ಪೋಲೀಸರು ಮತ್ತೊಮ್ಮೆ ಲಾಠಿಗಳನ್ನು ಉಪಯೋಗಿಸಿದರು. ಸುಮಾರು ೩೦ ಮಂದಿ ಜಖಂ ಹೊಂದಿದರು. ಅದೇ ದಿವಸದಲ್ಲಿ ೬೫ ಮಂದಿಗೆ ಗಾಯವಾಗಿರುವದೆಂದೂ ಆಸ್ಪತ್ರೆಗೆ ಸಾಗಿಸಲ್ಪಟ್ಟ ಮಂದಿಯನ್ನು ಆಸ್ಪತ್ರೆಗೆ ಕಳುಹಿಸಿ, ಮಿಕ್ಕವರನ್ನು ಅವರವರ ಮನೆಗೆ ಕಳುಹಿಸಿರುವರೆಂದೂ ತಿಳಿಯಬರುತ್ತದೆ.

**ಕರಾಚಿಯಲ್ಲಿ.**

ಪೋಲೀಸರ ಲಾಠೀಚಾರ್ಜ ನಡೆದು ಸುಮಾರು ೧೦೦ ಮಂದಿ ಜಖಂ ಹೊಂದಿರುವರು. ಕಲವರ ಪೆಟ್ಟು ಗಾಯಗಳು ಭಯಂಕರವಾಗಿರುವವು. ತಾ ೨೯ನೇ ದಿನ ಎಂದಿನಂತೆ ಕೆಲವು ನವಜೀವನಭಾರತ ಸಭೆಗೆ ಸೇರಿದ ಸ್ವಯಂಸೇವಕರು ಸ್ವದೇಶೀ ಉಪ್ಪನ್ನು ಮಾರಾಟ ಮಾಡುವದಕ್ಕಾಗಿ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಹೋಗಿದ್ದರು. ನ್ಯಾಯಸ್ಥಾನವು ಆಧುನಿಕವಾಗಿ ಗಲಾಟೆ ಪೋಲೀಸರಿಂದ ಕಾಯಲ್ಪಡುತ್ತಿತ್ತು. ಒಬ್ಬ ಸ್ವಯಂಸೇವಕನ ಸ್ವದೇಶಿ ಉಪ್ಪನು ಮಾರುತ್ತ ಹೋದಂತೆ ಅವನನ್ನು ದಸ್ತಗಿರಿ ಆದ ತಕ್ಷಣ ತಮಾಷೆಯ ಜನರು ಮುಂದರಿಸಿ ಹೆಚ್ಚು ಜನಸಂದಣಿ ಸೇರಿತು. ಆ ಕೂಡಲೆ ಪೋಲೀಸ್ ಸುಪರಿಂಟೆಂಡೆಂಟರು ಲಾಠೀಚಾರ್ಜ ಮಾಡಲು ಹುಕುಮಿತ್ತರು. ಬಲವಾದ ಲಾಠಿ ಏಟುಗಳ ದೆಸೆಯಿಂದ ಅನೇಕರು ಜಖಂ ಹೊಂದಿರುವರು.

**ತಾರೀಖು ೧**

**ಬನಾರಿಸದಲ್ಲಿ**

ಸತ್ಯಾಗ್ರಹದ ನೆವನದಿಂದ ವಿಶ್ವವಿದ್ಯಾಲಯಕ್ಕೆ ಒದಗುವ ವರ್ಷಾವಧಿ ಸರಕಾರೀ ಗ್ರಾಂಟನ್ನು ವಿದ್ಯಾಲಯದ ಅಧಿಕಾರಿಗಳು ಇನ್ನೂ ಪಡೆಯಲಿಲ್ಲ. ಈ ಕುರಿತು ಶಾಲಾಧಿಕಾರಿಗಳು ಸರಕಾರದವರಿಂದ ಯಾವ ರೀತಿಯ ಉತ್ತರವನ್ನಾದರೂ ಹೊಂದಲಿಲ್ಲ. ಯುನಿವರ್ಸಿಟಿಯ ಕೆಲಸವು ಮುಂದರಿಯುತ್ತಿರುವದು. ಶಾಲಾ ಕಟ್ಟೋಣದ ಮೇಲೆ ರಾಷ್ಟ್ರಧ್ವಜವು ಇನ್ನೂ ಹಾರಾಡುತಿರುವದು.

**ಮುಂಬಾಯಿ.**

ಗರದ ಪ್ರಖ್ಯಾತಿಪಟ್ಟ 'ಬೊಂಬಾಯಿ ಕ್ರೊನಿಕಲ್' ಪತ್ರಿಕೆಯ ಸಂಪಾದಕ ಮತ್ತು ಪ್ರಚಾರಕರಾದ ಮಿ. ಎನ್. ಎ ಬ್ರೆಲ್ವಿ ಮತ್ತು ಎಸ್. ಪಿ. ಕಾಪಾಡಿಯಾ ಎಂಬಿಬ್ಬರನ್ನು ರಾಜದ್ರೋಹಕರವಾದ ಕಾಂಗ್ರೆಸ್ ಲೇಖನಗಳನ್ನು ಪ್ರಚಾರಪಡಿಸಿದ್ದಕ್ಕಾಗಿ, ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಸುತ್ತಿದ್ದರಷ್ಟೆ! ಅವರ ತನಿಖೆಯು ಮುಗಿಯಿತು. ಮೊದಲನೇಯವರಿಗೆ ೫ ತಿಂಗಳ ಸಾದಾ ಶಿಕ್ಷೆ ಮತ್ತು ರೂಪಾಯಿ ೨೫೦೦ ಜುಲ್ಮಾನೆ; ಎರಡನೆಯವರಿಗೂ ಕೂಡ ೫ ತಿಂಗಳ ಸಾದಾ ಸಜೆಯು ವಿಧಿಯಾಗಿರುವದು. ಆದರೆ ಜುಲ್ಮಾನೆಯ ಐವೇಜನ್ನು ಮಾತ್ರ ರೂ ೧೫೦೦ಕ್ಕೆ ಇಳಿಸಿರುವರೆಂದು ತಿಳಿದುಬರುತ್ತದೆ. ಮೊಕದ್ದಮೆಯ ತನಿಖೆ ಸಮಯದಲ್ಲಿ ಮಿ. ಬ್ರೆಲ್ವಿಯವರ ಆಪ್ತೇಷ್ಟರೂ, ಬಂಧುಬಳಗದವರೂ ನ್ಯಾಯಸ್ಥಾನದಲ್ಲಿ ಹಾಜರಿದ್ದರು, ಜನಸ್ತೋಮವು ಗುಂಪಾಗಿ ಕಚೇರಿಯನ್ನು ಆವರಿಸಿದ್ದಿತು. ಮಿ. ಬ್ರೆಲ್ವಿಯವರು ಮೊಕದ್ದಮೆಯಲ್ಲಿ ಭಾಗವಹಿಸಲಿಲ್ಲವೆಂದು ತಿಳಿದುಬರುತ್ತದೆ. ಮೊಕದ್ದಮೆಯ ತೀರ್ಪಿನ ಸಾರಾಂಶವು ಪ್ರಕಾರವಾಗಿರುವದು. ತೀರ್ಪಿನಲ್ಲಿ ಹೇಳಿರುವಂತೆ, ಬೊಂಬಾಯಿ ಕ್ರೊನಿಕಲ್ ಪತ್ರಿಕಾ ಸಂಪಾದಕರು, ಬಹುಕಾಲದಿಂದಲೂ ಹೆಸರುವಾಸಿಯಾದ ಜರ್ನಲಿಸ್ಟರಾಗಿದ್ದು, ರಾಜದ್ರೋಹಕರವಾದ ವಿಷಯಗಳನ್ನು ಪ್ರಚಾರಪಡಿಸುವದರಿಂದ ಉಂಟಾಗುವ ಹಾನಿಯನ್ನರಿತಿರುವದು ಅವರ ಕರ್ತವ್ಯವಾಗಿರಬೇಕಿತ್ತೆಂತಲೂ ಹಾಗೆ ವರ್ತಿಸದಿರುವದರಿಂದ, ಅಂಥಹವರ ತಪ್ಪಿತಪ್ಪ ಮನ್ನಾ ಮಾಡುವದರಲ್ಲಿ ಸಂದೇಹವಿಲ್ಲವೆಂತಲೂ ನಮೂದಿಸಲಾಗಿದ್ದಿತು.

**ಅಹಮ್ಮದಾಬಾದದಲ್ಲಿ**

'ನವಜೀವನ ಪ್ರೆಸ್ಸಿನ ಯಜಮಾನರಾದ ಮಿ। ಜೀವನ್‌ಲಾಲ್ (ವಾರಿಸ್‌ಲಾ) ಎಂಬವರು, ಪ್ರೆಸ್ಸನ್ನು ಸರಕಾರವು ಸ್ವಾಧೀನಪಡಿಸುವದಕ್ಕಾಗಿ, ಸರಕಾರದ ಮೇಲೆ ರೂ ೩,೦೦೦ಕ್ಕೆ ದಾವಾ ಮಾಡಿರುವರೆಂದು ತಿಳಿದುಬರುತ್ತದೆ.

ಮಹಾತ್ಮಾಜಿಯವರ ಜೊತೆಗಾರರಾದ ಮಿ. ಕಾಕಾ ಕಾಲೇಲ್‌ಕರ್ ಎಂಬವರು ಸಬರ್ಮತಿ ಆಶ್ರಮದಲ್ಲಿ ಚಿಕ್ಕದೊಂದು ಭಾಷಣವಿತ್ತರು. ಭಾಷಣದ ಸಾರಾಂಶದಂತೆ, ಮಾನ್ಯ ಗಾಂಧಿಜಿಯವರು ಸುಖವಾಗಿ ಇರುವರೆಂದು ತಿಳಿದುಬರುತ್ತದೆ. ಆದರೆ, ಅವರ ಆರೋಗ್ಯವೊಂದು ಸ್ವಲ್ಪ ವ್ಯತ್ಯಾಸವಾಗಿರುವದಕ್ಕೆ ಒಂದು ಕಾರಣವಿದೆ; ಅದೇನೆಂದರೆ ಪೂನಾದ ಜೈಲಿನ ನೀರು, ಮಹಾತ್ಮಾಜಿಯವರ ಆರೋಗ್ಯಕ್ಕೆ ಹಿತಕಾರಿಯಾಗುವದಿಲ್ಲ. ಅವರು ಆರೋಗ್ಯ ಸಂಪಾದನೆಗಾಗಿ ತಾನು ಸ್ವೀಕರಿಸುವ ಆಹಾರದಲ್ಲಿ ಹೆಚ್ಚಿನ ಬೋಧ ಮಾಡುತ್ತಿರುವರು. ಇತ್ತೀಚೆಗೆ ಮಹಾತ್ಮಾಜಿಯವರು ಹಾಲು ಮೊಸರಿನ ಸೇವನೆಯನ್ನು ವರ್ಜಿಸಿರುವರು. ಅವರ ಹೆಚ್ಚಿನ ಸಮಯವು ನೂಲುವಿಕೆಯಲ್ಲಿಯೂ, ಗೀತಾಧ್ಯಯನದಲ್ಲಿಯೂ ಕಳೆದುಹೋಗುವದು. ಆಶ್ರಮದ ಎಲ್ಲಾ ಮಿತ್ರರಿಗೂ ಅವರು ಆಗಿಂದಾಗ ಪತ್ರಗಳನ್ನು ಬರೆಯುತ್ತಿರುವರು, ಹೆಚ್ಚಾಗಿ ಅವರ ಪತ್ರವ್ಯವಹಾರವನ್ನು ಚಿಕ್ಕ ಮಕ್ಕಳೊಡನೆ ಬೆಳಸುತ್ತಿರುವರು.

**ಅಲ್ಲಹಾಬಾದದಲ್ಲಿ**

"ಅಭ್ಯುದಯ" ಪತ್ರಿಕೆಯ ಆಕ್ಟಿಂಗ್ ಸಂಪಾದಕರಾಗಿದ್ದ ಮಿ। ಪಂಡಿತ್ ರಾಮ ಶಿವ ಮಾಳವೀಯರನ್ನು ಪಿನಲ್‌ಕೋಡಿನ ೧೨೪(ಎ) ಪ್ರಕರಣದ ಮೇರೆಗೆ ದಸ್ತಗಿರಿಮಾಡಿರುವರು.

**ಪಾಟ್ನಾದಲ್ಲಿ**

ಪೋಲೀಸರು ಎಂದು ತಿಳಿದ ಪರಮೇಶ್ವರರಾಮ್ ಎಂಬವ ಮನೆಯನ್ನು ಹುಡುಕುವ ಗುಂಡಾಯಿತ ಮಾಡಿದರು. ಮನೆಯ ಕೆಲಸ ಮನೆಯವನು ಪ್ರತಿಭಟಿಸಿದನು, ಪರಮೇಶ್ವರರಾಮ್ ತಂದೆಯು ಬಲವಾದ ಜಖಮುಗಳಿಗೆ ಗುರಿಪಟ್ಟಿರುವರು.

**ಕಲ್ಕತ್ತಾ.**

ಪಂಡಿತ ಮೋತಿಲಾಲ ನೆಹರೂರವರು ತಾರೀಕು ೧ನೇ ದಿನ ತುಂಬಾ ಅನಾರೋಗ್ಯವುಳ್ಳವರಾಗಿದ್ದರು. ಆ ದಿನ ಸಾಧ್ಯಾವರ್ತಿ ರಕ್ತ ಕಾರಿದರೆಂದೂ ತಿಳಿಯಲಾಗುತ್ತದೆ. ಸಂಜೆಯ ಹೊತ್ತಿನಲ್ಲಿ ಸ್ವಲ್ಪ ಜ್ವರವೂ ಕೂಡ ಒಂದು ಹೆಚ್ಚಿನ ಅನಾರೋಗ್ಯಕ್ಕೆ ಈಡಾಗಿರುವರು. ಮಾನ್ಯ ಮೋತಿಲಾಲರ ಮಗಳಾದ ಕೃಷ್ಣಾನೆಹರು ಮತ್ತು ಡಾ ಅನ್ಸಾರಿಯೊಂದಿಗೆ ಹುಗ್ಲಿ ನದಿಯ ಒಳಿಯಲ್ಲಿರುವ ದಕ್ಷಿಣೇಶ್ವರದ ವಿಹಾರಮಂದಿರಕ್ಕೆ ತೆರಳಿಯವರೆಂದೂ, ಅಲ್ಲಿಯೇ ೧೫ ದಿನಗಳ ವರೆಗೂ ಅವರು ಆರೋಗ್ಯವನ್ನು ಹೊಂದಲಿಕ್ಕಿರುವರೆಂದೂ ತಿಳಿದುಬರುತ್ತದೆ.

(೧೩ನೇ ಪುಟಕ್ಕೆ ಮುಂದರಿಸಿಯದೆ.)

## The Zandu Pharmaceutical Works, Ltd., Bombay, 14
## ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ. 14.

ಲೋಕಪ್ರಸಿದ್ಧವಾದ 'ಝಂಡೂ'ಯವರ

# ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!

[illegible]

ಕ್ರಯ 1 ಪೌನು ಸೀಸೆ ರೂ. 2—8—0. ½ ಪೌ ರೂ 1—5—0. ¼ ಪೌ. ರೂ 0—13—0.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು—ದಾಮೋದರ್ ಅಂಡ್ ಕಂಪೆನಿ, 78 ಛೈನಾ ಬಜಾರು ರಸ್ತೆ, ಮದ್ರಾಸು.

ತೀರ್ಥಹಳ್ಳಿ ಏಜಂಟರು:—ಮೆಸರ್ಸ್ ಪಂಡಿತ ಮತ್ತು ಕಂಪೆನಿ

ಮಂಗಳೂರು ಏಜಂಟರು.—ದಿ ಊಲನ್ ಮಾರ್ಟ್.

ಸಿರ್ಸಿ ಏಜಂಟರು —ಎಸ್. ಎಲ್ ಧಾರೇಶ್ವರ್ ಎಂಡ್ ಬ್ರದರ್ಸ್

ಪುತ್ತೂರು ಏಜಂಟರು —ಯು. ಜನಾರ್ಧನರಾವ್, ಪುತ್ತೂರು, ದ ಕನ್ನಡ.

ಮಂಗಳೂರು ಏಜಂಟರು —ಕೃಷ್ಣ ಶಾಸ್ತ್ರಿ, ಬಸ್‌ಸ್ಟೇಟ್

☞ ವಿವರ ಕೆಟಲಾಗು ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.



TELEGRAMS ASPINWALCO TELEPHONE No. 15

THE Firestone Gum-Dipping process strengthens the tire to meet the demands of hill climbing, quick stops, sudden turns and high speeds. The Firestone tread is scientifically designed to grip the road in emergencies. You can have this extra safety on *your car*. Drive in and use our service.

**Firestone** Gum-Dipped TIRES

The Mark of Quality

DISTRIBUTORS

Aspinwall & Co. Ltd

(Agents) MANGALORE

STOCKISTS

UDIPI

*H. Siddaya Hegde*

KASARGODE.

*Rama Nayak*

KANHANGAD

*H. S. Russool*

COONDAPUR —

*C. Gopal Mukunda Pai*

General Merchant

COONDAPUR (S. Kanara)

BHATKAL

*Messers Kashmiee Shamshuddeen Saheb Motor Service*

Puttur

*K. Venkatraya Pai,*

Imperial Cycle Stores



***FOR YOUR CAR***

## WILLARD BATTERIES.

SIMONIZ KLEENER SIMONIZ POLISH.

*AGENTS —*

## Messrs. Aspinwall & Co., Ltd.

MANGALORE



"ಬಿಟ್ಟಿ" "ಪುಗಸಟ್ಟೆ" "ಬಿಟ್ಟಿ"



, ಜೇಬಿನ ಲಿವರ್ ಗಡಿಯಾರವೂ ಕೈ ಗಡಿಯಾರವೂ ಬಿಟ್ಟಿ

೩ ತಿಂಗಳೊಳಗಾಗಿ ೩೦೦೦ ಗಡಿಯಾರಗಳನ್ನು ಬಿಟ್ಟಿಯಾಗಿ ಕೊಟ್ಟದ್ದೇವೆ

[illegible]

ಪತ್ರವ್ಯವಹಾರಗಳು ಇಂಗ್ಲೀಷಿನಲ್ಲಿ ಬರೆಯಬೇಕು.

**Imperial Watch Company,**

(S) Post No. 12, BOMBAY.



## ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

**ಶಾರದಾ ಛಾಪಖಾನೆ,**

ರಥಬೀದಿ, ಮಂಗಳೂರು



## ಮುದಲ್ ತರವಾದ ಬೆಳ್ಳಿ ಉಡಿದಾರ ಹಗ್ಗ.

ESTD 1896.

ಅನೇಕ ವರುಷದಿಂದ ನಾವು ಬೆಳ್ಳಿ ಉಡಿದಾರಗಳನ್ನು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿ ಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ಉಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ಧಾರಣೆ ಸಂಸದಲ್ಲಿಯೂ, ಸರಿಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾವಿನಲ್ಲಿ ಹೆಸರು ಪಡೆದುದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ [illegible] ಕಳುಹಿಸುತ್ತೇವೆ. ಒಂದು ಸಲ ನಮ್ಮಲ್ಲಿಂದ ತರಿಸಿ ನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ಧಾರಣೆ ಪ್ರಕಾರ [illegible] ಧಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್ ನಾರಾಯಣಶೆಟ್ಟಿ ಅಂಡ್ ಸನ್ಸ್,

ಹರಿವಾಣ ವ್ಯಾಪಾರಿ,

ಕಿನ್ನಾರ ಬೀದಿ ಸೇಲಂ, (ದಕ್ಷಿಣ ಇಂಡಿಯಾ)



ರಿಸ್ಟ್ ವಾಚ್ ಉಚಿತ.

[illegible]

ಕಿಂಗ್ ಬಜಾರ್ ಕೊರೋನೇಶನ್ ಕಂಪೆನಿ

ಮುಂಬಾಯಿ



## ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

**ಶಾರದಾ ಛಾಪಖಾನೆ.**

ರಥಬೀದಿ, ಮಂಗಳೂರು



ಒಮ್ಮೆ ಪರೀಕ್ಷಿಸಿರಿ! ತೃಪ್ತಿ ಹೊಂದಿರಿ!

## ದಿ ಕ್ರೌನ್ ರಬ್ಬರ್ ಸ್ಟಾಂಪು ಕಂಪೆನಿ,

ಹೆಡ್ಡ ಆಫೀಸು ಬಲ್ಮಠ ರಸ್ತೆ, ಕಂಕನಾಡಿ ಪೋಸ್ಟು, ಮಂಗಳೂರು, ದ ಕನ್ನಡ

## ರಬ್ಬರು ಮೊಹರುಗಳು

ಇಲ್ಲಿ ಉತ್ತಮವಾದ ಎಯರ್ ಕುಶನ್ ರಬ್ಬರು ಮೊಹರುಗಳೂ, ಹಿತ್ತಾಳೆ ಇತ್ಯಾದಿ ಲೋಹಗಳಲ್ಲಿಯೂ, ಮಾರ್ಬಲ್ ನಲ್ಲಿಯೂ ಕೆತ್ತನೆಯ ಕೆಲಸವನ್ನೂ ಚಿಕ್ಕ ನಾಣ್ಯಕ್ಕಾಗಿ ಕ್ಷಿಪ್ರ ಸಮಯದಲ್ಲಿ ಮಾಡಿಕೊಡುತ್ತದೆ.

ಹೆಚ್ಚಿನ ಮಾಹಿತಿಯನ್ನು ಪತ್ರಮೂಲಕವಾಗಲೀ, ಆಫೀಸಿನಲ್ಲಿ ಸ್ವತಹ ಬಂದಾಗಲೀ ತಿಳಿದುಕೊಳ್ಳಿರಿ.

ಎಮ್ ದೇವದಾಸ ಕಿಣಿ,

ಮೆನೇಜಿಂಗ್ ಪ್ರೊಪ್ರೈಟರ್.

# ಸ್ತ್ರೀ ಸಮಾಚಾರಗಳು

## ರೌಂಡ್ ಟೇಬಲ್ ಪರಿಷತ್ತು.

ಈ ಪರಿಷತ್ತಿನ ಸದಸ್ಯರಲ್ಲಿ ಹಲವರು ಅಧಿವೇಶನ ಸಮಾರಂಭದಲ್ಲಿ ಮಾಡಿದ ಭಾಷಣಗಳಿಂದ ನಮಗೂ ಹುರುಪುಂಟಾಯಿತು. ಹಿಂದು, ಮುಸಲ್ಮಾನ, ಸಿಕ್ಕರೊಳಗೂ ಐಕ್ಯಮತ್ಯವು ಉಂಟಾಗುವುದೆಂದು ನಾವು ನಂಬಿದೆವು. ಆದರೆ ಇಷ್ಟರೊಳಗೆ ಎಲ್ಲಾ ಶರ್ತಗಳ ವಿಷಯದಲ್ಲಿಯೂ ಐಕ್ಯಮತ್ಯವುಂಟಾಗದಿರುವುದು ಶೋಚನೀಯ. ಮಂತ್ರಿವರ್ಯರಾದ ಮೆಕ್‌ಡೋನಲ್ಡ್ ಸಾಹೇಬರು ಬಹು ಆಗ್ರಹದಿಂದ ಭಾಷಣವಿತ್ತರು. ಹಿಂದುಸ್ಥಾನಕ್ಕೆ ಎಷ್ಟರಮಟ್ಟಿನ ಸ್ವಾತಂತ್ರ್ಯವನ್ನು ಕೊಡಲು ಸಿದ್ಧರಿರುವರೆಂದು ಹೇಳಲಿಲ್ಲ. "ಡೊಮಿನಿಯನ್ ಸ್ಟೇಟಸ್" ಎಂಬ ಶಬ್ದಗಳನ್ನು ಕೇಳಿದ ಕೂಡಲೇ ಅವರಿಗೆ ರೋಮಾಂಚನವಾಗುವುದಂತೆ. ಆದಪ್ರಯುಕ್ತ ಅವರು ಸಂಯುಕ್ತ ರಾಷ್ಟ್ರಪದ್ಧತಿಯನ್ನು ಆರಂಭಿಸಿ ಸಂಯುಕ್ತ ರಾಜ್ಯಭಾರ ಕ್ರಮದ ವಿವಿಧ ಸೋಪಾನಗಳನ್ನು ಚರ್ಚಿಸುವರೆ ಒಂದು ಕಮಿಟಿಯನ್ನು ನೇಮಿಸಿರುವರು. ಈ ಕಮಿಟಿಯು ಲೋರ್ಡ್ ಸೇಂಕಿ ಎಂಬವರ ಅಧ್ಯಕ್ಷತೆಯಲ್ಲಿ ಕೂಡಿ ಬಂದು ಸಂಯುಕ್ತ ರಾಜ್ಯಭಾರಕ್ರಮದೊಳಗಣ ಹಲವು ಸಂಬಂಧಗಳನ್ನು ಚರ್ಚಿಸುತ್ತಿರುವುದು. ಈ ಕಮಿಟಿ ಮೀಟಿಂಗುಗಳ ಫಲಿತಾಂಶವೇನಾಗಬಹುದೆಂದೂ ಇವರು ಇತ್ಯರ್ಥಿಸಿದ ವಿಷಯಗಳನ್ನು ರೌಂಡ್‌ಟೇಬಲ್ ಪರಿಷತ್ತು ಪಾರ್ಲಿಮೆಂಟ್ ಸಭೆಯೂ ಅನುಮೋದಿಸುವುದೋ, ಹಿಂದುಸ್ಥಾನಕ್ಕೆ ಸ್ವರಾಜ್ಯ ಸಿಕ್ಕುವುದೋ ಎಂಬೀ ಕುರಿತು ಭವಿಷ್ಯವನ್ನು ಈಗಲೇ ಹೇಳಲು ಸಾಧ್ಯವಿಲ್ಲ. ಅಂತೂ "ಕೈಗೆ ಒಂದ ಕತ್ತು ಬಾಯಿಗೆ ಬಾರದೆ ಹೋಯಿತು" ಎಂಬಂತೆ ಆಗದಿದ್ದರೆ ಸಾಕು.

## ಸ್ತ್ರೀಯರನ್ನು ಪೋಲೀಸು ಕೆಲಸಕ್ಕೆ ನಿಯಮಿಸುವ ಆವಶ್ಯಕತೆ.

ಮದ್ರಾಸು ಶಹರಿನಲ್ಲಿ ವ್ಯಭಿಚಾರ ಗೃಹಗಳನ್ನು ನಾಶ ಮಾಡುವ ಬಗ್ಗೆ ಇತ್ತಲಾಗೆ ಒಂದು ಕಾನೂನು ಜ್ಯಾರಿಗೆ ಬಂದಿರುವುದು ಸಂತೋಷವೇ ಸರಿ. ದೇವದಾಸಿ ಪದ್ಧತಿಯೂ ವಿಶೇಷ ಟೀಕೆಗೆ ಒಳಗಾಗಿರುವುದು. ಆದರೆ ಈ ಕಾನೂನಿನಲ್ಲಿ ಹಲವು ಕೆಲವು ದೋಷಗಳಿರುವುದರಿಂದ ಈ ಮಸೂದೆಯನ್ನು ಜ್ಯಾರಿಗೆ ತರಲು ಭಗೀರಥ ಪ್ರಯತ್ನಮಾಡಿದ ಪ್ರಮುಖರ ಸದುದ್ದೇಶವು ಎಷ್ಟರಮಟ್ಟಿಗೆ ನೆರವೇರುವುದೋ ಎಂಬ ಸಂದೇಹವು ಸಮಾಜ ಸುಧಾರಕರಲ್ಲಿ ಜನಿಸುವುದು ಸಹಜವೇ ಸರಿ. ಈ ದೋಷಗಳಲ್ಲಿ ಕೆಲವನ್ನು ಮಾತ್ರ ಈ ಕೆಳಗೆ ಕೊಡುವೆವು.

೧. ಪಟ್ಟಣಗಳಲ್ಲಿ ಮಾತ್ರ ಈ ಕಾನೂನನ್ನು ಜ್ಯಾರಿಗೆ ತರುವುದರಿಂದ ವ್ಯಭಿಚಾರ ಗೃಹಗಳ ಸ್ಥಾನವನ್ನು ಬದಲಾಯಿಸಿದಂತಾಗುವುದಲ್ಲದೆ ವ್ಯಭಿಚಾರವೆಂಬ ಪಿಶಾಚಿಯನ್ನು ನಿಗ್ರಹಿಸಿದಂತಾಗುವುದಿಲ್ಲ. ಪಟ್ಟಣಗಳಲ್ಲಿ ವ್ಯಭಿಚಾರ ವೃತ್ತಿಗೆ ಆಶ್ರಯವಿಲ್ಲದಿದ್ದರೆ ಹಳ್ಳಿಹಳ್ಳಿಗಳಲ್ಲಿ ಧಾರಾಳ ಆಶ್ರಯವು ಸಿಗುವುದು. ಪ್ರಯಾಣ ಸೌಕರ್ಯಗಳು ವಿಶೇಷವಾಗಿರುವ ಈ ಕಾಲದಲ್ಲಿ ದುರಭ್ಯಾಸಗಳು ಒಂದೆಡೆಯಿಂದ ಇನ್ನೊಂದೆಡೆಗೆ ಬಹು ಸುಲಭ ರೀತಿಯಲ್ಲಿ ಹರಿಯುವವು. ಆದುದರಿಂದ ಈ ವಿಷಯದಲ್ಲಿ ಹಿಂದುಸ್ಥಾನದ ಎಲ್ಲಾ ಪ್ರಾಂತ್ಯಗಳಿಗೂ ಅನ್ವಯವಾಗುವ ಕಾನೂನು ಅಗತ್ಯವೆಂದು ನಮಗೆ ತೋರುತ್ತಿದೆ.

೨. ಸ್ತ್ರೀಯು ಪುರುಷನ ಸ್ನೇಹ ಅಥವಾ ಸಂಪರ್ಕವಿಲ್ಲದೆ ವ್ಯಭಿಚಾರ ಮಾಡಲು ಸಾಧ್ಯವಿಲ್ಲ. ಆದುದರಿಂದ ಸಮಾನ ಹಕ್ಕು ಬಾಧ್ಯತೆಯ ಚಳವಳಿಯು ಬಲವಾಗಿರುವ ಈ ಕಾಲದಲ್ಲಿ ಸ್ತ್ರೀಯರನ್ನು ಮಾತ್ರ ಸೂತ್ರಗಳಿಂದ ಬಂಧಿಸಿ ಪುರುಷರನ್ನು ಸ್ವೇಚ್ಛಾಚಾರನಾಗಿ ವರ್ತಿಸಲು ಬಿಡುವುದರಿಂದ ವ್ಯಭಿಚಾರವನ್ನು ತಡೆದಂತಾಗುವುದಿಲ್ಲ. ಆದಪ್ರಯುಕ್ತ ಪುರುಷನನ್ನೂ ಕೂಡಾ ವಿದ್ಯಾಭ್ಯಾಸದಿಂದಲೋ ಉಪದೇಶದಿಂದಲೋ ಸೂತ್ರದಿಂದಲೋ ಬಂಧಿಸುವುದು ಅಗತ್ಯ.

೩. ಕಾನೂನಿನ ನಿಬಂಧನೆಗಳಿಗನುಸಾರವಾಗಿ ಘಾತುಕರ ಬಂಧನದಿಂದ ರಕ್ಷಿಸಲ್ಪಟ್ಟ ಎಳೆ ತರುಣಿಯರನ್ನು ಹಂಗಾಮಿಯಾಗಿಯಾದರೋ ಇರಿಸಿ ಅವರಿಗೆ ವಿದ್ಯೆಯನ್ನೋ ಕೈಗಾರಿಕೆ ಕಲೆಗಳನ್ನೋ ಕಲಿಸಲು ಯೋಗ್ಯವಾದ ರಕ್ಷಣಾ ಗೃಹಗಳು ಅಗತ್ಯ. ಆದಕಾರಣ ಈ ಕಾನೂನಿನ ಉದ್ದೇಶವು ಸಾಂಗವಾಗಿ ನಡೆಯಬೇಕಾದರೆ ತರುಣಿಯರ ಮರ್ಯಾದೆಯು ಉಳಿಯಬೇಕಾದರೆ ಸಾಕಷ್ಟು ರಕ್ಷಣಾ ಗೃಹಗಳನ್ನು ಏರ್ಪಡಿಸಲೇಬೇಕು.

೪. ಕಾನೂನಿನ ಮೇರೆಗೆ ವ್ಯಭಿಚಾರ ಗೃಹಗಳನ್ನು ಪ್ರವೇಶಿಸುವುದು, ಎಳೆ ತರುಣಿಯರನ್ನು ಶರೀರ ವಿಕ್ರಯದಿಂದ ದುಡಿಸುವ ಪಾತಕಿಗಳನ್ನು ಪತ್ತೆಮಾಡಿ ತನಿಖೆ ನಡಿಸಿ ಶಿಕ್ಷೆಗೆ ಒಳಪಡಿಸುವುದು, ಎಳೆ ತರುಣಿಯರನ್ನು ರಕ್ಷಿಸುವುದು, ಇವೆಲ್ಲಾ ಕಾರ್ಯಗಳು ಪುರುಷರಾದ ಪೋಲೀಸಿನವರ ಪಾಲಿಗೆ ಬಿದ್ದಿರುವ ವಿಚಾರದಲ್ಲಿ ನಮಗಂತೂ ಸ್ವಲ್ಪ ಸಂದೇಹವು ತಲೆದೋರಿರುವುದು. ರಾಜ್ಯವನ್ನು ಗೆಲ್ಲುವುದಕ್ಕಿಂತಲೂ ಇಂದ್ರಿಯ ನಿಗ್ರಹವೇ ಕಷ್ಟಕರವೆಂದು ನಾವು ತಿಳಿದಿರುತ್ತಾ ಕಾನೂನಿನ ಬೆಂಬಲವು ಯೌವನ ಮದವು ಪೋಲೀಸಿನವರಿಗೆ ಇರುವಲ್ಲಿ ತರುಣಿಯರಲ್ಲಿ ಸರಸ ಸಲ್ಲಾಪ ಚಪಲತೆ ಮತ್ತು ಕೃತಕ ಸೌಂದರ್ಯವಿರುವಲ್ಲಿ ಕೆಲವು ಸಂದರ್ಭಗಳಲ್ಲಿಯಾದರೂ ಬೇಲಿಯೇ ಹೊಲವನ್ನು ತಿಂದಂತಾಗುವುದೋ ಎಂಬದೊಂದು ಕಡುಸಂದೇಹವು ನಮ್ಮ ಕೆಲವು ಸ್ತ್ರೀ ಪ್ರಮುಖರಲ್ಲಿರುವುದು ಆಶ್ಚರ್ಯವಲ್ಲ. ಆದಪ್ರಯುಕ್ತ ಈ ಕಾನೂನಿನ ಮೇರೆಗೆ ಗುಪ್ತ ಗೃಹಗಳನ್ನು ಪ್ರವೇಶಿಸುವುದು ಮತ್ತು ಎಳೆ ತರುಣಿಯರನ್ನು ರಕ್ಷಿಸುವುದೇ ಮೊದಲಾದ ಸೂಕ್ಷ್ಮ ಕಾರ್ಯಕ್ಕಾಗಿ ತರಬೇತಿ ಹೊಂದಿದ ಯೋಗ್ಯರಾದ ಸ್ತ್ರೀಯರನ್ನು ಪೋಲೀಸು ಕೆಲಸಕ್ಕೆ ನೇಮಿಸಿದರೆ ಉಪಯುಕ್ತವಾಗಬಹುದು. ಸ್ತ್ರೀಯರು ಪುರುಷರಿಗಿಂತ ಯಾವುದೇ ವಿಷಯದಲ್ಲಿಯೂ ಕಡಿಮೆಯಲ್ಲವೆಂದೆನ್ನಿಸಿಕೊಳ್ಳುವ ಈ ಕಾಲದಲ್ಲಿ ಈ ಧರ್ಮ ಕಾರ್ಯಕ್ಕೆ ಸ್ತ್ರೀಯರನ್ನು ಒದಗಿಸಿಕೊಳ್ಳುವುದು ತಪ್ಪೇ? ಕಳೆದ ಮಹಾಯುದ್ಧದಲ್ಲಿ ಅನೇಕಾನೇಕ ಸ್ತ್ರೀಯರು ಗುಪ್ತ ಪೋಲೀಸಿನವರ ಕೆಲಸವನ್ನು ಅತಿ ಚತುರತೆಯಿಂದ ನಿರ್ವಹಿಸಿದ್ದಂತೆ ತೋರುತ್ತದೆ. ಹಲವು ಪಾಶ್ಚಿಮಾತ್ಯ ದೇಶಗಳಲ್ಲಿ ಗುಪ್ತ ಪೋಲೀಸು ಇಲಾಖೆಯಲ್ಲಿ ಹಲವು ಸ್ತ್ರೀಯರು ಇರುವರು. ಸ್ತ್ರೀಯರು ಈ ಕಾರ್ಯದಲ್ಲಿ ಪುರುಷರೊಪಾದಿ ಕೇವಲ ಉದ್ಯೋಗಸ್ಥರಂತೆ ವರ್ತಿಸದೆ ತಮ್ಮ ಸಹೋದರಿಯರ ಅಂತಃಕರಣಗಳನ್ನು ಚೆನ್ನಾಗಿ ತಿಳಿದು ಈ ರಕ್ಷಣಾ ಕಾರ್ಯದಲ್ಲಿ ಪುರುಷರಿಗಿಂತಲೂ ಹೆಚ್ಚಾದ ಚತುರತೆಯನ್ನೂ ತಾಳ್ಮೆಯನ್ನೂ ಪ್ರದರ್ಶಿಸುವುದರಲ್ಲಿ ಸಂದೇಹವಿಲ್ಲ. ಈ ನಾಲ್ಕು ಪ್ರಾಮುಖ್ಯ ದೋಷಗಳನ್ನು ಸರಿಪಡಿಸಿದರೆ ಈ ಕಾನೂನಿನಲ್ಲಿ ಸೂಚಿತವಾದ ಸದುದ್ದೇಶವನ್ನು ನೆರವೇರಿಸಲು ಸುಲಭವಾಗುವುದೆಂದು ನಮ್ಮ ಭಾವನೆ.

### ॥ ಅತಿ ಸರ್ವತ್ರ ವರ್ಜಯೇತ್ ॥

ಸರಕಾರಿ ಉದ್ಯೋಗಸ್ಥರು ಹಿಂದುಸ್ಥಾನದಲ್ಲೆಲ್ಲಿಯೂ ಕಾನೂನುಗಳ ಬೆಂಬಲದ ದೆಸೆಯಿಂದ ತಮ್ಮ ತಮ್ಮ ಕೆಲಸಗಳನ್ನು ನಿರ್ವಹಿಸುವುದರಲ್ಲಿ ಅವಶ್ಯಕವಿಲ್ಲದಷ್ಟು ಕಾರ್ಯಾಸಕ್ತಿಯನ್ನು ತೋರಿಸಿ ಅಪರಾಧಿಗಳನ್ನು ಅಲ್ಲದಸಲ್ಲದ ರೀತಿಯಲ್ಲಿ ಕಾಡಿಸುವುದಲ್ಲದೆ ನಿರಪರಾಧಿಗಳನ್ನು ಕೂಡಾ ಕೈದುಮಾಡಿ ಶಿಕ್ಷೆಗೂ ಹಿಂಸೆಗೂ ಒಳಗು ಮಾಡುವುದು ಬಹು ಖೇದಕರವಾದ ಸಂಗತಿಯೇ ಹೌದು. ಸರಕಾರಿ ನೌಕರನು ತನ್ನ ಕರ್ತವ್ಯವನ್ನು ದಕ್ಷತೆಯಿಂದಲೂ ಜಾಣತನದಿಂದಲೂ ಶ್ರದ್ಧೆಯಿಂದಲೂ ನಿರ್ವಹಿಸಲೇ ಬೇಕು. ಆದರೆ 'ಅತಿ ಸರ್ವತ್ರ ವರ್ಜಯೇತ್' ಎಂಬಂತೆ ಉದ್ಯೋಗಸ್ಥನು ಸ್ವಾರ್ಥಾಭಿಲಾಷೆಯಿಂದಲೋ ಅಥವಾ ಪ್ರಾಮುಖ್ಯತೆಯನ್ನೋ ಬಡ್ತಿಯನ್ನೋ ಪಡೆಯಬೇಕೆಂಬ ಆತುರತೆಯಿಂದಲೋ ಸ್ವೇಚ್ಛಾಚಾರನಾಗಿ, ನಿರ್ದಯವಾಗಿ ಕಾನೂನಿಗೆ ವಿರೋಧವಾಗಿ, ಅಮಾನುಷ ರೀತಿಯಲ್ಲಿ ವರ್ತಿಸುವುದನ್ನು ನಾವೆಂದೂ ಅನುಮೋದಿಸಲೊಲ್ಲೆವು.

### ॥ ಸ್ತ್ರೀ ಸತ್ಯಾಗ್ರಹಿಗಳ ಪ್ರಲಾಪ ॥

ಮುಂಬಾಯಿಯ ಸ್ತ್ರೀ ಸತ್ಯಾಗ್ರಹಿಗಳ ಮೇಲೆ ಕೈದು ಮಾಡಿದ ವಿಷಯದಲ್ಲಿ ಮುಂಬಾಯಿಯ ಮಾನ್ಯ ಗವರ್ನರ್ ಸಾಹೇಬರು ನಮಗೆ ಸಮಾಧಾನ ವಚನವನ್ನು ಕೊಟ್ಟಿರುವರು. "ಸ್ತ್ರೀ ಸತ್ಯಾಗ್ರಹಿಗಳನ್ನು ಶಿಕ್ಷಿಸುವ ವಿಧಾನಗಳು, ಇತರ ದೇಶಗಳಲ್ಲಿ ಕಾನೂನು ಉಲ್ಲಂಘನೆಮಾಡುವ ಸ್ತ್ರೀಯರ ವಿಷಯದಲ್ಲಿ ಉಪಯೋಗಿಸಲ್ಪಡುವ ವಿಧಾನಗಳಿಗಿಂತ ಕಠಿಣತರವಲ್ಲ," ಎಂಬುದೇ ಅವರ ಉದ್ಗಾರವು. ಈ ವಚನದ ಸತ್ಯತ್ವವನ್ನು ಪರಿಶೀಲಿಸಿದರೆ ಮಾನ್ಯ ಗವರ್ನರ್ ಸಾಹೇಬರವರ ಮಾತಿನ ಯಥಾರ್ಥತೆಯು ಸ್ವಯಂ ವಿದಿತವಾಗುವದು. ಹಿಂದೀ ಮಹಿಳೆಯರು ದೇಶಕ್ಕಾಗಿ ತಮ್ಮ ತಮ್ಮ ಸ್ವಾರ್ಥಸುಖಗಳನ್ನು ತೊರೆದು ಮುಖಪರದೆಗಳನ್ನು ಹರಿದು, ಅಹಿಂಸಾತ್ಮಕ ರೀತಿಯಲ್ಲಿ ವರ್ತಿಸುತ್ತಿರುವರೆಂಬುದು ನಿರ್ವಿವಾದವು. ಹೀಗಿರುವಲ್ಲಿ ಮುಂಬಾಯಿಯ ಗವರ್ನರ್ ಸಾಹೇಬರ ಮಾತೃದೇಶವಾದ ಇಂಗ್ಲೆಂಡಿನಲ್ಲಿ ಕೆಲವು ವರುಷಗಳ ಹಿಂದೆ ತಲೆದೋರಿದ ಸಪ್ರಜೆಟ್ ಮೂವ್ಮೆಂಟ್ ಎಂಬ ಸ್ತ್ರೀಯರ ಚಳವಳದಲ್ಲಿ ಇಂಗ್ಲೀಷ್ ಸ್ತ್ರೀಯರು ಮಾಡಿದ ಗಲಭೆಯನ್ನು, ಅವರಿಗೆ ಸರಕಾರದವರು ವಿಧಿಸಿದ ಶಿಕ್ಷೆಗಳನ್ನೂ, ಸ್ವಲ್ಪ ವಿಮರ್ಶಿಸುವ. ಅಲ್ಲಿನ ಸ್ತ್ರೀಯರ ರೀತಿಗಳು ಬೇರೆಯಾಗಿದ್ದುವು. ಅವರು ಹಿಂಸಾತ್ಮಕ ರೀತಿಯ ಯುದ್ಧವನ್ನೇ ನಡಿಸಿದರು. ಗುಂಪುಗುಂಪಾಗಿ ಕೂಡಿಕೊಂಡು ದೊಡ್ಡ ದೊಡ್ಡ ಉದ್ಯೋಗಸ್ಥರನ್ನೂ ಆತಂಕಿಸಿ ಅವರ ಕಣ್ಣಿಗೆ ಮೆಣಸು ಹಾಕಿದರು, ಹೊಡೆದರು ಬಡೆದರು, ಅವಮಾನಿಸಿದರು. ಅನೇಕ ಕಟ್ಟಡಗಳನ್ನೂ ಕಲಾಶಾಲೆಗಳನ್ನೂ ಅಗ್ನಿಗೆ ಆಹುತಿಯಾಗಿ ಅರ್ಪಿಸಿದರು. ಅವರು ಮಾಡಿದ ಅನಾಹುತಗಳಿಂದ ಯಾವ ಸರಕಾರಿ ಉದ್ಯೋಗಸ್ಥನ ಮರ್ಯಾದೆಯು ಕೂಡಾ ಸುರಕ್ಷಿತವಾಗಿರಲಿಲ್ಲ. ರಾಜನೀತಿ, ಧುರಂಧರರು ಕೂಡಾ ಏನುಮಾಡುವುದೆಂದರಿಯದೆ ಕಣ್ಣಿಗಾಗಿ ನಿಟ್ಟುಸಿರುಬಿಟ್ಟರು. ಆದರೆ ಅದೇ ಸಮಯದಲ್ಲಿ ಮಹಾಯುದ್ಧದ ಬಿರುಗಾಳಿಯು ಬೀಸಿದಿಂದ ಇವರ ಉತ್ತೇಜನಕ್ಕೆ ಭಂಗವಾಯಿತು. ಇಲ್ಲವಾದರೆ ಪುರುಷರಿಗೂ ಸ್ತ್ರೀಯರಿಗೂ ಘೋರವಾದ ಯುದ್ಧವು ನಡೆದು ಎಷ್ಟರ ಪ್ರಾಣಹಾನಿಯಾಗುತ್ತಿತ್ತೋ ಏನೋ? ಆದರೆ ಇಂಥಾ ಪ್ರಸಂಗದಲ್ಲಿ ಸ್ತ್ರೀಯರಿಗೆ ಏನು ಶಿಕ್ಷೆಯಾಯಿತು. ಆರ್ಡಿನೆನ್ಸ್‌ಗಳು ಅಗತ್ಯಬೀಳಲಿಲ್ಲ. ಮುಖಂಡರನ್ನು ಕೈದುಮಾಡಲಿಲ್ಲ. ಕೈದು ಮಾಡಿದವರಿಗೆ ಶಿಕ್ಷೆಯಿಲ್ಲ. ಪ್ರೆಸ್ ಆಕ್ಟಿನ ಆಗಮನವು ಇಲ್ಲ. ಕಾರಾಗೃಹವಾಸವೂ, ಅತ್ಯಾಚಾರವೂ ಇಲ್ಲ. ಆದರೆ ಹಿಂದೀ ಮಹಿಳೆಯರ ಉದ್ದೇಶವು ಎಷ್ಟೇ ಘನತರವಾಗಿದ್ದರೂ ಅವರ ಉಪಾಯಗಳು ಎಷ್ಟೇ ಅಹಿಂಸಾತ್ಮಕ ರೀತಿಯವುಗಳಾಗಿದ್ದರೂ ಸಾಪರಾಧ ಪ್ರಕರಣಗಳ, ಲಾಠಿಯ ಪೆಟ್ಟು, ಕಾರಾಗೃಹವಾಸ, ಮರ್ಯಾದೆಭಂಗವೇ ಅವರ ಸ್ವಾರ್ಥತ್ಯಾಗಕ್ಕೆ ಬಹುಮಾನವಾಗಿ ದೊರಕುತ್ತಲಿದೆ. ಆದುದರಿಂದ ಮಾನ್ಯ ಗವರ್ನರರೇ ಮೊದಲಾದವರು ಸಾಕಷ್ಟು ತನಿಖೆ ನಡಿಸದೆ ಇಂಥಾ ಅವಿಚಾರ ಪರವಚನವನ್ನೀಯುವುದರಿಂದ ಅವರ ಗೌರವಕ್ಕನೇ ಕೇಡು ಎಂಬುದನ್ನು ನಾವು ಬೇರೆ ಹೇಳಬೇಕಾಗಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಅನೇಕ ಪೋಲೀಸು ನೌಕರರು ನ್ಯಾಯವಿರುದ್ಧವಾಗಿ ಧರ್ಮವಿರುದ್ಧವಾಗಿ, ಸಭ್ಯತನಕ್ಕೆ ವಿರುದ್ಧವಾಗಿ ವರ್ತಿಸಿರುವ ಅನೇಕಾನೇಕ ವಿಷಯಗಳನ್ನು ಮುಂಬಾಯಿ, ಮದರಾಸು, ಲಾಹೋರು ಮೊದಲಾದ ಪ್ರಾಂತ್ಯಗಳಲ್ಲಿನ ನ್ಯಾಯಾಧೀಶರು ತೀವ್ರವಾಗಿ ಖಂಡಿಸುತ್ತಿರುವುದನ್ನು ನಾವು ಓದಿರುವೆವು. ಬ್ರಿಟಿಷ ಉದ್ಯೋಗಸ್ಥನು ರಾಜಪ್ರತ್ಯಕ್ಷ ದೇವತಾ ಎಂಬ ನಾಣ್ಣುಡಿಯ ಯಥಾರ್ಥತೆಯನ್ನು ಮನಗಂಡಿದ್ದೇವೆ. ಆದರೆ ಉದ್ಯೋಗದಿಂದ ನಿವೃತ್ತನಾದ ಬಳಿಕ ತಾನು ಕೂಡಾ ಸಾಮಾನ್ಯ ಪ್ರವಾಸಿಯೆಂದು ಪರಿಗಣಿಸಲ್ಪಡುವೆನೆಂಬುದನ್ನು ತಿಳಿದಿದ್ದೇ ಆದರೆ ಈ ದುರಾಸಕ್ತಿಗೂ, ವೈಯಕ್ತಿಕ ದ್ವೇಷಾಸೂಯೆಗಳಿಗೂ ಎರಡಕ್ಕೂ ಆಸ್ಪದವೇ ಇಲ್ಲದಂತಾಗುವುದು. ಆದರೆ ನಮ್ಮ ಕೆಲನೌಕರರು ಆವೇಶದಿಂದ ಮಾಡಬಹುದಾದ ಅತ್ಯಾಚಾರಗಳನ್ನು ಕುರಿತು ಮೇಲಾಫೀಸರರು ತಕ್ಕ ವಿಚಾರವನ್ನು ನಡಿಸದೆ ಅವರ ದುರ್ಘಟಿತ ದುರಾಸಕ್ತಿಗಳನ್ನು ಖಂಡಿಸಿ ಆ ಮೂಲಕ ಪ್ರಜಾಜನರ ಪ್ರೇಮವನ್ನು ಪರಿಪಾಲಿಸುವ ಬದಲಿಗೆ ಅವರನ್ನು ಬಹಳವಾಗಿ ಹೊಗಳಿ, ಬೆನ್ನು ತಟ್ಟಿ, "ಶಭಾಸ್" ಎಂದು ಹೇಳುವ ಗವರ್ನರರೇ ಮೊದಲಾದ ಮಹಾ ಉದ್ಯೋಗಸ್ಥರ ಸಂಕುಚಿತ ಮನೋವೃತ್ತಿಯು ಯಾವಾಗ ಬದಲಾಗುವುದೋ ನೋಡಲಿಕ್ಕಿದೆ.

## ನೋಟಗಳು.
## NOTE....S

ರೌಂಡ್‌ಟೇಬಲ್ ಕೊನ್ಫರೆನ್ಸಿನಲ್ಲಿ ಎಲ್ಲಾ ಭಾಷಣಗಳ ಗಲಾಟೆ ಮುಗಿದು, ಈಗ ಒಂದು ಕಮಿಟಿ ಪ್ರಾರಂಭವಾಗಿದೆ, ಮುಖ್ಯ ಹಿಂದೂ ಮುಸಲ್ಮಾನರ ಚರ್ಚೆಯಲ್ಲಿ ಯಾವದೊಂದು ಐಕ್ಯತೆ ತೋರಿಬಂದಿಲ್ಲ.

* * * *

'ಡೊಮಿನಿಯನ್' ಎಂಬ ಶಬ್ದ ಯಾವ ನಮೂನೆಯಲ್ಲಿ ಉಪಯೋಗಿಸುವದು ಎಂಬ ಹೊಸ ದಾರಿ ಶೋಧನೆ ನಡಿಯುತ್ತಿದೆ. ಮೇಲಿನ ಶಬ್ದ, ಮುಖ್ಯ ಮಂತ್ರಿ ಕಿವಿಗೆ ಬಿದ್ದರೆ, ಅವರ ಕಿವಿ ನೆಟ್ಟಗಾಗುತ್ತಿದಂತೆ, ಬಹು ಕಷ್ಟದ ಸಂಗತಿ.

* * * *

ಹಲವು ಸಮಯದಿಂದ ಬಲೆಬೀಸಿ ಕಾದುಕೂತುಕೊಂಡಿದ್ದ ಮುಂಬಾಯಿ ಪೋಲೀಸ ಬಲೆಯಲ್ಲಿ ಮುಂಬಾಯಿ ಕ್ರಾನಿಕಲ್ ಎಡಿಟರ್ ಮತ್ತು ಛಾಪಖಾನೆ ಮ್ಯಾನೇಜರು, ಬಿದ್ದರು. ಪ್ರೆಸ್ ಆಕ್ಟಿನ ಬಾಧೆಯಿಂದ ತಪ್ಪಿಸಿಕೊಂಡರು. ಈಗ ಒಂದು ಬರಿ ಚಿಲ್ಲರೆ ಸಂಗ್ತಿಯೊಳಗೆ, ಗೆಸ್ಟ್ ಹೌಸಿಗೆ ಹೋಗಿರುವರು.

* * * *

ಮದ್ರಾಸಿನಲ್ಲಿ ಸ್ಯಾಕೋಲೆಸ್ ಗಾಳಿಯೊಟ್ಟಿಗೆ ಸತ್ಯಾಗ್ರಹ ನಡೆಯುವರ ಕಾರ್ಯ ಸ್ವಲ್ಪ ನಡೆದುಹೋಯಿತು. ಗೋಖಲೆ ಹೋಲಿನಲ್ಲಿ ಭಾಷಣಗಳಾದವು, ಎಲ್ಲವರು ಮುಂದೆ ಒಂದು ಬೇಕೆಂದಾಯಿತು, ಒರುವ ಸಂಗತಿ ಮುಂದಿನಿಂದ.

* * * *

## ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 765/1930

ಸಾಬುಕಿನ ಸಬ್ಬ ಕೊಡಾ—ವಾದಿರು

ಉಸ್ಮಾನ ಬ್ಯಾರಿ ಕೊಡಾ—ಪ್ರತಿವಾದಿರು.

ಕುವೆಟ್ಟು ಗ್ರಾಮದ ಸಬ್ರಬೈಲಲ್ಲಿರುವ ಮದ್ದಡ್ಕ ಇದ್ದೆ ಬ್ಯಾರಿಗಳಿಗೆ—

ನಿಮ್ಮ ಮೇಲೆ ಮೇಲೆ ಕಾಣಿಸಿದ ವಾದಿರು 23-7-25ರಲ್ಲಿ 1ನೇ ಪ್ರತಿವಾದಿಯು ಬರಕೊಟ್ಟ ಆಡವಿನ ಮೇಲೆ ವಾದಿರು ರೂ. 1812—8—0ಕ್ಕೆ ಮಾಡಿದ ದಾವೆಯು ತನ್ನಿ ಬಗ್ಗೆ 11—12—30ಕ್ಕೆ ಇಟ್ಟಿರುತ್ತದೆ ನಿಮ್ಮ ತಕ್ರೀರು ಇದ್ದರೆ ಆ ದಿವಸ ಹಗಲು 11 ಗಂಟೆಗೆ ಜಾಹೀರು ಮಾಡಲಿಕ್ಕೆ ತಪ್ಪಿದರೆ ನಿಮ್ಮನ್ನು ಶಿವ್ಯಾವಾದಿ ಕೋರ್ಟಿನವರು ಯುಕ್ತ ಕಂಡ ರೀತಿ ವರ್ತಿಸುವರು.

B. Mangesh Rau
Pleader, Puttur S. K

---

## ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ,

ಕ್ರಮ ನಂಬ್ರ 674/1930

ಹುಕ್ರು ಹೆಂಗ್ಸು, ಸೋಮ ಪೂಜಾರಿಯ ಸೊಸೆ ಕೊಡಿಯಾಲ್ಬೈಲು ಗ್ರಾಮದಲ್ಲಿರುವವಳು—ವಾದಿ

(1) ದುಗ್ಗಮ್ಮ ಹೆಂಗ್ಸು (2) ಕೋಟಿ ಪೂಜಾರಿ,— ಬಾಬು ಪೂಜಾರಿ ಮೊಮ್ಮಕ್ಕಳು, 1ನೇಯವಳು ಕುಟುಂಬದ ಯಜಮಾನ್ತಿ ಇಬ್ಬರು ಬೆಳ್ತಲು ಗ್ರಾಮದಲ್ಲಿರುವವರು (ಪುತ್ತೂರು ತಾಲೂಕು)—ಪ್ರತಿವಾದಿರು

ಈ ವ್ಯಾಜ್ಯವು, 1ನೇ ಪ್ರತಿವಾದಿಗೆ ಹಾಜರ್ಪತಿಯ [illegible] ವ ಸ್ಟೇಟುಮೆಂಟು ಬಗ್ಗೆ ಕೊಡಾ, 1930ನೇ ಇಸವಿ ದಶಂಬರ ತಾರೀಕು 18ನೇ ದಿವಸ ಹಗಲು ಹತ್ತು ಗಂಟೆಗೆ ವ್ಯಾದೆ ಆಗಿರುವದರಿಂದ, ಸದರಿ 1ನೇ ಪ್ರತಿವಾದಿಳು ಆ ವ್ಯಾದೆಗೆ ಸದರಿ ಕೋರ್ಟಿನಲ್ಲಿ ಹಾಜರಾಗಿ ಉದಹರಿಸಲಿಕ್ಕೆ ತಪ್ಪಿದ್ದಾದರೆ, ಅವಳನ್ನು ಶಿವ್ಯಾಮಾಡಿ ಏಕಪಕ್ಷವಿಚಾರಣೆಯಿಂದ ವ್ಯಾಜ್ಯವನ್ನು ತೀರ್ಮಾನಿಸಲಾದೀತೆಂತ, ಕೋರ್ಟು ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸಿಯದೆ

ಪುತ್ತೂರು
ತಾ. 29.11 30

K. K. Shenai,
Pleader for Plff

---

## ತಿದ್ದುಪಡಿ.

ತಾರೀಕು ೨೧—೧೧—೩೦ನೇ ಸ್ವದೇಶಾಭಿಮಾನಿಯ ಸಂಚಿಕೆಯಲ್ಲಿ ಸಿ. ಎಸ್ ಶಾಸ್ತ್ರಿಗಳ ನೋಟೀಸು "O P 667/30 ಮಹಾಬಲ ಭಟ್ಟ—ವಾದಿ ರಾಮಚಂದ್ರ ಭಟ್ಟ ಕೊಡಾ—ಪ್ರತಿವಾದಿರು" ಸದ್ರಿದರಲ್ಲಿ O P ಎಂಬದರ ಬದಲಾಗಿ 'O S.' ಎಂತಲೂ "Vakil for Petitioner" ಎಂಬದರ ಬದಲಾಗಿ "Vakil for Plaintiff" ಎಂತಲೂ ಓದಿಕೊಳ್ಳತಕ್ಕದ್ದು.

---

## ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O P. No 87/1930

ಇಸುಬು ಬ್ಯಾರಿ ಕೊಡಾ ಮ್ಯಾನರ್—ಇವರ ಗಾರ್ಡಿಯನ್ ಪ್ರೊಚಿನಿ ಕುಂಞ ಬ್ಯಾರಿ—ಅರ್ಜಿದಾರ

ಎದ್ರಿ,

ಕಾದ್ರಿ ಬ್ಯಾರಿ ಕೊಡಾ—ರಿಸ್ಪೊಂಡೆಂಟರು

ಮೇಲಿನ ಅರ್ಜಿದಾರನು ಮ್ಯಾನರ್ ಇಸುಬು ಬ್ಯಾರಿ ಕೊಡಾ 4 ಜನರ ಗಾರ್ಡಿಯನನಾಗಿ ತನ್ನನ್ನು ನೇಮಿಸಬೇಕಾಗಿ ದಾಖಲು ಮಾಡಿದ ಅರ್ಜಿಯು ತಾರೀಕು 8-12-30ಕ್ಕೆ ತನ್ನಿಗೆ ಇಟ್ಟಿರುತ್ತದೆ, ಆಕ್ಷೇಪವುಳ್ಳವರು ತಮ್ಮ ಆಕ್ಷೇಪಣೆಗಳನ್ನು ಸದರಿ ತಾರೀಕಿಗೆ ಈ ಕೋರ್ಟುಮುಂದೆ ಸ್ವತಾ ಗಿಯಾಗಲೀ, ವಕೀಲರ ಮುಖಾಂತರವಾಗಿಯಾಗಲೀ ಹಾಜರಾಗತಕ್ಕದ್ದು. ತಪ್ಪಿದರೆ ನಿಮ್ಮನ್ನು ಶಿವ್ಯಾ ಮಾಡಿ ಅರ್ಜಿಯನ್ನು ತೀರ್ಮಾನಿಸಲಾದೀತು

ಮಂಗಳೂರು,
ತಾ. 1—12—30

B. S. Achar,
ಅರ್ಜಿದಾರನ ಕಡೆ ವಕೀಲ್.

---


**The Cochin Soap Works,**
IRENJALAKUDA

**ದಿ ಕೊಚ್ಚಿನ್ ಸೋಪ್ ವರ್ಕ್ಸ್.**
ಇರಿಂಜಾಲಕುಡ

BABY BORAX SOAP
TRADE MARK

ಕೊಚ್ಚಿ ಮತ್ತು ಮದರಾಸು ಪಟ್ಟಣಗಳಲ್ಲಿ 1928 - '29 - '30ನೇ ವರ್ಷಗಳಲ್ಲಿ ನಡೆದ "ಎಕ್ಸಿಬಿಶನ್"ಗಳಲ್ಲಿ ಬೆಳ್ಳಿ ಭಂಗಾರದ ಪದಕಗಳಿಂದಲೂ, ಅನೇಕ ಯೋಗ್ಯತಾ ಪತ್ರಗಳಿಂದಲೂ ಬಹುಮಾನಿಸಲ್ಪಟ್ಟ

ಬೇಬಿ ಬಾರೆಕ್ಸ್ ಸೋಪ್, ಓಟ್ಸ್ ಫ್ಲವರ್ ರೋಸ್ ಸೆಂಟೆಡ್ ಸೋಪ್, ಜೋನ್ಸನ್ಸ್ ಬಾರ್ ಸೋಪ್, ಕೋಲ್ ಟಾರ್ ಸೋಪ್ ಮ [illegible] ಸಾಬೂನುಗಳನ್ನು ತಯ್ಯಾರು ಮಾಡುವ ಸಂಸ್ಥೆಯಾಗಿರುವುದು

ಬೇಬಿ ಬಾರೆಕ್ಸ್ ಸೋಪ್—ಹಿಂದೂಸ್ಥಾನದ ಉತ್ತಮ ಉತ್ಪತ್ತಿ, ಬಟ್ಟೆ ಒಗೆಯುವದಕ್ಕೂ ಮೈ ತೊಳೆಯುದಕ್ಕೂ ಉಪಯೋಗಿಸಬಹುದು. [illegible] ಆಥವಾ ಅಪಾಯ [illegible] ವಿರಹಿತವಾಗಿರುವುದು. ಅಲ್ಲದೆ ಎಲ್ಲಾ ಸೋಪುಗಳ [illegible] ಸಂತೋಷವುವದು [illegible] ಒಂದು ಪೌಂಡಿನ ಕ್ರಯ 6 ಆಣೆ ಮಾತ್ರ [illegible]

ಓಟ್ಸ್ ಫ್ಲವರ್ ರೋಸ್ ಸೆಂಟೆಡ್ ಸೋಪ್—[illegible] ಉತ್ಕೃಷ್ಟವಾಗಿರುವುದು [illegible] ಗಳ್ಳೆ ಕ್ರಯ [illegible] ಆಣೆ ಮಾತ್ರ

ಜೋನ್ಸನ್ಸ್ ಬಾರ್ ಸೋಪ್—[illegible] ಬಟ್ಟೆಗಳನ್ನು ತೊಳೆಯಲು ಉಪಯೋಗಿಸಬಹುದು, [illegible]

ಕೋಲ್ ಟಾರ್ ಸೋಪ್—[illegible] ಉಪಯೋಗಿಸಬಹುದು. [illegible] ರೋಗಕ್ಕೆ ದಿವ್ಯೌಷಧ

ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸೋಲ್ ಏಜಂಟರು—

ಮೆಸರ್ಸ್ ಬೋಳಂತೂರು ನಪ್ಪೋರ್ತಿ [illegible], ಮಂಗಳೂರು.

ಕೆ. ಜ ಲಾಜರ್, ಮೆನೇಜರ್ ಮತ್ತು ಎಕ್ಸಿಬಿಟರ್.

[illegible] ಹಾಗೂ ಯೋಗ್ಯತಾ ಪತ್ರ [illegible]

ಏಜಂಟರು ಬೇಕಾಗಿರುವರ

"If every Wife knew what every Widow knows every Husband would be Insured

PLACE YOUR LIFE ASSURANCE WITH
**THE SOUTH INDIAN**
Securing to [illegible] clients —
1 Low rates of Premium
2. Liberal Policy Conditions.
AND FOR YOURSELF
An Agency with attractive Terms of Commission and Salary in
**The South Indian General Assurance Co. Ltd.,**
Anywhere in CANARA DISTRICTS & HYDERABAD STATE
For terms of Agency please apply to —
H R K [illegible]
Chief Agent
The S I G A Co. Ltd,
[illegible] MANGALORE
Managing Agent
K C PANDALAI & CO
7 8 Mc [illegible] Street [illegible] MADRAS

ಜೀವವಿಮೆ ಮಾಡ ವವರು

ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪನಿ ಲಿಮಿಟೆಡ್ನಲ್ಲಿ ವಿಮೆಮಾಡಿರಿ

ನಿಮಗೂ, ನಿಮ್ಮ [illegible] ಪ್ರಯೋಜನ ಮತ್ತು [illegible]

ಪ್ರಿಮಿಯಂ ದರಗಳು ಕಡಿಮೆ!

ಶರ್ತಗಳು ತೀರಾ ಸುಲಭ"

ಕನ್ನಡ ಜಿಲ್ಲೆ ಮತ್ತು ಹೈದರಾಬಾದ ಪ್ರಾಂತ್ಯಗಳಲ್ಲಿ ಈ ಕಂಪನಿಯ ಏಜಂಟರಾಗಿ ಕೆಲಸಮಾಡುವವರಿಗೆ

ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ ದೊರಕುವುದು.

(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)

ಚೀಪ್ ಏಜಂಟರು—

ಎಚ್. ಆರ್. ಕೆ ಅಯ್ಯಂಗಾರ್,
ಕನ್ನಡ ಜಿಲ್ಲೆ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.
ದಿ ಎಸ್ ಐ. ಜಿ ಎ ಕಂಪನಿ ಲಿಮಿಟೆಡ್,
ನನ್ಯಾಸಿಗುಡ್ಡೆ ಮಂಗಳೂರು

ಮೇನೇಜಿಂಗ್ ಏಜಂಟರು —

ಕೆ ಸಿ ಪಾಂಡಲೆ ಎಂಡ್ ಕೋ.
7-8 ಮೊಕಲೀನ್ ಸ್ಟ್ರೀಟ್ ಜಿ ಟಿ. ಮದ್ರಾಸು

"ಗ್ರೇಂಡ್ ಕ್ಲಿಯರೆನ್ಸ ಸೇಲ್"!

ಬರೀ ಮೂರು ರೂಪಾಯಿಗಳ ವ್ಯಾಪಾರದಿಂದ 824 ಅಮೂಲ್ಯವಾದ ಪಾರಿತೋಷಕಗಳು!

ನಮ್ಮ ಸುಗಂಧ ಪೂರಿತವಾದ 'ಒಟ್ಟೊ' ಮೋಹಿಯಾ ತೈಲದ ಆರು ಬಾಟ್ಲಿಗಳನ್ನು ಒಮ್ಮೆಗೇನೇ ಕೊಂಡುಕೊಳ್ಳುವವರಿಗೆ ಈ ಕೆಳಗೆ ನಮೂದಿಸಿರುವ ೩೨೪ ಅಮೂಲ್ಯ ಬಹುಮಾನಗಳು ಉಚಿತವಾಗಿ ಕೊಡಲಾಗುವವು!



ಬಂಗಾರ ಗಿಲ್ಟಿನ ಕೈ ಗಡಿಯಾರ ೧ [illegible] ಬಂಗಾರ ಗಿಲ್ಟಿನ [illegible] (ನಿತ್ಯಪಯೋಗ [illegible]) ಉಚಿತಗಳೊಂದಿಗೆ

ಮೂಲ್ಯ ರೂ ೩—೦—೦ ಮಾತ್ರ ಟಪ್ಪಾಲು ಹಾಸಲು ೦—೧೧—೦

ಪತ್ರವ್ಯವಹಾರವು ಇಂಗ್ಲಿಷನಲ್ಲಿಯೇ ಸಾಗಲಿರುವುದು

ಇಂಡಿಯನ್ ಸ್ಟೋರ್ಸ್ ಕೋ,
47, ಬೆನಿಯಾಟೊಲಾ ಸ್ಟ್ರೀಟ್, ಪಿ ಓ., ಹಟ್ಖೋಲಾ, ಕಲ್ಕತ್ತೆ

**INDIAN STORES CO.** 47, Beniatola Street, Po, Hatkhola. CALCUTTA.



## ಅನುಕ್ರಮಣಿಕೆ.


ಅಗ್ರಲೇಖ.

ಹಳೆ ಕಾನೂನಿನ ಹೊಸ ಅರ್ಥ . . . . . ೮

ಸ್ಫುಟವಿಚಾರಗಳು . . . . . ೬

ನೋಟಗಳು . . . . . . ,,

ವರ್ತಮಾನ ಸಂಗ್ರಹಗಳು

ವಿದೇಶ ವರ್ತಮಾನ . . . . . ೮

ಒಳದೇಶ ವರ್ತಮಾನ . . . . . ೮ ೯

ಪತ್ರಿಕಾ ಕನ್ನಡ—ಮಂಗಳೂರು, ಗುರುಪುರ, ಬಂಟ್ವಾಳ

ಉಡುಪಿ . . . . ೯

ವಿವಿಧ ಸಮಾಚಾರಗಳು . . . ೧೧

ಕೊಡಗು ದೇಶದ ರಾಜ್ಯಭಾರ ಕ್ರಮ ೧೫

ಇಂಡಿಯಾ ಸರಕಾರದ ಸೂಚನೆಗಳು . ,,

ಸರ್‍ ಸಪ್ರುರವರು ಚಕ್ರಗೋಷ್ಠಿಯಲ್ಲಿ ,,

ಮಹಾತ್ಮಾಜಿಯವರ ಸತ್ಯಾಗ್ರಹ ಸಮಾಚಾರ . ೪ ೧೫

ಹಿಂದೂಸ್ಥಾನದ ಇತಿಹಾಸ ೧೬


# ಸ್ವದೇಶಾಭಿಮಾನಿ.

ತಾರೀಕು ೫ನೇ ಶುಕ್ರವಾರ ದಶಂಬರ ೧೯೩೦

## ಹಳೆ ಕಾನೂನಿನ ಹೊಸ ಅರ್ಥ.

ಮುಂಬಯಿಯ "ವಾರ್ ಕೌನ್ಸಿಲಿ"ನ ಕಾರ್ಯಕ್ರಮವನ್ನು ಪ್ರಕಟಿಸಿದ ಬಗ್ಗೆ ಬೊಂಬೈ ಕ್ರೋನಿಕಲ್ ಮತ್ತು ಫ್ರಿಪ್ರೆಸ್ಸಿನ ಸಂಪಾದಕರ ಮೇಲೆ ಖಟ್ಲೆ ನಡೆದು, ಮಿ. ಬ್ರೆಲ್ವಿಯವರಿಗೆ ಶಿಕ್ಷೆಯಾಯಿತು. ದೇಶದಲ್ಲಿ ಬೆಳೆದು ಬಂದ ಅಸಾಮಾನ್ಯ ಚಳವಳಿಯನ್ನು ಅಡಗಿಸುವ ಉದ್ದೇಶದಿಂದ, ಇದ್ದ ಕಾನೂನು ಸಾಕಾಗದೆ ಪ್ರೆಸ್ ಒರ್ಡಿನೆನ್ಸನ್ನು ಜ್ಯಾರಿಗೆ ತಂದರೂ, ಆ ಒರ್ಡಿನೆನ್ಸಿನಲ್ಲಿ ಕೂಡ ಅಪರಾಧವೆಂದು ಕಾಣಲಾಗದ ಆರೋಪಣೆಯು ಒರ್ಡಿನೆನ್ಸು ಅವಧಿ ಬಾಧೆಯಿಂದ ಅಂತ್ಯವಾದ ಮೇಲೆ ಸಾಮಾನ್ಯ ಕಾನೂನಿಂದಲೇ ಅಪರಾಧವೆಂದು ಸ್ಥಾಪಿತವಾಗಿ ಮೆಜಿಸ್ಟ್ರೇಟರಿಂದ ಶಿಕ್ಷಿಸಲ್ಪಟ್ಟಿತೆಂಬ ವಿಷಯವೇ ಅತ್ಯಂತ ಮುಖ್ಯವಾದುದಾಗಿದೆ.

"ವಾರ್ ಕೌನ್ಸಿಲು" ಬೇಕಾಯಿದೇಶೀರಾಗಿ ಮಾಡಲ್ಪಟ್ಟಿತು ನಿಜ. ಆದರೆ ಅದರ ಕಾರ್ಯಕಲಾಪಗಳನ್ನು ಪ್ರಕಟಿಸುವುದು ಅಪರಾಧಕರವೆಂಬುದು ಮುಂಬಯಿ ಮೆಜಿಸ್ಟ್ರೇಟರ ಈ ಆಶ್ಚರ್ಯಕರ ತೀರ್ಮಾನದಿಂದಲೇ ತಿಳಿಯಬೇಕಲ್ಲದೆ, ಬೇರಾವ ಆಧಾರವೂ ಅದಕ್ಕಿರುವುದಿಲ್ಲ. ಬೇಕಾಯಿದೆಶೀರಾದ ಸಂಸ್ಥೆಯ ಕಾರ್ಯಕ್ರಮವನ್ನು ಪ್ರಕಟಿಸಿದರಿಂದ ಆ ಸಂಸ್ಥೆಗೆ ಸಹಾಯ ಮಾಡಿದಂತಾಯಿತೆಂಬುದೇ ಮೆಜಿಸ್ಟ್ರೇಟರ ತೀರ್ಮಾನ. ಆದರೆ ಅದರಿಂದ ಆ ಸಂಸ್ಥೆಗೆ ಸಹಾಯವಾಗುವುದಕ್ಕಿಂತಲೂ, ಅದರ ಕಾರ್ಯಕ್ರಮವನ್ನು ತಿಳಿಯುವ ಬಗ್ಗೆ ಸರಕಾರಕ್ಕೇನೇ ಮುಂದಾಗಿ ತಿಳಿಸಿ ಸಹಾಯ ಮಾಡಿದಂತೆಯೂ ಆಗುವುದಿಲ್ಲವೇ?

ಪ್ರೆಸ್ ಒರ್ಡಿನೆನ್ಸನ್ನು ಕೂಡ ಹೊರಡಿಸಿದ ಸಮಯದಲ್ಲಿ ಲೋರ್ಡ ಇರ್ವಿನರು 'ಇದರಿಂದ ಪತ್ರಿಕೆಗಳ ನ್ಯಾಯವಾದ ಕರ್ತವ್ಯನಿರ್ವಹನೆಗೆ ಬಾಧೆಬಾರದು, ಬರೇ ವಾರ್ತಾ ಪ್ರಕಟನೆಗೆ ತೊಂದರೆಬಾರದು' ಎಂದು ಇರ್ವಿನರು ಆಶ್ವಾಸನೆಕೊಟ್ಟಿದ್ದರು. ಆದರೆ ಸಾಮಾನ್ಯ ಕಾನೂನಿಂದ ವಾರ್ತಾ ಪ್ರಚಾರಕ್ಕೂ ಹಾನಿ ಬರುವುದೆಂದಾದರೆ, ಇದು ಕಾನೂನಿನ ದುರುಪಯೋಗವೆಂದೇ ಹೇಳಬೇಕಲ್ಲವೇ?

ಪತ್ರಿಕೆಗಳ ಕರ್ತವ್ಯವೇನು? ಸರಿಯಾದ, ಸತ್ಯವಾದ ವರ್ತಮಾನಗಳನ್ನು ಕೊಡುವುದು, ಜನರಿಗೆ ಹಿತಕರವಾಗುವ ರೀತಿಯಲ್ಲಿ ಅಭಿಪ್ರಾಯಗಳನ್ನು ಬೆಳೆಸುವುದು. ಇವೆರಡೇ ವಾರ್ತಾಪತ್ರಿಕೆಗಳ ಮುಖ್ಯ ಕರ್ತವ್ಯವಾಗಿದೆ. ಇವು ಕೂಡ ಈಗಿನ ರಾಜ್ಯಭಾರದಲ್ಲಿ ಎಡೆಯಿಲ್ಲವೆಂದಾದರೆ ಪತ್ರಿಕೆಗಳು ಇದ್ದೂ ಇಲ್ಲದಂತಾಗುವುದು. ಈ ವಿಷಯದಲ್ಲಿ ಬ್ರಿಟಿಷ ಪತ್ರಿಕೆಗಳೇ ನಮ್ಮವು. ಬ್ರಿಟಿಷ ಪ್ರಜೆಗಳು ಯಾವ ರೀತಿಯಲ್ಲಿ ತಮ್ಮ ಸ್ವಾತಂತ್ರ್ಯವನ್ನು ಕಾದಿಟ್ಟಿರುವರೋ, ಬ್ರಿಟಿಷ ಪತ್ರಿಕೆಗಳು ಕೂಡ ತಮ್ಮ ಹಕ್ಕುಬಾಧ್ಯತೆಗಳನ್ನು ಅಷ್ಟೇ ಬಲದಿಂದ ಕಾದಿಟ್ಟಿರುವರು. ತತ್ವದಲ್ಲಿ, ಪ್ರಜಾಸ್ವಾತಂತ್ರ್ಯ, ಅಭಿಪ್ರಾಯಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯಗಳ ವಿಷಯದಲ್ಲಿ ಬ್ರಿಟಿಷರು ಕಡಿಮೆಯವರಲ್ಲ. ಆದರೆ ಅಧೀನ ಜನಾಂಗದ ವಿಷಯದಲ್ಲಿ ಮಾತ್ರ ಈ ತತ್ವಗಳು ಕುಸಿದು ಹೋಗುವುದೇಕೋ ನಾವರಿಯೆವು. ಹಿಂದೀ ಸ್ವಾತಂತ್ರ್ಯದಿಂದ ಕೂಡಲೇ ಬ್ರಿಟಿಷರು ಪ್ರತಿ ಒಬ್ಬರೂ ವ್ಯರ್ಥಕ್ಕೆ ತಪ್ಪಿಹೋಗುವುದಲ್ಲಾ' ಎಂದೇ ನೆನಸುವರು. ಪತ್ರಿಕಾ ಸ್ವಾತಂತ್ರ್ಯದ ವಿಷಯದಲ್ಲಿ?

ಬ್ರಿಟಿಷ ಪತ್ರಿಕೆಗಳು ಹಿಂದೀಯ ಪತ್ರಿಕೆಗಳ ಮೇಲೆ ವ್ಯವಸಾಯ ಭಾಂಧವ್ಯವನ್ನು ಮನಸ್ಸಿನಲ್ಲಿಟ್ಟುಕೊಳ್ಳದಿರುವುದು ಶೋಚನೀಯ. ಇದರಿಂದ ಅವುಗಳಲ್ಲಿ ಎಂತಹ ಭಯಂಕರ ಸ್ವಾರ್ಥವು ಇದೆಯೆಂದೂ ತಿಳಿದುಕೊಳ್ಳಬಹುದು. ಆದರೆ ಪತ್ರಿಕೆಗಳ ಮೇಲೆ ಇಂತಹ ನಿರಾಧಾರ ದಬ್ಬಾಳಿಕೆಯು ಹೊರಿಸಲ್ಪಡುವಾಗ, ಅವರ ಆ ಸ್ವಾರ್ಥವಾದರೂ ಮರೆಯಾಗುವ ಅವಶ್ಯಕತೆಯು ಸಂದರ್ಭವು ಬಂದಿದೆಯೆಂದು ಅವರು ತಿಳಿದುಕೊಳ್ಳಬೇಕು. ಬ್ರಿಟಿಷ ಪತ್ರಿಕೆಗಳು ತಮ್ಮ ಮೇಲೆ ತಮ್ಮ ಸರಕಾರವು ಏನಿಷ್ಟೊಂದು ಜುಲುಮೆ ನಡಿಸಿದ ಕೂಡಲೇ ಎಲ್ಲ ಭಿನ್ನ ಭಿನ್ನ ಪಂಗಡದ ಪತ್ರಿಕೆಗಳೂ ಒಟ್ಟಾಗಿ ಪ್ರಚಂಡ ಚಳವಳಿಯನ್ನು ನಡಿಸುವರು. ಆದರೆ ಹಿಂದೀ ಪತ್ರಿಕೆಗಳ ಮೇಲೆ ಪ್ರೆಸ್ ಒರ್ಡಿನೆನ್ಸ್ ಹೊರಿಸಲ್ಪಟ್ಟಾಗ ಹಿಂದೀ ಸರಕಾರೀ ಅಧಿಕಾರಿಗಳಿಗೇನೇ ಅವರು ಬೆನ್ನು ತಟ್ಟಿ 'ಸರಿಯಾಯಿತು' ಎಂದರು. ಇಂತಹವರಿಂದ ಹಿಂದೂಸ್ಥಾನವು ನಿರೀಕ್ಷಿಸತಕ್ಕದ್ದು ಏನೂ ಇರುವುದಿಲ್ಲವೆಂಬುದೇನೋ ನಿಜ. ಆದರೂ ಪತ್ರಿಕಾ ಪ್ರಚಾರದ ವ್ಯವಸಾಯದ ಮೇಲೆಯೇ ಈ ದಿನ ಹಿಂದೀ ಅಧಿಕಾರಿ ವರ್ಗವು ದಬ್ಬಾಳಿಕೆ ಪತ್ರಿಕಾ ವ್ಯವಸಾಯವನ್ನೇ ನಿರ್ಮೂಲಿಸಲು ಯತ್ನಿಸುವ ಸಮಯದಲ್ಲಿ ಹಿಂದೂಸ್ಥಾನದ ಒಗ್ಗಟ್ಟಲ್ಲವಾದರೂ, ತಮ್ಮ ಸ್ವಂತ ಹಿತದ ದೃಷ್ಟಿಯಿಂದಾದರೂ ಅದನ್ನು ನಿರೋಧಿಸುವುದು ಅಗತ್ಯ. ಏಕೆಂದರೆ 'ಡಿಕ್ಟೇಟರ್'ರ ತರಬೇತಿಯು ಇಂತಹ ಸ್ವೇಚ್ಛಾಚಾರಗಳಿಂದಲೇ ಆಗುವುದು. ಹಿಂದೂಸ್ಥಾನದಲ್ಲಿ ನಡಿಯುವ ನಿರಂಕುಶ ವರ್ತನದ ಪ್ರತಿಕ್ರಿಯೆಯು ಇಂಗ್ಲೆಂಡಿನಲ್ಲಿಯೂ ಆಗದೆ ನಿಲ್ಲಲಾರದು.

## ವಿದೇಶ ವರ್ತಮಾನ.

— ಇದುವರೆಗೂ ನಡೆದು ಬಂದ ಚಕ್ರಗೋಷ್ಠಿಯ ಕಾರ್ಯಕ್ರಮಗಳಿಂದ ತಿಳಿದುಬರುವಂತೆ ಲೋರ್ಡ ಸೇಂಕಿ ಎಂಬವರ ೧೩ ಠರಾವುಗಳು ಮಂಜೂರು ಮಾಡಲ್ಪಟ್ಟವೆ. ಅವುಗಳ ಚರ್ಚೆಮಾತ್ರವೇ ಉಳಿದಿರುವದು. ತಾ. ೩ನೇ ದಿನ ಫೆಡರೇಶನ್ ಕಮಿಟಿಯವರು ಸಭೆ ಸೇರಿ ಲೋರ್ಡ ಸೇಂಕಿಯವರ ೧೩ ಠರಾವುಗಳ ಮಂಜೂರಾತಿಯ ಕೆಲಸವನ್ನು ಬೇರೆ ಬೇರೆ ಕಮಿಟಿಗಳಿಗೆ ವಹಿಸಿಕೊಡಲ್ಪಟ್ಟಿರುವದು. ಮೊತ್ತಮೊದಲು ಮೇಲೆ ಹೇಳಲ್ಪಟ್ಟ ೧೩ ಠರಾವುಗಳು ಎಲ್ಲರಿಂದಲೂ ಬಹಿರಂಗವಾಗಿ ಚರ್ಚಿಸಲ್ಪಟ್ಟು ಆಮೇಲೆ ಸಬ್ ಕಮಿಟಿಗಳ ಅವಗಾಹನೆಗೆ ಕಳುಹಲ್ಪಡುವವು. ಇಂತಹ ಸಬ್‌ಕಮಿಟಿಗಳ ನಿರ್ಧಾರವನ್ನು ಮತ್ತೊಮ್ಮೆ ಕಾನ್ಫರೆನ್ಸ್ ಸದಸ್ಯರು ವಿಮರ್ಶಿಸಲಿಕ್ಕಿರುವರು. ಲೋರ್ಡ ಸೇಂಕಿಯವರ ಠರಾವುಗಳಲ್ಲಿ Dominion' ಎಂಬ ಶಬ್ದ ಸೇರಿಸುವಿಕೆಯು ಕುರಿತು ಕೆಲವು ಚರ್ಚೆಗಳು ಎತ್ತಲ್ಪಟ್ಟವಂತೆ. ಆದರೆ ಅಂತಹ ಚರ್ಚೆಗಳು ಇದ್ದಕ್ಕಿದ್ದಂತೆಯೇ ಇರಗೊಳಿಸಲ್ಪಟ್ಟವೆಂದು ತಿಳಿದುಬರುತ್ತದೆ. ಅದು ಫೆಡರಲ್ ಕಮಿಟಿಯ ಸದಸ್ಯರಿಂದ ನಿರ್ಧರಿಸಲ್ಪಟ್ಟ ೮ ಅವುಗಳ ವಿವರವಾದ ರಿಪೋರ್ಟನ್ನು ಮಾಡುವದಕ್ಕಾಗಿ ಸದರಿ ಕಮಿಟಿಯ ಚೆಯರ್‌ಮೇನರು ಕೈಕೆಳಗೆ ಇನ್ನೊಂದು ಸಬ್‌ಕಮಿಟಿಯನ್ನು (Federal Structure Sub Committee) ನಿರ್ಮಿಸಲಾಯಿತು. ಈ ಸಬ್‌ಕಮಿಟಿಯು ಲೋರ್ಡ ಸೇಂಕಿ, ಸಪ್ರು, ಜಯಕರ್, ಮಿ. ಶಾಸ್ತ್ರಿ ಮೊದಲಾದ ಗೃಹಸ್ಥರು ಮೆಂಬರರಾಗಿ ಲೋರ್ಡ ಸೇಂಕಿಯವರ ವಿವರಣೆ ಎಂದು ಬ್ರಿಟಿಷ್ ಇಂಡಿಯಾವು ಸ್ವತಂತ್ರ Unitary State ಆಗುವದಲ್ಲದೆ, ಮತ್ತು ಅನುಕೂಲತೆಗನುಸಾರ ಮಾತ್ರ ಬೇರೆ ಬೇರೆ ಸಂಸ್ಥಾನಗಳನ್ನಾಗಿ ವಿಭಾಗಿಸುವರೆಂದೂ ತಿಳಿದುಬರುತ್ತದೆ. ಬ್ರಿಟಿಷ್ ಇಂಡಿಯಾ ಮತ್ತು ಆಶ್ರಿತ ಸಂಸ್ಥಾನಗಳಿಗೂ ಲೋರ್ಡ ಸೇಂಕಿಯವರ ಮತದಂತೆ ಯಾವತರದ ಸಮ್ಮಂಧವೂ ಕೂಡ ಇರುವದಿಲ್ಲವೆಂದೇ ತೋರಿಬರುತ್ತದೆ. ಆದರೆ ಬ್ರಿಟಿಷ್ ಇಂಡಿಯಾಕ್ಕೂ ಆಶ್ರಿತ ಸಂಸ್ಥಾನಗಳಿಗೂ ಸಂಬಂಧವಿದೆ—ಬರೇ ಸನದುಗಳು ಮತ್ತು ಒಪ್ಪಂದಗಳು. ಇವು ಹೊರ್ತಾಗಿ ಇತರ ರೀತಿಯಲ್ಲಿ ಯಾವ ಸಂಬಂಧವೂ ಇರುವುದಿಲ್ಲವೆಂದು ತಿಳಿದುಬರುತ್ತದೆ. ಆದುದರಿಂದ ಆಶ್ರಿತಸಂಸ್ಥಾನಗಳ ಪ್ರಜೆಗಳು ಬ್ರಿಟಿಷ್ ಇಂಡಿಯಕ್ಕೆ ಸೇರಿದವರಲ್ಲವೆಂದು ಲೋರ್ಡ ಸೇಂಕಿಯವರ ಮತ. ಹಾಗೂ ಹಿಂದೂ ಮುಸಲ್ಮಾನರೊಳಗಿನ ವಿವಾದವು ಸಂಪೂರ್ಣ ತೀರ್ಮಾನವಾಗಲಿಲ್ಲವೆಂದು ತಿಳಿದುಬರುತ್ತದೆ.

— ಲಂಡನ್ ನಗರದ ವೆಸ್ಟ್‌ಮಿನಿಸ್ಟರ್ ಎಂಬಲ್ಲಿ ಇಂಡಿಯಾ ದೇಶದವರು ಭಾರತೀಯ ಸ್ವಾತಂತ್ರ್ಯ ವಿಷಯವನ್ನು ಚರ್ಚಿಸುವುದಕ್ಕಾಗಿ ದೊಡ್ಡದೊಂದು ಸಭೆಸೇರಿದರು. ಹೌಸ್ ಆಫ್ ಕೊಮನ್ಸ್ ಸಭೆಯ ಅನೇಕ ಸದಸ್ಯರು ನೆರೆದಿದ್ದರು. ಇವರ ಪೈಕಿ ಮಿ। ಫೆನ್ನರ್ ಬ್ರೋಕ್‌ವೇ, ಮಿ। ವಿಲ್‌ಫೋರ್ಡ ವೆಲ್ಲೊಕ್, ಶ್ರೀಮತಿ ಎಲ್ಲೆನ್ ವಿಕಿನ್‌ಸನ್ ಮೊದಲಾದವರು ಬಹಿರಂಗವಾಗಿ ಸಭೆಯಿಂದ ಹೊರತಳ್ಳಲ್ಪಟ್ಟರು. ಸಾಕಷ್ಟು ಅಪಮಾನವೂ ಆಯಿತು. ಇಂಡಿಯನ್ ಕಾಂಗ್ರೆಸ್ಸಿನ ಲಂಡನ್ ಶಾಖೆಯವರಿಗೂ ಸಭೆಸೇರಿದ ಇತರ ಗೃಹಸ್ಥರಿಗೂ ಜಗಳವುಂಟಾಗಿ ಮುಷ್ಟಾಮುಷ್ಟಿಯಾಯಿತು. ರೇಗಿದ ಜನಸ್ತೋಮವು ಚೆಯರ್‌ಮೇನರಾದ ಮಿ। ಜೆ. ಮಾರ್ಲೆಯವರನ್ನು ಧಾಳಿಮಾಡಿತು. ಅವರ ಹೊಟ್ಟೆಗೆ ಎರಡು ಸಲ ಬಲವಾದ ಹೊಡೆತಗಳು ತಗಲಿ ಅವರು ಕಷ್ಟಪಡುತ್ತಿರುವರು. ಗಲಭೆಯು ಮಿತಿಮೀರುವದೆಂದು ತಿಳಿದ ಶ್ರೀಮತಿ ಬ್ರಿಜಲಾಲ್ ನೆಹರುರವರು ಗಾಂಧಿಜಿಯವರ ಶಾಂತಿರಕ್ಷಣೆಯನ್ನು ಘೋಷಿಸಿ, ಸಮಾಧಾನಪಡಿಸಲು ಹವಣಿಸಿದರು. ಸಭೆಯ ಚೆಯರ್‌ಮೇನರಾದ ಮಿ। ಜೆ. ಮಾರ್ಲೆಯವರು ತಿಳಿಸುವಂತೆ ಇಂಗ್ಲಿಷ ಕೊಮ್ಯೂನಿಸ್ಟರಲ್ಲೊಬ್ಬನೇ ಅವರನ್ನು ಹೊಡೆದರಂತೆ! ಹಾಗೂ ಮಾಟಿಂಗಿನ ಪರಿಣಾಮವು ಗಲಭೆಯಲ್ಲಿ ಅಂತ್ಯಗೊಂಡಿತು.

— ಜಪಾನ್ ದೇಶದ ಟೋಕಿಯೋ ಎಂಬಲ್ಲಿ ಜ್ವಾಲಾಮುಖಿಯುಂಟಾಗಿ, ೨೫೯ ಮಂದಿ ಮಡಿದಿರುವರು, ೭೫೦ ಜನರು ಗಾಯಪಟ್ಟಿರುವರು. ೨೪೫೪ ಮನೆಗಳು ಸಂಪೂರ್ಣ ನಾಶಹೊಂದಿರುವವು. ೫೩೫೪ ಮನೆಗಳ ಅರೆವಾಸಿ ಹಾಳುಬಿದ್ದಿರುವವು. ರಸ್ತೆಗಳು ಮತ್ತು ಹೊಳೆ ದಂಡೆಗಳಿಂದುಂಟಾದ ನಷ್ಟವು ಸುಮಾರು ೩ ಮಿಲಿಯ 'yen' (ಆ ದೇಶದ ನಾಣ್ಯ)ಗಳಷ್ಟು ಆಗಿರುವದೆಂದು ಊಹಿಸೋಣಾಗಿಯದೆ.

— ಕೊಲೋನ್ ಎಂಬಲ್ಲಿ, ಕೆಲಮಂದಿ ನೇಶನಲ್ ಸೋಶ್ಯಾಲಿಸ್ಟ ಸೇರಿದ ಸದಸ್ಯರು ದಾರಿ ನಡೆಯುತ್ತಿರುವಾಗ, ಅಲ್ಲಲ್ಲಿನ ಸಂದುಗೊಂದುಗಳಲ್ಲಿ ಹೊಂಚುಹಾಕುತ್ತಿದ್ದ ಹಲವು ಕಮ್ಯೂನಿಸ್ಟರು, ಅವರನ್ನು ಗುಂಡುಬಾಡು ಮಾಡಿದರು. ನಾಲ್ಕು ಮಂದಿ ನೇಶನಲಿಸ್ಟರು ಬಲವಾದ ಗಾಯ ಹೊಂದಿರುವರು. ಆ ಮೇಲೆ ಮುಷ್ಟಿಯುದ್ಧಕ್ಕೆ ಮೊದಲಾಯಿತು. ಕೂಡಲೇ ಪೋಲೀಸರು ಬಂದು, ಬಹಳ ಕಷ್ಟದಿಂದ ದಂಗೆಗಾರರನ್ನು ಚದರಿಸಿ, ೪೦ ಮಂದಿ ಆಯುಧಪಾಣಿಗಳಾದ ದಂಗೆಗಾರರನ್ನು ದಸ್ತಗಿರಿ ಮಾಡಿರುವರು.

ಜರ್ಮನ ದೇಶದ ಬರ್ಲಿನ್ ಎಂಬಲ್ಲಿ "ಆಮೆರಿಕ್ಸಿನ" ದಿನಾಚರಣೆಯು ರಕ್ತಪ್ರವಾಹದಲ್ಲಿ ಅಂತ್ಯವಾಯಿತು. ಆದರೆ ನಾಲ್ವರು ಮಾತ್ರ ಘಾಯಹೊಂದಿರುವರು, ಒಬ್ಬನ ದಸ್ತಗಿರಿಯೂ ಆಗಿರುವದು. "ಆಮೆರಿಕ್ಸಿನ" ಸಮಾರಂಭದಲ್ಲಿ ೫೦,೦೦೦ ಜನರು ಮಿಲಿಟರಿಯವರಂತೆ ಯುದ್ಧಪತಾಕೆಗಳನ್ನು ಹಿಡಕೊಂಡು ಸಿಟಿಯಿಂದ ಮೆರವಣಿಗೆಯಲ್ಲಿ ಹೊರಟರಂತೆ!

## ಒಳದೇಶ ವರ್ತಮಾನ.

— ಮದರಾಸು ಪಟ್ಟಣದಲ್ಲಿ ನವಂಬರ ತಿಂಗಳ ಅಂತ್ಯದಲ್ಲಿ ಮಳೆಯು ಚೆನ್ನಾಗಿ ಸುರಿದು ಅನೇಕ ಹಾನಿಗಳನ್ನುಂಟು ಮಾಡಿರುವದು. ತಾ. ೩೦ನೇ ದಿನ ಮಳೆಯ ನೀರು ಒಂದು ಕೂವಮ ನದಿಯಲ್ಲಿ ಸೇರಿ ಬಂದು ಉಕ್ಕೇರುವ ನೀರಿನ ಪ್ರವಾಹದಿಂದ ಕೆಲವು ರಸ್ತೆಗಳು ಕೂಡ ನೀರಲ್ಲಿ ಮುಳುಗಿ ಹೋಗಿದ್ದವಂತೆ! ಕೆಲವು ಕಟ್ಟೋಣಗಳು ಪ್ರವಾಹಕ್ಕೆ ನೆಲಸಮವಾದವು. ಬಡಜನರ ಗುಡಿಸಲುಗಳು ಅಪರಿಮಿತವಾಗಿ ನಾಶಹೊಂದಿರುವವು. ಆದುದರಿಂದ ಬಡವರ ಕಷ್ಟನಷ್ಟಗಳು ಬಹಳವಾಗಿವೆ ಎಂದು ತಿಳಿದುಬರುತ್ತದೆ.

— ಪಂಡಿತ ಮೋತಿಲಾಲ ನೆಹರೂರವರು ಮಲೇರಿಯಾ ಜ್ವರದಿಂದ ಬಾಧೆ ಹೊಂದುತ್ತಿರುವರೆಂದು, ಸದರಿಯವರನ್ನು ಚಿಕಿತ್ಸೆಗೋಸ್ಕರ ಡಾಕ್ಟರರು ಅಭಿಪ್ರಾಯಪಟ್ಟಿರುವರು.

— ಕಲ್ಕತ್ತದಲ್ಲಿ ಪೋಲೀಸರು ವಿದ್ಯಾಲಯವನ್ನು ಒಳಹೊಕ್ಕು ಉಪಾಧ್ಯಾಯರನ್ನೂ ವಿದ್ಯಾರ್ಥಿಗಳನ್ನೂ ಧಾಳಿ ಮಾಡಿದುದರ ಕುರಿತು ವಿಚಾರಣೆ ನಡೆಸುವದಕ್ಕಾಗಿ ತಾ. ೨೯-೧೧-೩೦ರಲ್ಲಿ ಯೂನಿವರ್ಸಿಟಿ ಸಿಂಡಿಕೇಟಿನವರು ಒಂದು ಸಭೆಸೇರಿ ಇನ್ನು ಮುಂದೆ ಕಾಲೇಜಾಧಿಕಾರಿಗಳ ಅಪ್ಪಣೆ ಇಲ್ಲದೆ ಪೋಲೀಸರು ಶಾಲಾ ಕಂಪೌಂಡನ್ನು ಪ್ರವೇಶಿಸಬಾರದೆಂಬುದಾಗಿ ಪೋಲೀಸ ಕಮಿಷನರಿಗೂ ಕಲೆಕ್ಟರಿಗೂ ಒಪ್ಪಂದವಾಗಿರುವದೆಂದು ತಿಳಿದುಬರುತ್ತದೆ.

— ಅಹಮ್ಮದಾಬಾದದಲ್ಲಿ ಆರ್. ಸಿ. ಹೈಸ್ಕೂಲ್ ಎಂಬ ಸರಕಾರಿ ವಿದ್ಯಾಲಯದ ಕಟ್ಟೋಣದ ಮೇಲೆ ಏರಿಸಲ್ಪಟ್ಟ ರಾಷ್ಟ್ರಧ್ವಜವನ್ನು ಪೋಲೀಸರು ಕಿತ್ತೊಗೆದರು. ಈ ಮೊದಲು ವಿದ್ಯಾರ್ಥಿಗಳು ಅದೇ ಶಾಲಾ ಕಟ್ಟಡದಲ್ಲಿ ರಾಷ್ಟ್ರ ಧ್ವಜಾರೋಹಣ ಸಮಾರಂಭವನ್ನು ನಡೆಸಬೇಕೆಂದು ಸನ್ನಾಹಗಳನ್ನು ಒದಗಿಸಿದ್ದರು. ಆದರೆ ಪೋಲೀಸರ ಲಾಠಿಗಳು ವಿದ್ಯಾರ್ಥಿಗಳ ಕಾರ್ಯಕ್ರಮಗಳನ್ನು ತಡೆಗಟ್ಟಿದುವು.

— ಮುಂಬಯಿಯಲ್ಲಿ ಮಿ। ಪ್ರಭಾಕರ ಗೋಪಾಲ್ ಎಂಬ ರಾಜಕೀಯ ಅಪರಾಧಿತರೊಬ್ಬರು ಬಂದಿಖಾನೆಯಲ್ಲಿ ಸರಿಯಾದ ಆಹಾರ ಕೊಡಲಿಲ್ಲವೆಂದು 'ಹಂಗರ್ ಸ್ಟ್ರೈಕ್' ಮಾಡಿದರು. ಆದರೆ ಜೈಲಾಧಿಕಾರಿಗಳು ಹೇಳಿದ ಎಲ್ಲಾ ಕಾಮಗಾರಿಯನ್ನು ಏನೊಂದು ಅಡ್ಡಿ ಇಲ್ಲದೆ ಮಾಡುತ್ತಿದ್ದ ಶ್ರೀ ಪ್ರಭಾಕರ ಗೋಪಾಲರ ನಡತೆಯನ್ನು ನೋಡಿ ಜೈಲಾಧಿಕಾರಿಗಳ ಮನಸ್ಸು ನೊಂದಿತಂತೆ! ಕೈದಿಯು, ಎಷ್ಟು ಹೇಳಿದರೂ ಕೇಳದೆ, ಆಹಾರವನ್ನೇ ಪರಿತ್ಯಜಿಸಿದನು. ಅವನ ವಾದವೆಂದರೆ— ನಾನು ಜೈಲಾಧಿಕಾರಿಗಳು ಹೇಳಿದಂತೆ ಕೆಲಸ ಮಾಡುತ್ತೇನೆ. ಆದರೆ ಆಹಾರವನ್ನು ಮಾತ್ರ ಸ್ವೀಕರಿಸಲಾರೆನು— ಇಷ್ಟೇ ಆಗಿದ್ದಿತು. ಮ್ಯಾಜಿಸ್ಟ್ರೇಟರು ಇವನ ತಪ್ಪು ನಡೆಸಿ ೬ ತಿಂಗಳ ಕಠಿಣ ಸಜೆಗೆ ಗುರಿಪಡಿಸಿದ್ದರು. ಆದರೆ ಅಪೀಲಿನಲ್ಲಿ ಇದ್ದರು ೬ ತಿಂಗಳ ಶಿಕ್ಷೆಯನ್ನು ಬರೇ ೧೪ ದಿವಸಗಳಿಗೆ ಇಳಿಸಿರುವರೆಂದು ತಿಳಿದುಬರುತ್ತದೆ.

— ಲಾಹೋರಿನ ಪಿತೂರಿ ಮೊಕದ್ದಮೆಯಲ್ಲಿ ನಾಲ್ವರ ಮೇಲಿದ್ದ ಸಂಶಯಕ್ಕಾಗಿ ಅವರನ್ನು ಸ್ಪೆಶಲ್ ಟ್ರಿಬ್ಯೂನಲರು ತನಿಖಿ ನಡೆಸುತ್ತಿರುವರು. ಲಾಲ್ ಚಂದ್ ಅಗರವಾಲ್ ಎಂಬವರು ನಾಲ್ವರಲ್ಲೊಬ್ಬರು. 'ಟಿರಾ' ಪೋಲೀಸ್ ಠಾಣೆಗೆ ಬೊಂಬ್ ಹಾರಿಸಿದವರಲ್ಲಿ ಇವರ ಮೇಲಣ ಸಂಶಯವು ತೀವ್ರವಾಗಿರುವದಂತೆ'

— ತಾ. ೨೮—೧೧—೩೦ನೇ ದಿನ ಬನಾರಿಸದಲ್ಲಿ ಪಿಕೆಟಿಂಗ್ ಮಾಡಿದರೆಂಬ ತಕ್ಷೀರಿನ ಮೇಲೆ ಸುಮಾರು ೧೦೦ ಮಂದಿಯು ದಸ್ತಗಿರಿಯಾಯಿತು. ಕೆಲವರನ್ನು ಬಿಟ್ಟಿರುವರೆಂದೂ ತಿಳಿದುಬರುತ್ತದೆ

— ಬನಾರಿಸದಲ್ಲಿ ಮುನಸಿಪಲ್ ಕೌನ್ಸಿಲರಾದ ಮಿ। ವಿಶ್ವನಾಥ ಸಿಂಗ್ ಎಂಬವರು, ಸತ್ಯಾಗ್ರಹದ ಅಪಾದನೆಯ ಮೇಲೆ ಜೈಲಿನಲ್ಲಿರುವ ರಕ್ಷೈ! ಬಂದಿಖಾನೆಯಲ್ಲಿರುವ ಮಿ। ವಿಶ್ವನಾಥರಿಗೆ, ಸದರಿಯವರನ್ನು ಹುದ್ದೆಯಿಂದ ಯಾಕೆ ವಿಮೋಚನೆ ಹೊಂದಿಸಬಾರದೆಂಬ ಸಬಬಿಗೆ ಉತ್ತರವೀಯಬೇಕೆಂದು ಸರಕಾರವು ಪತ್ರ ಒಂದನ್ನು ಬರೆದಿರುವದು ವಿಶ್ವನಾಥರು, ತನ್ನನ್ನು ಊರಜನರು ಕೌನ್ಸಿಲರನ್ನಾಗಿ ಚುನ್ನಾಯಿಸಿರುವದರಿಂದ, ಕೆಲಸದಿಂದ ತೆಗದುಹಾಕುವ ಹಕ್ಕುಸ್ವಾತಂತ್ರ್ಯವು ಎಂದೂ ಸರಕಾರಕ್ಕೆ ಬಿಟ್ಟುಕೊಡಲಾಗಿರುವದಿಲ್ಲವೆಂದು ಖಂಡಿತವಾದ ಉತ್ತರ ಕೊಟ್ಟಿರುವರು.

— ಮುಂಬಾಯಿಯಲ್ಲಿ ಪಿಕೆಟಿಂಗ್ ಕಾರ್ಯಕ್ರಮಗಳು ಬಹಳ ಯಶಸ್ವಿಯಾಗಿ ನಡೆಯುತ್ತವೆ ವಿದೇಶಿ ಬಟ್ಟೆಯ ಅಂಗಡಿಗಳು ನಾರೀ ಸತ್ಯಾಗ್ರಹಿಗಳಿಂದ ಎಡೆಬಿಡದೆ ಪಹರೆ ಮಾಡಲ್ಪಡುತ್ತವೆ ಅನೇಕ ಬೇಕಸೇವಕಿಯರು ಪಹರೆಯ ಕಾರ್ಯಕಲಾಪಗಳ ಅಪಾದನೆಯ ಮೇಲೆ ಸೆರೆಮನೆಯನ್ನು ಸೇರುತ್ತಿರುವರು

— ಕಲ್ಕತ್ತದಲ್ಲಿ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಮೆಂಬರರಾದ ಪ್ರೊಫೆಸರ ಅಬ್ದುಲ್ ರಶೀದ್ ಎಂಬವರನ್ನು ೧೪೪ನೇ ಪ್ರಕರಣದ ಉಲ್ಲಂಘನೆಗಾಗಿ ದಸ್ತಗಿರಿ ಮಾಡಿದರು. ವಿಚಾರಣಾ ಸಮಯದಲ್ಲಿ ಪ್ರೊಫೆಸರು ತಾನು ಅಂದಿನ ೧೨ ಗಂಟೆಯ ವರೆಗೂ ಊಟಮಾಡದೆ ಹಸಿವೆಯಿಂದ ನರಳುತ್ತಿರುವೆನೆಂದು ಮ್ಯಾಜಿಸ್ಟ್ರೇಟರೊಡನೆ ಅರಿಕೆ ಮಾಡಿಕೊಂಡದಕ್ಕಾಗಿ ಉದಾರ ಮ್ಯಾಜಿಸ್ಟ್ರೇಟರು ಎರಡಾಣೆ ಕೊಟ್ಟು ಅವರನ್ನು ರಿಮಾಂಡಿನಲ್ಲಿರಿಸಿದರು

— ಬನಾರಸದಲ್ಲಿ, ಶಾಲಾಕಟ್ಟಡಗಳ ಮೇಲೆ ರಾಷ್ಟ್ರಧ್ವಜಗಳು ಹಾರಾಡುತ್ತಿವೆಯೇ ಎಂಬ ವಿಷಯವನ್ನು ಪೋಲೀಸು ಕಮೀಶನರು ಲಕ್ಷಿಸುತ್ತಿರುವರು ಅನೇಕ ವಿದ್ಯಾಲಯಗಳ ಮೇಲೆ ಏರಿಸಿದ ರಾಷ್ಟ್ರಧ್ವಜಗಳು ಕಿತ್ತೊಗೆಯಲ್ಪಟ್ಟಿರುವವು, ಮತ್ತು ಕೆಲ ಶಾಲೆಗಳ ಸರಕಾರಿ ಗ್ರಾಂಟನ್ನು ಮನ್ನಾಪಡಿಸಿರುವರೆಂದು ತಿಳಿದುಬರುತ್ತದೆ

— ಪೇಶಾವರದಲ್ಲಿ ಸತ್ಯಾಗ್ರಹಿಗಳ ಪಿಕೆಟಿಂಗ್ ಕಾರ್ಯಕ್ರಮಗಳು ಬಹಳ ಯಶಸ್ವಿಯಾಗಿ ನಡೆಯುತ್ತಿವೆ ಅನೇಕರು ಶಿಕ್ಷೆಗೆ ಒಳಗಾಗುತ್ತಿರುವರು

— ಕಲ್ಕತ್ತದಲ್ಲಿ "ನ್ಯಾಶ" ಪತ್ರಿಕೆಯ ಸಂಪಾದಕರಾದ ಮಿ। ಸುರೇಂದ್ರನಾಥ ಸಿಂಗರನ್ನು, ರಾಜದ್ರೋಹಕರ ಸಮಾಚಾರಗಳನ್ನು ಪ್ರಕಟಪಡಿಸಿದರೆಂಬ ಅಪಾದನೆಯ ಮೇಲೆ ಕೈದುಪಡಿಸಿರುವರೆಂದು ತಿಳಿದುಬರುತ್ತದೆ.

— ಸ್ವರಾಜ್ಯ ಪತ್ರಿಕೆಯು ಪುನಹ ಪ್ರಚಾರಕ್ಕೆ ಪ್ರಾರಂಭವಾಗುವದು ಶ್ರೀ ಕೃಪಾನಿಧಿಗಳು ಸಂಪಾದಕರಂತೆ'

— ಕರ್ನಾಟಕ ಪ್ರಾಂತ್ಯಗಳಲ್ಲಿ ಅದ್ಯಾ ಸತ್ಯಾಗ್ರಹದ ಅಪಾದನೆಯಿಂದ ಶಿಕ್ಷೆ ಹೊಂದಿದ ಅನೇಕರನ್ನು, ಶಿಕ್ಷಾವಧಿಯು ಪೂರ್ತಿಯಾದ ಮೇಲೆ ಬಿಡುಗಡೆ ಹೊಂದಿಸಿರುವರು ಹಾಗೂ ಸತ್ಯಾಗ್ರಹ ಚಳವಳವು ಯೋಗ್ಯ ರೀತಿಯಿಂದ ಮುಂದರಿಯುತ್ತಿರುವದೆಂದು ತಿಳಿದುಬರುತ್ತದೆ

— ವೆಲ್ಲೂರಿನಲ್ಲಿ, ಶ್ರೀಮತಿ ಸರಳಾದೇವಿಯೇ ಮೊದಲಾದ ೩ ಮಂದಿ ಮಹಿಳೆಯರು ಜೈಲಿನಿಂದ ಬಿಡುಗಡೆ ಹೊಂದಿಸಿರುವರು ಇವರು ವೆಲ್ಲೂರು ಜೈಲಲ್ಲಿ ಶಿಕ್ಷಾಪಾತ್ರರಾಗಿದ್ದರು

— ಯುನೈಟೆಡ್ ಪ್ರೊವಿನ್ಸಸ್ಸುಗಳ ಕಾಂಗ್ರೆಸ್ ಕಾರ್ಯದರ್ಶಿಯವರನ್ನು ದಸ್ತಗಿರಿ ಮಾಡಿರುವರು

— ಮಿ। ವಿ ಜೆ ಪಟೇಲರನ್ನು ಅಂಬಾಲಾ ಜೈಲಿನಿಂದ ಪುದರಾಸಿಗೆ ತಂದಿರುವರೆಂದು ವದಂತಿ

ನವಾಧಿಲ್ಲಿಯಲ್ಲಿ ಸಾಗರ್ ಫಿಲ್ಮ್ ಕಂಪೆನಿಯವರಿಂದ ತಯಾರಿಸಲ್ಪಟ್ಟ (Romance of a Bhisti) ಎಂಬ ಚಲಚಿತ್ರ ಪ್ರದರ್ಶನವನ್ನು ಸರಕಾರವು ಬಹಿಷ್ಕರಿಸಿರುವದು.

— ಲಾಹೋರಿನಲ್ಲಿ, ಸ್ವದೇಶೀ ವ್ರತವನ್ನು ಕೈಕೊಂಡು ಅನೇಕ ದಿನಗಳ ವರೆಗೆ ಆಹಾರವಿಲ್ಲದೆ Hunger Strike ಮಾಡಿ ಮೃತಪಟ್ಟ ಮೊನ್ನೆ ಜತೀಂದ್ರನಾಥ ದಾಸರ ಶವಸಂಸ್ಕಾರದ ಮೆರವಣಿಗೆಯನ್ನು ತೋರಿಸುವ ಚಲಚಿತ್ರ ಪ್ರದರ್ಶನಕ್ಕೆ, ಪಂಜಾಬು ಸರಕಾರವು ಬಹಿಷ್ಕಾರ ಹಾಕಿರುವದು

— ಅಲ್ಲಹಾಬಾದದಲ್ಲಿ "ಜೈಲ್ ಸೇ ಬ್ಹಾಹಾರ್ ಕೇ ಆಠ್ ದಿನ್" (Eight days out of Jail) ಎಂಬ ಹಿಂದೀ ಕರಪತ್ರವನ್ನು, ಪಂಡಿತ ಜವಾಹಿರ್ಲಾಲರು ಪ್ರಚಾರಪಡಿಸಿದರೆಂಬ ಸಂದೇಹದ ಮೇಲೆ ಯುನೈಟೆಡ್ ಪ್ರೊವಿನ್ಸಸ್ಸಿನ ಸರಕಾರವು ಮೇಲೆ ಹೇಳಿದ ಕರಪತ್ರ ಪ್ರಚಾರಕ್ಕೆ ಬಹಿಷ್ಕಾರ ಹಾಕಿರುವರು.

— ಸೂರತಿನ ಪ್ರಖ್ಯಾತಿ ಹೊಂದಿದ ಜರಿ ವ್ಯಾಪಾರಿಗಳೊಬ್ಬರಿಗೆ ಅಲ್ಲಹಾಬಾದಿನಿಂದ ಶ್ರೀಮತಿ ಜವಾಹಿರಲಾಲನೆಹರುರವರು ಕಳುಹಿರುವರೆಂಬ ವಿಳಾಸವುಳ್ಳೊಂದಿದ್ದ, ರೂ ೬೦೦ರ ಇನ್ಶೂರ್ ಒಂದು ತಲಪಿರುವದು. ಪೋಲೀಸರ ಸಮಕ್ಷಮ ಇನ್ಶೂರನ್ನು ಒಡೆಯಲಾಯಿತು, ಒಳಗಡೆ ಮತ್ತೇನಿಲ್ಲ — ಗಿರಾಕಿ ದೊರೆಯದ ಒಂದು ಪುರಾತನ ಶೀರೆ ಮತ್ತು ಕೆಲವು ಹಳೆ ವಸ್ತ್ರದ ಜರಿಗಳು, ಇವು ಮಾತ್ರವೇ ದೊರೆತಿವೆ ಎಂದು ತಿಳಿದುಬರುತ್ತದೆ

— ಸಿಲ್‌ಚಾರದಲ್ಲಿ ಮಹಮ್ಮದೀಯ ಹೆಂಗುಸರ ಮೇಲೆ ದಾಳಿ ಮಾಡಿದನೆಂದು ಒಂದು ಮೊಕದ್ದಮೆಯು ಪೋಲೀಸು ಇನ್ಸ್‌ಪೆಕ್ಟರರ ಮೇಲೆ ಹೊರಿಸಲ್ಪಟ್ಟಿತ್ತು. ಇದರ ವಿಚಾರಣೆ ನಡೆಯುತ್ತಾ ಕೊನೆಗೆ ಸಬ್ ಜಡ್ಜರು, ಇನ್ಸ್‌ಪೆಕ್ಟರರ ಅವಗುಣಕ್ಕಾಗಿ ಡಿಕ್ರಿ ಕೊಟ್ಟಿರಂತೆ'

— ಸೋಲಾಪುರದ ಪೋಲೀಸು ಅತ್ಯಾಚಾರಗಳ ಗಲಭೆಯಲ್ಲಿ ಅಪಾದಿತರೆಂದು ಗಣಿಸಲ್ಪಟ್ಟು ಮರಣ ದಂಡನೆಗೆ ಗುರಿಪಟ್ಟ ಮಲ್ಲಪ್ಪಾ ಧನಸೆಟ್ಟಿ, ಸಾರ್ದಾರ ಸಿಂದೆ, ಕುರ್ಬಾನ ಹುಸೇನ ಎಂಬ ನಾಲ್ವರು ಪ್ರಿವೀ ಕೌನ್ಸಿಲಿಗೆ ಅಪೀಲು ಮಾಡಲು ಸರಕಾರದೊಡನೆ ಅಪ್ಪಣೆ ಕೇಳಿದ್ದರಷ್ಟೆ' ಅಪ್ಪಣೆಯು ದೊರೆಯಲಿಲ್ಲ ಮರಣ ದಂಡನೆಯೇ ಗಟ್ಟಿಯಾಯಿತು

ಬಾರ್ಡೋಲಿ ರೈತರು ಊರು ಮನೆಗಳನ್ನು ಬಿಟ್ಟು ಬರೋಡಾ ಸಂಸ್ಥಾನದ ಬಳಿಯಲ್ಲಿ ಚಿಕ್ಕ ಗುಡಿಸಲುಗಳನ್ನು ಕಟ್ಟಿ ವಾಸಿಸಲಾರಂಭಿಸಿರುವರೆಂದು ತಿಳಿದುಬರುತ್ತದೆ

ಸಬರ್ಮತಿ ಸೆರೆಮನೆಯಲ್ಲಿದ್ದ ಶ್ರೀ ಮನಿಲಾಲ ಕೋಠಾರಿಯವರನ್ನು ಕಾಠೇವಾಡಾ ಸಂಸ್ಥಾನದ ಪ್ರಜೆಗಳೆಂದು ತಿಳಿದು ಗಡಿದಾಟಿಸಲು ಮುಂಬಾಯಿ ಸರಕಾರವು ಅಪ್ಪಣೆ ಕೊಟ್ಟಿರುವದಂತೆ

— ಢಿಲ್ಲಿ ಕಾಂಗ್ರೆಸ್ ಸಮಿತಿಯ ೬ನೇ ಸರ್ವಾಧಿಕಾರಿಗಳಾದ ಶ್ರೀ ಸುರೇಂದ್ರನಾಥ ಜೋಹಾರರವರಿಗೆ ೬ ತಿಂಗಳ ಕಠಿಣ ಶಿಕ್ಷೆಯು ವಿಧಿಯಾಗಿರುವದು

— ಮುಂಬಾಯಿಯ ೧೬ನೇ ಯುದ್ಧ ಮಂಡಲದ ಅಧ್ಯಕ್ಷರಾದ ಶ್ರೀಮತಿ ಗೂರ್ಮಿಳ ಮೈತ್ರರವರಿಗೂ ಉಪಾಧ್ಯಕ್ಷರಾದ ಶ್ರೀಮತಿ ಪೀರಬಾಲಾ ದೀಕ್ಷಿತರಿಗೂ ಕೈದುಮಾಡಲ್ಪಟ್ಟು ೯ ತಿಂಗಳ ಸಾದಾ ಶಿಕ್ಷೆಯನ್ನು ವಿಧಿಸಿರುವರು

— ಅಖಿಲ ಭಾರತ ರಾಷ್ಟ್ರ ಸಭೆಯ ಕಾರ್ಯದರ್ಶಿ ಮಹಾದೇವ ದೇಸಾಯಿಯರನ್ನು ತಾ ೨೮ ೧೧- ೩೦ನೇ ದಿನ ಕೈದು ಮಾಡಿರುವರು

— ಮುಜಾಫರ್ಪುರದಲ್ಲಿ ಜವಾಹಿರ ದಿನಾಚರಣೆಯ ಕಾರಣದಿಂದ ಸುಮಾರು ೧೧೯೬ ಮಂದಿ ಕೆಲಸಗಾರರು ಸೆರೆಮನೆಗೆ ತೆರಳಿರುವರಂತೆ'

— ರವೀಂದ್ರನಾಥ ಠಾಕೂರರು ಅಮೇರಿಕದಿಂದ ಹಿಂತಿರುಗಲ್ಪಟ್ಟು ಇಂಡಿಯಕ್ಕೆ ಹೊರಟಿರುವರೆಂದು ವದಂತಿ'

— ಕಾಶಿಯಲ್ಲಿ ಕಾಂಗ್ರೆಸ್ ಮುಖಂಡರಾದ ಶಿವಪ್ರಸಾದ ಗುಪ್ತರಿಗೆ ೧೦೦೦೦ ರೂಪಾಯಿಗಳ ದಂಡ ವಿಧಿಸೋಣವಾಯಿತು ದಂಡ ತೆರಲು ಒಪ್ಪದಿದ್ದುದಕ್ಕೆ ಅವರ ಮೋಟಾರ ಕಾರನ್ನು ಏಲಂಪಡಿಸಿದರು ಅದರೆ ಕಾರಿಗೆ ಮಾತ್ರ ಗಿರಾಕಿಗಳಿದ್ದಿಲ್ಲವಂತೆ

— ಕರಾಚಿಯಲ್ಲಿ ವಿದೇಶಿ ಬಟ್ಟೆಯ ಅಂಗಡಿಗಳನ್ನು ಪಹರೆ ನಡಿಸುತ್ತಿದ್ದ ಸ್ವಯಂಸೇವಕರಿಗೆ ಕೆಲವು ಮುಸಲ್ಮಾನರು ಬಡಿದು ಹೊಡೆದರೆಂದು ವಾರ್ತೆ

— ಗುಜರಾಥ ಮುಂತಾದ ಕೆಲವೆಡೆಗಳಲ್ಲಿ ಸ್ವದೇಶಿ ಸಂತೆ ಯುತ ಕೋರ್ಟುಗಳು ಸ್ಥಾಪಿಸಲ್ಪಟ್ಟಿರುವವೆಂದು ತಿಳಿದುಬರುತ್ತದೆ

— ಮುಂಬಾಯಿಯಲ್ಲಿ ಮಂಗಲದಾಸ್ ಮಾರ್ಕೇಟು ಪೂರಾ ಮುಚ್ಚಿರುವದು ವ್ಯಾಪಾರವೆಲ್ಲವೂ ಮನ್ನಾಮಾಡಲ್ಪಟ್ಟಿರುವದು ಅದರೂ ಕೂಡ ನಾರೀಸ್ವಯಂಸೇವಕರು ಕೆಲವೆಡೆಗಳಲ್ಲಿ ಪಿಕೆಟಿಂಗ್ ಕಾರ್ಯಕ್ರಮಗಳನ್ನು ನಡೆಸುತ್ತಿರುವರು

## ದಕ್ಷಿಣ ಕನ್ನಡ

**ಮಂಗಳೂರು:** — ದಕ್ಷಿಣ ಕನ್ನಡ ಜಿಲೆಯ ಡಿಸ್ಟ್ರಿಕ್ಟು ಬೋರ್ಡಿನ ಬರುವ ಜನರಲ್ ಸಭೆಯು ಸದರಿ ಡಿಸ್ಟ್ರಿಕ್ಟು ಬೋರ್ಡಿನ ಆಫೀಸಿನಲ್ಲಿ ತಾ ೬ ೧೨ ೩೦ನೇ ಶನಿವಾರ ಅಪರಾಹ್ನ ಘಂಟೆ ೩ ಘಂಟೆಗೆ ಸರಿಯಾಗಿ ಜರಗಲಿಕ್ಕಿರುವುದು.

ಶ್ರೀ ವಿದ್ವಾನ್ ಕೆ ಕೇಶವಯ್ಯ ಪ್ರಧಾನ ಕಾರ್ಯದರ್ಶಿ ನಿಖಿಲಭಾರತ ಆಯುರ್ವೇದ ವಿದ್ವತ್ಪರಿಷತ್ ಶೃಂಗೇರಿ— ಇವರು ಮುನಿಸಿಪಲ್ ಆಯುರ್ವೇದ ಧರ್ಮಾಸ್ಪತ್ರೆ ಬೊಕ್ಕಪಟ್ಣ— ಬೋಳೂರು ಈ ಧರ್ಮಸಂಸ್ಥೆಯನ್ನು ನವಂಬರ ತಾ ೩೦ನೇ ದಿನ ಸಂದರ್ಶಿಸಿದರು

ಮಂಗಳೂರು ಮ್ಯುನಿಸಿಪಾಲಿಟಿಯ ರಿಪೋರ್ಟಿನಂತೆ ೧೯೩೦ನೇ ಇಸವಿ ನವಂಬರ ತಿಂಗಳ ೨೯ನೇ ತಾರೀಕಿಗೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ೪೬ ಜನನಗಳೂ ೧೩ ಮರಣಗಳೂ ಆಗಿವೆ ಎಂದು ತಿಳಿದುಬರುತ್ತದೆ

ಇದೇ ತಾ ೭—೧೨—೧೯೩೦ನೇ ಭಾನುವಾರ ಪ್ರಾತಃಕಾಲ ೭—೩೦ ಗಂಟೆಗೆ ಸಸ್ಯಾಸಿಗುಡ್ಡೆಯಲ್ಲಿರುವ ಇಲ್ಲಿನ ಸ್ಥಳೀಕ ಆರ್ಯಸಮಾಜದ ಮಂದಿರದಲ್ಲಿ ಹವನ, ಸಂಧ್ಯಾದಿಗಳೂ, ಸಾಯಂಕಾಲ ಗಂಟೆ ೫—೧೫ಕ್ಕೆ ಸದರಿ ಸಮಾಜ ಮಂದಿರದಲ್ಲೇ ಶ್ರೀಯುತ ಎಂ ಮಾಧವ ರಾವ್, ಬಿ. ಎ, ಬಿ. ಎಲ್ ರವರ 'ಸಮಾಜ ಸುಧಾರಣೆ' ಯನ್ನು ಕುರಿತು ಭಾಷಣವೂ ನಡೆಯುವವು ಸರ್ವರಿಗೂ ಸುಸ್ವಾಗತವಿದೆ.

**ಗುರುಪುರ:** — ಇಲ್ಲಿ ಏಳನೇ ಆರೋಗ್ಯ ಮತ್ತು ಶಿಶು ಸಪ್ತಾಹ ಸಮಾರಂಭವು ಗುರುಪುರ ಜಂಗಮ ಮಠದ ಸ್ವಾಮಿಜಿಯವರ ಅಧ್ಯಕ್ಷತೆಯಲ್ಲಿ ತಾ ೧— ೨ ಈ ಎರಡು ದಿವಸಗಳಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ತಾ. ೧ಂದು ಗುರುಪುರ ಹಿಂದೂ ಹಾಯರ್ ಎಲಿಮೆಂಟರಿ ಶಾಲೆಯ, ಆದಿದ್ರಾವಿಡ ಶಾಲೆಯ ಮತ್ತು ಬೋರ್ಡು ಹುಡಗಿಯರ ಶಾಲೆಯ ಮಕ್ಕಳ ಆಟಗಳು, ಧ್ವಜಪತಾಕೆಗಳನ್ನು ಹಿಡಿದು ಮೆರವಣಿಗೆಯೂ ಇತ್ತು ಇದಾದ ನಂತರ ಶಾಲಾ ಮಕ್ಕಳಿಗೂ ಕೂಡಿದ ಸಭಿಕರಿಗೂ ಗುರುಪುರ ಮಧ್ವೆ ಪುರುಷೋತ್ತಮ ಪ್ರಭುರ ಫಲಾಹಾರ ಆತಿಥ್ಯವೂ ನಡೆಯಿತು ತಾ ೨ನೇ ಬೆಳಗ್ಗೆ ೮ ಗಂಟೆಗೆ ಪ್ರಾಯಸ್ಥರ (Seniors) ಆಟಗಳು ಆದ್ದವು ಮಧ್ಯಾಹ್ನ ೩ ಘಂಟೆಗೆ ಮಹಾಸಭೆ ನಡೆಯಿತು ಈ ಸಮಾರಂಭಕ್ಕೆ ಮಂಗಳೂರಿನಿಂದ ರಾಜಾಂಗದ ಹೆಲ್ತ್ ಇನ್ಸ್‌ಪೆಕ್ಟರರೂ, ಇಬ್ಬರು ವೆಕ್ಸಿನೇಟರರೂ ಬಂದಿದ್ದರು ಅದಲ್ಲದೆ ಈ ಸಮಾರಂಭಕ್ಕೆ ಇಲ್ಲಿಯ ರೆವಿನ್ಯೂ ಇನ್ಸ್‌ಪೆಕ್ಟರರೂ, ಎಕ್ಸೈಜ್ ಸಬ್ ಇನ್ಸ್‌ಪೆಕ್ಟರರೂ, ಸರ್ವೆ ಇನ್ಸ್‌ಪೆಕ್ಟರರೂ ಸಹಾ ಹಾಜರಿದ್ದರು ಈ ಶಿಶುಸಪ್ತಾಹ ಸಮಾರಂಭದ ಉದ್ದೇಶ ಮತ್ತು ಜನತೆಯ ಕರ್ತವ್ಯದ ಕುರಿತು ಹಲವರು ಸಭೆಯಲ್ಲಿ ಮಾತಾಡಿದರು ಅನಂತರ ಆಟಗಳ ಸ್ಪರ್ಧೆಯಲ್ಲಿ ಜಯಹೊಂದಿದ ಮಕ್ಕಳಿಗೆ ವಗೈರೆಗೂ, ಆರೋಗ್ಯದಿಂದ ಇದ್ದು ಪುಷ್ಟಿಯಾಗಿರುವ ಮಕ್ಕಳಿಗೂ ಬೊಕ್ಕಟವಾಗಿಟ್ಟ ಕಾಫಿ ಹೊಟೇಲ್ ಕೀಪರ್ ರಾ ಮಧ್ವೆ ಪುರುಷೋತ್ತಮ ಪ್ರಭುರೀಗೂ, ಬೊಕ್ಕಟವಾಗಿ ತನ್ನ ಮನೆ ಕಂಪೌಂಡನ್ನಿಟ್ಟ ರಾ। ಉಪೇಂದ್ರ ಪ್ರಭುರ ಮಗ ಶ್ರೀನಿವಾಸ ಪ್ರಭುರೀಗೂ ಇನಾಮಾಗಿ ಪದಕಗಳು ವಗೈರೆ ಕೊಟ್ಟ ನಂತರ ರಾ ರೆವಿನ್ಯೂ ಇನ್ಸ್‌ಪೆಕ್ಟರರು ಬಂದ ಅತಿಥಿಗಳಿಗೆ ಧನ್ಯವಾದಗಳನ್ನರ್ಪಿಸಿದ ತರುವಾಯ ಶಾಲಾ ಮಕ್ಕಳಿಗೆ ತಿಂಡಿಗಳನ್ನು ಹಂಚಿ ಸಭೆಯು ಮುಕ್ತಾಯವಾಯಿತು ಈ ಸಮಾರಂಭಕ್ಕೆ ಕಂದಾವರ ಮಳಲಿ ಮತ್ತು ಪೊಳಲಿ ಶಾಲಾ ಮಕ್ಕಳೂ ಸಮಾರಂಭ ಕಮಿಟಿಯ ಆಮಂತ್ರಣದಂತೆ ಬಂದಿದ್ದರು ಈ ಸಮಾರಂಭವು ಇಷ್ಟು ಯಶಸ್ವಿಯಾಗಿ ಜರಗುವುದಕ್ಕೆ ಪ್ರಯತ್ನಿಸಿದ ರಾ। ಟಿ. ವೆಂಕಟರಾವ್ ಮಿಸ್ ಕಾರ್ಮಿನ್ ಪಿಂಟ್ರೋ ಮತ್ತು ಕೆ ಲಕ್ಷ್ಮಣ ಕುಮಾರ್ ವಗೈರೆರಿಂದ ಕೂಡಿದ ಈ ಕಮಿಟಿಯವರ ಶ್ರಮವು ಸ್ತುತ್ಯ!

**ಉಡುಪಿ:** ಕಳದ ತಿಂಗಳ ತಾ ೨೬ಕ್ಕೆ ಶ್ರೀ ಮಂಜುನಾಥ ಆಚಾರ್ಯರೆಂಬ ಸ್ವಯಂಸೇವಕರು ಉಪ್ಪೂರಲ್ಲಿ ಮದ್ಯಪಾನ ನಿಷೇಧದ ಪ್ರಚಾರ ಕಾರ್ಯಮಾಡಿದ್ದಕ್ಕೆ ೧೪೪ನೆ ಸೆಕ್ಷನನ್ನು ಉಲ್ಲಂಘಿಸಿದರೆಂಬುವ ತಕ್ಷೀರಿಗೋಸ್ಕರ ಇಲ್ಲಿನ ಸ್ಪೆಶಲ್ ಸಬ್ ಮೆಜಿಸ್ಟ್ರೇಟರಿಂದ ೩ ತಿಂಗಳ ಕಠಿಣ ಶಿಕ್ಷೆಗೆ ಗುರಿಮಾಡಲ್ಪಟ್ಟಿರುತ್ತಾರೆ

ಕಳದ ತಿಂಗಳ ಅಂತ್ಯದಿಂದ ಇಲ್ಲಿನ ಬೋರ್ಡಿನ ಮೂಲಕವಾಗಿ ಸೋಮವಾರ ಪೇಟೆಯಿಂದ ಬೀದಿಗಳಿಗೆ ದಿನಕ್ಕೆ ೩ ಹೊತ್ತು ನೀರು ಹಾಯಿಸಲಾಗುತ್ತದೆ

ಶ್ರೀ ದಾಸಕೂಟದ ಶ್ರೀ ಕೆ ಕೇಶವರಾವ್ ದಾಸಕೇಸರಿಯವರು ನಮ್ಮ ಜಿಲ್ಲೆಗೆ ವಿಜಯಮಾಡಿರುತ್ತಾ ಕುಂದಾಪುರದಲ್ಲಿ ೬-೮ ಉಪನ್ಯಾಸಗಳನ್ನು ಮಾಡಿಕೊಂಡು, ಉಡುಪಿಗೆ ಬಂದಿರುತ್ತಾರೆ ಇಲ್ಲಿ ಇವರು ಶ್ರೀ ಸೋದೆ ಮಠ ಜ್ಯುಬಿಲಿ ಹಾಯಸ್ಕೂಲ್ ಹಾಲ್ ಮತ್ತು ಶ್ರೀ ೬ ಪೇಂ ದೇವಸ್ಥಾನಗಳಲ್ಲಿ ಒಂದೊಂದರಂತೆ ಭಕ್ತಿಪ್ರಧಾನವಾದ ಉಪನ್ಯಾಸಗಳನ್ನು ಮಾಡಿರುತ್ತಾರೆ ಕಲಿಯುಗದಲ್ಲಿ ಅನ್ಯಕತೆ ಭಕ್ತಿಪಥ್ಯಗಳು ಲೋಪವಾಗುತ್ತಿರಲು ಪುರಂದರದಾಸ ಮೊದಲಾದವರ ಉಕ್ತಿಗಳ ಅವಲಂಬನದಿಂದ ಹೊಸ ಮಾದರಿಯಿಂದ ಜನರಲ್ಲಿ ಭಕ್ತಿ ಮೋಕ್ಷ ಮಾರ್ಗಗಳನ್ನು ಸುಲಭಮಾಡಿ ತೋರಿಸುತ್ತಾರೆ ಇವರಿಗೆ ನಮ್ಮ ಜಿಲ್ಲಾ ಬಾಂಧವರು ಆದರಿಸುವುದರಲ್ಲಿ ಹಿಂತೆಗೆಯಲಾರರೆಂದು ಕೋರಿಕೆ

ಶ್ರೀ ಎಮ್ ಪುಂಡಲೀಕ ಕಮ್ತಿ- ಪೇಟೆ ಶೆಟ್ಟಿಯ ಇದೇ ತಾ ೩ ನೆಕ್ಕೆ ೩ರಲ್ಲಿ ಕುಂದಾಪುರದಲ್ಲಿ ವಿವಾಹದೊಡನೆ ಇದೇ ತಾ ೨೩ಕ್ಕೆ ತೀರ್ಥಕ್ಕೆ ಮಂಗಳವರಿಸಲಿದ್ದಾರೆ

ಬಂಟ್ವಾಳ — ಇಲ್ಲಿಗೆ ಬಂದಿರುವ ಲಕ್ಷ್ಮೀರಂಗ ಟೀಚ ಕ್ರಾಫೋಟಿಕ ನ ಟಿ ಮಂಡಳಿಯವರು ಪಕ್ಕ ೧೦ ದಿವಸಗಳಿಂದ ಅತ್ತ ಇತ್ತ ಹೋಗದು ಪರಲಿದ್ದಾರೆ ನಾಳೆ ತಾ ೩ನೇ ಬುಧವಾರಕ್ಕೆ ಇವರು ಇಷ್ಟರ ಅಡುತ್ತಿದ್ದ ಭವ್ಯವಾದ ಥಿಯೇಟರಿನ ಬಂಟ್ವಾಳ ಗೌಡಸಾರಸ್ವತ ವೃಂದದ ಯುವಕರು ಕೀಚಕ ವಧೆ ಎಂಬ ನಾಟಕವನ್ನು ಅಭಿನಯಿಸುವರು ಕೂಡಿಬಂದ ಮೊಬಲಗು ಇಲ್ಲಿಯ ಯೌವನಸ್ಮರಸೇವೆಯ ಉತ್ಸವದ ಫಂಡಿಗೆ ಕೊಡಲಿಕ್ಕಿದ್ದಾರೆ ಎಂಬ ವದಂತಿ

ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರ ಸವಾರಿಯು ಬಂಟ್ವಾಳಕ್ಕೆ ಒಂದು ನಾಲ್ಕೈದು ದಿನ ಮೊಕ್ಕಾಂ ಮಾಡಿ ಸುತ್ತಮುತ್ತಲಿನ ಶಾಲೆಯನ್ನು ಪರೀಕ್ಷೆ ಮಾಡಿ ಹೋಗಲಿಕ್ಕಿದ್ದಾರೆಂದು ವರ್ತಮಾನ ಕೇಳಿಬರುತ್ತದೆ ಬಂದು ಇರುವುದು ಆದು ಅವಗಾಹನೆಗೆ ಕೆಲವು ಸಂಗತಿಗಳು ತಿಳಿಸುವದು ಅವಶ್ಯವಿರುತ್ತದೆ ಯಾವದೆಂದರೆ ೧ ಬಂಟ್ವಾಳ ಸ್ಮಶಾನದ ಹತ್ತಿರ ಇರುವ ಒಂದು ಕಲ್ಲುಮಣ್ಣಿನ ಕಣದ ನೆರೆಯಲ್ಲಿ ಕಳಚಿಹೋಗಿ ವಿಶಾಲವಾ ತೋರುತ್ತಿರುವದೂ, ೨ ತುಂಬೆಯ ಸರಕಾರಿ ಭಾವಿಯ ಆವರಣ ಸರಿಯಾಗಿಲ್ಲದೆ ಮಕ್ಕಳೂ ಮೃಗಗಳೂ ಬೀಳುವ ಸಂಭವ ಇರುವುದನ್ನೂ ೩ ಅಯ್ಯನಾಯ್ಕರ ಓಣಿಯಲ್ಲಿ ಸಂಕದ ಎಡಕಡೆಯಲ್ಲಿ ಕಲ್ಲು ಕಟ್ಟಿಕೊಂಡಂತೆ ಬಲಭಿಕ್ಕಿನಲ್ಲಿ ಸಹ ಒಂದು ಕಲ್ಲಿನ ಗೋಡೆ ಕಟ್ಟಿಕೊಂಡರೆ ಶಾಲೆಗೆ ಹೋಗಿ ಬರುವ ಮಕ್ಕಳಿಗೆ ತೊಂದರೆ ಬಾರದಂತೆ ಮಾಡಬೇಕಾಗಿಯೂ ಕಂಟಿಗಾ ಕೂಟ್ಲು ಬಂಟ್ವಾಳ ತಾಲೂಕು ಬೋರ್ಡಿನವರು ಜನ ವಿಹಾರಾರ್ಥವಾಗಿ ಕಟ್ಟಿಸಿದ ಎರಡು ಕಲ್ಲಿನ ಬೆಂಚು ಕೆಲ ದಿನ ಹಾಳಾದದ್ದು ಈಗಲೂ ವಿಕಾರವಾಗಿ ಕಾಣುತ್ತಿವೆ ಇವುಗಳನ್ನೆಲ್ಲಾ ರಾಜೇಶ್ರೀ ಪ್ರೆಸಿಡೆಂಟರು ಕಣ್ಣಾರೆ ಕಂಡರೆ ತುಂಬಾ ಉಪಕಾರವಾಗುತ್ತಿತ್ತು

ಇಲ್ಲಿಯ ಬೇಬಿ ವೀಕ್‌ನ ಸಪ್ತಾಹದ ಪ್ರೋಗ್ರಾಂ ನಡೆದು ಪ್ರೋಗ್ರೇಮ್ ತಯಾರಾಗಿದೆ ಶನಿವಾರ ಆದಿತ್ಯವಾರ ಬಹಳ ಗದ್ದಲವಿದೆ,

ಶಾಲಿವಾಹನಶಕ ೧೮೫೧ ಶುಕ್ಲನಾಮ ಸಂವತ್ಸರದ ಮಾರ್ಗಶಿರ ಶು। ೬ ಶನಿವಾರದಿಂದ ಪ್ರಥಮೆ ಸಂಸರದ ಮಾರ್ಗಶಿರ ಬ। ೭ ಶುಕ್ರವಾರದ ವರೆಗಿನ ಪಂಚಾಂಗ.

(ಗೋವರ್ಧನ ವೃತ್ತಿ—ವಾರೇ)

| ತಾರೀಖು | [illegible] | [illegible] | [illegible] | [illegible] | [illegible] | [illegible] | ಸೂರ್ಯ ಉ. | ಅಸ್ತ |
|---|---|---|---|---|---|---|---|---|
| 6 | ಶನಿ | ೦ | ೧೧.೧೬ | ರೋಹಿಣಿ | ೧೦ ೪೬ | ೨೮ | 6 43 | 6 2 |
| 7 | ರವಿ | ೨ | ೫೫.೧೪ | ಮೃಗಶಿರಾ | ೧೩ ೪೦ | ೨೦ | 6 42 | 6 2 |
| 8 | ಸೋಮ | ೩ | ೫೦ ೧೩ | ಆರ್ದ್ರಾ | ೧೧.೧೪ | ೨೨ | 6 43 | 6 3 |
| 9 | ಮಂಗಳ | ೪ | ೪೫.೧೪ | ಪುನರ್ವಸು | ೮ ೧೪ | ೨೪ | 6 48 | 6. 3 |
| 10 | ಬುಧ | ೫ | ೩೯.೩೦ | ಪುಷ್ಯ | ೪.೪೩ | ೨೪ | 6 44 | 6 3 |
| 11 | ಗುರು | ೬ | ೩೩ ೩೦ | ಆಶ್ಲೇಷಾ | ೦ ೪೪ | ೨೫ | 6.44 | 6. 3 |
| 12 | ಶುಕ್ರ | ೭ | ೨೭.೪೬ | ಮಘಾ | ೫೩ ೩೦ | ೨೬ | 6.44 | 6. 4 |

## ಮಂಗಳೂರಿನ ವಾಯುಸ್ಥಿತಿ.

| ತಾರೀಖು Date | Temperature. ಉಷ್ಣ (ಶಾಖ) Maximum ಹೆಚ್ಚು | Minimum ಕಡಿಮೆ | Rainfall ಮಳೆ ದಿನದ ಮಳೆ | ಇದುವರೆಗಿನ ಮಳೆ |
|---|---|---|---|---|
| 28 | 91— 3 | 67— 5 | — | — |
| 29 | 91— 0 | 69— 5 | — | — |
| 30 | 89— 3 | 76— 0 | — | — |
| 1 | 90— 2 | 77— 2 | — | — |
| 2 | 93— 0 | 75— 7 | — | — |
| 3 | 90— 8 | 75 3 | — | — |
| 4 | 89— 7 | 75— 9 | — | 136 80 |

## ಮಂಗಳೂರಿನ ಪೇಟೆ ಧಾರಣೆ.

| ಜೀನಸು | ಇಂದ ರೂ. | ಆ | ವರೆಗೆ ರೂ. | ಆ |
|---|---|---|---|---|
| ಮಸ್ಸಾಲೆ | — | 1 | 8 | — |
| ಗುಡ್ಡ | 7 | 2 | — | 6 |
| ಹೊಸ ರಾಶಿ | 6 | 8 | — | |
| ಊರ ತನ್ನರ್ ಬೆಳ್ತಿಗೆ | 7 | 8 | 8 | 4 |
| ರಂಗೂನು ಬೆಳ್ತಿಗೆ ಗೋಣಿ ರಿಕ್ಕೆ | 10 | 0 | 10 | 2 |
| ಸಾಗ | 6 | 12 | — | 4 |
| ಎಂಜಿ ಬೆಳ್ತಿಗೆ ಮುಡಿ ರಿಕ್ಕೆ | 8 | 8 | 6 | 0 |
| ಗೋದಿ ಗೋಣಿ ರಿಕ್ಕೆ | 11 | — | 15 | 0 |
| ಕಡಲೆ ಗೋಣಿ ರಿಕ್ಕೆ | 6 | 8 | — | |
| ಹುರುಳಿ ಗೋಣಿ ರಿಕ್ಕೆ | 10 | 8 | 15 | 8 |
| ಅವರೆ ಗೋಣಿ ರಿಕ್ಕೆ | 12 | 0 | 13 | 0 |
| ತೊಗರಿಬೇಳೆ ಗೋಣಿ ರಿಕ್ಕೆ | 12 | 0 | 25 | 0 |
| ಉದ್ದು ಗೋಣಿ ರಿಕ್ಕೆ | 12 | 0 | 13 | 8 |
| ಹೆಸರು ಗೋಣಿ ರಿಕ್ಕೆ | 12 | 0 | — | |
| ಊರು ಬೆಲ್ಲ ಖಂಡಿ ರಿಕ್ಕೆ | 47 | 8 | 52 | 0 |
| ಉಪ್ಪು ಗೋಣಿ ರಿಕ್ಕೆ | 4 | 6 | 4 | 10 |
| ಕೊಬ್ರಿ ಖಂಡಿ ರಿಕ್ಕೆ | 70 | 0 | 75 | |
| ಕೊಬ್ರಿ ಹಿಂಡಿ ಖಂಡಿ ರಿಕ್ಕೆ | 30 | — | 31 | 0 |
| ಎಳ್ಳಿಂಡಿ ಖಂಡಿ ರಿಕ್ಕೆ | 27 | 8 | 30 | 0 |
| ಕೊಬ್ರಿ ಎಣ್ಣೆ ಮುಡಿ ರಿಕ್ಕೆ | 5 | 4 | 6 | 4 |
| ಎಳ್ಳೆಣ್ಣೆ ಮುಡಿ ರಿಕ್ಕೆ | 6 | 12 | 7 | 0 |
| ಬಡುಗೆಎಣ್ಣೆ ಪೆಟ್ಟಿಗೆ ರಿಕ್ಕೆ | 4 | 7 | 8 | 12 |
| ಮೋರಿಸ ಸಕ್ಕರೆ ಮುಡಿ ರಿಕ್ಕೆ | 3 | 9 | 3 | 4 |
| ಹೊಸ ಮೆಣಸು | 6 | 8 | — | |
| ಸಾಸವೆ ಮುಡಿ ರಿಕ್ಕೆ | 7 | 8 | 6 | 0 |
| ಕೊತ್ತಂಬರಿ ಮುಡಿ ರಿಕ್ಕೆ | 2 | 8 | 3 | 0 |
| ಶೇಖರ ಕಾಫಿ ಖಂಡಿ ರಿಕ್ಕೆ | 240 | 0 | — | |
| ಕಾಳುಮೆಣಸು ಖಂಡಿ ರಿಕ್ಕೆ | 200 | 0 | — | |
| ಮೆಂತ್ಯೆ ಮುಡಿ ರಿಕ್ಕೆ | 27 | 0 | — | |
| ಗೇರುಬೀಜ ಮುಡಿ ರಿಕ್ಕೆ | 3 | 12 | — | |
| ಅಡಿಕೆ ಖಂಡಿ ರಿಕ್ಕೆ | 42 | 8 | 4 | 0 |
| ಹುಣಸೆ ಹಣ್ಣು ಮುಡಿ ರಿಕ್ಕೆ | 14 | 8 | 14 | 10 |
| ಹುಣಸೆ ಬೀಜ ಮುಡಿ ರಿಕ್ಕೆ | 20 | 0 | 21 | 0 |
| ಜೀರಿಗೆ ಸೇರು ರಿಕ್ಕೆ | 12 | 4 | 12 | 8 |
| ಒಣಮೆಣಸು ಮುಡಿ ರಿಕ್ಕೆ | 13 | 9 | 13 | 0 |
| ಅರಸಿನ ರಿಕ್ಕೆ | 13-9-0 | | — | |
| ಅರಸಿನ ಹುಡಿ ಖಂಡಿ ರಿಕ್ಕೆ | 37 | 8 | 45 | 12 |
| ಪ್ಲಾಂಟೇಶನ್ ಕಾಫಿ ಖಂಡಿ ರಿಕ್ಕೆ | 230 | — | — | |
| ಜಾಯಿಕಾಯಿ | 100 | — | 124 | — |
| ಜಾಯಿಪತ್ರೆ | 60 | — | 85 | — |


# Chikmagalur Public Conveyance Motor Service.
## CHIKMAGALUR.
# ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್
## ಚಿಕ್ಕಮಗಳೂರು.

ತಂತಿ ವಿಳಾಸ ಕನ್ವೆಯನ್ಸ್. Tel Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲಕ್ಕಾಗಿ ಕಡೂರು (M. S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡಿಗೆರೆ, ಚಾರ್ಮಾಡಿಘಾಟ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

### ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಿಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ, ಮೈಸೂರುಗಡಿಗೆ 11 4೦ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಬಿಡ ಧರ್ಮಸ್ಥಳ ರೋಡಿಗೆ ಬಿ 1 30ಕ್ಕೂ, ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟ್ರೈನಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು ಕಣ್ಣನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10 30ಕ್ಕೆ ಬೆಳ್ತಂಗಡಿಗೂ 11 ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೂ 12 ಗಂಟೆಗೆ ಚಾರ್ಮಾಡಿಗೂ 12 30ಕ್ಕೆ ಮೈಸೂರು ಗಡಿಗೂ, ಸೇರಿ ಅಲ್ಲಿಂದ ಬಿಡದೆ ಹೊರಟು 2 30ಕ್ಕೆ ಕೊಟ್ಟಿಗೆಹಾರಕ್ಕೂ, ಸುಮಾರು 4 ಗಂಟೆಗೆ ಮೂಡಿಗೆರೆಗೂ 5 ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿರುತ್ತೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7 30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಡರಾಪುರ ಗೋವಾ, ಲೋಂಡ, ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8 ಮತ್ತು 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದರಾಸ್ ವಗೈರೆ ಕಡೆಗಳಿಗೂ 8 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ ಎನ್ ಹನುಮಂತಪ್ಪ, ಫ್ರಾಮರೋಜ್ ಸೊರಾಬ್, ಕೆ ಸೂರಪ್ಪ ಸೆಟ್ಟಿ

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ ಪಿ ಸಿ ಕಂಪೆನಿಯವರ ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

# THE CANARA PUBLIC CONVEYANCE CO., LTD, MANGALORE.
(ESTABLISHED 1914)

# ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,
## ಮಂಗಳೂರು.

### ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಶನು ಕೂಡ ಇರುವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬೇಕೆಂದಿರುವವರು ಪ್ರತಿದಿನವೂ ಮೂಲ್ಕಿ ಮಾರ್ಗವಾಗಿಯೂ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲಿಸಿರುವ,

### ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು

### ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲುಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲುಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಶನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯ ಮೋಟರ ಸರ್ವಿಸಿಗೆ ಕನೆಕ್ಶನ್ ಇರುತ್ತದೆ

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಶಿರಾಡಿ ಮಾರ್ಗವಾಗಿ ಹಿಡಿಸಿಸ್ವಲ್ಪ ಹದಿನಾರು ಘಂಟೆಗಳೊಳಗೂ ತಲುಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

**Secretary,**
*The Canara Public Conveyance Co., Ltd., Mangalore.*

## ವಿವಿಧ ಸಮಾಚಾರಗಳು.

### ಡಾ। ಮೂಂಜೆಯವರು

ಲಕ್ರಿಗೋಟ್ಸ್ಟಯಲ್ಲಿ, ಹಿಂದೀ ಪ್ರತಿನಿಧಿಗಳಾದ ಡಾ। ಮೂಂಜೆಯವರು ಇಂಡಿಯದ ಪರಿಸ್ಥಿತಿಗಳ ಕುರಿತು ಸ್ವಾರ್ಥದಾಯಕವಾದ ಭಾಷಣವಿತ್ತರು. ಬಹುಕಾಲ ಹಿಂದಿನಿಂದಲೂ ಬ್ರಿಟಿಷ ಸಹಾಯವನ್ನು ಹೊಂದುತಿದ್ದು, ಈಗಲೂ ಕೂಡ ತನ್ನ ಸಾಕಣೆಗೆ ಒಳಪಟ್ಟ ಬಡ [illegible]

[illegible]

### ಮಿ। ಯಂ. ಸಿ. ಭಾಗ್ಲಾರವರ ಸ್ಟೇಟ್‌ಮೆಂಟ್:—

ಮುಂಬಾಯಿ ನಗರದ ಮಿ। ಯಂ ಸಿ ಬಾಗ್ಲಾ ಎಂಬವರು ಸೋಲಾಪುರದ ಅನ್ಯವಸ್ಥೆಗಳಲ್ಲಿ ಅಪಾದಿತರೆಂದು ಪರಿಗಣಿಸಲ್ಪಟ್ಟು ಮರಣ ದಂಡನೆಗೆ ಗುರಿಪಡಿಸಿದವರ ಪರವಾಗಿ, ಗವರ್ನರ ಸಾಹೇಬರ ಪರಾಂಬರಿಕೆಯ ಬಗ್ಗೆ ಈ ಕೆಳಗಿನ ಸಾರಾಂಶಗಳನ್ನೊಳಗೊಂಡ ಸ್ಟೇಟ್‌ಮೆಂಟನ್ನು ಕಳುಹಿಸಿರುವರು –

"ಸೋಲಾಪುರದ ದಂಗೆಯಲ್ಲಿ ಮರಣಾವಧಿ ಶಿಕ್ಷೆಗೆ ಗುರಿಯಾದ ಅಲ್ಲಿನ ಅಪೀಲನ್ನು ಕನಿಷ್ಠ ನಡಿಸುವ ವಿಷಯದಲ್ಲಿ, ಪ್ರಿವೀ ಕೌನ್ಸಿಲಿನವರು [illegible]

[illegible]

### ಕಾರ್ಟರಪುರದಲ್ಲಿ ಪೋಲೀಸು ರಾಜ್ಯ.

[illegible]

## ನೋಟೀಸು.

ಕಾಸರಗೋಡು ತಾಲೂಕು ನಂಬ್ರ ೩ನೇ ಒಂಗ್ರ ಮಂಜೇಶ್ವರ ಗ್ರಾಮದಲ್ಲಿರುವ ಕೊಪ್ಪ ಬೀರಾ ವ್ಯೊದಿನ ಬ್ಯಾರಿ ಮಗ ಮಹಮ್ಮದೆ ಬ್ಯಾರಿಯು ಈ ಮೂಲಕ ತಿಳಿಸುವದೇನಂದರೆ—

ನನ್ನ ತಂದೆ ಸದರಿ ಬೀರಾ ವ್ಯೊದಿನ ಬ್ಯಾರಿಗಳಿಗೆ ನಾನು ಮತ್ತು ನನ್ನ ಸಹೋದರರೀರ್ವರು ಕೂಡಾ ಮೂವರು ಗಂಡು ಮಕ್ಕಳು. ನಮ್ಮ ಸಹೋದರಿಯರು ಮೂವರು ಹೆಣ್ಣು ಮಕ್ಕಳು ಈ ರೀತಿ ಆರು ಮಂದಿ ಮಕ್ಕಳೂ ಪಾತುಮ್ಮ ಎಂಬವಳು ಅವರ ಹೆಂಡತಿ. ಈ ಸದರಿ ಆರು ಮಂದಿ ಮಕ್ಕಳಿಗೆ ತಾಯಿ. ಹೀಗೆ 7 ಮಂದಿಯರು ಸದರಿ ಬೀರಾ ವ್ಯೊದಿನ ಬ್ಯಾರಿಗಳ ಸಂಪೂರ್ಣ ವಾರಿಸ್‌ದಾರರಾಗಿರುತ್ತೇವೆ. [illegible]

ತಾ ೪-೧೨-೩೦ ಒಂಗ್ರ ಮಂಜೇಶ್ವರ } ದಸ್ಕತು. [illegible]

## Municipality of Mangalore.

### Notice.

It is hereb[illegible] notifie[illegible] [illegible] the two plots [illegible] ground [illegible] below wi[illegible] the building[illegible] and other improvements standing thereon will be sold by public auction at the Municipal Karangalpady Fish Market premises commencing at 4 p m on Monday the 5th January 1931

Intending purchasers are referred to separate notification [illegible] this date on the subject published in the town copies of which can be had at the Municipal office

Description of the plots to be sold

The Karangalpady Municipal Fish market Compound consisting of

1 Plot T S No 78 A of Codialbail East ward measuring about 17 701 Sq ft R S No 142 A of Codialbail village and

2 Plot T S No 75/B of Codialbail East ward measuring about 6 510 Sq ft R S No 139 B of Codialbail village, reserving a portion measuring 900 Sq ft for public well or other Municipal purposes

Municipal Office, Mangalore, 27th Nov 1930 } Nellikai Venkat Rao, Chairman Municipal Council

## ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತ ಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ.

## ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0

## ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹನ್ನೆರಡು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿವಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0.

## ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ. 0—8—0

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು. ಸಿಟಿ

ಹೆಡ್ ಆಫೀಸ್ ಸೀತಾರಾಘವ ವೈದ್ಯಶಾಲಾ, ಮೈಸೂರು

ಏಜಂಟರು — ಆತ್ಮಾಪುರದ ಸೋಮಯ್ಯ ಮತ್ತು ಕಂಪೆನಿ ಸೋಡಾ ಫ್ಯಾಕ್ಟರಿ ಮಂಗಳೂರು. ಕವಡೆ ಮಾತ್ರ



## ಶ್ರೀ ರಾಧಾಕಾಂತ ಪ್ರೆಸ್,

ರಥಬೀದಿ, ಮೂಲ್ಕಿ.

ಕನ್ನಡ ಮತ್ತು ಇಂಗ್ಲೀಷಿನಿಂದ ಎಲ್ಲಾ ತರದ ಪ್ರಿಂಟಿಂಗ್ ಕೆಲಸಗಳನ್ನು ನಾಜೂಕಾಗಿ ಮಾಡಿಕೊಡಲ್ಪಡುತ್ತದೆ.



## ಕೇವಲ ಕುಸುರಿ ಕ್ರಯ.

ಕ್ರಯ ರೂ 1—14—0 ಮಾತ್ರ. ಸಿಲ್ವರ್ ಕೇಸಿನ ಫಸ್ಟ್ ಕ್ಲಾಸ್ ಗಡಿಯಾರ, ಬಹು ಸಮಯ ಬಾಳಿ, ಒಳ್ಳೇ ಸಮಯ ತೋರಿಸುವುದು. ಎಲ್ಲಾ ಪಟ್ಟಿಯೊಂದಿಗೆ ರೂ 3—8—0 ನಂಬ್ರ 2 ರೂ 4—1—0 ನಂಬ್ರ ರೂ 5—0—0 (ಮೂರುವರುಷದ ಗೆರೆಂಟಿ ಇದೆ)

ಅಂಚೆವೆಚ್ಚ ಅಲ್ಲ.

ಇಂಗ್ಲೀಷಿನಲ್ಲಿ ಕಾಗದ ಬರೆಯಿರಿ.

R. C. MUKERJEE,

2/2 Hari Paul Lane

CALCUTTA



## ಒಂದೇ ತಾಸಿನಲ್ಲಿ

ನವ ಯೌವನವು ಪಡಿಯಬೇಕೆಂಬುಳ್ಳ ಪುರುಷರು

### ರಮಣ ವಿಲಾಸಿನಿ ವಟಿಕಾ

ವನ್ನು ಮಲಗುವುದಕ್ಕೆ ಒಂದು ಘಂಟೆ ಮುಂಚೆ ಒಂದು ಮಾತ್ರೆಯನ್ನು ಸೇವಿಸಿ ಜೀರ್ಣಕ್ಕೆ ಒಂದಿಷ್ಟು ಹಾಲು ಕುಡಿದರೆ ಯಥೇಷ್ಟ ಯಾಗಿ ಸ್ಖಲನವಾಗುವುದು.

16 ಮಾತ್ರೆಗಳಿರುವ ಡಬ್ಬಿ ಕ್ರಯ ರೂ 1—0—0

ಮದನ ಮಂಜರಿ ಫಾರ್ಮಸಿ,

1/94 ಚೀನ ಬಜಾರ್ ಮದರಾಸು.

## ಅಕಾಲ ವಾರ್ಧಿಕ್ಯವೇ?

ಈ ನಮ್ಮ ದುರ್ಲೋಕ ಅಮೃತವಾದ

### ಮದನಮಂಜರಿ ಮಾತ್ರೆಗಳು

ಸೇವಿಸುವವರನ್ನು ಬಿಟ್ಟು ಪಲಾಯನ ಮಾಡುವುದು. ಯಾಕೆ "ಮದನಮಂಜರೀ" ಇದನ್ನು ಉಪಯೋಗಿಸಿ ನವ ಯೌವನವನ್ನು ಪಡೆಯಿರಿ 1 ಡಬ್ಬಿ ಕ್ರಯ ರೂ 1—0—0

ಒಂದ ರೋಗಗಳನ್ನು ಪರಿಹಾರ ಮಾಡಿಕೊಂಡು ನಿರೋಗಿಗಳಾಗುವುದಕ್ಕೆ

ಕ್ರಯವು ಇಲ್ಲದೆ ಉಚಿತವಾಗಿ ಕೊಡುವ

### ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅನೇಕ ರೋಗಗಳ ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿ

ರಾಜವೈದ್ಯ ನಾರಾಯಣಜಿ ಕೇಶವಜಿ,

1/94 ಚೈನಾ ಬಜಾರು ರೋಡು, ಮದರಾಸು



## ಮಾರಾಟಕ್ಕಿವೆ.

ಮಾರಾಟಕ್ಕಿವೆ!

ಆಫೀಸುಗಳಿಗೂ ಶಾಲೆಗಳಿಗೂ ಬೇಕಾಗುವಂಥ

### ಚಕ್ ರೋಲ್‌ಗಳು

ಮದ್ರಾಸು ಸ್ಟಾಂಪಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದೊರೆವುದು.

ಜನರಿಗೆ ಬೇಕಾದಂತೆ ಹಳೇ ಮತ್ತು ಹೊಸ ಪುಸ್ತಕಗಳಿಗೆ ಅಂದವಾದ ಬುಕ್ ಬೈಂಡಿಂಗ್ ಕೆಲಸ ಕಡಿಮೆ ದರದಲ್ಲಿ ಮಾಡಲ್ಪಡುತ್ತದೆ

ಕ್ರಯಪಟ್ಟಿ ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,

ಶಾರದಾ ಛಾಪಖಾನೆ,

ರಥಬೀದಿ ಮಂಗಳೂರು.



ತಿಳಿಯದೇ ಧಾತುಕ್ಷಯವಾಗಿ ಕ್ಷೀಣ ಶಕ್ತಿಗಳೂ ಆದ ಮನುಷ್ಯರಿಗೆ ಮಧ್ಯ ತಾರುಣ್ಯದಲ್ಲಿಯೇ ನಿಜವಾಗಿ ಸಂಸಾರ ಸುಖವು ದೊರೆಯದೇ ನಿರುತ್ಸಾಹ ನಿರಾಶೆಗಳು ಹುಟ್ಟುತ್ತವೆ ಇಂಥ ಮನುಷ್ಯರ ಧಾತು ಕ್ಷಯದೋಷವು ಹೋಗಿಸಿ, ಪೂರ್ಣ ಪುರುಷತ್ವವನ್ನು ಕೊಡುವಂತಹದ್ದು.

## ವೈದ್ಯರಾಜ ಶ್ರೀ ಕೇಶವಶಾಸ್ತ್ರೀ ಮಿರಜಕರ ಇವರ,

ಶಕ್ತಿ ಶಾಂತಿ ವರ್ಧಕ ಆರೋಗ್ಯ ಕೊಡುವ

# ಅಮೃತ ಸಿಂಧು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಸವಿ ಹಾಗು ತೀವ್ರ ಗುಣಕೊಡುವ ಔಷಧವು ಮಾಡಲಾಗಿದೆ.

ಇದರ ಉಪಯೋಗದಿಂದ ಸಪ್ಪಗಿನ ಚರ್ಯೆ, ನಿರ್ಬಲ ಶರೀರ, ನಿರುತ್ಸಾಹ ಮನಸ್ಸು, ಬೌರ ಸತ್ವಹೀನ ದೇಹ, ಅಸ್ಥಿರ ಸ್ವಭಾವ, ನಿಸ್ತೇಜತನವನ್ನು ಹೇಡಿತನವನ್ನು, ಅಂಜುಬುರಕತನ, ಅಕಾಲಮುಪ್ಪು, ಸ್ವಪ್ನಾವಸ್ಥೆ, ವೀರ್ಯದ ನೀರು, ಆಲಸ್ಯ, ಕಣ್ಣು ಕೈಕಾಲುಗಳುರಿಯೋದು, ಉರಿಮೂತ್ರ, ಇಂದ್ರಿಯ ಉರಿ, ಪಿತ್ತವಿಕಾರ, ಅಗ್ನಿಮಾಂದ್ಯ, ನಿದ್ರಾನಾಶ, ಮಲಾವರೋಧ, ಬೆನ್ನು ನೋವು ಸೊಂಟನೋವು, ಕೊಂಕಸೂಲಿ, ಎಲ್ಲ ರಕ್ತದ ಪ್ರಮೇಹರೋಗ, ಮೊದಲಾದ ಎಲ್ಲ ಬೇನೆಗಳು ನಾಶಿಯಾಗಿ ರಸ, ರಕ್ತ, ಅಸ್ಥಿ, ಮಜ್ಜಾ ವೀರ್ಯ ಮೊದಲಾದ ಏಳು ವೀರ್ಯಗಳ ವೃದ್ಧಿಯಾಗಿ ಇಂದ್ರಿಯಜನ್ಯ ಅಶಕ್ತತೆಯು ನಷ್ಟವಾಗಿ ದೇಹದಲ್ಲಿ ಶಕ್ತಿಯೂ ಹುಟ್ಟುತ್ತದೆ ಇದರಿಂದ ಮೊದಲಾದ ಏಳು ವೀರ್ಯಗಳ ವೃದ್ಧಿಯಾಗಿ ಸಂಸಾರಸುಖವು ಸಿಗುತ್ತದೆ. ಹೆಂಗಸರ ಮುಟ್ಟುಶೂಲೆ, ಕೆಂಪು ಹಾಗು ಬಿಳಿ ಪ್ರದರ ಮೊದಲಾದ ಸಂತತಿಗೆ ಬಾಧಕವಾದ ಗರ್ಭಾಶಯದ ಎಲ್ಲ ವಿಕಾರಗಳು ಹೋಗಿ ಪ್ರಕೃತಿಯು ಸುಧಾರಿಸುತ್ತದೆ ಈ ಅಮೃತಸಿಂಧುವನ್ನು ನಸುಕಿನಲ್ಲಿ ಅರ್ಧತೊಲೆ ಮತ್ತು ಸಂಜೆಗೆ ಅರ್ಧತೊಲೆ ತೆಕ್ಕೊಂಡ ಮೇಲೆ ಆಕಳ ಅಥವಾ ಎಮ್ಮೆಯ ಹಾಲನ್ನು ೧೦ ರಿಂದ ೨೦ ತೊಲೆಯ ವರೆಗೆ ತೆಕ್ಕೊಳ್ಳಬೇಕು. ಹತ್ತು ದಿನಗಳ ವರೆಗೆ ಸಾಕಾಗುವ ೧ ಬಾಟಲಿಗೆ ರೂ. ೧-೪-೦, ೪ ಬಾಟಲಿಗೆ ರೂ. ೪, ೧೨ ಬಾಟಲಿಗೆ ರೂ. ೧೧, ಹಾಗು ೧ ಬಾಟಲಿ ಫ್ರೀ. ಅಂಚೆ ಹಾಗು ಪಟ್ಟಿಗಳ ವೆಚ್ಚ ಗಿರಾಕಿ ಕೊಡಬೇಕು.

ಅಮೃತಸಿಂಧು ಡಿಪೋ,

5c Division, ಶಿಹಾಪುರ, ಜಿಲ್ಲಾ ಬೆಳಗಾಂವಿ.



ಸುಲಭ ಕ್ರಯ. ಧಾರಾಳ ಫಲ!

## ದಂತಧಾವನ ಚೂರ್ಣ

# ಟೂತ್ ಪೌಡರ್.

ಎಲ್ಲಾ ವಿಧ ಹಲ್ಲುನೋವುಗಳನ್ನೂ, ಹಲ್ಲುಗಳ ನ್ಯೂನತೆಗಳನ್ನೂ ವಾಸಿಗೊಳಿಸುವುದು. ಹಲ್ಲುಗಳ ಎಡೆಯಿಂದ ಒಸರುವ ರಕ್ತ, ಕೀವು ಮೊದಲಾದವುಗಳನ್ನು ನಿಲ್ಲಿಸುವುದು. ಬಾಯಿಯ ದುರ್ಗಂಧವನ್ನೂ ಹಲ್ಲುಗಳ ಇನ್ನಿತರ ದೋಷಗಳನ್ನೂ ದೂರ ಮಾಡಿ ಯಾವಾಗಲೂ ಹಲ್ಲುಗಳ ಶುಚಿಯಾಗಿಯೂ ಸುವಾಸನೆಯಿಂದಿರುವಂತೆಯೂ ಅತ್ಯುಪಯೋಗಕರವಾಗಿರುವುದು ಪೆಕೆಟು ೧ಕ್ಕೆ ೦—೩—೦ ಡಜನ ಪೆಕೆಟುಗಳಿಗೆ ೧—೪—೦. ಇವುಗಳಲ್ಲದೆ ಮಿಕ್ಕೆಲ್ಲ ಉತ್ಕೃಷ್ಟವಾದ ಆಯುರ್ವೇದ ಔಷಧಗಳೂ ಮಾರಾಟಕ್ಕೆ ಸಿದ್ಧವಾಗಿವೆ ಆಸವ, ಅರಿಷ್ಟ, ಭಸ್ಮ, ಚೂರ್ಣ ಕಷಾಯ, ಲೇಹ, ತೈಲ ಮೊದಲಾದವುಗಳು. ನಮ್ಮಲ್ಲಿ ಆಗಾಗ್ಗೆ ಹೊಸತಾಗಿ ತಯಾರಿಸಲ್ಪಡುವವು ಹಾಗೂ ದೂರದವರು ಮತ್ತು ಹೊರದೇಶದವರು ಪತ್ರ ಮೂಲಕ ಕಾಹಿಲೆ ಮತ್ತು ರೋಗಸ್ಥಿತಿಗಳನ್ನು ತಿಳಿಸಿದಲ್ಲಿ ಯುಕ್ತವಾದ ಔಷಧಗಳನ್ನು ಟಪ್ಪಾಲುದ್ವಾರಾ ಕಳುಹಿಸಲಾಗುವುದು. ಹೆಚ್ಚಿನ ಮಾಹಿತಿ ಬಗ್ಗೆ ಮತ್ತು ಚಿಕಿತ್ಸೆ ಅನುಭಾವಗಳ ಕುರಿತು ಕೆಳಗಿನ ವಿಳಾಸಕ್ಕೆ ಬರೆಯಿರಿ

ಹೆಚ್ಚಿನ ಸಂಗತಿಗಳನ್ನು ತಿಳಿಯ ಬೇಕಾದವರಿಗೆ ಮಲಯಾಳದಲ್ಲಿ ಮತ್ತು ಕನ್ನಡದಲ್ಲಿ ಔಷಧ ಪಟ್ಟಿ ಇನಾಂ

ಪಿ. ಕರುಣಾಕರ ವೈದ್ಯರ್.

ಆರೋಗ್ಯಾಮೃತ ಔಷಧಾಲಯ

ಕ್ಯಾಂಪ ಬಜಾರ್ ಕಣ್ಣನೂರು.

P. KARUNAKARAN VYDIAR.

Arogiamritha Aushadhalaya

Camp Bazaar, CANNANORE.

(೧ನೇ ಪುಟದಿಂದ ಮುಂದರಿಸಿಯದೆ)

**'ರೌಂಡ್‌ಟೇಬಲಿನ ಬಳಿಯಲ್ಲಿ ಮೃತಪಟ್ಟ ಇಂಡಿಯಾ ಪ್ರೇತವು ಕುಳಿತಿರುವದು'**

ಎಂದರು—ಮಿ. ಬ್ರೈಲ್ಸ್ ಫೋರ್ಡರು. ಇವರು ಅಲ್ಲಹಾಬಾದದ ಜವಾಹಿರಲಾಲ್ ದಿನಾಚರಣೆಯ ಕುರಿತು, ಈ ಕೆಳಗಿನ ಅಭಿಪ್ರಾಯದ ಲೇಖನ ಒಂದನ್ನು ಪ್ರಚುರಪಡಿಸಿರುವರು.

'ಪಂಡಿತ ಜವಾಹಿರಲಾಲ ನೆಹರುರವರು ಮಹಾತ್ಮಾಜಿಯವರನ್ನುಳಿದರೆ, ಭರತಖಂಡದ ವಿಶೇಷ ಶಕ್ತಿ ಸ್ವರೂಪವೇ ಆಗಿರುವರು. ಅವರನ್ನು ಜೈಲಿನಲ್ಲಿ ಕಂಡು, ನಾನು ಸಂಭಾಷಣೆಮಾಡಿದೆನು. ಕಾರಾವಾಸದಿಂದ ಬಿಡುಗಡೆ ಹೊಂದಿ ಒಂದು ವಾರದೊಳಗಾಗಿ ಅವರನ್ನು ಪುನಃ ಜೈಲಿಗಟ್ಟಿದರು

ಮಾನ್ಯ ಜವಾಹಿರಲಾಲರು ಸತ್ಯಾಗ್ರಹ ಚಳವಳದ ಮೂರ್ತಿಯಂತಿರುವರು. ಕೆಲವು ವರ್ಷಗಳ ಹಿಂದೆ, ನಾನವರನ್ನು ಯುರೋಪಿಯನ್ ಪೋಷಾಕನ್ನು ತೊಟ್ಟವರಾಗಿ, ಯಾವುದೋ ಇಂಗ್ಲಿಷ್ ಯುನಿವರ್ಸಿಟಿಯಿಂದ ಹೊರಹೊರಟ ವಿದ್ಯಾರ್ಥಿಯಂತೆ ಕಂಡೆನು. ಆದರೆ ಇಂದಿನ ಅವರ ಉಡಿಗೆತೊಡಿಗೆಗಳನ್ನು ನೋಡಿದರೆ—ಬರೇ ಕೈಮಗ್ಗದಿಂದ ಮಾಡಿದ ಖದ್ದರ್ ಬಟ್ಟೆಯನ್ನು ಹಾಕಿದವರಾಗಿ ಬಡ ಭಾರತೀಯನಂತೆ ತೋರುತ್ತಿರುವರು. ಸರ್ವಸಾಧಾರಣ ಕಾಂಗ್ರೆಸ್ ಸ್ವಯಂಸೇವಕರು ಉಪಯೋಗಿಸುವ ಸ್ವದೇಶಿ ಅರಿವೆಯನ್ನೇ ಧರಿಸುವರು. ಅವರ ಮುಖಮುದ್ರೆಯು ವಿನಯದಿಂದ ಕೂಡಿದ ಸಭ್ಯತನವನ್ನು ಪ್ರದರ್ಶಿಸುತ್ತಿರುವದು. ಆದರೆ ಅವರ ವಿನಯಪೂರ್ವಕ ಶಾಂತತೆಯ ಹಿಂದೆ ಪ್ರಚಂಡ ಬೆಂಕಿಯಂತಿರುವ ಸ್ವಾತಂತ್ರ್ಯ ಪ್ರಭಾವವು ಸದಾ ಉರಿಯುತ್ತಿರುವದು.

ಪಂಡಿತ ಜವಾಹಿರಲಾಲರ ಆಲೋಚನೆಗಳು, ಅಪೂರ್ವ ಧೈರ್ಯದಿಂದ ಕೂಡಿದವುಗಳಾಗಿದ್ದು, ಹಟವಾದಿಗಳಿಂದ ತನ್ನ ಮಾರ್ಗಕ್ರಮಣವನ್ನು ಮುಂದುವರಿಸುತ್ತಿರುವರು. ಮುಂದಿನ ವಿಚಾರಗಳ ಗ್ರಹಿಕೆಯಲ್ಲಿ ಅವರಷ್ಟು ಬುದ್ಧಿಶಾಲಿಗಳಿರಲಾರರೆಂದೇ ನನ್ನ ನಂಬುಗೆ ಅವರು ಭರತಖಂಡದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬೇಗನೆ ಜಯಶೀಲರಾಗುವದು ತೀರ ಕಷ್ಟಸಾಧ್ಯವು. ಅವರ ಆಲೋಚನೆಯಂತೆ ಇಂಡಿಯಾ ಸ್ವಾತಂತ್ರ್ಯ ವೃಕ್ಷಕ್ಕೆ ಅಪರಿಮಿತ ಶಾಖೆಗಳಿರುವವೆಂದು ತಿಳಿಯಬರುತ್ತದೆ. ಬೇಕಾದ ಧೈರ್ಯಸಾಹಸಾದಿ ವೀರಗುಣಗಳು ಸದಾ ಅವರಲ್ಲಿ ತುಂಬಿರುವವು, ಆಕರ್ಷಕಾರಕವಾದ ಅವರ ಭಾಷಣಮಾಡುವ ಶಕ್ತಿಯು ಅಸಾಮಾನ್ಯವಾಗಿರುವದು. ಆದುದರಿಂದಲೇ ತರುಣ ಭಾರತ ವರ್ಷವು ಅವರನ್ನು ಮುಂದಾಳುವನ್ನಾಗಿ ಚುನಾಯಿಸಿರುವದು. ಭಾರತೀಯರ ಗುಣ ವಿಶೇಷವೆಂದರೆ—ಮುಂದಾಳುವು ಒಮ್ಮೆಗೆ ಬಂದಿಸಲ್ಪಟ್ಟರೂ ಕೂಡ ಭಾರತೀಯರು, ಅವರ ಮುಂದಾಳುವನ್ನೆಂದೂ ಮರೆಯರು. ಮಾನ್ಯ ನೆಹರೂರವರ ಬಂಧನಗಾಗಿ ಅಲಹಾಬಾದವು, ಎರಡು ಸಲ ಅಂಗಡಿ ಬಾಗಲುಗಳನ್ನು ಮುಚ್ಚಿ, ವ್ಯಾಪಾರ ವಹಿವಾಟುಗಳನ್ನು ಮನ್ನಾಪಡಿಸಿತು. ಅವರ ೪೧ನೇ ಜನ್ಮದಿನಾಚರಣೆಯು ಶೀಘ್ರದಲ್ಲೇ ಪ್ರಾರಂಭಿಸಲಿಕ್ಕಿರುವದು. ಹಾಗೂ ಸತ್ಯಾಗ್ರಹ ಚಳವಳವು,—ಸ್ವಾತಂತ್ರ್ಯ ಮತ್ತು ಬಂದಿಖಾನೆ—ಇವೆರಡರ ನಡುವೆ ತೂಗಾಡುವ ಚೆಂಡು ಉಮ್ಮಿನಂತಿರುವದು. ಭಾರತ ವೀರ ಮಹಿಳೆಯರು ತೋರ್ಪಡಿಸುವ ಸತ್ಯಾಗ್ರಹ ಸಹಾನುಭೂತಿಯು ಅದ್ವಿತೀಯವಾಗಿರುವದು

ಮಾತ್ರವಲ್ಲದೆ, ಭರತಖಂಡದ ಸತ್ಯಾಗ್ರಹವನ್ನು ಸಮಾಧಾನಪಡಿಸುವವರಿಗಾಗಿ ಏರ್ಪಟ್ಟ ಆಲೋಚನಾ ಮಂದಿರವೆಂದರೆ. ರೌಂಡ್‌ಟೇಬಲ್ ಕಾನ್‌ಫರೆನ್ಸು, ರೌಂಡ್‌ಟೇಬ್ಲಿನ ಬಳಿಯಲ್ಲಿ ಕುಳಿತಿರುವ ವ್ಯಕ್ತಿ ಎಂದರೆ—ಸತ್ತುಹೋದ ಇಂಡಿಯದ ಪ್ರೇತ ಶರೀರ ಮಾತ್ರ. ಕಳೆದ ಆಗೋಸ್ತು ತಿಂಗಳಲ್ಲಿ, ವರ್ತಮಾನ ಪತ್ರಿಕೆಗಳ ಪಲ್ಲವಿಯಾಗಿದ್ದ ಸಪ್ರೂ ಜಯಕರರ ರಾಜಿ ಪ್ರಸ್ತಾಪವು ಕೊನೆಗಾಣದಿರಲು, ಇಂಡಿಯದ ಸಾಲವೇ ಮೂಲ ಕಾರಣವೆಂದು ಊಹಿಸೋಣವಾಗಿಯದೆ. ಈ ವಿಷಯದಲ್ಲಿ, ಬ್ರಿಟನ್ನಿನವರ ಸೂಚನೆಗಳನ್ನು ಕಾಂಗ್ರೆಸ್ ಪಕ್ಷದವರು ಸಂಪೂರ್ಣ ತಿರಸ್ಕರಿಸಿದರೆಂಬುದು ಎಲ್ಲರೂ ತಿಳಿದಿರುವ ವಿಷಯವಾಗಿದೆ, ಇವೆಲ್ಲಾ ವಿಷಯಗಳನ್ನು ಪರ್ಯಾಲೋಚಿಸಿ, ನಾನು ಸೂಚಿಸುವದೇನಂದರೆ— ಅನೇಕ ವರ್ಷಗಳಿಂದ ಅಶಾಂತತೆಯ ಮೂರ್ತಿಯಂತಿದ್ದ ಭರತಖಂಡವು, ಪ್ರಕೃತದ ಸತ್ಯಾಗ್ರಹ ಸಮರಾಂಗದಲ್ಲಿ ಮುಂದೆ ಬಂದು, ಹಿಂದಿನ ಎಲ್ಲಾ ಅಸಮಾಧಾನಗಳನ್ನು ನೀಗಾಡಲು ಸಿದ್ಧವಾಗಿರುವದು' ಎಂದು ಮಾತ್ರವೇ ಆಗಿದೆ.

**ಇಂಡಿಯನ್ ಮರ್ಚಂಟ್ಸ್ ಚೇಂಬರಿಗೆ ಮುಂಬಾಯಿ ಸರಕಾರದ ಉತ್ತರ.**

ಮುಂಬಾಯಿ 'ಮರ್ಚಂಟ್ಸ್ ಚೇಂಬರ್' ಸಂಸ್ಥೆಯವರು, ಬಾರ್ಡೋಲಿಯ ತೆರಿಗೆ ವಸೂಲಾತಿಯ ಕುರಿತು, ರೆವೆನ್ಯೂ ಅಧಿಕಾರಿಗಳ ಅನ್ಯಾಯ ವರ್ತನೆಗಳನ್ನು ಖಂಡಿಸಿ, ಮುಂಬಾಯಿ ಸರಕಾರಕ್ಕೆ ನ್ಯಾಯಪರಿಪಾಲನೆಗಾಗಿ ಮನವಿಗಳನ್ನು ರವಾನಿಸಿದ್ದರಷ್ಟೇ! ಅಂತಹ ಮನವಿಗಳಿಗೆ ಸರಕಾರವು ಉತ್ತರಕೊಟ್ಟಿರುವದು. ಉತ್ತರದ ಸಾರಾಂಶದಂತೆ ಪೋಲೀಸರು ಬಾರ್ಡೋಲಿಯ ರೈತರಿಗೆ ಹೆಚ್ಚಿನ ಕಷ್ಟ ನಷ್ಟಗಳಿಗೆ ಗುರಿಪಡಿಸುವದಿಲ್ಲವೆಂದು ತಿಳಿದುಬರುತ್ತದೆ. ಲ್ಯಾಂಡ್ ರೆವಿನ್ಯೂ ಕೋಡಿನ ಶರ್ತಗಳಿಗೆ ವ್ಯತಿರಿಕ್ತವಾಗಿ ಅಧಿಕಾರಿಗಳ ವರ್ತನೆಯು ಇರಲಾರದೆಂದೇ, ಮುಂಬಾಯಿ ಸರಕಾರದ ವಾದ, ಆದರೂ, ಅಂಥಹ ತಪ್ಪಿತಗಳನ್ನು ಅಧಿಕಾರಿಗಳ ಮೇಲೆ ರುಜುವಾತುಪಡಿಸಿದ್ದಲ್ಲಿ ಸರಕಾರವು ಅವರಿಗೆ ಯೋಗ್ಯ ದಂಡನೆಯನ್ನು ವಿಧಿಸಲು ಸಿದ್ಧವಾಗಿರುವದಂತೆ! ಮಾತ್ರವಲ್ಲದೆ ಬಾರ್ಡೋಲಿ ದೇಶದ ಕಂದಾಯವು, ಸಕಾಲದಲ್ಲಿ ವಸೂಲಿ ಮಾಡಲಾಗಿರುವದಿಲ್ಲವೆಂಬ ವ್ಯಾಪಾರ ಸಮಿತಿಯ ವಿವಾದಕ್ಕೆ, ಮುಂಬಾಯಿ ಸರಕಾರವು, ಬಾರ್ಡೋಲಿಯಲ್ಲಿ ಮಾತ್ರ ಆ ರೀತಿಯ ವರ್ತನೆಗಳು ಕೈಕೊಳಲಿಲ್ಲವೆಂದು ಖಂಡಿತವಾದ ಉತ್ತರವಿತ್ತಿರುವದು.

ಆದರೆ ಕೈರಾ ಜಿಲ್ಲೆಯ ರೈತರ ಉದ್ಧಟತನವನ್ನು ಪ್ರತಿಬಂಧಿಸುವದಕ್ಕಾಗಿ, ಅಕಾಲಗಳಲ್ಲಿ ತೀವ್ರ ವಸೂಲಾತಿಯನ್ನು ಕೈಕೊಂಡಿರುವುದೆಂಬ ವಿಷಯವು ಮುಂಬಾಯಿ ಸರಕಾರವೇ ತನ್ನ ಉತ್ತರದಲ್ಲಿ ಒಪ್ಪಿರುವದು. ಬಾರ್ಡೋಲಿಯಲ್ಲಿ ತೆರಿಗೆಯನ್ನು ಕಡಿಮೆಮಾಡಬೇಕೆಂದು ಕೇಳಿಕೊಂಡದಕ್ಕೆ, ಸರಕಾರವು ಆ ಕುರಿತು ಕಂದಾಯವನ್ನು ೧೯೨೯ನೇ ವರ್ಷಗಳಲ್ಲೇ ಕಡಿಮೆಮಾಡಲಾಗಿರುವದೆಂದೂ ಮತ್ತು ಈಗಿನ ದವಸ ಧಾನ್ಯಗಳ ಹಾಳು ಬೆಲೆಯಿಂದಲೂ ಕಡಿಮೆಯಾದ ಧಾರಣೆಯ ಮೇಲೆಯೇ ತೆರಿಗೆ ಹೊಸಸೋಣದ ಏರ್ಪಾಡುಗಳು ನಡೆದಿರುವವೆಂದೂ ಉತ್ತರಕೊಟ್ಟಿರೆಂದು ತಿಳಿದುಬರುತ್ತದೆ. ಕರನಿರಾಕರಣೆ ಮಾಡಿದ ರೈತರು ಮಾತ್ರವೇ ಶಿಕ್ಷೆಗೆ ಗುರಿಪಟ್ಟಿರುವರಲ್ಲದೆ, ಇತರರನ್ನೆಂದೂ, ರೆವಿನ್ಯೂ ಅಧಿಕಾರಿಗಳು ತೆರಿಗೆ ಕೂಡಬೇಕೆಂದು ಒತ್ತಾಯಪಡಿಸಲಿಲ್ಲವಂತೆ

---

## ಹಿಂದುಸ್ಥಾನದ ಪ್ರಾಚೀನ ಇತಿಹಾಸ.

### ಸಮುದ್ರಗುಪ್ತನ ರಾಜ್ಯಭಾರ.

ಅಶೋಕನ ಮರಣಾನಂತರ ಆತನು ಸ್ಥಾಪಿಸಿದ ಸಾಮ್ರಾಜ್ಯವು ಕ್ರಮೇಣ ವಿಚ್ಛೇದನವಾಯಿತು. ಸಾಮಂತರಾಜರೇ ಪ್ರಬಲರಾದರು. ಒಂದು ರಾಜನ ಬದಲಿಗೆ ಅನೇಕ ಚಿಕ್ಕ ಚಿಕ್ಕ ರಾಜರಾದರು. ಅನೇಕಾನೇಕ ಹೊಸ ವಂಶಗಳು ಎದ್ದವು ಬಿದ್ದವು. ಆ ಪೈಕಿ ಗುಪ್ತವಂಶವೇ ಚಿರಸ್ಮರಣೀಯವಾಗಿ ಪರಿಣಮಿಸಿತು. ಅಶೋಕನ ಮರಣಾನಂತರ ಸಾಮ್ರಾಜ್ಯ ಯೋಜನೆಯ ಪ್ರಯತ್ನವನ್ನು ಮಾಡಿದವರಲ್ಲಿ ಸಮುದ್ರಗುಪ್ತನೇ ಪ್ರಮುಖನು. ಈತನ ಅಪ್ರತಿಮ ದಿಗ್ವಿಜಯವೂ ಪ್ರತಾಪವೂ ಆಗಿನ ಜನರನ್ನು ಮರುಳುಗೊಳಿಸಿತು. ಅಲ್ಲದೆ ಅಶೋಕನು ಬೌದ್ಧ ಮತವನ್ನು ಪ್ರೋತ್ಸಾಹಿಸಿದಂತೆ ಸಮುದ್ರಗುಪ್ತನು ಹಿಂದೂ ಮತವನ್ನು ಪ್ರೋತ್ಸಾಹಿಸಿದರಿಂದ ಬೌದ್ಧ ಮತವು ಕ್ರಮೇಣ ಪರಾಜಯ ಹೊಂದಿತು.

ಈತನ ವಿಷಯದಲ್ಲಿ ಸರಿಯಾದ ಮತ್ತು ಸಂಪೂರ್ಣವಾದ ಚರಿತ್ರೆ ಇಲ್ಲ. ಆದರೆ "ವಾಂಗ್‌ಯನ್" ಎಂಬ ಚೀನೀ ಪ್ರಯಾಣಿಕ ಮತ್ತು ಚರಿತ್ರೆಗಾರನ ಗ್ರಂಥಗಳಿಂದಲೂ ಆ ಕಾಲದಲ್ಲಿ ಸ್ಥಾಪಿಸಲ್ಪಟ್ಟ ಕಲ್ಲುಗಂಬಗಳ ಮೇಲೆ ಕೆತ್ತಲ್ಪಟ್ಟಿರುವ ಲಿಪಿಗಳಿಂದಲೂ, ನಾಣ್ಯವೇ ಮೊದಲಾದ ಸಾಮಗ್ರಿಗಳಿಂದಲೂ ಈತನ ಚರಿತ್ರೆಗೆ ಅವಶ್ಯಕವಾದ ಅನೇಕಾನೇಕ ಸಂಗತಿಗಳು ದೊರೆತಿವೆ.

ಸಮುದ್ರಗುಪ್ತನು ಗುಪ್ತವಂಶದವನೆಂದು ಆತನ ಹೆಸರಿನಿಂದಲೇ ಸ್ಪಷ್ಟವಾಗಿ ತಿಳಿಯುತ್ತದೆ. ಆತನು ಚಂದ್ರಗುಪ್ತ I ಎಂಬವನ ಮಗನು. ಸುಮಾರು ೧೬೦೦ ವರುಷಗಳ ಹಿಂದೆ ಅಂದರೆ ಕ್ರಿ. ಶ. ೩೨೦ರಲ್ಲಿ ಆತನು ಪಟ್ಟವೇರಿ ಪ್ರಚಂಡತರ ದಿಗ್ವಿಜಯ ವನ್ನು ನಡಿಸಿ, ಸಾಮ್ರಾಜ್ಯವನ್ನು ಸ್ಥಾಪಿಸಿ ಸುಮಾರು ಕ್ರಿ. ಶ. ೩೭೫ರಲ್ಲಿ ತೀರಿಹೋದಂತೆ ಕಾಣಬರುತ್ತದೆ. ಆತನ ತಂದೆಯಾದರೋ ಈಗ ಸಂಯುಕ್ತ ಪ್ರಾಂತ್ಯ (United Provinces) ಔದ, ಆಗ್ರ ಮತ್ತು ಬೀಹಾರ್ ಎಂದೆನ್ನಿಸಿಕೊಂಡಿರುವ ಪ್ರಾಂತ್ಯಗಳನ್ನು ಆಕ್ರಮಿಸಿದ್ದು ಪಾಟಲೀಪುರದಲ್ಲಿ ವಾಸವಾಗಿದ್ದು ಮಹಾರಾಜನೆಂಬ ಬಿರುದನ್ನು ಪಡೆದು ಯಶಸ್ವಿಯಾದುದಲ್ಲದೆ ಗುಪ್ತಶಕವೆಂಬ ಹೊಸತಾದದೊಂದು ಶಕವನ್ನೇ ಆರಂಭಿಸಿದನು.

ಆದರೆ ಸಮುದ್ರಗುಪ್ತನಿಗೆ ಇಷ್ಟು ದೊಡ್ಡ ರಾಜ್ಯವೂ ಸಾಕೆಂದೆನ್ನಿಸಲಿಲ್ಲ. ಪಟ್ಟವೇರುವಾಗಲೇ ಆತನಿಗೆ ಮೌರ್ಯ ವಂಶದ ರಾಜರಂತೆಯೇ ದೊಡ್ಡ ಸಾಮ್ರಾಜ್ಯವನ್ನು ಸ್ಥಾಪಿಸಿ ಪ್ರಸಿದ್ಧಿಹೊಂದಬೇಕೆಂಬ ಮಹದಾಶೆಯು ಮನಸ್ಸಿನಲ್ಲಿ ಅಂಕುರಿಸಿತು. ದಿಗ್ವಿಜಯವೇ ಆತನ ಮುಖ್ಯ ಧ್ಯೇಯವಾಯಿತು. ಆದ ಪ್ರಯುಕ್ತ ಪಟ್ಟವು ಸಿಕ್ಕದೊಡನೆಯೇ ಯುದ್ಧವು ಪ್ರಾರಂಭವಾಯಿತು. ಮೊದಲು ತನ್ನ ತಂದೆಯಿಂದ ಪರಾಜಿತರಾಗದ ನೆರೆಯ ರಾಜರ ಮೇಲೆ ಎತ್ತಿ ಹೋದನು. ಸುಮಾರು ಒಂಭತ್ತು ರಾಜರು ಈ ಮಹಾ ವೀರರಾಜನ ಮುಂದೆ ನಿಲ್ಲಲಾರದೆ ಶರಣಾಗತರಾದರು, ಸಮುದ್ರಗುಪ್ತನು ಉತ್ತರ ಹಿಂದುಸ್ಥಾನದಲ್ಲಿ ಅಪ್ರತಿಮನೆಂದೆನ್ನಿಸಿಕೊಂಡನು. ಆದರೆ ಇಷ್ಟರಲ್ಲೇ ಮನಸಂತುಷ್ಟಿಯಾಗಲಿಲ್ಲ. ದಕ್ಷಿಣ ದೇಶಕ್ಕೆ ಧಾಳಿಯಾಯಿತು. ಆ ಕಾಲದಲ್ಲಿ ದಕ್ಷಿಣ ಹಿಂದುಸ್ಥಾನದಲ್ಲಿ ತಲೆ ಎತ್ತಿದ್ದ ಮಹಾ ಕೋಸಲ, ಕಳಿಂಗ, ಆಂಧ್ರ ಪಲ್ಲವ ವೆಂಗಿ, ಕಾಂಚಿ ಮೊದಲಾದ ಸ್ಥಳಗಳ ರಾಜರು ಸಮುದ್ರಗುಪ್ತನ ಧಾಳಿಗೆ ಸೋತುಹೋಗಿ ಶರಣಾಗತರಾದರು. ಹೇರಳ ದ್ರವ್ಯವು ಸಮುದ್ರಗುಪ್ತನಿಗೆ ದೊರೆಯಿತು. ಇದರಿಂದ ಸಂತುಷ್ಟಿಯಾಗಿ ಹಿಂತಿರುಗಿ ತನ್ನ ರಾಜಧಾನಿಗೆ ತೆರಳಿದನು. ಹೇರಳ ಕಪ್ಪಕಾಣಿಕೆಗಳು ದೊರೆತವು. ದಿಗ್ವಿಜಯವು ಸಂಪೂರ್ಣವಾಯಿತು. ಹಿಮಾಚಲದಿಂದ ವಿಂಧ್ಯಾಚಲದ ವರೆಗೂ ಸಮುದ್ರಗುಪ್ತನ ಪಾಲಾಯಿತು. ಆದರೆ ದಕ್ಷಿಣ ಹಿಂದುದೇಶದಲ್ಲಿನ ರಾಜ್ಯಗಳನ್ನು ತಾನೇ ಆಳುವ ಪ್ರಯತ್ನವನ್ನು ಆತನು ಮಾಡಲಿಲ್ಲ. ಅಶೋಕನ ಮರಣಾನಂತರ ವಿಸ್ತಾರವಾದ ಸಾಮ್ರಾಜ್ಯ ಯೋಜನೆಯನ್ನು ಮೊದಲು ಮಾಡಿದವನು ಚಂದ್ರಗುಪ್ತನು. ದಿಗ್ವಿಜಯವನ್ನು ಪೂರೈಸಿಕೊಂಡ ಮೇಲೆ ಎಂಬ ಹಾಗೆ ಬಹು ವಿಜೃಂಭಣೆಯಿಂದ ಅಶ್ವಮೇಧ ಯಾಗವನ್ನು ಮಾಡಿ ಸಂತಸವನ್ನು ಪಡೆದನು.

ಅಶೋಕನು ಬೌದ್ಧಮತಕ್ಕೆ ಹೇಗೆ ಸರ್ವತೋಮುಖವಾದ ಪ್ರೋತ್ಸಾಹವನ್ನಿತ್ತನೋ ಹಾಗೆಯೇ ಸಮುದ್ರಗುಪ್ತನು ಹಿಂದೂ ಮತಕ್ಕೆ ತನ್ನ ಪೂರ್ಣ ಬೆಂಬಲವನ್ನು ಕೊಟ್ಟನು. ಆದ ಪ್ರಯುಕ್ತ ಬಲವತ್ತಾದ ಬೌದ್ಧಮತವು ಹಿಂದೂಮತದ ಆಗಮನದೆಸೆಯಿಂದ ನಿರ್ನಾಮವಾಯಿತು. ಹಿಂದೂಮತದೊಡನೆ ಬ್ರಾಹ್ಮಣರಿಗೆ ಪುರಸ್ಕಾರವು ದೊರೆಯಿತು. ಸಾಹಿತ್ಯ, ಶಿಲ್ಪ ಮೊದಲಾದ ಕಲೆಗಳು ವೃದ್ಧಿಹೊಂದಿದವು. ಹರಿಸೇನನೆಂಬೊಬ್ಬ ಕವಿಯೋರ್ವನು ಸಮುದ್ರಗುಪ್ತನ ದಿಗ್ವಿಜಯದ ವೃತ್ತಾಂತವನ್ನು, ಸಂಸ್ಕೃತ ಭಾಷೆಯಲ್ಲಿ ಬರೆದನು. ಸಂಸ್ಕೃತವು ಬೌದ್ಧಮತಕ್ಕೆ ಅಂಗವಾಗಿದ್ದ ಪಾಳಿ ಭಾಷೆಯನ್ನು ಕ್ರಮೇಣ ಓಡಿಸಿತು. ಹರಿಸೇನನ ಕಾವ್ಯವು ಅಶೋಕನು ಸ್ಥಾಪಿಸಿದ ಕಲ್ಲುಗಂಬಗಳ ಮೇಲೆ ಕೆತ್ತಲ್ಪಟ್ಟಿದ್ದು ಅಲ್ಲಹಾಬಾದಿನಲ್ಲಿ ಈಗಲೂ ಕಾಣಸಿಕ್ಕುವದು. ಅದರಂತೆ ಸಮುದ್ರಗುಪ್ತನು ಕವಿತಾ ವಿಶಾರದನೂ, ವೀಣಾಗಾನಾ ವಿಶಾರದನೆಂದೂ ಕಲ್ಲುಗಂಬಗಳ ಮೇಲಿನ ಲಿಪಿಗಳಿಂದಲೂ ನಾಣ್ಯಗಳ ಮೇಲಿನ ಚಿತ್ರಗಳಿಂದಲೂ ವಿದಿತವಾಗುವದು. ಸಮುದ್ರಗುಪ್ತನು ವಿದ್ಯಾ ಸಾಹಿತ್ಯಗಳಿಗೂ ಕವಿಪುಂಗವರಿಗೂ ತನ್ನ ಆಸ್ಥಾನದಲ್ಲಿ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಿದ್ದನು. ಪರರಾಜರ ಪೀಡೆಯು ಇಲ್ಲದ ದೆಸೆಯಿಂದ ದೇಶವು ಶಾಂತಿಮಯವಾಗಿದ್ದುದರಿಂದಲೂ ಅರಸನು ಬ್ರಾಹ್ಮಣರನ್ನು ಪ್ರೋತ್ಸಾಹಿಸಿದ ಕಾರಣದಿಂದಲೂ ಮಹಾಭಾರತ, ರಾಮಾಯಣ, ಮನುಧರ್ಮಶಾಸ್ತ್ರವೇ ಮೊದಲಾದ ಉಚ್ಚತರದ ಗ್ರಂಥಗಳೂ ಕಾವ್ಯಗಳೂ ಈ ಕಾಲದಲ್ಲಿ ಉತ್ಪನ್ನವಾದವು

ಫಾ ಹೀನ್ ಎಂಬ ಚೇನೀಯ ಚರಿತ್ರೆಗಾರನ ಅಮೂಲ್ಯ ಗ್ರಂಥಗಳಿಂದ ಸಮುದ್ರಗುಪ್ತನ ಕಾಲದ ಅನೇಕಾನೇಕ ಸಂಗತಿಗಳನ್ನು ತಿಳಿಯಬಹುದು. ಪ್ರಜೆಗಳು ಕಂದಾಯ ಕೊಡಬೇಕಾಗಿದ್ದರೂ ಸುಖವಾಗಿದ್ದರು. ಅರಸನಿಗ ಪ್ರಜೆಗಳ ಮೇಲೆ ದಯೆದಾಕ್ಷಿಣ್ಯವಿತ್ತು. ಪ್ರಯಾಣವು ಸುಲಭವಾಗಿತ್ತು. ದಾರಿಯಲ್ಲಿ ಕಳ್ಳಕಾಕರ ಭೀತಿಯಿರಲಿಲ್ಲ. ಅಪರಾಧಿತರಿಗಂತೂ ತಕ್ಕ ಶಿಕ್ಷೆಯು. ಅಂದರೆ ಜುಲುಮಾನೆಯು ಹೊರಿಸಲ್ಪಡುತ್ತಿತ್ತು ನಾಣ್ಯಗಳೂ, ತೂಕಗಳೂ ಸರಿಯಾಗಿದ್ದವು. ಆತಿಥ್ಯ ಸತ್ಕಾರವು ಚೆನ್ನಾಗಿತ್ತು. ಜನ ಜಾನುವಾರುಗಳಿಗೆ ಯೋಗ್ಯವಾದ ಧರ್ಮಾಸ್ಪತ್ರೆಗಳಿದ್ದವು. ಆದ ಪ್ರಯುಕ್ತ ಸಮುದ್ರಗುಪ್ತನ ೫೫ ವರುಷದ ಆಳ್ವಿಕೆಯನ್ನು ದೇಶವಿದೇಶೀಯ ಚರಿತ್ರೆಗಾರರು ಕೊಂಡಾಡುತ್ತಿರುವರು. ಆದರೆ ಹಿಂದುಸ್ಥಾನದ ಪ್ರಾಚೀನ ಚರಿತ್ರೆಯಲ್ಲಿ ಪ್ರಚಂಡ ಸಾಹಸಿಯೆಂದೂ ವೀರಾಗ್ರೇಸರನೆಂದೂ ವಿಕ್ರಮಾದಿತ್ಯನೆಂಬ ಹೆಸರುವಾಸಿಯಾದವನು ಸಮುದ್ರಗುಪ್ತನೆಂದು ನಿಸ್ಸಂದೇಹವಾಗಿ ಹೇಳಬಹುದು.

ಎಚ್. ಎನ್

ಪರೀಕ್ಷಿಸಿರಿ! ಶಾಸ್ತ್ರೋಕ್ತವಿದು!!
ಕಿಮ್ಮತ್ತು ಅಗ್ಗ ಫಲಪ್ರಾಪ್ತಿ ಕರ

# ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದ ವೈದ್ಯ ಶಾಖೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನ ... "ಕೃಷ್ಣ ಶ್ರೀ ವೈದ್ಯರತ್ನ ಪರಮೇಶ್ವರ ಮೂಸದ" ... [illegible]

ಮ್ಯಾನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.)

## ನೋಡಿದರೆ ಬಿಡದಿರುವ ಕಾದಂಬರಿಗಳು

[illegible]

ವಿಳಾಸ — ಭಿ. ದ. ರಾಳೆ,
ಶ್ರೀ ಆನಂದವನ, ಧಾರವಾಡ

Liveliness zip pep you get that all the time from an Exide because it is built into it.
Care a [illegible] keen discrimination in the selection of materials and the experience of thousands of users have made

**Exide**
THE LONG-LIFE BATTERY
The C P C. Co. Ltd
MANGALORE

**Batliwalla's Preparations Cover All Your Needs.**
A NAME THAT MERIT HAS MADE FAMOUS.
೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

# ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ [illegible] — ಮಲೇರಿಯಾ ಜ್ವರ ನಿವಾರಣ ರೂ ೧
ಬಾಟ್ಲಿವಾಲರ ಬಾಲಾಮೃತ — [illegible]
ಬಾಟ್ಲಿವಾಲರ [illegible]
ಬಾಟ್ಲಿವಾಲರ [illegible]
ಬಾಟ್ಲಿವಾಲರ [illegible] ಗುಳಿಗೆಗಳು — [illegible]
ಬಾಟ್ಲಿವಾಲರ [illegible]
ಬಾಟ್ಲಿವಾಲರ [illegible] ರೂ ೦—೬—೦ LIBERAL DISCOUNT TO TRADE

ಕಾರಖಾನೆ.-CAWASHAPUR, BOMBAY
ಎಲ್ಲಾ ಕಡೆಗಳಲ್ಲಿ ಡಾ. ಯಚ್ ಎಲ್ ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
ಏಜಂಟರು ಬೇಕಾಗಿದ್ದಾರೆ [illegible]ayani Road P O Cadell R ad Bombay No 14

# ಅರ್ಕ
## ಸರ್ವಜ್ವರ ನಿವಾರಿಣಿ
## KESARI KUTEERAM
EGMORE, MADRAS.

## The Kanara Watch House Udipi, S. K.



ಗ್ಯಾರಂಟಿಯುಳ್ಳ ವಾಚುಗಳು! ಅತೀ ಕಡಿಮೆ ಬೆಲೆ

# ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ವಾಚುಗಳೂ, ಕ್ಲೋಕುಗಳೂ, ಟೈಮ್ ಪೀಸುಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೊಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ

**ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.**

ತಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸು, ಫೋನೋಗ್ರಾಫು, ಮತ್ತು ಪೆಟ್ರೊಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು
ರಿಪೇರಿ ಮಾಡುವಾಗ ಚಂದಿಗೆಯು ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯಪಟ್ಟಿ ಇತರ [illegible] ಕೆಳಗಿನ ವಿಳಾಸಕ್ಕೆ ಬರೆಯಿರಿ,

ಮ್ಯಾನೇಜರ್,
ದಿ. ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಶಿ. ಸೂ. — [illegible]

## ಸರ್. ಜೋನ್ ಸ್ಯಾಮನರು.

ಸರ್. ಜೋನ್ ಸ್ಯಾಮನರು ಲಂಡನಿನಲ್ಲಿ ಇಂಡಿಯದ ಭಾವೀ ರಾಜ್ಯಕ್ರಮದ ಕುರಿತು ಒಂದು ಭಾಷಣವಿತ್ತರು. ಅವರು ತನ್ನ ಭಾಷಣದಲ್ಲಿ ಅಂದದ್ದು:—ಇಂಡಿಯಕ್ಕೆ ಹೊಸ ರಾಜ್ಯಭಾರ ಕ್ರಮವನ್ನು ದಯಪಾಲಿಸುವದಿದ್ದರೆ, ಸರ್ವಸಾಮಾನ್ಯವಾದ ಸರಕಾರೀ ಕ್ರಮಗಳ ಬದಲಾವಣೆಯಿಂದ ಹಿಂದುಸ್ಥಾನದಂತಹ ದೇಶವು ಎಂದೂ ತೃಪ್ತಿಹೊಂದಲಾರದು. ಭರತಖಂಡದ ಅವ್ಯವಸ್ಥೆಗಳನ್ನು ನೀಗಾಡಿಸಿ, ಇಂಡಿಯಾ ಚರಿತ್ರೆಯನ್ನು ಪುನರುದ್ಧಾರಮಾಡಲು ಯೋಗ್ಯವಾದ ಮತ್ತು ಸರಸವಾದ ಉಪಾಯಗಳೇ ಬೇಕಾಗಿರುವವು. ನಿಜವಾಗಿಯೂ, ಭಾರತೀಯರ ಬಂಧವಿಮೋಚನಾ ಕಾರ್ಯದಲ್ಲಿ ಬಿಳಿಯರು ಆಸಕ್ತಿಯುಳ್ಳವರಾದರೆ, ಭರತಖಂಡದ ನಿಜಸ್ಥಿತಿಗಳನ್ನು ಚೆನ್ನಾಗಿ ಪರ್ಯಾಲೋಚಿಸಲಿಕ್ಕೇ ಬೇಕು. ಸತ್ಯ ಸಂಗತಿಗಳನ್ನು ಧೈರ್ಯದಿಂದ ಎದುರಾಯಿಸುವ ಪ್ರಚಂಡ ಶಕ್ತಿಯು, ಪ್ರತಿಯೋರ್ವ ಇಂಗ್ಲೀಷ್ ವ್ಯಕ್ತಿಯಲ್ಲಿಯೂ ತುಂಬಿರತಕ್ಕದ್ದು. ಇಂಡಿಯಾ ದೇಶದ ಅಸಂಖ್ಯಾತ ಜನಸಮುದಾಯ, ಜಾತಿಭೇದ, ವಿದ್ಯಾವಿಹೀನತೆ, ಆಶ್ರಿತ ಸಂಸ್ಥಾನ, ಸ್ಥಾಪನೆಗಳು ಮೊದಲಾದ ಹಲಕೆಲವು ವಿಷಯಗಳನ್ನು, ಇಂಡಿಯಾ ಪ್ರಶ್ನೆಯ ವಿಚಾರಕ್ಕೆ ಮೊದಲಾಗಿ, ಇಂಗ್ಲಿಷ್ ಜನಾಂಗವು ತಿಳಿದಿರತಕ್ಕದ್ದು; ಭಾರತೀಯರಿಗೆ ಸಮಾಧಾನಕರವಾದ ಉತ್ತರವೀಯುವದು ಆ ಮೇಲೆ. ಹಾಗೂ ಇಂಡಿಯನರು ಕೇಳುತ್ತಿರುವ ಕೇಂದ್ರ ಸರಕಾರದ ಹೆಚ್ಚಿನ ಹಕ್ಕು ಜವಾಬ್ದಾರಿಕೆಗಳು ಅವರಿಗೆ ದಯಪಾಲಿಸುವದರಲ್ಲಿ ಸಂದೇಹವಿಲ್ಲ, ಆದರೆ ಅಂಥಹ ವಿಷಯದಲ್ಲಿ, ಮೇಲೆ ಹೇಳಲ್ಪಟ್ಟ ಸಂಗತಿಗಳನ್ನು ಪರ್ಯಾಲೋಚಿಸುವದು ಬ್ರಿಟಿಷ್ ಜನತೆಯ ಪ್ರಾಮುಖ್ಯ ಕರ್ತವ್ಯವು. ಆದುದರಿಂದ ಪ್ರಕೃತ ಭಾರತೀಯ ದುರವಸ್ಥೆಯನ್ನು ಹೋಗಲಾಡಿಸುವ ಇತರ ಕುಲಭೋಪಾಯಗಳನ್ನು ಕಂಡುಹಿಡಿದು, ಇಂಡಿಯನರಿಗೆ ಬುದ್ಧಿಮಾರ್ಗವನ್ನು ಬೋಧಿಸುವದೇ ಉಚಿತವು. ಆದರೆ ಬ್ರಿಟಿಷ್ ಜನಾಂಗವು ಭಾರತೀಯರನ್ನೆಂದೂ ಮರೆಯಲಾಗದು; ಬ್ರಿಟನರು ಇಂಡಿಯನರಿಗೆ ಕೊಟ್ಟ ವಾಗ್ದಾನವನ್ನೆಂದೂ ಮುರಿಯಲಾಗದು.

ಹಿಂದುಸ್ಥಾನದ ಭಾವೀ ರಾಜ್ಯಭಾರ ಬದಲಾವಣೆಗಳು, ಈಗಿನ ಸರಕಾರೀ ಶಾಸನಗಳಾಗಲಿ—ಸ್ಕೀಮುಗಳಾಗಲಿ, ಅಥವಾ ಇತರ ನಿಬಂಧನೆಗಳಾಗಲಿ—ಯಾವುದೊಂದನ್ನೂ ಅವಲಂಬಿಸಿ, ರಚಿಸೋಣಾಗಲಿಕ್ಕಿಲ್ಲ; ಅಥವ ಈಗಿನ ಏರ್ಪ್ಪಾಟುಗಳ ಭಾವಚಿತ್ರವಾಗಲಿಕ್ಕಿಲ್ಲ, ಎಲ್ಲಾ ಕಾನೂನು ತಿದ್ದುಪಡಿಗಳು ಹೊಸದಾಗಿ ಪರಿವರ್ತನೆ ಹೊಂದಲಿರುವವು. ಇಂಡಿಯಾ ದೇಶಕ್ಕೆ ಹೊಸ ರಾಜ್ಯಭಾರವನ್ನು ಏರ್ಪಡಿಸುವ ಪಕ್ಷದಲ್ಲಿ, ಅಂತಹ ನವೀನ ರಾಜ್ಯಾಳಿಕೆಯ ಕಾರ್ಯಕ್ರಮಗಳು ಇಂಡಿಯಾ ಜನತೆಯ ಮನಸ್ಸನ್ನು ತಣಿಸುವಷ್ಟು ಬಲವಂತವಾಗಿರಲಿ! ಇಂಡಿಯನರ ಪರಿಸ್ಥಿತಿಗಳನ್ನು ಅರಿತುಹಿಡಿದಾ ಯೋಚಿಸಬೇಕಾಗುವದೆಂದು ನನ್ನ ಮತ! ಎಂದು ತನ್ನ ಭಾಷಣವನ್ನು ಪೂರ್ತಿಗೊಳಿಸಿದರು.

---

## ಸರ್. ಸಪ್ರುರವರು ಚಕ್ರಗೋಷ್ಠಿಯಲ್ಲಿ.

'ಭರತಖಂಡದ ಇತಿಹಾಸವನ್ನು ಮಾರ್ಪಡಿಸುವದಕ್ಕಾಗಿ ನಾವಿಲ್ಲಿ ಬಂದು ನೆರೆದಿರುವೆವು. ಈ ಸಭೆಯಲ್ಲಿ ಬ್ರಿಟಿಷ್ ಮುತ್ಸದ್ದಿತನವು ತೂಕಮಾಡಲ್ಪಡುವದು. ನಾವೆಲ್ಲರೂ ಇಲ್ಲಿಗೆ ಬಂದುದರಿಂದ, ನಮ್ಮ ಸಹೋದರರು ನಮ್ಮನ್ನು ದೇಶದ್ರೋಹಿಗಳೆಂದು ಅನ್ನುವರು. ಅದಂತಿರಲಿ! ಸಭೆಯಲ್ಲಿ ಚರ್ಚೆ ನಡಿಸಿ ಏನಾದರೊಂದು ಉತ್ತರ ಪಡೆಯುವದೇ ನಮ್ಮ ಪ್ರಥಮ ಉದ್ಯಮವಾಗಿರುವದು.

ಕಳೆದ ಸುಮಾರು ೧೦ ವರ್ಷಗಳಿಂದ ಭರತಖಂಡವು ಅಲ್ಲೋಲಕಲ್ಲೋಲವಾಗಿರುವದು, ಹೆಚ್ಚಿನ ಸ್ಥಿತ್ಯಂತರಗಳಾಗಿರುವವು. ಮೊಗಲರ ಕಾಲದಲ್ಲಿಯೂ ಕೂಡ, ಪ್ರತಿನಿಧಿಗಳ ಮತ್ತು ಉಪಪ್ರತಿನಿಧಿಗಳ ಮುಖಾಂತರ ರಾಜ್ಯಭಾರವು ಸಾಗಲಿಲ್ಲ.

ಬ್ರಿಟಿಷ ಸಾಮ್ರಾಜ್ಯದ ಇತರ ಸ್ವತಂತ್ರರಾಷ್ಟ್ರಗಳ ಕೂಡ ಸಮಾನತ್ವವನ್ನು ಹೊಂದಬಹುದಾದ ಹಕ್ಕುಬಾಧ್ಯತೆಗಳು ಭರತಖಂಡಕ್ಕೆ ಇಂದಿಗೂ ಇರುವವು. ಲೋಕಮತಕ್ಕೆ ಹೊಣೆಗಾರವಾದ ರಾಜ್ಯಪದ್ಧತಿಯನ್ನು ದೊರಕಿಸಿಕೊಳ್ಳುವದೇ ಭರತಖಂಡದ ಗುರಿ.

ಕೇಂದ್ರ ಸರಕಾರದ ಘಟನೆಯು, ಪಲ್ಲಟಿಸಿ, ಲೋಕಮತಕ್ಕೆ ಅದು ಜೋಕೆಯಾಗದ ಹೊರತು ಪ್ರಾಂತಿಕ ಸರಕಾರಕ್ಕೆ ಕೊಡಬಹುದಾದ ಸ್ವತಂತ್ರತೆಯಂತಹ ಅಲ್ಪ ಸಮಾಧಾನದಿಂದ ತೃಪ್ತಿಹೊಂದುವ ಭಾರತೀಯರ ದಿನಗಳು ಕಳೆದವು. ' ಇಂದಿ •

## ಇಂಡಿಯಾ ಸರಕಾರದ ಸೂಚನೆಗಳು.

ಇಂಡಿಯವು ಕೇಳುತ್ತಿರುವ ಸಾಮಾಂತ ಸ್ವರಾಜ್ಯದ ಪ್ರಶ್ನೆಗೆ ಉಚಿತವಾದ ಉತ್ತರ ಕೊಡುವುದಕ್ಕಾಗಿ, ಇದುವರೆಗೂ ನಡೆದ ಚಕ್ರಗೋಷ್ಠಿಯ ಕಾರ್ಯಕ್ರಮಗಳನ್ನನುಸರಿಸಿ, ಇಂಡಿಯಾ ಸರಕಾರವು ಕೆಲವು ಸೂಚನೆಗಳನ್ನೊಳಗೊಂಡ ಹೊಸದೊಂದು ಸ್ಕೀಮನ್ನು ತಯಾರಿಸಿ, ಲಂಡನಿಗೆ ಕಳುಹಿಸಿರುವರು. ಅದರ ಮುಖ್ಯ ಸೂತ್ರಗಳೆಂದರೆ:—

೧. ಪ್ರಥಮತ, ಜವಾಬ್ದಾರಿಕೆ ಹೊಂದಿದ ಇಂಡಿಯನರು, ಕೇಂದ್ರ ಸರಕಾರ ಹಾಗೂ ಪ್ರಾಂತಿಕ ಸರಕಾರಕ್ಕೆ ಒಳಪಟ್ಟ ಎಲ್ಲಾ ಇಲಾಖೆಗಳಲ್ಲಿ ಭಾಗವಹಿಸಿ, ತಮ್ಮ ಕ್ರಮವಾದ ಕಾರಭಾರವನ್ನು ನಡೆಸಿಬರುವಂತೆ ಅರ್ಹತೆಯುಳ್ಳವರಾಗತಕ್ಕದ್ದು.

೨. ಎರಡನೆಯದಾಗಿ, ವ್ಯಾಸರಾಯ ಪ್ರಭುಗಳು ನಿಯಮಿಸಬಹುದಾದ ರಾಜಕೀಯ ರಾಯಭಾರಿಯ ಅಧ್ಯಕ್ಷತೆಯಿಂದ ಕೂಡಿದ ಆಶ್ರಿತ ರಾಜಕುಮಾರರ ಪ್ರತ್ಯೇಕ ಸಭೆಯೊಂದನ್ನು ಏರ್ಪಡಿಸತಕ್ಕದ್ದು, ಮತ್ತು ಈ ಸಭೆಯಲ್ಲಿ ಆಶ್ರಿತ ಸಂಸ್ಥಾನಗಳ ಎಲ್ಲಾ ರಾಜಕೀಯ ವಿಷಯಗಳು ಚರ್ಚಿಸಲ್ಪಡಬೇಕು

೩. ಮೂರನೆಯದೆಂದರೆ—ಯುದ್ಧದ ಆಫೀಸು, (War office) ಇಂಡಿಯಾ ಆಫೀಸು ಮತ್ತು ಸೈನ್ಯದ ಇಲಾಖೆ—ಈ ಮೂರು ಸಂಸ್ಥೆಗಳು, ಮೇಲೆ ಹೇಳಲ್ಪಟ್ಟ ರೀತಿಯ ಸಾಮಂತ ಸ್ವರಾಜ್ಯವು ದೊರೆಯಬಹುದಾದರೆ, ಇಂಡಿಯದಲ್ಲಿರುವ ತಮ್ಮ ಬ್ರಿಟಿಷ್ ದಳವನ್ನು ೨೫ ವರ್ಷದೊಳಗಾಗಿ ೩೦,೦೦೦ ಮಂದಿಯಷ್ಟು ಕಡಿಮೆಮಾಡತಕ್ಕದ್ದು

---

ಇಂಡಿಯದ ಭಾವೀ ರಾಜ್ಯಭಾರ ಕ್ರಮವು ಫೆಡರಲ್ ಆಗಿರಬೇಕೋ, ಯುನಿಟರಿ ಆಗಿರಬೇಕೋ—ಎಂಬುದೇ ಚರ್ಚಾಸ್ಪದವಾದ ಪ್ರಶ್ನೆಯು.

ಮಧ್ಯವರ್ತಿ ಸರಕಾರದಲ್ಲಿ ಹೊಣೆಗಾರಿಕೆಯನ್ನು ಪ್ರಸ್ತಾಪಿಸುವುದರಿಂದ ಬಿಳಿಯರ ಹಕ್ಕುಬಾಧ್ಯತೆಗಳಿಗೆ ತೊಂದರೆಗಳುಂಟಾಗಬಹುದೆಂದೂ, ಅವರ ವ್ಯಾಪಾರ, ಕೈಗಾರಿಕೆ, ವೃತ್ತಿ ಮೊದಲಾದ ಲಾಭಕರ ಸಂಸ್ಥೆಗಳು ಬಲಹೀನವಾಗುವದೆಂಬ ಬಿಳಿಯರ ಭೀತಿಯು, ನಿಜವಾಗಿಯೂ, ನಿರಾಧಾರವಾಗಿರುವದು. 'ನಾವು' 'ನೀವು' 'ಹೆಚ್ಚು' 'ಕಡಿಮೆ' ಎಂಬ ಭಾವನೆಗಳು ಸಂಪೂರ್ಣ ನಾಶಹೊಂದಬೇಕು.

ಮಧ್ಯವರ್ತಿ ಸರಕಾರವನ್ನು ಈಗಿದ್ದಂತೆಯೇ ಇರಗೊಳಿಸಿ ಪ್ರಾಂತಿಕ ಸ್ವಾತಂತ್ರ್ಯವನ್ನು ಕೊಡುವದರಿಂದ ಭಾರತೀಯರಿಗೆ ಯಾವ ಪ್ರಯೋಜನವೂ ಆಗುವದಿಲ್ಲ. ಆದುದರಿಂದ, ಬ್ರಿಟಿಷ ಜನಾಂಗವು, ಹಿಂದೀಯರ ಜಾಣತನದಲ್ಲಿ ಮತ್ತು ವ್ಯವಹಾರ ಕುಶಲತೆಯಲ್ಲಿ ನಂಬುಗೆ ಇಟ್ಟು, ಕಾರ್ಯವನ್ನು ಕೈಗೂಡಿಸಬೇಕು. ಭರತಖಂಡದ ವಾತಾವರಣವೇ ಮಾರ್ಪಟ್ಟಿರುವದು.' ಎಂದು ಮೊದಲಾಗಿ ಭಾಷಣವಿತ್ತರು

---

ಲಿಂಗರಾಜನು ಕೆಲವು ದಿವಸಗಳ ಮೇಲೆ ದೇವಮ್ಮಾಜಿಯಿಂದ ಗವರ್ನರ ಜನರಲನಿಗೆ ಒಂದು ಅರ್ಜಿಯನ್ನು ಬರಿಸಿದನು. ಈ ಅರ್ಜಿಯಲ್ಲಿ ತನಗೆ ಪಟ್ಟ ಬೇಡವೆಂತಲೂ ರಾಜ್ಯವನ್ನು ತನ್ನ ಚಿಕ್ಕತಂದೆಯಾದ ಲಿಂಗರಾಜನಿಗೆ ಕೊಡಬಹುದೆಂತಲೂ ಬರೆದಿತ್ತು. ಈ ಅರ್ಜಿಯನ್ನು ನೋಡಿ ದೇವಮ್ಮಾಜಿಯು ಚಿಕ್ಕ ಮಗುವಾಗಿರುವುದರಿಂದ ನ್ಯಾಯಭರಿತವಾದ ಮೇಲೆ ಈ ವಿಷಯವನ್ನು ಇತ್ಯರ್ಥಪಡಿಸಬಹುದೆಂದು ಗವರ್ನರ ಜನರಲನು ಈ ಅರ್ಜಿಗೆ ಒಪ್ಪಿ ಅಪ್ಪಣೆಕೊಟ್ಟನು.

ಸೋದೆರಾಜನು ತನ್ನ ಹೆಂಡತಿಗೆ ಬರಬೇಕಾದ ಒಂದು ಲಕ್ಷ ರೂಪಾಯಿಯನ್ನೂ, ತನಗೆ ಗೋವೆಗೆ ಹೋಗಲಿಕ್ಕೆ ನಾಲ್ಕು ಸಾವಿರ ರೂಪಾಯಿಯನ್ನೂ ಪಡಕೊಂಡು ಗೋವೆಗೆ ಹೋದನು.

[ಸಶೇಷ]

## ಕೊಡಗು ದೇಶದ ರಾಜ್ಯಭಾರ ಕ್ರಮ.

ಲೇಖಕ:—ಎಮ್. ಜಿ. ಐಗಳ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

### ದೇವಮ್ಮಾಜಿ.

ವೀರರಾಜೇಂದ್ರ ಒಡೆಯನು ಕಾಲವಾದ ನಂತರ ಅವನ ಮರಣಶಾಸನದಂತೆ ತನ್ನ ಪ್ರೀತಿಯ ರಾಣಿಯ ಹಿರೇ ಮಗಳಾದ ದೇವಮ್ಮಾಜಿಯು ಸಿಂಹಾಸನವನ್ನೇರಿದಳು. ವೀರರಾಜನ ಅಪೇಕ್ಷೆಯಂತೆ ಸೋದೆರಾಜನು ದಿವಾನನಾದನು. ಆದರೆ ದೊಡ್ಡ ವೀರರಾಜೇಂದ್ರ ಒಡೆಯನ ತಮ್ಮನಾದ ಲಿಂಗರಾಜನು ತನಗೆ ರಾಜ್ಯಭಾರವು ಸಿಕ್ಕಬೇಕೆಂದು ಸಾಧಿಸಿದನು. ಇವನಿಗೆ ಪಟ್ಟ ಕಟ್ಟುವುದಕ್ಕೆ ಕೊಡಗರು ಒಪ್ಪಲಿಲ್ಲ. ದಿವಾನ ಪದವಿಯನ್ನಾದರೂ ತನಗೆ ಕೊಡಬೇಕೆಂದು ಪ್ರಯತ್ನಿಸಿದನು.

ಈ ಸಮಯದಲ್ಲಿ ಕೊಡಗು ಮುಖ್ಯಸ್ಥರ ಒಂದು ದರಬಾರು ನಡಿಯಿತು. ಅಲ್ಲಿ ಲಿಂಗರಾಜನ ಕಡೆಗೆ ಸೇರಿದ ಕೆಲವು ಮಂದಿ ಕೊಡಗು ಮುಖ್ಯಸ್ಥರು, ಲಿಂಗರಾಜನೇ ಮುಖ್ಯ ದಿವಾನನಾಗಬೇಕೆಂದು ಅಭಿಪ್ರಾಯಪಟ್ಟರು. ಆದರೆ ದೊಡ್ಡ ವೀರರಾಜೇಂದ್ರನು ಬರೆದಿಟ್ಟ ಮರಣಶಾಸನಕ್ಕೆ ವಿರೋಧವಾಗಿ ರಾಜ್ಯಭಾರವನ್ನು ಲಿಂಗರಾಜನಿಗೆ ಕೊಡಲು ಒಪ್ಪಲಿಲ್ಲ. ಆಶಾಭಂಗನಾದ ಲಿಂಗರಾಜನು ತನ್ನ ಕಾರ್ಯವು ಕೈಗೂಡಲಿಲ್ಲವೆಂದು ದುಃಖಪಟ್ಟು ತನ್ನ ಹಾಲೇರಿ ಅರಮನೆಗೆ ಹೊರಟನು. ದಾರಿಯಲ್ಲಿ ಚವುರೀರ ಕಾರ್ಯಪ್ಪನೆಂಬ ದಿವಾನನು ಇವನನ್ನು ಕಂಡು ದುಃಖದ ಕಾರಣವನ್ನು ಕೇಳಿದನು. ಅದಕ್ಕೆ ಲಿಂಗರಾಜನು, ಸೋದೆರಾಜನ ಬದಲಾಗಿ ತನ್ನನ್ನು ದಿವಾನನಾಗಿ ಮಾಡಲು ಕೊಡಗರು ಒಪ್ಪಲಿಲ್ಲವೆಂದು ಕಣ್ಣೀರನ್ನು ಸುರಿಸುತ್ತಾ ಹೇಳಿದನು. ಅದನ್ನು ಕೇಳಿ ಕಾರ್ಯಪ್ಪನು ಲಿಂಗರಾಜನ ಕುದುರೆಯ ಲಗಾಮನ್ನು ಹಿಡಿದು, ಇವನನ್ನು ಪಟ್ಟದ ಮೇಲೆ ಕೂತುಕೊಳ್ಳಿಸುವೆನೆಂದು ಅಭಯವನ್ನು ಕೊಟ್ಟು ಅರಮನೆಗೆ ಕರೆದುಕೊಂಡು ಬಂದನು. ಅಲ್ಲಿ ಕೂಡಿದ ಕೊಡಗ ಮಹನೀಯರೊಡನೆ ಪರದೇಶಿಯಾದ ಸೋದೆ ರಾಜನ ಬದಲಿಗೆ ಲಿಂಗರಾಜನೇ ಮುಖ್ಯ ದಿವಾನನಾಗಬೇಕೆಂದು ಹೇಳಿದನು. ಆದುದರಿಂದ ಕೊಡಗು ತಕ್ಕ ಮುಖ್ಯಸ್ಥರು ಅದಕ್ಕೆ ಒಪ್ಪಿಕೊಂಡು, ಲಿಂಗರಾಜನನ್ನು ಮುಖ್ಯ ದಿವಾನನನ್ನಾಗಿ ಮಾಡಿದರು.

ಸೋದೆರಾಜನ ದಿವಾನಗಿರಿಯಲ್ಲಿ ಕೆದುಮಾಳೂರು ಮಾಳೇರ ಮಾದ್ಯಯ್ಯನಿಗೆ ದಿವಾನನು ಏನೋ ಒಂದು ತಪ್ಪಿಗೆ ಹೊರಿಸಿದ ಪೆಟ್ಟಿನಿಂದ ಮಾದೈಯ್ಯನು ಬೋನ ತಪ್ಪಿ ಬಿದ್ದನಾಗಿಯೂ ಸೋದೆರಾಜನನ್ನು ದಿವಾನಗಿರಿಯಿಂದ ತೆಗೆದುಹಾಕುವುದಕ್ಕೆ ಮುಖ್ಯ ಕಾರಣವೆಂದೂ ಹೇಳುವರು. ಈ ಮಾದೈಯ್ಯನಿಗೆ ಕುಂಬಲಗೇರಿ ಗ್ರಾಮದ ಚೊಪ್ಪೀರ ಭೂಮಿಯನ್ನೂ ಇವನ ತಮ್ಮ ಕಾರಿಯ್ಯನಿಗೆ ಬೆಳ್ಳುಮಾಡು ಗ್ರಾಮದ ಮಾತಂಡ ಭೂಮಿಯನ್ನು ಲಿಂಗರಾಜನು ಕೊಡಿಸಿದನು.

ಲಿಂಗರಾಜನನ್ನು ದಿವಾನನಾಗಿ ಮಾಡಿದ ವರ್ತಮಾನವನ್ನು ಇಂಗ್ಲಿಷರ ಕಡೆಯ ರಾಜವೈದ್ಯನಾದ ಇಂಗಲ್‌ಡ್ಯೂಗೆ ಯಾರೂ ತಿಳಿಸಲಿಲ್ಲ. ಒಂದು ದಿನ ದೇವಮ್ಮಾಜಿಯು ಇಂಗಲ್‌ಡ್ಯೂವನ್ನು ಕರೆಯಕಳುಹಿಸಿ ಸೋದೆರಾಜನ ಕೆಲಸವು ನನಗೆ ತೃಪ್ತಿಕರವಾಗುವದಿಲ್ಲ. ತನ್ನ ಚಿಕ್ಕ ತಂದೆಯಾದ ಲಿಂಗರಾಜನೇ ತನ್ನ ಪೋಷಣಕರ್ತನಾಗಿ, ರಾಜಕಾರ್ಯವನ್ನು ನಡಿಸುವುದು ಒಳ್ಳೇಯದೆಂದು ಹೇಳಿದಳು. ಇದನ್ನು ಕೇಳಿ ದಾಕ್ತಾರನಿಗೆ ಆಶ್ಚರ್ಯವಾಯಿತು. ಕೂಡಲೇ ಸೋದೆರಾಜನು ಇವರ ಹತ್ತಿರಕ್ಕೆ ಬಂದು, ದೇಶದ ಸ್ಥಿತಿಯನ್ನು ನೋಡಿದರೆ ತನಗೆ ಪ್ರಾಣಾಪಾಯವಾಗುವುದರಲ್ಲಿ ಸಂದೇಹವಿಲ್ಲ. ಆದುದರಿಂದ ತಾನು ಇಲ್ಲಿ ಇರುವುದು ಸರಿಯಲ್ಲ. ಬೇಗನೇ ಹೋಗುವದು ಒಳ್ಳೇಯದು, ಆದುದರಿಂದ ಗೋವೆಗೆ ತಿರಿಗಿ ಹೋಗಲಿಕ್ಕೆ ಅಪ್ಪಣೆಯಾಗಬೇಕೆಂದು ಹೇಳಿದನು. ಆ ಸಮಯದಲ್ಲಿಯೇ ಲಿಂಗರಾಜನು ತಾನು ರಾಜಕಾರ್ಯವನ್ನು ವಹಿಸಿಕೊಂಡಿದ್ದೇನೆಂದು ತಿಳಿಸಿದನು. ಆಗ ಲಿಂಗರಾಜನು ಮಾಡಿದ ಉಪಾಯಗಳೆಲ್ಲವೂ ಈ ದಾಕ್ತಾರನಿಗೆ ಗೊತ್ತಾಯಿತು. ಅವನು ಈ ಸಂಗತಿಯನ್ನು ಗವರ್ನರ ಜನರಲನಿಗೆ ತಿಳಿಸಿದನು. ಆದರೆ ಲಿಂಗರಾಜನು ಒಳ್ಳೇಯವನಾಗಿರಬಹುದು, ದೇವಮ್ಮಾಜಿಯ ಚಿಕ್ಕತಂದೆಯಾಗಿರುವುದರಿಂದ ಬೇರೆಯವರಿಗಿಂತ ಚೆನ್ನಾಗಿ ಅವಳನ್ನು ಸಹಿಸಿಕೊಂಡು, ರಾಜ್ಯಭಾರವನ್ನು ಸರಿಯಾಗಿ ನಡಿಸಬಹುದೆಂದು ಲಿಂಗರಾಜನೇ ರಾಜ್ಯವಾಳುವಂತೆ ಗವರ್ನರ ಜನರಲನು ಅಪ್ಪಣೆ ಕೊಟ್ಟನು.

53 ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ

## ಉಪಯೋಗಿಸಲ್ಪಟ್ಟ ಔಷಧಗಳು.

1. ಧಾತುಪುಷ್ಟಿ ಲೇಹ—ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲಿ ಧಾತುವು ನಷ್ಟವಾಗುವಿಕೆ, ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಕ್ಷೀಣ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಉರಿ ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು. ಕ್ರಯ ಡಬ್ಬಿ 1ಕ್ಕೆ ರೂ. 2—8—0. ಮೂರು ಡಬ್ಬಿಗಳಿಗೆ ರೂ. 7.

2. ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನ ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆ ನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಉರಿ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತೀ ಶೀಘ್ರದಲಿಯೇ ಗುಣಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ, ಅಂತರಿಕ ಆರೋಗ್ಯವನ್ನು ಒದಗಿಸಿ ಮನೋಭಿಲಾಷೆಯನ್ನು ಪೂರೈಸಿರುವವು. ಕ್ರಯ 1 ಬಾಟಲಿ ಔಷಧಕ್ಕೂ, ಒಂದು ಡಬ್ಬಿ ಮಾತ್ರೆಗೂ ರೂ. 2—4—0 ಮೂರು ಬಾಟಲಿ ಮತ್ತು ಡಬ್ಬಿಗಳಿಗೆ ರೂ. 6—4—0,

3. ಮೋಹ ಕುಠಾರ—ಇದು ಮೂತ್ರಸ್ಥಾನದಿಂದ ಕೆಂಪು ದಿಳದು, ಹಳದಿಯಂತೆ ಹೋಗತಕ್ಕ ಕೀವನ್ನೂ ವ್ರಣವನ್ನೂ ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7.

4. ಮಲೇರಿಯಾ ನಿವಾರಣೆ—ದಿನ ಬಿಟ್ಟು ಬರುವ ಜ್ವರ, 2 ಯಾ 3 ದಿವಸಕ್ಕೊಂದುಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗಡ್ಡೆಯನ್ನು ಕರಗಿಸಿ, ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1ಕ್ಕೆ ರೂ. 1—8—0. 3 ಬಾಟ್ಲಿಗಳಿಗೆ ರೂ. 4—4—0.

5. ಬಾಲಗ್ರಹ ಗುಟಿಕೆ—ಬಾಲಗ್ರಹಕ್ಕೂ, ಕಫಕ್ಕೂ, ಜ್ವರಕ್ಕೂ ರಾಮಬಾಣ. ಬಾಟ್ಲಿ 1ಕ್ಕೆ ಆಣೆ 10. 3ಕ್ಕೆ ರೂ. 1—12—0.

6. ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ—ಬಾಣಂತಿಯರಿಗೆ ಬಾಟ್ಲಿ 1ಕ್ಕೆ ರೂ. 1—8—0. 3ಕ್ಕೆ 4—4—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು. ಕೆಟಲಾಗುತರಿಸಿ ನೋಡಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್, ರಥಬೀದಿ, ಮಂಗಳೂರು, ದ. ಕ.



ಮಲೇರಿಯಾ

ಮಲೇರಿಯಾ ಎಂಬ

ಮಲೇಜ್ವರ

ಜಗ ಪ್ರಸಿದ್ಧವಾದ ದಿವ್ಯ ಔಷಧ

ಇಸನೊಫೇಲ



Diamonds! Diamonds!!

**Ramachandra Krishna Shet**

DONGERKERY, MANGALORE.

ಉತ್ಕೃಷ್ಟ ತರಗತಿಯ ಮುತ್ತಿನ (first quality Selected) ಎಮ್ ಸ್ಟೋರಿನಿಂದ ಬರುವ ರತ್ನಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿಗೆ ಬರೆಯಿರಿ.

ಕೆ. ರಾಮಚಂದ್ರ ಕೃಷ್ಣ ಶೇಟ್, ಜುವೆಲರ್,

ಡೊಂಗರಕೇರಿ, ಮಂಗಳೂರು



ಶಕ್ತಿವಂತ ಕವಚ.

ಈ ಕವಚವು ಹಿಮಾಲಯ ಪರ್ವತದ ಯೋಗಿಗಳಿಂದ ಸಿದ್ಧಮಾಡಿದ್ದಾಗಿದೆ. ಈ ಕವಚವು ಆಶ್ಚರ್ಯಕರವಾದ ಕೆಲಸಗಳನ್ನು ನಡೆಸಿರುವದು. ಈ ಕವಚವನ್ನು ಧರಿಸುವವರಿಗೆ ತನ್ನ ಕೆಲಸದಲ್ಲಿ ಜಯಪ್ರದವೂ, ವ್ಯಾಪಾರದಲ್ಲಿ ಲಾಭವೂ, ವ್ಯಾಜ್ಯಗಳಲ್ಲಿ ಗೆಲುವೂ, ಗ್ರಹಚಾರ ದೆಸೆಯಿಂದುಂಟಾಗುವ ಕೇಡುಗಳ ನಿವಾರಣೆಯೂ, ರೋಗಪೀಡಿತರಾದವರಿಗೆ ಕ್ಷೇಮವೂ, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದೂ ಮತ್ತು ಇತರ ಬಗೆಬಗೆಯ ಲಾಭಗಳು ಉಂಟಾಗುವವು. ಕವಚ ಒಂದಕ್ಕೆ ರೂಪಾಯಿ 2. 3 ಕವಚಗಳಿಗೆ 5—8—0 ಟಪ್ಪಾಲು ಖರ್ಚು 6 ಆಣೆ ಪ್ರತ್ಯೇಕ. ನಾವು ರವಾನಿಸಿ ಕೊಡುವ ನಿಯಮದ ಪ್ರಕಾರ ಈ ಕವಚವನ್ನು ಧರಿಸುವವರಿಗೆ ಲಾಭವಾಗದಿದ್ದಲ್ಲಿ 10 ರೂಪಾಯಿ ಇನಾಮಾಗಿ ಕೊಡುವೆವು

ಪತ್ರವ್ಯವಹಾರ ಇಂಗ್ಲೀಷಿನಲ್ಲಿಯೇ ನಡಿಸಬೇಕು.

**Sadhan Kuti.**

Hatkhala, (*Calcutta*)



*For the uplift of the Motherland* — *For the Happiness of the people.*

## THE BOMBAY LIFE ASSURANCE COMPANY, LTD.,

(ESTD. 1908)

*Chairman*—Sir Lalubhai Samaldas, Kt, C. I. E, J. P

Agencies & Branches throughout India, Burma, & Ceylon

AN INDIAN CONCERN UNDER INDIAN MANAGEMENT Offers Attractive Schemes of Assurance with Non-Forfeiture and Permanent Disability Benefits Policy conditions very Liberal

**Yearly Increase in New Business proves its popularity.**

| Year | New Business |
|---|---|
| 1925 | Rs 22,18,500 |
| 1926 | Rs 32,08 000 |
| 1927 | Rs 38 77,000 |
| 1928 | Rs 42,62,000 |
| 1929 | Rs 51,22,500 |

| | |
|---|---|
| Total Assurance in Force exceeds over | Rs 2 25,00,000 |
| Total Funds exceeds | Rs 24 00 000 |
| Yearly Income exceeds | Rs 10 00 000, |
| Claims paid over | Rs 15,00 000 |

**1930 our Valuation Year** — **Take a Policy now and share in the Profits.**

WANTED Energetic & influential Agents in all principal Towns in Mysore State and other unrepresented parts in Madras Presidency. Mr K Padmanabha Pai B A, Chief Secretary of the Madras Branch will be in Bangalore City to organise Agencies for Mysore State for about a month. Please apply for Agency before it is too late either in person or by letter. Very attractive terms to really capable Agents

**The Bombay Life Office,** Vishweshwarapuram Circle, BANGALORE CITY

OR

**The Bombay Life Office,** Post Box NO 337, MOUNT ROAD, MADRAS.

OR

To our Offices in Udipi or Mangalore, South Kanara District



'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೆಡಿಸುವದು—ಧಾರಣಾ ಮಾತ್ರದಿಂದ ನಿಮಗೆ ಬರ ... ದೇಹ ಬಾಲಗ್ರಹ ಬಾಧೆ ... ತಪ್ಪಿಸುವದು. ಲಾಭ, ಜಯ, ... ವದು. ಅನೇಕರಿಗೆ ನಮ್ಮ 'ತಾಯಿತ್' ಸಂತೋಷವನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಶಲ್ ರೂಪಾಯಿ ೫೦ರಿಂದ ೧೦೦ ರೂಪಾಯಿ ವರೆಗೆ, ದೈವೀಶಕ್ತಿಯು, ಒಂದು ಸಾರಿ ಪರೀಕ್ಷಿಸಿ ನೋಡಿದರೆ ನಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,

ಸಕ್ಕರ್ ಪೋಸ್ಟು ಕಲ್ಲೂರ್ ಜಿಲ್ಲೆ



ಈ ಸು ಅವಕಾಶವನ್ನು ಕಳಕೊಳ್ಳಬೇಡಿರಿ!

ಸ್ಪ್ರಿಂಗ್ ಮತ್ತು ವ್ಯಾಂಡಿಂಗ್ ಅಲಾರ್ಮ್ ಕ್ಲೋಕ್ – ಉಚಿತ.

ಲಿವರ್ ರಿಸ್ಟ್‌ವಾಚ್.—(ಚೌಕ ಅಥವಾ ದುಂಡಗೆ) ನಮ್ಮ ಲಿವರ್ ವಾಚನ್ನು ಕೊಂಡುಕೊಳ್ಳುವವರಿಗೆ ಒಂದು ಕ್ಲೋಕ್ ಉಚಿತ. ನಮ್ಮ ರಿಜಿಸ್ಟ್ರಿಯಾದ 'ಎಸ್. ಎಸ್. ಮಾಡೀನಾ ಶಿಪ್' ಎಂಬ ಟ್ರೇಡ್ ಮಾರ್ಕನ್ನು ಹೊಂದಿದ ಈ ವಾಚು ಬೆಳ್ಳಿಯಲ್ಲಿ ಹೊರಡಿಸಿ – ಸ್ಪೆಶಲ್ ತಯಾರಿ – ನವೀನವಾಗಿ ಈಗ ತಾನೇ ಸ್ವಿಟ್ಜರ್‌ಲಂಡಿನಿಂದ ಬಂದಿರುವದು. ಚಿತ್ತಾಕರ್ಷಕವಾದ ಅಂಕೆಗಳು (ಅರೆಬಿಕ್ ಅಥವಾ ರೋಮನ್ ಸರಿಯಾದ ಸಮಯವನ್ನು ತೋರಿಸುವದು. ಯಾಂತ್ರಿಕ ಸಾಮಾನುಗಳಿಗೆ ವರ್ಷದ ಗ್ಯಾರಂಟಿ, ಫ್ಯಾಕ್ಟರಿ ಕ್ರಯ ೨೦/- ರೂಪಾಯಿ ಮಾರಾಟದ ಕ್ರಯ ರೂ. ೬—೧೨—೦ ಅಂಚೆವೆಚ್ಚ ೧೨ ಆಣೆ ಮಾತ್ರ.

ಸಿಟಿವಾಚ್ ಕೊಂ. (ನಂಬ್ರ 8, ಹಾವರ್ ರೋಡ್, ಗಾಮ್‌ದೇವಿ, ಮುಂಬಾಯಿ.


EDITED, PRINTED & PUBLISHED BY V. S. KAMATH AT M. T. A. SHARADA PRESS, MANGALORE.

ಮುಂಗಡ ವರ್ಗಣಿ:— ವರ್ಷ ಒಂದಕ್ಕೆ ರೂಪಾಯಿ 2-0-0

Registered No. M. 489. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0.

# ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ ತರುಷವಾಯಿತೆ ಮತ್ತೆ ವಿಷವ ಸುಧುಕ ಒರುತಿರುವ ॥
ಗರಲಕವರಂಜಿದರೆ ಸುದೆಯನು । ಮರೆತು ಕ್ಷುದ್ರರ ತೆರದಿ ಕಾಳಿತರೆ ತೆರಳ ಎಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೪. ಮಂಗಳೂರು ತಾ. ೧೨ನೇ ಶುಕ್ರವಾರ ದಶಂಬರ ೧೯೩೦ (12-12-30.) ಸಂಚಿಕೆ ೪೯


## THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

**Head office:—UDIPI.** Branches:—COONDAPOOR & Mangalore
ಹೆಡ್ ಆಫೀಸು:— ಉಡುಪಿ. ಶಾಖೆ:— ಕುಂದಾಪುರ. ಮತ್ತು ಮಂಗಳೂರು

Authorised Capital Rs 3,50,000- Subscribed & Called up Rs. 2,25,000-
ನಿಯಮಿತ ಮೂಲಧನ ರೂ 3,50,000 ಚಂದಾ ಹಾಕಲಿಕ್ಕೆ ಅಪೇಕ್ಷಿಸಿದ ವ ಎತ್ತಿದ ಮೂಲಧನ ರೂ 2,25,000-

**Statement of Affairs as on 31st October 1930**

| | Capital and Liabilities | | | Property and Assets | |
|---|---|---|---|---|---|
| 1 | Paid up Capital | Rs 2 24,930-0-0 | 1 | Premises Building, Furniture etc | Rs 42 912- 5-4 |
| 2 | Reserve and other funds | , 1,68,400 0 0 | 2 | Investment on G P Notes | ,, 3,70,414 5 0 |
| 3 | Deposits | ,,22 ... 22 ... | 3 | Investment on Approved Securities | , 22 10,830 12 11 |
| 4 | Bills for collection as per contra | [illegible] | 4 | Bills for collection | 5,156 10 5 |
| 5 | Due to Bankers | , 1,32 4 | 5 | Sundries | ,, ..,804 1- 3 |
| 6 | Sundries | , 81,2.. 0 | 6 | Cash in hand & with bankers | 0,453 9 7 |
| | Total | 26 ..6,31 12 | | Total | 26,9.,631 12- 4. |

Office of the Corporation, UDIPI ... - 1-'31 **N. ANANDA RAO** *Secretary & Manager.*

## ಅಮೃತಾಂಜನ.

ಕ್ರಿಸ್ತಶಕ 1893ರಲ್ಲಿ ... ಅಮೃತಾಂಜನವು ... ಕಲೆನೋವು ... ದಬ್ಬಿಗೆ ಆಣೆ 10, ಟಿ. ಪ. ಬೇರೆ.

ರಿಂಗ್‌ವರ್ಮ್ ಮುಲಾಮು.— ರಿಂಗ್‌ವರ್ಮ್, ... ಚರ್ಮರೋಗಗಳಿಗೆ ... ದಬ್ಬಿಗೆ ಆಣೆ 6, ಟಿ. ಪ. ಬೇರೆ.

ದಂತಮಂಜನ:— ... ಹಲ್ಲು ... ದಬ್ಬಿಗೆ ಆಣೆ 2, ಟಿ. ಪ. ಬೇರೆ.

ಅಮೃತಾಂಜನ ಡಿಪೋ,
ಮದರಾಸು ಮತ್ತು ಬೊಂಬ್ಯಾ.



ಮಕ್ಕಳ ಸಲುವಾಗಿ.

## ಡೋಂಗರ

ಇವರ

## ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದ ರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿ ಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಆತ್ಮಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಯಿ.

ಏಜೆಂಟರು —ದಿ ಗುಲ್ಫ್ ಮೋಟರ್ಸ್, ಮಂಗಳೂರು.



## ಶ್ರೀ ಸರಸ್ವತೀ ಭಂಡಾರ

| | | |
|---|---|---|
| 1 | ಸಚಿತ್ರ ರಾಮಾಯಣ ಕಥಾ ಸಂಗ್ರಹ | 1-8-0 |
| 2 | ಮದನಮೋಹನ ರಾಜ ಚರಿತ್ರ | 0 12-0 |
| 3 | ಮಾಧವೀ ಕಂಕಣ | 2-0-0 |
| 4 | ವಿದ್ಯಾಮಂದಿರ ಕಥೆಗಳು. | 2-0-0 |
| 5 | ಮಹಾಭಕ್ತ ವಿಜಯ | 3-0-0 |
| 6 | ಶೃಂಗಾರ ಕುಸುಮಸ್ಮೃತಿ ಕಥೆಗಳು. | 0-12-0 |
| 7. | ಮಂಜು ಘೋಷಾ | 1-0-0 |
| 8. | ವಿಮಲಾ ದೇವಿ | 1-12-0 |
| 9. | ಸೌಭಾಗ್ಯ ಲತಿಕ | 0-8-0 |
| 10 | ಧರ್ಮ ಸಾಮ್ರಾಜ್ಯಂ | 1-4-0 |
| 11 | ರಾಮ ರಾಜ್ಯ | 0-12-0 |
| 12 | ಆನಂದ ಮಠ | 1-12-0 |
| 13. | ಲಾವಣ್ಯ ಶಿರೋಮಣಿ | 0-12-0 |
| 14 | ವಚನ ಭಾರತ | 1-8-0 |
| 15. | ಇಂಡಿಯನ್ ಪಿನಲ್ ಕೋಡ್ | 2-8-0 |
| 16 | ಕ್ರಿಮಿನಲ್ ಪ್ರೊಸಿಜರ್ ಕೋಡ್ | 3-0-0 |
| 17. | ಲ್ಯಾಂಡ್ ರೆವಿನ್ಯೂ ಕೋಡ್ | 1-0-0 |

ಈ ಮೇಲ್ಕಂಡವುಗಳಲ್ಲದೆ ನಮ್ಮಲ್ಲಿ ಇನ್ನು ಸಾವಿರಾರು ಬಗೆಯ ಕನ್ನಡ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗ್ ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

... ಅನೇಕ ಪುಸ್ತಕಗಳು ... ಮಾರಲ್ಪಡುತ್ತವೆ.

ಶ್ರೀ ಸರಸ್ವತೀ ಭಂಡಾರ,
ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು. ... ರೋಡ್, ಮಂಗಳೂರು.

ಮಂಗಳೂರು 15ನೇ ನವಂಬರ 1930

# ದಿ ಜೆನಿತ್ ಲೈಫ್ ಎಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್., ಮುಂಬಾಯಿ.

ಅಯ್ಯಾ!

ನನ್ನ ಮೃತಪಟ್ಟ ಪುರುಷೋತ್ತಮನೆಂಬ ಮಗನು ಈ ಕೆಳಗಿನ ಕಂಪೆನಿಗಳಲ್ಲಿ ವಿಮೆಮಾಡಿರುವನು

(1) ಆಸ್ಟ್ರೇಲಿಯದ ನೇಶನಲ್ ಮ್ಯುಚುವಲ್ ಲೈಫ್ ಎಸೋಸಿಯೇಶನ್

(2) ಭಾರತ್ ಇನ್ಶೂರೆನ್ಸ್ ಕೋ [illegible]ಟಡ್,

(3) ಝೆನಿತ್ ಲೈಫ್ ಎಶ್ಯೂರೆನ್ಸ್ ಕೋ ಲಿಮಿಟೆಡ್

ಇದೇ ತಿಂಗಳ 5ನೇ ತಾರೀಕಿಗೆ, ತಮ್ಮ ಹಕ್ಕುಬಾಧ್ಯತೆಗಳನ್ನು ತೋರಿಸುವ ಪತ್ರಗಳ [illegible] ಎಲ್ಲಾ ಕಂಪೆನಿಗಳಿಗೆ ಕಳುಹಿಸಲಾಗಿರುವವು ನಿಮ್ಮ ಮುಖ್ಯ ಏಜಂಟರಾದ ಮೆಸರ್ಸ್ ಕಾವರ್ಡ್ ಎಂಡ್ ಕೋ—ಇವರು ತಮ್ಮ ಈ ಕೆಳಗಿನ ತಂತಿ ಸಮಾಚಾರವನ್ನು 14ನೇ ತಾರೀಕಿಗೆ ಪಡೆದಿರುವರು

"ಪೋಲಿಸಿ ನಂಬ್ರ 6337 [illegible]ರಾಜಪ್ಪನವರ ಹಕ್ಕು ಬಾಧ್ಯತೆಯು ಅಂಗೀಕರಿಸೋಣವಾಗಿಯದೆ ಪೋಲಿಸಿಯ [illegible] ಮಾಡಲಿಕ್ಕೆ [illegible] —ಝೆನಿತ್ ಲೈಫ್"

ಪೋಲಿಸಿಯು ಈ ಹೊತ್ತು ಬಂದು ತಪ್ಪಿರುವದು ನಾನದನ್ನು ನಿಮ್ಮ ಮುಖ್ಯ ಏಜಂಟರಾದ ಕಾವರ್ಡ್ ಎಂಡ್ ಕೋ—ಇವರಿಗೆ ಕೊಟ್ಟ ಕೂಡಲೇ ನನ್ನ ಹಕ್ಕಿನ ಐವೇಜನ್ನು ಸಂಪೂರ್ಣವಾಗಿ ಕೊಟ್ಟಿರುವರು ಆದರೆ ಇತರ ಕಂಪೆನಿಗಳಿಂದ ಹಕ್ಕು ಬಾಧ್ಯತೆಯ ಪತ್ರಗಳು ತಪ್ಪಿದ ವಿಷಯದಲ್ಲಿ ಉತ್ತರವೇ ಇಲ್ಲ

ಝೆನಿತ್ ಕಂಪೆನಿಯನ್ನು, ಹಣ ಸಂದಾಯದ ವಿಷಯದಲ್ಲಿ ಬಹಳ ತೀವ್ರವಾಗಿರುವುದೆಂದು ಇದು ವರೆಗೂ ಕೇಳಿದ್ದೆನು [illegible] ಈಗ ನನ್ನ ಸ್ವಾನುಭವವು [illegible] ಕಂಪೆನಿಯ ವಿಷಯದಲ್ಲಿ ಸಂಪೂರ್ಣ ವಿಶ್ವಾಸವನ್ನು ಹುಟ್ಟಿಸಿರುವದು

ಇತಿ ನಿಮ್ಮ ನಂಬಿಗಸ್ತ,

ಎ ರಾಜಪ್ಪ,

ಪಿ ಡಬ್ಳ್ಯು ಡಿ ಕಂಟ್ರಾಕ್ಟರ್



## ಆಶ್ಚರ್ಯಕರ ಔಷಧಿ

ಅತಿಸಾರ, ಅಜೀರ್ಣದಿಂದಾದ ಎಂತಹ ಮಲಬದ್ಧತೆಯಾದರೂ ಓಡುವದು.

ಏತರಿಂದ?

ಹಿಂದೀ ಔಷಧಿ ಹಿಂದೀಯ ರಿಗಾ[illegible] HEDAJURIK DYSENTERY CHOLERA CURE ಹಿಂದೀಯರಿಂದ[illegible] ವ್ಯಾಪಾರಕ್ಕೆ

ಹಿಂದೀಯರಿಂದಲೇ ಕಂಡುಹಿಡಿಯಲ್ಪಟ್ಟದು [illegible] ತರಲ್ಪಟ್ಟದು

ಔನ್ಸಿನ ಕ್ರಯ ಆಣೆ 0—10—0 [illegible] ಔನ್ಸಿನ ಬಾಟಲಿಗೆ ರೂ 1—12—0

ಪರೀಕ್ಷಿಸಿ ತೃಪ್ತರಾಗಿರಿ

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಆಫೀಸು,
ಡೊಂಗರಕೇರಿ ರಸ್ತೆ,
ಮಂಗಳೂರು

ದಿ ಕಿಣಿ ಡಿಸ್ಪೆನ್ಸರಿ,
ಕೊಡಿಯಾಲಬೈಲ್ ಪೋಸ್ಟು,
ದ ಕನ್ನಡಾ



ಶರ್ಮಾಸ್ ಫಾರ್ಮಸ್ಯುಟಿಕಲ್ ವರ್ಕ್ಸ್, ಜೋಡ ಪ[illegible] ರಸ್ತೆ ಮಂಗಳೂರು ದ ಕ.

— ಇವರ —

## ಆಯುರ್ವೇದೀಯ ಸಿದ್ಧೌಷಧಗಳು

ಅಶೋಕ ಮಿಶ್ರಣ [illegible]—ಪ್ರದರ[illegible] ಬಾಣಂತಿಯರ ರೋಗಗಳೇ ಮೊ[illegible] ಇದೋ ವನಿತೆಯರ ಪುನರುಜ್ಜೀವನಕ್ಕೆ ನಂದನವನದಂತಿ[illegible] ಶರ್ಮರವರ ಅಶೋಕ ಮಿಶ್ರಣ [illegible] ಬೇಡಿ! ಸೀಸೆಯ ಬೆಲೆ ರೂ 2—0—0 ಮಾತ್ರ ಟಿ ಪಿ ಬೇರೆ

ಮೇಹರಕ್ಷಾಮೃತಂ — ಇದೀಗ [illegible] ದಲ್ಲೇ ನಾಶಗೊಳಿಸಬಲ್ಲುದು [illegible] ಹುಣ್ಣುಗಳಿಗೂ [illegible] ಔಷಧ ವಿದು ಈ "ಮೇಹರಕ್ಷಾಮೃತ"ವು ಅಮೃತ ಸಮಾನವಾಗಿ[illegible] ಬೆಲೆ ರೂ 2—0—0 ಮಾತ್ರ ಟಿ ಪಿ ಬೇರೆ

ಇವಲ್ಲದೆ ಇನ್ನೂ ಬಗೆಬಗೆಯ ರೋಗಗಳ [illegible] ನಿಬಂಧನೆಗಳಿಗೂ ಒಡನೆ ಸ್ಟಾಂಪಿನೊಂದಿಗೆ ಬರೆದು ಕೇಳ್ರಿ

ಮುಖ್ಯ ಏಜಂಟರು —

ಶ್ರೀ ರಾಧಾಕೃಷ್ಣ ವಿಲಾಸ, ರಥಬೀದಿ ಮಂಗಳೂರು ದ ಕ



## WANTED

Agents who can [illegible] good business in the towns of [illegible] Puttur & Karkal and other important centres

Apply without delay to —

**The Bombay Life office,**
Mangalore or Udipi

N B —Ask for our Scheme of Prizes for 1930



## Grand Clearing Sale!

ಜಗತ್ಪ್ರಸಿದ್ಧವಾದ [illegible] "ಒಟ್ಟೋ ಫುಲಾರಾಮ" ಸುಗಂಧದ ಐದು ಬಾಟಲಿಗಳನ್ನು ಮೂರು ರೂಪಾಯಿಗಳಿಗೆ ಕೊಳ್ಳುವವರು ಈ ಕೆಳಗಿನವುಗಳನ್ನು ಧರ್ಮಾರ್ಥವಾಗಿ ಪಡೆಯುವರು —

1 ಕೈ ವಸ್ತ್ರ 1 ಫೌಂಟನ್‌ಪೆನ್, 1 ಕ್ಲಿಪ್ 1 ಚರ್ಮ[illegible] 1 ಸುಗಂಧ ಸಾಬೂನ 1 [illegible] 12 ಉತ್ತಮ [illegible] 1 ಕೋಪಿಂಗ್ ಪೆನ್ಸಿಲ 1 [illegible] 1 [illegible] 1 ಬಾಚಣಿಗೆ, 1 ಕತ್ತರಿ 1 [illegible] 1 ಹರಳಿನ ಉಂಗುರ ಅಂಚೆವೆಚ್ಚ ಆಣೆ 0—8—0

ಇಂಗ್ಲೀಷಿನಲ್ಲಿ ಬರೆಯಿರಿ.

**Indian Stores,**
*5 Beadon Street,*
CALCUTTA


## ಜಿಲ್ಲಾ ಪ್ರಚಾರ ಕಮಿಟಿಯ ಪ್ರಬಲ ಪ್ರಚಾರ ಕಾರ್ಯ.

ಕಳೆದ [illegible] ತಿಂಗಳ ಕಾರ್ಯದಲ್ಲಿ ಪ್ರಚಾರಕರ ಪಾರ್ಟಿಯವರು ಕೆಳಗೆ [illegible] ಪೂರ್ಣ [illegible] ವ್ಯಾಖ್ಯಾನಗಳನ್ನು ನಡೆಸಿರುವರು [illegible] ಪ್ರಚಾರ[illegible] ಬೋರ್ಡಿನಿಂದಲೇ [illegible] ವ್ಯಾಖ್ಯಾನ [illegible] ಬಂದಿದೆಯೆಂದು [illegible] ತಿಳಿಸುವದೆ[illegible]

[illegible]

[illegible] ವ್ಯಾಖ್ಯಾನಗಳು

[illegible] ವ್ಯಾಖ್ಯಾನಗಳು

ಗ್ರಾಮಸ್ಥರೆಲ್ಲರೂ ಈ ವ್ಯಾಖ್ಯಾನಗಳನ್ನು [illegible] ಜಾಗ್ರತೆ [illegible] ವ್ಯಾಖ್ಯಾನಗಳ [illegible] ದಶಂಬರ ತಿಂಗಳಲ್ಲಿ ಪಾರ್ಟಿಯವರು ಕೆಳಗೆ [illegible] ಸ್ಥಳಗಳಲ್ಲಿ [illegible] ಗ್ರಾಮ ಸಂಚಾರಗಳಿಗೆ ಸಭೆಸೇರಲಿಕ್ಕಿರುವರು

[illegible] ಅಪರಾಹ್ನ [illegible] ವೆಂಕಟರಮಣ ದೇವಸ್ಥಾನದ [illegible] ಅಪರಾಹ್ನ [illegible] ಅಪರಾಹ್ನ ಮೂಲ್ಕಿ [illegible] ಅಪರಾಹ್ನ [illegible] ಅಪರಾಹ್ನ [illegible] ಅಪರಾಹ್ನ ಮುಕ್ಕ [illegible] ಅಪರಾಹ್ನ [illegible] ಅಪರಾಹ್ನ ಮಂಗಳೂರು [illegible] ಅಪರಾಹ್ನ ಮಂಗಳೂರು [illegible] ಅಪರಾಹ್ನ ಮಂಗಳೂರು [illegible] ಅಪರಾಹ್ನ ಪುತ್ತೂರು [illegible] ಅಪರಾಹ್ನ ಪುತ್ತೂರು ತಾಲೂಕು [illegible] ಸಭೆಯಲ್ಲಿ [illegible] ಅಪರಾಹ್ನ ಪಾಣೆಮಂಗಳೂರು [illegible] ಅಪರಾಹ್ನ [illegible] (ಸಾವಂತರ ಕಂಬಳ)

[illegible] ಎಲ್ಲಾ ಪ್ರಚಾರಕರೂ [illegible] ಪ್ರಚಾರಕರೂ [illegible] ಪಾರ್ಟಿಯಲಿ ಪ್ರಚಾರ[illegible] ಮಾಯಾ[illegible] ಪ್ರದರ್ಶನ ಮತ್ತು ಇತರ ಅನೇಕ ಚಿತ್ರಗಳ ಪ್ರದರ್ಶನಗಳೊಂದಿಗೆ ಮೇಲೆ ನಮೂದಿಸಿದ ಸ್ಥಳಗಳಲ್ಲಿ ಸಭೆಗಳನ್ನು ಸೇರಿಸಿ, [illegible] ಸ್ಥಳಗಳನ್ನು ಸಂಚರಿಸಿ ಜನರಿಗೆ ಕಮಿಟಿಯ ಚಟುವಟಿಕೆಗಳನ್ನು ತಿಳಿಸಿ, ಅವರ ಕರ್ತವ್ಯದ ಕಡೆಗೆ ಎಚ್ಚರಿಸಬಹುದು[illegible] ಬಾಕಿ ತಾಲೂಕುಗಳಿಗೆ ಜನವರಿ ತಿಂಗಳಲ್ಲಿ ಹೋಗಲಿಕ್ಕಿರುವರು

[illegible] ಈ ಪ್ರಾಂತ್ಯಗಳಲ್ಲಿಯ ಶಾಲಾ ಮಕ್ಕಳೊಡನೆ (ರಜೆ ದಿವಸಗಳಾದರೂ) ಉಪಾಧ್ಯಾಯರು ಸಹಕರಿಸುವಂತೆ ಕೇಳಿಕೊಳ್ಳುವೆವು

ಯಂ ಆರ್ ಪೂಂಜ,
ಚೇರ್ಮೆನ್,
ದ ಕ, ಡಿಸ್ಟ್ರಿಕ್ಟ ಪ್ರಚಾರ ಕಮಿಟಿ ಮೂಲ್ಕಿ

## ಶಾಸ್ತ್ರೀಯ
## ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ—ಇದು ಪೂರ್ವದಲ್ಲಿ ಅತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

### ಕಸ್ತೂರಿಮಿಶ್ರಣ
### ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕೆಟ್ಟ ಅಂಶವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ತುತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವವಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0 ಪೋಸ್ಟೇಜು ವಗೈರೆ ಬೇರೆ

ಹೆಚ್ಚಿನ ತಿಳುವಳಿಕೆಗೆ "ಆಯುರ್ವೇದ ರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ಬಂದರ



## ಸುಂದರವಾದ ಜರಿಕೆಲಸ ಮಾಡಿದ ಕಾಶಿಯ
## — ಪಟ್ಟೆ ಸೀರೆಗಳು —

ಜರಿ ಅಂಚುಗಳುಳ್ಳ ಪ್ಲೈನ್ ಸೀರೆಗಳ ಮೇಲೆ ಉತ್ತಮ ಮೇಲ್ ಅಗಲ ರೂ 30 ಲಾಗಾಯತು 300 ರ ವರೆಗೆ ಬುಟ್ಟಿಗಳ ಸೀರೆ ರೂ 20 ಲಾಗಾಯತು ರೂಪಾಯಿ 800 ವರೆಗೆ ವಗೈರೆ ಮತ್ತು 2 ಎಲೆವಸ್ತ್ರ ಬಟ್ಟೆ, ಶಾಲು, ಖದ್ದರು ಮುಂ, ಕಸೂತಿ ಕೆಲಸ, ಬನಾರಸ್ ಮೊದಲಾದ ಸಾಮಾನುಗಳ, ಪೂಜಾ ಸಾಮಗ್ರಿಗಳ ಇತ್ಯಾದಿ ಸಹಾ ದೊರೆಯುವುವು ಕೊಳ್ಳುವವರಿಗೆ ಕಮ್ಮಿ ಕ್ರಯದಲ್ಲಿ ಸಹ ಕೊಡಲ್ಪಡುವವು. ಹೆಚ್ಚಿಗೆ ವಿಷಯ ಕ್ಯಾಟಲಾಗಿನಿಂದ ಅಥವಾ ಪತ್ರ ಮೂಲಕ

ವಿಳಾಸ —

ಕಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ್
ಮಣಿಕರ್ಣಿಕಾಘಾಟ್, ಕಾಶೀ, ಬನಾರಸ್ ಸಿಟಿ



## The Udipi Mutual Benefit Fund, UDIPI
## ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1919

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರಿಗೆ ಬರೆಯಬಹುದು.

ಎಂ. ಮುಖ್ಯಪ್ರಾಣಭಟ್ಟ. ಪ್ರೊಪ್ರೈಟರ್.



## The Canara Bank Limited, Mangalore.
## ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

Established July 1906 — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

**BRANCHES -Karkal, Kasargod, Cochin Udipi Gangolli Coondapur, Bombay Puttur, Calicut & Alleppey**

ಬ್ರಾಂಚುಗಳು:—ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲಪೆ

| | |
|---|---|
| Authorised and fully paid up Capital Rs 300,000 - 0 - 0 | ಅಧಿಕಾರಗೊಳಿಸಲ್ಪಟ್ಟು ಪೂರ್ತಿಯಾಗಿ ಕೊಟ್ಟ ಮೂಲಧನವು ರೂ 300,000 0 - 0 |
| Reserve and other sinking Funds Rs 431,732 - 9 - 7 | ರಿಸರ್ವ ನಿಧಿ ಮತ್ತು ಇತರ ಫಂಡುಗಳು ರೂ. 431,732 - 9 - 7 |
| Amount invested on G P Notes Rs 817 097 - 2 - 0 | ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 817,097 - 2 - 0 |
| Rates of interest on fixed deposits at Head Office and Branch 6¼% for 2 Years, 6% ,, 1 Year | ಹೆಡ್ಡಾಫೀಸು ಬ್ರಾಂಚುಗಳ ಮೇಲೆ ಕೊಡಲ್ಪಡುವ ಬಡ್ಡಿ ದರ— ಎರಡು ವರುಷಗಳಿಗೆ ಸೇಕಡಾ 6¼% 1 ವರುಷಕ್ಕೆ ಸೇಕಡಾ 6. |
| Season deposits of Rs 1000/- & above terminable by the end of June are received at 6¼% p a | ಜೂನ್ ಅಂತ್ಯದ ಒಳಗೆ ವಾಪಸು ಆಗುವ ರೂ. 1000/- ದ ಮತ್ತು ಮೇಲ್ಪಟ್ಟ ಡಿಪೋಸಿಟುಗಳಿಗೆ ಬಡ್ಡಿ ದರ ಸೇಕಡಾ 6¼. |

Current Account Deposits received and interest allowed on daily balance of Rs 50 and above that on multiples of Rs 10/ @ 3% from 1st January to 30th June and @ 2% from 1st July to 31st December No interest will be allowed unless the depositor earns not less than Rs 5/ during a period of 6 months ending either 30th June or 31st December in any year

Except by special arrangement no interest is allowed on sums exceeding Rs. 10 000/ in the case of Head Office and Bombay & Cochin Branches and on sums exceeding Rs 3 000/ in the case of the remaining Branches

Short notice deposits requiring one week' notice of withdrawal given at any time after one month from the date of deposit are received and interest allowed at 4 per annum Interest on such deposits will cease on notice

*For further particulars please apply to —*

Canara Bank Ltd, — **K. Venkat Rao,**
*Mangalore, 13—10—1930* — *Secretary.*



## The Pangal Nayak Bank, Ltd.

| Branch Office Mangalore | Head Office Udipi *Established 1920.* | Agency Office Cochin |
|---|---|---|

| | |
|---|---|
| Authorised Capital Rs 2,00,000 | Paid up Capital Rs. 1,75,000- |
| Issued Capital Rs 1,75,000- | Reserve and other Funds Rs 1,42,810- |

***Fixed Deposits received for***
***24 months at 6¼***
***12, 15, 18 or 21 months at 6***
***6 or 9 months at 5***
***3 months at 5***

***Interest being payable every 3 months.***

Current Deposit Accounts are opened free of charge and interest allowed on daily balances

*Further information may be had on application to the* SECRETARY *at the* HEAD OFFICE *or to the* AGENT *at the* BRANCH.

Office of the Bank
Udipi 6 - 10 - 1930 — P Laxman Nayak, Secretary



ತಯಾರಾಗಿವೆ — ಮಾರಾಟಕ್ಕೆ ಸಿದ್ಧವಿವೆ — ತ್ವರೆಮಾಡಿರಿ

1931ನೇ ಇಸವಿಯ

## ಪ್ರೊಕೆಟ್ ಡಾಯರಿಗಳು.

1931ನೇ ಇಸವಿಯ

| | | | |
|---|---|---|---|
| ಅಂದವಾದ ಕೆಲಿಕೊ ಬ್ಯಾಂಡಿನ ದೊಡ್ಡ ಸೈಜಿನ ಡ್ಯಾರಿ (ಇಂಗ್ಲೀಷ ಮೆಟರಿನೊಂದಿಗೆ) | | | |
| ಕೆಲಿಕೊ ಬ್ಯಾಂಡು ದೊಡ್ಡದು ಮುಚ್ಚಳದ್ದು | 0 | 14 | |
| ಕೆಲಿಕೊ ಬ್ಯಾಂಡು ದೊಡ್ಡದು (ಕನ್ನಡ ಮೆಟರಿನೊಂದಿಗೆ) | 0 | 8 | 0 |
| ಮುಚ್ಚಳದ್ದು ,, | 0 | 14 | 0 |
| ಕೆಲಿಕೊ ಬ್ಯಾಂಡಿನ ಮೀಡಿಯಂ ಸೈಜದ್ದು | 0 | 8 | 0 |
| ,, ಮುಚ್ಚಳದ್ದು | 0 | 12 | 0 |
| ಮೀಡಿಯಂ ಸೈಜ್ ಸ್ಟಿಫ್ ಬ್ಯಾಂಡ್ ಡ್ಯಾರಿ | 0 | 6 | 0 |
| ಸಣ್ಣ ಸೈಜಿನ ಕೆಲಿಕೊ ಬ್ಯಾಂಡ ಡ್ಯಾರಿ | 0 | 6 | 0 |
| ಮುಚ್ಚಳದ್ದು | 0 | 10 | 0 |
| ,, ಸ್ಟಿಫ್ ಬ್ಯಾಂಡ್ ಡ್ಯಾರಿ | 0 | 5 | 0 |

**ದೊಡ್ಡ ಸೈಜಿನ ಡ್ಯಾರಿಯಲ್ಲಿ ಟಪ್ಪಾಲು ಮತ್ತು ಕೋರ್ಟು ವ್ಯವಹಾರ, ಸ್ಟಾಂಪು ಅಕ್ಟು ಮುಂತಾದ ಕ್ರಮಗಳನ್ನು ಕನ್ನಡದಲ್ಲಿ ಕೊಟ್ಟಿರುತ್ತದೆ.**

**ರಖಂ ತೆಗೆದುಕೊಳ್ಳುವವರಿಗೂ, ವ್ಯಾಪಾರಿಗಳಿಗೂ ತುಂಬಾ ಕಮಿಶನು ಕೊಡಲಾಗುವದು.**

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

**ಶಾರದಾ ಛಾಪಖಾನೆ,**
**ಕಚೇರಿ, ಮಂಗಳೂರು**

# ಮಹಾತ್ಮಾಜಿಯವರ ಸತ್ಯಾಗ್ರಹ ಸಮಾಚಾರ.

ತಾರೀಕು ೩.

**ಬೊಂಬಾಯಿಯಲ್ಲಿ.**

ಕ್ರಾನಿಕಲ್ ಪತ್ರಿಕೆಯ ಪ್ರಚಾರಕರಾದ ಮಿ| ಸೊರಾಬ್ಜಿ ಕಾಪಾಡಿಯಾ ಎಂಬವರಿಗೆ ಸಜೆ ಆಗಿರುವದಷ್ಟೆ' ಆ ಕುರಿತು ಅವರ ಕಡೆಯ ವಕೀಲರು ಮೇಲು ಕೋರ್ಟಿಗೆ ಅಪೀಲು ಮಾಡಿದರು. ಅಪೀಲಿನಲ್ಲಿ ಮುಖ್ಯವಾಗಿ ಹೇಳಲ್ಪಟ್ಟ ಕಾರಣಗಳೆಂದರೆ—ಮೊದಲನೆಯದಾಗಿ ಕಾನೂನಿನಲ್ಲಿ ಹೇಳಲ್ಪಟ್ಟಂತೆ, ಸದರಿ ಪ್ರಚಾರಕರ ಮೊಕದ್ದಮೆಯಲ್ಲಿ ರಿಕಾರ್ಡುಗಳನ್ನು ತಯ್ಯಾರಿಗೊಳಿಸಲಿಲ್ಲವೆಂತಲೂ, ಎರಡನೆಯದಾಗಿ ಅವರನ್ನು ಕೈದು ಮಾಡಿದ ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಆಕ್ಟಿನ ೧೭(೧) ಪ್ರಕರಣವು ಸದರಿಯವರ ತಪ್ಪಿತಕ್ಕೆ ಸಂಬಂಧಿಸುವದಿಲ್ಲವೆಂತಲೂ ನಮೂದಿಸೋಣಾಗಿದ್ದಿತು ಮಿ' ಕಾಪಾಡಿಯಾರವರ ಜೊತೆಗಾರರಾದ ಮಿ| ಬ್ರೆಲ್ವಿಯವರು ತನ್ನ ಆಪ್ತೇಷ್ಟರಿಗೂ, ಬಂಧುವರ್ಗದವರಿಗೂ ಹೃದಯಪೂರ್ವಕ ಧನ್ಯವಾದಗಳನ್ನರ್ಪಿಸಿ ಕಾರಾವಾಸಕ್ಕೆ ತೆರಳಿರುವರೆಂದು ತಿಳಿಯಲಾಗುತ್ತದೆ

## ವಿದೇಶೀ ಬಟ್ಟೆಯ ಬಹಿಷ್ಕಾರ.

ಮುಂಬಾಯಿಯಲ್ಲಿ ವಿದೇಶೀ ಬಟ್ಟೆಗಳಿಗೆ ಬಹಿಷ್ಕಾರ ಹಾಕುವದರ ದೆಸೆಯಿಂದ ಸತ್ಯಾಗ್ರಹ ಸ್ವಯಂಸೇವಕರು Hunger strike ಮಾಡಲಾರಂಭಿಸಿರುವರು. ಕಳೆದ ಮಂಗಳವಾರ ಮುಂಬಾಯಿ ನಗರದ ಅಬ್ದುಲ್ ರಸ್ತೆಯಲ್ಲಿ ಯಾರೋ ಪುಢಾರಿಗಳು ಮಿ| ಬಾಲಚಂದ್ರರಾಜಾರಾಂ ಲಗೋಟ್ ಎಂಬವರ ವಿದೇಶೀ ವಸ್ತ್ರ ಮಳಿಗೆಯನ್ನು ಬಳಿಹೊಕ್ಕು, ಅವರನ್ನು ಹೊಡೆದು, ಹೆಚ್ಚಿನ ಅನಾಹುತಗಳನ್ನು ಮಾಡಿದ್ದರಷ್ಟೆ' ಓರ್ವ ಸ್ವಯಂಸೇವಕನು ಅವರ ಮನೆಬಳಿಯಲ್ಲಿ ೨೪ ತಾಸುಗಳ ವರೆಗ Hunger strike ಮಾಡಿದನಂತೆ ಸ್ವಯಂಸೇವಕನ ಮಹಾ ಪ್ರಯತ್ನವಾದರೂ ಮಿ| ಬಾಲಚಂದ್ರರನ್ನು ವಿದೇಶೀ ವ್ಯಾಪಾರಿಗಳಿಗೆ ಬಹಿಷ್ಕಾರ ಹಾಕುವಂತೆ ಮಾಡಿ, ಕಾಂಗ್ರೆಸ್ಸಿನವರೊಡನೆ ಒಪ್ಪಂದ ಮಾಡಿಕೊಳ್ಳುವದೇ ಆಗಿತ್ತು, ಇಷ್ಟೇ ಅಲ್ಲದೆ ಬೇರೆ ಉದ್ದೇಶದಿಂದ ಸ್ವಯಂಸೇವಕನು ಅವರ ಮನೆಯ ಬಾಗಲಲ್ಲಿ Hunger strike ಮಾಡಲಿಲ್ಲವೆಂದು ತಿಳಿದುಬರುತ್ತದೆ ಕಟ್ಟಕಡೆಗೆ ಮಿ ರಾಜಾರಾಮರು ಕಾಂಗ್ರೆಸ್ಸಿನವರೊಡನೆ ಸಂಧಾನ ಬೆಳಸಲಿಕ್ಕೆ ಬೇಕಾಯಿತಂತೆ' ಇದೇ ರೀತಿಯಲ್ಲಿ ಮುಂಬಾಯಿ ನಗರದ ಇನ್ನೆರಡು ಸ್ಥಳಗಳಲ್ಲಿಯೂ ಸತ್ಯಾಗ್ರಹ ಸ್ವಯಂಸೇವಕರು ವಿದೇಶೀ ಬಟ್ಟೆಯ ಬಹಿಷ್ಕಾರ ಪ್ರಚಾರಕ್ಕಾಗಿ ಉಪವಾಸ ವ್ರತವನ್ನು ಕೈಕೊಂಡರು ಕಳೆದ ವಾರದಲ್ಲಿ ಮುಂಬಾಯಿಯ ತಂಬರಕಟ್ಟೆ ಎಂಬಲ್ಲಿ ಪರದೇಶೀ ಬಟ್ಟೆ ವ್ಯಾಪಾರಿಯೊಬ್ಬನ ಅಂಗಡಿ ಬಳಿ ಸ್ವಯಂಸೇವಕನು Hunger strike ಮಾಡಿ ಅಂಗಡಿಯ ಯಜಮಾನನ ಸ್ವಯಂಸೇವಕನ ಮನಸ್ಸನ್ನು ಪೂರ್ತಿಗೊಳಿಸಿದನಲ್ಲದೆ ೨೦ ರೂಪಾಯಿಗಳನ್ನು ಒಡನೆ ಧರ್ಮಮಾಡುವದಕ್ಕಾಗಿ (ಮಾಡಿದ ತಪ್ಪಿತಕ್ಕೆ ಪ್ರಾಯಶ್ಚಿತ್ತವೆಂಬಂತೆ) ತೆತ್ತಿರುವನೆಂದು ತಿಳಿದುಬರುತ್ತದೆ ಇಂತಹ ಸಂದರ್ಭಗಳಲ್ಲಿ ಪೋಲೀಸರ ಆತಂಕಗಳೇನೂ ಇದ್ದಿಲ್ಲವೆಂದೂ ತಿಳಿಯಲಾಗುತ್ತದೆ

ತಾರೀಕು ೪

**ಅಲ್ಲಹಾಬಾದದಲ್ಲಿ**

ಆಗ್ರಾ ಜಮೀನುದಾರರು ಸರ್ಕಾರಿ ಕರನಿರಾಕರಣೆಯಿಂದುಂಟಾದ ನೆರೆಹೊರೆ ಗ್ರಾಮಗಳ ನಷ್ಟವನ್ನು ಪರ್ಯಾಲೋಚಿಸಿದರು. ಮಾತ್ರವಲ್ಲದೆ ರೈತರು ಬೆಳಸಿದ ದವಸಧಾನ್ಯಗಳ ಬೆಲೆಯು ಬಹಳವಾಗಿ ಬಿದ್ದುಹೋಗಿರುವದರಿಂದ ರೈತರ ಪಾಡು ಅತೀ ಕಷ್ಟದಾಯಕವಾಗಿರುವದೆಂದೂ ಪ್ರಸ್ತಾಪಿಸಿದರು, ಆದುದರಿಂದ ಅವರೆಲ್ಲರೂ ಏಕೀಕರಣದಿಂದ ತಮ್ಮ ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಳ್ಳುವದಕ್ಕೆ ಪ್ರತ್ಯೇಕ ಕಮಿಟಿಯೊಂದನ್ನು ಸ್ಥಾಪಿಸಿದರು ಕರನಿರಾಕರಣೆಯ ವಿಷಯದಲ್ಲಿ ಸರಕಾರದೊಡನೆ ರಿಯಾಯತಿ ತೋರಿಸುವಂತೆ ಮನವಿಗಳನ್ನೂ ಮಾಡಿಕೊಂಡಿರುವರೆಂದು ತಿಳಿದುಬರುವದು.

**ಮುಂಬಾಯಿಯ.**

ಸ್ಮಾಲ್‌ಕೋಸ್ ಕೋರ್ಟಿನ ಮುಖ್ಯ ಜಡ್ಜರು ಸತ್ಯಾಗ್ರಹದ ಅಪಾದನೆಯ ಮೇಲೆ ಕಾರಾಗ್ರಹಕ್ಕೆ ತಳ್ಳಲ್ಪಟ್ಟ ಮುನ್ಸಿಪಲ್ ಕೌನ್ಸಿಲರ ಪರವಾಗಿ ಹೊಸದೊಂದು ಕಾನೂನನ್ನು ಶೋಧಿಸಿರುವರಂತೆ! ಕಾನೂನಿನ ತರ್ಕದಂತೆ, ಅಂತಹ ಶಿಕ್ಷೆ ಹೊಂದಲ್ಪಟ್ಟ ಮುನ್ಸಿಪಲ್ ಕೌನ್ಸಿಲರು ಇನ್ನೊಮ್ಮೆ ಚುನಾವಣೆಗೆ ಅರ್ಹತೆಯುಳ್ಳವರಾಗಿರುವರೆಂದು ತಿಳಿದುಬರುತ್ತದೆ

'The evening news' ಪತ್ರಿಕೆಯಲ್ಲಿ ಪ್ರಚಾರಪಡಿಸಿದ ರಿಪೋರ್ಟಿನಂತೆ ಲಿವರ್‌ಪೂಲ್ ದೇಶದ ಹತ್ತಿವ್ಯಾಪಾರ ಸಮಿತಿಯು ಇಂಡಿಯನರೊಡನೆ ವ್ಯಾಪಾರವನ್ನು ಬೆಳೆಸಬೇಕೆಂಬ ಕುತೂಹಲದಲ್ಲಿರುವದೆಂದು ತಿಳಿಯಲಾಗುತ್ತದೆ

**ಬನಾರಿಸದಲ್ಲಿ**

ಪೋಲೀಸರು ಲಾಠಿಹೊಡೆತಗಳಿಂದ ಸುಮಾರು ೧೦೦ ಮಂದಿಯನ್ನು ಜಖಂ ಹೊಂದಿಸಿರುವರೆಂದು ತಿಳಿದುಬರುತ್ತದೆ. ಲಾಠಿಚಾರ್ಜಿಗೆ ಕಾರಣವೆಂದರೆ—ಒಬ್ಬ ಮುಸಲ್ಮಾನರವನು ಗಾಂಜಾ ಕೊಂಡುಕೊಳ್ಳಲಿಕ್ಕೆ ಅಂಗಡಿಗೆ ಹೋದನಂತೆ! ಸ್ವಯಂಸೇವಕರು ಆತನನ್ನು ಗಾಂಜಾ ಸೇವಬಾರದೆಂದು ಉಪದೇಶ ಕೊಡಹತ್ತಿದರು ಆ ಕೂಡಲೇ ಮುಸಲ್ಮಾನನಿಗೆ ರೇಗಿತು, ಸ್ವಯಂಸೇವಕರನ್ನು ಚೆನ್ನಾಗಿ ಹೊಡೆದನು, ಗಲಭೆ ಆಯಿತು, ಪೋಲೀಸರು ಬಂದು ಮುಸಲ್ಮಾನರವನನ್ನು ಕೈದುಮಾಡಿಕೊಂಡು ಹೋಗುತ್ತಿರಲು ಹಿಂದಿನಿಂದ ಒಂದು ಜನರ ಗುಂಪು ಒಂದು ಪೋಲೀಸರ ಮೇಲೆ ಧಾಳಿಮಾಡಿತು ಆ ಕೂಡಲೆ ಲಾಠಿಹಸ್ತರಾದ ಸುಮಾರು ೧೦೦ ಪೋಲೀಸ್ ಜವಾನರು ಆ ಸ್ಥಳಕ್ಕೆ ಬಂದು ಲಾಠಿಚಾರ್ಜು ಮಾಡಿದರು ಜನರೆಲ್ಲರೂ ಚದರಿದರು ಪೋಲೀಸರು ಅನೇಕರನ್ನು ದಸ್ತಗಿರಿ ಮಾಡಿದರಂತೆ' ಆದರೆ ಬನಾರಿಸ್ ಪಟ್ಟಣದ ಕಲೆಕ್ಟರ್ ದೊರೆಗಳವರ ಜಾಹೀರಾತಿಯಂತೆ, ಗಲಭೆಗೆ ಕಾರಣಭೂತನಾದ ಹುಡುಗನು ಹೆಚ್ಚಿನ ಜಖಂಗೆ ಒಳಪಟ್ಟರೂ ಕೂಡ, ಸಾಯಲಿಲ್ಲ, ಆತನನ್ನು ಕೊಂದಿರುವರೆಂದು ಸುದ್ದಿ ಹಬ್ಬಿಸುವದಕ್ಕಾಗಿ ಅನೇಕರು ಪ್ರಯತ್ನಿಸಿದರು, ಆದರೆ ಅಂತಹ ವರ್ತಮಾನಗಳು ತೀರ ಸುಳ್ಳಾಗಿರುವವೆಂದು ತಿಳಿದುಬರುತ್ತದೆ

ಲೀಗ್ ಒಫ್ ನೇಶನ್ಸ್‌ಗಳ, Economic ಮತ್ತು Finance ಸಂಸ್ಥೆಗಳ ಡೈರೆಕ್ಟರರಾದ ಸರ್ ಆರ್ಥರ್ ಸಾಲ್ಟರ್ ಎಂಬವರನ್ನು ಇಂಡಿಯಾ ಸರಕಾರವು ಆಮಂತ್ರಿಸಿರುವುದು ಅವರು ಬಂದು ಮುಂಬಾಯಿಯ ಪ್ರಕೃತದ ಸ್ಥಿತಿಗತಿಗಳನ್ನು ಪರ್ಯಾಲೋಚಿಸಲಿಕ್ಕಿರುವರಂತೆ' ಆದರೆ, ಈ ವಿಷಯದಲ್ಲಿ ಮುಂಬಾಯಿ ಜನತೆಯ ನಿರ್ಧಾರವೆಂದರೆ—ಅಂಥವರ ಬರೋಣವು ಈಗ ಅವಶ್ಯವಿಲ್ಲ—ಎಂಬುದೇ ಆಗಿರುವುದು. ಈ ಕುರಿತು ಒಬ್ಬ ವ್ಯಾಪಾರಸ್ಥರು ಹೇಳಿದರು — ಈ ಮೊದಲು ಎಷ್ಟೋ ಬುದ್ಧಿಶಾಲಿಗಳು ನಮ್ಮನ್ನು ಕಂಡಿದ್ದಾಯಿತು, ಎಷ್ಟೋ ವಿಚಾರಗಳು ವಿವರಿಸಲ್ಪಟ್ಟವು, ಅವುಗಳಿಂದ ದೊರೆತ ಫಲ ಮಾತ್ರ "ಏನೂ ಇಲ್ಲ" ನಮಗೀಗ ಉಪದೇಶಗಳು ಬೇಕಾಗಿರುವದಿಲ್ಲ ಇಂಡಿಯಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಈ ಮೊದಲು ಹಲವು ದಫೆ ಚರ್ಚಿಸಲ್ಪಟ್ಟದ್ದಾಯಿತು ಅನೇಕರ ಉಪದೇಶಗಳನ್ನು ಕೇಳಿದ್ದಾಯಿತು ಆದರೆ ಅಂತಹ ಉಪದೇಶಗಳ ಸತ್ಪರಿಣಾಮಗಳೇನೂ ತೋರಿದ್ದಿಲ್ಲ" ಅಂದಿರುವರು

**ಅಹಮ್ಮದಾಬಾದ'**

ಮಿ ವಲ್ಲಭಭಾಯಿಯವರು ಕ್ಷಮಾಪಣೆ ಬರೆದು ಕೊಡಬೇಕಾದ ದೆಂದು ಸರಕಾರವು ಅವರ ಮೇಲೆ ೧೪೪ನೇ ಪ್ರಕರಣವನ್ನು ಜಾರಿಮಾಡಿರುವರು.

**ಪಾಟ್ನಾದಲ್ಲಿ.**

ಸಾರನ್ ಜಿಲ್ಲೆಯ ಚೌಕೀದಾರ್ ತೆರಿಗೆ ವಸೂಲಿ ಬಗ್ಗೆ ಕೆಲ ಮಂದಿ ಪೋಲೀಸರೂ, ಅಧಿಕಾರಿಗಳೂ ಅಲ್ಲಲ್ಲಿನ ಗ್ರಾಮಗಳನ್ನು ಸಂದರ್ಶಿಸಿದರು ಆ ವೇಳೆಯಲ್ಲಿ ಲಾಠಿ, ಈಟಿ ಮೊದಲಾದ ಆಯುಧಗಳನ್ನು ಹಿಡಿದ ಒಂದು ಜನಸ್ತೋಮವು, ಅನೇಕ ಕಡೆಗಳಿಂದ ಪೋಲೀಸು ದಳವನ್ನು ಮುತ್ತಿತು ಪೋಲೀಸರು ಉಪಾಯವಿಲ್ಲದೆ ೯ ಗುಂಡುಗಳನ್ನು ಹಾರಿಸಿದರು, ಪರಿಣಾಮವಾಗಿ ಜನಸಮುದಾಯವು ಚದರಿತು ಕೆಲವು ಪೋಲೀಸು ಅಧಿಕಾರಿಗಳೂ ಅವರ ಕುದುರೆಗಳೂ ಜಖಮು ಹೊಂದಿರುವವೆಂದು ತಿಳಿದುಬರುತ್ತದೆ.

**ಪೇಶಾವರಲ್ಲಿ**

ಪಿಕೆಟಿಂಗ್ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುತ್ತಿವೆ. ಆ ಊರಿನ ಪ್ರಖ್ಯಾತಿಪಟ್ಟ ಒಬ್ಬ ವ್ಯಾಪಾರಸ್ಥನೂ, ಕಾಂಗ್ರೆಸ್ ಪ್ರೋತ್ಸಾಹಕನೂ ಆಗಿದ್ದ ಹಾಜಿ ಕರೀಮ್ ಎಂಬವರು ಮರಣಹೊಂದಿದರೆಂದು ವಾರ್ತೆ

**ಪೇಶಾವರದ ಅರಾಕೇಲ್ ಮೈದಾನಿನಲ್ಲಿ ಒಬ್ಬ ಬ್ರಿಟಿಷ್ ಸೈನ್ಯಾಧಿಕಾರಿಯನ್ನು ಅಫ್ರಿದಿಗಳು ಗುಂಡುಬಾರಿ ಮಾಡಿದರು.** ತಾರೀಕು ೩—೧೨—'೩೦ರಲ್ಲಿ ೯ನೇ ಜಾನ್ಸಿ ಬ್ರಿಗೇಡ್ ಸೈನ್ಯವು, "ನೌಸ್‌ಹೆರಾ" ಬ್ರಿಗೇಡಿನ ಸಹಾಯಕ್ಕಾಗಿ ಹೊರಟಿದ್ದಿತು. ನೌಸ್ ಹೆರಾ ಬ್ರಿಗೇಡಿನ ಸೈನಿಕರು, ಅರಾಕೇಲ್ ಮೈದಾನಿನ ಉತ್ತರಪಶ್ಚಿಮ ಭಾಗದಲ್ಲಿ ಮಾರ್ಗಗಳನ್ನು ತಯ್ಯಾರಿಗೊಳಿಸುವ ಕೆಲಸದಲ್ಲಿ ತಮ್ಮ ಸಮಯವನ್ನು ವಿನಿಯೋಗಿಸುತ್ತಿದ್ದರು. ಜಾನ್ಸಿ ಬ್ರಿಗೇಡ್ ಸೈನ್ಯವು ಹೋಗುವಾಗ ಅಫ್ರಿದಿಗಳ ಗಲಾಟೆಗಳೇನೂ ಇದ್ದಿಲ್ಲ, ಅಲ್ಲಲ್ಲಿನ ಗುಡ್ಡಗಳಲ್ಲಿ ಕೆಲವೇ ಅಫ್ರಿದಿಗಳು ಕಾಣಿಸಿಕೊಂಡರಂತೆ! ಅಂದಿನ ಕೆಲಸವು ಮುಗಿದೊಡನೆ, ಸದರಿ ಬ್ರಿಗೇಡು ಹಿಂತೆಗೆಯಿತು ದಾರಿಯಲ್ಲಿ ಬರುತ್ತಿರುವಾಗ, ಅಫ್ರಿದಿಗಳು ಸಿಪಾಯಿಯರ ಮೇಲೆ ಗುಂಡು ಹಾರಿಸಿದರು ಮಾತ್ರವಲ್ಲದೆ ಬ್ರಿಗೇಡನ್ನು ಹಿಂಬಾಲಿಸುತ್ತಾ, ಅಫ್ರಿದಿಗಳು ಅವರ ರಾಣೆಯ ವರೆಗೂ ಬಂದರು ಸೈನಿಕರು ಒಟ್ಟುಗೂಡಿ ಭಯಂಕರ ಗುಂಡುಬಾರು ಮಾಡಿದರು ಅಂತೂ ಬ್ರಿಟಿಷ್ ಸೈನ್ಯಾಧಿಕಾರಿಯೊಬ್ಬರು ಪ್ರಾಣ ಕಳಕೊಂಡರೆಂದು ತಿಳಿದುಬರುತ್ತದೆ.

**ಮಿ| ಕಾಪಾಡಿಯಾರರ ಅಪೀಲಿನ ಸಾರಾಂಶ**

ಮಿ| ಕಾಪಾಡಿಯಾರವರ ವಕೀಲರು, ಅಪೀಲಿನಲ್ಲಿ ಹೇಳಿದಂತೆ "ನ್ಯಾಯ ಬಾಹಿರಸಮಿತಿಗೆ ಸಹಾಯಮಾಡುವಿಕೆ" ಎಂಬ ಮಾತುಗಳು ಚೆನ್ನಾಗಿ ವಿಮರ್ಶಿಸಲಿಕ್ಕಿರುವವು ಅಲ್ಲದೆ ಜವಾಹರ್ ದಿನದ ಕಾರ್ಯಕ್ರಮಗಳ ಪ್ರಚಾರ ಕಾರ್ಯದೊಂದಿಗೆ ಪೋಲೀಸು ಕಮಿಶನರ ವಿರೋಧ ಜಾಹೀರಾತಿಯೂ, ಜನತೆಯ ತಿಳುವಳಿಕೆ ಬಗ್ಗೆ ಪ್ರಚಾರಮಾಡಲ್ಪಟ್ಟಿದ್ದಿತು ಎರಡು ವಿಷಯಗಳ ಪ್ರಚಾರಕಾರ್ಯವೂ ಕೂಡ, ಬಾಹ್ಯ ಜನತೆಯ ತಿಳುವಳಿಕೆಗಾಗಿಯೇ ನಡೆಸಲ್ಪಟ್ಟಿದ್ದಿತು ಹಾಗಿರುವಲ್ಲಿ, ಜವಾಹರ್ ದಿನದ ಕಾರ್ಯಕ್ರಮಗಳ ಪ್ರಚಾರ ಮಾತ್ರ ನ್ಯಾಯಬಾಹಿರ ಸಮಿತಿಗಳಿಗೆ ಪ್ರೋತ್ಸಾಹಿಸುವದೆಂಬ ವಾದವನ್ನು, ವಕೀಲರು ಬಲವಾಗಿ ಖಂಡಿಸಿರುವರು, ಅಲ್ಲದೆ ಅಂತಹ ವಿಷಯವನ್ನು ಪ್ರಕಟಿಸುವದರಿಂದ, ಪ್ರಚಾರಕರು, ಜನಸ್ತೋಮವನ್ನು ಸಭೆ ಸೇರಲು ಆಮಂತ್ರಿಸಿದಂತಾಗುವುದೇ? ಹಾಗೆ ಮಾಡದಿದ್ದಲ್ಲಿ, ಮಿ| ಕಾಪಾಡಿಯಾರವರು ನ್ಯಾಯಬಾಹಿರ ಸಮಿತಿಗಳಿಗೆ ಅದೇಕೆ ಪ್ರೋತ್ಸಾಹವಿತ್ತರು' ಮತ್ತು ಮಿ| ಕಾಪಾಡಿಯಾರವರ ಮೇಲೆ ಹೊರಿಸಲ್ಪಟ್ಟ ಅಪಾದನೆಯು, ಕ್ರಿಮಿನಲ್ ಕೋಡು ಎಮೆಂಡ್‌ಮೆಂಟ್ ಆಕ್ಟಿನ ೧೭(೧) ಪ್ರಕರಣಕ್ಕೆ ಒಳಪಟ್ಟ ಮೊಕದ್ದಮೆಯಾಗಿರುವದೇ? ಎಂಬ ಮೊದಲಾದ ಕಾರಣಗಳನ್ನು ತೋರಿಸಿ ಅಪೀಲು ಮಾಡಿರುವರಂತೆ

ತಾರೀಕು ೫

**ಮುಂಬಾಯಿಯಲ್ಲಿ**

ಮಹಾತ್ಮಾಜಿಯವರ ಬಂಧನೆಯ ೭ನೇ ತಿಂಗಳ ದಿನಾಚರಣೆಯು ಏರ್ಪಟ್ಟು ಎಸ್‌ಪ್ಲನೇಡ ಮೈದಾನದಲ್ಲಿ ರಾಷ್ಟ್ರಧ್ವಜವನ್ನೇರಿಸಬೇಕೆಂದು ಅನೇಕ ಜನರು ನೆರೆದಿದ್ದರು ವಿದ್ಯಾರ್ಥಿಯುವಕ ಸಂಘದವರಿಂದ ಎಲ್ಲಾ ಸನ್ನಾಹಗಳೂ ತಯಾರಿಮಾಡಲ್ಪಟ್ಟಿತ್ತು ಆದರೆ ಪೋಲೀಸರು, ಸದರಿ ಸಮಾರಂಭವನ್ನು ಕೊನೆಗಾಣಿಸ ಬಿಡಲಿಲ್ಲ, ಅಷ್ಟರಲ್ಲಿ ಲಾಠಿಗಳು ತಮ್ಮ ಕೆಲಸಗಳನ್ನು ಮಾಡಿಬಿಟ್ಟವಂತೆ! ಸುಮಾರು ೩೪೦ ಮಂದಿ, ತಕ್ಕಮಟ್ಟಿನ ಜಖಂ ಹೊಂದಿರುವರೆಂದು ತಿಳಿದುಬರುತ್ತದೆ.

**ಅಲ್ಲಹಾಬಾದದ**

ಡಿಸ್ಟ್ರಿಕ್ಟ್ ಜೈಲಿನಲ್ಲಿ ೭ ಮಂದಿ ರಾಜಕೀಯ ಅಪಾದಿತರು ಇತರರೊಂದಿಗೆ ಸೇರಿ, ಜೈಲು ಕ್ರಮಗಳನ್ನು ಉಲ್ಲಂಘಿಸಿದರು. ಇವರ ಪೈಕಿ ಸುಂದರಲಾಲ್ ಎಂಬವರೇ ಮುಂದಾಳಾಗಿರುವರು. ಆದಕಾರಣ ಜೈಲು ಸುಪರಿಂಟೆಂಡೆಂಟರು ತಮ್ಮ ಮೇಲಾಧಿಕಾರಿಗಳಿಗೆ, ಜೈಲಿನಲ್ಲಿ ನಡೆಯುತ್ತಿದ್ದ ಅನಾಹುತಗಳನ್ನು ತಿಳಿಸಿದರು, ಆ ಕುರಿತು ಜೈಲು ಸುಪರಿಂಟೆಂಡೆಂಟರು ಅಪಾದಿತರ ಮೇಲೆ ದಾವಾ ಮಾಡಿ ಜೈಲರರ ಸಾಕ್ಷಿಯು ವಿಚಾರಿಸಲ್ಪಟ್ಟಿತು. ಅವರ ಹೇಳಿಕೆಯಂತೆ, ನವಂಬರ ೧೬ನೇ ತಾರೀಕಿಗೆ, ಇನ್ಸ್‌ಪೆಕ್ಟರ್ ಜನರಲರ ಸರ್ಕ್ಯುಲರ್ ಮೇರೆಗೆ, ಜೈಲರರು ಎಲ್ಲಾ ಅಪಾದಿತರಿಗೂ ಎಚ್ಚರಿಸಿದರು ಸರ್ಕ್ಯುಲರ್ ಹುಕುಮನ್ನು ಅನುಸರಿಸದಿದ್ದರೆ ಕೊಂಡೆಯಿಂದ ಶಿಕ್ಷಿಸಲ್ಪಡುವುದೆಂದು ಮೊದಲಾಗಿ ಸೂಚಿಸಿದರು ಅದಕ್ಕೆ ಸುಂದರಲಾಲ್ ಮತ್ತು ಇನ್ನೊಬ್ಬ ತಪ್ಪಿತಸ್ಥನು ಜೊತೆಯಿಂದ ಜೈಲರರೊಡನೆ ನಮ್ಮನ್ನು ಹೊಡೆದುದಕ್ಕಾಗಿ ಸರ್ಕ್ಯುಲಾರ್ ಹುಕುಮನ್ನು ಎಂದೂ ಸ್ವೀಕರಿಸಲಾರೆವೆಂದು ಹಟ ಹಿಡಿದರು, ಕಾರ್ಯವನ್ನು ಅಲ್ಪಸ್ವಲ್ಪವಾಗಿ ನಿರ್ವಹಿಸದೇ ಬಿಟ್ಟರು. ಆದಕಾರಣ ಶಿಕ್ಷೆಹೊಂದಲ್ಪಟ್ಟವರಲ್ಲಿ ಕೆಲವರಿಗೆ ಜೈಲಾಧಿಕಾರಿಯು ಹೊಡೆಯಬೇಕಾದ ಪ್ರಸಂಗವೂ ಬಂದು

(೧೩ನೇ ಪುಟಕ್ಕೆ ಮುಂದರಿಯುತ್ತದೆ.)

**The Zandu Pharmaceutical Works, Ltd., Bombay, 14.**

**ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.**

ಲೋಕಪ್ರಸಿದ್ಧವಾದ 'ಝಂಡೂ'ಯವರ

# ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!

[illegible]

ಕ್ರಯ 1 ಪಾನು ಸೀಸೆ ರೂ. 2—8—0, ½ ಪಾ. ರೂ. 1—5—0, ¼ ಪಾ. ರೂ 0—13—0.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು:— ದಾಮೋದರ್ ಅಂಡ್ ಕಂಪೆನಿ, 78 ಜೈನಾ ಬಜಾರು ರಸ್ತೆ, ಮದ್ರಾಸು

ತೀರ್ಥಹಳ್ಳಿ ಏಜಂಟರು:— ಮೆಸರ್ಸ್ ಪಂಡಿತ ಮತ್ತು ಕಂಪೆನಿ

ಮಂಗಳೂರು ಏಜಂಟರು:— ದಿ ಊಲನ್ ಮಾರ್ಟ್.

ಸಿರ್ಸಿ ಏಜಂಟರು — ಎಸ್. ಎಲ್ ಧಾಕಪ್ಪಾ ಎಂಡ್ ಬ್ರದರ್ಸ್

ಸಬ್ ಏಜಂಟರು — ಯು ಜನಾರ್ಧನರಾವ್, ಪುತ್ತೂರು, ದ. ಕನ್ನಡ.

ಮಂಗಳೂರು ಏಜಂಟರು — ತಿಪ್ಪಣ್ಣ ಶ್ಯಾಸ್ತ್ರಿ, ಬಸ್‌ಸ್ಟೇಟ್.

☞ ವಿವರ ಕೇಳಲಾಗು ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.



TELEGRAMS 'ASPINWALCO'    TELEPHONE No. 15

THE Firestone Gum-Dipping process strengthens the tire to meet the demands of hill climbing, quick stops, sudden turns and high speeds. The Firestone tread is scientifically designed to grip the road in emergencies. You can have this extra safety on *your car*. Drive in and use our service.

**Firestone**

**Gum-Dipped TIRES**

The Mark of Quality

DISTRIBUTORS

Aspinwall & Co. Ltd

(Address) MANGALORE

*STOCKISTS*

UDIPI

*H Siddaya Hegde*

KASARGODE

*Rama Nayak*

KANHANGAD

*H S Russool*

COONDAPUR –

*G Gopal Mukunda Pai*

General Merchant,

COONDAPUR (S Kanara)

BHATKAL –

*Messers Kashimjee Sham shuddeer Saheb Motor Service*

Puttur

*K Venkatraya Pai*

[illegible] Cycle Stores



***FOR YOUR CAR***

# WILLARD BATTERIES.

**SIMONIZ KLEENER    SIMONIZ POLISH**

*AGENTS —*

**Messrs. Aspinwall & Co, Ltd**

MANGALORE



"ಬಿಟ್ಟಿ"    "ಪ್ರಗಸಟ್ಟಿ"    "ಬಿಟ್ಟಿ"

**ಜೇಬಿನ ಲಿವರ್ ಗಡಿಯಾರವೂ ಕೈ ಗಡಿಯಾರವೂ ಬಿಟ್ಟಿ**

**೩ ತಿಂಗಳೊಳಗಾಗಿ ೩೦೦೦ ಗಡಿಯಾರಗಳನ್ನು ಬಿಟ್ಟಿಯಾಗಿ ಕೊಟ್ಟಿದ್ದೇವೆ**

[illegible] ಗ್ಯಾರಂಟಿ ಕೊಡುತ್ತೇವೆ.

ಪತ್ರವ್ಯವಹಾರಗಳು ಇಂಗ್ಲೀಷಿನಲ್ಲಿ ಬರೆಯಬೇಕು

**Imperial Watch Company.**

(S) Post No. 12, BOMBAY.



## ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

**ಶಾರದಾ ಛಾಪಖಾನೆ,**

ರಥಬೀದಿ, ಮಂಗಳೂರು



## ಮುದಲ್ ತರವಾದ ಬೆಳ್ಳಿ ಉಡಿದಾರ ಹಗ್ಗ.

ESTD 1896.

ಅನೇಕ ವರುಷದಿಂದ ನಾವು ಬೆಳ್ಳಿ ಉಡಿದಾರಗಳನ್ನು ತಯಾರು ಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿ ಬರುತ್ತೇವೆ. [illegible] ಅನುಭವದ ಮೇಲೆ ನಮ್ಮ ಉಡಿದಾರ ಹಗ್ಗಗಳು [illegible] ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದುದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳನ್ನು ಕಳುಹಿಸುತ್ತೇವೆ. ಒಂದು ಸಲ ನಮ್ಮಲ್ಲಿಂದ ತರಿಸಿ ನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ಧಾರಣೆ ಪ್ರಕಾರ ಸರಕುಗಳಿಗೆ ಧಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್ [illegible] ಅಂಡ್ ಸನ್ಸ್,

[illegible]

[illegible]



ರಿಸ್ಟ್‌ವಾಚ್ ಉಚಿತ.

[illegible]

ಕಿಂಗ್‌ಜಾರ್ಜ ಕೊರೊನೇಶನ್ ಕಂಪೆನಿ

ಮುಂಬಾಯಿ



## ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

**ಶಾರದಾ ಛಾಪಖಾನೆ,**

ರಥಬೀದಿ, ಮಂಗಳೂರು



ಒಮ್ಮೆ ಪರೀಕ್ಷಿಸಿರಿ!    ತೃಪ್ತಿ ಹೊಂದಿರಿ!

**ದಿ ಕ್ರೌನ್ ರಬ್ಬರ್ ಸ್ಟಾಂಪು ಕಂಪೆನಿ,**

ಹೆಡ್ಡಾಫೀಸು ಬಲ್ಮಠ ರಸ್ತೆ, ಕಂಕನಾಡಿ ಪೋಸ್ಟು,

ಮಂಗಳೂರು, ದ ಕನ್ನಡ

## ರಬ್ಬರು ಮೊಹರುಗಳು

ಇಲ್ಲಿ ಉತ್ತಮವಾದ ಎಯರ್ ಕುಶನ್ ರಬ್ಬರು ಮೊಹರುಗಳೂ, ಹಿತ್ತಾಳೆ ಇತ್ಯಾದಿ ಲೋಹಗಳಲ್ಲಿಯೂ, ಮಾರ್ಬಲ್‌ನಲ್ಲಿಯೂ ಕೆತ್ತನೆಯ ಕೆಲಸವನ್ನೂ ಬಹಳ ನಾಜೂಕಾಗಿ ಕ್ಲಪ್ತ ಸಮಯದಲ್ಲಿ ಮಾಡಿಕೊಡುತ್ತದೆ.

ಹೆಚ್ಚಿನ ಮಾಹಿತಿಯನ್ನು ಪತ್ರಮೂಲಕವಾಗಲೀ ಆಫೀಸಿನಲ್ಲಿ ಸ್ವತಹ ಬಂದಾಗಲೀ ತಿಳಿದುಕೊಳ್ಳಿರಿ.

ಎಮ್ ದೇವದಾಸ ಕಿಣಿ,

ಮೆನೇಜಿಂಗ ಪ್ರೊಪ್ರೈಟರ್.

## ಖಾನೆಸುಮಾರಿ ಲೆಖ್ಖವೂ, ಬಹಿಷ್ಕಾರವೂ.

ಬರುವ ವರುಷ ಫೆಬ್ರವರಿ ತಿಂಗಳಲ್ಲಿ ಹಿಂದುಸ್ಥಾನದ ಖಾನೆಸುಮಾರಿ ಲೆಖ್ಖವು ತೆಗೆಯಲ್ಪಡಬೇಕೆಂದು ಸರಕಾರದವರು ನಿರ್ಧರಿಸಿ ಆ ಕಾರ್ಯಕ್ಕೆ ಬೇಕಾದ ತಯಾರಿಗಳನ್ನು ಈಗಲೇ ನಡಿಸುತ್ತಿರುವರು. ಇದು ಕೆಲವರಿಗೆ ಆಕ್ಷೇಪಕರವಂತೆ ಆದುದರಿಂದ ಖಾನೆಸುಮಾರಿಯನ್ನು ಬಹಿಷ್ಕರಿಸಿ ಬಿಟ್ಟುಬಿಡಬೇಕೆಂದು ಕೆಲವೆಡೆಗಳಲ್ಲಿ ಯತ್ನಗಳು ನಡಿಯುತ್ತಿರುವ ಹಾಗೆ ಕಾಣುತ್ತಿದೆ. ಈ ಮನೋವೃತ್ತಿಗೆ ಕಾರಣಗಳೇನೋ ನಾವರಿಯೆವು. ಈಗಿನ ಕಾಲದಲ್ಲಿ ಲೆಖ್ಖಪತ್ರಗಳು ಪ್ರಾಮುಖ್ಯವಾಗಿರುವವು ಆದುದರಿಂದ ಹತ್ತು ವರುಷಕ್ಕೊಮ್ಮೆಯಾದರೂ ಜನಸಂಖ್ಯೆಯನ್ನು ಕಂಡುಹಿಡಿಯುವುದು ಅವಶ್ಯ. ಅಲ್ಲದೆ ವಿದ್ಯಾಭ್ಯಾಸ, ವೃತ್ತಿ, ಕೈಗಾರಿಕೆಗಳ ಪ್ರಚಾರದ ವಿಷಯದಲ್ಲಿ ಆಗಾಗ್ಗೆ ವಿಚಾರಿಸುವುದು, ಕುಷ್ಠರೋಗಿಗಳು, ಮೂಕರು, ಅಂಧರು ಮೊದಲಾದವರ ಸಂಖ್ಯೆಯನ್ನು ಒದಗಿಸಿಕೊಳ್ಳುವದು ಖಾನೆಸುಮಾರಿಯ ಮುಖ್ಯೋದ್ದೇಶ ಆದುದರಿಂದ ರಾಜ್ಯಭಾರಕ್ರಮದಲ್ಲಿ ಆಯವ್ಯಯಪಟ್ಟಿ, ಚುನಾವಣೆ ಮೊದಲಾದವುಗಳನ್ನೊಳಗೊಂಡ ಯಾವ ಸರಕಾರಕ್ಕೂ ಇಂಥಾ ಲೆಖ್ಖಪತ್ರಗಳು ಅತ್ಯಗತ್ಯ. ಇದೂ ಅಲ್ಲದೆ ಹತ್ತು ವರುಷಕ್ಕೊಮ್ಮೆಯಾದರೂ ಪ್ರಜಾಜನರ ಶರೀರಾರೋಗ್ಯ, ವಿದ್ಯಾಭಿವೃದ್ಧಿ, ಸಾಂಪತ್ತಿಕ ಉನ್ನತಿ ಮೊದಲಾದುವುಗಳನ್ನು ಪರಿಶೀಲಿಸುವುದರಿಂದ ಏನೂ ಅಪ್ರಯೋಜನವಾಗಲಾರದು. ಸರಕಾರದ ಬೇರೆಬೇರೆ ಇಲಾಖೆಗಳು ಪ್ರಜಾಜನರ ಹಿತಕ್ಕಾಗಿ ಬೇರೆ ಬೇರೆ ಯೋಜನೆಗಳನ್ನು ಕೈಕೊಳ್ಳಬೇಕಾದರೆ ಹಿಂದಿನ ಅನುಭವವು ಅತ್ಯಾವಶ್ಯಕ. ಖಾನೆಸುಮಾರಿಯೊಂದಿಲ್ಲದಿದ್ದರೆ ಉಪಯುಕ್ತವಾದ ಅನುಭವವೇ ಇಲ್ಲದಂತಾಗುವುದು. ಯಾವುದೇ ಯೋಜನೆಗೆ ಅಡಿಗಲ್ಲೇ ಇಲ್ಲದಂತಾಗುವುದು ಎಂಬುದನ್ನು ನಾವು ಒತ್ತಿ ಹೇಳುವ ಅವಶ್ಯಕವಿಲ್ಲ. ಖಾನೆಸುಮಾರಿಯೇ ಒಂದು ರಾಜ್ಯದ ಪ್ರಗತಿಯ ಮಾರ್ಗವನ್ನು ಸೂಚಿಸುವುದು ಆದುದರಿಂದ ಸರಿಯಾದ ಲೆಖ್ಖದ ತಖ್ತೆಯನ್ನು ಪಡಿಯುವುದು ಅತ್ಯಗತ್ಯ. ಪ್ರಸ್ತುತ ನಡಿಯಲಿರುವ ಖಾನೆಸುಮಾರಿಯಲ್ಲಿ ಹಿಂದೂಮತಕ್ಕೆ ಸೇರಿರುವ ಅನೇಕ ಚಿಕ್ಕಚಿಕ್ಕ ಪಂಗಡಗಳ ಜನರನ್ನು 'ಹಿಂದೂ' ಎಂಬ ವಿಭಾಗದಲ್ಲಿ ನಮೂದಿಸದೆ ಆಯಾಯ ಸಂಕುಚಿತ ಪಂಗಡಗಳ ವಿಭಾಗದಲ್ಲಿ ಸೂಚಿಸಬೇಕೆಂದು ಸರಕಾರದವರು ನಿರ್ಧರಿಸಿರುವರೆಂದು ಹಿಂದೂ ಮಹಾಸಭೆಯವರು ಕೇಳಿರುವರು. ಈ ನಮೂನೆಯ ಲೆಖ್ಖದಿಂದ ಹಿಂದುಗಳ ಸಂಖ್ಯೆಯು ಕಡಿಮೆಯಾಗುವುದು. ಖಾನೆಸುಮಾರಿಯು ಪ್ರಯೋಜನಕರವಾಗಬೇಕಾದರೆ ಎಲ್ಲರ ಸಹಕಾರವು ಅಗತ್ಯವಿರುವುದರಿಂದ ಹಿಂದೂ ಮಹಾಸಭೆಯು ಈ ಆಕ್ಷೇಪವನ್ನು ಸರಕಾರದವರು ವಿಚಾರಿಸಿ ತಿಳಿಯ ಸುಪರಿಂಟೆಂಡೆಂಟರಿಗೆ ಕೊಟ್ಟಿರುವ ಸೂಚನೆಗಳನ್ನು ಬೇಗನೇ ಪುನರಾಲೋಚಿಸುವರೆಂದು ನಂಬುತ್ತೇವೆ

## ರೌಂಡ್ ಟೇಬಲ್ ಪರಿಷತ್ತು.

ರೌಂಡು ಟೇಬಲ್ ಪರಿಷತ್ತಿನ ಕಮ್ಮಿಟಿ ಮೀಟಿಂಗುಗಳು ಲಾರ್ಡ್ ಸೇಂಕಿಯೆಂಬವರ ಅಧ್ಯಕ್ಷತೆಯಲ್ಲಿ ಬಹು ಸಾಂಗವಾಗಿ ನಡೆಯುತ್ತಲಿವೆ. ಇವರು ತಮ್ಮ ಕಾರ್ಯದಲ್ಲಿ ವಿಶೇಷ ಉತ್ಸಾಹವುಳ್ಳವರಾಗಿರುವರೆಂದೂ, ಅನಾವಶ್ಯಕವಾದ ತರ್ಕಗಳಿಗೆ ಎಡೆಗೊಡದೆ ಕಾರ್ಯವು ಬೇಗನೇ ಸಾಗುವ ಹಾಗೆ ತನ್ನ ಕೌಶಲ್ಯವನ್ನು ಪ್ರದರ್ಶಿಸುತ್ತಿರುವರೆಂದೂ ವರ್ತಮಾನವಿದೆ. ಇದು ಅಲ್ಲದೆ ಅಕ್ರಿತ ರಾಜರ ಮತ್ತು ಹಿಂದು, ಮುಸಲ್ಮಾನ, ಸಿಕ್ಕರ ವಾದವಿವಾದಗಳೂ, ಹಿಂದೀ ಪ್ರತಿನಿಧಿಗಳ ಸಾಹಸದಿಂದಲೂ, ಲಾರ್ಡ್ ಮೆಕ್‌ಡೋನಲ್ಡ್, ವೆಡ್‌ವುಡ್ ಬೆನ್, ಲಾರ್ಡ್ ಸೇಂಕೀ ಎಂಬವರ ಪ್ರೋತ್ಸಾಹದಿಂದಲೂ ಛಂದದಿಂದ ಇತ್ಯರ್ಥವಾಗುತ್ತಿರುವುದೂ ಶುಭ ಚಿಹ್ನೆಯಾಗಿರುತ್ತದೆ. ಹಿಂದು ಮುಸಲ್ಮಾನರೊಳಗೆ ಕಲಹವನ್ನು ... ಸಲು ಪ್ರಯತ್ನಿಸುವ ಕೆಲವು ಪತ್ರಿಕಾಕರ್ತರ ಮತ್ತು ಸ... ರ್ಗಳ ದುರ್ವರ್ತನವನ್ನು ವೆಜ್‌ವುಡ್ ಬೆನ್ ಸಾಹೇಬರು ಬ್ರಿಟಿಷ್ ಸರಕಾರದ ಪರವಾಗಿ ತೀವ್ರವಾಗಿ ಖಂಡಿಸಿರುವರೆಂದು ತಿಳಿದುಬರುತ್ತದೆ. ಬ್ರಿಟಿಷ್ ಸರಕಾರದ ಪ್ರತಿನಿಧಿಗಳಿಗೆ ಈಗಲಾದರೋ ಹಿಂದುಸ್ಥಾನದ ನಿಜವಾದ ಪರಿಸ್ಥಿತಿಯು ಗೊತ್ತಾಗಲಿಕ್ಕೆ ಆರಂಭವಾದ ಹಾಗೆ ಕಾಣುತ್ತದೆ. ಇನ್ನೂ ಹೆಚ್ಚು ಗೊತ್ತಾಗಲಿಕ್ಕಿದೆ. "ಹಿಂದುಸ್ಥಾನದ ವಿಷಯದಲ್ಲಿ ಈ ಸ್ವರಾಜ್ಯ ಏನಾದರೊಂದು ನಮೂನೆಯ ಇತ್ಯರ್ಥಮಾಡದೆ ನೀವು ಹಿಂದುಸ್ಥಾನಕ್ಕೆ ಹೇಗೆ ಹಿಂತಿರಳುವಿರಿ" ಎಂದು ಲಾರ್ಡ್ ಸೇಂಕಿಯವರು ಹಿಂದುಸ್ಥಾನದ ಪ್ರತಿನಿಧಿಗಳನ್ನು ಕೇಳಿಕೊಂಡರಂತೆ. ಬರುವ ಕ್ರಿಸ್‌ಮಸ್ ಹಬ್ಬದೊಳಗೆ ಈ ವಿಷಯದಲ್ಲಿ ಹೆಚ್ಚಿನ ಸಂಗತಿಯನ್ನು ತಿಳಿಯಬಹುದು. ಅಷ್ಟರ ವರೆಗೆ ನಮ್ಮ ಪ್ರತಿನಿಧಿಗಳು ಲಂಡನಿನಲ್ಲಿ ಕ್ರಿಸ್‌ಮಸ್ ಮತ್ತು ಹೊಸ ವರುಷದ ಆದರಾತಿಥ್ಯದ ಸಾಗರದಲ್ಲಿ ಮೈಮರೆತು ತೇಲಾಡುತ್ತಿದೆ ತಮ್ಮ ದೇಶಾಭಿಮಾನವನ್ನೂ ಕಾರ್ಯಾಸಕ್ತಿಯನ್ನೂ ಪ್ರದರ್ಶಿಸುವರೆ?

## ಒಂದಲ್ಲದಿದ್ದರೆ ಇನ್ನೊಂದು.

'ಮುಂಬಾಯಿ ಕ್ರಾನಿಕಲ್' ಪತ್ರಿಕೆಯ ಸಂಪಾದಕ ಮತ್ತು ಪ್ರಚಾರಕರಾದ ಮೆಸರ್ಸ್ ಬ್ರೆಲ್ವಿ ಮತ್ತು ಕಾಪಾಡಿಯ ಎಂಬವರ ಮೇಲೆ ಮುಂಬಯಿ ಪೋಲೀಸಿನವರು ಹೂಡಿದ ಮೊಕದ್ದಮೆಯಲ್ಲಿ ಮುಂಬಾಯಿಯ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ವಿಧಿಸಿರುವ ಶಿಕ್ಷೆಯು, ಸಹಾಯಹೀನರಾದ ಹಿಂದೀಯರಿಗೆ ಹೊಸತೊಂದು ಬೆದರಿಕೆಯನ್ನು ತಂದೊಡ್ಡಿರುವುದು. ಆಕ್ರಮಕಾರರಿಗೆ ಕಾರ್ಯಕಲಾಪಗಳನ್ನು ಪ್ರಕಟಿಸಿದ ಮಾತ್ರದಿಂದ ಆಕ್ರಮಕಾರರಿಗೆ ಸಹಾಯಮಾಡಿದಂತಾಯಿತೆಂಬ ನವೀನ ಶೋಧನೆಯೇ ಈ ಆರೋಪಕ್ಕೆ ಕಾರಣ. ಕಾನೂನುಕಾಯಿದೆಯೆಂಬುದು ಇಂಡಿಯಾ ರಬ್ಬರಿನಂತೆ ಎಳದರೆ ಹಿಗ್ಗುತ್ತದೆ. ಕಾನೂನುಗಳೆಂಬ ಶಸ್ತ್ರಗಳಿಗೆ ಕಡಿಮೆಯೇನೂ ಇಲ್ಲ. ಒಂದಲ್ಲದಿದ್ದರೆ ಇನ್ನೊಂದು. ಅದರ ಹರಿತವು ಕಡಿಮೆಯಾಗುವಾಗ ಮತ್ತೊಂದು. ಅಂತೂ ಇಂತೂ ಕುಂತಿ ಮಕ್ಕಳಿಗೆ ವನವಾಸವಾದಂತೆ ವೃತ್ತಾಂತ ಪತ್ರಿಕೆಗಳ ಜೀವಕ್ಕೆ ಇದೊಂದು ಸಂಚಕಾರ. ಇಲ್ಲದಿದ್ದರೆ ಎಲ್ಲಾ ಪ್ರಾಮುಖ್ಯ ವಿಷಯಗಳನ್ನು ಪ್ರಕಟಿಸುವುದು ಪತ್ರಿಕೆಗಳ ಮುಖ್ಯ ಕರ್ತವ್ಯವಾಗಿರುವಲ್ಲಿ ಆಕ್ರಮಕಾರರ ಕಾರ್ಯಕಲಾಪಗಳನ್ನು ಪ್ರಕಟಿಸಿದ ಮಾತ್ರದಿಂದ ತಕ್ಸೀರು ಹೇಗೆ ಆಗುವುದೋ ನಾವರಿಯೆವು. ಸರಕಾರಕ್ಕೆ ಸಮ್ಮಂಧವಾದ ಪ್ರಕಟನೆಗಳನ್ನು ಮಾತ್ರ ಪ್ರಕಟಿಸುವುದೇ ಪತ್ರಿಕೆಗಳ ನಿಜಕರ್ತವ್ಯವೆನ್ನುವುದಾದರೆ, ಪತ್ರಿಕೆಗಳು ಜನಸಮುದಾಯದ ಹಿತಕ್ಕಾಗಿ ಪ್ರಕಟಿಸಲ್ಪಡುವುದಲ್ಲವೆನ್ನುವುದಾದರೆ ಪತ್ರಿಕೆಗಳ ಅವಶ್ಯಕತೆಯೇ ಇಲ್ಲ. ಕಾಯಿದೆಗಳಂತೂ ಸ್ವಭಾವಿಕವಾಗಿ ಕಠಿಣತರ. ಅವುಗಳನ್ನು ಜಾರಿಗೆ ತರುವುದರಲ್ಲಿ ವಿಶೇಷ ಜಾಗ್ರತೆಯನ್ನೂ, ಸಹಿಷ್ಣುತೆಯನ್ನೂ ಉಪಯೋಗಿಸಲೇ ಬೇಕು. ಇಲ್ಲವಾದರೆ ಕಾಯಿದೆಗಳ ಮೇಲಿನ ಪುರಸ್ಕಾರವು ಹೋಗಿ ತಿರಸ್ಕಾರವು ಉತ್ಪನ್ನವಾಗುವುದು ಆಶ್ಚರ್ಯವಲ್ಲ. ಕಾರಣಾಂತರಗಳಿಂದ ಕಷ್ಟೋಭಾಯಮಾನವಾಗಿರುವ ಈಗಿನ ವಾತಾವರಣದಲ್ಲಿ ಇಂಥಾ ಅವಿಚಾರಪರ ಧೋರಣೆಯು ಇನ್ನಷ್ಟು ಕಷ್ಟೋಭೆಯನ್ನುಂಟುಮಾಡದಿರದು. ಶಾಂತಿಯನ್ನೂ ಪ್ರಜಾಹಿತವನ್ನೂ ಸಾಧಿಸುವುದೇ ಸರಕಾರದ ಧ್ಯೇಯವಾಗಿದ್ದರೆ ಇಂಥಾ ಕಠಿಣತರ ಕಾನೂನುಗಳನ್ನು ಜಾರಿಗೆ ತಾರದಿರುವುದೇ ಲೇಸು. ಬ್ರೆಲ್ವಿಯವರು ತನ್ನ ಮೇಲಿನ ಆರೋಪಣೆಯ ವಿಷಯದಲ್ಲಿ ಭಾಗವಹಿಸದೆ ಸುಮ್ಮನಿದ್ದುದು ವಿಷಾದಕರ. ಆದರೆ ಈ ಮೊಕದ್ದಮೆಯು ಎಲ್ಲಾ ಪತ್ರಿಕೆಗಳಿಗೂ ಸಮ್ಮಂಧಿಸುವ ವಿಷಯವನ್ನೊಳಕೊಂಡಿರುವುದರಿಂದ ಎಲ್ಲಾ ಪತ್ರಿಕಾಕರ್ತರು ತಂತಮ್ಮ ದ್ವೇಷಾಸೂಯೆಗಳನ್ನು ಬಿಟ್ಟು, ಐಕ್ಯಮತ್ಯದಿಂದ ಈ ಮೊಕದ್ದಮೆ ವಿಷಯದಲ್ಲಿ ಹೈಕೋರ್ಟಿಗೆ ಅಪೀಲು ಮಾಡಿ, ಆ ಮೂಲಕ ನ್ಯಾಯವನ್ನು ಹೊಂದಲು ಪ್ರಯತ್ನಿಸುವರೆಂದು ನಾವು ನಂಬುತ್ತೇವೆ.

## ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ.

ಪ್ರಸ್ತುತದ ಕಾಯಿದೆಭಂಗದ ಚಳವಳಿಯಲ್ಲಿ ಅನೇಕ ಬಾಲಕ ಬಾಲಕಿಯರು ಮಹಾತ್ಮಾ ಗಾಂಧಿಯವರ ಸೂತ್ರಗಳನ್ನು ಚನ್ನಾಗಿ ಅರಿತು ಅವರಿಂದ ಸೂಚಿತವಾದ ಕಾರ್ಯಗಳಿಗೆ ಕೈಹಾಕಿ ಆ ಮೂಲಕ ಕಾರಾಗ್ರಹವನ್ನು ಸಂತೋಷದಿಂದ ಸೇರುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಮೆಜಿಸ್ಟ್ರೇಟರು ತಮ್ಮ ಮುಂದೆ ಬರುವ ಈ ಬಾಲಕರ ವಯಸ್ಸನ್ನು ನೋಡಿ ಸಂಸ್ಥಾನಿಕವಾದ ಮಕ್ಕಳ ರಿಯಾಯಿತಿಯನ್ನು ತೋರಿಸುವ ಬದಲಿಗೆ ಅವರ ಮೇಲೆ ತೀಕ್ಷ್ಣವಾದ 'ಬೋರ್‍ಸ್ಟಲ್ ಆಕ್ಟ್' ಎಂಬ ಬ್ರಹ್ಮಾಸ್ತ್ರವನ್ನೇ ತೊಟ್ಟಿರುವರು. ಇದರ ಪರಿಣಾಮವಾಗಿ ಅಪ್ರಾಯಸ್ಥನಿಗೆ ಆರು ತಿಂಗಳು ಸಜೆ ಆಗುವ ತಕ್ಸೀರಿಗೆ ಅಪ್ರಾಯಸ್ಥನಿಗೆ ಎರಡು ಯಾ ಮೂರು ವರುಷದ ಸಜೆಯು ಪ್ರಾಪ್ತಿಯಾಗುವುದು. ಇದೀಗ ಕಾಯಿದೆಯ ಪ್ರತಾಪವೋ ಪ್ರಕೋಪವೋ ನಾವರಿಯೆವು. ಈ ವಿಷಯದಲ್ಲಿ ಮೆಜಿಸ್ಟ್ರೇಟರುಗಳು ಅನೇಕಾನೇಕ ಅರ್ಜಿಗಳನ್ನು ನೋಡಿರಬಹುದು. ಅನೇಕಾನೇಕ ಲೇಖನಗಳನ್ನು ಓದಿರಬಹುದು. ಆದರೆ ಈ ದುಂಧಾಸವು ನಿಂತಿಲ್ಲ. ಬೋರ್‍ಸ್ಟಲ್ ಶಾಲೆಗೆ ಯಾರನ್ನು ಯಾಕೆ ಕಳುಹಿಸುವುದು, ಅಲ್ಲಿಗೆ ಚಿಕ್ಕ ಮಕ್ಕಳನ್ನು ಎರಡು ಮೂರು ವರುಷಗಳಿಗೆ ಕಳುಹಿಸಿಕೊಡುವ ಮುಖ್ಯೋದ್ದೇಶವೇನು ಎಂದೀ ವಿಷಯಗಳಲ್ಲಿ ಮೆಜಿಸ್ಟ್ರೇಟರುಗಳು ನಾಕಷ್ಟು ಅನುಭವ ಹೊಂದಿರುವ ಹಾಗೆ ಕಾಣುವುದಿಲ್ಲ ಎಂಬುದನ್ನು ಅನೇಕ ಕಾಯಿದೆ ಪ್ರವೀಣರು ವ್ಯಕ್ತಪಡಿಸುತಿರುವರು. ಕಾಯಿದೆಭಂಗವನ್ನು ಅಹಿಂಸಾಪರ ರೀತಿಯಲ್ಲಿ ಮಾಡುವ ಬಾಲಕ ಬಾಲಕಿಯರು ಕಳ್ಳರಲ್ಲ, ಕೊಲೆಪಾತಕರಲ್ಲ, ಕೇಡಿಗಳಲ್ಲ. ಅವರು ಕೇವಲ ದೇಶಭಕ್ತಿಯಿಂದ ತುಂಬಿ ತುಳುಕುತ್ತಿರುವ ಅನನುಭವಶಾಲಿಗಳಾದ ಚಿಕ್ಕ ಮಕ್ಕಳು. ಇವರಿಗೆ ಬೇಕಾದ್ದು ಹೆಸರಿಗೆ ಒಂದು ಶಿಕ್ಷೆ. ಸಾಧಾರಣ ಜೈಲುಗಳಲ್ಲಿ ಯಾವ ವರ್ಗಕ್ಕೆ ಸೇರಿದ ಮಕ್ಕಳನ್ನು ಇರಿಸುವರೋ ತಕ್ಕ ಏರ್ಪಾಡುಗಳಿವೆ ಎಂದೀ ವಿಷಯಗಳನ್ನು ಮೆಜಿಸ್ಟ್ರೇಟರುಗಳು ಚೆನ್ನಾಗಿ ಅರಿತರೆ ಬ್ರಹ್ಮಾಸ್ತ್ರವನ್ನು ತೊಡುವ ಅವಶ್ಯಕತೆಯೇ ಇಲ್ಲವೆಂದು ವ್ಯಕ್ತವಾಗುವುದು. ಚಿಕ್ಕ ಮಕ್ಕಳಿಗೆ ಇಂಥಾ ವಿಶೇಷವಾದ ಶಿಕ್ಷೆಯನ್ನು ಮೆಜಿಸ್ಟ್ರೇಟರೊಬ್ಬರು ವಿಧಿಸಿದ ವಿಷಯದಲ್ಲಿ ಜಸ್ಟಿಸ್ ಕಮ್ಮಿಂಗ್ ಎಂಬ ಕಲ್ಕತ್ತೆಯ ಹೈ ಕೋರ್ಟ್ ಜಡ್ಜರು ತೀವ್ರವಾದ ಖಂಡನೆಯನ್ನು ಮಾಡಿರುವರು. ಮೆಜಿಸ್ಟ್ರೇಟರುಗಳು ಇನ್ನಾದರೂ ಈ ವಿಷಯದಲ್ಲಿ ಎಚ್ಚರಗೊಳ್ಳುವರೆಂದು ನಂಬಬಹುದೇ?

## ನೋಟಗಳು.

## NOTE. S

ಮುಂಬಾಯಿಯಲ್ಲಿ ಕಳೆದ ತಾ. ೫ಕ್ಕೆ ಪೋಲೀಸರ ಲಾಠಿಗೆ ಸಿಟ್ಟುಬಂದು, ೨೫೦ ಜನರಿಗೆ ಜಖಂ, ಸ್ತ್ರೀಯರ ಕೈಯಿಂದ ರಾಷ್ಟ್ರೀಯ ಧ್ವಜವನ್ನು ಎಳಕೊಂಡರು. ಎಳಕೊಳ್ಳುವ ಕ್ರಮ ಹೆಚ್ಚಿನ ಬಲಾತ್ಕಾರ.

* * * *

ಮುಂಬಾಯಿ ಪೋಲೀಸರಿಗೆ ಮುಂಬಾಯಿಯಲ್ಲಿ ಆಚರಿಸಿರುವ ಗಾಂಧಿ ಡೇ ಮತ್ತು ಇತರ ಸಭೆಗಳು, ಒಂದು ಪ್ರಕಾಶಕ್ಕೆ ಬಾಧೆ ಕೊಡುವ ಹಾಗೆ ಆಗಿದೆ.

* * * *

ಮುಂಬಾಯಿ ಓರ್‌ಕೌನ್ಸಿಲ್ ಪ್ರೆಸಿಡೆಂಟರಾದ ನಾಗೇಂದ್ರ ಮಾಸ್ಟರ್ ಎಂಬವರು ಮುಂಬಾಯಿ ಹೈಕೋರ್ಟಿನಲ್ಲಿ ತನಗೆ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಕೊಟ್ಟ ಶಿಕ್ಷೆಗೆ ಅಪೀಲು ಮಾಡಿದ್ದರು. ಸೆಶನ್ ಜಡ್ಜರು ತನ್ನ ನಡೆಸಿ, ಇವರು ಅಪಾದಿತರಲ್ಲವೆಂಬದಾಗಿ, ತೀರ್ಪುಕೊಟ್ಟರು, ಕೆಳಕೋರ್ಟಿನಲ್ಲಿ ತೀರ್ಪುಕೊಟ್ಟ ಮ್ಯಾಜಿಸ್ಟ್ರೇಟರಿಗೆ, ಒಳ್ಳೆ ಯೋಗ್ಯ ರಿಮಾರ್ಕು ಉಡುಗೊರೆ ಕೊಟ್ಟಿರುವರು.

* * * *

ಒಟ್ಟಾರೆ, ಪೋಲೀಸ್ ಮಹಾರಾಯರು, ಮ್ಯಾಜಿಸ್ಟ್ರೇಟರ ಮುಂದೆ ನಿಂತು, ಬಗ್ಗಿ ಸ್ವಾಮಿ, ಇವರು ರಾಜದ್ರೋಹಿಗಳು ತಪ್ಪಿಸ್ಥರು, ಇವರನ್ನು ಕಠಿಣ ಶಿಕ್ಷೆಗೆ ಒಳಪಡಿಸಬೇಕು. ಎಂದು ಹೇಳುವುದೇ ತಡ, ಕಾನೂನಿನ ಉಪಯೋಗ ಕೂಡ ಯೋಗ್ಯರೀತಿಯಲ್ಲಿ ಪರಿಶೀಲಿಸದೇ, ಜೈಲಿನ ದಾರಿಯನ್ನು ಕೂಡಲೇ, ತೋರಿಸಿ ಬಿಡುತ್ತಾರೆ ಬುದ್ಧಿಯ ಗೌರವಕ್ಕೆ—

## ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ.

ತಾನು ಮಾಡಿದ ತಪ್ಪನ್ನು ಒಪ್ಪಿಕೊಳ್ಳುವದು ಕಷ್ಟ. ತಮ್ಮ ತಪ್ಪುಗಳನ್ನು ಒಪ್ಪಿಕೊಂಡರೆ ಮಾನಭಂಗವಾಗುವುದೋ ಎಂದು ನಮ್ಮ ಸರಕಾರಕ್ಕೆ ಭೀತಿ. ಮನುಷ್ಯನು ತಪ್ಪು ಮಾಡುವುದು ಸ್ವಾಭಾವಿಕವಾಗಿರುತ್ತದೆ. ಸಾಮ್ರಾಜ್ಯ ಅಥವಾ ಸರಕಾರವೆಂದರೆ ಅದು ದೈವ ಕೃತವಲ್ಲ, ಅನೇಕಾನೇಕ ಮನುಷ್ಯರಿಂದ ಕೂಡಿದ ಒಂದು ರಾಜಕೀಯ ಯೋಜನೆ. ಅದಕ್ಕಾಗಿ ಸರಕಾರದವರು ತಪ್ಪು ಮಾಡುವುದೂ ಸ್ವಾಭಾವಿಕವೆಂದಾಯಿತು. ಆದರೆ ತಮ್ಮ ತಪ್ಪನ್ನು ಒಪ್ಪಿಕೊಂಡರೆ ಮಾನಭಂಗವಾಗುವುದೆಂಬ ಹೆದರಿಕೆಯಿಂದ ತಪ್ಪನ್ನು ಒಪ್ಪಿಕೊಳ್ಳದೆ, ತಪ್ಪಿದವರನ್ನು ಶಿಕ್ಷೆಗೆ ಒಳಗುಮಾಡದೆ, ತಾನು ಹೇಳಿದ್ದೇ ಕಾಯಿದೆ, ತಾನು ಮಾಡಿದ್ದೇ ನ್ಯಾಯವೆಂದು ಹೇಳಿಕೊಳ್ಳುವ ಮನೋವೃತ್ತಿಯು ಕೇವಲ ಅಸಹನೀಯವಾಗಿ ಜನರಲ್ಲಿ ಕಷ್ಟೋಭೆಯನ್ನುಂಟುಮಾಡದಿರದು. ಅಂಥಾ ಕಠಿಣವೆಂಬ ತಮವು ಕೆಲವು ಸಮಯದಲ್ಲಿ ಮನುಷ್ಯ ಸ್ವಭಾವವೆಂಬ ಅಂತಃಕರಣಗಳಿಂದ ಕರಗಿ, ಪಶ್ಚಾತ್ತಾಪವೆಂಬ ಶುಭ್ರವಾದ ಬೆಳದಿಂಗಳು ಜನಿಸುವುದು. ಬಂಗಾಳ ಪ್ರಾಂತ್ಯದಲ್ಲಿ ಪೋಲೀಸಿನವರು ಶಾಲೆಯ ಒಳಗೆ ಹೊಕ್ಕು ವಿದ್ಯಾರ್ಥಿಗಳನ್ನು ಅನ್ಯಾಯವಾಗಿ ಹೊಡೆದ ವಿಷಯದಲ್ಲಿ ಬಂಗಾಳ ಗವರ್ನರವರು ತಾಲೂಕ ಅಧಿಕಾರಿಗಳಿಗೆ ತನ್ನ ಪಶ್ಚಾತ್ತಾಪವನ್ನು ಸೂಚಿಸಿರುವರು. ಸ್ವಸ್ತಿ. ಕರ್ನಾಟಕದಲ್ಲಿರುವ ರಾಜಕೀಯ ಖೈದಿಗಳು ತಮ್ಮ ಬೇಳೆಯ ಮುದ್ರೆಗಳನ್ನು ಕೂಡ ಇಲ್ಲವೆಂಬ ಅಪಾದನೆಗೋಸ್ಕರ ಶಿಕ್ಷೆಯನ್ನು ಪಡೆದು ಬಹು ಕಷ್ಟಕೊಳ್ಳಗಾದರು. ಮದ್ರಾಸು ಸರಕಾರದವರು ಇವರಿಗೆ ಕೊಡಲ್ಪಟ್ಟ ಶಿಕ್ಷೆಯು ನ್ಯಾಯವಿರುದ್ಧವೆಂದು ಇತ್ಯರ್ಥಿಸಿ ಬಾಕಿಯಿರುವ ಶಿಕ್ಷೆಯನ್ನು ರದ್ದುಮಾಡಿರುವರು. ಸ್ವಸ್ತಿ. ಆದರೆ ಕೆಲ ನೌಕರರ ದುರಾಸಕ್ತಿಗೋಸ್ಕರ ಕೆಲವು ಖೈದಿಗಳು ಅನುಭವಿಸಿಯೇ ತೀರಿದ ಕಷ್ಟನಷ್ಟಗಳಿಗೆ ಏನು ಕಾನೇ ಪರಿಹಾರ?

## ನೋಟೀಸು.

**ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.**

O. P. No. 156/1930.

ಮಮ್ಮುಂಞ, ಮೃತಪಟ್ಟ ತಿರುವತ್ತ ಹಸನಾರ ಬ್ಯಾರಿ ಮಗ—ಕಾಸರಗೋಡು ತಾಲೂಕು ಅಡ್ಯತಡ್ಕ ಗ್ರಾಮದ ನೆಲ್ಲಿಕುಂಜೆಯಲ್ಲಿರುವವ—ಅರ್ಜಿದಾರ.

ಮತ್ತು

1. ಬೀಪಾತುಮ್ಮಮ್ಮ ಸದರಿ ಮೃತಪಟ್ಟ ತಿರುವತ್ತ ಹಸನಾರ ಬ್ಯಾರಿ ಹೆಂಡ್ತಿ 2 ಖದೀಜುಮ್ಮ, 3 ಜೈನಬಿ, 4. ಅಬ್ದುಲ್ಲ ಕಾದ್ರಿ—(ಸದರಿ ಮೃತಪಟ್ಟ ಹಸನಾರ ಬ್ಯಾರಿ ಮಕ್ಕಳು, ಪೈಕಿ 4ನೇಯವ ಮ್ಯಾನರ್, ಇವನ ಗಾರ್ಡಿಯನ್ ತಾಯಿ ಬೀಪಾತುಮ್ಮ—ರೆಸ್ಪೋಂಡೆಂಟರು.

ಸದರಿ ಮೃತಪಟ್ಟ ತಿರುವತ್ತ ಹಸನಾರಿ ಬ್ಯಾರಿಗೆ (ಆಲಿ ಬ್ಯಾರಿ ಮಗ) ಹೊರಗಿನಿಂದ ಬರತಕ್ಕ ಸಾಲಗಳು ವಸೂಲು ಮಾಡುವರೆ ತನಗೆ ವಾರಿಸ್ ಸರ್ಟಿಫಿಕೇಟು ಕೊಡಬೇಕಾಗಿ ಸದರಿ ಅರ್ಜಿದಾರನು ದಾಖಲುಮಾಡಿದ ಮೇಲ್ಕಂಡ O. P. No. 156/30ನೇ ಅರ್ಜಿಯು ತಾರೀಕು 23—12—30ಕ್ಕೆ ತನಿಖೆಗೆ ಇಟ್ಟಿದೆ ಆ ದಿವಸ ಬೆಳಗ್ಗೆ 11 ಘಂಟೆಗೆ ಈ ಬಾಬ್ತು ಆಕ್ಷೇಪವಿದ್ದವರು ಹಾಜರಾಗಿ ಕೋರ್ಟಿಗೆ ಮನವಿಮಾಡಿಕೊಳ್ಳತಕ್ಕದ್ದು ಎಂಬುದಾಗಿ ಈ ಮೂಲಕ ತಿಳಿಸಲಾಗಿಯದೆ.

ಕಾಸರಗೋಡು, ತಾ 3-12-30. } **B. Amritha Rao,** Pleader for Petitioner

---

**ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.**

ಕ್ರಮ ನಂಬ್ರ 700/1930.

ವಾದಿ—ಕುಟ್ಟಯ್ಯ ಭಂಡಾರಿ

ಪ್ರತಿವಾದಿಯು—ವೆಂಕಟ ಯಾನೆ ಕೊರಗಪ್ಪ ರೈ ಕೂಡಾ 4ನೇ ಪ್ರತಿವಾದಿ ಕುಂಞಾರಣ್ಣರಿಗೆ—

ವಾದಿಯು ಗನೇ ಪ್ರತಿವಾದಿಯನ್ನು ಅದಾಲತಿಯಿಂದ ತಪ್ಪಿಸಿ ತನ್ನನ್ನು ಕಾಟುಂಬದ ಅದಾಲತಿಗೆ ಮೊಕದ್ದಮೆ ಮಾಡಬೇಕಾಗಿ ವಗೈರೆ ತಂದ ಈ ದಾವೆಯು ತಾ 17—12—30ಕ್ಕೆ ಇಟ್ಟಿರುತ್ತದೆ ಅದರಲ್ಲಿ ಎದುರಾಡಬೇಕೆಂತಿದ್ದರೆ ಆ ತಾರೀಕು ೧೧ ಗಂಟೆಗೆ ಕೋರ್ಟಿನ ಮುಂದೆ ಖುದ್ದು ಯಾ ವಕೀಲರ ಮುಖಾಂತ್ರ ಹಾಜರಾಗಿ ಉದಹರಿಸಬೇಕಾಗಿರುತ್ತದೆ ತಪ್ಪಿದರೆ ತೀರ್ಮಾನಿಸಲಾಗುವದು.

ಪುತ್ತೂರು, 3-12-1930 } **B. Mangesh Rao,** Pleader for Plff

---

## The Canara Bank Ltd, Kasaragod.

## ದಿ ಕೆನರಾ ಬ್ಯಾಂಕ್ ಲಿಮಿಟೆಡ್ ಕಾಸರಗೋಡು.

## NOTICE.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಮೇಲ್ಕಂಡ ಬ್ಯಾಂಕಿನಿಂದ ಚಿನ್ನಾಭರಣಗಳ ಆಧಿನ ಮೇಲೆ ಪಡೆದ ಮೊಬಲಗುಗಳನ್ನಾಗಲೀ, ಅವುಗಳ ಬಡ್ಡಿಯನ್ನಾಗಲೀ, ವಾಯಿದೆಗೆ ಕೊಡದೆ ಇರುವುದರಿಂದಲೂ ಅವರಿಗೆ ಚಿಟ್ಟಿ ರಿಜಿಸ್ಟ್ರಿ ನೋಟೀಸುಗಳು ಜಾರಿ ಆಗದೆ ಬಂದಿರುವುದರಿಂದ ಸದರಿ ಸಾಲಗಾರರು ಬ್ಯಾಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ ನೋಟೀಸು ಖರ್ಚು ಇತ್ಯಾದಿ ಐವೇಜುಗಳನ್ನು ಇದೇ 1930ನೇ ಇಸವಿ ಡಿಸೆಂಬರ ತಾರೀಕು 20ನೇ ಶನಿವಾರ ದಿವಸದೊಳಗೆ ಪಾವತಿಮಾಡಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದರೆ ಸದರಿ ಆಭರಣಗಳನ್ನು ಇದೇ 1930ನೇ ಇಸವಿ ಡಿಸೆಂಬರ ತಾರೀಕು 22ನೇ ಸೋಮವಾರ ದಿವಸ ಮಧ್ಯಾಹ್ನ 2 ಘಂಟೆಗೆ ಸರಿಯಾಗಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು.

| | ಸಾಲಗಾರರ ಹೆಸರು | ಅಸಲು |
|---|---|---|
| (1) | K. R Kailas Iyer, | 45—0—0 |
| (2) | Kunhamu Beary, | 30—0—0 |
| (3) | Kinhanna Bunta, | 50 0 0 |
| (4) | Abdulhahiman Haji | 35—0 0 |
| (5) | K R Kailas Iyer | 30—0 0 |
| (6) | Sankappa nonda | 45—0—0 |
| (7) | Abdulhahiman Beary | 60—0—0 |

ಸೂಚನೆ:— ಈ ನೋಟೀಸಿನ ಖರ್ಚು ಬಿಡಲಾ.

The Canara Bank Ltd. Kasaragod, 6—12—30. } **H. S. Bhat,** Agent.

---


**The Cochin Soap Works,** IRENJALAKUDA

**ದಿ ಕೊಚ್ಚಿನ್ ಸೋಪ್ ವರ್ಕ್ಸ್.** ಇರಿಂಜಾಲಕುಡ

BABY BORAX SOAP TRADE MARK

ಕೊಚ್ಚಿ ಮತ್ತು ಮದರಾಸು ಪಟ್ಟಣಗಳಲ್ಲಿ 1928—'29—'30ನೇ ವರ್ಷಗಳಲ್ಲಿ ನಡೆದ "ಎಕ್ಸಿಬಿಷನ್"ಗಳಲ್ಲಿ ಬಳ್ಳಿಭಂಗಾರದ ಪದಕಗಳಿಂದಲೂ ಅನೇಕ ಯೋಗ್ಯತಾ ಪತ್ರಗಳಿಂದಲೂ ಬಹುಮಾನಿಸಲ್ಪಟ್ಟ.

ಬೇಬಿ ಬೊರೆಕ್ಸ್ ಸೋಪ್, ಲಿಟ್ಲ್ ಫ್ಲವರ್ ರೋಸ್ ಸೆಂಟೆಡ್ ಸೋಪ್, ಜೋನ್ಸನ್ಸ್ ಬಾರ್ ಸೋಪ್, ಕೋಲ್ ಟಾರ್ ಸೋಪ್ ಮುಂತಾದ ಹೆಸರುವಾಸಿಯಾದ ಸಾಬೂನುಗಳನ್ನು ತಯ್ಯಾರು ಮಾಡುವ ಸಂಸ್ಥೆಯಾಗಿರುವುದು.

ಬೇಬಿ ಬೊರೆಕ್ಸ್ ಸೋಪ್—ಹಿಂದೂಸ್ಥಾನದ ಉತ್ತಮ ಉತ್ಪತ್ತಿ. ಬಟ್ಟೆ ಒಗೆಯುವುದಕ್ಕೂ ಮೈ ತೊಳೆಯುವುದಕ್ಕೂ ಉಪಯೋಗಿಸಬಹುದು. ಸ್ನಾನಕ್ಕೆ ತೊಟ್ಟು ಅಥವಾ ಅಪಾಯಕರವಾದ ಪದಾರ್ಥಗಳು ಮಿಶ್ರವಾಗಿರುವುದಿಲ್ಲ. ಅಲ್ಲದೆ ಎಲ್ಲಾ ಸೋಪುಗಳು ಮಿಶ್ರಣದಲ್ಲಿ ತಯಾರಿಸುವ ಸಾಬೂನುಗಳನ್ನು ಸರಿಹೋಲುವವು ... ಬಹಳ ಕಡಿಮೆ ಕ್ರಯ ... ಮತ್ತು ಮಲ್ಲಿ ... ಹೆಚ್ಚು ಕಾಲದವರೆಗೆ ಬರುವವು.

ಲಿಟ್ಲ್ ಫ್ಲವರ್ ರೋಸ್ ಸೆಂಟೆಡ್ ಸೋಪ್—ಅತ್ಯುತ್ತಮ ಸಾಬೂನುಗಳಲ್ಲಿ ಉತ್ಕೃಷ್ಟವಾಗಿರುವುದು. ಗುಲಾಬಿ ಮತ್ತು ಜೆಸಮಿನ್ ಸುಗಂಧ ಎಣ್ಣೆಗಳಿಂದ ಕೂಡಿದವುಗಳು. ... ಕಡಿಮೆ ಕ್ರಯ ... ಮಾತ್ರ

ಜೋನ್ಸನ್ಸ್ ಬಾರ್ ಸೋಪ್—... ಬಾರ್ ಬಟ್ಟೆಗಳನ್ನು ತೊಳೆಯಲು ಉಪಯೋಗಿಸಬಹುದು, ಕೆಲಸವು ಅತಿ ಶೀಘ್ರ, ಪ್ರಯೋಜನವು ಬಹಳವಾಗಿರುವುದು ... ಬಟ್ಟೆಗಳಿಗೆ ಯಾವ ತರದ ಹಾನಿಯೂ ಉಂಟುಮಾಡುವುದಿಲ್ಲ. ಅವನ್ನು ಮತ್ತಷ್ಟು ಬಲವಂತವನ್ನಾಗಿ ಮಾಡುತ್ತದೆ

ಕೋಲ್ ಟಾರ್ ಸೋಪ್—... ಕ್ರಿಮಿನಾಶಕ ... ಚರ್ಮರೋಗಗಳಿಗೆ ದಿವ್ಯೌಷಧ.

ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸೋಲ್ ಏಜಂಟರು—

ಮೆಸರ್ಸ್ ಬೋಳಂತೂರು ಸುಬ್ರಾಯ ಕಾಮತ್ ಪ್ರಭು, ಮಂಗಳೂರು.

ಕೆ. ಜೆ. ಲಾಜರ್, ಮೆನೇಜರ್ ಮತ್ತು ಎಕ್ಸ್‌ಪರ್ಟ್.

ಬಂಗಾರದ ಪದಕ ಹಾಗೂ ಯೋಗ್ಯತಾ ಪತ್ರಗಳಿಂದ ಬಹುಮಾನ ಹೊಂದಲ್ಪಟ್ಟವು.

ಏಜಂಟರು ಬೇಕಾಗಿರುವರು



"If every Wife knew what every Widow knows every Husband would be Insured

PLACE YOUR LIFE ASSURANCE WITH

**THE SOUTH INDIAN**

Securing for your clients -

1 Low rates of Premium

2. Liberal Policy Conditions.

AND FOR YOURSELF

**An Agency with attractive Terms of Commission and Salary in**

**The South Indian General Assurance Co, Ltd.,**

Any where in CANARA DISTRICTS & HYDERABAD STATE

For terms of Agency please apply to —

H R K IYENGAR Chief Agent

The S. I. G. A Co. Ltd, Sanyasigudda MANGALORE

Managing Agents

K C PANDALAI & CO. 7 8 Mclean Street, G T MADRAS

**ಜೀವವಿಮೆ ಮಾಡುವವರು**

ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್ನಲ್ಲಿ ವಿಮೆಮಾಡಿರಿ.

ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!

**ಪ್ರಿಮಿಯಂ ದರಗಳು ಕಡಿಮೆ!**

**ಶರ್ತಗಳು ತೀರಾ ಸುಲಭ!!**

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ

**ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ ದೊರಕುವುದು**

(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)

ಚೀಫ್ ಏಜಂಟರು—

ಎಚ್. ಆರ್. ಕೆ. ಅಯ್ಯಂಗಾರ್,

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ,

**ದಿ ಎಸ್ ಐ. ಜಿ ಎ ಕಂಪೆನಿ ಲಿಮಿಟೆಡ್,**

ಸನ್ಯಾಸಿಗುಡ್ಡೆ ಮಂಗಳೂರು.

ಮೇನೇಜಿಂಗ್ ಏಜಂಟರು —

**ಕೆ ಸಿ ಪಾಂಡಲೈ ಎಂಡ್ ಕೋ.**

7 8 ಮೆಕಲೀನ್ ಸ್ಟ್ರೀಟ್, ಜಿ ಟಿ ಮದ್ರಾಸು



## "ಗ್ರೇಂಡ್ ಕ್ಲಿಯರೆನ್ಸ್ ಸೇಲ್"!

**ಬರೇ ಮೂರು ರೂಪಾಯಿಗಳ ವ್ಯಾಪಾರದಿಂದ 324 ಅಮೂಲ್ಯವಾದ ಪಾರಿತೋಷಕಗಳು!**

**ನಮ್ಮ ಸುಗಂಧ ಪೂರಿತವಾದ 'ಒಟ್ಟೊ' ಮೋತಿಯಾ ತೈಲದ ಆರು ಬಾಟ್ಲಿಗಳನ್ನು ಒಮ್ಮೆಗೆನೇ ಕೊಂಡುಕೊಳ್ಳುವವರಿಗೆ ಈ ಕೆಳಗೆ ನಮೂದಿಸಿರುವ ೩೨೪ ಅಮೂಲ್ಯ ಬಹುಮಾನಗಳು ಉಚಿತವಾಗಿ ಕೊಡಲಾಗುವವು!**



ಬಂಗಾರ ಗಿಲೀಟಿನ ಕೈಗಡಿಯಾರ ೧, ವೇಸ್ಟ ೧, ಫೌಂಟನ್ ಪೆನ್ ... ಬಂಗಾರ ಗಿಲೀಟಿನ ಉಂಗುರ ... ಬಂಗಾರ ಗಿಲೀಟಿನ ಗುಂಡಿಗಳ ಸೆಟ್ಟು ೧, ... ಚೀಪ್ ಫೌಂಟನ್ ಪೆನ್ ೧, ಗುಲಾಬದಾನಿ ೧, ... ಬಂಗಾರ ಗಿಲೀಟಿನ ಬ್ರೂಚ ... ಕನ್ನಡಿ ೧, ... ಪೆನ್ಸಿಲು ೧, ... ಹೇಯರ್ ಪಿನ್ನುಗಳು ... ಬಂಗಾರ ಗಿಲೀಟಿನ ... ಬಂಗಾರ ಗಿಲೀಟಿನ ... ಪಿಸ್ತೂಲು ೧ ... ಮತ್ತು ... (ನಿಮ್ಮ ... ) ಉಚಿತಗಳೊಂದಿಗೆ

ಮೂಲ್ಯ ರೂ. ೩—೦—೦ ಮಾತ್ರ ... ೦—೧೦—

ಪತ್ರವ್ಯವಹಾರವು ಇಂಗ್ಲಿಷನಲ್ಲಿಯೇ ಸಾಗಲಿರುವುದು.

ಇಂಡಿಯನ್ ಸ್ಟೋರ್ಸ ಕೋ,

47, ಲೆನಿಯಾಟೋಲಾ ಸ್ಟ್ರೀಟ್, ಪಿ. ಓ., ಹಟ್ಖೋಲಾ, ಕಲ್ಕತ್ತಾ.

**INDIAN STORES CO.** 47, Leniatola Street, Po., Hatkhola CALCUTTA.

## ಅನುಕ್ರಮಣಿಕೆ.


ಅಗ್ರಲೇಖ .

ಹಿಂದೀ ವೈಜ್ಞಾನಿಕ ಶೋಧಕ್ಕೆ ಗೌರವ . ೮

ಸ್ಫುಟವಿಚಾರಗಳು . . ೬

ನೋಟಗಳು . . . . . . ೬

ವರ್ತಮಾನ ಸಂಗ್ರಹಗಳು

ವಿದೇಶ ವರ್ತಮಾನ . . . . ೮

ಒಳದೇಶ ವರ್ತಮಾನ . ೮ ೯

ದಕ್ಷಿಣ ಕನ್ನಡ—ಮಂಗಳೂರು, ಮುಲ್ಕಿ, ಉಡುಪಿ, ಸುಳ್ಯ, ಕಾರ್ಕಳ, ಕುಂದಾಪುರ, ಬ್ರಹ್ಮಾವರ, ಬಾರಕೂರು ೯

ವಿವಿಧ ಸಮಾಚಾರಗಳು ೧೧

ಮಂಗಳೂರಿನ ಆನೇ ವ್ಯವಸಾಯ ಮತ್ತು ಕೈಗಾರಿಕೆಯ ಪ್ರದರ್ಶನ ೧೯೩೧ ೧೪

ಅಮೇರಿಕದ ಹಡಗು ಕೈಗಾರಿಕೆ .

ಮಹಾತ್ಮಾಜಿಯವರ ಸತ್ಯಾಗ್ರಹ ಸಮಾಚಾರ . ೮-೧೩


# ಸ್ವದೇಶಾಭಿಮಾನಿ.

ತಾರೀಕು ೧೨ನೇ ಶುಕ್ರವಾರ ದಶಂಬರ ೧೯೩೦.

## ಹಿಂದೀ ವೈಜ್ಞಾನಿಕ ಶೋಧಕ್ಕೆ ಗೌರವ.

ಭೂಲೋಕದ ಕಾಣಿಕೆಯು ಈ ಬಾರಿ ಭಾರತೀಯ ಕಾಲಡಿಯಲ್ಲಿ ಕೊಡಲ್ಪಟ್ಟಿತು ಸರ್. ಸಿ ವಿ ರಾಮನ್‌ರವರು ನೊಬೆಲ್ ಪ್ರೈಜ್ ಎಂಬ ಬಹುಮಾನವನ್ನು ಹೊಂದಿದರು. ಹಿಂದೀ ಪುತ್ರನೊಬ್ಬನು ಲೋಕದಲ್ಲಿ ಶ್ರೇಷ್ಠತಮನೆಂದು ಗೌರವಿಸಲ್ಪಟ್ಟನು. ಹಿಂದೂಸ್ಥಾನವು ತನ್ನ ಅಸ್ತಿತ್ವಕ್ಕಾಗಿ ಜೀವದಾಸೆಯನ್ನು ತೊರೆದು ಕಾದುವ ಸಮಯದಲ್ಲಿಯೇ ಲೋಕದ ಉತ್ಕೃಷ್ಟತಮ ಕಾಣಿಕೆಯು, ಶ್ರೇಷ್ಠತಮ ಗೌರವ ಮಾಲೆಯು ಅದನ್ನು ಸೇರಿತೆಂಬುವುದು ಈಗಿನ ವಿಷಾದಕರವಾದ ಘಟನೆಗಳ ಮಧ್ಯದಲ್ಲಿ ಸಮಾಧಾನಕರವಾದ ಸಂತೋಷದ ಸಂಗತಿಯಾಗಿರುತ್ತದೆ

ನೊಬೆಲ್ ಪ್ರೈಜ್ ಎಂದರೆ, ಇಡೀ ಲೋಕದಲ್ಲಿ ಪ್ರತ್ಯೇಕ ವಿಷಯಗಳಲ್ಲಿ ಆಯಾ ವರ್ಷದಲ್ಲಿ ಅತ್ಯಂತ ಶ್ರೇಷ್ಠರೆಂದು ಕಾಣಲ್ಪಡುವವರಿಗೆ ಕೊಡಲ್ಪಡುವ ಅತ್ಯಂತ ದೊಡ್ಡದಾದ ಬಹುಮಾನ ಕೆಲವು ವರ್ಷಗಳ ಹಿಂದೆ ಈ ಬಹುಮಾನವು ಶ್ರೀ ರವೀಂದ್ರನಾಥ ಠಾಕೂರರಿಗೆ ಅವರ ಕವಿತ್ವಕ್ಕಾಗಿ ಕೊಡಲ್ಪಟ್ಟಿತು. ನೈತಿಕ ಪಾರಮಾರ್ಥಿಕ ವಿಷಯಗಳನ್ನು ಅವಲೋಕಿಸುವುದರಲ್ಲಿ ಪ್ರವೀಣರೆಂದೆನ್ನಿಸಿಕೊಂಡ ಹಿಂದೂ ಜನಾಂಗವು ಕವಿತ್ವಕ್ಕಾಗಿ ಆ ಮಹಾ ಬಹುಮಾನವನ್ನು ಹೊಂದುವುದರಲ್ಲಿ ಹೆಚ್ಚು ಹೆಗ್ಗಳಿಕೆಯನ್ನು ಅನುಭವಿಸಲು ಕಾರಣವಿಲ್ಲ ಆದರೆ, ಹಳೆ ಸಂಪ್ರದಾಯಗಳಲ್ಲಿಯೇ ಮುಳುಗಿ, ನೂತನ ನಾಗರಿಕತೆಯ ಮಹತ್ವದಲ್ಲಿ ಇನ್ನೂ ಭಾಗಿಯಾಗಿರದೆ, ಹಳೆ ನಾಗರಿಕತೆಯ ಅವಶಿಷ್ಟ ಅಂಶವಾಗಿ ಉಳಿದಿರುವ ಹಿಂದೂಸ್ಥಾನವು ಪಾಶ್ಚಾತ್ಯರು ತಮ್ಮದೇ ಎಂದು ಭಾವಿಸುವ ಕಾರ್ಯ ಭೂಮಿಯಲ್ಲಿ ಕೂಡ ಹಿಂದೀಯನು ಗೌರವ ಮಾಲೆಯನ್ನು ಪಡೆಯಬಲ್ಲನಾದನು ಎಂಬುದು ಸಾಮಾನ್ಯ ಸಂತೋಷದ ವಿಷಯವಾಗಿಲ್ಲ ನೂತನ ನಾಗರಿಕತೆಯು ಪಾಶ್ಚಾತ್ಯರ ಸ್ವಾರ್ಜಿತ ಹಕ್ಕಲ್ಲ, ಅದನ್ನು ನಾವೂ, ನಮ್ಮ ವಿಜ್ಞತೆಯೂ ನಮ್ಮದಾಗಿ ಮಾಡಬಲ್ಲವು ಎಂದು ಲೋಕಕ್ಕೆ ತಿಳಿಯಗೊಡಿಸಿದುದೊಂದು, ಮತ್ತು ಆಧುನಿಕ ನಾಗರಿಕತೆಯ ಹೆಸರಿನಲ್ಲಿ ನಮ್ಮ ಮೇಲೆ ಅಧಿಕರಿಸುತ್ತಿರುವ ಪಾಶ್ಚಾತ್ಯರು, ನಮ್ಮ ಯೋಗ್ಯತೆಯನ್ನು ಇಕ್ಕೆಯೂ ಕಂಡು, ತಮ್ಮ ಅಧಿಕಾರದ ಒಂದು ಆಧಾರ (ಅಂದರೆ ಹಿಂದೀ ಅಜ್ಞಾನ)ವು ಕುಸಿಯಿತೆಂದೂ, ಇನ್ನು ತಮ್ಮ ಅಧಿಕಾರವನ್ನು ಹಿಂದೀಯರ ಮೇಲೆ ಅಧಿಕರಿಸಲು ಕಾರಣವಿಲ್ಲವೆಂದೂ ಲೋಕಕ್ಕೆಂದೇ ತಿಳಿಯಪಡಿಸಿದುದು ಇನ್ನೊಂದು, ಈ ರೀತಿಯಲ್ಲಿ ಈ ಬಹುಮಾನವು ಹಿಂದೂಸ್ಥಾನಕ್ಕೆ ಎರಡು ತರದ ವಿಜಯವನ್ನು ಕೊಡುತ್ತಿದೆ

ಪಾಶ್ಚಾತ್ಯರು ಹಲವು ತರದ ವಿಜ್ಞಾನಗಳನ್ನು ಬೆಳಸಿ, ಶೋಧಗಳನ್ನು ಮಾಡಿ, ನೂತನ-ವಸ್ತು ರಚನೆಯನ್ನು ಮಾಡಿದರು. ಆ ಆಧಾರದಿಂದ ತಮ್ಮ ನಾಗರಿಕತೆಯನ್ನು ನಿರ್ಮಿಸಿದರು. ಹಿಂದೂಗಳೂ ಮುಸಲ್ಮಾನರೂ ಈ ಶೋಧ ಪ್ರವೃತ್ತಿಗೆ ಹೋಗದೆ ತಮ್ಮ ತಮ್ಮ [illegible]ಗಳಲ್ಲಿಯೇ ಹಿಂದೀ ವಿಚಾರಶಕ್ತಿಯನ್ನು ವ್ಯಯಮಾಡಿದರು. ಹೀಗಾಗಿ ನಾಗರಿಕತೆಯಲ್ಲಿ ಮುಂದಾಗಿ ಹೋದ ನಾವು, ಪಾಶ್ಚಾತ್ಯರ ಹಿಂದೆಗೆ ಬಿದ್ದೆವು. "ಹಿಂದು ಸಮಯದಲ್ಲಿ ಇಂಗ್ಲೆಂಡು ಬರ್ಬರರಿಂದ ತುಂಬಿ ಜನರು ವಾನರರಂತೆ ಮರ ಹತ್ತಿ, ಮರ ಹಾರಿ, ಜೀವಿಸುತ್ತಿದ್ದಾಗ, ಹಿಂದೂಸ್ಥಾನದಲ್ಲಿ ಪಟ್ಟಣ, ಶಹರು, ಗ್ರಾಮ, ಮಹಾ ಹತಿಗಳು ರಚಿಸಲ್ಪಟ್ಟು, ಮಾನವನು ವ್ಯವಸ್ಥಿತ ಜೀವನಕ್ರಮವನ್ನು ಏರ್ಪಡಿಸುತ್ತಿದ್ದನು" ಎಂದು ಒಬ್ಬ ಆಂಗ್ಲೇಯನೇ ಒಪ್ಪುತ್ತಿರುವನು ಆದರೆ ಈಗ ಪರಿಸ್ಥಿತಿಯೆಲ್ಲಾ ಬದಲಿಸಿ ಹೋಗಿದೆ. ಆದುದರಿಂದ ಈಗಿನ ಸಮಯದಲ್ಲಿ ಹಿಂದೀಯರು ಈಗಿನ ವಿಜ್ಞಾನಗಳಲ್ಲಿ ಹೆಚ್ಚು ಹೆಚ್ಚು ಪ್ರತಿಭೆಯನ್ನು ತೋರಿಸಿದರೆ ಮಾತ್ರವೇ ಹಿಂದೂಸ್ಥಾನವು ಉನ್ನತವೂ ಗೌರವಿತವೂ ಆಗಬಲ್ಲುದಲ್ಲದೆ, ಇದ್ದ ಹಾಗೆ ಇದ್ದರೆ ಬರ್ಬರರೆಂಬ ಅಪಖ್ಯಾತಿಗೆ ಬೀಳಬೇಕಾಗುವುದು

ಸರ್ ಸಿ ವಿ ರಾಮನ್‌ರವರ ಬಹುಮಾನವು, ಈ ಕಾರಣಗಳಿಂದ, ಬರೇ ವೈಜ್ಞಾನಿಕ ಮರ್ಯಾದೆಯಾಗಿರದೆ, ರಾಜಕೀಯ ಪ್ರಾಮುಖ್ಯತೆಯುಳ್ಳದಾಗಿಯೂ ಇದೆ ಹಿಂದೂಸ್ಥಾನದಲ್ಲಿ ಈ ಮೊದಲು ಇತರರು ವಿಜ್ಞಾನ ಶೋಧಗಳಲ್ಲಿ ಪ್ರತಿಭೆಯುಳ್ಳವರು ಇರಲಿಲ್ಲವೆಂದಲ್ಲ ಸರ್ ಜಗದೀಶ ಚಂದ್ರಬೋಸರು, ಸರ್ ಪಿ ಸಿ ರೇಯವರು, ಮೊದಲಾಗಿ ಹಲವರು ವಿಜ್ಞಾನದಲ್ಲಿ ಲೋಕದ ಮರ್ಯಾದೆಯನ್ನು ಪಡೆದಿದ್ದಾರೆ ಆದರೆ ನೊಬೆಲ್ ಪ್ರೈಜ್ ಮೂಲಕ ಲೋಕಸನ್ಮಾನಿತರಾದವರು ಇವರೇ ಆಗಿರುವರು

ಈಗಿನ ನಾಗರಿಕತೆಯಲ್ಲಿ ಆರ್ಥಿಕ ಸ್ವಾತಂತ್ರ್ಯ ಬೇಕಾದರೆ ಕೈಗಾರಿಕೆಗಳು ಬೆಳೆಯಬೇಕು. ಕೈಗಾರಿಕೆಗಳಿಗೆ ವಿಜ್ಞಾನವೇ ಮುಖ್ಯಾಧಾರವಾಗಿದೆ ಹಿಂದೀ ತರುಣರು ಸರ್ ಸಿ. ವಿ ರಾಮನ್‌ರ ಉದಾಹರಣೆಯನ್ನು ಹಿಡಿದು ವಿಜ್ಞಾನದಲ್ಲಿ ಹೆಚ್ಚು ಆಸಕ್ತರಾಗಿ ನೂತನ ಶೋಧಗಳಿಂದ ನೂತನ ಆವಿಷ್ಕಾರ ಗಳನ್ನು ಮಾಡಿ ದೇಶದ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಿ ದೇಶದ ಆರ್ಥಿಕ ಜೀವನವನ್ನು ಒಲಪಡಿಸಲೆಂದು ನಾವು ಹಾರೈಸುವೆವು

## ವಿದೇಶ ವರ್ತಮಾನ

ಡೆಕ್ಕಾ ದೇಶದ ನವಾಬರಿಗೆ ದುಂಡುಮೇಜಿನ ಪರಿಷತ್ತಿನ ಪ್ರತಿನಿಧಿಯಾಗಿ ಹೋದ, ಹಿಜ್ ಹೈನೆಸ್ ಮಹಮ್ಮದೀಯ ಮುಖಂಡರ ಪರವಾಗಿ ಅಮೃತ ಬಜಾರ ಪತ್ರಿಕೆಯಲ್ಲಿ ಈ ಕೆಳಗಿನ ಸಮಾಚಾರವನ್ನು ಕೇಬಲ್ ಮೂಲಕ ತಿಳಿಯಪಡಿಸಿರುವರಂತೆ ಪ್ರಸ್ತುತಗಳ ರಿಪೋರ್ಟುಗಳು ಸುಳ್ಳು ಮುಸಲ್ಮಾನರಿಗಾಗಿ ಪ್ರತ್ಯೇಕ ಮತದಾನ ಕ್ಷೇತ್ರಗಳ (Electorate) ಭಯಂಕರ ವಾದಗಳು ಆಗಾಖಾನರ ಮುಂದಾಳುತ್ವದಲ್ಲಿ ಮುಸ್ಲಿಮ್ ಪಂಗಡವು ಯಶಸ್ವಿಯಾಗಿ ಹೋರಾಡುತ್ತಿರುವುದು ಎಲ್ಲರಿಗೂ ತಿಳಿಸೋಣವಾಗಲಿ ಎಂದು

— ಅಮೇರಿಕ ೧೯೩೦ನೇ ವರ್ಷದಲ್ಲಿ ೧೯,೮೬,೦೦೦ ಬೇಲು ಹತ್ತಿಯನ್ನು ಉಂಟುಮಾಡಿರುವರೆಂದು ಗೊತ್ತಾಗುತ್ತದೆ ಅಮೇರಿಕದಿಂದ ಜರ್ಮನಿ ಯುರೋಪ್ ಜಪಾನ್ ಮುಂತಾದ ಭೂಲೋಕದ ಅನೇಕ ಮಾರ್ಕೆಟುಗಳಿಗೆ ಹತ್ತಿಯು ಪ್ರತಿವರ್ಷವೂ ರಫ್ತಾಗುತ್ತಿರುವದು

ವಿಟ್ರಿಶ್ ಎಂಬಲ್ಲಿ ಪ್ರಧಾನ ಮಂತ್ರಿಯು, ಅನೇಕ ಜರ್ಮನ್ ಸ್ವರಗಿ ಕೆಬಿನೆಟ್ ಸಭೆಯ ವಿಷಯದಲ್ಲಿ ಕೆಲವು ಸೂಚನೆಗಳನ್ನು ಕೊಡುವದಕ್ಕೆ ಕರೆದರು Lloyd ಎಂಬ ಪತ್ರಿಕಾ ಸಂಪಾದಕರೂ ನೆರೆದಿದ್ದರು ಇವರು, ಆರಂಭಕಾಲದಿಂದ ಮುಖ್ಯ ಮಂತ್ರಿ ಸಭಾಮಂಡಳದಲ್ಲಿ ಗುಂಡುಬೀರು ಮಾಡಿದ ಅದರ ಮಂತ್ರಿಯು ಕಲಕಲ್ಪಿಸುವರೆಂದು ಕೇಳ ಬರುತ್ತದೆ

— ಕೊಲಂಬೋ ಪಟ್ಟಣದಲ್ಲಿ ಉದ್ಯೋಗವಿಲ್ಲದವರಿಗೆ, ಸರಿಯಾದ ಕೆಲಸಕೊಡಬೇಕೆಂದು ಬಂದ ವಿವಾದ್ಯಕ್ಕೆ ಆರಂಭವಾಗಿರುವವು ತಾ ೭ ೧೨ ೩೦ರಲ್ಲಿ ಗವರ್ನರ ಸಾಹೇಬರ ಅಧ್ಯಕ್ಷತೆಯಲ್ಲಿ ದೊಡ್ಡದೊಂದು ಸಭೆಸೇರಿ ಉದ್ಯೋಗವಿಲ್ಲದವರ ಮಸಲೆಗಳು ಪರ್ಯಾಲೋಚಿಸಲ್ಪಟ್ಟವು ಗವರ್ನರರ ಸರಸವಾದ ಒಂದು ಭಾಷಣವೂ ನಡೆಯಿತು ಭಾಷಣದ ಸಾರಾಂಶದಂತೆ ಮೇಲಿನ ವಿಷಯವನ್ನು ಪರ್ಯಾಲೋಚಿಸುವುದಕ್ಕಾಗಿ ಪ್ರತ್ಯೇಕ ಕಮಿಟಿಯೊಂದು ಏರ್ಪಟ್ಟಿರುವದೆಂದೂ ಆ ಕಮಿಟಿಯು ರಿಪೋರ್ಟು ಇನ್ನೂ ಹೊರಬೀಳಲಿಲ್ಲವೆಂದೂ ತಿಳಿಯಬರುತ್ತದೆ

— ಪಾಶ್ಚಾತ್ಯ ದೇಶಗಳಾದ ಲಂಡನ್ ಹೊಲೆಂಡ್ ಫ್ರಾನ್ಸ್ ಬೆಲ್ಜಿಯಮ್ ಮೊದಲಾದ ದೇಶಗಳಲ್ಲಿ ಕಳೆದ ತಿಂಗಳ ಅಖೇರಿಗೆ, ಬಲವಾದ ಮಳೆಯೂ, ಬಿರುಗಾಳಿಯೂ ಬಂದು ಹೆಚ್ಚಿನ ನಷ್ಟ ಸಂಭವಿಸಿರುವದೆಂದು ತಿಳಿದುಬರುತ್ತದೆ ಬ್ರಿಟಿಷ್ಷಿನ ಸುತ್ತುಮುತ್ತಲು ಅಲೆದಾಡಿಕೊಂಡಿದ್ದ ಕೆಲವು ಹಡಗುಗಳು ಮುಳುಗಿಹೋದವು ಅವುಗಳಲ್ಲಿದ್ದ ಕೆಲವು ಜನರನ್ನು Life Boatsಗಳ ಮೂಲಕ ಪಾರಮಾಡಿರುವರೆಂದು ತಿಳಿಯಲಾಗುತ್ತದೆ ಬ್ರಿಟಿಷ್ಷಿನ ಕರಾವಳಿಯಲ್ಲಿರುವ "ಎಲ್ಬ್ ನದಿಯಲ್ಲಿ ೩೦ ಮಂದಿ ಜನರೊಡನೆ ಮುಳುಗಿಹೋದ ಒಂದು ಹಡಗವು ಬಹುದೊಡ್ಡದಾಗಿದ್ದು ೩೬೦ ಟನ್ ಭಾರವಹಿಸುವಂಥಹದಾಗಿದ್ದಿತು

ತಾ ೪-೧೨-೩೦ರಲ್ಲಿ ಇಟಲಿಯ ದೊಡ್ಡ ಸಾಹುಕಾರರಾದ 'ಟೋನಿ ಷೋ' ಎಂಬವರಿಗೆ ಬೊಂಬಿನಿಂದ ತುಂಬಲ್ಪಟ್ಟ ಒಂದು ಪೋಸ್ಟು ಪಾರ್ಸೆಲು ಬಂದು ತಲ್ಪಿರುವದು ಟೋನಿಷೋ ಎಂಬವರು ಪಾರ್ಸೆಲನ್ನು ಪರಿಶೋಧಿಸಿದರು ಆದರೆ, ಅಪಾಯಕರ ಸಂದೇಹಗಳೇನೂ ಅವರ ಮನಸ್ಸಿಗೆ ಹೊಳೆಯಲಿಲ್ಲ. ಆದುದರಿಂದ ಅದರದನ್ನು ಮೆಲ್ಲನೆ ತೆರೆದರು. ಕೂಡಲೇ ಬೊಂಬಿನ ಸ್ಫೋಟನ! ಟೋನಿ ಷೋನರ ಕೈಕಾಲುಗಳು ಸಂಪೂರ್ಣವಾಗಿ ಭಸ್ಮೀಭೂತವಾದವು. ಆದರೆ ಥಟ್ಟನೆ ಅವರು ಸಾಯಲಿಲ್ಲ. ಅವರನ್ನು ಆಸ್ಪತ್ರೆಗೆ ಕರೆದೊಯ್ದರು, ೫-೧೨ ಹೊತ್ತಿನಲ್ಲಿ ಮಡಿದರು

ಅವರ ೧೪ ವರ್ಷ ವಯಸ್ಸಿನ ಎಳೇ ಮಗನೂ ತಂದೆಯ ಹೊತ್ತಿಯಲ್ಲೇ ಇದ್ದನು ಅತನಿಗೆ ಅಸಹನೀಯವಾದ ಹಾನಿ ಉಂಟಾಗಿರುವದೆಂದು ತಿಳಿದುಬರುತ್ತದೆ ಟೋನಿ ಷೋ ಎಂಬವರು ಸುಮಾರು ೪೦ ವರ್ಷಗಳ ಮೊದಲು ನಿರಾಧಾರಿಯಾಗಿ, ಚಿಕ್ಕಾಸಾದರೂ ಇಲ್ಲದೆ ಅಮೇರಿಕಕ್ಕೆ ಬಂದವರಂತೆ! ಮಾತ್ರವಲ್ಲದೆ, ವಿನೋದಕರ ಆಟಗಳಲ್ಲಿ ಇವರು ಹೆಸರುವಾಸಿಯಾಗಿದ್ದರೆಂದೂ ತಿಳಿದುಬರುತ್ತದೆ ಇವರನ್ನು ಸರ್ವಸಾಧಾರಣ 'Millionaire newsboy' ಎಂದು ಕರೆಯುತ್ತಿದ್ದರು

## ಒಳದೇಶ ವರ್ತಮಾನ.

— ವೆಂಡಲ್ ಎ ಬಳಿ ಈಸ್ಟ್ ಇಂಡಿಯಾ ರೈಲ್ವೆ ಕಂಪೆನಿಯ ಗಾಡಿಯು ಇಂಜಿನ್ ಒಡೆದು ಬಿದ್ದುದರಿಂದ ಕೆಲಮಟ್ಟಿನ ಹಾನಿಯುಂಟಾಗಿರುವದು ಮೊದಲನೇ ಫೈರ್‌ಮೇನರು ಮಡಿದಿರುವರು ಡ್ರೈವರನೂ ಎರಡನೇಯ ಫೈರ್‌ಮೇನನೂ ಬಲವಾದ ಹಾನಿ ಹೊಂದಿರುವರು

— ...ಲ್ಲಾ ಎಂಬಲ್ಲಿ ಸ್ಥಳೀಕ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯೂ ಹೆಸರುವಾಸಿಯಾದ ವಕೀಲರೂ ಆಗಿದ್ದ ಮಿ ಕಾಂತಾ ಲಾಲ್ ಘೋಸ್ ಎಂಬವರು ತನ್ನ ಮನೆಯಲ್ಲೇ ಕಾಂಗ್ರೆಸ್ ಆಫೀಸನ್ನು ಸ್ಥಾಪಿಸಿದರೆಂಬ ಆರೋಪದ ಮೇಲೆ ೩ ತಿಂಗಳ ಸಜೆ ಮತ್ತು ೧೦೦ ರೂಪಾಯಿಗಳ ಜುಲ್ಮಾನೆಗೆ ಒಳಪಟ್ಟಿರುವರು

— ನವಾಥಿಲ್ಲಿಯಲ್ಲಿ ತಾ ೩-೧೨-೩೦ನೇ ದಿನ ಎರಡು ಬಾಂಬು ಸ್ಫೋಟನಗಳು ನಡೆದಿರುವವೆಂದು ತಿಳಿದುಬರುತ್ತದೆ ಇಲ್ಲಿನ ಆಯುರ್ವೇದ ಟಿಬ್ಬಿಯಾ ಕಾಲೇಜಿನ ೨ ಮಂದಿ ವಿದ್ಯಾರ್ಥಿಗಳು, ಕಾಲೇಜಿನ ಧನ್ವಂತರಿ ಗೇಟು ಬಳಿ ಒಂದು ಬೊಂಬನ್ನು ನೋಡಿದರು, ಬೊಂಬಿನ ಮೇಲೆ ಅಪಾಯ ಎಂದು ಬರೆಯಲ್ಪಟ್ಟ ಒಂದು ನೋಟೀಸನ್ನೂ ತಾಗಿಸಿದ್ದರು ವಿದ್ಯಾರ್ಥಿಗಳು ಕುತೂಹಲದಿಂದ ಇದೇನಿರಬಹುದೆಂದು ನೋಡುವುದಕ್ಕೆ ಅದನ್ನು ಸ್ಪರ್ಶಿಸಿದರು, ಕೂಡಲೇ ಬೊಂಬು ಒಡೆದು ಇಬ್ಬರಿಗೂ ಬಲವಾದ ಗಾಯವಾಗಿರುವದು ಎರಡನೇ ಬೊಂಬನ್ನು ಯಾರೋ ಬಿಸಾಡಿರುವರೆಂದು ತಿಳಿಯಲಾಗುತ್ತದೆ ಆದರೆ ಆ ಬೊಂಬು ಚಂದನೀ ಚೌಕದಲ್ಲಿ ಹಾದುಹೋಗುವ ಕೆಲವು ಯುರೋಪಿಯನರ ಮತ್ತು ಅವರ ಜೊತೆಗಾರರ ಮೇಲೆ ಸಿಡಿಯಿತು. ಆದರೆ ಯಾರಿಗೂ ಗಾಯವಾಗಲಿಲ್ಲವಂತೆ!

— ಕಲ್ಕತ್ತೆಯಲ್ಲಿ ಶ್ರೀ ಸಿ ಆರ್ ದಾಸರ ಪುಣ್ಯದಿನದ ಆಚರಣೆಯ ಸಮಾರಂಭದಲ್ಲಿ ಮೆರವಣಿಗೆಯನ್ನು ಹೊರಡಿಸಿದರೆಂಬ ಕಾರಣ ದಿನ ಮೇಲೆ ೬ ತಿಂ ೪ ಕಠಿಣ ಸಜೆಗ ಒಳಪಟ್ಟ ರಿಟ್ಯಾರ್ಡ ಡಿಸ್ಟ್ರಿಕ್ಟ ಜಡ್ಜರಾದ ರಾಯ್ ಬಹದೂರ್ ತಾರಕ ಚಂದ್ರದಾಸರು ಧರ್ಮಪತ್ನಿಯಾಗಿರುವ, ಹಾಗೂ ಬಂಗಾಳದ ಆಸಹಕಾರ ಚಳವಳದಲ್ಲಿ ಸಜಾಹೊಂದಿದ ಮತ್ತು ೬೦ ವರ್ಷಪ್ರಾಯದ ವೃದ್ಧೆಯಾದ ಮೋಹಿನೀ ದೇವಿಯವರನ್ನು ಪ್ರೆಸಿಡೆನ್ಸಿ ಜೈಲಿನಿಂದ ಬಿಡುಗಡೆ ಹೊಂದಿಸಿರುವರು

— ಪಂಡಿತ್ ಮೋತಿಲಾಲರು ಚಿಕಿತ್ಸೆಹೊಂದುತಲೇ ಇರುವರು

— ಕಲ್ಕತ್ತೆಯಲ್ಲಿ ಚೀನಾ ದೇಶದವರ Chine e Journal of I dia ಎಂಬ ಅಂಕಿತವಿರುವ ಒಂದು ವರ್ತಮಾನ ಪತ್ರಿಕೆಯು ಪ್ರಕಟವಾಗಿ ಹೊರಡುವದೆಂದು ತಿಳಿದುಬರುತ್ತದೆ ಮಿ ಚೀನ್ ಎಂಬವರೇ ಪ್ರಕಾಶಕರು ಅವರ ಪರವಾಗಿ ಡಿಸ್ಟ್ರಿಕ್ಟ್ ಕೊಟ್ಟಾಗಿರುವದಂತೆ

— ಬಾಗಲ್ಪುರ ಜಿಲ್ಲೆಯ ಜಿಲ್ಲಾ ಸತ್ಯಾಗ್ರಹ ಕಮಿಟಿಗಳು ಅನ್ಯಾಯ ಸಮಿತಿ ಯೆಂದು ಸರಕಾರದವರಿಂದ ಪರಿಗಣಿಸಲ್ಪಟ್ಟವಂತೆ!

— ಅಹಮ್ಮದಾಬಾದದಲ್ಲಿ ಮಿ ಭುಲಾಭಾಯಿ ದೇಸಾಯರವರ ಅಧ್ಯಕ್ಷತೆಯಲ್ಲಿ ಶ್ರೀಮಂತ ವಕೀಲರನೇಕರು ಸಭೆಸೇರಿ ಗುಜರಾಥ ಪ್ರಾಂತ್ಯದಲ್ಲಿ ರಾಜಕೀಯ ಅಪರಾಧಿಗಳಾಗಿ ಕಷ್ಟ ಪಡುತ್ತಿರುವ ಹಲವರಿಗೆ ನ್ಯಾಯವನ್ನು ಒದಗಿಸಿಕೊಡುವಂತೆ ಕೆಲವು ಠರಾವುಗಳನ್ನು ಪಾಸ್ ಮಾಡಿರುವರು.

ಯೆರ್ವಾಡಾ ಜೈಲಿನಲ್ಲಿ Hunger strike ಮಾಡಿದ ಮಿ ಯತ್ ಡಿ ಗೋಖಲೆಂಬ ಸತ್ಯಾಗ್ರಹಿಯ ಸ್ಥಿತಿಯು ಬಹಳ ಚಿಂತಾದಾಯಕವಾಗಿದ್ದುದರಿಂದ ಅಲ್ಲಿ ಹಾಬಾದದಲ್ಲಿ ಕಾರಾಗೃಹವಾಸವನ್ನು ಅನುಭವಿಸುತ್ತಿರುವ ಅವರ ತಮ್ಮನನ್ನು, ಸದರಿಯವರನ್ನು ನೋಡುವುದಕ್ಕಾಗಿ ಅಪ್ಪಣೆಕೊಟ್ಟಿರುವರಂತೆ!

— ಲಾಹೋರಿನಲ್ಲಿ ಗೋಕಲ್‌ಚಂದ ಮಾಲ್ಹೋತ್ರಾ ಎಂಬವರು ಹಣ ಸಾಲಕೊಡುವ ವ್ಯಾಪಾರಸ್ಥರು ಇವರ ಅಂಗಡಿಯನ್ನು ತಾ ೩ನೇ ದಿನ ದರೋಡೆಗಾರರು ಒಳಹೊಕ್ಕು ಸೂರೆಮಾಡಲು ಯತ್ನಿಸಿದರು ಅಂಗಡಿಯಲ್ಲಿ ಇತ್ತೀಚೆಗೆ ಮದುವೆಯಾದ ಎಳಪ್ರಾಯದ ಓರ್ವ ಹಿಂದೂ ಹುಡುಗಿ ಮಾತ್ರವೇ ಕುಳಿತಿದ್ದಳು ಅವಳ ವಯಸ್ಸು ೧೫ಕ್ಕೆ ಮೀರಿರಲಿಲ್ಲ ದರೋಡೆಗಾರರು ಬಂದೊಡನೆ ದೊಡ್ಡ ಗಲಭೆಯಾಯಿತು, ಸುತ್ತುಮುತ್ತಲಿನ ಅಂಗಡಿಯವರು ಬಂದು ಕೂಡಿದರು, ಗಲಭೆಯು ಹೆಚ್ಚಿತು, ಆ ವೀರ ತರುಣಿಯು ಇಟ್ಟಿಗೆಗಳಿಂದಲೂ ಇತರ ಕೈಗೆ ದೊರೆತ ಸಾಧನಗಳಿಂದಲೂ ದರೋಡೆಯವರೊಡನೆ ಭಯಂಕರ ಯುದ್ಧ ಮಾಡಿದಳು. ದರೋಡೆಗಾರರ ಸಂಖ್ಯೆಯು ಸುಮಾರು ೧೨ಕ್ಕೆ ಮೀರಿದ್ದಿತು ಎಲ್ಲರೂ ಶಸ್ತ್ರಪಾಣಿಗಳಾಗಿದ್ದರು ಹುಡುಗಿಯು ಕೊನೆಗೆ ಒಂದು ಗುಂಡಿನ ಏಟಿನಿಂದ ಮಡಿದು ಬಿದ್ದಳೆಂದು ತಿಳಿದುಬರುತ್ತದೆ

— ಬನಾರಿಸ್ ವಿಶ್ವವಿದ್ಯಾಲಯಕ್ಕೆ ಸರಕಾರಿ ಗ್ರಾಂಟು ಇನ್ನೂ ಸಿಕ್ಕಿಲ್ಲ. ಸಿಕ್ಕುವಂತೆ ಮಾಡಲು ಹೆಚ್ಚಿನ ಪರಿಶ್ರಮಗಳು ನಡೆಸಲ್ಪಟ್ಟಿರುವವು.

— ಮಿ| ಗಂಗಾಧರರಾವ್ ದೇಶಪಾಂಡೆಯವರ ಮೊಕದ್ದಮೆಯು ಬರುವ ಬುಧವಾರಕ್ಕೆ ಮುಂದರಿಸಲಾಗಿರುವದು.

— ಬಂಗಾಳದ ಮುರ್ಶಿದಾಬಾದಾ ಜೈಲಿನಲ್ಲಿ, ಸ್ವೀಕರಿಸಲಸಾಧ್ಯವಾದ ಜೈಲು ಆಹಾರವನ್ನು ನಿರಾಕರಿಸಿ, Hunger Strike ಮಾಡಿ ಮೃತಪಟ್ಟ ಮಿ| ಮೋಹನಲಾಲ್ ಸೇನ್ ಎಂಬ ೧೭ ವರ್ಷದ ತರುಣ ಸತ್ಯಾಗ್ರಹಿಯ ಶವವನ್ನು ತಾ ೬-೧೨-೩೦ಕ್ಕೆ ಬನಾರಿಸಕ್ಕೆ ಮೆರವಣಿಗೆಯಲ್ಲಿ ತಂದು, ಗಂಗಾಸ್ನಾನವನ್ನು ಮಾಡಿಸಲಾಯಿತು; ಶವಸಂಸ್ಕಾರಗಳೂ ನಡೆದವು. ಆತನ ತಾಯಿಯು ಬನಾರಸದಲ್ಲಿ ಜೀವನ್ಮೃತಳಾಂತಿರುವಳೆಂದು ವರ್ತಮಾನ.

— ತಾ ೮-೧೨-೩೦ರಲ್ಲಿ ಶ್ರೀಮತಿ ಮಣಿಬೆನ್ ಪಟೇಲ್ ಮತ್ತು ಮಿಠಾ ಬೆನ್ ಪೆಟೀಟ ಎಂಬ ಇಬ್ಬರು ಮಹಿಳೆಯರನ್ನು ಸಬರ್ಮತಿ ಜೈಲಿನಿಂದ ಬಿಡುಗಡೆಹೊಂದಿಸಿರುವರು

— ಮಧುರೆಯಲ್ಲಿ ಕಾಂಗ್ರೆಸ್ ಸ್ವಯಂಸೇವಕರು, ಮಹಾತ್ಮಾಜಿ, ಸಿ. ಆರ್. ದಾಸ್ ಮತ್ತು ಜವಾಹರ್‌ಲಾಲ ನೆಹರುರವರ ಪಟಗಳನ್ನು ಅಲಂಕರಿಸಿ, ದೊಡ್ಡ ಮೆರವಣಿಗೆಯನ್ನು ಹೊರಡಿಸಿ ಬಹಳ ವಿಜೃಂಭಣೆಗಳಿಂದ "ಗಾಂಧಿ ದಿನ"ದ ಆಚರಣೆಯನ್ನು ಕೈಕೊಂಡರು.

— ಅಲ್ಲಹಾಬಾದದಲ್ಲಿ, ರಾಜಕೀಯ ಅಪರಾಧಿತರ ಕಷ್ಟ ಪರಂಪರೆಗಳ ಕುರಿತು ಮಿ| ಬಿನೋದ ಬಿಹಾರಿಲಾಲ್ ಎಂಬವರು ತಾರೀಕು ೬-೧೨-೩೦ರಲ್ಲಿ ಡಿಸ್ಟ್ರಿಕ್ಟ ಜಡ್ಜರ ಸಮಕ್ಷಮ ಒಂದು ಅರ್ಜಿಯನ್ನು ಹಾಜರು ಪಡಿಸಿದರು. ಅರ್ಜಿಯನ್ನು ಪರಾಂಬರಿಸಿದ ಜಡ್ಜರು ಪ್ರಾಯೊಟ್ಟ ರಾಜಕೀಯ ಅಪರಾಧಿತರ ಸಂಕಷ್ಟಗಳನ್ನು ನೀಗಾಡಿಸುವದು ಕಷ್ಟಸಾಧ್ಯವಾಗುವದೆಂದೂ, ಆದರೂ ಕೂಡ ತಾನು ಖುದ್ದಾಗಿ ಅಲ್ಲಹಾಬಾದ್ ಜೈಲನ್ನು ಸಂದರ್ಶಿಸಿ, ಸಾಧ್ಯವಿದ್ದಷ್ಟು ಪ್ರಯತ್ನಗಳನ್ನು ಮಾಡುವೆನೆಂದೂ ಅಭಯವಿತ್ತಿರುವರೆಂದೂ ತಿಳಿದುಬರುತ್ತದೆ.

— ಪೇಶಾವರದಲ್ಲಿ ಸಿಟಿ ಮ್ಯಾಜಿಸ್ಟ್ರೇಟರು ಪಠಾನ್ ಖಾನ್ ಒಂಬರ್‌ದಾರ್ ಎಂಬವರನ್ನು ಆಫ್ರಿದಿಗಳ ಸಹಾಯದಿಂದ ಅರಸರಿಗೆ ವಿರೋಧವಾಗಿ ಯುದ್ಧ ಹೂಡಿದನೆಂಬ ಅಪಾದನೆಯ ಮೇಲೆ ಸೆಶನ್ಸ್ ಕೋರ್ಟಿಗೆ ಕಮಿಟ್ ಮಾಡಿರುವರು.

— ಮುಂಬಯಿಯಲ್ಲಿ ತಾ ೬-೧೨-೩೦ನೇ ದಿನ ಕಾಂಗ್ರೆಸ್ಸಿನವರು ದೊಡ್ಡದೊಂದು ಸಭೆಸೇರಿ ಗಂಧದ ಕೊರಡುಗಳನ್ನು ಹರಾಜು ಮಾಡಲಾರಂಭಿಸಿದರು. ಒಬ್ಬನು ಒಂದು ರೂಪಾಯಿ ಬೆಲೆಗೆ ಹರಾಜು ಕರೆದು ಎತ್ತಿದ್ದ ಕೊರಡನ್ನು ಕೊಂಡುಕೊಂಡನು. ಅಷ್ಟರಲ್ಲಿ ಹರಾಜು ಕೂಗುವವನಿಗೆ ಪೋಲೀಸರು ಹಿಡಿದುಕೊಂಡು ಹೋದರು. ಅವರಲ್ಲದೆ ಡಿಕ್ಟೇಟರರೇ ಮೊದಲಾದವರನ್ನು ದಸ್ತಗಿರಿ ಮಾಡಿರುವರೆಂದು ತಿಳಿದುಬರುತ್ತದೆ.

ಸೂರತ್‌ನಲ್ಲಿ ಇದೇ ತಿಂಗಳ ೫ನೇ ತಾರೀಕಿಗೆ ಸಮರ ಸಮಿತಿಯ ಡಿಕ್ಟೇಟರರಾದ ಶ್ರೀಯುತ ಮಂಗಲ್‌ದಾಸ್ ಪಾಕೀಲವಾಲರನ್ನು ದಸ್ತಗಿರಿಮಾಡಿದರು. ಸದರಿಯವರನ್ನು ಅವರ ಬಂಗ್ಲೆಯಲ್ಲೇ ಕೈದು ಮಾಡಿದುದರಿಂದ ಅನೇಕ ಪೋಲೀಸರು ಅವರ ಬಂಗ್ಲೆಗೆ ಹೋಗುವ ಎಲ್ಲಾ ದಾರಿಗಳನ್ನೂ ಕಾಯುತ್ತಿದ್ದು ಏನೂ ಗಲಭೆಯುಂಟಾಗದಂತೆ ನೋಡಿಕೊಳ್ಳುತ್ತಿದ್ದರು. ಅನೇಕ ನಾರೀ ಸ್ವಯಂಸೇವಕರ ಕೈಯಿಂದ ರಾಷ್ಟ್ರೀಯ ಪತಾಕೆಗಳನ್ನು ಪೋಲೀಸರು ಸೆಳಕೊಂಡರು.

ಲಾಹೋರಿನ ಪಿತೂರಿ ಮೊಕದ್ದಮೆಯ ಇದೇ ತಿಂಗಳ ೫ನೇ ತಾರೀಕಿನ ದಿನ ೨೬ ಮಂದಿಯನ್ನು ಸ್ಪೆಶಿಯಲ್ ಟ್ರಿಬ್ಯುನಲ್ಲಿನ ಮುಂದೆ ಹಾಜರು ಪಡಿಸಿದರು. ನ್ಯಾಯಾಸನದ ಹೊರ ಬಾಗಿಲಲ್ಲಿ ಮತ್ತು ನ್ಯಾಯಾಲಯದೊಳಗೆ ಅಸಂಖ್ಯಾತ ಬಾರದ ಪೋಲೀಸ್ ಜವಾನರು, ಗಲಭೆಯೆಂಟಾಗದಂತೆ ಕಾಯುತ್ತಿದ್ದರು. ಎಲ್ಲಾ ಶಿಕ್ಷೆ ಹೊಂದಲ್ಪಟ್ಟವರನ್ನು ಸಮಯಕ್ಕೆ ಸರಿಯಾಗಿ, ಜೈಲಿನಿಂದ ಸ್ಥಳಾಂತರಿಸಿ, ನ್ಯಾಯಸ್ಥಾನಕ್ಕೆ ತಂದರು. ಪೋಲೀಸರು ಒಟ್ಟಿಗೆ ಇದ್ದರು. ಬರುವಾಗಲೇ ಎಲ್ಲಾ ಕೈದಿಗಳು ಮುಕ್ತ ಕಂಠರಾಗಿ ರಾಷ್ಟ್ರೀಯ ಗೀತಗಳನ್ನು ಹಾಡುತ್ತಾ ಬಂದರು. ಪ್ರತಿವಾದಿಯ ವಕೀಲರು ಇನ್ನೂ ನಿಯಾಮಕ ಹೊಂದಲಿಲ್ಲ. ಕೈದಿಗಳು, ನ್ಯಾಯಾಧಿಪತಿಗಳೊಡನೆ ತಮ್ಮ ಸೌಕರ್ಯಗಳಿಗಾಗಿ ವರ್ತಮಾನ ಪತ್ರಿಕೆಗಳನ್ನೂ, ಓದುವದಕ್ಕಾಗಿ ಮನೆಗಳಲ್ಲಾಡುವ ಆಟದ ಸಾಮಾನುಗಳನ್ನೂ, ಮಲಗಿಕೊಳ್ಳಲಿಕ್ಕೆ ಹಾಸಿಗೆ ವಗೈರೆಯನ್ನೂ ಪಡಪಾಲಿಸುವಂತೆ ಹುಕುಮಾಗಬೇಕೆಂದು ಬೇಡಿಕೊಂಡರು. ಅದಕ್ಕೆ ಉತ್ತರವಾಗಿ ನ್ಯಾಯಾಧಿಪತಿಗಳು, ಜೈಲು ಕ್ರಮಗಳನ್ನು ಚೆನ್ನಾಗಿ ಪರ್ಯಾಲೋಚಿಸಿ ಅವರ ಅಪೇಕ್ಷೆಗಳನ್ನು ಪೂರ್ತಿಗೊಳಿಸಲಾಗುವುದೆಂದು ಹೇಳಿದರು. ಅಪಾದಿತರ ಪ್ರಾಯವು ೧೬ರಿಂದ ೩೦ರ ವರೆಗೆ ಇದೆ, ಹೆಚ್ಚಾಗಿ ೧೮ರ ಮೊದಲುಗೊಂಡು ೨೫ರ ಒಳಗಿನವರೇ ಆಗಿರುವರು. ಈ ಮೊಕದ್ದಮೆಯಲ್ಲಿ ಸುಮಾರು ೫೦೦ ಸಾಕ್ಷಿಯವರನ್ನು ವಿಚಾರಣೆ ನಡೆಸಲಿಕ್ಕಿರುವರೆಂದು ತಿಳಿದುಬರುತ್ತದೆ.

— ಕರಾಚಿಯ ನ್ಯಾಯಸ್ಥಾನದಲ್ಲಿ ಸ್ವದೇಶಿ ಉಪ್ಪನ್ನು ಮಾರಿದ ಕೆಲವು ಸ್ವಯಂಸೇವಕರಿಗೆ ಸಜೆಯಾಗಿರುವದು. ಕೆಲಮಂದಿ ಪಟ್ಟಣದ ದಂಗೆಖೋರರು ಕೋರ್ಟು ಕಚೇರಿಗಳ ಬಳಿಯಲ್ಲಿ ಸರಕಾರಿ ನೌಕರರನ್ನುದ್ದೇಶಿಸಿ—"ಸ್ಥಳೀಕ ಪೋಲೀಸರನ್ನೂ ಅವರ ಮಕ್ಕಳನ್ನೂ ಕೊಲ್ಲುವುದಕ್ಕಾಗಿ ಊರ ಪೂಜಾರಿಗಳು ಬಾಂಬು ಗಳನ್ನು ತಯ್ಯಾರಿಗೊಳಿಸುತ್ತಿರುವರು. ಅಂತಹ ಬಾಂಬುಗಳ ರಚನೆಯು ಬಹಳ ಅಪಾಯಕರವಾಗಿರುವದು" ಎಂದು ಮೊದಲಾಗಿ ಪಲಾಯನತೆಯನ್ನು ಬೋಧಿಸುತ್ತಿರುವರಂತೆ!

## ದಕ್ಷಿಣ ಕನ್ನಡ.

**ಮಂಗಳೂರು:** — ಮಂಗಳೂರು ಮುನಿಸಿಪಾಲಿಟಿಯಲ್ಲಿ ತಾ. ೬-೧೨-೩೦ಕ್ಕೆ ಅಂತ್ಯವಾಗುವ ವಾರದ ರಿಪೋರ್ಟಿನಂತೆ ಮಂಗಳೂರು ಪಟ್ಟಣದೊಳಗೆ ೫೧ ಜನನಗಳೂ ೨೬ ಮರಣಗಳೂ ಆಗಿರುವವೆಂದು ತಿಳಿದುಬರುತ್ತದೆ

'Rinderpest' ಎಂಬ ಗೋಮಾರಿ ರೋಗವು ಈ ಜಿಲ್ಲೆಯ ಹಲಕೆಲವು ತಾಲೂಕುಗಳಲ್ಲಿ ಹಬ್ಬಿರುವದು. ಮೈಸೂರು ಜಿಲ್ಲೆಯ ಸರಹದ್ದುಗಳಲ್ಲಿ ಈ ರೋಗವು ಅತಿ ತೀವ್ರವಾಗಿ ಹರಡಿರುವದು. ಕಳೆದ ಕೌನ್ಸಿಲ್ ಸೆಶನಿನಲ್ಲಿ, ನಾನು ಈ ಕುರಿತು ಉಂಟಾಗಬಹುದಾದ ಹಾನಿಯನ್ನು ವಿಷದಗೊಳಿಸಿ, ಸದರಿ ರೋಗವನ್ನು ನಾಶಪಡಿಸಲಿಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡಬೇಕೆಂದು ಸರಕಾರಕ್ಕೆ ಸೂಚಿಸಿರುವೆನು. ಗ್ರಾಮದಲ್ಲಿ ರೋಗವು ತಲೆದೋರಿತೆಂದರೆ—ಜನರು ಗ್ರಾಮಾಧಿಕಾರಿಗೆ ತಿಳಿಸಿ ವೆಟರ್ನರಿ ಅಸಿಸ್ಟಂಟರ ಸಹಾಯವನ್ನು ಪಡೆದು, ತಮ್ಮ ಜಾನುವಾರುಗಳನ್ನು ಬಹಳ ಅಕ್ಕರೆಯಿಂದ ಚಿಕಿತ್ಸೆ ಮಾಡಿಸಿಕೊಳ್ಳತಕ್ಕದ್ದು. ಸರಿಯಾದ ಚಿಕಿತ್ಸೆ ಮಾಡಿದ್ದಲ್ಲಿ, ಸೇಕಡಾ ೯೦ ಜಾನುವಾರುಗಳು ಬದುಕಬಹುದು. ಅದರೆ ವೆಟರ್ನರಿ ಡಾಕ್ಟರರ ಅಭಿಪ್ರಾಯದಂತೆ ದಾಕು ಹಾಕುವದರಿಂದ ಜಾನುವಾರುಗಳು ನಿರಾಯಾಸವಾಗಿ ರೋಗದಿಂದ ಪಾರಾಗಬಹುದೆಂದು ತಿಳಿದುಬರುತ್ತದೆ

ಎ. ಬಿ. ಶೆಟ್ಟಿ,
ಎಂ. ಎಲ್. ಸಿ. ಮಂಗಳೂರು

ಮಂಗಳೂರು ನೊಂಗರಕೇರಿಯ ನಿವಾಸಿಗಳಾಗಿದ್ದು ಸಬ್ ಇನ್ಸಪೆಕ್ಟರ ಹುದ್ದೆಯಲ್ಲಿ ಹೆಸರುವಾಸಿಯಾದ ಶ್ರೀ ವೆಂಕಟೇಶಪೈಗಳವರು ಕಸಗಂಟಾದ ಗಂಟಲು ರೋಗದ ನಿವಾರಣೆಗಾಗಿ ಶಸ್ತ್ರಪ್ರಯೋಗ ಮಾಡುವ ಬಗ್ಗೆ ಮೈಸೂರಿಗೆ ಒಯ್ಯಲ್ಪಟ್ಟವರು. ಅಲ್ಲೇ ವ್ಯತಿಹೊಂದಿದರು. ಅವರ ಶವವನ್ನು ಮಂಗಳೂರಿಗೆ ತಂದು ವಿಧಿಪೂರ್ವಕವಾದ ಶವಸಂಸ್ಕಾರಗಳು ನಡೆಸಲ್ಪಟ್ಟವು.

ದಕ್ಷಿಣ ಕನ್ನಡ ಜಿಲ್ಲಾ ಮೆಡಿಕಲ್ ಎಸೋಸಿಯೇಶನ್ನಿನ ಈ ತಿಂಗಳ ಮಾಸಿಕಸಭೆಯು ತಾ ೨೦ನೇ ದಿನ ಅಪರಾಹ್ನ ೧೦ ಘಂಟೆ ೫ ೩೦ಕ್ಕೆ ಸರಿಯಾಗಿ ವೆನ್‌ಲೋಕ್ ಆಸ್ಪತ್ರೆಯಲ್ಲಿ ಜರಗುವದು. ಡಾ| ಕೆ ಆರ್ ಕಿಣಿ ಯವರು ಟಿ. ಬಿ. ಎಸ್ ಇವರು ಕ್ಷಯರೋಗ ಜ್ವರದ ಚಿಕಿತ್ಸೆಯ ಕುರಿತು ವಾದವಿವಾದಗಳನ್ನು ನಡೆಸಲಿಕ್ಕಿರುವರು ... ದಿಸೂ ಅವರ ಅಭಿಪ್ರಾಯ ...

ಮಂಗಳೂರು ತಾಲೂಕು ಬೋರ್ಡಿನ ಮುಲ್ಕಿ ಸರ್ಕಲಿನ ಮೆಂಬರಾಗಿ ಚುನಾಯಿತರಾಗಿ ನಿಂತ ಮಂಗಳೂರ ಚಂದಯ್ಯ ಶೆಟ್ಟಿ ಮತ್ತು ನಾರಾಯಣ ರಾವ್ ಇವರು ತಮ್ಮ ಉಮೇದುವಾರಿಕೆಯನ್ನು ಹಿಂತೆಗೆದುದರಿಂದ ಮುಲ್ಕಿಯ ... ಜೋಗಪ್ಪ ಶೆಟ್ಟಿಯವರು ಪ್ರತಿಸ್ಪರ್ಧಿ ಇಲ್ಲದೆ ಚುನಾಯಿತರಾಗಿರುವರಾಗಿ ತಿಳಿದು ಬರುತ್ತದೆ

**ಮುಲ್ಕಿ:** — ಇಲ್ಲಿಯ ಬೋರ್ಡ ಹಾಯರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿಗಳ ತರ್ಕಸಂಘದ ೧೬ನೇ ಸಭೆಯು ಇದೇ ಕಳೆದ ತಾ ೨೯-೧೧-೩೦ನೇ ಶನಿವಾರ ಅಪರಾಹ್ನ ಘಂಟೆ ೮-೩೦ಕ್ಕೆ ನಡೆಯಿತು.

ಇಲ್ಲಿಯ ಸೆಂಟರಿನ ಉಪಾಧ್ಯಾಯರ ಸಂಘದ ಸಾಮಾನ್ಯ ಮಾಸಿಕ ಸಭೆಯು ಇದೇ ಕಳೆದ ತಾ ೨೯-೧೧-೩೦ನೇ ಶನಿವಾರ ಅಪರಾಹ್ನ ಘಂಟೆ ೨-೩೦ಕ್ಕೆ ಎಂದಿನಂತೆ ಕೋರಿಯಾದಿ ವಿದ್ಯಾಪ್ರಚಾರಿಣೀ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕೂಡಿಬಂತು

ಉಡುಪಿ — ಇದೇ ತಾ ೬ರಿಂದ ೧೩ರ ವರೆಗೆ ರಾಷ್ಟ್ರೀಯ ಆರೋಗ್ಯ ಮತ್ತು ಶಿಶುಸಪ್ತಾಹ ಆಚರಿಸಲ್ಪಡುತ್ತದೆ. ಈ ಸಪ್ತಾಹದ ಆರಂಭವು ಕುಂದಾಪುರ ಡಿವಿಜನಲ್ ಆಫೀಸರವರಿಂದ ತಾಲೂಕು ಬೋರ್ಡ ಆಫೀಸಿನಲ್ಲಿ ಪುರಜನರ ಸಮ್ಮುಖದಲ್ಲಿ ಕೊಡಲ್ಪಟ್ಟಿತು. ಈ ಮೊದಲಿನ ವರ್ಷ ಕಲ್ಲ ಉತ್ಸಾಹದಿಂದ ಕಾರ್ಯ ನಡೆಸುತ್ತಿದ್ದು, ಈ ವರ್ಷವೂ ಮೊದಲಿನಂತೆ ಕಾರ್ಯನಿರ್ವಾಹ ಮಾಡಿದ್ದ ಜೊತೆ ಕಾರ್ಯದರ್ಶಿಯರಾದ ಶ್ರೀ ಪಾಂಗಾಳ ಗಿರಿಜಾನಾಯಕರು ತಮ್ಮ ಗೌರವ ಕಾರ್ಯದರ್ಶಿತ್ವಕ್ಕೆ ರಾಜಿನಾಮೆ ಕೊಟ್ಟರೂ ಕೂಡ, ಈ ಸಲದ ವಿಜೃಂಭಣೆಗಳು ಸಾಂಗವಾಗಿ ನೆರವೇರುವವು. ಮಕ್ಕಳೊಂದಿಗೆ ಪುರಮಂದಿರ ಯಾ ಇಸ್ಕೂಲಿನ ಮಂದಿರಗಳಲ್ಲಿ ಸ್ವಚ್ಛಮನೆಗಳ ಪರಿಶೋಧವೂ ಶಾಲಾ ಹೊಟೇಲುಗಳ ಸಂದರ್ಶನವೂ, ಶಾಲಾಮಕ್ಕಳೊಳಗೆ ಪ್ರಬಂಧ ಬರೆಯೋಣ ಆರೋಗ್ಯಮಯ ಸಂಗೀತಗಳ ಸ್ಪರ್ಧೆಗಳೂ, ಚಿತ್ರಪ್ರದರ್ಶನಗಳೂ ಪರಿಶೋಧನೆಯೂ ಕಾರ್ಯಕ್ರಮದ ಕೆಲವು ಮುಖ್ಯ ಅಂಗಗಳಾಗಿದ್ದವು

ರಾಮಬಾಣ ಎಂಬ ಪತ್ರಿಕೆಯು ಕ್ವಚಿತ್ತಾಗಿ ವಾರವಾರವೂ ಪ್ರಕಟವಾಗುತ್ತಿದೆ. "ಅದು ಕರ್ತೃವಾದ ಶ್ರೀ ದೇಜಪ್ಪಶೆಟ್ಟಿ ಇದೇ ಕಳೆದ ವಾರದ ಸಂಚಿಕೆಯನ್ನು ಮಾಡುತ್ತಿರಲು, ಪೋಲೀಸರು ಇವರನ್ನು ಕೈದು ಮಾಡಿ ಠಾಣೆಗೆ ಒಯ್ದು ಇವರ ಬಳಿಯಲ್ಲಿದ್ದ ಪತ್ರಿಕೆಯ ಪ್ರತಿಗಳನ್ನೂ ಅಲ್ಪ ಹಣವನ್ನೂ ತೆಗೆದಿಟ್ಟು, ನಿವ್ರಿಯವರನ್ನು ಗದರಿಸಿ ಬಿಡುಗಡೆ ಮಾಡಿದರೆಂದು ಈ ಪತ್ರಿಕೆಯ ೩ನೇ ಸಂಚಿಕೆಯಿಂದ ತಿಳಿದುಬರುತ್ತದೆ.

ಕೆಲ ಅಂಗಡಿಗಳಲ್ಲಿ ಹಲವು ದಿನಗಳಿಂದ ತಂಗೊಳ್ಳಿಸುತ್ತಿದ್ದ ಕಾಗದದ ರಾಷ್ಟ್ರೀಯ ಧ್ವಜಗಳನ್ನು ಪೋಲೀಸರು ಠಾಣೆಗೆ ಕಿತ್ತುಕೊಂಡುಹೋಗಿರುವರು.

**ಸುಳ್ಯ:** — ತಾ ೪-೧೨-೩೦ರಲ್ಲು ಸೇರಿದ ಸುಳ್ಯ ಪಂಚಾಯತ ಸಭೆಯಲ್ಲಿ ಶೇಂದಿ ಮತ್ತು ಶರಾಬು ಗುತ್ತಿಗೆ ಕಂಟ್ರಾಕ್ಟರರಿಗೆ ಅವರು ಕಟ್ಟುವ ಕಂತಿನ ರೂ ೧೨ ಮೇಲೆ ಆಣೆ ೧ರಂತೆ ಕಾಯಂ ತೆರಿಗೆ ಹೊರಿಸುವದೆಂತ ನಿರ್ಣಯಿಸಿರುತ್ತದೆ. ಆದರೆ ಕೊನೆ ತೀರ್ಮಾನದ ಬಗ್ಗೆ ತಾ. ೨೧ರಲ್ಲು ಸುಳ್ಯ ಪಾಠಶಾಲೆಯ ಮುಂದಿರದಲ್ಲಿ ಪೂರ್ವಾಹ್ನ ೯ ಘಂಟೆಗೆ ಸಭೆಸೇರುತ್ತದೆ. ಆಕ್ಷೇಪಗಳಿದ್ದವರು ಬಾಯ್ದೆರೆ ಯಾ ಬರಹ ಮೂಲಕ ತಿಳಿಸಬಹುದೆಂತ ಸುಳ್ಯ ಪಂಚಾಯತಿ ಪ್ರೆಸಿಡೆಂಟರು ಈ ಮೂಲಕ ಎಲ್ಲರಿಗೂ ತಿಳಿಯಪಡಿಸುತ್ತಾರೆ.

**ಕಾರ್ಕಳ:** — ಇಲ್ಲಿ ಪ್ರಭಾತ ಫೇರಿಯು ಆರಂಭವಾಗಿದೆ ಎಂದು ಬರೆದು ತಿಳಿಸುವಷ್ಟರಲ್ಲಿಯೇ ಉತ್ಸವವು ಮುಗಿದು ಮಂಗಳಾಚರಣೆಯಾಯಿತು. ಕಾರ್ಕಳದಲ್ಲಿ ಉತ್ಸವಗಳ ಆರಂಭಗಳಿಗೆ ತುದಿ ಮೊದಲಿಲ್ಲ. ಆದರೆ ಕೊನೆಗೊಳ್ಳುವ ವಿಚಾರವು ಮಾತ್ರ ಯಾರಿಗೂ ಗೊತ್ತಾಗದಷ್ಟು ಮೆಲ್ಲಗೆ! ಶಿವಶಿವಾ!!

ಭಜನೆ ಸಪ್ತಾಹವು ಆರಂಭವಾಗಿ ವಿಜೃಂಭಣೆಯಿಂದ ಕೊನೆಗೊಂಡಿತು

ಶಿಶುಸಪ್ತಾಹದ ಮಾಮೂಲು ಇಲ್ಲಿಯೂ ಆಯಿತು. ಮೊದಲನೆ ದಿವಸ ಮಕ್ಕಳ ಓಟದ ಮೆರವಣಿಗೆ! ಮೂರನೆ ದಿವಸ ಆಟಗಳು—ಆಗುವದೆಂದು ಹೇಳಿದ್ದು ಕುಂದಣೆ ಮಾಡಿದ್ದು ಒಂದೇ! ಏಳನೇ ದಿವಸ ಮೊಕ್ತಾಯ! ನಡುನಡುವೆ ಸಪ್ತಾಹ ಕಮಿಟಿಯ ದರ್ಶನಗಳು' ಹೀಗೆ ಎಲ್ಲವೂ ಆಗಿ ಮುಗಿಯಿತು. ಎಲ್ಲ ಉತ್ಸಾಹಿಗಳಲ್ಲಿ ತಮ್ಮ ಪರವಾಗಿ ಕಮಿಟಿಯ ಮೆಂಬರರೂ ಶಾಲಾ ಮಕ್ಕಳೂ ಕೆಲಸಮಾಡಲೆಂದು ಪಟ್ಟಣಿಗರು ತಮ್ಮ ಓಟುಕೊಟ್ಟಿದ್ದರು. ಕಾರ್ಯಕ್ರಮದ ಅಷ್ಟವಸ್ಥೆಯು ಕೂಡ ಒಂದು ಮೂಲೆಯಿಂದ ಎದ್ದು ದಿಗ್ದರ್ಶನ ಮಾಡಿತು, ಮುಂದೆ ಹೀಗಾಗದಂತಾಗಲಿ

**ಕುಂದಾಪುರ** — ಇದೇ ಮಾರ್ಗಶಿರ ಶು| ದ್ವಾದಶಿಯ ದಿನ ಇಲ್ಲಿಯ ವೆಂಕಟರಮಣ ದೇವಸ್ಥಾನದಲ್ಲಿ ವರ್ಷಂಪ್ರತಿ ನಡೆಯುವ ಭಜನೆ ಸಪ್ತಾಹದ ಮಂಗಳವಾಯಿತು.

ಇದೇ ತಿಂಗಳ ತಾ ೧ನೇ ಸೋಮವಾರದಿಂದ ೩ನೇ ಬುಧವಾರ ವರೆಗೆ ಕುಂದಾಪುರದಲ್ಲಿ ಪಳನೆಯ ಶಿಶು ಸಪ್ತಾಹವನ್ನಾಚರಿಸಿದರು. ಪ್ರತಿ ವರ್ಷದಂತೆ ಪಂದ್ಯಾಟಗಳೂ ಇದ್ದವು. ಮತ್ತು ಬುಧವಾರ ರಾತ್ರಿ ಶ್ರೀ ಕೊಂಡಿಕಲ್ ಶ್ರೀನಿವಾಸರಾಯರು ಬರೆದ ಆರೋಗ್ಯ ಪ್ರತಾಪ ಎಂಬ ನಾಟಕವನ್ನು ಇಲ್ಲಿಯ ಹೈಸ್ಕೂಲಿನ ಜನಮನರಂಜಕವಾಗಿ ಆಡಿತೋರಿಸಿದರು

ಕುಂದಾಪುರ ತಾಲೂಕಿನ ರಾಷ್ಟ್ರೀಯ ಧುರೀಣರಾದ ಶ್ರೀ ಕೃಷ್ಣರಾಯ ಕೊಡ್ಗಿಯವರು ಮತ್ತು ಶ್ರೀ ಕೆ. ಅಣ್ಣಪ್ಪ ಕಾರಂತರು ಮಂಗಳೂರಿಗೆ ೩ನೇ ಬುಧವಾರ ಮತ್ತು ೬ನೇ ಶನಿವಾರ ಪೃಥಕ್ ಹೇರಿಕೆಯನ್ನು ಮಾಡಿದರು. ಅವರೆ ಸಾಕಷ್ಟು ಪ್ರೋತ್ಸಾಹವು ಸಿಕ್ಕದೆ ಇದ್ದುದರಿಂದ ಆ ಕಾರ್ಯಗಳನ್ನು ಮುಂದರಿಸಲಾಗಲಿಲ್ಲವೆಂದು ತಿಳಿಸಲು ಮನಃಖೇದವಾಗುತ್ತದೆ.

ತಾರೀಕು ೮ನೇ ಸೋಮವಾರ ಸಂಜೆ ೫ ಗಂಟೆಗೆ ಡಿಸ್ಟ್ರಿಕ್ಟ ಜಡ್ಜರಾದ ಶ್ರೀ ರಾಮಸ್ವಾಮಿ ಶಾಸ್ತ್ರಿಯವರು ಗೀತೆಯ ಕುರಿತು ಹೈಸ್ಕೂಲ್ ಕಂಪೌಂಡಿನಲ್ಲಿ ಪಾಂಡಿತ್ಯಪೂರ್ಣ ಭಾಷಣವಿತ್ತರು

ದಿನದಿನಕ್ಕೂ ಕಳೆಗುಂದುತ್ತಿರುವ ಹಿಂದೂ ಧರ್ಮವನ್ನು ರಕ್ಷಿಸಿಕೊಳ್ಳುವ ಸಲುವಾಗಿ ಶ್ರೀ ಕೆ. ಶಂಕರನಾರಾಯಣ ಕಾರಂತರು ಧರ್ಮರಹಸ್ಯ ವೆಂಬ ಚಿಕ್ಕ ಪುಸ್ತಕವನ್ನು ಇಲ್ಲಿಯ ಭಾಷಣಶಾಲೆಯಲ್ಲಿ ಬಿಡುಗಡೆ ಮಾಡಿ ಕೊಟೇಶ್ವರ ಜಾತ್ರೆಯ ಸಮಯ ಸಕಲ ಹಿಂದೂ ಯಾತ್ರಿಗಳು ಜನರಲ್ಲಿ ತಪ್ಪಭಿಪ್ರಾಯವನ್ನು ಹುಟ್ಟಿಸುವ ಕಾರ್ಯಕ್ಕೆ ಧಿಕ್ಕಾರ ಕೊಟ್ಟ ಹೆಚ್ಚಿನ ಬುದ್ಧಿಯನ್ನು ಕಂಡರು

**ಬ್ರಹ್ಮಾವರ** — ಇಲ್ಲಿಯ ಸಬ್ ರಿಜಿಸ್ಟ್ರಾರರವರಾದ ರಾ| ರಂಗಪ್ಪ ಪಡಿಯಾರ್ ಮತ್ತು ಒವರ್ಸಿಯರರಾದ ರಾ| ಸಿ ವಿ ಕಾಮತ್ ಇವರಿಂದ ನಿರ್ಮಿತವಾದ ಶಿಶುಸಪ್ತಾಹ ಕಮಿಟಿಯ ಅನುಮೋದನೆಯಂತೆ ಆರೋಗ್ಯ ಸಪ್ತಾಹ ಸಮಾರಂಭವು ಇದೇ ತಿಂಗಳ ತಾರೀಕು ೬ ಮತ್ತು ೭ರಲ್ಲಿ ಬಹಳ ವಿಜೃಂಭಣೆಯಿಂದ ಜರುಗಿಸಲಾಯಿತು.

**ಬಾರಕೂರು** — ಇದೇ ತಿಂಗಳ ತಾ ೬ರಲ್ಲಿ ಇಲ್ಲಿ ಶಿಶು ಸಪ್ತಾಹ ಸಮಾರಂಭವು ಆಚರಿಸಲ್ಪಟ್ಟಿತು. ಗಾಂಧಿ ಬೋರ್ಡ ಶಾಲೆಯವರೂ ಶಿಶು ಸಪ್ತಾಹ ಸಮಾರಂಭವನ್ನು ತಮ್ಮ ಗ್ರಾಮದಲ್ಲಿ ಇದೇ ತಿಂಗಳ ತಾ ೪ರಲ್ಲಿ ಆಚರಿಸಿದರು

### ಮುಲ್ಕಿ ಸರ್ಕಲಿನ ಓಟರರ ಅವಗಾಹನೆ ಬಗ್ಗೆ

ಇದೇ ತಾ ೧೬ಕ್ಕೆ ನಡೆಯಲಿರುವ ಮಂಗಳೂರು ತಾಲೂಕು ಬೋರ್ಡಿನ ಮುಲ್ಕಿ ಸರ್ಕಲಿನ ಮೆಂಬರಿಕೆಯೊಂದರ ಚುನಾವಣೆಗೆ ನಾನು ಉಮೇದ್ವಾರಿಯಾಗಿ ನಿಂತಿದ್ದೆನು. ಆದರೆ ಅಲ್ಪಾವಧಿಯ ಈ ಮೆಂಬರಿಕೆ ನಿಂತು ವ್ಯರ್ಥ ಶ್ರಮವನ್ನುಂಟುಮಾಡುವುದು ಉಚಿತವಲ್ಲೆಂದು ನನ್ನ ಕೆಲವು ಮಿತ್ರರ ಆಗ್ರಹಪೂರ್ವಕವಾದ ಕೇಳಿಕೆಯನ್ನು ಮನ್ನಿಸಿ, ನಾನೀಗ ನನ್ನ ಉಮೇದ್ವಾರಿಕೆಯನ್ನು ಹಿಂತೆಗೆದು ಚುನಾವಣೆಯಲ್ಲಿ ಭಾಗಿಯಾಗಲಿಳಿಸುವುದಿಲ್ಲ. ಮೊದಲಾಗಿ ನಾನು ಚುನಾವಣೆಗೆ ನಿಲ್ಲದೇಕಾಗಿ ಪ್ರೋತ್ಸಾಹಿಸಿ ನನಗೆ ತಮ್ಮ ಓಟುಗಳನ್ನೂ ಸಹಾಯವನ್ನೂ ಮಾಡುವುದಾಗಿ ವಾಗ್ದಾನ ಮಾಡಿರುವ ಮಿತ್ರವರ್ಗಕ್ಕೂ ಓಟರರಿಗೂ ನಾನು ಈ ಮೂಲಕ ಕೃತಜ್ಞತಾಪೂರ್ವಕ ವಂದನೆಯನ್ನರ್ಪಿಸುತ್ತೇನೆ.

ಮುಲ್ಕಿ, ತಾ ೧೧-೧೨-'೩೦ M. Chandaya Shetty.

[illegible]

(ಗಣಿತ [illegible])

| [illegible] | [illegible] | [illegible] | [illegible] | [illegible] | [illegible] | [illegible] | [illegible] F. | |
|---|---|---|---|---|---|---|---|---|
| | | | | | | | [illegible] | [illegible] |
| 13 | [illegible] | ೮ | ೨೨ ೧೪ | ಉತ್ತರಾ | [illegible] | [illegible] | 6 45 | 6 4 |
| 14 | [illegible] | ೯ | ೧೭. ೨ | ಹಸ್ತಾ | [illegible] | [illegible] | 6 45 | 6 4 |
| 15 | [illegible] | ೧೦ | ೧೨.೧೭ | ಚಿತ್ರಾ | [illegible] | [illegible] | 6.46 | 6 5 |
| 16 | [illegible] | ೧೧ | [illegible] | ಸ್ವಾತಿ | [illegible] | [illegible] | 6 46 | 6. 6 |
| 17 | [illegible] | ೧೨ | [illegible] | ವಿಶಾಖಾ | [illegible] | [illegible] | 6 47 | 6. 6 |
| 18 | [illegible] | ೧೩ | [illegible] | ಅನುರಾಧಾ | [illegible] | [illegible] | 6.47 | 6. 6 |
| 19 | [illegible] | ೧೪ | [illegible] | ಜ್ಯೇಷ್ಠ | [illegible] | [illegible] | 6,48 | 6. 7 |

## ಮಂಗಳೂರಿನ ವಾಯುಸ್ಥಿತಿ.

| Date | Temperature. ಉಷ್ಣ (ಶಾಖ) | | | | Rainfall. ಮಳೆ | |
|---|---|---|---|---|---|---|
| | Maximum | [illegible] | Minimum | [illegible] | [illegible] | [illegible] |
| 28 | 91— | 3 | 67— | 5 | — | — |
| 29 | 91— | 0 | 69— | 5 | — | — |
| 30 | 89— | 3 | 76— | 0 | — | — |
| 1 | 90— | 2 | 77— | 2 | — | — |
| 2 | 93 — | 0 | 75— | 7 | — | — |
| 3 | 90 — | 8 | 75 | 3 | — | — |
| 4 | 89 — | 7 | 75— | 9 | — | 136 80 |

## ಮಂಗಳೂರಿನ ಪೇಟೆ ಧಾರಣೆ.

| [illegible] | ಇಂದ | ವರೆಗೆ |
|---|---|---|
| | ರೂ. ಅ | ರೂ. ಅ |
| [illegible] | 7 — 10 | 8 — 9 |
| [illegible] | 7 — 2 | 7 — 8 |
| [illegible] | 6 — 8 | — |
| [illegible] | 7 — 8 | 8 — 4 |
| [illegible] | 10 — 0 | 10 — 2 |
| [illegible] | 6 — 12 | 7 — 4 |
| [illegible] | 6 — 8 | 6 — 10 |
| [illegible] | 11 — | 15 — 0 |
| [illegible] | 6 — 8 | — |
| [illegible] | 10 — 8 | 16 8 |
| [illegible] | 12 — 0 | 13 — 6 |
| [illegible] | 12 — 0 | 26 — 0 |
| [illegible] | 12 — 0 | 14 8 |
| [illegible] | 12 — 0 | — |
| [illegible] | 47 — 8 | 52 — 0 |
| [illegible] | 4 — 6 | 4 — 10 |
| [illegible] | 70 — 0 | 75 — |
| [illegible] | 30 — | 31 — 0 |
| [illegible] | 27 — 8 | 30 — 0 |
| [illegible] | 5 — 4 | 6 — 4 |
| [illegible] | 6 — 12 | 7 — 0 |
| [illegible] | 4 — 7 | 8 — 12 |
| [illegible] | 3 — 9 | 3 — 4 |
| [illegible] | 6 — 8 | — |
| [illegible] | 7 — 8 | 8 — 0 |
| [illegible] | 2 — 8 | 3 — 0 |
| [illegible] | 240 — | — |
| [illegible] | 4 — 0 | — |
| [illegible] | 27 — 0 | — |
| [illegible] | 3 — 12 | — |
| [illegible] | 42 — 8 | 4 — 0 |
| [illegible] | 14 — 8 | 14 — 10 |
| [illegible] | 20 — 0 | 21 — 0 |
| [illegible] | 12 — 4 | 12 — 8 |
| [illegible] | 13 — 9 | 13 — 0 |
| [illegible] | 13—8—0 | — |
| [illegible] | 37 — 8 | 43 — 12 |
| [illegible] | 230 — | — |
| [illegible] | 100 — | 124 — |
| [illegible] | 80 — | 95 — |


# Chikmagalur Public Conveyance Motor Service.

CHIKMAGALUR.

# ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ತಂತಿ ವಿಳಾಸ: ಕನ್ವೆಯನ್ಸ್ — Tel: Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು [illegible] ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M S M Railway) ರೈಲ್ವೇ ಸ್ಟೇಶನಿನಿಂದ 12 ಘಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡಿಗೆರೆ, [illegible] ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಗುರುವಾಯನಕರೆ, ಉಪ್ಪಿನಂಗಡಿ [illegible] ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕರೆ ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

## ಮೋಟಾರು ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಿಗೆರೆಗೆ 9 ಘಂಟೆಗೆ, [illegible] 10-30ಕ್ಕೆ, ಮೈಸೂರುಗಡಿಗೆ 11-45ಕ್ಕೂ, [illegible] ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ [illegible] ಸೇರಿ, ಅಲ್ಲಿಂದ ಕೂಡಲೇ ಹೊರಟು [illegible] ಸ್ಟೇಶನ್ [illegible] 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲುಪಿ, ಆ ಟ್ರಾಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು ಕಣ್ಣನ್ನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10-30ಕ್ಕೆ ಬೆಳ್ತಂಗಡಿಗೂ 11 ಗಂಟೆಗೆ ಧರ್ಮಸ್ಥಳದ [illegible] ಸ್ಟೇಶನಿಗೂ 12 ಗಂಟೆಗೆ [illegible], 12-30ಕ್ಕೆ ಮೈಸೂರು ಗಡಿಗೂ, ಸೇರಿ ಅಲ್ಲಿಂದ ಒಡನೆ ಹೊರಟು 2 30ಕ್ಕೆ [illegible], ಸುಮಾರು 4 ಗಂಟೆಗೆ ಮೂಡಿಗೆರೆಗೂ, 5 ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿದ್ದಿಟ್ಟಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು [illegible] ವಗೈರೆ ಕಡೆಗೆ ಹೋಗುವ ಪ್ರಯಾಣಿಕರು [illegible] ಎಕ್ಸ್‌ಪ್ರೆಸ್ ಟ್ರೈನ್ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ [illegible] ಗದಗ, ಬಂದ್ರಾಪೂರ, ಗೋವಾ, ಲೋಂಡ, ಪೂನಾ, ಮತ್ತು ಮುಂಬಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲವಾಗಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೆಂಗಳೂರು ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರಿಗೆ ಅನುಕೂಲವಾಗಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎಸ್ ಹನುಮಂತಪ್ಪ, ಪ್ಯಾರಡೂನ್ ಸೋರಾಬ್, ಕೆ ಸೂರಪ್ಪ ಶೆಟ್ಟಿ

ಪ್ರೊಪ್ರೈಟರ್ಸ್.

ಘಾಟಿಯಲ್ಲಿಯೂ ಕೂಡ ಸಿ ಪಿ. ಸಿ. ಕಂಪೆನಿಯವರ ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

# THE CANARA PUBLIC CONVEYANCE CO., LTD, MANGALORE.

(ESTABLISHED 1914)

# ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

## ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬೇಕೆನ್ನುವಿರಾದರೆ ಪ್ರತಿದಿನವೂ [illegible] ಮಾರ್ಗವಾಗಿಯೂ [illegible] ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ [illegible] ಉಡುಪಿಗೆ ಬರಿರಿ ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರು ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪವಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೆ ಮೈಸೂರಿನ ಸರ್ವಿಸಿನ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿನ ಕನೆಕ್ಷನ್ ಇರುತ್ತದೆ.

ಪಶ್ಚಿಮ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು:

ಈ ಕಂಪೆನಿಯ ಬಸ್ಸುಗಳು ಮುಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಕಾರವಾರ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲುಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

**Secretary,**
*The Canara Public Conveyance Co., Ltd., Mangalore.*

# ವಿ ವಿ ಧ ಸ ಮಾ ಚಾ ರ ಗ ಳು.

## ಅಸ್ಸಾಮದಲ್ಲಿ ಸತ್ಯಾಗ್ರಹ ಚಳವಳಿಗೆ ಮುಂದಾಳು ಬೇಕಾಗಿದೆ:—

ತಾರೀಖು ೨೨ನೇ ನವಂಬರ ೧೯೩೦ರಲ್ಲಿ, ಅಸ್ಸಾಮದ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಸಭೆ ಸೇರಿತು, ಸತ್ಯಾಗ್ರಹ ಚಳವಳದ ಅನೇಕ ಕುಂದುಕೊರತೆಗಳು ಚರ್ಚಿಸಲ್ಪಟ್ಟವು. ಕೊನೆಗೆ ಅಖಿಲಭಾರತ ಕಾಂಗ್ರೆಸ್ ಸಮಿತಿಯೊಡನೆ, ೧೫ ದಿನಗಳ ವರೆಗಾದರೂ, ಅಸ್ಸಾಮ್ ಪ್ರಾಂತ್ಯವನ್ನು ಸಂದರ್ಶಿಸಿ, ಅದರಲ್ಲಿ ಸತ್ಯಾಗ್ರಹ ಸಂಬಂಧವಾದ ನವ ಚೇತನವನ್ನುಂಟುಮಾಡಲಿಕ್ಕೋಸುಗ ಒಬ್ಬ ಮುಂದಾಳುವನ್ನು ಕಳುಹಿ ಕೊಡುವಂತೆ ಮನವಿಗಳು ಕಳುಹಿಸಲ್ಪಟ್ಟಿರುವವು. ಸರದಾರ್ ವಲ್ಲಭಭಾಯಿ ಪಟೇಲರೇ ಅಸ್ಸಾಮದ ಮುಂದಾಳುವಾಗಲು ಯೋಗ್ಯರಿರುವರೆಂಬುದನ್ನೂ ಸೂಚಿಸಿರುವರು. ಮಾತ್ರವಲ್ಲದೆ ಅಸ್ಸಾಮ್ ದೇಶದ ಪ್ರಾಂತಿಕ ಸಮಿತಿಯು, ಸತ್ಯಾಗ್ರಹವನ್ನು ಮುಂದೊತ್ತುವುದಕ್ಕಾಗಿ, ದೇಶ್ಯ ಜನತೆಯಿಂದ ಯಥಾಶಕ್ತಿ ವಂತಿಗೆಗಳನ್ನು ವಸೂಲುಮಾಡಿ, ದೊಡ್ಡದೊಂದು ಫಂಡನ್ನೂ ನಿರ್ಮಿಸಿರುವದೆಂದು ತಿಳಿದುಬರುತ್ತದೆ.

* * *

## ರೌಂಡ್ ಟೇಬಲ್ ಪರಿಷತ್ತು

ಲೋರ್ಡ್ ಸೇಂಕಿಯವರ ಅಧ್ಯಕ್ಷತೆಯಲ್ಲಿ, ಮೊದಲನೇ ಸಬ ಕಮಿಟಿಯು, ಇಂಡಿಯನ್ ರೈಲ್ವೆಗಳ ವಿಷಯದಲ್ಲಿ ಚರ್ಚೆ ನಡೆಸಿ ಅವುಗಳನ್ನು ಫೆಡರಲ್ ಸರಕಾರಕ್ಕೆ ಸೇರಿಸಬೇಕೆಂದು ಠರಾವುಗಳನ್ನು ಪಾಸುಮಾಡಿದರು. ಎರಡನೇಯ ಸಬ್ ಕಮಿಟಿಯು, ಲಾರ್ಡ್ ಸೇಂಕಿಯವರು ಮುಂದೆ ತಂದ ೧೨ ಠರಾವುಗಳ ಕುರಿತು ಏನೊಂದೂ ಆಕ್ಷೇಪಿಸಲಿಲ್ಲವೆಂದು ತಿಳಿಯಲಾಗುತ್ತದೆ. ಲಾರ್ಡ್ ಸೇಂಕಿಯವರ ೧೨ ಠರಾವುಗಳಲ್ಲಿ ಒಂದಾದ Dyarchy ಸರಕಾರ ಅನಾವಶ್ಯಕ ವಿಷಯದಲ್ಲಿ, ಎರಡನೆ ಸಬ್‌ಕಮಿಟಿಯು ಸಂಪೂರ್ಣ ಒಪ್ಪಿಗೆಯನ್ನಿತ್ತಿರುವದು ಮಾತ್ರವಲ್ಲದೆ, ನ್ಯೂನಸಂಖ್ಯಾತ (Minority)ರ ಹಕ್ಕುಬಾಧ್ಯತೆಗಳೇ ಮೊದಲಾದ ಕೆಲವು ವಿಷಯಗಳು ಕುರಿತು ಸಬ್ ಕಮಿಟಿಯವರಿಂದ ಮಂಜೂರಾದ ನಿರ್ಧಾರಗಳು ಇನ್ನೂ ಹೊರಬೀಳಲಿಲ್ಲ. ಮುಖ್ಯವಾಗಿ ಸಬ್‌ಕಮಿಟಿಯು ಆಲೋಚಿಸಬೇಕಾದ ವಿಷಯವೆಂದರೆ ಗವರ್ನರರು, ಎಲ್ಲಾ (Special Powers) ಹೆಚ್ಚಿನ ಹಕ್ಕುಬಾಧ್ಯತೆಗಳನ್ನು ಪಡೆಯಲು ಅರ್ಹತೆಯುಳ್ಳವರೋ ಎಕ್ಸಿಕ್ಯುಟಿವ್ ಮಹಾಸಭೆಯ ಅಧಿಕಾರಿಗಳಿಗೋ? ಎಂಬುದೇ ಆಗಿರುವದು.

ಬರ್ಮಾವನ್ನು ಇಂಡಿಯಾದಿಂದ ವಿಭಾಗಿಸಬೇಕೆಂದು ಮುಂದೆ ತಂದ ಪ್ರಶ್ನೆಯ ಇತ್ಯರ್ಥಕ್ಕಾಗಿ, ಬರ್ಮಾ ಪ್ರತಿನಿಧಿಗಳಿಂದ ಕೂಡಿದ ಬೇರೊಂದು ಕಮಿಟಿಯು ನಿರ್ಮಿತವಾಗಿರುವದು. ಹಾಗೂ ಇದುವರೆಗೆ ನಡೆದ ಚರ್ಚೆಗೋಷ್ಠಿಯ ಸಮಾಚಾರದಲ್ಲಿ ಬ್ರಿಟಿಷ್ ಇಂಡಿಯಕ್ಕೂ ಆಶ್ರಿತ ಸಂಸ್ಥಾನಗಳಿಗೂ ಏಕ ರೀತಿಯಿಂದ ಪ್ರಯೋಜನವಾಗುವ ರೈಲ್ವೆ ಮತ್ತು ಕಸ್ಟಮ್ಸ್ ಖಾತೆಗಳು ಫೆಡರಲ್ ಪಟ್ಟಿಯಲ್ಲಿ ಸೇರಿಸಲ್ಪಟ್ಟಿರುವವೆಂದು ತಿಳಿಯಲಾಗುತ್ತಿದೆ.

ಇನ್ನು ಚರ್ಚಾಸ್ಪದವಾದ ವಿಷಯಗಳೆಂದರೆ— ಪ್ರಾಂತಿಕ ಸಬ್ ಕಮಿಟಿಯು ಮಿ। ಆರ್ಥರ್ ಹಂಡರ್ ಸನ್ ಎಂಬವರ ಅಧ್ಯಕ್ಷತೆಯಲ್ಲಿ ಸಭೆಸೇರಿ, ಲಾರ್ಡ್ ಸೇಂಕಿಯವರ ಟೀಕೆಗೆ ಸರಿಯಾಗಿ ಕೆಲವು ಪ್ರಾಮುಖ್ಯ ಪ್ರಶ್ನೆಗಳನ್ನು ವಾದಿಸುವದು ಮುಖ್ಯವಾಗಿ ಆಲೋಚಿಸಲ್ಪಟ್ಟ (Reserved) ಮತ್ತು ಟ್ರಾನ್ಸ್‌ಫರ್ಡ್ (Transferred) ಭರತಖಂಡದ ಪ್ರಜಾವರ್ಗದಲ್ಲಿರುವ ಭೇದಾಭೇದಗಳನ್ನು ತೆಗೆದು ಹಾಕಬೇಕೋ ಬೇಡವೋ ಎಂಬುದು ಮಾತ್ರ ರಿಸರ್ವ್ಡ್ ಪ್ರಜೆಗಳೆಂದರೆ, ಆಶ್ರಿತ ಸಂಸ್ಥಾನಾಧಿಪತಿಗಳ ಅಧೀನದಲ್ಲಿರುವ ಪ್ರಜೆಗಳು, ಮತ್ತು ಟ್ರಾನ್ಸ್‌ಫರ್ಡ್ ಪ್ರಜೆಗಳೆಂದರೆ— ಬ್ರಿಟಿಷ್ ಇಂಡಿಯಾದ ಪ್ರಜಾವರ್ಗ. ಇವುಗಳ ತಾರತಮ್ಯ ವಿಭೇದವು ಆವಶ್ಯವೋ, ಅನಾವಶ್ಯವೋ ಎಂಬುದನ್ನು ಇನ್ನೂ ತೀರ್ಮಾನಿಸಲಿಲ್ಲ.

ಆದರೆ, ಇಂಡಿಯನ್ ಡೆಲಿಗೇಟರಾದ ಸರ್ ಸಿ ಪಿ ರಾಮಸ್ವಾಮಿ ಅಯ್ಯರರು ತಿಳಿಸುವಂತೆ ಮಾನ್ಯ ಸಪ್ರೂರವರಿಗೂ, ಲಿಬರಲ್ (Liberal) ಪಕ್ಷದವರಿಗೂ ಇದ್ದ ಆಲೋಚನೆಗಳ ಭೇದಾಭೇದವು ಇನ್ನೂ ಕೊನೆಗಾಣಲಿಲ್ಲವೆಂದು ಕಂಡುಬರುತ್ತದೆ. ಹಿಂದೂ ಮುಸ್ಲಿಮ್ ಪ್ರಶ್ನೆಯೂ ಯೋಗ್ಯ ಉತ್ತರವನ್ನು ಪಡೆಯಲಿಲ್ಲ, ಆದರೂ ಕೂಡ ಆ ಪ್ರಶ್ನೆಯು, ಕೊಡುವದು ಮತ್ತು ತೆಗೆದುಕೊಳ್ಳುವದು (Give and take Policy) ಎಂಬ ಪೋಲಿಸಿಯನ್ನು ಪರಸ್ಪರ ಐಕ್ಯತೆಯಿಂದ ಅನುಸರಿಸಿದರೆ, ಸದರಿ ಪ್ರಶ್ನೆಯು ತನ್ನಿಂದ ತಾನೇ ಮಾಯವಾಗುವದೆಂದು ಮಿ। ರಾಮಸ್ವಾಮಿಯವರ ಮತ. ಹಾಗೂ ಇವರು ತಿಳಿಯಗೊಡುವಂತೆ, ಇಂಡಿಯಾ ಪ್ರತಿನಿಧಿಗಳೊಳಗೆ ಐಕ್ಯತೆಯುಂಟಾಗುವದರಲ್ಲಿ ಸಂದೇಹವಿಲ್ಲವೆಂದು ತಿಳಿದುಬರುತ್ತದೆ.

ಮಾನ್ಯ ಸಪ್ರು ಜಯಕರರು ತಾ ೫—೧೨—೩೦ರಲ್ಲಿ ಪಾರ್ಲಿಮೆಂಟ್ ಸದಸ್ಯರ ಅವಗಾಹನೆಗಾಗಿ ಕಾಂಗ್ರೆಸ್ ಮುಖಂಡರೊಡನೆ ತಾವು ನಡೆಸಿದ ಸಂಭಾಷಣೆಯನ್ನೊಳಗೊಂಡ ಒಂದು ಸ್ಟೇಟುಮೆಂಟನ್ನು ಹಾಜರುಪಡಿಸಿರುವರು. ಇದರ ಕಾರ್ಯವನ್ನು ಪಾರ್ಲಿಮೆಂಟನವರು ಆಲೋಚಿಸಲಿಕ್ಕಿರುವರು.

ತಾ. ೭—೧೨—೩೦ನೇ ದಿನ ನಡೆದ ರೌಂಡ್ ಟೇಬಲ್ ಕಾನ್‌ಫರೆನ್ಸಿನ ಕಾರ್ಯಕ್ರಮಗಳ ಮೇರೆಗೆ ಭೋಪಾಲ ದೇಶದ ನವಾಬರ ಅನೇಕ ಸಾಧನೆಗಳ ಪರಿಣಾಮವಾಗಿ ಹಿಂದೂ ಮುಸ್ಲಿಮ್ ವಿವಾದವು ಕೊನೆಗಾಣುವ ಲಕ್ಷಣಗಳು ತೋರುತ್ತಿರುವವು. ಮಿ। ಜಿನ್ನಾರವರ ೧೪ ಠರಾವುಗಳನ್ನು ಮಾತ್ರವೇ ಹಿಂದೂಗಳು ಅನುಮೋದಿಸಿರುವರು. ಪಂಜಾಬ್ ಮತ್ತು ಬಂಗಾಳದವರ ಪ್ರಶ್ನೆಯು ಇನ್ನೂ ತೀರ್ಮಾನವಾಗಲಿಲವೆಂದು ತೋರುತ್ತದೆ. ಹಾಗೂ ಹಿಂದೂ ಮುಸಲ್ಮಾನರ ವಾದವು ರೌಂಡುಟೇಬಲು ಪರಿಷತ್ತಿನ ಕಾರ್ಯಕ್ರಮಗಳಿಗೆ ತೊಂದರೆಯುಂಟುಮಾಡುವಂತೆ ತೋರುವುದಿಲ್ಲ.

ಬರ್ಮಾದವರ ಕುರಿತು ಏರ್ಪಟ್ಟ ರೌಂಡ್‌ಟೇಬಲ್ ಸಮಿತಿಯ ಶಾಖೆಯು ಬರ್ಮಾದೇಶದವರ ಕುರಿತು ಆಲೋಚಿಸಲಿಕ್ಕಿರುವದು, ಆದರೂ ಕೂಡ ಸದರಿ ಪ್ರಶ್ನೆಯ ಭವಿಷ್ಯ ಉತ್ತರವನ್ನು ಊಹಿಸುವದಾದರೆ— ಬರ್ಮಾ ದೇಶವನ್ನು ಪ್ರತ್ಯೇಕಿಸುವದರಲ್ಲಿ ಹೆಚ್ಚಿನವಾದ ವಿವಾದಗಳು ನಡೆಯದೆ ತೀರ್ಮಾನಿಸಲ್ಪಡುವದೆಂದು ಗೊತ್ತುಹಚ್ಚಬಹುದು.

* * *

## ಮಾನ್ಯ ವಿ ಜೆ ಪಟೇಲರು ಬೆಜವಾಡದಲ್ಲಿ ಸನ್ಮಾನಿಸಲ್ಪಟ್ಟರು

ಭಾರತೀಯ ಮುಂದಾಳುಗಳಲ್ಲಿ ಹೆಸರುವಾಸಿಯಾಗಿ ಸತ್ಯಾಗ್ರಹ ಚಳವಳದಲ್ಲಿ ಅಪಾರವಾದ ಭಾಗವಹಿಸಿ, ದೇಶೋದ್ಧಾರವೆಂಬ ಪುಣ್ಯಕರ್ಮ ಸಾಧನೆಗಾಗಿ ತನ್ನ ತನು ಮನ ಧನಗಳನ್ನರ್ಪಿಸಿ, ಒಂದು ಸಾನೆಯನ್ನು ಸೇರಿದ ಅಖಿಲಭಾರತ ಸತ್ಯಾಗ್ರಹ ಮುಖಂಡರಲ್ಲಿ ಪೂಜ್ಯ ವಿ ಜೆ ಪಟೇಲರೂ ಸೇರಿರುವರಷ್ಟೆ. ಅವರನ್ನು ಕಾರಣಾಂತರಗಳಿಂದ ದಕ್ಷಿಣ ಹಿಂದೂಸ್ಥಾನದ ಯಾವದೋ ಒಂದು ಒಂದಿಖಾನೆಗೆ ವರ್ಗಾಯಿಸಿರುವರು. ಈ ಸಂದರ್ಭದಲ್ಲಿ ಇವರು ಬೆಜವಾಡಾ ನಗರವನ್ನು ದಾಟಿ ಮುಂದರಿಯಬೇಕಾಯಿತು. ರಾಷ್ಟ್ರಪ್ರೇಮದ ಮೂರ್ತಿಯಂತಿರುವ ಮಿ। ವಿ ಜೆ ಪಟೇಲರು ಬೆಜವಾಡದ ರೈಲ್ವೆ ಸ್ಟೇಷನಿಗೆ ಮುಟ್ಟಿದೊಡನೆ ಅನೇಕ ಮಂದಿ ಸತ್ಯಾಗ್ರಹಿಗಳೂ ಊರ ಜನರೂ ಐಕ್ಯತೆಯಿಂದ ಅವರನ್ನು ಗಾಡಿಯಿಂದ ಕೆಳಗಿಳಿಸಿ ಆದರಾತಿಥ್ಯದಿಂದ ಉಪಚರಿಸಿದರು. ತಾ ೩—೧೨—೩೦ನೇ ದಿನ ೯ ಗಂಟೆ ರಾತ್ರೆಗೆ ಅವರು ಮದರಾಸಿಗೆ ಹೋಗುವ ಕಲ್ಕತ್ತಾ ಮೈಲುಗಾಡಿಯನ್ನು ಕಾಯುತ್ತಿರಬೇಕಾಯಿತು. ಇಷ್ಟೊಂದು ಅಲ್ಪ ಸಮಯದಲ್ಲಿ ಅವರ ಸಂದರ್ಶನಕ್ಕಾಗಿ ಬಂದ ಪ್ರೇಕ್ಷಕರು ಅಸಂಖ್ಯಾತರು. ನೆರೆದಿದ್ದರು. ಅವರ ಅಭಿಲಾಷೆಗಳನ್ನು ಪೂರೈಸುವುದಕ್ಕೆ ಮಾನ್ಯ ಪಟೇಲರು ಸಿದ್ಧ ಕೋಣೆಯಿಂದ ಪ್ಲೇಟ್‌ಫಾರ್ಮಿಗೆ ಬಂದು ಕಾಣಿಸಿಕೊಂಡರು. ಪ್ರತಿಯಾಗಿ ಜನ ಸಮೂಹವು ವಂದೇ ಮಾತರಂ ಜಯಕಾರವನ್ನು ಹಾಕಿತು. ಅಂದಿನ ಸಂಜೆಯಾಗುತ್ತಾ ಅನೇಕ ಊರ ಗೃಹಸ್ಥರೂ ವಕೀಲರೂ ಬಂದು ಪಟೇಲರನ್ನು ಭೇಟಿ ಮಾಡಿದರು. ಅಷ್ಟರಲ್ಲೇ ಗಾಡಿ ಬರಲು ಹೊತ್ತಾದುದು. ಮತ್ತೊಮ್ಮೆ ಜನರು ಪಟೇಲರಿಗೆ ವಂದೇ ಮಾತರಂ ಘೋಷದಿಂದ ಜಯಕಾರ ಮಾಡಿದರು ಹಾಗೂ ಪ್ರತ್ಯುಪಕಾರ ವಂದನೆಗಳನ್ನು ತಿಳಿಸಿಕೊಟ್ಟರು.

ಪಟೇಲರ ಕ್ಷೀಣವಾದ ದೇಹ ಪ್ರಕೃತಿ, ಹಾಗೂ ಅನಾರೋಗ್ಯದಿಂದುಂಟಾದ ದೇಹದ ನಿಶ್ಶಕ್ತಿ ಮುಂತಾದುವು ಇವರನ್ನು ನೋಡಿದವರನ್ನು ವ್ಯಸನದಲ್ಲಿ ಮುಳುಗಿಸದಿರಲಿಲ್ಲ. ಬಳಲಿಕೆಯಾಗಿದ್ದರೂ ಕೊನೆಗೆ ಅವರು ರೈಲ್ವೇ ಗಾಡಿಯು ಬರಲು ತಮ್ಮ ಕೋಣೆಯನ್ನು ಪ್ರವೇಶಿಸಿ ವಿಶ್ರಮಿಸಿದರು. ಅಷ್ಟರಲ್ಲಿ ಗಾಡಿಬಿಡಲು ಹೊತ್ತಾಯಿತು. ಪ್ರೇಕ್ಷಕರು ಗಾಡಿಯ ಬಳಿಗೆ ಸೇರಿ ಮತ್ತೊಮ್ಮೆ ವಂದೇ ಮಾತರಂ ಹೇಳಿದರು. ಮಿ ಪಟೇಲರು ಎಲ್ಲರಿಗೂ ವಂದನೆಕೊಟ್ಟು ಮುಂದೆ ಪ್ರಯಾಣವನ್ನು ಬೆಳೆಸಿದರೆಂದು ತಿಳಿದುಬರುತ್ತದೆ.

* * *

## ಚಾಂದಪುರದಲ್ಲಿ ರೈಲ್ವೇ ಸಬ್ ಇನ್ಸ್‌ಪೆಕ್ಟರವರಿಗೆ ಗುಂಡು ಬಾರು!

ತಾ ...—೧೨—೩೦ನೇ ದಿನ ಚಿಟಿಗೊಂಗ್ ರೈಲ್ವೆ ಪೋಲೀಸಿಗೆ ಸೇರಿದ ತಾರಿಣಿಮುಖರ್ಜಿ ಎಂಬ ರೈಲ್ವೆ ಇನ್ಸ್‌ಪೆಕ್ಟರರನ್ನು ಯಾರೋ ಗೋಲಿಬಾರು ಮಾಡಿ ಕೊಂದಿರುವರೆಂದು ಪತ್ರಿಕೆಗಳಲ್ಲಿ ಈ ಕುರಿತು ಊರಲ್ಲೆಲ್ಲಾ ದಿಗಿಲುಪಟ್ಟಿರುವರು. ಕೊಲೆಗಾರರು ಸಬ್ ಇನ್ಸ್‌ಪೆಕ್ಟರರ ಮೇಲೆ ಒಂದೆರಡು ಗುಂಡುಗಳಲ್ಲ, ಅನೇಕ ಗುಂಡುಗಳನ್ನು ಹಾರಿಸಿರುವರೆಂದು ತಿಳಿದುಬರುತ್ತದೆ. ಆ ಕೂಡಲೇ ಅವರನ್ನು ಆಸ್ಪತ್ರೆಗೆ ಒಯ್ಯಲಾಯಿತು, ಆದರೆ ಅವರು ದಾರಿಯಲ್ಲೇ ಪ್ರಾಣಬಿಟ್ಟರು. ಅಷ್ಟರಲ್ಲಿ ಸ್ಟೇಷನಿನಲ್ಲಿದ್ದ ಪೋಲೀಸರು ತಂಡತಂಡವಾಗಿ ಆ ಸ್ಥಳದಲ್ಲಿ ಒಂದು ಸೇರಿ, ಸರಹದ್ದುಗಳಲ್ಲೆಲ್ಲಾ ಶೋಧ ನಡೆಸಿದರು. ನೆರೆಹೊರೆಯ ಗ್ರಾಮಗಳಿಗೆ ಪೋಲೀಸರನ್ನು ಪತ್ತೆಗಾಗಿ ಅಟ್ಟಿದರು. ಸಮೀಪವಿದ್ದ ರೈಲ್ವೆ ಆಫೀಸಿನಲ್ಲಿ ಅಪರಾಧಿಗಳು ಗಾಡಿಯನ್ನು ಕಾಯುತ್ತಿರಬಹುದೆಂದು ಪೋಲೀಸರು ಶೋಧ ನಡಿಸಿದರು. ಆದರೆ ಪೋಲೀಸರಿಗೆ ಅಂದಿನ ರಾತ್ರೆಯ ಕತ್ತಲೆಯು ಬಹು ತೊಂದರೆಯನ್ನುಂಟುಮಾಡಿತು, ಕತ್ತಲೆಯಲ್ಲೇ ಪತ್ತೆಹಚ್ಚಬೇಕಾಯಿತು. ಅಂತೂ ಪೋಲೀಸರ ಪ್ರಯತ್ನಗಳೆಲ್ಲವೂ ನೀರಿನ ಹೋಮವಾದುವು. ಅಪರಾಧಿಗಳನ್ನಾದರೂ ಕಂಡುಹಿಡಿಯಲು ಪೋಲೀಸಿನವರಿಂದ ಸಾಧ್ಯವಾಗಲಿಲ್ಲವಂತೆ. ಸಬ್ ಇನ್ಸ್‌ಪೆಕ್ಟರರನ್ನು ಕೊಂದ ಕೂಡಲೇ, ಕೊಲೆಪಾತಕರು ತಲೆತಪ್ಪಿಸಿಕೊಂಡು ಎತ್ತಲೋ ಓಡಿಹೋದರೆಂದು ಸುದ್ದಿ. ಈ ಕೊಲೆಗಾಗಿ ಪೋಲೀಸಿನವರು ಸ್ಥಳೀಕ ಕಾಂಗ್ರೆಸ್ ಸಂಸ್ಥೆಯನ್ನು ಪರಿಶೋಧಿಸಿದರಂತೆ. ಕೆಲವು ಹಳೆ ಕಾಗದಪತ್ರಗಳನ್ನು ಕೊಂಡು ಹೋಗಿರುವರೆಂದು ವದಂತಿ.

* * *

## ಮಿ। ಬ್ರೆಲ್ಸಿಯವರ ಒಂದು ಮಾತು!

ಮುಂಬಯಿ ಕ್ರೊನಿಕಲ್ ಪತ್ರಿಕೆಯ ಸಂಪಾದಕರಾದ ಮಿ। ಬ್ರೆಲ್ವಿಯವರು ಶಿಕ್ಷೆ ಹೊಂದಿದರಷ್ಟೆ! ಅವರು ಹೇಳುವದೇನೆಂದರೆ ಪತ್ರಿಕೆಯ ವಿಷಯದಲ್ಲಿ ಜೀವಮಾನದ ಅಮೂಲ್ಯ ಸಮಯವನ್ನು ವ್ಯಯಮಾಡುವದು ತೀರ ಕಠಿಣತನ. ನನ್ನನ್ನು ಬಿಡಿಸಲ್ಪಟ್ಟ ಪ್ರಕೃತದ ಸ್ಥಿತಿಗತಿಗಳಲ್ಲಿ ಸ್ನೇಹಿತರನ್ನು, ಓದುಗರನ್ನು ಮತ್ತು ವಿನಯಪೂರಿತರಾದ ನನ್ನ ನೌಕರರನ್ನು ಅಗಲಿ ಶ್ರಮ ನೋಡುವುದೆಂದರೆ ಅದೊಂದು ಬಗೆಯ ದುಃಖಸೂಚನೆಯೇ ಸರಿ, ಅವರೆಲ್ಲರನ್ನು ಒಮ್ಮೆಂದೊಮ್ಮೆ ತೊರೆದು ಹೋಗುವದೆಂದರೆ ಮತ್ತಷ್ಟು ಕಷ್ಟ. ಆದರೂ ಕೂಡ ನನ್ನ ಮಿತ್ರರಿಗಾಗಲೀ ಅಥವಾ ಪ್ರೋತ್ಸಾಹಕರಿಗೆ ಚಂದಾದಾರರಿಗಾಗಲೀ ಹೃದಯಪೂರ್ವಕ ಧನ್ಯವಾದಗಳನ್ನರ್ಪಿಸಲು ಇದುವೇ ನನಗೆ ಸುಸಂದರ್ಭವು. ಹಾಗೂ ಪತ್ರಿಕೆಯ ಮುಂದಿನ ಯಶಸ್ಸು ಮತ್ತು ಅಭಿವೃದ್ಧಿಯು ಅಂಥಹ ಪ್ರೋತ್ಸಾಹಿಗಳ ಕೈಯೊಳಗಿರುವದೆಂದು ನಂಬುತ್ತೇನೆ. ಆಗಿಂದಾಗ ನನಗೆ ವಿವಿಧ ವಿಷಯಗಳ ಸೂಚನೆ ಕೊಟ್ಟು ಪತ್ರಿಕೆಯ ಅಭಿವೃದ್ಧಿಯನ್ನು ಲಕ್ಷಿಸುತ್ತಿದ್ದ ನನ್ನ ಮಿತ್ರಮಂಡಲವು ಪ್ರಕೃತದ ಆಕ್ಟಿಂಗ್ ಸಂಪಾದಕರಾದ ಮಿ। ಯಲ್ ಜಿ ಖಾರೆಯವರಿಗೆ ಸಹಾಯವಿತ್ತು ಪತ್ರಿಕೆಯು ಹೆಚ್ಚಾಗಿ ಪ್ರಚಾರಗೊಳ್ಳುವಂತೆ ಮಾಡುವರೆಂದೇ ನನ್ನ ನಂಬಿಕೆ ಎಂದರು.

* * *

## 'ಲಾ' ಕಾಲೇಜಿನಲ್ಲಿ ಮಹಾತ್ಮಾಜಿಯವರ ಭಾವಚಿತ್ರ:-

ಕೊಲಂಬೋ ಪಟ್ಟಣದ ಲಾ ಕಾಲೇಜಿನಲ್ಲಿ ಮಹಾತ್ಮಾಜಿಯವರ ಭಾವಚಿತ್ರವೊಂದನ್ನಿರಿಸಿರುವರೆಂದು ಗೊತ್ತಾಗುತ್ತದೆ. ಚಿತ್ರವು ಅಂದವಾಗಿದ್ದು Oil Paint ಮಾಡಲ್ಪಟ್ಟಿರುವದು. ವಿಶ್ವವಿದ್ಯಾನಿಲಯದ ಎಲ್ಲಾ ವಿದ್ಯಾರ್ಥಿಗಳು, ಈ ಕುರಿತು ತಮ್ಮ ಮನಃಪೂರ್ವಕ ಸಹಾಯವನ್ನು ತೋರಿಸಿದರು, ಅವರ ಪರವಾಗಿ ಮಿ। ಫ್ರಾನ್ಸಿಸ್ ಡಿ ಜೊಸ್ಸಾ ಎಂಬವರು ಈ ಕೆಳಗಿನ ಅಭಿಪ್ರಾಯಗಳನ್ನೊಳಗೊಂಡ ಒಂದು ಬುದ್ಧಿಮಾರ್ಗದ ಭಾಷಣವಿತ್ತರು. ಭಾಷಣದಲ್ಲಿ ವಿವರಿಸಿದಂತೆ ಮೇಲೆ ಹೇಳಲ್ಪಟ್ಟ ಮಹಾತ್ಮಾಜಿಯವರ ಭಾವಚಿತ್ರವನ್ನಿಡುವದರಿಂದ ಸರ್ವದಾ ಅವರ ನೆನಪುಂಟಾಗುವುದಕ್ಕೆ ಬಹಳ ಅನುಕೂಲವಿರುವುದೆಂದೂ, ಅವರಂತಹ ದಿವ್ಯಪುರುಷರು ಬೇರೊಬ್ಬರಿಲ್ಲಾರರೆಂದೂ ತೋರಿಬರುತ್ತದೆ. ಗಾಂಧೀಜಿಯವರಂತಹ ಪೂಜ್ಯರು ಮುಂದಿನ ಜನಾಂಗಗಳಲ್ಲಿ ಹುಟ್ಟಿಬರುವದೆಂಬ ಶಂಕೆಯೂ ಕೂಡ ನಿಷ್ಪ್ರಯೋಜನವು ಎಂಬುದನ್ನು ವಿಶದಪಡಿಸಿದರು. ಆದುದರಿಂದ ಅಂಥಹರು ತೋರಿಕೊಟ್ಟ ಆದರ್ಶ ಮಾರ್ಗವನ್ನು ಅಲ್ಪ ಮಟ್ಟಿಗಾದರೂ ಅನುಸರಿಸಿ ಬರುವದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿರುವದೆಂದೂ ಹೇಳಿದರು. ಮಹಾತ್ಮಾಜಿಯವರಿಗೆ ಕೊಡಬಹುದಾದ ಪವಿತ್ರ ಸನ್ಮಾನಗಳಲ್ಲಿ, ಅವರು ತೋರಿಕೊಟ್ಟ ಸನ್ಮಾರ್ಗವನ್ನು ಅನುಸರಿಸಿ ಬರುವದೇ ಮೇಲಾಗಿರುವದೆಂದೂ ಹೇಳಿದರು. ಗಾಂಧಿಜಿಯವರ ಪವಿತ್ರ ಸನ್ಮಾನವೆಂದರೆ ಅವರ ತತ್ವಗಳನ್ನರಿತು ವರ್ತಿಸುವದಲ್ಲದೆ ಇನ್ನೊಂದಿರಲಾರದೆಂದು ಒತ್ತಿ ಹೇಳಿದರು.

* * *

## ಕೈದಿಗಳ ಇನ್‌ಸ್ಪೆಕ್ಟರ್ ಜನರಲರಾದ ಕರ್ನಲ್ ಸಿಂಪ್ಸನ್ನರಿಗೆ ಗುಂಡುಹಾರಿಸಿ ಕೊಂದರು

ತಾ ೮—೧೨—೩೦ನೇ ದಿನ ಬಂಗಾಳ ಪ್ರಾಂತ್ಯದ ಕೈದಿಗಳ ಮೇಲ್ವಿಚಾರಕರಾಗಿ ಇನ್‌ಸ್ಪೆಕ್ಟರ್ ಜನರಲ್ ಪದವಿಯನ್ನೇರಿದ ಲೆಫ್ಟಿನೆಂಟ್ ಕರ್ನಲ್ ಎನ್ ಎಸ್ ಸಿಂಪ್ಸನ್ ಎಂಬವರನ್ನು ಮಧ್ಯಾಹ್ನ ಘಂಟೆ ೧೨ ½ಕ್ಕೆ ಸರಿಯಾಗಿ ಅವರ ಸ್ವಂತ ಆಫೀಸಿನಲ್ಲಿ ಗುಂಡು ಹಾಕಿ ಕೊಂದರು, ಕೊಲೆಗಾರರು ತಲೆತಪ್ಪಿಸಿ ಓಡಿಹೋಗಿರುವರಂತೆ!

ಆ ದಿನ ಮಧ್ಯಾಹ್ನಕ್ಕೆ ಮಿ ಸಿಂಪ್ಸನ್ನರು ಆಫೀಸು ರೂಮಿನಲ್ಲಿ ಆಫೀಸು ಫೈಲುಗಳನ್ನು ಪರಿಶೋಧಿಸುತ್ತಿರುವಾಗ ಮೂರು ಮಂದಿ ಬಂಗಾಲೀ ಯುವಕರು ಬಂದು ಸದರಿಯವರನ್ನು ನೋಡುವದಕ್ಕಾಗಿ ಚಾಕರನ ಕೂಡೆ ಅಪ್ಪಣೆ ಕೇಳಿದರು. ಆತನು ಸಿಚ್ಯುಯೇಶನನ್ನು ವಿವರಿಸಿ ಸಿಂಪ್ಸನ್ನರು ಕೆಲಸದ ಮೇಲಿರುವದರಿಂದ ಅವರಿಗೆ ಸಮಯವಿಲ್ಲವೆಂದು ತಿಳಿಸಿದನು. ಕೂಡಲೆ, ಅವರೆಲ್ಲರೂ ಜತೆಯಿಂದ ಒಳನುಗ್ಗಿದರು. ಇವರನ್ನು ನೋಡಿದ ಸಿಂಪ್ಸನರು ಥಟ್ಟನೆ ಹಿಂತೆಗೆದರು. ಅಷ್ಟರಲ್ಲಿ ಗುಂಡುಬಾರು ಮೂರು ಮಂದಿ ಯುವಕರು ಒಂದೇ ಸಮಯದಲ್ಲಿ ಪಿಸ್ತೂಲಿನಿಂದ ಮೇಲೆ ಗುಂಡುಬಾರು ಮಾಡಿದರು. ಗಲಭೆಯುಂಟಾಯಿತು. ಜನರು ಗುಂಪು ಸೇರುವದರ ಮೊದಲಾಗಿ ಕೊಲೆಗಾರರು ತಪ್ಪಿಸಿಕೊಂಡು ಪಲಾಯನ ಮಾಡಿದರೆಂದು ತಿಳಿದುಬರುತ್ತದೆ. ಜುಡೀಶಿಯಲ್ ಸೆಕ್ರೆಟರಿಯವರಾದ ಮಿ ಜೆ ಡಲ್ಯನೆಲ್ಸನ್ನರು ಕಠಿಣವಾದ ಜಖಮುಗಳಿಗೆ ಒಳಪಟ್ಟಿರುವರು. ಕೊಲೆಗಾರರು ಪ್ರಾಣತ್ಯಾಗ ಮಾಡಿಕೊಂಡರೆಂಬ ವದಂತಿಯೂ ಹರಡಿರುವದು. ಇಬ್ಬರು ನಿಜವಾಗಿಯೂ ಪ್ರಾಣ ಕಳಕೊಂಡರು. ಒಬ್ಬನು ಅರ್ಧಜೀವಯುಕ್ತನಾಗಿ ಕೈದುಮಾಡಲ್ಪಟ್ಟಿರುವನು. ಇವರು ಆಫೀಸನ್ನು ನಾಶಗೊಳಿಸಿದ್ದು ಮಾತ್ರವಲ್ಲದೆ, ತಮ್ಮ ಕೋವಿಗಳನ್ನು ಮತ್ತೊಮ್ಮೆ ತುಂಬಿಸಿಕೊಂಡು ಒಬ್ಬ ಅಮೇರಿಕದ ಮನುಷ್ಯರಿಗೂ ಗುಂಡುಹಾರಿಸಿದ್ದರು. ಆದರೆ ಅವನು ಗುಂಡಿನ ಏಟಿನಿಂದ ಪಾರಾದನು. ಕೈದುಮಾಡಲ್ಪಟ್ಟವನು ತನ್ನ ಮರಣವಾಙ್ಮೂಲದಲ್ಲಿ ಹೇಳಿದಂತೆ ಆತನ ಹೆಸರು ದಿನೇಶ ಕೃಷ್ಣಾ ಬೋಸ್ ಎಂತಲೂ ಮತ್ತು ಆತನೇ ಬಂಗಾಳದ ಪೋಲೀಸ್ ಇನ್‌ಸ್ಪೆಕ್ಟರ್ ಜನರಲರಾದ ಲೋಮೇನರನ್ನು ಕೊಂದವನೆಂದೂ ತಿಳಿದುಬರುತ್ತದೆ.

---


## WANTED.

For Board Middle School Mudabidri a temporary combined Drill and Drawing Master Salary Rs 35 per month. Applications from candidates holding necessary certificates (Technical teachers in Drawing and Physical Instructors Certificates) should be submitted to the undersigned by the 20th December 1930.

**President,**
Dt Board S Kanara,

## ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಲಿನೊಡನೆಯಾಗಲಿ ಉಪಯೋಗಿಸುವದರಿಂದ ಶರೀರ, ನರ, ಮಾಂಸ ಮತ್ತು ರಕ್ತದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ.

### ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಹೊಟ್ಟೆನೋವಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗಿದ್ದರೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಶಾಂತಿಪಡಿಸುತ್ತದೆ. ಸೀಸೆ 1ಕ್ಕೆ ರೂ 1—0—0

### ಲಕ್ಷ್ಮೀವಿಲಾಸರಸ.

(ಕ್ಷಯಕ್ಕೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಕ್ಷಯ ರೋಗಿಗಳ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ. ಕ್ಷಯಕ್ಕೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ.

ಸೀಸೆ 1ಕ್ಕೆ ರೂ. 1—0—0.

### ಶ್ರೀನಿವಾಸ ತೈಲ.

ಕ್ಷಯ ರೋಗಿಯ ಪ್ರತಿಸಂದುಗಳಿಗೂ, ಗಡ್ಡೆಗೂ ತಿಕ್ಕುವ ಔಷಧ. ಸೀಸೆ 1ಕ್ಕೆ ರೂ. 0—8—0.

"ಬಿಷಗ್ರತ್ನ" ವಾಕ್ಯದ ವೆಂಕಟಾಚಲ ಪಂಡಿತರು,

ಶ್ರೀ ಶೇಷಾಂಗಾಭವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ ಹೆಡ್ಡಾಫೀಸ್, ಶೇಷಾಂಗಾಭವ-ವೈದ್ಯಶಾಲಾ, ಮೈಸೂರು.

ಏಜಂಟರು — ಆತ್ಮಾವರ ಸೋಮಯ್ಯ ಮತ್ತು ಕಂಪೆನಿ, ಡೋಂಗಾ ಕೇರಿ ಮಂಗಳೂರು ಕೆನರಾ ಜಿಲ್ಲಾ.



## ಒಂದೇ ತಾಸಿನಲ್ಲಿ

ನವ ಯೌವನವು ಪಡೆಯಬೇಕೆನ್ನುವ ಪುರುಷರು

### ರಮಣಾ ವಿಲಾಸಿನಿ ವಟಿಕಾ

ವಿಷಯ ಮಲಗುವುದಕ್ಕೆ ಒಂದು ಘಂಟೆಗೆ ಮುಂಚೆ ಒಂದು ಮಾತ್ರೆಯನ್ನು ಸೇವಿಸಿ ಜೇನನ್ನು ಬಿಸಿಯಾದ ಹಾಲು ಕುಡಿದರೆ ಯಥೇಷ್ಟವಾಗಿ ಸ್ತಂಭನವಾಗುವುದು.

16 ಮಾತ್ರೆಗಳಿರುವ ಡಬ್ಬಿ ಕ್ರಯ ರೂ 1—0—0

ಮದನ ಮಂಜರಿ ಫಾರ್ಮಸಿ,
1/94 ಚೀನ ಬಜಾರ್ ಮದರಾಸು

## ಅಕಾಲ ವಾರ್ಧಿಕ್ಯವೇ!

ಇದು ನಮ್ಮ ಭೂಲೋಕ ಅಮೃತವಾದ

### ಮದನಮಂಜರಿ ಮಾತ್ರೆಗಳು

ಸೇವಿಸುವವರನ್ನು ಬಿಟ್ಟು ಪಲಾಯನ ಮಾಡುವುದು ಯಾಕೆ ಕೇಳಬೇಕು? ಇನ್ನು ಉಪಯೋಗಿಸಿ ನವ ಯೌವನವನ್ನು ಪಡೆಯಿರಿ. 1 ಡಬ್ಬಿ ಕ್ರಯ ರೂ 1—0—0

ಒಂದ ರೋಗಗಳನ್ನು ಪರಿಹಾರ ಮಾಡಿಕೊಂಡು ನಿರೋಗಿಗಳಾಗುವುದಕ್ಕೆ ಕ್ರಯವು ಇಲ್ಲದೆ ಉಚಿತವಾಗಿ ಕೊಡುವ

### ವೈದ್ಯ ವಿದ್ಯ

ಎಂಬ ಪುಸ್ತಕವನ್ನು ಓದಿ ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,
1/84 ಚೈನಾ ಬಜಾರು ರೋಡು, ಮದರಾಸು



ತಿಳಿಯದೇ ಧಾತುಕ್ಷಯವಾಗಿ ಕ್ಷೀಣ ಶಕ್ತಿಗಳಾದ ಮನುಷ್ಯರಿಗೆ ಮಧ್ಯ ತಾರುಣ್ಯದಲ್ಲಿಯೇ ನಿಜವಾಗಿ ಸಂಸಾರ ಸುಖವು ದೊರೆಯದೇ ನಿರುತ್ಸಾಹ ನಿರಾಶೆಗಳು ಹುಟ್ಟುತ್ತವೆ. ಇಂಥ ಮನುಷ್ಯರ ಧಾತು ಕ್ಷಯ ದೋಷವು ಹೋಗಿಸಿ, ಪೂರ್ಣ ಪುರುಷತ್ವವನ್ನು ಕೊಡುವಂತಹದ್ದು.

## ವೈದ್ಯರಾಜ ಶ್ರೀ ಕೇಶವಶಾಸ್ತ್ರೀ ವಿರಜಕರ ಇವರ,

ಶಕ್ತಿ ಶಾಂತಿ ವರ್ಧಕ — ಆರೋಗ್ಯ ಕೊಡುವ

# ಅಮೃತಸಿಂಧು.

### ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಸವಿ ಹಾಗು ತೀವ್ರ ಗುಣಕೊಡುವ ಔಷಧವು ಮಾಡಲಾಗಿದೆ.

ಇದರ ಉಪಯೋಗದಿಂದ ತಪ್ಪಿಗಿನ ಚರ್ಯೆ, ನಿಃತ್ರಾಣ ನಿಸ್ತೇಜ ವನಲ್ಲು ಪೌರುಷತ್ವಹೀನ ದೇಹ ಅನಿಶ್ಚಿತ ಸ್ವಭಾವ, ಸ್ತ್ರೀಸಹವಾಸವನ್ನು ಹೇಡಿತನವನ್ನು, ಅಂಜುಬುರುಕತನ, ಅಕಾಲಮೃತ್ಯು, ಸ್ವಪ್ನಾವಸ್ಥೆ, ವೀರ್ಯದ ನೀರ ಆಲಸ್ಯ ಕಣ್ಣು ಕತ್ತಲೆ ಗಳಾಗಿಯೋಗ ಉದಾಹರ ಇಂದ್ರಿಯದ ಉರಿ, ಪಿತ್ತವಿಕಾರ, ಅಗ್ನಿಮಾಂದ್ಯ, ನಿದ್ರಾನಾಶ, ಮಲಾವರೋಧ, ಬೆನ್ನು ನೋಯು ನೋವು, ಟೊಂಕಶೂಲಿ, ಎಲ್ಲ ತರದ ಮೂತ್ರರೋಗ, ಮೊದಲಾದ ಎಲ್ಲಾ ಬೇನೆಗಳು ನಾಶವಾಗಿ ರಸ ರಕ್ತ, ಅಸ್ಥಿ ಮಜ್ಜಾ ವೀರ್ಯ ಮೊದಲಾದ ಏಳು ಧಾತುಗಳ ವೃದ್ಧಿಯಾಗಿ ಇಂದ್ರಿಯ ದಸ್ತ್ರ ಅಶಕ್ತತೆಯು ನಷ್ಟವಾಗಿ ದೇಹದಲ್ಲಿ ಶಕ್ತಿಯು ಹುಟ್ಟುತ್ತದೆ. ಇದರಿಂದ ನಿಜವಾದ ಸಂಸಾರ ಸುಖವು ಸಿಕ್ಕುತ್ತದೆ. ಹೆಂಗಸರ ಮುಟ್ಟಿನ ಶೂಲೆ ಕೆಂಪು ಹಾಗೂ ಬಿಳಿ ಪ್ರದರ ಮೊದಲಾದ ಸಂತತಿಗೆ ಬಾಧಕವಾದ ಗರ್ಭಾಶಯದ ಎಲ್ಲ ವಿಕಾರಗಳು ಹೋಗಿ ಪ್ರಕೃತಿಯು ಸುಧಾರಿಸುತ್ತದೆ. ಈ ಅಮೃತಸಿಂಧುವನ್ನು ನಸುಕಿನಲ್ಲಿ ಅರ್ಧ ತೊಲೆ ಮತ್ತು ಸಂಜೆಗೆ ಅರ್ಧ ತೊಲೆ ತಿಳಿಯ್ಯಂದ ಮೇಲೆ ಆಕಳ ಅಥವಾ ಎಮ್ಮೆಯ ಹಾಲನ್ನು ೧೦ರಿಂದ ೨೦ ತೊಲೆಯ ವರೆಗೆ ತೆಕ್ಕೊಳ್ಳಬೇಕು. ಹತ್ತು ದಿನಗಳ ವರೆಗೆ ಸಾಕಾಗುವ ೧ ಬಾಟಲಿಗೆ ರೂ. ೧—೪—೦, ೪ ಬಾಟಲಿಗೆ ರೂ. ೪, ೧೨ ಬಾಟಲಿಗೆ ರೂ. ೧೧, ಹಾಗೆ ೧ ಬಾಟ್ಲಿಯಲ್ಲಿಟಿ ಅಂಚೆ ಹಾಗು ಪಟ್ಟಿಗಳ ವೆಚ್ಚಗಳು ಬೇರೆ

ಅಮೃತಸಿಂಧು ಡಿಪೋ,
5C Division ಶಿ ಪ್ವಾ ಜಿ ಜಿಲ್ಲಾ, ಬೆಳಗಾಂವಿ.



## ಶ್ರೀ ರಾಧಾಕಾಂತ್ ಪ್ರೆಸ್

### ರಥಬೀದಿ, ಮಂಗಳೂರು

ಕನ್ನಡ ಮತ್ತು ಇಂಗ್ಲೀಷಿನಿಂದ ಎಲ್ಲಾ ತರದ ಪ್ರಿಂಟಿಂಗ್ ಕೆಲಸಗಳನ್ನು ಸಾಜಾಗಿ ಮಾಡಿಕೊಡಲ್ಪಡುತ್ತದೆ.



### ಕೇವಲ ಕುಸುರಿ ಕ್ರಯ.

ಕ್ರಯ ರೂ 1—14—0 ಮಾತ್ರ. ನಿಕ್ಕಲ್ ಕೇಸಿನ ಪ್ಲೈನ್ ಕೈಗಡಿಯಾರ, ಬಹು ಸವಯ ಬಾಳ, ಒಳ್ಳೇ ಸಮಯ ತೋರಿಸುವದು. ಸಿಲ್ವರ್ ಕೇಸಿನದಕ್ಕೆ ರೂ 3—8—0 ನಂಬ್ರ 2 ರೂ 4—0—0 ನಂಬ್ರ 3 ರೂ 6—0—0. (ಮೂರು ವರುಷದ ಗೆರೆಂಟಿ ಇದೆ)

ಅಂಚೆವೆಚ್ಚ ಅಣೆ ೬

ಇಂಗ್ಲೀಷಿನಿಂದ ಕಾಗದ ಬರೆಯಿರಿ.

R. C. MUKERJEE,
122 Hari Paul Lane
CALCUTTA.



ಮಾರಾಟಕ್ಕಿವೆ — ಮಾರಾಟಕ್ಕಿವೆ!!

ಕಾಫಿ ಪ್ಲಾಂಟರರಿಗೂ, ತೋಟದವರಿಗೂ ಬೇಕಾಗುವಂತಹ

### ಚಕ್ರ ರೋಲ್‌ಗಳು

ಮಾರು ಸ್ಟಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ

ಮಿ: ತಗೆದುಕೊಳ್ಳುವವರಿಗೆ ರಿಯಾಯತಿ ದರವಿದೆ.

ಇದಲ್ಲದೆ ಬೇಕಾದಂತೆ ಹಳೇ ಮತ್ತು ಹೊಸ ಪುಸ್ತಕಗಳಿಗೆ ಅಂದವಾದ ಬುಕ್ ಬ್ಯಾಂಡಿಂಗ್ ಕೆಲಸ ಕಡಿಮೆ ದರದಲ್ಲಿ ಮಾಡಲ್ಪಡುತ್ತದೆ.

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.



ಸುಲಭ ಕ್ರಯ! — ಧಾರಾಳ ಫಲ!

## ದಂತಧಾವನ ಚೂರ್ಣ

## ಟೂತ್ ಪೌಡರ್.

ಎಲ್ಲಾ ವಿಧದ ಹಲ್ಲುನೋವುಗಳನ್ನೂ, ಹಲ್ಲುಗಳ ನ್ಯೂನಯೂನಗಳನ್ನು ವಾಸಿಗೊಳಿಸುವುದು ಹಲ್ಲುಗಳ ಎಡೆಯಿಂದ ಒಸರುವ ರಕ್ತ, ಕೀವು ಮೊದಲಾದವುಗಳನ್ನು ನಿಲ್ಲಿಸುವುದು. ಬಾಯಿಯ ದುರ್ಗಂಧವನ್ನೂ ಹಲ್ಲುಗಳ ಇನ್ನಿತರ ದೋಷಗಳನ್ನೂ ಪರಿಹಾರ ಮಾಡಿ ಯಥಾವಾಗಲೂ ಹಲ್ಲುಗಳ ಶುಚಿಯಾಗಿದ್ದು ಸುವಾಸನೆಯಿಂದಿರುವಂತೆಯೂ ಅತ್ಯುಪಯೋಗಕರವಾಗಿರುವದು. ಪೆಕೆಟು ೧ಕ್ಕೆ ೦—೩—೦. ೧ ಡಜನ ಪೆಕೆಟುಗಳಿಗೆ ೧—೪. ಇವುಗಳಲ್ಲದೆ ವಿಶ್ವಾಸದ ಉತ್ಕೃಷ್ಟವಾದ ಆಯುರ್ವೇದ ಔಷಧಗಳೂ ಮಾರಾಟಕ್ಕೆ ಸಿದ್ಧವಾಗಿದೆ. ಆಸವ ಅರಿಷ್ಟ, ಭಸ್ಮ ಚೂರ್ಣ ಕಷಾಯ, ಲೇಹ ತೈಲ ಮೊದಲಾದವುಗಳ ನಮ್ಮಲ್ಲಿ ಅಗಾಗ್ಗೆ ಹೊಸತಾಗಿ ತಯಾರಿಸಲ್ಪಡುವವು. ದೂರದವರು ಮತ್ತು ಹೊರದೇಶದವರು ಪತ್ರಮೂಲಕ ತಮ್ಮ ರೋಗಸ್ಥಿತಿಗಳನ್ನು ತಿಳಿಸಿದಲ್ಲಿ ಯುಕ್ತವಾದ ಔಷಧಗಳನ್ನು ಟಪ್ಪಾಲು ದ್ವಾರಾ ಕಳುಹಿಸಲಾಗುವುದು. ಚಿಕಿತ್ಸೆ ಮಾಡಿಸಬೇಕೆಂತ ಚಿಕಿತ್ಸೆ ಅನುಪಾನಗಳ ಕುರಿತು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಹೆಚ್ಚಿನ ಸಂಗತಿಗಳನ್ನು ತಿಳಿಯಬೇಕಾದವರಿಗೆ ಮಲಯಾಳದಲ್ಲಿ ಮತ್ತು ಕನ್ನಡದಲ್ಲಿ ಔಷಧ ಪಟ್ಟಿ ಇನಾಂ.

ಪಿ. ಕರುಣಾಕರ ವೈದ್ಯರ್,
ಆರೋಗ್ಯಾಮೃತ ಔಷಧಾಲಯ
ಕ್ಯಾಂಪ ಬಜಾರ್ ಕಣ್ಣಾನೂರು.

P. KARUNAKARAN VYDIAR.
Arogiamritha Aushadhalaya
Camp Bazaar, Cannanore.

(೧೪ನೇ ಪುಟದಿಂದ ಮುಂದರಿಸಿಯದೆ)

ಕೂಡಿತಂತೆ! ನವಂಬ್ರ ತಾರೀಕು ೨೯ರಲ್ಲಿ ಕೆಲವು ಕೈದಿಗಳು ತಮ್ಮ ಒಡನಾಡಿಗಳೆಲ್ಲರಿಗೂ ಜೈಲಾಧಿಕಾರಿಯು ಹೇಳಿದಂತೆ ಕೇಳಬಾರದೆಂದು ದುಬೋಧನೆ ಕೊಟ್ಟರಂತೆ ಅಂದಿನ ರಾತ್ರಿ "ಗಾಂಧಿಕೀ ಜೈ, ಜವಾಹೀರಲಾಲ್‌ಕೀ ಜೈ" ಎಂಬುದಾಗಿ ಜಯಕಾರ ಮಾಡಿ, ಕೈದಿಗಳು ಅಧಿಕಾರಿಗಳನ್ನು ತುಂಬಾ ಕಷ್ಟಕ್ಕೆ ಈಡುಮಾಡಿದರೆಂದೂ ತಿಳಿಯಲಾಗುತ್ತದೆ.

ಆದರೆ ತಪ್ಪಿತಸ್ಥರು, ತಾವು ತಪ್ಪುಗಾರರಲ್ಲವೆಂದು ದೃಢಪಡಿಸುವ ಸ್ಟೇಟುಮೆಂಟುಗಳನ್ನು ಹಾಜರುಮಾಡಲಿಕ್ಕಿರುವರೆಂದು ಹೇಳಿರುವರು. ಮತ್ತು ಅಪರಾಧಿತರು ಅಪೇಕ್ಷಿಸಿದಂತೆ ಜೈಲು ಕ್ರಮಗಳ ಒಂದೊಂದು ಪ್ರತಿಯನ್ನು ಅವರಿಗೆ ಕೊಡುವಂತೆ ಕೋರ್ಟಿನವರ ಅಪ್ಪಣೆಯಾಗಿರುವದೆಂದು ತಿಳಿದುಬರುತ್ತದೆ ಮೊಕದ್ದಮೆಯು ತೀರ್ಮಾನ ಹೊಂದಲಿಲ್ಲ

ತಾರೀಕು ೬.

**ಅಹಮ್ಮದಾಬಾದ**

ಸೂರತ್ತಿಗೆ ಪ್ರಯಾಣ ಬೆಳೆಸಬೇಕೆಂದಿದ್ದ ಮಿ| ವಲ್ಲಭ್ಭಾಯಿಯವರು, ಅವರ ಆಪ್ತರಾದ ಡಾ| ಕಾನುಗಾರ ಒಂಗ್ಲೆಯಲ್ಲಿ ಕ್ರಿಮಿನಲ್ ಲೋ ಎಮೆಂಡ್‌ಮೆಂಟ್ ಆಕ್ಟಿನ ೧೭(೧) (ಎ) ಪ್ರಕರಣದ ಮೇರೆಗೆ ಮುಂಬಾಯಿಯಲ್ಲಿ ಒಂದು ಭಾಷಣ ಕೊಟ್ಟುದಕ್ಕಾಗಿ, ದಸ್ತಗಿರಿ ಮಾಡಲ್ಪಟ್ಟು, ಪೋಲೀಸ್ ಸುಪರಿಂಟೆಂಡೆಂಟರು ಅವರನ್ನು ತನ್ನ ಮೋಟಾರಿನಲ್ಲಿರಿಸಿ ಕಂಕಾರಿಯಾ ಸ್ಟೇಷನಿಗೆ ಕರಕೊಂಡು ಹೋಗಿರುವರು.

ಮಿ| ಮಹದೇವ ದೇಸಾಯಿಯವರನ್ನೂ ಕೂಡ ಅದೇ ದಿನ ಕೈದು ಮಾಡಿ ೬ ತಿಂಗಳ ಕಠಿಣ ಶಿಕ್ಷೆ ಮತ್ತು ೩೫೦ ರೂಪಾಯಿಗಳ ಜುಲ್ಮಾನೆಯನ್ನೂ ವಿಧಿಸಿರುವರು. ಇವರ ಮೇಲಿನ ಅಪರಾಧವೆ ಎಂದರೆ—ಕೊಂಗ್ರೆಸ್ ಫಂಡುಗಳಿಗೆ ಹಣಸಹಾಯ ಮಾಡಬೇಕೆಂದು ಜನರನ್ನು ಅಪೇಕ್ಷಿಸಿದ್ದು, ಮತ್ತು ಕಾಂಗ್ರೆಸ್ಸಿನವರ ಸೌಕರ್ಯಕ್ಕಾಗಿ ಮನೆಗಳನ್ನು ಕೊಡುವಂತೆ ಜನತೆಯೊಡನೆ ಬೇಡಿಕೊಂಡದ್ದು. ಹಾಗೂ ಕಾಂಗ್ರೆಸ್ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸಿದುದೇ ಅವರ ಮೇಲಣ ತಪ್ಪಿತವು. ಆ ರ ಮ್ಯಾಜಿಸ್ಟ್ರೇಟರು ಅವರನ್ನು 'ಬಿ' ಕ್ಲಾಸ್ ಬಂದಿಖಾನೆಯಲ್ಲಿರಿಸಿದರೆಂದು ತಿಳಿದುಬರುತ್ತದೆ. ಇವರೊಡನೆ ತನ್ನ ಸಹೋದ್ಯ ಕಾಂಗ್ರೆಸ್ ಬುಲೆಟಿನ್ ಪ್ರಚಾರಪಡಿಸಿದುದಕ್ಕಾಗಿ ಮಿ| ಭಾಸ್ಕರ್ ಬೋಸ್ ಎಂಬವರಿಗೆ ೩ ತಿಂಗಳ ಶಿಕ್ಷೆ ಮತ್ತು ೨೦೦ ರೂಪಾಯಿಗಳ ಜುಲ್ಮಾನೆಯೂ ವಿಧಿಯಾಗಿರುವುದು. ಜುಲ್ಮಾನೆ ಕೊಡಲು ನಿರಾಕರಿಸಿದ್ದಲ್ಲಿ ಒಂದು ತಿಂಗಳ ಅಧಿಕ ಸಜೆಯಂತೆ. ಇವರೂ ಕೂಡ 'ಬಿ' ಕ್ಲಾಸ್ ಜೈಲಲ್ಲಿರಿಸಲ್ಪಟ್ಟಿರುವರು.

ಮಿ| ಮಹದೇವ ದೇಸಾಯಿಯವರನ್ನು ೧೭(೨)ನೇ ಪ್ರಕರಣದ ಮೇರೆಗೆ, ಸರಕಾರದವರಿಂದ ನ್ಯಾಯಬಾಹಿರ ಸಮಿತಿಗಳೆಂದು ಪರಿಗಣಿಸಲ್ಪಟ್ಟ ಸತ್ಯಾಗ್ರಹ ಸಮಿತಿಗಳಿಗೆ ಪ್ರೋತ್ಸಾಹವಿತ್ತರೆಂಬ ವಿಷಯದಲ್ಲಿ ಅವರ ತನಿಖೆ ನಡಸಿ ಮ್ಯಾಜಿಸ್ಟ್ರೇಟರೇ ಒಪ್ಪಲಿಲ್ಲ, ಆದರೆ ಅವರು ಒಂದು ಕರಪತ್ರವನ್ನು ಹೊರಡಿಸಿದರಂತೆ! ಇದು ಮಾತ್ರ ಮ್ಯಾಜಿಸ್ಟ್ರೇಟರ ಅಭಿಪ್ರಾಯದಂತೆ, ಹೆಚ್ಚಿನ ಅಪಾಯಕರದ್ದಾಗಿದ್ದಿತೆಂದು ತಿಳಿದುಬರುತ್ತದೆ

ಅಹಮ್ಮದಾಬಾದದಲ್ಲಿ ಲಾಠಿ ಚಾರ್ಜುಗಳೂ ನಡಸಲ್ಪಟ್ಟವೆಂದು ತಿಳಿದುಬರುತ್ತದೆ. ತಾ ೬ನೇ ದಿನ ಕಾಂಗ್ರೆಸ್ ಪಕ್ಷದವರು, ಪಟ್ಟಣದ ಮುಖ್ಯ ವ್ಯಾಪಾರ ಸ್ಥಳವಾದ 'ಮಾನೆಕ್ ಚೌಕ್' ಎಂಬಲ್ಲಿ, ಸ್ವದೇಶೀ ಉಪ್ಪನ್ನು ಲೋರಿಗಳಲ್ಲಿ ತಂದು ಬಹಿರಂಗವಾಗಿ ಮಾರಾಟಮಾಡಬೇಕೆಂದು, ಎಲ್ಲಾ ಸನ್ನಾಹಗಳನ್ನೂ ಸಿದ್ಧಗೊಳಿಸಿದರು. ಆದರೆ, ಸ್ವದೇಶೀ ಉಪ್ಪನ್ನು ತುಂಬಿಸಿದ ಲೋರಿ ಮಾತ್ರ ಯಾವ ಭಾಗದಿಂದ ಮಾರಾಟದ ಸ್ಥಳಕ್ಕೆ ಬಂದು ತಲ್ಪುವದೆಂಬ ಗುಟ್ಟನ್ನು ಮಾತ್ರ ಜನರು ಹೊರಗೆಡಹಲಿಲ್ಲ, ಆದರೂ ಪೋಲೀಸರು, ಲಾಠಿ ಹಸ್ತರಾಗಿ ಸತ್ಯಾಗ್ರಹಿಗಳನ್ನು ಪ್ರತಿಬಂಧಿಸಲು ತಯ್ಯಾರಿಯಾಗಿ ಟೊಂಕ ಕಟ್ಟಿದ್ದರು. ಅಂದಿನ ಮುಂಜಾನೆ ಸುಮಾರು ೮-೩೦ಕ್ಕೆ ಸರಿಯಾಗಿ, ೨-೩ ಹುಡುಗರು ಒಂದು ಖಾಲಿಯಾದ ಲೋರಿಯನ್ನು ಮಾನೆಕ್ ಚೌಕಿಗೆ ಎಳತಂದರು. ಕಾಯ್ದುಕೊಂಡಿದ್ದ ಪೋಲೀಸರು ಹಟಾತ್ತಾಗಿ ಬಂದು ಸದರಿ ಲೋರಿಯನ್ನು ಸ್ವಾಧೀನಪಡಿಸಿದರು. ಆ ಕೂಡಲೇ ಸಹಜವಾಗಿಯೂ, ಸ್ವದೇಶಿ ಉಪ್ಪಿನಿಂದ ತುಂಬಲ್ಪಟ್ಟ ಇನ್ನೊಂದು ಲೋರಿಯು ಆ ಸ್ಥಳಕ್ಕೆ ಬಂದು ಮುಟ್ಟಿತು. ಅದೂ ಕೂಡ ಪೋಲೀಸರ ಪಾಲಾಯಿತು; ಈ ವೇಳೆಯಲ್ಲಿ ಚಿಕ್ಕದೊಂದು ಗಲಭೆ ನಡೆದು, ಪೋಲೀಸರು ಲಾಠಿಗಳನ್ನು ಉಪಯೋಗಿಸಿದರು. ಸ್ವಯಂಸೇವಕರ ತಂಡಗಳನ್ನು ಚದರಿಸಲಾಯಿತು. ೧೫ ಮಂದಿ ಸ್ವಯಂಸೇವಕರ ದಸ್ತಗಿರಿಯೂ ಆಯಿತು. ಅಷ್ಟರಲ್ಲಿ ಇನ್ನೊಂದು ಸ್ವದೇಶಿ ಉಪ್ಪಿನ ಲೋರಿಯು ಮಾನೆಕ್ ಚೌಕಿಗೆ ಬಂದಿತು. ಅದನ್ನೂ ಪೋಲೀಸರು ವಶಪಡಿಸಿ, ಮರಳಿದರು. ಆ ಮೇಲೆ ಯಾರೋ ಪುಡಾರಿಗಳು ಗುಂಪು ಸೇರಿ ಒಬ್ಬ ಪೋಲೀಸ್ ಸಾರ್ಜಂಟರಿಗೆ ಕಲ್ಲೆಸೆದುದಕ್ಕಾಗಿ, ಪೋಲೀಸರ ಲಾಠಿಗಳಿಗೆ ಇನ್ನೊಮ್ಮೆ ಕೆಲಸ ಕೊಡಬೇಕಾಯಿತು. ಪರಿಣಾಮವಾಗಿ, ಅನೇಕರು ಜಖಂಪಟ್ಟಿರುವರು.

**ಮುಂಬಾಯಿಯಲ್ಲಿ.**

ಮೊನ್ನೆ ತಾನೇ ನಡೆದ ಲಾಟಿಗಳ ಲೂಟಿಯನ್ನು ಪ್ರತಿಬಂಧಿಸ ಹರತಾಳಗಳು ಆಚರಿಸಲ್ಪಟ್ಟವು ಆ ದಿನ ಎಲ್ಲಾ ವ್ಯಾಪಾರ ವಹಿವಾಟುಗಳು ಮನ್ನಾಪಡಿಸಲ್ಪಟ್ಟಿದ್ದವು. ತಾ ೪ನೇ ದಿನ ಎಸ್‌ಪ್ಲನೇಡ ಮೈದಾನಿನಲ್ಲಿ ರಾಷ್ಟ್ರಧ್ವಜಾರೋಹಣ ಹೇತುವಿನಿಂದ ಕೈದಿಗೊಳಗಾದ ಶ್ರೀಮತಿ ಗಂಗಾಬೆನ್ ಪಟೇಲರು ಮತ್ತು ಇತರ ಕೆಲಮಂದಿ ಸಮರ ಸಂಸ್ಥೆಯ ಸದಸ್ಯರನ್ನು ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ತನಿಖೆ ನಡಿಸಿದರು ಪ್ರತಿಯೊಬ್ಬರಿಗೆ ಆರಾರು ತಿಂಗಳ ಸಾದಾ ಸಜೆಯೂ, ರೂಪಾಯಿ ೨೫೦ರಂತೆ ಜುಲ್ಮಾನೆಯೂ ವಿಧಿಸೋಣಾಗಿರುವದು. ಜುಲ್ಮಾನೆ ಕೊಡಲು ತಪ್ಪಿದ್ದಲ್ಲಿ ೬ ವಾರಗಳ ಅಧಿಕ ಶಿಕ್ಷೆ. ಶಿಕ್ಷೆ ವಿಧಿಸಿದ್ದಕ್ಕಾಗಿ, ಅಪರಾಧಿತರು ಮ್ಯಾಜಿಸ್ಟ್ರೇಟರಿಗೆ ತುಂಬಾ ಉಪಕಾರಸ್ಮರಣೆ ಹೇಳಿ ಜೈಲನ್ನು ಪ್ರವೇಶಿಸಿದರೆಂದು ತಿಳಿದುಬರುತ್ತದೆ

ತಾರೀಕು ೭

**ಮುಂಬಾಯಿಯಲ್ಲಿ**

ಮಾನ್ಯ ವಲ್ಲಭ್ಭಾಯಿಯವರು 'ಸೂರ್ಜ ವಲ್ಲಭದಾಸ್' ಖಾದಿ ಭಂಡಾರವನ್ನು ತೆರೆಯುವ ಶುಭಮೂರ್ತದಲ್ಲಿ ಭಾಷಣವಿತ್ತರೆಂಬ ಆರೋಪದ ಮೇಲೆ ಅವರ ದಸ್ತಗಿರಿಯಾಗಿರುವದಷ್ಟೆ! ಅವರನ್ನು ಮುಂಬಾಯಿ ನಗರದ ಆರ್ಥರ್‌ರೋಡ್ ಜೈಲಿಗೆ ಕರದೊಯ್ದು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ತನಿಖೆ ನಡೆಸಿದರು. ಮ್ಯಾಜಿಸ್ಟ್ರೇಟರನ್ನು ಆ ದಿನ ಸ್ಪೆಶಲಾಗಿ ಜೈಲಿಗೆನೇ ಕರತಂದಿದ್ದರು. ವಿಚಾರಣೆಯ ಪರಿಣಾಮವಾಗಿ ೧೦ ದಿವಸಗಳ ಸಜಾ ವಿಧಿಸೋಣಾಯಿತು ಬಂದಿಖಾನೆಯಲ್ಲಿ ಜೈಲ್ ಡಾಕ್ಟರರು ಮಿ| ವಲ್ಲಭ್ಭಾಯಿಯವರನ್ನು ಪರೀಕ್ಷೆ ಮಾಡಿ, ಜ್ವರ, ಹಲ್ಲುನೋವು ವಗ್ಯೆರೆಗಳಿಂದ ಇನ್ನೂ ಪೂರ್ಣ ಗುಣಹೊಂದಲಿಲ್ಲವೆಂದ 'ಪ್ರಿಸ್ಕ್ರಿಪ್ಶನ್' ಕೊಟ್ಟಿರುವರು

**ಅಹಮ್ಮದಾಬಾದದಲ್ಲಿ.**

ವಿದೇಶೀ ಅಂಗಡಿಯ ಬಾಗಲುಗಳಲ್ಲಿ ೨೧ ಪುರುಷ ಸ್ವಯಂಸೇವಕರೂ, ೮ ನಾರೀ ಸ್ವಯಂಸೇವಕರೂ Hunger strike ಮಾಡಿದರು. ಎಲ್ಲಾ ಸ್ವಯಂಸೇವಕರು ಅಂಗಡಿಯ ಮುಂದುಗಡೆಯಲ್ಲಿ ರಾಷ್ಟ್ರಗೀತೆಗಳನ್ನು ಹಾಡುತ್ತ ತಕ್ಲಿಗಳನ್ನು ತಿರುಗಿಸುತ್ತ ಉಲ್ಲಾಸದಾಯಕರಾಗಿ ವಿದೇಶೀ ಬಟ್ಟೆಯ ಬಹಿಷ್ಕಾರವನ್ನು ಸಾರುತ್ತಿದ್ದರು ಅಂಗಡಿಯ ಸುರಕ್ಷಣೆ ಬಗ್ಗೆ ಹಾಗೂ ಗಲಭೆಯುಂಟಾಗದಂತೆ ನೋಡಿಕೊಳ್ಳುವುದಕ್ಕಾಗಿ ಹೆಚ್ಚು ಮಂದಿ ಪೋಲೀಸರು ಅಂಗಡಿಬಳಿಯಲ್ಲಿ ಕಾಯುತ್ತಿದ್ದರು ಆದರೂ ಸತ್ಯಾಗ್ರಹಿಗಳು ಏನೊಂದು ಗಲಭೆ ವಗ್ಯೆರೆ ನಡೆಸದೆ ಪಹರೆಯನ್ನು ಯೋಗ್ಯರೀತಿಯಿಂದ ಮುಂದೊತ್ತುತ್ತಿದ್ದರು ಅಷ್ಟರಲ್ಲೇ ಘಂಟೆ ೧೨॥ ಆಯಿತು ಸೂರ್ಯನು ನಡುನೆತ್ತಿಯ ಮೇಲೆ ಬಂದರೂ ಸತ್ಯಾಗ್ರಹಿಗಳು ಇಷ್ಟಲ್ಲಿಂದ ಚದರಲಿಲ್ಲ ಘಂಟೆ ೧॥ಗೆ ಸರಿಯಾಗಿ ಪೋಲೀಸು ಸುಪರಿಂಟೆಂಡೆಂಟರು ಕೆಲವು ಸಬ್ ಇನ್ಸ್‌ಪೆಕ್ಟರರನ್ನು ಕರಕೊಂಡು ಆ ಸ್ಥಳಕ್ಕೆ ಬಂದು, ಪಹರಾನ್ನಿರತರಾದ ೨೫ ಸತ್ಯಾಗ್ರಹಿಗಳನ್ನು ದಸ್ತಗಿರಿ ಮಾಡಿದರಂತೆ! ಅವರನ್ನು 'ಲೋಕಪ್'ನಲ್ಲಿರಿಸುವದರ ನೊದಲು ಇನ್ನೊಂದು ತಂಡವು ಕೈದುಮಾಡಲ್ಪಟ್ಟವರ ಸ್ಥಾನವನ್ನು ಪ್ರವೇಶಿಸಿತು

**ಕೊಯಮುತ್ತೂರಿನಲ್ಲಿ**

'ಅಂಬಾಲಾ' ಜೈಲಿನಿಂದ ದಕ್ಷಿಣಕ್ಕೆ ವರ್ಗಾಯಿಸಲ್ಪಟ್ಟ ಮಿ| ವಿ. ಜೆ. ಪಟೇಲರು ಕೊಯಮುತ್ತೂರು ಪಟ್ಟಣದ 'ಯುರೋಪಿಯನ್ ವಾರ್ಡ್' ಬಂದಿಖಾನೆಯಲ್ಲಿರಿಸಲಾಗಿರುವರೆಂದು ತಿಳಿದುಬರುತ್ತದೆ ಇವರ ಕೂಡೆ, ಪಂಜಾಬು ಸರಕಾರವು ಕಳುಹಿಕೊಟ್ಟ ಡಾಕ್ಟರರು, ಮಿ| ಪಟೇಲರಿಗೆ ಬೇಕಾದ ಆರೋಗ್ಯ ಕ್ರಮಗಳನ್ನು ಸೂಚಿಸಿ ಊರಿಗೆ ತೆರಳುವರೆಂದು ತಿಳಿಯಲಾಗುತ್ತದೆ ಮಾನ್ಯ ಪಟೇಲರು ಜೈಲಾಧಿಕಾರಿಗಳಿಂದ ಬಹಳವಾಗಿ ಸನ್ಮಾನಿಸಲ್ಪಟ್ಟರು. ಅವರ ಸೌಕರ್ಯಕ್ಕೆ ಬೇಕಾದ ಎಲ್ಲಾ ಅನುಕೂಲತೆಗಳು ಒದಗಿಸಲ್ಪಟ್ಟಿರುವವು.

**ಬೆಲ್ಗಾಮ್.**

ಕಳೆದ ಶುಕ್ರವಾರ ಕರ್ನಾಟಕ ಪ್ರಾಂತ್ಯದ ಕಾಂಗ್ರೆಸ್ ಸಮಿತಿಯ ಸದಸ್ಯರೆಂಬ ತಕ್ಸೀರಿನ ಮೇರೆಗೆ ದಸ್ತಗಿರಿ ಮಾಡಲ್ಪಟ್ಟ ಮಿ| ಗಂಗಾಧರರಾವ್ ದೇಶಪಾಂಡೆಯವರನ್ನು ವಿಚಾರಣೆಗಾಗಿ ಬೆಳಗ್ಗಾಮಕ್ಕೆ ತಂದಿರುವರೆಂದು ತಿಳಿದುಬರುತ್ತದೆ ಅವರನ್ನು ಪ್ರಕೃತ ಜಾಮೀನಿನ ಮೇಲೆ ಬಿಟ್ಟಿರುವರಂತೆ!

ತಾರೀಕು ೮.

**ಮುಂಬಾಯಿಯಲ್ಲಿ.**

ಒಕ್ಟೋಬರ ೨೬ಕ್ಕೆ ನಡೆದ ಪೋಲೀಸು ಅತ್ಯಾಚಾರಗಳು, ನಗರದ ವೀರಮಹಿಳೆಯರನೇಕರನ್ನು ಅಲ್ಲಸಲ್ಲದ ರೀತಿಯಿಂದ ಅವಮಾನಿಸಿದುದಕ್ಕಾಗಿ, ಪೋಲೀಸ್ ಅಧಿಕಾರಿಗಳ ಮೇಲೆ ಖಟ್ಲೆ ನಡೆದಿರುವದಷ್ಟೆ! ಈ ವಿಷಯದಲ್ಲಿ ಸ್ತ್ರೀಜನತೆಯ ಪರವಾಗಿ ಹಲವರು ಹಲವು ರೀತಿಯಿಂದ ಸರಕಾರದೊಡನೆ ವಾದಗಳನ್ನು ನಡೆಸುತ್ತಿರುವರು. ಈ ದಿನ ಪೋಲೀಸರಿಂದ ಅವಮಾನ ಹೊಂದಲ್ಪಟ್ಟ ಓರ್ವ ನಾರೀ ಸತ್ಯಾಗ್ರಹಿಯೊಬ್ಬಳು ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ಒಬ್ಬ ಪೋಲೀಸ್ ಸಾರ್ಜಂಟರ ಮೇಲೆ ದಾವಾ ನಡಿಸಿರುವಳು ಆಕೆಯ ಹೆಸರು—ಶ್ರೀಮತಿ ಗುಲಾಬ್ಬಾ ಪಿ. ಪಾರ್ಕರ್ ಮತ್ತು ಪ್ರಾಯ ೧೯ ವರ್ಷ ಮಾತ್ರ, ತೀರ ಚಿಕ್ಕವಳು, ಹಿಂದೂ ಮತಕ್ಕೆ ಸೇರಿದವಳು ಈಕೆಯನ್ನು ಮೇಲೆ ಹೇಳಲ್ಪಟ್ಟ ಸಾರ್ಜಂಟರು ಅವಳ ಹಿರಿಯರಿಂದ ತಪ್ಪಿಸಿ (Kidnapping) ಅನ್ಯಾಯವಾಗಿ ಬಂಧನದಲ್ಲಿರಿಸಿರುವರೆಂದು ಸಾರ್ಜಂಟರ ಮೇಲೆ ಖಟ್ಲೆ ಸಾರ್ಜಂಟರ ಹೆಸರನ್ನು ಗೊತ್ತುಹಚ್ಚುವದಕ್ಕಾಗಿ ಮ್ಯಾಜಿಸ್ಟ್ರೇಟರು ಮೊಕದ್ದಮೆಯ ಎಲ್ಲಾ ರಿಕಾರ್ಡುಗಳನ್ನು ಪೋಲೀಸ್ ಕಮಿಶನರಿಗೆ ಕಳುಹಿಕೊಟ್ಟಿರುವರಂತೆ

**ಲಾಹೋರಿನಲ್ಲಿ**

ಕ್ರಿಶ್ಚನ್ ವಿಶ್ವವಿದ್ಯಾನಿಳಯದಲ್ಲಿ ಬಿ. ಎ ತರಗತಿಯಲ್ಲಿ ಓದುತ್ತಿದ್ದ ಶ್ರೀಮತಿ ಯಸ್ ರೂಕ್ಕಿ ಎಂಬವರು ಕಾಲಾಧಿಕಾರಿಗಳು ಪಿಕೆಟ್ ಮಾಡಬಾರದೆಂದು ಕೇಳಿಕೊಂಡ ವಾಗ್ದಾನವನ್ನು ಉಲ್ಲಂಘಿಸಿದುದರಿಂದ ವಿದ್ಯಾಲಯದಿಂದ ಹೊರತಳ್ಳಲ್ಪಟ್ಟಿರುವರೆಂದು ತಿಳಿದುಬರುತ್ತದೆ

ಮುಂಬಾಯಿಯ ರೆವಿನ್ಯೂ ಮೆಂಬರರಾದ ಮಿ| ಡಬ್ಲ್ಯು. ಎಚ್ ಪಡ್ಸನ್ನರವರು ಕರನಿರಾಕರಣೆಯ ಪ್ರಾಮುಖ್ಯ ಪ್ರಾಂತ್ಯಗಳಾದ ಬಾಡೋಲಿ, ಸೂರತ್, ಬೋರ್ಸಾದ, ಜಲಾಲಪುರ, ಆನಂದ್ ಮೊದಲಾದ ದೇಶಗಳನ್ನು ಸಂದರ್ಶಿಸಿ, ಜನರ ಕಷ್ಟ ಪರಂಪರೆಗಳನ್ನು ಚೆನ್ನಾಗಿ ಪರ್ಯಾಲೋಚಿಸಲಿಕ್ಕಿರುವರೆಂದು ವರ್ತಮಾನವಿದೆ.

**ಕಲ್ಕತ್ತೆ.**

ಪಂಡಿತ ಮೋತೀಲಾಲ್ಜಿಯವರ ಅನಾರೋಗ್ಯದ ಕುರಿತು, ಸವರಿಯವರನ್ನು ಚಿಕಿತ್ಸೆಗೊಳಿಸುತ್ತಿರುವ ಡಾಕ್ಟರರು ಈ ಕೆಳಗಿನ ವರ್ತಮಾನವನ್ನು ಪ್ರಚಾರಪಡಿಸಿರುವರು.

"ಪಂಡಿತಜೀಯವರ ಆರೋಗ್ಯದಲ್ಲಿ ಗುಣಾಂಶವು ತೋರಿಬರುವುದಿಲ್ಲ ತಾ ೮ನೇ ರಾತ್ರಿಯನ್ನು ವಿಶ್ರಾಂತಿ ಇಲ್ಲದೆ ಕಳೆದರು ಅಂದಿನ ಹಗಲಿನಲ್ಲಿ, ಜ್ವರ ಮೈ ಉಷ್ಣವು ೧೦೦.೬ ಡಿಗ್ರಿಗಳಷ್ಟು ಇದ್ದಿತು. ರಾತ್ರೆಯು ಸುಖವಾಗಿ ಕಳೆಯುವಂತೆ ಪಂಡಿತಜೀಯವರಿಗೆ ಬೇಕಾದ ಅನುಕೂಲತೆಗಳು ಏರ್ಪಟ್ಟಿರುವವು ಆತುರ ಹೊಂದಬೇಕಾದ ಅವಶ್ಯಕತೆ ಇರುವುದಿಲ್ಲ"

**ನವಾಢಿಲ್ಲಿಯಲ್ಲಿ.**

ಪೋಲೀಸರು ಮೂವರನ್ನು ಗುಮಾನೆಯ ಮೇಲೆ ಕೈದು ಮಾಡಿ, ಅವರ ಕೈಯಿಂದ ತುಂಬಲ್ಪಟ್ಟ ಮೂರು ಪಿಸ್ತೂಲುಗಳನ್ನೂ, ಖಾಕಿ ಯುನಿಫೋರ್ಮುಗಳನ್ನೂ ಸ್ವಾಧೀನಪಡಿಸಿರುವರೆಂದು ತಿಳಿದುಬರುತ್ತದೆ.

ಮಾನ್ಯ ವಲ್ಲಭ್ಭಾಯಿ ಪಟೇಲರ ದಸ್ತಗಿರಿ ಮತ್ತು ಶಿಕ್ಷೆಯನ್ನು ವಿರೋಧಿಸಿ, ಮುಂಬಾಯಿ, ಪೇಶಾವರ, ಲಕ್ನೋ ಮೊದಲಾದ ಅನೇಕ ಊರುಗಳು ಹರತಾಳವನ್ನು ಆಚರಿಸಿದವು. ನಾಗಪುರದಲ್ಲಿ ನಾರೀ ಸಮರ ಸಂಸ್ಥೆಯವರು ದೊಡ್ಡದೊಂದು ಮೆರವಣಿಗೆಯನ್ನು ಹೊರಡಿಸಿ, ಪಟ್ಟಣದ ಬೀದಿಬೀದಿಗಳಲ್ಲಿ ರಾಷ್ಟ್ರಗೀತೆಗಳನ್ನು ಹಾಡುತ್ತ, ಕೊಂಗ್ರೆಸ್ಸಿಗೆ ಸಹಾಯಮಾಡಬೇಕೆಂದು ಜನತೆಯನ್ನು ಬೇಡಿಕೊಂಡರು. ಸಂರತದಲ್ಲಿ ಶ್ರೀಮತಿ ಲೀಲಾವತಿ ಮುನ್ಶಿ ಎಂಬವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಹೃದಯಂಗಮವಾದ ಭಾಷಣವೀಯಲಾಯಿತು.

ಮಾನ್ಯ ಪಟೇಲರು, ಮಿ| ಕೆ ಎಮ್. ಮುನ್ಶಿ ಎಂಬವರನ್ನು ಕೊಂಗ್ರೆಸ್ಸಿನ ಆಕ್ಟಿಂಗ್ ಪ್ರೆಸಿಡೆಂಟರಾಗಿ ನಿಯಮಿಸಿರುವರೆಂದು ತಿಳಿದುಬರುತ್ತದೆ.

ಪರೀಕ್ಷಿಸಿರಿ  [illegible]

# ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

(ದ. ಕ.)

(S.I.R)

[illegible] 'ಧನ್ವಂತ್ರೀ ವೈದ್ಯ ರತ್ನ ಪರಮೇಶ್ವರ [illegible]' [illegible]

ಮ್ಯಾನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

---

## ನೋಡಿದರೆ ಬಿಡದಿರುವ ಕಾದಂಬರಿಗಳು

[illegible]

---

Liveliness zip pep [illegible] that all the time from an Exide because it is built into it

Care and thought [illegible] keen discrimination in the [illegible] and the experience of thousands of users have made

# Exide

THE LONG-LIFE BATTERY

The C. P. C. Co. Ltd
MANGALORE

---

**Batliwalla's Preparations Cover All Your Needs.**

A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

# ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಝಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತವೆ.

ಬಾಟ್ಲಿವಾಲರ [illegible] — ಮಲೇರಿಯಾ ಜ್ವರ [illegible] ರೂ ೧

ಬಾಟ್ಲಿವಾಲರ [illegible]

ಬಾಟ್ಲಿವಾಲರ [illegible]

ಬಾಟ್ಲಿವಾಲರ [illegible]

ಬಾಟ್ಲಿವಾಲರ [illegible]

ಬಾಟ್ಲಿವಾಲರ [illegible] ರೂ ೧—೨—೦  ರೂ ೧—೪—೦  ೧—೧೨—೦

ಬಾಟ್ಲಿವಾಲರ [illegible] ರೂ ೦—೬—೦

ಬಾಟ್ಲಿವಾಲರ [illegible] ರೂ ೦—೬—೦  LIBERAL DISCOUNT TO TRADE

[illegible] CAWASHAPUR, BOMBAY

ಎಲ್ಲಾ ಕಡೆಗಳಲಿ  ಡಾ ಯಚ್ ಎಲ್ ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

ವಿಕ್ರಯಿಸಲು ದೇಶಾಭಿಮಾನಿ  Sayani Road P O Cadel Road Bombay No 14

---

# ಅರ್ಕ

## ಸರ್ವಜ್ವರನಿವಾರಿಣಿ

**KESARI KUTEERAM**

**EGMORE, MADRAS.**

---

The Kanara Watch House Udipi, S. K.



ಗ್ಯಾರಂಟಿಯುಳ್ಳ ವಸ್ತುಗಳು  [illegible]

## ಧಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ವೋಚುಗಳೂ ಕ್ಲೋಕುಗಳೂ, ಟ್ಯಾಮ್ ಪೀಸ ಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೋಮ್ಯಾಕ್ಸ್ ದೀಪಗಳೂ ಅವುಗಳ ಸಾಮಾನುಗಳೂ ಮಾರಾಟಕ್ಕಿವೆ

**ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.**

ನಿಮ್ಮಲ್ಲಿರುವ ವಾಚು, ಕ್ಲಾಕು ಟ್ಯಾಮ್‌ಪೀಸು, ಫೋನೋಗ್ರಾಫು ಮತ್ತು ಪೆಟ್ರೋಮ್ಯಾಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು

ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

**ಒಮ್ಮೆ ಪರೀಕ್ಷಿಸಿ ನೋಡಿರಿ!**

[illegible] ಕೆಳಗಿನ ವಿಳಾಸಕ್ಕೆ ಬರೆಯಿರಿ,

ಮ್ಯಾನೇಜರ್,
ಧಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಪಿ. ಸೆ. — [illegible]

## ಮಂಗಳೂರಿನ ೪ನೇ ವ್ಯವಸಾಯ ಮತ್ತು ಕೈಗಾರಿಕೆಯ ಪ್ರದರ್ಶನ ೧೯೩೧.

ಮದ್ರಾಸ್ ಸರಕಾರದ ಶಿಕ್ಷಣ ಮತ್ತು ಪಬ್ಲಿಕ್ ವರ್ಕ್ಸ್ ಖಾತೆಯ ಮಾನ್ಯ ಮಂತ್ರಿಯವರಿಂದ ತೆರೆಯಲ್ಪಡುವುದು.

### ಪ್ರಸಿದ್ಧಿ ಪತ್ರದ ಮುಖ್ಯಾಂಶ.

ದಕ್ಷಿಣ ಕನ್ನಡದ ಡಿಸ್ಟ್ರಿಕ್ಟ್ ಎಸೋಸಿಯೇಶನಿನವರು ಬರುವ ಜನವರಿ ತಾ. ೧೧ರಿಂದ ೧೩ರ ವರೆಗೆ ಮಂಗಳೂರಿನಲ್ಲಿ ಹಿಂದೀ ಕೈಗಾರಿಕೆ ಕಲೆ ಮತ್ತು ವ್ಯವಸಾಯದ ೪ನೇ ಪ್ರದರ್ಶನವನ್ನು ನಡಿಸುವ ವ್ಯವಸ್ಥೆ ಮಾಡಿರುವರು. ಈ ಪ್ರದರ್ಶನವು ಮಂಗಳೂರು ಗವರ್ನಮೆಂಟ್ ಕೊಲೇಜಿನ ಕಟ್ಟಡದ ಮತ್ತು ವಠಾರದಲ್ಲಿ ಏರ್ಪಡಿಸಲ್ಪಟ್ಟು ಬರುವ ಜನವರಿ ತಾ. ೧೧, ೧೨ ಮತ್ತು ೧೩ರಲ್ಲಿ ಪ್ರತಿ ದಿನ ಬೆಳಿಗ್ಗೆ ಘಂಟೆ ೮ರಿಂದ ಸಂಜೆ ಘಂಟೆ ೬ರ ವರೆಗೆ ತೆರೆದಿದ್ದು ಕೊನೆಯ ದಿನ ಅಪರಾಹ್ನ ಘಂಟೆ ೩-೩೦ಕ್ಕೆ ಮುಚ್ಚಲ್ಪಡುವುದು. ಪ್ರತಿ ದಿನ ಸ್ತ್ರೀಯರಿಗಾಗಿ ೨ ಘಂಟೆ ಪ್ರತ್ಯೇಕ ಪ್ರವೇಶವಿರುವುದು.

ಚಿನ್ನದ ಮತ್ತು ಬೆಳ್ಳಿಯ ಪದಕಗಳು ಹಣ ಮತ್ತು ಸರ್ಟಿಫಿಕೇಟುಗಳು ಪಾರಿತೋಷಕವಾಗಿ ಕೊಡಲ್ಪಡುವುವು. ಪ್ರದರ್ಶನದ ಮೊದಲಿನ ದಿನದಲ್ಲಿ ಅಪರಾಹ್ನ ಘಂಟೆ ೧೦ವರೆಗೆ ತಲೆಯೊಂದರ ಪ್ರವೇಶಹಾಸಲು ರೂ ೧—೦—೦, ಅನಂತರದ ದಿನಗಳಲ್ಲಿ ತಲೆಯೊಂದರ ರೂ ೦—೮—೦ ಆಗಿದ್ದು ೧೨ ವರ್ಷದೊಳಗಿನ ಮಕ್ಕಳಿಗೆ ಅರ್ಧ ಚಾರ್ಜು. ದೇಶೀಯವಾದ ಎಲ್ಲಾ ಪದಾರ್ಥಗಳೂ, ಕಲೆ ಕೈಗಾರಿಕೆಗಳೂ, ಯಂತ್ರ ಸಾಮಾಗ್ರಿಗಳೂ ಪ್ರದರ್ಶನಕ್ಕಾಗಿ ಸ್ವೀಕರಿಸಲ್ಪಡುವುವು. ತಮ್ಮ ವಸ್ತುಗಳನ್ನು ಪ್ರದರ್ಶಿಸಲಿಚ್ಛಿಸುವವರು ದಶಂಬರ ತಾ. ೨೪ರ ವಳಗೆ ಪ್ರದರ್ಶನ ಕಮಿಟಿಯ ಕಾರ್ಯದರ್ಶಿಗಳವರಿಗೆ ಅರ್ಜಿ ಮಾಡಿಕೊಳ್ಳತಕ್ಕದ್ದು.

ಪ್ರದರ್ಶಕರು ಸ್ವಂತ ಜವಾಬ್ದಾರಿಯ ಮೇಲೆ ವಸ್ತುಗಳನ್ನು ತಮ್ಮ ಸ್ಟಾಲುಗಳಲ್ಲಿ ಮಾರಬಹುದು. ಅವುಗಳು ದ್ವಿಗುಣಿತವಾಗಿಲ್ಲದಿದ್ದ ಪಕ್ಷದಲ್ಲಿ ಪ್ರದರ್ಶನವು ಕೊನೆಗೊಳ್ಳುವವರೆಗೆ ಅವನ್ನು ತೆಗೆಯಲಾಗದು. ಮುಖ್ಯ ಕಟ್ಟಡವನ್ನು ಚಿಕ್ಕ ಮತ್ತು ಅಮೂಲ್ಯ ವಸ್ತುಗಳಿಗಾಗಿಯೂ ತಡವಾಗಿ ತರುವ ಜನಪ್ರಿಯವಾದ ಪ್ರತ್ಯೇಕ ಸಾಮಾನುಗಳಿಗಾಗಿಯೂ ರಿಜರ್ವ್ ಮಾಡಲಾಗುವುದು. ಈ ಕಟ್ಟಡದಲ್ಲಿನ ಸ್ಥಳಕ್ಕೆ ಬಾಡಿಗೆ ದರವು ಈ ಕೆಳಗಿನಂತಿರುವುದು ಮತ್ತು ವಸ್ತುಗಳು ಸಾಧ್ಯವಾದಷ್ಟು ಜನರ ಇದಿರಾಗಿರುವಂತೆ ಸ್ಟೇಂಡುಗಳ ವ್ಯವಸ್ಥೆ ಮಾಡಲಾಗುವುದು.

| ಕಟ್ಟಡದ ಸ್ಥಳ | ದರ ರೂ | ಆ | ಪೈ | ಕಂಪೌಂಡಿನಲ್ಲಿ ಸ್ಥಳ |
|---|---|---|---|---|
| ೧ ಸ್ಕ್ವ. ಯಾರ್ಡ | ೩ | ೦ | ೦ | ಫೂಟ್ ೧೦×೫ ಫೂಟ್ |
| ೨ ,, ,, | ೬ | ೦ | ೦ | ,, ೧೦×೧೦ ,, |
| ೩ ,, ,, | ೯ | ೧೨ | ೦ | ,, ೧೦×೧೫ ,, |
| ೪ ,, ,, | ೧೨ | ೮ | ೦ | ,, ೧೦×೨೦ ,, |
| ೫ ,, ,, | ೧೫ | ೦ | ೦ | ,, ೧೦×೨೫ ,, |
| ೬ ,, ,, | ೧೬ | ೮ | ೦ | ,, ೧೦×೩೦ ,, |
| ೭ ,, ,, | ೧೯ | ೧೨ | ೦ | ,, ೧೦×೩೫ ,, |
| ೮ ,, ,, | ೨೨ | ೦ | ೦ | ,, ೧೦×೪೦ ,, |

| ದರ | | | | ಪ್ರವಾಸುಗಳ ಸಂಖ್ಯೆ |
|---|---|---|---|---|
| ಇದಿರಲ್ಲಿ ರೂ. | ೪ | ೦ | ೦ | ೧ |
| ,, | ೬ | ೧೨ | ೦ | ೨ |
| ,, | ೧೧ | ೪ | ೦ | ೩ |
| ,, | ೧೪ | ೧೨ | ೦ | ೩ |
| ,, | ೧೮ | ೦ | ೦ | ೪ |
| ,, | ೨೧ | ೧ | ೦ | ೪ |
| ,, | ೨೪ | ೦ | ೦ | ೫ |
| ,, | ೨೬ | ೪ | ೦ | ೫ |

ಕಟ್ಟಡದಲ್ಲಿನ ತಮ್ಮ ಸ್ಥಳಕ್ಕಿಂತ ಹೆಚ್ಚಿಗೆ ಎದುರಾಗಿ ಬೇಕಾಗುವ ಪಕ್ಷದಲ್ಲಿ ಆ ಸ್ಥಳಕ್ಕೆ ಶೇಕಡಾ ೨೫ರಂತೆ ಹೆಚ್ಚಿಗೆ ಬಾಡಿಗೆ ದರ ತೆರಬೇಕಾಗುವುದು. ಪ್ರದರ್ಶನದ ವಸ್ತುಗಳನ್ನು ಇಡುವ ಎಲ್ಲಾ ಜನರ ಹೆಸರುಗಳನ್ನು ಇದೇ ದಶಂಬರ ತಾ. ೨೪ರ ವಳಗೆ ಕಮಿಟಿಗೆ ಬರೆದು ತಿಳಿಸಬೇಕು. ಕಮಿಟಿಯವರು ಅವರಿಗೆ ಫ್ರೀಪಾಸು ಕೊಡುವರು.

ದಕ್ಷಿಣ ಕನ್ನಡದ ಹೊರಗಣ ಸ್ಥಳಗಳ ಪ್ರದರ್ಶಕರ ಅನುಕೂಲತೆಗಾಗಿ ಅವರು ತಮ್ಮ ಸಾಮಾನುಗಳನ್ನು ಮುಂದಾಗಿ ಕಳುಹಿಸಿದ ಪಕ್ಷದಲ್ಲಿ ಆ ಸಾಮಾನುಗಳ ಜಾತಿಗನುಗುಣವಾಗಿ ಕಮಿಟಿಯವರು ನಿರ್ಣಯಿಸುವ ಫೀಸನ್ನು ಕೊಡಿಸಿ ಅವನ್ನು ತೆಕ್ಕೊಂಡು ತಮ್ಮ ಸ್ವಾಧೀನ ಇಟ್ಟುಕೊಳ್ಳಲು ಕಮಿಟಿಯವರು ಸಿದ್ಧರಿರುತ್ತಾರೆ. ಇಂಥ ಸಾಮಾನುಗಳೊಂದಿಗೆ ಅವುಗಳ ಸಂಪೂರ್ಣ ವಿವರವುಳ್ಳ ದ್ವಿಪ್ರತಿಯ ಪಟ್ಟಿಯೊಂದಿರಬೇಕಲ್ಲದೆ ಅವುಗಳನ್ನು ಕಳುಹಿಸಿಕೊಡುವ ಚಾರ್ಜು ಮೊದಲೆ ಕೊಟ್ಟಿರಬೇಕು.

ಯಾವನಾದರೂ ಪ್ರದರ್ಶಕನೊಬ್ಬನಿಗೆ ಸ್ವತಃ ಬರಲು ಅಥವಾ ತನ್ನ ಪ್ರತಿನಿಧಿಯನ್ನು ಕಳುಹಿಸಲು ಅಸಾಧ್ಯವಾದ ಪಕ್ಷದಲ್ಲಿ ಅದನ್ನು ಪ್ರದರ್ಶನದ ಒಂದು ವಾರದ ಮೊದಲು ಪ್ರದರ್ಶನ ಕಮಿಟಿಗೆ ತಿಳಿಸಿದ ಪಕ್ಷದಲ್ಲಿ ಅವರು ಅವನಿಗಾಗಿ ಸದ್ರಿ ವಸ್ತುಗಳನ್ನು ನೇಮಿತ ಸ್ಥಳದಲ್ಲಿ ಪ್ರದರ್ಶಿಸುವ ಏರ್ಪಾಡು ಮಾಡುವರು. ಇಂಥಾ ಸಂದರ್ಭಗಳಲ್ಲಿ ಪ್ರದರ್ಶಕ ವಸ್ತುಗಳ ಬೆಲೆಯನ್ನು ವಿಚಾರಿಸಿ ನ್ಯಾಯವಾದ ಚಾರ್ಜನ್ನು ಹೊರಿಸಲಾಗುವುದು. ಎಲ್ಲಾ ವಸ್ತುಗಳು ಅಥವಾ ಯಾಂತ್ರಿಕ ಯಾ ವೈಜ್ಞಾನಿಕ ಸಂಬಂಧವಾದ ಸಾಮಗ್ರಿಗಳನ್ನೊಳಗೊಂಡ ವಿಶಿಷ್ಟ ಯೋಗ್ಯತೆಯ ವಸ್ತುಗಳನ್ನು ಆಭಾರಪೂರ್ವಕ ಸ್ವೀಕರಿಸಲಾಗುವುದು. ಜಟ್ಟಿ ಕುದುರೆ, ಜಾನುವಾರು, ಕುಕ್ಕುಟ ವರ್ಗವೇ ಮೊದಲಾದ ಪ್ರಾಣಿಗಳ ಪ್ರದರ್ಶನವನ್ನೂ ಏರ್ಪಡಿಸುವ ಆಲೋಚನೆ ಇದೆ. ಈ ಪ್ರದರ್ಶನವು ಜನವರಿ ತಾ. ೧೧ ಮತ್ತು ೧೨ರಲ್ಲಿ ಎರಡು ದಿವಸಗಳಲ್ಲಿ ಮಾತ್ರ ನಡೆಯುವುದು. ಪ್ರದರ್ಶನ ನಡೆಯುವ ೧೦ ದಿನಗಳ ಮೊದಲು ಪ್ರತಿಯೊಂದು ಜಾತಿಯ ಪ್ರಾಣಿಗಳ ಸಂಖ್ಯೆಯನ್ನು ಕಾರ್ಯದರ್ಶಿಗಳಿಗೆ ತಿಳಿಸತಕ್ಕದ್ದು. ಈ ಪ್ರದರ್ಶನವನ್ನು ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಣಿಗಳಿಗಾಗಿ ನಡಿಸುವ ಆಲೋಚನೆ ಇದ್ದು ಯಾವ ವೆಚ್ಚವೂ ಇಲ್ಲದೆ ಸ್ಥಳವನ್ನು ಏರ್ಪಡಿಸಲಾಗುವುದು. ಈ ಪ್ರದರ್ಶನಕ್ಕೆ ಮಾತ್ರ ಸಂಬಂಧಿಸುವ ಪ್ರತ್ಯೇಕ ನಿಯಮಗಳನ್ನು ಅರ್ಜಿ ಮಾಡಿ ಪಡಕೊಳ್ಳಬಹುದು.

ವಿವರವಾದ ಕಾರ್ಯಕ್ರಮವನ್ನೊಳಗೊಂಡ ಪ್ರಸಿದ್ಧಿ ಪತ್ರಕ್ಕಾಗಿ ಮತ್ತು ಛಾಪೆಯ ಅರ್ಜಿಯ ಫೋರ್ಮುಗಳಿಗಾಗಿ, ಕಾರ್ಯದರ್ಶಿ ೪ನೇ ಮಂಗಳೂರು ಪ್ರದರ್ಶನ ಕಮಿಟಿ, ಕೊಡಿಯಾಲ್ ಬೈಲು, ಪೋಸ್ಟ್, ದ. ಕ. ಇವರಿಗೆ ಕೊಳ್ಳಿರಿ. ಮಂಗಳೂರು ಪಟ್ಟಣವು ಸವುತ್ ಇಂಡಿಯನ್ ರೈಲ್ವೇಯ [illegible] ಕೊನೆಯ ಸ್ಟೇಶನಾಗಿರುತ್ತದೆ. ವಾರಕ್ಕೆ ಎರಡು ಸಲ ಪ್ರತಿ ಸೋಮವಾರ ಮತ್ತು ಗುರುವಾರ ಬೊಂಬಾಯಿ ಸ್ಟೀಮ್ ನೆವಿಗೇಶನ್ ಕಂಪೆನಿಯ ಸ್ಟೀಮರುಗಳಿರುತ್ತವೆ. ಮಂಗಳೂರಿನಿಂದ ಶಿವಮೊಗ್ಗ, [illegible], ಹಾಸನ್, ಮೈಸೂರು, ಮಡಿಕೇರಿ, ಉತ್ತರ ಕನ್ನಡ, ಹುಬ್ಬಳ್ಳಿ ಮತ್ತು ಧಾರವಾಡಕ್ಕೆ ಬಸ್ ಸರ್ವಿಸ್ ಇರುತ್ತದೆ.

ವಿ. ಸೂ.—ಸಂಪೂರ್ಣ ಪ್ರಸಿದ್ಧಿ ಪತ್ರದ ಕೆಲವೇ ಪ್ರತಿಗಳು ಮಾತ್ರ ಛಾಪಿಸಲ್ಪಟ್ಟಿರುವುದರಿಂದ ಅವನ್ನು ತಮ್ಮ ವಸ್ತುಗಳನ್ನು ಇಡಬೇಕೆಂದಿರುವವರಿಗೆ ಮಾತ್ರ ಕಳುಹಿಸಲಾಗುವುದು.

ಮೇಜರ್ ಯನ್ ಯಶ್ ಮೇಥಾ, ಐ ಎಮ್ ಎಸ್
(ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್) ಅಧ್ಯಕ್ಷರು.

---

ಸುಮಾರು ೫೦೦ ಮಿಲಿಯ ರೂಪಾಯಿಗಳಷ್ಟಿರಬಹುದೆಂದು ಊಹಿಸಲಾಗುತ್ತದೆ. ೧೯೧೪ನೇ ಇಸವಿಯಲ್ಲಿ ಅಮೇರಿಕವು ಯುರೋಪಿಯನ್ ವರ್ತಕರೊಡನೆ ಬೆಳಸಿದ ವ್ಯಾಪಾರವು ಸಾಧಾರಣ ೭೦,೦೦೦ ಟನ್ನುಗಳಷ್ಟಿದ್ದಿತೆಂತಲೂ, ಮತ್ತು ಮುಖ್ಯವಾಗಿ ವ್ಯಾಪಾರ ನಡೆಸುವ ಹಡಗುಗಳ ಸಂಖ್ಯೆಯು ಆರಕ್ಕೆ ಮಿಕ್ಕಿರಲಿಲ್ಲವೆಂತಲೂ ತಿಳಿಯಬರುತ್ತದೆ. ಆದರೆ ಈಗಿನ ಪರಿಸ್ಥಿತಿಯನ್ನು ವಿಚಾರಮಾಡಲು, ಅಮೇರಿಕದ ೨೩೨ ಹಡಗುಗಳು ಸುಮಾರು ೧॥ ಮಿಲಿಯ ಟನ್ನುಗಳಷ್ಟು ಬ್ರಿಟಿಷ್ ವ್ಯಾಪಾರವನ್ನು ನಡೆಸುತ್ತಿರುವವೆಂದು ತಿಳಿದುಬರುತ್ತದೆ.

ವಿಲಾಯತಿಯ ಮಹಾಯುದ್ಧದ ಆರಂಭ ಕಾಲದಲ್ಲಿ, ದಕ್ಷಿಣ ಅಫ್ರಿಕಕ್ಕೆ ಹೋಗುವ ಅಮೇರಿಕನ್ ಹಡಗುಗಳೇ ಇದ್ದಿಲ್ಲವಂತೆ, ಆದರೆ ಈಗ, ೨೨೫,೦೦೦ ಟನ್ನು ಭಾರ ವಹಿಸುವ ೨೨ ಅಮೇರಿಕದ ಹಡಗುಗಳು, ಅಫ್ರಿಕಾಖಂಡದೊಡನೆ ವ್ಯಾಪಾರವನ್ನು ಬೆಳೆಸುತ್ತಿರುವವು. ಮಾತ್ರವಲ್ಲದೆ, ೧೯೧೪ನೇ ಇಸವಿ ಮೊದಲುಗೊಂಡು ಅಮೇರಿಕವು, ಯುರೋಪದೊಡನೆ ಬೆಳಸುವ ವ್ಯಾಪಾರವು ಸೇಕಡಾ ೫೫೦ರಷ್ಟು ಮಿಗಿಲಾಗಿರುವುದು; ಆಫ್ರಿಕದೊಡನೆ ಸೇಕಡಾ ೨೦೦ರಷ್ಟು ಹೆಚ್ಚಿರುವದಂತೆ!

---

## ಅಮೇರಿಕದ ಹಡಗು ಕೈಗಾರಿಕೆ.

ಅಮೇರಿಕವು ಇತ್ತೀಚೆಗೆ ಹಡಗುಗಳ ಕೈಗಾರಿಕೆಯನ್ನು ಬಹಳವಾಗಿ ಪ್ರೋತ್ಸಾಹಿಸುತ್ತಿರುವದು. ಯುನೈಟೆಡ್ ಸ್ಟೇಟ್ಸಿನ ಸರಕಾರವು ಮೇಲೆ ಹೇಳಿದ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಹೆಚ್ಚಿನ ಧನಸಹಾಯವನ್ನೂ ಮಾಡುತ್ತಿರುವದು; ಇದೊಂದು ಬಗೆಯ ಕೈಗಾರಿಕೆಗೆ ಅಮೇರಿಕಾದಲ್ಲಿ ಪ್ರೋತ್ಸಾಹವಿತ್ತಷ್ಟು ಇನ್ನಾವ ದೇಶದಲ್ಲಿಯೂ ಗಮನವೀಯಲಾಗುವುದಿಲ್ಲ. ಹಾಗೂ ಕಳೆದ ವರ್ಷದಲ್ಲಿ ಅಮೇರಿಕವು, ಹಡಗುಗಳ ಕೈಗಾರಿಕೆಯಿಂದ ಪಡೆದಷ್ಟು ಮುನಾಫೆಯನ್ನು, ಇನ್ನಾವ ವರ್ಷಗಳಲ್ಲಿಯೂ ಪಡೆಯಲಿಲ್ಲವಂತೆ!

ಕಳೆದ ಎಷ್ಟೋ ವರ್ಷಗಳಿಂದ, ಮೇಲೆ ಹೇಳಿದ ಕೈಗಾರಿಕೆಯಲ್ಲೇ ಮುಳುಗಿ ತೇಲಾಡುತ್ತಿದ್ದ ಫ್ರಾನ್ಸ್, ಜರ್ಮನಿ, ಇಟೆಲಿ, ಹೊಲ್ಲಂಡ್, ಮುಂತಾದ ದೇಶಗಳ ಹಡಗು ಕೈಗಾರಿಕೆಯ ಸ್ಪರ್ಧೆಗಳಲ್ಲಿ ಇಂದಿನ ಯುನೈಟೆಡ್ ಸ್ಟೇಟ್ಸ್ (ಅಮೇರಿಕಾ)ವೇ ಮೊದಲನೇ ಸ್ಥಾನವನ್ನು ವಹಿಸಿರುವುದು; ಹಡಗು ಕೈಗಾರಿಕೆಯಲ್ಲಿ ಅಮೇರಿಕವು ಇಷ್ಟೊಂದು ಉನ್ನತಾವಸ್ಥೆಯನ್ನು ಹೊಂದಲು, ವೊಶಿಂಗ್ಟನ್ ಸರಕಾರದ ಧನಸಹಾಯವೇ ಕಾರಣಭೂತವಾಗಿರುವದು.

೧೯ನೇ ಶತಮಾನದ ಆದಿಭಾಗದಲ್ಲಿ, ಯುನೈಟೆಡ್ ಸ್ಟೇಟ್ಸಿನ ಬಂದರವನ್ನು ಪ್ರವೇಶಿಸುವ ಪ್ರತಿಯೊಂದು ಪರದೇಶೀಯ ಹಡಗಿನ ಮೇಲೆ ಹೊರಿಸಲ್ಪಡುತ್ತಿದ್ದ ಸುಂಕವು, ಈಗ ತೆಗೆಯಲ್ಪಡುವ ಸುಂಕಕ್ಕಿಂತ ಎಷ್ಟೋ ಹೆಚ್ಚಿನದಾಗಿದ್ದಿತು, ಕೈಗಾರಿಕೆಯ ಅಭಿವೃದ್ಧಿಯು ಹೆಚ್ಚಿದಷ್ಟಕ್ಕೆ ಸುಂಕವು ಕಡಿಮೆಯಾಯಿತು. ವ್ಯಾಪಾರವು ಪ್ರಬಲಿಸಿತು. ಹೆಚ್ಚಾದ ಅಮೇರಿಕದ ವ್ಯಾಪಾರವು ಪರದೇಶಗಳೊಡನೆ ಬೆಳೆದು, ಹೆಚ್ಚು ಹಡಗುಗಳ ಅವಶ್ಯಕತೆಯು ತಲದೋರಿತು, ಪರಿಣಾಮವಾಗಿ ಹೆಚ್ಚಾದ ಪರದೇಶೀ ವ್ಯಾಪಾರವು ಅಮೇರಿಕದ ಪಾಲಿಗನೇ ಬಿತ್ತು. ಆದರೆ ಆ ಕಾಲದಲ್ಲಿ ಹೆಸರುವಾಸಿಯಾದ ವ್ಯಾಪಾರೀ ಜನಾಂಗವೆಂದರೆ— ಬ್ರಿಟನ್ ದೇಶವು. ಕಾಲಕ್ರಮೇಣ ವ್ಯಾಪಾರದ ಮಹಾಪಟ್ಟಿಗಳಲ್ಲಿ, ಅಮೇರಿಕದೊಡನೆ, ಬ್ರಿಟನ್ ಮೊದಲಾದ ದೇಶಗಳ ಮೇಲಾಟವು ಆರಂಭಿಸಿತು. ಹಾಗೂ ೧೯೧೦ರ ವರೆಗೆ, ಅಮೇರಿಕದ ವಿದೇಶೀ ವ್ಯಾಪಾರವು, ಕುಂದಿಯಿತು. ಅಷ್ಟರಲ್ಲಿ ಬ್ರಿಟನ್—ಜರ್ಮನಿಯವರ ಯುದ್ಧಕ್ಕೆ ಆರಂಭವಾಯಿತು, ಹಡಗುಗಳ ಅವಶ್ಯಕತೆಯು ಹೆಚ್ಚಿತು, ಬ್ರಿಟನ್ ದೇಶವು ಯುದ್ಧ ಸನ್ನಾಹಗಳ ಅವಸರದಲ್ಲಿ ಹಡಗುಗಳ ಕೈಗಾರಿಕೆಯನ್ನು ಗಮನವೀಯಲಿಲ್ಲ. ಹಾಗೆ ಮಾಡಲು ಸಂದರ್ಭಗಳೂ ಇಲ್ಲದಂತಾದವು. ಅಮೇರಿಕವು ಇದೇ ಒಳ್ಳೆಯ ಸಮಯವೆಂದು ಯೋಚಿಸಿ, ಕೈಗಾರಿಕೆಯನ್ನು ಮತ್ತಷ್ಟು ಬೆಳಸಿತು, ಹಡಗುಗಳು ಹೆಚ್ಚಾಗಿ ತಯಾರಾಗಲ್ಪಟ್ಟವು, ಅವುಗಳ ಮಾರಾಟಕ್ಕೆ ಆ ಕಾಲದ ಒಸ್ಸಿನ ಅಗತ್ಯತೆಯೇ ಕಾರಣವಾಗಿ, ಅಮೇರಿಕೆಯಲ್ಲಿ ತಯಾರಿಯಾದ ಮೂರು ನಾಲ್ಕು ಹಡಗುಗಳಿಗೂ ಆಂಗ್ಲೇಯರೇ ಗಿರಾಕಿಗಳಾದರು. ಅಂದ ಮೇಲೆ ಅಮೇರಿಕದ ಹಡಗು ಕೈಗಾರಿಕೆಯು ವೃದ್ಧಿಗೊಳ್ಳುವದಕ್ಕೆ ಬೇರೆ ನಿದರ್ಶನಗಳು ಅನಾವಶ್ಯಕವಷ್ಟೆ!

ಇತ್ತೀಚೆಗೆ, ಅಮೇರಿಕೆಯು ಹಡಗು ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ, ಸರಕಾರವು ವಿವಿಧ ರೀತಿಯಿಂದ ಧನಸಹಾಯವನ್ನು ಮಾಡುತ್ತಿರುವುದು. ಮೊದಲನೆಯದಾಗಿ, ಆ ದೇಶದ ಸರಕಾರವು ಸ್ವಂತ ದುಡ್ಡಿನಿಂದಲೇ ಹಡಗುಗಳನ್ನು ತಯಾರಿಗೊಳಿಸುತ್ತಿರುವುದು, ಅವುಗಳ ವಿಶೇಷ ವ್ಯಾಪ್ತಿ ಕೆಲಸಗಳನ್ನು ಸರಕಾರಿ ನೌಕರರಿಂದಲೇ ಮಾಡಿಸಲ್ಪಡುವುದು. ಇದಕ್ಕಾಗಿ ಬೇರೊಂದು ಇಲಾಖೆಯನ್ನೇ ಏರ್ಪಡಿಸಿರುವದಂತೆ! ಎರಡು, ಸರಕಾರವು ಹಡಗುಗಳನ್ನು ತಯಾರಿಗೊಳಿಸಿ, ಸುಲಭ ದರಕ್ಕೆ ಮಾರುವುದು, ಹಾಗೆ ಮಾಡುವುದರಿಂದ ಸರಕಾರವು ಕೈಗಾರಿಕೆಯನ್ನು ಪ್ರೋತ್ಸಾಹಿಸಿದಂತಲ್ಲದೆ, ವ್ಯಾಪಾರಸ್ಥರಿಗೆ ಹಡಗುಗಳು ಕಡಿಮೆ ಬೆಲೆಗೆ ದೊರೆತು, ತಮ್ಮ ವ್ಯಾಪಾರಗಳನ್ನು ಸರಾಗವಾಗಿ ನೆರವೇರಿಸಲು ಅನುಕೂಲವಾಯಿತು. ಇಷ್ಟಲ್ಲದೆ, ವ್ಯಾಪಾರಕ್ಕಾಗಿ ತಯಾರಿ ಮಾಡುವ ಹಡಗುಗಳ ಮಾಲಿಕರಿಗೆ ಕಡಿಮೆ ಬಡ್ಡಿಯಲ್ಲಿ ಹಣವನ್ನು ಸಾಲವಾಗಿ ಕೊಡುವುದು. ಈ ರೀತಿಯ ಸರಕಾರೀ ಪ್ರೋತ್ಸಾಹವು, ಇಂದಿನ ಅಮೇರಿಕವನ್ನು, ಪ್ರಪಂಚದ ಹಡಗು ಕೈಗಾರಿಕೆಯಲ್ಲಿ ಮೊದಲನೇ ತರಗತಿಯದನ್ನಾಗಿ ಮಾಡಿತು.

ಇಂತಹ ಹಡಗುಪಡೆಗಳ ದೆಸೆಯಿಂದ ಅಮೇರಿಕದ ವಿದೇಶೀ ವ್ಯಾಪಾರವು ಹೆಚ್ಚಿ, ೧೯೧೪ನೇ ವರ್ಷಕ್ಕೆ ಅಂತ್ಯವಾಗುವ ಹತ್ತು ವರ್ಷಗಳಲ್ಲಿ ನಡೆದ ಸರಾಸರಿ ವಾರ್ಷಿಕ ವಿದೇಶೀ ವ್ಯಾಪಾರವು

53 ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ

# ಉಪಯೋಗಿಸಲ್ಪಟ್ಟ ಔಷಧಗಳು.

1 **ಧಾತುಪುಷ್ಟಿ ಲೇಹ**—ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲಿ ಧಾತುವು ನಷ್ಟವಾಗುವಿಕೆ, ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವದು ಇತ್ಯಾದಿಗಳ ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು ಕ್ರಯ ಡಬ್ಬಿ 1ಕ್ಕೆ ರೂ 2—8—0 ಮೂರು ಡಬ್ಬಿಗಳಿಗೆ ರೂ 7.

2. **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟಿನದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆ ನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತೀ ಶೀಘ್ರದಲಿಯೇ ಗುಣಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ, ಅಂತರಿಕ ಆರೋಗ್ಯವನ್ನು ಒದಗಿಸಿ ಮನೋಭಿಲಾಷೆಯನ್ನು ಪೂರೈಸಿರುವವು ಕ್ರಯ 1 ಬಾಟಲಿ ಔಷಧಕ್ಕೂ, ಒಂದು ಡಬ್ಬಿ ಮಾತ್ರೆಗೂ ರೂ. 2—4—0 ಮೂರು ಬಾಟಲಿ ಮತ್ತು ಡಬ್ಬಿಗಳಿಗೆ ರೂ. 6—4—0.

3 **ಮೇಹ ಕುಠಾರ**—ಇದು ಮೂತ್ರಸ್ಥಾನದಿಂದ ಕೆಂಪು ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ ವ್ರಣವನ್ನೂ ಉರಿಯುನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ 2—8—0 3ಕ್ಕೆ ರೂ. 7

4 **ಮಲೇರಿಯಾ ನಿವಾರಣ**—ದಿನ ಬಿಟ್ಟು ಬರುವ ಜ್ವರ, 2 ಯಾ 3 ದಿವಸಕ್ಕೊಂದುಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗಡ್ಡೆಯನ್ನು ಕರಗಿಸಿ, ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1ಕ್ಕೆ ರೂ 1—8—0 3 ಬಾಟ್ಲಿಗಳಿಗೆ ರೂ 4—4—0

5. **ಬಾಲಗ್ರಹ ಗುಟಿಕೆ**—ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ. ಬಾಟ್ಲಿ 1ಕ್ಕೆ ಆಣೆ 10 3ಕ್ಕೆ ರೂ. 1—12—0

6 **ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ**—ಬಾಣಂತಿಯರಿಗೆ ಬಾಟ್ಲಿ 1ಕ್ಕೆ ರೂ 1—8—0 3ಕ್ಕೆ 4—4—0

ಎಲ್ಲಾ ನಮೂನೆಯ ಔಷಧಗಳು ದೊರೆಯುತ್ತವೆ ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಲಾಗುವುದು ಕೆಟಲಾಗು ತರಿಸಿ ನೋಡಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್, ರಥಬೀದಿ, ಮಂಗಳೂರು, ದ. ಕ.



# ಮಲೇರಿಯಾ

ಮಲೇರಿಯಾ ಎಂಬ

ಮಲೇಜ್ವರ

ಜಗ ಪ್ರಸಿದ್ಧವಾದ ದಿವ್ಯ ಔಷಧ

# ಇನನೊಫೇಲ



Diamonds! Diamonds!!

**Ramachandra Krishna Shet**

DONGERKERY, MANGALORE.

ಉತ್ಕೃಷ್ಟ ತರಗತಿಯ ಹುಸ್ಸಾಕ (first quality Selected) ಎಸ್ ಸ್ಟರಲ್ಪಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಕ್ಕಿರುತ್ತವೆ ಹೆಚ್ಚಿನ ಮಾಹಿತಿಗೆ ಬರೆಕೊಳ್ಳಿರಿ

ಕೆ ರಾಮಚಂದ್ರ ಕೃಷ್ಣ ಶೇಟ್, ಜುವೆಲರ್,

ಡೊಂಗರಕೇರಿ, ಮಂಗಳೂರು



For the uplift of the Motherland — For the Happiness of the people

# THE BOMBAY LIFE ASSURANCE COMPANY, LTD.,

(ESTD 1908)

*Chairman*—Sir Lalubhai Samaldas, Kt C. I E J P

Agencies & Branches throughout India, Burma, & Ceylon

AN INDIAN CONCERN UNDER INDIAN MANAGEMENT Offers Attractive Schemes of Assurance with Non Forfeiture and Permanent Disability Benefits Policy conditions very Liberal

**Yearly Increase in New Business proves its popularity**

| Year | New Business |
|---|---|
| 1925 | Rs 2 1[illegible] [illegible]00 |
| 1926 | Rs [illegible]2 08 000 |
| 1927 | Rs [illegible] 77 000 |
| 1928 | Rs 42 [illegible]2 000 |
| 1929 | Rs [illegible] 22 500 |

| | |
|---|---|
| Total Assurance in Force exceeds over | Rs 2 25 00 000 |
| Total Funds exceeds | Rs 24 00 000 |
| Yearly Income exceeds | Rs 10 00 000 |
| Claims paid over | Rs [illegible] 00 000 |

**1930 our Valuation Year** **Take a Policy now and share in the Profits**

WANTED Energetic & influential Agents in all principal Towns in Mysore State and other unrepresented parts in Madras Presidency Mr K Padmanabha Pai B A, Chief Secretary of the Madras Branch will be in Bangalore City to organise Agencies for Mysore State for about a month Please apply for Agency before it is too late either in person or by letter Very attractive terms to really capable Agents

**The Bombay Life Office,** Vishweshwarapuram Circle, BANGALORE CITY OR **The Bombay Life Office** Post Box NO 337, MOUNT ROAD, MADRAS.

OR

To our Offices in Udipi or Mangalore, South Kanara District



ಶಕ್ತಿವಂತ ಕವಚ

ಈ ಕವಚವು ಹಿಮಾಲಯ ಪರ್ವತದ ಯೋಗಿಗಳಿಂದ ಸಿದ್ಧಿಮಾಡಿದ್ದು. ಈ ಕವಚವು ಆಶ್ಚರ್ಯಕರವಾದ ಕೆಲಸಗಳನ್ನು ನಡೆಸುವುದು ಈ ಕವಚವನ್ನು ಧರಿಸಿದವರಿಗೆ ತನ್ನ ಕೆಲಸದಲ್ಲಿ ಜಯವುಂಟಾಗುವುದು, ವ್ಯಾಪಾರದಲ್ಲಿ ಲಾಭವು ವ್ಯಾಜ್ಯಗಳಲ್ಲಿ ಗೆಲುವು ಗ್ರಹಚಾರ ದೆಸೆಯಿಂದುಂಟಾಗುವ ಕೇಡು ನಿವಾರಣೆಯೂ ರೋಗಪೀಡಿತರಾದವರಿಗೆ ಕ್ಷೇಮವು, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದೂ ಮತ್ತು ಇತರ ಬಗೆಬಗೆಯ ಲಾಭಗಳು ಉಂಟಾಗುವವು ಕವಚ ೧ಕ್ಕೆ ರೂಪಾಯಿ ೨. 3 ಕವಚಗಳಿಗೆ ೨-8-0 ಟಪ್ಪಾಲು ಖರ್ಚು 6 ಆಣೆ ಪ್ರತ್ಯೇಕ ನಾವು ರವಾನಿಸಿ ಕೊಡುವ ನಿಯಮದ ಪ್ರಕಾರ ಈ ಕವಚವನ್ನು ಧರಿಸಿದವರಿಗೆ ಲಾಭವಾಗದೆ ಇದ್ದಲ್ಲಿ 10 ರೂಪಾಯಿ ಇನಾಮವಾಗಿ ಕೊಡುವೆವು

ಪತ್ರವ್ಯವಹಾರ ಇಂಗ್ಲೀಷಿನಲ್ಲಿಯೇ ನಡಿಸಬೇಕು

**Sadhan Kuti**

Hatkhala, (*Calcutta*)



# ‘ಅಂಬಾ ತಾಯಿತ್’

ನಿಮ್ಮ ಸುಖವನ್ನು ಕೊಡುವದು—ಧಾರಣ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು ಲಾಭ, ಜಯ, ಕಾರ್ಯಾನುಕೂಲವನ್ನೀಯುವದು ಅನೇಕರಿಗೆ ನಮ್ಮ ‘ತಾಯಿತ್’ ನಂಬಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೫ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಶಲ್ ರೂಪಾಯಿ ೫೦ರಿಂದ ೨೦೦ ರೂಪಾಯಿ ತನಕ ದೈವೀಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ

ಸಕಲೇಶಪುರ ಪೋಸ್ಟು ಹಾಸನ್ ಜಿಲ್ಲೆ



ಈ ಸಂದರ್ಭವನ್ನು ಕಳಕೊಳ್ಳಬೇಡಿರಿ!

ಸ್ಟ್ರೈಕಿಂಗ್ ಮತ್ತು ವೈಂಡಿಂಗ್ ಎಲಾರ್ಮ್ ಕ್ಲೋಕ್—ಉಚಿತ.



ಲಿವರ್ ರಿಸ್ಟ್‌ವಾಚ - (ಚೌಕ ಅಥವಾ ಮಂಡಗೆ) ನಮ್ಮ ಲಿವರ್ ವಾಚನ್ನು ಪಡೆಕೊಳ್ಳುವವರಿಗೆ ಒಂದು ಕ್ಲೋಕ್ ಉಚಿತ ನಮ್ಮ ರಜಿಸ್ಟ್ರಿಯಾದ ‘ಎಸ್ ಎಸ್ ಮೆಡೀನಾ ಶಿಪ್’ ಎಂಬ ಟ್ರೇಡ್ ಮಾರ್ಕನ್ನು ವಾಚಿನ ಮೇಲು ಚಿಲ್ಲೆಹುಲ್ಲಿ ನೋಡಿರಿ—ಸ್ಪೆಶಲ್ ತಯಾರಿ—ನವೀನವಾಗಿ ಈಗ ತಾನೇ ಸ್ವಿಝರ್‌ಲಂಡಿನಿಂದ ಬಂದಿರುವದು. ಚಿತ್ತಾಕರ್ಷವಾದ ಅಂಕೆಗಳು (ರೇಡಿಯಮ್ ಅಥವಾ ರೋಮನ್ ಸರಿಯಾದ ಸಮಯವನ್ನು ತೋರಿಸುವದು. ಯಾಂತ್ರಿಕ ಸಾಮಾನುಗಳಿಗೂ ವರ್ಷದ ಗ್ಯಾರಂಟಿ, ಫೇಕ್ಟರಿ ಕ್ರಯ ೨೦/ ರೂಪಾಯಿ ಮಾರಾಟದ ಕ್ರಯ ರೂ. ೬—೧೪—೦ ಅಂಚೆವೆಚ್ಚ ೧೨ ಆಣೆ ಮಾತ್ರ

ಸಿಟಿವಾಚ್ ಕೋ, ನಂಬ್ರ ೩೯, ಹಾರ್ವಾಕ್ ರೋಡ್, ಗಾಮ್‌ದೇವಿ, ಮುಂಬಾಯಿ


EDITED, PRINTED & PUBLISHED BY V S KAMATH AT M. T A. SHARADA PRESS, MANGALORE.

[illegible] ರೂಪಾಯಿ 2-0-0  ರಿಜಿಸ್ಟರ್ಡ್ ನಂ. [illegible]  [illegible] ರೂಪಾಯಿ [illegible]

# ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

[illegible] ॥ ೧ ॥
[illegible] ॥
[illegible] ॥ ೧ ॥

ಪುಸ್ತಕ ೨೪. ಮಂಗಳೂರು ತಾ. ೧೯ನೇ ಶುಕ್ರವಾರ ದಶಂಬರ ೧೯೩೦ (19-12-30.) ಸಂಚಿಕೆ ೫೦


## THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

**Head office: UDIPI.** **Branches: COONDAPOOR & Mangalore.**
ಹೆಡ್ ಆಫೀಸು:– ಉಡುಪಿ. ಶಾಖೆ.– ಕುಂದಾಪುರ. ಮತ್ತು ಮಂಗಳೂರು

Authorised Capital Rs 3,50,000. Subscribed & Called up Rs. 2,25,000
[illegible] ೩,೫೦,೦೦೦ [illegible] 2,25,000

**Statement of Affairs as on 31st October 1930**

| CAPITAL AND LIABILITIES | | | PROPERTY AND ASSETS | | |
|---|---|---|---|---|---|
| 1 | Paid up Capital | Rs [illegible] | 1 | Premises Building Furniture etc | Rs [illegible] |
| 2 | Reserve and other funds | ,, 1,68,400 0 0 | 2 | Investment on G P Notes | 3,70,414 5 0 |
| 3 | Deposits | [illegible] | 3 | Investment on Approved Securities | [illegible] |
| 4 | Bills for collection as per contra | [illegible] | 4 | Bills for collection | [illegible] |
| 5 | Due to Bankers | [illegible] | 5 | Sundries | [illegible] |
| 6 | Sundries | [illegible] | 6 | Cash in hand & with bankers | [illegible] |
| | Total | [illegible] | | Total | [illegible] |

Office of the Corporation UDIPI [illegible] 31 **N. ANANDA RAO** *Secretary & Manager*






## ಅಮೃತಾಂಜನ.

[illegible]

ರಿಂಗ್‌ವರ್ಮ್ ಮುಲಾಮು [illegible]

ದಂತಮಂಜನ:– [illegible]

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬಾಯಿ.



ಮಕ್ಕಳ ಸಲುವಾಗಿ,

## ಡೊಂಗರ ಇವರ ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದುಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ, ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಆತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ.
ಗಿರಗಾಂವ್, ಮುಂಬಯಿ.
ಏಜೆಂಟರು –ದಿ. ಗುಲಬ್ ಮಾರ್ಟ್, [illegible]



## ಶ್ರೀ ಸರಸ್ವತೀ ಭಂಡಾರ

| | | |
|---|---|---|
| 1 | ಸಚಿತ್ರ [illegible] ಕಥಾ ಸಂಗ್ರಹ | 1-8-0 |
| 2 | [illegible] | 0-12-0 |
| 3 | [illegible] | 2-0-0 |
| 4 | [illegible] ಕಥೆಗಳು | 2-0-0 |
| 5 | [illegible] | 3-0-0 |
| 6 | ಶೃಂಗಾರ [illegible] ಕಥೆಗಳು | 0-12-0 |
| 7 | [illegible] | 1-0-0 |
| 8 | [illegible] | 1-12-0 |
| 9 | [illegible] | [illegible] |
| 10 | [illegible] | 1-4-0 |
| 11 | [illegible] | [illegible] |
| 12 | ಅನಂತ [illegible] | 1-12-0 |
| 13 | [illegible] | 0-2-0 |
| 14 | [illegible] | 1-8-0 |
| 15. | ಇಂಡಿಯನ್ ಪಿನಲ್ ಕೋಡ್ | 4-8-0 |
| 16 | ಕ್ರಿಮಿನಲ್ ಪ್ರೊಸಿಜರ್ ಕೋಡ್ | 3-0-0 |
| 17. | ಲ್ಯಾಂಡ್ ರೆವೆನ್ಯೂ ಕೋಡ್ | 1-0-0 |

ಈ ಮೇಲ್ಕಂಡವುಗಳಲ್ಲದೆ ನಮ್ಮಲ್ಲಿ ಇನ್ನೂ ಸಾವಿರಾರು ನಮೂನೆಯ ಕನ್ನಡ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗ್ ಅಪೇಕ್ಷಿಸುವವರು ಕೂಡಲೇ ಕೆಳಗಿನ ವಿಳಾಸಕ್ಕೆ ಬರೆಯಿರಿ.

[illegible] ಪುಸ್ತಕಗಳು

ಸರಸ್ವತೀ ಭಂಡಾರ.
[illegible] ಮಂಗಳೂರು.

ಮಂಗಳೂರು 15ನೇ ನವಂಬರ 1930

# ಎ ಜೆನಿತ್ ಲೈಫ್ ಎಸ್ಸೂರೆನ್ಸ್ ಕಂಪೆನಿ, ಲಿಮಿಟೆಡ್., ಮುಂಬಾಯಿ.

ಅಯ್ಯಾ!

ನನ್ನ ಮೃತಪಟ್ಟ ಪುರುಷೋತ್ತಮನೆಂಬ ಮಗನು ಈ ಕೆಳಗಿನ ಕಂಪೆನಿಗಳಲ್ಲಿ ವಿಮೆಮಾಡಿರುವನು

(1) ಆಸ್ಟ್ರೇಲಿಯದ ನೇಶನಲ್ ಮ್ಯುಚುವಲ್ ಲೈಫ್ ಎಸೋಸಿಯೇಶನ್

(2) ಭಾರತ್ ಇನ್‌ಶೂರೆನ್ಸ್ ಕೋ. ಲಿಮಿಟೆಡ್.,

(3) ಝೆನಿತ್ ಲೈಫ್ ಎಸ್ಸೂರೆನ್ಸ್ ಕೋ. ಲಿಮಿಟೆಡ್

ಇದೇ ತಿಂಗಳ 5ನೇ ತಾರೀಕಿಗೆ, ತಮ್ಮ ಹಕ್ಕುಬಾಧ್ಯತೆಗಳನ್ನು ತೋರಿಸುವ ಪತ್ರಗಳು ಎಲ್ಲಾ ಕಂಪೆನಿಗಳಿಗೆ ಕಳುಹಿಸಲಾಗಿರುವವು ನಿಮ್ಮ ಮುಖ್ಯ ಏಜಂಟರಾದ ಮೆಸರ್ಸ್ ಕಾವಾರ್ ಏಂಡ್ ಕೋ—ಇವರು ತಮ್ಮ ಈ ಕೆಳಗಿನ ತಂತಿ ಸಮಾಚಾರವನ್ನು 14ನೇ ತಾರೀಕಿಗೆ ಪಡೆದಿರುವರು

'ಪೊಲಿಸಿ ನಂಬ್ರ 6337. ರಾಜಪ್ಪನವರ ಹಕ್ಕು ಬಾಧ್ಯತೆಯು ಅಂಗೀಕರಿಸೋಣಾಗಿಯದೆ ಪೊಲಿಸಿಯು ಡಿಶ್ಚಾರ್ಜ ಮಾಡಲಿಕ್ಕೆ ಕಳುಹಲ್ಪಟ್ಟಿದೆ—ವರ್—ಝೆನಿತ್ ಲೈಫ್'

ಪೊಲಿಸಿಯು ಈ ಜೊತೆತ್ತು ಬಂದು ತಲ್ಪಿರುವದು ನಾನದನ್ನು ನಿಮ್ಮ ಮುಖ್ಯ ಏಜಂಟರಾದ ಕಾವಾರ್ ಎಂಡ್ ಕೋ—ಇವರಿಗೆ ಕೊಟ್ಟ ತಕ್ಷಣ ನನ್ನ ಹಕ್ಕಿನ ಐವೇಜನ್ನು ಸಂಪೂರ್ಣವಾಗಿ ಕೊಟ್ಟಿರುವರು ಆದರೆ ಇತರ ಕಂಪೆನಿಗಳಿಂದ ಹಕ್ಕು ಬಾಧ್ಯತೆಯ ಪತ್ರಗಳು ತಲ್ಪಿದ ವಿಷಯದಲ್ಲಿ ಉತ್ತರವೇ ಇಲ್ಲ

ಝೆನಿತ್ ಕಂಪೆನಿಯು, ಹಣ ಸಂದಾಯದ ವಿಷಯದಲ್ಲಿ ಬಹಳ ತೀವ್ರವಾಗಿರುವುದೆಂದು ಇದು ವರೆಗೂ ಕೇಳಿದ್ದೆನು ಆದರೆ ಈಗ ನನ್ನ ಸ್ವಾನುಭವವು ಮೇಲಿನ ಕಂಪೆನಿಯ ವಿಷಯದಲ್ಲಿ ಸಂಪೂರ್ಣ ವಿಶ್ವಾಸವನ್ನು ಹುಟ್ಟಿಸಿರುವದು

ಇತಿ ನಿಮ್ಮ ನಂಬಿಗಸ್ತ

ಎ ರಾಜಪ್ಪ,

ಪಿ ಡಬ್ಲ್ಯು ಡಿ ಕಂಟ್ರಾಕ್ಟರ್

## ಆಶ್ಚರ್ಯಕರ ಔಷಧಿ

ಅತಿಸಾರ, ಅಜೀರ್ಣದಿಂದಾದ ಎಂತಹ ಮಲಬದ್ಧತೆಯಾದರೂ ಓಡುವದು,

ಏತರಿಂದ?

ಹಿಂದೀ ಔಷಧಿ ಹಿಂದೀಯರಿಗಾಗಿ — HEDAURIN DYSENTERY CHOLERA CURE — ಹಿಂದೀಯರಿಂದಲೇ ವ್ಯಾಪಾರಕ್ಕೆ

ಹಿಂದೀಯರಿಂದಲೇ ಕಂಡುಹಿಡಿಯಲ್ಪಟ್ಟಿದ್ದು ತರಲ್ಪಟ್ಟಿದು

ಔಷಧಿ ಕ್ರಯ ಆಣೆ 0—15—0 2 ಔಷಧಿನ ಬಾಟಲಿಗೆ ರೂ 1—12—0

ಪರೀಕ್ಷಿಸಿ ತೃಪ್ತರಾಗಿರಿ!

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಆಫೀಸು, ಡೊಂಗರಕೇರಿ ರಸ್ತೆ, ಮಂಗಳೂರು.

ದಿ ಕಿಣಿ ಡಿಸ್ಪೆನ್ಸರಿ, ಕೊಡಿಯಾಲಬೈಲ್ ಪೋಸ್ಟು, ದಕ್ಷಿಣ ಕನ್ನಡಾ

ಶರ್ಮಾಸ್ ಫಾರ್ಮಸ್ಯುಟಿಕಲ್ ವರ್ಕ್ಸ್, ಜೋಡುಮಾರ್ಗ ರಸ್ತೆ, ಮಂಗಳೂರು ದ. ಕ.

— ಇವರ —

## ಆಯುರ್ವೇದೀಯ ಸಿದ್ಧೌಷಧಗಳು.

ಅಶೋಕ ಮಿಶ್ರಣ — ನಿಮ್ಮ ಸಂಸಾರವು ಸುಖಮಯವಾಗಿ ವಿರಾಜಿಸಬೇಕೆಂದಿದ್ದರೆ— ಮುಟ್ಟುದೋಷ, ಬಂಜೆತನ ಮೊದಲಾದ ರೋಗಗಳಿಂದ ನಿತ್ಯ ದುಃಖಿನಿಯಾಗಿರುವ ಸ್ತ್ರೀಯರ ಸುಖಕ್ಕಾಗಿ ಇದೋ ವನಿತೆಯರ ಪುನರುಜ್ಜೀವನಕ್ಕೆ ನಂದನವನದಂತಿರುವ 'ಶರ್ಮಾರವರ ಅಶೋಕ ಮಿಶ್ರಣ'ವನ್ನೇ ಸೇವಿಸಿರಿ ಮರೆಯಬೇಡಿ! ಸೀಸೆಯ ಬೆಲೆ ರೂ 2—0—0 ಮಾತ್ರ ಟ ಖ ಬೇರೆ

ಮೇಹರಕ್ಷಾಮೃತಂ — ಇದೀಗ ಬಗೆಬಗೆಯ ಮೇಹಗಳನ್ನೂ ಸ್ತ್ರೀಯರ ಸಂಸರ್ಗದ ರೋಗಗಳನ್ನೂ ಶೀಘ್ರದಲ್ಲೇ ನಾಶಗೊಳಿಸುವಲ್ಲಿ ಮೂತ್ರಾಶಯದ ಹುಣ್ಣುಗಳಿಗೂ, ಬಿಳಿದು ಇತ್ಯಾದಿ ಸ್ರಾವವಾಗುವದಕ್ಕೂ ದಿವ್ಯವಾದ ಔಷಧಿ ಮೇಹರಕ್ಷಾಮೃತವು ಅಮೃತ ಸಮಾನವಾಗಿರುವುದೆಂಬುದನ್ನು ನೆನಪಿನಲ್ಲಿಡಿ! ಸೀಸೆಯ ಬೆಲೆ ರೂ 2—0—0 ಮಾತ್ರ ಟ ಖ ಬೇರೆ.

[illegible] ವಿಶೇಷ ಸಿದ್ಧೌಷಧಗಳ [illegible] ಪಟ್ಟಿ ಗಾಗಿಯೂ ವ್ಯಾಪಾರಸ್ಥರ ನಿಬಂಧನೆಗಳಿಗಾಗಿಯೂ ನಮಗೆ ಪತ್ರ ಬರೆದು ಕೇಳಿಕೊಳ್ಳಿರಿ!

ಸಾಮುಖ್ಯ ಏಜಂಟರು —

ಶ್ರೀ ರಾಧಾಕೃಷ್ಣ ವಿಲಾಸ, ರಥಬೀದಿ ಮಂಗಳೂರು ದ. ಕ.

## ಕಾರ್ಕಳಕ್ಕೊಂದು ಹಾಯರ್ ಎಲಿಮೆಂಟರಿ ಶಾಲೆಯ ಆವಶ್ಯಕತೆ

ಸಾರ

ಮನುಷ್ಯನ ಇಹಪರ ಸುಖಾಭಿವೃದ್ಧಿಗೆ ವಿದ್ಯೆಯೂ ಐಶ್ವರ್ಯವೂ ಮುಖ್ಯ ಕಾರಣವಾಗಿವೆ ಆದರೆ ಒಂದು ದೃಷ್ಟಿಯಿಂದ ವಿಚಾರ ಮಾಡುತ್ತ ಹೋದರೆ ಐಶ್ವರ್ಯ ಸಂಪಾದನೆ ಮಾಡುವದಕ್ಕಿಂತ ವಿದ್ಯಾವಂತನಾಗಲಿಕ್ಕೆ ಪ್ರಯತ್ನಿಸುವದೇ ಒಬ್ಬನ ಮುಖ್ಯ ಕರ್ತವ್ಯವಾಗಬೇಕು ಯಾಕೆಂದರೆ ವಿದ್ಯೆಯು ಇದ್ದರೆ ತಾನೆ ಐಶ್ವರ್ಯವು ಸ್ಥಿರವಾಗಿ ನಿಲ್ಲುವದು

ಆದ್ದರಿಂದಲೇ ಪ್ರಜೆಗಳಲ್ಲಿ ಮತ್ತು ಸಾಮಾಜಿಕರಲ್ಲಿ ವಿದ್ಯಾಪ್ರಚಾರವನ್ನುಂಟು ಮಾಡುವದಕ್ಕೋಸ್ಕರ ಸರಕಾರವೂ ಸಮಾಜವೂ ಹಿಂದಿನಿಂದ ಈ ವರೆಗೆ ಪ್ರಯತ್ನಿಸುತ್ತದೆ ಸಾರ್ವಜನಿಕ ವಿದ್ಯಾಪ್ರಚಾರದ ವಿಷಯದಲ್ಲಿ ಈಗಿನ ಸರಕಾರದ ಘೋಷಣೆಯು ಹೆಚ್ಚಿನವರಿಗೆ ಸಮಾಧಾನವನ್ನುಂಟುಮಾಡುತ್ತಿರುವದಿಲ್ಲ ಹೀಗಿರುವದರಿಂದ ಸಾಮಾಜಿಕರ ಕ್ಷೇಮಕ್ಕಾಗಿ ಸಮಾಜವೇ ಪ್ರಯತ್ನಿಸಬೇಕಾಗಿದೆ ಅಂದರೆ ನಮ್ಮ ಪರಿಸ್ಥಿತಿಯಲ್ಲಿ ನಾಡಿನಲ್ಲಿ ವಿದ್ಯಾಪ್ರಚಾರವಾಗುವದಕ್ಕೋಸ್ಕರ ಆಯಾ ಊರಿನ ಜವಾಬ್ದಾರಿಯುಳ್ಳ ಶ್ರೀಮಂತರೂ ಮಠ ದೇವಾಲಯಗಳೂ ಇನ್ನಿತರ ಸಾರ್ವಜನಿಕ ಸಂಸ್ಥೆಗಳೂ ಪ್ರಯತ್ನಿಸಬೇಕಾಗಿದೆ ವಿದ್ಯಾಪ್ರಚಾರಕ್ಕಾಗಿ ಶ್ರೀಮಂತರೂ ಸಾರ್ವಜನಿಕ ಸಂಸ್ಥೆಗಳೂ ಎಷ್ಟೆಷ್ಟು ಪ್ರಯತ್ನಪಟ್ಟರೂ ಕಡಿಮೆಯೇ

ಈ ರೀತಿ ನಮ್ಮ ಪ್ರಾಂತ್ಯದ ಶ್ರೀಮಂತ ದೇವಾಲಯಗಳೂ ಸಂಸ್ಥೆಗಳೂ ಧರ್ಮದ ದೃಷ್ಟಿಯಿಂದ ಬಹಳಷ್ಟು ಕೆಲಸಮಾಡುತ್ತಿವೆ ಎಂಬುದು ಸಂತೋಷದ ಮಾತು ನಮ್ಮ ಕಾರ್ಕಳದ ಶ್ರೀ ವೆಂಕಟ್ರಮಣ ದೇವಾಲಯವು ಕೂಡ ಇದಕ್ಕೆ ಅಪವಾದವಾಗಿಲ್ಲ ಈ ದೇವಾಲಯದವರು ಈಗ್ಗೆ ಅನೇಕ ವರ್ಷಗಳಿಂದ ಒಂದು ಹಿಂದೂ ಬಾಲಿಕಾ ಪಾಠಶಾಲೆಯನ್ನೂ ಆಯುರ್ವೇದ ಔಷಧಾಲಯವನ್ನೂ ನಡೆಯಿಸುತ್ತ ಬಂದಿರುವದು ಮಾತ್ರವಲ್ಲದೆ ಸ್ಥಳೀಯ ಸಂಸ್ಕೃತ ಕಾಲೇಜಿಗೂ ಧನಸಹಾಯವಿತ್ತಿರುವರು ಅಲ್ಲದೆ ಕಳೆದ ವರುಷದಿಂದ ಹುಡುಗರದೊಂದು ಪ್ರಾಥಮಿಕ ಶಾಲೆಯನ್ನು ನಡೆಯಿಸುತ್ತ ಬಂದಿದ್ದು ಅದಕ್ಕೀಗ ವಿದ್ಯಾಖಾತೆಯಿಂದ ತಾತ್ಕಾಲಿಕ ಮಂಜೂರಾತಿಯೂ ದೊರಕಿರುವದಾಗಿ ಕೇಳುತ್ತಿದ್ದೇವೆ ಇಷ್ಟೆಲ್ಲಾ ಪರೋಪಕಾರದ ಸತ್ಕಾರ್ಯಗಳಿಗಾಗಿ ದೇವಸ್ಥಾನದ ಮೊಕ್ತೇಸರರಿಗೆ ಭಜಕರೆಲ್ಲ ಕೃತಜ್ಞರಾಗಿದ್ದರೂ ಸಾಲದು ಎಷ್ಟು ಧನ್ಯವಾದಗಳನ್ನರ್ಪಿಸಿದರೂ ಕಡಿಮೆಯೇ

ಆದರೆ ದಶಕದ ಹಿಂದಿನ ಹತ್ತು ಸಂಖ್ಯೆಯ ಶಾಲೆಯಂತೆ ಬೆಳೆಯುತ್ತಿರುವ ಈ ಮೇಲೆ ಹೇಳಿದ ಪ್ರಾಥಮಿಕ ಶಾಲೆಗೊಂದು ಸ್ವತಂತ್ರ ಕಟ್ಟೋಣವಿಲ್ಲದಿರುವುದು ಈ ಕಾರಣದಿಂದಲೇ ವಿದ್ಯಾಖಾತೆಯಿಂದ ಅದಕ್ಕೀಗ ಖಾಯಂ ಮಂಜೂರಾತಿ ದೊರೆತಿಲ್ಲ. ಈ ಶಾಲೆಯಲ್ಲಿ ಮಕ್ಕಳ ಸಂಖ್ಯೆಯು ಬೆಳೆಯುತ್ತಿರುವದನ್ನು ಕಂಡರೆ ಸಂಸ್ಥೆಯ ಆವಶ್ಯಕತೆಯು ಸ್ಪಷ್ಟವಾಗುತ್ತದೆ ಹೀಗಿದ್ದರೂ ಕೂಡ ದೇವಸ್ಥಾನದ ಮೊಕ್ತೇಸರರಲ್ಲಿ ಕೆಲವರಿಗೆ ಈ ಸಂಸ್ಥೆಯು ಬೆಳೆಯುವಿಲ್ಲವಂತೆ ಶಾಲೆಗೊಂದು ಸ್ವತಂತ್ರ ಕಟ್ಟೋಣವೂ ಅನಾವಶ್ಯಕವೆಂದು ಅವರಲ್ಲಿ ಕೆಲವರ ಅಭಿಪ್ರಾಯವಿರುವದಂತೆ ಇದೀಗ ನಮ್ಮೂರ ದೌರ್ಭಾಗ್ಯ

ಇರಲಿ ಈಗಿನ ಹಾಯರ್ ಎಲಿಮೆಂಟರಿ ಶಿಕ್ಷಣ ಕ್ರಮದಲ್ಲೂ ನ್ಯೂನತೆಗಳಿರುವವಾದರೆ ಅದನ್ನು ಸ್ಥಳೀಯ ವಿದ್ಯಮಾನಗಳಿಗನುಸರಿಸಿ ಸರಿಪಡಿಸುವ ಸ್ವಾತಂತ್ರ್ಯವು ಆಯಾ ಖಾಸಗಿ ಶಾಲೆಗಳಿಗಿದ್ದೇ ಇದೆ ಹೀಗಿದ್ದು ಅಂಥ ಹಾಯರ್ ಎಲಿಮೆಂಟರಿ ಶಾಲೆಗಳ ಶಿಕ್ಷಣದಿಂದ ಬಹುದಾದ ನ್ಯೂನತೆಗಳನ್ನೂ ದೂರಪಡಿಸಿ ತನ್ಮೂಲಕ ಸಮಾಜಕ್ಕೆ ಹಿತವನ್ನುಂಟುಮಾಡುವದರ ಬದಲು ಹಾಯರ್ ಎಲಿಮೆಂಟರಿ ಶಾಲೆಯೇ ಬೇಡವೆನ್ನುವದು ಅಸಮಂಜಸವೆನ್ನಿಸಲಾರದೆ? ಹಾಗೆ ಮಾಡುವದರಿಂದ ಯಾವ ಒಳ್ಳೆಯದನ್ನು ಸಾಧಿಸಿದಂತಾಗುವದು?

ಆದ್ದರಿಂದ ನಮ್ಮ ದೇವಸ್ಥಾನದ ಮೊಕ್ತೇಸರರು, ಭಜಕರ ಹಿತವನ್ನು ಮನಸ್ಸಿನಲ್ಲಿಟ್ಟು ಒಮ್ಮನಸ್ಸಿನಿಂದ ಕಾರ್ಕಳದಲ್ಲೊಂದು ಹಾಯರ್ ಎಲಿಮೆಂಟರಿ ಶಾಲೆಯನ್ನು ಸ್ಥಾಪಿಸಿ ಧನಸಹಾಯ ಮಾಡುತ್ತಲೂ, ಅಗತ್ಯವುಳ್ಳ ಅನುಕೂಲತೆಗಳನ್ನು ಕಲ್ಪಿಸಿಕೊಡುತ್ತಲೂ ಇದ್ದು ಮುಂದಿನ ಜನಾಂಗದವರಾದ ಈಗಿನ ಮಕ್ಕಳ ಉಪಕಾರಸ್ಮರಣೆಗೂ, ದೇವರ ಪ್ರೀತಿಗೂ ಕಾರಣರಾಗುವರೆಂದು ನಂಬುತ್ತೇವೆ

'ವೆಂಕಟರಾಮಣ ಭಕ್ತ'

## WANTED

Agents who can turn good business in the towns of Bun, Puttur & Karkal and other important centres

Apply without delay to —

**The Bombay Life office,**
Mangalore or Udipi.

N B —Ask for our Scheme of Prizes for 1930

## Grand Clearing Sale!

ಜಗತ್ಪ್ರಸಿದ್ಧವಾದ ನಮ್ಮ "ಒಟ್ಟೊ ಫುಲಾರಾಮ" ಸುಗಂಧದ ಐದು ಬಾಟಲಿಗಳನ್ನು ಮೂರು ರೂಪಾಯಿಗಳಿಗೆ ಕೊಳ್ಳುವವರು ಈ ಕೆಳಗಿನವುಗಳನ್ನು ಧರ್ಮಾರ್ಥವಾಗಿ ಪಡೆಯುವರು —

1 ಕಂವಸ್ತ್ರ, 1 ಫೌಂಟನ್ ಪೆನು, 1 ಕ್ಲಿಪ್, 1 ಚರ್ಮದ ಚೀಲ, 1 ಸುಗಂಧ ಸಾಬೂನು, 1 ಅಂದವಾದ ಸಿಗರೇಟು ಕೇಸು, ಉತ್ತಮ ಮೊನೆಗಳು, 1 ಕೋಪಿಂಗ್ ಪೆನ್ಸಿಲು, 1 ಸಿಲ್ಕ ಗಿಲಿಟಿನ ಗುಂಡಿಗಳು, 1 ಕನ್ನಡಿ, 1 ಬಾಚಣಿಗೆ, 1 ಕತ್ತರಿ 1 ಕ್ಷೌರದ ಬ್ರಶ್ಶು 1 ಹರಳಿನ ಉಂಗುರ, ಅಂಚೆವೆಚ್ಚ ಆಣೆ 0—8—0

ಇಂಗ್ಲೀಷಿನಲ್ಲಿ ಬರೆಯಿರಿ.

**Indian Stores,**
*5. Beadon Street,*
CALCUTTA

## ಶಾಸ್ತ್ರೀಯ
# ಅಮೂಲ್ಯ ಔಷಧಗಳು.

ಅಮೃತಾಶ್ವಗಂಧಮ ತೈಲಃ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಾಣಿವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು ಮಿದುಳು ಮತ್ತು ಸ್ನಾಯು ಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ

ಚ್ಯವನಪ್ರಾಶಃ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನ ವಾಗಿದೆ ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿ ಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ

### ಕಸ್ತೂರಿಮಿತ್ರ!
### ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಹೊಲಸನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಥಿತವಾದ ಗರ್ಭ ಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡು ವದು

ರಸಾಯನ ಗುಣದಿಂದ ಬಾಣಂತಿಯು—ಗರ್ಭ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿ ಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗ ಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭ ಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿ ಸುವದು

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು

ಕ್ರಯ ಬಾಟ್ಲಿ 1ಕ್ಕೆ 2-0-0 ಪೋಸ್ಟೇಜು ವಗೈರೆ ಬೇರೆ

ಹೆಚ್ಚಿನ ಮಾಹಿತಿಗೆ "ಆರ್ಯ ಔಷಧಾಲಯ" ಎಂಬ ಪುಸ್ತಕಕ್ಕೆ ಬರೆಯಿರಿ

ಯಮ್. ಎ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು, ದ ಕನ್ನಡ

---

### ಸುಂದರವಾದ ಜರಿಕೆಲಸ ಮಾಡಿದ ಕಾಶಿಯ
### — ಪಟ್ಟೆ ಸೀರೆಗಳು —

ಜರಿ ಅಂಚುಗಳುಳ್ಳ ಪ್ಲೈನ್ ಸೀರೆಗಳ ಮೊಳ ... ಮೋಳ ಅಗಲ ರೂ ... ಲಾಗಾಯತು ರೂ ... ವರೆಗೆ ಬುಟ್ಟಿಗಳ ಕ್ರಯ ರೂ ... ರೂಪಾಯಿ ... ವರೆಗೆ ... ಎಲ್ಲವಕ್ಕೂ ಬಣ್ಣಾನೆ ಶಾಲು ಹಿಡ್ಡರುವದು, ಕಸ್ತೂರಿ ... ಕಾಶಿಯ ಸಾಮಾನುಗಳ ... ಸಾಮಗ್ರಿಗಳ ಇತ್ಯಾದಿ ... ಯುವವು ... ಪ್ರೋತ್ಸಾಹಿಸುವವರಿಗೆ ... ಹೆಚ್ಚಿಗೆ ವಿಷಯ ಕ್ಯಾಟಲಾಗಿನಿಂದ ಅಥವಾ ಪತ್ರ ಮೂಲಕ

ವಿಳಾಸ—

ಶಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ್
ಮಣಿಕರ್ಣಿಕಾಘಾಟ್ ಕಾಶೀ ಬನಾರಸ್ ಸಿಟಿ

---

### The Udipi Mutual Benefit Fund, UDIPI
### ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುರಿಫಂಡುಗಳೂ ನಡೆಯಿಸಲ್ಪಡು ತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯ ಬಹುದು

ಎಂ. ಮುಖ್ಯಪ್ರಾಣಭಟ್ಟ, ಪ್ರೊಪ್ರೈಟರ್

---

# The Canara Bank Limited, Mangalore.
## ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

Established July 1906 — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

**BRANCHES** -Karkal Kasargod, Cochin Udipi Gangolli Coondapur Bombay Puttur Calicut & Alleppey

ಬ್ರಾಂಚ್—ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲಪ

| | |
|---|---|
| Authorised and fully paid up Capital Rs 300 000 0–0 | ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕಟ್ಟ ಮೂಲಧನವು ರೂ 300 00 0–0 |
| Reserve and other sinking Funds Rs 431 732–9–7 | ರಿಜರ್ವ ಮತ್ತು ಇತರ ಫಂಡುಗಳು ರೂ 431,732 9–7 |
| Amount invested on G P Notes Rs 817 097–2–0 | ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ 817,09 –2–0 |
| Rates of interest on fixed deposits at Head Office and Branch 6¼% for 2 Years 6% 1 Year | ಠಾಯಿ ಠೇವಣಿಗಳ ಮೇಲೆ ಕೊಡಲ್ಪಡುವ ಬಡ್ಡಿ ೨ ವರುಷಗಳಿಗೆ ಸೇಕಡಾ 6¼% 1 ವರುಷಕ್ಕೆ ಸೇಕಡಾ 6 |
| Season deposits of Rs 1000/– & above terminable by the end of June are received at 6¼% p a | ಜೂನ್ ತಿಂಗಳ ಒಳಗೆ ಮುಗಿಯುವ ರೂ 1000/– ಮತ್ತು ... ಡಿಪೋಸಿಟುಗಳಿಗೆ ಬಡ್ಡಿ ಸೇಕಡಾ 6¼ |

Current Account Deposits received and interest allowed on daily balance of Rs 50 and above that or multiples of Rs 50 @ 3% from 1st January to 30th June and @ 2% from 1st July to 31st December No interest will be allowed unless the deposit or interest is not less than Rs 5 during a period of 6 months ending either 30th June or 31st December in any year

Except by special arrangement no interest is allowed on sums exceeding Rs 10 000 in the case of Head Office and Bombay & Cochin Branches and on sums exceeding R ... 000 in the case of the remaining Branches

Short notice deposits requiring one week's notice of withdrawal given at any time after one month from the date of deposit are received and interest allowed at 4 per annum Interest on such deposits will cease on notice

*For further particulars please apply to*

Canara Bank Ltd,
*Mangalore 13–10–1930*

**K. Venkat Rao,**
*Secretary*

---

# The Pangal Nayak Bank, Ltd.

| Branch Office Mangalore | Head Office Udipi *Established 1920* | Agency Office Cochin |
|---|---|---|

| | |
|---|---|
| Authorised Capital Rs 2 00,000 | Paid up Capital Rs 1 75 000- |
| Issued Capital Rs 1 75,000- | Reserve and other Funds Rs 1,42 810- |

***Fixed Deposits received for***

***24 months at 6***, ***12, 15, 18 or 21 months at 6***, ***6 or 9 months at 5***, ***3 months at 5***

***Interest being payable every 3 months.***

Current Deposit Accounts are opened and interest allowed on Daily balances

*Further information may be had on application to the* SECRETARY *at the* HEAD OFFICE *or to the* AGENT *at the* BRANCH

Office of the Bank
Udipi 6–0 1930

P Laxman Nayak,
Secretary

---

ತಯಾರಾಗಿವೆ — ಮಾರಾಟಕ್ಕೆ ಸಿದ್ಧವಿವೆ — ಕ್ರಯಮಾಡಿರಿ

1931ನೇ ಇಸವಿಯ

# ಪೋಕೆಟ್ ಡಾಯರಿಗಳು.

1931ನೇ ಇಸವಿಯ

| | | | | | | |
|---|---|---|---|---|---|---|
| ಅಂದವಾದ ಕೆಲಿಕೊ ಬ್ಯಾಂಡಿನ ದೊಡ್ಡ ಸ್ವಾಜಿನ ಡ್ಯಾರಿ (ಇಂಗ್ಲೀಷ ಮಟಿನೊಂದಿಗೆ) | 1 | | ಕೆಲಿಕೊ ಬ್ಯಾಂಡಿನ ಮೀಡಿಯಮ್ ಸಾಜಿನ ಮುಟ್ಟಳದ್ದು | | | |
| ಕೆಲಿಕೊ ಬ್ಯಾಂಡು ದೊಡ್ಡದು ಮುಟ್ಟಳದ್ದು | 4 | | ಮೀಡಿಯಮ್ ಸ್ಯಾಜ್ ಫ್ಲೆಕ್ಸ ಬ್ಯಾಂಡ್ ಡ್ಯಾರಿ | | 0 | 1 |
| ಕೆಲಿಕೊ ಬ್ಯಾಂಡು ದೊಡ್ಡದು (ಕನ್ನಡ ಮಟಿನೊಂದಿಗೆ) | 0 | 8 | ಸಣ್ಣ ಸ್ಯಾಜಿನ ಕೆಲಿಕೊ ಬ್ಯಾಂಡ್ ಡ್ಯಾರಿ | 0 | 0 | 0 |
| ಮುಟ್ಟಳದ್ದು | 0 | 14 | ಮುಟ್ಟಳದ್ದು | | 10 | 0 |
| | | | ಫ್ಲೆಕ್ಸ ಬ್ಯಾಂಡ್ ಡ್ಯಾರಿ | 1 | 0 | 0 |

ದೊಡ್ಡ ಸ್ಯಾಜಿನ ಡ್ಯಾರಿಯಲ್ಲಿ ಟಪ್ಪಾಲು ಮತ್ತು ಕೋರ್ಟು ವ್ಯವಹಾರ, ಸ್ಟಾಂಪು ಅಕ್ಟು ಮುಂತಾದ ಕ್ರಮಗಳನ್ನು ಕನ್ನಡದಲ್ಲಿ ಕೊಟ್ಟಿರುತ್ತದೆ

ರಖಂ ತೆಗೆದುಕೊಳ್ಳುವವರಿಗೂ, ವ್ಯಾಪಾರಿಗಳಿಗೂ ತುಂಬಾ ಕಮಿಶನು ಕೊಡಲಾಗುವದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

# ಮಹಾತ್ಮಾಜಿಯವರ ಸತ್ಯಾಗ್ರಹ ಸಮಾಚಾರ.

## ತಾರೀಖು ೧೧.

### ಕರಾಚಿಯಲ್ಲಿ.

ರೂಪಾಯಿ ೩೦,೦೦೦ ಕ್ರಯಬಾಳುವ ವಿದೇಶೀ ಜವಳಿಯನ್ನು ಗೋವರ್ಧನದಾಸ್ ಮಾರ್ಕೆಟಿನಿಂದ ಗುಪ್ತವಾಗಿ ಯಾರ ತಿಳುವಳಿಕೆಗೂ ಬಾರದ ಯಾವದೋ ಒಂದು ರಾಹೆಗೆ ಪೋಲೀಸ್ ಸಹಾಯದೊಡನೆ ಒಯ್ಯಲಾಯಿತು. ಸುಮಾರು ೧೦ ದಿನಗಳ ಹಿಂದೆ, ಕರಾಚಿಯ ಪ್ರಖ್ಯಾತಿಪಟ್ಟ ವಿದೇಶೀ ಬಟ್ಟೆ ವ್ಯಾಪಾರಿಗಳೊಬ್ಬರು, ಸ್ವಯಂಸೇವಕರ ಪಿಕೆಟಿಂಗ್ ಕಾರ್ಯಕ್ರಮಗಳ ಪರಿಣಾಮವಾಗಿ ಹೆಚ್ಚಿನ ನಷ್ಟಕ್ಕೆ ಒಳಪಟ್ಟರು. ಅವರ ದುಖಾನೆಯಿಂದ ಒಂದು ಬೇಲ್ ವಿದೇಶಿ ಬಟ್ಟೆಯನ್ನು ಜುಲುಮಿನಿಂದ ಕೊಂಡೊಯ್ದರೆಂದೂ ವರ್ತಮಾನವಿದೆ. ಮೇಲೆ ಹೇಳಿದ ಗೋವರ್ಧನದಾಸ್ ಮಾರ್ಕೆಟಿನಿಂದ ಮೂರು ಲೋರಿಗಳು ತುಂಬುವಷ್ಟು ಪರದೇಶಿ ಬಟ್ಟೆಯನ್ನು ಬಹಳ ಗುಪ್ತ ರೀತಿಯಿಂದ ಒಯ್ಯಲಾಯಿತಷ್ಟೆ! ಈ ಬಟ್ಟೆಯನ್ನು ಏತಕ್ಕೆ ಒಯ್ಯಲಾಯಿತು? ಎಲ್ಲಿಗೆ ಒಯ್ಯಲಾಯಿತು? ಎಂಬ ವಿಷಯಗಳು ಯಾರೊಬ್ಬರಿಗೂ ತಿಳಿಯದಾಗಿದ್ದವು. ಲೋರಿಗಳು ಹೊರಟ ಕೂಡಲೆ ಜನಸ್ತೋಮವು ಅಂಗಡಿಯ ಒಳಿಯಲ್ಲಿ ತುಂಬ, ಸ್ಥಳವು ಸಂಕೋಚವಾಗಹತ್ತಿತು. ಅಲ್ಲಿನ ಸಮರ ಸಂಸ್ಥೆಯ ಡಿಕ್ಟೇಟರರಾಗಿದ್ದ ಶ್ರೀಮತಿ ಶಿಕಿದೆನ್ನರನ್ನು ಕರೆಯಕಳುಹಿದರು. ಅವರು ಬರುವದರೊಳಗಾಗಿ ಅಂಗಡಿಯು ಬರಿದಾಗಿದ್ದಿತು. ಬಟ್ಟೆಯ ಲೋರಿಗಳು ಎತ್ತಲೋ ಮಾಯವಾಗಿದ್ದವು, ಪೋಲೀಸರು ತಮ್ಮ ಮನೆಗಳಿಗೆ ತೆರಳುತ್ತಿದ್ದರು, ಜನರು ಅತ್ತಿತ್ತ ಚದರುತ್ತಿದ್ದರಂತೆ!

### ನವದಿಲ್ಲಿಯಲ್ಲಿ

"ಜಹಾಗೀರ್ ಮತ್ತು ಕಂಪೆನಿ," "ಜೆ ಆರ್ ಮಾರ್ಟಿನ್ ಮತ್ತು ಕಂಪೆನಿ" ಎಂಬೆರಡು ಕಂಪೆನಿಗಳ ಶಾಖೆಗಳನ್ನು ಹೊಸದಾಗಿ ತೆರೆದಿದ್ದರು. ಹೊಸ ಅಂಗಡಿಗಳಿಗೆ ಹೊಸದಾಗಿ ಬಂದ ಗಿರಾಕಿಗಳೆಂದರೆ—ಸತ್ಯಾಗ್ರಹ ಸ್ವಯಂಸೇವಕರು. ಇವರು ಪಿಕೆಟಿಂಗ್ ನಡಿಸಿದರು, ಪರಿಣಾಮವಾಗಿ ಅಂಗಡಿಗಳ ಮಾಲಿಕರು ಸೈನ್ ಬೋರ್ಡುಗಳನ್ನು ತೆಗೆದೇ ಬಿಟ್ಟರಂತೆ!

### ಢಾಕ್ಕಾ.

ದೇಶದ ಕ್ರಿಮಿನಲ್ ಕೋರ್ಟುಗಳಲ್ಲಿ ಆಶ್ಚರ್ಯಕರವಾದ ಒಂದು ವರ್ತಮಾನವು ಹರಡಿರುವುದು. ಅನೇಕ ಕೊಲೆಗಳಲ್ಲಿ ಮತ್ತು ದರೋಡೆಗಳಲ್ಲಿ ಹೆಸರುವಾಸಿಯಾಗಿ ಲೋಕಪ್ಪಿನಲ್ಲಿ ಇಡಲ್ಪಟ್ಟ ಕ್ರಿಮಿನಲ್ ಅಪಾದಿತನೊಬ್ಬನು ಜೈಲಿನಿಂದ ತಪ್ಪಿಸಿದವನಂತೆ! ತಪ್ಪಿಸಿಕೊಂಡು ಓಡಿಹೋದವನ ಕೂಡೆ ಒಂದು ಆಯುಧವೂ ಇದ್ದಿತೆಂದು ತಿಳಿದುಬರುತ್ತದೆ. ಈತನ ಹೆಸರು ಮಾಹಿಯುದ್ದಿನ್. ಈತನನ್ನು ಮೂತ್ರ ಮಾಡುವದಕ್ಕಾಗಿ, ಒಬ್ಬ ಪೋಲೀಸಿನವನು ಪಾಯಖಾನೆಗೆ ಕರಕೊಂಡು ಹೋಗಿದ್ದನು. ಪಾಯಖಾನೆಗೆ ಮುಟ್ಟಿದ ಕೂಡಲೆ, ಪೋಲೀಸಿನವನು ಅಪಾದಿತನ ಸೊಂಟಕ್ಕೆ ಹಗ್ಗ ಹಾಕಿ ಹಗ್ಗದ ಒಂದು ತುದಿಯನ್ನು ಬಲವಾಗಿ ಹಿಡಿದುಕೊಂಡು ಪಾಯಖಾನೆಯ ಹೊರಗಡೆ ಕಾದು ನಿಂತಿದ್ದನು. ಅಪಾದಿತನು ಒಳಗೆ—ಪೋಲೀಸು ಕಾನ್‌ಸ್ಟೇಬಲನು ಹೊರಗೆ. ಕಾನ್‌ಸ್ಟೇಬಲನು ಅಪಾದಿತನನ್ನು ಕಾಯುತ್ತ ನಿಂತಿದ್ದನು, ಆದರೆ ಅಪಾದಿತನು ಮಾತ್ರ ಪಾಯಖಾನೆಯಿಂದ ಹೊರಹೊರಡುವುದೇ ಇಲ್ಲ. ಎಷ್ಟು ಹೊತ್ತಾದರೂ ಆತನ ಸುಳಿವೇ ಇಲ್ಲದುದನ್ನು ನೋಡಿ ಕಾನ್‌ಸ್ಟೇಬಲನು ಪಾಯಖಾನೆಯ ಒಳಗೆ ಹೋಗಿ ನೋಡಲು, ಹಗ್ಗವು ಚೂರಿಯಿಂದ ಕಡಿಯಲ್ಪಟ್ಟು, ಬಂದಿವಾನನು ಎತ್ತಲೋ ತಪ್ಪಿಸಿದ್ದನು. ಇದನ್ನು ನೋಡಿ ಪೋಲೀಸಿನವನಿಗೆ ಧೈರ್ಯ ಕುಂದಿತು, ಕೆಲಸ ಹೋಗಿ ಬಿಡುವದೋ ಎಂದು ಆತನಿಗೆ ಸಂದೇಹ. ಅಂತೂ ಪೋಲೀಸಿನವನು ಕಣ್ಣೀರು ಸುರಿಸಿ ಗೋಳಿಟ್ಟನಂತೆ! ಕೋರ್ಟಿನವರೆಲ್ಲರೂ ಇದೇನಿರಬಹುದೆಂದು ನೋಡಲಿಕ್ಕಾಗಿ, ಪಾಯಖಾನೆಯ ಬಳಿಗೆ ಬಂದರು.

ಇತ್ತ ತಪ್ಪಿತಸ್ಥನು ಆಯುಧಪಾಣಿಯಾಗಿ ಒಂದು ಬಸ್ತಿಯನ್ನು ಒಳಹೊಕ್ಕು ಎಲ್ಲರಿಗೂ ತನ್ನ ಕೈಯ ಶಸ್ತ್ರವನ್ನು ತೋರಿಸುತ್ತ ಹೆದರಿಸಲಾರಂಭಿಸಿದನು. ತುಸು ಹೊತ್ತಿನ ಮೇಲೆ ಆತನನ್ನು ಮರಳಿ ದಸ್ತಗಿರಿ ಮಾಡಿದರೆಂದು ತಿಳಿದುಬರುತ್ತದೆ.

## ತಾರೀಖು ೧೨.

### ಕರಾಚಿಯಲ್ಲಿ.

ಮೋಟಾರ್ ಲೋರಿಗಳಲ್ಲಿಯೂ, ಕೈಗಾಡಿಗಳಲ್ಲಿಯೂ ಒಯ್ಯಲ್ಪಡುತ್ತಿದ್ದ ಕೆಲವು ವಿದೇಶಿ ಮಾಲುಗಳನ್ನು ದಾರಿಯಲ್ಲಿ ಪಿಕೆಟ್ ಮಾಡಿದುದಕ್ಕಾಗಿ ೧೪ ಮಂದಿ ಸ್ವಯಂಸೇವಕರನ್ನು ದಸ್ತಗಿರಿಮಾಡಿರುವರು. ಒಬ್ಬ ೧೫ ವರ್ಷ ಹುಡುಗನಿಗೆ ಬಲವಾದ ಕೊರಡೆಯ ಏಟುಗಳೂ ದೊರೆತಿರುವುವೆಂದು ತಿಳಿದುಬರುತ್ತದೆ.

ಮಿ| ಭಾವಸೂರ್ ಖೇಮ್‌ಗಾರ್ ಮತ್ತು ೭ ಮಂದಿಯ ಮೇಲೆ ಮಿ| ಚುನಿಲಾಲ್ ಗೋಖಲ್ಗೀಯವರು, ತನ್ನ ಗುಣಕಥನವನ್ನು ಅಲ್ಲಸಲ್ಲದ ರೀತಿಯಿಂದ ವರ್ಣಿಸಿ ಒಂದು ಲೇಖನವನ್ನು ಪ್ರಚುರಗೊಳಿಸಿದುದಕ್ಕಾಗಿ ಮಾನನಷ್ಟಕ್ಕೆ ದಾವಾ ಮಾಡಿದರು. ಜಡ್ಜರು ವಾದಿಯ ನ್ಯಾಯವು ಸರಿಯಾಗಿರುವದೆಂದು ತೀರ್ಪುಕೊಟ್ಟರಲ್ಲದೆ, ಒಂದು ಪೈಯನ್ನು ಮಾನನಷ್ಟವಾಗಿ ಕೊಡಬೇಕೆಂದು ವಿಧಿಸಿರುವರಂತೆ!

### ಪೇಶಾವರದಲ್ಲಿ

ಅಪರಿಚಿತನೊಬ್ಬನು ಕಾಬೂಲ್ ಸಿಟಿ ಪೋಲೀಸಿಗೆ ಸೇರಿದ ಆಲಿ ಮಹಮ್ಮದ್ ಎಂಬ ಒಬ್ಬ ಕಾನ್‌ಸ್ಟೇಬ್ಲರನ್ನು ಕೊಂದು ತಲೆತಪ್ಪಿಸಿರುವನೆಂದು ವದಂತಿ.

### ಕಲ್ಕತ್ತದಲ್ಲಿ

ಕಳೆದ ಎಪ್ರಿಲ್ ತಿಂಗಳ ಅಂತ್ಯದಲ್ಲಿ ಪೋಲೀಸ್ ಕಮಿಶನರಿಂದ ಜ್ಯಾರಿಮಾಡಲ್ಪಟ್ಟ ಮೆರವಣಿಗೆಯ ನಿರೋಧ ಜ್ಯಾಹೀರಾತಿಯನ್ನು ಉಲ್ಲಂಘಿಸಿದುದಕ್ಕಾಗಿ ಶ್ರೀಮತಿ ಸರಸ್ವತಿಬಾಯಿ ಮತ್ತು ಇತರ ಮೂರು ಮಂದಿಯನ್ನು ಕೈದುಮಾಡಿದರು. ಬಂಟಾಲಾಲ್ ಭಾಟಿಯಾ ಮತ್ತು ತಾರಾಚಂದ್ ಭಾಟಿಯಾ ಎಂಬೀರ್ವ ಕಾಂಗ್ರೆಸ್ ಮುಖಂಡರನ್ನೂ ಜೈಲಿಗೆ ಅಟ್ಟಿದ್ದರು. ಇವರ ಪರವಾಗಿ ಜಡ್ಜರ ಕೂಡ ಅಪೀಲು ಮಾಡಲ್ಪಟ್ಟಿರುವದು. ಜಡ್ಜರು ಕೆಳಕೋರ್ಟಿನ ಮ್ಯಾಜಿಸ್ಟ್ರೇಟರನ್ನುದ್ದೇಶಿಸಿ, ಮೇಲೆ ಹೇಳಲ್ಪಟ್ಟ ಆಸಾಮಿಗಳ ಮೊಕದ್ದಮೆಗಳನ್ನು ಅದೇಕೆ ತೆಗೆದುಹಾಕಬಾರದೆಂಬುದಕ್ಕೆ ಯೋಗ್ಯ ಸಬೂಬನ್ನು ಕೊಡಬೇಕೆಂದು ಪ್ರಶ್ನೆಮಾಡಿರುವರಂತೆ! ಅಪಾದಿತರನ್ನು ಜಾಮೀನಿನ ಮೇಲೆ ಬಿಟ್ಟಿರುವರು.

### ನವದಿಲ್ಲಿಯಲ್ಲಿ

ನಾರೀ ಸತ್ಯಾಗ್ರಹಿಗಳು ವಕೀಲರ ಮನೆಗಳನ್ನೂ, ಆಫೀಸುಗಳನ್ನೂ ಪಿಕೆಟ್ ಮಾಡಲಾರಂಭಿಸಿರುವರೆಂದು ತಿಳಿದುಬರುತ್ತದೆ. ತಾ ೧೦ನೇ ದಿನ ಕೆಲಮಂದಿ ಸ್ವಯಂಸೇವಕಿಯರು 'ಬಾರ್ ಎಸೋಸಿಯೇಶನನ್ನು' ಸಂದರ್ಶಿಸಿ, ವಿದೇಶಿ ಬಟ್ಟೆಯನ್ನು ಧರಿಸುತ್ತಿದ್ದ ಕೆಲವು ವಕೀಲರ ಹೆಸರನ್ನು ತಮ್ಮ ಪುಸ್ತಕಗಳಲ್ಲಿ ಬರಕೊಂಡು ಅವರ ಆಫೀಸುಗಳನ್ನು ಪಹರೆಮಾಡಬೇಕೆಂದು ನಿರ್ಧರಿಸಿರುವರು. ಊರ ಕಾಂಗ್ರೆಸ್ ಆಫೀಸಿನ ವರ್ತಮಾನದಂತೆ ಎರಡು ಇಂಗ್ಲೀಷ್ ಫರ್ಮುಗಳು ಪಹರೆಯ ಕಾರ್ಯಕಲಾಪಗಳಿಂದ ಸ್ಥಾನಭೇದವನ್ನು ಹೊಂದಿರುವುವೆಂದು ತಿಳಿದುಬರುತ್ತದೆ.

### ಲಾಹೋರಿನಲ್ಲಿ

'ವೀಕ್ಲಿ ಕೂಮ್ರೇಡ್' ಎಂಬ ವಾರಪತ್ರಿಕೆಯ ಆಫೀಸನ್ನು ಪೋಲೀಸರು ಶೋಧನಡಿಸಿದರು. ಕೆಲವು ಕಾಗದ ಪತ್ರಗಳನ್ನು ಸ್ವಾಧೀನಪಡಿಸಿ, ಸಂಪಾದಕರಾದ ಮಿ. ರಾಮಲಾಲರನ್ನು ೧೨೪(A) ಪ್ರಕರಣದ ಮೇರೆಗೆ ದಸ್ತಗಿರಿ ಮಾಡಿರುವರು.

### ಮುಂಬಾಯಿಯಲ್ಲಿ

ಸ್ವಯಂಸೇವಕನೊಬ್ಬನು ವಿದೇಶಿ ವಸ್ತ್ರವನ್ನೊಯ್ಯುತ್ತಿದ್ದ ಲೋರಿಯ ಅಡಿಗೆ ಬಿದ್ದು ಪ್ರಾಣ ಕಳಕೊಂಡನಷ್ಟೆ! ಆ ವಿಷಯದಲ್ಲಿ ಪೋಲೀಸರ ಹೇಳಿಕೆಯಂತೆ ತಾರೀಖು ೧೨ನೇ ದಿನ ಮುಂಜಾನೆ, ಮೆಂಚೆಸ್ಟರ್ ಫರ್ಮಿನ ಏಜಂಟರಾಗಿದ್ದ ಮಿ| ಜೋರ್ಜ್ ಪ್ರೇಸರ್ ಎಂಬವರು "ಮುಲ್ಜಿ ಜೇತಾ ಮಾರ್ಕೇಟಿ"ನಿಂದ ೧೧ ಘಂಟೆಗೆ ಸರಿಯಾಗಿ ಎರಡು ಲೋರಿಗಳು ತುಂಬುವಷ್ಟು ವಿದೇಶಿ ಬಟ್ಟೆಯನ್ನು ಒಯ್ಯುತ್ತಿದ್ದರು. ಪೋಲೀಸರು ಗಲಭೆಯುಂಟಾಗದಂತೆ ಲೋರಿಗಳ ಪಕ್ಕಗಳಲ್ಲೇ ಕಾಯುತ್ತಿದ್ದರು. ಲೋರಿಗಳು ಬರುವ ರಸ್ತೆಯಲ್ಲಿ ಸುಮಾರು ಅರ್ಧ ಡಜನ್ ಸ್ವಯಂಸೇವಕರು ಅಡ್ಡ ಕಟ್ಟೆ ಮಲಕೊಂಡರು. ಲೋರಿಯನ್ನು ಮುಂದೆ ಸಾಗಲು ಬಿಡಲಿಲ್ಲ. ಅದಕ್ಕಾಗಿ ಅವರನ್ನು ದಸ್ತಗಿರಿಮಾಡಿ "ಲೋಕಪ್ಪಿ"ನಲ್ಲಿರಿಸಲಾಯಿತು. ಜನರು ಗುಂಪು ಗುಂಪಾಗಿ ಸೇರಿದರು. ಆದರೆ ಲೋರಿಗಳು ಏನೊಂದು ಆತಂಕವಿಲ್ಲದೆ ಮುಂದರಿದವು. ತುಸು ದೂರದಲ್ಲಿ ಇನ್ನೆರಡು ಸ್ವಯಂಸೇವಕರು ಲೋರಿಯನ್ನು ತಡೆಗಟ್ಟುವುದಕ್ಕಾಗಿ ರಸ್ತೆಯಲ್ಲಿ ಮಲಕೊಂಡರು. ಅವರನ್ನೂ ಪೋಲೀಸರು ದಸ್ತಗಿರಿ ಮಾಡಿದರು. ಲೋರಿಯು ಮುಂದರಿಸುತ್ತ, ದಾರಿಯಲ್ಲಿ ಮತ್ತೂ ಎರಡು ಮಂದಿ ಸ್ವಯಂಸೇವಕರನ್ನು ದಸ್ತಗಿರಿಮಾಡಿದರು. ಹಾಗೂ ಲೋರಿಗಳು ಮುಂದುವರಿಯುತ್ತ ಕಾಲ್ಬಾದೇವಿ ರಸ್ತೆಗೆ ಬಂದವು. ಅಷ್ಟರಲ್ಲಿ ಒಟ್ಟೊಟ್ಟಿಗೆ ಜನಸಮುದಾಯವೂ ಬಂದು ಸೇರಿತು. ಜನರ ಗುಂಪುಗಳ ನಡುವಿನಿಂದ ಯಾವನೋ ಒಬ್ಬನು ಅಕಸ್ಮಾತ್ತಾಗಿ ಬಂದು ಲೋರಿಯ ಡ್ರೈವರನನ್ನು ಬಲವಾಗಿ ಹೊಡೆದನಂತೆ! ಪರಿಣಾಮವಾಗಿ ಡ್ರೈವರನು ಮೂರ್ಛೆ ತಪ್ಪಿದನು. ಕೂಡಲೆ ಇದನ್ನು ನೋಡುತ್ತಿದ್ದ ಸಾರ್ಜಂಟ್ ಕ್ವೆಟ್ಲರ್ ಎಂಬವರು ಲೋರಿಯನ್ನು ನಿಲ್ಲಿಸಿದರು. ಅಷ್ಟರೊಳಗಾಗಿ ಒಬ್ಬ ಪಹರಾನ್ವಿತನಾದ ಸ್ವಯಂಸೇವಕನು ಹಟಾತ್ತಾಗಿ ಓಡಿಬಂದು ಲೋರಿಯ ಅಡಿಗೆ ಬಿದ್ದನಂತೆ! ಆತನ ತಲೆಗೆ ಬಲವಾದ ಗಾಯಗಳು ತಗಲಿರುವುದನ್ನು ಕಂಡು, ಆತನನ್ನು ಗೋಕುಲ್‌ದಾಸ್ ತೇಜಪಾಲ್ ಆಸ್ಪತ್ರೆಗೆ ಒಯ್ಯಲಾಯಿತೆಂದು ತಿಳಿದುಬರುತ್ತದೆ.

ಪತ್ರಿಕೆಗಳ ಸಮಾಚಾರದಂತೆ, ಸ್ವಯಂಸೇವಕನು ಪರಾಮೋಷಿಯಿಂದ ಲೋರಿಯ ಅಡಿಗೆ ಬಿದ್ದನೆಂದೂ, ಆತನನ್ನು ಕೊಲ್ಲಬೇಕೆಂಬ ಉದ್ದೇಶದಿಂದ ಲೋರಿಯನ್ನು ಆತನ ಮೈಮೇಲೆ ಹಾದುಹೋಗುವಂತೆ ಡ್ರೈವ್ ಮಾಡಲಿಲ್ಲವೆಂದೂ ತಿಳಿದುಬರುತ್ತದೆ.

## ತಾರೀಖು ೧೩

### ಸ್ವಯಂಸೇವಕನಿಗೆ ವೀರಸ್ವರ್ಗ.

ಕಳೆದ ಶುಕ್ರವಾರ ದಿನ ಮುಂಬಾಯಿ ನಗರವು ರಾಷ್ಟ್ರೋದ್ಧಾರಕ್ಕಾಗಿ ತನ್ನ ಸರ್ವಸ್ವವನ್ನೂ, ಪ್ರಾಣವನ್ನೂ ದಾನಕೊಟ್ಟ ಶ್ರೀಯುತ ಬಾಬುಗೇನು ಎಂಬ ವೀರತರುಣನ ಶವಸಂಸ್ಕಾರಗಳನ್ನು ಯಥಾಯೋಗ್ಯವಾಗಿ ನೆರವೇರಿಸಿದ ಅಪೂರ್ವ ಪುಣ್ಯ ಲಾಭವನ್ನು ಪಡೆದಿರುವದು ಸ್ಪಷ್ಟ.

ಆತನ ಮೃತದೇಹವನ್ನು ಸ್ಮಶಾನಕ್ಕೊಯ್ಯುವಾಗ ಬಹಳವಾಗಿ ಶೃಂಗರಿಸಿದ್ದರು. ಮಾತ್ರವಲ್ಲದೆ ದೊಡ್ಡದೊಂದು ಮೆರವಣಿಗೆಯೂ ಹೊರಡಿಸಲ್ಪಟ್ಟಿದ್ದಿತು. ಮೆರವಣಿಗೆಯಲ್ಲಿ ವರ್ಣಭೇದವನ್ನು ಗಮನಿಸದೆ ಹಿಂದೂ ಮುಸಲ್ಮಾನ್ ಪಾರ್ಸಿ, ಕ್ರೈಸ್ತ ಮತ್ತು ಯೆಹೂದ್ಯರೇ ಮೊದಲಾದ ವಿವಿಧ ಪಂಗಡದವರು ಭಾಗವಹಿಸಿದ್ದರು, ಅವರ ಪೈಕಿ ಚಿಕ್ಕಪುಟ್ಟ ಮಕ್ಕಳೂ, ಹೆಂಗುಸರೂ, ತರುಣರೂ ಇದ್ದರು. ಹಾಗೂ ಸುದ್ದಿಗಾರರಿಂದ ತಿಳಿಯಬರುವಂತೆ ಮೆರವಣಿಗೆಯು ಕಣ್ಣಿಗೆ ಕಾಣುವಷ್ಟು ದೂರದ ಉದ್ದಳತೆಯುಳ್ಳದ್ದಾಗಿದ್ದಿತೆಂದು ತಿಳಿಯಲಾಗುತ್ತದೆ. ಮೆರವಣಿಗೆಯಲ್ಲಿ ಸೇರಿದವರೆಲ್ಲರೂ ಸಹೋದರ ಸಹೋದರಿಯರಂತೆ ವರ್ತಿಸಿ ಮೆರವಣಿಗೆಯ ಕಾರ್ಯಕ್ರಮಗಳನ್ನು ಬಹಳ ವಿಜೃಂಭಣೆಯಿಂದ ಕೊನೆಗಾಣಿಸಿದರು. ದಾರಿಯಲ್ಲಿ ಚಿಕ್ಕ ಮಕ್ಕಳ ಜಯಕಾರವು ಒಂದೆಡೆಯಲ್ಲಿ, ಹಿರಿಯರು ಮೃತನ ಸದ್ಗತಿಗಾಗಿ ಮಾಡುವ ಪ್ರಾರ್ಥನೆಗಳ ಮಧುಗಾನವು ಇನ್ನೊಂದೆಡೆಯಲ್ಲಿ. ಇವೆರಡು ರೀತಿಯ ಸ್ಫೂರ್ತಿದಾಯಕ ಧ್ವನಿಯು ಜನರ ಹುರುಪನ್ನು ಇನ್ನಷ್ಟು ಹೆಚ್ಚಿಸುತ್ತಿತ್ತು. ಅಲ್ಲಲ್ಲಿ 'ವಂದೇ ಮಾತರಂ' ಮೊದಲಾದ ರಾಷ್ಟ್ರಗೀತೆಗಳ ಕಂಪು ಮತ್ತು ರಾಷ್ಟ್ರಪ್ರೇಮವನ್ನುಂಟುಮಾಡುವ ಮನೋಹರ ಗಾನವು ಜನರ ಮನಸ್ಸನ್ನು ಸಂತೋಷ ಸಾಗರದಲ್ಲಿ ತೇಲಾಡಿಸುತ್ತಿದ್ದಿತು. ಅಲ್ಲದೆ ಬೇರೊಂದು ಭಜನ ಪಾರ್ಟಿಯವರು ಪಕ್ಕದಲ್ಲೇ ತಾಳ ಹಾಕಿ ಭಜನೆ ಪದಗಳನ್ನು ಹೇಳುತ್ತಿದ್ದರು. ಪದಕ್ಕನುಗುಣವಾದ ತಾಳ ತಾಳಕ್ಕೆ ಸರಿಯಾದ ಗಾನ—ಇವೆಲ್ಲವೂ ಪ್ರೇಕ್ಷಕನನ್ನು ರಾಷ್ಟ್ರಸೇವೆ ಮಾಡೆಂದು ಕರೆದು ಹೇಳುತ್ತಿದ್ದವು.

ಹೀಗೆ ಮೆರವಣಿಗೆಯು ಕಾಂಗ್ರೆಸ್ ಆಸ್ಪತ್ರೆಯಿಂದ ಮುಂಜಾನೆ ಹೊರಟು ಚೌಪಾಟಿಯ ಮರಳು ಪ್ರದೇಶವನ್ನು ದಾಟುತ್ತ ಮುಂದರಿಯಬೇಕೆಂದು ನಿರ್ಧರಿಸಿಕೊಂಡಿದ್ದರು. ಅಂತೆಯೇ ಮೆರವಣಿಗೆಯು ಚೌಪಾಟಿಗೆ ತಲ್ಪುವಾಗ, ಪೋಲೀಸರು ಕಾಣಿಸಿಕೊಂಡು, ಮೆರವಣಿಗೆಯನ್ನು ಅಡ್ಡಕಟ್ಟಿದರು. ಚೌಪಾಟಿಗೆ ತಲ್ಪುವದರೊಳಗಾಗಿ ಘಂಟೆ ೧೨, ಸೂರ್ಯನು ನಡುನೆತ್ತಿಯ ಮೇಲೆ ತನ್ನ ಪ್ರಚಂಡ ಕಿರಣಗಳನ್ನು ಸೂಸುತ್ತಿದ್ದನು. ಮೆರವಣಿಗೆಯಲ್ಲಿ ಭಾಗವಹಿಸಿದ ಆಬಾಲವೃದ್ಧರು ಮಧ್ಯಾಹ್ನ ಬಿಸಿಲಲ್ಲಿ ಕಷ್ಟಪಡಬೇಕಾಯಿತು. ಆ ಕೂಡಲೆ ಆಯುಧಪಾಣಿಗಳಾದ ಪೋಲೀಸ್ ತಂಡವು ಆ ಸ್ಥಳವನ್ನು ಬಂದು ಸೇರಿತು, ಸುಮಾರು ೧೫೦ ಮಂದಿ ಸೈನಿಕರೂ ಅಲ್ಲಿಗೆ ಬಂದರು, ಸುಪರಿಂಟೆಂಡೆಂಟರೂ, ಮ್ಯಾಜಿಸ್ಟ್ರೇಟರೂ, ಕಲೆಕ್ಟರರೇ ಮೊದಲಾದ

(೭ನೇ ಪುಟಕ್ಕೆ ಮುಂದುವರಿಯುವದು)

## The Zandu Pharmaceutical Works, Ltd., Bombay,14.
## ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ 'ಝಂಡೂ'ಯವರ

# ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!

ಹಸಿ ಆಮಲಕ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದುರ್ಬಲತ್ವ, ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧ್ಯಾಪ್ಯ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

ಕ್ರಯ 1ಪೌನು ಸೀಸೆ ರೂ. 2—8—0, ½ ಪೌ. ರೂ. 1—5—0, ¼ ಪೌ. ರೂ 0—13—0

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಜೈನಾ ಬಜಾರು ರಸ್ತೆ, ಮದ್ರಾಸು

ತೀರ್ಥಹಳ್ಳಿ ಏಜಂಟರು.— ಮೆಸರ್ಸ ಪಂಡಿತ ಮತ್ತು ಕಂಪೆನಿ

ಮಂಗಳೂರು ಏಜಂಟರು — ದಿ ಊಲನ್ ಮಾರ್ಟ

ಸಿರ್ಸಿ ಏಜಂಟರು — ಎಸ್. ಎಲ್ ಧಾರಪ್ಪಾ ಎಂಡ್ ಬ್ರದರ್ಸ

ಸಬ್ ಏಜಂಟರು — ಯು ಜನಾರ್ಧನರಾವ್, ಪುತ್ತೂರು, ದ ಕನ್ನಡ

ಮಂಗಳೂರು ಏಜಂಟರು — ತಿಪ್ಪಣ್ಣ ಶ್ಯಾಸ್ತ್ರಿ, ಬಸ್‌ಸ್ಟೇಟ್

☞ ವಿವರ ಕೆಟಲಾಗು ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು



TELEGRAMS 'ASPINWALCO' TELEPHONE NO. 15

The Firestone Gum-Dipping process strengthens the tire to meet the demands of hill climbing quick stops, sudden turns and high speeds The Firestone tread is scientifically designed to grip the road in emergencies You can have this extra safety on *your car*. Drive in and use our service.

**Firestone** Gum-Dipped TIRES

DISTRIBUTORS

**Aspinwall & Co, Ltd**

(Address) MANGALORE

STOCKISTS

UDIPI

*K Siddaya Hegde*

KASARGODE

*Rama Nayak*

KANHANGAD

*K S Russool*

COONDAPUR —

*C Gopal Mukunda Pai*

General Merchant

COONDAPUR (S K) ...

BHATKAL

*Messers' Kashim eeSham shuddeen Saheb Motor Service*

Puttur

*K Venkatraya Pai*

Imperial Cycle Stores.



***FOR YOUR CAR***

## WILLARD BATTERIES.

**SIMONIZ KLEENER** **SIMONIZ POLISH**

*AGENTS* —

## Messrs. Aspinwall & Co , Ltd

MANGALORE



"ಬಿಟ್ಟಿ" "ಪುಗಸಟ್ಟೆ" "ಬಿಟ್ಟಿ"

**ಜೇಬಿನ ಲಿವರ್ ಗಡಿಯಾರವೂ ಕೈ ಗಡಿಯಾರವೂ ಬಿಟ್ಟಿ**

**೩ ತಿಂಗಳೊಳಗಾಗಿ ೩,೦೦೦ ಗಡಿಯಾರಗಳನ್ನು ಬಿಟ್ಟಿಯಾಗಿ ಕೊಟ್ಟಿದ್ದೇವೆ**

ರೂ. ೨—೧೫—೦ ಬೆಲೆ ಬಾಳುವ ನಮ್ಮ ಡಬ್ಲ್ಯು. ಬಿ ಫೌಂಟನ್ ಪೆನ್ನನ್ನು ಕೊಂಡುಕೊಳ್ಳುವ ಸಮಸ್ತರಿಗೂ ಜೇಬಿನ ಲಿವರ್ ಗಡಿಯಾರವನ್ನು ಬಿಟ್ಟಿಯಾಗಿ ಕೊಡುತ್ತೇವೆ ಒಂದೇ ಸಲ ಎರಡು ಫೌಂಟನ್ ಪೆನ್ನುಗಳನ್ನು ಕೊಳ್ಳುವವರಿಗೆ ರೂ ೫—೧೪—೦ ಬೆಲೆಯ ಮತ್ತು ಲಿವರ್ ಕೈ ಗಡಿಯಾರವೂ ಬಿಟ್ಟಿಯಾಗಿ ಕೊಡುವೆವು ಈ ಪೆನ್ನು ಭಂಗಾರದ ನಿಬ್ಬು ಉಳ್ಳದ್ದಾಗಿಯೂ ಉತ್ಕೃಷ್ಟವಾದ ಶಾಯಿಯಿಂದ ನಯವಾಗಿ ಬರೆಯುವುದೂ, ಚಾರ್ಜ ಚಿತ್ರಕಾರರಿಂದ ಹೊಗಳಲ್ಪಟ್ಟದ್ದಾಗಿಯೂ ಖರಾರಾಗಿ ಘಂಟೆಯನ್ನು ತೋರಿಸುವುದಾಗಿಯೂ ಇದೆ. ಇದಕ್ಕೆ ೫ ವರ್ಷ ಗ್ಯಾರಂಟಿ ಕೊಡುತ್ತೇವೆ

ಪತ್ರವ್ಯವಹಾರಗಳು ಇಂಗ್ಲೀಷಿನಲ್ಲೆ ಬರೆಯಬೇಕು

**Imperial Watch Company.**

(S) Post No. 12, BOMBAY



## ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

**ಶಾರದಾ ಛಾಪಖಾನೆ,**

ರಥಬೀದಿ, ಮಂಗಳೂರು



## ಮುದಲ್ ತರವಾದ ಬೆಳ್ಳಿ ಉಡಿದಾರ ಹಗ್ಗ.

ESTD 1896

ಅನೇಕ ವರುಷದಿಂದ ನಾವು ಬೆಳ್ಳಿ ಉಡಿದಾರಗಳನ್ನು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿ ಬರುತ್ತೇವೆ ನೀಡಿಸಿದ ಅನುಭವದ ಮೇಲೆ ನಮ್ಮ ಉಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ಧಾರಣೆ ಸಂಸದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾದಿನಲ್ಲಿ ಹೆಸರು ಪಡೆದುದಾಗಿದೆ ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳನ್ನು ಕಳುಹಿಸುತ್ತೇವೆ ಒಂದು ಸಲ ನಮ್ಮಲ್ಲಿಂದ ತರಿಸಿ ನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು ಬೆಳ್ಳಿ ಧಾರಣೆ ಪ್ರಕಾರ ಸರಕುಗಳಿಗೆ ಧಾರಣೆ ಹಾಕಿ ಕಳುಹಿಸುತ್ತೇವೆ

ಕೆ ಎಸ್ ನಾರಾಯಣಶೆಟ್ಟಿ ಅಂಡ್ ಸನ್ಸ್,

ಸರಾಫ ವ್ಯಾಪಾರಿ,

[illegible]



ರಿಸ್ಟ್‌ವಾಚ್ ಉಚಿತ

[illegible] ದೊರೆಯುತ್ತದೆ

[illegible]

ಕಿಂಗ್‌ಜಾರ್ಜ ಕೊರೊನೇಶನ್ ಕಂಪೆನಿ

ಮುಂಬಾಯಿ



## ಕೊ ಒಪರೇಟಿವ್ ಸೊಸ್ಯಾಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ

ಶಾರದಾ ಛಾಪಖಾನೆ

[illegible]



ಒಮ್ಮೆ ಪರೀಕ್ಷಿಸಿರಿ! ತೃಪ್ತಿ ಹೊಂದಿರಿ!

**ದಿ ಕ್ರೌನ್ ರಬ್ಬರ್ ಸ್ಟ್ಯಾಂಪು ಕಂಪೆನಿ,**

ಹೆಡ್ಡ ಆಫೀಸು ಬಲ್ಮಠ ರಸ್ತೆ, ಕಂಕನಾಡಿ ಪೋಸ್ಟು,

ಮಂಗಳೂರು,

## ರಬ್ಬರು ಮೊಹರುಗಳು

ಇಲ್ಲಿ ಉತ್ತಮವಾದ ಎಯರ್ ಕುಶನ್ ರಬ್ಬರು ಮೊಹರುಗಳೂ, ಹಿತ್ತಾಳೆ ಇತ್ಯಾದಿ ಲೋಹಗಳಲ್ಲಿಯೂ, ಮಾರ್ಬಲ್‌ನಲ್ಲಿಯೂ, ಕೆತ್ತನೆಯ ಕೆಲಸವನ್ನೂ ಚಳಿ ನಾಜೂಕಾಗಿ ಕ್ಲಪ್ತ ಸಮಯದಲ್ಲಿ ಮಾಡಿಕೊಡುತ್ತದೆ

ಹೆಚ್ಚಿನ ಮಾಹಿತಿಯನ್ನು ಪತ್ರಮೂಲಕವಾಗಲೀ, ಆಫೀಸಿನಲ್ಲಿ ಸ್ವತಹ ಬಂದಾಗಲೀ ತಿಳಿದುಕೊಳ್ಳಿರಿ

ಎಮ್ ದೇವದಾಸ ಕಿಣಿ,

ಮೆನೇಜಿಂಗ ಪ್ರೊಪ್ರೈಟರ್

## ರೌಂಡು ಟೇಬಲ್ ಪರಿಷತ್ತು.

ಈ ಪರಿಷತ್ತಿನ ಕಾರ್ಯವು ಭರದಿಂದ ಮುಂದೊತ್ತಿರುವುದೆಂದು ವರ್ತಮಾನವಿದೆ. ಅನೇಕ ಕಮ್ಮಿಟಿ ಸಬ್‌ಕಮ್ಮಿಟಿಗಳು ಸಂಯುಕ್ತ ರಾಜ್ಯಕ್ರಮದ ರಚನಾಕ್ರಮವನ್ನೂ ಸಾಮಂತರಾಜರ ಬಾಧ್ಯತೆಗಳನ್ನೂ ಅಲ್ಪ ಸಂಖ್ಯಾತಪಂಗಡದವರ ಪ್ರಾತಿನಿಧ್ಯವನ್ನೂ ಕುರಿತು ಆಲೋಚನೆಗೈಯುತ್ತಿರುವವು. ಹಿಂದೂಮುಸಲ್ಮಾನರೊಳಗೆ ತಕ್ಕಮಟ್ಟಿನ ಐಕ್ಯತೆಯು ತಲೆದೋರುವಾಗ ಸಿಕ್ಖರು ಕಟಿಬದ್ಧರಾಗಿರುವುದು ಸೋಜಿಗ. ಮಂತ್ರಿವರ್ಯರಾದ ಮೆಕ್‌ಡೋನಲ್ಡ್ ಸಾಹೇಬರೇ ಖುದ್ದು ಅವರನ್ನು ನೋಡಿ ಅವರ ಮತವನ್ನು ವಿಚಾರಿಸಿಕೊಂಡಿರುವರಂತೆ. ಸಂಯುಕ್ತರಾಜ್ಯ ರಚನಾ ಸಬ್‌ಕಮ್ಮಿಟಿಯೂ ರಕ್ಷಣಾ ಕಮ್ಮಿಟಿಯೂ ಒಂದು ವಾರದಲ್ಲಿ ಕೂಡುವುದಂತೆ. ಹಿಂದೂಮುಸಲ್ಮಾನ ಸಿಕ್ಖರೊಳಗೆ ಪೂರ್ಣ ಐಕ್ಯಮತ್ಯವಾಗದೆ ಇರುವುದರಿಂದ 'ಮಿನಾರಿಟಿ' ಕಮ್ಮಿಟಿಯು ತನ್ನ ಕಾರ್ಯವನ್ನು ಮುಂದರಿಸಲಿಲ್ಲ. ಸದ್ಯಕ್ಕೆ ಜನವರಿ ೧೫ರ ವರೆವಿಗೆ ರೌಂಡು ಟೇಬಲ್ ಪರಿಷತ್ತು ನಡೆದು ಅನಂತರ ಮತ್ತೊಂದು ಅನುಕೂಲವಾದ ಸಮಯಕ್ಕೆ ಮುಂದುವರಿಸಿ ಇಡಲಾಗುವುದೆಂದು ವಾರ್ತೆ.

## ಚರ್ಚಿಲ್ ಸಾಹೇಬರ ಬೊಬ್ಬೆ.

ಈ ಮಧ್ಯೆ ಚರ್ಚಿಲ್ ಸಾಹೇಬರು ನಿದ್ರೆಯಿಂದ ಎಚ್ಚೆತ್ತು ಹಸಿದ ವ್ಯಾಘ್ರದಂತೆ ಗರ್ಜಿಸಿರುವುದೊಂದು ಅಪಶಕುನ. ಇವರು ಇಷ್ಟರವರಿವಿಗ ಏಕೆ ಮೌನವ್ರತವನ್ನು ಧರಿಸಿದ್ದರೋ ತಿಳಿಯದು. ರೌಂಡು ಟೇಬಲ್ ಪರಿಷತ್ತಿನ ಕಾರ್ಯಕಲಾಪಗಳನ್ನೂ, ಸದಸ್ಯರ ಏಕಾಗ್ರತೆಯನ್ನೂ, ಬ್ರಿಟಿಷ್ ಮಂತ್ರಿಯ ಮತ್ತು ಬ್ರಿಟಿಷ್ ಪ್ರತಿನಿಧಿಗಳ ಸಹಕಾರವನ್ನೂ ನೋಡಿ ಇವರು ಕಲ್ಲಾಗಿಹೋಗಬೇಕು. "ಹಿಂದೂಸ್ಥಾನದಲ್ಲಿ ಸರಕಾರದವರು ಕಠಿಣತರ ಧೋರಣೆಯನ್ನು ಧರಿಸಬೇಕಾಗಿತ್ತು. ಹಿಂದೂಸ್ಥಾನದ ರಾಜ್ಯಭಾರ ಕ್ರಮವನ್ನು ನಿರ್ಧರಿಸುವ ಹಕ್ಕು ಪಾರ್ಲಿಮೆಂಟಿನದು, ರೌಂಡು ಟೇಬಲ್ ಪರಿಷತ್ತಿನದಲ್ಲ. ಗಾಂಧಿ ಮತವನ್ನು ನಿರ್ಮೂಲಗೊಳಿಸಬೇಕು. ಬ್ರಿಟಿಷರು ತಮಗಿರುವ ಹಿಂದೂಸ್ಥಾನದ ಮೇಲಿನ ಹಕ್ಕನ್ನು ಎಂದೆಂದಿಗೂ ಬಿಟ್ಟುಬಿಡಲಾರರು. ಹಿಂದೂಸ್ಥಾನವನ್ನು ಕಳಕೊಳ್ಳುವುದೆಂದರೆ ಬ್ರಿಟಿಷ್ ಸಾಮ್ರಾಜ್ಯವೇ ನಾಶವಾದಂತೆ. ಇಷ್ಟರ ತನಕ ಹಿಂದೂಸ್ಥಾನಕ್ಕೆ ಕೊಟ್ಟಿರುವ ಹಕ್ಕು ಸ್ವಾತಂತ್ರ್ಯಗಳನ್ನು ಕೂಡಾ ತಡೆಗಟ್ಟುವ ಯಾ ಹಿಂದೆಗೆಯುವ ಅಧಿಕಾರವು ಪಾರ್ಲಿಮೆಂಟಿನದು. ಲಾಹೋರ ಕಾಂಗ್ರೆಸ್ಸನ್ನೇ ನಾಶ ಮಾಡಬೇಕಾಗಿತ್ತು. ಗಾಂಧಿಯನ್ನು ಕಾಯಿದೆ ಭಂಗ ಮಾಡಿದ ಕೂಡಲೇ ಶಿಕ್ಷೆಗೆ ಒಳಗು ಮಾಡಬೇಕಿತ್ತು." ಇವುಗಳು ಚರ್ಚಿಲ್ ಸಾಹೇಬರ ರಾಜ್ಯಧುರಂಧರ್ಯಕ್ಕೆ ಯೋಗ್ಯವಾದ ಮಾತುಗಳೇನೋ ನಿಜ. ಇವರು ಯುದ್ಧಪ್ರವೀಣರೇ ಹೊರತು ರಾಜ್ಯನೀತಿ ಧುರಂಧರರಲ್ಲವೆಂದು ಈ ಮಾತುಗಳಿಂದ ವ್ಯಕ್ತವಾಗುತ್ತದೆ. ಈ ಮಹಾಪುರುಷನು ಈಗ ಬ್ರಿಟಿಷ್ ಮುಖ್ಯ ಮಂತ್ರಿಯಾಗಿ ಇರದಿದ್ದುದು ಹಿಂದೂಸ್ಥಾನದ ಭಾಗ್ಯೋದಯವೇ ಸರಿ.

## ಮೆಕ್‌ಡೋನಲ್ಡರ ಉತ್ತರ.

ಬ್ರಿಟಿಷ್ ಮಂತ್ರಿವರ್ಯರಾದ ಮೆಕ್‌ಡೋನಲ್ಡ್ ಸಾಹೇಬರು ಚರ್ಚಿಲ್ ಸಾಹೇಬರ ಅಪ್ರಾಸಂಗಿಕ ಭಾಷಣವನ್ನು ತೀವ್ರವಾಗಿ ಖಂಡಿಸಿರುವರು. ಚರ್ಚಿಲರ ಭಾಷಣವು ನಿಷ್ಪ್ರಯೋಜಕವಾದುದೆಂದೂ ಅದರಲ್ಲಿ ಮುಖ್ಯ ತತ್ವಗಳೇನೂ ಇಲ್ಲವೆಂದೂ ಅದರಲ್ಲಿ ಸಾಮ್ರಾಜ್ಯ ಸಂಘಟನೆಯ ಪುರಾತನ ಅಭಿಪ್ರಾಯಗಳೇ ಅಡಕವಾಗಿವೆ ಎಂದೂ ಮೆಕ್‌ಡೋನಲ್ಡ್ ಸಾಹೇಬರು ವಿವರಿಸಿರುವರು. ಇದೂ ಅಲ್ಲದೆ ಇಂಗ್ಲಿಷ್ ಉಪನ್ಯಾಸಾದಿ ವಿದ್ಯಾಭ್ಯಾಸಗಳ ದೆಸೆಯಿಂದ ಹಿಂದೀಯರ ರಾಜಕೀಯ ಮನೋವೃತ್ತಿಯು ವಿಕಸಿತವಾಗಿ ಅವರು ಹೆಚ್ಚಿನ ಸ್ವಾತಂತ್ರ್ಯವನ್ನೂ ಸುಧಾರಣೆಯನ್ನೂ ಪಡೆಯಲು ಪ್ರಯತ್ನಿಸುವುದು ಸ್ವಾಭಾವಿಕವೆಂದೂ, ಎಷ್ಟರ ಮಟ್ಟಿನ ಸುಧಾರಣೆಯನ್ನು ಕೊಡಬಹುದೆಂದು ನಿರ್ಧರಿಸಲು ಬ್ರಿಟಿಷ್, ಹಿಂದು, ಮಹಮ್ಮದೀಯ ಮತ್ತು ಸಿಕ್ಖ ಪ್ರತಿನಿಧಿಗಳು ಒಂದು ಕೂಡಿ ಭಗೀರಥ ಪ್ರಯತ್ನ ಮಾಡುತ್ತಿರಲು ಚರ್ಚಿಲ್ ಸಾಹೇಬರು ಇಂಥಾ ಭಾಷಣವನ್ನು ಕೊಟ್ಟದ್ದು ಅವಿವೇಕವಾಯಿತೆಂದು ಮೆಕ್‌ಡೋನಲ್ಡ್ ಸಾಹೇಬರು ತೀವ್ರವಾಗಿ ಖಂಡಿಸಿರುವರು. ಮಂತ್ರಿವರ್ಯರ ಭಾಷಣವು ಉತ್ಕೃಷ್ಟವಾಗಿದ್ದು ಚರ್ಚಿಲ್ ಸಾಹೇಬರ ಸಂಕುಚಿತ ಮನೋಧರ್ಮವನ್ನೂ ಸ್ವಾರ್ಥಪರ ಮತ್ಸರವನ್ನೂ ಹೊರಗೆಡಹುವುದು ಸಂತೋಷಕರ. ಆದರ ಈ ಸಂಧಿಗ್ಧ ಸಮಯದಲ್ಲಿ ಎಲ್ಲಾ ಬ್ರಿಟಿಷ್ ಪಾರ್ಟಿಗಳ ಬೆಂಬಲವನ್ನು ಪಡೆಯುವುದು ಹಿಂದೂಸ್ಥಾನದ ಪ್ರತಿನಿಧಿಗಳ ಕರ್ತವ್ಯವಾಗಿರುತ್ತಾ, ಹಿಂದೂಸ್ಥಾನದ ನಿಜವಾದ ಮತ್ತು ಸಂಪೂರ್ಣವಾದ ವೃತ್ತಾಂತವನ್ನು ಮರೆಮಾಚದೆ ಬ್ರಿಟಿಷರಿಗೆ ತಿಳಿಸಲು ನಮ್ಮ ಪ್ರತಿನಿಧಿಗಳು ಸಾಕಷ್ಟು ಶ್ರಮೆಯನ್ನು ವಹಿಸಿರುವರೋ ಅಥವಾ ಕ್ರಿಸ್‌ಮಿಸ್ ಮತ್ತು ನವವರುಷದ ಆದರಾತಿಥ್ಯ ಸಮಾರಂಭದಲ್ಲಿ ಮೈಮರೆತಿರುವರೋ?

## ಗುಜರಾಥಿನ ಸಂತಾಪ

ಗುಜರಾಥಿನ ತಲ್ಲಣಿಸಾತಕರಣೆ ಮತ್ತು ಅದರ ಪರಿಣಾಮದ ಕುರಿತು ಹಿಂದೀ ವರ್ತಕ ಸಂಘದಿಂದ ಆಜ್ಞಾಪಿತರಾಗಿ, ಬೋರ್ಸದ್ ಬಾರ್ಡೋಲಿ ಮತ್ತು ಕೈರಾ ತಾಲೂಕುಗಳನ್ನು ಸಂದರ್ಶಿಸಿ ತನಿಖೆ ನಡಿಸಿದ ಮೇಥಾ ಮತ್ತು ತಯಬ್ಜಿಯೆಂಬವರ ವರದಿಯನ್ನು ನಾವು ಹಿಂದೊಮ್ಮೆ ವಿಮರ್ಶಿಸಿದ್ದೆವು. ಈ ವರದಿಯಲ್ಲಿ ಕಾಣುವಂತೆ ರೆವೆನ್ಯೂ ಮತ್ತು ಪೋಲೀಸು ಇಲಾಖೆಯವರು ರೈತರನ್ನು ಅನ್ಯಾಯವಾಗಿ ಹೊಡೆದು, ಬೈದು, ಭಂಗಿಸಿದ್ದಿಲ್ಲವೆಂದೂ ಇವೆಲ್ಲವೂ ಸರಕಾರದ ಮೇಲೆ ಜನರು ನಿಷ್ಕಾರಣವಾಗಿ ಮಾಡುವ ದೂಷಣೆಯೆಂದೂ, ಆ ವರದಿಯಲ್ಲಿ ಕಾಣುವಷ್ಟರ ಕಷ್ಟ ಸಂಕಷ್ಟಗಳಿಗೆ ಅಲ್ಲಿನ ರೈತರು ತುತ್ತಾಗಿಲ್ಲವೆಂದೂ ಸರಕಾರದವರು ಪ್ರಕಟಿಸಿರುವರು. ಈ ಪ್ರಕಟಣೆಗೆ ಸರಿಯಾದ ಉತ್ತರವನ್ನು ಮೇಥರವರು ಪ್ರಕಟಿಸಿರುವರು. ಯಾರ ವರದಿಯು ಸತ್ಯವೆಂಬುದನ್ನು ವಾಚಕರೇ ತಿಳಿಯಬೇಕಾಗಿದೆ. ತನ್ಮಧ್ಯ ಇದೇ ವಿಷಯದಲ್ಲಿ ಮುಂಬಾಯಿಯ ಎಕ್ಸಿಕ್ಯೂಟಿವ್ ಕಮ್ಮಿಟಿಯ ಮೆಂಬರರಾಗಿದ್ದ ಸರ್ ಎಲ್ ಸಾಮಲ್‌ದಾಸ್ ಎಂಬವರ ಗುಜರಾಥಿನ ಪರಿಭವವನ್ನು ಕಣ್ಣಾರೆ ನೋಡಬೇಕೆಂದು ಹೋದವರು ತನ್ನ ಅನುಭವವನ್ನು ಪತ್ರಗಳ ಮೂಲಕ ಪ್ರಕಟಿಸುತ್ತಿರುವರು. ಇವರ ಪತ್ರವು ಅನೇಕ ವಿಷಯದಲ್ಲಿ ಮೇಥಾ ಮತ್ತು ತಯಬ್ಜಿಯವರ ವರದಿಯನ್ನು ಸಮರ್ಥಿಸುವ ಹಾಗೆ ಕಾಣುತ್ತದೆ. ಇತ್ತ ಊರುಬಿಟ್ಟು ಹೋಗಿರುವ ಪುರವಾಸಿಗಳು ಹಿಂದೆ ಬರುವ ಹಾಗೆ ಕಾಣುವುದಿಲ್ಲ. ಸರಕಾರದವರು ಹಟ ಬಿಡುವುದಿಲ್ಲ. ಮುಂದೇನಾಗುವುದೋ ನೋಡಲಿಕ್ಕಿದೆ.

## ಶಾಂತಪರ ಮೆರವಣಿಗೆಗೆ ಆತಂಕ.

ಜನರು ಯಾವ ತರದ ಮೆರವಣಿಗೆಯನ್ನೂ ನಡಿಸಬಾರದೆಂಬ ಆಜ್ಞೆಯನ್ನು ಕಲ್ಕತ್ತೆಯ ಪೋಲೀಸು ಕಮಿಶನರು ಕಲ್ಕತ್ತ ಪೋಲೀಸು ಆಕ್ಟಿನ ಮೇರೆಗ ಜ್ಯಾರಿಮಾಡಿಬಿಟ್ಟರು. ಈ ಆಜ್ಞೆಯನ್ನು ಉಲ್ಲಂಘಿಸಿದ ಕಾರಣ ಕೆಲವು ಸ್ತ್ರೀಯರಿಗೆ ಇಂಡಿಯನ್ ಪಿನಲ್ ಕೋಡಿನ ೧೮೮ನೇ ಪ್ರಕರಣದ ಮೇರೆಗೆ ಶಿಕ್ಷೆಯು ಮೆಜಿಸ್ಟ್ರೇಟರಿಂದ ವಿಧಿಸಲ್ಪಟ್ಟಿತು. ಆದರೆ ಹೈಕೋರ್ಟ ಜಡ್ಜರು ಈ ತೀರ್ಮಾನದಲ್ಲಿ ವಿಶೇಷವಾದ ದೋಷವನ್ನು ಕಂಡು ಶಿಕ್ಷೆಯನ್ನು ರದ್ದುಮಾಡಿ ಪೋಲೀಸಿನವರ ಮತ್ತು ಮೆಜಿಸ್ಟ್ರೇಟರ ಮನೋವೃತ್ತಿಯನ್ನು ಖಂಡಿಸಿರುವರು. ಮೆರವಣಿಗೆಗಳನ್ನು ನಿಷೇಧಿಸುವ ಹಕ್ಕು ಪೋಲೀಸು ಕಮಿಶನರಿಗ ಇರುವುದಾದರೂ ಒಂದು ವಿಶೇಷ ಅಸಾಧಾರಣ ಸಂದರ್ಭಗಳಲ್ಲಿ ಮಾತ್ರ ಉಪಯೋಗಕ್ಕೆ ತರಲ್ಪಡತಕ್ಕದ್ದು. ಮೆರವಣಿಗೆಗಳ ಉದ್ದೇಶ, ಪ್ರಮಾಣ, ಕಾಲ ಮೊದಲಾದುವುಗಳ ವಿಷಯದಲ್ಲಿ ವಿಚಾರಮಾಡದೆ ಎಲ್ಲಾ ಮೆರವಣಿಗೆಗಳನ್ನು ಸರ್ವ ಕಾಲಕ್ಕೂ ನಿಷೇಧಿಸುವಷ್ಟು ಸಾಮರ್ಥ್ಯವು ಪೋಲೀಸು ಕಮಿಶನರಲ್ಲಿ ಇಲ್ಲವೆಂಬುದು ಈ ತೀರ್ಮಾನದಿಂದ ವಿದಿತವಾಗುವುದು. ಅಲ್ಲದೆ ಯಾವುದೇ ಒಂದು ಕಾನೂನನ್ನು ಉಲ್ಲಂಘಿಸಿದ ಮಾತ್ರದಿಂದಲೇ ತಕ್ಸೀರು ಆಗುವುದಿಲ್ಲವೆಂತಲೂ, ತಕ್ಸೀರು ಆಗಬೇಕಾದರೆ ಉಲ್ಲಂಘನೆಯಿಂದ ನಿಜವಾಗಿಯೂ ಏನಾದರೊಂದು ಕೆಡುಕು ಉಂಟಾಗಿರುವ ಹಾಗೆ ರುಜುವಾತಿನಿಂದ ವ್ಯಕ್ತವಾಗಬೇಕು ಎಂಬುದನ್ನು ನ್ಯಾಯಾಧೀಶರು ಒತ್ತಿಹೇಳಿರುವರು. ಸತ್ಯಾಗ್ರಹಿಗಳು ತಮ್ಮ ಮೇಲಿನ ಮೊಕದ್ದಮೆಗಳಲ್ಲಿ ಭಾಗವಹಿಸದೆ ಇರುವ ಮಾತ್ರದಿಂದ ಮೆಜಿಸ್ಟ್ರೇಟರ ಜವಾಬ್ದಾರಿಯು ಹೆಚ್ಚಾಗುವುದೇ ಹೊರತು ಕಡಿಮೆಯಾಗುವುದಿಲ್ಲ. ಕಾನೂನು ಉಲ್ಲಂಘನೆಯ ವಿಷಯದಲ್ಲಿ ಜೈಲಿಗೆ ಹೋಗಿರುವ ಬಾಲಕ ಬಾಲಕಿಯರಲ್ಲಿ ಅನೇಕ ನಿರಪರಾಧಿಗಳಿರಬಹುದು. ಮುಂಬಾಯಿ ಹೈಕೋರ್ಟಿನಲ್ಲಿ ಅಕ್ರಮ ಕೂಟಕ್ಕೆ ಸೇರಿದರೆಂಬ ಅರೋಪದ ಮೇಲೆ ಶಿಕ್ಷೆಗೆ ಒಳಗಾದ ನಂಗಿನದಾಸ್ ಟಿ ಮಾಸ್ಟರ್ ಎಂಬವರೂ ಹೈಕೋರ್ಟು ಜಡ್ಜರಿಂದ ಖುಲಾಸುಮಾಡಲ್ಪಟ್ಟಿರುವರಲ್ಲದೆ, ಆ ಪ್ರಕರಣದ ಮೇರೆಗೆ ಶಿಕ್ಷೆ ವಿಧಿಸಲ್ಪಟ್ಟ ಅಪರಾಧಿಗಳೆಲ್ಲರ ರಿಕಾರ್ಡುಗಳನ್ನು ಪರಿಶೋಧನೆ ಮಾಡಬೇಕೆಂದು ಜಡ್ಜರು ಹುಕುಂ ಇತ್ತಿರುವರು. ಇದೇ ಪ್ರಕಾರ ಕಲ್ಕತ್ತೆಯ ಹೈಕೋರ್ಟು ಜಡ್ಜರೂ ಕಾನೂನು ಉಲ್ಲಂಘನೆಯ ಬಗ್ಗೆ ಜೈಲಿಗೆ ಅಟ್ಟಲ್ಪಟ್ಟಿರುವ ಕೈದಿಗಳ ರಿಕಾರ್ಡುಗಳನ್ನು ಪರಿಶೋಧಿಸುವುದಾದರೆ ಅನೇಕ ನಿರಪರಾಧಿಗಳು ಬಂಧವಿಮೋಚನೆ ಸುಖವನ್ನು ಬೇಗನೇ ಪಡೆಯಬಹುದೆಂದು ನಂಬಬಹುದು.

## ನೋಟುಗಳು
## NOTE....S

ಲಂಡನಿನಲ್ಲಿ ಓರ್ವ ಸಾಹೇಬರು, ಈಗ ನಿದ್ರಾವಸ್ಥೆಯಿಂದ ಏಳಿರುವರು. ಇವರ ಹೆಸರು ಚರ್ಚಿಲ್ ಸಾಹೇಬರೆಂದು. ಇವರ ಘರ್ಜನೆಯ ಸ್ವರವು ಬಹಳ ಇಂಪಾಗಿತ್ತು.

* * * *

ಘರ್ಜನೆ ಮತ್ತೇನಿಲ್ಲ. ಗಾಂಧಿ ಚಳವಳವನ್ನು ನಿರ್ಮೂಲ ಮಾಡಬೇಕಿತ್ತು, ಲಾಹೋರು ಕಾಂಗ್ರೆಸ್ಸನ್ನು ಓಡಿಸಬೇಕಿತ್ತು, ಗಾಂಧಿಜಿಯವರಿಗೆ ತಕ್ಕ ಶಿಕ್ಷೆ ಕೊಡಬೇಕಿತ್ತು, ಎಂಬಿತ್ಯಾದಿ. ಇವರು ಈಗ ಅಕಸ್ಮಾತ್ ಏಳಿದ್ದು ನೋಡುವಾಗ, ಈ ಮುಂಚೆ ಎಲ್ಲಿಯೋ ನಿದ್ರಾವಸ್ಥೆಯಲ್ಲಿದ್ದರೆಂದು ಊಹಿಸಬೇಕಾಗಿದೆ.

* * * *

ಚರ್ಚಿಲ್ ಸಾಹೇಬರ ಘರ್ಜನೆಯನ್ನು ಕೇಳಿದ ಇಂಡಿಯನ್ ಡೆಲಿಗೇಟರಿಗೆ ಸಮಾಧಾನದ ಬಗ್ಗೆ, ಮುಖ್ಯ ಮಂತ್ರಿಯವರ ಚಲೋ ಮಾತುಗಳು ಹೊರಟವು.

* * * *

ಈಗ ತತ್ಕಾಲಕ್ಕೆ ನಮ್ಮ ಇಂಡಿಯದ ಡೆಲಿಗೇಟರು ಕ್ರಿಸ್‌ಮಸ್ ಹಬ್ಬದ ಆಮಂತ್ರಣಗಳನ್ನು ಸ್ವೀಕರಿಸುತ್ತಾ ಇದ್ದಾರೆ.

* * * *

ಉಡುಪಿಯ ರಾಮಬಾಣ ಎಂಬ ಕೈಬರಹ ಪತ್ರಿಕೆಯನ್ನು ನಡೆಸುತ್ತಿದ್ದ ದೇಜು ಶೆಟ್ಟಿ ಎಂಬವರಿಗ ಗೆಸ್ಟುಹೌಸಿಗೆ ಕಳುಹಿಸಿರುವರು ಪೋಲೀಸರಿಗೆ, ರಾಮಬಾಣ ಕಣ್ಣಿಗೆ ಹೋಯಿತು.

* * * *

ಇಲ್ಲಿಯ ಸತ್ಯಾಗ್ರಹ ಚಳವಳ ಬಿದ್ದುಹೋಯಿತು. ನಿಲ್ಲಿಸಿದೆವು ಎಂಬ ಮಾತು ಈಗಲೂ ಇರುವುದಾದರೂ, ಅಧಿಕಾರಿಗಳ ಬೆದರಿಕೆ ಹೋಗಲಿಲ್ಲ. ಕಾರಣ ೧೪೪ನೇ ಪ್ರಕರಣ ಮುಗಿದ ಹಾಗೆ ಜಾರಿಗೆ ತರುತ್ತಿರುವರು. ನಮ್ಮ ಜಿಲ್ಲೆಯ ಸತ್ಯಾಗ್ರಹಕ್ಕೆ ಇದೊಂದು ಮುಖ್ಯ ಔಷಧ.

* * * *

ಪರದೇಶಿ ವಸ್ತ್ರಗಳನ್ನು ಮಾರಲು ಮುಂಬಾಯಿಯಲ್ಲಿ ಪೋಲೀಸರ ಸಹಾಯ. ಅದೂ ಸಾಲದಿದ್ದರೆ, ಮಿಲಿಟರಿ ಸಹಾಯಕ್ಕೆ ಬರುತ್ತದೆ. ಸ್ವಯಂಸೇವಕರು ಪಿಕೆಟ್ ಮಾಡಿದರೆ ಅವರ ಲಾಥಿರಾಯರೂ ಇದ್ದಾರೆ.

* * * *

ಪರದೇಶಿ ವಸ್ತ್ರಗಳನ್ನು ಮುಂಬಾಯಿಯಿಂದ ಪರದೇಶಗಳಿಗೆ ಕಳುಹಿಸುವುದಿದ್ದರೆ, ಲೋರಿಗಳಿಗೆ ಪೋಲೀಸ್ ಸಹಾಯ ಸಿಕ್ಕುತ್ತದೆ. ಪೋಲೀಸ್ ಸಹಾಯವಿದ್ದುದರಿಂದ ಏನೊಂದೂ ಅಪಘಡ ಸಂಭವಿಸಿದರೂ ಮಾಫಿ. ವಲಂಟಿಯರರು ಲೋರಿ ಅಡಿಯಲ್ಲಿ ಅಕಸ್ಮಾತ್ ಬೀಳುತ್ತಾರೆಂದೂ ಆಗುತ್ತದೆ.

* * * *

ಅನ್ಯಾಯ ಕೂಟಗಳೆಂದು ಪರಿಗಣಿಸಲ್ಪಟ್ಟ ಸಂಸ್ಥೆಗಳ ವರ್ತಮಾನಗಳನ್ನು ವರ್ತಮಾನ ಪತ್ರಿಕೆಗೆ ಹಾಕಬಾರದಾಗಿ, ಅಲ್ಲಿಯ ಪೋಲೀಸ್ ಕಮಿಷನರ ಬೆದರಿಕೆ ಇನ್ನೂ ನಿಂತಿಲ್ಲ. ಪತ್ರಿಕೆಗಳಿಗ ಬೆದರಿಸುತ್ತಾ ಇದ್ದಾರೆ. ಇದು ಹೊಸ ಮಾದರಿ ಬೆದರಿಕೆ.

---

## ವಿ. ಜೆ. ಪಟೇಲರ ಅಸ್ವಸ್ಥ

ಹಿಂದುಸ್ಥಾನದ ಪ್ರಮುಖರ ಜೀವನವು ಅತಿ ಕಷ್ಟಕರ. ಅದರಲ್ಲಿಯೂ ನಮ್ಮ ಎಸೆಂಬ್ಲಿಯ ಅಧ್ಯಕ್ಷರಾಗಿದ್ದು ಹೆಸರುವಾಸಿಯಾಗಿರುವ ವಿ ಜೆ ಪಟೇಲರ ಪ್ರಸ್ತುತ ಜೀವನವು ಅಸಹನೀಯವೆಂದೇ ಹೇಳಬೇಕಾಗಿದೆ. ಇವರು ಕಾರಾಗೃಹವನ್ನು ಸೇರಿದಂದಿನಿಂದ ಅಸ್ವಸ್ಥದಲ್ಲಿರುವರು, ಇವರು ಪ್ರಾಯವೃದ್ಧರು. ಒಂದೆಡೆಯಿಂದ ಇನ್ನೊಂದೆಡೆಗೆ ಹೋಗುವ ತ್ರಾಣವು ಇವರಲ್ಲಿಲ್ಲವಂತೆ. ಇಂಥಾ ಅವಸ್ಥೆಯಲ್ಲಿರುವವರನ್ನು ಸಾವಿರಾರು ಮೈಲು ಪ್ರಯಾಣಮಾಡಿಸಿ ಈಗ ಕಾನೆ ಕೊಯಂಬುತ್ತೂರಿಗೆ ತಂದಿರುವರು. ಎಸೆಂಬ್ಲಿ ಮಹಾಸಭೆಯಲ್ಲಿ ಕಂಗೊಳಿಸುತ್ತಿದ್ದ ಮಹನೀಯರು ಕಾರಾಗೃಹವಾಸದಲ್ಲಿ ಸವೆಯುತ್ತಿರುವುದು ಅದೆಷ್ಟು ಶೋಚನೀಯ. ಇವರ ದುರವಸ್ಥೆಯನ್ನು ನೋಡಿ ಮನಸ್ಸು ಕರಗದವರಿಲ್ಲ. ಇವರನ್ನು ನಿರ್ದೋಷಿಯೆಂದೂ ಅಹಿಂಸಾಮಾರ್ಗಿಯೆಂದೂ ಕರೆಯುವರು. ಇವರನ್ನು ಬಿಡುಗಡೆ ಮಾಡಿದ ಮಾತ್ರದಿಂದ ಸರಕಾರದ ಗೌರವಕ್ಕೆ ಕೇಡು ಬರಲಿಕ್ಕಿಲ್ಲ. ಆದುದರಿಂದ ಈ ಮಹಾಪುರುಷನಿಗೆ ಬೇಗನೇ ಬಂಧವಿಮೋಚನೆಯಾಗಲಿಯೆಂದು ಬಯಸಬಹುದೇ?

## ನೋಟೀಸು.

**ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.**

S. C No 288/1930.

ಅಬ್ಬಾಸು ವ್ಯಾಕ್ರಿ—ಪಕ್ರಮುಕ್ರಿಗಳ ಮಗ, ಕಾಸರಗೋಡು ತಾಲೂಕು ಮುಟ್ಟತ್ತೋಡಿ ಗ್ರಾಮದ ನೈವಾರ ಮುಹಲಿಯೆಂಬಲ್ಲಿರುವವನು—ವಾದಿ

ಮತ್ತು

ಕುಂಞಪ್ಪ—ಕುಂಞಪ್ಪನ ಅಳಿಯ ವ ಕುಂಬೆ ಹೆಂಗಸಿನ ಮಗ—ಕಾಸರಗೋಡು ಕಸಬಾ ಗ್ರಾಮದ ನುಳ್ಳಿಪ್ಪಾಡಿಯೆಂಬಲ್ಲಿರುವವನು—ಪ್ರತಿವಾದಿ

ವಾದಿಯು ಸದ್ರಿ ಪ್ರತಿವಾದಿಯ ಮೇಲೆ ದಾಕ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 22—12—30ಕ್ಕೆ ಅಖೈರ ತನಿಖೆಗೆ ಇಟ್ಟಿರುತ್ತದೆ ಆ ದಿವಸ ಪ್ರತಿವಾದಿಯು ಹಾಜರಾಗಿ ಉತ್ತರಿಸುವರೆ ತಪ್ಪಿದರೆ ಯೇಕ ಪಕ್ಷವಾಗಿ ತೀರ್ಮಾನಿಸಲಾದೀತೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

Kasaragod, 15—12—30 — **K. Mammunhi**, Vakil for Plaintiff

---

**ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ**

O S No 631/1931

— ನಡುಮನೆ ತಿಂಮಪ್ಪ ರೈ—ಹೊಸಮನೆ ಸಂಕಪ್ಪರೈಗಳ ಅಳಿಯ ಪುತ್ತೂರು ತಾಲೂಕು ನೆಲ್ಯಾಡಿ ಗ್ರಾಮ—ವಾದಿ

ಪದ್ಮನಾಭ ಶಂರಾಯ—ಗಂಡಿಮಾಥು ಕೃಷ್ಣರಾಯರ ಮಗ, ಪಟ್ರಮೆ ಗ್ರಾಮ—ಪ್ರತಿವಾದಿ

ಸದ್ರಿ ಪ್ರತಿವಾದಿಯು ವಾದಿಗೆ ತಾ 23—8—1927 ರಲ್ಲು ಬರಕೊಟ್ಟ ಡಿ ಪ್ರೊ ನೋಟಿನ ಅಸಲು ಒಟ್ಟು ಐವೇಜು ರೂ ೧೫೭—೬ ನ್ನು ಬರಮಾಡಿ ಕೊಳ್ಳುವರೆ ವಾದಿಯು ದಾಕ್ಲು ಮಾಡಿದ ಮೇಲ್ಕಂಡ ದಾವೆಯು ಪ್ರತಿವಾದಿಯ ಹಾಜರಾತಿ ಬಗ್ಗೆ ತಾ ೫—೧—೩೧ಕ್ಕೆ ಇಟ್ಟಿರುತ್ತದೆ ಆ ದಿವಸ ಪ್ರತಿವಾದಿಯು ಹಾಜರಾಗಲಿಕ್ಕೆ ತಪ್ಪಿದರೆ ಆತನನ್ನು ತಿವಾಯಿ ಮಾಡಿ ಸದ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸೋಣಾಗುತ್ತದೆ

(Sd) **K. Rama Kudva.**

ವಾದಿ ಕಡೆ ವಕೀಲ್

---

## ನೋಟೀಸು

ಕಾಸರಗೋಡು ಗವರ್ನಮೆಂಟ್ ಆಸ್ಪತ್ರೆಗೆ ೩೦ ವ 1931ನೇ ಇಸವಿ ಎಪ್ರಿಲ್ ತಾರೀಕು 1ರಿಂದ ೧೨ ತಿಂಗಳ ಮುದ್ದತ್ತಿನಲ್ಲಿ ಬೇಕಾಗುವ ಆಹಾರ ವ ಇತರ ಉಗತ್ಯದ ಸಾಮಾನುಗಳನ್ನು ಒದಗಿಸಿಕೊಡುವರೆ ಅಪೇಕ್ಷೆಪಡುವ ಉಮೇದ್ವಾರರು ತಮ್ಮ ಅಪೇಕ್ಷೆಗಳನ್ನು (ಟೆಂಡರುಗಳನ್ನು) ದ್ವಿಪ್ರತಿಯಾಗಿ ಒದೇ 1931ನೇ ಇಸವಿ ಜನವರಿ ತಾರೀಕು ೫ನೇ ಹಗಲು ೨ ಗಂಟೆ ವರೆಗೆ ಈ ಕೆಳಗೆ ಸ್ವೀಕೃತ ಮಾಡುವ ಉದ್ಯೋಗಸ್ಥರು ಎದುರೀ ಕರಿಸುವರು

ಈ ವಿಷಯದ ವಿಶೇಷ ಮಾಹಿತಿಯನ್ನು ಸದರಿ ಆಸ್ಪತ್ರೆಯಿಂದ ಆಸ್ಪತ್ರೆ ಸಮಯದಲ್ಲಿ ವಿಚಾರಿಸಿ ತಿಳಕೊಳ್ಳತಕ್ಕದು

Govt Hospital Kasaragod 3—12—1930 — **E J Koshi**, Civil Asst Surgeon

---

## Notice.

Sealed tenders in duplicate for the supply of articles of Diet and other hospital necessaries for one year from 1st April 1931 for the Government Hospital Puttur, South Kanara, will be received by the undersigned up to 2 P M on monday the 5th January 1931

Full particulars may be obtained from the hospital during hospital hours

Puttur, S. K. 12—12—'30 — **K Manjunath Rai** M B & B S, G. Assistant Surgeon, I/O Government Hospital Puttur

---


**The Cochin Soap Works,** ದಿ ಕೊಚ್ಚಿನ್ ಸೋಪ್ ವರ್ಕ್ಸ್.

IRENJALAKUDA ಇರಿಂಜಾಲಕುಡ

BABY BORAX SOAP — TRADE MARK

ಕೊಚ್ಚಿ ವ ತ್ರಾವಂಕೂರು ರಾಜ್ಯಗಳಲ್ಲಿ 1928 '29—'30ನೇ ವರ್ಷಗಳಲ್ಲಿ ನಡೆದ ಎಕ್ಸಿಬಿಶನ್ನುಗಳಲ್ಲಿ ಬೆಳ್ಳಿ ಬಂಗಾರದ ಪದಕಗಳಿಂದಲೂ ಅನೇಕ ಯೋಗ್ಯತಾಪತ್ರಗಳಿಂದಲೂ ಬಹುಮಾನಿಸಲ್ಪಟ್ಟ

ಬೇಬಿ ಬೊರೆಕ್ಸ್ ಸೋಪ್, ಲಿಲ್ಲಿ ಫ್ಲವರ್ ರೋಸ್ ಸೆಂಟೆಡ್ ಸೋಪ್, ಜಾಸ್ಮಿನ್ ಬಾತ್ ಸೋಪ್, ಕೋಲ್ ಟಾರ್ ಸೋಪ್ ಮೊದಲಾದ ಹಲವು ವಿಧದ ಸಾಬೂನುಗಳನ್ನು ತಯ್ಯಾರು ಮಾಡುವ ಸಂಸ್ಥೆಯಾಗಿರುವುದು

ಬೇಬಿ ಬೊರೆಕ್ಸ್ ಸೋಪ್—ಹಿಂದೂಸ್ಥಾನದ ಉತ್ತಮ ಉತ್ಪತ್ತಿ. ... ಎಲ್ಲಾ ಸೋಪುಗಳ ...

ಲಿಲ್ಲಿ ಫ್ಲವರ್ ರೋಸ್ ಸೆಂಟೆಡ್ ಸೋಪ್—...

ಜಾಸ್ಮಿನ್ ಬಾತ್ ಸೋಪ್—...

ಕೋಲ್ ಟಾರ್ ಸೋಪ್—...

ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸೋಲ್ ಏಜಂಟರು—

ಮೆಸರ್ಸ್ ಬೋಳಂತೂರು ಸನ್ಯೋಗತ್ತು ಮತ್ತು ಪ್ರಭು, ಮಂಗಳೂರು.

ಕ. ಜ ಲಾಜರ್, ಮೆನೇಜರ್ ಮತ್ತು ಎಕ್ಸ್‌ಪರ್ಟ್.

ಏಜಂಟರು ಬೇಕಾಗಿರುವರು



"If every Wife knew what every Widow knows every Husband would be Insured"

INSURE YOUR LIFE WITH **THE SOUTH INDIAN**

Securing to your clients

1. Low rates of Premium
2. Liberal Policy Conditions

AND FOR YOURSELF

An Agency with attractive Terms of Commission and Salary in

**The South Indian General Assurance Co, Ltd.**

Anywhere in CANARA DISTRICTS & HYDERABAD STATE

For further particulars please apply to —

H R K IYENGAR, Chief Agent

The S I G A Co Ltd, ... MANGALORE

Madras Agent

K C PANDALAI & CO

78 Melee St ... MADRAS

ಜೀವವಿಮೆ ಮಾಡ ಮರ್ನ

ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪನಿ ಲಿಮಿಟೆಡ್ಡ್‌ನಲ್ಲಿ ವಿಮೆಮಾಡಿರಿ

ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!

ಪ್ರಿಮಿಯಂ ದರಗಳು ಕಡಿಮೆ!

ಶರ್ತಗಳ ತೀರಾ ಸುಲಭ!!

ಕನ್ನಡ ಜಿಲ್ಲೆ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪನಿಯ ಏಜಂಟರಾಗಿ ಕೆಲಸಮಾಡುವವರಿಗೆ

ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ ದೊರಕುವುದು

(ಹೆಚ್ಚಿನ ಮಾಹಿತಿಗಾಗಿ ಪತ್ರವ್ಯವಹಾರ ನಡಿಸಿರಿ)

ಚೀಫ್ ಏಜಂಟರು—

ಎಚ್ ಆರ್ ಕ ಅಯ್ಯಂಗಾರ್,

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.

ದಿ ಎಸ್ ಐ. ಜಿ ಎ ಕಂಪೆನಿ ಲಿಮಿಟೆಡ್,

ಪನ್ನಾಪಿಗುಡ್ಡ ಮಂಗಳೂರು

ಮದ್ರಾಸ್ ಏಜಂಟರು —

ಕೆ ಸಿ ಪಾಂಡಲೆ ಎಂಡ್ ಕೋ.

78 ಮೆ ಲೀನ್ ಸ್ಟ್ರೀಟ್ ಜಿ ಟಿ ಮದ್ರಾಸು



## "ಗ್ರೇಂಡ್ ಕ್ಲಿಯರೆನ್ಸ ಸೇಲ್"!

ಬರೇ ಮೂರು ರೂಪಾಯಿಗಳ ವ್ಯಾಪಾರದಿಂದ **324** ಅಮೂಲ್ಯವಾದ ಪಾರಿತೋಷಕಗಳು!

ನಮ್ಮ ಸುಗಂಧ ಪೂರಿತವಾದ 'ಒಟ್ಟೋ' ಮೋತಿಯಾ ತೈಲದ ಆರು ಬಾಟ್ಲಿಗಳನ್ನು ಒಮ್ಮೆಗೇನೇ ಕೊಂಡುಕೊಳ್ಳುವವರಿಗೆ ಈ ಕೆಳಗೆ ನಮೂದಿಸಿರುವ ಇಷ್ಟು ಅಮೂಲ್ಯ ಬಹುಮಾನಗಳು ಉಚಿತವಾಗಿ ಕೊಡಲಾಗುವವು!



ಬಂಗಾರದ ಗಿಲಿಟಿನ ಕೈಗಡಿಯಾರ ... ಫೌಂಟನ್ ಪೆನ್ ... (ನಮ್ಮ ವ್ಯಾಪಾರದ ಅಳತೆಯ ಪ್ರಕಾರ ...) ಉಚಿತಗಳಾಗಿರುವುದು

ಮೂಲ್ಯ ... ರೂ ... ಅಂಚೆ ... ಹಾಸಲು ...

ಪತ್ರವ್ಯವಹಾರವು ಇಂಗ್ಲಿಷಿನಲ್ಲಿಯೇ ಸಾಗಲಿರುವುದು



ಇಂಡಿಯನ್ ಸ್ಟೋರ್ಸ ಕೋ,

47, ಪೆಮಾಟೋಲಾ ಸ್ಟ್ರೀಟ್, ಪೊ. ಓ., ಹಟ್ಖೋಲಾ, ಕಲ್ಕತ್ತೆ.

**INDIAN STORES CO.** 47, Pematola Street, Po. Hatkhola CALCUTTA.

## ಅನುಕ್ರಮಣಿಕೆ.


ಅಗ್ರಲೇಖ.
ಮರಣ ದಂಡನೆ ೮
ಸ್ಫುಟವಿಚಾರಗಳು ೬
ನೋಟಗಳು ೭
ವರ್ತಮಾನ ಸಂಗ್ರಹಗಳು
ವಿದೇಶ ವರ್ತಮಾನ ೮
ಒಳದೇಶ ವರ್ತಮಾನ ೮ ೯
ದಕ್ಷಿಣ ಕನ್ನಡ—ಮಂಗಳೂರು, ಉಡುಪಿ, ಮುಲ್ಕಿ ಪುತ್ತೂರು
ಮಂಜೇಶ್ವರ ೯
ಕೊಡಗು ಸತ್ಯಾಗ್ರಹ ಚಳವಳ
ವಿವಿಧ ಸಮಾಚಾರಗಳ ೧೧
ಕಾರ್ಕಳದಲ್ಲೊಂದು ಹಾಯರ್ ಎಲಿಮೆಂಟರಿ ಶಾಲೆಯು
ಅವಶ್ಯಕತೆ ೨
ಆದಿದ್ರಾವಿಡರ ವಿದ್ಯಾಭಿವೃದ್ಧಿ ೧೫
ಅಖಿಲ ಭಾರತ ಚರಕಾ ಸಂಘ, ಕರ್ನಾಟಕ ಶಾಖೆ ಬೆಳಗಾಂವಿ
ಮಹಾತ್ಮಾಜಿಯವರ ಸತ್ಯಾಗ್ರಹ ಸಮಾಚಾರ ೪ ೧೩


# ಸ್ವದೇಶಾಭಿಮಾನಿ.

ತಾರೀಕು ೧೯ನೇ ಶುಕ್ರವಾರ ದಶಂಬರ ೧೯೩೦.

## ಮರಣ ದಂಡನೆ

ಮೂರು ವರ್ಷಗಳ ಹಿಂದೆ ಅಮೇರಿಕದ ಸಂಯುಕ್ತ ರಾಷ್ಟ್ರದಲ್ಲಿ ಕೊಲೆ ಪಾತಕಕ್ಕಾಗಿ ಇಬ್ಬರು ಅಪರಾಧಿತರ ವಿಚಾರಣೆಯು ನಡೆಯಿತು. ಅವರು ಇಟೇಲಿಯಾನರಾಗಿದ್ದರು. ಅವರ ಹೆಸರು ಸಾಕೊ ಮತ್ತು ವೆಂಜೆಟ್ಟಿ ಎಂದಿದ್ದಿತ್ತು. ಸರಕಾರದ ಕಡೆಯಿಂದ ಸಾಕಷ್ಟು ಸಾಕ್ಷ್ಯಗಳೂ ತಯಾರಾಗಿದ್ದವು. ಒಂದು ಬಾರಿ ವಿಚಾರಣೆಯು ನಡೆದು, ಕೊಲೆ ಮಾಡಿದವರು ಅವರೇ ಎಂದು ನ್ಯಾಯಾಧೀಶರು ತೀರ್ಮಾನಿಸಿ ಅವರಿಗೆ ಮರಣ ದಂಡನೆಯನ್ನು ವಿಧಿಸಿದ್ದರು. ಆದರೆ ಜನತೆಯು ಸರಕಾರದ ಸಾಕ್ಷ್ಯದಲ್ಲಿ ತೃಪ್ತಿಹೊಂದಲಿಲ್ಲ. ಅವರು ಕೊಂದುದಲ್ಲವೆನ್ನುವುದಕ್ಕೆ ಹಲವು ಆಧಾರಗಳು ತೋರಿಬಂದುವು. ಹೀಗಾಗಿ ಪುನಃ ಅವರನ್ನು ವಿಚಾರಣೆಗೆ ಗುರಿಮಾಡಲು ಸರಕಾರವು ಒಪ್ಪಬೇಕಾಯಿತು. ಹೀಗೆ ಪುನಃ ವಿಚಾರಣೆ ನಡೆಯಿತು. ಪುನಃ ನ್ಯಾಯಾಧೀಶರು ಅವರೇ ಕೊಲೆ ಮಾಡಿದವರೆಂದು ತೀರ್ಮಾನಿಸಿದರು. ಆದರೆ ಜನತೆಯೂ ಅವರು ನಿರಪರಾಧಿಗಳೆಂದೇ ತಿಳಿದಿದ್ದರು. ಇಡೀ ಭೂಮಂಡಲದ ಎಲ್ಲಾ ಕಡೆಗಳಿಂದಲೂ ಅವರ ಮರಣ ದಂಡನೆಯನ್ನು ತೆಗೆದುಹಾಕಬೇಕೆಂಬ ಸರಕಾರಕ್ಕೆ ಎಷ್ಟೋ ಪತ್ರಗಳು ಹೋದುವು. ದೊಡ್ಡ ದೊಡ್ಡ ಅಧಿಕಾರಿಗಳನ್ನು ಕೇಳಿಕೊಳ್ಳಲಾಯಿತು. ಆದರೆ ಪ್ರಯೋಜನವಾಗಲಿಲ್ಲ. ಸಾಕೊ ಮತ್ತು ವೆಂಜೆಟ್ಟಿಯವರು ಕಾನೂನಿನ ಕ್ರೂರ ಹಸಿವಿಗೆ ಬಲಿಬಿದ್ದರು. ಇಡೀ ಭೂಲೋಕವೇ ಈ ಅನ್ಯಾಯವನ್ನು ನೋಡಿ ತಳಮಳಗೊಂಡಿತು. ಜನರೂ ಅಲ್ಲಿಗೆ ಬಿಡಲಿಲ್ಲ. ಅವರೂ ತಮ್ಮದೇ ಪ್ರತ್ಯೇಕ ವಿಚಾರಣಾ ಸಮಿತಿಯನ್ನೇರ್ಪಡಿಸಿ ಈ ಹತ್ಯೆಯ ಸತ್ಯಕಾರಣದ ಶೋಧಕ್ಕೆ ತೊಡಗಿದರು. ಮರಣ ದಂಡನೆಗೆ ಗುರಿಮಾಡಲ್ಪಟ್ಟವರು ಇದಕ್ಕೆ ಎಷ್ಟು ಮಾತ್ರವೂ ಜವಾಬ್ದಾರರಲ್ಲವೆಂಬುದಕ್ಕೆ ಖಂಡಿತ ಆಧಾರಗಳನ್ನು ಅವರು ಕಂಡುಹಿಡಿದಿರುವರೆಂಬುದಾಗಿ ಇತ್ತೀಚಿಗೆ ತಿಳಿದುಬರುತ್ತದೆ. ಹಾಗಾದರೆ ಸಾಕೊ ಮತ್ತು ವೆಂಜೆಟ್ಟಿಯವರ ಮರಣವು ಕಾನೂನಿನ ಶಿಕ್ಷೆಯೊ, ಬಲಾತ್ಕಾರದ ಬಹಿರಂಗ ಹತ್ಯಾಕಾಂಡವೊ? ಸಾಕೊ, ವೆಂಜೆಟ್ಟಿಯವರು ಸ್ವತಂತ್ರ ರಾಜಕೀಯ ಅಭಿಪ್ರಾಯವುಳ್ಳವರಾಗಿದ್ದು ಸರಕಾರದ ಅವಕೃಪೆಗೆ ಪಾತ್ರರಾಗಿದ್ದರು. ಸರಕಾರವು ತನ್ನ ವಿರೋಧಿಗಳನ್ನು ಕತ್ತು ಹಿಸುಕಲು ಸಿಕ್ಕಿದ ಸಂದರ್ಭವನ್ನು ಬಿಡದೆ, ಕಾನೂನಿನ ಒಳಗಿನ ಘೋರ ಅನ್ಯಾಯವನ್ನು ನಡೆಸಿಬಿಟ್ಟರು.

ಶೋಲಾಪುರದಲ್ಲಿ ಕೆಲವು ತಿಂಗಳ ಹಿಂದೆ ನಡೆದ ಗಲಭೆಗಳ ಸಮಯದಲ್ಲಿ ಪೋಲೀಸರನ್ನು ಕೊಂದದಕ್ಕಾಗಿ ಅಪರಾಧಿತರಾಗಿ ಮರಣ ದಂಡನೆಗೆ ಗುರಿಮಾಡಲ್ಪಟ್ಟವರ ಕತೆಯು ಮೇಲೆ ಹೇಳಿದ ಸಾಕೊ ಮತ್ತು ವೆಂಜೆಟ್ಟಿಯೆಂಬವರ ಕತೆಯಂತೆಯೇ ಇದೆ. ಈ ಅಪರಾಧಿಗಳಲ್ಲಿ ಮೂವರು ಊರಿನ ಪ್ರಮುಖ ವರ್ತಕರಾಗಿದ್ದು ಸತ್ಯಾಗ್ರಹ ಚಳವಳಿಕ್ಕೆ ಬೆಂಬಲ ಕೊಡುವಂತಹರಾಗಿದ್ದರು. ಗಲಭೆಗಳ ನಂತರ ಸ್ಥಾಪಿತವಾದ ಮಾರ್ಶಲ್ ಲಾ ರಾಜ್ಯದಲ್ಲಿ, ಸೈನಿಕರು ಗುಂಡನ್ನು ಕೈಯಲ್ಲಿ ಹಿಡಿದು ಚೆನ್ನಾಗಿ ಪಾಠ ಕಲಿಸಿದರು. ಅದೇ ಸಮಯದಲ್ಲಿ, ಪೋಲೀಸರ ರಕ್ತವು ರಕ್ತಕ್ಕಾಗಿ ಕೂಗುತ್ತಿತ್ತು—ಮತ್ತು ಆ ಬಗ್ಗೆ ಶೋಧವೂ ನಡೆದು ಈ ಅಪರಾಧಿತರ ಅವಸರದ ವಿಚಾರಣೆಯು ನಡೆದು ಅವರು ಮರಣ ದಂಡನೆಗೆ ವಿಧಿಸಲ್ಪಟ್ಟರು. ಪ್ರಜೆಗಳೆಲ್ಲರೂ ಸರಿಯಾದ ವಿಚಾರಣೆ ನಡೆಯಲಿಲ್ಲವೆಂದೂ, ಅಪರಾಧಿತರಿಗೆ ಸ್ವಂತ ವಕೀಲರ ಮುಖಾಂತರ ಯೋಗ್ಯವಾದ ಪ್ರತಿವಾದನ ಕೊಡಲು ಯಾವ ಸಂದರ್ಭವೂ ಸಿಕ್ಕಲಿಲ್ಲವೆಂದೂ, ಅಪರಾಧಿತರಲ್ಲಿ ಮುಖ್ಯವಾಗಿ ಧನಪಾಲಶೆಟ್ಟಿ ಮೊದಲಾಗಿ ಮೂವರು ಹತ್ಯಾಕಾರಿಗಳಾಗಿರುವುದಕ್ಕಿಂತಲೂ ಹಕ್ಕುಗಳನ್ನು ಹಡಿಸಲು ಯತ್ನಿಸಿದವರೆಂದೂ ಅಭಿಪ್ರಾಯಪಟ್ಟಿದ್ದರು. ಆ ಮೇಲೆ ಹ್ಯಾಕೋರ್ಟು ವಿಚಾರಣೆ ನಡೆಯಿತು. ಈ ವಿಚಾರಣೆಯಲ್ಲಿ ಹಿಂದೀ ನ್ಯಾಯಾಧೀಶರಿಗೂ ಬ್ರಿಟಿಷ ನ್ಯಾಯಾಧೀಶರಿಗೂ ಸ್ವಲ್ಪ ಭಿನ್ನಾಭಿಪ್ರಾಯ ಉಂಟಾಗಿ ಚೀಫ್ ಜಸ್ಟೀಸರ ಮುಂದೆ ವಿಚಾರಣೆ ನಡೆಯಿತು. ಅಲ್ಲಿಯೂ ಮರಣ ದಂಡನೆಯು ಕಾಯಂ ಆಯಿತು. ಪ್ರಿವಿಕೌನ್ಸಿಲಿಗೂ ಅರ್ಜಿ ಹೋದರೂ ಅವರು ವಿಚಾರಣೆಗೆ ಒಪ್ಪಲಿಲ್ಲ. ಈ ಹತಭಾಗಿ ಅಪರಾಧಿಗಳನ್ನು ಮರಣವನ್ನು ಕಾಯುತ್ತಾರೆ. ಸಮಗ್ರ ಜನಪದವು ಇವರು ನಿರಪರಾಧಿಗಳು, ನಿಮಗೆ ಸಂಶಯವಿದ್ದರೆ ಕಾರಾವಾಸವನ್ನು ವಿಧಿಸಿರಿ. ಒಮ್ಮೆಂದೊಮ್ಮೆ ಮರಣ ಶಿಕ್ಷೆಯನ್ನು ವಿಧಿಸಬೇಡಿರಿ, ಎಂದು ಕೇಳುತ್ತಾರೆ. ಪ್ರಾಂತಿಕ ಗವರ್ನರರ ಕಡೆಗೆ ಎಲ್ಲರೂ ದಯೆಗಾಗಿ ಕೇಳಿಕೊಂಡರು. ನಿರಾಕರಣೆಯಾಯಿತು. ವ್ಯಾಸರಾಯರ ಕಡೆಗೆ ಈಗ ಎಲ್ಲರೂ ತಮ್ಮ ವಿನಂತಿಯನ್ನು ಕಳುಹಿಸಿದ್ದಾರೆ. ಅದರ ಫಲವನ್ನು ಎಲ್ಲರೂ ನಿರೀಕ್ಷಿಸುತ್ತಾರೆ.

ಜಗತ್ತಿನಲ್ಲಿ ಆಗಾಗ ನಡೆಯುವ ಮರಣ ದಂಡನೆಗಳಲ್ಲಿ ಈ ಎರಡು ಘಟನೆಗಳು ಅತ್ಯಂತ ಮುಖ್ಯವಾಗಿವೆ. ಇವುಗಳಿಂದ ಮರಣ ದಂಡನೆಯೇನು? ಅದರ ಉದ್ದೇಶವೇನು? ಅದರಿಂದ ಕಾನೂನಿಗಾಗಲಿ, ದೇಶಕ್ಕಾಗಲಿ, ಸಮಾಜಕ್ಕಾಗಲಿ ಲಾಭವೇನು? ಎಂಬ ಪ್ರಶ್ನೆಗಳು ಮನಸ್ಸಿನಲ್ಲಿ ಉಂಟಾಗುವುವು. "ಹತ್ತು ಅಪರಾಧಿಗಳು ತಪ್ಪಿದರೂ ದೊಡ್ಡದಲ್ಲ, ಒಬ್ಬ ನಿರಪರಾಧಿಯು ಶಿಕ್ಷಿಸಲ್ಪಡಬಾರದು" ಎಂಬ ಉಚ್ಚ ಧ್ಯೇಯಕ್ಕೆ ಇದರಲ್ಲಿ ಗಾವುದಿಯೇ? ವ್ಯಕ್ತಿಯಾದರೂ ಸರಿ, ಸರಕಾರವಾದರೂ ಸರಿ, ಮನುಷ್ಯ ಹತ್ಯೆಯು ಕ್ಷಮ್ಯವಾಗಲಾರದು. ಅದರ ಪ್ರತಿಕ್ರಿಯೆ ಇದ್ದೇ ಇದೆ. ಆದುದರಿಂದ ಈ ಮರಣ ದಂಡನೆಯ ವಿಚಾರದಲ್ಲಿ ಎಲ್ಲಾ ಸರಕಾರಗಳೂ ಹೆಚ್ಚಿನ ಆಲೋಚನೆ ಮಾಡವುದು ಅವಶ್ಯವಿದೆ.

(ಸಶೇಷ)

## ವಿದೇಶ ವರ್ತಮಾನ

### ಸ್ಪೈನ್ ದೇಶದ ದಂಗೆ

ಗಲಭೆಯ ಮುಂದಾಳುಗಳ ವಿಚಾರಣೆಯು ನಡೆಯುತ್ತಿರುವದು. ಕೆಲವು ಮಂದಿ ಶಿಕ್ಷೆಗೆ ಒಳಪಟ್ಟಿರುವರು. ಮೂವರಿಗೆ ಮರಣ ಅಥವಾ ಜೀವಾವಧಿ ದ್ವೀಪಾಂತರವು ವಿಧಿಸಲ್ಪಟ್ಟಿರುವದು.

ದಂಗೆಯು ಶಾಂತವಾಗಿರುವದು. ಜಬ್ಬನ ಗಲಭೆ ನಡೆದ ಮೇಲೆ ಸಿದ್ಧವಾದ ಸಹಾಯಕ್ಕೆ ಸನ್ನದ್ಧರಾಗಿರುವರು ಎಂದು ಮೊದಲಾದ ವರ್ತಮಾನಗಳನ್ನು ಹುಟ್ಟಿಸಿ ವಿಮಾನಗಳು ಕರಪತ್ರಗಳನ್ನು ಸಾರುತ್ತಾ ಅಂತರಿಕ್ಷದಲ್ಲಿ ಹಾರಾಡುತ್ತಿರುವವು. ರಿಪಬ್ಲಿಕನ್ ಪಾರ್ಟಿಯವರ ಹೊಸ ಸರಕಾರವು ಸ್ಥಾಪಿತವಾಯಿತು. ರಿಪಬ್ಲಿಕನ್ ಪಾರ್ಟಿಯ ಮುಂದಾಳುಗಳನ್ನು ದಸ್ತಗಿರಿ ಮಾಡಿದುದರಿಂದ ಹೊಸ ಗವರ್ನಮೆಂಟಿನ ಸ್ಥಾಪನೆಯನ್ನು ಮತ್ತಷ್ಟು ಬಲಪಡಿಸಿದ ಹಾಗಾಯಿತು—ಎಂದು ಮೊದಲಾಗಿ ಹೇಳುವದನ್ನು ನಿಲ್ಲಿಸಿರುವದಿಲ್ಲ. ಮೆಡ್ರಿಡ್ ಪಟ್ಟಣದಲ್ಲಿ ಶಾಂತಿಸ್ಥಾಪನೆಯಾಗಿರುವದು. ಆದರೆ ವರ್ತಮಾನ ಪತ್ರಿಕೆಗಳು ಇನ್ನೂ ಪ್ರಕಾಶಹೊಂದಿರುವದಿಲ್ಲ. ಪೋಲೀಸರು ಬೀದಿಬೀದಿಗಳಲ್ಲಿ ಕಾಯುತ್ತಿರುವರು. ಮಾರ್ಶಲ್ ಲಾ ಕಾನೂನುಗಳು ಜ್ಯಾರಿಮಾಡಲ್ಪಟ್ಟಿರುವವು.

— ಲಂಡನ್ ನಗರದ 'ಕಪಿಟಲ ಪನಿಶ್‌ಮೆಂಟ್ ಸೊಸೈಟಿಯವರು ಪಾರ್ಲಿಮೆಂಟಿನಲ್ಲಿ ಪರೀಕ್ಷಾರ್ಥವಾಗಿ ೫ ವರ್ಷಗಳ ವರೆಗೆ ಮರಣದಂಡನೆಯನ್ನು ತೆಗೆದುಹಾಕಬೇಕೆಂಬ ಒಂದು ಬಿಲ್ಲನ್ನು ಮುಂದೆ ತಂದಿರುವರು.

— ಲಂಡನಿನಲ್ಲಿ ಮಿ. ಚರ್ಚಿಹಿಲ್ಲರು ಕೊಟ್ಟ ಭಾಷಣವನ್ನು ಸರ್ವಸಾಮಾನ್ಯ ಎಲ್ಲರೂ ನಿಂದಿಸಿರುವರೆಂದು ತಿಳಿದುಬರುತ್ತದೆ.

— ಗ್ಲಿನೆಕ್ ಫೋರ್ಡನ್ ಎಂಬಾತನು ಮೆಕ್ಡೊನಾಲ್ಡರ ಭಾಷಣವನ್ನು ವಿಮರ್ಶಿಸಿ ಹೇಳುವದೇನೆಂದರೆ—ಮಿ. ಮೆಕ್ಡೊನಾಲ್ಡರಿಗೆ ಭಾರತೀಯರ ಅನ್ನವಸ್ತ್ರಗಳನ್ನು ನೀಗಿಸಬೇಕೆಂಬ ಮನಸ್ಸಿದ್ದರೆ, ಮಹಾತ್ಮಾಜಿಯವರನ್ನು ಅದೇಕೆ ವಂದಿಯೊತ್ತಿಗೆ ಹೊರಡ ಬಾಗಲೇ ಕೈದುಮಾಡಲಿಲ್ಲ? ಇಂಡಿಯ ಕ್ಕೆ ಡೊಮಿನಿಯನ್ ಸ್ಟೇಟಸ್ ಕೊಡಬಾರದೆಂದು ವಾದಿಸುತ್ತಿದ್ದ ಇಂಗ್ಲೀಷರನ್ನು ಅದೇಕೆ ಸಮಾಧಾನಪಡಿಸಲಿಲ್ಲ ಎಂಬುದಾಗಿ ಪ್ರಶ್ನಿಸಿರುವರಂತೆ! ಮತ್ತು ಅಳಿಯ ಚಕ್ರಗೋಷ್ಠಿಗೆ ಹೋದ ಹಿಂದೂ ಡೆಲಿಗೇಟರನ್ನು ಪ್ರಶ್ನಿಸಿ, ೧೯೧೯ನೇ ಇಸವಿಯಲ್ಲಿ ಐರಿಶ್ ಜನಾಂಗವು ಸ್ವಾತಂತ್ರ್ಯರಕ್ಷಣೆಗಾಗಿ ಕೈಕೊಂಡಿದ್ದ ಹೋರಾಟದಂತೆ ಇಂಡಿಯನ್ ಜಂಡಿಖಾನೆಗಳಲ್ಲಿ ನರಳುತ್ತಿರುವ ರಾಜಕೀಯ ಅಪರಾಧಿಗಳನ್ನು ಬಿಡುಗಡೆ ಹೊಂದಿಸದೆ; ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡುವದು ತೀರ ನಿಷ್ಪ್ರಯೋಜನವೆಂದು ಹೇಳಿದರು.

## ಒಳದೇಶ ವರ್ತಮಾನ.

— ಮುಂಬಾಯಿಯಲ್ಲಿ ಇದೇ ತಾ ೧೧ಕ್ಕೆ ಪಿಕೆಟಿಂಗ ಮಾಡಿ ಕೈದುಮಾಡಲ್ಪಟ್ಟ ಎಂಟು ಮಂದಿ ಸ್ವಯಂಸೇವಿಕೆಯರನ್ನು ಮ್ಯಾಜಿಸ್ಟ್ರೇಟರು ಯೋಗ್ಯ ರುಜುವಾತುಗಳಿಲ್ಲದಿದ್ದುದರಿಂದ ಬಿಡುಗಡೆ ಹೊಂದಿಸಿರುವರು.

— ಕಲ್ಕತ್ತೆಯಲ್ಲಿ ಜೈಲ್ ಇನ್ಸ್‌ಪೆಕ್ಟರ ಜನರಲರನ್ನು ಕೊಂದ ಬಿನೊಯ್ ಕೃಷ್ಣಬೋಸ್ ಮತ್ತು ಗುಪ್ತರೆಂಬವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಮೊದಲನೆಯವನನ್ನು ನೋಡುವುದಕ್ಕಾಗಿ ಆತನ ಸಹೋದರನಿಗೆ ಮತ್ತು ಬಂಧುಗಳಿಗೆ ಅಪ್ಪಣೆ ಕೊಟ್ಟರು. ಆದರೆ ಗುಪ್ತರ ಸ್ಥಿತಿಯು ಇದ್ದ ಹಾಗೆಯೇ ಇರುವದೆಂದು ತಿಳಿದುಬರುತ್ತದೆ.

— ಕಲ್ಕತ್ತೆಯಲ್ಲಿ ದಿ ಅಡ್ವಾನ್ಸ್ ಪತ್ರಿಕೆಯ ಎಡಿಟರರ ಮನೆಯು ಪೋಲೀಸರಿಂದ ಶೋಧ ಮಾಡಲ್ಪಟ್ಟಿತು. ಸುಮಾರು ೧೨ ಘಂಟೆಗಳ ವರೆಗೂ ಶೋಧ ನಡೆದು ಎಡಿಟರರ ಕೆಲವು ಪುಸ್ತಕಗಳನ್ನು ಪೋಲೀಸರು ಸ್ವಾಧೀನಪಡಿಸಿರುವರಂತೆ! ಸದರಿ ಮನೆಯ ನಿವಾಸಿಗಳಾದ ನಾಲ್ಕು ಮಂದಿಯ ದಸ್ತಗಿರಿಯೂ ನಡೆದಿರುವದು. ಯಾವ ಕಾರಣದಿಂದ ಮನೆಯನ್ನು ಶೋಧಿಸಲಾಯಿತೆಂಬ ಸಮಾಚಾರವು ಇನ್ನೂ ತಿಳಿದುಬಂದಿರುವದಿಲ್ಲ.

— ಕೊಯಮುತ್ತೂರು ಜೈಲಿನಲ್ಲಿರುವ ವಿ. ಜೆ. ಪಟೇಲರ ಆರೋಗ್ಯವು ಇನ್ನೂ ನೆಟ್ಟಗಾಗಿರುವದಿಲ್ಲವೆಂದು ತಿಳಿದುಬರುತ್ತದೆ. ಅವರ ದೇಹಭಾರವು ಒಂದು ಪೌಂಡಿನಷ್ಟು ಕಡಿಮೆಯಾಗಿರುವದೆಂದು ತಿಳಿದುಬರುತ್ತದೆ.

ಹಾಯದರಾಬಾದ್ ಜಿಲ್ಲೆಯ ಎಲ್ಲಾ ಸತ್ಯಾಗ್ರಹ ಆಶ್ರಮಗಳನ್ನೂ, ಸಮಿತಿಗಳನ್ನೂ ನ್ಯಾಯಬಾಹಿರ ಸಂಸ್ಥೆಗಳೆಂದು ಸರಕಾರವು ಪರಿಗಣಿಸಿರುವದು.

— ಎಲ್ ಮಿಸ್ಕ ಎಡ್ಯುಕೇಶನಲ್ ಕಾನ್ಫರೆನ್ಸು ಸಮಾರಂಭವು ಕಲ್ಕತ್ತಾ ಯುನಿವರ್ಸಿಟಿಗೆ ಸೇರಿದ ಪ್ರೊಫೆಸರ್ ರಾಧಾಕೃಷ್ಣನ್‌ನವರ ಅಧ್ಯಕ್ಷತೆಯಲ್ಲಿ ಇದೇ ತಿಂಗಳು ತಾ ೨೬ಕ್ಕೆ ಪ್ರಾರಂಭವಾಗುವದು.

— ಶೋಲಾಪುರದ ದಂಗೆಯಲ್ಲಿ ಮರಣ ದಂಡನೆ ವಿಧಿಸಲ್ಪಟ್ಟ ನಾಲ್ವರ ಪರವಾಗಿ ದಯಾಪರತೆಯ ಅಪೀಲು ಮಾಡಬೇಕೆಂದು ಪೂನಾ ಜನತೆಯು ಸಭೆಸೇರಿ ನಿರ್ಧರಿಸಿರುವದು.

— ಪ್ರಭಾತ್ ಫಿಲ್ಮು ಕಂಪೆನಿಯವರು ತಯ್ಯಾರಿಸಿದ ಸ್ವಾತಂತ್ರ ಪತಾಕೆ (Flag of Freedom) ಎಂಬ ಫಿಲ್ಮನ್ನು ಮುಂಬಾಯಿ ಸರಕಾರವು ಬಹಿಷ್ಕಾರ ಹಾಕಿರುವದೆಂದು ತಿಳಿದುಬರುತ್ತದೆ.

— ಸಿಂಧ್ ದೇಶದ ಸತ್ಯಾಗ್ರಹ ಪ್ರೆಸಿಡೆಂಟರಾದ ಹಾಗೂ ಪ್ರಸಿದ್ಧ ವಕೀಲರಾದ ಮಿ. ಸಿ. ಟಿ. ವಲೆಚ ಎಂಬವರನ್ನು ದಸ್ತಗಿರಿ ಮಾಡಿ ೩ ವರ್ಷದ ಕಠಿಣ ಸಜೆಯನ್ನು ವಿಧಿಸಿರುವರು.

— ಬಂಗಾಳ ಪ್ರಾಂತ್ಯದ ಪೋಲೀಸ್ ಇನ್ಸ್‌ಪೆಕ್ಟರ್ ಜನರಲರು ಹೇಳುತ್ತಾರೆ—ಸತ್ಯಾಗ್ರಹವು ಶಾಂತವಾಗಲಿ. ಆ ಮೇಲೆ ಮಾತ್ರ ಪೋಲೀಸರ ಕೃತ್ಯಗಳು ನ್ಯಾಯವಾದುವುಗಳೆಂದು ಎಲ್ಲರೂ ಹೇಳಿಕೊಂಡಾಡುವರು—ಎಂದು.

ಕಲ್ಕತ್ತ ಹ್ಯಾಕೋರ್ಟಿನಲ್ಲಿ ಚೀಫ್ ಜಸ್ಟೀಸರು 'ಸ್ವಾತಂತ್ರ್ಯ ಸಿಪ್ಪಾಯಿ' ಯಂತ್ರವು ಪ್ರೆಸ್ ಆಗುವದು ಹೇಗೆ—ಎಂಬ ಪ್ರಶ್ನೆಯನ್ನು ಚರ್ಚೆಗಾಗಿ ಮುಂದೆ ತಂದಿರುವರು.

— ನವಾಢಿಲ್ಲಿಯ ಸತ್ಯಾಗ್ರಹ ಸಮರ ಸಂಸ್ಥೆಗೆ ಮಿ. ರಾಮಕುಮಾರ್ ಮಾರ್ವಾರಿ ಸೇಟರನ್ನು ೧೦ನೇ ಡಿಕ್ಟೇಟರರನ್ನಾಗಿ ನಿಯಮಿಸಿರುವರು.

— ಮದರಾಸಿಗೆ ಸೇರಿದ ಶ್ರೀಮತಿ ಐಯರ್ ಮತ್ತು ರೆಡ್ಡಿಯವರು ವಿ. ಜೆ. ಪಟೇಲರನ್ನು ಬಿಡುಗಡೆ ಹೊಂದಿಸಬೇಕಾಗಿ ಸರಕಾರದೊಡನೆ ಬರಹ ಮುಖೇನ ಮನವಿಗಳನ್ನು ಕಳುಹಿಸಿರುವರೆಂದು ಗೊತ್ತಾಗುತ್ತದೆ. ಮಾನ್ಯ ವಿ. ಜೆ. ಪಟೇಲರ ಹಲ್ಲು ನೋವು ಮತ್ತು ಅಶಕ್ತಿಯು ಇನ್ನೂ ಪೂರ್ಣವಾಗಿ ಗುಣಹೊಂದಿರುವದಿಲ್ಲ.

—ಮುಂಬಾಯಿಗೆ ಬಂದಿರುವ ಫ್ಯಾಸಾನ್ನು ಮೆಂಬರರ ಕೂಡ ಸ್ವದೇಶಿ ಉಪ್ಪಿನ ಖಾತೆಗೆ ಸೇರಿದ ಅನೇಕರು ವಿದೇಶಿ ಉಪ್ಪಿನ ಮೇಲೆ ಮಣ ಒಂದರ ೪ ಆಣೆಯಂತೆ ಸುಂಕ ಹಾಕಬೇಕೆಂತಲೂ ಸ್ವದೇಶದಲ್ಲೇ ಉಪ್ಪನ್ನು ತಯ್ಯಾರಿಸಿಕೊಳ್ಳುವಂತೆ, ವಿದೇಶಿ ಉಪ್ಪಿನ ವ್ಯಾಪಾರಿಗಳು ತಮ್ಮ ಮೇಲಾಟಗಳನ್ನು ನಿಲ್ಲಿಸುವ ಹಾಗೆ ತಡಗಟ್ಟುವಂತೆಯೂ ಅಪೇಕ್ಷಿಸಿದರು. ಫ್ಯಾಸಾನ್ನು ಮೆಂಬರರು ತಾನು ಢಿಲ್ಲಿಗೆ ಹೋಗಿ ಬಂದು ಆ ವಿಷಯದಲ್ಲಿ ಯೋಚಿಸುವೆನೆಂದು ಉತ್ತರಕೊಟ್ಟಿರುವರಂತೆ!

— ಚೆಂಗಲ್ಪೆಟ್ ಡಿಸ್ಟ್ರಿಕ್ಟ್ ಜಡ್ಜರು ಜೈನಾಬಿ ಎಂಬ ೧೪ ವರ್ಷದ ತರುಣಿಯನ್ನು ಆಕೆಯ ಗಂಡನೇ ಕೊಲ್ಲಿಸಿದನೆಂಬ ರುಜುವಾತಿನ ಮೇಲೆ, ಗಂಡನಿಗೆ ೫ ವರ್ಷದ ಕಠಿಣ ಸಜೆಯನ್ನು ವಿಧಿಸಿರುವರೆಂದು ತಿಳಿದುಬರುತ್ತದೆ.

ಶ್ರೀಯುತ ವಿ. ಜೆ. ಪಟೇಲರ ಆರೋಗ್ಯ ರಕ್ಷಣೆ ಕುರಿತು ಯೋಗ್ಯ ವಿಚಾರಣೆಗಳನ್ನು ಮಾಡಬೇಕೆಂದು ಮದ್ರಾಸ್ ಜನತೆಯು ಬೊಂಬಾಯಿ ಸರಕಾರಕ್ಕೆ ಡೆಪ್ಯುಟೇಶನ್ ಒಂದನ್ನು ಕಳುಹಿಸಿರುವರು

ಕೌನ್ಸಿಲ್ ಸಭೆಯಲ್ಲಿ ಹಲವು ಕಾಲದಿಂದಲೂ ವಾದಿಸಲ್ಪಡು ತ್ತಿದ್ದ ಸುಂಕರದ್ದಾಗುವ ಪ್ರಶ್ನೆಯು ಯೋಗ್ಯ ಉತ್ತರವನ್ನು ಪಡೆದಿರು ವದು. ಮುದರಾಸ್ ಸಂಸ್ಥಾನದಲ್ಲಿ ವಾಹನಗಳ ಮೇಲೆ ಹೊರಿಸ ಲ್ಪಡುವ ಸುಂಕವು ತೆಗೆದು ಹಾಕಲ್ಪಡುವದೆಂದು ನಿರ್ಧರಿಸಿರುವರು ಆದರೆ ಮೋಟಾರ್ ಗಾಡಿಗಳ ಮೇಲೆ, ಸುಂಕದ ಬದಲಾಗಿ, ಸ್ಥಳೀಕ ತೆರಿಗೆಯು ಹೊರಿಸಲ್ಪಡುವದಂತೆ! ಆದರೆ ಇಂಥ ಹೊಸ ಮಸೂದೆಯು ಜ್ಯಾರಿಯಾಗಲು ಇನ್ನೂ ಕೆಲಸಮಯ ಹೋಗುವದೆಂದು ತಿಳಿದು ಬರುತ್ತದೆ.

— ಬಂಗಾಳದ ಕವಿವರ್ಯರಾದ ಮಿ। ಖಾಜಿ ನುಜ್ರುಲ್ ಇಸ್ಲಾಮ್ ಎಂಬವರನ್ನು ರಾಜದ್ರೋಹದ ಅಪಾದನೆಯ ಮೇಲೆ ೬ ತಿಂಗಳ ಕಠಿಣ ಸಜೆಗೆ ಗುರಿಪಡಿಸಿರುವರೆಂದು ತಿಳಿದುಬರುತ್ತದೆ. ಇವರು "ಪ್ರಳಯ ಶಿಖಾ" (Flames of distruction) ಎಂಬದೊಂದು ಕಾವ್ಯವನ್ನು ಪ್ರಚಾರಪಡಿಸಿದರೆಂಬುದೇ ಅವರ ಮೇಲಿನ ಅಪಾದನೆ —

— ಬೆಳ್ಗಾಮದಲ್ಲಿ ಪ್ರಭಾತಫೇರಿ ಮೆರವಣಿಗೆಗಳಿಗೆ ಸರಕಾರವು ಬಹಿಷ್ಕಾರಹಾಕಿರುವದು. ಸರಕಾರದ ಕಟ್ಟಾಜ್ಞೆಯನ್ನು ಉಲ್ಲಂಘಿಸಿ ದವರು ಜೈಲನ್ನು ಸಂದರ್ಶಿಸುತ್ತಿರುವರು ಈ ಕುರಿತು ೧೩ನೇ ತಾರೀ ಕಿನ ದಿನ ಸುಮಾರು ೩೭ ಮಂದಿಯು ದಸ್ತಗಿರಿಯಾಗಿರುವದು ಚಿಕ್ಕ ದೊಂದು ಲಾಟೀಪ್ರಹಾರವೂ ಆಗಿರುವದೆಂದು ತಿಳಿದುಬರುತ್ತದೆ

— ಕಲ್ಕತ್ತಾ ಹೈಕೋರ್ಟಿನಲ್ಲಿ ನ್ಯಾಯಾಧೀಶರು ಪ್ರಭುಗಳು ಪೂರ್ಣ ಸರ್ ರಾಜೇಂದ್ರರಾಯ ಘೋಷರ ಭಾವಚಿತ್ರವನ್ನಿಡುವ ಪ್ರದರ್ಶನ ಸಮಾರಂಭವನ್ನು ಬಹಳ ವಿಜೃಂಭಣೆಯಿಂದ ಕೊನೆಗಾಣಿಸಿದರು. ಹೆಚ್ಚಾದ ವಕೀಲರು ಸಮಾರಂಭದಲ್ಲಿ ಹಾಜರಿರಲಿಲ್ಲ

ಈ ಸಂದರ್ಭವನ್ನು ಕಳಕೊಳ್ಳಬೇಡಿರಿ!

ಸ್ಟ್ರೈಕಿಂಗ್ ಮತ್ತು ವ್ಯಾಂಡಿಂಗ್ ಎಲಾರ್ಮ್ ಕ್ಲೋಕ್—ಉಚಿತ.



ಲಿವರ್ ರಿಸ್ಟ್‌ವಾಚು—(ಚೌಕ ಅಥವಾ ದುಂಡಗೆ) ನಮ್ಮ ಲಿವರ್ ವಾಚನ್ನು ಕೊಳ್ಳುವವರಿಗೆ ಒಂದು ಕ್ಲೋಕ್ ಉಚಿತ. ನಮ್ಮ ರಿಜಿಸ್ಟ್ರೇಡ 'ಎಸ್. ಎಸ್ ಮದೀನಾ ಶಿಪ್' ಎಂಬ ಟ್ರೇಡ್ ಮಾರ್ಕನ್ನು ವಾಚಿನ ಮುಖ ಚಿಲ್ಲೆಯಲ್ಲಿ ನೋಡಿರಿ—ಸ್ಪೆಶಲ್ ತಯಾರಿ—ನವೀನವಾಗಿ ಈಗ ತಾನೇ ಸ್ವಿಟ್ಜರ್ಲೆಂಡಿನಿಂದ ಬಂದಿರುವದು. ಚಿತ್ತಾಕರ್ಷಕವಾದ ಅಂಕೆಗಳು (ಅರೆಬಿಕ್ ಅಥವಾ ರೋಮನ್ ಸರಿಯಾದ ಸಮಯವನ್ನು ತೋರಿಸುವದು. ಯಾಂತ್ರಿಕ ಸಾಮಾನುಗಳಿಗೆ ವರ್ಷದ ಗ್ಯಾರಂಟಿ, ಫೇಕ್ಟರಿ ಕ್ರಯ ೨೦/ ರೂಪಾಯಿ ಮಾರಾಟದ ಕ್ರಯ ರೂ. ೬—೮—೦ ಅಂಚೆವೆಚ್ಚ ೧೩ ಆಣೆ ಮಾತ್ರ.

ಸಿಟಿವಾಚ್ ಕೊ., ನಂಬ್ರ 8, ಹಾರ್ಬರ್ ರೋಡ್, ಗಾಮ್‌ದೇವಿ, ಮುಂಬಾಯಿ


EDITED, PRINTED & PUBLISHED BY V. S. KAMATH AT M. T. A. SHARADA PRESS, MANGALORE,

# ದೇಶಾಭಿಮಾನಿ

ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

[illegible] ದೇವಾ । ನ [illegible] ಭೀಮವಿಷೇಣ ಭೀತಿಮ್ [illegible] ಸುಧಾಂ ವಿನಾ ನ ಪ ಯುಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
[illegible] ರತ್ನಗಳು ಸಾ । ಗರವ ಮಥಿಸಲು ಸುರರಿಗವಂ । [illegible] ಮತ್ತೆ ವಿಷ್ಟದ [illegible] ।
[illegible] ಸುಧೆಯನು । ಮರೆತು [illegible] ನಿಶ್ಚಿತಾರ್ಥವನು । ೧ ।

ಪುಸ್ತಕ ೨೪. | ಮಂಗಳೂರು ತಾ. ೨೬ನೇ ಶುಕ್ರವಾರ ದಶಂಬರ ೧೯೩೦ | (26 12 – 30.) | ಸಂಚಿಕೆ ೫೧



## THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

**Head office:—UDIPI.** ಹೆಡ್ ಆಫೀಸು. ಉಡುಪಿ

**Branches:—COONDAPOOR & Mangalore** ಶಾಖೆ ಕುಂದಾಪುರ ಮತ್ತು ಮಂಗಳೂರು

Authorised Capital [illegible] 3 50 000. Subscribed & Called up Rs 2 25 000

ನಿಯಮಿತ ಮೂಲಧನ ರೂ 3,50 000 [illegible] ಮೂಲಧನ [illegible] 2,25 [illegible]

Statement of Affairs as on [illegible] Dec [illegible] 1930

| CAPITAL AND LIABILITIES | | PROPERTY AND ASSETS | |
|---|---|---|---|
| 1 Paid up Capital | Rs [illegible] | 1 Premises Building Furniture etc | Rs [illegible] |
| 2 Reserve and other fund | [illegible] | 2 Investment on G P Notes | [illegible] |
| 3 Deposits | [illegible] | 3 Investment on Approved Securities | [illegible] |
| 4 Bill for collection as per contra | [illegible] | 4 Bills for collection | [illegible] |
| 5 Due to Bankers | [illegible] | 5 Sundries | [illegible] |
| 6 Sundries | [illegible] | 6 Cash in hand with banks | [illegible] |
| Total | [illegible] | Total | [illegible] |

Office of the Corporat[illegible]

**N. ANANDA RAO** *Secretary & Manager*



## ಅಮೃತಾಂಜನ.

[illegible]

ರಿಂಗ್‌ವರ್ಮ್ ಮುಲಾಮು [illegible]

ದಂತಮಂಜನ — [illegible]

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಮಕ್ಕಳ ಸಲುವಾಗಿ,

## ಡೋಂಗರ

ಇವರ

## ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದುಸ್ಥಾನದಲ್ಲೆಲ್ಲ ಅನೇಕ ವಿದ್ವಾಂಸರಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

**ಕೇ. ಟಿ. ಡೋಂಗರೇ ಕಂಪನಿ.** ಗಿರಗಾಂವ, ಮುಂಬಯಿ

ಏಜಂಟರು — ದಿ ಉಲ್ಲಾಸ್ ಮಾರ್ಟ್, ಮಂಗಳೂರು.

## ಶ್ರೀ ಸರಸ್ವತೀ ಭಂಡಾರ

| | | |
|---|---|---|
| 1 | [illegible] | 1–8–0 |
| 2 | [illegible] | 0–12–0 |
| 3 | [illegible] | 4–0–0 |
| 4 | [illegible] | 4–0–0 |
| | [illegible] | [illegible]–0 |
| 5 | [illegible] | 14–0 |
| | [illegible] | 1–0–0 |
| 8 | [illegible] | 1–14–0 |
| 9 | [illegible] | [illegible]–0 |
| 10 | [illegible] | 1–4–0 |
| 11 | [illegible] | –2–0 |
| 12 | [illegible] | –12–0 |
| 13 | [illegible] | 0–12–0 |
| 14 | [illegible] | 1–8–0 |
| 15 | ಇಂಡಿಯನ್ ಪಿನಲ್ ಕೋಡು | 4–8–0 |
| 16 | ಕ್ರಿಮಿನಲ್ ಪ್ರೊಸಿಜರ್ ಕೋಡ್ | 3–0–0 |
| 17 | [illegible] ಕೋಡ್ | 1–0–0 |

ಈ ಪುಸ್ತಕಗಳಲ್ಲದೆ ನಮ್ಮಲ್ಲಿ ಇನ್ನೂ ಹಲವಾರು ನಮೂನೆಯ ಕನ್ನಡ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗ್ ಅಪೇಕ್ಷಿಸುವವರು [illegible] ಬರೆಯಿರಿ.

[illegible] ಇಡಲು ಯೋಗ್ಯವಾದ ಅನೇಕ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕಿವೆ.

ವಿಳಾಸ— **ಶ್ರೀ ಸರಸ್ವತೀ ಭಂಡಾರ.**

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು, [illegible] ಮಂಗಳೂರು.

# ಸ್ವಾಭಿಮಾನಿ.

**ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.**

ದೇವಾ [illegible] ಸುಧಾಂ ವಿನಾ ನ ಪ್ರಯುಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
[illegible] ಸಾಗರವ ಮಥಿಸಲು ಸುರರಿಗದರಿಂ । ತೆರುಸವಾಯಿತೆ! ಮತ್ತೆ ವಿಷ್ವವ ಸುಡುತ ಒರುತಿರುವ ॥
[illegible] ಕ್ಷುದ್ರರ ತೆರದಿ ಕುಳಿತಿರೆ । ಕೇಳಿ ಎಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೪. | ಮಂಗಳೂರು ತಾ. ೨೬ನೇ ಶುಕ್ರವಾರ ದಶಂಬರ ೧೯೩೦ | (26 – 12 – 30.) | ಸಂಚಿಕೆ ೫೧



## THE CANARA BANKING CORPORATION, UDIPI, LTD.

## ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

**Head office:—UDIPI.** | **Branches:—COONDAPOOR & Mangalore.**
ಹೆಡ್ ಆಫೀಸು:— ಉಡುಪಿ. | ಶಾಖೆ:— ಕುಂದಾಪುರ. ಮತ್ತು ಮಂಗಳೂರು

Authorised Capital Rs 3,50,000- Subscribed & Called up Rs. 2,25,000-
ನಿಯಮಿತ ಮೂಲಧನ ರೂ 3,50,000 ಚಂದಾ ಹಾಕಲಿಕ್ಕೆ ಅಪೇಕ್ಷಿಸಿದ ವ ಎತ್ತಿದ ಮೂಲಧನ ರೂ 2,25,000

**Statement of Affairs as on 31s October 1930**

| CAPITAL AND LIABILITIES | | | PROPERTY AND ASSETS | | |
|---|---|---|---|---|---|
| 1 | Paid up Capital | Rs 2,24,130-0-0 | 1 | Premises Building Furniture etc | Rs 42,912-5-4 |
| 2 | Reserve and other funds | 1,78,400-0-0 | 2 | Investment on G P Notes | 3,77,414-5-0 |
| 3 | Deposits | [illegible] | | Investment on Approved Securities | [illegible],830-12-11 |
| 4 | Bills for collection as per contra | [illegible] | 4 | Bills for collection | 8,156-10-3 |
| 5 | Due to Bankers | [illegible] | 5 | Sundries | 32,804-1-3 |
| 6 | Sundries | [illegible] | 6 | Cash in hand & with banks | [illegible] |
| | Total | [illegible] | | Total | 20,95,[illegible]31-12-4 |

Office of the Corporation [illegible] | **N. ANANDA RAO** *Secretary & Manager*




## ಅಮೃತಾಂಜನ.

[illegible] ಅಮೃತಾಂಜನ [illegible] ಬೆಲೆ [illegible] ಆಣೆ ೧೦, ಟ. ಖ. ಬೇರೆ.

**ರಿಂಗ್‌ವರ್ಮ್ ಮುಲಾಮು.** [illegible] ಡಬ್ಬಿಗೆ ಆಣೆ ೮ ಟ. ಖ. ಬೇರೆ.

**ದಂತಮಂಜನ:**— [illegible] ಡಬ್ಬಿಗೆ ಆಣೆ ೭ ಟ. ಖ. ಬೇರೆ.

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬಾಯಿ.

ಮಕ್ಕಳ ಸಲುವಾಗಿ,

## ಡೋಂಗರೆ

ಇವರ

## ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

**ಕೇ. ಟಿ. ಡೋಂಗರೇ ಕಂಪೆನಿ,**
ಗಿರಗಾಂವ, ಮುಂಬಾಯಿ.

ಏಜಂಟರು—ದಿ ಜುಬಿಲಿ ಮಾರ್ಟ್, ಮಂಗಳೂರು.

## ಶ್ರೀ ಸರಸ್ವತೀ ಭಂಡಾರ

| | | |
|---|---|---|
| 1 | ಸಚಿತ್ರ ರಾಮಾಯಣ ಕಥಾ ಸಂಗ್ರಹ | 1–8–0 |
| 2 | [illegible] ರಾಜ ಚರಿತ್ರೆ | 0–12–0 |
| 3 | ಮಾಧವೀ ಕಂಕಣ | 4–0–0 |
| 4 | [illegible] | 2–0–0 |
| 5 | ಮಹಾಭಕ್ತ ವಿಜಯ | 3–0–0 |
| 6 | [illegible] | 0–12–0 |
| 7 | [illegible] | 1–0–0 |
| 8 | ವಿಮಲಾದೇವಿ | 1–14–0 |
| 9 | ಸೌಭಾಗ್ಯ [illegible] | 1–8–0 |
| 10 | ಧರ್ಮ ಸಾಮ್ರಾಜ್ಯಂ | 1–4–0 |
| 11 | ರಾಮ ರಾಜ್ಯ | 0–2–0 |
| 12 | ಆನಂದ ಮಠ | 1–12–0 |
| 13 | [illegible] | 0–12–0 |
| 14 | ವಚನ ಭಾರತ | 1–8–0 |
| 15 | ಇಂಡಿಯನ್ ಪಿನಲ್ ಕೋಡು | 4–8–0 |
| 16 | ಕ್ರಿಮಿನಲ್ ಪ್ರೊಸೀಜರ್ ಕೋಡ್ | 3–0–0 |
| 17 | ಸ್ಟ್ಯಾಂಪ್ ರೆವಿನ್ಯೂ ಕೋಡ್ | 1–0–0 |

ಈ ಮೇಲ್ಕಂಡವುಗಳಲ್ಲದೆ ನಮ್ಮಲ್ಲಿ ಇನ್ನೂ ಸಾವಿರಾರು [illegible] ಕನ್ನಡ ಪುಸ್ತಕಗಳು ದೊರೆಯುತ್ತವೆ. [illegible] ಕೆಳಗಿನ ವಿಳಾಸಕ್ಕೆ ಬರೆಯಿರಿ.

[illegible] ಅನೇಕ ಪುಸ್ತಕಗಳು ನಮ್ಮಲ್ಲಿ [illegible]

ವಿಳಾಸ—

**ಶ್ರೀ ಸರಸ್ವತೀ ಭಂಡಾರ.**

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು, [illegible] ರೋಡ್, ಬೆಂಗಳೂರು [illegible]

# ದಿ ಜನಿತ್ ಲೈಫ್ ಎಸ್ಸೂರೆನ್ಸ್ ಕಂಪೆನಿ ಲಿಮಿಟೆಡ್, ಪ್

ನನ್ನ ಮೃತಪಟ್ಟ ಪುರುಷೋತ್ತಮನೆಂಬ ಮಗನು ಈ ಕೆಳಗಿನ ಕಂಪನಿಗಳಲ್ಲಿ ವಿಮೆಮಾಡಿರುವನು

(1) ಆಸ್ಟ್ರೇಲಿಯದ ನ್ಯಾಶನಲ್ ಮ್ಯೂಚುವಲ್ ಲೈಫ್ ಎಸೋಸಿಯೇಶನ್.

(2) ಭಾರತ್ ಇನ್‌ಶೂರೆನ್ಸ್ ಕೋ. ಲಿಮಿಟೆಡ್.,

(3) ಝೆನಿತ್ ಲೈಫ್ ಎಸ್ಸೂರೆನ್ಸ್ ಕೋ. ಲಿಮಿಟೆಡ್.

ಇದೇ ತಿಂಗಳ 5ನೇ ತಾರೀಕಿಗೆ, ತಮ್ಮ ಹಕ್ಕುಬಾಧ್ಯತೆಗಳನ್ನು ತೋರಿಸುವ ಪತ್ರಗಳು ಎಲ್ಲಾ ಕಂಪೆನಿಗಳಿಗೆ ಕಳುಹಿಸಲ್ಪಟ್ಟಿರುವವು. ಝೆನಿತ್ ಮುಖ್ಯ ಶಾವರ್ಕರ್ ಎಂಡ್ ಕೋ.—ಇವರು ತಮ್ಮ ಈ ಕೆಳಗಿನ ತಂತಿ ಸಮಾಚಾರವನ್ನು 14ನೇ ತಾರೀಕಿಗೆ ಪಡೆದಿರುವರು.

'ಪೋಲಿಸಿ ನಂಬ್ರ 6337. ರಾಜಪ್ಪನವರ ಹಕ್ಕುಬಾಧ್ಯತೆಯು ಅಂಗೀಕರಿಸೋಣಾಗಿಯದೆ. ಪೋಲಿಸಿಯು ಡಿಸ್ಚಾರ್ಜು ಮಾಡಲಿಕ್ಕೆ ಕಳುಹಿಸಲ್ಪಟ್ಟಿರುವದು—ರೆ. ಲೈಫ್'

ಪೋಲಿಸಿಯು ಈ ಹೊತ್ತು ಬಂದು ತಲ್ಪಿರುವದು ನಾನದನ್ನು ನಿಮ್ಮ ಮುಖ್ಯ ಏಜಂಟರಾದ ಶಾವರ್ಕರ್ ಎಂಡ್ ಕೋ.—ಇವರಿಗೆ ಕೊಟ್ಟ ಕೂಡಲೆ, ನಮ್ಮ ಹಕ್ಕಿನ ಐವೇಜನ್ನು ಸಂಪೂರ್ಣವಾಗಿ ಕೊಟ್ಟಿರುವರು. ಆದರೆ ಇತರ ಕಂಪೆನಿಗಳಿಂದ ಹಕ್ಕು ಬಾಧ್ಯತೆಯ ಪತ್ರಗಳು ತಲ್ಪಿದ ವಿಷಯದಲ್ಲಿ ಉತ್ತರವೇ ಇಲ್ಲ.

ಝೆನಿತ್ ಕಂಪೆನಿಯು, ಹಣ ಸಂದಾಯದ ವಿಷಯದಲ್ಲಿ ಬಹಳ ತೀವ್ರವಾಗಿರುವುದೆಂದು ಇದು ವರೆಗೂ ಕೇಳಿದ್ದೆನ. ಆದರೆ ಈಗ ನನ್ನ ಸ್ವಾನುಭವವು ಮೇಲಿನ ಕಂಪನಿಯ ವಿಷಯದಲ್ಲಿ ಸಂಪೂರ್ಣ ವಿಶ್ವಾಸವನ್ನು ಹುಟ್ಟಿಸಿರುವದು.

ಇತಿ ನಿಮ್ಮ ನಂಬಿಗಸ್ಥ,

ಎ. ರಾಜಪ್ಪ,

ಪಿ. ಡಬ್ಲ್ಯು. ಡಿ. ಕಂಟ್ರಾಕ್ಟರ್



## ಆಶ್ಚರ್ಯಕರ ಔಷಧಿ

ಅತಿಸಾರ, ಅಜೀರ್ಣದಿಂದಾದ ಎಂತಹ ಮಲಬದ್ಧತೆಯಾದರೂ ಓಡುವದು.

ಏತರಿಂದ?

HEDAURIK
DYSENTERY
CHOLERA CURE

ಹಿಂದೀ ಔಷಧಿ. ಹಿಂದೀಯರಿಗಾಗಿ ಹಿಂದೀಯರಿಂದಲೇ ಕಂಡುಹಿಡಿಯಲ್ಪಟ್ಟದು ಹಿಂದೀಯರಿಂದಲೇ ವ್ಯಾಪಾರಕ್ಕೆ ತರಲ್ಪಟ್ಟದು

ಔಷ್ಪಿನ ಕ್ರಯ ಆಣೆ 0—15—0 2 ಔಷ್ಪಿನ ಬಾಟಲಿಗೆ ರೂ. 1—12—0.

ಪರೀಕ್ಷಿಸಿ ತೃಪ್ತರಾಗಿರಿ!

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಆಫೀಸು,
ಡೊಂಗರಕೇರಿ ರಸ್ತೆ,
ಮಂಗಳೂರು.

ದಿ ಕಿಂಗ್ ಡಿಸ್ಪೆನ್ಸರಿ,
ಕೊಡಿಯಾಲಬೈಲ್ ಪೋಸ್ಟು,
ದ. ಕನ್ನಡ

## ಶರ್ಮಾಸ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಜೋಡುಮಠ ರಸ್ತೆ, ಮಂಗಳೂರು ದ. ಕ.

— ಇವರ —

# ಆಯುರ್ವೇದಿಯ ಸಿದ್ಧೌಷಧಗಳು.

**ಅಶೋಕ ಮಿಶ್ರಣ** — ನಿಂಬಿಯರ ಸಂಸಾರವು ಸಾರಮಯವಾಗಿ ವಿರಾಜಿಸಬೇಕೆಂದಿದ್ದರೆ—ಮುಟ್ಟಿನದೋಷ, ಬಿಳಿ ಕೆನ, ಬಾಣಂತಿಯರ ರೋಗವೇ ಮೊದಲಾದವುಗಳಿಂದ ನಿತ್ಯ ದುಃಖಿನಿಯಾಗಿರದೆ ನಿತ್ಯ ಸುಖಿಗಳಾಗಿರಬೇಕೆಂದು ಬಯಸುವಿರಾದರೆ ಇದೋ ವನಿತೆಯರ ಪುನರುಜ್ಜೀವನಕ್ಕೆ ನಂದನವನದಂತಿರುವ 'ಶರ್ಮರವರ ಅಶೋಕ ಮಿಶ್ರಣ'ವನ್ನೇ ಸೇವಿಸಿರಿ ಮರೆಯಬೇಡಿ! ಸೀಸೆಯು ಬೆಲೆ ರೂ. 2—0—0 ಮಾತ್ರ ಟ. ಖ. ಬೇರೆ

**ಮೇಹರಕ್ಷಾಮೃತಂ** — ಇದೀಗ ಬಗೆಬಗೆಯ ಮೇಹರೋಗಗಳನ್ನೂ, ಸ್ತ್ರೀಯರ ಸಂಸರ್ಗದ ರೋಗಗಳನ್ನೂ ಶೀಘ್ರದಲ್ಲೇ ನಾಶಗೊಳಿಸಬಲ್ಲುದು ಮೂತ್ರಾಶಯದ ಹುಣ್ಣುಗಳಿಗೂ, ಬಿಳಿದು ಇತ್ಯಾದಿ ಸ್ರಾವವಾಗುವದಕ್ಕೂ ದಿವ್ಯವಾದ ಔಷಧವಿದು. ಈ 'ಮೇಹರಕ್ಷಾಮೃತ'ವು ಅಮೃತ ಸಮಾನವಾಗಿರುವುದೆಂಬುದನ್ನು ನೆನಪಿನಲ್ಲಿಡಿ! ಸೀಸೆಯು ಬೆಲೆ ರೂ. 2—0—0 ಮಾತ್ರ! ಟ. ಖ. ಬೇರೆ.

ಇವಲ್ಲದೆ ಇನ್ನೂ ಬಗೆಬಗೆಯ ರೋಗಗಳ ಪರಿಹಾರಕ್ಕೆ ಸಾಮರ್ಥ್ಯವುಳ್ಳ ಶರ್ಮರವರ ಸಿದ್ಧೌಷಧಗಳ ವಿಸ್ತೃತ ಕ್ಯಾಟಲಾಗಿಗೂ ವ್ಯವಹಾರ ಸಂಬಂಧನಾದಿಗಳಿಗೂ ಒಂದಾಣೆ ಸ್ಟ್ಯಾಂಪಿನೊಂದಿಗೆ ಬರೆದ ಕೇಳ್ಳಿರಿ!

ಸ್ಥಾನಿಕ ಮುಖ್ಯ ಏಜಂಟರು—

ಶ್ರೀ ರಾಧಾಕೃಷ್ಣ ವಿಲಾಸ, ರಥಬೀದಿ ಮಂಗಳೂರು ದ. ಕ.


## 1931ನೇ ಇಸವಿಯ ಖಾನೇಶುಮಾರಿ

೧೯೩೧ನೇ ಇಸವಿಯ ಖಾನೇಶುಮಾರಿಯ ಕುರಿತು ಪ್ರಧಾನ ವಿಷಯಗಳನ್ನು ಈ ಕೆಳಗೆ ಕೊಡಲಾಗಿದೆ

೧ ಸ್ವಾಮಿಸ್ ಕಮಿಶನಿನ ಸೂಚನೆಯಂತೆ ಗಂಜಾಮು ಜಿಲ್ಲೆಯ ಖಾನೇಶುಮಾರಿಯು ವಿಷಯದಲ್ಲಿ ಹೆಚ್ಚಿನ ಜಾಗರೂಕರಾಗಿರಬೇಕೆಂದು ಸರಕಾರವು ಸೂಚಿಸಿರುವದು. ಈ ಬಗ್ಗೆ ಮಿ। ಅರ್. ಸಿ. ಎಸ್ ಬೆಲ್ ಐ. ಸಿ. ಎಸ್ ಎಂಬೊಬ್ಬ ಸ್ಪೆಶಲ್ ಅಧಿಕಾರಿಯನ್ನು ಸಂಶಯಾಸ್ಪದವಾದ ಜಿಲ್ಲೆಯ ಹಳ್ಳಿಪೇಟೆಗಳಲ್ಲಿ ಜನಸಂಖ್ಯೆಯ ಗಣನೆಗಾಗಿಯೂ, ಕೇಂದ್ರದ ಕೆಲಸವನ್ನು ಪರಿಶೋಧಿಸುವುದಕ್ಕಾಗಿಯೂ ನಿಯಮಿಸಲಾಗಿದೆ ಖಾನೇಶುಮಾರಿ ಲೆಖ್ಖಪತ್ರಗಳ ಸುಪರಿಂಟೆಂಡೆಂಟರು ಸದರೀ ಆಫೀಸರರಿಗೆ ಯೋಗ್ಯ ಸೂಚನೆಗಳನ್ನಿತ್ತಿರುವರು ಮತ್ತು ಆಫೀಸರರ ತನ್ನ ಕೆಲಸದಲ್ಲಿ ಸದಾ ಮಗ್ನರಾಗಿರುವರು

೨ ಈ ಸರ್ತಿಯ ಖಾನೇಶುಮಾರಿ ಲೆಕ್ಕ ತಯಾರಿ ವೇಳೆಯಲ್ಲಿ ವಿದ್ಯಾವಂತರಲ್ಲಿ ಎಷ್ಟು ಮಂದಿ ನಿರುದ್ಯೋಗಿಗಳಾಗಿರುವರೆಂದು ಶೋಧ ತಕ್ಕದ್ದು ಈ ಶೋಧೆಯು ಸರ್ವಸಾಧಾರಣ ತಯಾರಿಗೊಳಿಸಲ್ಪಡುವ ಜನಸಂಖ್ಯೆಯ ಪಟ್ಟಿಯಲ್ಲಿ ಸೇರಿಸೋಣಾಗದೆ, ಪ್ರತ್ಯೇಕ 'ಫೋರ್ಮು'ಗಳ ಮೂಲಕ ಪ್ರಚಾರಗೊಳಿಸಲ್ಪಡುವದು ಮಾತ್ರವಲ್ಲದೆ, ಇಂತಹ ಫೋರ್ಮುಗಳಲ್ಲಿ ಸಮೂದಿಸಲ್ಪಟ್ಟ ವಿವರ ಪ್ರಕಾರ ಸಾಮಾನ್ಯ ಜನಸಂಖ್ಯೆ ತೆಗೆಯುವ ಸೌಕರ್ಯದು ಸದರಿ ಫೋರ್ಮುಗಳಲ್ಲಿ ನಮೂದಿಸಿದ ವಿವರವನ್ನು ತಸಿಬಿ ನಡೆಸಿ ಬರಾಯಿಸಲು ಅರ್ಹತೆಯುಳ್ಳವರಾಗಿರುವುದಿಲ್ಲ. ಯಾವನೊಬ್ಬನು ಇಂಗ್ಲಿಷ್ ಓದಿ ಉದ್ಯೋಗವನ್ನು ಹುಡುಕುತ್ತಿರುವನೋ ಅಂಥವನು ಅಪೇಕ್ಷೆ ಪಟ್ಟಲ್ಲಿ ಮೇಲೆ ಹೇಳಿದ ಫೋರ್ಮುಗಳು ಉಚಿತವಾಗಿ ಕೊಡಲ್ಪಡುವು ಅವುಗಳಲ್ಲಿ ಸೂಚಿಸಿದ ವಿಷಯಗಳನ್ನು ಭರ್ತಿಮಾಡಿದ ಫೋರ್ಮುಗಳು ಒಟ್ಟು ಕೂಡಿ, ದೇಶದ ನಿರುದ್ಯೋಗಿಗಳ ಸಂಖ್ಯೆಯನ್ನು ಪರಿಶೋಧಿಸುವುದಲ್ಲದೆ, ಅಂಥವರಿಗಾಗಿ ಯೋಗ್ಯ ಏರ್ಪಾಡುಗಳು ನೆರವೇರಲಿಕ್ಕಿರುವವು

೩ ಇನ್ನೊಂದು ವಿಷಯವೆಂದರೆ, ವಿದ್ಯಾವಂತರಾಗಿ ತಮ್ಮ ಹೆಸರು ಕೊಟ್ಟು ಉದ್ಯೋಗವನ್ನಪೇಕ್ಷಿಸುವವರು, ಶಿಸೇ ಸ್ಟ್ಯಾಂಡರ್ಡಿಗಿಂತ ಕೆಳತರಗತಿಯಲ್ಲಿ ಓದಿದವರಾಗಕೂಡದು. ಅವರ ನಿರ್ಧಾರಗಳ ಕುರಿತು ಯಾವ ರೀತಿಯಿಂದಲೂ ಪ್ರಶ್ನಿಸಲಾಗಲಿಕ್ಕಿಲ್ಲ. ವಿದ್ಯಾವಂತರಾಗಿ ಉದ್ಯೋಗವನ್ನು ಹಾರೈಸುವವರಿಗೆ ಮಾತ್ರವೇ ಈ ರೀತಿಯ ಸ್ಪೆಶಲ್ ತನ್ನಿಯು ನಡೆಯಿಸಲ್ಪಡುವದು

೪ ಜನಸಾಮಂದಿ ಶಿಶುತ್ವದಿಂದಲೇ ಕಲಿತನಲ್ಲಿ ನಮೂದಿಸಿದಂತೆ ಚಿಕ್ಕಂದಿನಿಂದಲೂ ಅಭ್ಯಾಸಮಾಡಿದ ಮಾತೃಭಾಷೆಯಲ್ಲದೆ, ಜನರು ತಿಳಿದಿರುವ ಇತರ ಭಾಷೆಗಳ ಗಣನೆಯೂ ಅತ್ಯಾವಶ್ಯಕವಾಗಿರುವದು ಈ ರೀತಿಯ ಭಾಷಾಭೇದ ಗಣನೆಯು ಮನುಷ್ಯನ ನಿಜಸ್ಥಿತಿಗಳನ್ನು ತಿಳಿಯಗೊಡುವುದರಲ್ಲಿ ಸಂದೇಹವಿಲ್ಲ ನಿದರ್ಶನಾರ್ಥವಾಗಿ ಒಬ್ಬ ಸಂಸ್ಕೃತ ಪಂಡಿತನ ರೂಢಿ ಮಾತುಗಳಿಂದ ಆತನು ಅರಿತಿರುವ ಭಾಷೆಯನ್ನು ತಿಳಿಕೊಳ್ಳಲು ಬಹಳ ಕಷ್ಟಸಾಧ್ಯವು.

ಈ ರೀತಿಯ ವರ್ತನವು ಸಂಸ್ಥಾನದಲ್ಲಿ ಎಷ್ಟು ಮಂದಿ ಜನರು ಒಂದಕ್ಕಿಂತ ಹೆಚ್ಚು ಭಾಷೆಗಳನ್ನಾಡುತ್ತಾರೆ,— ಎಂಬುದನ್ನು ಗೊತ್ತುಹಚ್ಚುವುದಕ್ಕೂ ಆ ಕುರಿತು ಸಂಸ್ಥಾನದ ಯಾವ ಭಾಗಗಳು ಯಾವ ಯಾವ ರೀತಿಯ ಭಾಷೆಗಳನ್ನಾಡುತ್ತಾರೆಂದು ತಿಳಿಕೊಳ್ಳಲಿಕ್ಕೂ ಬಹಳ ಅನುಕೂಲವಾಗುತ್ತದೆ.


## WANTED.

Agents who can turn out good business in the towns of Buntwal, Puttur & Karkal and other important centres.

Apply without delay to:—

**The Bombay Life office,**
Mangalore or Udipi.

N. B.—Ask for our Scheme-of-Prizes for 1930.

## Grand Clearing Sale!

ಜಗತ್ಪ್ರಸಿದ್ಧವಾದ ನಮ್ಮ "ಒಟ್ಟೊ ಫುಲಾರಾಮ" ಸುಗಂಧದ ಐದು ಬಾಟಲಿಗಳನ್ನು ಮೂರು ರೂಪಾಯಿಗಳಿಗೆ ಕೊಳ್ಳುವವರು ಈ ಕೆಳಗಿನವುಗಳನ್ನು ಧರ್ಮಾರ್ಥವಾಗಿ ಪಡೆಯುವರು —

1 ಕರವಸ್ತ್ರ, 1 ಫೌಂಟನ್‌ಪೆನು, 1 ಕ್ಲಿಪ್, 1 ಹರಿತವಾದ ಚೂರಿ, 1 ಸುಗಂಧ ಸಾಬೂನು, 1 ಅಂದವಾದ ಸಿಗರೇಟು ಕೇಸ್ಸು, 12 ಉತ್ತಮ ಮೊನೆಗಳು, 1 ಕೋಪಿಂಗ್ ಪೆನ್ಸಿಲು, 1 ಸೆಟ್ಟು ಗಿಲ್ಟಿನ ಗುಂಡಿಗಳು, 1 ಕನ್ನಡಿ, 1 ಬಾಚಣಿಗೆ, 1 ಕತ್ತರಿ, 1 ಕ್ಷೌರದ ಬ್ರಶ್ಶು, 1 ಹರಳಿನ ಉಂಗುರ. ಅಂಚೆವೆಚ್ಚ ಆಣೆ 0—8—0.

ಇಂಗ್ಲೀಷಿನಲ್ಲಿ ಬರೆಯಿರಿ.

**Indian Stores,**
*5 Beadon Street,*
CALCUTTA

ಯ

ಷಧಗಳು.

ಕೈಲ:—ಇದು ಪುನರ್ವಸು
ಕಂಡುಹಿಡಿಯಲ್ಪಟ್ಟದ್ದು.
ಕೈಲವು ತಿಕ್ಕಮುಕ್ಕಳಿಂದ
ಹಳ ಅನುಕೂಲ ಮತ್ತು
ದುಳು ಮತು ಸ್ನಾಯು
ವನ್ನೀಯುವುದು 6 ಔನ್ಸಿನ
4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ.—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ

ಕಸ್ತೂರಿಮಿಶ್ರಣ!

ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಜೀವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕರದ ಕಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಕುಟವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುದ್ದೀಪಿಸುವುದು

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಧರ್ಗಕೋಶದ ವೃಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು

ಕ್ರಯ ಬಾಟ್ಲಿ 1ಕ್ಕೆ 2-0-0 ಪೋಸ್ಟೇಜು ವಗೈರೆ ಬೇರೆ

ಹೆಚ್ಚಿನ ಮಾಹಿತಿಗೆ "ಆರೋಗ್ಯ ..." ಎಂಬ ಪುಸ್ತಕವನ್ನು ತರಿಸಿರಿ

ಎಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ ಕನ್ನಡ

---

ಹೊಸ ಕ್ಯಾಲಂಡರುಗಳು ಉಚಿತ

ಸುಂದರವಾದ ಕಾಶಿಯ ಪಟ್ಟೆ ಸೀರೆಗಳು

ಜರಿ ಅಂಚುಗಳುಳ್ಳ ಪ್ಲೈನ್ ಸೀರೆ ... ಮೊಳ ಉದ್ದ ... ಮೊಳ ಅಗಲ ರೂ ... ಆರಂಭಿಸಿ ರೂ ... ವರೆಗೆ ಬಟ್ಟೆಗಳ ... ಜರಿ ... ಪಟ್ಟೆ ... ಬನಾರಸ್ ಸೀರೆ ... ರುಮಾಲು, ಶಾಲು, ಜಡ್ಡಿ, ಕಸ್ತೂರಿ, ಶಿಲಾಜಿತ್, ರುದ್ರಾಕ್ಷಿ, ಹಿತ್ತಾಳೆಯ ಸಾಮಾನುಗಳು, ಪೂಜಾ ಸಾಮಾಗ್ರಿಗಳು ಇತ್ಯಾದಿ ಸಹಾ ಯೋಗ್ಯ ದರದಿಂದ ಕಳುಹಿಸಲ್ಪಡುವವು ಪ್ರೋತ್ಸಾಹಿಸುವವರಿಗೆ ಸರಿಯಾದ ಕಮಿಶನ್ ಸಹ ಕೊಡಲ್ಪಡುವದು. ಹೆಚ್ಚಿಗೆ ವಿಷಯ ಕ್ಯಾಟಲಾಗಿನಿಂದ ಅಥವಾ ಪತ್ರ ಮೂಲಕ

ವಿಳಾಸ —

ಕಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ್
ಮಣಿಕರ್ಣಿಕಾಘಾಟ್, ಕಾಶೀ, ಬನಾರಸ್ ಸಿಟಿ

---

**The Udipi Mutual Benefit Fund, UDIPI**

**ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ**

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯಬಹುದು.

ಎಂ. ಮುಖ್ಯಪ್ರಾಣಭಟ್ಟ. ಪ್ರೊಪ್ರೈಟರ.

---

# The Canara Bank Limited, Mangalore.

## ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

Established July 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

***BRANCHES*** **-Karkal, Kasargod, Cochin Udipi Gangolli, Coondapur, Bombay, Puttur, Callicut & Alleppey**

ಬ್ರಾಂ:-ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ, ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲೆಪಿ

| | |
|---|---|
| Authorised and fully paid up Capital Rs. 300,000 - 0 - 0 | ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕಟ್ಟ ಮೂಲಧನವು ರೂ 300,000 0 – 0 |
| Reserve and other sinking Funds Rs 431,732 - 9 - 7 | ಕ್ಷೇಮನಿಧಿ ಮತ್ತು ಇತರ ಫಂಡುಗಳು ರೂ. 431,732 - 9 - 7 |
| Amount invested on G P Notes Rs 817,097 - 2 - 0 | ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 817,097 - 2 - 0 |
| Rates of interest on fixed deposits at Head Office and Branch 6½% for 2 Years 6% ,, 1 Year | ಠಾಯಿಂ ಡಿಪಾಜಿಟುಗಳ ಮೇಲೆ ಕೊಡೋಣಾಗುವ ಬಡ್ಡಿ ದರ— ಎರಡು ವರುಷಗಳಿಗೆ ನೂರಕ್ಕೆ 6½% 1 ವರುಷಕ್ಕೆ ನೂರಕ್ಕೆ 6. |
| Season deposits of Rs 1000/- & above terminable by the end of June are received at 6½% p a. | ಜೂನ್ ಅಂತ್ಯದ ಒಳಗೆ ಮುಗಿಯುವ ರೂ 1000/-ದ ಮೇಲ್ಪಟ್ಟ ಸೀಸನ್ ಡಿಪೋಜಿಟುಗಳಿಗೆ ಬಡ್ಡಿ ದರ ನೂರಕ್ಕೆ 6½. |

Current Account Deposits received and interest allowed on daily balance of Rs 50 and above that on multiples of Rs 10/ @ 3% from Ist Janauary to 30th June and @ 2% from Ist July to 31st December No interest will be allowed unless the depositor earns not less than Rs 5/ during a period of 6 months ending either 30th June or 31st December in any year

Except by special arrangement no interest is allowed on sums exceeding Rs 10 000/ in the case of Head Office and Bombay & Cochin Branches and on sums exceeding Rs 3 000/ in the case of the remaining Branches

Short notice deposits requiring one week's notice of withdrawal given at any time after one month from the date of depo it are received and interest allowed at 4 per annum Interest on such deposits will cease on notice

*For further particulars please apply to*

Canara Bank Ltd, **K. Venkat Rao,**
*Mangalore 13—10—1930* *Secretary.*

---

# The Pangal Nayak Bank, Ltd.

| Branch Office Mangalore | Head Office Udipi, *Established 1920* | Agency Office Cochin |
|---|---|---|

| | |
|---|---|
| Authorised Capital Rs 2,00,000 | Paid up Capital Rs 1,75,000- |
| Issued Capital Rs 1 75,000- | Reserve and other Funds Rs 1,42,810- |

***Fixed Deposits received for***
***24 months at 6½%***
***12, 15, 18 or 21 months at 6%***
***6 or 9 months at 5½%***
***3 months at 5%***

***Interest being payable every 3 months.***

Current Deposit Accounts are opened free of charge and interest allowed on Daily balances

*Further information may be had on application to the* SECRETARY *at the* HEAD OFFICE *or to the* AGENT *at the* BRANCH

Office of the Bank
Udipi 6 - 10 - 1930

P. Laxman Nayak,
Secretary

---

ತಯಾರಾಗಿವೆ ಮಾರಾಟಕ್ಕೆ ಸಿದ್ಧವಿವೆ!! ತ್ವರೆಮಾಡಿರಿ!

1931ನೇ ಇಸವಿಯ

# ಪ್ರೋಕೆಟ್ ಡಾಯರಿಗಳು.

1931ನೇ ಇಸವಿಯ

| | | | |
|---|---|---|---|
| ಅಂದವಾದ ಕೆಲಿಕೊ ಬ್ಯಾಂಡಿನ ದೊಡ್ಡ ಸ್ಯಾಜಿನ ಡಾಯರಿ (ಇಂಗ್ಲೀಷು/ಮಲಯಾಳಂನೊಂದಿಗೆ) | 9 0 | ಕೆಲಿಕೊ ಬ್ಯಾಂಡಿನ ಮೀಡಿಯಮ್ ಸ್ಯಾಜಿನದ್ದು | 0 8 0 |
| ಕೆಲಿಕೊ ಬ್ಯಾಂಡು ದೊಡ್ಡದು ಮುಚ್ಚಳದ್ದು | 0 14 0 | ,, ,, ಮುಚ್ಚಳದ್ದು | 0 12 0 |
| ಕೆಲಿಕೊ ಬ್ಯಾಂಡು ದೊಡ್ಡದು (ಕನ್ನಡ ಮಲಯಾಳಂನೊಂದಿಗೆ) | 0 8 0 | ಮೀಡಿಯಮ್ ಸ್ಯಾಜ್ ಸ್ಟಿಫ್ ಬ್ಯಾಂಡ್ ಡಾಯರಿ | 0 6 0 |
| ,, ಮುಚ್ಚಳದ್ದು | 0 14 0 | ಸಣ್ಣ ಸ್ಯಾಜಿನ ಕೆಲಿಕೊ ಬ್ಯಾಂಡ್ ಡಾಯರಿ | 0 8 0 |
| | | ,, ,, ಮುಚ್ಚಳದ್ದು | 0 10 0 |
| | | ,, ಸ್ಟಿಫ್ ಬ್ಯಾಂಡ್ ಡಾಯರಿ | 0 6 0 |

ದೊಡ್ಡ ಸ್ಯಾಜಿನ ಡಾಯರಿಯಲ್ಲಿ ಟಪ್ಪಾಲು ಮತ್ತು ಕೋರ್ಟು ವ್ಯವಹಾರ, ಸ್ಟಾಂಪು ಆಕ್ಟು ಮುಂತಾದ ಕ್ರಮಗಳನ್ನು ಕನ್ನಡದಲ್ಲಿ ಕೊಟ್ಟಿರುತ್ತದೆ.

ರಖಂ ತೆಗೆದುಕೊಳ್ಳುವವರಿಗೂ, ವ್ಯಾಪಾರಿಗಳಿಗೂ ತುಂಬಾ ಕಮಿಶನು ಕೊಡಲಾಗುವದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಶಾರದಾ ಛಾಪಖಾನೆ,
ಕಾರಸ್ಟ್ರೀಟ್, ಮಂಗಳೂರು

# ಮಹಾತ್ಮಾಜಿಯವರ ಸತ್ಯಾಗ್ರಹ ಸಮಾಚಾರ.

ತಾರೀಖು ೨೦

## ಮುಂಬಾಯಿಯ

ಕಬ್ಬಿಣದ ವ್ಯಾಪಾರ ಸಮಿತಿಯವರು ಷೋಲಾಪುರದ ಕೊಲೆಪಾತಕರಿಗೆ ಮರಣದಂಡನೆಯನ್ನು ರದ್ದು ಪಡಿಸುವಂತೆ ಹುಕುಮಾಗಬೇಕೆಂದು ವ್ಯಾಸರಾಯ ಪ್ರಭುಗಳವರಿಗೆ ಮನವಿಗಳನ್ನು ಕಳುಹಿಸಿದುದರ ಉತ್ತರವು ದೊರೆತಿರುವುದು. ಉತ್ತರದಲ್ಲಿ ಸೂಚಿಸಿದಂತೆ ಸದರಿ ವರ್ತಕ ಸಮಿತಿಯ ಅಪೇಕ್ಷೆಗಳಿಗೆ ಯೋಗ್ಯ ಗಮನವೀಯಲಾಗುವದೆಂದು ತಿಳಿಯಬರುತ್ತದೆ. ಈ ರೀತಿಯಲ್ಲಿ ವ್ಯಾಸರಾಯರೊಡನೆ ಭರತಖಂಡದ ಅನೇಕ ಪ್ರಾಂತ್ಯಗಳು ಮನವಿಗಳನ್ನು ಮಾಡಿರುವವು.

ಮುಂಬಾಯಿ ನಗರದಲ್ಲಿ ಹೆಸರುಪಡೆದ ಕ್ರಾನಿಕಲ್ ಪತ್ರಿಕೆಯ ಕುರಿತು ಹೂಡಲ್ಪಟ್ಟ ಮೊಕದ್ದಮೆಯಲ್ಲಿ ದಕ್ಷಿಣ ಹಿಂದುಸ್ಥಾನದ ಜರ್ನಲಿಸ್ಟ್ ಎಸೋಸಿಯೇಶನಿನವರು, ವ್ಯಾಸರಾಯ ಪ್ರಭುಗಳೊಡನೆ ಕ್ರಿಮಿನಲ್ ಲಾ ಎಮೆಂಡ್‌ಮೆಂಟು ಆಕ್ಟಿನ ಹಕ್ಕು ಸ್ವಾತಂತ್ರವನ್ನು ವಿಮರ್ಶಿಸಿ, ಅಖಿಳ ಭಾರತ ಡೆಪ್ಯುಟೇಶನೊಂದನ್ನು ಕಳುಹಬೇಕೆಂದು ನಿರ್ಧರಿಸಿರುವರು.

ವಿದೇಶಿ ಬಟ್ಟೆಯನ್ನೊಯ್ಯುತ್ತಿದ್ದ ಲಾರಿಯು ಅಡಿ ಬಿದ್ದು ಪ್ರಾಣವನ್ನು ಕಳೆದುಕೊಂಡ ಬಾಬುಗನ್ [illegible] ಸ್ವಯಂಸೇವಕನ ಮರಣದ ವಿಷಯದಲ್ಲಿ, ಅಧಿಕಾರಿಗಳ ತನಿಖೆ ನಡೆಸುತ್ತಿರುವರು. ಸಾಕ್ಷಿ ರುಜುವಾತುಗಳು ಸರಿಯಾಗಿ ದೊರೆಯದುದರಿಂದ ಮೊಕದ್ದಮೆಯನ್ನು ಜನವರಿ [illegible]ನೇ ತಾರೀಖಿಗೆ ಮುಂದರಿಸಲಾಗಿರುವದೆಂದು ತಿಳಿಯಬರುತ್ತದೆ.

## ನವಾಢಿಲ್ಲಿಯಲ್ಲಿ

'ಬೋಲಾರಾಮ್ ಮಟ್ಟದಂಗಡಿ'ಯನ್ನು ಪಿಕೆಟ್ ಮಾಡಿದ ೬೦ ಮಂದಿ ನಾರೀ ಸ್ವಯಂಸೇವಕರಲ್ಲಿ [illegible] ಮಂದಿಗೆ ರೂಪಾಯಿ ೫೦೦ರ ವರೆಗೆ ಜುಲ್ಮಾನೆ ವಿಧಿಸಲಾಗಿರುವದು. ಜುಲ್ಮಾನೆ ತೆರಲು ತಪ್ಪಿದಲ್ಲಿ ಆರಾರು ತಿಂಗಳ ಸಾದಾ ಸಜಾ ಎಂತೆ! [illegible] ಮಂದಿಯನ್ನು [illegible]ರೆಂದು ಬಿಡುಗಡೆ ಹೊಂದಿಸಿ[illegible].

ಕೆಲಮಂದಿ ಸತ್ಯಾಗ್ರಹಿಗಳು [illegible] ಲಾಲಾ [illegible]ಯತಿ ಶೇಂದಿ ಅಂಗಡಿಯ ಯಜಮಾನನನ್ನು ಹಾಸ್ಯಗೊಳಿಸಬೇಕೆಂದು ಆತನ ಉತ್ತರ ಕ್ರಿಯೆಯನ್ನು ಜರುಗಿಸಬೇಕೆಂದು [illegible] ಸನ್ನಾಹಗಳು ಸಿದ್ಧವಿದ್ದುವು. ಆದರೆ ಪೋಲೀಸ್ [illegible] [illegible] [illegible] ಕಾರ್ಯಕ್ರಮಗಳನ್ನು ತಡೆಗಟ್ಟಿ [illegible] ಜನರನ್ನು ಚದರಿಸಲೆಳಸಿ [illegible] [illegible] ತನಕವೂ ಪೋಲೀಸರು [illegible] ಸತ್ಯಾಗ್ರಹ ವ್ಯಾಪ್ತಿ [illegible] ಖುದ್ದಾಗಿ ಅಂಗಡಿಯ [illegible] ಪೋಲೀಸ [illegible]ದೊಂದಿಗೆ ಪಹರೆ ನಡೆಸುತ್ತಿದ್ದ [illegible] [illegible] [illegible] ನಡೆದುದಾಗಲೀ ಜುಲುಮೆಗಳಾಗಲೀ ಆಗಲಿಲ್ಲವೆಂದು ತಿಳಿಯಬರುತ್ತದೆ.

## ಲಾಹೋರಿನಲ್ಲಿ

'ನೋನ್ ಕೋಪರೇಶನ್' ಕ್ರಿ [illegible] ಮತ್ತು 'ಮಹಾತ್ಮಾ ಗಾಂಧಿ' ಎಂಬ ಹೆಸರುಗಳುಳ್ಳ ಎತ್ತುಗಳ ಪ್ರದರ್ಶನವನ್ನು [illegible] ದರ್ಶಿಸುವರೆಂದು ತಿಳಿಯುತ್ತದೆ.

## ಡಿಲ್ಲಿಯಲ್ಲಿ

ಮಿ। ಸೇನಗುಪ್ತರ ಆರೋಗ್ಯವು ಇನ್ನೂ ನೆಟ್ಟಗಾಗಿರುವದಿಲ್ಲ. ಸುಮಾರು ಎರಡು ತಿಂಗಳುಗಳಿಂದ ಅವರ ಅನಾರೋಗ್ಯ ಸ್ಥಿತಿಗತಿಗಳು ಹೆಚ್ಚುತ್ತ ಬಂದಿರುವವು. ಅವರನ್ನು ನೋಡುವದಕ್ಕಾಗಿ ಅವರ ಮಗನಾದ ಶ್ರೀಮಾನ್ ಅನಿಲ್ ಸೇನಗುಪ್ತರು ಢಿಲ್ಲಿಗೆ ತೆರಳಿರುವರೆಂದು ವದಂತಿ.

## ಕಲ್ಕತ್ತೆಯಲ್ಲಿ

ದಿ ಲಿಬರ್ಟಿ' ಎಂಬ ವರ್ತಮಾನ ಪತ್ರಿಕೆಯ ಆಫೀಸನ್ನು ಪೋಲೀಸರು ಶೋಧನಡೆಸಿ ಬಂಗಾಳದ ಅಸಹಕಾರ ಚಳವಳದ ಅಧ್ಯಕ್ಷರಿಂದ ಪ್ರಚಾರ ಪಡಿಸಲ್ಪಟ್ಟ ಸ್ಟೇಟುಮೆಂಟಿನ ಹಲವು ಪ್ರತಿಗಳನ್ನೂ 'ಬುರಾಬಜಾರಿ'ನ ಪಿಕೆಟಿಂಗ್ ಕಾರ್ಯಕ್ರಮಗಳ ರಿಪೋರ್ಟಿನ ಕೆಲವು ಪ್ರತಿಗಳನ್ನೂ ಸ್ವಾಧೀನಪಡಿಸಿರುವರೆಂದು ತಿಳಿದುಬರುತ್ತದೆ. ದಸ್ತಗಿರಿಗಳೇನೂ ನಡೆಯಲಿಲ್ಲ.

## ಎಲ್ಲೋರಿನಲ್ಲಿ.

ಮಿ। ಕೆ. ಜನಾರ್ಧನರಾವ್ ಗುಪ್ತನೆಂಬೊಬ್ಬ [illegible] ತರುಣ ಸತ್ಯಾಗ್ರಹಿಯನ್ನು ತನಿಖೆ ನಡೆಸಿ 'ಬೋರ್ಸ್ಟಲ್' ಶಾಲೆಗೆ ಕಳುಹಬೇಕೆಂದು ಡಿಸ್ಟ್ರಿಕ್ಟ್ ಜಡ್ಜರ ವಿಧಿ. ಅದಕ್ಕೆ ಪ್ರತಿಯಾಗಿ ಸತ್ಯಾಗ್ರಹಿಯು ಹೇಳಿದ್ದೇನಂದರೆ—'ಬೋರ್ಸ್ಟಲ್ ಶಾಲೆಗೆ' ಕಳುಹುವುದಕ್ಕಿಂತ ನನ್ನನ್ನು ಜೈಲಿಗೇನೇ ಅಟ್ಟಿಬಿಡಿರಿ, ಎಂದು ಮಾತ್ರ. ಆತನ ಪ್ರಾಯವು ೨೧ ವರ್ಷಗಳನ್ನು ಮೀರಿರುವದರಿಂದ ಜೈಲಿಗೆ ಹೋಗಲು ಅರ್ಹನಾಗಿರುವನೆಂದೇ ಆತನ ವಾದವು. ಆತನು ಹಣವಂತ ವರ್ತಕನೊಬ್ಬನ ಮಗನು. ಮತ್ತು ಆತನನ್ನು ಎರಡು ವರ್ಷಗಳ ತನಕ ಬೋರ್ಸ್ಟಲ್ ಶಾಲೆಯಲ್ಲಿರಬೇಕೆಂದು ಜಡ್ಜರ ತೀರ್ಪು.

ಆತನ ತಂದೆತಾಯಿಗಳು ಮಗನ ಪರವಾಗಿ ತುಂಬ ಮರುಗಿದರು ಮತ್ತು ಅವನನ್ನು ತಪ್ಪುಗಾರನೆಂದು ಒಪ್ಪಿಸಿ, ಶಿಕ್ಷೆಯನ್ನು ರದ್ದು ಪಡಿಸಬೇಕೆಂದು ಜಾಮೀನು ಅರ್ಜಿಯನ್ನು ಕೋರ್ಟಿಗೆ ದಾಖಲು ಮಾಡಿದರು. ಪುನಃ ಮೊಕದ್ದಮೆಯು ತನಿಖೆಗೆ ತೆಗೆಯಲ್ಪಟ್ಟಿತು. ಈ ವೇಳೆಯಲ್ಲಿಯೂ ಕೂಡ, ಅಪರಾಧಿತನು ಜೈಲನ್ನೇ ಸೇರುವೆನೆಂದ ಸ್ಟೇಟಮೆಂಟು ಕೊಟ್ಟನಂತೆ! ಅಂತೂ ಮೊಕದ್ದಮೆಯ ತನಿಖೆಯು ಮುಂದರಿಸಲಾಗಿರುವದೆಂದು ತಿಳಿದುಬರುತ್ತದೆ.

ತಾರೀಖು ೨೧

## ಸೂರತ್ತಿನಲ್ಲಿ

ಪೋಲೀಸ್ ಡಿಪ್ಯುಟಿ ಸುಪರಿಂಟೆಂಡೆಂಟರು ಸ್ಥಳೀಕ ವರ್ತಮಾನ ಪತ್ರಿಕೆಗಳ ಸಂಪಾದಕರಿಗೂ, ಪ್ರಚಾರಕರಿಗೂ ಕಾಂಗ್ರೆಸ್ ಕಾರ್ಯಕಲಾಪಗಳ ಕುರಿತಾದ ಯಾವದೇ ಲೇಖನಗಳನ್ನು ಪ್ರಕಟಿಸಬಾರದೆಂದು ನೋಟೀಸ್ ಜಾರಿಮಾಡಿರುವರು. ಇದಕ್ಕೆ ಪ್ರತಿಕೂಲವಾಗಿ ಸರಕಾರದಿಂದ ಅನ್ಯಾಯಕೂಟಗಳೆಂದು ಪರಿಗಣಿಸಲ್ಪಟ್ಟ ಸತ್ಯಾಗ್ರಹ ಸಮಿತಿಗಳ ಕಾರ್ಯಕ್ರಮಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದವರು ಕ್ರಿಮಿನಲ್ ಲಾ ಎಮೆಂಡ್‌ಮೆಂಟು ಆಕ್ಟಿನ ೧೭(೧)ನೇ ಪ್ರಕರಣದ ಮೇರೆಗೆ ಅನ್ಯಾಯಕೃತ್ಯಕಾರರಾಗುವರೆಂದು ತಿಳಿದು ಬರುತ್ತದೆ.

## ಪೂನೆಯ

[illegible] ಸೆರೆಮನೆ ಬಂದಿಖಾನೆಯಲ್ಲಿ ಸುಮಾರು ೬೦೦ ಮಂದಿ ರಾಜಕೀಯ ಅಪರಾಧಿಗಳು ಅಡಿಗಮಾಡುವದರ ಸಲುವಾಗಿಯೂ, [illegible] ಸಲುವಾಗಿಯೂ ತುಂಬ [illegible] ಅಸಮಾಧಾನಪಟ್ಟವರಾಗಿ ಉಪವಾಸವನ್ನು ಕೈಕೊಂಡರು. ಜೈಲು ಸುಪರಿಂಟೆಂಡೆಂಟರು ಈ ಕುರಿತು ತಪ್ಪಿತಸ್ಥರೊಡನೆ ವಿಚಾರಣೆ ನಡೆಸಿದರು. ಪರಿಣಾಮವಾಗಿ ಸುಮಾರು ೫೬೦ ಮಂದಿ ಎಂದಿನಂತೆ ಊಟಮಾಡಿದರೆಂದು ವದಂತಿ. ಜೈಲು ಸುಪರಿಂಟೆಂಡೆಂಟರು ಇನ್ನುಳಿದ ಅಪರಾಧಿಗಳ [illegible] [illegible] ಕಳಿಸುವರಂತೆ!

## ಢಿಲ್ಲಿಯಲ್ಲಿ

'ಬೋಲಾರಾಮ್ ಎಂಡ್ ಸನ್ಸ್' [illegible] ಮಳಿಗೆಯನ್ನು ಪಹರೆಮಾಡಿದ [illegible] ಮಂದಿ ನಾರೀ ಸತ್ಯಾಗ್ರಹಿಗಳನ್ನು ದಸ್ತಗಿರಿ ಮಾಡಿರುವರು.

## ಬನಾರಿಸದಲ್ಲಿ

ವಿಶ್ವವಿದ್ಯಾಲಯಕ್ಕೆ ಸರಕಾರದಿಂದ ದೊರೆಯುತ್ತಿದ್ದ ವಾರ್ಷಿಕ ಗ್ರಾಂಟನ್ನು ವಜಾಪಡಿಸಿರುವರಷ್ಟೆ! ಆ ಕುರಿತು [illegible] ಗಯಾಪ್ರಸಾದ್ ಸಿಂಗ್ ಎಂಬವರು ತಿಳಿಸುವಂತೆ, ೧೫ ಲಕ್ಷ ರೂಪಾಯಿಗಳ ಗ್ರಾಂಟಿನ ಪ್ರತಿ ೩ ಲಕ್ಷವನ್ನು ಮೊದಲನೆ ಕಂತಿನಲ್ಲಿ ಸರಕಾರವು ಕೊಡುವುದೆಂದೂ, ಆ ಮೇಲೆ [illegible] ಆಫೀಸರರ ಮೂಲಕ ವಿಶ್ವವಿದ್ಯಾಲಯವು ಸತ್ಯಾಗ್ರಹದಲ್ಲಿ ಭಾಗವಹಿಸುವುದೆಂಬ ಶಂಕೆಯಿಂದ ತನಿಖೆ ನಡೆಸಿ, ಸರಿಯಾದ [illegible] ರುಜುವಾತುಗಳು ದೊರೆತ ಬಳಿಕ ಎರಡನೇ ಕಂತು ಮೊದಲುಗೊಂಡು ಗ್ರಾಂಟನ್ನು ವಜಾಪಡಿಸಲಾಯಿತೆಂದೂ ತಿಳಿಯುತ್ತದೆ. ಮಿ। ಗಯಾಪ್ರಸಾದರು ಸದರಿ ಸಿ. ಐ. ಡಿ. ಆಫೀಸರವರ ರಿಪೋರ್ಟನ್ನು ಶೋಧ ನಡೆಸಬೇಕೆಂದು ತುಂಬಾ ಸಾಧನೆಮಾಡುತ್ತಿರುವರಂತೆ!

ತಾರೀಖು ೨೨

## ಕೋಕನಾಡದಲ್ಲಿ

ದೊಡ್ಡದೊಂದು ಲಾಠಿಚಾರ್ಜು ನಡೆಯಿತು. ಅನೇಕ ಸತ್ಯಾಗ್ರಹಿಗಳು ಸೇರಿದ್ದರು. ಸ್ತ್ರೀ ಸ್ವಯಂಸೇವಕರೂ ಇದ್ದರು. ಕೆಲಮಂದಿಗೆ ಮಾತ್ರ ಜಖಂ ಆಗಿರುವುದೆಂದು ತಿಳಿದುಬರುತ್ತದೆ.

## ನವಾಢಿಲ್ಲಿಯಲ್ಲಿ.

ಸೆಂಟ್ರಲ್ ಜೈಲೊಳಿರುವವನೊಬ್ಬನಿಗೆ, ಕೆಂಪು ಎಲೆ[illegible] ಚೂರುಗಳೂ ಬೋಂಬು [illegible] ಮದ್ದೂ ದೊರೆತಿರುವದು. ಆಫೀಸ್ ಮೇಜಿನ ಮೇಲೆ [illegible] ರಿಂಟೆಂಡೆಂಟರು ಮೇಜಿನ [illegible] ಇದೇನಿರಬಹುದೆಂದು ಪತ್ತೆ [illegible]ದರು. ಗುಪ್ತಿಲ್ಲವೋ ಒಯಲಾ[illegible] ಸರು ವಿಚಾರ ಮಾಡುತ್ತಿರುವರು.

ಕಳೆದ ವಾರ ೩೪ ಮಂದಿ ನಾರೀ ಸತ್ಯಾಗ್ರಹಿಗಳಿಗೆ 'ಬಿ' ಕ್ಲಾಸ್ ಜೈಲುವಾಸವನ್ನು ಕೈಕೊಳ್ಳುವಂತೆ ನ್ಯಾಯಾಧೀಶರ ಅಪ್ಪಣೆಯಾಗಿದ್ದಿತು. ಅವರೆ ಕಾರಾಗೃಹವನ್ನು ಸೇರಿದ್ದ ೪೦ ಮಂದಿ ಸ್ತ್ರೀಸ್ವಯಂಸೇವಕರು, ತಮ್ಮ ಸಹೋದರಿಯರಂತಿದ್ದ ೩೪ ಮಂದಿಯನ್ನು 'ಸಿ' ಕ್ಲಾಸಿನಲ್ಲಿರಿಸಿದುದಕ್ಕಾಗಿ Hunger strike ಮಾಡಿರೆಂದು ತಿಳಿಯಲಾಗುತ್ತದೆ.

## ನವಾಢಿಲ್ಲಿಯಲ್ಲಿ

ಬಂದಿಖಾನೆಯ [illegible]ಲ್ಪಟ್ಟ ರಾಜಕೀಯ ಅಪರಾಧಿಗಳು ಮತ್ತು ಹಲ ಕೆಲವು ವಿಚಾರಣೆಗೆ ಒಳಪಟ್ಟ ತಪ್ಪಿತಸ್ಥರು ಜತೆಗೂಡಿ Hunger strike ಮಾಡಿದರೆಂದು ತಿಳಿದು ಬರುತ್ತದೆ. ಇವರ ಪೈಕಿ ಸೇನಗುಪ್ತ ಮದೂವರಿದ್ದರೂ ಸೇರಿರುವ[illegible] ೩೪ ಮಂದಿ ನಾರೀ ಸ್ವಯಂಸೇವಕರನ್ನು 'ಸಿ' ಕ್ಲಾಸ್ ಜೈಲಿನಲ್ಲಿರಿಸಿದ [illegible]ಕ್ಕಾಗಿ [illegible] ಹರತಾಳಗಳನ್ನಾಚರಿಸಿ[illegible]ತು. ಅಲ್ಲಲ್ಲಿ ಮೆರವಣಿಗೆಗಳೂ ಹೊರಡಿಸಲ್ಪಟ್ಟವು ಮತ್ತು [illegible] ರಾಜಕೀಯ ಅಪರಾಧಿಗಳು Hunger strike ಮಾಡಿರೆಂದೂ ತಿಳಿ[illegible]ತ್ತದೆ. [illegible] ಸನಿವಾರ [illegible] [illegible] ನಾರೀ ಸ್ವಯಂಸೇವಕರ ಮೇಲೆ ಹೊರಿಸಲ್ಪಟ್ಟ ಅಪರಾಧಗಳನ್ನು ಸಮರ್ಥಿಸಿ ಇವರೆಲ್ಲರಿಗೂ ದೊಡ್ಡ ಸಭೆಯನ್ನು ಜರುಗಿಸುವದೆಂದು ತಿಳಿಯಬರುತ್ತದೆ.

ಕಾಂಗ್ರೆಸ್ಸಿನವರಿಂದ ತಿಳಿಸಲ್ಪಟ್ಟಂತೆ [illegible] [illegible]ವನ್ನು ಹಿಡಕೊಂಡು ಅನೇಕ ಜನರು ದೊಡ್ಡದೊಂದು ಮೆರವಣಿಗೆಯ ರೂಪದಿಂದ [illegible] ಹಾದುಹೋಗಿ ಸೆಂಟ್ರಲ್ [illegible] ಸ್ಟೇಷನಿಗೆ [illegible] ತಲ್ಪಿದರು. [illegible] ಅನೇಕ ಪೋಲೀಸ್ ಕಾನ್‌ಸ್ಟೇಬಲರಿಂದ ತುಂಬಲ್ಪಟ್ಟ ಎರಡು ಲಾರಿಗಳು ಮೆರವಣಿಗೆಯ ಜನರನ್ನು ಮುಂದರಿದಂತೆ ಪ್ರತಿಬಂಧಿಸಿದವು. ಮಾತ್ರವಲ್ಲದೆ ಮೆರವಣಿಗೆಯಲ್ಲಿ ಭಾಗವಹಿಸುವರು [illegible] [illegible] ಧ್ವಜಗಳನ್ನು ಪೋಲೀಸರು ಸೆಳೆ[illegible]ಕೊಂಡು ಜನರನ್ನು ಚೆದರಿಸಲಾಯಿತು. ಆದರೆ ದಸ್ತಗಿರಿಗಳೇನೂ ನಡೆಯಲಿಲ್ಲ. [illegible] ದೆಸೆಯಿಂದ [illegible] [illegible] [illegible] ಮಾಡಲ್ಪಟ್ಟಿತ್ತು.

[illegible] ಪಿಕೆಟಿಂಗ್ ಕಾರ್ಯಕ್ರಮವು [illegible]ನೊಂದೂ ಆತಂಕಪಟ್ಟದೆ ಮುಂದುವರಿಯುತ್ತಿರುವ[illegible] ಮುಖ್ಯವಾಗಿ 'ಬೋಲಾರಾಮ್ ಎಂಡ್ ಸನ್ಸ್' [illegible] ಅಂಗಡಿಯ ಪರೊಡನೆ ಕೂಡಲ್ಪಟ್ಟ ಸತ್ಯಾಗ್ರಹ ಪಹರೆಯು, ಇನ್ನೂ ಶಾಂತವಾಗಿರುವುದಿಲ್ಲ. ತಾರೀಖು [illegible] ಜನೆ [illegible] ಕೆಲ ಮಂದಿ ಕಾಂಗ್ರೆಸ್ ಪಕ್ಷದವರು, [illegible] [illegible] ಅಂಗಡಿಯ ಯಜಮಾನನನ್ನು ಹಾಸ್ಯಕ್ಕೀಡುಮಾಡ[illegible] [illegible] ಆತನ ಮರಣ ಮೆರವಣಿಗೆಯೊಂದನ್ನು ಪಟ್ಟಣದ [illegible] ಬೀದಿಗಳಲ್ಲಿಯೂ ಹೊರಡಿಸಲಾಯಿತಂತೆ! ಈ ಮೆರವಣಿಗೆಯ ಮುಂದುಗಡೆಯಲ್ಲಿ ಕೆಲವು ನಾರೀ ಸತ್ಯಾಗ್ರಹಿಗಳು ನಿಂತಿದ್ದರಲ್ಲದೆ ಯುರೋಪಿಯ ಪೋಷಾಕವನ್ನು ತೊಡಿಸಿದ ಒಂದು ಗೊಂಬೆಯನ್ನು ಅಟ್ಟುತ್ತಿದ್ದರು. ಹೆಂಗ[illegible] [illegible] ಮರಣ ಹೊಂದಿರುವನೆಂದು ಸೂಚಿಸಲ್ಪಟ್ಟ ಅಂಗಡಿಯ ಯಜಮಾನನ [illegible] [illegible] ಸೂಚಕವಾದ ಗೀತವನ್ನು ಹಾಡುತ್ತಲೂ ಆತನಿಗೆ ಶಾಪವಿಡುತ್ತಲೂ ಮೆರವಣಿಗೆಯು ಮುಂದೆ ಸರಿಯುತ್ತಿದ್ದರು. ತಾ। ೨೨ರಲ್ಲಿ ಅಂಗಡಿ ಪಹರೆಯು ಇನ್ನೊಮ್ಮೆ ಆರಂಭಿಸಲಾಯಿತು. ಈ ಸಂದರ್ಭದಲ್ಲಿ ೯ ಮಂದಿ ಸ್ವಯಂ ಸೇವಕರನ್ನು ದಸ್ತಗಿರಿ ಮಾಡಲಾಯಿತು. ಕಾಂಗ್ರೆಸ್ ಮುಖಂಡರು ಮೇಲೆ ಹೇಳಲ್ಪಟ್ಟ ಬೋಲಾರಾಮ್ ಮತ್ತು ಸನ್ಸರ ಅಂಗಡಿಗೆ ಬಹಿಷ್ಕಾರ ಹಾಕಬೇಕೆಂದು ಕರಪತ್ರಗಳ ಮುಖೇನ ಪ್ರಚಾರಪಡಿಸಿದರಂತೆ!

## ಮುಂಬಾಯಿಯಲ್ಲಿ

ಪೋಲೀಸ್ ಅಧಿಕಾರಿಗಳು ಮುಂಬಾಯಿ ಕ್ರಾನಿಕಲ್ ಪತ್ರಿಕೆಯ ಸಂಪಾದಕರ ಮೇಲೆ, ಮುಂಬಾಯಿ ಪೋಲೀಸ್ ಆಕ್ಟು

[೧೩ನೇ ಪುಟಕ್ಕೆ ಮುಂದುವರಿಸಿದೆ]

## Pharmaceutical Works, Ltd., Bombay,14.

## ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ 'ಝಂಡೂ'ಯವರ

# ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು

ಇದು ಆಮಲಕ ಮತ್ತು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು. ಇದು ಅವಯವಗಳಿಗೆಲ್ಲಾ ಶಕ್ತಿ ಪುಷ್ಟಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದುರ್ಬಲತ್ವ, ಕೆಮ್ಮು, ಎದೆ ನೆಗಡಿ, ಸ್ವರಭಂಗ ವ್ಯಾಧ್ಯಾದಿ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಜ್ಞಾಪಕಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

ಕ್ರಯ 1ಪೌನು ಸೀಸೆ ರೂ. 2—8—0, ½ ಪೌ ರೂ. 1—5—0, ¼ ಪೌ. ರೂ 0—13—0

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಜ್ಯೆನಾ ಬಜಾರು ರಸ್ತೆ, ಮದ್ರಾಸು

ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ

ಮಂಗಳೂರು ಏಜಂಟರು — ದಿ ಆಲನ್ ಮಾರ್ಟ್

ಸಿರ್ಸಿ ಏಜಂಟರು — ಎಸ್. ಎಲ್ ಧಾಕಪ್ಪಾ ಎಂಡ್ ಬ್ರದರ್ಸ್

ಪುತ್ತೂರು ಏಜಂಟರು — ಯು. ಜನಾರ್ಧನರಾವ್, ಪುತ್ತೂರು, ದ. ಕನ್ನಡ

ಮಂಗಳೂರು ಏಜಂಟರು — ಕಿಷ್ಟಪ್ಪ ಶೆಟ್ಟಿ, ...ಸ್‌ಪೇಟೆ

☞ ವಿವರ ಕಟಲಾಗು ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು

---

TELEGRAMS ASPINWALCO'    TELEPHONE No. 15

THE Firestone Gum Dipping process strengthens the tire to meet the demands of hill climbing, quick stops, sudden turns and high speeds. The Firestone tread is scientifically designed to grip the road in emergencies. You can have this extra safety on your car. Drive in and use our service.

**Firestone**

Gum-Dipped TIRES

The Mark of Quality

DISTRIBUTORS

Aspinwall & Co Ltd

( [illegible] ) MANGALORE

STOCKISTS

UDIPI

*H Siddaya Hegde*

KASARGODE

*Rama Nayak*

KANHANGAD

*K S Russool*

COONDAPUR –

*G Gopal Mukunda Pai*

General Merchant

COONDAPUR (S Kanara)

BHATKAL

*Messers Kashimjee Shamshuddeen Saheb Motor Service*

Puttur

*K Venkatraya Pai*

Imperial Cycle Stores

---

**FOR YOUR CAR**

# WILLARD BATTERIES.

**SIMONIZ KLEENER**    **SIMONIZ POLISH**

*AGENTS —*

## Messrs. Aspinwall & Co, Ltd

MANGALORE

---

"ಬಿಟ್ಟಿ"    "ಪುಗಸಟ್ಟೆ"    "ಬಿಟ್ಟಿ"



**ಜೇಬಿನ ಲೀವರ್ ಗಡಿಯಾರವೂ ಕೈ ಗಡಿಯಾರವೂ ಬಿಟ್ಟಿ**

**೩ ತಿಂಗಳೊಳಗಾಗಿ ೩೦೦೦ ಗಡಿಯಾರಗಳನ್ನು ಬಿಟ್ಟಿಯಾಗಿ ಕೊಟ್ಟಿದ್ದೇವೆ**

ರೂ. ೩–೧೫–೦ ಬೆಲೆ ಬಾಳುವ ... [illegible] ... ಕೈ ಗಡಿಯಾರವು ಬಿಟ್ಟಿಯಾಗಿ ... [illegible] ... ತೋರಿಸುವುದಾಗಿಯೂ ಇದೆ. ... ೫ ವರ್ಷ ಗ್ಯಾರಂಟಿ ಕೊಡುತ್ತೇವೆ

ಪತ್ರವ್ಯವಹಾರಗಳು ಇಂಗ್ಲೀಷಿನಲ್ಲಿ ಬರೆಯಬೇಕು

**Imperial Watch Company.**

(S) Post No, 12, BOMBAY

---

## ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

**ಶಾರದಾ ಛಾಪಖಾನೆ,**

ರಥಬೀದಿ, ಮಂಗಳೂರು

---

## ಮುದಲ್ ತರವಾದ ಬೆಳ್ಳಿ ಉಡಿದಾರ ಹಗ್ಗ.

ESTD 1896.

ಅನೇಕ ವರುಷದಿಂದ ನಾವು ಬೆಳ್ಳಿ ಉಡಿದಾರಗಳನ್ನು ತಯಾರು ಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿ ಬರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ಉಡಿದಾರ ಹಗ್ಗಗಳು ಕೆಲಸ ನ್ಯಸಲ್ಲಿಯೂ, ಧಾರಣೆ ಸರಸದಲ್ಲಿಯೂ, ಸರಕಿನ ಸಾಚ್ಯತೆಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದುದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳನ್ನು ಕಳುಹಿಸುತ್ತೇವೆ. ಒಂದು ಸಲ ನಮ್ಮಲ್ಲಿಂದ ತರಿಸಿ ನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ಧಾರಣೆ ಪ್ರಕಾರ ಸರಕುಗಳಿಗೆ ಧಾರಣೆ ಹಾಕಿ ಕಳುಹಿಸುತ್ತೇವೆ

ಕೆ ಎಸ್ ನಾರಾಯಣಶೆಟ್ಟಿ ಅಂಡ್ ಸನ್ಸ್,

ಸರಾಫು ವ್ಯಾಪಾರ,

ಶಿವ್ವಪೇಟೆ ... [illegible]

---

ಎಸ್ವಾಚ್ ಉಚಿತ

... [illegible] ... ಉಚಿತವಾಗಿ ದೊರೆಯುತ್ತದೆ

[illegible]

ಕಿಂಗ್ ಜಾರ್ಜ್ ಕೊರೋನೇಶನ್ ಕಂಪೆನಿ

ಮುಂಬಾಯಿ

## ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ

**ಶಾರದಾ ಛಾಪಖಾನೆ.**

ರಥಬೀದಿ, ಮಂಗಳೂರು

---

ಒಮ್ಮೆ ಪರೀಕ್ಷಿಸಿರಿ!    ತೃಪ್ತಿ ಹೊಂದಿರಿ!

**ದಿ ಕ್ರೌನ್ ರಬ್ಬರ್ ಸ್ಟಾಂಪು ಕಂಪೆನಿ,**

ಹೆಡ್ ಆಫೀಸು ಬಲ್ಮಠ ರಸ್ತೆ, ಕಂಕನಾಡಿ ಪೋಸ್ಟು,

ಮಂಗಳೂರು, ದ. ಕನ್ನಡ

## ರಬ್ಬರು ಮೊಹರುಗಳು

ಇಲ್ಲಿ ಉತ್ತಮವಾದ ಎಯರ್ ಕುಶನ್ ರಬ್ಬರು ಮೊಹರುಗಳೂ, ಹಿತ್ತಾಳೆ ಇತ್ಯಾದಿ ಲೋಹಗಳಲ್ಲಿಯೂ, ಮಾರ್ಬಲ್ ನಲ್ಲಿಯೂ, ಕೆತ್ತನೆಯ ಕೆಲಸವನ್ನೂ ಬಹಳ ನಾಜೂಕಾಗಿ ಕ್ಲುಪ್ತ ಸಮಯದಲ್ಲಿ ಮಾಡಿಕೊಡುತ್ತದೆ

ಹೆಚ್ಚಿನ ಮಾಹಿತಿಯನ್ನು ಪತ್ರಮೂಲಕವಾಗಲೀ, ಆಫೀಸಿನಲ್ಲಿ ಸ್ವತಹ ಬಂದಾಗಲೀ ತಿಳಿದುಕೊಳ್ಳಿರಿ

ಎಮ್ ದೇವದಾಸ ಶಣೈ,

ಮೆನೇಜಿಂಗ ಪ್ರೊಪ್ರೈಟರ್

**ರೌಂಡು ಟೇಬಲ್ ಪರಿಷತ್ತು.**

ರೌಂಡು ಟೇಬಲ್ ಪರಿಷತ್ತಿನ ವಿಷಯದಲ್ಲಿ ಆಗಾಗ್ಗೆ ಹೊರ ಸೂಸುತ್ತಿರುವ ವರ್ತಮಾನಗಳು ನಮ್ಮನ್ನು ಆಶಾನಿರಾಶಾತರಂಗದಲ್ಲಿ ತೇಲಾಡಿಸುತ್ತಿರುವುದು ಶೋಚನೀಯ. ಈ ಪರಿಸ್ಥಿತಿಗೆ ಕಾರಣವಾವುದೆಂದರೆ ಅಸಂಬಂಧ ಮತ್ತು ಅಸಂಪೂರ್ಣವಾದ ವರ್ತಮಾನಗಳು. ಈ ಪರಿಷತ್ತಿನ ಯಶಸ್ಸಿಗೆ ಹಿಂದೂ ಮುಸಲ್ಮಾನ ಸಿಕ್ಕರ ಐಕ್ಯಮತ್ಯವೇ ಪ್ರಾಮುಖ್ಯವೆಂಬುದು ನಿರ್ವಿವಾದವು. ಹೀಗಿರುತ್ತಾ ರೌಂಡುಟೇಬಲ್ ಪರಿಷತ್ತಿನ ಪ್ರಥಮ ಅಧಿವೇಶನದಲ್ಲಿ ಬೇರೆ ಬೇರೆ ಪಂಗಡದ ಮುಖಂಡರು ಮಾಡಿದ ಗಂಭೀರ ಭಾಷಣಗಳಿಂದ ನಮಗೆ ಬಹು ಸಂತೋಷವಾಯಿತು. ಐಕ್ಯಮತ್ಯದ ವಿಷಯದಲ್ಲಿ ಸಂಶಯವೇ ಇಲ್ಲವು. ಪರಿಷತ್ತು ಬಹುಮಟ್ಟಿಗೆ ಫಲಕಾರಿಯಾಗಬಹುದೆಂದು ಹಿಗ್ಗಿಕೊಂಡೆವು. ಆದರೆ ಕ್ರಮೇಣ "ಡೊಮಿನಿಯನ್ ಸ್ಟೇಟಸ್" ಎಂಬ ಶಬ್ದವೇ ಪರಿಷತ್ತಿನ ಮಾತುಕಥೆಗಳಲ್ಲಿ ಬಹಿಷ್ಕರಿಸಲ್ಪಟ್ಟಿದ್ದನಯೋ ನಮ್ಮಲ್ಲಿ ಸ್ವಲ್ಪ ಸಂಶಯವು ಅಂಕುರಿಸಿತು. 'ಫೆಡರಲ್ ಗವರ್ನ್‌ಮೆಂಟ್'ನ ಪ್ರಸ್ತಾಪವು ಸಂಶಯವನ್ನು ಹೆಚ್ಚಿಸಿತು. ಮಂತ್ರಿವರ್ಯರಾದ ಮೆಕ್‌ಡೊನಲ್ಡ್ ಸಾಹೇಬರು ಇಂಥಾದ್ದೇ ರಾಜ್ಯಭಾರಕ್ರಮವು ನಿಮಗೆ ದಯಪಾಲಿಸುತ್ತೇವೆಂದು ಖಂಡಿತವಾಗಿಯೂ ಮನಃಪೂರ್ವಕವಾಗಿಯೂ ಹೇಳದೆ, ಸರಕಾರ ಯೋಜನೆ ವಿಷಯಕವಾದ ಚಿಲ್ಲರೆ ಸಂಗತಿಗಳ ಮಾಯಾಜಾಲದಲ್ಲಿ ತಲೆಯೊಡ್ಡಬೇಕೆಂದು ಪರಿಷತ್ತಿನ ಪ್ರತಿನಿಧಿಗಳನ್ನು ಕೇಳಿಕೊಳ್ಳಲು ನಮ್ಮ ಸಂಶಯಗಳು ಯಥಾರ್ಥವಾದುವುಗಳೆಂದು ಕಂಡುಬಂತು. ಕೊನೆಗೆ "ಎಲ್ಲಾ ಒಣ್ಣ ಮಸಿ ನುಂಗಿತು" ಎಂಬಂತೆ ಹಿಂದೂ ಮುಸಲ್ಮಾನ ಸಿಕ್ಕ ಪ್ರಮುಖರೊಳಗೆ ಇದುವರೆವಿಗೂ ನಿಜವಾದ ಐಕ್ಯಮತ್ಯವು ತಲದೋರಿರುವುದಿಲ್ಲವೆಂಬ ಶೋಚನೀಯ ವರ್ತಮಾನವು ಬಂದಿರುವುದರಿಂದ ಪರಿಷತ್ತಿನ ಬೆನ್ನೆಲುಬು ಮುರಿದಂತಾಯಿತೋ ಎಂದು ನಮಗನಿಸುತ್ತದೆ. ಪರಿಷತ್ತಿನ ಕಾರ್ಯವು ಯಥಾ ಕ್ರಮದಲ್ಲಿರದೆ ಎಲ್ಲವೂ ಹಿಂದುಮುಂದಾಗುತ್ತಿರುವುದೇನು? ಇಂಥಾದ್ದೇ ಸ್ವಭಾವದ ರಾಜ್ಯಭಾರಕ್ರಮವನ್ನು ಕೊಡಲು ನಾವು ಸಿದ್ಧರಿರುವೆವೆಂದು ಮಂತ್ರಿವರ್ಯರು ಏಕೆ ಇದುವರೆವಿಗೂ ಸೂಚಿಸಲಿಲ್ಲ? ರಾಜ್ಯಭಾರಕ್ರಮವನ್ನು ಇತ್ಯರ್ಥ ಮಾಡುವ ಮೊದಲೇ ಅದರ ಒಂದು ಅಂಗಾಂಗಗಳನ್ನು ಪರಿಯಾಲೋಚಿಸಿ ಕಲಕರಡು ಮಾಡುವುದರಲ್ಲಿ ಉದ್ದೇಶವೇನಿರಬಹುದು. ಸೆರೆಮನೆಯಲ್ಲಿ ಕೊಳೆಯುತ್ತಿರುವ ಸಾವಿರಾರು ರಾಜಕೀಯ ಕೈದಿಗಳ ವಿಷಯದಲ್ಲಿ ಯಾರೂ ಉಸುರೆತ್ತುವುದಿಲ್ಲವೇಕೆ? ಈ ಪ್ರಶ್ನೆಗಳಿಗೆ ದೊರಕುವ ಉತ್ತರವೇ ಪರಿಷತ್ತಿನ ಪರಿಣಾಮವನ್ನು ಸೂಚಿಸುವುದು. ಎಂತೂ ಇನ್ನು ತಿಂಗಳು ಎರಡರೊಳಗೆ ಪ್ರಿಯರೇ ಎಲ್ಲವೂ ವಿದಿತವಾಗುವುದು. ಅದರ ಬೆಳೆಯ ಸಿರಿಯನ್ನು ನೋಡಬೇಕೆಂದು ಪಟ್ಟ ದುಃಖವೇನು!

**ಪರ್ವತವು ಪ್ರಸವಿಸಿತು.**

ಮುಂಬಾಯಿ ಮತ್ತು ಮದರಾಸು ಸಂಸ್ಥಾನಗಳಲ್ಲಿ ಕೆಲವು ಕಾಲ ಗವರ್ನರ್ ಆಗಿದ್ದ ಲಾರ್ಡ್ ವಿಲ್ಲಿಂಗ್‌ಡನ್ ಸಾಹೇಬರು ಹಿಂದುಸ್ಥಾನದ ಭಾವೀ ವೈಸರಾಯರಾಗಿ ನೇಮಕಹೊಂದಿರುವರಂತೆ. ಈ ವೃತ್ತಾಂತವು ನಮಗೆ ಆಶ್ಚರ್ಯವನ್ನುಂಟುಮಾಡಿತು. ಹಿಂದುಸ್ಥಾನದ ಭಾವೀ ಸ್ಥಿತಿಯು ಮಹಾ ಸಂದಿಗ್ಧ ಅವಸ್ಥೆಯಲ್ಲಿರುವುದರಿಂದ ಇನ್ನು ಮುಂದಿನ ವೈಸರಾಯರು ಯಾರಾಗಬಹುದೆಂದು ಪತ್ರಿಕೆಗಳು ವಿಧವಿಧದಲ್ಲಿ ಪ್ರಶ್ನಿಸುತ್ತಿದ್ದವು. ಒಂದು ಸಮಯದಲ್ಲಿ ಯುವರಾಜರು ಅಥವಾ ಲಾರ್ಡ್ ಗೋಷಲ್ ಸಾಹೇಬರು ಇನ್ನೊಂದು ಸಮಯದಲ್ಲಿ ಲಾರ್ಡ್ ಮೇರ್‌ಡೋನಲ್ಡ್ ಅಥವಾ ಲಾರ್ಡ್ ಸೇಂಕಿಯವರು ವೈಸರಾಯರಾಗಿ ಬರಬಹುದೆಂದು ಊಹನೆಯಾಯಿತು. ಕಡೆಗೆ ಲಾರ್ಡ್ ವಿಲ್ಲಿಂಗ್‌ಡನ್‌ರವರು ನೇಮಕಹೊಂದಿದ ವರ್ತಮಾನವು ಹಿಂದೂಸ್ಥಾನದವರಿಗೆ ಬಹು ಬೇಸರವನ್ನುಂಟುಮಾಡಿರುವುದೆಂಬ ಹಾಗೆ ಕಾಣುತ್ತದೆ. ಲಾರ್ಡ್ ವಿಲ್ಲಿಂಗ್‌ಡನ್ ಸಾಹೇಬರಿಗೆ ಹಿಂದುಸ್ಥಾನದ ವಿಷಯದಲ್ಲಿ ಹೆಚ್ಚಿನ ಅನುಭವವಿರಬಹುದು. ಅವರಿಗೆ ಅನೇಕ ಸ್ನೇಹಿತರಿರಬಹುದು. ಆದರೆ ಅವರ ಅನುಭವವು 'ಔಟ್ ಆಫ್ ಡೇಟ್' ಎಂದು ಹೇಳಲಿಕ್ಕೆ ಬರುವದಿಲ್ಲ. ಇದೂ ಅಲ್ಲದೆ ಇವರು ೬೪ ವರುಷದ ವೃದ್ಧರು. ಹಿಂದುಸ್ಥಾನದ ರಾಜ್ಯಭಾರಕ್ರಮವು ಸಂಪೂರ್ಣವಾಗಿ ಪರಿವರ್ತನೆಯಾಗಲಿರುವ ಈ ಕಾಲಕ್ಕೆ ಬೇಕಾದಷ್ಟು ಚತುರತೆಯನ್ನೂ ಚಟುವಟಿಕೆಯನ್ನೂ ಇವರು ತೋರಿಸಲು ಸಮರ್ಥರೇ? ಅಲ್ಲದೆ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರೇ ಮೊದಲಾದ ರೌಂಡ್‌ಟೇಬಲ್ ಪರಿಷತ್ತಿನ ಸದಸ್ಯರೂ, ಅನೇಕ ಇಂಗ್ಲೀಷು ವರ್ತಮಾನ ಪತ್ರಿಕೆಗಳ ಸಂಪಾದಕರೂ ಈ ನೇಮಕವನ್ನು ಶ್ಲಾಘಿಸುತ್ತಿರುವುದು ನಮಗಂತೂ ಅಸಮಂಜಸವೆಂದು ಕಾಣುತ್ತದೆ. 'ಹೊಸ ವೈದ್ಯನಿಗಿಂತಲೂ ಹಳೆ ರೋಗಿಯೇ ವಾಸಿ' ಎಂಬಂತೆ, ಲಾರ್ಡ್ ವಿಲ್ಲಿಂಗ್‌ಡನ್ ಸಾಹೇಬರು ಮುಂಬಾಯಿ ಮತ್ತು ಮದರಾಸ್ ಗವರ್ನರ್ ಆಗಿರುತ್ತಾ ಮಾಡಿದ ಕಾರ್ಯಕಲಾಪಗಳಲ್ಲಿ ರಾಷ್ಟ್ರಮುಖಂಡರು ಅನೇಕಾನೇಕ ಕುಂದುಕೊರತೆಗಳನ್ನು ಕಂಡಿರುವರು. ಆದರೆ ಇವರು ಸ್ವತಂತ್ರದ ತವರುಮನೆಯಾಗಿರುವ ಕೆನಡಾ ದೇಶದಲ್ಲಿ ಇತ್ತೀಚಗೆ ಗವರ್ನರ್ ಜನರಲರಾಗಿ ಪಡೆದಿರಬಹುದಾದ ಅನುಭವದಿಂದ ತನ್ನ ಧೋರಣೆಯನ್ನು ಬದಲಾಯಿಸಿ ಸಮಗ್ರ ಹಿಂದುಸ್ಥಾನದ ಕೃತಜ್ಞತೆಯನ್ನು ಸಂಪಾದಿಸುವರೋ ನೋಡಲಿಕ್ಕಿದೆ.

**ಪಳ್ಳಿಗಳ ಇದಿರಲ್ಲಿ ಭಜನೆ.**

ಹಿಂದೂಮುಸಲ್ಮಾನರೊಳಗೆ ಅನಾದಿಕಾಲದಿಂದಲೂ ಕಲಹವನ್ನು ತಂದೊಡ್ಡುತ್ತಿರುವ ಸಮಸ್ಯೆಗಳಲ್ಲಿ ಇದೊಂದು. ಹಿಂದುಗಳು ಭಜನೆಮಾಡಿಕೊಂಡು ಪಳ್ಳಿಯ ಇದಿರಿನಲ್ಲಿ ಹೋದಮಾತ್ರದಿಂದ ಶಾಂತಿ ಭಂಗವಾಯಿತು. ಅಥವಾ ಪ್ರಾರ್ಥನೆಗೆ ಭಂಗವಾಯಿತೆಂದು ಬೆದರುವ ಒಂದೊಂದು ಹಟವಾದಿ ಪಂಗಡದ ಸಂಕುಚಿತ ಮನೋವೃತ್ತಿಯನ್ನು ಯಾರೂ ಸಮರ್ಥಿಸಲಿಕ್ಕಿಲ್ಲ. ಅಲ್ಲಾ ಹಾಬಾದಿನ ಹೈಕೋರ್ಟು ಜಡ್ಜರು ಈ ವಿಷಯದಲ್ಲಿ ಮೊನ್ನೆ ತಾನೇ ಸರಿಯಾದ ಅಭಿಪ್ರಾಯವನ್ನಿತ್ತಿರುವರು. ಸಾರ್ವಜನಿಕ ಹಾದಿಬೀದಿಗಳು ಎಲ್ಲರ ಪ್ರಯೋಜನಕ್ಕಾಗಿ ನಿರ್ಮಿಸಲ್ಪಟ್ಟವೆ ಆದುದರಿಂದ ಯಾವನೂ ತನ್ನ ರಾಜಮಾರ್ಗದಲ್ಲಿ ನ್ಯಾಯವಾದ ಭಜನೆಯನ್ನೋ ಮೆರವಣಿಗೆಯನ್ನೋ ಶಾಂತಿಪರ ರೀತಿಯಲ್ಲಿ ನಡಿಸುತ್ತಿರುವಲ್ಲಿ ಆತನನ್ನು ಆತಂಕಪಡಿಸುವುದು ನ್ಯಾಯವಿರುದ್ಧ. ಆ ರೀತಿ ಇತ್ತಂಡದವರೊಳಗೆ ಆವೇಶಭರದಿಂದ ಜಗಳವು ಬಾರದಂತೆ ಪೋಲೀಸಿನವರ ಮಾಡತಕ್ಕ ಏರ್ಪಾಡುಗಳನ್ನು ಶಿರಸಾವಹಿಸಬೇಕಾಗುತ್ತದಾದರೂ ಪ್ರತಿಯೊಬ್ಬ ವ್ಯಕ್ತಿಗೆ ರಾಜಮಾರ್ಗದಲ್ಲಿ ಯೋಗ್ಯವಾದ ನಿಯಮದಲ್ಲಿ ವರ್ತಿಸಲು ಆತಂಕವಿಲ್ಲವೆಂಬುದೇ ಮಾನ್ಯ ಹೈಕೋರ್ಟು ಜಡ್ಜರ ಅಭಿಪ್ರಾಯ ಸಾರಾಂಶವು. ಆದುದರಿಂದ ನಮ್ಮ ಮುಸಲ್ಮಾನ ಬಂಧುಗಳು, ಹಿಂದೂಮುಸಲ್ಮಾನರ ಕಲಹವೆಂಬುದೆ ಒಂದು ಗೃಹದೊಳಗಿರತಕ್ಕ ಅಣ್ಣತಮ್ಮಂದಿರೊಳಗಿನ ಅಲ್ಪ ಕಲಹವು ಸಮರಕ್ಕಿಂತಲೂ ಸಂಧಾನವೇ ಲೇಸು, ಕಲಹಕ್ಕಿಂತಲೂ ಪ್ರೀತಿಯೇ ಲೇಸೆಂಬುದನ್ನು ಚನ್ನಾಗಿ ಮನಗಂಡು ಹಿಂದು ಬಂಧುಗಳೊಡನೆ ಸಹಕರಿಸಿ ಹಿಂದೂಸ್ಥಾನದ ಮೋಕ್ಷಸಾಧನೆಯಲ್ಲಿ ಭಾಗಿಗಳಾಗುವುದು ವಿಹಿತವಲ್ಲವೇ?

**ಬೋರ್ಸ್ಟಲ್ ಆಕ್ಟಿನ ಹಾವಳಿ.**

ಬೋರ್ಸ್ಟಲ್ ಆಕ್ಟನ್ನು ಕೆಲವು ಮೆಜಿಸ್ಟ್ರೇಟರು ಕೇವಲ ಸ್ವೇಚ್ಛೆಯಿಂದ ಕೆಲವು ತರುಣ ಯುವತಿಯರ ವಿಷಯದಲ್ಲಿ ಅನ್ಯಾಯದ ರೀತಿಯಲ್ಲಿ ಜಾರಿ ಮಾಡಿದರು. ವಿಷಯದಲ್ಲಿ ಅನೇಕ ಟೀಕೆಗಳನ್ನು ನಾವು ಓದಿರುವೆವು. ಈ ವಿಷಯದಲ್ಲಿ ಮದ್ರಾಸಿನ 'ಅಡ್‌ವೊಕೇಟ್—ಜನರಲ'ರವರು ಕೂಡಾ ಬಹು ತೀವ್ರವಾದ ಟೀಕೆಯನ್ನು ಮಾಡಿರುವುದು ಸ್ತುತ್ಯ. ಮದ್ರಾಸು ಸರಕಾರವು ಕೂಡಾ ಕೆಲವು ಮೆಜಿಸ್ಟ್ರೇಟರು ಈ ಕಾನೂನು ವರ್ತನೆಯ ಪರಿಣಾಮವನ್ನು ಮನಗಂಡ ಹಾಗೆ ಕಾಣುತ್ತದೆ. ಎಲ್ಲಾ ಮೆಜಿಸ್ಟ್ರೇಟರು ತಂತಮ್ಮ ಜಿಲ್ಲೆಗಳಲ್ಲಿ ಈ ಆಕ್ಟಿನ ಸಂಬಂಧವಾದ ಮೊಕದ್ದಮೆಗಳ ವಿಚಾರಣೆಗಳನ್ನು ಪರಿಶೀಲಿಸಿ ರಿಪೋರ್ಟು ಮಾಡಬೇಕೆಂದು ಸರಕಾರವು ಹುಕುಂ ಇತ್ತಂತೆ ತೋರುತ್ತದೆ. ಅಲ್ಲದೆ ಈ ಆಕ್ಟಿನ ಪ್ರಕಾರ ಸಜೆಗೆ ಒಳಗಾಗಿ ಸಾಧಾರಣ ಜೈಲಿನಲ್ಲಿ ಇತರ ಕೈದಿ ಕೂಡನೆ ಇರುವ ಸತ್ಯಾಗ್ರಹಿಗಳನ್ನು ಪ್ರತ್ಯೇಕಿಸುವ ಏರ್ಪಾಡುಗಳು ತ್ವರೆಯಿಂದ ಆಗುತ್ತಿವೆಯಂತೆ. ಸರಕಾರವು ಮೊದಲೇ ಈ ವಿಷಯದಲ್ಲಿ ತಕ್ಕ ವಿಚಾರಮಾಡದೆ ಸತ್ಯಾಗ್ರಹಿ ವಿಷಯದಲ್ಲಿ ಮೆಜಿಸ್ಟ್ರೇಟರು ಹೇಳಿದ್ದೇ ಕಾನೂನು ಮಾಡಿದ್ದೇ ನ್ಯಾಯವೆಂದು ಬೆನ್ನು ತಟ್ಟಿದ್ದೇ ಈ ಅನರ್ಥಕ್ಕೆ ಕಾರಣವಾಯಿತು. ಆದರೆ ಈಗಲಾದರೋ ಈ ದೋಷಗಳನ್ನು ತಿಳಿದು ಅಹಂಭಾವವನ್ನು ತೊರೆದು ತಕ್ಕ ಏರ್ಪಾಡುಗಳನ್ನು ಮಾಡುತ್ತಿರುವ ಸರಕಾರದ ವರ್ತನೆಯು ಅಭಿವಂದನೀಯವೇ ಸರಿ.

**ಜೈಲಿನ ಪರಿಸ್ಥಿತಿ.**

"ಪಾಪಿ ಹೋದಲ್ಲಿ ಮೊಣಕಾಲುದ್ದ ನೀರು" ಎಂಬಂತೆ ಸತ್ಯಾಗ್ರಹಿಗಳ ಗ್ರಹಚಾರವು ಜೈಲಿನಲ್ಲಿಯೂ ಬಿಟ್ಟಿಲ್ಲ. ಅಲ್ಲಿಯೂ A, B ಮತ್ತು C ಕ್ಲಾಸುಗಳೆಂಬ ನವೀನವಾದ ವರ್ಣಭೇದ ಶಾಸನ. ಅವುಗಳ ಸ್ವೇಚ್ಛಾಪರ ಪ್ರಯೋಗ. ಕೈದಿಗಳಿಗೆ ಆಹಾರ ಮತ್ತು ಇತರ ಸೌಕರ್ಯಾದಿಗಳ ಅಭಾವ ಸಂಕೋಲೆ,

## ನೋಟ್ಸ
## NOTE

ಗತಿಸಿಹೋದ ಮುದ್ರಣ ಶಾಸನ (ಪ್ರೆಸ್ ಆಕ್ಟ್) ವ್ಯಾಕರಾಯರು ಪುನಹ ಜಾರಿಗೆ ತಂದುಬಿಟ್ಟರು. ಈ ಸಲ ಜಾರಿಗೆ ತಂದ ಪದ್ಧತಿಯೇ ಹೊಸಕ್ರಮ ಅನುಸರಿಸಿಯದೆ. ಸತ್ಯಾಗ್ರಹ ಚಳವಳಗಿಂತ ಪತ್ರಿಕೆಗಳ ಚಳವಳಿ, ಸರಕಾರಕ್ಕೆ ಬಾಧಿಸುತ್ತಿರುವುದು. ಸತ್ಯಾಗ್ರಹ ಚಳವಳಿ ನಾಶವಾಗುತ್ತಾ ಇದೆ ಎಂಬ ಮಾತುಗಳು ಹೊರಡುತ್ತಾ ಇರುವಾಗ್ಯೆ ಪತ್ರಿಕೆಗಳ ಬಾಯಿಗೆ ಬೀಗ ಹಾಕುವುದು ಅವಶ್ಯ ಕಂಡುಬಂದದ್ದು ಬಹು ಆಶ್ಚರ್ಯ.

• • • •

ಸಂಗತಿ ಇನ್ನೊಂದು ಇರಬಹುದು. ಸರಕಾರವು ಪತ್ರಿಕೆಯವರನ್ನ ನಂಬುವುದಿಲ್ಲ. ಪತ್ರಿಕೆಗಳ, ಹೆಚ್ಚಿನ ಫಲಕಟಿಯನ್ನು ಎಬ್ಬಿಸುತ್ತವೆಂಬ ನೆವದಿಂದ, ಆಕ್ಟು ಜಾರಿಗೆ ತಂದಿರಬಹುದು. ಆಕ್ಟುಗಳು ಹೊರಟ ಹಾಗೆ ಪತ್ರಿಕೆಗಳು ಹೆಚ್ಚು ಹೊರಡುತ್ತವೆಂಬುದು ಸರಕಾರಕ್ಕೆ ಹೊಳೆಯಲಿಲ್ಲವಾಗಿರಬಹುದು. ನಡೆದ ವರ್ತಮಾನಗಳು ಸರಿಯಾಗಿ ಹೊರಬಾರದ ಹಾಗೆ ಇದೊಂದು ಔಷಧಿ ಪತ್ರಿಕೆಗಳಿಗೆ—

• • • •

ಒಂದು ಸಲ ಜಾರಿಗೆ ತರಲ್ಪಟ್ಟ ಆಕ್ಟು ಗತಿಸಿಹೋದರೂ ಎರಡನೆ ಸಲ ಕೂಡಲೆ ಜಾರಿಗೆ ತರಲು ಸಾಧ್ಯವಾಗದಿದ್ದರೂ ಈಗ ಎಂದೆ ಬಿಟ್ಟಿತು. ಮುಂದಕ್ಕೆ ಪತ್ರಿಕೆಗಳು ಒಲಿಬೀಳುವುದೇ ತಡ.

• • • •

ಇತ್ತಲಾಗೆ ವಿ. ಜೆ. ಪಟೇಲರನ್ನು ಕೊಯಮುತ್ತೂರು ಜೈಲಿನಲ್ಲಿರಿಸಿರುವರು. ಇವರ ಮೂಲವ್ಯಾಧಿಯನ್ನು ಪರೀಕ್ಷೆಮಾಡಲು ಮದ್ರಾಸಿನಿಂದ ಹೊಸದೊಂದು ಶಸ್ತ್ರ ಬಂದಿತಂತೆ. ಶಸ್ತ್ರ ಬಂದ ಮೇಲೆ ಪರೀಕ್ಷೆ ಬಾಕಿಯಿಡುವದು ಕೇವಲ ತಪ್ಪು. ತಪ್ಪನ್ನು ತಪ್ಪಿಸಲು ಪಟೇಲರನ್ನು ಜೈಲು ಆಸ್ಪತ್ರೆಗೆ ಒಯ್ಯಲಾಯಿತು.

• • • •

ಪರೀಕ್ಷೆ ಮಾಡುವುದು ದಿನ ಮುಂದರಿಸಿಡಬೇಕಾಗಿ ಪಟೇಲರು ಅಪೇಕ್ಷೆ ಪಟ್ಟಿದ್ದರು. ಅದು ಅದೇ ದಿನ ನಡೆಯಬೇಕೆಂದು ಡಾಕ್ಟರರು ಪಂಚಾಂಗ ನೋಡಿದ್ದರಂತೆ. ಯಾಕೆ?

• • • •

ಪಟೇಲರು ಒಪರೇಶನ್ ಮೇಜಿನ ಮೇಲೆ ಮಲಗಿದ ಕೂಡಲೆ ಮೇಜು ಮುರಿದುಬೀಳುವ ದಿನ ಅದೇಯಾಗಿದೆ. ಅಂತು ಪರೀಕ್ಷೆ ಮಾಡುವುದೆಂತಾಯಿತು. ಪರೀಕ್ಷೆ ಮಾಡಲು ಪಟೇಲರನ್ನು ಮೇಜಿನ ಮೇಲೆ ಮಲಗಿಸಿಯಾಯಿತು. ಮೇಜು ಅಕಸ್ಮಾತ್ ಮುರಿಯಿತು. ಪಟೇಲರು ಅಕಸ್ಮಾತ ಕೆಳಬಿದ್ದಾಯಿತು. ನಂತರ ಒಂದು (accident) ಪರಮೋಗಯಿಂದ ಮೇಜು ಮುರಿದುಹೋಯಿತೆಂಬದಾಯಿತು.

• • • •

ನಮ್ಮ ಹಿಂದೂಸ್ಥಾನಕ್ಕೆ ವೃದ್ಧಾಪ್ಯರೇ ಹೊಸ ವ್ಯಾಸರಾಯರಾಗಿ ಬರುತ್ತಾರಂತೆ. ಇವರಾರೆಂದರೆ ಮುಂಬಾಯಿಯಲ್ಲಿ ಗವರ್ನರರಾಗಿದ್ದು, ನಂತರ ಮದ್ರಾಸಿನವರಾಗಿದ್ದುಹೋದವರು. ಈಗ ಪುನಹ ವ್ಯಾ—ಸ—ರಾಯರು ಹಿಂದೂಸ್ಥಾನಕ್ಕೆ—ಮದ್ರಾಸಿನ ಸಿ. ಪಿ. ರಾಮಸ್ವಾಮಿ ಅಯ್ಯರರು ಕೊಂಡಾಟಗಳು ವಿಲಾಯತಿಯಲ್ಲಿಯೇ ಆಗಿಹೋದವು. ಇನ್ನು ಇವರು ಬರುವುದೆ ತಡ.

• • • •

ಲಂಡನಿನಲ್ಲಿ ಹಿಂದೂಮುಸಲ್ಮಾನ ಚರ್ಚೆ ಇನ್ನೂ ಮುಗಿದಿಲ್ಲ. ರಾತ್ರಿಹಗಲು ಚರ್ಚೆಗಳು ನಡಿಯುತ್ತಾ ಇವೆ. ಮೊದಲು ವಯಾಯತಿಯಲ್ಲಿ ಮಾತಾಡಿದ ಮುಖ್ಯ ಮಂತ್ರಿವರ್ಯರು ಈಗ ನಿಮ್ಮದನ್ನು ನೀವೇ ನೋಡಿಕೊಳ್ಳಿ, ನೀವು ಒಂದೇ ದೇಶದವರು, ಎಂಬ ಮಾತು ನುಡಿದಾಯಿತು.

---

ಪರಿಣಾಂತ ನಿಶಸ್, ಲಾಠಿ ಪ್ರಯೋಗ, ಬಂದುಕಿನ ಪೆಟ್ಟು, ನಿಂದ್ಯಾಸ್ಪದವಾದ ಮಾತು ಮೊದಲಾದ ಪರಿಭವ. ಈ ದೆಸೆಯಿಂದ ಅನೇಕಾನೇಕ ಕೈದಿಗಳ ಉಪವಾಸ ವ್ರತ. ಕೆಲವರ ಮರಣ. ಮುಖಂಡರ ಅನಾರೋಗ್ಯ. ಬಿದ್ದವನನ್ನು ಹೊಡೆಯುವುದು ಯಾವುದೇ ದೃಷ್ಟಿಯಿಂದ ನೋಡಿದರೂ ನೀತಿಯಲ್ಲ. ಅದೇ ಪ್ರಕಾರ ಜೈಲುಗಳೆಂಬ ಬಂಧನದಲ್ಲಿರಿಸಿದವರ ಮೇಲೂ ಬಲಾತ್ಕಾರ ಮತ್ತು ನಿರ್ದಯೆಯೆಂದರೆ ಅದು ಬಹು ಶೋಚನೀಯ. ಬಂಧನದಲ್ಲಿರುವ ಕೈದಿಗಳ ಆರೋಗ್ಯವು ಅಧಿಕಾರಿಗಳ ಮೇಲೆ ಹೊಂದಿರುತ್ತದೆ. ಆದುದರಿಂದ ಪ್ರಾಣಿಗಳ ಮೇಲೂ ದಯೆಯನ್ನು ತೋರಿಸಬೇಕೆಂದು ಪ್ರೋತ್ಸಾಹಿಸುವ ಸರಕಾರವು ಈಗ ಜೈಲಿನಲ್ಲಿರುವ ರಾಜಕೀಯ ಕೈದಿಗಳ ಸಂಕಷ್ಟಗಳ ವಿಷಯದಲ್ಲಿ ಧಾರಾಳವಾಗಿ ತನಿಖೆನಡಿಸಿ ಅವುಗಳನ್ನು ಪರಿಹರಿಸುವಷ್ಟರ ಸಹಾನುಭೂತಿಯನ್ನು ಪ್ರದರ್ಶಿಸುವುದೆಂದು ನಂಬಬಹುದೇ?

## ನೋಟೀಸು

**ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.**

ಸ್ಮಾಲ್ ವ್ಯಾಜ್ಯದ ನಂಬ್ರ 253/1930

ವಾದಿ—ಪುತ್ತೂರು ರಾಘವೇಂದ್ರ ಕ್ಯಾನುಭಾಗ

ಪ್ರತಿವಾದಿ—ಕೆ. ನಾರಾಯಣ ಭಂಡಾರಿ

ಕೊಡ್ಲಮೊಗ್ರು ಗ್ರಾಮದಲ್ಲಿರುವ ಕೃಷ್ಣ ಮೋಟರ ಸರ್ವಿಸಿನ ಮಾಜಿ ಪ್ರೊಪ್ರೈಟರ ಸದ್ರಿ ಪ್ರತಿವಾದಿ ಕೆ. ನಾರಾಯಣ ಭಂಡಾರಿಯವರಿಗೆ—

ವಾದಿಯು ನಿಮ್ಮ ಮೇಲೆ ರೂ 61—14—6 ಬರ ಮಾಡುವರೆ ದಾಖಲು ಮಾಡಿದ ಮೇಲಣ ವ್ಯಾಜ್ಯವು ತಾರೀಕು 5—1—1931ಕ್ಕೆ ತನಿಖೆಗೆ ಇಟ್ಟಿರುತ್ತದೆ ಸದ್ರಿ ದಿವಸ ನೀವು ನಿಮ್ಮ ಉದಾಹರಣೆಗಳನ್ನು ದಾಖಲು ಮಾಡುವರೆ ತಪ್ಪಿದ್ದಲ್ಲಿ ನಿಮ್ಮ ಗೈರಹಾಜರಿಯಲ್ಲಿ ಸದ್ರಿ ವ್ಯಾಜ್ಯವು ತೀರ್ಮಾನವಾಗುವದು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗಿರುವುದೆ

ಪುತ್ತೂರು, ೨೦—೧೨—೩೦ | H Ganapathi Rao, Vakil for Plaintiff.

---

## ನೋಟೀಸು

**ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.**

O S No 798/1930

ಭೀಮಭಟ್ಟ—ವಾದಿ

ಮತ್ತು

ಪೂಕಳ ವೆಂಕಟ್ರಮ ಭಟ್ಟ ಸಹಾ—ಪ್ರತಿವಾದಿರು

ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ೨೦—೧—೧೯೩೧ಕ್ಕೆ ತನ್ನಿಗೆ ಇಟ್ಟಿರುತ್ತದೆ ಆ ದಿವಸ ೧ ೧೦ ೧೫ ಮತ್ತು ೧೬ನೇ ಪ್ರತಿವಾದಿರ ಹಾಜರಾಗಿ ಉದಹರಿಸುವರೆ ತಪ್ಪಿದ್ದಲ್ಲಿ ಸದರಿ ಪ್ರತಿವಾದಿರ ಶಿವಾಯಿ ಸದರಿ ವ್ಯಾಜ್ಯ ತೀರ್ಮಾನಿಸಲಾಗುವದೆಂಬ ಸಂಗತಿ ಈ ಮೂಲಕ ತಿಳಿಸಲಾಗುತ್ತದೆ

ಕಾಸರಗೋಡು, ತಾ. 22—12—30 | K Sunder Rama Shetty, ವಾದಿಯ ಕಡೆ ವಕೀಲ

---

## ನೋಟೀಸು

**ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ**

ಕ್ರಮ ನಂಬ್ರ 826/1930.

ವಾದಿ—ಲಿಂಗಪ್ಪಾಚಾರಿ, ಕೂಸಪ್ಪಾಚಾರಿ ಮಗ, ಪುತ್ತೂರು ತಾಲೂಕು ಬಲ್ನ ಗ್ರಾಮದ ಪುತ್ತಿಲ

ಎದ್ರಿ,

ಪ್ರತಿವಾದಿ—ಲಿಂಗಪ್ಪಾಚಾರಿ—ವಾಲ್ಪಜೆ ಈಶ್ವರಾಚಾರಿ ಮಗ, ಪುತ್ತೂರು ತಾಲೂಕು ಕದಿಲ ಗ್ರಾಮ

ಸದರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವ ದೇನಂದರೆ—ಪ್ರತಿವಾದಿಯು ತಾ 5—10—1927ರಲ್ಲಿ ಕಬ್ಬುಗೌಡಗೆ ರೂಪಾಯಿ 81—0—0ಕ್ಕೆ ಬರಕೊಟ್ಟ ಡಿ ಪ್ರೋನೋಟಿನ ಮೆಲ್ಲೀಟು ಪಡೆದ ವಾದಿಯು ಸದರಿ ಐವೇಜು ವ, ಬಡ್ಡಿ ಕೂಡಾ ರೂಪಾಯಿ 111—6—0ನ್ನು ಬರಮಾಡಿಕೊಳ್ಳುವರೆ ಮಾಡಿದ ಮೇಲ್ಕಂಡ ವ್ಯಾಜ್ಯವು ತನಿಖೆ ಬಗ್ಗೆ ಸದರಿ ಕೋರ್ಟು ಮುಂದೆ ತಾರೀಕು 5—1—1931ಕ್ಕೆ ಇಟ್ಟಿರುತ್ತದೆ. ಆ ದಿವಸ ಹಗಲು 10 ಘಂಟೆಗೆ ಸದರಿ ಕೋರ್ಟು ಮುಂದೆ ಪ್ರತಿವಾದಿಯು ಹಾಜರಾಗಿ ಉದಹರಿಸಿಕೊಳ್ಳಬಹುದು ತಪ್ಪಿದ್ದಲ್ಲಿ ಏಕಪಕ್ಷವಾಗಿ ತೀರ್ಮಾನವಾದೀತೆಂತ ಈ ಮೂಲಕ ತಿಳಿಸಲಾಗುತ್ತದೆ.

ಪುತ್ತೂರು, ತಾ. 23—12—30. | **B. Achyuta Baliga**, Pleader for Plff

---


**The Cochin Soap Works,** IRENJALAKUDA

**ದಿ ಕೊಚ್ಚಿನ್ ಸೋಪ್ ವರ್ಕ್ಸ್.** ಇರಿಂಜಾಲಕುಡ

ಕೊಚ್ಚಿ ಮತ್ತು ಮದರಾಸು ಪಟ್ಟಣಗಳಲ್ಲಿ 1928—'29—'30ನೇ ವರ್ಷಗಳಲ್ಲಿ ನಡೆದ 'ಎಕ್ಸಿಬಿಶನ್'ಗಳಲ್ಲಿ ಬೆಳ್ಳಿ ಭಂಗಾರದ ಪದಕಗಳಿಂದಲೂ ಅನೇಕ ಯೋಗ್ಯತಾ ಪತ್ರಗಳಿಂದಲೂ ಬಹುಮಾನಿಸಲ್ಪಟ್ಟ

ಬೇಬಿ ಬೋರೆಕ್ಸ್ ಸೋಪ್, ಲಿಟ್ಲ್ ಫ್ಲವರ್ ರೋಸ್ ಸೆಂಟೆಡ್ ಸೋಪ್, ಜೋನ್ಸನ್ಸ್ ಬಾರ್ ಸೋಪ್, ಕೋಲ್ ಟಾರ್ ಸೋಪ್ ಮುಂತಾದ ಪ್ರಸಿದ್ಧವಾದ ಸಾಬೂನುಗಳನ್ನು ತಯಾರ ಮಾಡುವ ಸಂಸ್ಥೆಯಾಗಿರುವುದು

**ಬೇಬಿ ಬೋರೆಕ್ಸ್ ಸೋಪ್**—ಹಿಂದೂಸ್ಥಾನದ ಉತ್ತಮ ಉತ್ಪತ್ತಿ, ಬಟ್ಟೆ ಒಗೆಯುವದಕ್ಕೂ ಮೈ ತೊಳೆಯುವದಕ್ಕೂ ಉಪಯೋಗಿಸಬಹುದು. ಪ್ರಾಣಿಗಳ ಕೊಬ್ಬು ಅಥವಾ ಅಪಾಯಕರವಾದ ಮಿಶ್ರಣಗಳಿಂದ ವಿರಹಿತವಾಗಿರುವುದು. ಅಲ್ಲದೆ ಎಲ್ಲಾ ಸೋಪುಗಳು ಬಿಸ್ತ್ರೀಯದಲ್ಲಿ ತಯಾರಾದ ಸಾಬೂನುಗಳನ್ನು ... ಒಂದು ಪೌಂಡಿನ ಕ್ರಯ 6 ಆಣೆ ಮಾತ್ರ. ... ಬರುವದು,

**ಲಿಟ್ಲ್ ಫ್ಲವರ್ ರೋಸ್ ಸೆಂಟೆಡ್ ಸೋಪ್**—ಇವುಗಳು ... ಉತ್ಕೃಷ್ಟವಾಗಿರುವುವು ... ಗುಲಾಬಿ ... ಸುಗಂಧ ... ತುಂಡು ... ಕ್ರಯ ... ಆಣೆ ಮಾತ್ರ

**ಜೋನ್ಸನ್ಸ್ ಬಾರ್ ಸೋಪ್**—(... ಬಾರ್) ಬಟ್ಟೆಗಳು ... ಉಪಯೋಗಿಸಬಹುದು, ... ಬಟ್ಟೆಗಳಿಗೆ ... ಯಾವ ತರದ ಹಾನಿಯೂ ಉಂಟುಮಾಡುವುದಿಲ್ಲ ... ಬಲವಂತವನ್ನಾಗಿ ಮಾಡುತ್ತದೆ

**ಕೋಲ್‌ಟಾರ್ ಸೋಪ್**—... ಚರ್ಮ ರೋಗಗಳ ... ಉಪಯೋಗಿಸಬಹುದು ... ರೋಗಗಳ ನಿವಾರಕ

ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸೋಲ್ ಏಜಂಟರು—

ಮೆಸರ್ಸ್ ಬೋಳಂತೂರು ಸರ್ವೋತ್ತಮ ಪ್ರಭು, ಮಂಗಳೂರು.

ಕೆ. ಜ ಲಾಜರ್, ಮೆನೇಜರ್ ಮತ್ತು ಎಕ್ಸ್‌ಪರ್ಟ್.

ಬಂಗಾರದ ಪದಕ ಹಾಗೂ ಯೋಗ್ಯತಾ ಪತ್ರಗಳಿಂದ ಬಹುಮಾನ ಹೊಂದಲ್ಪಟ್ಟವರು

ಏಜಂಟರು ಬೇಕಾಗಿರುವರು



"If every Wife knew what every Widow knows every Husband would be Insured

PLACE YOUR LIFE ASSURANCE WITH
**THE SOUTH INDIAN**
Securing for your Clients
1. Low rates of Premium
2. Liberal Policy Conditions
AND FOR YOURSELF
An Agency with attractive Terms of Commission and Salary in
**The South Indian General Assurance Co, Ltd.**
Any where in CANARA DISTRICTS & HYDERABAD STATE
For terms of Agency please apply to —
H R K IYENGAR
Chief Agent
The S I G A Co Ltd,
Sanyasigudda MANGALORE
Managing Agents
K C PANDALAI & CO
7 8 Mclean Street G T MADRAS

**ಜೀವವಿಮೆ ಮಾಡುವವರು.**
ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್ನಲ್ಲಿ ವಿಮೆಮಾಡಿರಿ
ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!
ಪ್ರೀಮಿಯಂ ದರಗಳು ಕಡಿಮೆ!
ಕರಾರುಗಳು ತೀರಾ ಸುಲಭ!!
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ
**ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಭಳವೂ ದೊರಕುವುದು**
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)
ಚೀಫ್ ಏಜಂಟರು—
ಎಚ್ ಆರ್. ಕೆ ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.
ದಿ ಎಸ್ ಐ. ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು
ಮೇನೇಜಿಂಗ್ ಏಜಂಟರು —
ಕೆ ಸಿ ಪಾಂಡಲೆ ಎಂಡ್ ಕೋ.
7 8 ಮೆಕ್‌ಲೀನ್ ಸ್ಟ್ರೀಟ್ ಜಿ ಟಿ ಮದ್ರಾಸು



"ಗ್ರೇಂಡ್ ಕ್ಲಿಯರೆನ್ಸ ಸೇಲ್"!

ಬರೇ ಮೂರು ರೂಪಾಯಿಗಳ ವ್ಯಾಪಾರದಿಂದ 324 ಅಮೂಲ್ಯವಾದ ಪಾರಿತೋಷಕಗಳು! ನಮ್ಮ ಸುಗಂಧ ಪೂರಿತವಾದ "ಒಟ್ಟೋ" ಮೋತಿಯಾ ತೈಲದ ಆರು ಬಾಟ್ಲಿಗಳನ್ನು ಒಮ್ಮೆಗೇನೇ ಕೊಂಡುಕೊಳ್ಳುವವರಿಗೆ ಈ ಕೆಳಗೆ ನಮೂದಿಸಿರುವ ೩೨೪ ಅಮೂಲ್ಯ ಬಹುಮಾನಗಳು ಉಚಿತವಾಗಿ ಕೊಡಲಾಗುವವು!



ಬಂಗಾರದ ಗಿಲಿಟಿನ ಕೈ ಗಡಿಯಾರ ೧ ... ಬಂಗಾರದ ಗಿಲಿಟಿನ ಉಂಗುರ ೧ ... ಫೌಂಟನ್ ಪೆನ್ ... ಬಂಗಾರ ಗಿಲಿಟಿನ ... (ನಿಮ್ಮ ... ) ಉಚಿತಗಳೊಂದಿಗೆ

ಮೂಲ್ಯ ರೂ ೩—೦—೦ ... ಹಾಸಲು ೦—೧೦—೦,

ಪತ್ರವ್ಯವಹಾರವು ಇಂಗ್ಲಿಷಿನಲ್ಲಿಯೇ ನಾಗಲಿರುವುದು.

ಇಂಡಿಯನ್ ಸ್ಟೋರ್ಸ ಕೋ,
47, ಬೆನಿಯಾಟೋಲಾ ಸ್ಟ್ರೀಟ್, ಪಿ. ಓ, ಹಟ್ಖೋಲಾ, ಕಲ್ಕತ್ತೆ
**INDIAN STORES CO.** 47, Beniatola Street, Po, Hatkhola CALCUTTA.

## ಅನುಕ್ರಮಣಿಕೆ.


ಅಗ್ರಲೇಖ,
- ಮರಣ ದಂಡನೆ . . . ೮
- ಸ್ಫುಟವಿಚಾರಗಳು . . . ೬
- ನೋಟಗಳು . . . ೧

ವರ್ತಮಾನ ಸಂಗ್ರಹಗಳು
- ವಿದೇಶ ವರ್ತಮಾನ . . . ೮
- ಒಳದೇಶ ವರ್ತಮಾನ. . . . ೮ ೯
- ದಕ್ಷಿಣ ಕನ್ನಡ—ಮಂಗಳೂರು, ಉಡುಪಿ, ಹರಂಗಿಪೇಟೆ, ಸುಬ್ರಹ್ಮಣ್ಯ, ಕೊಕ್ಕಡ, ಸಾಸ್ತಾನ, ಬಾರಕೂರು, ಕೋಟ ಮೂಡಬಿದ್ರಿ, ಕೊಕೂರು ಜೋಗಟ್ಟೆ, ಗುರುಪುರ . . . ೯
- ವಿವಿಧ ಸಮಾಚಾರಗಳು . . . ೧೧
- ೧೯೩೦ನೇ ಇಸವಿಯ ಬಾನೇಕುಮಾರಿ . . . ೨
- ಹಿಂದೂಸ್ಥಾನದ ಪ್ರಾಚೀನ ಇತಿಹಾಸ . . . ೧೫
- ಅಲ್ವಾರ್ ಮಹಾರಾಜರೂ ಚಕ್ರಗೋಷ್ಠಿಯೂ . . . ೧
- ಮಹಾತ್ಮಾಜಿಯವರ ಸತ್ಯಾಗ್ರಹ ಸಮಾಚಾರ . . . ೯-೧೬



# ಸ್ವದೇಶಾಭಿಮಾನಿ.

ತಾರೀಕು ೨೬ನೇ ಶುಕ್ರವಾರ ದಶಂಬರ ೧೯೩೦.


## ಮರಣ ದಂಡನೆ

ಲೇಖನ ೨

ವೈಯಕ್ತಿಕ ದ್ವೇಷಗಳು ವ್ಯಕ್ತಿಯನ್ನು ಎಷ್ಟೇ ನಿರ್ಘೃಣವಾದ ಕೃತ್ಯಗಳಿಗೆ ಪ್ರೇರಿಸಿದರೂ, ವ್ಯಕ್ತಿಯು ವ್ಯಕ್ತಿಯನ್ನು ಮನ್ನಿಸಬೇಕೆಂಬುದೇ ಈಗಿನ ಸಾಮಾಜಿಕ ಅಸ್ತಿತ್ವದ ಮೂಲ ಆಧಾರವಾಗಿರುತ್ತದೆ. ಹಿಂಸಾತುರನಾಗುವುದಾದರೆ ಮನುಷ್ಯನಿಗಿಂತ ಸಿಂಹ, ಕರಡಿಗಳಾದರೂ ಹೆಚ್ಚು ಹಿಂಸಾತುರರಾಗಲಾರವು. ಆದುದರಿಂದಲೇ ಹಿಂಸೆಯೆಂಬುದು ಮಾನವ ಸಮಾಜದಲ್ಲಿ ಬಹಿಷ್ಕರಿಸಲ್ಪಟ್ಟಿದೆ. ಆದುದರಿಂದಲೇ ಸರಕಾರಗಳು ಎಲ್ಲಾ ತರದ ಹಿಂಸೆಗಳನ್ನು ತಡೆಯಲಿಕ್ಕೆ ಕಾನೂನನ್ನು ರಚಿಸಿದ್ದಾರೆ. ಒಬ್ಬನು ಇನ್ನೊಬ್ಬನಿಗೆ ಅನ್ಯಾಯಮಾಡಿದರೆ, ಅನ್ಯಾಯ ಹೊಂದಿದವನು ಅನ್ಯಾಯ ಮಾಡಿದವನನ್ನು ಶಿಕ್ಷಿಸಬಲ್ಲನಾದರೂ ಸರಕಾರವು ಅವನನ್ನು ಶಿಕ್ಷಿಸಲು ಬಿಡುವುದಿಲ್ಲ. ಹಾಗೆ ಬಿಟ್ಟದ್ದಾದರೆ ಮಾನವನ ಹೃದಯದ ಅಡಿಯಲ್ಲಿ ಅಡಗಿರುವ ಆ ಭಯಂಕರ ಹಿಂಸಾತುರತೆಯು ಮೇಲೇಳುವುದು. ಮೃಗಗಳಲ್ಲಿ ಹಿಂಸಾತುರತೆಯಿದ್ದರೆ, ಆ ಮೃಗಜಾತಿಯು ಇತರ ಜಾತಿಯನ್ನು ಮಾತ್ರ ತಿನ್ನುತ್ತದೆ. ಆದರೆ ಮನುಷ್ಯಜಾತಿಯ ಹಿಂಸಾತುರತೆಯು ಸಡಿಲ ಬಿದ್ದರೆ, ಸ್ವಂತ ಜಾತಿಯೇ ನಾಶಹೊಂದುವುದು.

ಸ್ವಂತ ನಿರ್ಮೂಲನ ಆ ಹಿಂಸಾತುರತೆಯನ್ನು ತಡೆದಿಡಲಿಕ್ಕೋಸ್ಕರ ಮನುಷ್ಯರು ಸಮಾಜವನ್ನು ರಚಿಸಿದರು. ಸಮಾಜಗಳು ಸರಕಾರವನ್ನು ರಚಿಸಿದುವು. ಸಮಾಜಗಳಲ್ಲಿ ಜ್ಞಾನವಿಕಾಸವಾದಂತೆ ಸರಕಾರದ ಉದ್ದೇಶಗಳೂ ವಿಶಾಲವಾದುವು. ಈಗ ಸರಕಾರವೆಂದರೆ ವ್ಯಕ್ತಿಯ ಹಿಂಸೆಯನ್ನು ಮಾತ್ರ ತಡೆಯುವಂತಹ ಸಂಸ್ಥೆಯಲ್ಲ. ಸಮಾಜಗಳ ಮೂಲಕ ವ್ಯಕ್ತಿಯ ನೈತಿಕ, ಆರ್ಥಿಕ ಮೊದಲಾದ ಎಲ್ಲಾ ತರದ ಉನ್ನತಿಗಳ ಸಾಧನೆಯನ್ನು ಸರಕಾರವು ವಹಿಸಿಕೊಂಡಿರುತ್ತದೆ. ಆದುದರಿಂದಲೇ ನ್ಯಾಯವಿತರಣೆಯು ಅನ್ಯಾಯಗಾರನ ಶಿಕ್ಷೆಯೆಂಬ ರೂಪವನ್ನು ತೆಗೆದುಹಾಕಿ, ಅನ್ಯಾಯಗಾರನ ಸಂಸ್ಕೃತಿಯೆಂಬ ರೂಪವನ್ನು ಹೊಂದಿದೆ.

ಶಿಕ್ಷೆ ಎಂಬ ಶಬ್ದದಲ್ಲಿ ಹಿಂಸೆಯ ಛಾಯೆಯು ಇದೆ. ಅದರಲ್ಲಿ ಪ್ರತಿಕ್ರಿಯೆಯ ಕ್ರೂರತ್ವವೂ ಕಾಣುತ್ತಿದೆ. ಅದರಲ್ಲಿಯೂ ಒಬ್ಬ ಮನುಷ್ಯನು ತನ್ನ ಜಾತಿಯವನಿಗೆ ಶಿಕ್ಷೆ ಕೊಡಲು ಅವನೆಷ್ಟರವನಾಗಬೇಕು? ಎಂಬ ತತ್ವದ ಪ್ರಶ್ನೆಯು ಒದಗುತ್ತದೆ. ಶಿಕ್ಷೆಯು ಹಿಂಸೆ ಮತ್ತು ಪ್ರತೀಕಾರವನ್ನು ಮಾತ್ರ ಒಳಗೊಂಡಿಲ್ಲ. ಅದರಲ್ಲಿ ಅಹಂಕಾರದ ಧ್ವನಿಯೂ ಉಂಟಾಗುತ್ತದೆ. ಒಬ್ಬ ಮಾನವನು ಇನ್ನೊಬ್ಬನನ್ನು 'ಶಿಕ್ಷಿ'ಸುವ ಜವಾಬ್ದಾರಿಯು ಬಹಳ ದೊಡ್ಡದು. ಅದನ್ನು ಯಾರೊಬ್ಬ ವ್ಯಕ್ತಿಯೂ ವಹಿಸಿಕೊಳ್ಳಲಾರನು. ಸರಕಾರದಂತಹ ಸಂಸ್ಥೆಯಾದರೂ ಅದನ್ನು ವಹಿಸಿಕೊಳ್ಳುವುದು ಸಾಧ್ಯವಲ್ಲದ ಮಾತು. ಆದುದರಿಂದ ಇತ್ತೀಚೆಗೆ ಶಿಕ್ಷೆಯ ಪ್ರಾಧಾನ್ಯವು ಕಡಿಮೆಯಾಗುತ್ತಾ ಬರುತ್ತದೆ. ಜೈಲುಗಳೆಂದ 'ಶಿಕ್ಷೆ'ಯ ಸ್ಥಾನವಾಗಿರಬಾರದು. ಅವು ಮಾನವ ಸಂಸ್ಕರಣೆಯ ಕೇಂದ್ರವಾಗಿರಬೇಕೆಂಬ ನೂತನ ಭಾವನೆಯು ಎಲ್ಲೆಲ್ಲಿಯೂ ಈಗ ಪ್ರಚಾರ ಹೊಂದುತ್ತದೆ.

ಸಾಮಾನ್ಯ ಶಿಕ್ಷೆಯು ಸದ್ಯಕ್ಕೇನೇ ಈ ರೀತಿಯಲ್ಲಿ ವಿಚಾರಕ್ರಾಂತಿಯು ಇರುವಾಗ ಮರಣದಂಡನೆಯೂ ಈಗಿನ ನಾಗರಿಕ ದಿನಗಳಲ್ಲಿ ವ್ಯವಹಾರದಲ್ಲಿರಬೇಕೆಂಬುವುದು ಆಶ್ಚರ್ಯಕರವಾಗಿದೆ. ಮರಣದಂಡನೆಯು, ಸಂಸ್ಕಾರವೆಂತೂ ಅಲ್ಲ, ಅದು ಶಿಕ್ಷೆಯೆನ್ನಲೂ ಆಗುವುದಿಲ್ಲ. ನಿರ್ಮೂಲನವು ಶಿಕ್ಷೆಯಾಗುವುದಿಲ್ಲ, ಅದು ಕ್ರೂರ ಪ್ರತೀಕಾರ, ಆದರಿಂದ ಕೊಲೆಪಾತಕರ ಸಂಖ್ಯೆ ಕಡಿಮೆಯಾಗುವುದಿಲ್ಲ.

ಕೋರ್ಟುಗಳಲ್ಲಿ ಸಿಕ್ಕತಕ್ಕದ್ದು ಸಾಕ್ಷ್ಯ ಮೂಲಕ ನ್ಯಾಯ. ನ್ಯಾಯಕರ್ತನು, ಅಥವಾ ಶಿಕ್ಷೆ ಕೊಡತಕ್ಕವನು ಕಣ್ಣಿನಿಂದ ನೋಡಿದ್ದೇನೂ ಇರುವುದಿಲ್ಲ. ಸಾಕ್ಷಿಗಳ ಹೇಳಿಕೆಗಳನ್ನು ತೂಗಿ ನ್ಯಾಯಕರ್ತನು ಶಿಕ್ಷೆಯನ್ನು ವಿಧಿಸಬೇಕಾಗಿದೆ. ಸಾಕ್ಷಿಗಳು ಯಾವ ತರದಲ್ಲಿ ಸಂಗ್ರಹಿಸಲ್ಪಡಲು ಸಾಧ್ಯವಿದೆಯೆಂಬುದನ್ನು ಎಲ್ಲರೂ ಬಲ್ಲರು. ಇದ್ದ ಪರಿಸ್ಥಿತಿಯಲ್ಲಿ ನ್ಯಾಯವಿತರಣೆಯು ಸಾಕ್ಷ್ಯ ಮೂಲಕವೇ ನಡಿಯಬೇಕೆಂಬುದನ್ನೂ ಮತ್ತು ಹೆಚ್ಚಿನ ಸಂದರ್ಭದಲ್ಲಿ ಸರಿಯಾದ ತೀರ್ಮಾನಗಳು ಕೊಡಲ್ಪಡುವುವೆಂಬುದನ್ನೂ ನಾವು ಒಪ್ಪುವೆವಾದರೂ, ಎಷ್ಟೋ ಸಂದರ್ಭದಲ್ಲಿ ಸಂಪೂರ್ಣ ನಿರಪರಾಧಿಗಳು ಶಿಕ್ಷೆ ಹೊಂದದೆ ಇರುವುದಿಲ್ಲ. ಮರಣ ದಂಡನೆಯಾದರೂ ಈ ಸಂದರ್ಭಗಳಿಂದ ತಪ್ಪಿಹೋಗುವುದಿಲ್ಲ. ಕಳೆದ ವರ್ಷ ಕಾತ್ಸಾರ ಹಿಂದೂಸ್ಥಾನದಲ್ಲಿ ಒಂದು ಹಳ್ಳಿಯಲ್ಲಿ ಒಂದು ಕೊಲೆಯಾಗಿ, ಪೋಲೀಸರು ಒಬ್ಬರನ್ನು ಹಿಡಿದು ಕೊಲೆಪಾತಕನೆಂಬ ಅಪವಾದನೆ ಹಾಕಿ, ಅಪರಾಧಿತನಿಗೆ ಮರಣ ಶಿಕ್ಷೆಯಾಗಿ, ಹೈ ಕೋರ್ಟ ಅಪೀಲಿನಲ್ಲಿ ಮರಣಶಿಕ್ಷೆಯು ತೆಗದುಹಾಕಲ್ಪಟ್ಟು ಜೀವಾಂತ ಕಾರಾವಾಸವು ವಿಧಿಸಲ್ಪಟ್ಟಿತು. ಊರಿನವರಿಗೆ ಶಿಕ್ಷಿಸಲ್ಪಟ್ಟವನ ನಿರಪರಾಧಿತ್ವದ ಮೇಲೆ ಸಂಪೂರ್ಣ ವಿಶ್ವಾಸವಿದ್ದುದರಿಂದ, ಅವರು ಆ ಮಹಾ ಅನ್ಯಾಯವನ್ನು ಸಹಿಸಲಾರದ ಪೋಲೀಸರಿಗೆ ಅನ್ನನೀರು ಸಿಕ್ಕದಂತೆ ಊರಲ್ಲಿ ಅಸಹಕಾರ ಮಾಡಿದರು. ಇದನ್ನು ನೋಡಿ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ತನಿಖೆ ನಡಿಸಿದ್ದಲ್ಲಿ ಶಿಕ್ಷಿಸಲ್ಪಟ್ಟವನು ನಿರಪರಾಧಿಯೆಂದೂ, ಪೋಲೀಸರು ಉದ್ದೇಶಪೂರ್ವಕವಾಗಿ ಅವನ ಮೇಲೆ ಸುಳ್ಳು ಆರೋಪವನ್ನು ತಂದುದೆಂದೂ ತಿಳಿದು ನಿರಪರಾಧಿಯ ಬಿಡುಗಡೆಯಾಗಿ ಸಂಬಂಧಪಟ್ಟ ಪೋಲೀಸರ ವಿಚಾರಣೆಯಾಯಿತು.

ಮೊದಲಿನ ತೀರ್ಮಾನದಂತೆ, ಅಪರಾಧಿತನು ಗಲ್ಲಿಗೇರಿಸಲ್ಪಟ್ಟದ್ದಾದರೆ, ಅವನಿಗೆ ಕೊಟ್ಟ ಶಿಕ್ಷೆಯನ್ನು ಹಿಂತೆಗೆಯಲಿಕ್ಕಾಗುತ್ತಿತ್ತೆ? ಹಿಂತೆಗೆಯಲಿಕ್ಕಾಗದ ಶಿಕ್ಷೆಯನ್ನು, ಸರಕಾರವೇ ಆದರೂ ಕೊಡಲು ಅಧಿಕೃತರಿರುವುದೇ? ಅದಲ್ಲದೆ, ನಿಜವಾಗಿ ನೋಡಿದರೆ, ಮರಣದಂಡನೆಗಿಂತ ಅಜೀವನ ಕಾರಾವಾಸವು ಹೆಚ್ಚಿನ ಶಿಕ್ಷೆಯಾಗಿರುವುದು. ಮರಣದಲ್ಲಿ ನೋವಿಲ್ಲ, ಮನಸ್ಸಿನ ಬೆದರಿಕೆ ಮಾತ್ರ. ಅಜೀವನ ಕಾರಾವಾಸವಾದರೆ ನೋವು ಕೊಡತಕ್ಕದ್ದು. ಕೊಲೆಪಾತಕನು ಅಜೀವನ ಕಾರಾವಾಸಕ್ಕೆ ಹೆದರುವಷ್ಟು ಮರಣದಂಡನೆಗೆ ಹೆದರಲಾರನೆಂದು ನಮ್ಮ ಭಾವನೆ. ಮರಣದಂಡನೆಯು ಸರಕಾರಗಳ ನಾಗರಿಕತೆಗೆ ಒಪ್ಪದು.

## ವಿದೇಶ ವರ್ತಮಾನ.

### ಹೊಟ್ಟೆಕಿಚ್ಚಿನ ನಿದರ್ಶನ

— ಉಮ್ಮಾಸಿ ಎಂಬ ಊರಲ್ಲಿ ನ್ಯಾಯಾಧೀಶರು ಹೊಟ್ಟೆಕಿಚ್ಚಿನ ಪರಿಣಾಮವನ್ನು ವಿಮರ್ಶಿಸಿ ಒಂದು ತೀರ್ಪನ್ನು ಕೊಟ್ಟಿರುವರು. ತೀರ್ಪಿನ ಸಾರಾಂಶದಂತೆ ಮಂಗೂನ್ ಎಂಬೊಬ್ಬನು ತನ್ನ ಹೆಂಡತಿ ಮಕ್ಕಳೊಡನೆ ಸ್ವಂತ ಮನೆಯಲ್ಲಿ ಸುಖವಾಗಿದ್ದನಂತೆ! ಮತ್ತು ಅನೇಕ ಕಾಲದಿಂದಲೂ ಆತನ ರಕ್ಷಣೆಗೆ ಒಳಪಟ್ಟು ಬೆಳೆಯುತ್ತಿದ್ದ ಎರಡು ಮಂದಿ ಎಳೇ ಹುಡುಗಿಯರೂ ಆತನೊಡನಿದ್ದರು. ಮಂಗೂನನು ಹುಡುಗಿಯರನ್ನು ಬಹಳವಾಗಿ ಪ್ರೀತಿಸುತ್ತಿದ್ದನು. ಪ್ರತಿಯಾಗಿ ಹುಡುಗಿಯರು ಅಪ್ಪಯ್ಯಾ ಎಂದು ಕರೆಯುತ್ತಿದ್ದರು.

ಆದರೆ ಮಂಗೂನನ ಹೆಂಡತಿ ಮತ್ತು ಮಕ್ಕಳು ಈ ವಿಷಯದಲ್ಲಿ ತುಂಬ ಹೊಟ್ಟೆಕಿಚ್ಚು ಪಡುತ್ತಿದ್ದರು. ಕಾರಣವೇನೂ ಇಲ್ಲ, ಮಂಗೂನನು ಹುಡುಗಿಯರನ್ನು ತನ್ನ ಮಕ್ಕಳಂತೆ ಪ್ರೀತಿಸುದಕ್ಕಾಗಿ ಮಾತ್ರ ಹೆಂಡತಿಗೆ ಕೋಪ. ಈ ವಿಷಯವು ಕ್ರಮೇಣ ಮಂಗೂನನ ಕಿವಿಗೂ ಬಿದ್ದಿತು. ಹೆಂಡತಿಯು ಪಡುತ್ತಿದ್ದ ಹೊಟ್ಟೆಕಿಚ್ಚನ್ನು ಸಹಿಸಲಾರದೆ ಅವಳನ್ನೂ ತನಗೆ ಹುಟ್ಟಿದ ಎರಡು ಮಕ್ಕಳನ್ನೂ ಕೊಲ್ಲಲೇಬೇಕೆಂದು ನಿರ್ಧರಿಸಿದವನಾಗಿ ಕೊಲೆಮಾಡಿದನಂತೆ! ಕೊಲೆ ಪಾತಕಿಯು ವಿಚಾರಣಾ ಸಮಯದಲ್ಲಿ ಅಂದದ್ದು— "ನಾನು ಹೆಂಡತಿ ಮಕ್ಕಳನ್ನು ಸಹಜವಾಗಿಯೂ ಕೊಂದಿರುವೆನು, ನಾನು ಮಾಡಿದ ಕೊಲೆಯು ದಯಾಪರತೆಯ ಕೆಲಸವೆಂದೇ ಪರ್ಯಾಲೋಚಿಸುವೆನು, ನಾನು ಹೆಂಡತಿಯನ್ನು ಬಹಳವಾಗಿ ಪ್ರೀತಿಸುತ್ತೇನೆ. ಆದರೆ ಹೊಟ್ಟೆಕಿಚ್ಚು ಪಡುವವರಿಗೂ ಬಾಧಿಸೇಳುವವರಿಗೂ ಶಿಕ್ಷೆಗಳನ್ನು ಅವಳು ಅರಿತಿರಲಿಲ್ಲ. ಆದುದರಿಂದ ಈ ನನ್ನ ಪಾತಕವು ಅಂತಹರು ಕಲಿಯ ಬೇಕಾದ ಪಾಠವಾಗಲಿ!" ಎಂದು.

### ಇಂಡಿಯಾನರೊಬ್ಬರು ಇಲೆಕ್ಟ್ರಿಕ್ ಬಂಡಿಯ ಅಡಿಯಲ್ಲಿ.

— ಮಿ। ಮಾಲಹೋತ್ರರೆಂಬೊಬ್ಬ ಭಾರತೀಯ ವಿದ್ವಾಂಸರು ರಿಸರ್ಚ್ ವರ್ಕ್ ಮಾಡುವುದಕ್ಕಾಗಿ ಇಂಗ್ಲಾಂಡಿಗೆ ತೆರಳಿದರು. ಅವರು ಲಾಹೋರಿನಿಂದ ಇಂಗ್ಲಾಂಡಿಗೆ ಹೋಗಿ ೨ ತಿಂಗಳುಗಳು ಮಾತ್ರವೇ ಆಗಿದ್ದುವು. ಕೆನಿಂಗ್‌ಟನ್ ಎಂಬಲ್ಲಿ ಸದರಿಯವರು ಇಲೆಕ್ಟ್ರಿಕ್ ಗಾಡಿಯ ಅಡಿಯಲ್ಲಿ ಬಿದ್ದು ಪ್ರಾಣ ಕಳಕೊಂಡರೆಂದು ಸುದ್ದಿ. ಅವರ ಹೆಂಡತಿ ಮತ್ತು ಎರಡು ಮಂದಿ ಮಕ್ಕಳು ಹಿಂದೂಸ್ಥಾನದಲ್ಲೇ ಇರುವರೆಂದು ತಿಳಿದುಬರುತ್ತದೆ. ಗಾಡಿಯ ಡ್ರೈವರನು ತನ್ನ ಸಾಕ್ಷಿ ವಿಚಾರಣೆಯಲ್ಲಿ ರುಜುವಾತು ಪಡಿಸಿದಂತೆ ಮಿ। ಮಾಲಹೋತ್ರರು ಬಂಡಿಯು ಚಲನೆಯಲ್ಲಿರುವಾಗ ಕೈಗಳಿಂದ ಕಣ್ಣುಗಳೆರಡನ್ನೂ ಮುಚ್ಚಿ ಥಕ್ಕನೆ ಗಾಡಿಯಿಂದ ಕೆಳಗಡೆ ದುಮುಕಿದರೆಂದು ತಿಳಿದುಬರುತ್ತದೆ. ಮಿ ಮಾಲಹೋತ್ರರು ಕೆಲದಿನಗಳಿಂದ ನಿದ್ರೆ ಇಲ್ಲದೆ ದೇಹದಲ್ಲಿ ತುಂಬ ಕ್ಷೀಣವಾಗಿದ್ದರೆಂದೂ ವದಂತಿ!

— ಜನವರಿ ತಾ ೧೬ರಲ್ಲು ಚಕ್ರಗೋಷ್ಠಿಗಾಗಿ ಇಂಗ್ಲಾಂಡಿಗೆ ಹೋದ ಇಂಡಿಯಾ ಪ್ರತಿನಿಧಿಗಳು ಬ್ರಿಟಿಷ ಗವರ್ನಮೆಂಟಿಗೂ ಇತರ ಹಲಕೆಲವು ರಾಜಕೀಯ ಮುಖಂಡರಿಗೂ ಪಾರ್ಲಿಮೆಂಟ್ ಹೋಟೆಲಿನಲ್ಲಿ ಬಹಳ ಸಂಭ್ರಮದಿಂದ ದೊಡ್ಡದೊಂದು ಔತಣಕೊಟ್ಟು ಸತ್ಕರಿಸುವರೆಂದು ತಿಳಿದುಬರುತ್ತದೆ. ಮತ್ತು ಡೆಲಿಗೇಟರೆಲ್ಲರೂ ಅಂದು ಮೊದಲ್ಗೊಂಡು ಮರಳಿ ಇಂಡಿಯಕ್ಕೆ ಪ್ರಯಾಣ ಬೆಳಸುವರೆಂದೂ ವದಂತಿ ಇದೆ.

— ಮಿಸ್। ಜಲ್ ಮತ್ತು ಡಾ ಇರ್ವಿನ್ ಬೈಸ್ ಎಂಬಿಬ್ಬರು ಹಿಮಾಲಯದ ಪಕ್ಕಗಳಲ್ಲಿ ವಾಸಮಾಡುತ್ತಿರುವ ಕುಂಟರ ಸಂತತಿಯ (Dwarfs) ಶೋಧೆಗಾಗಿ ಲಂಡನಿನಿಂದ ಹೊರಡುವರೆಂದು ವಾರ್ತೆ.

— ಜಾವಾದಲ್ಲಿ ಜ್ವಾಲಾಮುಖಿಯಿಂದ ಹೆಚ್ಚಿನ ಹಾನಿಯುಂಟಾಗಿರುವದೆಂದು ತಿಳಿದುಬರುತ್ತದೆ. ಸುಮಾರು ೬೦ ಮಂದಿ ಮರಣ ಹೊಂದಿರುವರಂತೆ!

— ಕೊಪ್ಪಿನ್ ಹೇಗನ್ ಪಟ್ಟಣದ ತೀರದಲ್ಲಿ ಒಟೆರನ್ ಎಂಬ ದೊಡ್ಡದೊಂದು ಹಡಗವು ಮುಳುಗಿಹೋಗಿ ಸುಮಾರು ೭೦ ಮಂದಿ ಪ್ರಯಾಣಿಕರು ಮಡಿದರು. ಮಿ ಡ್ಯೂಗ್ಲಸ್ ಎಂಬ ಹೆಸರುವಾಸಿಯಾದ ಕ್ರಿಕೆಟ್ ಚೇಂಪಿಯನನೂ ಮಡಿದರು. ಇದುವರೆಗೂ ತಿಳಿದುಬಂದಂತೆ ಸುಮಾರು ೩೨ ಮಂದಿಯನ್ನು ಪಾರುಗಾಣಿಸಿರುವರೆಂದು ತಿಳಿದುಬರುತ್ತದೆ. ಅಪಾಯದಲ್ಲಿ ಸಿಲುಕದೆ ಪ್ರಾಣಕಾಪಾಡಿಕೊಂಡವರಲ್ಲಿ ಸ್ಟೀಮರಿನ ಕ್ಯಾಪ್ಟನರೂ ಸೇರಿರುವರು.

## ಒಳದೇಶ ವರ್ತಮಾನ.

### ಬರೋಡಾ ರಾಜ್ಯದಲ್ಲಿ ಪಠಾಣರನ್ನು ಹಿಡಿದರು.

ಬರೋಡಾ ದೇಶದ ವಿಶಿಷ್ಟಮಪುರವೆಂಬ ಗ್ರಾಮದಲ್ಲಿ ಪಠಾಣರು ಕೋಪೋದ್ರೇಕರಾಗಿರುವರೆಂದು ತಿಳಿದುಬರುತ್ತದೆ. ಇತ್ತೀಚೆಗೆ ಕೆಲ ಪಠಾಣರು ಭಯ ಉಂಟುಮಾಡುವುದಕ್ಕಾಗಿ ಗುಂಡುಬಾರು ಮಾಡುತ್ತಿರುವರು. ಆದರೆ ಗುಂಡಿನ ಏಟುಗಳು ಯಾರನ್ನೂ ಅಪಾಯಗಳಿಗೆ ಗುರಿಪಡಿಸದೆ ಬರೇ ಗಾಳಿಯಲ್ಲಿ ಹಾರಿಹೋದವಂತೆ! ಬೋರಸಾದ ತಾಲೂಕಿಗೆ ಸೇರಿದ ರೂಪಿಯಾಪುರ ಎಂಬ ಗ್ರಾಮದಿಂದ ಅನೇಕ ಬಡಕೃಷರು ಊರನ್ನೇ ಬಿಟ್ಟಿರುವರೆಂದು ವದಂತಿ! ಇವೆಲ್ಲ ಸಂಕಷ್ಟಗಳಿಗೆ ಕಾರಣಗಳೆಂದರೆ— ಬರೋಡಾ ದೇಶದಲ್ಲಿ ರೈತರು ಕರನಿರಾಕರಣೆಯಲ್ಲಿ ಭಾಗವಹಿಸಿದುದಕ್ಕಾಗಿ ಸರಕಾರವು ಕರಿಗೆ ಮಸೂಲತಿಯ ಬಗ್ಗೆ ರೈತರ ಜಮೀನುಗಳನ್ನು ಏಲಂ ಹಾಕಿತು. ಕೆಲವು ಮಹಮ್ಮದೀಯರೂ ಪಠಾಣರೂ ಅವುಗಳನ್ನು ಕಡಿಮೆ ಮೌಲ್ಯಕ್ಕೆ ಪಡಕೊಂಡರು. ತರುವಾಯ ಮಹಮ್ಮದೀಯರೂ ಪಠಾಣರೂ ಒಮ್ಮೆ ಆಯುಧಪಾಣಿಗಳಾಗಿ ವಿಶ್ರಾಮಪುರಕ್ಕೆ ಹೋಗಿ ಮಿ ಶಂಕರ್ ಭ್ಯಾಕರ್ಸನ್ ವಾಸದ ಕಡೆ— ಹೊಲಗಳಲ್ಲಿದ್ದ ಬೆಳೆಯನ್ನು ಅದೇಕೆ ಕೊಯಿಸಿದ? ಎಂದು ಪ್ರಶ್ನಿಸಿದರು. ಆ ಕೂಡಲೇ ಒಬ್ಬ ಪಠಾಣನು ಗಾಳಿಯಲ್ಲೊಂದು ಗೋಲಿಬಾರು ಮಾಡಿದನಂತೆ! ಅಷ್ಟರಲ್ಲಿ ಜನರು ಗಲಭೆಯುಂಟಾಯಿತೆಂದು ನೋಡುವುದಕ್ಕಾಗಿ ಗುಂಪು ಸೇರಿದರು. ಕೆಲವು ಪಠಾಣರು ಪತ್ತೆ ಇಲ್ಲದೆ ಓಡಿಹೋದರು, ಮಿಕ್ಕ ೩-೭ ಮಂದಿಯನ್ನು ಪೋಲೀಸರು ದಸ್ತಗಿರಿ ಮಾಡಿ ಅವರ ವಶವಿದ್ದ ಕೋವಿಗಳೇ ಮೊದಲಾದ ಆಯುಧಗಳನ್ನು ಪೋಲೀಸರು ಸ್ವಾಧೀನಪಡಿಸಿದರು. ಆದರೆ ಮಹಮ್ಮದೀಯರು ಸುಮ್ಮನಿರಲಿಲ್ಲ. ಅವರು ಎದ್ರಿಯವರ ೧೧ ಮಂದಿಯ ಮೇಲೆ ದಂಗೆ ನಡೆಸಿದರೆಂದೂ ದರೋಡೆ ಮಾಡಿದರೆಂದೂ ದಾವಾ ಮಾಡಿರುವರು.

— ಡಕ್ಕಾದಲ್ಲಿ ನಡೆದ ದುರಾಚಾರಗಳ ಗಲಭೆಯಲ್ಲಿ ಮೊಹಿಯುದ್ದೀನ್ ಎಂಬೊಬ್ಬನಿಗೆ ಮರಣಾವಧಿ ಕಾಪು ಶಿಕ್ಷೆಯು ವಿಧಿಸೋಣಾಯಿತು. ಆತನ ಮೇಲಿನ ತಪ್ಪಿತವೆಂದರೆ— ಮೆಡಿಕಲ್ ಹಾಸ್ಪಿಟಲಿನ ಪ್ರೊಫೆಸ್ಸರರಾದ ಜತೀಂದ್ರಮೋಹನ್ ಶರ್ಮಾಕರರನ್ನು ಕೊಲೆಮಾಡಿರುವದೇ ಆಗಿದೆ. ಈತನು ತನಗೆ ಶಿಕ್ಷೆಯಾದುದೆಂದು ತಿಳಿದೊಡನೆ ಜಸ್ಟೀಸರ ಕೂಡೆ— ಈ ಬಗೆಯ ತೀರ್ಪನ್ನು ವಿಧಿಸುವರೆಂದು ತಿಳಿದಿದ್ದರೆ, ಹಿಂದೂಗಳನ್ನು ಹಿಂಸಿಸುವ ಬದಲಿಗೆ ಇಂತಹ ತೀರ್ಪು ಬರೆದವರನ್ನೇ ಕೊಲ್ಲುತ್ತಿದ್ದೆನು— ಎಂದು ಹೇಳಿದನಂತೆ!

— ಕಲ್ಕತ್ತೆಯಲ್ಲಿ ಇಂಜಿನಿಯರಿಂಗ್ ಕಾಲೇಜು ಹೊಸ ಕಟ್ಟಡಕ್ಕೆ ವೈಸರಾಯಪ್ರಭುಗಳು ಸ್ವಂತ ಕೈಯಿಂದ ಅಡಿಗಲ್ಲನ್ನಿರಿಸಿದರು, ಮತ್ತು ಇಂಜಿನೀಯರಿಂಗ್ ಓದುವ ವಿದ್ಯಾರ್ಥಿಗಳಿಗೆ ಹೃದಯಂಗಮವಾದ ಭಾಷಣವನ್ನಿತ್ತು ಸಂತೋಷಪಡಿಸಿದರು.

ಜೈಲಿನಲ್ಲಿ ಜೈಲುವಾಸವನ್ನು ಅನುಭವಿಸು ...ನ್ನ ಪಂಡಿತ್ ಜವಾಹಿರ್‌ಲಾಲರು, ತನ್ನ ಸೋದರವರ್ಗದ ...ರ ಅನಾರೈಕೆಯ ಪರವಾಗಿ ಮೂರು ದಿವಸಗಳ ಉಪವಾಸ ವ್ರತವನ್ನು ಕೈಕೊಂಡರು. ಈ ಕುರಿತು ವ್ಯಾಸರಾಯ ಪ್ರಭು ಗಳಿಗೂ ಪರ್ತಮಾನಗಳನ್ನು ಅರ್ಜಿಗಳ ಮುಖೇನ ತಿಳಿಸಲ್ಪಟ್ಟಿರುವ ದೆಂದು ತಿಳಿದುಬರುತ್ತದೆ.

ಗೂಡಿಗೆ ಸೇರಿದ ಆಳ್ವೆ ಎಂಬಲ್ಲಿ ರೈತರು ತಮ್ಮ ಕಷ್ಟನಿವಾರಣೆ ಯಾಗದ ಹೊರತು ಸರಕಾರಕ್ಕೆ ತೀರ್ವೆ ಕೊಡಲಾರೆವೆಂದು ನಿರ್ಧರಿಸಿ, ಸ್ಥಳೀಯ ಮುಖಂಡರು ಅಲ್ಲಿನ ಜನರನ್ನು ಕರನಿರಾಕರಣೆ ಮಾಡ ಬೇಕಾಗಿ ಬೋಧಿಸುತ್ತಿರುವರು

— ಸೋಲಾಪುರದ ಕೊಲೆಪಾತಕದ ಮೊಕದ್ದಮೆಯಲ್ಲಿ ಮರಣ ದಂಡನೆ ಹೊರಿಸಲ್ಪಟ್ಟ ನಾಲ್ಕು ಮಂದಿ ಅಪರಾಧಿಗಳಿಗೆ ದಯೆತೋರಿಸಿ ಮರಣದಂಡನೆಯನ್ನು ರದ್ದುಪಡಿಸಬೇಕೆಂದು ಸರ್ವಸಾಮಾನ್ಯ ಎಲ್ಲಾ ಪ್ರಾಂತ್ಯದವರು ಸರಕಾರದೊಡನೆ ಮನವಿಮಾಡಿರುವರೆಂದು ತಿಳಿದು ಬರುತ್ತದೆ.

— ಮಹಾತ್ಮಾಜಿಯವರ ಮಗನಾದ ರಾಮದಾಸ್ ಗಾಂಧಿಯವ ರನ್ನು ಎರಡನೇ ಸಲ ದಸ್ತಗಿರಿ ಮಾಡಿದರು ಅವರು ದಶಂಬರ ೧೨ನೇ ತಾರೀಕಿನಲ್ಲಿ ಒಂದು ಸರಸವಾದ ಭಾಷಣವಿತ್ತು ಜನರನ್ನು ಉಪ್ಪು ತಯ್ಯಾರಿ ಮಾಡುವಂತೆ ಬೋಧಿಸಿದುದೇ ಅವರ ಮೇಲಣ ತಪ್ಪಿತವಂತೆ!

ಪಂಡಿತ ಮದನಮೋಹನ ಮಾಲವೀಯರು ಅಲಹಾಬಾದದ ಯುರೋಪಿಯನ್ ಸಿ ವಿಲ್ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟು ಚಿಕಿತ್ಸೆ ಹೊಂದುತ್ತಿರುವರು ಅವರ ಅನಾರೋಗ್ಯದ ಸ್ಥಿತಿಗತಿಗಳು ಅಷ್ಟೊಂದು ಕಠಿಣ ತರದ್ದಲ್ಲವಾದರೂ ಕೂಡ, ಅವರ ದೇಹವು ಬಹಳ ಕೃಶ ವಾಗಿರುವದು ಮತ್ತು ಅವರ ಜೈಲು ವಾಸದ ಅವಧಿಯು ಇನ್ನೇರಡು ತಿಂಗಳು ಮಾತ್ರವೇ ಉಳಿದಿರುವದೆಂದು ತಿಳಿದುಬರುತ್ತದೆ.

೨೧ನೆಯ ನಿಖಿಲಭಾರತಾಯುರ್ವೇದ ಸಮ್ಮೇಳನವು ಮತ್ತು ಆಯುರ್ವೇದೀಯ ವಸ್ತು ಪ್ರದರ್ಶನವೂ ಇದೇ ೧೯೩೦ನೆಯ ದಶಂಬರ ತಾ ೨೭, ೨೮ ಮತ್ತು ೨೯ರಲ್ಲು ಮೈಸೂರು ರಾಜಧಾನಿಯಲ್ಲಿ ನೆರ ವೇರುವುದು ಮಹಾಮಹೋಪಾಧ್ಯಾಯ ಕವಿರಾಜ ಗಣನಾಥಸೇನ್ ಸರಸ್ವತಿ, M A, L M, & S ITC ಇವರು ಅಧ್ಯಕ್ಷತೆ ಯನ್ನು ವಹಿಸುವರು. ಮೈಸೂರು ಸರಕಾರದ ಉಪಸಚಿವರಾದ ರಾಜಕಾರ್ಯ ಪ್ರವೀಣ ಶ್ರೀಯುತ ಪಿ ಜಿ ಡಿಸೋಜಾ, ಬಿ ಎ ಬಿ ಎಲ್ ರವರು ಸಮ್ಮೇಳನದ ಪ್ರಾರಂಭೋತ್ಸವವನ್ನು ಜರುಗಿಸಲು ದಯೆ ಯಿಟ್ಟು ಅಂಗೀಕರಿಸಿದ್ದಾರೆ. ತಾವು ಪೂರ್ಣಾಭಿಮಾನವಿಟ್ಟು ಈ ಸಭೆಗೆ ದಯಮಾಡಿಸಿ ಇಲ್ಲಿಯ ಕಾರ್ಯನಿರ್ವಾಹದಲ್ಲಿ ಭಾಗಿಗಳಾಗು ವುದರ ಮೂಲಕ ಸಮ್ಮೇಳನವನ್ನು ಯಶಸ್ವಿಯನ್ನಾಗಿ ಮಾಡಬೇಕೆಂದು ಸ್ವಾಗತ ಸಮಿತಿಯವರು ಆದರದಿಂದ ಪ್ರಾರ್ಥಿಸುತ್ತಾರೆ

— ೧೯೨೭ನೇ ಇಸವಿಯಲ್ಲಿ ಇಂಡಿಯಾ ಮತ್ತು ಬರ್ಮಾ ದೇಶ ಗಳಿಗೆ ಅನುಕೂಲವಾಗುವಂತೆ ಸರ್ ವಿಕ್ಟರ್ ಸೆಸೂನರು ಸಿಬ್ಬಿಲ್ ಏರೋ ಕ್ಲಬ್ ಒಂದನ್ನು ಸ್ಥಾಪಿಸಿದರು ಆ ಮೇಲೆ ಮುಂಬಾಯಿ, ಬಂಗಾಳ, ಮದರಾಸು, ಮುಂತಾದ ಹಲವೆಡೆಗಳಲ್ಲಿ ಪ್ಲಾಯಿಂಗ್ ಕ್ಲಬ್‌ಗಳು ಏರ್ಪಟ್ಟವು ಸುಮಾರು ೩೦ ಮಂದಿ ಹಿಂದೀಯರು ಇಂತಹ ಕ್ಲಬ್‌ಗಳ ತರಬೇತಿ ಹೊಂದಿದವರಾಗಿ ವಿಮಾನವನ್ನು ನಡೆ ಸುವ ಧೈರ್ಯವುಳ್ಳವರಾಗಿರುವರು ಮುಂಬಾಯಿಯಲ್ಲಿ ವಿಮಾನ ನಡೆಸಲು ತರಬೇತಿ ಹೊಂದಿದವರಲ್ಲಿ ಮಿಸ್ ಪೆಟಿಟ್ ಎಂಬ ಸ್ತ್ರೀಯೇ ಮೊದಲನೇ ಸ್ಥಾನವನ್ನು ವಹಿಸಿರುವಳು. ಕರ್ನಲ್ ಫ್ಲ್ಯಾಂಗ್ ಕ್ಲಿಫ್ ನವರು ಎರಡು ವಿಮಾನಗಳ ಸಹಾಯದಿಂದ ೧೫೫೦ ಘಂಟೆಗಳ ಪ್ರಯಾಣವನ್ನು ೧೦ ತಿಂಗಳಿನಲ್ಲಿ ಮುಗಿಸಿರುವರೆಂದು ತಿಳಿದುಬರು ತ್ತದೆ ಇನ್ನೂ ಸುಮಾರು ಆರು ಕ್ಲಬ್‌ಗಳು ಭರತಖಂಡದಲ್ಲಿ ಸ್ಥಾಪಿಸಲ್ಪಡುವವೆಂದು ತಿಳಿದುಬರುತ್ತದೆ

— ಮುಂಬಾಯಿಯಲ್ಲಿ ಹೊಸದೊಂದು ಕೊಲೆಯು ಹೋಕ್ಕೆ ಯಾಗಿರುವದು ಕಲ್ಕತ್ತಾ ಮೈಲುಗಾಡಿಯಲ್ಲಿ ಆಸಾಮಿ ಇಲ್ಲದೆ ಇದ್ದ ಒಂದು ಟ್ರಂಕ್ ಪೆಟ್ಟಿಗೆಯು ರೈಲ್ವೆ ಪೋಲೀಸರ ಕೈವಶವಾಗಿ ವುದು ಈ ಪೆಟ್ಟಿಗೆಯನ್ನು ಮುಂಬಾಯಿ ನಗರದ ವಿಕ್ಟೋರಿಯಾ ಟರ್ಮಿನಸ್ಸಿನಲ್ಲಿ ಇಳಿಸಲಾಯಿತು ಇದನ್ನು ತೆರೆದು ನೋಡಿದ್ದಲ್ಲಿ ತಲೆ ಇಲ್ಲದ ಒಬ್ಬ ಹಿಂದೂವಿನ ಶವ ಮಾತ್ರವೇ ಇದ್ದಿತು ಮತ್ತು ಶವವನ್ನು ಬಿಳೀ ವಸ್ತ್ರದಿಂದ ಮುಚ್ಚಿದ್ದರಂತೆ ಹಳದಿ ಬಣ್ಣದ ಸದರಿ ಪೆಟ್ಟಿಗೆಯು ೩೦ ಇಂಚು ಉದ್ದವಾಗಿಯೂ ೧೮ ಇಂಚು ಅಗಲ ವಾಗಿಯೂ ಇದ್ದಿತು. ಮೃತನು ಸುಮಾರು ೩೫ ವರ್ಷದ ಹಿಂದೂ ಯುವಕನೆಂದು ಊಹಿಸಲಾಗುತ್ತದೆ.

— ನವಾಭಿಲ್ಲಿಯಲ್ಲಿ ಗಾಂಧಿ ಚಳವಳಿಕ್ಕೆ ಸೇರಿದ ಕೆಲಮಂದಿ ಗುರ್ಖಾ ಸ್ವಯಂಸೇವಕರನ್ನು ದಸ್ತಗಿರಿ ಮಾಡಿರುವರೆಂದು ತಿಳಿದು ಬರುತ್ತದೆ

### ಮುಂಬಾಯಿ ಸ್ವಯಂಸೇವಕನ ಮರಣದ ಕುರಿತು ಡಾಕ್ಟರರ ರುಜುವಾತು!

ಇದೇ ದಶಂಬರ ೧೨ನೇ ತಾರೀಕು ಮಧ್ಯಾಹ್ನ ಘಂಟೆ ೧೨ಕ್ಕೆ ...ನಾಗಿ ಸ್ವಯಂಸೇವಕ ಬಾಬುಗನು ಎಂಬವನನ್ನು ಗವರ್ನಮೆಂಟು ಆಸ್ಪತ್ರೆಗೆ ತರಲಾಯಿತು ಆತನಿಗೆ ಸ್ಮೃತಿ ಇದ್ದಿಲ್ಲ. ತಲೆಯ ಬಲಭಾಗದ ಕಿವಿ, ಮೂಗು ಮತ್ತು ಬಾಯಿಯಿಂದ ರಕ್ತವು ಸುರಿಯು ತ್ತಿತ್ತು. ಬಲಭಾಗವು ಬಾತು ಹೋಗಿತ್ತು, ಮತ್ತು ಅಲ್ಲಲ್ಲಿ ಗಾಯ ಗಳಿದ್ದುವು. ಎಡಭಾಗದ ಪಕ್ಕೆಯು ತುಂಡಾಗಿದ್ದಿತು ಹೊಡೀನ ಅವರಣವು ಸುಟ್ಟುಹೋಗಿದ್ದಿತು ಕೋಮಲವಾದ ಆತನ ಮೆದುಳು ಗಾಯಗಳ ಮೂಲಕ ಹೊರಹೊರಡುತ್ತಿದ್ದಿತು. ಆತನು ಅಪರಾಹ್ನ ಘಂಟೆ ೬—೪೦ಕ್ಕೆ ಮಡಿದನು.

— ಮದ್ರಾಸಿನಲ್ಲಿ ತಾ ೨೦-೧೨-೩೦ನೇ ದಿನ ಒಬ್ಬ ರೈಲ್ವೇ ಗೇಟ್ ಕಾವಲುಗಾರನನ್ನು ಯುರೋಪಿಯನನೊಬ್ಬನು ಢಾಳ ಇಟ್ಟು ಮೃತಿಹೊಂದಿಸಿದನಂತೆ! ಯುರೋಪಿಯನ್ ಗೃಹಸ್ಥನು ಮೋಟಾರ ಬ್ಯಾಸಿಕಲಿನಲ್ಲಿ ಕೂತುಕೊಂಡು ಗೇಟು ದಾಟಿ, ಒಳಪ್ರವೇಶ ಮಾಡಲು ಯತ್ನಿಸಿದನು ಕಾವಲುಗಾರನು ಬಿಡಲಿಲ್ಲ, ಆದಕ್ಕಾಗಿ ಕಾವಲು ಗಾರನ ಮೇಲೆ ಢಾಳ ರೈಲ್ವೇ ಪೋಲೀಸಿನವರು ಶೋಧೆ ನಡೆಸುತ್ತಿರು ವರು.

ಸ್ವೀಕಾರ

— 'ಮುದ್ರಾಸ್' ಎಂಬ ಮಾಸಪತ್ರಿಕೆ ಧಾರವಾಡ ದೇಶದ ಯಚ್ ಎಸ್ ಎಮ್ ದೇಸಾಯಿಯವರಿಂದ ಮುದ್ರಿಸಲ್ಪಟ್ಟಿರು ವದು ಅಂದವಾದ ಕಾಗದದಲ್ಲಿ ನಾಜೂಕಾಗಿ ಮುದ್ರಿಸಲ್ಪಟ್ಟು ಮಹಮ್ಮದೀ ಮತಾಚಾರಗಳ ಹಾಗೂ ಇತರ ಹಲಕೆಲವು ವಿಷಯಗಳ ಕುರಿತು ಅನೇಕ ಲೇಖನಗಳಿಂದ ತುಂಬಿರುವದು ಈ ಪತ್ರಿಕೆಯ ಪ್ರತಿಯೊಂದು ಸ್ವದೇಶಾಭಿಮಾನಿಯ ಹಸ್ತಗತವಾಗಿ ಸ್ವೀಕರಿಸಲ್ಪಟ್ಟಿ ರುವದು

---

## ದಕ್ಷಿಣ ಕನ್ನಡ

**ಮಂಗಳೂರು:** — ದಿ ಭಾರತ ಸ್ಟೀಮ್ ನೇವಿಗೇಶನ್ ಲಿಮಿಟೆಡ್ — ಇದು ಜವಾಬ್ದಾರಿಯುಳ್ಳ ಕಂಪೆನಿ ೧೯೧೩ನೇ ಇಂಡಿ ಯನ್ ಕಂಪೆನೀಸ್ ಆಕ್ಟಿನನ್ವಯ ರಜಿಸ್ಟರು ಮಾಡಲ್ಪಟ್ಟಿದೆ ಅಧಿಕೃತ ಭಾಂಡವಲು ರೂ ೩೦ ೦೦ ೦೦೦ ಪ್ರಸ್ತುತ ೩೦ ಲಕ್ಷ ರೂ ಗಳು ಈ ಕೆಳಗಿನಂತೆ ಶೇರುಗಳಿಂದ ಒಟ್ಟುಗತಕ್ಕದ್ದಿರುವದು ೧೯೯೦೦೦ ಸಾದಾ ಶೇರುಗಳು (ಪ್ರತಿಯೊಂದರ ಬೆಲೆ ರೂ ೧೦) ಒಟ್ಟಾಗತಕ್ಕ ಹಣ ರೂ ೧೯,೯೦ ೦೦೦ ೧೦೦೦ ಸಂಸ್ಥಾಪಕರ ಶೇರುಗಳು (ಪ್ರತಿ ಯೊಂದರ ಪೂರ್ಣ ಬೆಲೆ ತುಂಬಲ್ಪಟ್ಟದ್ದು) ೧೦,೦೦೦

ಮೇಲಿನ ಶೇರುಗಳಲ್ಲಿ ೯೦೦೦ ಸಾದಾ ಶೇರುಗಳು ಈಗಾಗಲೇ ಡೈರೆಕ್ಟರರು ಮೆಸೇಜಿಂಗ ಏಜಂಟರು ಹಾಗೂ ಅವರ ಮಿತ್ರರಿಂದ ಕೊಳ್ಳಲ್ಪಟ್ಟವೆ ಮೆನೇಜಿಂಗ ಏಜಂಟರು ಕಂಪೆನಿಯ ಸ್ಥಾಪನೆಯಲ್ಲಿ ಪಡಬೇಕಾದ ಪರಿಶ್ರಮ ಹಾಗೂ ಸೌಕರ್ಯ ಪರಾಕ್ರಮದಲ್ಲಿ ಅವರ ಸಂಬಂಧದಿಂದ ಕಂಪೆನಿಗೆ ದೊರೆಯಬಹುದಾದ ಲಾಭ ಇವುಗಳನ್ನು ಲಕ್ಷಿಸಿ, ಮೆನೇಜಿಂಗ ಏಜಂಟರಿಗೆ ೧೦೦೦ ಸಂಸ್ಥಾಪಕ ಶೇರುಗಳು ಪೂರ್ಣ ಹಣ ತುಂಬಲ್ಪಟ್ಟ ರೀತಿಯಲ್ಲಿ ಕೊಡಲ್ಪಡುವವು ನಂತರ ಉಳಿಯುವ ೧೯೯೦ ೦ ರೂಪಾಯಿ ಸಾದಾ ಶೇರುಗಳನ್ನು ಈ ಕೆಳಗಿನಂತೆ ಹಣ ಕಟ್ಟಿ ಇತರ ಜನರು ಪಡೆಯಬಹುದು. ಅರ್ಜಿ ಸಂಗಡ ರೂ ೫ ಮಂಜೂರಿ (ಎಲಾಟಮೆಂಟು) ಕಾಲಕ್ಕೆ ರೂಪಾಯಿ ೫ ಒಟ್ಟು ರೂ ೧೦

ಕಂಪೆನಿಯು ಪ್ರಾರಂಭದಲ್ಲಿ ಅಲ್ಪ ಪ್ರಮಾಣದಿಂದ ತನ್ನ ವ್ಯವ ಹಾರವನ್ನು ಸುರುಮಾಡುವದು ಪ್ರಥಮತಃ ಈ ಕೆಳಗಿನ ಎಂದರೆ ಜಲಮಾರ್ಗಗಳಲ್ಲಿ ಬೋಟಿಯು ಓಡಾಡುತ್ತವದು

(ಅ) ಬೊಂಬಾಯಿ ಮತ್ತು ಆಫ್ರಿಕ (ಪ್ರವಾಸಿಕ ಮತ್ತು ಸರಕು ಗಳ ಬಗ್ಗೆ) ೨ ಬೊಂಬಾಯಿ ಗೋವಾ ಹಾಗೂ ತನ್ಮಧ್ಯೆ ಸಿಗುವ ಬಂದರುಗಳು (ಹೆಚ್ಚಾಗಿ ಪ್ರಯಾಣಿಕರ ಬಗ್ಗೆ) ೩ ಬೊಂಬಾಯಿ ಮತ್ತು ಮಂಗಳೂರು (ಪ್ರಯಾಣಿಕರ ಹಾಗೂ ಸರಕು ಗಳ ಬಗ್ಗೆ)
೪ ಬೊಂಬಾಯಿ ಮತ್ತು ಕಚ್ಛಮಾಂಡವಿ
೫ ಬೊಂಬಾಯಿ ಮತ್ತು ಭಾವನಗರ
೬ ಬೊಂಬಾಯಿ ಮತ್ತು ರಂಗೂನ ಹಾಗೂ ದಾರಿಯಲ್ಲಿ ಸಿಗುವ ಬಂದರುಗಳು (ಹೆಚ್ಚಾಗಿ ಸರಕುಗಳ ಬಗ್ಗೆ)

ಮಂಗಳೂರು ಮುನಿಸಿಪಾಲಿಟಿಯ ರಿಪೋರ್ಟಿನಂತೆ ಮಂಗ ಳೂರು ಮುನಿಸಿಪಾಲಿಟಿಯೊಳಗೆ ೫೦ ಜನನಗಳೂ, ೨೭ ಮರಣಗಳೂ ಆಗಿವೆ

**ಉಡುಪಿ** — ಇಲ್ಲಿನ ರಾಮ ಬಾಣ ಎಂಬ ಕಲ್ಪಿಟ್ಟಿನ ಸತ್ಯಾಗ್ರಹ ವಾರಪತ್ರಿಕೆಯ ಸಂಪಾದಕತ್ವವನ್ನು ಶ್ರೀ ಟಿ ರಮಾನಾಥ ಪೈ ಎಂಬ ಸತ್ಯಾಗ್ರಹಿಗಳು ವಹಿಸಿರುತ್ತಾರೆ ಸದ್ರಿ ವಾರಪತ್ರಿಕೆಯು ಕ್ಲಿಪ್ತ ಕಾಲಕ್ಕೆ ಹೊರಬಿದ್ದಿದೆ

ಇದೇ ತಾ ೨ ನೇ ಆದಿತ್ಯವಾರ ದ ಕ ಜಿಲ್ಲಾ ದೇವಸ್ಥಾನ ಕಮಿಟಿಯು ಇಲ್ಲಿನ ತಾಲೂಕು ಬೋರ್ಡಿನ ಕಟ್ಟೋಣದಲ್ಲಿ ಸೇರಿತ್ತು

ಇಲ್ಲಿನ ಪ್ಲೀಡರು ಶ್ರೀ ಗುರುರಾಜರೆಂಬವರು ಹುಬ್ಬಳ್ಳಿಯಲ್ಲಿ ಕೆಲವರ್ಷಗಳಿಂದ ವ್ಯಾಪಾರ ನಡೆಸುತ್ತಿದ್ದವರಾಗಿ ಸಮಾಜ ಸೇವೆ ರಾಷ್ಟ್ರ ಕಾರ್ಯಗಳಲ್ಲಿ ಹೆಚ್ಚಿನ ಭಾಗವಹಿಸುತ್ತಿದ್ದು ಈಚೆಗೆ ಹುಬ್ಬಳ್ಳಿಯ ಐದನೇ ಸರ್ವಾಧಿಕಾರಿಯಾಗಿ ನೇಮಕಹೊಂದಿದ್ದರು ಇದೇ ತಾ ೧೩ಕ್ಕೆ ಹುಬ್ಬಳ್ಳಿಯಲ್ಲಿ ಜವಾಹರಲಾಲ ದಿನ'ದ ಸಮಾರಂಭದ ಕಾರ್ಯ ಕ್ರಮದಂತೆ ಸಾಯಂಕಾಲ ನಗರ ಸಭೆಗೆ ಇವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು ಆ ಸಂಬಂಧ ಶ್ರೀ ಗುರುರಾಜರು ಸಮೇತ ೮ ಮಂದಿ ಯನ್ನು ಕೈದುಮಾಡಿದ್ದರು ಶ್ರೀ ಗುರುರಾಜರು ೬ ತಿಂಗಳ ಸಜೆಗೂ ರೂಪಾಯಿ ೧೦೦ರ ಜುರಮಾನೆಗೂ ಗುರಿಮಾಡಲ್ಪಟ್ಟಿರುವರು,

ಉದ್ಯಾವರ ಮಟ್ಟುಗ್ರಾಮದ ಶ್ರೀ ಎಮ್ ಎಸ್ ಅಧಿಕಾರಿ ಎಂಬ ತರುಣರು ಬೊಂಬಾಯಿಗೆ ಎಲ್ ಎಲ್ ಬಿ ಪರೀಕ್ಷೆಗೆ ಹೋದಾಗ ಕರ್ನಾಟಕ ಪ್ರಭಾತ ಭಜನೆಗೆ ಸೇರಿದ ಸಂಬಂಧ, ಇವರು ಕೂಡ ಕೆಲಮಂದಿಗಳನ್ನು ಆರಾರು ತಿಂಗಳ ಸಜೆಗೆ ಮತ್ತು ರೂ, ೧೦೦ರಂತೆ ಜುರಮಾನೆಗೆ ಗುರಿಮಾಡಿದ್ದರು ಇದರ ಬಗ್ಗೆ ಮುಂಬಾಯಿ ಹೈ ಕೋರ್ಟಿನಲ್ಲಿ ಅಪೀಲು ಮಾಡಿದ್ದಲ್ಲಿ, ಇವರು ಇದುವರೆಗೆ ಅನು ಭವಿಸಿದ ೬ ವಾರದ ಸಜೆಯನ್ನೇ ಮಾತ್ರ ಮುಂಜೂರು ಮಾಡಿ ಉಳಿದ ಸಜೆಯನ್ನು ಮಾಫಿ ಮಾಡಿದ್ದಲ್ಲದೆ, ಸದರಿಯವರ ರೂಪಾಯಿ ೧೦೦ರ ಜುರುಮಾನೆಯನ್ನು ರೂ. ೩೦ಕ್ಕೆ ಇಳಿಸಿದರು

ಡಾಕ್ಟರ್ ಶ್ರೀ ಮಂಜೇಶ್ವರ ಬಾಲಕೃಷ್ಣ ಪ್ರಭು M B, B.S. ಇವರು ವಿಲಾಯಿತಿಗೆ ಹೆಚ್ಚಿನ ವೈದ್ಯಕೀಯ ಪರೀಕ್ಷೆಗೆ ಹೋಗಿದ್ದು ಎಡಿನ್‌ಬರೋವಿನ L R C P ಪರೀಕ್ಷೆಯಲ್ಲಿ ಈ ಮೊದಲೇ ತೇರ್ಗಡೆ ಹೊಂದಿದ್ದಲ್ಲದೆ, ಈಚೆಗೆ ಲಂಡನಿನ ಎಮ್ ಎಮ್. (ಮಿಡ್‌ವೈಫ್ರಿ) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವವಾಗಿ ತಿಳಿದು ಬರುತ್ತದೆ

ಇದೇ ದಶಂಬರ ೩೧ಕ್ಕೆ ಅಂತ್ಯವಾಗುವ ೧೮೪ನೇ ಸೆಷ್ಟನಿನ ಪಾರುಪತ್ಯವನ್ನು ಈ ಮೊದಲಿನಂತೆ ಎರಡೆರಡು ತಿಂಗಳಿಗೆ ಮುಂದರಿ ಸುವ ಬದಲಿಗೆ, ಈ ಸಲ ಒಂದೇ ಬಾರಿ ೧೯೩೧ನೇ ಜನವರಿ ತಾರೀಕು ೧ರಿಂದ ಮೂರು ತಿಂಗಳು ಮುಂದರಿಯಲ್ಪಟ್ಟಿರುವರು;

ಆಹಾರ ಜಿನಸುಗಳ ಕ್ರಯವು ದಿನೇ ದಿನೇ ಕಡಿಮೆಯಾಗು ತಿದ್ದ ಹಾಗೆ ಪೇಟೆಯಲ್ಲಿ ಕಳವುಗಳು ನಡೆಯುತ್ತಲೇ ಇವೆ

**ಫರಂಗಿಪೇಟೆ:** — ಈ ಸೆಂಟರಿನ ಉಪಾಧ್ಯಾಯ ಸಂಘದ ಮಾಸಿಕ ಸಭೆಯು ತಾ. ೨೦—೧೨ ೩೦ನೇ ಶನಿವಾರ ದಿನ ಪೋರ ಮಜ್ಜು ಸ್ಯೆಂಟ್ ಜೋಸೆಫ್ಸ್ ಹಾಯ್ಯರ್ ಎಲಿಮೆಂಟರಿ ಶಾಲೆಯಲ್ಲಿ ಅಸಿಸ್ಟೆಂಟ್ ವಿಕರ್ ರೆವೆರೆಂಡ್ ಫಾದರ್ ರೊಡ್ರಿಗ್ಸರ ಅಧ್ಯಕ್ಷತೆ ಯಲ್ಲಿ ಜರಗಿತು

ತಾ. ೧೯—೧೨—೩೦ರಲ್ಲು ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಆಫೀಸ ರರವರು ಮಂಗಳೂರು ರೇಂಜ್ ಡಿಪ್ಯುಟಿ ಇನ್ಸ್‌ಪೆಕ್ಟರರೊಂದಿಗೆ ಇಲ್ಲಿಯ ಶ್ರೀ ರಾಮ ಹಾಯ್ಯರ್ ಎಲಿಮೆಂಟರಿ ಶಾಲೆಯನ್ನು ಸಂದ ರ್ಶಿಸಿ, ಇಲ್ಲಿಯ ಚಟುವಟಿಕೆಗಳನ್ನು ಪರಾಮರಿಸಿ (A well Conducted School) ಚೆಲೋದಾಗಿ ನಡಿಯುವ ಶಾಲೆ ಎಂದು ಬರೆದು ಮಂಗಳೂರು ಅತ್ತಕಡೆ ದಯಮಾಡಿದರು

**ಸುಬ್ರಹ್ಮಣ್ಯ.** — ಈ ಸುಬ್ರಹ್ಮಣ್ಯವು ಕೇವಲ ಮಲೆನಾಡು ಪ್ರಾಂತ್ಯವಾಗಿ ಜನಸ್ತ್ರೀಯರಿಗೆ ... [illegible] ... ಸಂಭವಿಸುವ ಹಾನಿ ... ೧೭ನೇ ದಿನ ... ೩ ಘಂಟೆ ಸಮಯ ಕೋನಪ್ಪ ಮಂಜಪ್ಪ ... ಎಂಬುವ ಸುಮಾರು ೩೫ ರೂಪಾಯಿ ಬೆಲೆಬಾಳುವ ಕೋಣವನ್ನು ... ಯಿಂದ ೨ ಫರ್ಲಾಂಗ್ ದೂರ ಕೊಂಡುಹೋಗಿದ ವರ್ತಮಾನವನ್ನು ಕಟ್ಟಿಮನೆ ಪರಮೇಶ್ವರ ... [illegible] ... ಕರು ತಿಳಿದು ತನಗೆ ಇತ್ತಲಾಗಿ ... [illegible] ... ರಾತ್ರಿ ೨ ಘಂಟೆ ... [illegible] ... ಎರಡು ... [illegible] ... ಒಂದೊಂದೇ ... ಹೆಬ್ಬುಲಿಗಳನ್ನು ... [illegible] ... ಎರಡು ಹೆಬ್ಬುಲಿಗಳು ಒಂದೇ ... ಸುಮಾರು ... [illegible] ... ನಾಲ್ಕು ಕಾಲ, ... ಎರಡು ಹೆಬ್ಬುಲಿಗಳನ್ನು ಮೃಗಯೆಯಲ್ಲಿ ಬೇಟೆಗೆ ತಂದರು ... [illegible] ... ಕೊಡುವದರಿಂದ ... ಉಪಕಾರವಾದೀತು

ಪ್ರತ್ಯಕ್ಷದರ್ಶಿ

**ಕೊಕ್ಕಡ.** ಈ ಸೆಂಟರಿನ ಉಪಾಧ್ಯಾಯರ ಸ್ಪೆಶಲ್ ಸಭೆಯು ತಾ ೧೩ ೧೨ ೩೦ನೇ ದಿನ ... ಶಾಲೆಯಲ್ಲು ಸದರಿ ಶಾಲಾ ಮ್ಯಾನೇಜರರಾದ ... ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ... [illegible] ... ತಿಂಗಳಾಯರವರು ಗತ ಸಭೆಯ ... ಓದಿ ... ವಾಯ ಸಭಾಕಾರ್ಯವು ಕೊನೆಗೊಂಡಿತು.

**ಸಾಸ್ತಾನ:** — ತಾ ... ೩೦ನೇ ... ರಾತ್ರಿ ಇಲ್ಲಿಯ ಸರಾಯಿ ಅಂಗಡಿ ಸುಟ್ಟುಹೋಯಿತು

**ಬಾರಕೂರು:** — ಇಲ್ಲಿ ತಾ ... ೩೦ನೇ ಶುಕ್ರವಾರ ದಿವಸ, ಕ್ರೈಸ್ತ ಜಾತಿಯ ೬ ವರುಷ ಪ್ರಾಯದ ಎರಡು ಬಾಲಕರು ಹೊಳೆಯಲ್ಲಿ ಬಿದ್ದು ಮೃತಹೊಂದಿರ ವರು

**ಕೋಟ:** — ಇಲ್ಲಿ ಜಾನುವಾರುಗಳ ... ಪ್ರಬಲ ವಾಗಿದೆ

**ಮುಸಡಬಿದ್ರಿ:** — ಈ ಸೆಂಟರಿನ ಉಪಾಧ್ಯಾಯ ಸಂಘದ ... ಸಭೆಯು ಇಲ್ಲಿಯ ಶಾಲೆಯಲ್ಲಿ ... ಬೋರ್ಡ ಶಾಲಾ ಹೆಡ್ಮಾಸ್ಟರ ... ಅಧ್ಯಕ್ಷತೆಯಲ್ಲಿ ತಾರೀಕು ೨೦ನೇ ದಶಂಬರ ಶನಿವಾರ ಜರಗಿತು.

**ತೋಕೂರು ಜೋಗಟ್ಟೆ.** ಇಲ್ಲಿಯ ಮಹಮ್ಮದೀಯ ಬೋರ್ಡ ಶಾಲೆಯ ವರ್ಧಂತ್ಯೋತ್ಸವವು ಇದೇ ತಿಂಗಳ ತಾರೀಕು ೧೯ನೇ ಗುರುವಾರ ದಿನ ... ಸಾಹೇಬರ ... ಬ್ಯಾರಿಗಳವರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ಜರಗಿತು.

**ಗುರುಪುರ:** — ರಾ ಮಂಗಳೂರು ... ತಾಲೂಕು ತಹಶಿಲ್ದಾರ ರವರು ಕೆಲವು ದಿವಸಗಳ ಹಿಂದೆ ಇಲ್ಲಿಗೆ ಚಿಕಿತ್ಸಕ ಎನ್ಕ್ವಾಯರಿಗಾಗಿ ಒಂದು ಸಭೆ ಕರೆದು ಸೆನ್ಸಸ್ ಕೆಲಸದ ಮಾಹಿತಿಯನ್ನು ಕೊಟ್ಟರು,

ಸಾಧಾರಣನಾಮ ಸಂವತ್ಸರದ ಧನುರ್ಮಾಸದ ಪ್ರಥಮೋದಯ ಪುಷ್ಯ ಶು ೧೬ ಶನಿವಾರದಿಂದ ಪ್ರಥಮೋದಯ ಸಂಬಂಧ ಪುಷ್ಯ ಶು ೧೩ ಶುಕ್ರವಾರದ ವರೆಗಿನ ಪಂಚಾಂಗ

(ಗ್ರಹಸ್ಥಿತಿಯು ಧನು—ಶೋದರ್ಶ)

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | ಸೂರ್ಯೋದಯ | ಸೂರ್ಯ ಉ | ಅಸ್ತ |
|---|---|---|---|---|---|---|---|---|
| 27 | ಶನಿ | [illegible] | [illegible] | ಪೂ ಭಾ | [illegible] | [illegible] | 6 52 | 6 11 |
| 28 | ರವಿ | [illegible] | [illegible] | ಉ ಭಾ | [illegible] | [illegible] | 6 53 | 6 12 |
| 29 | ಸೋಮ | [illegible] | [illegible] | ರೇವತಿ | [illegible] | [illegible] | 6 53 | 6 13 |
| 30 | ಮಂಗಳ | ೧೦ | [illegible] | ಅಶ್ವಿನಿ | [illegible] | [illegible] | 6 54 | 6 13 |
| 31 | ಬುಧ | ೧೧ | [illegible] | ಭರಣಿ | [illegible] | [illegible] | 6 54 | 6 14 |
| 1 | ಗುರು | ೧೨ | [illegible] | ಕೃತ್ತಿಕಾ | [illegible] | [illegible] | 6 55 | 6 15 |
| 2 | ಶುಕ್ರ | ೧೩ | [illegible] | ರೋಹಿಣಿ | [illegible] | [illegible] | 6 55 | 6 16 |

## ಮಂಗಳೂರಿನ ವಾಯುಸ್ಥಿತಿ.

| Date ತಾರೀಖು | Temperature ಉಷ್ಣ (ಶಾಖ) Maximum ಹೆಚ್ಚಾದ | Minimum ಕಡಿಮೆ | Rainfall ಮಳೆ ದಿನದ ಮಳೆ | ಜುಮಲಾ ಮಳೆ |
|---|---|---|---|---|
| 12 | 92—0 | 69—9 | — | — |
| 13 | 92—4 | 69—0 | — | — |
| 14 | 91—7 | 68—7 | — | — |
| 15 | 91—5 | 67—9 | — | — |
| 16 | 88—6 | 69—2 | — | — |
| 17 | 90—0 | 69 0 | — | — |
| 18 | 88—7 | 69—2 | — | 136 80 |

## ಮಂಗಳೂರಿನ ಪೇಟೆ ಧಾರಣೆ.

| ದೇನಸು | ಇಂದ ರೂ | ಆ | ವರೆಗೆ ರೂ | ಆ |
|---|---|---|---|---|
| ಹೊಸ ಮಸ್ಕತ್ | 6— | 4 | —  | 0 |
| ಹೊಸ ಗುಡ್ಡ | ) | | | 1 |
| ಹೊಸ ರಾಶಿ | 5 | 4 | — | |
| ಊರ ಅಪ್ಪರ್ ಬೆಲ್ಲಗೆ | 6 | 4 | 6 | 8 |
| ರಂಗೂನು ಬೆಲ್ಲಗೆ ಗೋಣಿ ಗಳ್ಳಿ | ˴ | 8 | | |
| ಸುಗ್ಗಿ | 5 | 4 | 6— | 4 |
| ಎಳ್ಳು ಬುಟ್ಟಿಗೆ ಮುಡಿ ಗಳ್ಳಿ | 5— | 8 | — | 0 |
| ಗೋಧಿ ಗೋಣಿ ಗಳ್ಳಿ | 9— | | 14— | 0 |
| ಕಡಲೆ ಗೋಣಿ ಗಳ್ಳಿ | 11 | 8 | 1— | |
| ಹುರುಳಿಗೋಣಿ ಗಳ್ಳಿ | 6— | 8 | — | 4 |
| ಕಡಲೆ ಗೋಣಿ ಗಳ್ಳಿ | 2— | 0 | 13— | 0 |
| ತೊಗರಿಬೇಳೆ ಗೋಣಿ ಗಳ್ಳಿ | 12— | 0 | 25— | 0 |
| ಉದ್ದು ಗೋಣಿ ಗಳ್ಳಿ | 12— | 0 | 1— | 8 |
| ಹೆಸರು ಗೋಣಿ ಗಳ್ಳಿ | 12— | 0 | — | |
| ಊರು ಬೆಲ್ಲ ಖಂಡಿ ಗಳ್ಳಿ | 35— | 8 | 3— | ) |
| ಉಪ್ಪು ಗೋಣಿ ಗಳ್ಳಿ | 4— | 4 | 4 | 10 |
| ಬೆಣ್ಣೆ ಖಂಡಿ ಗಳ್ಳಿ | 6 | 0 | 65 | |
| ಕೊಬ್ಬರಿ ಹಿಂಡಿ ಖಂಡಿ ಗಳ್ಳಿ | 28— | | 2— | ˴ |
| ಎಳ್ಳೆಂಡಿ ಖಂಡಿ ಗಳ್ಳಿ | 2— | 8 | 30— | 0 |
| ಕೊಬ್ಬರಿ ಎಣ್ಣೆ ಮಣ ಗಳ್ಳಿ | 4— | 14 | 5— | 14 |
| ಎಳ್ಳೆಣ್ಣೆ ಮಣ ಗಳ್ಳಿ | 6— | 2 | 7— | 0 |
| ಬಮುಡೆಎಣ್ಣೆ ಬಟ್ಟೆಗೆ ಗಳ್ಳಿ | 4— | 7 | 8 | 12 |
| ಮೋರಿಸ ಸಕ್ಕರೆ ಮಣ ಗಳ್ಳಿ | 3— | 3 | 3— | 4 |
| ಹೊಸ ಮೆಣಸು | 6— | 8 | 7— | 4 |
| ಹಾಸೆ ಮುಡಿ ಗಳ್ಳಿ | 7— | 8 | 8— | 0 |
| ಕೊತ್ತಂಬರಿ ಮುಡಿ ಗಳ್ಳಿ | 2— | 8 | 3— | 0 |
| ತೇಟಪ್ ಕಾಫಿ ಖಂಡಿ ಗಳ್ಳಿ | 190— | 0 | 195— | |
| ಅರಿಶಿನಮಾಡು ಖಂಡಿ ಗಳ್ಳಿ | 200— | | | |
| ಮೆಂತ್ಯ ಮಣ ಗಳ್ಳಿ | 43— | 0 | ˈ4 | |
| ಗೇರುಬೀಜ ಮುಡಿ ಗಳ್ಳಿ | 8— | 12 | — | |
| ಕಸ್ತೂರಿ ಖಂಡಿ ಗಳ್ಳಿ | 42— | 8 | 4— | 0 |
| ಸಾಂಬ್ರಾಣಿ ತಗಡು ಮಣ ಗಳ್ಳಿ | 14— | 8 | 14— | 10 |
| ಸಾಂಬ್ರಾಣಿ ಬಾಕ್ಸಗೆಳು ಮಣ ಗಳ್ಳಿ | 20— | 0 | 21— | 0 |
| ಅರಶಿನ ಸೇರು ಗಳ್ಳಿ | 12— | 0 | 12— | 4 |
| ಹಿತ್ತಾಳೆ ತಗಡು ಮಣ ಗಳ್ಳಿ | 17— | 0 | 17— | 8 |
| ಚರ್ಮ ಗಳ್ಳಿ | 13—9—3 | | — | |
| ಮುಂಡಿಮುಳಿ ಖಂಡಿ ಗಳ್ಳಿ | 37— | 8 | 43— | 12 |
| ಶುಂಠಿ ಶಾಖ ಖಂಡಿ ಗಳ್ಳಿ | 230— | | 250— | |
| ಕಾಯಿ | 80— | | 100— | |
| ಕೊಬ್ಬರಿ | 50— | | 90— | |

# Chikmagalur Public Conveyance Motor
## CHIKMAGALUR.
# ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್
## ಚಿಕ್ಕಮಗಳೂರು

ತಂತಿ ವಿಳಾಸ ಕನ್ವೆಯನ್ಸ್, Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು

(1) ಈ ಕಂಪೆನಿಯವರು ಜನರ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡಿಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತ

### ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಿಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10 30ಕ್ಕೆ, ಮೈಸೂರಿನಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಈ ಪ್ರದೇಶದ ಪ್ರಸಿದ್ಧ ಧರ್ಮಸ್ಥಳ ರೋಡಿಗೆ 1 30ಕ್ಕೂ ಬೆಳ್ತಂಗಡಿಗೆ 1 45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲುಪಿ, ಆ ಟ್ರೈನಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ ಕಾಸರಗೋಡು, ಮಲಬಾರು ಕಣ್ಣನ್ನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10 30ಕ್ಕೆ ಬೆಳ್ತಂಗಡಿ ಆ 11 ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ 12 ಗಂಟೆಗೆ ಚಾರ್ಮಾಡಿಗೂ 12 30ಕ್ಕೆ ಮೈಸೂರು ಗಡಿಗೂ, ಸೇರಿ ಅಲ್ಲಿಂದ ಒಡನೆ ಹೊರಟು 2 30ಕ್ಕೆ ಕೊಟ್ಟಿಗೆಹಾರಕ್ಕೂ, ಸುಮಾರು 4 ಗಂಟೆಗೆ ಮೂಡಿಗೆರೆಗೂ 5 ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗಿ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿದ್ದಲ್ಲಿಯೇ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಡರಾಪುರ ಗೋವಾ ಲೋಂಡ, ಪೂನಾ ಮತ್ತು ಮುಂಬಯಿ ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೆಂಗಳೂರು ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು ಮೈಸೂರು ಮದ್ರಾಸ್ ವಗೈರೆ ಕಡೆಗಳಿಗೂ 3 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ ಎನ್ ಹನುಮಂತಪ್ಪ, ಫ್ಲೊರಡೂನ್ ಸೊರಾಬ್, ಕೆ ಸೂರಪ್ಪ ಸೆಟ್ಟಿ

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ ಪಿ ಸಿ ಕಂಪನಿಯವರ ಟಿಕ್ಕೆಟುಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು

# THE CANARA PUBLIC CONVEYANCE CO, LTD, MANGALORE.
(ESTABLISHED 1914)

# ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ, ಲಿಮಿಟೆಡ್,
## ಮಂಗಳೂರು.

### ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ ಬಂಟವಾಳ ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುತ್ತವೆ

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅವಕ್ಕೆ ಅತ್ಯಂತ ಸಮೀಪವಾಗಿರುವ ಉಪ್ಪಿನಂಗಡಿಗೆ ಬೇಗನೆ ತಲುಪುವಿರಿ

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೆ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಆಗುಂಬೆ ಮಾರ್ಗವಾಗಿ ಶಿಮೊಗ್ಗೆಕ್ಕೆ ಹದಿನಾರು ಘಂಟೆಗಳೊಳಗೂ ತಲುಪುವವು,

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

**Secretary,**
*The Canara Public Conveyance Co., Ltd., Mangalore.*

## ವಿವಿಧ ಸಮಾಚಾರಗಳು.

### ಮದರಾಸಿನಲ್ಲಿ ನೆರೆಯ ಹಾವಳಿಯಿಂದುಂಟಾದ ನಷ್ಟವನ್ನು ಪರ್ಯಾಲೋಚಿಸಲು ಪ್ರತ್ಯೇಕ ಕಮಿಟಿಯೊಂದನ್ನು ಏರ್ಪಡಿಸಿರುವರು.

ಈ ಕಮಿಟಿ ಸದಸ್ಯರು ತಾ ೩೧ ೧೨-೩೦ರಲ್ಲಿ ಸಭೆಸೇರಿ ಅನೇಕ ವಿಷಯಗಳನ್ನು ಆಲೋಚಿಸಿದರು. ಛೆಯರಾಮನರು ತಿಳಿಯಪಡಿಸಿದಂತೆ, ಮದರಾಸು ಪಟ್ಟಣವು ನೆರೆಯ ಹಾವಳಿಯಿಂದ ಸುಮಾರು ೭೦೦೦ ರೂಪಾಯಿಗಳ ನಷ್ಟಕ್ಕೆ ಗುರಿಪಟ್ಟಿರುವದೆಂದು ತಿಳಿದುಬರುತ್ತದೆ. ಬಡವರ ಉಪಕಾರಾರ್ಥವಾಗಿ, ಅವರ ಹಾಳು ಬಿದ್ದ ಗುಡಿಸಲುಗಳ ದುರಸ್ತಿ ಬಗ್ಗೆ ಪ್ರತಿಯೊಬ್ಬನಿಗೆ ರೂ ೧೦ರಂತೆ ಕೊಡಲಾಗುವದೆಂದು ಕಮಿಟಿಯು ನಿರ್ಧಾರಮಾಡಿರುವದು. ಹೆಚ್ಚಿನ ನಷ್ಟಹೊಂದಿದ ಗ್ರಾಮಗಳ ಉದ್ಧಾರಕ್ಕಾಗಿ, ಎಷ್ಟು ರೂಪಾಯಿಗಳು ಬೇಕಾಗುವವೆಂಬ ಸಂಗತಿಯಲ್ಲಿ, ಅಂದಾಜು ಪಟ್ಟಿಯ ಮೊಬಲಗಿನ ಕುರಿತು, ಕಮಿಟಿಯು ಪರ್ಯಾಲೋಚಿಸುತ್ತಿರುವದು. ಈ ಬಗ್ಗೆ "ದಿ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ"ಯೇ ಮೊದಲಾದ ಸಂಸ್ಥೆಯೊಡನೆ, ಮೇಲೆ ಹೇಳಲ್ಪಟ್ಟ ಕಮಿಟಿಯು ಸಹಾಯವನ್ನಪೇಕ್ಷಿಸಿರುವದೆಂದು ತಿಳಿದುಬರುತ್ತದೆ.

* * *

### ಇಂಡಿಯದ ಸಕ್ಕರೆ ಕೈಗಾರಿಕೆ

ಇಂಡಿಯಕ್ಕೆ ಪರದೇಶಗಳಿಂದ ಬರುವ ವಸ್ತುಗಳಲ್ಲಿ ವಸ್ತ್ರವು ಮೊದಲನೇ ಸ್ಥಾನವನ್ನು ಪಡೆದಿದೆ. ಎರಡನೇದಾಗಿ ಸಕ್ಕರೆ. ಕೆಲವು ವರುಷಗಳ ಹಿಂದೆ ಸಕ್ಕರೆ ಮತ್ತು ಬೆಲ್ಲವನ್ನು ತಯಾರಿಸಿ ಪರದೇಶಗಳಿಗೆ ಕಳುಹಿಸುವುದರಲ್ಲಿ ಇಂಡಿಯವು ಮೊದಲನೇ ಸ್ಥಾನವನ್ನು ಪಡೆದಿತ್ತು. ಈಗ ಇಂಡಿಯವು ತನಗೆ ಬೇಕಾದ ಸಕ್ಕರೆಗಾಗಿ ಪರದೇಶವನ್ನೇ ಆಧರಿಸಿಕೊಂಡಿರಬೇಕಾಗಿದೆ. ಇಂಡಿಯದಲ್ಲಿರುವ ೩೦ ಮಿಲಿಯ ಜನರ ಉಪಯೋಗಕ್ಕಾಗಿ ಬೇಕಾಗುವ ಈ ವಸ್ತುವಿಗೆ ಕ್ರಯ ಧರಿಸುವದಾಗಲೀ, ಇಳಿಸುವದಾಗಲೀ ಪರದೇಶಿ ವ್ಯಾಪಾರಿಗಳ ಕೈಯಲ್ಲಿ ಸೇರಿಹೋಗಿದೆ. ಇತರ ಯಾವ ದೇಶಗಳ ಸ್ಥಿತಿಯೂ ಈ ರೀತಿಯಲ್ಲಿರುವದಿಲ್ಲ. ಪ್ರತಿ ಒಂದು ದೇಶವು ತನಗೆ ಬೇಕಾಗುವಷ್ಟು ಸಕ್ಕರೆಯನ್ನು ತಯಾರಿಸುವದು ಮಾತ್ರವಲ್ಲ, ಪರದೇಶಗಳಿಗೆ ಹೇರಳವಾಗಿ ಕಳುಹಿಸುವಷ್ಟು ತಯಾರಿಸುತ್ತಲಿದೆ. ಇಂಡಿಯದಲ್ಲಿ ಸಕ್ಕರೆಯ ಕೈಗಾರಿಕೆಯು ಅಭಿವೃದ್ಧಿಗೆ ಬರಬೇಕಾದರೆ ಅದು ರಕ್ಷಣೆಗಾಗಿ ಪರದೇಶದಿಂದ ಬರುವ ಸಕ್ಕರೆಯ ಮೇಲೆ ಹೆಚ್ಚು ಸುಂಕವನ್ನು ಹಾಕಬೇಕಾಗುತ್ತದೆ. ಆದರೆ ಇಂಡಿಯಾ ಸರಕಾರವು ಹೀಗೆ ಮಾಡದೆ ತಮ್ಮ ಬಜೆಟಿನಲ್ಲಿ ಏನಾದರೂ ಹಣ ಕಡಿಮೆಯಾದರೆ ಅಲ್ಪಸ್ವಲ್ಪ ಸುಂಕ ಏರಿಸಿ ಬಜೆಟಿನ ಹಣಕ್ಕೆ ಭರ್ತಿಮಾಡುತ್ತಾರೆ. ಇದರಿಂದ ಇಂಡಿಯದಲ್ಲಿ ಕಬ್ಬು ಬೆಳಸುವವರಿಗೂ ಸಕ್ಕರೆ ತಯಾರಿಸುವವರಿಗೂ ಪ್ರಯೋಜನವಾಗುವದಿಲ್ಲ. ಇಡೀ ಭೂಲೋಕದಲ್ಲಿ ಕಬ್ಬು ಬೆಳೆಯಲಿಕ್ಕೆ ಯೋಗ್ಯವಾದ ಸ್ಥಳಗಳಲ್ಲಿ ಸಮ ಅರ್ಧಾಂಶ ಸ್ಥಳವು ಇಂಡಿಯದಲ್ಲಿದೆ. ಹೀಗಿದ್ದರೂ ಇಂಡಿಯಕ್ಕೆ ಜಾವಾ ಮುಂತಾದ ದೇಶಗಳಿಂದ ೨೦ ಕೋಟಿ ರೂಪಾಯಿಯ ಮೌಲ್ಯದ ಸಕ್ಕರೆಯು ಬರುತ್ತದೆ. ಜಾವಾ ದ್ವೀಪದಲ್ಲಿಯೂ ಅಮೇರಿಕಾ, ಜರ್ಮನಿ ದೇಶಗಳಲ್ಲಿಯೂ ಸರಕಾರವು ಕಬ್ಬು ಬೀಟರೂಟ್ ಮುಂತಾದ್ದನ್ನು ಬೆಳಸುವವರಿಗೂ ಸಕ್ಕರೆ ತಯಾರಿಸುವವರಿಗೂ ಧನಸಹಾಯ ಮಾತ್ರವಲ್ಲ, ಇನ್ನು ಇತರ ಎಲ್ಲಾ ಸಹಾಯವನ್ನು ಮಾಡುತ್ತದೆ. ಇದರಿಂದ ಜಾವಾ, ಜರ್ಮನಿ ಸಕ್ಕರೆಯನ್ನು ಕಡಿಮೆ ಕ್ರಯಕ್ಕೆ ಮಾರಲು ಸಹಾಯವಾಗುತ್ತದೆ ಮಾತ್ರವಲ್ಲ. ಇಂಡಿಯದ ಸಕ್ಕರೆ ಕೈಗಾರಿಕೆಯ ಒಮ್ಮೆಹೋಗಲು ಕಾರಣವಾಯಿತು.

* * *

### ಹಿಂದೂದೇಶದ ಇನ್‌ಶೂರೆನ್ಸ್ ಕಂಪೆನಿಗಳು

ಹಿಂದೂದೇಶದಲ್ಲಿ ಒಟ್ಟಿಗೆ ೨೨೫ ಇನ್ಶೂರೆನ್ಸು ಕಂಪೆನಿಗಳಿವೆ. ಇವುಗಳಲ್ಲಿ ಕೆಲವು ಊರಿನವುಗಳು, ಕೆಲವು ಅಥವಾ ಹೆಚ್ಚಿನವುಗಳು ಪರದೇಶದವುಗಳಾಗಿವೆ. ಇವುಗಳಲ್ಲಿ ೯೭ ಹಿಂದೂದೇಶದವುಗಳು, ೩೩ ಇಂಗ್ಲಾಂಡಿನಲ್ಲಿ ಸ್ಥಾಪಿಸಲ್ಪಟ್ಟವುಗಳು, ೨೯ ಬ್ರಿಟಿಷ ಸಾಮ್ರಾಜ್ಯದ ಇತರ ಭಾಗಗಳಲ್ಲಿ ಹುಟ್ಟಿದವುಗಳು, ೫೮ ಯುನೈಟೆಡ್ ಸ್ಟೇಟ್ಸಿನವುಗಳು, ೬೯ ಯುರೋಪಿನ ಇತರ ರಾಜ್ಯದವುಗಳು, ೫ ಜಾವಾ ದ್ವೀಪದವುಗಳು. ಇವುಗಳಲ್ಲಿ ೧೦೩ ಕಂಪೆನಿಗಳು ಜೀವ ವಿಮೆಗಳನ್ನೂ, ೧೫೧ ಬೆಂಕಿ, ನಾವೆಗಳ ವಿಮೆಗಳನ್ನೂ ಉಳಿದವುಗಳು ಇತರ ವಿಮೆ ಕೆಲಸಗಳನ್ನು ಮಾಡುತ್ತಲಿವೆ.

ಹಿಂದೂದೇಶದಲ್ಲಿ ವರ್ಷಕ್ಕೆ ಪ್ರೀಮಿಯಮಿನ ಮೂಲಕ ೬ ಕೋಟಿ ರೂಪಾಯಿಗಳು ಸಿಕ್ಕುತ್ತವೆ. ಇದರಲ್ಲಿ ೪ ಕೋಟಿ ರೂಪಾಯಿ ಪರದೇಶೀಯರ ಕೈಯಲ್ಲಿ ಬೀಳುತ್ತವೆ. ಇದರಲ್ಲಿ ೨ ಕೋಟಿ ರೂಪಾಯಿ ಲಾಭಾಂಶವಾಗಿ ಅವರ ಲಾಭದ ಪಾಲಿಗೆ ಬೀಳುತ್ತದೆ. "ಇಂಡಿಯನ್ ಇನ್ಶೂರೆನ್ಸು ಬುಕ್ ೧೯೨೯" ಎಂಬ ಪುಸ್ತಕದಲ್ಲಿ ಹಿಂದೂ ದೇಶದ ಕಂಪೆನಿಗಳಿಗಿಂತ ಪರದೇಶದ ಕಂಪೆನಿಗಳು ಒಳ್ಳೆಯದವುಗಳಿಂದಲೂ ಬಲವುಳ್ಳವುಗಳೆಂದೂ ಬರೆದಿರುವರು. ಯುರೋಪಿಯನರೂ ಅಮೇರಿಕನರೂ ತಾವು ಭೂಲೋಕದ ಯಾವ ಭಾಗದಲ್ಲಿದ್ದರೂ ಯುರೋಪಿಯನ್ ಮತ್ತು ಅಮೇರಿಕನ್ ಕಂಪೆನಿಗಳಲ್ಲಿ ತಮ್ಮ ವಿಮೆಯನ್ನು ಮಾಡುವರಲ್ಲದೆ, ಪರದೇಶದ ಕಂಪೆನಿಗಳಲ್ಲಿ ಮಾಡುವದಿಲ್ಲ. ಪೋರ್ಡ್‌ನಂಥಾ ಶ್ರೀಮಂತನೂ ತನ್ನ ಕೋಟಿಗಟ್ಲೆ ವಿಮೆಯನ್ನು ಅಮೇರಿಕನ ಕಂಪೆನಿಗಳಲ್ಲಿಯೇ ಮಾಡಿರುವನು. ಇದೇ ರೀತಿಯಲ್ಲಿ ಜಪಾನೀಯರೂ ಇನ್ನು ಇತರ ದೇಶದವರೂ ಮಾಡುತ್ತಾರೆ. ಇಂಡಿಯದ ಜನರು ಮಾತ್ರ ಇಂಡಿಯದ ವಿಮೆಕಂಪೆನಿಗಳನ್ನು ಬಿಟ್ಟು ಪರದೇಶದ ವಿಮೆಕಂಪೆನಿಗಳಲ್ಲಿ ವಿಮೆಮಾಡುವರು. ಹೀಗೆ ಮಾಡುವುದರಿಂದ ದೇಶದ ಮೂಲಧನವು ಪರದೇಶಕ್ಕೆ ಹೋಗಿ ದೇಶವು ಬಡವಾಗುವದು.

* * *

### ಸರ್ ವಿಶ್ವೇಶ್ವರಯ್ಯನವರ ಸ್ವರಾಜ್ಯ ಯೋಜನೆ

ಬರುವ ಹತ್ತು ವರುಷಗಳೊಳಗಾಗಿ ಹಿಂದೂದೇಶಕ್ಕೆ ಇತರ ಡೊಮಿನಿಯನುಗಳಂತೆ ಎಲ್ಲ ರಾಜ್ಯಾಡಳಿತದ ಅಧಿಕಾರಗಳೂ ಸಿಕ್ಕಬೇಕು. ೨ ವರಿಷ್ಠ ಮತ್ತು ಪ್ರಾಂತೀಯ ಸರಕಾರದ ಕಾರ್ಯಕಾರಿ ಮಂಡಳಿಗಳು ಸಂಪೂರ್ಣವಾಗಿ ಪ್ರಜಾಪ್ರತಿನಿಧಿಗಳಿಂದಲೇ ಕೂಡಿತವಾಗಿರಬೇಕು. ೩ ಕೆನಡಾ, ಆಸ್ಟ್ರೇಲಿಯಗಳಂತೆ ಮಧ್ಯವರ್ತಿ ಸರಕಾರ ಮತ್ತು ಪ್ರಾಂತೀಯ ಸರಕಾರಗಳೆಂದು ಎರಡು ಭಾಗಗಳಿರಬೇಕು. ೪ ಮಧ್ಯವರ್ತಿ ಸರಕಾರದ ಕೈಯಲ್ಲಿ ಹಿಂದೂದೇಶದ ಸರ್ವಾಧಿಕಾರವು ಕೊಡಲ್ಪಡಬೇಕು. ಸೈನ್ಯ ಅಥವಾ ಸಂಸ್ಥಾನ ಸಮ್ಬಂಧದ ವಿಷಯಗಳನ್ನು ಬೇರೆ ಮಾಡಿ ಮಧ್ಯವರ್ತಿ ಸರಕಾರವನ್ನು ಬಲಹೀನ ಮಾಡಬಾರದು. ೫ ನ್ಯಾಯವಿಧಾಯಕ ಸಭೆಗಳು ಮಧ್ಯವರ್ತಿ ಸರಕಾರಕ್ಕೆ ಎರಡು ಮಂಡಲಗಳಿರಬೇಕು. ಒಂದರಲ್ಲಿ ೩೦೦, ಇನ್ನೊಂದರಲ್ಲಿ ನೂರು ಸದಸ್ಯರು ಇರಬೇಕು. ಈ ಪ್ರತಿಯೊಂದು ಮಂಡಲದೊಳಗೂ ೧೦೦ಕ್ಕೆ ೨೫ರಂತೆ ಸಂಸ್ಥಾನಿಕರ ಸಲುವಾಗಿ ಸ್ಥಳಗಳನ್ನು ಬೇರೆ ಮಾಡಿಡಬೇಕು. ಸರಕಾರದಿಂದ ನಿಯಮಿಸಲ್ಪಟ್ಟ ಜನರು ಯಾರೂ ಇರಬಾರದು. ೬ ಕಾರ್ಯಕಾರಿ ಮಂಡಲ— ಮಧ್ಯವರ್ತಿ ಸರಕಾರದಲ್ಲಿ ೧೫ ಮಂದಿ ಮಂತ್ರಿಗಳಿರಬೇಕು. ಪ್ರಾಂತಿಕ ಸರಕಾರದಲ್ಲಿ ೩ರಿಂದ ೧೨ರ ವರೆಗೆ ಮಂತ್ರಿಗಳಿರಬಹುದು. ಗವರ್ನರ ಅಥವಾ ಗವರ್ನರ್ ಜನರಲರಿಂದ ಆರಿಸಲ್ಪಟ್ಟ ಯಾವನೂ ಪ್ರಮುಖ ಮಂತ್ರಿ ಮಂಡಲದಲ್ಲಿರತಕ್ಕದು. ಕೌನ್ಸಿಲುಗಳಲ್ಲಿ ಜನರಿಂದ ಆರಿಸಲ್ಪಟ್ಟ ಪ್ರತಿನಿಧಿಗಳಲ್ಲಿ ಬಹು ಸಂಖ್ಯಾತರಾದ ಅನುಯಾಯಿಗಳುಳ್ಳ ಪಂಗಡದ ಮುಂದಾಳನ್ನು ಕರೆದು ಆತನಿಗೆ ಮಂತ್ರಿಮಂಡಲವನ್ನು ರಚಿಸಿಕೊಳ್ಳಲು ಗವರ್ನರ ಅಥವಾ ಗವರ್ನರ ಜನರಲರಿನ್ನು ಕೇಳಿಕೊಳ್ಳಬೇಕು. ಪ್ರಾಂತೀಯ ಮಂಡಲಗಳಲ್ಲಿ ೨೦೦ರಿಂದ ೩೫೦ ಸದಸ್ಯರಿರಬೇಕು. ೬ ಅಥವಾ ೮ ವರ್ಷಗಳಿಗೊಮ್ಮೆ ಚುನಾವಣೆಯಾಗಬೇಕು. ಸ್ವಲ್ಪ ಸಮಯದ ವರೆಗೆ ಸೈನ್ಯ ಮುಂತಾದ ಕೆಲವು ವಿಷಯಗಳು ಸಾಮ್ರಾಜ್ಯ ಸರಕಾರದ ಕೈಯಲ್ಲಿದ್ದರೂ ಕೆಳಗಿನ ಅಧಿಕಾರಗಳೂ ಈಗಲೇ ಇಂಡಿಯಕ್ಕೆ ಸಿಕ್ಕಬೇಕು. ಆರ್ಥಿಕ ಸ್ಥಿತಿಯು ಹೊಸ ಏರ್ಪಾಡಿಗೆ ಸಹ ಕಾರಿಯಾಗಲು ನಮ್ಮ ದೇಶದ ಆರ್ಥಿಕ ಮತ್ತು ಉದ್ಯೋಗ ವಿಷಯಗಳ ಮೇಲೆ ಸಂಪೂರ್ಣ ಅಧಿಕಾರವಿರಬೇಕು. ಇಂಗ್ಲೆಂಡಿನ ಸ್ಟೇಟ ಸೆಕ್ರೆಟರಿಯವರ ಕೈಯಿಂದ ತಪ್ಪಿಸಿ ಹಿಂದೂದೇಶದ ಬೊಕ್ಕಸವು ಸಂಪೂರ್ಣವಾಗಿ ಹಿಂದೀಯರ ವಶಕ್ಕೆ ಬರಬೇಕು. ಆರ್ಥಿಕ ಮತ್ತು ಉದ್ಯೋಗಿಕ ಉನ್ನತಿಯಾಗಲು ಅವಶ್ಯಕವಾದ ಎಲ್ಲಾ ಕಾರ್ಯಗಳನ್ನು ಕೈಕೊಳ್ಳುವ ಅಧಿಕಾರವೂ ಇಂಡಿಯಕ್ಕೆ ಸಿಗಬೇಕು.

* * *

### ಲೋಕಲ್‌ಬೋರ್ಡ್ ಮತ್ತು ಮುನಿಸಿಪಾಲಿಟಿಗಳ ಬಜೆಟಿನ ಕುರಿತು ಹೊಸ ಹುಕುಂ

ಮದರಾಸು ಸಂಸ್ಥಾನದಲ್ಲಿರುವ ಲೋಕಲ್‌ಬೋರ್ಡ ಮತ್ತು ಮುನಿಸಿಪಾಲಿಟಿಗಳು ತಮ್ಮ ಸಂಸ್ಥೆಗಳ ಬಜೆಟುಗಳನ್ನು ಕೆಲವು ವರುಷಗಳ ಹಿಂದಿನ ವರೆಗೆ ಫೆಬ್ರವರಿ ತಿಂಗಳ ಅಖೈರಿಯೊಳಗೆ ಮದರಾಸು ಸರಕಾರಕ್ಕೆ ಕಳುಹಿಸಬೇಕೆಂಬ ಕ್ರಮವಿತ್ತು. ಆದರೆ ಮಾರ್ಚ ಅಖೈರಿಯೊಳಗೆ ಎಲ್ಲಾ ಡಿಸ್ಟ್ರಿಕ್ಟ ಬೋರ್ಡು ಮುನಿಸಿಪಾಲಿಟಿ ಮತ್ತು ಪಂಚಾಯತಿಗಳ ಬಜೆಟುಗಳನ್ನು ಸಂಶೋಧಿಸಲಿಕ್ಕೆ ಸಮಯ ಸಾಕಾಗದಿದ್ದುದರಿಂದ ಜನವರಿ ೧೫ನೇ ತಾರೀಕಿನೊಳಗೆ ಬಜೆಟು ಮದರಾಸು ಸರಕಾರಕ್ಕೆ ಸಿಕ್ಕುವಂತೆ ಕಳುಹಿಸುವಂತೆ ಹೊಸ ಹುಕುಂ ಹೊರಟಿದೆ. ಡಿಸ್ಟ್ರಿಕ್ಟ ತಾಲೂಕು ಬೋರ್ಡುಗಳು ಬಜೆಟುಗಳನ್ನು ಆಸ್ಥಳದಲ್ಲಿ ಕಳುಹಿಸದೆ ಇದ್ದರೆ ಸರಕಾರದವರು ಬಜೆಟುಗಳನ್ನು ಆಯಾ ಬೋರ್ಡು ಮತ್ತು ಮುನಿಸಿಪಾಲಿಟಿಗಳ ಖರ್ಚಿನಿಂದ ಬಜೆಟುಗಳು ಸರಕಾರದವರಿಂದಲೇ ತಯಾರಿಸಲ್ಪಡುವವೆಂದು ಎಲ್ಲಾ ಬೋರ್ಡು ಮತ್ತು ಮುನಿಸಿಪಾಲಿಟಿಗಳನ್ನು ಎಚ್ಚರಿಸಿರುವರು.

* * *

### ಮೈಸೂರು ಕನ್ನಂಬಾಡಿ ಅಣೆಕಟ್ಟಿನಲ್ಲಿರುವ ಶಿಲಾಶಾಸನ

ಮೈಸೂರು ರಾಜ್ಯದಲ್ಲಿ ಕಾವೇರಿ ನದಿಗೆ ಈಗ ಮೈಸೂರು ಸರಕಾರದವರು ಕಟ್ಟಿಸಿರುವ ಕನ್ನಂಬಾಡಿ ಅಣೆಕಟ್ಟಿನ ಹತ್ತಿರ ಟೀಪುಸುಲ್ತಾನನು ಒಂದು ಅಣೆಕಟ್ಟನ್ನು ಕಟ್ಟಿಸಿ ಕಾವೇರಮ್ಮನ ಒಂದು ದೇವಸ್ಥಾನವನ್ನು ಕಟ್ಟಿಸಿದ್ದನು. ಈ ಅಣೆಕಟ್ಟನ್ನು ಕಟ್ಟುವ ಸಮಯ ಬರೆಸಿದ ಶಾಸನವನ್ನು ಈಗಿನ ಹೊಸ ಅಣೆಕಟ್ಟನ್ನು ಕಟ್ಟಿಸುವಾಗ ಅದರ ಅಧೀನದ ಭಾಗದಲ್ಲಿ ಈ ಪಾರಸೀ ಬರಹದ ಶಿಲಾಶಾಸನವನ್ನೂ ಅದರ ಇಂಗ್ಲಿಷ್ ಮತ್ತು ಕನ್ನಡ ಶಾಸನಗಳನ್ನು ಇಟ್ಟಿರುವರು.

ಶಾಸನದ ನಕಲು 1794 ಕ್ರಿ ಶ

ಯಾ ಪತಹ!

ಕರುಣಾಳುವಾದ ಭಗವಂತನ ಹೆಸರಿನಲ್ಲಿ ಸ್ಥಾಪಿತವಾದುದು. ಪೈಗಂಬರ ಮಹಮ್ಮದರ ಜನ್ಮದಿನದಿಂದ ಪ್ರಾರಂಭವಾದ ಚಾಂದ್ರಮಾನ ಶಕೆಯ ೧೨೨೧ನೇಯ ಸಂದ ಷಾದಾಬ್ ಶುಭ ವರ್ಷದ ತಕೀಮಾಸದ ೨೯ನೇ ತೇದಿಯಾದ ಸೋಮವಾರ ಶುಭದಿವಸ ಸೂರ್ಯೋದಯಾತ್ ಪೂರ್ವ ಅರುಣೋದಯ ಕಾಲದಲ್ಲಿ ಶುಕ್ರಗ್ರಹ ಬಲಯುಕ್ತವಾದ ವೃಷಭ ಲಗ್ನದಲ್ಲಿ ಭಗವಂತನ ಸ್ವರೂಪನಾದ ಹಜರತ್ ಟೀಪುಸುಲ್ತಾನರಾದ ನಾವು ಇಷ್ಟಾರ್ಥ ಪ್ರದಾಯಕನಾದ ಭಗವಂತನ ಕೃಪೆಯಿಂದಲೂ ಪವಿತ್ರವಾದ ಖಲಿಫ ಪದವಿಯಲ್ಲಿದ್ದು ಜಗತ್ತಿಗೇ ಸಾರ್ವಭೌಮ ಪ್ರಾಯರಾಗಿದ್ದ ಪೈಗಂಬರ ಮಹಮ್ಮದರ ಪ್ರೇರಣಾರೂಪವಾದ ದಿವ್ಯ ಸಹಾಯದಿಂದಲೂ ರಾಜಧಾನಿ ಶ್ರೀರಂಗಪಟ್ಟಣಕ್ಕೆ ಪಶ್ಚಿಮ ದಿಕ್ಕಿನಲ್ಲಿ ಕಾವೇರಿ ನದಿಗೆ ಅಡ್ಡವಾಗಿ ಚಿರಸ್ಥಾಯಿ ಯಾದ ಅಣೆಕಟ್ಟನ್ನು ಕಟ್ಟಿಸಲು ಶಂಕುಸ್ಥಾಪನೆ ಮಾಡಿದ್ದೇವೆ. ಈ ಕಾರ್ಯವು ಪ್ರಾರಂಭವಾದುದು ನಮ್ಮಿಂದ ಇದು ಪೂರೈಸುವಂತೆ ಅನುಗ್ರಹಿಸುವದು ಭಗವಂತನ ಅಧೀನದಲ್ಲಿದೆ.

ಈ ಕಾರ್ಯವು ಪ್ರಾರಂಭವಾದ ದಿವಸ ಸೂರ್ಯಚಂದ್ರರೂ, ಶುಕ್ರನೂ ಗುರುವೂ ಶುಭಯೋಗ ಉಂಟಾಗುವಂತೆ ಸೇರಿ ಫಲದಾಯಕರಾಗಿದ್ದಾರೆ. ಇಲ್ಲಿ ನಿರ್ಮಿಸಲ್ಪಡುವ ಅಣೆಕಟ್ಟೆಯು ಸರ್ವೇಶ್ವರನಾದ ಭಗವಂತನ ಅನುಗ್ರಹದಿಂದ ಧ್ರುವ ನಕ್ಷತ್ರ ಮಂಡಲದೋಪಾದಿಯಲ್ಲಿ ಶಾಶ್ವತವಾಗಿ ನಿಲ್ಲಲಿ. ಅನ್ನಿಯಾಮಕನಾದ ಭಗವಂತನ ಅನುಗ್ರಹದಿಂದ ದೊರಕಿರುವ ನಮ್ಮ ಸರಕಾರವು ವೆಚ್ಚಮಾಡಿರತಕ್ಕ ಲಕ್ಷೋಪಲಕ್ಷ ಧನವೂ ಸಹಾ ಭಗವತ್ಪಾದ ಸೇವಾರ್ಥವಾಗಿಯೇ ವೆಚ್ಚಮಾಡಲ್ಪಟ್ಟಿದೆ. ಹಿಂದೆ ಕೃಷಿಯಾಗದೆ ಇದ್ದ ಭೂಮಿಯನ್ನು ಯಾವ ಮನುಷ್ಯನು ವ್ಯವಸಾಯ ಮಾಡಿ ಧಾನ್ಯವನ್ನಾಗಲೀ ಇತರ ಬೆಳೆಯನ್ನಾಗಲೀ ಬೆಳೆಯಿಸುತ್ತಾನೋ ಅಂಥಾ ಮನುಷ್ಯನು ಈ ಮೊದಲೇ ಕೃಷಿಯಾಗುತ್ತಿರುವ ಭೂಮಿಗಳ ರೈತರು ನಮ್ಮ ಸರಕಾರಕ್ಕೆ ಕೊಡುವ ತೆರಿಗೆಯ ಮೂರನೇ ಭಾಗದಷ್ಟನ್ನು ಮಾತ್ರ ಕೊಟ್ಟರೆ ಸಾಕು. ಉಳಿದ ಶಾಲುಭಾಗವನ್ನು ಭಗವತ್ ಪ್ರೀತ್ಯರ್ಥವಾಗಿ ಧರ್ಮಕ್ಕೆ ಬಿಟ್ಟಿದೆ. ಹೊಸದಾಗಿ ಭೂಮಿಯನ್ನು ಸಾಗುವಳಿ ಮಾಡುವವರೆಲ್ಲರೂ ಪುತ್ರಪೌತ್ರ ಪಾರಂಪರ್ಯವಾಗಿ ಆಚಂದ್ರಾರ್ಕವಾಗಿ ಅವರವರ ಭೂಸ್ವತ್ತನ್ನು ಅನುಭವಿಸಿಕೊಂಡು ಬರಬಹುದಾಗಿದೆ. ಶಾಶ್ವತವಾಗಿ ಕೊಟ್ಟಿರುವ ಈ ಕೊಡುಗೆಗೆ ಯಾವ ಮನುಷ್ಯನಾದರೂ ವಿಘ್ನಾಚರಣೆ ಮಾಡಿದರೆ ಅಥವಾ ಅದನ್ನು ತಪ್ಪಿಸಿದರೆ ಅಂಥಾ ಕಪ್ರಾಂತ್ಯನು ದಾರುಷ್ಟನಾದ ಸೈತಾನನೋಪಾದಿಯಲ್ಲಿ ಮನುಷ್ಯವರ್ಗಕ್ಕೆ ಶತ್ರುವೆಂದು ಭಾವಿಸಲ್ಪಡುವನು. ಅವನು ಇಲ್ಲಿಯ ರೈತರಿಗೆ ಮಾತ್ರವೇ ಅಲ್ಲದೆ ಅಖಿಲ ಜಗತ್ತಿಗೂ ದ್ರೋಹ ಮಾಡಿದವನೆಂದು ಭಾವಿಸಲ್ಪಡುವನು.

ಈ ಅಣೆಕಟ್ಟನ್ನು ಕಟ್ಟಿಸಿದ ೫ ವರುಷಗಳಲ್ಲಿಯೇ ಟೀಪುಸುಲ್ತಾನನು ಯುದ್ಧದಲ್ಲಿ ಮಡಿದು ಹೋದನು. ಅವನು ಕಟ್ಟಿದ ಅಣೆಕಟ್ಟನ್ನು ಮೈಸೂರು ಮಹಾರಾಜರು ಈಗ ಹೊಸದಾಗಿ ಕಟ್ಟಿಸುತ್ತ ಕೆಲಸಮಾಡಿರುವರು. ಆದರೆ ಶ್ರೀರಂಗಪಟ್ಟಣದ ಕೋಟೆಯೊಳಗೆ ಉತ್ತರ ದಿಕ್ಕಿನಲ್ಲಿ ಶ್ರೀ ರಂಗನಾಥ ಗಂಗಾಧರ ನರಸಿಂಹ ಸ್ವಾಮಿಗಳ ಕೋವಿಲು ಗೋಪುರ ಇರುವವು. ಶ್ರೀ ರಾಮ ಇನ್ನು ದೇವಸ್ಥಾನಗಳಿಗೆ ಎದುರಾಗಿರುವ ಟೀಪುಸುಲ್ತಾನನ ಅರಮನೆಗೆ ಕೇಳುವವರಿಲ್ಲದೆ ಅರಮನೆಯ ಮುಂಭಾಗವನ್ನು ಸಹ ಸಿಕ್ಕಿದವರು ಒಡೆದುಹಾಕಿರುವರು. ಅರಮನೆಯು ೬೦ ಅಡಿ ಉದ್ದ ೪೦ ಅಡಿ ಅಗಲವಿರುವ ಅವನ ಮಹೋನ್ನತದ ಚಾವಡಿಯು ಬಹಳ ಅಂದವಾದ ಮರದ ಕಂಬಗಳನ್ನೂ ದಳ ಕಲಸ ... ತಂದ ಶ್ರೀರಂಗ ಪಟ್ಟಣದ ರೈಲ್ವೇ ಸ್ಟೇಷನ ಕಟ್ಟಿಸಿರುವರು. ಮೈಸೂರು ಮಹಾರಾಜರವರು ಹೈದರಾಲಿ ಟೀಪುಸುಲ್ತಾನರ ನೆನಪಿಗಾಗಿ ಹಳೇ ಅರಮನೆ ಇದ್ದ ಸ್ಥಳದಲ್ಲಿ ಅದೇ ರೀತಿಯ ಒಂದು ಅರಮನೆ ಕಟ್ಟಿಸಿದರೆ ಉತ್ತಮವಿತ್ತು.

---

## ನೋಟೀಸು

ದಕ್ಷಿಣ ಕನ್ನಡಾ ಉಡುಪಿ ಮುನ್ಸೀಫ ಕೋರ್ಟಿನಲ್ಲಿ

O P No 73 1930

1 ನಾರಾಯಣಾಚಾರ್ಯರ (ಮಗ) ರಾಮಕೃಷ್ಣಾಚಾರ್ಯರ ಮಗ—ಇವನ ಕ್ಷೇಮಚಿಂತಕ 2ನೇ ಅರ್ಜಿದಾರ 2 ಯು ಕೇಶವಾಚಾರ್ಯ— ಪಾಂಡುರಂಗಾಚಾರ್ಯರ ಮಗ 3 ಯು ಅನಂತ ಪದ್ಮನಾಭಾಚಾರ್ಯ —2ನೇ ಅರ್ಜಿದಾರನ ಮಗ 4 ಯು ವಾಮನಾಚಾರ್ಯ 5 ಯು ರಾಘವೇಂದ್ರಾಚಾರ್ಯ—ಪಾಂಡುರಂಗಾಚಾರ್ಯರ ಮಗಂದಿರು 1, 2, 3 ನೇ ಅರ್ಜಿದಾರರು ಉಡುಪಿ ಕಸಬೆಯಲ್ಲಿಯೂ 4ನೇ ಅರ್ಜಿದಾರನು ಕಾರ್ಕಳ ಕಸಬೆಯಲ್ಲಿಯೂ ಇರುವವರು— ಅರ್ಜಿದಾರರು

ಈ ಮೂಲಕ ಸರ್ವಜನರಿಗೂ ತಿಳಿಯಪಡಿಸುವದೇನಂದರೆ —

1ನೇ ಅರ್ಜಿದಾರನ ತಂದೆ ವ, 2ನೇ ಅರ್ಜಿದಾರನ ಮಗ, ತಾ 1—11—೧೯೩೦ರಲ್ಲಿ ಉಡುಪಿ ಕಸಬೆಯಲ್ಲಿ ಮೃತಪಟ್ಟ ಯು ರಾಮಕೃಷ್ಣಾಚಾರ್ಯರಿಗೆ Life Assurance ಕಂಪೆನಿಗಳಿಂದಲೂ, The Postal & R M S Mutual Family Benfit ಫಂಡಿನಿಂದಲೂ, ಮಂಗಳೂರು ಪೋಸ್ಟ್‌ಮಾಸ್ಟರರಿಂದಲೂ, ಮಲ್ಪೆ ಪ್ಲೇಗ್ಸ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಿಂದಲೂ, General Provident Fund Posts & Telegrahps, Madras ಇದರಿಂದ ಕೂಡಾ ಒಟ್ಟು ಬರತಕ್ಕ (ಸುಮಾರು) ರೂಪಾಯಿ 1200/ನ್ನು ವಸೂಲು ಮಾಡುವತೆ ಮೈನರ್ 1ನೇ ಅರ್ಜಿದಾರನಿಗೋಸ್ಕರ 2ನೇ ಅರ್ಜಿದಾರನಿಗೆ ಸೆಕ್ಸಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಕೊಟ್ಟ ಸದರಿ ಅರ್ಜಿಯು ಸದರಿ ಕೋರ್ಟಿನಲ್ಲಿ ತಾ 23—1—1931ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪ ಹೇಳುವವರು ಸದರಿ ತಾರೀಕಿನ ದಿವಸ ಸದರಿ ಕೋರ್ಟಿನ ಮುಂದೆ ಹಾಜರಾಗಿ ಮಾಡಿಕೊಳ್ಳಬೇಕಾಗಿ ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸಲಾಗುತ್ತದೆ.

Pleader's Office, Udipi 22—12—1930

**H. Keshava Pai,**
Vakil for Petitioners.

## ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿವಸವೂ ತಾಂಬೂಲದೊಡನೆಯಾಗಲಿ, ಹಾಲಿನೊಡನೆಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

### ವೈಶ್ವಾನರಾಸವ.

( ಕಾಲರಾ, ವಾಂತಿಭೇದಿಗೆ ಸಿದ್ಧೌಷಧ )

ಮಾತ್ರೆ ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ 1—0—0

### ಲಕ್ಷ್ಮೀ ವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿವಾತಜ್ವರಗಳಿಗೂ ಅನ್ವಯಕವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0

### ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ 0—8—0.

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್‌ಆಫೀಸ್ ಸೀತಾರಾಘವ ವೈದ್ಯಶಾಲಾ ಮೈಸೂರು

ಏಜಂಟರು —
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು ಬಿಜಾಗ ಮಾರ್ಕೆ

---

## ಒಂದೇ ತಾಸಿನಲ್ಲಿ

ನವ ಯೌವನವು ಪಡಿಯಲಪೇಕ್ಷೆಯುಳ್ಳ
ಪುರುಷರು

### ರಮಣ ವಿಲಾಸಿನಿ ವಟಿಕಾ

ವನ್ನು ಮಲಗುವದಕ್ಕೆ ಒಂದು ಘಂಟೆಗ ಮುಂಚ
ಒಂದು ಮಾತ್ರೆಯನ್ನು ಸೇವಿಸಿ ಜೀರ್ಣಕ್ಕೆ
ಬರುವನ್ನು ಹಾಲು ಕುಡಿದರೆ ಯಥೇಚ್ಛೆ
ಯಾಗಿ ಸ್ತಂಭನವಾಗುವುದು

16 ಮಾತ್ರೆಗಳಿರುವ ಡಬ್ಬಿ ಕ್ರಯ ರೂ 1—0—0

ಮದನ ಮಂಜರಿ ಫಾರ್ಮೆಸಿ,
1/94 ಚೀನ ಬಜಾರ್ ಮದರಾಸು

## ಅಕಾಲ ವಾರ್ಧಿಕ್ಯವೇ!

ಇದು ನಮ್ಮ ಭೂಲೋಕ ಅಮೃತವಾದ

### ಮದನಮಂಜರಿ ಮಾತ್ರೆಗಳ –

ಸೇವಿಸುವವರನ್ನು ಬಿಟ್ಟು ಪಲಾಯನ ಮಾಡುವುದು
ಯಾಕೆ ಕೇಳಾಡುತ್ತೀರಿ? ಇವನ್ನು ಉಪಯೋಗಿಸಿ ನವ
ಯೌವನವನ್ನು ಪಡೆಯಿರಿ 1 ಡಬ್ಬಿ ಕ್ರಯ
ರೂ 1—0—0

...ಂದ ರೋಗಗಳನ್ನು ಪರಿಹಾರ ಮಾಡಿಕೊಂಡು
ನಿರೋಗಿಗಳಾಗುವುದಕ್ಕೆ
ಕ್ರಯವು ಇಲ್ಲದೆ ಉಚಿತವಾಗಿ ಕೊಡುವ

### ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಬಂದ ರೋಗಗಳನ್ನು ಪರಿಹಾರ ಮಾಡಿಕೊಂಡು ಭವಿಷ್ಯದಲ್ಲಿ ರೋಗಗಳು ಬಾರದಂತೆ ನಿವಾರಣೆ ಮಾಡಿಕೊಳ್ಳಿರಿ

ರಾಜವೈದ್ಯ ನಾರಾಯಣಜಿ ಕೇಶವಜಿ,
1/94 ಚೈನಾ ಬಜಾರು ರೋಡು ಮದರಾಸು

---

ತಿಳಿಯದೇ ಧಾತುಕ್ಷಯವಾಗ ಕ್ಷೀಣ ಶಕ್ತಿಗಳೂ ಆದ ಮನುಷ್ಯರಿಗೆ ಮಧ್ಯ ತಾರುಣ್ಯದಲ್ಲಿಯೇ ನಿಜವಾಗಿ ಸಂಸಾರ ಸುಖವು ದೊರೆಯದೇ ನಿರುತ್ಸಾಹ ನಿರಾಶೆಗಳು ಹುಟ್ಟುತ್ತವೆ ಇಂಥ ಮನುಷ್ಯರ ಧಾತು ಕ್ಷಯದೋಷವು ಹೋಗಿಸಿ, ಪೂರ್ಣ ಪುರುಷತ್ವವನ್ನು ಕೊಡುವಂತಹವು

ವೈದ್ಯರಾಜ ಶ್ರೀ ಕೇಶವಶಾಸ್ತ್ರೀ ಮಿರಜಕರ ಇವರ,

ಕ್ಷಾಂತಿ ವರ್ಧಕ ಆರೋಗ್ಯ ಕೊಡುವ

## ಅಮೃತಸಿಂಧು.

### ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಸವಿ ಹಾಗು ತೀವ್ರ ಗುಣಕೊಡುವ ಔಷಧವು ಮಾಡಲಾಗಿದೆ.

ಇದರ ಉಪಯೋಗದಿಂದ ಸ್ತ್ರೀಗಿಸ ಚರ್ಯೆ, ನಿರ್ಬಲ ಶರೀರ ನಿರುತ್ಸಾಹ ಮನಸ್ಸು ಪೌರುಷತ್ವಹೀನ ದೇಹ, ಅನಿಶ್ಚಿತ ಸ್ವಭಾವ ನಿಸ್ತೇಜತನವನ್ನೂ ಹೋಗಿಸಿ ... ಅಂಜುಬುರುಕತನ, ಅಕಾಲಮೃತ್ಯು, ಸ್ವಪ್ನಾವಸ್ಥೆ ವೀರ್ಯದ ನೀರ, ಆಲಸ್ಯ, ಕಲ್ಲು ಕೈಕಾಲುಗಳುರಿಯೋದು ಉರಿಮೂತ್ರ ... ಇಂದ್ರಿಯಗ ಉರಿ ಪಿತ್ತವಿಕಾರ ಅಗ್ನಿಮಾಂದ್ಯ, ನಿದ್ರಾನಾಶ, ಮಲಾವರೋಧ, ಬೆನ್ನು ನೋಯಿ ಸೋಜ, ಟೊಂಕಸೂಲಿ, ಎಲ್ಲ ತರದ ಮೂತ್ರರೋಗ, ಮೊದಲಾದ ಎಲ್ಲಾ ಬೇನೆಗಳ ನಾಶಿಯಾಗಿ ರಸ ರಕ್ತ, ಅಸ್ಥಿ, ಮಜ್ಜಾವೀರ್ಯ ಮೊದಲಾದ ಏಳು ವೀರ್ಯಗಳ ವೃದ್ಧಿಯಾಗಿ ಇಂದ್ರಿಯ ಇನ್ನ ಅಶಕ್ತತೆಯ ನಷ್ಟವಾಗಿ ದೇಹದಲ್ಲಿ ಶಕ್ತಿಯು ಹುಟ್ಟುತ್ತದೆ. ಇದರಿಂದ ನಿಜವಾದ ಸಂಸಾರ ಸುಖವು ಸಿಕ್ಕುತ್ತದೆ. ಹೆಂಗಸರ ಮುಟ್ಟುಶೂಲಿ ಕೆಂಪು ಹಾಗೂ ಬಿಳಿ ಪ್ರದರ ಮೊದಲಾದ ಸಂತತಿಗೆ ಬಾಧಕವಾದ ಗರ್ಭಾಶಯದ ವೆಲ್ಲ ವಿಕಾರಗಳು ಹೋಗಿ ಪ್ರಕೃತಿಯು ಸುಧಾರಿಸುತ್ತದೆ. ಈ ಅಮೃತಸಿಂಧುವನ್ನು ನಸುಕಿನಲ್ಲಿ ಅರ್ಧ ತೊಲೆ ಮತ್ತು ಸಂಜೆಗೆ ಅರ್ಧ ತೊಲೆ ತೆಕ್ಕೊಂಡ ಮೇಲೆ ಆಕಳ ಅಥವಾ ಎಮ್ಮೆಯ ಹಾಲನ್ನು ೧೦ರಿಂದ ೨೦ ತೊಲೆಯ ವರೆಗೆ ಕೆಕ್ಕೊಳ್ಳಬೇಕು. ಹತ್ತು ದಿನಗಳ ವರೆಗೆ ಸಾಕಾಗುವ ೧ ಬಾಟಲಿಗೆ ರೂ. ೧—೪—೦, ೪ ಬಾಟಲಿಗೆ ರೂ ೪, ೧೨ ಬಾಟಲಿಗೆ ರೂ. ೧೧, ಹಾಗು ೧ ಬಾಟ್ಲಿಯಲ್ಲಿಟ ಅಂಚೆ ಹಾಗು ಕಟ್ಟುಗಳ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೋ
5C Divison ನಿಪ್ಪಾಣಿ ಜಿಲ್ಲಾ, ಬೆಳಗಾಂವಿ.

---

## ಶ್ರೀ ರಾಧಾಕಾಂತ ಪ್ರೆ

ರಥಬೀದಿ, ಮಂಗ್ಳೂರು

ಕನ್ನಡ ಮತ್ತು ಇಂಗ್ಲೀಷಿನಿಂದ ಎಲ್ಲಾ ತರದ ಪ್ರಿಂಟಿಂಗ್ ಕೆಲಸಗಳನ್ನು ನಾಜೂಕಾಗಿ ಮಾಡಿಕೊಡಲ್ಪಡುತ್ತದೆ.

---

### ಕೇವಲ ಕುಸುರಿ ಕ್ರಯ.

ಕ್ರಯ ರೂ 1—4—0 ಮಾತ್ರ ನಿಕ್ಕಲ್ ಕೇಸಿನ ಫೆಸ್ಟಿ ಕ್ಕೆ ಗಡಿಯಾರ, ಖಚಿತ ಸಮಯ ಖಾಳ ಒಳ್ಳೇ ಸಮಯ ತೋರಿಸುವುದು ಸಿಲ್ವರ್ ಪಟ್ಟಿಯೊಂದಿಗೆ ರೂ 3—8—0 ನಂಬ್ರ 2 ರೂ 4—0—0 ನಂಬ್ರ 3 ರೂ 5—0—0 (ಮೂರು ವರುಷದ ಗೆರೆಂಟಿ ಇದೆ)

ಅಂಚೆವೆಚ್ಚ ಆಣೆ 6

ಇಂಗ್ಲೀಷಿನಿಂದ ಕೂಡಲೇ ಬರೆಯಿರಿ

R. C. MUKERJEE,
12/2 Harr Paul Lane
CALCUTTA

---

ಮಾರಾಟಕ್ಕಿವೆ ಮಾರಾಟಕ್ಕಿವೆ!!

ಕಾಫಿ ಪ್ಲಾಂಟರರಿಗೂ ತೋಟದವರಿಗೂ
ಬೇಕಾಗುವಂಥ

### ಚಕ್ ರೋಲ್‌ಗಳು

ವರ್ರು ಸ್ಪ್ಯಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.

ಖಂಡ ತೆಗೆದು ಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಜನರಿಗೆ ಬೇಕಾದಂತೆ ಹಳೇ ಮತ್ತು ಹೊಸ ಪುಸ್ತಕಗಳಿಗೆ ಅಂದವಾದ ಬುಕ್ ಬ್ಯಾಂಡಿಂಗ್ ಕೆಲಸ ಕಡಿಮೆ ದರದಲ್ಲಿ ಮಾಡಲ್ಪಡುತ್ತದೆ

ಕ್ರಯಕ್ಕೂ ಇತರ ಮಾಹಿತಿಗೂ ಈ ಕೆಳಗಣ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು.

---

ಸುಲಭ ಕ್ರಯ ಧಾರಾಳ ಫಲ!

## ದಂತಧಾವನ ಚೂರ್ಣ
## ಟೂತ್ ಪೌಡರ್.

ಎಲ್ಲಾ ವಿಧದ ಹಲ್ಲುನೋವುಗಳನ್ನೂ, ಹಲ್ಲುಗಳ ಸ್ಥಾನಚಲನಗಳನ್ನೂ ವಾಸಿಗೊಳಿಸುವುದು ಹಲ್ಲುಗಳ ಎಡೆಯಿಂದ ಒಸರುವ ರಕ್ತ, ಕೀವು ಮೊದಲಾದವುಗಳನ್ನು ನಿಲ್ಲಿಸುವುದು. ಬಾಯಿಯ ದುರ್ಗಂಧವನ್ನೂ ಹಲ್ಲುಗಳ ಇನ್ನಿತರ ದೋಷಗಳನ್ನೂ ದೂರಮಾಡಿ ಯಮವಾಗಲೂ ಹಲ್ಲುಗಳು ಶುಚಿಯಾಗಿದ್ದು ಸುವಾಸನೆಯಿಂದಿರುವಂತೆಯೂ ಅತ್ಯುಪಯೋಗಕರವಾಗಿರುವುದು ಪೆಕೆಟು ಒಳ್ಳೆ ೦—೩—೦ ಡಜನ ಪೆಕೆಟುಗಳಿಗೆ ೧—೪— ಇವುಗಳಲ್ಲದೆ ಮಿಕ್ಕುಳಿದ ಉತ್ಕೃಷ್ಟವಾದ ಆಯುರ್ವೇದ ಔಷಧಗಳೂ ಮಾರಾಟಕ್ಕೆ ಸಿದ್ಧವಾಗಿದೆ ಆಸವ, ಅರಿಷ್ಟ, ಭಸ್ಮ, ಚೂರ್ಣ ಕಷಾಯ, ಲೇಹ, ತೈಲ ಮೊದಲಾದವುಗಳು ನಮ್ಮಲ್ಲಿ ಆಗಾಗ್ಗೆ ಹೊಸತಾಗಿ ತಯಾರಿಸಲ್ಪಡುವವು. ದೂರದವರು ಮತ್ತು ಹೊಂದೇಶದವರು ಪತ್ರಮೂಲಕ ಕಾಹಿಲೆ ಮತ್ತು ರೋಗಸ್ಥಿತಿಗಳನ್ನು ತಿಳಿಸಿದಲ್ಲಿ ಯುಕ್ತವಾದ ಔಷಧಗಳನ್ನು ಟಪ್ಪಾಲುದ್ವಾರಾ ಕಳುಹಿಸಲಾಗುವುದು. ಹೆಚ್ಚಿನ ಮಾಹಿತಿ ಬಗ್ಗೆ ವತ್ತ ಚಿಕಿತ್ಸೆ ಅನುಭವಗಳ ಕುರಿತು ಕೆಳಗಿನ ವಿಳಾಸಕ್ಕೆ ಬರೆಯಿರಿ,

ಹೆಚ್ಚಿನ ಸಂಗತಿಗಳನ್ನು ತಿಳಿಯಬೇಕಾದವರಿಗೆ ಮಲಯಾಳದಲ್ಲಿ ಮತ್ತು ಕನ್ನಡದಲ್ಲಿ ಔಷಧ ಪಟ್ಟಿ ಇನಾಂ

ಪಿ. ಕರುಣಾಕರ ವೈದ್ಯರ್,
ಆರೋಗ್ಯಾಮೃತ ಔಷಧಾಲಯ
ಕ್ಯಾಂಪ ಬಜಾರ್ ಕಣ್ಣಾನೂರು.

P. KARUNAKARAN VYDIAR.
Arogiamritha Aushadhalaya
Camp Bazaar, Cannanore.

ಇದ್ದವರೆಗೆ ಸೂರತ್ ಸುದ್ದಿಗಾರನ ಪತ್ತೆಹಚ್ಚುವ ನೋಟೀಸನ್ನು ಜ್ಯಾರಿಮಾಡಿರುವರು ಸದರಿ ಸುದ್ದಿಗಾರನು, ಮಿ| ವಲ್ಲಭಭಾಯಿ ಪಟೇಲರ ವಿಚಾರಣೆಯಲ್ಲಿ ಸಾಕ್ಷಿಯಾಗಿ ವಿಚಾರಿಸಲ್ಪಡುವನಂತೆ! ಮಾನ್ಯ ವಲ್ಲಭಭಾಯಿಯವರ ಕುರಿತು ಸರಕಾರವು ತಿಳಿದುಕೊಳ್ಳಲಪೇಕ್ಷಿಸುವ ವಿಷಯವೆಂದರೆ—ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಆಕ್ಟಿನ ಪ್ರಕಾರ, ಕೈದರಿಯುವರು ಅನ್ಯಾಯ ಸಮಿತಿಗಳಾದ ಕಾಂಗ್ರೆಸ್ ಸಂಸ್ಥೆಗಳ ಕಾರ್ಯಕ್ರಮಗಳಿಗೆ ಪ್ರೋತ್ಸಾಹಿಸಿರುವರೋ?—ಎಂದು ಮಾತ್ರವೇ ಆಗಿದೆ!

"ಕ್ರೊನಿಕಲ್" ಪತ್ರಿಕೆಯ ಎಡಿಟರರು, ತನ್ನ ಮೇಲೆ ಜ್ಯಾರಿಮಾಡಲ್ಪಟ್ಟ ನೋಟೀಸಿಗೆ ಉತ್ತರವಾಗಿ, ಪೋಲೀಸ್ ಆಕ್ಟಿನ ೫ನೇ ಪ್ರಕರಣದಂತೆ ಸುದ್ದಿಗಾರನ ಹೆಸರು ಕೊಡಬೇಕೆಂದು ಎಡಿಟರರನ್ನಪೇಕ್ಷಿಸಲು, ಪೋಲೀಸರಿಗೆ ಯಾವ ಹಕ್ಕು ಬಾಧ್ಯತೆಯೂ ಇರುವುದಿಲ್ಲವೆಂದು ಹೇಳಿದರು ಮತ್ತು ಎಡಿಟರರ ಕೂಡೆ ಸುದ್ದಿಗಾರನ ಪತ್ತೆ, ಹಾಗೂ ಪತ್ರಿಕಾ ಸಮಾಚಾರಗಳ ಸೂಕ್ಷ್ಮ ವಿಚಾರವನ್ನು ತಿಳಿಯಗೊಡುವಂತೆ ಕೇಳಿಕೊಳ್ಳುವ ವಿಷಯವು, ಎಡಿಟರರ ಗೌರವ ನಿಶಾನಿಯನ್ನು ಒತ್ತೆಗಡಂತೆಯೇ ಆಗುವುದೆಂದು ಖಂಡಿತವಾಗಿ ಸೂಚಿಸಿರುವರು.

ಮುಂಬಾಯಿ ನಗರದ ಜೆನರಲ ? ಎಂಬಲ್ಲಿ ಸತ್ಯಾಗ್ರಹ ಭಾಗಿಗಳಾಗಿದ್ದ ಕೇಶವ ಗಣೇಶ ಗುಪ್ತ ಮೊದಲಾದ ಶ್ರೀಮಂತ ಸತ್ಯಾಗ್ರಹ ಮುಖಂಡರನ್ನು ದಸ್ತಗಿರಿ ಮಾಡಿರುವರು. ಇವರ ಪರವಾಗಿ ಜಾಮೀನು ಎರ್ಪಡು ಕೋರ್ಟಿಗೆ ಹಾಜರು ಮಾಡಲ್ಪಟ್ಟಿರುವುದು

ಬಿಹಾರ ಪ್ರಾಂತ್ಯದ 'ಮುಲ್ಕಾನಾ' ಎಂಬಲ್ಲಿಂದ ... ಎಮ್ ಶಾಲ ಎಮ್ ಎಲ್ ಸಿ, ಇವರು ತಂತಿ ಮುಖೇನ ತಿಳಿಯಪಡಿಸಿದ ಸಮಾಚಾರದಂತೆ, ಅಲ್ಲಿ ? ಚಳವಳವು ಭಯಂಕರ ಸ್ವರೂಪವನ್ನು ತಾಳಿರುವದೆಂದು ತಿಳಿದು ಬರುತ್ತದೆ ಮಾರ್ವಾಡಿ ಮೊದಲಾದ ಹಣವಂತರಿಗೆ ಸಂಬಂಧಪಟ್ಟ ಆ ಊರಿನ ಬೆಳಗಳನ್ನು ನೆರೆ ಗ್ರಾಮಗಳ ನಿವಾಸಿಗಳೇ ಲೂಟಮಾಡಿ ನಾಶಗೊಳಿಸಿರುವರು. ಗಲಮುಷ್ಠರ ತಂಡ ತಂಡವಾಗಿ ಎಂದು ನಂಬಪಡಿ ಸಲುಪಕ್ರಮಿಸಿದರಂತೆ! ಮತ್ತು ದೊಡ್ಡ ದೊಡ್ಡ ಸಾಹುಕಾರರನ್ನೂ ಅವರ ನೌಕರರನ್ನೂ ಚನ್ನಾಗಿ ಗವಳಿ ಹತ್ತಿದರಂತೆ ಆ ಕಾರಣದಿಂದ ಅನೇಕರು ಗೃಹಮನೆಗಳನ್ನು ಕುಟುಂಬವನ್ನೂ ಬಿಟ್ಟು ಅನ್ಯ ಊರುಗಳಿಗೆ ತೆರಳುವರೆಂದು ವರ್ತಿ

## ರಾಜಮಹೇಂದ್ರಿಯಲ್ಲಿ

ಮಿ| ಮೊತೆ ನಾರಾಯಣರಾವ್ ಎಂಬವರ ಮೋಟಾರ್ ಕಾರ ಡ್ರಾಯವರನು ಪೋಲೀಸು ಸುಪರಿಂಟೆಂಡೆಂಟ ಮೇಲೆ ತನ್ನನ್ನು ಹೊಡೆದರೆಂದೂ, ತನ್ನ ಗಾಂಧಿ ಟೊಪ್ಪಿಯನ್ನು ಕದ್ದರೆಂದೂ ಮಾಡಿದ ದಾವೆಯು ತನಿಗೆ ತೆಗೆಯಿತು ಪೋಲೀಸ್ ಸುಪರಿಂಟೆಂಡೆಂಟರು ಕೋರ್ಟಿನಲ್ಲಿ ಹಾಜರಿದ್ದು ಆದರೆ ಮೊಕದಮ್ಮೆಯನ್ನು ಹೈಕೋರ್ಟಿಗೆ ಟ್ರಾನ್ಸಫರ್ ಮಾಡಬೇಕೆಂದು ಕಕ್ಷಿದಾರನ ಅಪೇಕ್ಷೆಪಟ್ಟುದರಿಂದ ತನಿಖೆಯನ್ನು ಮುಂದರಿಸಲಾಯಿತು

## ನವಾಝಿಲ್ಲಿಯಲ್ಲಿ

ಸಮಾಚಾರದಿಂದ ತಿಳಿದು ಬಂದಂತೆ ವ್ಯವಸಾಯ ಪ್ರಭುಗಳಾದ ಲೊರ್ಡ್ ಇರ್ವಿನರ ಪ್ರೆಸ್ ಆರ್ಡಿನೆನ್ಸನ್ನು ಪುನರುದ್ಧಾರ ಮಾಡುವರೆಂದು ತಿಳಿದು ಬರುತ್ತದೆ

## ಅಲ್ಲಹಾಬಾದದಲ್ಲಿ—

ಪಂಡಿತ ಮದನಮೋಹನ ಮಾಲವೀಯರ ಸಂಬಂಧಿಕನಾದ ಹಾಗೂ ದೊಡ್ಡ ದೊಡ್ಡ ಸರಕಾರೀ ಹುದ್ದೆದಾರರ ಸಂಬಂಧಿಕನಾದ ಪಂಡಿತ ಕಮಲ ನಾರಾಯಣ ಮಾಲವೀಯರೆಂಬ ೧೭ ವರ್ಷ ಪ್ರಾಯದ ಗವರ್ನಮೆಂಟ್ ಇಂಟರ್‌ಮಿಡಿಯಟ್ ಕಾಲೇಜಿನ ವಿದ್ಯಾರ್ಥಿಯನ್ನು ಪುರುಷೋತ್ತಮದಾಸ್ ಪಾರ್ಕಿನಲ್ಲಿ ರಾಜದ್ರೋಹಕರ ಭಾಷಣಕೊಟ್ಟದ್ದಕ್ಕಾಗಿ ದಸ್ತಗಿರಿಮಾಡಿ ವಿಚಾರಣೆ ನಡೆಸಲ್ಪಡುತ್ತಿರುವದು—ತೀರ್ಪನ್ನು ಓದಿಹೇಳಲಾಗಲಿಲ್ಲ

## ಮದರಾಸಿನಲ್ಲಿ—

ಸತ್ಯಾಗ್ರಹವು ಪೂರ್ಣ ಶಾಂತವಾಗಿರುವುದಿಲ್ಲ ಮಹಿಳಾ ಲೀಗಿನವರು ಪ್ರತಿ ನಿತ್ಯವೂ ಮುಂಜಾನೆ ೬ ಘಂಟೆ ಹೊತ್ತಿಗೆ ಸರಿಯಾಗಿ, ಮೈಲಾಪುರದ ಸಮೀಪವಿರುವ 'ಅಮ್ಮಾಹೌಸ್' ಎಂಬಲ್ಲಿ ಸಭೆ ಸೇರಿ ಸತ್ಯಾಗ್ರಹವನ್ನು ಮುಂದರಿಸುವ ವಿಷಯದಲ್ಲಿ ಹಲ ಕೆಲವು ಠರಾವುಗಳನ್ನು ಪಾಸುಮಾಡುತ್ತಿರುವರು. ಮಾತ್ರವಲ್ಲದೆ—ಸಭಾಸದಸ್ಯರೆಲ್ಲರೂ, ಸಭೆಯು ಕೊನೆಗೊಂಡ ಮೇಲೆ ಮೆರವಣಿಗೆಯ ರೂಪದಿಂದ, ನಗರ ಬೀದಿಗಳಲ್ಲಿ ರಾಷ್ಟ್ರಗೀತೆಗಳನ್ನು ಹಾಡುತ್ತ ಸತ್ಯಾಗ್ರಹವನ್ನು ಸಾರುತ್ತಿರುವರು ಕೆಲವು ದಿನಗಳಿಂದ ಪೋಲೀಸರು ಮೆರವಣಿಗೆಗಳನು ಹಿಂಬಾಲಿಸಹತ್ತಿರುವರೆಂದು ತಿಳಿದು ಬರುತ್ತದೆ ಮೆರವಣಿಗೆಯಲ್ಲಿ ಮುಖ್ಯ ಭಾಗ ವಹಿಸುವವರೆಂದರೆ—ಸ್ವದೇಶಿ ಮಹಿಳಾ ಲೀಗಿಗೆ ಸೇರಿದ ವೀರ ಮಹಿಳೆಯರು, ಚಿಕ್ಕ ಹುಡುಗರು ಮತ್ತು ಹುಡುಗಿಯರೇ ಆಗಿರುವರು

## ಅಲ್ಲಹಾಬಾದದ—

ಸಮಾಚಾರದಿಂದ ತಿಳಿದು ಬರುವಂತೆ ಇಂಡಿಯಾ ಸರಕಾರವು, ಪಂಡಿತ ಮದನಮೋಹನ ಮಾಲವೀಯರನ್ನು ಬಿಡುಗಡೆ ಹೊಂದಿಸುವರೆಂದು. ವರ್ತಮಾನ ಪಂಡಿತಜೀಯವರು ತುಸು ಆರೋಗ್ಯವಂತರಾಗಿದ್ದರೂ ಕೂಡ ದೇಹವು ಬಹಳ ಕ್ಷೀಣವಾಗಿರುವದಂತೆ!

## ಕಲ್ಕತ್ತದ —

ಡೈಮಂಡ್ ಹಾರ್ಬರ್ ಸಬ್ ಡಿವಿಜನಿನಲ್ಲಿ ... ಅಧಿಕಾರಿಗಳನ್ನು ಧಾಳಿಮಾಡಿದ ಪ್ರಸಂಗವು ಪ್ರಶಂಸನೀಯವಾಗಿರುವುದು. ಇಂತಹ ಅನ್ಯಾಯ ವರ್ತನೆಗಳಲ್ಲಿ ಭಾಗವಹಿಸಿದರೆಂಬ ಅಪಾದನೆಯ ಮೇಲೆ ೧೬ ಮಂದಿಯನ್ನು ದಸ್ತಗಿರಿಮಾಡಿ ವಿಚಾರಣ ನಡೆಸಲಾಯಿತು ಅಲಿಪುರದ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ೪ ಮಂದಿಯನ್ನು ಆರಾರು ತಿಂಗಳ ಕಠಿಣ ಸಜೆಗೆ ಗುರಿಪಡಿಸಿದರು.

೩೦ ಎಪ್ರಿಲ್ ತಿಂಗಳಲ್ಲಿ ಡೈಮಂಡ್ ಹಾರ್ಬರಿಗೆ ಸಮೀಪದಲ್ಲಿರುವ ನೀಲ ಎಂಬ ಸ್ಥಳವು ಉಪ್ಪಿನ ಸತ್ಯಾಗ್ರಹದ ಮೂಲಸ್ಥಾನವಾಗಿತ್ತು ಆ ಬಗ್ಗೆ ಆ ಸ್ಥಳದ ಸುತ್ತು ಮುತ್ತ ಇದ್ದ ಕೆಲವು ಗ್ರಾಮಗಳ ಮೇಲೆ ೧೪ನೇ ಪ್ರಕರಣವು ಜಾರಿ ಮಾಡಲ್ಪಟ್ಟಿದ್ದಿತು. ೭೫ ಮಂದಿ ಹೆಂಗಸರು ಸ್ವದೇಶೀ ಉಪ್ಪನ್ನು ತಯ್ಯಾರಿಗೊಳಿಸಿದರು. ಅನೇಕ ಸ್ವಯಂಸೇವಕರು ... ನೆರೆದಿದ್ದರು ಎಪ್ರಿಲ್ ೨೮ನೇ ತಾರೀಕಿನಲ್ಲಿ ಉಪ್ಪಿನ ಸತ್ಯಾಗ್ರಹಿಗಳು ಪೋಲೀಸರಿಂದ ತಡೆಯಲ್ಪಟ್ಟು ನೀಲಾ ... ದೊಡ್ಡ ಗಲಭೆಯು ನಡೆಯಿತು ಪರಿಣಾಮವಾಗಿ ಕೆಲವು ... ಇನ್‌ಸ್ಪೆಕ್ಟರರಿಗೂ, ... ಮಂದಿ ಕಾನ್‌ಸ್ಟೇಬಲರಿಗೂ ಬಲವಾದ ಗಾಯಗಳಾದವು ಮರುದಿನ ೩೦೦ ಮಂದಿ ಒಂದೇ ಸ್ಥಳದಲ್ಲಿ ಮದ್ದು ಕೂಂಬೆಗಳನ್ನೂ ... ಯನ್ನು ಹಿಡಿದವರಾಗಿ ಗುಂಪು ಕೂಡಿದರು ಈ ವರ್ತಮಾನವನ್ನರಿತ ಸಬ್ ಡಿವಿಜನಲ ಸುಪರಿಂಟೆಂಡೆಂಟರು ... ಮಂದಿ ಆಯುಧಪಾಣಿಗಳಾದ ಪೋಲೀಸ್ ಕಾನ್‌ಸ್ಟೇಬಲರೊಡನೆ ಆ ಸ್ಥಳಕ್ಕೆ ಬಂದು ಜನರನ್ನು ... ಗಳಿಂದ ಚದರಿಸಲಾರಂಭಿಸಿದರು ಕೆಲ ಮಂದಿ ಪೋಲೀಸರಿಗೆ ... ಹೊಡೆತದಿಂದ ಬಲವಾದ ... ಆಗಿರುವದಾಗಿ ತಿಳಿದುಬರುತ್ತದೆ ಆ ಕೂಡಲೇ ಪೋಲೀಸರು ಗುಂಡು ಹಾರಿಸಿದರು ಪರಿಣಾಮವಾಗಿ ೧೬ ವರ್ಷದ ಯುವಕನೊಬ್ಬನು ಮಡಿದನು ಹಲವರು ಗುಂಡಿನ ಹೊಡೆತದಿಂದ ಗಾಯಹೊಂದಿರುವರು

## ರಾಜಮಹೇಂದ್ರಿಯಲ್ಲಿ —

... ರಾಜಗೋಪಾಲ ... ನಾಯ್ಡು ... ಎಂಬವರು ಮುಂದಾಳುಗಳಾಗಿ ಸಭ್ಯರೀತಿಯಿಂದ ಬಹಿಷ್ಕಾರದಿಂದ ಉಪಯೋಗಿಸಿದರು ಸುಮಾರು ೧೦೦೦ ಮಂದಿ ಪ್ರೇಕ್ಷಕರು ... ಅನೇಕ ಹೆಂಗಸರೂ ಇದ್ದರು ... ಪೋಲಿಸ್ ಇತ್ಯಾದಿ ಗಾನದಿಂದಲೂ ... ವಿನೋದಕರ ... ದಲೂ ಸಂತೋಷಪಡುತ್ತಿದ್ದರು ಪೂರ್ವಾಹ್ನ ಘಂಟೆ ೧೧ ಒಂದಕ್ಕೆ ಸರಿಯಾಗಿ ಉತ್ಸವವು ಕೊನೆಗಂಡಿತು

ಸುಮಾರು ೨ ಘಂಟೆ ಹೊತ್ತಿಗೆ ಜಿಲ್ಲಾ ಪೋಲೀಸ' ಸುಪರಿಂಟೆಂಡೆಂಟರು ಹಲವು ಮಂದಿ ಆಯುಧಪಾಣಿಗಳಾದ ಪೋಲೀಸರೊಡನೆ ಆ ಸ್ಥಳವನ್ನು ಬಂದು ಸೇರಿ, ನೆರೆದಿದ್ದ ಜನರನ್ನು ಚದರುವಂತೆ ಅಪ್ಪಣೆಕೊಟ್ಟರು ಆದರೆ ಸಭಿಕರು ಸತ್ಯಾಗ್ರಹಕ್ಕೆ ಸಂಬಂಧಿಸಿದ ಸಭೆಯಲ್ಲವೆಂದು ಪ್ರತಿವಾದಿಸಿದರು ಆ ಕೂಡಲೇ ರಿಸರ್ವ ಪೋಲೀಸರು ಸಭಿಕರ ಮೇಲೆ ಲಾಠಿ ಚಾರ್ಜು ಮಾಡಿ ಕೆಲವರನ್ನು ಗಾಯಪಡಿಸಿದರು ಕೆಲವರ ತಲೆಗೆ ಬಲವಾದ ಗಾಯಗಳು, ಕಾಲುಗಳ ಜುಮುಗಳು ಸಹಿಸಲ ಸಾಧ್ಯವಾಗಿರುವಂತೆ! ಈ ವೇಳೆಯಲ್ಲಿ, ಊರೊಳಗೆ ೧೪ನೇ ಪ್ರಕರಣವೂ ಕೂಡ ಜಾರಿಯಲ್ಲಿಲ್ಲದುದರಿಂದ, ಮೇಲೆ ಹೇಳಲ್ಪಟ್ಟ ಅಕಸ್ಮಾತ್ ಲಾಠಿ ಚಾರ್ಜಿನ ಕುರಿತು ಜನರೆಲ್ಲರೂ ವಿಸ್ಮಯ ಹೊಂದಿರುವರೆಂದು ತಿಳಿದು ಬರುತ್ತದೆ

ತಾರೀಕು ೨೩.

## ಮೀರತ್

ಜೈಲುಗಳಲ್ಲಿ ರಾಜಕೀಯ ಕೈದಿಗಳ ಆರೈಕೆಯು ತೀರ ಅಸಮಾಧಾನವಾಗಿರುವದು "ಬಿ" ಕ್ಲಾಸ್ ಜೈಲು ವಾಸಿಗಳಿಗೆ, ಹುರಿಹಗ್ಗ ಮಾಡುವ ಕೆಲಸವನ್ನು ಕೊಟ್ಟಿರುವರಂತೆ!

## ರಾಜಕೋಟೆಯಲ್ಲಿ

ಸರಕಾರವು ಹೊಸ ಹೊಸ ಕಾನೂನನ್ನು ಜ್ಯಾರಿಗೆ ತಂದಿರುವದು ಸತ್ಯಾಗ್ರಹದಲ್ಲಿ ಅಪಾದಿತನೆಂದು ಎಣಿಸಲ್ಪಟ್ಟವನನ್ನು, ಬ್ರಿಟಿಷ್ ಇಂಡಿಯದಿಂದ ಹೊರ ಹೊರಡಿಸುವದರ ಬದಲಾಗಿ, ಆತನೊಡನೆ ರೂ ೨೦೦ ಜಾಮೀನು ಕೇಳಬಹುದಂತೆ! ಜಾಮೀನು ತೆರಲು ತಪ್ಪಿದ್ದಲ್ಲಿ ೬ ತಿಂಗಳ ಶಿಕ್ಷೆ, ಶಿಕ್ಷೆಯ ಅವಧಿಯ ಮುಗಿದ ನಂತ್ರ, ಮತ್ತೂ ಕೂಡ, ಆತನಿಗೆ ವಿಧಿಸಲ್ಪಟ್ಟ ಜಾಮೀನು ಹಣವನ್ನು ಸರಕಾರವು ಕೇಳಬಹುದಂತೆ! ಕೂಡಲು ನಿರಾಕರಿಸಿದ್ದಲ್ಲಿ ಮತ್ತೂ ಶಿಕ್ಷೆ, ಮತ್ತೂ ಜುಲ್ಮಾನೆ ಅಂತೂ ಸತ್ಯಾಗ್ರಹಕ್ಕೆ ಕೈ ಹಚ್ಚಿರುವನೆಂದು ತಿಳಿದರೆ ಸಾಕು—ಆತನ ಶಿಕ್ಷೆಯೂ ಜುಲ್ಮಾನೆಯೂ ಮುಗಿಯಿತೆಂದು ಹೇಳಲು ಕಷ್ಟ ಸಾಧ್ಯ

## ಇಂಗ್ಲಾಂಡ್ ದೇಶವು ಇಂಡಿಯವನ್ನು ಸ್ವತಂತ್ರವನ್ನಾಗಿ ಮಾಡುವದಿಲ್ಲ

... ಮಿ| ಡೋಲೆಂಟರೆಂಬ ಇಂಗ್ಲಿಷ್ ಮುತ್ಸದ್ದಿಯೊಬ್ಬರು ಹೇಳಿದ್ದು ಇವರು ಹಿಂದುಸ್ಥಾನದ ಸ್ಥಿತಿಗತಿಗಳನ್ನು ಚೆನ್ನಾಗಿ ಅರಿತವರಾಗಿ Th ... for India ಎಂಬ ... ಪುಸ್ತಕವನ್ನು ಬರೆದಿರುವರು ಅವರು ಭಾರತೀಯರು ... ತನವನ್ನು ಪ್ರಸ್ತುತದ ಬ್ರಿಟಿಷ್ ಸರಕಾರದಂತಹ ಸರಕಾರದಿಂದ ಎಂದೂ ನೀಗಿಸಲಸಾಧ್ಯವೆಂದು ಖಂಡಿತವಾಗಿ ಹೇಳಿರುವರು ಮಾತ್ರವಲ್ಲದೆ ಬ್ರಿಟಿಷರ ವಶ ಪಟ್ಟ ಇಂಡಿಯಾ ಯಜಮಾನತ್ವವು ಹಾಗೂ ಅವರು ಭಾರತದ ಮೇಲೆ ತೋರಿಸ ದ ಧೋರಣೆಯು ಕ್ಷಮಾಪಣೆಗೆ ಯೋಗ್ಯವಲ್ಲದೆ ನ್ಯಾಯಾನ್ಯಾಯ ಪರಿಶೋಧನೆಗೆ ತೀರ ಅಪಾಯಕರ ಹಾಗೂ ದೊಡ್ಡದೊಂದು ಕೊಲೆಪಾತಕವೆಂದೂ ಹೇಳಬಹುದಂತೆ

ಆದರೆ ಇಂಡಿಯವನ್ನಾಳುವ ಪೂರ್ವ ಮಹಮ್ಮದೀ ಅರಸರೆನ್ನಿಸಿಕೊಂಡ ... ಭಾರತೀಯರ ಮೇಲೆ ಮಂದ ತೆರಿಗೆಯೇ ಮೊದಲಾದ ಭಯಂಕರ ತೆರಿಗೆಗಳನ್ನು ಹೇರಿಸಿದ್ದರೂ ಕೂಡ, ಆ ಬಗೆಯಿಂದ ಒಟ್ಟು ಗೂಡಿಸಿದ ಹಣವನ್ನು ಇಂಡಿಯದಲ್ಲೇ ವ್ಯಯಮಾಡಿ, ಇಂಡಿಯದ ಕೈಗಾರಿಕೆಗಳನ್ನೂ ಕಲಾಕೌಶಲ್ಯಗಳನ್ನೂ ವೃದ್ಧಿಗೊಳಿಸುವದಕ್ಕಾಗಿ ವ್ಯಯಮಾಡಿದರಲ್ಲದೆ, ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸಲಿಲ್ಲ ಬ್ರಿಟಿಷ್ ಸರಕಾರವು ಇದೇ ಸೂತ್ರವನ್ನವಲಂಬಿಸಿದ್ದರೆ ಭಾರತ ಜನಾಂಗವು ಇಂದಿನ ಸುಧಾರಣ ಹೊಂದಿದ ಜನಾಂಗಗಳ ನಡುವೆ ಬಹಳ ಶೋಭಾಯಮಾನವಾಗಿ ರಾಜಿಸುತ್ತಿದ್ದಿತ —ಎಂಬುದರಲ್ಲಿ ಸಂದೇಹವಿಲ್ಲ ಆದರೆ ಇಂದಿನ ಭಾರತ ಜನಾಂಗವನ್ನು ಸೂರೆ ಮಾಡುವ ಬ್ರಿಟಿಷ ಸಾಧನೆಗಳು ಬೇರೆ ಇರುತ್ತವೆ

ಈ ಕಾರಣದಿಂದ ಬ್ರಿಟಿಷರ ಇಂಡಿಯವನ್ನೆಂದೂ ಸ್ವಾತಂತ್ರ್ಯದ ಹಾದಿ ತರುವಂತಿಲ್ಲ ಆದ ... ಇಂಡಿಯದಲ್ಲಿ ರಕ್ತ ಪಾತವಾಗುವಂತ ಕರ್ಮ ಸಮ್ಮತಿ ... ಈ ವಿಷಯವನ್ನರಿತ ಲಾರ್ಡ ಯಾವಾತನು ಮೌನ ತಾಳಿರುವನೋ ಆತನು ಒಬ್ಬ ಪ್ರಕೃತ ಇಂಗ್ಲಂಡ್, ... ಇನ್ನಾವ ದೇಶದ ವ್ಯಕ್ತಿಯಾಗಲಿ ಆತನ ಭಾರತ ಪರಿಸ್ಥಿತಿಗಳನ್ನು ಪರ್ಯಾಲೋಚಿಸಿ ಮೌನ ತಾಳಿದರೆ ಆತನಿಗೆ ಸ್ವದೇಶಾಭಿಮಾನಿ ಎಂಬ ಹೆಸರಿಗೆ ... ಯೋಗ್ಯತೆಯಿರುವದು— ಎಂದರು

## ವಿದೇಶೀ ವಸ್ತ್ರ ಬಹಿಷ್ಕಾರದ ಕುರಿತು ಮುಂಬಾಯಿ ಜನತೆಯ ನಿರ್ಧಾರ

ದೇಶೀ ವಸ್ತ್ರ ಬಹಿಷ್ಕಾರ ಚಳವಳವು ಮುಂಬಾಯಿಯಲ್ಲಿ ಬಹಳ ಯಶಸ್ವಿಯಾಗಿ ನಡೆಯುತ್ತಿದೆ ಈ ಚಳವನ್ನು ಇನ್ನಷ್ಟು ಪಸರಿಸಬೇಕೆಂಬ ಪ್ರಯತ್ನಗಳು ನಡೆಯುತ್ತಿರುವವು ಪ್ರತಿಯೊಂದು ಮನೆಯವರೂ ವಿದೇಶೀಯ ಬಟ್ಟೆಗಳಿಗೆ ಬಹಿಷ್ಕಾರ ಹಾಕಬೇಕೆಂಬುದೇ ಮುಂಬಾಯಿ ನಗರದ ಜನರ ಮುಖ್ಯ ಧ್ಯೇಯವು ಸ್ವಾರ್ಥತ್ಯಾಗಿಯಾಗಿ ರಾಷ್ಟ್ರ ಸೇವೆಗೋಸುಗ ಪ್ರಾಣದಾನಮಾಡಿದ ಶ್ರೀಮನ್ ಬಾಬುಗೆನು ಎಂಬ ಸ್ವಯಂಸೇವಕನ ಮರಣವು ಬಹಿಷ್ಕಾರ ಚಳವಳವನ್ನು ಇನ್ನಷ್ಟು ಬಲವಂತವನ್ನಾಗಿ ಮಾಡಿತು ಆತನ ಆದರ್ಶ ಪ್ರಾಯವಾದ ಸ್ವಾರ್ಥತ್ಯಾಗ ಸ್ಫೂರ್ತಿದಾಯಕವಾದ ರಾಷ್ಟ್ರಪ್ರೇಮ—ಮೊದಲಾದ ಸದ್ಗುಣಗಳನ್ನು ಮುಂಬಾಯಿ ಜನತೆಯು ಇಂದಿಗೂ ಸ್ಮರಿಸುತ್ತಿರುವದು

[illegible] [illegible]

# ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

[illegible]

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

ಪೋಸ್ಟ್ ಕಾಂಞಂಗಾಡ (ದ. ಕ.)

ನೋಡಿದರೆ ಬಿಡದಿರುವ ಕಾದಂಬರಿಗಳು

[illegible]




Liveliness zip pep yo[illegible] get that all the time from an Exide because it is bui[illegible]t into it

Care and thought in [illegible] design [illegible] discrimination in the se[illegible]ction of ma[illegible]erial and the experience of thousands of users have made

**Exide**

**THE LONG-LIFE BATTERY**

The C. P. C. Co. Ltd.
MANGALORE

**Batliwalla's Preparations Cover All Your Needs.**

A NAME THAT MERIT HAS MADE FAMOUS.

ಳಳ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

# ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತವೆ.

[illegible]

LIBERAL DISCOUNT TO TRADE

[illegible] -CAWASHAPUR, BOMBAY

ಎಲ್ಲಾ ಕಡೆಗಳಲಿ [illegible] ಡಾ. ಯಚ್ ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

[illegible] Sayani Road P O Cadell Road, Bombay No 14

# ಅರ್ಕ

## ಸರ್ವಜ್ವರನಿವಾರಿಣಿ

## KESARI KUTEERAM

EGMORE, MADRAS.

## The Kanara Watch House Udipi, S. K.



ಗ್ಯಾರಂಟಿಯುಳ್ಳ ವಾಚುಗಳು! [illegible]

## ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ [illegible] ವಾಚುಗಳೂ, ಕ್ಲಾಕುಗಳೂ, ಟೈಮ್‌ಪೀಸುಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೊಮೆಕ್ಸ್ ದೀಪಗಳೂ ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

**ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.**

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸ, ಫೊನೋಗ್ರಾಫು ಮತ್ತು ಪೆಟ್ರೊಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು. ರಿಪೇರಿ ಮಾಡುವಾಗ ನೆಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

**ಒಮ್ಮೆ ಪರೀಕ್ಷಿಸಿ ನೋಡಿರಿ!**

[illegible]

ಮ್ಯಾನೇಜರ್,

ದಿ. ಕೆನರಾ ವಾಚ್ ಹೌಸ್, ಉಡುಪಿ, ದ. ಕ.

[illegible]

## ಕರ್ನಾಟಕದ ಪ್ರಾಚೀನ ಇತಿಹಾಸ.

### ಚಂದ್ರಗುಪ್ತ ವಿಕ್ರಮಾದಿತ್ಯ.

ಹಿಂದುಗಳಿಗೆ ಪವಿತ್ರವಾಗಿರುವ ಪುರಾಣಾದಿಗಳಲ್ಲಿಯೂ ಕಾವ್ಯಪ್ರೇಮಿಗಳಿಗೆ ಪ್ರಿಯವಾಗಿರುವ ನಾಟಕಾದಿ ಕಥೆಗಳಲ್ಲಿಯೂ ಕಥಾನಾಯಕನಾಗಿ ಅನೇಕ ವಿಧವಾಗಿ ಕೊಂಡಾಡಲ್ಪಟ್ಟಿರುವ ಅರಸನೆಂದರೆ ಚಂದ್ರಗುಪ್ತ ವಿಕ್ರಮಾದಿತ್ಯನು. ಈತನ ದಿಗ್ವಿಜಯ, ಉತ್ಕೃಷ್ಟತರರಾಜ್ಯಭಾರಕ್ರಮ, ಧಾರ್ಮಿಕ ಜೀವನ, ಸಾಹಿತ್ಯಕಲಾಪ್ರೇಮ ಮೊದಲಾದುವುಗಳ ವಿಷಯದಲ್ಲಿ ಸಂಪೂರ್ಣವಾದ ಮತ್ತು ಸಮರ್ಪಕವಾದ ಚರಿತ್ರೆಯಿಲ್ಲದಿರುವುದು ವಿಷಾದಕರ. ಆದರೆ ಆತನ ಸಮಕಾಲಿಕನಾದ ಫಾ ಹೀಯನ್ ಎಂಬ ಸುಪ್ರಸಿದ್ಧ ಚೀನಿ ಚರಿತ್ರೆಗಾರನ ಅಮೂಲ್ಯವಾದ ಗ್ರಂಥಗಳಿಂದಲೂ, ಸಂಸ್ಕೃತ ಕಾವ್ಯಗಳಿಂದಲೂ ಲಿಪಿಗಳಿಂದಲೂ, ಪುರಾಣಗಳಿಂದಲೂ, ನಾಟಕಗಳಿಂದಲೂ ನಾಣ್ಯವೇ ಮೊದಲಾದ ಆ ಕಾಲದ ಸಾಮಗ್ರಿಗಳಿಂದಲೂ ಚಂದ್ರಗುಪ್ತನ ವಿಷಯದಲ್ಲಿ ಅನೇಕ ಸಂಗತಿಗಳು ಸಂಗ್ರಹಿಸಲ್ಪಟ್ಟಿರುವವು. ಈತನ ಕಾಲದಲ್ಲಿ ಗುಪ್ತ ಸಾಮ್ರಾಜ್ಯವು ವಿಶಾಲವಾಗಿ ಪರಿಣಮಿಸಿ ಶೌರ್ಯದಲ್ಲಿಯೂ, ಸಂಸ್ಕೃತಿಯಲ್ಲಿಯೂ, ಕಲಾಕೌಶಲಗಳಲ್ಲಿಯೂ ಪರಮಾವಧಿಯನ್ನು ಮುಟ್ಟಿತೆಂದೂ ಚಂದ್ರಗುಪ್ತನಿಗೆ "ವಿಕ್ರಮಾದಿತ್ಯ"ನೆಂಬ ಬಿರುದು ಸರ್ವತರದಲ್ಲಿಯೂ ಸಾರ್ಥಕವಾಯಿತೆಂದೂ ಚರಿತ್ರೆಗಾರರು ಹೇಳುವರು.

ಈತನು ಸಮುದ್ರಗುಪ್ತನ ಮಗನು. ಸುಮಾರು ೧೫೦೦ ವರುಷಗಳ ಹಿಂದೆ ಅಂದರೆ ಕ್ರಿ. ಶ. [illegible] ವರೆಗೆ ಸುಮಾರು ೪೦ ವರುಷ ಕಾಲ ರಾಜ್ಯಭಾರವನ್ನು ನಿರಂತರವಾಗಿ ನಡೆಸಿದನು. ತಂದೆಯಾದ ಸಮುದ್ರಗುಪ್ತನ ಅಪ್ರತಿಮ ದಿಗ್ವಿಜಯಗಳ ದೆಸೆಯಿಂದ ಹಿಮಾಚಲ ಮೊದಲುಗೊಂಡು ವಿಂಧ್ಯಾಚಲದ ವರೆಗಿನ ಎಲ್ಲಾ ಪ್ರಾಂತ್ಯಗಳು ಪಟ್ಟವೇರುವಾಗಲೇ ಚಂದ್ರಗುಪ್ತನ ಪಾಲಾಯಿತು. ಆದರೆ ಸಮುದ್ರಗುಪ್ತನ ಮರಣಾನಂತರ ಅಲ್ಲಲ್ಲಿ ಕ್ರಾಂತಿಯು ಉಂಟಾಯಿತು. ಅನೇಕ ಸಾಮಂತ ರಾಜರು ದಂಗೆಯೆದ್ದರು. ತಂದೆಯ ಕಾಲದಲ್ಲೇ ರಾಜ್ಯಭಾರಕ್ರಮದಲ್ಲಿ ತರಬೇತಿ ಹೊಂದಿದ್ದ ಚಂದ್ರಗುಪ್ತನಿಗೆ ಈ ಶತ್ರುರಾಜರನ್ನು ಗೆಲ್ಲುವುದು ಕಷ್ಟವಾಗಲಿಲ್ಲ. ಆತನು ಕೂಡಲೇ ವಂಗದೇಶಕ್ಕೆ ಸರಿದು ಧಾಳಿಮಾಡಿ ಶತ್ರುರಾಜನನ್ನು ನಿಗ್ರಹಿಸಿದನು. ಅಷ್ಟರಲ್ಲಿ ಸಿಂಧೂನದಿ ಪ್ರಾಂತ್ಯಗಳಲ್ಲಿ [illegible] ಚಂದ್ರಗುಪ್ತನು ಕೂಡಲೇ ಆ ಪ್ರದೇಶವನ್ನು ಹೊಕ್ಕು ಪ್ರಚಂಡ ಸಾಹಸದಿಂದ ಶತ್ರುಗಳನ್ನು ಸೋಲಿಸಿದನು. ಆದರೆ ಪಶ್ಚಿಮ ಕರಾವಳಿಯ ಹತ್ತಿರ ಪಶ್ಚಿಮ ಸಟ್ರಪ್ಸ್ [illegible] ಶಾಕ್ಯವಂಶದ ಅರಸರು ಮಾಳ್ವ, [illegible] ಪ್ರಾಂತ್ಯಗಳಲ್ಲಿ ಸುಮಾರು ೪೦೦ ವರುಷಗಳಿಂದ [illegible] ಬಲಾಢ್ಯರಾಗಿದ್ದರು. ಚಂದ್ರಗುಪ್ತನ [illegible] ಅವರ ಮೇಲೆ ದಂಡೆತ್ತಿ ಹೋಗಿ ಹನ್ನೆರಡು ವರುಷ ಸಾಹಸಮಾಡಿ ಅವರನ್ನು ಜಯಿಸಿ ರುದ್ರಸಿಂಹನೆಂಬ ಅವರ ಮುಖಂಡನನ್ನು [illegible]ರಿಸಿದನು. ಈ ವಿಜಯದಿಂದ ಗುಪ್ತಸಾಮ್ರಾಜ್ಯವು [illegible] ಕಿನಾರೆಯ ವರೆಗೂ ಮುಟ್ಟಿ ಆ ಮೂಲಕ [illegible] ಗಳೊಡನೆ ವ್ಯಾಪಾರ ಮಾಡುವರೆ ಅನುಕೂಲವಾಯಿತು. ಕ್ರಮೇಣ ಪಾಟಲಿಪುತ್ರಕ್ಕಿಂತಲೂ ಉಜ್ಜಯಿನಿ ಪಟ್ಟಣವು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯಲು ಉಜ್ಜಯಿನಿಯೇ ಚಂದ್ರಗುಪ್ತನ ರಾಜಧಾನಿಯಾಯಿತು. ಉತ್ತರ ಹಿಂದುಸ್ಥಾನವೆಲ್ಲವೂ ಗುಪ್ತ ಸಾಮ್ರಾಜ್ಯಕ್ಕೆ ಸೇರಿತು. ಚಂದ್ರಗುಪ್ತನು, ದಿಗ್ವಿಜಯವು ಪೂರ್ಣವಾಗಲು 'ಶಾಕಾರಿ ವಿಕ್ರಮಾದಿತ್ಯ' ನೆಂಬ ಬಿರುದುಗಳನ್ನು ಪಡೆದು ವಿರಾಜಿಸಿದನು. ಸಮುದ್ರಗುಪ್ತನಂತೆ ದಕ್ಷಿಣ[illegible]ಗಳಿಗೆ ಧಾಳಿಯಿಡುವ ಅಪೇಕ್ಷೆಯು ಚಂದ್ರಗುಪ್ತನಿಗೆ ಇಲ್ಲದೆ ಹೋಯಿತು.

ಉಜ್ಜಯಿನಿ ಪಟ್ಟಣವು ಚಂದ್ರಗುಪ್ತನ ರಾಜಧಾನಿಯಾದ ನಂತರ ವಿಶೇಷ ವೈಭವಕ್ಕೂ, ಮಹತ್ವಿಕೆಗೂ, ಸಕಲ ಕಲಾಕೌಶಲ್ಯಕ್ಕೂ, ಸಂಸ್ಕೃತ ಸಾಹಿತ್ಯಕ್ಕೂ ತವರುಮನೆಯಾಯಿತು. ಚಂದ್ರಗುಪ್ತನ ಸಭೆಯು ನವರತ್ನಗಳೆಂಬ ಕವಿಪುಂಗವರಿಂದಲೂ, ಪಂಡಿತರಿಂದಲೂ ಶೋಭಾಯಮಾನವಾಯಿತು. ಸಂಸ್ಕೃತ ಕವಿತೆ ಮತ್ತು ಭಾಷಾಭಿಮಾನವು ಪ್ರಚಂಡವಾಗಿ ಬೆಳೆದು ಚಂದ್ರಗುಪ್ತನು ಅವರ ಕವಿತೆಸಾಹಿತ್ಯಗಳ ಮೂಲಕ ಆ ಚಂದ್ರಾರ್ಕ ಕೀರ್ತಿ ಪಡೆದನು. ಮಹಾಕವಿ ಕಾಳಿದಾಸನೂ, ಅಮರಸಿಂಹ, ಧನ್ವಂತರಿ, ಯಾಜ್ಞವಲ್ಕ್ಯ, ಆರ್ಯಗುಪ್ತ, ಬ್ರಹ್ಮಗುಪ್ತ, ದಂಡಿ, ಭರ್ತೃಹರಿ ಮೊದಲಾದ ವಿದ್ವಜ್ಜನರು ಚಂದ್ರಗುಪ್ತನಿಂದ ಪ್ರೋತ್ಸಾಹವನ್ನು ಪಡೆದರು.

ಚಂದ್ರಗುಪ್ತನ ಕಾಲದಲ್ಲಿ ಮಾಡಲ್ಪಟ್ಟ ಚಿನ್ನದ ನಾಣ್ಯಗಳು ಬಹು ಸೊಗಸಾಗಿದ್ದು ಆ ಕಾಲದ ಉನ್ನತ ಕಲಾಕೌಶಲ್ಯವನ್ನು ವ್ಯಕ್ತಪಡಿಸುತ್ತವೆ. ಆ ನಾಣ್ಯಗಳ ಮೇಲಿನ ಚಿತ್ರದಿಂದ ಚಂದ್ರಗುಪ್ತನು ಧನುರ್ವಿದ್ಯೆಯಲ್ಲಿ ಬಹು ಪ್ರವೀಣನೆಂದು ಕಾಣಬರುತ್ತದೆ.

ಚಂದ್ರಗುಪ್ತನು ವಿಷ್ಣುಭಜಕನಾಗಿದ್ದು ಹಿಂದುಮತಕ್ಕೆ ಅಪಾರವಾದ ಸಹಾಯವನ್ನೂ ಪ್ರೋತ್ಸಾಹವನ್ನೂ ಮಾಡಿದನು. ಈತನು ಅನೇಕ ದೇವಸ್ಥಾನಗಳನ್ನೂ, ಸನ್ಯಾಸಿಗಳ ಒಗ್ಗ ಛತ್ರ ಧರ್ಮಶಾಲೆಗಳನ್ನೂ ಕಟ್ಟಿಸಿದನು. ಪುರಾಣ, ಅಶ್ವಮೇಧ, ವೈದಿಕಪೂಜೆ ಮೊದಲಾದುವುಗಳನ್ನು ಬಹು ಪ್ರಚಾರಕ್ಕೆ ತಂದನು. ಈತನು ಕಾಲದಲ್ಲಿನ ನಡತೆಗಳೂ, ಆಚಾರಗಳೂ ಮನುಧರ್ಮಶಾಸ್ತ್ರವನ್ನು ಅನುಸರಿಸಿದ್ದುವು. ಆದರೆ ಚಂದ್ರಗುಪ್ತನು ಅನ್ಯಮತಗಳನ್ನು ತಿರಸ್ಕರಿಸ[illegible] ಎಂದು ಕಾಣಬರುತ್ತದೆ. ರಾಜನು ಹಿಂದೂವ ತಕ್ಕೆ ಧಾರಾಳವಾಗಿ ತೋರಿಸಿದ ಪ್ರೋತ್ಸಾಹದಿಂದ ಬೌದ್ಧಮತವು [illegible] ಹಿಂದೂಮತವು ಬಲವಾಗಿ ಬೇರೂರಿತು.

ಫಾ ಹೀಯನ್ ಎಂಬ ಚೀನಿ ಚರಿತ್ರೆಗಾರನು ಚಂದ್ರಗುಪ್ತನ ಕಾಲದಲ್ಲಿ ಹಿಂದುಸ್ಥಾನಕ್ಕೆ [illegible] ಮಾರ್ಗವಾಗಿ ಒಂದು ಉತ್ತರ ಹಿಂದುಸ್ಥಾನದಲ್ಲಿ ಪ್ರವಾಸಮಾಡಿ [illegible] ಹಡಗು [illegible]

ಎಚ್. ಎನ್.

---

[illegible]

ಗಳಾಗಿ [illegible] ಇಂಡಿಯ [illegible] ಕೂಡಿಯೇ [illegible] ಹಾಗೆ, [illegible] ಭಾರತೀಯರು [illegible] ಬ್ರಿಟಿಷ ರೊಡನೆ ಸಾಮಂತ ಸ್ವರಾಜ್ಯವನ್ನು [illegible] ಎಂದೂ [illegible] ಭಾರತವರ್ಷವನ್ನು [illegible] ಕ್ಕೆ ಪ್ರವೇಶಿಸಬೇಕೆಂಬುದೇ ಡೆಲಿಗೇಟರ ಉದ್ದೇಶವಾಗಿರುವುದು.

ಆದುದರಿಂದ ಮಾನ್ಯ ಇಂಗ್ಲಿಷ್ ಮುತ್ಸದ್ದಿಗಳಲ್ಲಿಯೂ [illegible]ತಿರುವ ಈ [illegible]ವನ್ನು ತನ್ನಷ್ಟು ವಿವರಿಸಬೇಕಾಗಿಲ್ಲ. ಹಾಗೂ ಬ್ರಿಟನ್ ದೇಶವು ಭಾರತವರ್ಷವನ್ನು ಸಹೋದರಭಾವದಿಂದ ನೋಡುತ್ತಿದ್ದು, ಭರತಖಂಡಕ್ಕೆ ಒದಗಬಹುದಾದ ಕಷ್ಟ ಪರಂಪರೆಗಳಲ್ಲಿ ಸಹಭಾಗಿಯಾಗಿ ಕೈಲಾದ ಸಹಾನುಭೂತಿಯನ್ನು ತೋರಿಸಬೇಕೆಂಬುದೇ ನನ್ನ ಕೊನೆಯ ಮಾತು.

---

## ಅಲ್ವಾರ್ ಮಹಾರಾಜರೂ ಚಕ್ರಗೋಷ್ಠಿಯೂ.

ಅಲ್ವಾರ್ ಮಹಾರಾಜರ ಆಳುವಿಕೆಯ ೨೦ನೇ ವರ್ಧಂತ್ಯುತ್ಸವವು, ಲಂಡನಿನಲ್ಲಿ ಜರಗಿತು. ಮಿ|| ಮೆಕ್ಡೊನಾಲ್ಡರೂ, ವೆಡ್ಜ್‌ವುಡ್ ಬೆನ್ನರೂ ಹಾಜರಿದ್ದರು. ಅನೇಕ ಇಂಗ್ಲಿಷ್ ಮುತ್ಸದ್ದಿಗಳೂ ಬಂದು ಸೇರಿದ್ದರು. ಉತ್ಸವದ ಕಾರ್ಯಕ್ರಮಗಳಂತೆ, ಮಹಾರಾಜರ ಸಂಸವಾದಭಾಷಣವು ಸದಯರನ್ನು ಆನಂದಗೊಳಿಸಿತು. ಭಾಷಣದ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ.

ನಾನು ಚಕ್ರಗೋಷ್ಠಿಯ ಡೆಲಿಗೇಟನಾಗಿ ಹೊರಡುವಾಗಲೇ ನನ್ನ ಪ್ರಜಾವರ್ಗದವರ ಸಾಮಂತ ಸ್ವರಾಜ್ಯವನ್ನು ತನ್ನ ಕೈಲಾದ ಸಾಧನೆಗಳಿಂದ ಹೊಂದುವೆನೆಂದು ನಂಬಿಗೆ ಇತ್ತು [illegible]

[illegible]

[illegible] ಸಲ್ಪಡುವವು, ಅಂತೆ ಸಾಮಂತ ಸ್ವರಾಜ್ಯವೆಂದು [illegible] ದರ ಕುರಿತು [illegible] ಮಾತುಗಳು [illegible] ಭರತಖಂಡವು ಸ್ವಾತಂತ್ರ್ಯವಾಗಿ ರಾಜ್ಯಭಾರ ನಡೆಸುತ್ತ, ಬ್ರಿಟನ್ನಿನೊಡನೆ ಸ್ನೇಹದಿಂದಿರುವುದೇ ಇಂಡಿಯನರು ಕೇಳುತ್ತಿರುವ ಸಾಮಂತ ಸ್ವರಾಜ್ಯದ

WANTING
1931